ದಾಸಸಾಹಿತ್ಯ ಮತ್ತು ಸಂಸ್ಕೃತಿ

ಸಾ. ಕೃ. ರಾಮಚಂದ್ರರಾವ್

ಆಕರಗ್ರಂಥಮಾಲೆ

ದಾಸಸಾಹಿತ್ಯ ಮತ್ತು ಸಂಸ್ಕೃತಿ

ಸಾ. ಕೃ. ರಾಮಚಂದ್ರರಾವ್

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಚಾಮರಾಜಪೇಟೆ
ಬೆಂಗಳೂರು

DĀSA SĀHITYA MATTU SAMSKRUTI

Haridāsa Literature and Culture

Author

Professor S.K. Ramachandra Rao

305, 6th Cross, Ist Block

Jayanagar, Bangalore - 560 011

Ph : 6563957

Publisher

Administrative Officer

Kannada Pustaka Pradhikara

(Kannada Book Authority)

Pampamahakavi Road, Chamarajpet

Bangalore - 560 018

First Edition : 2003

Pages : xvi + 360 Price : Rs. 150/-

ISBN : 81-7713-155-9

ಲಕ್ಷ್ಮೀ ಮುದ್ರಣಾಲಯ

LAKSHMI MUDRANALAYA

Chamarajpet

Bangalore - 560 018

✆ 6613123, 6618752

ಅಕ್ಷರಸೂರ್ಯನಿಗೆ ನಮನ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಅಧ್ಯಕ್ಷರು

ಕನ್ನಡ ಪುಸ್ತಕ ಪ್ರಾಧಿಕಾರವು ನಾಡಿನ ಎಲ್ಲ ಬಗೆಯ ಜ್ಞಾನ ಸಂಪತ್ತನ್ನು ಉಳಿಸಿ-ಬೆಳೆಸುವ ತುಂಬು ಹಂಬಲವನ್ನು ಹೊತ್ತಿದೆ. ಇದು ಒಂದು ಬಗೆಯಲ್ಲಿ ಲೇಖಕ, ಪ್ರಕಾಶಕ, ಓದುಗ ಈ ಮೂವರ ಜತೆ ಸುಸಂಬದ್ಧವಾದ ಅಂತರ್‌ಜಾಲವನ್ನು ಪೋಷಿಸುವ ಸಾಂಸ್ಕೃತಿಕ ಚೈತನ್ಯದ ಸಂಸ್ಥೆಯಾಗಿದೆ. ನಮ್ಮ ನಾಡಿನ ಜ್ಞಾನ ಸಂಪತ್ತು ಅಕ್ಷಯವಾದುದು. ನಾವು ಬಗೆದಷ್ಟು ಮುಗಿಯದ ತವನಿಧಿ. ಈ ನಿಧಿಯ ರಕ್ಷಣೆ-ಪಾಲನೆ ಮತ್ತು ಪೋಷಣೆ ಎಂದೆಂದೂ ಬೇಕು. ಅಕ್ಷರನಿಧಿಯು ಎಂದೆಂದೂ ಅಳಿಯುವುದಿಲ್ಲ. ಈ ನಿಧಿಗೆ ಒಡೆಯರಾದವರು ನಮ್ಮ ಓದುಗರು. ಪಾರಂಪರಿಕ ಜ್ಞಾನಕ್ಕೂ ಆಧುನಿಕ ಕಾಲದ ಜ್ಞಾನಕ್ಕೂ ಓದುಗರೇ ವಾರಸುದಾರರು. ಈ ವಾರಸುದಾರರಿಗೆ ನಿಧಿಯ ಮೌಲ್ಯವನ್ನೂ, ಮಹತ್ವವನ್ನೂ ತೆರೆದು ತೋರಿಸುವುದು ಪುಸ್ತಕ ಪ್ರಾಧಿಕಾರದ ಕರ್ತವ್ಯಗಳಲ್ಲಿ ಒಂದೆಂದು ತಿಳಿದಿದ್ದೇನೆ. ನಮ್ಮ ಕರ್ತವ್ಯವನ್ನು ನಾವು ಮಾಡುವುದು ಬೇಡವೇ? ಈ ಕರ್ತವ್ಯಕ್ಕೆ ಹಲವು ದಾರಿಗಳಿವೆ. ಕೇವಲ ಪ್ರಕಟಣೆ ಮಾತ್ರ ನಮ್ಮ ಏಕೋದ್ದೇಶ್ಯವಲ್ಲ. ಪ್ರಕಟಣೆಯ ಜೊತೆಗೆ ಅಕ್ಷರ ಸಂಸ್ಕೃತಿ ದೀಪಗಳನ್ನು ಕತ್ತಲೆಯ ಮೂಲೆಮುಡುಕುಗಳಲ್ಲಿ ಇಡುವುದು ನಮ್ಮ ಕರ್ತವ್ಯದ ಭಾಗವೇ ಆಗಿದೆ. ಪ್ರತಿಯೊಂದು ತಾಲ್ಲೂಕುಗಳನ್ನು ಇಂಥ ದೀಪಗಳಿಂದ ಬೆಳಗಿಸಬೇಕಾಗಿದೆ. ನಗರ, ಪಟ್ಟಣ ಪ್ರದೇಶಗಳು ಅಕ್ಷರ ಬೆಳಕಿನಿಂದ ಬೆಳಗಿವೆ. ಆದರೆ, ದೂರದೂರದ ಕತ್ತಲೆಯ ಜಾಗಗಳೂ ಅಜ್ಞಾತವಲಯಗಳೂ ಬೆಳಗುವುದು ಪ್ರಜಾಪ್ರಭುತ್ವದ ಕಾಲದಲ್ಲಿ ಅತಿಮುಖ್ಯವಲ್ಲವೆ? ಈಗ ನಮ್ಮೆಲ್ಲರ ಕಣ್ಣು ಮತ್ತು ಮನಸ್ಸು ಗ್ರಾಮ-ಗ್ರಾಮಾಂತರಗಳಿಗೂ ತಾಲ್ಲೂಕು- ತಾಲ್ಲೂಕಾಂತರಗಳ ಕಡೆಗೂ ಚಾಚಬೇಕಾಗಿದೆ. ಅಲ್ಲಿರುವ ಸಹಸ್ರಾರು ಜ್ಞಾನದಾಹಿಗಳ ಮನಸ್ಸನ್ನು ಅರಳಿಸುವ, ಅಕ್ಷರಲೋಕಕ್ಕೆ ಕರೆದೊಯ್ಯುವ ಕೆಲಸ ಮಾಡಬೇಕಾಗಿದೆ. ಇದಕ್ಕಾಗಿ ಪುಸ್ತಕ ಪ್ರಕಟಣೆಯ ಜತೆಗೆ, ಪುಸ್ತಕ ಮೇಳ, ಪುಸ್ತಕ ಜಾತ್ರೆ ಆಗುವುದು ಅಗತ್ಯ. ಇದು ನೆರವೇರಿದಾಗ 'ಕನ್ನಡ ಪುಸ್ತಕ ಪ್ರಾಧಿಕಾರ' ಎಂಬ ಮಾತಿಗೆ ಬೆಲೆ ಬರುತ್ತದೆ; ಅದಕ್ಕೊಂದು ಸಾಂಸ್ಕೃತಿಕ ಮೌಲ್ಯ ಪ್ರಾಪ್ತವಾಗುತ್ತದೆಂಬ ನಂಬುಗೆ ನನ್ನದು!

ಜ್ಞಾನದ ಹಂಬಲ ಪ್ರತಿಯೊಬ್ಬರಿಗೂ ಉಂಟು! ಈ ಜ್ಞಾನವು ಹಲವು ರೂಪಗಳಲ್ಲಿ ತೋರುತ್ತದೆ. 'ಜ್ಞಾನದ ಬಲದಿಂದ ಅಜ್ಞಾನದ ಕೇಡು' ಎಂದು ಬಸವಣ್ಣನವರು ಹೇಳಿದ್ದುಂಟು! ಇದು ಆಧುನಿಕ ಜ್ಞಾನಕ್ಕೂ ಅವಲಂಬಿಸುತ್ತದೆ. ಇಪ್ಪತ್ತನೆಯ ಶತಮಾನ ಕಳೆದು ಹೊಸ ಸಹಸ್ರಮಾನದಲ್ಲಿರುವ ನಮಗೆ ಹಲವು ಬಗೆಯ ತೊಡಕುಗಳಲ್ಲಿ ಮತ್ತು ಸಂಕಟಗಳಲ್ಲಿ ನಾವಿದ್ದೇವೆ. ಒಂದು ಕಡೆ ಇಪ್ಪತ್ತನೆಯ ಶತಮಾನ ಸಾಹಿತ್ಯಕವಾಗಿ ಸಮೃದ್ಧವಾದ ಕಾಲವೇನೋ ನಿಜ. ಮೂಲಜ್ಞಾನದ ಬೇರುಗಳು ಹೊರಹೊಮ್ಮಿ ಹಲವು ಬಗೆಯ ವೈವಿಧ್ಯಗಳಿಂದ ವಿರಾಜಮಾನದ ಕಾಲವೂ ಆಗಿದೆ! ಸಾಹಿತ್ಯಕವಾಗಿ ಎಷ್ಟು ಸಮೃದ್ಧವೋ ಸಾಂಸ್ಕೃತಿಕವಾಗಿಯೂ ಅಷ್ಟೇ ಬಗೆಯ ವಾಗ್ವಾದ ಮತ್ತು ಸಂವಾದಗಳಿಂದ ಕೂಡಿದ ಕಾಲ! ಅನೇಕ ತಳವರ್ಗದ ಜನಸ್ಥಾನಗಳು ಮೊದಲಬಾರಿಗೆ ಅಕ್ಷರಸೂರ್ಯನಿಗೆ ನಮಸ್ಕರಿಸಿದ್ದುಂಟಷ್ಟೆ. ಜ್ಞಾನಾರ್ಜನೆ ಎಂಬುದು ಒಂದು ಶೈಕ್ಷಣಿಕ ಶಿಸ್ತಾಗಿದೆ. ಆದರೆ, ಇದು ಸಮಾಜದ ಅವಿರತ ಹಾಗೂ ಸದಾಕಾಲವೂ ಹಂಬಲಿಸುವ ಆಶಯ ಆಗಬೇಕು. ಈ ಆಶಯ, ಹಂಬಲ ಹಲವು ಬಗೆಯ ಸಂಕೇತಗಳಲ್ಲೊ, ರೂಪಕಗಳಲ್ಲೊ ಕಾಣಿಸುತ್ತದೆ. ಪಾರಂಪರಿಕ ಜ್ಞಾನ ಮತ್ತು ಆಧುನಿಕ ಜ್ಞಾನ ಇವೆರಡು ಬೇರುಗಳನ್ನು ಕಸಿ ಹಾಕುವ ಅಗತ್ಯ ನಮ್ಮ ಮುಂದಿದೆ. ಪಾರಂಪರಿಕ ಜ್ಞಾನವು ಕೇವಲ ಸಾಹಿತ್ಯಕ ಸಮೃದ್ಧತೆಯ ಕಡೆಗೆ ಮಾತ್ರ ಬೊಟ್ಟು ಮಾಡಿ ತೋರಿಸುತ್ತಿದೆಯೆಂದು ನಾವು ತಿಳಿಯುವಂತಿಲ್ಲ. ಸಮಾಜ-ಸಮುದಾಯಗಳಿಗೆ ಬೇಕಾದ ಹಲವು ಬಗೆಯ ಜ್ಞಾನದ ಕೌಶಲ್ಯಗಳು ನಮ್ಮಲ್ಲಿ ಹಿಂದೆ ಇದ್ದುವು. ೧೮೨೦ರಲ್ಲಿ ಅತ್ಯುತ್ತಮ ತಾಂತ್ರಿಕ ಜ್ಞಾನ ನಮ್ಮಲ್ಲಿದ್ದುದನ್ನು ಹೇಗೋ ಈಗ ಉಳಿದುಕೊಂಡಿರುವ ವಿಲಿಯಂ ಆ್ಯಡಂ ವರದಿಗಳು ತಿಳಿಸುತ್ತವೆ. ಆದರೆ ನಾವಿಂದು ಈ ಬಗೆಯ ಸ್ಮೃತಿಗಳಿಂದ ಹೊರಗುಳಿದಿದ್ದೇವೆ. ನಮ್ಮ ನಮ್ಮ ಸಂಸ್ಕೃತಿ ಸಮುದಾಯಗಳು ಪಡೆದಿರುವ ಜ್ಞಾನ ಕೌಶಲ್ಯ, ಜ್ಞಾನ ಸಂಪತ್ತನ್ನು - ಈ ಕಾಲದ ಅಗತ್ಯಗಳಿಗೆ ತಕ್ಕಂತೆ ಮರುಜೋಡಣೆ ಮಾಡುವ ಅಗತ್ಯವಿದೆ. ಇಲ್ಲದೆ ಹೋದರೆ, ಕಳೆದುಹೋದ ಕಾಲವು ನಿರ್ವಾತವಾಗಿತ್ತೆಂದೊ ಬರುವ ಕಾಲ ಈ ನಿರ್ವಾತವನ್ನು ತುಂಬುವ ಹಂಬಲವನ್ನು ಹೊತ್ತಿರುವುದೆಂದೊ ತಿಳಿಯುವ ಕ್ಲೈಬ್ಯದಲ್ಲಿ ನಾವು ಮುಳುಗಬೇಕಾಗುತ್ತದೆ! ಈ ಅಜ್ಞಾನದಿಂದ ನಾವು ಎಚ್ಚರಗೊಳ್ಳಬೇಕಾಗಿದೆ. ಹೀಗೆ ಎಚ್ಚರಿಸುವ ಕಾರ್ಯವನ್ನು ನಾಡಿನ ಹಲವಾರು ಸಾಂಸ್ಕೃತಿಕ ಸಂಸ್ಥೆಗಳು ಮಾಡುತ್ತಿವೆ. ಆದರೆ, ಕನ್ನಡ ಪುಸ್ತಕ ಪ್ರಾಧಿಕಾರವು ತನ್ನದೇ ಆದ ಕೆಲವು ನಿರ್ದಿಷ್ಟ ಯೋಜನೆ ಮತ್ತು ಪ್ರಕಟಣ ನೀತಿಸಂಹಿತೆಯಿಂದ ಹೊಸ ಆಕಾರವನ್ನು ಪಡೆಯುವ ಹಂಬಲವನ್ನು ಹೊತ್ತಿದೆ.

ಈ ಹಿನ್ನೆಲೆಯಲ್ಲಿ ಹಲವು ಬಗೆಯ ಮಾಲೆಗಳನ್ನು ಹಿಂದಿನ ವರ್ಷಗಳಿಂದ ಕನ್ನಡ ಪುಸ್ತಕ ಪ್ರಾಧಿಕಾರವು ನಡೆಸಿಕೊಂಡು ಬರುತ್ತಿದೆ. ಹೊಸ ಹೊಸ ಮಾಲೆಗಳು ಈಗೀಗ ಅಸ್ತಿತ್ವಕ್ಕೆ ಬರುತ್ತಿವೆ. ನಮ್ಮ ಹೊಸ ಓದು, ಹೊಸ ನುಡಿಗಟ್ಟು, ಹೊಸ ಸಂವೇದನೆಗಳು ಸಹಸ್ರಮಾನದ ಉದಯಕ್ಕೆ ಸಜ್ಜುಗೊಳ್ಳುವ ಅಗತ್ಯವಿದೆಯೆಂದು ಪುಸ್ತಕ ಪ್ರಾಧಿಕಾರವು

ತಿಳಿಯುತ್ತದೆ!ಕನ್ನಡ ಪುಸ್ತಕ ಪ್ರಾಧಿಕಾರವು ಮಹತ್ವದ ಪ್ರಕಟಣೆಗಳನ್ನು ಹೊರತರುತ್ತಿರುವುದು ಸರಿಯಷ್ಟೆ. ಆಕರ ಗ್ರಂಥಗಳ ಪ್ರಕಟಣೆ, ಜನಸಾಮಾನ್ಯರೆಲ್ಲ ಓದಬಲ್ಲ ಪ್ರಕಟಣೆ, ಮಕ್ಕಳ ಸಾಹಿತ್ಯ ಪ್ರಕಟಣೆ, ವಿಜ್ಞಾನ ಸಾಹಿತ್ಯ ಪ್ರಕಟಣೆ-ಮೊದಲಾದವುಗಳನ್ನು ವಿವಿಧ ಮಾಲೆಗಳಲ್ಲಿ ಪುಸ್ತಕ ಪ್ರಾಧಿಕಾರವು ಪ್ರಕಟಿಸುತ್ತಿದೆ. ನಾಡಿನ ಜನತೆ ಅತ್ಯಂತ ಪ್ರೀತಿಯಿಂದ ನಮ್ಮ ಪ್ರಕಟಣೆಗಳನ್ನು ಸ್ವಾಗತಿಸುತ್ತಿದೆ. ಉತ್ತಮ ಪ್ರಕಟಣೆಗಳನ್ನು ಹೊರತರುವುದೇ ಪ್ರಾಧಿಕಾರದ ಉದ್ದೇಶವೂ ಆಗಿದೆ. ಇದು ಪುಸ್ತಕ ಸಂಸ್ಕೃತಿಯ ದ್ಯೋತಕವೆಂದು ಪ್ರಾಧಿಕಾರವು ಭಾವಿಸುತ್ತದೆ.

ಪ್ರೊ. ಸಾಲಿಗ್ರಾಮ ಕೃಷ್ಣ ರಾಮಚಂದ್ರರಾವ್ ನಮ್ಮ ನಡುವಿನ ಬಹುಮುಖ ಪ್ರತಿಭೆಯ ವಿದ್ವಾಂಸರು. ಅವರು ಸಂಸ್ಕೃತ, ಕನ್ನಡ, ಪ್ರಾಕೃತ, ತೆಲುಗು, ತಮಿಳು ಮುಂತಾದ ಭಾರತೀಯ ಭಾಷಾ ಸಾಹಿತ್ಯಗಳ ಅಧ್ಯಯನ ; ಇಂಗ್ಲಿಷ್, ಪ್ರೆಂಚ್ ಮುಂತಾದ ಐರೋಪ್ಯ ಭಾಷಾ ಸಾಹಿತ್ಯಗಳ ಅಧ್ಯಯನ ಮಾಡಿದವರು. ಟಿಬೆಟ್ ಮುಂತಾದ ಅಪೂರ್ವ ಭಾಷಾಸಾಹಿತ್ಯಗಳ ಅಧ್ಯಯನವಂತೂ ಅವರ ಬದುಕಿನ ಭಾಗವೇ ಆಗಿದೆ. ವೈದಿಕ-ಅವೈದಿಕ ದರ್ಶನ- ಸಾಹಿತ್ಯಗಳು ಅವರ ಉಸಿರೇ ಆಗಿವೆ. ಹೀಗೆ, ನಮ್ಮ ನಡುವೆ ಅವರು ಉದಿತೋದಿತ ಪ್ರತಿಭೆಯಂತೆ ಈ ಇಳಿವಯಸ್ಸಿನಲ್ಲೂ ಸದಾ ಬೆಳಗುತ್ತಿದ್ದಾರೆ. ಸಂಗೀತ, ಚಿತ್ರಕಲೆ, ಶಿಲ್ಪಕಲೆ, ವಾಸ್ತುಶಿಲ್ಪವೇ ಆಗಿರಲಿ; ಭಾಷೆ, ಸಾಹಿತ್ಯ ಚಿಂತನೆ, ಅನುವಾದವೇ ಆಗಿರಲಿ; ವೇದ, ಉಪನಿಷತ್ತು ಆಯುರ್ವೇದವೇ ಆಗಿರಲಿ; ಕನ್ನಡ-ಸಂಸ್ಕೃತ ದರ್ಶನ ಸಾಹಿತ್ಯದ ಅಧ್ಯಯನವೇ ಆಗಿರಲಿ; ಜೀವನವಿಡೀ ಎಲ್ಲದರಲ್ಲೂ ಅವರು ಬಹುಶ್ರುತರು, ನಿತಾಂತ ರಮಣೀಯರು. ಅವರು ಈ ವಿಷಯಗಳಲ್ಲಿ ಜೀವನವಿಡೀ ಸಾಧಿಸಿರುವ ಸಾಧನೆ, ಪಡೆದಿರುವ ಸಿದ್ಧಿ ಅಪರೂಪದ್ದು. ಇಂಥವರು ಯಾವ ನಾಡಿಗೂ ಹೆಮ್ಮೆ ತರಬಲ್ಲರು. ನಾಡು ಇಂಥವರಿಂದ ಸದಾ ಕೃತಕೃತ್ಯವಾಗುತ್ತದೆ; ಧನ್ಯವಾಗುತ್ತದೆ.

ಪುಸ್ತಕ ಪ್ರಾಧಿಕಾರವು ಆಕರ ಗ್ರಂಥಮಾಲೆಯ ಅಡಿಯಲ್ಲಿ ಈಗ ಪ್ರಕಟಿಸುತ್ತಿರುವ 'ದಾಸಸಾಹಿತ್ಯ ಮತ್ತು ಸಂಸ್ಕೃತಿ' ಪ್ರೊ. ಸಾ.ಕೃ.ರಾ ಅವರು ಸಿದ್ಧಪಡಿಸಿದ ಅಪರೂಪ ಗ್ರಂಥವಾಗಿದೆ. ಇದು ದಾಸಸಾಹಿತ್ಯದ ತಾತ್ವಿಕ ಚಿಂತನೆಗಳನ್ನು, ಐತಿಹಾಸಿಕ ಅಂಶಗಳನ್ನು, ಪಲ್ಲಟಗೊಂಡಿರುವ ನೆಲೆಗಳನ್ನು ಕುರಿತು ಆಳವಾಗಿ ಚಿಂತಿಸುತ್ತದೆ. ದಾಸಸಾಹಿತ್ಯವು ವ್ಯಾಸಕೂಟದಿಂದ ಪಡೆದ ಅಂಶಗಳೆಷ್ಟು, ಸ್ವಂತದಿಂದ ರೂಪಿಸಿಕೊಂಡ ಸಂಗತಿಗಳೆಷ್ಟು ಎಂಬುದನ್ನು ಮೊಟ್ಟಮೊದಲಬಾರಿಗೆ ಈ ಗ್ರಂಥದ ಮೂಲಕ ವ್ಯಾಪಕವಾಗಿ ಅವರು ವಿಮರ್ಶಿಸಿದ್ದಾರೆ, ವಿಶ್ಲೇಷಿಸಿದ್ದಾರೆ; ವ್ಯಾಖ್ಯಾನಿಸಿದ್ದಾರೆ. ವ್ಯಾಸಕೂಟ-ದಾಸಕೂಟಗಳ ನಡುವಣ ಭೇದಸ್ವರೂಪಗಳನ್ನು ಗುರುತಿಸಿಕೊಂಡು ದಾಸಕೂಟದ ಮಹತಿಯನ್ನೂ ಅದರ ಸರ್ವವೈಶಾಲ್ಯತೆಯನ್ನೂ ಎಲ್ಲರು ಒಪ್ಪಿ ತಲೆಬಾಗುವಂತೆ ನಿರೂಪಿಸಿದ್ದಾರೆ. ಇನ್ನು ನಾವು ಅವರ ದಾರಿಯನ್ನು ಅನುಸರಿಸಿ ನಡೆಯಬೇಕಾಗಿದೆ. ಅವರ ವಿಮರ್ಶೆಯಲ್ಲಿ ಸಹೃದಯ ಗುಣವು ಮೇಲಿಂದ ಮೇಲೆ ಎದ್ದು ಕಾಣುತ್ತದೆ; ಸತ್ಯದ ಬೆಳಕನ್ನು ಹುಡುಕುವ ಪರಿಯೂ

ಇದರೊಳಗೆ ಅಡಗಿ ಕೂತಿದೆ. ಪ್ರೊಫೆಸರ್ ಎಸ್.ಕೆ. ರಾಮಚಂದ್ರರಾವ್ ಅವರ ಬರೆಹದ ಗುಣ ಪ್ರಸನ್ನಗಂಭೀರದ್ದು. ಅವರು ಅದರಲ್ಲಿ ಸಲಿಲವಾಗಿ ಈಸಾಡಬಲ್ಲರು. ಭಾಷೆಯೆಂಬುದು ಇಂಥವರ ಕೈಯಲ್ಲಿ ದೀಪದಂತೆ ಬೆಳಗುತ್ತದೆ. ಇಂಥವರ ಬರೆಹಗಳನ್ನು ಓದುತ್ತಿದ್ದರೆ ಈ ಅಂಶವು ಹೃದಯ ವೇದ್ಯವಾಗುತ್ತದೆ.

ದಾಸಸಾಹಿತ್ಯದ ಬಗೆಗೆ ಈವರೆಗೂ ಕನ್ನಡದಲ್ಲಿ ಹಲವು ಬಗೆಯ ಗ್ರಂಥಗಳು ಬಂದಿವೆ; ನೂರಾರು ಲೇಖನಗಳು ಹಾಸುಹೊಕ್ಕಾಗಿವೆ. ಅವುಗಳಲ್ಲಿ ಗಟ್ಟಿ ಲೇಖನಗಳಾಗಲಿ, ಉತ್ತಮ ಗ್ರಂಥಗಳಾಗಲಿ ಅವುಗಳ ಪ್ರಮಾಣ ತೀರ ಅಲ್ಪವೇ. ಇಂಥ ಸಾಹಿತ್ಯಿಕ ಸಂದರ್ಭದಲ್ಲಿ ಹಿರಿಯ ವಿದ್ವಾಂಸರಾದ ಪ್ರೊ. ಸಾ. ಕೃ. ರಾಮಚಂದ್ರರಾವ್ ಅವರ ಪ್ರಸ್ತುತ ಗ್ರಂಥ ಪ್ರಕಟಗೊಳ್ಳುತ್ತಿದೆ. ಈ ಗ್ರಂಥವು ಪುಸ್ತಕ ಪ್ರಾಧಿಕಾರದ ಹೆಮ್ಮೆಯ ಪ್ರಕಟಣೆಗಳಲ್ಲಿ ಒಂದೆಂದು ಹೇಳಲು ನನಗೆ ಅತೀವ ಸಂತೋಷವಾಗುತ್ತದೆ. ಅವರು ಈ ಪುಸ್ತಕವನ್ನು ಪ್ರಕಟಿಸಲು ಕೊಟ್ಟು ಪ್ರಾಧಿಕಾರಕ್ಕೆ ಹಿರಿಮೆಯ ಗರಿಯನ್ನು ಮೂಡಿಸಿದ್ದಾರೆ. ಪ್ರಾಧಿಕಾರದ ಸದಸ್ಯ ಮಿತ್ರರು ಪ್ರಕಟಣೆಯ ಸಂದರ್ಭದಲ್ಲಿ ನನ್ನ ಜತೆಗಿದ್ದಾರೆ. ಈ ಸಂದರ್ಭದಲ್ಲಿ ಮುದ್ರಕ ಮಿತ್ರರನ್ನೂ ಮುಖಪುಟ ವಿನ್ಯಾಸಕರನ್ನೂ ನೆನೆಯುತ್ತೇನೆ. ನಾಡಿನ ಜನತೆ ಈ ಕೃತಿಯನ್ನು ಆದರದಿಂದ ಸ್ವೀಕರಿಸಬೇಕೆಂದು ಆಶಿಸುತ್ತೇನೆ.

ಮೊದಲ ಮಾತು

ದಾಸಸಾಹಿತ್ಯವನ್ನು ಕುರಿತಂತೆ ನನಗೆ ಎಳವೆಯಿಂದಲೂ ಸೆಳೆತ. ನನ್ನ ತಂದೆಯವರು ಜಗನ್ನಾಥದಾಸರ ಹರಿಕಥಾಮೃತಸಾರವನ್ನು ಓದುತ್ತ ಹಾಡಿಕೊಳ್ಳುತ್ತ ಇರುವಾಗ ನೆರೆಯಲ್ಲೆ ಇರುತ್ತಿದ್ದ ನಾನು ಸಣ್ಣ ಹುಡುಗ. ಗೊತ್ತಾದ ದಿನಗಳಲ್ಲಿ ಹರಿದಾಸರೊಬ್ಬರು ಮನೆಗೆ ಬಂದು ದಾಸರ ಪದಗಳನ್ನು ಹಾಡಿ, ಕುಣಿದು ಹೋಗುತ್ತಿದ್ದುದುಂಟು. ಶಾಲೆಯಲ್ಲಿ ಕನಕದಾಸರ ಹರಿಭಕ್ತಿಸಾರದ ಪಾಠ ನಡೆಯುತ್ತಿರುವಾಗ ನನಗೆ ಮೈಯೆಲ್ಲ ಕಿವಿ, ಮನಸ್ಸೆಲ್ಲ ಅಲ್ಲೇ. ಈ ಆದರ, ಅನುರಕ್ತಿ ಬದುಕಿನುದ್ದಕ್ಕೂ ನಡೆದುಬಂದಿವೆ. ದಾಸರ ರಚನೆಗಳಲ್ಲಿ ಸ್ವಾರಸ್ಯವನ್ನು ಕಂಡುಕೊಂಡುದು ಮಾತ್ರವಲ್ಲ, ಅದರಲ್ಲಿ ಅಳವಾಗಿ ಅಡಗಿರುವ ಆಧ್ಯಾತ್ಮಿಕ ಅನುಭವವನ್ನೂ ಗುರುತಿಸುವುದಾಯಿತು.

ದಾಸರನ್ನು ಕುರಿತಂತೆ ನನ್ನ ಆಸಕ್ತಿಯ ಬಳ್ಳಿಗೆ ನೀರೆರೆದು ತಣಿಸಿದವರು, ಅದನ್ನು ಬೆಳೆಸಿದವರು ದಾಸರ ಲಕ್ಷ್ಮೀನಾರಾಯಣರಾಯರು, ಸುಬೋಧ ರಾಮರಾಯರು, ಹರಿದಾಸರತ್ನ ಗೋಪಾಲದಾಸರು, ಕೆ. ಸಂಪದ್ಗಿರಿರಾಯರು ಮತ್ತು ಪಂಚಮುಖಿ ರಾಘವೇಂದ್ರಾಚಾರ್ಯರು. ನನ್ನ ಅಧ್ಯಯನಕ್ಕೆ ಒತ್ತಾಸೆಯಾಗಿ ನಿಂತವರು ಹಿರಿಯರಾದ ಮಾಸ್ತಿಯವರು, ರಾವ್‌ಬಹದೂರ್ ಬಿ. ವೆಂಕಟೇಶಾಚಾರ್ಯರು, ಗುರುಗಳಾದ ರಾಳ್ಲಪಲ್ಲಿಯವರು, ಹಿರಿಯರಾದ ನಾಟನ ಹಳ್ಳಿ ಚೆನ್ನಕೇಶವಯ್ಯನವರು. ಇವರಿಗೆಲ್ಲ ನನ್ನ ವಿನಮ್ರ ನಮನಗಳು.

ದಾಸಸಾಹಿತ್ಯ-ಸಂಸ್ಕೃತಿಗಳನ್ನು ಕುರಿತಂತೆ ನಾನು ಆಗಾಗ ಅಲ್ಲಲ್ಲಿ ಬರೆದು ಅಚ್ಚಾದ ಬರಹಗಳನ್ನೆಲ್ಲ ಒಟ್ಟುಗೂಡಿಸಿ ಒಂದು ಸಂಪುಟವಾಗಿ ಹೊರತರುವ ಸಂಕಲ್ಪ ನನ್ನ ಮಾನ್ಯಮಿತ್ರರೂ, ಸಹೃದಯರೂ, ಸಜ್ಜನ ಸುಸಂಸ್ಕೃತರೂ ಆದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶರವರದ್ದು. ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿರುವ ಅವರು ನನ್ನ ಮೇಲಣ ಪ್ರೀತಿಯಿಂದ, ಶ್ರಮವಹಿಸಿ, ಗೋಜಲಾದ ನನ್ನ ಪ್ರಕಟನೆಗಳ ಎಳೆಗಳನ್ನು ಬಿಡಿಸಿ, ಬರಹವನ್ನು ನೇರ್ಪಡಿಸಿ ಇದೊಂದು ಹೊತ್ತಿಗೆಯನ್ನು ಹೊರತರುತ್ತಿದ್ದಾರೆ. ಅವರಿಗೆ ನಾನು ಎಷ್ಟು ಕೃತಜ್ಞತೆಯನ್ನು ಸಲ್ಲಿಸಿದರೂ ಸಾಲದು. ಕನ್ನಡ ಪುಸ್ತಕ ಪ್ರಾಧಿಕಾರಕ್ಕೂ ನಾನು ಆಭಾರಿಯಾಗಿದ್ದೇನೆ.

ಇನ್ನು ಈ ಸಂಕಲನದಲ್ಲಿ ಸೇರಿರುವ ಬರಹಗಳನ್ನು ಕುರಿತಂತೆ ನಾಲ್ಕು ಮಾತುಗಳನ್ನು ಹೇಳಬೇಕು. ಇವುಗಳ ಮೂಲ ಇವು. ಪುರಂದರದಾಸರ ಚತುರ್ಥ ಶತಮಾನೋತ್ಸವ

ಸಂದರ್ಭದಲ್ಲಿ (೧೯೬೪) ಹಿರಿಯರಾದ ಮಾಸ್ತಿಯವರು ನಾನು ಪುರಂದರದಾಸರನ್ನು ಕುರಿತಂತೆ ಒಂದು ಪುಸ್ತಕವನ್ನು ಬರೆಯಬೇಕೆಂದು ಅಪ್ಪಣೆ ಮಾಡಿದರು. ಆಗ ಕನ್ನಡದಲ್ಲಿ ನಾನು ಬರೆದ ಪುಸ್ತಕವು ತಮಿಳಿನಲ್ಲೂ ತೆಲುಗಿನಲ್ಲೂ ಇಂಗ್ಲೀಷಿನಲ್ಲೂ ಅನುವಾದಗೊಂಡಿತು. ಹಿರಿಯರಾದ ಕೆ. ಸಂಪದ್ಗಿರಿರಾಯರು ಇದರಲ್ಲಿ ನೆರವಾದರು. ಡಾ॥ ರಾಘವೇಂದ್ರಾಚಾರ್ಯ ಪಂಚಮುಖಿಯವರ ಕೋರಿಕೆಯಂತೆ ಕನ್ನಡ ಸಾಹಿತ್ಯ ಪರಿಷತ್ತು ನನ್ನಿಂದ ಆಸುಂದಿ ಕೃಷ್ಣರಾವ್ ಹುದ್ದಾರ ಸ್ಮಾರಕ ಹರಿದಾಸ ನಿಧಿ ದತ್ತಿ ಉಪನ್ಯಾಸವನ್ನೇರ್ಪಡಿಸಿತು (೧೯೬೭). ಅದು ಪುರಂದರದಾಸರ ಸಾಮಾಜಿಕ ದೃಷ್ಟಿಯನ್ನು ಕುರಿತದ್ದು. ಐಬಿಎಚ್ ಸಂಸ್ಥೆಯವರು ಹೊರತಂದ ಕವಿಕಾವ್ಯ ಪರಂಪರೆಯ ಸಂಪುಟಗಳಲ್ಲಿ ಹಿರಿಯರಾದ ವಿ.ಸೀ. ಯವರು ನನ್ನಿಂದ ದಾಸಸಾಹಿತ್ಯವನ್ನು ವಿವೇಚನೆ ಮಾಡುವ ಬರಹವೊಂದನ್ನು ಬರೆಯಿಸಿದರು (೧೯೮೭). ಕರ್ನಾಟಕ ಸರ್ಕಾರವು ನನ್ನ ಪುರಂದರಸಾಹಿತ್ಯ ದರ್ಶನವನ್ನು (ನಾಲ್ಕು ಸಂಪುಟಗಳಲ್ಲಿ) ಪ್ರಕಟಿಸಿತು (ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೮೫). ಇದಕ್ಕೆ ಕಾರಣರಾದವರು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಚಿರಂಜೀವಿಸಿಂಗ್ ಅವರು. ಈ ಸಂಪುಟಗಳಲ್ಲಿ ದಾಸಸಾಹಿತ್ಯ, ಸಂಗೀತ, ಸಂಸ್ಕೃತಿ, ಸಮಾಜಧೋರಣೆ ಹೀಗೆ ಸಮಗ್ರವೆನ್ನಬಹುದಾದ ಸಮೀಕ್ಷೆಯನ್ನೊಳಗೊಂಡ ಮುನ್ನುಡಿಗಳಿವೆ.

ಇವು ಮುಖ್ಯವೆನಿಸಿದ ಮೂಲಸಾಮಗ್ರಿಯಾದರೆ, ಹರಿದಾಸರ ಸಾಹಿತ್ಯ-ಸಂಗೀತ ಸೇವೆಯನ್ನು ಪರಾಮರ್ಶೆ ಮಾಡುವ ಹಲವು ಸಂದರ್ಭಗಳು ನನಗೆ ಒದಗಿದುವು. ಸಂಗೀತಕಲಾನಿಧಿ ಆರ್. ಕೆ ಶ್ರೀಕಂಠನ್ ಅವರ ಹೆಸರಿನಲ್ಲಿ ವ್ಯವಸ್ಥೆಗೊಂಡ ಪ್ರತಿಷ್ಠಾನದ ಮೊದಲ ಉಪನ್ಯಾಸವನ್ನು ನಾನೇ ನೀಡಬೇಕೆಂದು ಅವರು ಅಪ್ಪಣೆ ಮಾಡಿದರಾಗಿ ಕರ್ನಾಟಕ ಸಂಪ್ರದಾಯ ಸಂಗೀತಕ್ಕೆ ಹರಿದಾಸರು ನೀಡಿದ ಕೊಡುಗೆಯನ್ನು ಅಲ್ಲಿ ವಿವರವಾಗಿ ಪ್ರಸ್ತಾಪಿಸುವುದಾಯಿತು (೧೯೯೬). ಸಂತ ಭದ್ರಗಿರಿ ಕೇಶವದಾಸರು ಏರ್ಪಡಿಸಿದ ದಾಸಸಾಹಿತ್ಯ ಸಮ್ಮೇಳನದಲ್ಲಿ ಹರಿದಾಸ ಸಂಸ್ಕೃತಿಯ ಆಯಾಮವನ್ನು ವಿವರವಾಗಿ ಚರ್ಚಿಸಿದೆ.

ಈಚೆಗೆ ಹಂಪಿ ವಿಶ್ವವಿದ್ಯಾಲಯವು ಧರ್ಮಸ್ಥಳದಲ್ಲಿ ಜರುಗಿಸಿದ ದಾಸಸಾಹಿತ್ಯ -ಸಂಸ್ಕೃತಿ ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷನಾಗಿ ನಾನು ಮಾಡಿದ ಉಪನ್ಯಾಸವೇ (೨೦೦೨) ನನ್ನ ಮಾನ್ಯ ಮಿತ್ರರೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶರವರ ಆಸಕ್ತಿಗೆ ಕಾರಣವಾಯಿತು. ಈ ಪುಸ್ತಕ ಈಗ ಹೊರಬರುತ್ತಿರುವುದಕ್ಕೆ ಅದೇ ಪ್ರೇರಣೆ. ಗಾಯನ ಸಮಾಜದ ಸಂಗೀತ ಸಮ್ಮೇಳನದ ಅಧ್ಯಕ್ಷನಾಗಿ (೧೯೯೦) ನಾನು ಮಾಡಿದ ಉಪನ್ಯಾಸವು ಹರಿದಾಸಸಾಹಿತ್ಯ ಸಂಗೀತವನ್ನು ಕುರಿತೇ. 'ಗಾಯನ ಸಾಮ್ರಾಜ್ಯ'ದಲ್ಲಿ ಕನಕದಾಸರ ಕೊಡುಗೆಯನ್ನು ಕುರಿತಂತೆ ಸುದೀರ್ಘವಾದ ನನ್ನ ಬರಹವೊಂದು ತೋರಿಕೊಂಡಿತು. ಕನಕದಾಸರ ವಿಚಾರವಾಗಿಯೇ ಇನ್ನಷ್ಟು ಚಿಂತನೆ

ನನ್ನಿಂದ ನಡೆದದ್ದು ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರು ಹೊರತಂದ 'ಗಾನಕಲಾಮಂಜರಿ' (ಭಾಗ ೨, ೧೯೯೮)ಯಲ್ಲಿ ಪ್ರಕಟವಾಯಿತು.

ಮತ್ತೆ, ಹರಿದಾಸಸಂಸ್ಕೃತಿಯಲ್ಲಿ ಪ್ರಮುಖ ಪ್ರಕಾರವಾಗಿರುವ ಬಿಂಬೋಪಾಸನೆಯ ಸ್ವಾರಸ್ಯವನ್ನು ಮನಗಾಣಿಸುವ ಅಗತ್ಯವಿದೆಯೆಂದುಕೊಂಡು ಅದನ್ನು ಹೊಸದಾಗಿಯೇ ಬರೆದು ಸೇರಿಸಿದ್ದೇನೆ. ಹಿಂದಿನ ಬರಹಗಳನ್ನೆಲ್ಲ ಮತ್ತೊಮ್ಮೆ ತಿದ್ದಿ, ಅಗತ್ಯವಾದೆಡೆ ಹಿಗ್ಗಿಸಿ ಇಲ್ಲಿ ಸಿದ್ಧಪಡಿಸಿದ್ದೇನೆ. ಇದು ಹಲವು ಮೂಲಗಳಿಂದ ಆಯ್ದ ಪ್ರಬಂಧಗಳ ಸಂಕಲನವಾದುದರಿಂದ ಅಲ್ಲಲ್ಲಿ ಪುನರುಕ್ತಿ ಅನಿವಾರ್ಯವಾಗಿ ನುಸುಳಿಕೊಂಡು ಬಂದಿದೆ. ಓದುಗರು ಸಹೃದಯರಾಗಿ ಮನ್ನಿಸಿಯಾರೆಂಬ ನಂಬಿಕೆ ನನಗಿದೆ.

ಹರಿದಾಸರ ಸಾಂಸ್ಕೃತಿಕ ನೆಲೆ ಕನ್ನಡನಾಡಿಗೆ ವಿಶಿಷ್ಟವಾದುದು. ಇದರ ಹರವು ಜನಸಾಮಾನ್ಯರಲ್ಲಿ ಇಂದಿಗೂ ಕಾಣಬರುತ್ತದೆ. ಇದರ ಆಳ-ಅಗಲಗಳನ್ನು ಜನ ತಿಳಿಯುವುದಾದರೆ ಈ ಸಂಸ್ಕೃತಿಯು ಮುಂದೆಯೂ ಬೆಳಗೀತು ಎಂಬ ಭರವಸೆ ನನಗಿದೆ. ಜನರ ನೆರವಿಗೆ ಅದು ಬರಲೆಂಬ ಹಾರೈಕೆ ನನ್ನದು.

ಅಕ್ಟೋಬರ್ ೨, ೨೦೦೩ **ಪ್ರೊ. ಸಾ. ಕೃ. ರಾಮಚಂದ್ರರಾವ್**
ಗಾಂಧಿ ಜಯಂತಿ

ಪರಿವಿಡಿ

	ಅಕ್ಷರ ಸೂರ್ಯನಿಗೆ ನಮನ	iii
	ಮೊದಲ ಮಾತು	vii
೧.	ಪುರಂದರದಾಸರು	೧
೨.	ಜೀವನ ದರ್ಶನ	೩೯
೩.	ಕನಕದಾಸರು	೬೧
೪.	ಇತಿಹಾಸದ ಇಕ್ಕಟ್ಟಿನಲ್ಲಿ	೯೧
೫.	ಹರಿದಾಸರ ಆಧ್ಯಾತ್ಮಿಕ ದೃಷ್ಟಿ	೧೩೫
೬.	ಹರಿದಾಸರ ಸಂಪ್ರದಾಯಸಂಗೀತ	೧೬೭
೭.	ಸಂಪ್ರದಾಯ ಸಂಗೀತದಲ್ಲಿ ಸಾಹಿತ್ಯ	೧೮೮
೮.	ಹರಿದಾಸ ಸಂಸ್ಕೃತಿ	೨೧೦
೯.	ಹರಿದಾಸ ಪರಂಪರೆ	೨೩೧
೧೦.	ದಾಸರ ಕೀರ್ತನಪ್ರಕಾರಗಳು	೨೬೨
೧೧.	ದಾಸರ ಸಾಮಾಜಿಕ ನಿಲುವು	೨೯೬
೧೨.	ಬಿಂಬೋಪಾಸನೆ	೩೨೪

ಕರ್ನಾಟಕ ಸಂಗೀತ ಸಾಹಿತ್ಯ ಪಿತಾಮಹರು

ಪುರಂದರದಾಸರು (ವಾಲಾಜಾಪೇಟೆ
ವೆಂಕಟರಮಣ ಭಾಗವತರ್ ಭಜನ
ಮಂದಿರದಲ್ಲಿರುವ ಅಪೂರ್ವ ಚಿತ್ರ)

ಕನಕದಾಸರು
ಕೃಪೆ. ಎಸ್. ಕೆ. ರಾಮಚಂದ್ರರಾಯರು
ಕೃಪೆ ಮೈಸೂರು ಪಿ. ಸುಬ್ರಹ್ಮಣ್ಯರವರು

ತಾಳ್ಲಪಾಕಂ ಅಣ್ಣಮಾಚಾರ್ಯರು

ತ್ಯಾಗರಾಜರು
(ವಾಲಾಜಾಪೇಟೆ ವೆಂಕಟರಮಣ ಭಾಗವತರ್
ಭಜನ ಮಂದಿರದಲ್ಲಿರುವ ಅಪೂರ್ವ ಚಿತ್ರ)

ಅಧ್ಯಾಯ ಒಂದು

ಪುರಂದರದಾಸರು

೧

ಪರಮಾರ್ಥದ ಸಾಕ್ಷಾತ್ಕಾರಕ್ಕೆ ಜ್ಞಾನ, ಕರ್ಮಗಳಿಗಿಂತ ಭಕ್ತಿ ಹೆಚ್ಚು ಪ್ರಶಸ್ತವಾದ ದಾರಿ ಎಂಬ ಅರಿವು ನಮ್ಮ ನಾಡಿನಲ್ಲಿ ಮೂಡಿದಂದು ಭಕ್ತರ, ಭಾವುಕರ, ಸಂತರ ದೊಡ್ಡದೊಂದು ಪ್ರವಾಹವೇ ಹರಿಯಿತು. ದಕ್ಷಿಣಾಪಥದಲ್ಲಿ ತಮಿಳುನಾಡಿನ ವೈಷ್ಣವ ಸಂತರೂ, ಕನ್ನಡದೇಶದ ಹರಿದಾಸರೂ ವೀರಶೈವ ಸಂತರೂ, ಮಹಾರಾಷ್ಟ್ರದ ವಾರಕಾರಿ ಸಂತರೂ ಈ ಪ್ರವಾಹದಲ್ಲಿ ಬಂದವರೇ. ಎಂಟು-ಒಂಬತ್ತನೆಯ ಶತಮಾನದ ಸುಮಾರಿಗೆ ಆರಂಭವಾದ ಈ ಮನೋವೃತ್ತಿ ಹದಿನೇಳು-ಹದಿನೆಂಟನೆಯ ಶತಮಾನದವರೆಗೂ ಸಾಗಿಬಂದಿತು. ಹನ್ನೊಂದನೆಯ ಶತಮಾನದಲ್ಲಿ ರಾಮಾನುಜಾಚಾರ್ಯರು ಮುಖ್ಯವಾಗಿ ಭಕ್ತಿಯ ಜಾಡನ್ನೇ ಹಿಡಿದು ಭಕ್ತನು ಪ್ರಸನ್ನನಾಗುವವರೆಗೆ ದಾಸನಾಗುವವರೆಗೆ ಭಗವತ್ಪ್ರೀತಿಯಾಗದೆಂದು ನಿರೂಪಿಸಿದರು. ಈ ನಿರೂಪಣೆಯನ್ನೇ ಹದಿಮೂರನೆಯ ಶತಮಾನದಲ್ಲಿ ಬಂದ ಮಧ್ವಾಚಾರ್ಯರು ಎತ್ತಿ ಹಿಡಿದು ಹರಿಸರ್ವೋತ್ತಮತ್ವವನ್ನೂ ಜೀವದ ಪಾರತಂತ್ರ್ಯವನ್ನೂ ಪ್ರತಿಪಾದಿಸಿ ಭಕ್ತಿಯ ಅಗತ್ಯವನ್ನು ಪ್ರಚಾರಮಾಡಿದರು. ಅವರ ತಾತ್ತ್ವಿಕ ನಿಲುವನ್ನು ಪರಿಗ್ರಹಿಸಿ ಭಕ್ತಿಯನ್ನೇ ಬೆಳೆಸಿಕೊಂಡು ಭಗವಂತನನ್ನು ನಿತ್ಯಜೀವನದಲ್ಲಿ ನಿಲ್ಲಿಸಿಕೊಳ್ಳಲು ಉದ್ಯುಕ್ತರಾದ ಗೃಹಸ್ಥರು ಹರಿದಾಸರೆನಿಸಿಕೊಂಡರು. ಹಲವು ಹರಿದಾಸರು ಸಂಘಟಿತರಾದಂದು 'ದಾಸಕೂಟ'ವೆಂಬ ಕಲ್ಪನೆ ಮೈದಳೆಯಿತು.

ಹರಿದಾಸರೆಲ್ಲ ಮಾಧ್ವಮತದವರು ಎನ್ನಬೇಕಾಗಿಲ್ಲ; ಅವರಿಗೆ ಭಗವದ್ಭಕ್ತಿ, ನೀತಿ ಶ್ರದ್ಧೆಗಳು ಪ್ರಮುಖವಾದವು. ಹರಿದಾಸರಲ್ಲಿ ಬಹು ಮಂದಿ ಮಾಧ್ವ ಸಂಪ್ರದಾಯಕ್ಕೆ ಸೇರಿದವರಾದರೂ, ದಾಸಪರಂಪರೆಯಲ್ಲಿ ಆದ್ಯರೆನಿಸಿಕೊಳ್ಳುವ ಅರವತ್ತು ಮೂವರು ಮಂದಿ ಎಣಿಕೆಗೆ ಬರುತ್ತಾರೆ. ಇವರಲ್ಲಿ ಸೇರಿರುವ ಹಲವರು ಆರಾಧ್ಯರು, ಶೈವ ಭಾಗವತರು, ಲಿಂಗಧಾರಿಗಳು. ದಾಸಸಂಪ್ರದಾಯದ ಮೂಲಪುರುಷರೆಂದು ಪ್ರಸಿದ್ಧರಾದ ಅಚಲಾನಂದದಾಸರು ಅದ್ವೈತಮತಾನುಯಾಯಿಗಳು; ವೈಕುಂಠದಾಸರು ಶ್ರೀವೈಷ್ಣವರು. ಸರ್ವಮಾನ್ಯರಾದ ಕನಕದಾಸರು ಬ್ರಾಹ್ಮಣರೇ ಅಲ್ಲ, ಅಂಡೆ ಕುರುಬರು. ಆದರೆ ಮಾಧ್ವಮತದ ಪ್ರಕ್ರಿಯೆಗಳು ದಾಸಕೂಟದ ದಾರ್ಢ್ಯಕ್ಕೆ ನೆರವಾದುದರಿಂದ ಈ ಪಂಗಡದಲ್ಲೇ ಹರಿದಾಸರು ಹೆಚ್ಚಾಗಿ ಬಂದುದು ಸಹಜ. ಹೀಗೆಂದ ಮಾತ್ರಕ್ಕೆ ಅವರ ಪ್ರತಿಭೆ

ಮತದಿಂದ ಸಂಕುಚಿತವಾಗಲಿಲ್ಲ; ಸಿದ್ಧಾಂತದಿಂದ ಕುಂಠಿತವಾಗಲಿಲ್ಲ. ಸರ್ವಗ್ರಾಹ್ಯವಾಗಿ, ಉದಾರವಾಗಿ, ಗಂಭೀರವಾಗಿ ಬೆಳೆಯಿತು. ಲೋಕಸಂಗ್ರಹಕ್ಕೆಂದು ಹರಿದಾಸರಾದವರಿಗೆ ವೇದಾಂತದ ಸಿದ್ಧಾಂತಗಳಾಗಲಿ ಮತ ಪ್ರಕ್ರಿಯೆಗಳಾಗಲಿ ಅಡ್ಡಿಬರಲಿಲ್ಲ.

ಹರಿದಾಸರೆಲ್ಲ ಕನ್ನಡಿಗರು; ಅವರ ಸಾಹಿತ್ಯವೆಲ್ಲ ಕನ್ನಡ ಭಾಷೆಯಲ್ಲೇ ಇದೆ. ಆದರೆ ಕನ್ನಡನಾಡಿನಲ್ಲಿ ಹರಿದಾಸಪರಂಪರೆ ಎಂದು, ಯಾರಿಂದ, ಹೇಗೆ ಪ್ರವರ್ತಿತವಾಯಿತೆಂದು ನಿರ್ಧರಿಸುವುದು ಕಷ್ಟ. ಪುರಂದರದಾಸರಿಗೆ ಪೂರ್ವದಲ್ಲಿ ಅರವತ್ತು ಮಂದಿ ಆದ್ಯರೆಂಬ ಹರಿದಾಸರು ಇದ್ದರೆಂದೂ, ಅವರಲ್ಲಿ ಒಂಬತ್ತು ಮಂದಿ ಆರಾಧ್ಯರೆಂದೂ ದಾಸಕೂಟದವರ ನಂಬಿಕೆ. ಈ ಆದ್ಯರಲ್ಲಿ ಆದ್ಯರೆನಿಸಿಕೊಂಡವರು ಹೈಗಣಪುರದ ಅಚಲಾನಂದದಾಸರು. ಎಂಟು ಅಥವಾ ಒಂಬತ್ತನೆಯ ಶತಮಾನದಲ್ಲಿ ಇದ್ದಿರಬಹುದಾದ ಇವರು 'ಅಚಲಾನಂದ ವಿಟ್ಠಲ;' ಎಂಬ ಅಂಕಿತ ದಿಂದ ರಚಿಸಿದ ಕೀರ್ತನೆಗಳಲ್ಲಿ ನಾಲ್ಕೈದು ಇಂದಿಗೂ ಉಳಿದಿವೆ. ಇವರನಂತರ ಬಂದ ಕನ್ನಡ ವಾಗ್ಗೇಯಕಾರರಾದ ಮುದ್ದು ವಿಟ್ಠಲ, ಯೋಗೇಂದ್ರ ವಿಟ್ಠಲ, ನರಕಂಠೀರವ ವಿಟ್ಠಲ, ಸೊಬಗು ವಿಟ್ಠಲ, ಸಿರಿಕೃಷ್ಣ ವಿಟ್ಠಲ ಮುಂತಾದವರ ಕೃತಿಗಳಲ್ಲಿ ಉಳಿದಿರುವಷ್ಟನ್ನು ಲಿಂಗಸುಗೂರಿನ ವರದೇಂದ್ರ ಸಾಹಿತ್ಯ ಮಂಡಲದವರು ಪ್ರಕಾಶನ ಮಾಡಿದ್ದಾರೆ. ಇವರ ಹೆಸರುಗಳಷ್ಟೇ ಉಳಿದಿವೆ; ಉಳಿದ ವಿವರಗಳು ಉಪಲಬ್ಧವಿಲ್ಲದಿರುವುದು ನಮ್ಮ ದೌರ್ಭಾಗ್ಯ.

ಹರಿದಾಸ ಪಂಥಕ್ಕೆ ಮಧ್ವಾಚಾರ್ಯರೇ ಪ್ರವರ್ತಕರೆಂದು ಒಂದು ವಾದ; ಅವರೂ ಕನ್ನಡದಲ್ಲಿ ಕೀರ್ತನೆಗಳನ್ನು ರಚಿಸಿದ್ದರೆಂದು ಹೇಳುವವರೂ ಇದ್ದಾರೆ. ಇದನ್ನು ಸಮರ್ಥಿಸುವುದು ಕಷ್ಟವಾದರೂ ಅವರ 'ದ್ವಾದಶಸ್ತೋತ್ರ' ತಂಬೂರಿಗೂ ಗೆಜ್ಜೆಗೂ ಸೇರುತ್ತದೆಂಬುದು ನಿರ್ವಿವಾದ. ಅವರ ಸಾಕ್ಷಾಚ್ಛಿಷ್ಯರಾದ ನರಹರಿತೀರ್ಥರು ಪ್ರವರ್ತಕರೆಂದು ಇನ್ನೊಂದು ವಾದ. ೧೩೩೧ರಲ್ಲಿ ಹಂಪಿಯ ಬಳಿ ತೀರಿಕೊಂಡ ಇವರು 'ರಘುಪತಿ', 'ರಘುಕುಲ ತಿಲಕ' ಎಂಬ ಅಂಕಿತದಲ್ಲಿ ದೇವರ ನಾಮಗಳನ್ನು ರಚಿಸಿದರಂತೆ; ಆದರೆ ಅವರ ಕೃತಿಗಳಲ್ಲಿ ಎರಡು-ಮೂರನ್ನು ಬಿಟ್ಟರೆ ಉಳಿದವು ಸ್ಪಷ್ಟವಾಗಿ ಉಪಲಬ್ಧವಿಲ್ಲ. ಅವರ ಶಿಷ್ಯರೆನಿಸಿಕೊಂಡ ಶ್ರೀಪಾದರಾಜರು ರಚಿಸಿದ ದೇವರ ನಾಮಗಳಂತೂ ನಮ್ಮ ಕಾಲಕ್ಕೂ ಉಳಿದುಬಂದಿವೆ. ಈ ಕಾರಣದಿಂದಲೇ ದಾಸಕೂಟದವರು ತಮ್ಮ ಪರಂಪರೆಯನ್ನು ಸ್ಮರಿಸುವಾಗ 'ನಮಃ ಶ್ರೀಪಾದರಾಜಾಯ' ಎಂದೇ ಆರಂಭಿಸುತ್ತಾರೆ.

ಶ್ರೀಪಾದರಾಜರನ್ನೂ ಅವರ ಶಿಷ್ಯ ವ್ಯಾಸರಾಯರನ್ನೂ ಬಿಟ್ಟರೆ ಉಳಿದ ಹರಿದಾಸರು ಸಂನ್ಯಾಸಿಗಳಲ್ಲ, ಗೃಹಸ್ಥರು, ಊರಿನಲ್ಲೇ ಇದ್ದವರು, ಜನಗಳ ಸಂಪರ್ಕದಲ್ಲೇ ನಿಂತವರು, ಸಾಮಾನ್ಯ ಜೀವನದ ಸುಖ-ದುಃಖಗಳಲ್ಲಿ ಭಾಗಿಗಳಾದವರು. ಆದರೆ ಭಕ್ತಿಯ ಆವೇಶ ಒದಗಿಬಂದು ಭಗವಂತನತ್ತ ತಮ್ಮ ಮುಖವನ್ನು ತಿರುಗಿಸಿದವರು. ಗುರುವೊಬ್ಬನನ್ನು ಆರಿಸಿ, ಅವರಿಂದ ಹರಿದಾಸದೀಕ್ಷೆ ಪಡೆದು, ಬಾಳನ್ನು ವ್ರತದಂತೆ ನಡೆಸಲು ನಿಶ್ಚಯಿಸಿದ ಜನ ಇವರು. ಗುರುಗಳಿಂದ ಚಕ್ರಾಂಕನವನ್ನು ಪಡೆದು, ಅಂಕಿತವೊಂದನ್ನು ಸ್ವೀಕರಿಸಿ 'ಸಾಲಮಾಡೆನು', 'ಸಾಲದೆನೆನು', 'ನಾಳೆಗಿಡೆನು', 'ಶ್ರುತಿಸ್ಮೃತೀತಿಹಾಸಪುರಾಣಗಳನ್ನು ನಂಬುವೆನು' ಎಂದು ಮುಂತಾಗಿ ಪ್ರತಿಜ್ಞೆಗಳನ್ನು ಮಾಡಿ, ಇವರು ಉಂಛವೃತ್ತಿಯಿಂದಲೇ ಜೀವನಯಾತ್ರೆ ನಡೆಸುತ್ತ, ಭಗವನ್ನಾಮ ಸಂಕೀರ್ತನೆಯಲ್ಲೇ

ಕಾಲ ಕಳೆಯುತ್ತಿದ್ದರು. ಇವರೆಲ್ಲ ಭಾವುಕರು; ಅವರಲ್ಲಿ ಹಲವಾರು ಮಂದಿ ಅನುಭಾವಿಗಳು. ದೇವರ ನಾಮಗಳನ್ನು ಹಾಡುವುದು, ಆವೇಶ ಬಂದಾಗ ಕುಣಿಯುವುದು ಅವರು ಅನುಸರಿಸುತ್ತಿದ್ದ ವಿಧಾನಗಳು. 'ಮದ್ಭಕ್ತಾ ಯತ್ರ ಗಾಯಂತಿ ತತ್ರ ತಿಷ್ಠಾಮಿ ನಾರದ' ಎನ್ನುವ ಭಗವದ್ವಾಕ್ಯವೇ ಅವರ ಸಮಾಧಾನ. ಈ ಗುಂಪಿನಲ್ಲಿ, ಈ ಪರಂಪರೆಯಲ್ಲಿ ಹಲವರು ಬರಿಯ ಗಾಯಕರಾಗಿ ಉಳಿಯದೆ ವಾಗ್ಗೇಯಕಾರರೂ ಆಗಿ ಪ್ರಖ್ಯಾತರಾಗಿದ್ದಾರೆ. ಹಿಂದಿನವರನ್ನು ಬಿಟ್ಟರೂ ಸುಮಾರು ನೂರುಮಂದಿ ಅರ್ವಾಚೀನ ಹರಿದಾಸರ ಕೃತಿಗಳು ದಾಸಕೂಟದಲ್ಲಿ ಪ್ರಚುರವಾಗಿವೆ.

ಅಂಕಿತ ಸ್ವೀಕರಿಸುವ ಮಾತು ಬಂದಿತಷ್ಟೆ. ಸಾಮಾನ್ಯವಾಗಿ ಹರಿದಾಸರ ಅಂಕಿತದಲ್ಲಿ ಇಷ್ಟದೇವತೆಯ, ಅಥವಾ ಸ್ವನಾಮದ ಅಥವಾ ಯಾವುದಾದರೊಂದು ವ್ಯವಹಾರದ ಹೆಸರಿನೊಂದಿಗೆ 'ವಿಟ್ಠಲ'ವೆಂಬ ಪದ ಸೇರಿಬರುತ್ತದೆ. 'ರಂಗವಿಟ್ಠಲ', 'ಪುರಂದರವಿಟ್ಠಲ', 'ಗೋಪಾಲವಿಟ್ಠಲ', 'ವಿಜಯವಿಟ್ಠಲ', 'ಮುದ್ದುವಿಟ್ಠಲ', 'ಮೋಹನವಿಟ್ಠಲ', ಇತ್ಯಾದಿ. ವಿಟ್ಠಲನು ಪಂಢರಪುರದ ದೇವರು. ಹರಿದಾಸರಿಗೂ ಪಂಢರಪುರಕ್ಕೂ ತೀರದ ನಂಟೇನೋ ಉಂಟು. ಆದರೆ ಕನ್ನಡದ ಹರಿದಾಸರಿಗೂ ಮಹಾರಾಷ್ಟ್ರದ ವಿಟ್ಠಲನಿಗೂ ಗಂಟು ಬಿದ್ದುದು ಹೇಗೆ ಎಂಬುದು ಬಿಡಿಸಲಾಗದ ಸಮಸ್ಯೆ. ವಿವರಗಳು ಸ್ವಾರಸ್ಯವಾಗಿದೆ.

ಪಂಢರಪುರ ಈಗ ಮಹಾರಾಷ್ಟ್ರರಾಜ್ಯದಲ್ಲಿರುವ ಸೊಲ್ಲಾಪುರ ಜಿಲ್ಲೆಗೆ ಸೇರಿದ ಕ್ಷೇತ್ರ. ಭೀಮಾನದಿಯ ದಂಡೆಯ ಮೇಲಿರುವ ಈ ಕ್ಷೇತ್ರದಲ್ಲಿ ವಿಟ್ಠಲ (ಅಥವ ವಿಠೋಬ) ನ ಪ್ರಸಿದ್ಧ ದೇವಾಲಯವಿದೆ. ಮಹಾರಾಷ್ಟ್ರದ ಪ್ರಖ್ಯಾತ ಸಂತರಾದ ಜ್ಞಾನದೇವ, ತುಕಾರಾಮ ಮುಂತಾದವರ ಸಾರಸ್ವತ ಸಂಪತ್ತಿನಿಂದ ಜನಪ್ರಿಯನಾದ ಈ ದೇವತೆ ಶಿವನೆಂದೂ, ವಿಷ್ಣುವೆಂದೂ, ಹರಿಹರನೆಂದೂ, ಜೈನತೀರ್ಥಂಕರನಾದ ನೇಮಿನಾಥನೆಂದೂ ಹಲವಾರು ವಾದಗಳಿವೆ. ವಿಟ್ಠಲನ ಹೆಸರಿಗೆ ಸೇರಿದ 'ಪಾಂಡುರಂಗ'ವೆಂಬುದು ರುದ್ರವಾಚಿಯಾದ ಪದವೆಂದು ಹೇಮಚಂದ್ರನ 'ದೇಶಿನಾಮಮಾಲೆ' ಹೇಳುತ್ತದೆ. ರಂಗನೆಂದರೆ ಕೃಷ್ಣನೆಂದೂ, ಭಾರತದ ಪಾಂಡುವಿನ ಮಕ್ಕಳ ಪ್ರಾಣವಾದ ಕೃಷ್ಣನೇ ಪಾಂಡುರಂಗನೆಂದೂ ಮತ್ತೊಂದು ವಾದ. ಆರನೆಯ ಶತಮಾನಕ್ಕೆ ಮುಂಚೆ ಮಾಡಿದ ಈ ವಿಗ್ರಹವನ್ನು ಪರಿಶೀಲಿಸಿದರೆ ವಾದಗಳು ಇತ್ಯರ್ಥವಾಗುವಹಾಗಿಲ್ಲ.

ದೇವರ ಸ್ವರೂಪ ಏನೇ ಇದ್ದರೂ ಊರು ಮಾತ್ರ ಒಂದು ಕಾಲಕ್ಕೆ ಕನ್ನಡನಾಡಿಗೆ ಸೇರಿದ್ದು, ಇದು ಕನ್ನಡಿಗರ ದೇವರೆಂಬುದು ಸ್ಪಷ್ಟವಾಗುತ್ತದೆ. ಮಹಾರಾಷ್ಟ್ರದ ಸಂತನಾದ ಜ್ಞಾನೇಶ್ವರನೇ "ಕಾನಡಾ ಹೋ ವಿಟ್ಠಲು ಕರ್ಣಾಟಕು" ಎಂದು ಒಂದು ಅಭಂಗದಲ್ಲಿ ಹೇಳಿದ್ದಾನಂತೆ. ವಿಟ್ಠಲನೆಂಬ ಪದ ಕನ್ನಡದ 'ಬಿಟ್ಟಿಗ' (ಸಂಸ್ಕೃತದ ವಿಷ್ಣುವಿನ ತದ್ಭವ) ಪದದ ಉತ್ತರರೂಪವೆಂದು ಹೇಳುತ್ತಾರೆ. ಪಂಢರಪುರಕ್ಕೂ ಮೊದಲಿಗೆ 'ಪಂಡರಿಗೆ'ಯೆಂಬ ಕನ್ನಡದ ಹೆಸರೇ ಬಳಕೆಯಲ್ಲಿದ್ದದ್ದು ಶಾಸನಗಳಿಂದ ತಿಳಿದುಬರುತ್ತದೆ. ನೃಪತುಂಗನು ಹೇಳುವ ಕನ್ನಡನಾಡಿನ ಉತ್ತರ ಸೀಮೆಯಾದ ಗೋದಾವರಿಯು ಪಂಢರಪುರದ ಆಚೆಯೇ ಇದೆಯಷ್ಟೆ. ಕನ್ನಡನಾಡಿನಲ್ಲೇ ಇದ್ದ ಪಾಂಡುರಂಗ ವಿಟ್ಠಲನಿಗೂ ಕನ್ನಡದ ಹರಿದಾಸರಿಗೂ ನಂಟು ಬೆಳೆದದ್ದು ಆಶ್ಚರ್ಯವೇನಲ್ಲ. ವಿಟ್ಠಲ ಮಹಾರಾಷ್ಟ್ರದವನಾದದ್ದು ಈಚಿನ ಮಾತು.

ಪುರಂದರದಾಸರ ಪರಮಗುರುಗಳಾದ ಶ್ರೀಪಾದರಾಜರೇ ಹರಿದಾಸಪರಂಪರೆಗೆ ಪ್ರಸಿದ್ಧರಾದ ಪೂರ್ವಜರು. ಇವರು ಹುಟ್ಟಿದ ಸ್ಥಳ ಚೆನ್ನಪಟ್ಟಣ ತಾಲ್ಲೂಕಿನ ಅಬ್ಬೂರು; ಇವರು ೧೪೭೦ರ ಸುಮಾರಿಗೆ ಇದ್ದವರು. ತಂದೆ ಶೇಷಗಿರಿಯಪ್ಪನವರು ಎಲ್ಲಿಯೋ ಕರಣೀಕರಾಗಿದ್ದರಂತೆ. ಇವರ ನಿಜವಾದ ಆಶ್ರಮನಾಮ ಲಕ್ಷ್ಮೀನಾರಾಯಣತೀರ್ಥರೆಂದು; ಗೌರವದಿಂದ ಶ್ರೀಪಾದರಾಜರೆಂದು ಜನ ಕರೆಯುತ್ತಿದ್ದರಷ್ಟೆ. ಪದ್ಮನಾಭತೀರ್ಥರ ಪೀಳಿಗೆಯಲ್ಲೇ ಬಂದ ಇವರು ಮುಂದೆ ಮುಳುಬಾಗಿಲ ಮಠವನ್ನು ಸ್ಥಾಪಿಸಿದರು. ಉತ್ತರಾದಿಮಠದ ರಘುನಾಥ ತೀರ್ಥರಿಗೂ ಇವರಿಗೂ ಮೈತ್ರಿ ಇದ್ದಿತಂತೆ; ಭಾಗವತಕ್ಕೆ ಭಾಷ್ಯ ಬರೆದು ಪ್ರಖ್ಯಾತರಾದ ಪೇಜಾವರ ಮಠದ ವಿಜಯಧ್ವಜ ತೀರ್ಥರು ಇವರ ಸಮಕಾಲಿಕರಂತೆ.

ಶ್ರೀ ಪಾದರಾಜರ ಕಾಲದಲ್ಲಿ ಸಾಳುವ ನರಸಿಂಹ ಕರ್ಣಾಟಕ ಮತ್ತು ತೆಲಂಗಾಣಗಳ ದೊರೆಯಾಗಿದ್ದನು. ವಿಜಯನಗರದ ವಿರೂಪಾಕ್ಷರಾಜನ ಸಾಮಂತನಾಗಿ ಚಂದ್ರಗಿರಿಯಲ್ಲಿ ಆಳುತ್ತಿದ್ದನು. ಇವನು ವಿದ್ಯಾಪಕ್ಷಪಾತಿ; ಶ್ರೀಪಾದರಾಜರಲ್ಲಿ ಭಕ್ತಿಭಾವದಿಂದಿದ್ದವನು.

ಶ್ರೀಪಾದರಾಜರು ವೇದಾಂತದಲ್ಲೂ, ತರ್ಕದಲ್ಲೂ ಎತ್ತಿದ ಕೈ. ಅವರು ಸಂಸ್ಕೃತದಲ್ಲಿ ಬರೆದ 'ವಾಗ್ವಜ್ರ'ವೆಂಬ ಗ್ರಂಥ ಅವರ ವೈದುಷ್ಯದ ದ್ಯೋತಕ. ಆದರೆ ಅವರು ಬರಿಯ ಪಂಡಿತರಾಗಿ ಮಾತ್ರವಿರದೆ ಭಾವುಕರೂ ಅನುಭಾವಿಗಳೂ ಆಗಿದ್ದುದೊಂದು ವಿಶೇಷ. ಹೊಸಗನ್ನಡ ಶೈಲಿಯಲ್ಲಿ ಹಲವಾರು ದೇವರನಾಮಗಳನ್ನು ರಚಿಸಿ ತಾವೇ ಹಾಡುತ್ತಿದ್ದರಂತೆ. ಮಠಾಧಿಪತಿಗಳು ಸಾಮಾನ್ಯವಾಗಿ ಪಂಡಿತಪೋಷಕರು, ಸಂಸ್ಕೃತಾಭಿಮಾನಿಗಳು, ವೈದಿಕಜನಪಕ್ಷಪಾತಿಗಳು. ಕನ್ನಡದಲ್ಲಿ ದೇವರನಾಮಗಳನ್ನು ರಚಿಸುವುದಾಗಲಿ ಹಾಡುವುದಾಗಲೀ ಅವರ ಅಪಾಂಗದೃಷ್ಟಿಗೆ ಪಾತ್ರವಷ್ಟೆ. ಆದರೆ ಈ ಮನೋಧರ್ಮವನ್ನು ಮುರಿದವರಲ್ಲಿ ಶ್ರೀಪಾದರಾಜರು ಮೊದಲಿಗರು. ಮುಂದೆ ಬಂದ ದಾಸಕೂಟಕ್ಕೆ ಇವರ ಪ್ರಭಾವ, ಪ್ರೋತ್ಸಾಹಗಳು ದಾರಿಮಾಡಿಕೊಟ್ಟುವೆನ್ನಬಹುದು.

ಹಳಗನ್ನಡಪದಗಳ ಬಾಹುಳ್ಯವಿದ್ದರೂ ಹೊಸಗನ್ನಡಶೈಲಿಯಲ್ಲಿ ವೃತ್ತನಾಮಗಳನ್ನು ರಚಿಸುವ ಜಾಣ್ಮೆ ಅವರ ಹಲವಾರು ದೇವರನಾಮಗಳಲ್ಲಿ ವ್ಯಕ್ತವಾಗಿದೆ. ವೃತ್ತನಾಮಪದ್ಧತಿ ಯೆನ್ನುವುದು ತುಂಬ ಪ್ರಾಚೀನವಾಗಿದ್ದರೂ ಅದರ ಪ್ರಾಚುರ್ಯ ಅಷ್ಟಿರಲಿಲ್ಲ; ಅದನ್ನು ಎತ್ತಿ ಹಿಡಿದವರು ಶ್ರೀಪಾದರಾಜರು. ಮುಂದೆ ವ್ಯಾಸತೀರ್ಥರ ಕಾಲದಲ್ಲಿ ಅದು ತುಂಬ ಬಳಕೆಗೆ ಬಂದಿತು. ಮೊದಲಿಗೆ ವೃತ್ತನಾಮಗಳು ಸಂಸ್ಕೃತದಲ್ಲೇ ಇರುತ್ತಿದ್ದವು; ಮೊದಲೊಂದು ಪಲ್ಲವಿ, ಅನಂತರ ಒಂದು ವೃತ್ತ, ಅನಂತರ ಒಂದು ಚರಣ, ಮತ್ತೆ ಒಂದು ವೃತ್ತ ಹೀಗೆ ಸಾಗುತ್ತಿದ್ದ ಕೃತಿಗಳು ಅವು. ಜಯದೇವನ 'ಗೀತಗೋವಿಂದ'ದ ಧಾಟಿಯನ್ನು ಹಿಡಿದು ಹಲವು ವೃತ್ತನಾಮಗಳು ನಿಂತಿದ್ದುವು. ಅಂತೂ ಖಿಲವಾಗುತ್ತಿದ್ದ ಈ ಪದ್ಧತಿಯನ್ನು ಶ್ರೀಪಾದರಾಜರು ಉದ್ಧರಿಸಿದರು. ರಾತ್ರಿಯ ಪೂಜೆಗೆ ಸಹಾಯವಾಗಲು ಪದ್ಯ, ಕೀರ್ತನೆಗಳನ್ನು ಕನ್ನಡ ಭಾಷೆಯಲ್ಲಿ ವೃತ್ತನಾಮದ ಪದ್ಧತಿಯಲ್ಲಿ ತಾವೇ ರಚಿಸಿದರು.

ಸುಳಾದಿಯೆಂಬ ಸಂಗೀತದ ಕೃತಿವಿಶೇಷ ಅವರಿಂದಲೇ ಆರಂಭವಾಯಿತೆಂದು ಹೇಳುತ್ತಾರೆ; ಅದು ಹಿಂದೆಯೇ ಇದ್ದಿತೆಂದರೂ ಅವರ ಕಾಲದಿಂದಲೇ ಸುಳಾದಿಗಳ ಪ್ರಾಚುರ್ಯವೆಂಬುದು ನಿಜ. ನೂರಮುವ್ವತ್ತು ಮೂರು ಸುಳಾದಿಗಳನ್ನೂ ಮೂರು ಉಗಾಭೋಗಗಳನ್ನೂ ರಮ್ಯವಾದ ರಾಗಗಳಲ್ಲಿ ಇವರು ರಚಿಸಿದುವು ನಮಗೆ ಉಪಲಬ್ಧವಾಗಿವೆ. ರಾತ್ರಿಯ ಭಜನೆಗಾಗಿ ಮುಖಾರಿ ರಾಗ, ಅಟ್ಟತಾಳದಲ್ಲಿ ಭ್ರಮರಗೀತೆಯೊಂದನ್ನು ರಚಿಸಿದ್ದಾರೆ. 'ಭೃಂಗಾ ನಿನ್ನಟ್ಟಿದಾನೇ ಶ್ರೀರಂಗ ಮಧುರೇಲಿ ನಿಂದೂ' ಎಂದು ಆರಂಭವಾಗುವ ಈ ಕೃತಿ ಶ್ರೀಪಾದರಾಜರ ಪ್ರಶಸ್ತವಾದ ಸಂಗೀತ ಜ್ಞಾನಕ್ಕೆ ಸಾಕ್ಷಿಯಾಗಿ ನಿಂತಿದೆ.

ಅಂತೂ ಪ್ರಭಾವಶಾಲಿಗಳಾಗಿ ರಾಜಸನ್ಮಾನಿತರಾಗಿದ್ದ ಇವರು ಹರಿದಾಸಸಾಹಿತ್ಯವನ್ನು ವಿಪುಲವಾಗಿ ಪೋಷಿಸಿ ೧೪೮೭ರಲ್ಲಿ ಮುಳುಬಾಗಿಲ ಬಳಿ ಇರುವ ನರಸಿಂಹತೀರ್ಥದ ದಡದಲ್ಲಿ ಬೃಂದಾವನಸ್ಥರಾದರು. ಇವರ ಕೃತಿಗಳಲ್ಲಿ 'ರಂಗವಿಟ್ಠಲ' ಎಂಬ ಅಂಕಿತ ಕಾಣುತ್ತದೆ.

ಇವರನಂತರ ಪ್ರಸಿದ್ಧರಾದ ವ್ಯಾಸತೀರ್ಥರು ಹರಿದಾಸಪರಂಪರೆಯನ್ನು ಸಾರೋದ್ಧಾರವಾಗಿ ಬೆಳೆಸಿದರು. ಶ್ರೀಪಾದರಾಜರ ಬಳಿ ವಿದ್ಯಾಭ್ಯಾಸ ಮಾಡಿದ ವ್ಯಾಸತೀರ್ಥರು ೧೪೪೭ರಂದು ಮೈಸೂರಿನ ಬಳಿಯಿರುವ ಬನ್ನೂರು ಎಂಬ ಹಳ್ಳಿಯಲ್ಲಿ ಜನ್ಮವೆತ್ತಿ ಅಬ್ಬೂರಿನಲ್ಲಿದ್ದ ಬ್ರಹ್ಮಣ್ಯತೀರ್ಥರಿಂದ ಸಂನ್ಯಾಸದೀಕ್ಷೆ ಪಡೆದರು. ಅವರು ೧೫೩೯ರಲ್ಲಿ ಆನೆಗೊಂದಿಯ ಬಳಿ ಬೃಂದಾವನಸ್ಥರಾದಾಗ ಅವರಿಗೆ ತೊಂಬತ್ತೆರಡು ವರ್ಷಗಳು. ಶ್ರೀಪಾದರಾಜರಿಗೂ ವಿಜಯನಗರ ಸಂಸ್ಥಾನಕ್ಕೂ ಇದ್ದ ಬಾಂಧವ್ಯ ವ್ಯಾಸತೀರ್ಥರ ಕಾಲದಲ್ಲಿ ಬಲಿಯಿತು. ಕೃಷ್ಣದೇವರಾಯಮಹಾರಾಯ ವಿಜಯನಗರದ ಅರಸನಾಗಿದ್ದ ಕಾಲ ಅದು. ಜನಜೀವನದಲ್ಲಿ ಸಮೃದ್ಧಿಯಿದ್ದು ರಾಜ್ಯದಲ್ಲಿ ವೈಭವವಿದ್ದ ಕಾಲ. 'ಕನ್ನಡ ರಾಜ್ಯರಮಾರಮಣ' ನೆನಿಸಿಕೊಂಡ ಕೃಷ್ಣದೇವರಾಯ ವ್ಯಾಸತೀರ್ಥರ ಶಿಷ್ಯ; ಅವನಿಗೆ ೧೫೨೧ರ ಜನವರಿ ಎಂಟರಂದು ಒದಗಿದ ಕುಹಯೋಗದ ಸಮಯದಲ್ಲಿ ವ್ಯಾಸತೀರ್ಥರೇ ಸಿಂಹಾಸನವನ್ನೇರಿ ರಾಜ್ಯನಿರ್ವಹಣೆ ಮಾಡಿದರೆಂದೂ ಅದಕ್ಕಾಗಿಯೇ ಅವರನ್ನು ವ್ಯಾಸರಾಯರೆಂದು ವ್ಯವಹರಿಸುತ್ತಾ ಬಂದಿರುವರೆಂದೂ ಹೇಳಲಾಗಿದೆ. ಇದರಲ್ಲಿ ಕಲ್ಪನೆಯ ಭಾಗ ಎಷ್ಟಿದೆಯೋ ತಿಳಿಯುವಂತಿಲ್ಲ. ಆದರೆ ಕೃಷ್ಣದೇವರಾಯನಿಗೆ ಅವರಲ್ಲಿ ಗಾಢವಾದ ಭಕ್ತಿಯಿದ್ದುದು ಶಾಲಿವಾಹನ ಶಕೆ ೧೪೪೯ರ ಗೌರಾಪುರ ಗ್ರಾಮದ ದಾನಶಾಸನವೊಂದರಿಂದ ತಿಳಿದು ಬರುತ್ತದೆ. ಇದರಲ್ಲಿ 'ನಿಗಮಾಗಮನಿರ್ಣೀತನಿರ್ಜರಾಧೀಶಮಂತ್ರಿ'ಗಳು, 'ನೃಪೇಂದ್ರಮುಕುಟೀರತ್ನ ನೀರಾಜಿತ ನಿಜಾಂಘ್ರಿ'ಗಳೂ, 'ನಿರಹಂಕಾರಚಿತ್ತ'ರೂ, 'ನೀತಿಮಾರ್ಗೋಪದೇಶಿ'ಗಳೂ, 'ಪುರಾಣಪುರುಷಧ್ಯಾನಪುಷ್ಯತ್ಪುಲಕಮೂರ್ತಿ'ಯೂ, 'ವಿದ್ವದಿಂದೀವರೇಂದು'ವೂ ಆದ ವ್ಯಾಸತೀರ್ಥ ಯತೀಂದ್ರರ ಹೆಗ್ಗಳಿಕೆಯಿದೆ.

ಇವರ ಕಾಲ ಭಾರತದ ಇತಿಹಾಸದಲ್ಲೇ ಮಹತ್ವದ ಕಾಲ. ಉತ್ತರದ ಸಂತರಾದ ರಾಮಾನಂದ (೧೪೦೦-೧೪೭೦), ಕಬೀರ (೧೪೪೦-೧೮೧೫), ನಾಮದೇವ (ಸುಮಾರು ೧೪೦೦), ಮೀರಾಬಾಯಿ (ಜನನ ೧೪೭೦), ನಾನಕ (೧೪೬೯-೧೫೩೯), ಕೃಷ್ಣಚೈತನ್ಯ (೧೪೮೫-೧೫೩೩) ಮುಂತಾದವರು ಜೀವಂತರಾಗಿದ್ದು ಕಾರ್ಯಕ್ಷೇತ್ರದಲ್ಲಿ ತಮ್ಮ ತಮ್ಮ ನಾಡುಗಳಲ್ಲಿ ಪ್ರಭಾವ

ಬೀರಿದ ಕಾಲ. ಇಡೀ ದೇಶದಲ್ಲೇ ಆಧ್ಯಾತ್ಮಿಕವಾದ ಒಂದು ಆಂದೋಲನ ರೂಪತಳೆಯುತ್ತಿದ್ದಿತು. ಈ ಪರ್ವಕಾಲದಲ್ಲಿ ವ್ಯಾಸತೀರ್ಥರ ಪ್ರಭೆ ದಕ್ಷಿಣದಿಂದ ಹೊರಹೊಮ್ಮಿತು. ವಿಜಯನಗರದ ಅರಸರಷ್ಟೇ ಅಲ್ಲ, ಮೊಗಲ್ ಸಾಮ್ರಾಟನಾದ ಬಾಬರನೂ, ವಿಜಾಪುರದ ಸುಲ್ತಾನನಾದ ಆದಿಲ್‌ಶಾಹನೂ ಇವರನ್ನು ಸನ್ಮಾನಿಸಿದ್ದರಂತೆ. ಉತ್ತರದ ಖ್ಯಾತ ತಾರ್ಕಿಕರಾಗಿದ್ದ ಪಕ್ಷಧರಮಿಶ್ರನೂ, ಗದಾಧರಮಿಶ್ರನೂ ಇವರೊಂದಿಗೆ ವಾಕ್ಯಾರ್ಥ ಮಾಡಿ ಸೋತರಂತೆ.

ಇವರು ಬಾಲ್ಯದಲ್ಲಿ ಶ್ರೀಪಾದರಾಜರ ಬಳಿ ವೇದಾಂತವನ್ನು ಓದುತ್ತಿದ್ದಾಗಲೇ ಹರಿದಾಸ ಸಾಹಿತ್ಯದಲ್ಲೂ ಅವರ ಆಸಕ್ತಿ ಬೆಳೆದುಬಂದಿರಬಹುದು; ಇದಕ್ಕೂ ಶ್ರೀಪಾದರಾಜರೇ ವಿದ್ಯಾಗುರುಗಳಿರಬಹುದು. ಸಂಸ್ಕೃತದಲ್ಲಿ 'ಚಂದ್ರಿಕಾ', 'ನ್ಯಾಯಾಮೃತ', 'ತರ್ಕತಾಂಡವ', 'ಭೇದೋಜ್ಜೀವನ', 'ಮಂದಾರಮಂಜರಿ'ಗಳನ್ನು ರಚಿಸಿದಂತೆಯೇ ಇವರು ಇನ್ನೂರೈವತ್ತು ಕನ್ನಡ ಕೀರ್ತನೆಗಳನ್ನು, ಕೆಲವು ಉಗಾಭೋಗಗಳನ್ನೂ, ಹದಿಮೂರು ಸುಳಾದಿಗಳನ್ನೂ ರಚಿಸಿದರಂತೆ. ಇವುಗಳಲ್ಲಿ ನೂರೊಂಬತ್ತು ಕೃತಿಗಳು ಪ್ರಕಟವಾಗಿವೆ. ದೇವರ ಪೂಜೆಯ ಸಮಯದಲ್ಲಿ ಇವರು ತಮ್ಮ ಕೃತಿಗಳನ್ನು ಹಾಡಿಕೊಂಡು ನರ್ತನ ಮಾಡುತ್ತಿದ್ದರೆಂದು ಪ್ರತೀತಿ.

ಇವರ ಆಸಕ್ತಿ ಹರಿದಾಸ ಸಾಹಿತ್ಯದ ನಿರ್ಮಾಣದಲ್ಲಿ ಮಾತ್ರ ಮುಗಿಯದೆ ಹರಿದಾಸರನ್ನು ಕೂಡಿಕೊಂಡು ಅವರಿಗೆ ಆಶ್ರಯವನ್ನು ಕೊಟ್ಟು ಮಾರ್ಗದರ್ಶನವನ್ನು ಮಾಡಿಸಿ, ಅವರಿಂದ ಕೃತಿರಚನೆ-ಪ್ರಚಾರಗಳನ್ನೂ ಮಾಡಿಸಿತು. ಹರಿದಾಸರ ಸಂಘಟನೆಗೆ ಇವರನ್ನು ಪ್ರೇರಕರಾಗಿ ನಿಲ್ಲಿಸಿತು. ಇವರ ಉತ್ಸಾಹದಿಂದಲೇ 'ದಾಸಕೂಟ' ರೂಪತಾಳಿ ಪ್ರವರ್ತಿತವಾಯಿತು. ಇವರೇ ಪುರಂದರದಾಸರಿಗೂ ಕನಕದಾಸರಿಗೂ ದೀಕ್ಷಾಗುರುಗಳು. ದಾಸಕೂಟವೂ, ಹರಿದಾಸ ಸಾಹಿತ್ಯವೂ, ಕರ್ನಾಟಕ ಸಂಗೀತವೂ ಇವರ ಪ್ರತಿಭೆಯಿಂದ, ಪ್ರಭಾವದಿಂದ ದಕ್ಷಿಣದೇಶಲ್ಲಿ ವಿಶ್ರುತವಾದು ವೆನ್ನಲು ಅಡ್ಡಿಯಿಲ್ಲ.

ಆ ಕಾಲಕ್ಕೆ ಇದ್ದ ಮಠಾಧಿಪತಿಗಳಲ್ಲಿ ಇವರು ಹೆಚ್ಚಿನ ಹಿರಿಮೆ ಪಡೆದಿದ್ದರು. ಸೋದೆ ಮಠದ ವಾದಿರಾಜರೂ, ರಾಘವೇಂದ್ರಸ್ವಾಮಿಮಠದ ವಿಜಯೀಂದ್ರತೀರ್ಥರೂ, ಕೂಡಲಿಮಠದ ನಾರಾಯಣ ಯತಿಗಳೂ ಇವರ ಬಳಿಯೇ ವಿದ್ಯಾಭ್ಯಾಸ ಮಾಡಿದರು. ಇವರು ಐವತ್ತು ವರ್ಷಗಳ ಕಾಲ ಗುರುಪೀಠದ ಮೇಲಿದ್ದವರು. ವಿದ್ವತ್ತಿನಲ್ಲಿ ದಿಗ್ದಂತಿಗಳಾಗಿದ್ದವರು; ಜನರಿಂದಲೂ ರಾಜರಿಂದಲೂ ಸನ್ಮಾನಿತರಾಗಿದ್ದವರು. ಇವರ ಆಸಕ್ತಿಯ ಅನುಗ್ರಹದಿಂದ ಹರಿದಾಸ ಪಂಥ ದೃಢವಾಗಿ ಬೆಳೆಯಿತು. ಹಾಗೆಂದೇ ದಾಸಕೂಟದ ಸಂಪ್ರದಾಯದಲ್ಲಿ ಹೇಳುವ ಧ್ಯಾನಶ್ಲೋಕ ಮೊದಲು ಶ್ರೀಪಾದರಾಜರನ್ನು ಸ್ಮರಿಸಿ, 'ನಮಸ್ತೇ ವ್ಯಾಸಯೋಗಿನೇ' ಎಂದು ಮುಂದೆ ಸಾಗುತ್ತದೆ.

೩

ವ್ಯಾಸತೀರ್ಥರು ಆಗ ವಿಜಯನಗರದ ಕೇಂದ್ರನಗರವೆನಿಸಿದ್ದ ಹಂಪಿಯಲ್ಲಿ ಇರುತ್ತಿದ್ದರು. ಅಲ್ಲಿ ಅವರ ಬಳಿ ಶಿಷ್ಯವೃತ್ತಿ ಮಾಡಿದ ಹರಿದಾಸರಲ್ಲಿ ಪುರಂದರದಾಸರೂ ಕನಕದಾಸರೂ ಪ್ರಖ್ಯಾತರು. ಇವರಿಬ್ಬರೂ ಸತೀರ್ಥರೆಂದೂ ಸ್ನೇಹಿತರೆಂದೂ ಪ್ರತೀತಿ. ಕನಕದಾಸರು ಧಾರವಾಡ ಜಿಲ್ಲೆಯಲ್ಲಿ

ಬಂಕಾಪುರದ ಬಳಿ ಇರುವ ಬಾಡ ಅಥವಾ ಕಾಗಿನೆಲೆ ಎಂಬ ಗ್ರಾಮದವರು; ಅಂಡೆ ಕುರುಬರ ಜಾತಿಯಲ್ಲಿ ಬೀರೇಗೌಡ ಮತ್ತು ಬಚ್ಚಮ್ಮ ಎಂಬುವರ ಮಗನಾಗಿ ಹುಟ್ಟಿ ಅರವತ್ತೆಂಟು ವರ್ಷಗಳ ಕಾಲ ಬದುಕಿದ್ದರು. ಕಾಗಿನೆಲೆಯ ಆದಿಕೇಶವಸ್ವಾಮಿ ಇವರ ಇಷ್ಟದೇವತೆ. ವ್ಯಾಸತೀರ್ಥರಿಂದಲೇ ಮಂತ್ರೋಪದೇಶ ಪಡೆದು ದೇವರನಾಮಗಳನ್ನು ರಚಿಸಿದ್ದಾರೆ. ಅವರು ರಚಿಸಿರುವ 'ಹರಿಭಕ್ತಿಸಾರ' ಎಂಬ ಗ್ರಂಥ ಪ್ರಸಿದ್ಧವಾಗಿದೆ; ಇದಲ್ಲದೆ ಇನ್ನೂರ ಎಂಬತ್ತೊಂಬತ್ತು ಪದಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಬಹುಭಾಗ ಪ್ರಕಟವಾಗಿವೆ.

ಪುರಂದರದಾಸರು ಕಾಂಬೋದಿರಾಗದ ತಮ್ಮ ಪದವೊಂದರಲ್ಲಿ ಕನಕದಾಸರ ಮಹಿಮೆಯನ್ನು ನಿದರ್ಶಿಸುವ ಪ್ರಸಂಗವನ್ನು ನಿರೂಪಿಸಿದ್ದಾರೆ. ಒಮ್ಮೆ ಪೂಜೆ ಮುಗಿದ ಮೇಲೆ ವ್ಯಾಸತೀರ್ಥರು ತೀರ್ಥವನ್ನು ಕೊಡುವಾಗ ಕನಕನನ್ನು ಕರೆಯಿರೆಂದರಂತೆ. ಆಗ ಮಠದ ಹಲವಾರು ವಿದ್ವಾಂಸರು 'ಸಾರ್ಥಕವಾಯ್ತು ಇವರ ಸನ್ಯಾಸಿತನವೆಲ್ಲ' ಎಂದು ಮುನಿದುಕೊಂಡರಂತೆ. ಇವರಿಗೆ ಕನಕನ ಹಿರಿಮೆಯನ್ನು ತೋರಿಸಬೇಕೆಂದು ವ್ಯಾಸತೀರ್ಥರು ಅಲ್ಲಿದ್ದ ವಿದ್ವಾಂಸರಿಗೂ ಕನಕನಿಗೂ ಒಂದೊಂದು ಬಾಳೆಯ ಹಣ್ಣನ್ನು ಕೊಟ್ಟು 'ಯಾರೂ ಇಲ್ಲದೆಡೆ ಹೋಗಿ ತಿಂದು ಬನ್ನಿ'ರೆಂದು ಅಪ್ಪಣೆ ಮಾಡಿದರಂತೆ. ವಿದ್ವಾಂಸರು ಊರ ಹೊರಗೆ ಹೋಗಿ ಬೇರೆ ಬೇರೆ ಕುಳಿತು ಯಾರಿಗೂ ತೋರದೆಲೆ ಎಲ್ಲರೂ ಮೆದ್ದು ಬಂದರಂತೆ. ಕನಕನು ಮಾತ್ರ 'ತೋರಲೊಲ್ಲದು ಎನಗೆ ಏಕಾಂತಸ್ಥಳ' ವೆಂದು ಹೇಳಿ ಬಾಳೆಯಹಣ್ಣನ್ನು ತಂದು ಸ್ವಾಮಿಗಳ ಮುಂದಿಟ್ಟನಂತೆ. ಭಗವಂತನಿಲ್ಲದಿರುವ ಎಡೆ ಯಾವುದು? ಆಗ ವ್ಯಾಸತೀರ್ಥರು "ನೋಡಿದರೆ ಈ ಕನಕನಾಡುವ ಮಾತುಗಳು, ಮೂಢಜನರರಿಯಬಲ್ಲರೆ ಮಹಿಮೆಯನು। ನಾಡಾಡಿಯಂತೆಯೆ ಮಾಡಿಬಿಟ್ಟರು ಇವಗೆ। ನಾಡೆಲ್ಲ ಹುಡುಕಿದರು ಈಡಾರ ಕಾಣೆ।" ಎಂದು ಸನ್ಮಾನಿಸಿದರಂತೆ.

ಅವರ ಮತ್ತೊಬ್ಬ ಸಮಕಾಲಿಕನೆಂದರೆ ಗದುಗಿನ ನಾರಣಪ್ಪ. ಕುಮಾರವ್ಯಾಸನೆಂದು ಪ್ರಸಿದ್ಧನಾದ ಈ ಕನ್ನಡ ಕವಿಯನ್ನು ಪುರಂದರದಾಸರು ಮೆಚ್ಚಿಕೊಂಡು 'ಭಾರತಮಲ್ಲ'ನೆಂದು ಹೊಗಳಿದರು. ಪಂಚತಾಳದ ಒಂದು ಸಣ್ಣ ಸುಳಾದಿಯ ಮಠ್ಯತಾಳದ ಚರಣದಲ್ಲಿ ಅವರು ಹೀಗೆ ಹೇಳಿದ್ದಾರೆ-

ಭಾರತ ಆಗಮಗೋಚರವೆಂದು ವಿ-
ಚಾರಿಸೆ ಮನುಜರಿಗೆ ಗೋಚರವಪ್ಪಂತೆ
ವೀರನಾರಾಯಣ ನೀ ಕವಿಯೆನಿಸಿ ಕು-
ಮಾರವ್ಯಾಸನಿಂದ ಭಾರತವ ವಿರಚಿಸಿದೆ.

ನಾರಣಪ್ಪನೇ ಒಮ್ಮೆ ಪುರಂದರದಾಸರ ಮನೆಗೆ ಬಂದು ತಾನು ಬರೆದ ಕನ್ನಡ ಭಾರತವನ್ನು ಅವರ ಮುಂದೆ ಓದಿದನಂತೆ. ಅದನ್ನು ಕೇಳಿದ ದಾಸರು ಮೇಲಿನ ಸುಳಾದಿಯನ್ನು ರಚಿಸಿದರಂತೆ. ಇದೇ ಸುಳಾದಿಯ ಆರಂಭದಲ್ಲೇ 'ಹರಿಶರಣರೆನ್ನ ಮನೆಯ ಮೆಟ್ಟಲು ಮನೆ ಪಾವನವಾಯಿತು' ಎಂದು ಪುರಂದರದಾಸರು ನಾರಣಪ್ಪನ್ನು ಸ್ವಾಗತಿಸಿದ್ದಾರೆ.

ಹೀಗೆ ದಾಸರ ಪದಗಳಲ್ಲಿ ನಾರಣಪ್ಪನಿಗೂ ದಾಸರಿಗೂ ಇದ್ದ ಮೈತ್ರಿಗೆ ಸಾಕ್ಷ್ಯ

ದೊರಕುವುದಾದರೂ ಚಾರಿತ್ರಿಕವಾಗಿ ಉಳಿದ ವಿವರಗಳು ಸ್ಪಷ್ಟವಾಗಿಲ್ಲ. ನಮ್ಮ ಸಾಹಿತಿಗಳು ಈ ಕಡೆ ಅಷ್ಟಾಗಿ ದೃಷ್ಟಿಯನ್ನು ಈವರೆಗೆ ಹರಿಸಿಲ್ಲ. ಹರಿಸಿದರೆ ಸ್ವಾರಸ್ಯದ ಅಂಶಗಳು ಹೊರಬರಬಹುದು.

ಕರ್ಣಾಟಕ ಸಂಗೀತದ ಪ್ರಪಂಚದಲ್ಲಿ ತಾಳ್ಳಪಾಕದ ಅಣ್ಣಮಾಚಾರ್ಯರ ಸ್ಥಾನ ಹಿರಿದಾದದ್ದು. ಇವರನ್ನು ಪುರಂದರದಾಸರು ತಿರುಪತಿಯಲ್ಲಿ ಸಂಧಿಸಿದ್ದರೆಂದು ತಾಳ್ಳಪಾಕದವರ ಮೊಮ್ಮಗ ಚಿನ್ನಯ್ಯ ಸೂರಿ ಎಂಬಾತ ಬರೆದಿದ್ದಾನೆ. ಅಣ್ಣಮಾಚಾರ್ಯರು ನಂದವರೀಕ ಬ್ರಾಹ್ಮಣರು; ನಾರಾಯಣಸೂರಿ ಮತ್ತು ಅಕ್ಕಮಾಂಬ ಎಂಬುವರ ಮಗ. ಭಗವದ್ಭಕ್ತರಾದ ಇವರು ತಿರುಪತಿಯಲ್ಲೇ ನೆಲೆಸಿ ವೆಂಕಟೇಶ್ವರನ ಕೈಂಕರ್ಯದಲ್ಲಿ ಬಾಳನ್ನು ನಡೆಸಿದರು. ಒಂದು ಫಾಲ್ಗುಣ ಬಹುಳ ದ್ವಾದಶಿಯಂದು ದಿವ್ಯನಾಮಸಂಕೀರ್ತನ ಮಾಡುತ್ತಲೇ ವೆಂಕಟೇಶ್ವರನಲ್ಲಿ ಐಕ್ಯ ವಾದರೆಂದು ಪ್ರತೀತಿ.

ಇವರಿಗೆ ಮುಂಚೆ ಸಂಗೀತದ ಲಕ್ಷ್ಯ-ಲಕ್ಷಣ ಕೃತಿಗಳೆಲ್ಲ ಸಂಸ್ಕೃತದಲ್ಲೇ ಇರುತ್ತಿದ್ದವು. ಅಣ್ಣಮಾಚಾರ್ಯರು ಈ ಕೆಲಸಕ್ಕೆ ದೇಶಭಾಷೆಯಾದ ತೆಲುಗನ್ನು ಅಳವಡಿಸಿಕೊಂಡರು. ಇವರು ಸುಂದರವಾದ ತೆಲುಗಿನಲ್ಲಿ, ಬಹುವೇಳೆ ಶೃಂಗಾರದ ಶೈಲಿಯಲ್ಲಿ, ಭಗವದ್ಭಕ್ತಿಯೇ ಮುಖ್ಯರಸ ವಾಗಿರುವ ಸುಮಾರು ಮುವ್ವತ್ತೆರಡುಸಾವಿರ ಕೀರ್ತನೆಗಳನ್ನು ರಚಿಸಿದ್ದಾರೆ. ಇವುಗಳಿಗೆ ಅವರೇ ರಾಗಗಳನ್ನು ನಿರ್ದೇಶಿಸಿದ್ದಾರೆ; ತಾಳವನ್ನು ಮಟ್ಟಿನಿಂದ ತಿಳಿಯಬಹುದು. ನಮ್ಮ ನಾಡಿನ ಹಿರಿಯ ವಿದ್ವಾಂಸರಾದ ರಾಳ್ಳಪಲ್ಲಿ ಅನಂತಕೃಷ್ಣ ಶರ್ಮರು ಅವರ ನೂರಾರು ಕೃತಿಗಳನ್ನು ಸ್ವರಪ್ರಸ್ತಾರ ದೊಂದಿಗೆ ಅಚ್ಚುಕಟ್ಟಾಗಿ ಸಂಪಾದಿಸಿದ್ದಾರೆ.

ಅಣ್ಣಮಾಚಾರ್ಯರು ತಮ್ಮ ಕೃತಿರಚನೆಯಲ್ಲಿ ಶ್ರೀಪಾದರಾಜರಿಂದ ಪ್ರಭಾವಿತ ರಾಗಿದ್ದರೆಂದೂ, ಪುರಂದರದಾಸರು ಅಣ್ಣಮಾಚಾರ್ಯರಿಂದ ಪ್ರಭಾವಿತರಾದರೆಂದೂ ಶರ್ಮರ ಎಣಿಕೆ. ಇದರಲ್ಲಿ ಅಸಂಭಾವ್ಯವಾದುದೇನೂ ಇಲ್ಲ. ಪುರಂದರದಾಸರ ದೇವರನಾಮಗಳಲ್ಲೂ ಅಣ್ಣಮಾಚಾರ್ಯರ ಸಂಕೀರ್ತನೆಗಳಲ್ಲೂ ಹಲವೆಡೆ ಒಂದೇ ಛಾಯೆ ಕಾಣುತ್ತದೆ. ಆದರೆ ತಾಳ್ಳಪಾಕದವರದ್ದೂ ಪುರಂದರದಾಸರದ್ದೂ ಕಾಲನಿರ್ಣಯ ಖಚಿತವಾಗಿ ಆಗಬೇಕಾಗಿದೆ. 'ಆಂಧ್ರ ವಾಗ್ಗೇಯಕಾರ ಚರಿತ್ರೆ'ದ ರಚಯಿತ ರಜನೀಕಾಂತರಾಯರ ಮತದಂತೆ ಅಣ್ಣ ಮಾಚಾರ್ಯರ ಕಾಲ ೧೪೦೮ ರಿಂದ ೧೫೦೩; ಅವರ ಮೊಮ್ಮಗ ಚಿನ್ನತಿರುಮಲಯ್ಯನ ಕಾಲ ೧೪೮೫ ರಿಂದ ೧೫೫೦; ಪುರಂದರದಾಸರ ಕಾಲ ೧೪೮೪ ರಿಂದ ೧೫೫೦; ಪುರಂದರದಾಸರ ಕಾಲ ೧೪೮೪ ರಿಂದ ೧೫೬೪ರವರೆಗೆಂದು ಒಂದು ಅಭಿಪ್ರಾಯ, ಅಂದರೆ ಅವರು ಸುಮಾರು ಚಿನ್ನತಿರುಮಲಯ್ಯನ ಸಮಕಾಲಿಕರು. ಅಣ್ಣಮಾಚಾರ್ಯರು ಮುಪ್ಪಿನಲ್ಲಿ ತೀರಿಕೊಂಡಾಗ ದಾಸರು ಹರೆಯದ ಹುಡುಗನಷ್ಟೆ. ಅವರಿಬ್ಬರ ಸಮಾಗಮವಾದದ್ದು ಸಂದೇಹಾಸ್ಪದವಾಗುತ್ತದೆ. ಆದರೆ ಪುರಂದರದಾಸರ ಜನನವಾದದ್ದು ೧೪೦೬ರಲ್ಲಿ ಎಂಬ ಇನ್ನೊಂದು ಅಭಿಪ್ರಾಯವುಂಟು. ಇದನ್ನೊಪ್ಪಿದರೆ ಇಬ್ಬರೂ ಸುಮಾರಾಗಿ ಸಮವಯಸ್ಕರು. ಆಚಾರ್ಯರ ಮೊಮ್ಮಗ ಚಿನ್ನತಿರುಮಲಯ್ಯನೇನೋ ತಾನು ಬರೆದ 'ಅಣ್ಣಮಾರ್ಯ ಚರಿತ್ರೆ'ದಲ್ಲಿ ಅಣ್ಣಮಾಚಾರ್ಯರೂ ಪುರಂದರದಾಸರೂ ತಿರುಪತಿಯಲ್ಲಿ ಸಂಧಿಸಿದಾಗ ಆಚಾರ್ಯರು ದಾಸರಲ್ಲಿ ಪಾಂಡುರಂಗವಿಟ್ಠಲನನ್ನೂ, ದಾಸರು ಆಚಾರ್ಯರಲ್ಲಿ ಸಾಕ್ಷಾದ್ವಿಷ್ಣುವನ್ನೂ ಕಂಡರೆಂದು ಬರೆದಿದ್ದಾನೆ. ನಿಜ ಏನೇ ಇರಲಿ, ಇಬ್ಬರ ಕೃತಿಗಳಲ್ಲಿ ಆಕಸ್ಮಿಕವೆನ್ನಬಹುದಾದುದಕ್ಕಿಂತ ಹೆಚ್ಚು

ಸಾದೃಶ್ಯವಿರುವುದು ಸ್ಪಷ್ಟವಾಗಿದೆ. ಇಬ್ಬರೂ ಒಂದೇ ಮಟ್ಟಿನಲ್ಲಿ ಒಂದೇ ನೆಲೆಯಲ್ಲಿ ಕೃತಿಗಳನ್ನು ರಚಿಸಿದಂತಿದೆ.

ಇವರಲ್ಲದೆ ಬೇಲೂರಿನ ವೈಕುಂಠದಾಸರು, ವೇಂಕಟಗಿರಿನಾಥರು, ಚನ್ನಯ್ಯದಾಸರು, ರಘುನಾಥಯತಿಗಳು, ತಿರುಮಲೇಶ, ವೈಕುಂಠವೆಂಕಟೇಶ, ವರದರಾಜಕೃಷ್ಣ, ಕೊಂಡಲದಾಸರು, ಲಕ್ಕಸದ ತಿಮ್ಮಮ್ಮ ಮುಂತಾದವರು ಪುರಂದರದಾಸರ ಕಾಲದಲ್ಲೇ ಇದ್ದವರೆಂದೂ ಇವರೂ ದಾಸಪಂಥಕ್ಕೆ ಸೇರಿದ್ದು ಪದಗಳನ್ನೂ ಸುಳಾದಿಗಳನ್ನೂ ರಚಿಸಿದ್ದರೆಂದೂ ಪ್ರತೀತಿಯಿದೆ. ಪಂಢರಪುರದ ಪರಶುಭಾಗವತರು ಅಪ್ಪಣ್ಣಭಾಗವತರು ಎಂಬಿಬ್ಬರು ಪುರಂದರದಾಸರ ಶಿಷ್ಯರೆಂದೂ, ಇವರಲ್ಲಿ ಎರಡನೆಯವರು 'ಗುರುಪುರಂದರ' ಎಂಬ ಅಂಕಿತದಿಂದ ಮುವ್ವತ್ತೆರಡು ಪದಗಳನ್ನೂ ಹದಿನೇಳು ಸುಳಾದಿಗಳನ್ನೂ ಹನ್ನೆರಡು ಉಗಾಭೋಗಗಳನ್ನೂ ರಚಿಸಿದರೆಂದೂ ತಿಳಿದುಬರುತ್ತದೆ. ಇವರಿಬ್ಬರೂ ಪುರಂದರದಾಸರ ಮಕ್ಕಳೇ ಎಂದೂ, ಅವರಿಬ್ಬರೂ ತಂದೆಯ ಜೀವಿತಕಾಲದಲ್ಲೇ ತೀರಿಕೊಂಡರೆಂದೂ ಒಂದು ಪ್ರತೀತಿಯಿದೆ. ಅವರಲ್ಲಿ ಹಿರಿಯಮಗ ತೀರಿಕೊಂಡ ಸಂದರ್ಭದಲ್ಲೇ ದಾಸರು 'ಗಿಳಿಯು ಪಂಜರದೊಳಿಲ್ಲ ರಾಮರಾಮ' ಎಂಬ ಕೀರ್ತನೆಯನ್ನು ರಚಿಸಿದರಂತೆ.

೪

ಪುರಂದರದಾಸರು ಹುಟ್ಟಿದ ಊರು ಪುರಂದರಗಡವೆಂದು ಪ್ರತೀತಿ. ಪುಣೆಗೆ ಹದಿನೆಂಟು ಮೈಲಿ ದೂರದಲ್ಲಿರುವ ಈ ಊರು ಕರ್ಣಾಟಕ-ಮಹಾರಾಷ್ಟ್ರ ಪ್ರದೇಶಗಳ ಸಂಧಿಸ್ಥಾನವಾಗಿದ್ದಿತು. ಈಗಂತೂ ಅಲ್ಲಿ ಪುರಂದರದಾಸರ ಸ್ಮಾರಕವೆನ್ನಬಹುದಾದ ಯಾವ ಅವಶೇಷವೂ ಉಳಿದಿಲ್ಲ. ಪುರಂದರದಾಸರೆಂದು ವ್ಯಾಸತೀರ್ಥರು ಅವರಿಗೆ ದೀಕ್ಷಾನಾಮ ಕೊಡಲು ಅವರ ಈ ಊರ ಹೆಸರು ಕಾರಣವಿದ್ದಿರಬಹುದು. ಅವರ ನಿಜವಾದ ಹೆಸರು ಶ್ರೀನಿವಾಸನಾಯಕರೆಂದಿದ್ದಿತಂತೆ; ವ್ಯಾವಹಾರಿಕ ಪ್ರಯೋಗವನ್ನನುಸರಿಸಿ ಶೀನಪ್ಪನೆಂದೂ ಅವರ ಪೂರ್ವದ ಹೆಸರನ್ನು ನಿರ್ದೇಶಿಸುತ್ತಾರೆ. ಅವರ ತಂದೆಯ ಹೆಸರು ವರದಪ್ಪನಾಯಕನೆಂದು ಹೇಳುತ್ತಾರೆ. ಆತ ವೃತ್ತಿಯಲ್ಲಿ ಚಿನಿವಾರನಂತೆ, ಅಂದರೆ ರತ್ನಪಡಿವ್ಯಾಪಾರಿ. ಸಹಜವಾಗಿಯೇ ಸಂಪದ್ಭರಿತವಾದ ಮನೆತನ. ಜಾತಿಯಲ್ಲಿ ಸ್ಮಾರ್ತದೇಶಸ್ಥರು.

ಎಳೆತನದಲ್ಲಿ ಲೋಭಿಯೆಂದು ಇವರ ಪ್ರಸಿದ್ಧಿ. ಧರ್ಮದಲ್ಲಿ ಇನಿತೂ ಶ್ರದ್ಧೆಯಿರಲಿಲ್ಲವಂತೆ. ಆದರೆ ಹೆಂಡತಿ ಸರಸ್ವತೀಬಾಯಿ ಶೀಲವಂತೆ, ಉದಾರಿ, ದಯಾಳು, ದೈವಭಕ್ತೆ. ಈಕೆಯಿಂದ ಇವರ ಚಾರಿತ್ರ್ಯವು ಪರಿವರ್ತಿತವಾಗಿ, ಇವರು ತಮಗಿದ್ದ ಐಶ್ವರ್ಯವನ್ನೆಲ್ಲ ಹಿಂದುಮುಂದೆ ನೋಡದೆ ದಾನಮಾಡಿ ಹರಿದಾಸರಾದರೆಂದು ಸಂಪ್ರದಾಯದ ವಿವರ.

ಈ ವಿವರವನ್ನು ಸಮರ್ಥಿಸಲು ಮುತ್ತಿನ ಮೂಗುತಿಯ ಕಥೆಯೊಂದು ಜನಜನಿತವಾಗಿದೆ. ಈ ಕಥೆಗೆ ಮೂಲ ವಿಜಯದಾಸರು ಪುರಂದರದಾಸರ ಜೀವನವನ್ನು ಕುರಿತು ರಚಿಸಿದ ಉಗಾಭೋಗವೊಂದು. ವಿಜಯದಾಸರು ೧೬೮೭ರಿಂದ ೧೭೫೫ರವರೆಗಿದ್ದವರು; ಪುರಂದರದಾಸರ ಕಾಲ ಸುಮಾರು ೧೪೮೪ರಿಂದ ೧೫೬೪ರವರೆಗೆ ಎಂದು ಒಪ್ಪಿದರೂ,

ಅವರ ಕಾಲಕ್ಕೂ ವಿಜಯದಾಸರ ಕಾಲಕ್ಕೂ ನೂರಕ್ಕೂ ಮೀರಿ ವರ್ಷಗಳ ಅಂತರವಾಗುತ್ತದೆ. ಈ ಅಂತರದಲ್ಲಿ ಕಥೆಯು ಎಷ್ಟು ನಿಜವಿದ್ದು ಎಷ್ಟು ಕಲ್ಪನೆಯ ಬಣ್ಣ ತಳೆಯಿತೋ ಹೇಳಲು ಸಾಧ್ಯವಿಲ್ಲ. ಜನವಂತೂ ಪುರಂದರದಾಸರ ಪರಿವರ್ತನೆಗೆ ಕಾರಣವಾಗಿ ಮುತ್ತಿನ ಮೂಗುತಿಯ ಕಥೆಯನ್ನು ಹೇಳುತ್ತಾರೆ. ಈ ಕಥೆಗೂ ಇನ್ನೂರಕ್ಕೆ ಮೀರಿ ವಯಸ್ಸಾಗಿರುವುದರಿಂದ ಅಬದ್ಧವೆಂದು ತಳ್ಳಿಹಾಕುವ ಹಾಗಿಲ್ಲ. ಕಥೆ ಹೀಗಿದೆ-

ತಂದೆ ತೀರಿಕೊಂಡನಂತರ ಶೀನಪ್ಪನಾಯಕನು ಚಿನಿವಾರಿಕೆ ಮಾಡುತ್ತ ಅಪಾರವಾದ ಐಶ್ವರ್ಯವನ್ನು ಸಂಪಾದಿಸಿದನು. ಆದರೆ ಒಂದಿಷ್ಟೂ ದಾನ ಮಾಡದೆ ಪರಮಲೋಭಿಯಾಗಿದ್ದನಂತೆ. ಇವನಲ್ಲಿ ವೈರಾಗ್ಯವನ್ನು ಮೂಡಿಸಲು ಭಗವಂತನೇ ಸಿದ್ಧನಾದನು. ಒಮ್ಮೆ ಭಗವಂತ ಬಡಬ್ರಾಹ್ಮಣನ ವೇಷಧರಿಸಿ ಶೀನಪ್ಪನ ಬಳಿಗೆ ಬಂದು ಮಗನ ಮುಂಜಿಗೆ ಸಹಾಯ ಮಾಡಬೇಕೆಂದು ಬೇಡಿಕೊಂಡನು. ಶೀನಪ್ಪ ನಾಳೆ ಬಾ, ನಾಡಿದ್ದು ಬಾ ಎಂದು ಅವನನ್ನು ಅಂಡಲಿಸಿದನು. ಬ್ರಾಹ್ಮಣನು ಕಡೆಗೆ ಶೀನಪ್ಪನ ಹೆಂಡತಿಯ ಬಳಿ ಹೋಗಿ ಬೇಡಿದನಂತೆ. ಶೀಲಸಂಪನ್ನೆಯೂ ಉದಾರಿಯೂ ಕರುಣಾಳುವೂ ಆದ ಆಕೆ ಬ್ರಾಹ್ಮಣನಿಗೆ ದಾನಮಾಡಲು ತನ್ನ ಬಳಿ ಧನ ಇಲ್ಲದಿರಲು ತನ್ನ ತೌರುಮನೆಯಿಂದ ಬಳುವಳಿಯಾಗಿ ಬಂದಿದ್ದ ಮುತ್ತಿನ ಮೂಗುತಿಯನ್ನು ತೆಗೆದು ದಾನಮಾಡಿಬಿಟ್ಟಳು. ಬ್ರಾಹ್ಮಣನು ಸುಮ್ಮನಿರದೆ ಮತ್ತೆ ಶೀನಪ್ಪನ ಅಂಗಡಿಗೆ ಬಂದು ಆ ಮೂಗುತಿಯನ್ನು ತೋರಿಸಿ ಅದನ್ನು ಒತ್ತೆಯಿಟ್ಟುಕೊಂಡು ಸಾಲ ಕೊಡುವಂತೆ ಕೇಳಿಕೊಂಡನು. ತನ್ನ ಹೆಂಡತಿಯ ಮೂಗುತಿಯಿದ್ದೀತೆಂದು ಶೀನಪ್ಪನಿಗೆ ಶಂಕೆ ಬಂದು ಬ್ರಾಹ್ಮಣನನ್ನು ನಾಳೆ ಬಾರೆಂದು ಹೇಳಿ ಕಳುಹಿಸಿ ಮೂಗುತಿಯನ್ನು ಅಂಗಡಿಯಲ್ಲೇ ಭದ್ರಪಡಿಸಿ ಮನೆಗೆ ಬಂದು ಮೂಗುತಿಯನ್ನು ತೋರಿಸುವಂತೆ ಹೆಂಡತಿಯನ್ನು ಕೇಳಿದನು. ಆಕೆ ಒಳಗಿಟ್ಟಿದ್ದೇನೆಂದು ಹೇಳಿ ಅದನ್ನು ತರುವ ನೆವದಿಂದ ಒಳಗೆ ಬಂದು ಮಾನಭಂಗವನ್ನು ತಪ್ಪಿಸಿಕೊಳ್ಳಲು ವಿಷವನ್ನು ಕುಡಿದು ಜೀವ ನೀಗಿಕೊಳ್ಳುವ ನಿಶ್ಚಯ ಮಾಡಿದಳು. ವಿಷವನ್ನು ಕುಡಿಯಲು ಬಟ್ಟಲನ್ನು ಎತ್ತಿದಾಗ ಅದರೊಳಗೆ ತನ್ನ ಮೂಗುತಿಯಿದ್ದಿತು. ಆಶ್ಚರ್ಯವನ್ನು ಸೈರಿಸಿಕೊಂಡು ಆಕೆ ಅದನ್ನು ತಂದು ಗಂಡನ ಕೈಗಿತ್ತಳು. ಅವನಿಗೂ ಆಶ್ಚರ್ಯವಾಗಿ ಒಡನೆಯೇ ಅಂಗಡಿಗೆ ಹೋಗಿ ಅಲ್ಲಿ ತಾನು ಭದ್ರಪಡಿಸಿಟ್ಟಿದ್ದ ಮೂಗುತಿಯನ್ನು ಹುಡುಕಲು ಅದು ಅಲ್ಲಿ ಇರಲೇ ಇಲ್ಲ. ಮರುದಿನ ಬರಬೇಕಾಗಿದ್ದ ಬ್ರಾಹ್ಮಣನೂ ಬರಲೇ ಇಲ್ಲ.

ಈ ಪ್ರಸಂಗದಿಂದ ನಾಯಕರಿಗೆ ವೈರಾಗ್ಯ ಒದಗಿ ತಮ್ಮ ಸಂಪತ್ತನ್ನೆಲ್ಲ ದಾನಮಾಡಿ, ಹೆಂಡತಿ ಮಕ್ಕಳೊಡನೆ ಹರಿದಾಸರಾಗಿ ಹೊರಟುಬಿಟ್ಟರಂತೆ. ಈ ಕಥೆಯಲ್ಲಿ ನಿಜವೇನೂ ಇಲ್ಲವೆಂದೂ, ದಾಸರು ಮೊದಲಿನಿಂದ ವೈರಾಗ್ಯ ಪ್ರವೃತ್ತಿಯವರೇ ಆಗಿದ್ದರೆಂದೂ ಚಿನ್ನತಿರುಮಲಯ್ಯನ 'ಅಣ್ಣಮಾರ್ಯಚರಿತ್ರೆ'ವನ್ನು ಸಂಪಾದಿಸಿ ಪ್ರಕಾಶಿಸಿದ ವೇಟೂರಿ ಪ್ರಭಾಕರಶಾಸ್ತ್ರಿಗಳು ವಾದಮಾಡಿದ್ದಾರೆ. ಕಥೆ ನಿಜವಲ್ಲದಿದ್ದರೂ, ಜೀವನದಲ್ಲಿ ಪರಿವರ್ತನೆಯಾದುದೂ, ಆ ಪ್ರಸಂಗದಲ್ಲಿ ಪತ್ನಿಯ ಪ್ರಭಾವವೂ ದಾಸರ ದೇವರನಾಮಗಳಲ್ಲೇ ಸೂಚಿತವಾಗಿದೆ.

ದಂಡಿಗೆ ಬೆತ್ತ ಹಿಡಿಯುವದಕ್ಕೆ
ಮಂಡೆ ಮಾಚಿ ನಾಚುತಲಿದ್ದೆ

ಹೆಂಡತಿ ಸಂತತಿ ಸಾವಿರವಾಗಲಿ
ದಂಡಿಗೆ ಬೆತ್ತ ಹಿಡಿಸಿದಳಯ್ಯ।

ಎಂದು ದಾಸರೇ ತಮ್ಮ ಹೆಂಡತಿಗೆ ಕೃತಜ್ಞತೆಯನ್ನು ಸಲ್ಲಿಸಿದ್ದಾರೆ.

ಅಂತೂ ಅರ್ಥಾರ್ಥಿಯಾಗಿ ವಿಷಯಲೋಲುಪನಾಗಿದ್ದ ಶ್ರೀಮಂತ ಚಿನಿವಾರನೊಬ್ಬ ಪ್ರಸಂಗವಶದಿಂದ ನಿಷ್ಕಿಂಚನನಾದ ಹರಿದಾಸನಾಗಿ ಪರಿವರ್ತಿತನಾದದ್ದು ನಮ್ಮ ಸಂಸ್ಕೃತಿಯ ಸಿರಿವಂತಿಗೆಯನ್ನು ಹೆಚ್ಚಿಸಿತು. ಪರಿವರ್ತನೆಯಾದಂದು ಅವರಿಗೆ ಸುಮಾರು ನಲವತ್ತು ವರ್ಷ ಪ್ರಾಯ. ಆಗ ಅವರು ನಾಲ್ಕು ಮಕ್ಕಳ ತಂದೆ. ಅಲ್ಲಿಯವರೆಗೆ ಸಾಮಾನ್ಯವಾಗಿ ಲೌಕಿಕವ್ಯವಹಾರದಲ್ಲೇ ಪ್ರಸಕ್ತರಾಗಿದ್ದರೂ ಅಧ್ಯಾತ್ಮವಿದ್ಯೆಯ ಪರಿಚಯವೇ ಇರಲಿಲ್ಲವೆನ್ನಲು ಆಧಾರ ಸಾಲದು.

ವೈರಾಗ್ಯ ಉದಿಸಿ ಪರಿವರ್ತಿತರಾದುದು ಒಂದು ಪ್ರಸಂಗವಾದರೆ, ಅವರು ವ್ಯಾಸತೀರ್ಥರ ಬಳಿ ಬಂದು ಹರಿದಾಸದೀಕ್ಷೆ ಪಡೆದದ್ದು ಇನ್ನೊಂದು ಪ್ರಸಂಗ. ಎರಡೂ ಪ್ರಸಂಗಗಳ ನಡುವೆ ಕಾಲಾಂತರ ಎಷ್ಟಿದ್ದಿತೋ ತಿಳಿಯದು. ಪುರಂದರಗಡವನ್ನು ಬಿಟ್ಟು ಪಂಢರಪುರಕ್ಕೆ ಹೋಗಿ ಅಲ್ಲಿ ಸ್ವಲ್ಪಕಾಲ ನೆಲೆಸಿದ್ದು ಅನಂತರ ಹಂಪಿಗೆ ಬಂದರೆಂದೂ, ಅಲ್ಲಿ ತಂಗಿದ್ದ ವ್ಯಾಸತೀರ್ಥರನ್ನು ಸಂದರ್ಶಿಸಿದರೆಂದೂ ವಿವರವಿದೆ. ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಪಂಪಾಕ್ಷೇತ್ರದ (ಹಂಪಿಯ) ಚಕ್ರತೀರ್ಥದ ಬಳಿ ವ್ಯಾಸತೀರ್ಥರು ಬಹುಕಾಲ ವಸತಿಮಾಡಿಕೊಂಡಿದ್ದರು. ಪುರಂದರದಾಸರು ಅವರನ್ನು ಅಲ್ಲಿ ಮೊದಲಬಾರಿಗೆ ಕಂಡದ್ದು ೧೫೨೫ರಲ್ಲಿ ಎಂದು ಒಂದು ಅಭಿಪ್ರಾಯ. ಎಂದರೆ ಆಗ ವ್ಯಾಸತೀರ್ಥ (೧೪೪೭-೧೫೩೯)ರಿಗೆ ಸುಮಾರು ಎಪ್ಪತ್ತೇಳು ವರ್ಷಗಳು; ದಾಸರಿಗೆ (ಜನನವಾದ ವರ್ಷ ೧೪೮೪ ಎಂದು ಒಪ್ಪಿದರೆ) ನಲವತ್ತು ವರ್ಷಗಳು. ಬಂದವರು ವ್ಯಾಸತೀರ್ಥರ ಸಮ್ಮುಖದಲ್ಲಿ ಸುದರ್ಶನಹೋಮ ಮಾಡಿ, ಅವರಿಂದ ಚಕ್ರಾಂಕನವನ್ನೂ ಮಂತ್ರಪದೇಶವನ್ನೂ ಪಡೆದು ಭಾಗವತದೀಕ್ಷೆ ಪಡೆದರು. ವ್ಯಾಸತೀರ್ಥರು ಅವರಿಗೆ ಕೊಟ್ಟ ದೀಕ್ಷಾನಾಮ 'ಪುರಂದರ ವಿಟ್ಠಲ' ನೆಂದು. ಅಂದಿನಿಂದ ಶ್ರೀನಿವಾಸನಾಯಕರು ಪುರಂದರದಾಸರೆಂದೇ ಪ್ರಖ್ಯಾತರಾದರು.

ವ್ಯಾಸತೀರ್ಥರೂ ಪುರಂದರದಾಸರೂ ಸಮಕಾಲಿಕರೆಂಬುದಂತೂ ಸಿದ್ಧವಾಗಿದೆ. ಅವರಿಬ್ಬರ ನಡುವೆ ಗುರುಶಿಷ್ಯ ಸಂಬಂಧವಿದ್ದುದು ಇಬ್ಬರ ಕೀರ್ತನೆಗಳಲ್ಲೂ ಸ್ಪಷ್ಟವಾಗಿದೆ. ವ್ಯಾಸತೀರ್ಥರು ತಮ್ಮ ಶಿಷ್ಯನ ವ್ಯಕ್ತಿತ್ವದ ಘನತೆಯನ್ನು ಮೆಚ್ಚಿಕೊಂಡು "ದಾಸರೆಂದರೆ ಪುರಂದರದಾಸರಯ್ಯಾ!" ಎಂದು ಆರಂಭವಾಗುವ ಒಂದು ಕೀರ್ತನೆಯನ್ನು ರಚಿಸಿದ್ದಾರೆ. ಮಂಗಳಾತ್ಮಕರಾದ ಪುರಂದರದಾಸರನ್ನು ಕಂಡರೆ ವ್ಯಾಸತೀರ್ಥರ "ಕಂಗಳಿಗೆ ಹಬ್ಬ" ವಾಗುತ್ತಿದ್ದಿತಂತೆ. ಪುರಂದರದಾಸರಿಗೂ ಗುರುಗಳನ್ನು ಕಂಡರೆ ಅಷ್ಟೇ ಗೌರವ. "ಈಸು ಮುನಿಗಳಿದ್ದೇನು ಮಾಡಿದರು" ಎನ್ನುವ ಕೀರ್ತನೆಯಲ್ಲಿ ಅವರು-

ವ್ಯಾಸರಾಯರ ಚರಣಕಮಲದರುಶನವೆನಗೆ
ಏಸು ಜನ್ಮದ ಸುಕೃತಫಲದಿ ದೊರಕಿತೋ ಎನ್ನ।

ಎಂದು ಸ್ಮರಿಸಿದ್ದಾರೆ. ಅವರನ್ನು ನೋಡಿದಾಗ ಸಾಸಿರಕುಲಕೋಟಿ ಪಾವನವಾಯಿತಂತೆ. ವ್ಯಾಸತೀರ್ಥರಿಂದಲೇ ತಮಗೆ ಹರಿದಾಸದೀಕ್ಷೆ ದೊರೆತುದನ್ನೂ ದಾಸರು ಒಂದು ಕೀರ್ತನೆಯಲ್ಲಿ

ಸ್ಪಷ್ಟಪಡಿಸಿದ್ದಾರೆ. ಅಂಕಿತವಿಲ್ಲದ ದೇಹ ಸಲ್ಲದು, ಅಂಕಿತವಿಲ್ಲದ ಕಾವ್ಯ ನಿಷೇಧ, ಅಂಕಿತವಿಲ್ಲದಿರ ಬಾರದು ಎಂದು "ಪಂಕಜನಾಭ ಶ್ರೀಪುರಂದರವಿಟ್ಠಲನ। ಅಂಕಿತವೆನಗಿತ್ತ ಗುರುವ್ಯಾಸಮುನಿರಾಯ'. ವ್ಯಾಸತೀರ್ಥರ ದಯದಿಂದಲೇ ತಮ್ಮ ಕೃತಿಗಳನ್ನು ರಚಿಸಿದುದಾಗಿಯೂ ದಾಸರು ಹೇಳಿಕೊಂಡಿದ್ದಾರೆ. ಗುರುಗಳು ತೀರಿಕೊಂಡಂದು ದಾಸರು "ಚಿತ್ತೈಸಿದ ವ್ಯಾಸರಾಯ, ಚಿತ್ತಜನಯ್ಯನ ಸಭೆಗೆ" ಎಂಬ ಪದವನ್ನು ರಚಿಸಿದರು.

೫

ಶ್ರೀನಿವಾಸನಾಯಕರು ಪುರಂದರದಾಸರಾಗಿ ಹೊಸದೊಂದು ಬಾಳ್ವೆಯನ್ನು ನಡೆಸಿದರು. ಅವರ ಹೆಂಡತಿ ಸರಸ್ವತೀಬಾಯಿಯೂ ನಾಲ್ವರು ಮಕ್ಕಳೂ ಅವರೊಂದಿಗೇ ಇದ್ದುಕೊಂಡು ಅವರ ಜೀವನಕ್ರಮದಲ್ಲಿ ಭಾಗಿಗಳಾದರು. ಇದ್ದ ಐಶ್ವರ್ಯವನ್ನೆಲ್ಲಾ ಕೃಷ್ಣಾರ್ಪಣವೆಂದು ದಾನಮಾಡಿ ಬಡವರಾದ ಮೇಲೆ ಮನೆಮನೆಗೆ ಹೋಗಿ ಅವರಿವರು ಕೊಟ್ಟುದರಿಂದ ಜೀವನ ನಡೆಸುವ ಸ್ಥಿತಿ ಬಂದಾಗಲೂ ಅವರ ಮನಸ್ಸಿನಲ್ಲಿ ಹರಿದಾಸತನದ ಧೈರ್ಯ, ಸಮಾಧಾನಗಳು ತುಂಬಿದ್ದುವು. "ನಾನೇಕೆ ಪರದೇಶಿ ನಾನೇಕೆ ಬಡವನೋ?" ಎಂಬ ಕೇದಾರಗೌಳದ ಪದದಲ್ಲಿ ಅವರ ಧೈರ್ಯ ಮೂಡಿಬಂದಿದೆ. ಆದರೂ ಕೆಲವೊಮ್ಮೆ ಉಂಛವೃತ್ತಿಯ ಪಾರತಂತ್ರ್ಯಕ್ಕೆ ಹೇಸಿದ್ದಾರೆ. ಮುಖಾರಿ ರಾಗದ ಒಂದು ಕೀರ್ತನೆ-

> ಏನು ಬರೆದೆಯೋ ಬ್ರಹ್ಮ, ನೀನೆಷ್ಟು ನಿರ್ದಯನೋ
> ಅಭಿಮಾನವನು ತೊರೆದು ನಾ ಪರರ ಬೇಡುವದ?
>
> ....
>
> ಹಿಂದೆ ಬರೆದ ಬರಹ ಹ್ಯಾಂಗಾದರಿರಲಿ
> ಮುಂದೆನ್ನ ವಂಶದಲಿ ಜನಿಸುವವರ ಕಾಯೋ
> ಸಂದೇಹಿಸಲು ಬೇಡ -

ಆದರೆ ಹರಿದಾಸರ ಸಂಗ ದೊರಕಿದಾಗ, ವರಗುರುವಿನ ಉಪದೇಶ ನೆರವಾದಾಗ ಆದ ಆನಂದ ಸಂಭ್ರಮಗಳನ್ನು ಅವರು ಮುಚ್ಚಿಡಲಾಗಲಿಲ್ಲ. "ಹರಿದಾಸರಿಗಿನ್ನು ಸರಿಯುಂಟೆ?" ಎಂಬುದು ಅವರ ಶ್ರದ್ಧೆಯಾಗಿದ್ದುದರಲ್ಲಿ ಸಂಶಯವಿಲ್ಲ. ಹರಿಯ ತೀರ್ಥ ಪ್ರಸಾದವೇ ದೊರಕಿ, ಹರಿಕಥಾಮೃತ ಅವರ ಕಿವಿಯೊಳಗಾಗಿ, ಹರಿದಾಸರು ಅವರ ಬಂಧುಬಳಗವಾಗಿ, ಹರಿಮುದ್ರೆ ಆಭರಣವಾಗಿ, ಅವರು ಮುಕ್ತಿ ಮಾರ್ಗಕ್ಕೆ ಯೋಗ್ಯರಾದಾಗ "ಬದುಕಿದೆನು ಬದುಕಿದೆನು ಭವ ಹಿಂಗಿತು। ಪದುಮನಾಭನ ಪಾದದೊಲುಮೆ ಎನಗಾಯ್ತು" ಎಂದು ಹಾಡಿದರು. ಹಿಂದಿನ ಸಂತತಿಗೆ ಸಕಲಸಾಧನವಾಯ್ತಂತೆ; ಮುಂದಿನ ಜನ್ಮ ಸಫಲವಾಯ್ತಂತೆ.

ತಮ್ಮ ಹಿಂದಿನ ಲೌಕಿಕಜೀವನಕ್ಕೂ ಈಗಿನ ಹರಿದಾಸವೃತ್ತಿಗೂ ತಾವೇ ತಾಳೆಹಾಕಿ ನೋಡಿಕೊಂಡಿದ್ದಾರೆ. ಪಂತುವರಾವಳಿಯ ಈ ಕೀರ್ತನೆ ಸ್ವಾರಸ್ಯವಾಗಿದೆ-

ವ್ಯಾಪಾರ ಎಮಗಾಯಿತು
ಶ್ರೀಪತಿಯ ಪಾದಾರವಿಂದಸೇವೆಯೆಂಬೋ ॥ಪ॥

ಹರಿಕರುಣವೇ ಅಂಗಿ ಗುರುಕರುಣ ಮುಂಡಾಸು
ಹರಿದಾಸರ ದಯವೆಂಬೋ ವಲ್ಲಿ,
ಪರಮಪಾಪಿ ಕಲಿ ಎಂಬ ಪಾಪಾಸು ಮೆಟ್ಟಿ
ದುರಾತ್ಮರಾದವರ ಎದೆಮೇಲೆ ನಡೆವಂಥ ॥೧॥

ಬಿಳಿಯ ಕಾಗದ ಹೃದಯ, ಬಾಯಿ ಕಲಮದಾನಿ
ನಾಲಿಗೆಯೆಂಬೋದೆ ಲೇಖನಿಯು ಶ್ರೀ
ಲೋಲನ ಕಥೆ ದಿವ್ಯನಾಮಂಗಳ
ಶೀಲಮನವಿ ಬರೆದು ಹರಿಗೆ ಒಪ್ಪಿಸುವಂಥ ॥೨॥

ನುಡಿನುಡಿಗಾನಂದ ಬಾಷ್ಪ ರೋಮಾಂಚನ
ಮುಡಿಪಿನೊಳಗಿಟ್ಟ ಕೈ ಜೀತವು
ಕಡೆಯ ಸಂಬಳಕೆಲ್ಲ ಮುಕುತಿಸಾಧನವನ್ನು
ಕೊಡುವಂತೆ ತಿರುಗದ ಚೀಟಿ ಬರೆಸಿಕೊಟ್ಟ ॥೩॥

ಕಂಡಕಂಡವರಿಗೆ ಕಾರ್ಪಣ್ಯವ ಪಟ್ಟು
ಮಂಡೆ ಅಡ್ಡಾಗಿ ನಾ ಬಳಲಲಿಲ್ಲ
ಪುಂಡರೀಕಾಕ್ಷ ಶ್ರೀಪುರಂದರ ವಿಠಲನು
ದಂಡಿಸಿ ವೀಳ್ಯವ ಕೊಟ್ಟು ಸೇವೆಯೊಳಿಟ್ಟ ॥೪॥

ಹೀಗೆ ಹೃದಯದಲ್ಲಿ ಶಾಂತಿಯನ್ನೂ ಸಮಾಧಾನವನ್ನೂ ಮೂಡಿಸಿಕೊಂಡು ಎಂದೂ ಸುಖಿಗಳಾಗಿದ್ದರು. ಅಂದಂದಿನ ಕೂಳನ್ನು ಅಂದಂದು ಗಳಿಸಿ, ನಾಳೆಗೆಂದು ಏನನ್ನೂ ಉಳಿಸದೆ, ಊರೂರು ಕೇರಿ ಕೇರಿ ಅಲೆಯುತ್ತಿದ್ದ ಪುರಂದರದಾಸರು ಯಾರ ಹಂಗೂ ಇಲ್ಲದೆ ಸ್ವತಂತ್ರರಾಗಿದ್ದರು. ದುಂಬಿಯು ಹೂವುಗಳ ಬಳಿ ಸುಳಿದು, ರಸವುಂಡು, ಅಲ್ಲಿ ನಿಲ್ಲದೆ ಓಡುವಂತೆ ಇರುವ ಈ ವೃತ್ತಿಗೆ 'ಮಧುಕರವೃತ್ತಿ'ಯೆಂದು ಹೆಸರು. ದಾಸರು ಒಂದೆಡೆ-

ಮಧುಕರವೃತ್ತಿ ಎನ್ನದು, ಅದು ಬಲು ಚೆನ್ನದು
ಪದುಮನಾಭನ ಪಾದಪದುಮಮಧುಪವೆಂಬ-

ಎಂದು ಹಾಡಿದ್ದಾರೆ. ಹೀಗೆ ತಾವಾಗಿ ವರಿಸಿಕೊಂಡ ಬಡತನವನ್ನು ಮೆಚ್ಚಿಕೊಂಡ ದಾಸರು-

ಲಂಗೋಟಿ ಬಲು ಒಳ್ಳೇದಣ್ಣ, ಒಬ್ಬ-
ರ್ಹಂಗಿಲ್ಲದೆ ಮಡಿಗೆ ಒದಗುವುದಣ್ಣ!

ಎಂದು ವಿನೋದವಾಡಿದರು.

ಆದರೆ ಹರಿದಾಸರು ಗೃಹಸ್ಥರು. ವಿರಕ್ತಿ ಅವರನ್ನು ಸಂನ್ಯಾಸದೆಡೆಗೆ ನೂಕುವುದಿಲ್ಲ. ಅವರ ದೃಷ್ಟಿ ಲೋಕಸಂಗ್ರಹದ ಕಡೆಗಿದ್ದು ಸಾಮಾನ್ಯ ಜನರನ್ನು ಉದ್ಧಾರ ಮಾಡಲು ಅವರ ನಡುವೆಯೇ ಅವರಂತೆಯೇ ಇರುವುದು ಹರಿದಾಸವೃತ್ತಿಯ ವಿಶೇಷ. ಮಹಾಯಾನ ಬೌದ್ಧಪಂಥದಲ್ಲಿ ಬೋಧಿಸತ್ವರಿದ್ದಂತೆ ನಮ್ಮಲ್ಲಿ ಹರಿದಾಸರು. ಪುರಂದರದಾಸರು ಕಡೆಯವರೆಗೂ ಗೃಹಸ್ಥರಾಗಿಯೇ ಉಳಿದರು. ಉಳಿದದ್ದು ಮಾತ್ರವಲ್ಲ. ಹಾಗೆ ಉಳಿಯುವುದರ ಸ್ವಾರಸ್ಯವನ್ನೂ ವಿವರಿಸಿದರು. "ಮಂಡೆ ಬೋಳಾದರೆ ಸಾಲದು, ಮನ ಬೋಳಾಗಬೇಕು" ಎಂಬುದು ಅವರ ನಿಲುವು.

೬

ತಂಬೂರಿ ಮೀಟುತ್ತ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಹರಿಯ ಕೀರ್ತನೆಗಳನ್ನು ಹಾಡುತ್ತ ಅವರು ಬೀದಿಯಲ್ಲಿ ಹೋಗುತ್ತಿದ್ದಾಗ ಅವರ ನಾಲ್ಕೂಜನ ಗಂಡುಮಕ್ಕಳೂ ತಾಳಹಾಕುತ್ತ ಹಿಂಬಾಲಿಸುತ್ತಿದ್ದರಂತೆ. ತಂದೆಯಂತೆಯೇ ಮಕ್ಕಳೂ ಹರಿದಾಸರಾದುದು ಮಾತ್ರವಲ್ಲ, ಅವರಂತೆಯೇ ವಾಗ್ಗೇಯಕಾರರೂ ಆದರು. ವರದಪ್ಪ, ಗುರುರಾಯ, ಅಭಿನವಪ್ಪ, ಗುರು ಮಧ್ವಪತಿ ಈ ನಾಲ್ವರೂ ಅನುಕ್ರಮವಾಗಿ 'ವರದ ಪುರಂದರ ವಿಟ್ಠಲ', 'ಗುರುಮಧ್ವಪತಿ ವಿಟ್ಠಲ', 'ಅಭಿನವ ಪುರಂದರ ವಿಟ್ಠಲ', 'ಗುರುಮಧ್ವಪತಿ ವಿಟ್ಠಲ' ಎಂಬ ಅಂಕಿತದಿಂದ ಹಲವಾರು ದೇವರನಾಮಗಳನ್ನು ರಚಿಸಿದ್ದಾರೆ.

ಹರಿದಾಸರಾದಮೇಲೆ ಪುರಂದರದಾಸರು ದಕ್ಷಿಣಭಾರತದ ಪುಣ್ಯಕ್ಷೇತ್ರಗಳ ಬಳಿಯೆಲ್ಲ ಸುತ್ತಾಡಿ ಬಂದರು. ಉತ್ತರದಲ್ಲಿ ಕೇದಾರನಾಥದವರೆಗೂ ತೀರ್ಥಯಾತ್ರೆ ಮಾಡಿದರು. ಹೋದೆಡೆಯಲ್ಲೆಲ್ಲ ಅಲ್ಲಿನ ದೇವರನ್ನು ಕುರಿತು ಕೀರ್ತನೆಗಳನ್ನು ರಚಿಸಿದರು. ಮುಖ್ಯವಾಗಿ ಪಂಢರಪುರ, ಮಲಖೇಡ, ತಿರುಪತಿ ಮತ್ತು ಹಂಪಿ ಈ ಸ್ಥಳಗಳಲ್ಲಿ ಹೆಚ್ಚು ಕಾಲ ನೆಲೆಸಿದ್ದರು. ವಿಜಯನಗರದ ಸಾಮ್ರಾಟನಾಗಿದ್ದ ಕೃಷ್ಣದೇವರಾಯ ಆ ಕಾಲಕ್ಕೆ ಹೆಚ್ಚು ಕಡಮೆ ಇಡೀ ದಕ್ಷಿಣಭಾರತವನ್ನೆಲ್ಲ ಆಳುತ್ತಿದ್ದನು (೧೫೦೯-೧೫೨೯). ಮೈಸೂರು ಪ್ರದೇಶದಲ್ಲಿ ಆಗ ಅರಸರಾಗಿದ್ದ ಹಿರಿಯ ಬೆಟ್ಟದ ಚಾಮರಾಜ ಒಡೆಯರು (೧೫೧೩-೧೫೫೩) ಕೃಷ್ಣದೇವರಾಯನ ಸಾಮಂತರೆಂದೇ ಹೇಳಬಹುದು. ಪುರಂದರದಾಸರು ಮೈಸೂರು, ಮೇಲುಕೋಟೆ, ನಂಜನಗೂಡು, ಅಬ್ಬೂರು, ಮಳೂರು ಮುಂತಾದ ಪ್ರದೇಶಗಳಿಗೆಲ್ಲ ಹೋಗಿದ್ದರಂತೆ. ಅವರ ಈ ಪ್ರವಾಸಕಾಲದಲ್ಲಿ ಬೆಟ್ಟದ ಚಾಮರಾಜ ಒಡೆಯರು ಅವರನ್ನು ವಿಶೇಷವಾಗಿ ಸನ್ಮಾನ ಮಾಡಿದರಂತೆ.

ಮೈಸೂರಲ್ಲದೆ ತಿರುವಾಂಕೂರು, ಕೊಚ್ಚಿನ್, ತಮಿಳುನಾಡು ಮುಂತಾದ ಪ್ರದೇಶಗಳಲ್ಲೆಲ್ಲ ಪ್ರವಾಸಮಾಡಿದ ಉಲ್ಲೇಖವಿದೆ. ಹೋದೆಡೆಯಲ್ಲಿ ಹರಿದಾಸಪಂಥದ ಪ್ರಚಾರಕ್ಕಾಗಿ ಶ್ರಮಿಸಿದರು; ಜನರಿಗೆ ನೀತಿ ಮಾರ್ಗವನ್ನು ಉಪದೇಶಮಾಡಿ, ನಿತ್ಯಜೀವನದಲ್ಲಿ ಧರ್ಮದ ಅಗತ್ಯವನ್ನು ವಿವರಿಸಿ, ಅಧ್ಯಾತ್ಮದೆಡೆಗೆ ಜನರ ಮನವನ್ನು ಒಲಿಸಿದರು. ಹೀಗೆ ಜನಜೀವನದಲ್ಲಿ ಹಾಸುಹೊಕ್ಕಾಗಿ ಸೇರಿ ಉಜ್ಜ್ವಲವಾದ ಬಾಳ್ವೆಯನ್ನು ನಡೆಸಿದ ಇವರ ಪರ್ಯಟನೆಯ ವಿಚಾರವಾಗಿ ವಿಜಯದಾಸರು ಹೀಗೆ ಹೇಳಿದ್ದಾರೆ-

ವಾಸವನೆ ಮಾಡಿದರು ಪ್ರಹ್ಲಾದನವತಾರ
ವ್ಯಾಸರಾಯರ ಬಳಿಯೆ ಮುದ್ರೆ ಗುರುಮಂತ್ರ ಉಪ-
ದೇಶ ಕೈಗೊಂಡು ವೈಷ್ಣವರಾಗಿ ಪುರಂದರದಾಸರೆಂಬುವ ಪೆಸರಲಿ
ದೇಶಗಳ ತಿರುಗಿ ಪುಣ್ಯಕ್ಷೇತ್ರಗಳ ಮೆಟ್ಟಿ
ಲೇಸಾಗಿ ಅಲ್ಲಲ್ಲ ಮಹಿಮೆಗಳ ಪೇಳುತ ದು-
ರಾಸೆಯನು ತೊರೆದು ವಿಟ್ಠಲನ ಸನ್ನಿಧಿಯಲ್ಲಿ ವಸಿಸಿದರು
ಧರ್ಮ ಬಿಡದೆ ||

ಕಡೆಗಾಲದಲ್ಲಿ ಇವರು ಹಂಪಿಯಲ್ಲೇ ನೆಲೆಸಿದರು. ಇಲ್ಲಿ ಕೃಷ್ಣದೇವರಾಯ ಮಹಾರಾಯನು ವಿಜಯವಿಟ್ಠಲಸ್ವಾಮಿಯ ಗುಡಿಯನ್ನು ಕಟ್ಟಿಸಿದ್ದನು. ಪಂಢರಪುರದಲ್ಲಿ ಮುಸಲ್ಮಾನರ ಹಾವಳಿ ಬಲವಾಗುತ್ತಿದ್ದಾಗ ಅಲ್ಲಿನ ವಿಟ್ಠಲಮೂರ್ತಿಯನ್ನು ಒಮ್ಮೆ ಇಲ್ಲಿಗೆ ಸಾಗಿಸಿದ್ದರೆಂದು ಒಂದು ದಂತಕಥೆಯಿದೆ. ಈ ಕಥೆಯಲ್ಲಿ ಬಹುಮಟ್ಟಿಗೆ ನಿಜವಿಲ್ಲ. ಆದರೆ ಪಂಢರಪುರದ ಪ್ರಭಾವದಿಂದಾಗಿ ಕನ್ನಡನಾಡಿನ ಹಲವೆಡೆ ವಿಟ್ಠಲ ಮಂದಿರಗಳಿದ್ದವು. ಇದರಲ್ಲಿ ಪುರಂದರದಾಸರ ಪ್ರಚಾರಕಾರ್ಯದ ಪ್ರಭಾವವೆಷ್ಟೋ ತಿಳಿಯದು. ಅಂತೂ ದಾಸರು ಹಂಪಿಯಲ್ಲೇ ಇರುತ್ತಿದ್ದ ಕಾರಣ, ಕೃಷ್ಣದೇವರಾಯ ಮಹಾರಾಯನು ಚಕ್ರತೀರ್ಥದೆದುರು ಒಂದು ಜಪಶಾಲೆಯನ್ನು ಅವರಿಗಾಗಿ ಕಟ್ಟಿಸಿಕೊಟ್ಟನಂತೆ. ಅದನ್ನೇ ಈಗ ಅರವತ್ತು ಸ್ತಂಭಗಳುಳ್ಳ ದಾಸರಮಂಟಪವೆಂದು ಕರೆಯುತ್ತಾರೆ. ಅವರು ಸಾಮಾನ್ಯವಾಗಿ ತಮ್ಮ ಸಂಧ್ಯೋಪಾಸನೆ, ದೇವತಾರ್ಚನೆಗಳನ್ನು ಮಾಡುವಾಗ ಈ ಮಂಟಪದ ಕಂಬವೊಂದನ್ನು ಒರಗಿ ಕೂಡುತ್ತಿದ್ದರಂತೆ. ಈ ಕಂಬವೂ ಈಗ ಆರಾಧನೆಯ ಪುಣ್ಯ ಪಡೆದಿದೆ.

ಆದರೆ ಸ್ವಲ್ಪಕಾಲ ಕಾರಣಾಂತರದಿಂದ ಅವರು ಮುಪ್ಪಿನಲ್ಲಿ ಯಾವುದೋ ಹಿತವಿಲ್ಲದ ದೇಶಕ್ಕೆ ಹೋಗಿ ನೆಲೆಸಬೇಕಾದ ಅಗತ್ಯ ಒದಗಿದ್ದಂತೆ ತೋರುತ್ತದೆ. ಕಾಂಬೋದಿ ರಾಗದ ಒಂದು ಪದದಲ್ಲಿ ಇದು ಧ್ವನಿತವಾಗುತ್ತದೆ.

ಯಾಕೆನ್ನ ಈ ರಾಜ್ಯಕೆಳತಂದೆ ಹರಿಯೆ
ಸಾಕಲಾರದೆ ಎನ್ನನೇಕೆ ಪುಟ್ಟಿಸಿದೆ ||ಪ||

ಎನ್ನ ಕುಲದವರಿಲ್ಲ ಎನಗೊಬ್ಬರ್ಹಿತರಿಲ್ಲ
ಮನ್ನಿಸುವ ದೊರೆಯಿಲ್ಲ ಮನೆಕೆ ಜಯವಿಲ್ಲ।
....
ಇನ್ನಿಲ್ಲಿ ತರವಲ್ಲ, ಇಂದಿರೇಶನೆ ಬಲ್ಲ ||೧||

ದೇಶಪರಿಚಯವಿಲ್ಲ ದೇಹದೊಳು ಬಲವಿಲ್ಲ
ವಾಸಿಪಂಥಗಳೆಂಬೊ ಒಲುವೆಯೆನಗಿಲ್ಲ।
ಬೇಸರ ಕಳೆವರಿಲ್ಲ ಬೇರೆ ಹಿತಜನರಿಲ್ಲ
ವಾಸುದೇವನೆ ಬಲ್ಲ ಈ ಬಗೆಯನೆಲ್ಲ ||೨||

ಕರೆದು ಕೊಡುವವರಿಲ್ಲ ಕರುಣ ತೋರುವರಿಲ್ಲ
ಪರಮಾತ್ಮನಲ್ಲದೆ ಗತಿಯೊಬ್ಬರಿಲ್ಲ!
ಹರಣದಲಿ ಹುರುಡಿಲ್ಲ ಕರಣದಲಿ ದೃಢವಿಲ್ಲ
ದೊರೆ ಪುರಂದರವಿಠಲ ತಾ ಬಲ್ಲ ॥೩॥

ತುಂಬ ದುಃಖದಿಂದ, ಬೇಸರದಿಂದ ಆಡಿದ ಮಾತುಗಳಿವು. ಈ ಪದಕ್ಕೆ ಸಾಂಕೇತಿಕವಾದ, ಅಧ್ಯಾತ್ಮಪರವಾದ ಅರ್ಥವನ್ನು ಹೇಳಿ, 'ಈ ರಾಜ್ಯ' ವೆಂದರೆ 'ಮನುಷ್ಯದೇಹ' ವೆಂದು ವಿವರಿಸುವ ವಿದ್ವಾಂಸರಿದ್ದಾರೆ. ಆದರೆ ಕೀರ್ತನೆಯಲ್ಲಿರುವ ಎಲ್ಲ ಭಾವಗಳಿಗೂ ಮಾತುಗಳಿಗೂ ಈ ಸಂಕೇತವನ್ನು ಅನ್ವಯಮಾಡುವುದು ಕಷ್ಟ. ಮಾಡುವ ಅಗತ್ಯವೂ ಕಾಣುವುದಿಲ್ಲ. ೧೫೩೦ರಲ್ಲಿ ದಾಸರು ಮಧ್ಯವಯಸ್ಸಿನವರಿದ್ದಾಗಲೇ ಅವರನ್ನು ಮೆಚ್ಚಿಕೊಂಡು ಪ್ರೋತ್ಸಾಹಿಸುತ್ತಿದ್ದ ಕೃಷ್ಣದೇವರಾಯ ಮಹಾರಾಯನು ತೀರಿಕೊಂಡನು. ಅವನನಂತರ ವಿಜಯನಗರದ ವಜ್ರಸಿಂಹಾಸನವನ್ನೇರಿದ ಅವನ ಮಲತಮ್ಮ ಅಚ್ಯುತದೇವರಾಯನ ಕಾಲದಲ್ಲಿ ವಿಜಯನಗರ ಸಂಸ್ಥಾನದ ಪ್ರಾಬಲ್ಯ ಸಡಿಲವಾಯಿತು; ಮುಸಲ್ಮಾನರ ದಾಳಿಯ ಆತಂಕ ಹೆಚ್ಚಿತು. ಮುಂದೆ ಅಳಿಯ ರಾಮರಾಯನ ಕಾಲದಲ್ಲಂತೂ ಮುಸಲ್ಮಾನರ ಹಾವಳಿ ಸನ್ನಿಹಿತವೇ ಆಗಿತ್ತು. ಪುರಂದರದಾಸರ ಮುಪ್ಪಿನಲ್ಲಿ ವಿಜಯನಗರದ ರಾಜನಾದ ಸದಾಶಿವದೇವಮಹಾರಾಯನು ಸಂಸ್ಥಾನವ್ಯವಹಾರದಲ್ಲಿ ಬಹುಭಾಗವನ್ನು ಮುಸಲ್ಮಾನರ ಪ್ರಭಾವಕ್ಕೆ ಬಲಿಕೊಟ್ಟಿದ್ದನು; ಅಷ್ಟಲ್ಲದೆ ಅವನಿಗೆ ಬ್ರಾಹ್ಮಣಧರ್ಮಗಳ ಮೇಲೆ ಶ್ರದ್ಧೆಯೂ ಅಷ್ಟಾಗಿ ಇರಲಿಲ್ಲ. ಹೀಗೆ ಅನಿಶ್ಚಿತವಾದ ರಾಜಕೀಯ ಮತ್ತು ಧಾರ್ಮಿಕ ಪರಿಸ್ಥಿತಿಯಲ್ಲಿ ಪುರಂದರದಾಸರು ಹಂಪಿಯನ್ನು ಬಿಟ್ಟು ಕೆಳದೇಶವೊಂದಕ್ಕೆ ತೆರಳಿದುದು ಸೋಜಿಗವೇನಲ್ಲ. ಆದರೆ ಎಲ್ಲಿಗೆ ಹೋದರೆಂಬುದು ಸ್ಪಷ್ಟವಾಗಿಲ್ಲ. ತಮಿಳುದೇಶಕ್ಕೆಂದು ಒಂದು ಊಹೆ.

ಪುರಂದರದಾಸರು ತೀರಿಕೊಂಡದ್ದು ಹಂಪಿಯಲ್ಲೇ ಎಂದು ಸಾಂಪ್ರದಾಯಿಕವಾದ ನಂಬಿಕೆ. ಇದನ್ನು ಸಮರ್ಥಿಸುವಂತೆ ಅವರ ಮಗ ಮಧ್ವಪತಿ ಮಾಡಿರುವ ಕೀರ್ತನೆಯೊಂದರಲ್ಲಿ "ವಿರೂಪಾಕ್ಷ ಕ್ಷೇತ್ರದಿ ವಿಟ್ಠಲನ ಸನ್ನಿಧಿಯಲ್ಲಿ ಶರೀರವನುಯಿರಿಸಿ ಅನಾಥರಿಗೆ ಹರಸಿ, ವೈಕುಂಠವನೈದುವರಿಗೆ ಹರಿನಾಮದ ಸೋಪಾನವ ದಯದಿಂದ ತೋರಿ" ವೈಕುಂಠಕ್ಕೆ ತೆರಳಿದರೆನ್ನುತ್ತಾನೆ. ಅವರು ಗೃಹಸ್ಥರಾಗಿಯೇ ಉಳಿದುದರಿಂದ ಬೃಂದಾವನ ಮುಂತಾದ ಸ್ಮಾರಕಕ್ಕೆ ಅವಕಾಶವಿರಲಿಲ್ಲ; ಹೀಗಾಗಿ ಅವರು ನಿರ್ಯಾಣ ಹೊಂದಿದ ಸ್ಥಳವನ್ನು ಖಚಿತವಾಗಿ ನಿರ್ದೇಶಿಸುವುದು ಸಾಧ್ಯವಿಲ್ಲ. ವಿಜಯದಾಸರು ಪ್ರಸಿದ್ಧವಾದ ತಮ್ಮ ಉದಯರಾಗ ವಾರ್ಧಕಷಟ್ಪದಿಯಲ್ಲಿ ಅವರು "ಅಂತ್ಯ ಕಾಲದಲಿ ಸದ್ಗತಿಯಲ್ಲಿ ಸೇರಿದ" ಸ್ಥಳವನ್ನು ಹೇಳುವುದಿಲ್ಲ.

ಅವರು ತೀರಿಕೊಂಡ ವರ್ಷ ೧೫೬೪ ಎಂದು ಸ್ಪಷ್ಟವಾಗಿದೆ. ಅವರ ಮಗ ಮಧ್ವಪತಿ ತನ್ನ ಕೀರ್ತನೆಯಲ್ಲಿ "ರಕ್ತಾಕ್ಷಿ ಸಂವತ್ಸರ ಪುಷ್ಯ ಬಹುಳದತಿಶಯದಮಾವಾಸ್ಯೆ ಮಂದವಾರ": ಭೇರಿ ದುಂದುಭಿ ಮೊರೆಯುತಿರೆ ಪುರಂದರದಾಸ ರಾಯರು ನಿಜವೈಕುಂಠಕ್ಕೆ ತೆರಳಿದರು ಎಂದು ಹೇಳಿದ್ದಾನೆ. ಅವರು ತೀರಿಕೊಂಡ ವರ್ಷದ ಮರುವರ್ಷವೇ ತಾಳಿಕೋಟೆ ಯುದ್ಧ ನಡೆದು ವಿಜಯನಗರ ಸಾಮ್ರಾಜ್ಯ ಮಣ್ಣುಪಾಲಾಯಿತು; ಹಿಂದೂ ಚಕ್ರಾಧಿಪತ್ಯ ಮುಸಲ್ಮಾನರ ಹೊಡೆತದಿಂದ ನುಚ್ಚುನೂರಾಯಿತು. ಅದನ್ನು ಕಣ್ಣಾರೆ ಕಾಣುವ ದೌರ್ಭಾಗ್ಯ ಪುರಂದರದಾಸರ

ಪಾಲಿಗೆ ಬರಲಿಲ್ಲ, ಅವರ ಪುಣ್ಯ. ಆದರೆ ಈ ಸರ್ವನಾಶ ಸನ್ನಿಹಿತವಾಗಿದ್ದು ಅದರ ಆತಂಕದ ಅರಿವು ಅವರಿಗೆ ಇದ್ದಿರಬೇಕು. "ನೆಚ್ಚದಿರಿ ಈ ಭಾಗ್ಯ ಸ್ಥಿರವಲ್ಲ, ನಿಶ್ಚಯವೆಚ್ಚರಿಕೆ" ಎಂದು ಅವರು ಉದ್ಗಾರ ತೆಗೆದಿದ್ದಾರೆ.

ಒಮ್ಮೊಮ್ಮೆ ಅವರ ಕೃತಿಗಳಲ್ಲಿ ನಿರಾಶೆಯ ಸ್ವರ ಘಟಿತವಾಗಿರುವುದುಂಟು. ಅವರ ಕಡೆಗಾಲದಲ್ಲಿ ಧರ್ಮದ ಗ್ಲಾನಿಯಾಗುತ್ತಿದ್ದುದು ಇದರ ಮೂಲವಿದ್ದೀತು. ಮುಖಾರಿರಾಗದ ಈ ಕೀರ್ತನೆ ನೋಡಿ -

ಸತ್ಯವಂತರಿಗಿದು ಕಾಲವಲ್ಲ
ದುಷ್ಟ ಜನರಿಗೆ ಸುಭಿಕ್ಷಕಾಲ
ಹರಿಸ್ಮರಣೆ ಮಾಡುವಗೆ ಕ್ಷಯವಾಗುವ ಕಾಲ
....
ಧರ್ಮ ಮಾಡುವಗೆ ನಿರ್ಮೂಲವಾಗುವ ಕಾಲ
ಕರ್ಮಿಪಾತಕರಿಗೆ ಬಹುಸೌಖ್ಯ ಕಾಲ

ವಿಜಯನಗರರಾಜ್ಯದಲ್ಲಿ ಆಗ ನಿಜವಾಗಿ ಕೆಟ್ಟಕಾಲ ಬರುತ್ತಲಿದ್ದಿತು. ಜನರಲ್ಲಿ ಧರ್ಮಶ್ರದ್ಧೆ ಶಿಥಿಲವಾಗಿ ನಿತ್ಯಜೀವನದಲ್ಲಿ ಕಾರ್ಪಣ್ಯ ಕಾಣತೊಡಗಿದ್ದಿತು. ದಾಸರ ಉಪದೇಶ ಎಂದಿಗಿಂತ ಹೆಚ್ಚಾಗಿ ಆ ವೇಳೆಯಲ್ಲಿ ಅವಶ್ಯಕವಾಗಿದ್ದಿತು. ರಾಜ್ಯದ ಉಚ್ಛ್ರಾಯಸ್ಥಿತಿಯಲ್ಲಿಯೇ ವೈರಾಗ್ಯವನ್ನು ಗ್ರಹಿಸಿ ಉಪದೇಶ ಮಾಡಿದ ಪುರಂದರದಾಸರು ಆ ಅವನತಿಯ ಸ್ಥಿತಿಯಲ್ಲಿ ತೀರಿಕೊಂಡುದು ವಿಧಿಯ ವೈಚಿತ್ರ್ಯ.

೭

ವ್ಯಾಸತೀರ್ಥರಿಂದ ಅಂಕಿತವನ್ನು ಸ್ವೀಕರಿಸಿ ಹರಿದಾಸರಾದಮೇಲೆ ಪುರಂದರದಾಸರು ದೇವರನಾಮಗಳನ್ನು ತಾವೇ ರಚಿಸಿ, ಹಾಡಿ, ಅದರೊಂದಿಗೆ ಕುಣಿದು ಭಗವಂತನನ್ನು ಆರಾಧಿಸಿದರು. ಪ್ರಸಂಗಗಳ ಪ್ರಭಾವದಿಂದ ಅಥವಾ ಆವೇಶ ಒದಗಿದಾಗ ಅಥವಾ ತೀರ್ಥಯಾತ್ರೆಗಳ ಸಮಯದಲ್ಲಿ ಅವರು ದೇವರನಾಮಗಳನ್ನೂ ಪದಗಳನ್ನೂ ರಚಿಸಿದರು. ಹೀಗೆ ಅವರು ರಚಿಸಿದ ಕೃತಿಗಳ ಒಟ್ಟು ಸಂಖ್ಯೆ ನಾಲ್ಕು ಲಕ್ಷ ಇಪ್ಪತ್ತೈದು ಸಾವಿರವಂತೆ. ಅವರೇ ಒಂದು ಕಡೆ ಹೇಳಿಕೊಂಡಂತೆ-

ನಾಲ್ಕು ಲಕ್ಷ ಯಿಪ್ಪತ್ತೈದು ಸಾವಿರ ಕೃತಿಯು
ಕಂತುಜನಕನ ನಾಮ ಘನಮಹಿಮೆ
ಸಂತಸದಿ ಶ್ರುತಿಸ್ಮೃತಿಸಮ್ಮತದಿಂದ
ಪುರಂದವಿಟ್ಠಲ ವ್ಯಾಸಮುನಿಗಳು ಪೇಳಿಸಿದರು।

ಅವರು "ವಾಸುದೇವನ ನಾಮಾವಳಿಯ ಕ್ಲುಪ್ತಿಯನು, ವ್ಯಾಸರಾಯರ ದಯದಿಂದ ಬಿನ್ನೈಸುವೆನು" ಎಂದು ಪೀಠಿಕೆ ಹಾಕಿ ತಮ್ಮ ಕೃತಿಗಳ ವಸ್ತು ವಿವರಗಳನ್ನು ಹೀಗೆ ವಿಭಜಿಸಿದ್ದಾರೆ-

	ಕೃತಿಗಳು
ತೀರ್ಥಕ್ಷೇತ್ರಮಹಿಮೆ	೧,೨೫,೦೦೦
ಮಾಧ್ವಶಾಸ್ತ್ರ ಗುರುಪರಂಪರೆ	೫,೦೦೦
ದೇವತಾಲೋಕವರ್ಣನೆಗಳು	೯೦,೦೦೦
ಪುರಾಣಕಥೆಗಳು	೯೦,೦೦೦
ದೇವತಾಮೂರ್ತಿಧ್ಯಾನ ಇತ್ಯಾದಿ	೬೦,೦೦೦
ಅಹ್ನಿಕಪದ್ಧತಿ, ಏಕಾದಶೀನಿರ್ಣಯ ಇತ್ಯಾದಿ	೬೦,೦೦೦
ಸುಳಾದಿಗಳು	೧೪,೦೦೦
ದೇವರನಾಮಗಳು	೨೫,೦೦೦
ಒಟ್ಟು	**೪,೨೫,೦೦೦**

ವಿಜಯದಾಸರೂ "ತ್ರಿಪಾದ ಕಡಿಮೆ ಐದು ಲಕ್ಷ, ಇಷ್ಟಾದುವು ದಾಸರು ಪೇಳಿದ ಪದ" ಎಂದು ಹೇಳಿದ್ದಾರೆ. ಆದರೆ ಅವರ ಉದಯರಾಗವಾರ್ಧಕ ಷಟ್ಪದಿಗೆ ಪರಿಶಿಷ್ಟವಾಗಿ ಕೊಟ್ಟಿರುವ ಪಟ್ಟಿಯಲ್ಲಿ ವಸ್ತುವಿಭಜನೆ ಹೀಗಿದೆ-

೧,೨೫,೦೦೦೦	ಪುಣ್ಯಕ್ಷೇತ್ರಾದಿಗಳ ಮಹಿಮೆ ಪದಗಳು; ಗುರುಮಧ್ವರಾಯರ ಮಹಿಮೆ; ಯತಿ ಸಂತತಿ, ತಂತ್ರಸಾರೋಕ್ತ ಮೂರ್ತಿ ಧ್ಯಾನಕ್ರಮ, ಆದಿಗುರುಗಳ ಚರಿತ್ರೆ
೨೫,೦೦೦	ತಾರತಮ್ಯ; ಗುರುಧ್ಯಾನ; ಮೂರ್ತಿಧ್ಯಾನ; ಚರಿತ್ರೆ
೬೪,೦೦೦	ಸುಳಾದಿಗಳು
೩೬,೦೦೦	ವೃತ್ತನಾಮಗಳು
೬೦,೦೦೦	ಶ್ವೇತದ್ವೀಪ, ಅನಂತಾಸನ, ವೈಕುಂಠ, ಸತ್ಯಲೋಕ, ಕೈಲಾಸಾದಿ ದಿಕ್ಪಾಲರನಿಲವರ
೪೦,೦೦೦	ಕಲ್ಯಾಣ ಚರಿತೆ
೭೫,೦೦೦	ನಿತ್ಯಾಹ್ನಿಕ, ಏಕಾದಶಿ, ಜನ್ಮಾಷ್ಟಮಿ ನಿರ್ಣಯ, ಗಂಡಕಾ ಶಿಲಾಮಹಿಮೆ, ಉಗಾಭೋಗಾದಿ
೪,೨೫,೦೦೦	ಒಟ್ಟು ನಾಲ್ಕುಲಕ್ಷದ ಯಿಪ್ಪತ್ತೈದು ಸಾವಿರ

ಈ ಪಟ್ಟಿ ವರದೇಂದ್ರ ಹರಿದಾಸಸಾಹಿತ್ಯ ಮಂಡಳಿದ 'ಶ್ರೀ ಪುರಂದರದಾಸರು ಮತ್ತು ಶ್ರೀ ಹರಿದಾಸರ ಪರಂಪರೆ' ಎಂಬ ಪುಸ್ತಕದಲ್ಲಿ ಉಲ್ಲೇಖಗೊಂಡಿದೆ (ಪುಟ. ೩೧). ಇಂದಿರೇಶ ಕವಿ ಬರೆದ ಸಂಸತದ 'ದಾಸಾರ್ಯ ಸ್ತುತಿ'ಯಲ್ಲಿ 'ಪಾದೋಜ್ಝಿತೇಷು ಸಮಸಂಖ್ಯಕಲಕ್ಷಲಕ್ಷ್ಮೀ - ನಾಥಾಮೃತೋತ್ತಮ ವಿಭೂತಿಕಥಾ ಪದಾನಿ' ಎಂಬ ಮಾತು ಬರುತ್ತದೆ. ಎಂದರೆ ನಾಲ್ಕು ಲಕ್ಷ ಎಪ್ಪತ್ತೈದು ಸಾವಿರವಾಯಿತು. ಇದೂ ಒಂದು ಎಣಿಕೆಯಿದೆ. ಆದರೆ ಇಷ್ಟೆಲ್ಲ ಕೃತಿಗಳು ನಮಗೆ ಇಂದು ಉಪಲಬ್ಧವಿಲ್ಲ. ನಮ್ಮಲ್ಲಿ ಉಳಿದಿರುವ ಕೃತಿಗಳ ಸಂಖ್ಯೆ ಒಂದು ಸಾವಿರವನ್ನೂ ಮುಟ್ಟುವುದಿಲ್ಲ. ಇಷ್ಟೊಂದು ಸಾಹಿತ್ಯ ಹೇಗೆ ಹೋಯಿತೆಂಬುದೂ ಆಶ್ಚರ್ಯ. ಹೇಗೆ

ಬರೆದಿಟ್ಟರೆಂಬುದೂ ಆಶ್ಚರ್ಯವೇ. ಅವರ ಕಿರಿಯ ಮಗ ಮಧ್ವಪತಿ ತಂದೆ ಹೇಳುತ್ತಿದ್ದಂತೆ ಸಾಹಿತ್ಯವನ್ನು ಬರೆದಿಟ್ಟನೆಂಬುದು ಸಾಂಪ್ರದಾಯಿಕವಾದ ಕಲ್ಪನೆ. ಈ ಕೀರ್ತನೆಗಳಲ್ಲದೆ ಪುರಂದರದಾಸರು 'ದ್ರೌಪದೀವಸ್ತ್ರಾಪಹರಣ', 'ಸುದಾಮ ಚರಿತ್ರ', ಮತ್ತು 'ಪರತತ್ವಸಾರ'ಗಳೆಂಬ ಗ್ರಂಥಗಳನ್ನೂ ಬರೆದಿದ್ದಾರಂತೆ. ಇವು ಇಂದು ನಮಗೆ ಉಪಲಬ್ಧವಿಲ್ಲ; ಅವುಗಳ ಸ್ವರೂಪವೇನೆಂಬುದೂ ತಿಳಿಯುವುದಿಲ್ಲ. 'ಅನಸೂಯಾ ಚರಿತ್ರೆ' ಯೆಂಬ ಯಕ್ಷಗಾನ ಅವರ ಅಂಕಿತ ಪಡೆದ ಪದಗಳಿಂದ ಕೂಡಿ ಪ್ರಚಾರದಲ್ಲಿದೆ.

ಹದಿನೆಂಟನೇ ಶತಮಾನದಲ್ಲಿದ್ದ ಪ್ರಸನ್ನ ವೆಂಕಟದಾಸರೆಂಬ ಹರಿದಾಸರು ಪುರಂದರದಾಸರ ವಾಙ್ಮಯವನ್ನು ಪ್ರಸ್ತಾಪಮಾಡುತ್ತಾ "ಗೀತತಾಯಿಸುಳಾದ್ಯುಗಾಭೋಗಪದ್ಯಪದವ್ರಾತಪ್ರಬಂಧ" ಗಳನ್ನು ರಚಿಸಿ ವಿಟ್ಠಲನನ್ನು ಪ್ರೀತಿಬಡಿಸಿದರು ಎಂದಿದ್ದಾರೆ. ಅವರ ಸಾರಸ್ವತ ಸಂಪತ್ತನ್ನು ಅವರ ಗುರುಗಳಾದ ವ್ಯಾಸತೀರ್ಥರೇ ಮೆಚ್ಚಿಕೊಂಡು, ಪಾಠದ ಕಾಲದಲ್ಲಿ ಅವರ ಕೃತಿಗಳನ್ನು 'ಪುರಂದರೋಪನಿಷತ್' ಎಂದು ಕರೆದು ಅವನ್ನು ಸರ್ವಮೂಲಗ್ರಂಥಗಳ ಜೊತೆಯಲ್ಲಿಟ್ಟು ಮಂಗಳಾರತಿ ಮಾಡಿದರಂತೆ. ಸರ್ವಮೂಲಗ್ರಂಥಗಳೆಂದರೆ ಮಧ್ವಾಚಾರ್ಯರು ಬರೆದ ಮೂವತ್ತೇಳು ಗ್ರಂಥಗಳು; ಮಾಧ್ವ ಸಂಪ್ರದಾಯದ ಪ್ರಕ್ರಿಯೆಗಳಿಗೆ ಆಕರವೆನಿಸಿದವು. ಅವುಗಳೊಂದಿಗೆ ಪೂಜಾಸ್ಥಾನವನ್ನೇರಿದ ಕೃತಿಗಳಿಗೆ ಎಷ್ಟು ಹೆಚ್ಚಳವಿರಬಹುದು! ತಾವು ಪಂಡಿತರಾಗಿ ಶಿಷ್ಯನ ಕನ್ನಡ ಕೃತಿಗಳನ್ನು ಹಾಗೆ ಗೌರವಿಸಿದ ವ್ಯಾಸತೀರ್ಥರ ಔದಾರ್ಯ ಎಂಥದು!

ಪುರಂದರರ ಕೃತಿಗಳನ್ನು ವ್ಯಾಸತೀರ್ಥರು 'ಪುರಂದರೋಪನಿಷತ್' ಎಂದು ಕರೆದುದರ ವಿಚಾರವಾಗಿ ಕಥೆಯೊಂದಿದೆ. ಒಮ್ಮೆ ಭೋಜನವಾದ ಮೇಲೆ ವ್ಯಾಸತೀರ್ಥರು ಶಿಷ್ಯರೊಂದಿಗೆ ಕುಳಿತಿದ್ದಾಗ ಅವರ ಮುಂದೆ ಶಾಸ್ತ್ರಗ್ರಂಥಗಳು ಇದ್ದುವಂತೆ. ಪುರಂದರದಾಸರು ಬಂದು ಗುರುಗಳಿಗೆ ನಮಸ್ಕಾರಮಾಡಿ, ತಾವು ಬರೆದಿದ್ದ ಕೀರ್ತನೆಗಳ ಕಟ್ಟನ್ನು ಅವರ ಮುಂದಿಟ್ಟರಂತೆ. ಆ ಕಟ್ಟು ಒಡನೆಯೇ ಎದ್ದು ಗುರುಗಳ ಮುಂದಿಟ್ಟಿದ್ದ ಶಾಸ್ತ್ರಗ್ರಂಥಗಳ ಮೇಲೆ ಕುಳಿತಿತಂತೆ. "ಪದಗಳು ಬರೆದ ವಹಿ ಮುಂಕೊಂಡು ಪೋಗಿ। ಮಧ್ವಶಾಸ್ತ್ರದ ಮೇಲೆ ಕುಳ್ಳಿರಲಾಗ ಕಂಡು। ಹದನನರಿಯದೆ ದಿಂಡಿಯನೊಬ್ಬನು ಆ। ಪದದೋಹಿ ತೆಗೆದು ಬಿಸುಟನಾಗ॥' ಆದರೆ ಎರಡು ಬಾರಿ ತೆಗೆದರೂ ತಿರುಗಿತಿರುಗಿ ಬಂದು ದಾಸರ ಪದಗಳ ಕಟ್ಟು ಶಾಸ್ತ್ರಗ್ರಂಥಗಳ ಮೇಲೆ ಬರುತ್ತಿದ್ದಿತಂತೆ. ಆಗ ವ್ಯಾಸತೀರ್ಥರು "ವರನಾಲ್ಕು ವೇದಗಳುಂಟು ಅಲ್ಲ! ನರರುತ್ತಮರೆಲ್ಲ ನೋಡಿ ಹರುಷದಿಂದ। ಧರೆಯೊಳಗೆ ಪುರಂದರ ಉಪನಿಷತ್ತೆಂದರು". ಈ ಕಥೆಯನ್ನು ದಾಸರ ಮಗನಾದ ಗುರುರಾಯನು ತನ್ನದೊಂದು ಪದದಲ್ಲಿ ಹೇಳಿದ್ದಾನೆ.

ಅವರ ವಾಙ್ಮಯವನ್ನು ಹಾಗೆ ಕರೆದಿರುವುದರಲ್ಲಿ ಒಂದು ಔಚಿತ್ಯವಿದೆ. ಗಹನವಾದ ತತ್ತ್ವವಿಚಾರಗಳನ್ನು ಸರಳವಾಗಿ ನಿರೂಪಿಸುವ ಸಾಮರ್ಥ್ಯ ಉಪನಿಷತ್ತುಗಳಲ್ಲಿ ಕಾಣುವಂತೆ ಪುರಂದರದಾಸರ ಪದಗಳಲ್ಲೂ ಕಾಣುತ್ತೇವೆ. ಭಗವದ್ಭಕ್ತಿಯೇ ಅವರ ಕೀರ್ತನೆಗಳ ಮುಖ್ಯರಸವೆಂದು ಒಪ್ಪಿಕೊಂಡರೂ ವೇದಾಂತದ ಪ್ರಕ್ರಿಯೆಗಳನ್ನು ಅವರು ಸಾಮಾನ್ಯವಾಗಿ ಬಳಸಿಕೊಂಡಿದ್ದಾರೆ. "ತನುವ ಖಂಡಿಸಿ ಒಮ್ಮೆ ಮಾಣೋ ನಿನ್ನ ಮನವ ದಂಡಿಸಿ ಪರಮಾತ್ಮನ್ನ ಕಾಣೋ॥ ಕೊನೆಗೆ

ನಿನ್ನಳಗೆ ನೀ ಜಾಣೋ ಮುಕ್ತಿ ನಿನಗೆ ದೂರಿಲ್ಲವು ಒಂದೇ ಗೇಣೋ॥" ಎನ್ನುವ ಮಾತು ಸಂಸ್ಕೃತದಲ್ಲಿದ್ದರೆ ಉಪನಿಷತ್ತಿನ ವಾಕ್ಯವೆಂದೇ ಹೇಳಲು ಬಂದಾವು. "ಜ್ಞಾನ ಒಂದೇ ಸಾಕು ಮುಕ್ತಿಗೆ। ಇನ್ನೇನು ಬೇಕು ಹುಚ್ಚು ಮರುಳೇ॥" ಎಂದು ಆರಂಭವಾಗುವ ಮೋಹನರಾಗದ ಕೀರ್ತನೆಯಲ್ಲಿ ಅವರು ಹೇಳಿರುವ ವ್ಯವಹಾರ ಕೌಶಲ ತೈತ್ತಿರೀಯೋಪನಿಷತ್ತಿನ ಶಿಕ್ಷಾವಲ್ಲಿಯನ್ನು ನೆನಪಿಗೆ ತರುತ್ತದೆ. ಕರ್ಮಕಾಂಡವನ್ನು ನಿರ್ಲಕ್ಷಿಸಿ ಜ್ಞಾನದ ಪಾರಮ್ಯವನ್ನು ಉಪನಿಷತ್ತು ಹೇಳುವಂತೆಯೇ ದಾಸರೂ ಆಚಾರ-ಅನುಷ್ಠಾನಾದಿಗಳಿಗಿಂತ ಜ್ಞಾನಕ್ಕೆ ಪ್ರಾಶಸ್ತ್ಯವಿತ್ತರು. "ಸ್ನಾನವ ಮಾಡಿರೋ ಜ್ಞಾನತೀರ್ಥದಲಿ। ನಾನು ನೀನೆಂಬಹಂಕಾರವ ಬಿಟ್ಟು" ಎಂದು ಒಂದು ಪೂರ್ವಿರಾಗದ ಅವರ ಕೃತಿಯಿದೆ. "ಸತ್ಯಂ ಜಗತಿದು ಪಂಚಭೇದವು ನಿತ್ಯ" ಮುಂತಾದ ಹಲವು ಕೀರ್ತನೆಗಳಲ್ಲಿ ಮಾಧ್ವಸಂಪ್ರದಾಯದ ತತ್ತ್ವಪ್ರಕ್ರಿಯೆಗಳನ್ನು ಅಳವಡಿಸಿಕೊಂಡಿದ್ದಾರೆ.

ಉಪನಿಷತ್ತಿನಲ್ಲಿರುವಂತೆಯೇ ದಾಸರ ಮಾತೂ ಸಂಕೇತಪ್ರಮುಖವಾದದ್ದು. ಪಂತುವರಾಳಿ ರಾಗದ ಈ ಪ್ರಸಿದ್ಧವಾದ ಕೀರ್ತನೆಯನ್ನು ನೋಡಿ -

ಮಾಡು ಸಿಕ್ಕದಲ್ಲಾ ಮಾಡಿನ ಗೂಡು ಸಿಕ್ಕದಲ್ಲಾ।
ಜೋಡು ಹೆಂಡರಂಜಿ ಓಡಿಹೋಗುವಾಗ
ಗೋಡೆ ಬಿದ್ದು ಬಯಲಾಯಿತಲ್ಲ॥ಪ॥

ಎಚ್ಚರಗೊಳಲಿಲ್ಲ, ಮನವೇ ಹುಚ್ಚನಾದೆನಲ್ಲ।
ಅಚ್ಚಿನೊಳಗೆ ಮೆಚ್ಚು, ಮೆಚ್ಚಿನೊಳಗೆ ಅಚ್ಚು।
ಕಿಚ್ಚಿದ್ದು ಹೋಯಿತಲ್ಲಾ॥

ಇತ್ಯಾದಿ.

ಅಥವಾ ಅವರು ಕುರುಡನಾಯಿ ತಾ ಸಂತೆಗೆ ಬಂದುದನ್ನು ಹೇಳಿರುವುದನ್ನು ನೋಡಿ. ಭರದಿ ಅಂಗಡಿ ಹೊಕ್ಕಿತಂತೆ, ತಿರುವಿ ದೊಣ್ಣೆಯಲಿ ಇಕ್ಕಿದರಂತೆ, ಮರೆತರಿನ್ನು ವ್ಯರ್ಥವಂತೆ, ನರಕದೊಳಗೆ ಬಿದ್ದಿತಂತೆ! ಆ ಕುರುಡನಾಯಿ ವೇದವಾದಗಳನೋದಿತಂತೆ, ಗಾದೆಯನ್ನೂ ಮಾಡಿಬಿಟ್ಟಿತಂತೆ, ಆದರೆ ಹಾದಿ ತಪ್ಪಿ ನಡೆದು ಯಮನ ಬಾಧೆಗೆ ತಾ ಗುರಿಯಾಯಿತಂತೆ! ನಾನಾ ಜನ್ಮವೆತ್ತಿ ಮಾನವನಾಗಿಯೂ ಹುಟ್ಟಿ, ತಾನು ತನ್ನನ್ನೇ ಮರೆಯಿತಂತೆ! ಇನ್ನೊಂದು ಕೀರ್ತನೆಯಲ್ಲಿ 'ನಾನು' ಎಂಬೋ ಮೇಕೆ ಹೋತಣ್ಣನನ್ನು 'ಜ್ಞಾನ'ವೆಂಬೋ ಪೋತರಾಜಣ್ಣ 'ತಾನೇ' ಎಂಬೋ ಭಲ್ಲೆ ಹಿಡಿದು ಸೀಳಿ ಬಿಸುಟು, ಜ್ಞಾನ ಗುಡಿಸಲನ್ನು ಸೂರೆಗೊಂಡುದನ್ನು ಹೇಳಿದ್ದಾರೆ; ತರ್ಕವೆಂಬೋ ಕ್ಲೇಶಕುರಿಯನ್ನು ತಂದು ಕಟ್ಟಿ ತಲೆಯ ಕುಟ್ಟಬೇಕಂತೆ - ಏಕೆಂದರೆ 'ನೈಷಾ ತರ್ಕೇಣ ಮತಿರಾಪನೇಯಾ', 'ಅತರ್ಕ್ಯಂ' ಎಂಬ ಶ್ರುತಿವಾಕ್ಯಗಳಿಲ್ಲವೆ? ಸಾಂಕೇತಿಕ ಕೀರ್ತನೆಗಳಿಗೆ ಅತ್ಯುತ್ತಮ ನಿದರ್ಶನವೆಂದರೆ ಇದು-

ಸುಲಭವಲ್ಲವೋ ಮಹದಾನಂದ,
ತನ್ನೊಳಗೆ ತಾ ತಿಳಿಯಬೇಕು ಗುರುದಯದಿಂದ ॥ಪ॥

ಬೆಕ್ಕನು ಇಲಿ ನುಂಗುವ ತನಕ, ಕಡು
ರಕ್ಕಸಿಯ ಕಂಡು ಗಿಣಿ ನುಂಗುವ ತನಕ
ಮಕ್ಕಳ ಭಕ್ಷಿಸುವ ತನಕ ಮದ
ಸೊಕ್ಕಿ ಗಜವನ್ನು ನರಿ ನುಂಗುವ ತನಕ ॥೧॥

ಇಷ್ಟದೈವದ ವಶವಾಗೋ ತನಕ ಮೂರು
ಬೆಟ್ಟಗಳನ್ನು ನೊಣ ನುಂಗುವ ತನಕ
ಶಿಷ್ಟರೊಡನೆ ಸೇರುವ ತನಕ ಗುಬ್ಬಿ
ಕೆಟ್ಟ ರಾಜಹಂಸನ ನುಂಗುವ ತನಕ ॥೨॥

ಒಳಹೊರಗೊಂದಾಗುವ ತನಕ ಕಾಲ-
ಕಳೆ ಎಂಬುವ ಭಾವ ಬಯಲಾಗುವ ತನಕ
ಬೆಳಕಿನೊಳಗೆ ಕಾಣುವ ತನಕ ನಮ್ಮ
ಪುರಂದರವಿಠಲನ ದಯವಾಗುವ ತನಕ ॥೩॥

ಹರಿದಾಸ ಸಾಹಿತ್ಯದ ಮೇಲೆ ವಚನಶೈಲಿಯ ಪ್ರಭಾವವಿದ್ದಿತೆಂಬುದು ನಿಜ; ಉಗಾಭೋಗಗಳಲ್ಲಂತೂ ಇದು ಸ್ಪಷ್ಟವಾಗುತ್ತದೆ. ವೀರಶೈವ ವಾಙ್ಮಯದಲ್ಲಿ 'ವಚನಾಗಮ'ವೆಂಬ ಶಬ್ದದ ವ್ಯವಹಾರವಿದ್ದರೆ ಹರಿದಾಸ ಸಾಹಿತ್ಯದಲ್ಲಿ 'ಪುರಂದರೋಪನಿಷತ್ತಿ'ನ ವ್ಯವಹಾರವಿದೆ. ವ್ಯಾಸತೀರ್ಥರು ಇಟ್ಟ ಹೆಸರು ಸಾರ್ಥಕವಾದದ್ದು, ಸಮಂಜಸವಾದ್ದು.

೮

ಪುರಂದರದಾಸರ ಕೃತಿಗಳೆಂದು ಹೆಸರಾಗಿ ಇಂದು ಉಳಿದಿರುವುವೆಲ್ಲ ಅವರದ್ದೇ ಎಂದು ಹೇಳಲು ಬರುವುದಿಲ್ಲ. ಮುಂದಿನ ಪೀಳಿಗೆಗಳ ಹಲವಾರು ದಾಸರುಗಳು ತಾವು ಕೃತಿಗಳನ್ನು ರಚಿಸಿ ಅವುಗಳ ಪ್ರಾಚುರ್ಯಕ್ಕಾಗಿ ಪುರಂದರದಾಸರ ಅಂಕಿತವನ್ನು ಜೋಡಿಸುತ್ತಿದ್ದುದು ತಿಳಿದುಬಂದಿದೆ. ಇಂಥ ಅಧ್ಯಾರೋಪವನ್ನು ನಿರ್ಧರಿಸುವುದೂ ಕಷ್ಟ; ಏಕೆಂದರೆ ಪುರಂದರದಾಸರ ಭಾಷೆ ಸರಳ, ಭಾವಗಳ ಹರವು ಹೆಚ್ಚು. ಸರಳವಾಗಿ ಏನನ್ನು ಹೇಳಿದರೂ ಅದು ಪುರಂದರದಾಸರದ್ದೇ ಎಂದು ಸಾಧಿಸುವುದು ಸಾಧ್ಯ. ಪುರಂದರದಾಸರು ಚರ್ಚೆ ಮಾಡದಿದ್ದ ವಿಚಾರವೇ ಎಲ್ಲ; ಧರ್ಮ, ನೀತಿ, ವೇದಾಂತ, ರಾಜಕಾರಣ, ಅರ್ಥ-ಪ್ರವೃತ್ತಿ, ವಿನೋದ, ಭಕ್ತಿ - ಎಲ್ಲಾ ವಿಷಯವನ್ನೂ ಅವರು ಬಳಸಿಕೊಂಡಿದ್ದಾರೆ. ಅಷ್ಟಲ್ಲದೆ ಅವರು ಆಡಿರುವ ಮಾತುಗಳಲ್ಲಿ ವಿಶೇಷವೇನಿಲ್ಲ; ನಿತ್ಯ ಉಪಯೋಗಿಸುವ ಪದಗಳನ್ನೇ ರೂಢಿಯಲ್ಲಿರುವ ಪ್ರಯೋಗಗಳಲ್ಲೇ ಬಳಸಿದ್ದಾರೆ. ಇನ್ನು ಅವರು ಪ್ರಸ್ತಾಪಿಸಿರುವ ವಿವರಗಳೆಲ್ಲ ಸಾರ್ವಕಾಲಿಕವಾದುವು; ಅವರ ಕಾಲಕ್ಕೂ, ಹಿಂದಿನ ಮುಂದಿನ ಕಾಲಗಳಿಗೂ ಸಮನಾಗಿ ಅನ್ವಯಿಸತಕ್ಕುವು. ಹೀಗಾಗಿ ಭಾಷೆಯಿಂದಾಗಲೀ, ವಸ್ತುವಿನಿಂದಾಗಲೀ ಪುರಂದರದಾಸರ ಕೃತಿಗಳನ್ನು ನಿರ್ದೇಶಿಸುವುದಾಗದು. ಅವರದ್ದೆಂದು ನಿರ್ದಿಷ್ಟವಾದ

ಸಾಹಿತ್ಯರಾಶಿಯನ್ನು ದಾಸಕೂಟದವರು ತಮ್ಮ ಪರಂಪರೆಯಲ್ಲಿ ಪ್ರತ್ಯೇಕವಾಗಿ ಉಳಿಸಿಕೊಂಡು ಬಂದಿಲ್ಲ.

ಇವರ ಕೃತಿಗಳನ್ನು ಹಲವಾರು ಬಾರಿ ಒಟ್ಟಿಗೆ ಸೇರಿಸಿ ಪ್ರಕಟಿಸುವ ಕಾರ್ಯ ನಡೆದಿದೆ. ಈ ಐವತ್ತು ವರ್ಷಗಳಲ್ಲಿ ಸುಬೋಧ ರಾಮರಾಯರು ಹಳೆಯ ದಾಸರುಗಳಿಂದ ಸಂಗ್ರಹಿಸಿದ ಪುರಂದರದಾಸರ ಕೃತಿಗಳನ್ನೆಲ್ಲ ತಮ್ಮ ಸುಬೋಧ ಮುದ್ರಣಾಲಯದಲ್ಲಿ ಪ್ರಕಟಿಸಿದರು. ಉಡುಪಿಯ ಪಾವಂಜೆ ಗುರುರಾಯರು ಇನ್ನೊಂದು ಸಂಕಲನವನ್ನು ತಮ್ಮ ಶ್ರೀಮನ್ಮಧ್ವಸಿದ್ಧಾಂತ ಪುಸ್ತಕಾಲಯ ದಿಂದ ಪ್ರಕಾಶಪಡಿಸಿದರು. ೧೯೪೦ರ ಸುಮಾರಿಗೆ ಪಣಿಯಾಡಿ ಶ್ರೀನಿವಾಸ ಉಪಾಧ್ಯಾಯ, ಪಿ. ವೆಂಕಟರಮಣಾಚಾರ್ಯ ಮತ್ತು ಲಕ್ಷ್ಮೀನಾರಾಯಣ ಅಡಿಗರು ತುಳುನಾಡು ಪ್ರೆಸ್ಸಿನಿಂದ ಒಂದು ಸಂಕಲನವನ್ನು ಹೊರತಂದರು. ಗೋರಬಾಳ ಹನುಮಂತರಾಯರು ತಮ್ಮ ವರದೇಂದ್ರ ಸಾಹಿತ್ಯ ಮಂಡಲದಿಂದ ಮತ್ತೊಂದು ಸಂಕಲನವನ್ನು ೧೯೪೪ರಲ್ಲಿ ಮುದ್ರಿಸಿದರು. ಹುಬ್ಬಳ್ಳಿಯಲ್ಲಿ ಸಿಟಿಬುಕ್ ಸ್ಟಾಲಿನ ಶ್ರೇಷ್ಠಿಯವರು ೧೯೫೯ರಲ್ಲಿ ಒಂದು ಸಂಕಲನವನ್ನು ಪ್ರಕಟಿಸಿದರು. ಇವು ಪ್ರಮುಖವಾದ ಸಂಪುಟಗಳು. ಇವುಗಳಲ್ಲಿ ಬಹುಮಟ್ಟಿಗೆ ಸಾಹಿತ್ಯದಲ್ಲಾಗಲೀ, ಕೃತಿಗಳಲ್ಲಾಗಲೀ, ರಾಗ ತಾಳ ನಿರ್ದೇಶಗಳಲ್ಲಾಗಲೀ ವೈವಿಧ್ಯವಿಲ್ಲದಿರುವುದೊಂದು ವಿಶೇಷ. ಕೃತಿಗಳಲ್ಲಿ ಪಾಠಾಂತರವೇನೋ ಹೇರಳವಾಗಿದೆ ನಿಜ; ಆದರೆ ಇದು ಒಂದು ಪದಕ್ಕೋ ಒಂದು ಸಾಲಿಗೋ ಪರ್ಯಾಪ್ತವಾಗಿರುತ್ತದೆ. ಇದೊಂದು ನೆಮ್ಮದಿಯ ವಿಚಾರವೇ.

ಹೀಗೆ ಪ್ರಸಿದ್ಧವಾದ ಸಂಕಲನಗಳನ್ನೆಲ್ಲ ಪರಾಮರ್ಶಿಸಿ ಪುರಂದರದಾಸರ ಕೃತಿಗಳನ್ನು ಎಣಿಸಿದರೆ ಏಳುನೂರನ್ನೂ ಮೀರುವುದಿಲ್ಲ. ಸಾಂಪ್ರದಾಯಿಕವಾದ ನಾಲ್ಕು ಲಕ್ಷ ಇಪ್ಪತ್ತೈದು ಸಾವಿರದಲ್ಲಿ ಇಷ್ಟನ್ನು ಬಿಟ್ಟು ಉಳಿದವು ಹೇಗೆ ಪ್ರಣಷ್ಟವಾದುವೋ ಹೇಳಲು ಸಾಧ್ಯವಿಲ್ಲ. ದಾಸಕೂಟದವರು ಇಷ್ಟನ್ನಾದರೂ ಉಳಿಸಿಟ್ಟರು. ಅವರ ಮನೆತನದಲ್ಲಿ ಬಳುವಳಿಯಂತೆ ಬರುತ್ತಿದ್ದ ಪುರಂದರಸಾಹಿತ್ಯ ಲಕ್ಷಗಟ್ಟಲೆ ಇದ್ದಿರಲು ಸಾಧ್ಯವಿಲ್ಲ. ನಿತ್ಯಯಾತ್ರೆಗೆ ಬೇಕಾಗುವಷ್ಟು, ಸ್ವಬೋಧ ಪರಿಶುದ್ಧಿಗೆ ಅಗತ್ಯವಾದಷ್ಟು, ದೇವತಾರ್ಚನೆಗೂ ಮನೋರಂಜನೆಗೂ ಅವಶ್ಯವೆನಿಸಿದಷ್ಟು ಮಾತ್ರ ಪ್ರಚುರವಾಗಿದ್ದಿರಬೇಕು. ಅವರ ಇಡೀ ವಾಙ್ಮಯವನ್ನು ಕಾಪಿಡುವ ಗೀಳಾಗಲಿ ಜಾಣ್ಮೆಯಾಗಲೀ ಅವರ ಶಿಷ್ಯರಿಗೆ ಇರಲಿಲ್ಲವೆಂದರೆ ಆಶ್ಚರ್ಯವಲ್ಲ. ತ್ಯಾಗರಾಜರ ಕೃತಿಗಳಂತೆ ಪುರಂದರದಾಸರ ಕೃತಿಗಳು ಸಂಗೀತಪ್ರಧಾನವಲ್ಲ; ಅವುಗಳ ಸ್ವರಬಂಧವನ್ನು ಸಿದ್ಧಮಾಡಿ ಕಾಲಾನುಕಾಲಕ್ಕೂ ಇರುವಂತೆ ಮಾಡಬೇಕೆನ್ನುವ ಉತ್ಸಾಹ ತ್ಯಾಗರಾಜರ ಶಿಷ್ಯರಲ್ಲಿದ್ದಂತೆ ದಾಸರ ಅನುಯಾಯಿಗಳಲ್ಲಿರಲಿಲ್ಲ. ಪುರಂದರದಾಸರ ಕೃತಿನಿರ್ಮಾಣವೂ ಸಂದರ್ಭಶುದ್ಧವಾಗಿದ್ದುದರಿಂದ ಅವೆಲ್ಲವನ್ನೂ ಗ್ರಹಿಸಿ ಧರಿಸುವ ಸೌಕರ್ಯ ಕೂಡ ಸಾಲದಾಗಿದ್ದಿತು.

ದಾಸರ ಸುತ್ತ ಎಂದೂ ಭಕ್ತರಾದ, ಭಾವುಕರಾದ ಭಾಗವತರು ಇರುತ್ತಿದ್ದರೆಂಬುದು ನಿಜವಿದ್ದೀತು; 'ದಾಸಕೂಟ'ದ ಪ್ರವರ್ತಕರೇ ಅವರಾಗಿದ್ದರಲ್ಲವೆ? ಈ ಮಂದಿ ದಾಸರ ಹಲವಾರು ಕೀರ್ತನೆಗಳನ್ನು ಉಳಿಸಿಕೊಂಡರೆಂಬುದೂ ನಿಜವಿದ್ದೀತು. ಆದರೆ ದಾಸರಿಗೆ ಅನುರೂಪರಾದ ಪ್ರಗಲ್ಭರಾದ, ಗ್ರಹಣ ಧಾರಣಪಟುಗಳಾದ ಶಿಷ್ಯರಿದ್ದರೆಂಬುದಕ್ಕೆ ಯಾವ ಆಧಾರವೂ ಇಲ್ಲ. ತ್ಯಾಗರಾಜರಿಗೆ ಒಬ್ಬ

ವಾಲಾಜಾಪೇಟೆ ವೆಂಕಟರಮಣ ಭಾಗವತರಾದರೂ ಇದ್ದರು, ತ್ಯಾಗರಾಜರ ಕೃತಿಗಳು ಉಳಿದುಕೊಂಡುವು. ಪುರಂದರದಾಸರಾದ ಮೇಲೆ ಅವರಂತೆ ಪ್ರತಿಭಾಶಾಲಿಯಾದ ಇನ್ನೊಬ್ಬ ಹರಿದಾಸರೆಂದರೆ ಚೀಕಲಪರವಿಯ ವಿಜಯವಿಟ್ಠಲರು. ಅವರೇ ಪುರಂದರದಾಸರ ಬಾಳುವೆಯ ವಿವರಗಳನ್ನು ತಮಗೆ ತಿಳಿದಂತೆ ನಮಗಾಗಿ ಉಳಿಸಿದವರು. ಆದರೆ ಅವರ ಜನ್ಮಕ್ಕೂ ಪುರಂದರದಾಸರ ಮರಣಕ್ಕೂ ಸುಮಾರು ಒಂದು ನೂರು ಮೀರಿ ವರ್ಷಗಳ ಅಂತರವಿದ್ದಿತು. ಅಷ್ಟುವೇಳೆಗಾಗಲೇ ಪುರಂದರಸಾಹಿತ್ಯ ಎಷ್ಟು ಪ್ರಲುಪ್ತವಾಗಿದ್ದಿತೋ? ಉಳಿದದ್ದರಲ್ಲಿ ಎಷ್ಟು ಸ್ಖಾಲಿತ್ಯಗಳು ಒದಗಿಬಂದುವೋ? ಮುಂದಿನವರು ಮಾಡಿದ ಮಾರ್ಪಡುಗಳೆಷ್ಟೋ?

ಪುರಂದರದಾಸರು ಬಾಳಿದ ಕಾಲಕ್ಕೆ ವೈದಿಕಮತದಲ್ಲಿ ಸಂಸ್ಕೃತಗ್ರಂಥಗಳ ಬಳಕೆಯೇ ಇದ್ದಿತು. ಹಿಂದಿನ ಹರಿದಾಸರು ಕನ್ನಡದಲ್ಲಿ ಪದಗಳನ್ನು ರಚಿಸಿದ್ದರೂ ಅವು ವಿಶೇಷವಾಗಿ ಪ್ರಚಾರದಲ್ಲಿರಲಿಲ್ಲ. ತಮಿಳುದೇಶದಲ್ಲಾಗಲೇ ಸಂಸ ತಸಾಹಿತ್ಯದ ಜೊತೆಗೆ ತಮಿಳುಭಾಷೆಯ ನಾಲಾಯಿರ ಪ್ರಬಂಧಗಳನ್ನು ದೇವತಾರ್ಚನೆಗೂ, ಜ್ಞಾನಾಭಿವೃದ್ಧಿಗೂ ಉಪಯೋಗಿಸಿಕೊಳ್ಳುತ್ತಿದ್ದರು. ಸಾರ್ವಜನಿಕರಿಗೆ ನೀತಿ, ಧರ್ಮ, ತತ್ತ್ವಗಳನ್ನು ಮನಸ್ಸಿಗೆ ಹಿಡಿಯುವಂತೆ, ಬಾಳಿನಲ್ಲಿ ಉಳಿಯುವಂತೆ ಜನರ ನಿತ್ಯಭಾಷೆಯಾದ ಕನ್ನಡದಲ್ಲೇ ಬೋಧಿಸುವ ಪ್ರಯತ್ನ ಹರಿದಾಸರಿಂದಾಯಿತು. ಈ ಹರಿದಾಸಸಾಹಿತ್ಯದಲ್ಲಿ ಮಾಧ್ವಮತದ ಪ್ರಕ್ರಿಯೆಗಳು ಆಗಾಗ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿದ್ದುವಾದರೂ ಶಿಷ್ಟರೆನಿಸಿದ ಎಲ್ಲರಿಂದಲೂ ಮಾನ್ಯವಾದ ತತ್ತ್ವಗಳನ್ನೇ ಹರಿದಾಸರು ಅಳವಡಿಸಿಕೊಂಡಿದ್ದರು. ಬೀದಿ ಬೀದಿಗಳಲ್ಲಿ ತಂಬೂರಿ ಮೀಟುತ್ತ, ಕಾಲಿಗೆ ಗೆಜ್ಜೆ ಕಟ್ಟಿ ಕುಣಿಯುತ್ತ, ಭಗವಂತನ ದಿವ್ಯನಾಮಸಂಕೀರ್ತನ ಮಾಡುತ್ತ, ನೇರವಾದ ನೀತಿಮಾರ್ಗವನ್ನು ಸರಳವಾಗಿ, ಮನಮುಟ್ಟುವಂತೆ, ಹಾಡಿಕೊಂಡು ಹೋಗುವ ಪರಿಪಾಟ ಈ ಹರಿದಾಸರಿಂದಲೇ ಆದದ್ದು.

ಪೂರ್ವದ ಹರಿದಾಸರು ಈ ಕೆಲಸವನ್ನು ಎಷ್ಟು ಸಾಗಿಸಿದ್ದರೋ, ಅದರಿಂದ ಜನಜೀವನದಲ್ಲಿ ಏನನ್ನು ಸಾಧಿಸಿದ್ದರೋ ಹೇಳುವುದು ಕಷ್ಟ; ಈ ಸಂಪ್ರದಾಯವು ಪ್ರಚಾರಕ್ಕಂತೂ ಬಂದಿದ್ದಿತು; ಹರಿದಾಸರ ಪಂಥವಂತೂ ರೂಪ ತಳೆದಿದ್ದಿತು. ಪ್ರಾಯಶಃ ಅವರ ಪ್ರಭಾವ ಪರ್ಯಾಪ್ತವಾಗಿದ್ದಿತು. ಪುರಂದರದಾಸರ ವ್ಯಕ್ತಿತ್ವದಿಂದ ಈ ಕೆಲಸ ಯಶಸ್ವಿಯಾಯಿತು; ಈ ಕೆಲಸದ ಅಗತ್ಯವನ್ನು ಅರಿತುಕೊಂಡ ನೂರಾರು ಹರಿದಾಸರು ನೆರವಾದರು. ಸಮಾಜದ ಡೊಂಕನ್ನು ತಿದ್ದಿ ಜನರನ್ನು ನೆಟ್ಟಗೆ ಮಾಡುವ ಸಾಹಸವನ್ನು ಪುರಂದರದಾಸರು ಮಾಡಿ ಅದಕ್ಕಾಗಿ ಸಾಹಿತ್ಯವನ್ನೂ ಸಂಗೀತವನ್ನೂ ಬಳಸಿದರು. ಜಾನಪದಸಾಹಿತ್ಯದ ಸ್ವರೂಪವನ್ನೇ ಉಳಿಸಿಕೊಂಡು, ಬಳಕೆಯ ಭಾಷೆಯಾದ ಕನ್ನಡದಲ್ಲೇ ಸಾಹಿತ್ಯನಿರ್ಮಾಣ ಮಾಡಿದರು; ಗದ್ಯಕ್ಕಿಂತಲೂ ಪದ್ಯ ಪ್ರಭಾವಶಾಲಿಯೆಂಬುದನ್ನು ಮನಗಂಡು ಹಾಡುಗಳನ್ನು ಹೆಣೆದರು. ಆದರೆ ಸಂಗೀತದಲ್ಲಿ ಅನಭಿಜ್ಞರಾದವರೂ ಧಾಟಿಯನ್ನು ಹಿಡಿಯುವ ಸೌಕರ್ಯ ಈ ಹಾಡುಗಳಲ್ಲಿವೆ. ಮನೆಗಳಲ್ಲಿ ಹೆಂಗಸರೂ, ಉಪಾದಾನದ ದಾಸರೂ ಹಾಡಿಕೊಳ್ಳುವಷ್ಟು ಸುಲಭವಾಗಿ, ಸುಬೋಧವಾಗಿ ಇರುವುದು ಪುರಂದರದಾಸರ ಹಾಡುಗಳ ಹಿರಿಮೆ.

ಕನ್ನಡಸಾಹಿತ್ಯ ಆ ವೇಳೆಗಾಗಲೇ ಬಹುದೂರ ನಡೆದು ಬಂದಿದ್ದಿತು. ಪಂಪ,ರನ್ನ, ಪೊನ್ನ, ನಾಗವರ್ಮ, ನಾಗಚಂದ್ರ, ಚಾವುಂಡರಾಯ, ಬಸವೇಶ್ವರ, ಹರಿಹರ, ರಾಘವಾಂಕ, ಸೋಮನಾಥ,

ಜನ್ನ, ಕುಮುದೇಂದು ಮುಂತಾದ ಮಹಾಕವಿಗಳು ಕನ್ನಡದ ಸೇವೆಯನ್ನು ಆಗಮಾಡಿಸಿದ್ದರು. ಹಳೆಗನ್ನಡದ ಬಳಕೆ ಕಡಮೆಯಾಗಿ ಹೊಸಗನ್ನಡ ಬಳಕೆಗೆ ಬಂದಿದ್ದಿತು. ಸಾಮಾನ್ಯ ಜನರಿಗೆ ಪಂಪನೇ ಮೊದಲಾದ ಮಹಾಕವಿಗಳ ಕೃತಿಗಳನ್ನು ಅರಗಿಸಿಕೊಳ್ಳುವ ಸಾಮರ್ಥ್ಯವಾಗಲಿ ಅರಿತುಕೊಳ್ಳಬೇಕೆಂಬ ಆಸಕ್ತಿಯಾಗಲಿ ಇರಲಿಲ್ಲ. ಯಾವ ಯುಗದಲ್ಲೂ ಇಂಥ ಪ್ರೌಢಕೃತಿಗಳು ಪಂಡಿತರ, ರಸಿಕರ ಪಾಲಿಗಷ್ಟೆ. ಆದರೆ ಬೋಧೆ ಸಾಮಾನ್ಯರನ್ನು ಮುಟ್ಟಬೇಕೆಂದರೆ ಸಾಹಿತ್ಯ ಇನ್ನೂ ಸುಲಭವಾಗಬೇಕು; ನಿರ್ಮಾಣದ ನಿಬಂಧನೆಗಳು ಸಡಿಲವಾಗಬೇಕು. ಹೀಗೆಂದೇ ಪುರಂದರದಾಸರು ಜಾನಪದ ಗೀತಗಳ ಮಟ್ಟನ್ನೇ ಹಿಡಿದು ಬಳಕೆಯಲ್ಲಿರುವ ಮಾತುಗಳನ್ನೇ ಬಳಸಿಕೊಂಡರು.

ದಾಸರು ಜಾನಪದ ಗೀತಗಳನ್ನು ಹೀಗೆ ಪ್ರಮುಖವಾಗಿ ಧರ್ಮಪ್ರಚಾರಕ್ಕೆ ಇರಿಸಿಕೊಂಡರೂ ವಸ್ತುವಿನ ಗಾಂಭೀರ್ಯ ಕುಗ್ಗಲಿಲ್ಲ; ಹಳೆಯ ಮಟ್ಟುಗಳಲ್ಲೇ ಉದಾತ್ತ ತತ್ತ್ವಗಳನ್ನು ಮೂಡಿಸಿದರು. ಈ ಮಟ್ಟು ಮಾತ್ರವಲ್ಲದೆ ವೃತ್ತನಾಮ, ತ್ರಿಪದಿ, ಚೌಪದಿ, ಷಟ್ಪದಿ, ತತ್ತ್ವಸುವ್ವಾಲಿ, ಸಾಂಗತ್ಯ, ಕಂದ, ಸೀಸ ಪದ್ಯ, ಗದ್ಯ ಮುಂತಾದ ಕಾವ್ಯ ಪ್ರಭೇದಗಳಲ್ಲೂ ಪ್ರಯೋಗ ನಡೆಸಿದ್ದಾರೆ; ಅವರ ಭಾವಗೀತಗಳೂ ನೂರಾರು ಉಳಿದುಕೊಂಡುಬಂದಿವೆ. ಸಾಮಾನ್ಯವಾಗಿ ಅವರ ಕೃತಿಗಳನ್ನು ಕೀರ್ತನವೆಂದು ಕರೆಯುತ್ತಾರೆ. ಹಿಂದಿನ ಪಾಡು, ಮೆಲ್ವಾಡುಗಳನ್ನು ಭಗವದ್ಭಕ್ತಿಯ ರಸದಲ್ಲಿ ಅದ್ದಿ ತಾಳಕ್ಕೆ ಮೇಳೈಸಿದರೆ ಅದು ಕೀರ್ತನೆ. ಭಕ್ತಿಯ ವಿವಿಧ ಬಗೆಗಳಲ್ಲಿ ಕೀರ್ತನ (ಸಂಕೀರ್ತನ) ಕ್ಕೆ ಪ್ರಮುಖಪಟ್ಟ ಕಟ್ಟಿದವರು ವೈಷ್ಣವರು; ಈ ಪರಿಪಾಟ ಹಾಕಿಕೊಟ್ಟವರು ಪುರಂದರದಾಸರು. ಕೀರ್ತನೆಯಲ್ಲಿ ಸಾಹಿತ್ಯದಷ್ಟೇ ಸಂಗೀತವೂ ಪ್ರಧಾನ; ಜ್ಞಾನದಾನದಂತೆಯೇ ರಸಸ್ಫುರಣವೂ ಮುಖ್ಯ.

ಪುರಂದರದಾಸರ ಕೃತಿಗಳು ಕೀರ್ತನಪದ್ಧತಿಗೆ ಬಹುವಾಗಿ ಪೋಷಕವಾದವು; ಹೊಸಗನ್ನಡ ಪದ್ಯಶೈಲಿಯೂ ಈ ಕೃತಿಗಳಿಂದ ಖಚಿತಗೊಂಡಿತು. ಅವರ ಸಾಹಿತ್ಯದಲ್ಲಿ ಕ್ಲಿಷ್ಟವೆಂಬ ಪದಗಳೇ ಸಿಗುವುದಿಲ್ಲ; ಸರಳವಾದ ಮಾತು, ಮಧುರವಾದ ಪದಪುಂಜ, ಲಯಬದ್ಧವಾದ ಪಂಕ್ತಿಗಳು-ಇವು ಅವರ ಸಾಹಿತ್ಯದ ವೈಶಿಷ್ಟ್ಯ. ಕೆಲವಾರು ದೀರ್ಘವಾದ ಕೃತಿಗಳಿವೆ, ನಿಜ; ಮಧ್ಯಮಾವತಿಯ 'ಅಚ್ಯುತಾನಂತ ಗೋವಿಂದ, ಹರಿ', ಕೇದಾರಗೌಳದ 'ಬಗೆ ಬಗೆ ಆಟಗಳೆಲ್ಲಿ ಕಲಿತೆಯಯ್ಯ', ಕಾಂಬೋದಿಯ 'ವಿದುರನ ಭಾಗ್ಯವಿದು' ಇವುಗಳಂತೆ. ಆದರೆ ಸಾಮಾನ್ಯವಾಗಿ ಸಣ್ಣ ಕೃತಿಗಳೇ ಹೆಚ್ಚು; ಐದಾರು ಚರಣಗಳು ಸಾಧಾರಣ. ಕಡೆಯ ಚರಣದಲ್ಲಿ 'ಪುರಂದರ ವಿಠಲ' ನೆಂಬುವ ಅಂಕಿತ ಕಾಣಿಸುತ್ತದೆ. ಚರಣದಲ್ಲಿ ಸಾಮಾನ್ಯವಾಗಿ ನಾಲ್ಕು ಸಾಲುಗಳಿದ್ದು ದ್ವಿತೀಯಾಕ್ಷರ ಪ್ರಾಸವಿರುತ್ತದೆ. ಅಂತ್ಯಾಕ್ಷರ, ಆದ್ಯಕ್ಷರ ಪ್ರಾಸಗಳ ಪ್ರಯೋಗವೂ ಉಂಟು. ಈ ಪ್ರಾಸಬಂಧದಲ್ಲಿ ಪ್ರಯತ್ನ ಅಷ್ಟಾಗಿ ಕಾಣಿಸುವುದಿಲ್ಲ ಸಹಜವೆಂಬುದು ಸ್ಪಷ್ಟವಾಗುತ್ತದೆ.

೬

ಪುರಂದರದಾಸರ ಕೃತಿಗಳಲ್ಲಿ ಪುರಾಣಕಥೆಗಳ ಪ್ರಸ್ತಾಪ, ಉಲ್ಲೇಖ ಬಹುವಾಗಿ ಬರುತ್ತದೆ. ದಾಸರಿಗೆ ವೇದಾಂತಜ್ಞಾನ ಇದ್ದಿತೆಂಬುದರಲ್ಲಿ ಸಂಶಯವಿಲ್ಲ; ಉಪನಿಷತ್ತುಗಳ ಪರಿಚಯ

ವಿದ್ದಿತೆಂಬುದೂ ನಿಜ. ದ್ವೈತ ಸಿದ್ಧಾಂತದ ಪ್ರಮೇಯಗಳನ್ನು ಚೆನ್ನಾಗಿ ತಿಳಿದಿದ್ದರೆಂಬುದೂ ಹಲವಾರು ಕೀರ್ತನೆಗಳಲ್ಲಿ ಸ್ಪಷ್ಟವಾಗುತ್ತದೆ. ಆದರೆ ಅವರ ಒಲವೆಲ್ಲ ಪುರಾಣಗಳ ಕಡೆ ಬಾಗಿದ್ದಿತೆಂಬುದು ನಿರ್ವಿವಾದ.

ಜನಸಾಮಾನ್ಯರ ಉದ್ಧಾರದ ಕಡೆ ಅವರ ದೃಷ್ಟಿಯಿದ್ದಿತಷ್ಟೆ. ಪಾಮರರ ಪ್ರಯೋಜನಕ್ಕೆಂದು ಸುಲಭಶೈಲಿಯಲ್ಲಿ, ಕಥೆಗಳ ಹಂದರವನ್ನು ಹಬ್ಬಿಸಿ, ಭಗವಂತನ ಮಹಿಮೆಯನ್ನು ನಿರೂಪಿಸಲು ಪುರಾಣಗಳು ಉದ್ಯುಕ್ತವಾದವು. ವೇದೋಪನಿಷತ್ತುಗಳನ್ನು ಅರ್ಥಮಾಡಿಕೊಂಡು ಅನುಷ್ಠಾನಕ್ಕೆ ತರುವ ಸಾಹಸ ಸಂಸ್ಕೃತದಲ್ಲಿ ವಿಶೇಷವಾದ ವ್ಯುತ್ಪತ್ತಿಯಿದ್ದವರಿಗೆ, ಸುಸಂಸ್ಕೃತವಾದ ಪ್ರೌಢಿಮೆಯಿದ್ದವರಿಗೆ, ಉಳಿದ ವೃತ್ತಿಗಳ ಹವ್ಯಾಸವಿಲ್ಲದೆ ಜಿಜ್ಞಾಸುಗಳೇ ಆಗಿದ್ದವರಿಗೆ ಮಾತ್ರ ಸಾಧ್ಯ. ಆದರೆ ದಿನಂಪ್ರತಿ ವ್ಯವಸಾಯವನ್ನೋ, ಉದ್ಯಮವನ್ನೋ ಮಾಡುತ್ತ ಮನನ-ನಿದಿಧ್ಯಾಸಗಳಿಗೆ ಅವಕಾಶವಿಲ್ಲದೆ, ಅವುಗಳಲ್ಲಿ ಅನುರಕ್ತಿಯೂ ಇಲ್ಲದೆ ಇರುವ ಮಂದಿಯೇ ಬಹಳ. ಇವರಲ್ಲಿ ಧರ್ಮಬುದ್ಧಿ ಹುಟ್ಟಿಸಿ, ಭಗವದ್ಭಕ್ತಿಯ ಬೀಜವನ್ನು ಬಿತ್ತಿ, ಸನ್ಮಾರ್ಗದಲ್ಲಿ ಒಯ್ಯಲು ಪುರಾಣಸಾಹಿತ್ಯದ ಅಗತ್ಯವಿದ್ದಿತು. ಈ ಅಗತ್ಯವನ್ನು ಕಂಡುಕೊಂಡೇ ವ್ಯಾಸರು ಪುರಾಣಗಳನ್ನು ಬರೆದರೆಂದು ನಮ್ಮಲ್ಲಿರುವ ಶ್ರದ್ಧೆ. ಪುರಾಣಗಳ ಕರ್ತೃತ್ವದ ವಿಚಾರ ಹೇಗಾದರೂ ಇರಲಿ. ಜನಸಾಮಾನ್ಯರಲ್ಲಿ ಧಾರ್ಮಿಕ ಪುನರುಜ್ಜೀವನವನ್ನು ಮಾಡಲು ಪುರಾಣಗಳು ನೆರವಾದದ್ದಂತೂ ದಿಟ. ಇದಕ್ಕಾಗಿಯೇ ನಮ್ಮವರು ಪುರಾಣವನ್ನು ಐದನೆಯ ವೇದವೆಂದೇ ಪರಿಗಣಿಸಿದರು.

ವೈಷ್ಣವ ಸಂಪ್ರದಾಯದಲ್ಲಿ ವಿಷ್ಣುವಿನ ಮಾಹಾತ್ಮ್ಯೆಯನ್ನು ಹೇಳಿ ಭಕ್ತಿಯನ್ನು ಬೋಧಿಸುವ ಪುರಾಣಗಳ ವಿಚಾರವಾಗಿ ಆದರ ಹೆಚ್ಚು. ಭಾಗವತಪುರಾಣವಂತೂ ಶ್ರುತಿಗೆ ಸಮಾನವೆಂದೇ ಎಣಿಕೆ. ಪುರಂದರದಾಸರು ಈ ಗಣಿಗಳಿಂದ ಚಿನ್ನವನ್ನು ಗೆಡ್ಡೆಗೆಡ್ಡೆಗಳಾಗಿ ಆಯ್ದುಕೊಂಡು ತಮ್ಮ ಕೃತಿಗಳಲ್ಲಿ ಪುಟವಿಟ್ಟಿದ್ದಾರೆ; ಪುರಾಣದಲ್ಲಿ ಪ್ರಸಿದ್ಧರಾದ ಹರಿಭಕ್ತರ ಚರಿತ್ರೆಗಳನ್ನು ಬಳಸಿ ಕೊಂಡಿದ್ದಾರೆ; ಕೃಷ್ಣಾವತಾರದ ವಿವಿಧ ವಿವರಗಳನ್ನು ಆವೇಶದಿಂದ ಸ್ಮರಿಸಿಕೊಂಡಿದ್ದಾರೆ. ಕರಿ ಮಕರಿಗೆ ಸಿಲುಕಿ ಮೊರೆಯಿಡುವಾಗ, ಪ್ರಹ್ಲಾದನ ಪಿತ ಬಾಧಿಸುತ್ತಿರುವಾಗ, ಸಭೆಯಲಿ ಬಾಲೆಯ ಸೀರೆಯ ಸೆಳೆವಾಗ, ಯಮನ ದೂತರು ಬಂದು ಅಜಮಿಳನೆಳೆವಾಗ, ಆ ಮರ ಈ ಮರ ಧ್ಯಾನಿಸುತ್ತಿರುವಾಗ, ಹಸುಳೆ ಆ ಧ್ರುವರಾಯ ಅಡವಿಗೆ ಪೋಪಾಗ, ಅವರನ್ನೆಲ್ಲ ಕಾಯ್ದ ಭಗವಂತನನ್ನು ಕಾನಡರಾಗದ ಒಂದು ಕೀರ್ತನೆಯಲ್ಲಿ ಹೊಗಳಿದ್ದಾರೆ; ಇಲ್ಲಿ ಗಜೇಂದ್ರಮೋಕ್ಷದ ಕಥೆ, ನರಸಿಂಹಾವತಾರದ ಕಥೆ, ದ್ರೌಪದಿವಸ್ತ್ರಾಪಹರಣದ ವೃತ್ತಾಂತ, ಅಜಾಮಿಳೋಪಾಖ್ಯಾನ, ವಾಲ್ಮೀಕಿಯ ಕಥೆ, ಧ್ರುವನ ಕಥೆ ಇವು ಧ್ವನಿತವಾಗಿವೆಯಷ್ಟೆ? ಜನರೆಲ್ಲರಿಗೆ ಸಾಮಾನ್ಯವಾಗಿ ಇಂಥ ಕಥೆಗಳ ಪರಿಚಯವಿದ್ದೇ ಇರುತ್ತದೆ. ಅವುಗಳನ್ನೇ ಬಳಸಿಕೊಂಡು ದೇವರ ದೊಡ್ಡತನವನ್ನು ನಿರೂಪಿಸುವುದು ದಾಸರ ಉದ್ದೇಶ.

ವಿಷ್ಣುವಿನ ದಶಾವತಾರಗಳ ವರ್ಣನೆಯೂ ಅವರ ಕೃತಿಗಳಲ್ಲಿ ಹಲವೆಡೆ ಬರುತ್ತದೆ. ಸೌರಾಷ್ಟ್ರರಾಗದ 'ಗೋಕುಲದೊಳಗೋರ್ವ ರಾಕೇಂದುಮುಖಿ ತಾನು' ಎಂದು ಆರಂಭವಾಗುವ ಕೀರ್ತನೆಯಲ್ಲಿ ಮನೋಹರವಾದ ಸನ್ನಿವೇಶವೊಂದನ್ನು ಕಲ್ಪಿಸಿಕೊಂಡು "ಹತ್ತಾವತಾರದ ವಿಸ್ತಾರ"ವನ್ನು ನಿರೂಪಿಸಿದ್ದಾರೆ. ಕನ್ನಡಿಕದಪಿನ ಎಣ್ಣೆಗೆಂಪಿನ ಜಾಣೆಯೊಬ್ಬಳು ಕಣ್ಣಿಗೆ ಕಪ್ಪನ್ನು

ಹಚ್ಚಿ, ಚಿನ್ನದ ಆಭರಣವನ್ನಿಟ್ಟು, ಬೆಡಗಿನಿಂದ ನುಡಿಗಿಳಿ ಸುಳಿಪಲ್ಲು ನಡೆ ಹಂಸಗಮನದಿ ಸಡಗರದಿಂದ ಅಡಿಯಿಡುತ, ನಡುಬೀದಿಯೊಳಗೆಲ್ಲ ಬೆಣ್ಣೆ ಮಾರುತ ಬಂದಳಂತೆ. ಆ ಹೊತ್ತಿಗೆ ಪನ್ನಗಶಯನನಾದ ಚೆನ್ನಕೇಶವನೂ ರನ್ನದ ಕೊಳಲನ್ನು ಪಿಡಿದು ಕನ್ನೆ ಹೆಣ್ಣುಗಳ ಕೈಸನ್ನೆಯ ಮಾಡುತ್ತ ಬಂದನಂತೆ. ಅವರಿಬ್ಬರಲ್ಲಿ ಆಗ ಶೃಂಗಾರಪ್ರಧಾನವಾದ ಸಂವಾದ ನಡೆಯುತ್ತದೆ. ಕೃಷ್ಣ ಯಾರೆಂಬುದು ಆಕೆಗೆ ತಿಳಿಯದೆ ತುಂಟತನಮಾಡುತ್ತಾಳೆ; ಕೃಷ್ಣನೂ ಚಾತುರ್ಯದಿಂದ ತಾನು ಯಾರೆಂಬುದನ್ನು ಆಕೆಗೆ ತಿಳಿಸಿದಾಗ ದಶಾವತಾರದ ವರ್ಣನೆ ಬರುತ್ತದೆ.

ಕೃಷ್ಣ ಸಣ್ಣವನಿದ್ದಾಗ ನಡೆದುವೆಂದು ಪುರಾಣಗಳಲ್ಲಿ ಬರುವ ಪ್ರಸಂಗಗಳನ್ನೆತ್ತಿಕೊಂಡು ದಾಸರು ಹಲವಾರು ಒಳ್ಳೆಯ ಕೀರ್ತನೆಗಳನ್ನು ರಚಿಸಿದ್ದಾರೆ. ನೆರೆಮನೆಯಾಕೆ ಗೋಪಿಯ ಬಳಿ ಬಂದು ಕೃಷ್ಣ ಕೊಡಹಾಲ ಕುಡಿದನೆಂದೂ, ಗಡಿಗೆಯೊಡೆದನೆಂದೂ, ದೊಡ್ಡ ಕೊಡದೊಳಗೆ ಅಡಗಿದ್ದನೆಂದೂ, ಅಳಿಯನ ವೇಷದಿಂದ ಮಗಳ ಕರೆಯಬಂದು ಗಿಳಿಯಂಥ ಹೆಣ್ಣಿನ ಕೆಡಿಸಿದನೆಂದೂ ದೂರು ಹೇಳಿದರೆ, ಗೋಪಿ 'ಪುಟ್ಟಿಸಬೇಡಿರೆ ಅನ್ಯಾಯವ' ಎಂದಂದು ತೊಟ್ಟಲಿನೊಳಗಿದ್ದ ಚಿಣ್ಣ ಕೃಷ್ಣನನ್ನು ತೋರಿಸುತ್ತಾಳೆ. 'ಏನು ಪೇಳಲಿ ಗೋಪಿ ನಿನ್ನ ಮಗನ ಜಾಲ' ಎನ್ನುವ ಆನಂದಭೈರವಿಯ ಪದವೊಂದು ಈ ಸಂದರ್ಭವನ್ನು ಹೇಳುತ್ತದೆ. 'ಯಾರ ಮಗನಮ್ಮ ರಂಗಯ್ಯ' (ಜಂಝೂಟಿ), 'ಇದೇ ಸಮಯ ರಂಗ ಬಾರೆಲೋ' (ಸೌರಾಷ್ಟ್ರ), 'ಹೇಳಿದರೆ ನಮ್ಮ ಮೇಲೆ ಯಾಕಮ್ಮ ಸಿಟ್ಟು' (ಶಂಕರಾಭರಣ), 'ನೆಂಟನು ಸಣ್ಣವನೆಂದು ನಂಬಿದೆನಮ್ಮ' (ಶಂಕರಾಭರಣ), 'ಎಂಥ ಸಣ್ಣವನೇ ನಿನ್ನ ಮಗ' (ನಾಟಕುರಂಜಿ), 'ಗೋಕುಲದಲಿ ನಾನಿರಲಾರೆ' (ವಸಂತಭೈರವಿ) ಮುಂತಾದ ಕೃತಿಗಳಲ್ಲಿ ಕೃಷ್ಣಾವತಾರದ ಸ್ವಾರಸ್ಯವಾದ ಇಣುಕು ನೋಟಗಳಿವೆ.

ಪುರಾಣಗಳ ಕಥೆಗಳನ್ನು ಬಳಸಿಕೊಳ್ಳುವಾಗ ದಾಸರು ಮಾಧ್ವ ಸಿದ್ಧಾಂತದ ಪ್ರಮೇಯಗಳಿಗೆ ಅಳವಡಿಸಿಕೊಂಡಿರುವುದು ಕಾಣಬರುತ್ತದೆ. ಮತಶ್ರದ್ಧೆಯ ಛಲವೂ ಅಲ್ಲಲ್ಲಿ ಇಲ್ಲದಿಲ್ಲ. ಪಂತುವರಾಳಿಯ 'ಹರಿಹರರು ಹೇಗೆ ಸಮರು' ಎಂಬ ಕೀರ್ತನೆಯಲ್ಲಿ ವಿಷ್ಣು ಸರ್ವೋತ್ತಮತ್ವವನ್ನು ಸಾಧಿಸಹೊರಟು ಶೈವ-ವೈಷ್ಣವ ಪುರಾಣಗಳ ವಿವರಗಳನ್ನು ಪ್ರಸ್ತಾಪಿಸುತ್ತಾರೆ. ಕಡೆಗೆ 'ಹರಿಹರಿ ಎಂಬೋರು ಸಿರಿವಂತರಾಗುವರು, ಹರಹರ ಎಂಬೋರು ಹತರಾಗುವರು' ಎಂದು ಹೇಳುವಷ್ಟು ಅನ್ಯಾಯದ ಆವೇಶಕ್ಕೆ ಒಳಗಾಗುತ್ತಾರೆ! ಈ ವಾದವನ್ನು ನಿಲ್ಲಿಸಲು ತಾತ್ತ್ವಿಕಯುಕ್ತಿಗಳು ಬೇಕೆಂದು ಅವರಿಗನ್ನಿಸಲಿಲ್ಲ; ಬರಿಯ ಪುರಾಣಕಥೆಯ ಆಧಾರವೇ ಸಾಕೆನಿಸಿತು. ಕಾಂಬೋದಿಯ 'ಹರಿಯಧಿಕ ಹರನಧಿಕನೆಂದು ಬಡಿದಾಡದಿರಿ' ಎನ್ನುವ ಕೀರ್ತನೆಯಲ್ಲಿ ಬಲಿಯ ಕಥೆ, ಬಾಣಾಸುರನ ಕಥೆ, ಭೀಮನ ಕಥೆ, ಜರಾಸಂಧನ ಕಥೆ, ಭಸ್ಮಾಸುರ-ತ್ರಿಪುರಾಸುರರ ಕಥೆಗಳನ್ನೇ ಹೆಣೆದು 'ಹರಿಹರನ ಭಕತರನ್ನೇ' ಸಾಕ್ಷಿಗೆ ಕರೆದಿದ್ದಾರೆ. ಅದ್ವೈತದ 'ಸೋಹಂ' ವಾದವನ್ನು ಖಂಡಿಸಲು ಅವರಿಗೆ ಹಿರಣ್ಯಕಶಿಪು, ಮಾಲಿ-ಸುಮಾಲಿ-ರಾವಣರು, ಜಲಂಧರ ಮುಂತಾದವರ ಕಥೆಗಳಷ್ಟೇ ಸಾಕಾಗಿದ್ದಿತು (ಅವರ 'ಸೋಹಮೆನ್ನಬೇಡೆಲೋ' ಎಂಬ ಅಠಾಣಾ ಕೀರ್ತನೆ). 'ಹರಿಹರರು ಸಮರೆಂದು ಅರಿಯದ ಜ್ಞಾನಿಗಳು ಹರನ ಹೃದಯದೊಳಗಿರುವ ಹರಿಯ ತಾವರಿಯರು' ಎನ್ನುತ್ತಾರೆ ಒಂದು ಕಡೆ. ಇದಕ್ಕೆ ಪುರಾಣದ ಸಮರ್ಥನೆಯಿದೆಯಂತೆ.

ಹೀಗೆಯೇ 'ಸತ್ಯಂ ಜಗತಿದು ಪಂಚಭೇದವು' ಎಂದು ಆರಂಭಿಸಿ ತಾರತಮ್ಯವನ್ನು ಪ್ರಸ್ತಾಪಿಸಿ ಕೃಷ್ಣನೇ ಅಧಿಕನೆಂದು ಸಾಧಿಸುವಲ್ಲಿ ಕೂಡ ಅವರ ಆಸರೆ ಪುರಾಣವೇ. 'ಜೀವೇಶರೊಂದೆಂಬ ದುರ್ವಾದಿಯ ಭಾವಶಾಸ್ತ್ರವ ಮುರಿದು, ಕೋವಿದರಿಗೆ ಸದ್ಭಾಷ್ಯವನ್ನು' ತೋರಿದ 'ಗುರುರಾಯರ' ಹೆಗ್ಗಳಿಕೆಯನ್ನು ಹೇಳುವಾಗಲೂ ಅದೇ ಆಸರೆ. 'ಹರಿಯ ಬಿಟ್ಟರೆ ಗತಿಯಿಲ್ಲ, ಮಾರುತಿ ಮರೆತರೆ ಸಾಧನವಿಲ್ಲ' ಎನ್ನುವಾಗಲೂ ಇದೇ ದೃಷ್ಟಿ. ಬೌದ್ಧರ ಶೂನ್ಯವಾದದ ಸೊಲ್ಲನ್ನೆತ್ತಿಕೊಂಡು ನಾದನಾಮಕ್ರಿಯೆಯಲ್ಲಿ "ಗುದ್ದಿದವನೆ ಬಲ್ಲ, ಗುದ್ದಿಸಿಕೊಂಡವನೆ ಬಲ್ಲ! ಸುದ್ದಿಗೆ ಠಾವಿಲ್ಲ! ಬೌದ್ಧರೆ ಕೇಳಿರಿ ನೀವೆಲ್ಲ!!" ಎನ್ನುವ ಸಣ್ಣ ಪದವೊಂದನ್ನು ಬರೆದಿದ್ದಾರೆ. ವಾದವೇನೋ ಸ್ವಾರಸ್ಯವಾಗಿದೆ; ವ್ಯಾವಹಾರಿಕ ದೃಷ್ಟಿಯಲ್ಲಿ ಸಮರ್ಥವೂ ಆಗಿದೆ. ಆದರೆ 'ಧರ್ಮವ ಭಾವಿಸಿದ ಪುರಂದರವಿಠಲನೆ ನಿಜಬುದ್ಧ' ನೆನ್ನುವ ನಿರ್ಣಯಕ್ಕೆ ಅವರು ಬರುವುದು ಪುರಾಣಬಲದಿಂದಲೇ.

ಭಗವಂತನಲ್ಲಿ ನೈಚ್ಯಾನುಸಂಧಾನಮಾಡಿ ಬೇಡಿಕೊಳ್ಳುವಾಗಲೂ ಪುರಾಣ ಪ್ರಕ್ರಿಯೆಗಳನ್ನೇ ಉಳಿಸಿಕೊಂಡಿದ್ದಾರೆ. 'ಆರು ಬದುಕಿದರಯ್ಯ ಹರಿ ನಿನ್ನ ನಂಬಿ' ಎನ್ನುವ ಕಾಂಬೋದಿಯ ಕೃತಿಯಲ್ಲಿ ತಾಮ್ರಧ್ವಜ, ಭೃಗುಋಷಿ, ತ್ರಿಪುರಾಸುರ, ಬಲಿ, ಪೂತನಿ ಇವರಿಗೆಲ್ಲ ಭಗವಂತನು ಮಾಡಿದ ಅನ್ಯಾಯವನ್ನು ಪಟ್ಟಿಮಾಡಿದ್ದಾರೆ. 'ತಿರಿದುಂಬ ದಾಸರ ಕೈಲಿ ಕಪ್ಪವ ಕೊಂಬ' ಅವನನ್ನು 'ನಂಬಿದರೆ ತಿರುಪೆಯೂ ಹುಟ್ಟಲೊಲ್ಲದು' ಎಂದು ಮಧುರವಾದ ಅಗ್ರಹವನ್ನು ವ್ಯಕ್ತಪಡಿಸಿದ್ದಾರೆ.

ದಾಸರು ಪುರಾಣಗಳ ಪರಿಚಯದಿಂದಲೇ ತಮ್ಮ ತಾತ್ತ್ವಿಕವಾದ ನಿಲುವನ್ನು ಒಪ್ಪಮಾಡಿ ಕೊಂಡಂತೆ ತೋರುತ್ತದೆ. ಈ ಕಾರಣದಿಂದಲೇ ಪ್ರಾಯಶಃ ವ್ಯಾಸಕೂಟದವರಿಗೆ ದಾಸಕೂಟದವರ ವಿಚಾರದಲ್ಲಿ ತಾತ್ಸಾರಭಾವನೆ ಒದಗಿಬಂದಿತು. ಮಾಧ್ವಸಿದ್ಧಾಂತದ ಪ್ರಮೇಯಗ್ರಂಥಗಳನ್ನೆಲ್ಲ ವ್ಯಾಕರಣ-ತರ್ಕಗಳ ನೆರವಿನಿಂದ ಅಧ್ಯಯನ ಮಾಡಿ, ಶ್ರುತಿಸ್ಮೃತಿಗಳಿಗೆ ಸಮ್ಮತವಾಗುವಂತೆ ಶಾಸ್ತ್ರದ ಶೈಲಿಯಲ್ಲಿಯೇ ಸಂಸ್ಕೃತ ಭಾಷೆಯಲ್ಲಿಯೇ ಪ್ರವಚನಮಾಡಬಲ್ಲ ಪಂಡಿತರು ವ್ಯಾಸಕೂಟದವರೆನಿಸಿಕೊಂಡರು. ಸ್ಥೂಲವಾಗಿ ಸಿದ್ಧಾಂತದ ಪ್ರಮೇಯಗಳನ್ನು ಗುರುಮುಖದಿಂದಲೋ ಗ್ರಂಥಾವಲೋಕನದಿಂದಲೋ ಪಡೆದುಕೊಂಡಿದ್ದರೂ ಪ್ರಮುಖವಾಗಿ ಪುರಾಣಗಳನ್ನೇ ಅವಲಂಬಿಸಿ, ಜಾಣ್ಮೆಯಿಂದ ನಾಣ್ನುಡಿಗಳಿಂದ ಧರ್ಮದ ಆಧಿಕ್ಯವನ್ನು ಪಾಮರರಾದ ಜನಸಾಮಾನ್ಯರಿಗೆ ಅರ್ಥವಾಗುವ ಶೈಲಿಯಲ್ಲಿ ಕನ್ನಡದಲ್ಲಿಯೇ ಪ್ರಚಾರಮಾಡುತ್ತಿದ್ದ ಹರಿದಾಸರು ದಾಸಕೂಟದ ವರೆನಿಸಿಕೊಂಡರು.

ಮಾಧ್ವಸಮಾಜದಲ್ಲಿ ಈ ಒಡಕು (ಅಥವಾ ವ್ಯವಸ್ಥೆಯೆನ್ನಬಹುದು) ಉಂಟಾದದ್ದು ಪುರಂದರದಾಸರ ಕಾಲದಲ್ಲೇ. ಅವರ ದೀಕ್ಷಾಗುರುಗಳಾದ ವ್ಯಾಸತೀರ್ಥರು ಉಭಯಕೂಟಗಳಿಗೂ ಆದ್ಯ ಪ್ರವರ್ತಕರೆನಿಸಿದ್ದರು. ತಮ್ಮ ವಿದ್ಯಾಪ್ರೌಢಿಮೆಯಿಂದಲೂ ಭಗವದ್ಭಕ್ತಿಯಿಂದಲೂ ಎರಡೂ ಗುಂಪಿನವರ ಆದರ ಪಡೆದರು. ವಾದಿರಾಜರು, ವಿಜಯೀಂದ್ರ ತೀರ್ಥರು, ಗೋವಿಂದ ಒಡೆಯರು, ನಾರಾಯಣಯತಿಗಳು ಮುಂತಾದವರು ಅವರ ಪಂಡಿತಶಿಷ್ಯರಾದರೆ ಪುರಂದರದಾಸರು, ಕನಕದಾಸರು, ವೈಕುಂಠದಾಸರು ಮುಂತಾದವರು ಅವರ ಹರಿದಾಸಶಿಷ್ಯರು. ಎರಡೂ ಗುಂಪುಗಳ ನಡುವೆ ಅಷ್ಟಾಗಿ ಸಾಮರಸ್ಯವಿಲ್ಲದಿದ್ದುದು ಸ್ಪಷ್ಟವಾಗುತ್ತದೆ. ವಿಜಯದಾಸರು ತಮ್ಮದೊಂದು

ಸುಳಾದಿಯಲ್ಲಿ ವ್ಯಾಸಕೂಟದವರನ್ನು 'ವೇದವೇದಾಂತರು', 'ಮೇಧಾವಿಗೆ ಅಧಿಕಾರಿಯೆನಿಸುವ ಶ್ರೀಹರಿಯ' ಭಕ್ತರು ಎಂದಷ್ಟೇ ವರ್ಣಿಸಿ ದಾಸಕೂಟದವರನ್ನು "ಮದವೇರಿದ ಕರಿವಿಂಡಿನಂತೆ ದುರುಳರೆದೆಯ ಮೆಟ್ಟಿ ದುಸ್ಸಂಗವನು ಜರಿದು ಹರಿಸರ್ವೋತ್ತಮನೆಂದು ಕೂಗುತಲಿ ಹರಿದಾಡಿ, ಓಡ್ಯಾಡಿ, ಬೀದಿಬೀದಿಯೊಳಗೆ ತಿರುಗುತಲಿಪ್ಪರು ಕರಿಗಳಂದದಲಿ" ಎಂದು ಉಜ್ಜ್ವಲವಾಗಿ ಬಣ್ಣಿಸಿದ್ದಾರೆ.

ದಾಸಕೂಟದ ಪ್ರವರ್ತಕರೆನಿಸಿದ, ಪ್ರಮುಖರೆನಿಸಿದ ಪುರಂದರದಾಸರು ವ್ಯಾಸಕೂಟದವರ ದೃಷ್ಟಿಯಲ್ಲಿ ಮಾಡಿದ ದೊಡ್ಡ ಅಪಚಾರವೆಂದರೆ 'ಸೀಮೆಯೊಳು ಪ್ರಾಕೃತಗೀತೆಯಲಿ' ಮಾಧ್ವಸಿದ್ಧಾಂತದ ಪ್ರಮೇಯಗಳನ್ನು ಹೇಳಿದುದು! ಕನ್ನಡದ ಮೇಲಿನ ಈ ದ್ವೇಷ ನಮ್ಮ ಪಂಡಿತವರ್ಗದಲ್ಲಿ ಮೊನ್ನೆಮೊನ್ನೆಯವರೆಗೂ ಇದ್ದಿತಷ್ಟೆ; ಆ ಕಾಲಕ್ಕೆ ಇದು ಇನ್ನೂ ಬಲಿಷ್ಠವಾಗಿದ್ದಿರಬೇಕು. ದಾಸಕೂಟದವರ ಹೆಮ್ಮೆಯೂ ಕನ್ನಡಾಭಿಮಾನವೇ ಆಗಿದ್ದಿತು. ವಿಜಯದಾಸರು ಪುರಂದರದಾಸರ ಸಾಹಿತ್ಯವನ್ನು "ಮುನಿ ಮಧ್ವಹೃದಯವೇ ಪ್ರಾಕೃತಗ್ರಂಥವಿದು" ಎಂದು ಘೋಷಿಸಿರುವುದನ್ನು ಈ ಹಿನ್ನೆಲೆಯಲ್ಲಿ ಪರಿಶೀಲಿಸಬೇಕು. ಕನ್ನಡದ ಮೇಲಿನ ಈ ಅಭಿಮಾನ ದಾಸಕೂಟದವರಲ್ಲಿ ಉಳಿದುಬಂದಿತು.

ವ್ಯಾಸಕೂಟದವರಂತೆ ಪುರಂದದಾಸರಿಗೆ ದುರ್ವಾದವಿಧ್ವಂಸನವಾಗಲೀ ಸ್ವಮತಸಮರ್ಥನೆ ಯಾಗಲೀ ಮುಖ್ಯ ವಿಚಾರವಾಗಿರಲ್ಲಿಲ್ಲ. ಸಿದ್ಧಾಂತದ ಆಶ್ರಯವೇನೋ ಬೇಕು, ಆದರೆ ಹರಿದಾಸಸಾಹಿತ್ಯದ ಪ್ರಯೋಜನ ಬೇರೊಂದು. ಪುರಂದರದಾಸರು 'ಕವಿಗಳ ಮನದ ತಾಪವನು ಪರಿಹರಿಸಿ, ಕವನಕ್ಕೆ ಸರಿಯಿಲ್ಲೆಂದವನಿಯೊಳಗೆ 'ಮೆರೆದವರು; ಏಕೆಂದರೆ ಭಗವಂತನು 'ಕವಿತಾಜನರ ಪ್ರೀಯ'ನಂತೆ.

೧೦

ಸಂಸ್ಕೃತ ಸಾಹಿತ್ಯಕ್ಕೆ ವಾಲ್ಮೀಕಿ ಹೇಗೋ ಹಾಗೆ ದಾಕ್ಷಿಣಾತ್ಯ ಸಂಗೀತಕ್ಕೆ ಪುರಂದರದಾಸರು ಎಂಬ ಪ್ರಖ್ಯಾತಿಯಿದೆ. ಈ ಖ್ಯಾತಿಯಲ್ಲಿ ವಿಶೇಷವಾದ ಔಚಿತ್ಯವುಂಟು. ಈಗ ಕರ್ಣಾಟಕ ಸಂಗೀತವೆಂದು ಪ್ರಸಿದ್ಧವಾಗಿರುವ ಸಂಪ್ರದಾಯಕ್ಕೆ ಆದ್ಯಪುರುಷರಲ್ಲೊಬ್ಬರು ಅವರು. ಶಾಸ್ತ್ರೀಯ ಸಂಗೀತದ ಪರಂಪರೆಯನ್ನು ಸ್ಥೂಲವಾಗಿ ವಿಚಾರಮಾಡಿದರೆ ಕಾಶ್ಮೀರದ ಶಾರ್ಙ್ಗದೇವ (೧೨೦೦-೧೨೪೭) ಪ್ರಾಚೀನರಲ್ಲಿ ಒಬ್ಬನೆನಿಸಿದ ಪ್ರಮಾಣಪುರುಷ. ರಾಗ ನಿರ್ದೇಶನವಾದದ್ದು ಅವನಿಂದಲೇ; ಲಕ್ಷ್ಯ-ಲಕ್ಷಣ ಸಂಗೀತದ ಪ್ರಚಾರವಾದದ್ದು ಅವನಿಂದಲೇ. ಆ ಕಾಲಕ್ಕೆ ಹೆಸರಿಗೆ ಇನ್ನೂರ ಅರವತ್ತು ಚಿಲ್ಲರೆ ರಾಗಗಳಿದ್ದರೂ ಅವುಗಳಲ್ಲಿ ಪ್ರಾಯಶಃ ಹಾಡಲು ಬಾರದಂಥವೇ ಹೆಚ್ಚು ಇದ್ದುವು. ಶಾರ್ಙ್ಗದೇವನು ಅವುಗಳಲ್ಲಿ ಐವತ್ತೆರಡು ದೇಶ್ಯರಾಗಗಳನ್ನು ರೂಪಕೊಟ್ಟು ನಿಲ್ಲಿಸಿದನು. ತಾಳಪದ್ಧತಿಯನ್ನೂ ಅವನು ಕ್ರಮಪಡಿಸಿ ಹಲವಾರು ನವ್ಯತಾಳಗಳನ್ನು ಸೂಚಿಸಿದನು. ಅವನ ರಾಗಸಂಪ್ರದಾಯದ ಜಾಡನ್ನೇ ಹಿಡಿದು ಮುಂದಿನ ತಲೆಮಾರಿನ ಗೋಪಾಲನಾಯಕನು ಉತ್ತರಾದಿ ಸಂಪ್ರದಾಯದ ಪ್ರವರ್ತಕಪುರುಷನಾದನು. ಕನ್ನಡದವನಾದ ಈತ ಉತ್ತರದೇಶಕ್ಕೆ ಹೋಗಿ ಮಾಲಿಕ್ ಕಾಫರನ ನೆರವಿನಿಂದ ಶಾಸ್ತ್ರೀಯ ಸಂಗೀತವನ್ನು ವ್ಯವಸ್ಥೆಗೊಳಿಸಿದನು; ಅವನ ಮಾರ್ಗವನ್ನು

ಹಿಡಿದ ಅಮೀರ್ ಖುಸ್ರು (೧೨೬೬-೧೩೧೫) ವಿನಿಂದ ಹಿಂದುಸ್ಥಾನಿ ಸಂಗೀತ ವಿಶಿಷ್ಟವಾಗಿ ರೂಪ ತಳೆಯಿತು. ಶಾರ್ಙ್ಗದೇವನ ತಾಳಪದ್ಧತಿಯನ್ನು ಹಿಡಿದು ಸೂಳಾದಿಗಳನ್ನು ರಚಿಸಿ ದಾಕ್ಷಿಣಾತ್ಯ ಸಂಗೀತ ಸಂಪ್ರದಾಯವನ್ನು ಬೆಳೆಸಿದವರು ಶ್ರೀಪಾದರಾಜರು. ಮುಸಲ್ಮಾನರ ಮನೋಧರ್ಮ ಸಂಗೀತದ ಪ್ರಭಾವದ ಮೇಲೆ ರೂಪುಗೊಂಡ ಹಿಂದುಸ್ಥಾನೀ ಸಂಗೀತ 'ಅಪಾತಮಧುರ'ವೆನಿಸಿತು; ಪಂಡಿತರಾದ ಸನ್ಯಾಸಿಯೊಬ್ಬರ ವ್ಯಕ್ತಿತ್ವದ ಪ್ರಭಾವದಿಂದ ದಾಕ್ಷಿಣಾತ್ಯ ಸಂಗೀತ 'ಆಲೋಚನಾಮೃತ' ವಾಯಿತು.

ದಾಕ್ಷಿಣಾತ್ಯ ಸಂಗೀತಕ್ಕೆ ಕರ್ಣಾಟಕಸಂಗೀತವೆಂಬ ಹೆಸರು ಹೇಗೆ ಬಂದಿತೆಂಬುದು ವಿವಾದಗ್ರಸ್ತವಾದ ವಿಚಾರ. ಹದಿನಾಲ್ಕನೆಯ ಶತಮಾನದಲ್ಲಿದ್ದ ಹರಿಪಾಲದೇವ ತನ್ನ 'ಸಂಗೀತ ಸುಧಾಕರ'ವೆಂಬ ಗ್ರಂಥದಲ್ಲಿ 'ಕರ್ಣಾಟಕಂ ದಕ್ಷಿಣೇ ಸ್ಯಾತ್, ಹಿಂದುಸ್ಥಾನೀ ತಥೋತ್ತರೇ' ಎಂದು ಹೇಳಿದ್ದಾನಂತೆ. ಇದು ಅಷ್ಟು ಹಳೆಯದಾದ ಬರಹವಲ್ಲವೆಂದೂ ಇತ್ತೀಚಿನದೆಂದೂ ಹಲವು ವಿದ್ವಾಂಸರ ಎಣಿಕೆ. ಕರ್ಣಾಟಕವೆಂಬ ಪದಕ್ಕೆ ಪುರಂದರದಾಸರು ಕನ್ನಡದಲ್ಲಿ ಮಾಡಿದ ಕೃತಿಗಳೇ ಕಾರಣವೆಂದು ಒಂದು ವಾದವಿದೆ. ಆದರೆ ಹರಿಪಾಲದೇವನ ಮಾತು ಪ್ರಕ್ಷಿಪ್ತವಲ್ಲದಿದ್ದರೆ ಪುರಂದರದಾಸರಿಗೂ ಹಿಂದೆ ಕರ್ಣಾಟಕವೆಂಬ ಹೆಸರನ್ನು ಹೊತ್ತ ಸಂಗೀತ ರೂಪುಗೊಂಡಿತೆಂದು ಹೇಳಬೇಕಾಗುತ್ತದೆ. ಶ್ರೀಪಾದರಾಜರ ಕಾಲಕ್ಕೂ ಹಿಂದೆ ವಿಜಯನಗರ ಸಂಸ್ಥಾನದ ಸಂಸ್ಥಾಪಕರೆಂದು ಪ್ರಸಿದ್ಧರಾದ ಕಂಚಿಯ ವಿದ್ಯಾರಣ್ಯರು (೧೩೨೦-೧೩೮೦) 'ಸಂಗೀತಸಾರ'ವೆಂಬ ಶಾಸ್ತ್ರಗ್ರಂಥವನ್ನು ಬರೆದಿದ್ದರಂತೆ. ಇದು ಮಧುರೆನಾಯಕರ ಮಂತ್ರಿಯಾಗಿದ್ದ ಗೋವಿಂದ ದೀಕ್ಷಿತರು ಬರೆದ 'ಸಂಗೀತಸುಧೆ'ಯಿಂದ ತಿಳಿದುಬರುತ್ತದೆ. ಗ್ರಂಥವೇನೋ ಇಂದು ಪೂರ್ಣವಾಗಿ ಉಪಲಬ್ಧವಿಲ್ಲ. ಆದರೆ ಗೋವಿಂದ ದೀಕ್ಷಿತರು ವಿದ್ಯಾರಣ್ಯರ ಜಾಡನ್ನು ಹಿಡಿದು ಗ್ರಂಥದಲ್ಲಿ ಹದಿನೈದು ಮೇಳಗಳನ್ನು ನಿರ್ಣಯಿಸಿ ಐವತ್ತು ಪ್ರಚುರ ಪ್ರಯೋಗಗಳುಳ್ಳ ರಾಗಗಳನ್ನು ನಿರ್ದೇಶಿಸಿದೆಯೆನ್ನುತ್ತಾರೆ. ಇದನ್ನು ಹೇಳುವಾಗ

"ಕರ್ಣಾಟ ಸಿಂಹಾಸನಭಾಗ್ಯ ವಿದ್ಯಾರಣ್ಯಾಭಿಧ ಶ್ರೀಚರಣಾಗ್ರಣೀಭ್ಯಃ।
ಆರಭ್ಯ ರಾಗಾನ್ ಪ್ರಚುರ ಪ್ರಯೋಗಾನ್ ಪಂಚಾಶತಂ ಚ ಕಲಯೇ ಷಡಂಗಾನ್॥"

ಎಂದಿದ್ದಾರೆ. ಇಲ್ಲಿ ಕರ್ಣಾಟಕ ಶಬ್ದದ ಪ್ರಯೋಗ ಗಮನಾರ್ಹವಾಗಿದೆ. ಗೋವಿಂದ ದೀಕ್ಷಿತರ ಮನೆತನವೂ ಮೂಲದಲ್ಲಿ ಕನ್ನಡದ್ದೇ. 'ಕನ್ನಡ ರಾಜ್ಯರಮಾರಮಣ'ರೆಂದು ಪ್ರಖ್ಯಾತರಾದ ವಿಜಯನಗರದ ಅರಸರ ಆಳ್ವಿಕೆ ದಕ್ಷಿಣ ದೇಶದ ಬಹುಭಾಗದಲ್ಲಿ ಬೆಳೆದಂದು, ಆ ಪ್ರದೇಶದಲ್ಲಿ ಅದರ ಸಂಸ್ಥಾಪಕರಿಂದಲೇ ಪ್ರವರ್ತಿತವಾದ ಸಂಗೀತ ಸಂಪ್ರದಾಯವನ್ನು 'ಕರ್ಣಾಟಕ'ವೆಂದೇ ಕರೆದದ್ದು ಆಶ್ಚರ್ಯವೇನಲ್ಲ. ಅಷ್ಟಲ್ಲದೆ, ಕನ್ನಡಿಗ ಗೋವಿಂದ ದೀಕ್ಷಿತರ ಮಗ ವೇಂಕಟಮಖಿ (೧೬೬೦ರ ಸುಮಾರು) ತನ್ನ ತಂದೆಯ ಸೂಚನೆಯನ್ನು ಅನುಸರಿಸಿ ಎಪ್ಪತ್ತೆರಡು ಮೇಳರಾಗಗಳನ್ನೂ ಅವುಗಳಿಂದಾದ ಜನ್ಯರಾಗಗಳನ್ನೂ ತನ್ನ 'ಚತುರ್ದಂಡಿ ಪ್ರಕಾಶಿಕೆ'ಯಲ್ಲಿ ನಿರ್ದೇಶಿಸಿದ್ದಾನೆ. ನಮ್ಮ ಸಂಗೀತ ಪದ್ಧತಿಗೆ ಈ ಗ್ರಂಥವೇ ಪ್ರಮುಖವಾಗಿರುವ ಪ್ರಮಾಣಗ್ರಂಥ.

ಹೀಗೆ ದಾಕ್ಷಿಣಾತ್ಯ ಸಂಗೀತದ ರಾಗನಿರ್ಣಯ ಕನ್ನಡಿಗರಾದ ವಿದ್ಯಾರಣ್ಯ, ಗೋವಿಂದ ದೀಕ್ಷಿತ ಮತ್ತು ವೇಂಕಟಮಖಿ ಇವರಿಂದಲೂ, ತಾಳ ಪ್ರಯೋಗಗಳು ಕನ್ನಡಿಗರೇ ಆದ ಶ್ರೀಪಾದರಾಜರು ಮತ್ತು ಅವರ ಹಿಂದಿನ, ಮುಂದಿನ ಹರಿದಾಸರಿಂದಲೂ ಆಯಿತಾಗಿ ಕರ್ಣಾಟಕ ಸಂಗೀತಕ್ಕೆ ಅಂಕುರಾರ್ಪಣದಲ್ಲೇ ಕನ್ನಡಿಗರ ಕೊಡುಗೆ ಸಿದ್ಧವಾಯಿತು. ಮೇಲಾಗಿ, ತೆಲುಗು ಕನ್ನಡವೆರಡೂ ಕರ್ಣಾಟಕ ಶಬ್ದದಲ್ಲಿ ಅಂತರ್ಗತವಾಗಿದ್ದ ಕಾಲ ಅದು.

ಹದಿಮೂರನೆಯ ಶತಮಾನದಲ್ಲಿದ್ದ ಪಾಲ್ಕುರಿಕೆ ಸೋಮನಾಥನು ಆಂಧ್ರದೇಶದವನಾದರೂ ಕನ್ನಡದೇಶದಲ್ಲಿ ಬೆಳೆದ ವೀರಶೈವಮತದವನು; ಕನ್ನಡದಲ್ಲೂ, ತೆಲುಗಿನಲ್ಲೂ ಗ್ರಂಥಗಳನ್ನು ಬರೆದಿದ್ದಾನೆ. ಇವನು ತನ್ನ ತೆಲುಗು ಭಾಷೆಯ 'ಪಂಡಿತಾರಾಧ್ಯ ಚರಿತ್ರೆ'ಯಲ್ಲಿ ನೂರೆಂಟು ರಾಗಗಳನ್ನು ಹೇಳಿದ್ದಾನೆ. ಅವುಗಳಲ್ಲಿ ಇಪ್ಪತ್ತಕ್ಕೆ ಮೀರಿ ರಾಗಗಳನ್ನು ಆಯ್ದುಕೊಂಡು ತಾಳ್ಲಪಾಕದ ಅಣ್ಣಮಾಚಾರ್ಯರು (೧೪೦೮-೧೫೦೩) ತಮ್ಮ ಕೃತಿಗಳನ್ನು ರಚಿಸಿದರಂತೆ. ಇವರಿಗೆ ಈ ಸ್ಫೂರ್ತಿಯನ್ನು ಒದಗಿಸಿಕೊಟ್ಟವರು ಶ್ರೀಪಾದರಾಜರಂತೆ. ಹದಿನೈದನೆಯ ಶತಮಾನದ ಮಧ್ಯಭಾಗದಲ್ಲೇ ವಿಜಯನಗರದ ಇಮ್ಮಡಿದೇವರಾಯನ ಸಾಮಂತನಾಗಿದ್ದ ಸಾಳುವ ಗೋಪೇಂದ್ರ ತಿಪ್ಪಭೂಪಾಲವೆಂಬುವನು 'ತಾಳದೀಪಿಕೆ'ಯೊಂದನ್ನು ರಚಿಸಿದ್ದನು. ಈ ಅರಸುಮನೆತನದವರೇ ತಾಳ್ಲಪಾಕದ ಅಣ್ಣಾಮಚಾರ್ಯರಿಗೆ ಆಶ್ರಯವಿತ್ತಿದ್ದವರು. ಹದಿನಾರನೇ ಶತಮಾನದಲ್ಲಿ, ಕೃಷ್ಣದೇವರಾಯಮಹಾರಾಯನ ಆಸ್ಥಾನ ಕರಣಿಕನಾಗಿದ್ದ ಭಂಡಾರ ಲಕ್ಷ್ಮೀನಾರಾಯಣ ಪಂಡಿತನೆಂಬಾತ 'ಸಂಗೀತ ಸೂರ್ಯೋದಯ'ವೆಂಬ ಶಾಸ್ತ್ರಗ್ರಂಥವನ್ನು ಬರೆದಿದ್ದನು; ಅದರ ಹಸ್ತಪ್ರತಿ ಮದರಾಸು ತಾಳಪತ್ರ ಗ್ರಂಥಾಲಯದಲ್ಲಿದೆ. ಈತ ಅಂತಃಪುರದಲ್ಲಿ ಹೆಣ್ಣುಮಕ್ಕಳಿಗೆ ಸಂಗೀತವನ್ನೂ ನೃತ್ಯವನ್ನೂ ಕಲಿಸುತ್ತಿದ್ದನಂತೆ. ಅಂದರೆ ಆ ಕಾಲದಲ್ಲಿ ಸಂಗೀತ ಶಾಸ್ತ್ರದ ವಿಚಾರವಾಗಿ ವಿಪುಲವಾದ ವ್ಯವಸಾಯ ನಡೆಯುತ್ತಿದ್ದಿತು; ಸ್ಪಷ್ಟವಾದ ಸಂಪ್ರದಾಯವೊಂದನ್ನು ನಿರ್ಮಿಸುವ ಕೆಲಸ ಸಾಗುತ್ತಿದ್ದಿತು.

ಇಂಥ ಪರ್ವಕಾಲದಲ್ಲಿ, ದಾಕ್ಷಿಣಾತ್ಯಸಂಗೀತ ರೂಪತಳೆಯುತ್ತಿದ್ದ ಕಾಲದಲ್ಲಿ, ಅದಕ್ಕೆ ನಿರ್ದಿಷ್ಟವಾದ ಕಟ್ಟಡವನ್ನು ಕಟ್ಟಿದವರು ಪುರಂದರದಾಸರು. ಇವರು ಲಕ್ಷ್ಯ-ಲಕ್ಷಣ ಗೀತೆಗಳಿಂದಲೇ ತುಂಬಿದ ಸಂಗೀತ ಪ್ರಪಂಚದಲ್ಲಿ ಒಬ್ಬರೇ ಸಾವಿರಾರು ಕೃತಿಗಳನ್ನು ಮಾಡಿ ರಸಿಕರ ಮುಂದಿಟ್ಟರು, ಅವುಗಳನ್ನು ರಾಗ-ತಾಳಗಳ ಚೌಕಟ್ಟಿನಲ್ಲಿ ತಾವೇ ಹಾಡಿ ತೋರಿಸಿದರು. ಅತಿ ಸರಳವಾದ ಗೀತಗಳಿಂದ ಅತಿ ಕ್ಲಿಷ್ಟವಾದ ಸುಳಾದಿಗಳವರೆಗೆ ಎಲ್ಲ ಬಗೆಯ ಕೃತಿಗಳನ್ನೂ ಆಗ ಪ್ರಚುರವಾಗಿದ್ದ ಎಲ್ಲ ರಾಗಗಳಲ್ಲೂ ಹೆಣೆದು ದಾಕ್ಷಿಣಾತ್ಯ ಸಂಗೀತಕ್ಕೆ ರೀತಿಯನ್ನೂ ಮಾತನ್ನೂ ಒದಗಿಸಿಕೊಟ್ಟರು. ಭಕ್ತಿಪ್ರಧಾನವಾದ ಇವರ ಸಾಹಿತ್ಯದ ಸೊಬಗು, ಸಂಗೀತದ ಲಾವಣ್ಯಗಳು, ಮುಂದೆ ಬಂದ ಕ್ಷೇತ್ರಯ್ಯ, ತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರು ಮುಂತಾದ ವಾಗ್ಗೇಯಕಾರರಿಗೆ ಸ್ಫೂರ್ತಿಯನ್ನು ಒದಗಿಸಿದವು. ಅಷ್ಟು ಮಾತ್ರವಲ್ಲ, ನಮಗೆ ತಿಳಿದಿರುವ ವಾಗ್ಗೇಯಕಾರರಲ್ಲಿ ಶ್ರೀಪಾದರಾಜರನ್ನೂ, ತಾಳ್ಲಪಾಕದವರನ್ನೂ ಬಿಟ್ಟರೆ ಪುರಂದರದಾಸರೇ ಅತಿ ಪ್ರಾಚೀನರು. ಸಂಗೀತದ ಸಂಸಾರದಲ್ಲಂತೂ ಪುರಂದರದಾಸರೇ ಆದ್ಯರು, ಮಾರ್ಗದರ್ಶಿಗಳು; ಅವರ ಕೊಡುಗೆ ವಿಪುಲವಾಗಿರುವುದಷ್ಟೇ ಅಲ್ಲ, ವಿಶಿಷ್ಟವೂ ಆಗಿದೆ. ತಾಳದ ಬಿಗಿ, ರಾಗದ ಸೊಗಸು, ಮಾತಿನ ಮೋಡಿ ಇವೆಲ್ಲ ಅವರ

ಕೃತಿಗಳ ವೈಶಿಷ್ಟ್ಯ. ಎಂತಲೇ ಅವರನ್ನು ಕರ್ಣಾಟಕ ಸಂಗೀತದ ಪಿತಾಮಹರೆಂದು ವ್ಯವಹರಿಸುವುದು ಸಾರ್ಥಕವಾಗಿದೆ. ಕರ್ಣಾಟಕಸಂಗೀತದ ಇಂದಿನ ಸ್ವರೂಪವನ್ನು ಮೂಡಿಸಿದವರೇ ಅವರು.

ತ್ಯಾಗರಾಜರು (೧೭೬೭-೧೮೪೭) ಬಾಲ್ಯದಲ್ಲಿ ತಮ್ಮ ತಂದೆ ರಾಮಬ್ರಹ್ಮರು ದೇವತಾರ್ಚನೆಮಾಡುತ್ತಿದ್ದಾಗ ಸಮೀಪದಲ್ಲೇ ಇರುತ್ತಿದ್ದು ಅವರು ಹೇಳುತ್ತಿದ್ದ ಪುರಂದರದಾಸರ ಕೀರ್ತನೆಗಳನ್ನು ತಾವೂ ಕಲಿತು ಹಾಡುತ್ತಿದ್ದರಂತೆ. ತ್ಯಾಗರಾಜರ ರಚನೆಗಳಿಗೆ ಪುರಂದರದಾಸರ ಕೃತಿಗಳೇ ಮಾರ್ಗದರ್ಶಕವಾಗಿದ್ದುವೆಂಬುದು ಎಲ್ಲರೂ ಒಪ್ಪಿರುವ ಮಾತು. ತ್ಯಾಗರಾಜರ ಶತವಾರ್ಷಿಕೋತ್ಸವ ಸಂದರ್ಭದಲ್ಲಿ ರಾಜಮಹೇಂದ್ರಿಯ ಆಂಧ್ರಗಾನಕಳಾಪರಿಷತ್ತಿನವರು ಪ್ರಕಟಿಸಿದ ಸಂಚಿಕೆಯಲ್ಲಿ ಸಂಪಾದಕರಾದ ವಿಸ್ಸಾ ಅಪ್ಪಾರಾಯರು 'ಕರ್ಣಾಟಕ ಸಂಗೀತಕ್ಕೆ ಮೂಲಪುರುಷರಾದ ಶ್ರೀ ಪುರಂದರದಾಸ ಸ್ವಾಮಿಗಳು ಸಂಗೀತ ವಿದ್ಯೆಗೆ ಸ್ಥಿರವಾದ ಬುನಾದಿಯನ್ನು ಹಾಕಿದರು, ಈ ಬುನಾದಿಯ ಮೇಲೆ ತ್ಯಾಗರಾಜ ಸ್ವಾಮಿಗಳು ಪ್ರಸಿದ್ಧರಾಗಗಳಲ್ಲೂ ಅಪೂರ್ವರಾಗಗಳಲ್ಲೂ, ಅನೇಕ ವಿಧವಾದ ಅಂದವಾದ ಸಂಚಾರಗಳುಳ್ಳ ಅನೇಕ ಕೃತಿಗಳನ್ನು ಮಾಡಿ ವಿಚಿತ್ರವಾದ ದೊಡ್ಡದೊಂದು ಭವನವನ್ನು ನಿರ್ಮಿಸಿದರು' (ಪುಟ ೩೦-೩೧) ಎಂದು ಬರೆದಿದ್ದಾರೆ. ಪುರಂದರದಾಸರ ಪದ್ಧತಿಯನ್ನೇ ತ್ಯಾಗರಾಜರೂ ಸಂಗೀತ, ಸಾಹಿತ್ಯ ಎರಡರಲ್ಲೂ ಅನುಸರಿಸಿದ್ದಾರೆ ಎಂಬುದು ಇಬ್ಬರ ಕೃತಿಗಳನ್ನು ವಿಮರ್ಶಿಸಿದರೆ ಸ್ಪಷ್ಟವಾಗುತ್ತದೆ. ತ್ಯಾಗರಾಜರ ಮನೆತನ ಭಾಗವತರದ್ದೇ; ಹರಿದಾಸರಂತೆಯೇ ಕೀರ್ತನೆಮಾಡಿಕೊಂಡು ಉಂಛವೃತ್ತಿಯಿಂದ ಬಾಳುವ ಪದ್ಧತಿ ತ್ಯಾಗರಾಜರವರೆಗೂ ಬಂದಿದ್ದಿತು. ಅವರ ಪೂರ್ವಿಕರ ಊರಾದ ಕಾಕರ್ಲವೆಂಬುದು ವಿಜಯನಗರ ಸಾಮ್ರಾಜ್ಯದ ಒಳಗೆ ಇದ್ದು ಹಂಪಿಗೆ ಸುಮಾರು ನೂರೈವತ್ತು ಮೈಲಿಗಳಷ್ಟು ದೂರದಲ್ಲಿದ್ದಿತು. ಅವರ ಮನೆತನದ ಮೇಲೆ ಪುರಂದರದಾಸರ ಪ್ರಭಾವ ಬಿದ್ದುದು ಆಶ್ಚರ್ಯವೇನಲ್ಲ.

ಪುರಂದರದಾಸರಿಗೆ ಸಂಗೀತದಲ್ಲಿ ಪ್ರವೇಶ ಹೇಗೆ ಆಯಿತೆಂಬ ವಿವರ ಅವರ ಕೃತಿಗಳಲ್ಲಾಗಲಿ, ಮುಂದಿನ ಹರಿದಾಸರ ಕೃತಿಗಳಲ್ಲಾಗಲಿ ದೊರೆಯುವುದಿಲ್ಲ. ವ್ಯಾಸತೀರ್ಥರಲ್ಲಿ ಹರಿದಾಸದೀಕ್ಷೆ ಕೊಳ್ಳುವ ಮುನ್ನ ಅವರಿಗೆ ಸಂಗೀತದ ಪರಿಚಯವಾಗಲಿ, ಕವಿತೆಯ ಗೀಳಾಗಲಿ ಇದ್ದಿತೆಂಬ ವಿಚಾರವೂ ಸ್ಪಷ್ಟವಾಗಿಲ್ಲ. ಆದರೆ ಅವರ ಕೀರ್ತನೆಗಳಿಂದ ಅವರಿಗೆ ಸಂಗೀತಕಲೆಯಲ್ಲಿ ವಿದ್ವತ್ತು ಅಪಾರವಾಗಿರುವುದು ಧ್ವನಿತವಾಗುತ್ತದೆ. ರಸಪೋಷಣೆಗಾಗಿ ಆಯ್ದುಕೊಂಡಿರುವ ರಾಗ, ರಾಗಪೋಷಣೆಗಾಗಿ ಉಪಯೋಗಿಸಿರುವ ಮಾತು, ಮಾತನ್ನು ಒಪ್ಪಮಾಡಲು ಇರಿಸಿದ ತಾಳಬಂಧ - ಇವು ಅವರ ಕೃತಿಗಳಲ್ಲಿ ತಟ್ಟನೆ ಕಾಣುತ್ತವೆ. ಹಲವೆಡೆ ಸಂಗೀತವಾದ್ಯಗಳನ್ನು ಹೆಸರಿಸಿದ್ದಾರೆ; ಹಲವಾರು ರಾಗಗಳನ್ನು ಹೇಳಿದ್ದಾರೆ; ನಾಟ್ಯಕ್ರಿಯೆಯ ತಾಳಾಂಗಗಳನ್ನು ತಿಳಿಸಿದ್ದಾರೆ; ಭಗವಂತನನ್ನು ಗಾನಲೋಲನೆಂದಿದ್ದಾರೆ. ಸಂಗೀತದ ಮೇಲೆ ಅವರಿಗೆ ತುಂಬಾ ಅಭಿಮಾನವಿದ್ದುದು, ಅದರಲ್ಲಿ ವಿಶೇಷ ಪರಿಶ್ರಮವಿದ್ದುದು ನಿಸ್ಸಂದೇಹವಾಗಿದೆ. ಅವರಿಗೆ ಪರಿವರ್ತನೆ ಒದಗಿದಂದು ಆವೇಶದ ಭರದಲ್ಲಿ ಸಂಗೀತ ಪ್ರವೃತ್ತಿ ಆರಂಭವಾಯಿತೆನ್ನಬಹುದು. ವಾಲ್ಮೀಕಿಯ ಶೋಕದಿಂದ ಶ್ಲೋಕವಾಗಿ ಆದಿಕಾವ್ಯ ಫಲಿಸಲಿಲ್ಲವೆ?

ಸಂಗೀತದ ಪರಿಕರಗಳನ್ನು ವಿವರಿಸುತ್ತ ಅವರು ಮುಖಾರಿರಾಗದಲ್ಲಿ ಹೇಳಿರುವುದನ್ನು

ನೋಡಿದರೆ ಸಭಾಗಾನ ಕಳೆಕಟ್ಟುವುದು ಹೇಗೆಂಬುದು ಅರ್ಥವಾಗುತ್ತದೆ. "ತಾಳಬೇಕು; ತಕ್ಕ ಮೇಳ ಬೇಕು; ಗಾನವನ್ನು ಕೇಳಬೇಕೆಂಬುವರಿಗೆ ಶಾಂತವೇಳೆ ಬೇಕು; ಯತಿಪ್ರಾಸವಿರಬೇಕು; ಗತಿಗೆ ನಿಲ್ಲಿಸಬೇಕು; ಗಳಶುದ್ಧಿಯಿರಬೇಕು; ತಿಳಿದು ಪೇಳಲು ಬೇಕು; ಕಳವಳ ಬಿಡಬೇಕು; ಕಳೆಮುಖವಿರಬೇಕು; ಅರಿತವರಿರಬೇಕು; ಹರುಷ ಹೆಚ್ಚಲಿಬೇಕು" ಕಡೆಯ ಎರಡು ವಿವರಗಳನ್ನು ನೋಡಿದರೆ ಅವರ ಪ್ರೌಢಿಮೆ ತಿಳಿಯುತ್ತದೆ. ಅರಿಯದವರಿಗೆ ಸಂಗೀತವನ್ನು ಉಣಿಸಲೆಳಸುವುದು ವ್ಯರ್ಥ. ಅವರೇ ಇನ್ನೊಂದು ಪದದಲ್ಲಿ ಹೇಳಿದ್ದಾರೆ - "ಕೋಣಗೆ ವೀಣಾಗಾನವಿದೇತಕೆ?"

ಶಂಕರಾಭರಣದ 'ನಳಿನಜಾಂಡ ತಲೆಯ ತೂಗಿ ಮೋಹಿಸುತಿರಲು' ಎಂದು ಆರಂಭವಾಗುವ ಕೀರ್ತನೆಯ ಮೂರನೇ ಚರಣದಲ್ಲಿ ಹಲವಾರು ರಾಗಗಳನ್ನು ಹೆಸರಿಸಿದ್ದಾರೆ. "ಮಾರವಿ, ದೇಶಿ, ಗುರ್ಜರಿ, ಭೈರವಿ, ಗೌಳಿ, ನಾಟಿ, ಸಾವೇರಿ, ಆಹಿರಿ, ಪೂರ್ವಿ, ಕಾಂಬೋದಿ, ಪಾಡಿ, ದೇಶಾಕ್ಷಿ, ಶಂಕರಾಭರಣ, ಮಾಳವ, ವರಾಳಿ, ಕಲ್ಯಾಣಿ, ತೋಡಿ, ಮುಖಾರಿ, ಯರಳಿ (?), ವಸಂತ, ಬೌಳಿ, ಧನ್ಯಾಸಿ, ಸೌರಾಷ್ಟ್ರ, ಗುಂಡಕ್ರಿಯ, ರಾಮಕ್ರಿಯ, ಮೇಘ, ಕುರಂಜಿ" ಈ ರಾಗಗಳನ್ನು ಕೃಷ್ಣ ತನ್ನ ಕೊಳಲಿನಲ್ಲಿ ಊದುತ್ತಿರಲು ಊರ ಜನರೆಲ್ಲ ಮೈಮರೆತರಂತೆ, ಪ್ರಾಣಿಗಳು ಜಾತಿವೈರವನ್ನು ಮರೆತುವಂತೆ, ಕಲ್ಲು ಕರಗಿ ನೀರಾಗಿ ಹರಿಯಿತಂತೆ.

ಅವರಿಗೆ ತಾಳದ ಮೇಲಿದ್ದ ಪ್ರಭುತ್ವ, ಅವರ ಲಯಜ್ಞಾನ ಮತ್ತು ಭರತನಾಟ್ಯದ ಪರಿಚಯಗಳನ್ನು ತಿಳಿಸಲು ಆರಭಿರಾಗದ ಈ ಕೀರ್ತನೆ ಸಾಕು-

ಆಡಿದನೋ ರಂಗ, ಅದ್ಭುತದಿಂದಲಿ
ಕಾಳಿಂಗನ ಫಣೆಯಲಿ ||ಪ||

ಬೇಡಿದವರಿಗೆ ಬೇಡಿದ ವರಗಳ
ನೀಡುತಲೀ ದಯಮಾಡುತಲೀ ನಲಿ-
ದಾಡುತಲೀ ಬೆಣ್ಣೆ ಬೇಡುತಲೀ ||ಅ||
ಅಂಬುರುಹೋದ್ಭವ ಅಖಿಳಸುರರು ಕೂಡಿ
ಅಂಬರದಲಿ ನಿಂತು ಅವರ್ ಸ್ತುತಿಸೆ
ರಂಭೆ ಊರ್ವಶಿ ರಮಣಿಯರೆಲ್ಲರು
ಚಂದದಿಂ ಭರತನಾಟ್ಯವ ನಟಿಸೆ

ಝುಂತಟ ತಕದಿಮಿ ತಧಿಗಿಣ ತೋಂ ಎಂದು
ಝುಂಪೆತಾಳದಿ ತುಂಬುರನೊಪ್ಪಿಸೆ
ಧಾಮ ಪಪಾ ಧಸರೀ ಎಂದು ಧ್ವನಿಯಿಂದ
ನಾರದ ತುಂಬುರರ್ ಗಾನವ ಮಾಡಲು
ನಂದಿಯು ಮದ್ದಲೆ ಚಂದದಿ ಹಾಕಲು ||೧|| ಇತ್ಯಾದಿ

ರೂಪಕತಾಳದ ವಿನ್ಯಾಸಕ್ಕೆ ಇದಕ್ಕಿಂತ ಸೊಗಸಾದ ನಿದರ್ಶನ ಎಲ್ಲಿ ಸಿಕ್ಕೀತು? ಝಂಪೆತಾಳ ಅವರು ಬಹುವಾಗಿ ಮೆಚ್ಚಿಕೊಂಡ ತಾಳ.

ಶಾಸ್ತ್ರೀಯ ಸಂಗೀತದಲ್ಲಿ ಇಷ್ಟು ನಿಷ್ಣಾತರಾಗಿದ್ದ ಪುರಂದರದಾಸರು ವಿಪುಲವಾದ ಸಂಗೀತಸಾಹಿತ್ಯವನ್ನು ಸಿದ್ಧಮಾಡಿಕೊಟ್ಟರು. ಕೃತಿಸಂಖ್ಯೆಯೊಂದೇ ಅವರ ಹೆಗ್ಗಳಿಕೆಯನ್ನು ಉಳಿಸಲು ಸಾಕು; ಆದರೆ ಅದರಲ್ಲಿ ವೈಶಿಷ್ಟ್ಯವನ್ನೂ ಮೂಡಿಸಿದ್ದಾರೆ. ಲಕ್ಷ್ಯಗೀತೆಗಳನ್ನೂ, ಚೌಕ-ತಾನ ವರ್ಣಗಳನ್ನೂ ಸುಳಾದಿಗಳನ್ನೂ, ಉಗಾಭೋಗವನ್ನೂ, ತಾಳಾಲಂಕಾರಗಳನ್ನೂ, ಪದಗಳನ್ನೂ ರಚಿಸಿ ಸಂಗೀತದ ಎಲ್ಲ ಮುಖಗಳಲ್ಲಿಯೂ ವ್ಯವಸಾಯ ಮಾಡಿದ್ದಾರೆ. ಅವರ ಕಾಲಕ್ಕೆ ಮುಂಚೆ ಲಕ್ಷ್ಯ-ಲಕ್ಷಣಗೀತೆಗಳೆಲ್ಲ ಸಂಸತಭಾಷೆಯಲ್ಲಿಯೇ ಇರುವುದು ವಾಡಿಕೆಯಾಗಿದ್ದಿತು. ಪುರಂದರದಾಸರು ಈ ಕೆಲಸಕ್ಕೆ ಕನ್ನಡವನ್ನೇ ಬಳಸಿಕೊಂಡರು. ಅವರು ಲಕ್ಷಣ ಗೀತಗಳನ್ನು ಬರೆದಿದ್ದರಂತೆ; ಆದರೆ ಅವು ಇಂದು ಉಪಲಬ್ಧವಿಲ್ಲ. ಲಕ್ಷ್ಯ ಗೀತಗಳೇನೋ ಕೆಲವು ಉಳಿದಿವೆ. ಅವರ ಗೀತಗಳನ್ನು ತುಳಜಾಜಿಯ 'ಸಂಗೀತಸಾರಾಮೃತ'ವೇ ಮುಂತಾದ ಲಕ್ಷಣಗ್ರಂಥಗಳಲ್ಲಿ ಕೂಡ ಉಲ್ಲೇಖಿಸಿದ್ದಾರೆ. ಹೀಗೆ ಅವರು ಲಕ್ಷ್ಯ-ಲಕ್ಷಣಗೀತಗಳನ್ನು ರಚಿಸಿದರೆಂಬ ಕಾರಣದಿಂದ ಕರ್ಣಾಟಕ ಸಂಗೀತ ನಿರ್ದಿಷ್ಟವಾದ ಒಂದು ಸಂಪ್ರದಾಯವನ್ನು ಪಡೆದುಕೊಳ್ಳಲು ಸಾಧ್ಯವಾಯಿತು. ಈ ಸಂದರ್ಭದಲ್ಲಿ ಪುರಂದರದಾಸರಂತೆಯೇ ತಾಳ್ಲಪಾಕದ ಅಣ್ಣಮಾಚಾರ್ಯರೂ ಸಂಸತವನ್ನು ಬಿಟ್ಟು ದೇಶಭಾಷೆಯಲ್ಲಿಯೇ (ತೆಲುಗಿನಲ್ಲಿ) ಲಕ್ಷ್ಯ-ಲಕ್ಷಣ ಸಂಗೀತವನ್ನು ರಚಿಸಿದರೆಂದು ಹೇಳಬೇಕು.

ಆದರೆ ಉಳಿದ ವಾಗ್ಗೇಯಕಾರರಂತೆ ಸಂಗೀತಕ್ಕಾಗಿಯೇ ಸಾಹಿತ್ಯ ಸಿದ್ಧಮಾಡುವ ಬಯಕೆಯಾಗಲೀ ಹವ್ಯಾಸವಾಗಲೀ ಪುರಂದರದಾಸರಿಗಿರಲಿಲ್ಲ. ಅವರ ಪಾಲಿಗೆ ಸಂಗೀತ ಒಂದು ಸಾಧನೆ ಮಾತ್ರ; ಅದರ ಗುರಿ ಭಗವತ್ಪ್ರೀತಿ. ಅದಕ್ಕಾಗಿಯೇ ಅವರ ಕೃತಿಗಳೆಲ್ಲ ಭಗವನ್ನಾಮ ಸಂಕೀರ್ತನರೂಪವನ್ನು ತಳೆದವು. ತಾಳ, ತಕ್ಕ ಮೇಳ ಮುಂತಾದ ಪರಿಕರಗಳೆಲ್ಲ ಸಂಗೀತಕ್ಕೆ ಅಗತ್ಯವೇನೋ ನಿಜ; ಆದರೆ ಅಷ್ಟಿದ್ದರೆ ಸಂಗೀತ ಸಂಪನ್ನವಾಯಿತೆಂದು ಭಾವಿಸಬಾರದು. ಮುಖ್ಯವಾಗಿ ಮನೋಧರ್ಮದಲ್ಲಿ ಭಗವದ್ಭಕ್ತಿಯ ಆವೇಶವಿರಬೇಕು. ಇಲ್ಲದಿದ್ದರೆ ಆ ಗಾನ ಬರಿಯ ಅರಚಾಟ, ದಾಸರ ಮಾತಿನಲ್ಲೇ ಹೇಳುವುದಾದರೆ 'ಡಂಭಕದ ಕೂಗಾಟ'. ಅದರಿಂದ ಸತ್ವಶುದ್ಧಿಯೂ ಆಗದು, ಭಗವತ್ಪ್ರೀತಿಯೂ ಆಗದು. 'ಭಾವಶುದ್ಧಿಯಿಲ್ಲದವನ ದೇವತಾರ್ಚನೆಯಂತೆ'. ಕಲ್ಯಾಣಿರಾಗದ ಒಂದು ಕೀರ್ತನೆ ಈ ವಿಚಾರವನ್ನೇ ಅಧಿಕರಿಸಿ "ಕೇಳನೋ, ಹರಿ ತಾಳನೋ।। ತಾಳಮೇಳಗಳಿದ್ದು ಪ್ರೇಮವಿಲ್ಲದ ಗಾನ।।" ಎಂದು ಆರಂಭವಾಗುತ್ತದೆ. ಗಾಯನದಿಂದ ಮನೋಧರ್ಮ ಮಧುರವಾಗಿ ಜೀವಿತಸ್ರೋತ ಭಗವಂತನೆಡೆಗೆ ಬಾಗಿ ಹರಿದರೆ ಮಾತ್ರ ಸಂಗೀತ ಕೃತಾರ್ಥವಾಗುತ್ತದೆ. ಭಕ್ತಿಗೆ ಸಂಗೀತ ಗೌಣವಾಗಿರಬೇಕಲ್ಲದೆ, ಸಂಗೀತಕ್ಕೆ ಭಕ್ತಿ ಗೌಣವಾಗಿರಬಾರದು. ಭಗವದಾರಾಧನೆಗೆ ನಾದೋಪಾಸನೆ ಅನುವಾಗಿರಬೇಕೆಂಬ ನಿಲುವು ಹೊಸತೇನಲ್ಲ. ಭಕ್ತಿಯೇ ಮೈವೆತ್ತುಬಂದ ನಾರದರನ್ನು ನಾವು ಗಾಯಕರನ್ನಾಗಿ ಗ್ರಹಿಸಿದ್ದೇವಷ್ಟೆ. ಪುರಂದರದಾಸರು ನಾರದರ ಅವತಾರವೆಂದೇ ಭಾವುಕಜನರ ಶ್ರದ್ಧೆ. ಸಾವಿರಾರು ಲಕ್ಷ್ಯ-ಲಕ್ಷಣಕೃತಿಗಳನ್ನು ಅವರು ರಚಿಸಿದ್ದರೂ ಅವರನ್ನು ಬರಿಯವಾಗ್ಗೇಯ ಕಾರರೆಂದು ವ್ಯವಹರಿಸದೆ ಹರಿದಾಸರೆಂದೇ ನಾವು ಸನ್ಮಾನಿಸುತ್ತೇವೆ. ಅವರ ಭಕ್ತಿಯು ಸಂಗೀತದಲ್ಲಿ ಅಭಿವ್ಯಕ್ತಿಯನ್ನು ಪಡೆದುಬಂದಿತು; ಭಕ್ತಿ ಮುಖ್ಯ, ಸಂಗೀತ ಗೌಣ. ಅವರ ಪ್ರಭಾವ ಪ್ರತಿಫಲಿಸಿ ಮುಂದೆ ಬಂದ ತ್ಯಾಗರಾಜರೂ 'ಸಂಗೀತಜ್ಞಾನಮು ಭಕ್ತಿ ವಿನಾ ಸನ್ಮಾರ್ಗಮು ಗಲದೇ' ಎಂದರು.

ಆದರೆ ಸಂಗೀತಪ್ರಪಂಚದಲ್ಲಿ ಅವರು ಮಾಡಿದ ವ್ಯವಸಾಯ ಅಪೂರ್ವವಾದುದು, ಅದ್ಭುತವಾದುದು. ಸಂಗೀತಕ್ಕೆ ಒಂದು ಸಂಪ್ರದಾಯವನ್ನು ಕೊಟ್ಟವರು ಅವರು ಎಂದರೆ ಅತಿಶಯೋಕ್ತಿಯಾಗದು. ಅವರ ಕಾಲಕ್ಕೆ ಮುಂಚೆ ಖರಹರಪ್ರಿಯರಾಗವನ್ನು ಶುದ್ಧ ರಾಗವನ್ನಾಗಿ ಗ್ರಹಿಸುವ ವಾಡಿಕೆಯಿದ್ದಿತು: ಷಡ್ಜಪಂಚಮಮಧ್ಯಮಗಳ ನಡುವೆ ಚತುಃಶ್ರುತಿಯ ಅಂತರವನ್ನಿಟ್ಟು ಈ ರಾಗವನ್ನು ನಿರೂಪಿಸುತ್ತಿದ್ದರು. ರಾಗಸಂಮೂರ್ಛನೆಯು ಷಡ್ಜದಿಂದ ಆರಂಭವಾಗಬೇಕೆಂಬ ಪ್ರಾಚೀನ ಸಂಪ್ರದಾಯ ಮರೆಯಾಗಿ ಈ ಪದ್ಧತಿ ಏನು ಕಾರಣದಿಂದಲೋ ಪ್ರಸಕ್ತವಾಗಿದ್ದಿತು. ಚತುಃಶ್ರುತಿಯ ಅಂತರವನ್ನು ಹಿಡಿಯುವುದೂ ಕಷ್ಟವಾಗಿ ಅಭ್ಯಾಸಗಾನಕ್ಕೆ ತೊಂದರೆಯಿದ್ದಿತು. ಈ ತೊಡಕನ್ನು ಕೊಡವಲು ಪುರಂದರದಾಸರು ಹಳೆಯ ಸಂಪ್ರದಾಯವನ್ನೇ ಹಿಡಿದು ಷಡ್ಜಪಂಚಮಮಧ್ಯಮಗಳ ನಡುವೆ ದ್ವಿಶ್ರುತಿಯ ಅಂತರವನ್ನಿಟ್ಟು ಮಾಯಾಮಾಳವಗೌಳ ರಾಗವನ್ನು ಶುದ್ಧರಾಗವೆಂದು ಹೇಳಿ, ಅದರಿಂದಲೇ ಅಭ್ಯಾಸಗಾನ ಆರಂಭವಾಗುವ ವ್ಯವಸ್ಥೆ ಮಾಡಿದರು. ಈ ರಾಗದಲ್ಲಿ ಷಡ್ಜ, ಶುದ್ಧ ಋಷಭ, ಅಂತರಗಾಂಧಾರ, ಶುದ್ಧ ಮಧ್ಯಮ, ಪಂಚಮ, ಶುದ್ಧ ದೈವತ ಮತ್ತು ಕಾಕಲಿನಿಷಾದ ಈ ಸ್ವರಗಳ ಸಂಚಾರವಿದ್ದು ಸಂಪೂರ್ಣರಾಗವೆನಿಸಿಕೊಂಡಿದೆ. ಸರಳ, ಸುಲಭ, ಶುದ್ಧ - ಮೂರೂ ಲಕ್ಷಣಗಳುಳ್ಳ ಈ ರಾಗವನ್ನು ಪುರಂದರದಾಸರು ಅಭ್ಯಾಸಕ್ಕೆ ಅಡಿಗಲ್ಲಾಗಿ ಹುಡುಕಿಕೊಟ್ಟಂದೇ ಕರ್ಣಾಟಕ ಸಂಗೀತದ ರೂಪ ನಿರ್ದಿಷ್ಟವಾಯಿತು.

ಹೀಗೆ ಮಾಯಾಮಾಳವಗೌಳವನ್ನು ಆದಿಮರಾಗವನ್ನಾಗಿ ನಿರ್ದೇಶಿಸಿದುದು ಮಾತ್ರವಲ್ಲ, ಪುರಂದರದಾಸರು ಅಭ್ಯಾಸಿಗಳಿಗೆ ಅನುಕೂಲವಾಗುವಂತೆ ಅನುಕ್ರಮವಾದ ಪಾಠಗಳನ್ನು ರೂಪಿಸಿದರು. ಮಾಯಾಮಾಳವಗೌಳದಲ್ಲಿ ಸರಳಿ(ಸ್ವರಾಲೀ)ವರಸೆ, ಜಂಟಿವರಸೆ, ತಾಳಾಲಂಕಾರಗಳನ್ನು ಹೆಣೆದುಕೊಟ್ಟರು. ನಮ್ಮ ಕಡೆ (ತಮಿಳು, ತೆಲುಗು, ಮಲಯಾಳ ದೇಶಗಳೂ ಸೇರಿ) ಸಂಗೀತವನ್ನು ಕಲಿಯಲು ಉಪಕ್ರಮಿಸುವವರು ಇಂದಿಗೂ ಈ ಪಾಠಗಳನ್ನು ಮೊದಲಲ್ಲಿ ಕಲಿಯುತ್ತಾರೆ. ಅನಂತರ ಈ ಮಾಯಾಮಾಳವಗೌಳದ ಮೇಳದಿಂದ ಜನ್ಯವಾದ ಮಲಹರಿಯೆಂಬ ರಾಗದಲ್ಲಿ ಸರಳಸುಂದರವಾದ ಗೀತಗಳನ್ನು ಅಭ್ಯಾಸಿಗಳಿಗಾಗಿ ದಾಸರು ರಚಿಸಿಕೊಟ್ಟರು. ಅವರು ಮಾಡಿದ 'ಶ್ರೀಗಣನಾಥ ಸಿಂಧುರವರ್ಣ', 'ಕುಂದಗೌರ ಗೌರೀವರ', 'ಕೆರೆಯ ನೀರನು ಕೆರೆಗೆ ಚೆಲ್ಲಿ', 'ಪದುಮನಾಭ ಪರಮಪುರುಷ' ಈ ಗೀತಗಳನ್ನು ಪಿಳ್ಳಾರಿ ಗೀತಗಳೆಂದು ಕರೆದರು; ಪಿಳ್ಳೆಯೆಂದರೆ ಸಣ್ಣದು; ಪಿಳ್ಳಾರಿ ಗೀತಗಳು ಸಣ್ಣಕೃತಿಗಳು. ಒಂದೇ ರಾಗ, ಹಲವು ತಾಳಗಳಲ್ಲಿ ಇರುವ ಗೀತಗಳು ಇವು. 'ಪಿಳ್ಳಾರಿ' (ಪಿಳ್ಳೆಯಾರ್) ಯೆಂದರೆ ಗಣಪತಿಯೂ ಹೌದು. ಗಣನಾಥನಿಂದ ಆರಂಭವಾಗುವ ಈ ಗೀತೆಗಳನ್ನು ಒಟ್ಟಾರೆ ಹೀಗೆ ವ್ಯವಹರಿಸಿದರು. ಈ ಗೀತಗಳ ಪ್ರಾಚುರ್ಯ ಇಡೀ ದಕ್ಷಿಣ ದೇಶದಲ್ಲೆಲ್ಲ ಉಂಟು; ಸಂಗೀತ ಶಿಕ್ಷಣದ ಆರಂಭವೆಲ್ಲ ಈ ಗೀತಗಳ ಅಭ್ಯಾಸದಿಂದ ಆಗುತ್ತದೆ. ಉಳಿದ ಯಾವ ವಾಗ್ಗೇಯಕಾರನಿಗೂ ಈ ಅಗ್ರಗೌರವ ಸಂದುದಿಲ್ಲ.

ಈ ನಾಲ್ಕು ಗೀತೆಗಳನಂತರ ಅಭ್ಯಾಸಗಾನದಲ್ಲಿ ಬರುವ 'ಆನಲೇಕರ' ಎಂದು ಮೊದಲಾಗುವ ಮತ್ತೊಂದು ಗೀತೆಯೂ (ಮೊದಲಿಗೆ ಮಲಹರಿಯಲ್ಲಿಯೇ ಇದ್ದು, ಈಗ ಶುದ್ಧಸಾವೇರಿಯಲ್ಲಿರುವ

ಗೀತೆ) ಪುರಂದರದಾಸರದ್ದೇ. ಇದು ಭಾಂಡೀರವೆನಿಸಿಕೊಳ್ಳುವ ಭಾಷೆಯಲ್ಲಿದೆ. ಅದೇ ಭಾಷೆಯಲ್ಲಿ ಪುರಂದರದಾಸರ ಇನ್ನೊಂದು ಗೀತೆಯಿದೆ. ಇದು ದೇಶಾಕ್ಷಿರಾಗದಲ್ಲಿದೆ-

"ಭಯಸಮಯದೇವ ಉನಿದೇವ
ಶ್ರೀ ವೇಂಕಟಾಚಲದೇವನಲರೆ!
ಶ್ರೀ ಪುರಂದರವಿಠಲರಾಯ
ಶ್ರೀ ವೇಂಕಟಾಚಲ ದೇವನಲರೆ
ಕೇರಳಮಣಿ ದಣಿಸುವರೆ"

ಅವರ ಕಾಲದಲ್ಲಿ ತಾಳದ ವಿಚಾರವಾಗಿಯೂ ಗೊಂದಲವಿದ್ದಿತು. ಹಾಡಲಾರದ ರಾಗಗಳು ಹಲವಾರು ಇದ್ದಂತೆಯೇ, ಹಿಡಿಯಲಾರದ ತಾಳಗಳು ನೂರಾರು ಇದ್ದುವು. ನೂರೆಂಟು ತಾಳಗಳ ಗಣನೆ ತುಂಬಾ ಹಿಂದಿನದೆಂದು ತಿಳಿದುಬಂದಿದೆ; ಅವುಗಳಿಗೆ ಲೆಕ್ಕಾಚಾರದ ಸಂಸ್ಕಾರ ಮಾಡಿ, ಪಂಚ ಜಾತಿಭೇದದಿಂದ ಐನೂರುನಲವತ್ತು ತಾಳಗಳನ್ನೂ ಪರಿಗಣಿಸಿರುವುದೂ ಉಂಟು. ಇವೆಲ್ಲ ವ್ಯವಹಾರಕ್ಕೆ ಒಗ್ಗದ ಸಿದ್ಧಾಂತದ ಆರ್ಭಟವಷ್ಟೆ. ಪುರಂದರದಾಸರು ಇದನ್ನೆಲ್ಲ ನಿರ್ಲಕ್ಷಿಸಿ ಗಾನಕ್ರಿಯೆಗೆ ಅಗತ್ಯವಾದ, ಅನುಕೂಲವೆನಿಸಿದ ಏಳು ತಾಳಗಳನ್ನೂ ಐದು ಜಾತಿಗಳನ್ನೂ ಮಾತ್ರ ನಿರ್ದೇಶಿಸಿದರು. ಧ್ರುವ, ಮಠ್ಯ, ರೂಪಕ, ಝುಂಪೆ, ತ್ರಿಪುಟ, ಅಟ್ಟ, ಏಕ ಇವೇ ಏಳು ತಾಳಗಳು; ತ್ರ್ಯಶ್ರ, ಚತುರಶ್ರ, ಮಿಶ್ರ, ಖಂಡ, ಸಂಕೀರ್ಣ ಇವೇ ಐದು ಜಾತಿಗಳು; ಅಂದರೆ ಮೂವತ್ತೈದು ತಾಳ ಭೇದ. ಇಷ್ಟು ವ್ಯವಹಾರಕ್ಕೆ ಸಾಕೆಂದು ಅವರ ನಿರ್ಣಯ. ಇವುಗಳನ್ನು ಸ್ಫುಟಪಡಿಸಲು ಅವರೇ ತಾಳಾಲಂಕಾರಗಳನ್ನು ಹೆಣೆದಿಟ್ಟರು. ಇದು ಇಂದಿಗೂ ಉಳಿದುಬಂದಿರುವ ಅಭ್ಯಾಸ ಪಾಠ.

ಈ ಏಳು ತಾಳಗಳನ್ನು ಸಂಗೀತ ಶಾಸ್ತ್ರದಲ್ಲಿ ಸೂಳಾದಿಸಪ್ತತಾಳಗಳೆಂದು ಕರೆಯುತ್ತಾರೆ. 'ಸುಳಾದಿ'ಯೆನ್ನುವುದು ಹರಿದಾಸಸಾಹಿತ್ಯದಲ್ಲಿ ಒಂದು ಕೃತಿವಿಶೇಷ. ಆ ಪದದ ನಿಷ್ಪತ್ತಿ ಹೇಗೆ ಆಯಿತೆಂಬುದು ಖಚಿತವಾಗಿ ತಿಳಿಯುವುದಿಲ್ಲ. 'ಸೂಡಾದಿ' ಎಂಬ ಪದದ ಪರ್ಯಾಯವೇ 'ಸೂಳಾದಿ' ಅಥವಾ 'ಸುಳಾದಿ'ಯೆಂದು ಒಂದು ವಾದ. ಧ್ರುವ, ಮಠ್ಯ ಮುಂತಾದ ಸಪ್ತತಾಳಗಳು 'ಸೂಡಾದಿಸಂಜ್ಞಕ'ಗಳೆಂದು ವೇಂಕಟಮಖಿ ತನ್ನ 'ಚತುರ್ದಂಡಿ ಪ್ರಕಾಶಿಕೆ'ಯಲ್ಲಿ ಹೇಳಿದ್ದಾನೆ. ಅಂದರೆ ಸುಳಾದಿಗಳು ತಾಳಪ್ರಧಾನವಾದ ಕೃತಿಗಳೆಂದು ತಾತ್ಪರ್ಯವಾಗುತ್ತದೆ. ಶ್ರೀಪಾದರಾಜರು ಸುಳಾದಿಗಳನ್ನು ರಚಿಸಿದವರಲ್ಲಿ ಮೊದಲಿಗರೆಂದು ದಾಸಕೂಟದವರ ನಂಬಿಕೆ. ಇವರ "ನಿನ್ನಧೀನ ಶರೀರಕರಣ ಚೇಷ್ಟಗಳೆಲ್ಲ' ಎಂದು ಆರಂಭವಾಗುವ ಸುಳಾದಿಯಲ್ಲಿ ಆರು ಚರಣಗಳಿದ್ದು ಒಂದೊಂದು ಚರಣವೂ ಒಂದೊಂದು ರಾಗ, ಒಂದೊಂದು ತಾಳದಲ್ಲಿದೆ; ಪ್ರತಿಚರಣದ ಕಡೆಯಲ್ಲೂ ಅವರ ಅಂಕಿತವಿದೆ. ಇದೇ ಸುಳಾದಿಯ ಮುಖ್ಯಲಕ್ಷಣವೆನ್ನಬಹುದು. ಆದರೆ ಹಲವು ಸುಳಾದಿಗಳಲ್ಲಿ ರಾಗ ಒಂದೇ ಇದ್ದು ಚರಣಗಳು ಬೇರೆ ಬೇರೆ ತಾಳಗಳಲ್ಲಿ ಇರುವುದನ್ನು ಕಾಣುತ್ತೇವೆ. ರಾಗಮಾಲಿಕೆಯಲ್ಲಿ ತಾಳ ಒಂದೇ ಇದ್ದು ರಾಗಗಳು ಬೇರೆ ಬೇರೆ ಇರುವುದಿಲ್ಲವೆ? ಹಾಗೆಯೇ ಸುಳಾದಿಯನ್ನು ತಾಳಮಾಲಿಕೆಯನ್ನಬಹುದು. ಆದರೆ ಇದು ಅಪವಾದವಿಲ್ಲದ ನಿಯಮವಲ್ಲ.

ಅಂತೂ ಪುರಂದರದಾಸರು ಸುಳಾದಿಗಳನ್ನು ಬಹುವಾಗಿ ಪ್ರಚಾರಕ್ಕೆ ತಂದರು. ಅವರೇ

ಹದಿನಾಲ್ಕು ಸಾವಿರ ಸುಳಾದಿಗಳನ್ನು ರಚಿಸಿದರೆಂದು ಪ್ರತೀತಿ. ತಮ್ಮ ಮನೆಯಲ್ಲಿ ವಾಡಿಕೆಯಾಗಿ ಹಾಡುತ್ತಿದ್ದಂತೆ ಎಟ್ಟಿಯಾಪುರದ ಸುಬ್ಬರಾಮದೀಕ್ಷಿತರು ತಮ್ಮ 'ಸಂಗೀತ ಸಂಪ್ರದಾಯ ಪ್ರದರ್ಶಿನಿ'ಯಲ್ಲಿ ಪುರಂದರದಾಸರ ಎರಡು ಸುಳಾದಿಗಳನ್ನು ಸ್ವರಪ್ರಸ್ತಾರದೊಂದಿಗೆ ಉದ್ಧರಿಸಿದ್ದಾರೆ. ಬೇಲೂರು ಕೇಶವದಾಸರು ತಮ್ಮ 'ಹರಿದಾಸಸಾಹಿತ್ಯ'ದಲ್ಲಿ ಪುರಂದರದಾಸರ 'ಆಪಾದ ಆನಂದ ನಖ' ಎಂಬ ಬ್ರಹ್ಮಾನಂದ ಸುಳಾದಿಯನ್ನು ದಾಸಕೂಟದಲ್ಲಿ ವಾಡಿಕೆಯಲ್ಲಿರುವಂತೆ ಸ್ವರಸಹಿತ ಕೊಟ್ಟಿದ್ದಾರೆ. ಪ್ರಾಚೀನರಿಂದ ಪುಷ್ಟವಾಗಿ, ದಾಸಸಾಹಿತ್ಯಕ್ಕೆ ವಿಶಿಷ್ಟವಾಗಿರುವ ಈ ಸುಳಾದಿಗಳನ್ನು ಸರಿಯಾಗಿ ಹಾಡುವ ರೀತಿ ಈ ಕಾಲಕ್ಕೆ ನಷ್ಟವಾಗಿದೆ. ದಾಸಕೂಟದವರು ಸುಳಾದಿಯ ಸಾಂಪ್ರದಾಯಿಕ ಗಾನಪದ್ಧತಿಯನ್ನು ಉಳಿಸಿಕೊಂಡು ಬರಲಿಲ್ಲ. ಇಲ್ಲಿ ಸಾಹಿತ್ಯ ದೀರ್ಘವಾಗಿ, ಸ್ವರಸಂಚಾರ ವಿಸ್ತೃತವಾಗಿ, ತಾಳಗಳ ಹಿಡಿತ ಕ್ಲಿಷ್ಟವಾಗಿರುವುದು ಈ ಅನಾದರಕ್ಕೆ ಕಾರಣವೋ ಏನೋ.

ಪುರಂದರದಾಸರು ಸುಳಾದಿಗಳನ್ನದೆ ಚೌಕತಾಳವರ್ಣಗಳನ್ನು ರಚಿಸುವುದರಲ್ಲಿ ಚತುರರಾಗಿದ್ದರೆಂಬ ಪ್ರಶಸ್ತಿಯಿದೆ. ಅವರು ರಚಿಸಿದ ತಾನವರ್ಣಗಳನ್ನು ನೋಡಿಕೊಂಡು ಪಚ್ಚಿಮಿರಿಯಂ ಆದಿಯಪ್ಪಯ್ಯನು ತನ್ನ ತಾನವರ್ಣಗಳನ್ನು ರಚಿಸಿದನಂತೆ. ೧೭೬೭ರಲ್ಲಿ ತ್ಯಾಗರಾಜರು ಹುಟ್ಟಿದಾಗಲೇ ಆದಿಯಪ್ಪಯ್ಯ ವೃದ್ಧ; ತ್ಯಾಗರಾಜರ ವಿದ್ಯಾಗುರು ಶೊಂಠಿ ವೆಂಕಟಸುಬ್ಬಯ್ಯನೂ ಆದಿಯಪ್ಪಯ್ಯನೂ ಸಮವಯಸ್ಕರಂತೆ. ಭೈರವಿರಾಗ-ಅಟ್ಟತಾಳಗಳಲ್ಲಿ 'ವಿರಿಬೋಣಿ' ಎಂಬ ವರ್ಣವನ್ನೂ ಹಲವಾರು ದೇಶ್ಯರಾಗಗಲ್ಲೂ ರಕ್ತಿರಾಗಗಳಲ್ಲೂ ಕೃತಿಗಳನ್ನು ರಚಿಸಿದ ಈತ ತಂಜಾವೂರಿನ ದೊರೆ ತುಲಜಾಜಿಯ ಕಾಲದವನು. ಅಂದಮೇಲೆ ಪುರಂದರದಾಸರ ಪ್ರಭಾವಕ್ಕೆ ಈತನು ಪಾತ್ರನಾದುದು ಸೋಜಿಗವೇನಲ್ಲ.

ಪುರಂದರದಾಸರು ನೂರಾರು ಉಗಾಭೋಗಗಳನ್ನೂ ರಚಿಸಿದರು. ಸುಳಾದಿಯಂತೆಯೇ ಉಗಾಭೋಗವೂ ಹರಿದಾಸಸಾಹಿತ್ಯಕ್ಕೆ ವಿಶಿಷ್ಟವಾದ ಕೃತಿ. ಸುಳಾದಿ ಕ್ಲಿಷ್ಟವಾದ ಕೃತಿಯಾದರೆ ಉಗಾಭೋಗ ತುಂಬ ಸರಳವಾದ ರಚನೆ. ಸಾಹಿತ್ಯದಲ್ಲಿ ಪಲ್ಲವಿ, ಅನುಪಲ್ಲವಿ, ಚರಣ ಮುಂತಾದ ಅಂಗಗಳಿಲ್ಲದೆ, ರಾಗವೂ ನಿರ್ದಿಷ್ಟವಾಗಿರದೆ, ತಾಳ ಕೇವಲ ಸರ್ವಲಘುವಿನಲ್ಲೇ ಇದ್ದು, ಭಕ್ತಿಪ್ರಧಾನವಾದ ಸಣ್ಣ ಕೃತಿ ಇದು. ನಿದರ್ಶನಕ್ಕೆ ಪುರಂದರದಾಸರ ಈ ಉಗಾಭೋಗ-

ನಿನ್ನನೆ ಪಾಡುವೆ ನಿನ್ನನೆ ಪೊಗಳುವೆ
ನಿನ್ನನೆ ಬೇಡಿ ಬೇಸರಿಸುವೆ
ನಿನ್ನ ಕಾಲನು ಪಿಡಿವೆ ನಿನ್ನ ಹಾರೈಸುವೆ
ನಿನ್ನ ತೊಂಡರಿಗೆ ಕೈಕೊಡುವೆ
ನಿನ್ನಂತೆ ಸಾಕಬಲ್ಲ ದೇವರಿನ್ನುಂಟೆ
ಚೆನ್ನಪುರಂದರವಿಠಲ ದೇವರದೇವ॥

ಇನ್ನೊಂದು-

ಗುರುಕರಣ ಹೊಂದುವುದು ಪರಮದುರ್ಲಭವಯ್ಯ।

ಪರಿಪರಿ ವ್ರತಗಳಾಚರಿಸಲು ಫಲವೇನು।
ಶರೀರಾದಿ ಪುತ್ರ ಮಿತ್ರ ಕಳತ್ರ ಬಾಂಧವರು ಇರಿಸೋರೆ ಸದ್ಗತಿಗೆ ಸಾಧನದಿ।
ನಿರುತವು ಗುರುಪಾದ ನಿಜವಾಗಿ ಮನದಲ್ಲಿರಿತು ಭಜಿಸಲು।
ಅಖಿಳಸಂಪದವಕ್ಕು ಪುರಂದರವಿಠಲ॥

ನಮ್ಮ ಕಾಲದಲ್ಲಿ ಸುಮಾರು ಐನೂರು ಉಗಾಭೋಗಗಳು ಬಳಕೆಯಲ್ಲಿವೆಯೆಂದು ಬೇಲೂರು ಕೇಶವದಾಸರು ತಮ್ಮ 'ಹರಿದಾಸಸಾಹಿತ್ಯ'ದಲ್ಲಿ ಬರೆದಿದ್ದಾರೆ; ಆ ಮಾತಿಗೂ ನಲವತ್ತು ವರ್ಷಗಳಾದವು. ಉಗಾಭೋಗಗಳನ್ನು ಹಾಡುವ ಸಂಪ್ರದಾಯವು ಮಾಯವಾಗುತ್ತಲಿದೆ.

ಸುಳಾದಿಯಂತೆಯೇ ಉಗಾಭೋಗಶಬ್ದದ ವ್ಯುತ್ಪತ್ತಿಯೂ ಅಸ್ಪಷ್ಟವಾಗಿದೆ. ಶಾರ್ಙ್ಗದೇವನೇನೋ "ಉದ್ಗ್ರಾಹವೇ ಮೊದಲ ಭಾಗವಾಗಿದ್ದು ನಂತರ ಮೇಳಾಪಕವಿದ್ದು, ಧ್ರುವ ಮೂರನೆಯ ಭಾಗವಾಗಿ, ಕೊನೆಯಲ್ಲಿ ಆಭೋಗವಿರುವುದು" ಎಂದು ಉಗಾಭೋಗವನ್ನು ವರ್ಣಿಸಿದ್ದಾನೆ. ಉದ್ಗ್ರಾಹವೆಂದರೆ ಒಂದು ರಾಗವನ್ನು ಎತ್ತಿಕೊಳ್ಳುವುದು; ಮೇಳಾಪಕವೆಂದರೆ ಮೇಳದಲ್ಲಿ ಅದರ ನಿಲುಗಡೆ; ಧ್ರುವವೆಂದರೆ ರಾಗವನ್ನು ಹಮ್ಮೈಸುವುದು; ಆಭೋಗವೆಂದರೆ ರಾಗಶುದ್ಧವಾದ ಮತ್ತು ಸುಖವಾದ ಸ್ವರ ಸಂಚಾರ. ಉದ್ಗ್ರಾಹವೇ ಮೊದಲನೆಯದಾಗಿ ಆಭೋಗವೇ ಕೊನೆಯದಾಗಿ ಉಳ್ಳ ಸಂಗೀತ ಸಾಹಿತ್ಯದ ತುಣುಕಿಗೆ 'ಉದ್ಗ್ರಾಹಾಭೋಗ'ವೆಂದು ಪ್ರಾಚೀನರು ಕರೆದಿದ್ದಿರಬಹುದು; ಅದು 'ಉಗಾಭೋಗ'ವೆಂಬ ತದ್ಭವವಾಗಿ ಪರಿಣಮಿಸಿರಬಹುದು.

ಹೀಗೆ ಸಂಗೀತದ ಸಂಪ್ರದಾಯವನ್ನು ಉಳಿಸಲು ಸರಳಿವರಸೆಯಿಂದ ಆರಂಭಿಸಿ ಗೀತಗಳನ್ನೂ, ತಾಳಾಲಂಕಾರಗಳನ್ನೂ, ಸುಳಾದಿಗಳನ್ನೂ, ಉಗಾಭೋಗಗಳನ್ನೂ, ವೃತ್ತನಾಮಗಳನ್ನೂ ರಚಿಸಿದ ಪುರಂದರದಾಸರು ಅಸಂಖ್ಯವಾಗಿ ಕೀರ್ತನೆಗಳನ್ನೂ ರಚಿಸಿದರು. ಸಾಮಾನ್ಯವಾಗಿ ಅವರ ಕೀರ್ತನೆಗಳು ಮಧ್ಯಮಕಾಲದವು. ಏಳೂ ತಾಳಗಳನ್ನು ತಮ್ಮ ಕೃತಿಗಳಲ್ಲಿ ಅವರು ಅಳವಡಿಸಿಕೊಂಡರು; ಆದರೆ ಝಂಪ ಮತ್ತು ಛಾಪುತಾಳಗಳಲ್ಲಿ ಅವರ ಅಭಿರುಚಿಯಿದ್ದುದು ಎದ್ದು ಕಾಣುತ್ತದೆ. ಆದಿತಾಳವನ್ನೂ ಹೆಚ್ಚಾಗಿ ಅವರು ಬಳಸಿದ್ದಾರೆ. ರಾಗಗಳಲ್ಲಿ ಮೂವತ್ತರೆಡನ್ನು ಮಾತ್ರ ವಿಶೇಷವಾಗಿ ಉಪಯೋಗಿಸಿರುವುದು ಕಾಣುತ್ತದೆ.

ಉಪಲಬ್ಧವಿರುವ ಅವರ ಕೀರ್ತನೆಗಳಲ್ಲಿ ಬಹುಭಾಗ ಸ್ಫೂರ್ತಿಯ ಮಡಿಲಿಂದ ಎದ್ದು ಪ್ರಯಾಸವಿಲ್ಲದೆ ಗೇಯರೂಪವನ್ನು ಪಡೆದಂತೆ ಸ್ಪಷ್ಟವಾಗುತ್ತದೆ. ಸಾಹಿತ್ಯದಲ್ಲಿ ತತ್ತ್ವವಿಚಾರ ಬಾರದೆ ಇಲ್ಲ; ಆದರೆ ಮಾತಿನಲ್ಲಿನ ಮಾಧುರ್ಯ, ಉಕ್ತಿಯಲ್ಲಿನ ಔಚಿತ್ಯ, ಭಾವದಲ್ಲಿನ ಬೆಡಗು ಅವರ ಸಾರಸ್ವತ ಶ್ರೀಮಂತಿಕೆಯನ್ನು ಎತ್ತಿ ಹಿಡಿಯುತ್ತವೆ. ವಾಕ್ ಶುದ್ಧಿಯಲ್ಲಿ ಆಗಾಗ ಕ್ಷೋಭೆ ಇರುವುದೆಂಬುದು ನಿಜವೇ. ಮುಖಾರಿರಾಗದ 'ಯಾಕೆನ್ನೊಳಿಂತು ಕೃಪೆಯಿಲ್ಲ ಹರಿಯೇ' ಎಂಬ ಕೀರ್ತನೆಯಲ್ಲಿ ಬರುವ 'ಮುಂಡಮೋಚಿದೆ ನಾನು', ಪಂತುವರಾಳಿಯ 'ಇಂಥಿಂಥಾದ್ದೆಲ್ಲಾನೂ ಬರಲಿ' ಎಂಬ ಕೀರ್ತನೆಯಲ್ಲಿ ಬರುವ 'ಡೊಂಬಿಸೂಳೆಮಗನೆಂತನದಿ' ಎಂಬ ಮಾತುಗಳು ನಿದರ್ಶನ. ಇಂಥ ದುರುಕ್ತಿಗಳು ತ್ಯಾಗರಾಜರ ಕೀರ್ತನೆಗಳಲ್ಲೂ ಇಲ್ಲದಿಲ್ಲ. ಸ್ಫೂರ್ತಿಶರಣವಾದ

ಸಾಹಿತ್ಯದಲ್ಲಿ ಇದು ಸಹಜವೇ. ಆದರೆ ಇಂಥ ಪ್ರಯೋಗಗಳ ಪ್ರಮಾಣ ಪುರಂದರದಾಸರಲ್ಲೂ ತ್ಯಾಗರಾಜರಲ್ಲೂ ಅಲ್ಪವೆಂಬುದು ದೊಡ್ಡ ಸಮಾಧಾನ.

ಶೃಂಗಾರದ ಅಭಿನಿವೇಶ ಪುರಂದರದಾಸರ ಕೀರ್ತನೆಗಳಲ್ಲಿ ಹೆಚ್ಚು. ಕೃಷ್ಣನನ್ನು ಅಧಿಕರಿಸಿದ ಇವರ ಕೃತಿಗಳಲ್ಲಂತೂ ಇದು ಅವಶ್ಯವೆಂಬಂತೆ ಒದಗುತ್ತದೆ. ನವರಸಗಳ ಪ್ರತಿಪಾದನೆಯಲ್ಲಿ ಇವರು ಶೃಂಗಾರ ಮತ್ತು ಭಕ್ತಿಯನ್ನೇ ಹೆಚ್ಚು ಅವಲಂಬಿಸಿದುದು ಕಾಣುತ್ತದೆ. ಈ ವಿಚಾರದಲ್ಲಿ ಅವರು ಕ್ಷೇತ್ರಯ್ಯನನ್ನು ನೆನಪಿಗೆ ತರುತ್ತಾರೆ; ತಾಳ್ಲಪಾಕದ ಅಣ್ಣಮಾಚಾರ್ಯರೂ ನೂರಾರು ಶೃಂಗಾರಕೀರ್ತನೆಗಳನ್ನು ರಚಿಸಿದರು. ಪುರಂದರದಾಸರ ಶೃಂಗಾರದಲ್ಲಿ ನೈಜತೆಯುಂಟು; ಅಶ್ಲೀಲವೆಂಬ ಅಪವಾದಕ್ಕೆ ಗುರಿಯಾದರೂ ಸಹಜವಾಗಿ ಬಂದ ಮಾತನ್ನು ನುಂಗದೆ, ಇಟ್ಟು ಅಳಿಸದೆ ಹಾಗೆಯೆ ಬಿಟ್ಟುದು ಅವರ ವೈಶಿಷ್ಟ್ಯ. ❐

ಅಧ್ಯಾಯ ಎರಡು

ಜೀವನ ದರ್ಶನ

೧

ಪುರಂದರದಾಸರು ದಾಸಕೂಟದ ಪ್ರಮುಖರಾಗಿದ್ದವರೆಂಬ ಪ್ರಸ್ತಾಪ ಆಗಲೇ ಬಂದಿದೆ. ದಾಸಕೂಟದವರ ದಾರಿ ನೇರವಾದುದು; ಶಿಷ್ಟಾಚಾರ, ತತ್ತ್ವವಿಚಾರಗಳು ಅವರಿಗೆ ಸಮ್ಮತವಾದರೂ ಕ್ಲೇಶವೆನಿಸುವಷ್ಟು ಅವನ್ನು ಮೇಲೇರಿಸಿಕೊಳ್ಳುವುದಿಲ್ಲ. ದಾರಿಯನ್ನೇ ಗುರಿಯೆಂದು ಭ್ರಮಿಸದೆ, ಅನಗತ್ಯವಾದ ಆಚಾರಗಳನ್ನು ಪುರಸ್ಕರಿಸದೆ, ವ್ಯರ್ಥವಾದ ವಿಚಾರಕ್ಕೆ ಮನಸೋಲದೆ, ಸರಳವಾದ ಹಾದಿ ಹಿಡಿದು ಅವರು ವ್ಯಾಸಕೂಟದ ಕರ್ಮಠ-ಪಂಡಿತರ ಅಗ್ರಹಕ್ಕೆ ಪಾತ್ರರಾದರು. ಈ ಆಗ್ರಹವನ್ನು ಆರಂಭಿಸಿದವರೂ, ಎದುರಿಸಿ ನಿಂತವರೂ ಪುರಂದರದಾಸರೇ. ದಾಸ-ವ್ಯಾಸಕೂಟಗಳ ನಡುವಣ ವಿರಸ ಅವರ ಧೈರ್ಯದ ಫಲ. ಇದನ್ನು ಮುಂದೆ ವಿವರಿಸಲಾಗುತ್ತದೆ.

ಶಾಸ್ತ್ರಾಧ್ಯಯನ, ವಾಕ್ಯಾರ್ಥ, ಶುಷ್ಕಕರ್ಮಗಳಿಂದ ಭಗವತ್ಪ್ರೀತಿಯಾಗದು, ಮುಕ್ತಿಲಾಭವಾಗದು. ಅಂತಃ ಶುದ್ಧಿ, ಹೃದಯದ ಪರಿಪಾಕ ಇವು ಅತ್ಯಗತ್ಯ. ದೇವರನ್ನು ಕಾಣಲು ದೂರದೂರ ಅಲೆದು ಬಳಲಬೇಕಾಗಿಲ್ಲ; ಮಾತಿನ ಮೇಲುಪ್ಪರಿಗೆಯನ್ನು ಕಟ್ಟಬೇಕಾದುದಿಲ್ಲ; ಗ್ರಂಥಗಳ ಗುಡಾಣವನ್ನು ಮೆದುಳಿನೊಳಗೆ ತುರುಕುವ ಅಗತ್ಯವಿಲ್ಲ. ದಾಸರು ನಿಷ್ಠುರವಾಗಿಯೇ ಈ ನಿಃಸಾರನಿಷ್ಠೆಗಳನ್ನು ಖಂಡಿಸಿದರು. "ಮಡಿಮಡಿಯೆಂದು ಮೂರ್ಮಾರು ಹಾರುವ ಬಿಕನಾಸಿ"ಯನ್ನು ನಾದನಾಮಕ್ರಿಯೆಯಲ್ಲಿ ನಿಲಿಸಿ ಹಂಗಿಸಿದರು. ಸದಾಚಾರವನ್ನು ಯಾವ ಸಜ್ಜನರೂ ಬೇಡ ವೆನ್ನುವುದಿಲ್ಲ; ಆದರೆ ಸದಾಚಾರ ಶುಷ್ಕಾಚಾರವಾಗಬಾರದು. ಮುಖ್ಯವಾದುದನ್ನು ಮಾಡದೆ ಗೌಣವಾದುದನ್ನೇ ಪ್ರಧಾನವೆಂದು ಬಗೆದರೆ ತಪ್ಪಾದೀತು.

ಹರಿಯನ್ನು ನಂಬಿದ ಹರಿದಾಸರೆಂದರೆ 'ಕರ್ಮದ ಕಡಲಿಂದ ಕಡೆ ಹಾಯುವರು'. 'ಅಣುರೇಣುತೃಣಕಾಷ್ಠಪರಿಪೂರ್ಣ'ನಾದ, 'ಎಣಿಸಲಾಗದನಂತ ಮಹಿಮ'ನಾದ, 'ಸೆಣಸುವ ದೈತ್ಯರ ಗಂಡಪ್ರಚಂಡ'ನಾದ ಹರಿಯಲ್ಲಿ 'ನಿಜಭಕುತಿ'ಯನ್ನು ಮಾಡಬೇಕು; "ವಿಧವಿಧ ಸಾಧನಕಿಂತ ಇದು ಬಲು ಘನ". ಕರ್ಮಮಾರ್ಗ ಅಷ್ಟು ಕಠಿಣವಲ್ಲ; ಭಕ್ತಿಮಾರ್ಗವೇ ದುಸ್ತರವಂತೆ. ಏಕೆಂದರೆ ಏಕಾಗ್ರತೆಯಿಲ್ಲದೆ ನಿಜಭಕ್ತಿಯಿರದು; ಆದರೆ "ಮನವ ನಿಲ್ಲಿಸುವುದು ಬಹು ಕಷ್ಟ, ಹರಿದಾಡುವಂಥ ಮನವ ನಿಲಿಸುವುದು ಬಹು ಕಷ್ಟ". ಇದಕ್ಕೆ ದಾರಿಯಾಗಿ ಸಾಧುಜನರ ಸಂಗ ಮಾಡಬೇಕು. ಹೀಗೆ

ಸಾಧುಸಂಗ ಮಾಡಿ ತಾವು ಕಲಿತಿದ್ದನ್ನು ದಾಸರೇ ಹೇಳಿಕೊಂಡಿದ್ದಾರೆ: "ಆಸೆಯೆಂಬೋ ಮಾವಗೆ ಗ್ರಾಸಹಾಕದೆ ಕೊಂದೆನಪ! ಮೋಸದ ಆರು ಮೈದುನರ ದೇಶಾಂತರದಿ ಓಡಿಸಿದೆ॥" ಇತ್ಯಾದಿ. ಭಕ್ತಿ ಕಷ್ಟವಾದರೂ 'ವಿಷ್ಣುದಾಸರ ದಾಸನಾಗಿ ವೈಷ್ಣವ'ನೆನಿಸುವುದು ಸುಲಭ. ಹರಿದಾಸರ ಸಂಗ, ಹರಿಕಥಾಶ್ರವಣ, ಹರಿಕೀರ್ತನೆ ಇವನ್ನು ದಾಸಕೂಟದವರು ಎತ್ತಿಹಿಡಿದರು. "ಹರಿಪಕ್ಕದೊಳು ಮನೆ ಕಟ್ಟಿದ ನರನಿಗೆ ಕರಿಗಳ ಭೀತಿಯುಂಟೆ?"

ಹರಿಯೇ ಸರ್ವೋತ್ತಮನೆನ್ನುವುದೇನೋ ಮಾಧ್ವ ಸಿದ್ಧಾಂತದಲ್ಲಿ ಪ್ರಮುಖವಾದ ಪ್ರಮೇಯ. ವ್ಯಾಸರಾಯರ ಬಳಿ ದಾಸರಿಗೆ ದೀಕ್ಷೆ ಆಗುವವರೆಗೆ ಇದರಲ್ಲಿ ಅವರಿಗೆ ಶ್ರದ್ಧೆಯಿರಲಿಲ್ಲವೆಂದು ಅವರೇ ಹೇಳಿಕೊಂಡಿದ್ದಾರೆ. 'ಕಾಕು ದೈವಗಳನ್ನು', 'ಭಿಕಾರಿ ದೈವಗಳನ್ನು' ಪೂಜಿಸುತ್ತಿದ್ದರಂತೆ. ಅವುಗಳಲ್ಲಿ ಕೆಲವನ್ನು ಹೆಸರಿಸಿಯೂ ಇದ್ದಾರೆ - ಮಾರಿ, ಮಸಣಿ, ಜವ, ಜಕಣಿಯ ಜಲದೇವರು, ಯಲ್ಲಮ್ಮ, ಬೊಮ್ಮಬಿರ ಬೇತಾಳ, ಖಂಡೆರಾಯ ಇತ್ಯಾದಿ. ಹೀಗೆ ಹಲವಾರು ಕ್ಷುದ್ರದೇವತೆಗಳನ್ನು ನಂಬಿ ನೇಮ ನಡೆಸುತ್ತಿದ್ದ ಇವರಿಗೆ ವ್ಯಾಸತೀರ್ಥರ ಸನ್ನಿಧಿಯಲ್ಲಿ 'ಹರಿಯ ತೀರ್ಥಪ್ರಸಾದ ದೊರಕಿ', 'ಹರಿಕಥಾಮೃತ ಕಿವಿಯೊಳಗಾಗಿ', ಹರಿದಾಸರ ಸಂಗ, ದೊರಕಿ 'ಹರಿದಾಸರು ಬಂಧು-ಬಳಗವಾಗಿ' 'ಹರಿಮುದ್ರೆ ಆಭರಣವಾಗಿ', ಪದುಮನಾಭನ ಪಾದದೊಲುಮೆ ಆಗಿ "ಬದುಕಿದೆನು ಬದುಕಿದೆನು ಭವ ಹಿಂಗಿತು", "ಮುಕ್ತಿಮಾರ್ಗಕೆ ಯೋಗ್ಯ ನಾನಾದೆನು" ಎಂದುಕೊಂಡು ಹಿಗ್ಗಿದರು. ಕೀಳು ದೇವತೆಗಳ ಹೆಸರಲ್ಲಿ ಕಟ್ಟಿದ ತಾಳಿಯನ್ನು ಹರಿದು ಬಿಸಾಟೆನೆಂದು ಒಂದು ಪದದಲ್ಲಿ ವಿಸ್ತರಿಸಿದ್ದಾರೆ.

ಹರಿಯೇ ಅಧಿಕನೆಂಬ ಅಭಿಮಾನ ಅವರ ಕೀರ್ತನೆಗಳಲ್ಲಿ ಕಾಣುವುದಾದರೂ ಅವರ ಹರಿಶಬ್ದದ ವ್ಯಾಪ್ತಿ ವಿಶಾಲವಾದುದು. ಸಕಲ ಗ್ರಹಬಲವೂ, ನಿಖಿಲ ರಕ್ಷಕನೂ, ವಿಶ್ವವ್ಯಾಪಕನೂ ಆದ ಹರಿಯೇ ಎಲ್ಲ ಗ್ರಹವೂ, ದಿನ ರಾತ್ರಿ, ನಕ್ಷತ್ರ ಯೋಗ ಕರಣ ತಿಥಿ, ಪಕ್ಷಮಾಸ ಪರ್ವಮಾಸ, ಕ್ರತುಹೋಮ, ಯಜ್ಞ, ಸದ್ಗತಿ - ಒಟ್ಟಿನಲ್ಲಿ 'ಸರ್ವಂ ಖಲ್ವಿದಂ'. ಈ ವಿಶಾಲವಾದ ವ್ಯಾಪ್ತಿಯಲ್ಲಿ ಮುಸಲ್ಮಾನರ ಧರ್ಮವನ್ನೂ ದಾಸರು ಅಳವಡಿಸಿಕೊಂಡಿದ್ದಾರೆ. ಧನ್ಯಾಸಿ ರಾಗದ ಒಂದು ಕೀರ್ತನೆಯಲ್ಲಿ ಧ್ರುವಗೊಲಿದು ಧ್ರುವಪದವಿತ್ತವನನ್ನು, ಕರಿಮೊರೆ ಕೇಳಿದ ಶ್ರೀಶನನ್ನು, ಗರುಡವಾಹನನನ್ನು 'ಹುಸ್ಸೇನ್' ಎಂತಲೇ ವ್ಯವಹರಿಸಿ ಕಡೆಯಲ್ಲಿ "ಅರಿತು ಬಂದೆನೆಲ್ಲಿ! ಪುರಂದರ ವಿಠಲನಲ್ಲದಿಲ್ಲಲ್ಲಾ॥" ಎಂದು ಮುಗಿಸುತ್ತಾರೆ. ಮತ್ತೊಂದು ಕೀರ್ತನೆಯಲ್ಲಿ "ಅಲ್ಲ ಖುದಾ ಎಂದು ಆತ್ಮದಲ್ಲಿ ತಿಳಿಯದೆ। ಮುಲ್ಲ ಶಾಸ್ತ್ರದ ನೆಲೆಯ ಗುರುತರಿಯದೆ।" ಎಂದು ಮುಂತಾಗಿ ಬಣ್ಣಿಸುತ್ತಾರೆ.

ಹೀಗೆ ಅವರಿಗೆ ಹೃದಯವೈಶಾಲ್ಯದ, ತಿಳಿಮನಸ್ಸಿನ ದೃಷ್ಟಿಯಿದ್ದುದರಿಂದಲೇ ಕರ್ಮಠವೈದಿಕರಾದ ವ್ಯಾಸಕೂಟದ ಪಂಡಿತರು ಅವರ ಮೇಲೆ ಎರಗಿಬಿದ್ದರು: ಇವರನ್ನು ನಿಜವಾದ ವೈಷ್ಣವನಲ್ಲವೆಂದು ಜರಿದರು. ಇವರ ಅಗ್ರಹವನ್ನು ದಾಸರು ದಿಟ್ಟತನದಿಂದಲೇ ಎದುರಿಸಿದರು. ಕೆಲವೊಮ್ಮೆ ಅವರಿಗೆ ಗೊಡ್ಡು ಪಂಡಿತರ ಮೇಲೆ ಆಕ್ರೋಶವೇ ಬರುತ್ತಿದ್ದಿತು. ಧನ್ಯಾಸಿಯ ಒಂದು ಕೀರ್ತನೆಯಲ್ಲಿ ಕೋಪಗೊಂಡಿರುವುದು ಸ್ಪಷ್ಟವಾಗಿದೆ; ಗ್ರಾಮ್ಯವಾದ ಬೈಗಳನ್ನೇ ಬೀರಲು ಹಿಂದೆ ಮುಂದೆ ನೋಡಿಲ್ಲ

.... ಇಂಥ ತುಡುಗ ಮುಂಡೇಗಂಡರಿಗಿನ್ನು ವೈಷ್ಣವ ಸಲ್ಲುವುದೇ?
ಗಡ್ಡಮೀಸೆ ಬೋಳಿಸಿಕೊಂಡು ಗೊಡ್ಡುನಾಮವ ತೀಡಿಕೊಂಡು।
ಅಡ್ಡಾದಿಡ್ಡಿ ಮುದ್ರೆಗಳ ಬಡಿದುಕೊಂಡಿನ್ನು।
ದೊಡ್ಡ ದೊಡ್ಡ ಮಾತುಗಳಾಡಿ ದೊಡ್ಡವರೆಂದ್ಹೇಳಿಕೊಂಬ।
ಬಡ್ಡೀಥಗಡೀಮಕ್ಕಳಿಗಿನ್ನು ವೈಷ್ಣವ ಸಲ್ಲುವುದೇ।।
ಭಾಗವತರನ್ನೇ ಕಂಡು ಕಂಡ್ಹಾಂಗೆ ನಿಂದೆ ಮಾಡುತ।
ಸೋಗಿಲಿರುವ ಜೋಗೀ ತೊತ್ತಿನ ಮಕ್ಕಳಾದವರು।
ನಾವೇ ಶ್ರೇಷ್ಠರೆಂದು ಹೇಳಿಕೊಂಡು ತಿರುಗುವಂಥ।
ಗೂಗೆಮೋರೆ ನೀಚರಿಗಿನ್ನು ವೈಷ್ಣವ ಸಲ್ಲುವುದೇ'

ಈ ಕೃತಿಯ ಹಿನ್ನೆಲೆಯ ಸಂದರ್ಭವೇನೋ ತಿಳಿಯದು; ಸ್ವಾರಸ್ಯವಾದ ಸಂದರ್ಭವಂತೂ ಇದ್ದಿರಬೇಕು!

ಇಷ್ಟೊಂದು ದೃಢವಾದ ಭಕ್ತಿಗೆ ವ್ಯಾಸತೀರ್ಥರ ಬೋಧನೆಯಷ್ಟೇ ಕಾರಣವೆನ್ನಲಾಗದು. ಪರಿವರ್ತನೆಯಾಗಿ ಹರಿದಾಸರಾದಂದು ನಿಷ್ಠೆಯಿಂದ, ವೈರಾಗ್ಯದಿಂದ, ತಮ್ಮ ಸತ್ವಶುದ್ಧಿಯನ್ನು ಮಾಡಿಕೊಂಡರು; ಆಗ ಭಗವಂತನ ಸಾಕ್ಷಾತ್ಕಾರವಾಯಿತಂತೆ. ಈ ಕೃತಕೃತ್ಯತೆಯಿಂದ ಅವರ ವಿಶ್ವಾಸ ಬಲಿಯಿತು. ಭಕ್ತಿ ಹೆಮ್ಮರವಾಗಿ ಬೇರು ಬಿಟ್ಟಿತು; ಬಾಳಿನ ಉಳಿದ ಎಲ್ಲ ಪ್ರವೃತ್ತಿಗಳೂ ಇದಕ್ಕೆ ವಶವರ್ತಿಯಾದವು. ಭಕ್ತಿ ಅವರಲ್ಲಿ ಬರಿಯ ಬೌದ್ಧಿಕವ್ಯಾಪಾರವಾಗಿರದೆ ಜೀವಿತದ ಮುಖ್ಯ ರಸವಾಯಿತು. ಶಂಕರಾಭರಣದ ಕೀರ್ತನೆಯೊಂದರಲ್ಲಿ "ಕಂಡೆ ನಾ ಕನಸಿನಲಿ ಗೋವಿಂದನ" ಎಂದು ವಿವರಿಸಿದ್ದಾರೆ. ಭಗವಂತನ ಸಾಕ್ಷಾತ್ಕಾರವಾದ ಬಗೆಯನ್ನೂ ಬಣ್ಣಿಸಿದ್ದಾರೆ -

ಅಂದುಗೆ ಕಿರುಗೆಜ್ಜೆ ಘಲಿರೆಂಬ ವಾದ್ಯದಿ।
ಬಂದು ಕಾಳಿಂಗನ ಹೆಡೆಯನೇರಿ।
ಧಿಂಧಿಮಿಧಿಮಿಕೆಂದು ತಾಳಗತಿಗಳಿಂದಾ।
ನಂದದಿ ಕುಣಿವ ಮುಕುಂದನ ಚರಣವ।।

ಅವರು ಕನಸಿನಲ್ಲಿ ಕಂಡರಂತೆ. ಈ ಸಾಕ್ಷಾತ್ಕಾರದ ಬಲವೇ ಅವರ ನಿಜಭಕ್ತಿಯ ಮರ್ಮ.

ನಿಜಭಕ್ತಿಯಿಲ್ಲದೆ ವಿರಕ್ತಿಗೆ ಅರ್ಥವಿಲ್ಲ. ಸಂನ್ಯಸ್ತಸಂಕಲ್ಪ ಇಲ್ಲದವರ ವಿರಕ್ತಿ ಬರಿಯ ತೋರಿಕೆಯಷ್ಟೆ; ಅದನ್ನು ದಾಸರು ನಿರ್ದಾಕ್ಷಿಣ್ಯವಾಗಿ, ಕಟುವಾಗಿ ಖಂಡಿಸಿದರು. "ಪದುಮನಾಭನಲಿ ಲೇಶಭಕುತಿಯಿಲ್ಲ"ದ ವೈರಾಗ್ಯ 'ಉದರ ವೈರಾಗ್ಯ'ವಲ್ಲದೆ ಮತ್ತೇನು? ತೋರಿಕೆಯ ಬಯಕೆಯಿಲ್ಲದಿದ್ದರೂ ಮುಗ್ಧಜನ ನಿಃಸಾರವಾದ ಆಚಾರದಲ್ಲಿ ಸಿಲುಕಿ ತೊಳಲುವುದುಂಟು; ಸ್ನಾನ, ಮೌನ, ಧ್ಯಾನಗಳಿಂದ ಮುಕ್ತಿಯನ್ನು ಸಾಧಿಸಿಕೊಳ್ಳುವ ತವಕ ಅವರಲ್ಲಿರುವುದುಂಟು. ಆದರೆ ದಾಸರು ನೇರವಾಗಿ ಕೇಳುತ್ತಾರೆ - "ತನುವ ನೀರೊಳಗದ್ದಿ ಫಲವೇನು, ಮನದಲ್ಲಿ ದೃಢಭಕ್ತಿಯಿಲ್ಲದ ಮನುಜರು?" ಭಕ್ತಿಯ ಪರಿಕರಗಳನ್ನು ಇನ್ನೊಂದು ಕೀರ್ತನೆಯಲ್ಲಿ ವಿವರಿಸುತ್ತಾರೆ-

ಮನದಲ್ಲಿ ದೃಢವಿರಬೇಕು, ಜನರ ಸಂಸರ್ಗವ ನೀಗಲು ಬೇಕು
ಅನುಮಾನವನು ಬಿಡಬೇಕು, ತನ್ನ ಮನವ ಶ್ರೀಹರಿಗೆ ಒಪ್ಪಿಸಿ
ಕೊಡಬೇಕು
ವ್ಯಾಪಾರವನು ಬಿಡಬೇಕು, ಪಾಪರಹಿತನಾಗಲಿಬೇಕು
ಜ್ಞಾನದೀಪದ ಬೆಳಕಿನಲಿ ಓಡ್ಯಾಡಬೇಕು......

ಇದು ಭಕ್ತಿಯ ಉಪಾಯದ ನಿರೂಪಣೆ. ಉಪಾಯವೆಂಬುದು ಅವರು ಉಪಯೋಗಿಸಿದ ಪದವೇ. "ಅಪಾರಮಹಿಮನನ್ನು ಉಪಾಯದಿಂದ" ನೆನೆಯುವ ಅಗತ್ಯವನ್ನು ಬೇಹಾಗ್ ರಾಗದ ಕೀರ್ತನೆಯೊಂದು ಒತ್ತಿ ಹೇಳುತ್ತದೆ.

೨

ಮನುಷ್ಯಜನ್ಮದ ಅಗಾಧ ಸಾಧ್ಯತೆಗಳನ್ನು ಅವರು ಮನಗಂಡಿದ್ದರು. ಭವದ ಹಂಗನ್ನು ಇಂಗಿಸುವುದು ನಮ್ಮ ಅಂತಃಕರಣಕ್ಕೆ ಸಾಧ್ಯ. ಮುಕ್ತಿಗೆ ನರಸ್ವರೂಪ ಅನುಕೂಲವಾದದ್ದು. ಆದರೆ ಸಾಮಾನ್ಯವಾಗಿ ಜನ ಅನಿಷ್ಟ ಪರಂಪರೆಗಳ ಜಾಲದಲ್ಲಿ ಸಿಲುಕಿ ತಮ್ಮ ಜೀವಿತವನ್ನು ಬರಡು ಮಾಡಿಕೊಳ್ಳುವರು. ಪುರಂದರದಾಸರು ಒಂದೆಡೆ "ಮಾನವ ಜನ್ಮ ದೊಡ್ಡದು ಇದ - ಹಾನಿಮಾಡಲಿಬೇಡಿ ಹುಚ್ಚಪ್ಪಗಳಿರಾ॥" ಎಂದು ಆಗ್ರಹದಿಂದ ನುಡಿದಿದ್ದಾರೆ. 'ಹುಚ್ಚಪ್ಪ' ಎನ್ನುವ ಪ್ರಯೋಗ ಇಂದಿಗೂ ಮಾಧ್ವದೇಶಸ್ಥರಲ್ಲಿ ಬಳಕೆಯಲ್ಲಿದೆ. ಒಂದು ಬಗೆಯ ಪ್ರೀತಿಯ ಬೈಗಳು! ಮಾನವನ ಜನ್ಮವನ್ನು ಹಾನಿಮಾಡಿಕೊಳ್ಳುವ ಬಗೆಯನ್ನೂ ದಾಸರು ವಿವರಿಸಿದ್ದಾರೆ.

ಇಷ್ಟು ದೊರಕಿದರೆ ಮತ್ತಿಷ್ಟು ಬೇಕೆಂಬಾಸೆ
ಅಷ್ಟೂ ದೊರಕಿದರು ಮತ್ತಷ್ಟರಾಸೆ।
ಕಷ್ಟಬೇಡೆಂಬಾಸೆ ಕಡುಸುಖವ ಕಾಂಬಾಸೆ

ಬಾಳಿನಲ್ಲಿನ ನಿಜವಾದ ಸಂಕಟವನ್ನು ಅವರು ತಿಳಿಮಾತಿನಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಈ ಆತಂಕ ಇದ್ದ ಮಂದಿಗೆ ಸಮಾಧಾನ ಎಲ್ಲಿ ಬಂದೀತು? ಸಮಾಧಾನವಿಲ್ಲದೆ ಮುಕ್ತಿ ಬರುವುದೆ? ಜಗದ ಜನವೆಲ್ಲ ಜಂಜಾಟದಲ್ಲಿ ತೊಳಲುತ್ತಿದ್ದುದನ್ನು ದಾಸರು ನೋಡಿ ನೋಡಿ ಬೇಸತ್ತಿದ್ದರು. ವರಾಳಿ ರಾಗದ ಒಂದು ಕೀರ್ತನೆ ಹೀಗೆ ಆರಂಭವಾಗುತ್ತದೆ-

ಎಂತಾದರೂ ಚಿಂತೆ ಬಿಡದು ನಿ-
ಶ್ಚಿಂತರಾದವರನೊಬ್ಬರನು ಕಾಣೆ!

ಮುಕ್ತಿಗೆ ಮುನ್ನ ನಾಲ್ಕು ದಿನ ಇಲ್ಲಿ ಇದ್ದು ಸತ್ತ್ವ ಶುದ್ಧಿಮಾಡಿಕೊಳ್ಳಲೆಂದು ಮನುಷ್ಯಜನ್ಮ ಸಿದ್ಧವಾಗಿದೆ. ಅದನ್ನು ಬಯಕೆ, ಆತಂಕ, ಉದ್ವೇಗಗಳ ಸುಳಿಯಲ್ಲಿ ಸೇರಿಸಿ ಸಂಸಾರವನ್ನಾಗಿ ಮಾರ್ಪಡಿಸುತ್ತೇವೆ. ಅಸಾರವಾದುದನ್ನೇ ಸಾರವೆಂದು ಗ್ರಹಿಸಿ ಮೋಸಹೋಗುತ್ತೇವೆ. ದಾಸರು ಬಿಲಹರಿರಾಗದಲ್ಲಿ "ಯಾರಿಗೆ ಯಾರುಂಟು ಯರವಿನ ಸಂಸಾರ। ನೀರ ಮೇಲಣ ಗುಳ್ಳೆ ನಿಜವಲ್ಲ

ಹರಿಯೆ!" ಎಂದು ಹಾಡಿದ್ದಾರೆ. ಮುಕ್ತಿಗಾಗಿ ದೇವದತ್ತವಾದ ಮಾನವಜನ್ಮವನ್ನು ಸಂಸಾರದ ಕೋಟಲೆಗಳಲ್ಲಿ ಅರೆಯುವುದು ಅಪರಾಧವೇ. ಆದರೆ ಅಪರಾಧ ಮಾಡುವ ಅಧಿಕಾರ, ಸ್ವಾತಂತ್ರ್ಯವುಳ್ಳ ಮನುಷ್ಯನಿಗೆ ಇದ್ದದ್ದೇ ಆದರೆ ಅವನ ಸ್ವಾಭಿಮಾನ ಇನ್ನೂ ಹೆಚ್ಚುತ್ತದೆ; ದಂಭ ಹಿಗ್ಗುತ್ತದೆ. ಸಂಸಾರದ ಕೆಸರಿನಲ್ಲಿ ಕಾಲು ಇನ್ನೂ ಜಾರುತ್ತದೆ. ಈ ಮನೋವೃತ್ತಿಯನ್ನು ದೂರಮಾಡಲು ಜೀವದ ಪಾರತಂತ್ರ್ಯವನ್ನು ಒತ್ತಿ ಹೇಳುವುದಗತ್ಯ-

ಅಪರಾಧಿ ನಾನಲ್ಲ ಅಪರಾಧ ಎನಗಿಲ್ಲ
ಕಪಟನಾಟಕಸೂತ್ರಧಾರಿ ನೀನೆ।
ಯಂತ್ರವಾಹಕ ನೀನೆ ಒಳಗಿದ್ದು ಎನ್ನ ಸ್ವ
ತಂತ್ರನೆಂದೆನಿಸಿ ಕೊಲಿಸುವರೆ ಹೇಳೋ।

ಈ ಕೀರ್ತನೆ ಮಾಧ್ವಸಿದ್ಧಾಂತದ 'ನಾಹಂ ಕರ್ತಾ ಹರಿಃ ಕರ್ತಾ' ಎಂಬ ಪ್ರಮೇಯವನ್ನು ವಿವರಿಸುತ್ತದೆ. 'ಬಿನ್ನಹಕೆ ಬಾಯಿಲ್ಲವಯ್ಯ, ಅನಂತ ಅಪರಾಧ ಎನ್ನೊಳಗೆ ಇರಲಿಕ್ಕೆ' ಎಂದವರೂ ದಾಸರೇ; 'ಅಪರಾಧಿ ನಾನಲ್ಲ' ಎಂದವರೂ ಅವರೇ. ಈ ಅಸಾಮಂಜಸ್ಯವನ್ನು ಪರಿಹರಿಸಲು ದತ್ತಸ್ವಾತಂತ್ರ್ಯದ ಪ್ರಮೇಯವನ್ನು ಅವಲಂಬಿಸಬೇಕು. 'ಕೊಡುವ ಕರ್ತ ಬೇರೆ ಇರುತಿರೆ', 'ಹರಿ ಕೊಟ್ಟ ಕಾಲಕ್ಕೆ ಉಣಲಿಲ್ಲ' ವಾದರೆ 'ಭಂಡನಾದೆನು ನಾನು ಸಂಸಾರದಿ'; 'ಮಾಡಿದ ಕರ್ಮ ಬಲವಂತವಾದರೆ' ಹಾಗಾಗುತ್ತದೆ; 'ಬ್ರಹ್ಮ ಬರೆದ ಬರಹ ಸಾಮಾನ್ಯವಲ್ಲ'. 'ಆರೇನು ಮಾಡುವರು ತಾ ಪಾಪಿಯಾದರೆ? ಊರೆಲ್ಲ ನೆಂಟರು, ಉಣಬಡಿಸುವರ ಕಾಣೆ!'

ಆದರೆ ಅದಕ್ಕೆ 'ನಾಚಿಕೆಗೊಳಬೇಕಾದುದಿಲ್ಲ, ಯೋಚಿಸಿ ಕೆಡ' ಬೇಕಾದುದಿಲ್ಲ; ಅಂಬಿಗನಾದ ಅವನನ್ನು ನಂಬಿದರೆ 'ಮನ್ನಿಸಿ ಸಲಹುವನು', 'ಮುಕ್ತಿಮಂಟಪಕ್ಕೆ' ಒಯ್ಯುವನು. ಹಾಗೆ ಮಾಡದೆ 'ಸುಮ್ಮನೆ ಕಾಲವ ಕಳೆದರೆ', 'ಸಾಕು ಸಂಸಾರ ತೆರೆಯ ನೂಕಲಾರೆನು' ಎಂದರೆ, 'ಏನು ಬರೆದೆಯೋ ಬ್ರಹ್ಮ, ನೀನೆಷ್ಟು ನಿರ್ದಯನೋ' ಎಂದು ಹಳಿದರೆ, ಹೀಗ 'ಹರಿವ ನೀರೊಳಗೆ ಮುಳುಗಿ ಬೆರಳ ಎಣಿಸುತಿಹ' ನಮ್ಮನ್ನು ಕಂಡು ದಾಸರಿಗೆ 'ನಗೆಯು ಬರುತಿದೆ'.

ಸಂಸಾರಿಗಳಿಗೆ ಸಮಂಜಸವಾದ ದೃಷ್ಟಿಯಿದು. ಕರ್ಮಬಂಧನವನ್ನೆಲ್ಲ ಒಮ್ಮೆಲೆ ಹರಿದು ಮುಕ್ತಿಯನ್ನು ಮುಟ್ಟುವುದು ಎಲ್ಲರಿಗೂ ಸಾಧ್ಯವಿಲ್ಲ. ಸಾಮಾನ್ಯರಿಗೆ ಪರಮಾರ್ಥದ ಪರಿಚಯವಾಗಲು ಸಂಸಾರ ಅಗತ್ಯ. ಅದರಲ್ಲಿನ ಕಷ್ಟಕೋಟಲೆಗಳಲ್ಲಿ ಮೈಯೊಡ್ಡಿ ಸುಟ್ಟುಕೊಂಡರೆ ಚೈತನ್ಯಕ್ಕೆ ಪುಟವಿಟ್ಟಂತಾಗುತ್ತದೆ; ಸಂಕಟ ಬಂದಾಗ ವೆಂಕಟರಮಣನ ನೆನಪಾಗುತ್ತದೆ. ಇದಕ್ಕಾಗಿಯೇ ದಾಸರು "ಸಂಸಾರವೆಂಬಂಥ ಭಾಗ್ಯವಿರಲಿ; ಕಂಸಾರಿ ನೆನೆವಂಥ ಸೌಭಾಗ್ಯವಿರಲಿ" ಎಂದದ್ದು. ಆದರೆ ಸಂಸಾರದ ಚಿಂತೆ, ಅಂಜಿಕೆಗಳನ್ನು ಮೀರಿ ನಿಲ್ಲುವ ಸಾಮರ್ಥ್ಯವಿರಬೇಕು. ಸಂಸಾರವನ್ನು ಮೆಚ್ಚಿಕೊಂಡು ಸಂಸಾರಿಗಳಾಗಿಯೇ ಉಳಿದ ಪುರಂದರದಾಸರು ತಮ್ಮ ಆದರ್ಶವನ್ನೂ ಸೂಚಿಸಿದ್ದಾರೆ, - "ಇರಬೇಕು, ಇರದಿರಬೇಕು। ಸಂಸಾರದಿ ಜನಕಾದಿ ರಾಜಋಷಿಗಳಂತೆ". ಮಿಥಿಲಾ ಪಟ್ಟಣವು ಸುಟ್ಟಿತೆಂಬುದನ್ನು ಕೇಳಿದ ಅದರ ರಾಜ 'ನನ್ನದೇನು ಸುಡಲಿಲ್ಲ' ಎಂದನಂತೆ. ಈ ನಿಃಸಂಗ ಮನೋವೃತ್ತಿ ಸಂಸಾರದಲ್ಲಿ ಅವಶ್ಯವಾಗಿ ಇರಬೇಕು; ಇದ್ದರೆ 'ಅಂಜಿಕಿನ್ಯಾತಕಯ್ಯ?'

ಸಂಸಾರದಲ್ಲಿ ಈಜಿ, ಇದ್ದು ಜಯಿಸಬೇಕಾದರೆ ಪರಮಾರ್ಥದ ಹಂಬಲ ನೆರವಾಗುತ್ತದೆ. ಬರಿಯ ಭಕ್ತಿಯೊಂದೇ ಈ ಹಂಬಲವನ್ನು ಪೂರೈಸಲಾರದು; ಧ್ಯಾನ ಅವಶ್ಯಕ. ಪುರಂದರದಾಸರು ಬಾಳಿನಲ್ಲಿ ಧ್ಯಾನಕ್ಕೆ ಹೆಚ್ಚಿನ ಸ್ಥಾನ ಕೊಟ್ಟಿದ್ದಾರೆ, ಧ್ಯಾನದ ಅಂಗಗಳನ್ನು ವಿವರಿಸಿದ್ದಾರೆ-

ಮನವ ಶೋಧಿಸಬೇಕು ನಿಚ್ಚಾ, ದಿನ
ದಿನದಿ ಮಾಡುವ ಪಾಪಪುಣ್ಯದ ವೆಚ್ಚಾ
ತನುವ ಖಂಡಿಸಿ ಒಮ್ಮೆ ಮಾಣೋ, ನಿನ್ನ
ಮನವ ದಂಡಿಸಿ ಪರಮಾತ್ಮನ್ನ ಕಾಣೋ
ಕೊನೆಗೆ ನಿನ್ನೊಳಗೆ ನೀ ಜಾಣೋ,
ಮುಕ್ತಿ ನಿನಗೆ ದೂರಿಲ್ಲವು ಒಂದೇ ಗೇಣೋ!

ಅವರದ್ದು ಯೋಗದ ದಾರಿಯೆಂಬುದು ಸ್ಪಷ್ಟವಾಗುತ್ತದೆ. ಅವರಿಗೆ ಯೋಗಶಾಸ್ತ್ರದ ಪರಿಚಯವಿದ್ದುದು ಮಾತ್ರವಲ್ಲ, ಯೋಗಸಾಧನೆಯಲ್ಲಿ ಅಪಾರವಾದ ಶ್ರದ್ಧೆಯಿದ್ದಿತು. ಈ ವಿಚಾರ ಅವರ ಹಲವಾರು ಕೀರ್ತನೆಗಳಿಂದ ಸ್ಪಷ್ಟವಾದರೂ ಕಾಪಿರಾಗದ ಒಂದು ಕೀರ್ತನೆ ಈ ವಿಚಾರವಾಗಿ ವಿಶಿಷ್ಟವಾದದ್ದು-

ಕಣ್ಣಿನೊಳಗೆ ನೋಡೊ ಹರಿಯ, ಒಳ
ಗಣ್ಣಿನಿಂದಲಿ ನೋಡೊ ಮೂಜಗದ ದೊರೆಯ ।।ಪ।।
ಆಧಾರ ಮೊದಲಾದ ಆರು ಚಕ್ರವ
ಶೋಧಿಸಿ ಬಿಡಬೇಕು ಈಷಣಾತ್ರಯ
ಸಾಧಿಸಿ ಸುಷಮ್ನಾ ಏರಿ, ಅಲ್ಲಿ
ಭೇದಿಸಿ ನೀ ಪರಬ್ರಹ್ಮನ್ನ ಸೇರು।।

ಹೀಗೆ ಮಾಡಿದರೆ ಅಂಡಜದೊಳಾಡುವ, ಕುಂಡಲಿ ತುದಿಯೊಳಿರುವ, ಭಾನು ಮಂಡಲ ನಾರಾಯಣನೆಂಬುವನು ಪಾಲಿಸುತ್ತಾನಂತೆ.

ಭಕ್ತಿಯನ್ನು ವ್ರತವಾಗಿ ಪರಿಗ್ರಹಿಸಿ ಹರಿದಾಸರಾದ ಪುರಂದರದಾಸರು ತಾವು ವಿರಕ್ತರಾದರೂ, ನಿಃಸಂಗರಾದರೂ ಜನತೆಯನ್ನು ಈ ದಾರಿಗೆ ಎಳೆಯಲು ಒಪ್ಪಲಿಲ್ಲ. ತಮ್ಮ ಗಾರ್ಹಸ್ಥ ಧರ್ಮವನ್ನು ಪಾಲಿಸುತ್ತ, ಅದರೊಂದಿಗೆ ಅಂಟಿಕೊಂಡು ಬಂದ ಲೋಕಕಲ್ಯಾಣಬುದ್ಧಿಯನ್ನು ತಮ್ಮ ಉದ್ಯಮದ ಶ್ರೀಮುಖವನ್ನಾಗಿ ಮಾಡಿಕೊಂಡರು. ದುರ್ಮಾರ್ಗಿಗಳು ಸನ್ಮಾರ್ಗಿಗಳಾಗಲಿ, ಸಂತರಾಗಲಿ ಎಂಬ ಆಶಯ ಇವರ ಕೃತಿಗಳಲ್ಲಿ ಕಾಣುತ್ತದೆ; ನಿತ್ಯ ಜೀವನದಿಂದ ವಿಮುಖರಾಗದೆ ಸತ್ಯಸಂಕಲ್ಪನ ಶೀಲವನ್ನು ಕಾಪಿಡುವ ಕಾತರ ಕಾಣುತ್ತದೆ. ಅವರಿಗೆ ಸಾಮಾನ್ಯ ಬಾಳುವೆಯ ಸಂಪೂರ್ಣ ಪರಿಚಯವಿದ್ದಿತು; ದಿನ ದಿನದ ಅಗತ್ಯವನ್ನು ಮರೆಮಾಚುವ ಸಾಹಸ ಅವರು ಮಾಡಲಿಲ್ಲ. "ಎಲ್ಲಾರು ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ" ಎಂಬ ಪ್ರಸಿದ್ಧವಾದ, ಯಥಾರ್ಥವಾದ ಮಾತು ದಾಸರದ್ದೇ. ಬಯಲುಮಂಡಪದ ಗಾಳಿಗೋಪುರವನ್ನೇರಿ ಬಾಳುವೆಗೆ ಅಳವಡಿಸಲಾಗದ

ಕಗ್ಗವನ್ನು ಹೇಳಿಹೋಗುವ ಸ್ವಭಾವ ಅವರದ್ದಲ್ಲ. ಅವರು ಬಾಳಿದವರು, ಬಾಳನ್ನು ನೋಡಿದವರು, ಬೆಳಕನ್ನು ಕಂಡವರು, ನಮ್ಮನ್ನು ಬಾಳಿನಲ್ಲೇ ಉಳಿಸಿ ಬೆಳಕಿನೆಡೆಗೆ ಹೊರಳಿಸುವುದು ಅವರ ಬಯಕೆ.

೩

ಪುರಂದರದಾಸರು ಲೌಕಿಕ ಜೀವನದಲ್ಲಿದ್ದಾಗಲಂತೂ ವ್ಯಾಪಾರಿಗಳಷ್ಟೆ. ವ್ಯವಹಾರ ಕೌಶಲವಿಲ್ಲದಿದ್ದರೆ ಹೇಗೆ? ಹರಿದಾಸರಾದ ಮೇಲೂ ನಾಲ್ಕೂ ಜನರ ಜಂಜಾಟ ಅವರಿಗೆ ತಪ್ಪಲಿಲ್ಲ. ಇದ್ದ ಸನ್ನಿವೇಶವಂತೂ ಗೊಂದಲದ ಮುದ್ದೆಯಾಗಿದ್ದಿತು. ರಾಜಕಾರಣದಿಂದ ಮೈಮರೆತ ವಿಜಯನಗರದ ರಾಜಧಾನಿ, ವ್ಯಾಸತೀರ್ಥರ ಸನ್ನಿಧಿಯಲ್ಲಿ ಪಂಡಿತರ ತಂಡ, ಧರ್ಮದ ತೆರೆ ಏರಿಳಿಯುತ್ತಿದ್ದ ಕಾಲ - ಈ ವಾತಾವರಣದಲ್ಲಿ ಭಕ್ತಿಯನ್ನೇ ಹಿಡಿದು ನಿಂತ ಹರಿದಾಸರು ಉಳಿಯುವುದೇ ಕಷ್ಟವಾಗಿದ್ದಿತು. ಪುರಂದರದಾಸರಿಗೆ ಜಾಣ್ಮೆಯಿಲ್ಲದಿದ್ದರೆ, ಧೈರ್ಯವಿಲ್ಲದಿದ್ದರೆ ದಾಸಕೂಟವೆಂಬ ಸೊಲ್ಲೇ ಇಂದು ಇರುತ್ತಿರಲಿಲ್ಲ. ಆಗಿನ ಕಷ್ಟದ ಪರಿಸ್ಥಿತಿಯಲ್ಲಿ ದಿಟ್ಟತನದಿಂದ ತಾವು ನಿಂತುದಲ್ಲದೆ, ಎಂದಿಗೂ ಬರುವ ಇಂಥದೇ ಪರಿಸ್ಥಿತಿಯಲ್ಲಿ ಸಾಮಾನ್ಯ ಜನ ನಿಲ್ಲುವುದು ಹೇಗೆ ಎಂಬುದನ್ನು ತಿಳಿಯಹೇಳಿದರು. ಅವರು ಅಂದು ತಳೆದ ನಿಲುವು ನಮಗೆ ಇಂದಿಗೂ ಮಾರ್ಗದರ್ಶಕವಾದೀತು.

ವ್ಯಾಸತೀರ್ಥರಿಗೆ ಅವರ ಮೇಲಿದ್ದ ಅಭಿಮಾನ ಹಲವು ಪಂಡಿತರ ಈರ್ಷ್ಯೆಯನ್ನು ಎಬ್ಬಿಸಿದ್ದಿರಬೇಕು. ಇದನೆಲ್ಲ ಕಂಡು ಬೇಸರಗೊಂಡರೂ ಅವರ ಮನಸ್ಸು ಕಹಿಯಾಗಲಿಲ್ಲ. "ನಿಂದಕರಿರಬೇಕು" ಎಂಬ ಕೀರ್ತನೆಯಲ್ಲಿ "ಹಂದಿಯಿದ್ದರೆ ಕೇರಿ ಹ್ಯಾಂಗೆ ಶುದ್ಧಿಯೋ ಹಾಂಗೆ" ಎಂದು ನಿಂದಕರನ್ನೂ ಹಂದಿಯನ್ನೂ ಸರಿದೂಗಿಸಿದ್ದರೂ, "ದುಷ್ಟಜನರು ಈ ಸೃಷ್ಟಿಯೊಳಗಿದ್ದರೆ। ಶಿಷ್ಟಜನರಿಗೆಲ್ಲ ಕೀರ್ತಿಗಳು" ಎಂದು ಸಮಾಧಾನ ತಂದುಕೊಂಡಿದ್ದಾರೆ. "ದುರುಳ ಜನಂಗಳು ಚಿರಕಾಲ ಇರುವಂತೆ। ಕರವ ಮುಗಿದು ವರವ ಬೇಡುವೆನು" ಎಂದು ಅರೆಪರಿಹಾಸ್ಯದ ಮಾತನ್ನಾಡಿದ್ದಾರೆ. ಇನ್ನೊಂದು ಕೀರ್ತನೆಯಲ್ಲಿ 'ಅಪಮಾನವಾದರೆ ಒಳಿತು' ಎಂದು ಹೇಳಿ "ಮಾನದಿಂದ ಅಭಿಮಾನ ಪುಟ್ಟುವುದು", "ಅಪಮಾನದಿಂದಲಿ ತಪ ವೃದ್ಧಿಯಾಗುವುದು" ಎಂದು ಸಮರ್ಥಿಸಿಕೊಂಡಿದ್ದಾರೆ; ದೀನರಕ್ಷಕನಾದ ಪುರಂದರವಿಟ್ಠಲನನ್ನೂ "ಏನು ಬೇಡ, ಎನಗಪಮಾನವೇ ಇರಲಿ" ಎಂದು ಕೇಳಿಕೊಂಡಿದ್ದಾರೆ.

ಕೇಡುಮಾಡಿದವರಿಗೆ ಕೇಡನ್ನು ಬಯಸುವುದು ಹರಿದಾಸರ ಧರ್ಮವಲ್ಲ. "ವಿಷವುಣಿಸಿದವನಿಗೆ ಷಡ್ರಸವನುಣಿಸಲಿ ಬೇಕು" ಎಂದು ಪುರಂದರದಾಸರು ಕಾಂಬೋದಿಯ ಕೀರ್ತನೆಯೊಂದರಲ್ಲಿ ಹೇಳಿದ್ದಾರೆ; ಏಕೆಂದರೆ "ಧರ್ಮವೇ ಜಯವೆಂಬ ದಿವ್ಯಮಂತ್ರ। ಮರ್ಮವನು ತಿಳಿದು ಆಚರಿಸುವುದು ಕೇಳು". ಮಹಾಭಾರತದ ಸಂಸತಿಯ ಸಾರವೆಲ್ಲ 'ಯತೋ ಧರ್ಮಸ್ತತೋ ಜಯಃ' ಎಂಬ ವಾಕ್ಯದಲ್ಲಿ ಅಡಗಿದೆಯಲ್ಲವೆ? ತುಂಬ ಮಧುರವಾದ ಮನೋಧರ್ಮ ಇದು; ಎಲ್ಲ ಕಾಲಕ್ಕೂ ಎಲ್ಲ ಜನರಿಗೂ ಅನ್ವಯಿಸುವ ನಿಲುವು ಇದು. ಆದರೂ ಬರುವ ಬವಣೆಗಳನ್ನು ಸೈರಿಸಿಕೊಂಡಿರುವುದೇ

ದೊಡ್ಡ ಯೋಗವಲ್ಲ. ವಸತಿಯಲ್ಲೂ ವ್ಯವಹಾರದಲ್ಲೂ ಔಚಿತ್ಯಜ್ಞಾನವಿರಬೇಕು; ಕಾರ್ಯದಲ್ಲಿ ಸಂಕಲ್ಪದ ಮತ್ತು ಸಂಯಮದ ಆವೇಶವಿರಬೇಕು. ಮೋಹನರಾಗದ ಕೀರ್ತನೆಯೊಂದರಲ್ಲಿ ದಾಸರು ಹೇಳುತ್ತಾರೆ-

> ಅಜ್ಞಾನಿಗಳ ಕೂಡ ಅಧಿಕ ಸ್ನೇಹಕ್ಕಿಂತ
> ಸುಜ್ಞಾನಿಗಳ ಕೂಡ ಜಗಳವೇ ಲೇಸು॥
> ....
> ಉಂಬುಡುವುದಕ್ಕಿರದ ಅರಸನೋಲಗಕಿಂತ
> ತುಂಬಿದೂರೊಳಗೆ ತಿರಿದುಂಬುವುದೇ ಲೇಸು॥

ಸಜ್ಜನರೊಡನೆ ಜಗಳವಾಡುವುದು ಕಷ್ಟ; ಆದರೆ ಆಡಿದಾಗ ಒಳ್ಳೆಯತನವೇ ಬಂದೊದಗುವುದು. ಚಂದನದ ಕಟ್ಟಿಗೆಯನ್ನು ಉಜ್ಜಿದರೆ ಬರುವುದು ಸುವಾಸನೆಯೇ ಅಲ್ಲವೆ? ಪರಾಶ್ರಯವೆಂಬುದು ಎಂದೂ ಅನಿಷ್ಟವೇ; ವಿಧಿಯಿಲ್ಲದೆ ಹೀಗೆ ಆಶ್ರಯಮಾಡಿದರೂ ಸಮರ್ಥರಾದವರನ್ನು ಆಶ್ರಯಿಸಬೇಕು; ಇಲ್ಲದಿದ್ದರೆ ನಾಚಿಕೆಗೇಡಷ್ಟೆ. ದುರ್ಜನರನ್ನೂ ಅಜ್ಞಾನಿಗಳನ್ನೂ ದೂರ ಇರಿಸಿ, ದೈನ್ಯವೃತ್ತಿಯನ್ನು ದೇವರಲ್ಲಿ ಮಾತ್ರ ಮೀಸಲಿಡಬೇಕೆಂಬುದು ಈ ಕೀರ್ತನೆಯ ತಾತ್ಪರ್ಯ.

ವ್ಯವಹಾರಕೌಶಲವು ಮುಮುಕ್ಷುವಿಗೂ ಅಗತ್ಯವೆಂಬುದನ್ನು ಚತುರರಾದ ದಾಸರು ಅರಿತುಕೊಂಡಿದ್ದರು. ಭಕ್ತಿಯ ಆವೇಶದಲ್ಲಿ ಮುಳುಗಿದ್ದರೂ ಪುರಂದರದಾಸರ ಪ್ರಾಪಂಚಿಕಜ್ಞಾನ ಎಷ್ಟಿತ್ತೆಂಬುದಕ್ಕೆ ಈ ಕೀರ್ತನೆಯೊಂದು ನಿದರ್ಶನ. 'ಮೂರ್ಖರಾದರು ಜನರು' ಎಂದು ಆರಂಭಿಸಿ "ಒಂಟಿಯಲಿ ಹೆಂಡತಿಯ ಬಿಡುವಾತ, ಗಂಟನೊಬ್ಬರ ಕೈಯಲೊಪ್ಪಿಸುವಾತ, ನೆಂಟರಿಗೆ ಸಾಲವನು ಕೊಡುವಾತ,........." ಎಂದು ದೊಡ್ಡ ಪಟ್ಟಿಯನ್ನೇ ಕೊಡುತ್ತಾರೆ. ಇನ್ನೊಂದು ಕೀರ್ತನೆಯಲ್ಲಿ, "ಮುಂದೆ ಭಲಾ ಎಂದು, ಹಿಂದಾಡಿಕೊಂಬರ ಸಂಗ ಬೇಡ" ಎನ್ನುತ್ತಾರೆ. ಹೀಗೆ ಅವರ ಕೀರ್ತನೆಗಳಲ್ಲಿ ನಾಲ್ಕು ಜನರ ನಡುವೆ ಯಶಸ್ವಿಯಾಗಿ ಬಾಳುವ ಬಗೆ ಹೇಗೆಂಬ ವಿವರಣೆ ಯಥೇಚ್ಛವಾಗಿ ಸಿಗುತ್ತದೆ. ಅವರಿಗೆ ಜೀವನದಲ್ಲಿ ಅಗಾಧವಾದ ಅನುಭವವಿದ್ದಿತಷ್ಟೆ? ಸಂಸಾರಿಗಳಾದವರಿಗೆ ಶೀಲಶುದ್ಧಿಯ ವಿಚಾರ ಅಗತ್ಯ; ಸುಖವಾದ ಬಾಳುವೆಯ ಸಾಧನ ಅಗತ್ಯ. ಅದಕ್ಕಿಂತ ಹೆಚ್ಚಿನ ತತ್ತ್ವ ವಿಚಾರಗಳು ಅವರಿಗೆ ಅವಶ್ಯಕವೆಂದು ತೋರಲಿಲ್ಲ. ಜಗದ ಜನವೆಲ್ಲ ಮುನಿಗಳಾಗಿ ಮುಕ್ತರಾಗುವುದು ಹೇಗೆ ಸಾಧ್ಯ? ಅಂದಮೇಲೆ ಅತಿಯಾದ ವೇದಾಂತದಿಂದ ತಲೆಕೆಡಿಸಿಕೊಳ್ಳುವುದೇಕೆ? ದಾಸರು ಕೇಳುತ್ತಾರೆ - 'ಹೋಗದೂರಿನ ದಾರಿ ಕೇಳಿ ಮಾಡುವುದೇನು?'

ಗೊಡ್ಡು ಪಂಡಿತರನ್ನೂ ವೈದಿಕರನ್ನೂ ಪರಿಹಾಸ್ಯ ಮಾಡುವುದು ದಾಸರಿಗೆ ಒಲುಮೆಯ ಕೆಲಸ. ಮಡಿವಂತಿಗೆಯನ್ನು ಲೇವಡಿ ಮಾಡಿ ಬರೆದಿರುವ ಕೀರ್ತನೆಗಳೇ ಹಲವಾರು ಇವೆ. ಶೀಲದಲ್ಲಿ ಸಂವರವಿಲ್ಲದೆ, ಚಾರಿತ್ರ್ಯದಲ್ಲಿ ಶುದ್ಧಿಯಿಲ್ಲದೆ, ಆಡಂಬರದಲ್ಲಿ ಪಾವಿತ್ರ್ಯದ ಸೋಗು ಹಾಕಿ ಜನರನ್ನು ವಂಚಿಸುವುದು, ದಂಡಿಸುವುದು ಶಿಷ್ಟಾಚಾರವಲ್ಲ. ವ್ಯವಹಾರದಲ್ಲಿ ಬೂಟಾಟಿಕೆ ಊರ್ಜಿತವಾಗುವುದಿಲ್ಲ; ಸತ್ತ್ವವಿಲ್ಲದೆ ಯಾವುದೂ ಉಳಿಯದು. ಅನುಷ್ಠಾನಕ್ಕೆ ತರದ ಪಾಂಡಿತ್ಯವನ್ನು ಅವರು ಖಂಡಿಸಿದಂತೆಯೇ, ಭಕ್ತಿಯಿಲ್ಲದ ಹರಿದಾಸತನವನ್ನೂ ಖಂಡಿಸಿದ್ದಾರೆ. ಯುಕ್ತಿಯಿಂದ ತಮ್ಮನ್ನೇ ಅಧಿಕರಿಸಿಕೊಂಡು-

ಗೂಟನಾಮವ ಹೊಡೆದು ಗುಂಡುತಂಬಿಗೆ ಹಿಡಿದು
ಗೋಟಂಚು ಧೋತರ ಮಡಿಯನುಟ್ಟು
ದಾಟು ಕಾಲಿಡುತ ನಾ ಧರೆಯೊಳಗೆ ಬರಲೆನ್ನ
ಬೂಟಕತನ ನೋಡಿ ಭ್ರಮಿಸದಿರಿ ಜನರೇ!

ಎಂದು ಎಚ್ಚರಿಕೆ ಕೊಟ್ಟಿದ್ದಾರೆ.

ಕುಲವಾಗಲೀ ವಿದ್ಯೆಯಾಗಲೀ ಯಾವೊಬ್ಬನ ಹಿರಿಮೆಯನ್ನೂ ಹೇಳದು; ಶೀಲಸಂಪತ್ತಿಯೇ ಗೌರವಕ್ಕೆ ಕಾರಣ. ಹೊಲೆಯರೆಂದು ಒಂದು ಪಂಗಡವನ್ನು ದೂರವಿರಿಸಿ ಕೀಳುನೋಟದಿಂದ ಕಾಣುತ್ತಿದ್ದ ಆ ಕಾಲದಲ್ಲೇ ದಾಸರು ಹೊಲೆಯನೆಂಬುದು ಜಾತಿಸೂಚಕವಾದ ನಿಕೃಷ್ಟಶಬ್ದವಲ್ಲ, ಭ್ರಷ್ಟಾಚಾರವನ್ನು ಹೇಳುವ ಪದವೆಂದರು. ಮುಖಾರಿರಾಗದ ಅವರ ಕೀರ್ತನೆಯೊಂದು "ಹೊಲೆಯ ಹೊರಗಿಹನೆ ಊರೊಳಗಿಲ್ಲವೆ। ಬಲ್ಲವರು ಪೇಳಿ ಹರಿಭಕ್ತರಾದವರು!" ಎಂದು ಆರಂಭವಾಗುತ್ತದೆ. "ಹೇಳಿದ ಶಾಸ್ತ್ರವನ್ನು ತಿಳಿಯದವ, ಆಳಾಗಿ ಅರಸಿಗೆ ಮಣಿಯದಾತ, ಇದ್ದು ದಾನಧರ್ಮ ಮಾಡದಿದ್ದವ, ಆಶೆಯಿಂದಲಿ ಬಹಳ ದೋಷ ಮಾಡುವವ, ಹುಸಿಯಾಡುವವ, ಉಂಡಮನೆಗೆರಡ ಯೋಚಿಸುವಾತ, ಗಂಡ-ಹೆಂಡಿರೊಳು ಭೇದವಿಕ್ಕುವವ, ಅರಿತು ಆಚಾರವನು ಮಾಡದಿದ್ದವ, ಗುರುಹಿರಿಯರನು ಕಂಡು ಎರಗದಾತ' ಇವರೆಲ್ಲ ಹೊಲೆಯರಂತೆ. ಹೊಲೆತನ ಹುಟ್ಟಿನಲ್ಲಿಲ್ಲ ವೆಂಬುದನ್ನು ಹೇಳಿದವರಲ್ಲಿ ದಾಸರು ಮೊದಲನೆಯವರು. ಈ ವಿಚಾರವಾಗಿ ಅವರು ರಚಿಸಿದ ಉಗಾಭೋಗವೊಂದು ಸ್ವಾರಸ್ಯವಾಗಿದೆ:

ಹೊಲೆಯ ಬಂದನೆಂದು ಒಳಗೆ ದೇವರ
ಮಾಡಿ ಗಣಗಣಗಂಟೆಯ ಬಾರಿಸುವರಯ್ಯ।
ತನುವಿನ ಕೋಪವು ಹೊಲೆಯಲ್ಲವೆ?
ಪರಧನ ಪರಸತಿ ಹೊಲೆಯಲ್ಲವೆ?
ಹರಿಯ ವಿಸ್ಮೃತಿ ತಾನು ಹೊಲೆಯಲ್ಲವೆ?
ಹೊರಗಿದ್ದ ಹೊಲೆಯನ ಒಳಗೆ ಬಚ್ಚಿಟ್ಟರೆ
ಇದಕೇನು ಮದ್ದೋ ಪುರಂದರ ವಿಠಲ?

ದೇಹ ಮಲಿನವಾದರೆ, ವೃತ್ತಿ ಕೀಳಾದರೆ ಮನಸ್ಸೂ ಮಲಿನವಾದುದೆ? ಚಿತ್ತ ಕೀಳಾದುದೆ? "ನದಿಯು ಡೊಂಕಾದರೇನು ಉದಕ ಡೊಂಕೆ? ಕಬ್ಬು ಡೊಂಕಾಗಿರಲು ಅದರ ರಸ ಡೊಂಕೆ?" ಎಂದು ದಾಸರು ಕೇಳಿದ್ದಾರೆ. ಶೀಲಶುದ್ಧಿಯಿದ್ದರೆ ಜಾತಿಯ ವಿಚಾರವೇಕೆ? "ಆವ ಕುಲವಾದರೇನು ಆವನಾದರೇನು, ಆತ್ಮ ಭಾವವರಿತಮೇಲೆ?" ಎಲ್ಲರಲ್ಲೂ ಹರಿಯೇ ಅಂತರ್ಯಾಮಿಯೆಂದಮೇಲೆ ಕುಲದಿಂದ ತಾರತಮ್ಯವನ್ನು ಎಣಿಸುವುದು ಸಲ್ಲದು. ಒಮ್ಮೆ ಸೊಲ್ಲಾಪುರದಲ್ಲಿ ಜಂಗಮಶೈವರಿಗೂ ವೈಷ್ಣವ ಬ್ರಾಹ್ಮಣರಿಗೂ ವಿವಾದ ಒದಗಿದಾಗ ಅಲ್ಲಿದ್ದ ಪುರಂದರದಾಸರು-

ಜಂಗಮರು ನಾವು ಜಗದೊಳು।
ಜಂಗಮರು ನಾವು ಲಿಂಗಾಂಗಿಗಳು

ಮಂಗಳವಂತರು ಭವಿಗಳೆಂತೆಂಬಿರಿ।
ಶಿವ ಗುರುದೈವ ಕೇಶವ ನಮ್ಮ ಮನೆದೈವ
ವರದಮೋಹನ ನಮ್ಮ ಗುರುಶಾಂತೇಶ॥

ಎಂದು ಮೊದಲಾದ ನಾದನಾಮಕ್ರಿಯೆಯ ಕೀರ್ತನೆಯೊಂದನ್ನು ರಚಿಸಿ ಸಮಾಧಾನ ಪಡಿಸಿದಂತೆ. ಪುರಂದರದಾಸರ ವಿಶಾಲವಾದ ದೃಷ್ಟಿ ಅವರ ಉದಾರವಾದ ಹೃದಯದಿಂದ ಹೊರಹೊಮ್ಮಿದ ಭಾವನೆಗಳು ಈ ಕಾಲಕ್ಕೂ ಪ್ರಗತಿಪರವೇ. ಮಾನವನ ಮುನ್ನಡೆಯ ವೇಗ ಬಹು ಕಡಮೆ.

೪

ಗುರುಗಳಾದ ವ್ಯಾಸತೀರ್ಥರು ಶಿಷ್ಯ ಪುರಂದರದಾಸರನ್ನು ಕುರಿತು ಮಾಡಿದ ಕೃತಿ

ಕಾಂಬೋದಿರಾಗ ಝಂಪತಾಳ

ದಾಸರೆಂದರೆ ಪುರಂದರದಾಸರಯ್ಯ
ವಾಸುದೇವ ಕೃಷ್ಣನ್ನ ಸೂಸಿ ಪೂಜಿಸುವ ॥ಪ॥

ಗ್ರಾಸಕಿಲ್ಲದೆ ಪೋಗಿ ಪರರ ಮನೆಗಳ ಪೊಕ್ಕು।
ದಾಸನೆಂದು ತುಳಸಿ ಮಾಲೆಗಳ ಧರಿಸಿ।
ಬೇಸರಿಲ್ಲದೆ ಅವರ ಬೇಡಿ ಬಳಲಿಸುತ್ತ।
ಕಾಸು ಗಳಿಸುವ ಪುರುಷ ಹರಿದಾಸನೇ ॥೧॥

ಪಾತಕನ ತೆರನಂತೆ ಪದಗಳನೆ ತಾ ಪಾಡಿ।
ಕೂಟಜನರ ಮನಸು ತೋಷ ಬಡಿಸಿ।
ಗೂಟನಾಮವನಿಟ್ಟು ಕೋವಿದನು ತಾನೆನುತ।
ಬೂಟಿಕೆಯ ಮಾಡಿದವ ಹರಿದಾಸನೇ ॥೨॥

ಡಂಭದಿಂ ಹರಿಸ್ಮರಣೆ ಮಾಡಿ ಜನರ ಮುಂದೆ
ಸಂಭ್ರಮದಿ ತಾನುಂಬ ಊಟ ಬಯಸಿ।
ಅಂಬುಜೋದ್ಭವಪಿತನ ಆಗಮಗಳರಿಯದೆ।
ತಂಬೂರಿ ಮೀಟಿದವ ಹರಿದಾಸನೇ ॥೩॥

ಯಾಯವಾರವ ಮಾಡಿ ವಿಪ್ರರಿಗೆ ಮೃಷ್ಟಾನ್ನ
ಪ್ರೀಯದಲಿ ತಾನೊಂದು ಕೊಡದ ಲೋಭಿ।
ಮಾಯಸಂಸಾರದಲಿ ಮಮತೆ ಹೆಚ್ಚಾಗಿಟ್ಟು
ಗಾಯನವ ಮಾಡಲವ ಹರಿದಾಸನೇ ॥೪॥

ನೀತಿಯಲ್ಲವನರಿತು ನಿಗಮವೇದ್ಯನ ನಿತ್ಯ

ಮಾತುಮಾತಿಗೆ ಬಿಡದೆ ವರ್ಣಿಸುತಲಿ।
ಗೀತ ನರ್ತನದಿ ಶ್ರೀಕೃಷ್ಣನ್ನ ಪೂಜಿಸುವ
ಪೂತಾತ್ಮದಾಸ ಪುರಂದರದಾಸರಯ್ಯ ।।೫।।

೨. ತುಂಗಭದ್ರಾ ತೀರದ ಚೀಕಲಪರವಿಯ ವಿಜಯದಾಸರು ಪುರಂದರದಾಸರನಂತರ ದಾಸಕೂಟದ ನಾಯಕರೆಂದು ಪ್ರಸಿದ್ಧರಾದವರು. ಅವರ ಕಾಲ ೧೬೮೭ರಿಂದ ೧೭೫೫ರವರೆಗೆ. ಅಂದರೆ ಪುರಂದರದಾಸರ ಜೀವಿತಕಾಲಕ್ಕೂ ಅವರ ಜೀವಿತಕಾಲಕ್ಕೂ ತುಂಬ ಅಂತರ. ಆದರೆ ಪುರಂದರದಾಸರು ಅವರಿಗೆ ಸ್ವಪ್ನದಲ್ಲಿ ಹರಿದಾಸದೀಕ್ಷೆ ಕೊಟ್ಟು ಅಂಕಿತವನ್ನಿತ್ತರಂತೆ. ಇವರೂ ಸಾವಿರಾರು ಕೃತಿಗಳನ್ನು ಮಾಡಿ ಕೃತಾರ್ಥರಾದವರು. ಅವರು ಪುರಂದರದಾಸರನ್ನು ಸ್ತುತಿಸಿ ಹಲವಾರು ಕೀರ್ತನೆಗಳನ್ನು ರಚಿಸಿದ್ದಾರೆ. ಈ ಕೆಳಗಿನ ಪೂರ್ವಿರಾಗ ಅಟ್ಟತಾಳದ ಕೀರ್ತನೆ ಪುರಂದರದಾಸರನ್ನು ಪರಿವರ್ತನೆಮಾಡಿದ ಸಂದರ್ಭದ ಕಥೆಯನ್ನು ವಿವರಿಸಿದೆ. ಇಂದು ಪ್ರಚಲಿತವಾಗಿರುವ ಮುತ್ತಿನ ಮೂಗುತಿಯ ಕಥೆಗೆ ಈ ಕೀರ್ತನೆಯೇ ಆಧಾರ.

ಬೇಸರದೆ ಭಜಿಸಿರೋ ಪುರಂದರದಾಸರಾಯರ।
ಶ್ರೀಶ ನಿಮ್ಮನುದಾಸೀನ ಮಾಡದೆ ಪೋಷಿಸುವ ಸಂತೋಷದಿಂದ ।।ಪ।।

ಪುರಂದರಗಡಾದೊಳಗೆ ಹಿರಿಯ ಸಾವುಕಾರನೆನಿಸಿ।
ಪರಿಪರಿಯ ಸೌಖ್ಯಗಳ ಸುರಿಸುತ್ತ।
ಇರುತಿರಲು ನರಹರಿ ತ್ವರಿತ ಬ್ರಾಹ್ಮಣನಾಗುತ್ತ।
ಕರುಣದಲಿ ಅವರನುದ್ಧರಿಸಲೋಸುಗ।
ಮನೆಗೆ ಪೋಗುತ್ತ ಯಜಮಾನ ಕಂಡ।
ಜರಿದು ಬ್ರಾಹ್ಮಣನ್ಹೊರಗ್ಹಾಕಲು।
ಮರುದಿವಸ ಮತ್ಹೋಗಿ ನಿಂತ ।।೧।।

ಬಾರಿ ಬಾರಿಗೆ ಸಾವುಕಾರನ ಮೋರೆಗ್ಹತ್ತಿ ಮೋರೆಯಿಲ್ಲದೆ।
ಆರುತಿಂಗಳು ಬೆನ್ನ ಬೀಳುತ್ತ ನಾಯಕರೀತನನಾರು ಬಿ-
ಟ್ಟಾರೆಂದು ಬಯ್ಯುತ್ತ ಬೇಸತ್ತು ಎರಡು ಹೇ-
ರು ರೊಕ್ಕಾ ಮುಂದೆ ಸುರಿಯುತ್ತ ಅದರೊಳಗೊಂದು
ದುಡ್ಡಾರಿಸಿಕೊ ಎಂದು ಪೇಳಲು ನಾರೆಯಣ ಬಿಟ್ಹೋದ ನಗುತ ।।೨।।

ಹಿತ್ತಲಾ ಬಾಗಿಲಿಗೆ ಹೋಗಿ ಮತ್ತೆ ಆತನ ಮಡದಿಗಾಗಿ।
ಹತ್ತಿಬಿದ್ದನು ವಿತ್ತ ತಾ ಯೆನುತ ತನ ಮಗನ ಮುಂಜ್ಯೆಂ।
ದೆತ್ತಿ ಕರವನು ಬಾಯಿ ತೆರೆಯುತ್ತಲಾ ಪ್ರಾಣೆ ನುಡಿದಳು।
ಎತ್ತಣದ ದ್ರವ್ಯವು ತನಗೆನುತ ನಿನ್ನ ಮೂಗಿನ।
ಮುತ್ತಿನ ಮೂಗುತಿಯ ಕೊಡು ಎನೆ।
ಉತ್ತುಮಳು ತೆಗದಿತ್ತಳಾಕ್ಷಣದಿ ।।೩।।

ಜೋಕೆಯಿಂ ಮೂಗುತಿಯನೊಯ್ದು ಆಕೆ ಗಂಡನೆದುರು ।
ಹಾಕಿದನು ತಾ ಪಾಕಿ ಕೊಡುಯೆನುತ ಅದು ಕಂಡು ಇದನು ನ ।
ಮ್ಮಾಕಿಯದೆಂದು ಈತ ನುಡಿಯುತ್ತ ಅನ್ಸರದು ಇಂಥಾ
ದ್ಯಾಕಿರಬಾರದೆನ್ನುತ್ತ ಬೆಲಿ ಹೇಳು ಎನಲು ।
ನಾಕು ನೂರು ಶುಭ್ರ ಕೊಡು ಎಂಥ್ಹಾಕಿಹೋದನು ತಿರುಗಿ ಬಾರದೆಲೆ ॥೪॥

ತಿರುಗಿ ಬ್ರಾಹ್ಮಣ ಬಾರದಿರೆ ಕರೆದು ತನ್ನೆಂಡತಿಯ।
ಬರಿಯ ನಾಸಿಕವನ್ನೆ ಕಂಡು ಮೂಗುತಿಯ ಎಲ್ಲೆನೆಲು।
ಮುರಿದಿಹುದು ಎಂದಾಕೆ ಪೇಳಲ್ಕೊಳಗ್ಹೋಗಿ ನೀ ತಾರೆದಿರೆ।
ಅರೆವೆ ನಿನ್ನಯ ಜೀವವೆಂದನು ವಿಷಕೊಂಬೆನೆಂದು।
ಕರದಿ ಬಟ್ಟಲ ಧರಿಸಲಾಕ್ಷಣ।
ತ್ವರಿತದಲಿ ಹರಿ ಅದರೊಳಗ್ಹಾಕಿದನು ॥೫॥

ಹರುಷದಿಂ ಮೂಗುತಿಯನೊಯ್ದು ಪುರುಷನ ಕೈಯೊಳಗಿಡಲು।
ತರಿಸಿ ತನ್ನಲ್ಲಿದ್ದ ಪೆಟ್ಟಿಗೆಯಾ ಅದು ಕಾಣದಿರಲು।
ಬೆರಗಾಗಿ ನೋಡಿದನು ಮಡದಿಯಾ ನಿಜ ಪೇಳೆನಲು।
ಅರಸಿ ಪೇಳ್ದಳು ಕೆಟ್ಟ ಸುದ್ದಿಯಾ ಅಭಿಮಾನಕಂಜಿ।
ಅರೆದು ವಿಷವನು ಕುಡಿವೆನು ಎನಲು ಸಿರಿರಮಣ ತಾ ಕೊಟ್ಟ ಖರೆಯು ॥೬॥

ದೇವದೇವನು ಎನ್ನ ಮನದಾ ಭಾವವನು ತಿಳಿವುದೆ।
ತಾ ವೃದ್ಧಬ್ರಾಹ್ಮಣನಾಗಿ ಬಂದಿದ್ದ ಪರಿಪಕ್ವವೆನಗಿ।
ನ್ನಾವ ಕಾಲಕೆ ಆಗಬೇಕೆಂದು ವೈರಾಗ್ಯಭಾವದಿ।
ಜೀವಿಸಿಕೊಂಡಿರುವುದೆ ಛಂದ ಹೀಗೆನುತ ಮನೆ ಧನ।
ಕೋವಿದರ ಕರೆದಿತ್ತ ಹರುಷದಿ ಕಾವನಯ್ಯನ ದಾಸನಾದ ॥೭॥

ಲಕ್ಷ್ಮೀಪತಿಯ ಪಾದದಲಿ ಲಕ್ಷ್ಯವಿಟ್ಟು ವ್ಯಾಸರಾಯರ।
ಶಿಕ್ಷೆಯಿಂದಂಕಿತವ ಕೊಳುತ ಪದ ಕೊರತೆ ಐದು।
ಲಕ್ಷಪದ ಸುಳಾದಿ ಪೇಳುತ್ತ ಅಪರೋಕ್ಷ ಪುಟ್ಟಲು।
ಮೋಕ್ಷಸ್ಥಾನಕೆ ಕರೆದೊಯ್ದು ಅಧೋಕ್ಷಜನು ಸಂರಕ್ಷಿಸಿದ ॥೮॥

ಘೋರ ನರಕದೊಳಗೆ ಬಿದ್ದಪಾರ ಜನರು ಚೀರುತಿರಲು।
ದ್ಧಾರ ಮಾಡಿದ ನಾರದರಿವರು ಅವತಾರ ಮಾಡಿ।
ಧಾರುಣಿಯಲಿ ಮತ್ತೆ ಬಂದರು ಸರುವೋತ್ತಮ ಹರಿ।
ನಾರಾಯಣನೆಂದು ಸಾರಿದರು ಹೀಗೆಂದು ತಿಳಿಯಲು।
ಮಾರಜನಕ ವಿಜಯ ವಿಠಲ ಆರಿಗಾದರು ಒಲಿವ ಕಾಣಿರೋ ॥೯॥

೩. ಅವರದ್ದೇ ಇನ್ನೊಂದು ಪದ

ಭೈರವಿ ರಾಗ ಅಟ್ಟತಾಳ

ಅಡಿಗಳಿಗೊಂದಿಪೆ ಪುರಂದರಗುರುವೆ ||ಪ||

ಕಡುಜ್ಞಾನ ಭಕ್ತಿ ವೈರಾಗ್ಯದ ನಿಧಿಯೆ ||ಅ||
ವರ ಮಧ್ವಮತ ಕ್ಷೀರಾಂಬುಧಿಗೆ ಚಂದ್ರನಾದೆ।
ಗುರುವ್ಯಾಸರಾಯರಿಂದುಪದೇಶಗೊಂಡೆ।
ಎರಡೆರಡು ಲಕ್ಷದಿಪ್ಪತ್ತೈದು ಸಾವಿರ।
ಪರನಾಮಾವಳಿ ಮಾಡ್ವರಿಗರ್ಪಿಸಿದೆ ||೧||

ಗಂಗಾದಿ ಸಕಲ ತೀರ್ಥಂಗಳ ಚರಿಸಿ ತು ।
ರಂಗವದನ ವೇದವ್ಯಾಸನ।
ಹಿಂಗದೆ ಮನದಲಿ ನೆನೆದು ನೆನೆದು ಮೆರೆವ।
ಮಂಗಳ ಮಹಿಮೆಯ ನುತಿಸಿ ನುತಿಸಿ ನಾ ||೨||

ನಿನ್ನತಿಶಯಗುಣ ವರ್ಣಿಸಲಳವಲ್ಲ।
ನಿನ್ನ ಸೇವಕನ ಸೇವಕ ನಾನೆಂದು।
ಪನ್ನಗಶಯನ ಮುಕುಂದ ಕರುಣಪ್ರ।
ಸನ್ನ ವಿಜಯ ವಿಠಲನ್ನ ಸಂಪನ್ನ ||೩||

೪. ಪ್ರಸನ್ನ ವೆಂಕಟದಾಸರು ಬಿಜಾಪುರ ಜಿಲ್ಲೆಯ ಬಾಗಲಕೋಟೆಯ ಹತ್ತಿರ ಕಾಖಂಡಕಿ ಗ್ರಾಮದವರು. ಇವರು ೧೬೭೪ ಭಾದ್ರಪದ ಶುದ್ಧ ದ್ವಾದಶಿಯಲ್ಲಿ ತೀರಿಕೊಂಡರೆಂದು ತಿಳಿದುಬರುತ್ತದೆ. ಇವರು ಎಂಬತ್ತು ಪದಗಳನ್ನೂ ಕೆಲವು ಸುಳಾದಿಗಳನ್ನೂ ರಚಿಸಿದ್ದಾರೆ; ಭಾಗವತದ ದಶಮಸ್ಕಂಧದ ಪೂರ್ವಾರ್ಧವನ್ನು ಕನ್ನಡ ಪದ್ಯವಾಗಿ ಅನುವಾದಿಸಿದ್ದಾರೆ. ಅವರು ಪುರಂದರದಾಸರ ಮೇಲೆ ಈ ಕೀರ್ತನೆಯನ್ನು ರಚಿಸಿದ್ದಾರೆ.

ಶಂಕರಾಭರಣರಾಗ ಅಟ್ಟತಾಳ

ತಂದೆ ಪುರಂದರದಾಸರ ಸ್ಮರಿಸುವೆ ಎನ್ನ
ಮಂದಮತಿ ಕಳೆದು ಹರಿಭಟನೆನಿಸುವ ||ಪ||

ಗುರುವ್ಯಾಸರಾಜರ ಚರಣಾಬ್ಜಭಟಚರಣ
ವಿರತಿ ಭಕುತಿ ಜ್ಞಾನಾರ್ಣವನ।
ವರ ಉಪನಿಷದ್ವಾರಿನಿಧಿಗೆ ತಿಮಿಂಗಿಲನಹನ।
ಧರೆಯ ಕವಿಕುಲಶಿಖಾಮಣಿಯೆನಿಪನ। ||೧||

ದಿನ ದಿನ ದ್ರವ್ಯಾರ್ಥಲಾಭದಲಿ ತುಷ್ಟನ
ಕನಕಲೋಷ್ಠಸಮಾನ ನಿರೀಕ್ಷಿಸುವನ।

ಘನಸಿದ್ಧಿಗಳು ತಾವು ಬರಲೊಡಂಬಡದೆ ಹರಿ।
ಗುಣಕೀರ್ತಿಯಲಿ ಪರವಶವಾಗಿಹನ ॥೨॥

ಭವಜಲಗೋಷ್ಪದಕೆ ಸರಿದಾಟಿ ಕಾಮಕ್ರೋ
ಧವ ಮೆಟ್ಟಿ ಭಕ್ತಿ ಸುಧೆಯುಂಡು ತೇಗಿ।
ಭುವಿಯೊಳು ನಿಜಕೀರ್ತಿ ಹರಹಿ ಪವನಮತ
ದವರೆನಿಪ ದಾಸರಿಗೆ ತವ ರೂಪ ತೋರಿದನ ॥೩॥

ಕವನೋಕ್ತಿಮಳೆಗೆರೆದು ಹರಿದಾಸ
ಪವರ್ಗಳಿಗವಿರಳಾನಂದವಿತ್ತರ್ಥಿಸುವರ।
ನವಭಕುತಿ ಮನಗಂಡು
ಸವೆಯದಾನಂದ ಪುರ ಪ।
ಥವನು ತೋರಿಸಿದಂಥ ಬಹು ಕೃಪಾಕರನ ॥೪॥

ಗೀತತಾಯಿಸುಳಾದ್ಯುಗಾಭೋಗ ಪದ ಪದ್ಯ
ವ್ರಾತ ಪ್ರಬಂಧ ರಚಿಸಿ ವಿಠ್ಠಲನ।
ಪ್ರೀತಿಬಡಿಸಿ ಪ್ರತ್ಯಕ್ಷ ಕಂಡು ನಲಿವ ವೈಷ್ಣವಾಗ್ರ
ನಾಥ ಪ್ರಸನ್ನ ವೆಂಕಟಕೃಷ್ಣ ಪ್ರಿಯನ ॥೫॥

೫. ಜಗನ್ನಾಥದಾಸರು ೧೭೭೫ರ ಸುಮಾರಿಗೆ ರಾಯಚೂರು ಜಿಲ್ಲೆಯ ಮಾನವಿಯಲ್ಲಿ ಇದ್ದವರು. 'ಹರಿಕಥಾಮೃತಸಾರ' ಬರೆದವರೆಂದು ಪ್ರಸಿದ್ಧರಾಗಿದ್ದಾರೆ. ಇದಲ್ಲದೆ ಸುಮಾರು ಇನ್ನೂರ ಇಪ್ಪತ್ತು ಪದಗಳನ್ನು ಕೆಲವು ಸುಳಾದಿಗಳನ್ನೂ ಉಗಾಭೋಗಗಳನ್ನೂ ರಚಿಸಿದ್ದಾರೆ. ಇವರು ಪುರಂದರದಾಸರ ಮೇಲೆ ಈ ಕೀರ್ತನೆಯನ್ನು ರಚಿಸಿದ್ದಾರೆ.

ನಾದನಾಮಕ್ರಿಯೆ ರಾಗ ಅಟ್ಟತಾಳ

ದಾಸರಾಯಾ ಪುರಂದರದಾಸರಾಯ ॥ಪ॥
ದಾಸರಾಯ ಪ್ರತಿವಾಸರದಲ್ಲಿ ಶ್ರೀನಿ।
ವಾಸನ್ನ ತೋರೋ ದಯಾಸಾಂದ್ರ ಪುರಂದರ ॥ಅ॥

ವರದನಾಮಕ ಭೂಸುರನ ಮಡದಿಯ ಬ।
ಸಿರಲಿ ಜನಿಸಿ ಬಂದು ಮೆರೆದೆ ಧಾರುಣಿಯೊಳು ॥೧॥

ಕುಲಿಶಧರಾ ಹೃದಯಪೊಳಲೊಳು ಮಡದಿ ಮ।
ಕ್ಕಳಕೂಡಿ ಸುಖದಿಂದ ಕೆಲವು ಕಾಲದಲಿದ್ದ್ಯೋ ॥೨॥

ಮನೆ ಧನಧಾನ್ಯ ವಾಹನ ವಸ್ತುಗಳನೆಲ್ಲ।
ತೃಣಕೆ ಬಗೆದು ಕೃಷ್ಣಾರ್ಪಣವೆಂದು ಬುಧರಿಗೆ ॥೩॥

ವ್ಯಾಸರಾಯರಲಿ ಭಾಸುರ ಮಂತ್ರೋಪ।
ದೇಶವ ಕೊಂಡು ರಮೇಶನ ಒಲಿಸಿದ್ಯೋ ॥೪॥

ಪ್ರಾಕೃತ ಭಾಷೆಯಲಿ ನೀ ಕೃತಿ ಪೇಳಿ ಅ।
ಪ್ರಾಕೃತ ಹರಿಯಿಂದ ಸ್ವೀಕೃತ ನೀನಾದ್ಯೋ ॥೫॥

ತೀರ್ಥಕ್ಷೇತ್ರಗಳ ಮೂರ್ತಿಮಹಿಮೆಗಳ।
ಕೀರ್ತಿಸಿ ಜಗದಿ ಕೃತಾರ್ಥನೆಂದೆನಿಸಿದ್ಯೋ ॥೬॥

ಪಾತಕವನನಿಧಿಪೋತನೆನಿಪ ಜಗ
ನ್ನಾಥವಿಠಲನ ಸಂಪ್ರೀತಿಯ ಪಡೆದ್ಯೋ ॥೭॥

೫

ಪುರಂದರದಾಸರಿಗೆ ನಾಲ್ವರು ಮಕ್ಕಳೆಂದೂ, ಅವರೆಲ್ಲ ಹರಿದಾಸರಾದರೆಂದೂ ಪ್ರತೀತಿಯಿದೆ. ಹಿರಿಯ ಮಗನಾದ ವರದಪ್ಪನು 'ವರದಪುರಂದರ'ನೆಂಬ ಅಂಕಿತದಿಂದ ಇಪ್ಪತ್ತೆರಡು ಪದಗಳನ್ನೂ, ಎರಡನೆಯವನಾದ ಗುರುರಾಯನು 'ಗುರುಪುರಂದರ'ನೆಂಬ ಅಂಕಿತದಿಂದ ಮೂವತ್ತೆರಡು ಪದಗಳು, ಹದಿನೇಳು ಸುಳಾದಿಗಳು, ಹನ್ನೆರಡು ಉಗಾಭೋಗಗಳನ್ನೂ, ಮೂರನೆಯ ಮಗ ಅಪ್ಪಣ್ಣನು 'ಅಭಿನವ ಪುರಂದರ'ನೆಂಬ ಅಂಕಿತದಿಂದ ಒಂದು ಸುಳಾದಿಯನ್ನೂ, ನಾಲ್ಕನೆಯ ಮಧ್ವಪತಿ ಸ್ವನಾಮಾಂಕಿತದಿಂದ ಹತ್ತು ಪದಗಳು ಮತ್ತು ಏಳು ಸುಳಾದಿಗಳನ್ನೂ ರಚಿಸಿದರೆಂದೂ ಹೇಳುತ್ತಾರೆ. ಪುರಂದರದಾಸರು ಬದುಕಿದ್ದಾಗಲೇ ಮೊದಲ ಮೂವರು ಮಕ್ಕಳು ತೀರಿಕೊಂಡರಂತೆ. ಮಧ್ವಪತಿಯೊಬ್ಬ ಪುರಂದರದಾಸರು ತೀರಿಕೊಂಡಮೇಲೆ ಹತ್ತಾರು ವರ್ಷ ಬದುಕಿದ್ದನಂತೆ. ಪುರಂದರದಾಸರಿಗೆ ಇನ್ನಾವ ಹೆಸರಾಂತ ಶಿಷ್ಯನೂ ಇದ್ದ ಉಲ್ಲೇಖವಿಲ್ಲ.

ಆದರೆ ಸುಮಾರು ನೂರಿಪ್ಪತ್ತು ವರ್ಷಗಳ ನಂತರ ಬಂದ ವಿಜಯದಾಸರು (೧೬೮೭-೧೭೫೫) ಪುರಂದರದಾಸರನ್ನು ತಮ್ಮ ಗುರುಗಳೆಂದು ವ್ಯವಹರಿಸಿ ದಾಸಪರಂಪರೆಯನ್ನು ಮುಂದುವರೆಸಿದರು. ಇವರು ತುಂಗಭದ್ರಾ ನದಿಯ ದಂಡೆಯ ಮೇಲಿರುವ ಚೀಕಲಪರವಿ ಎಂಬ ಹಳ್ಳಿಯಲ್ಲಿ ಹುಟ್ಟಿ, ಲೌಕಿಕ ಕಾರ್ಯದಲ್ಲಿ ಪ್ರಸಕ್ತರಾಗಿದ್ದಾಗ ಒಮ್ಮೆ ಪುರಂದರದಾಸರು ಅವರ ಸ್ವಪ್ನದಲ್ಲಿ ಕಾಣಿಸಿಕೊಂಡು ಅವರಿಗೆ ಹರಿದಾಸದೀಕ್ಷೆ ಕೊಟ್ಟರಂತೆ. ಅವರ ಮುಂಚಿನ ಹೆಸರು ದಾಸಪ್ಪನೆಂದು; ಅವರ ಅಂಕಿತ 'ವಿಜಯವಿಠ್ಠಲ'. ಅವರು ಚಿಪ್ಪರಗಿಯಲ್ಲಿ ತೀರಿಕೊಳ್ಳುವ ಮುನ್ನ ದೇಶದಲ್ಲೆಲ್ಲ ತಮ್ಮ ಪ್ರಭಾವವನ್ನು ಬೀರಿ ೮೮೭ ಪದಗಳನ್ನೂ, ೫೨೫ ಸುಳಾದಿಗಳನ್ನೂ ರಚಿಸಿದರು. ಇವುಗಳಲ್ಲಿ ಬಹುಭಾಗ ಪ್ರಕಟವಾಗಿದೆ.

ಇವರಿಗೆ ಹಲವಾರು ಮಂದಿ ಶಿಷ್ಯರು ಇದ್ದರು. ಇವರೆಲ್ಲರ ಆಸಕ್ತಿಯಿಂದಲೇ ಹರಿದಾಸ ಪರಂಪರೆ ವಿಸ್ತೃತವಾದದ್ದು. ಮೋಹನದಾಸರು, ಗೋಪಾಲದಾಸರು. ಪಂಗನಾಮದ ತಿಮ್ಮಣ್ಣದಾಸರು ಈ ಮೂರು ಮಂದಿ ಪ್ರಸಿದ್ಧ ಹರಿದಾಸರು ಅವರ ಶಿಷ್ಯರೇ. ಗದ್ವಾಲ ಸಂಸ್ಥಾನದ ವ್ಯಾಸತತ್ತ್ವ

ಜ್ಞರು (ಐಜಿ ಸ್ವಾಮಿಗಳು) ಎಂಬ ಸಂನ್ಯಾಸಿಗಳೂ ವಿಜಯದಾಸರಿಂದಲೇ ಅಂಕಿತಪಡೆದು ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಇವರ ಮೇಲೆ ಗೋಪಾಲದಾಸರ ಪ್ರಭಾವ ವಿಶೇಷವಾಗಿದ್ದಿತು. ಇವರು 'ಮಾನಸ ಸ್ಮೃತಿ'ಯೆಂಬ ಸಂಸ್ಕೃತ ಗ್ರಂಥವೊಂದನ್ನು ರಚಿಸಿ ಹರಿದಾಸಪಂಥದ ಮನೋಭಾವವನ್ನು ಸ್ಪಷ್ಟಪಡಿಸಿದರು. ಇವರ ದೇವರನಾಮಗಳಲ್ಲಿ 'ವಾಸುದೇವ ವಿಠಲ' ಎಂಬ ಅಂಕಿತ ಕಾಣಸಿಗುತ್ತದೆ. ಬೇಲೂರು ವೆಂಕಟದಾಸರು (ವೆಂಕಟೇಶವಿಟ್ಠಲ), ಹೊನ್ನಾಳಿ ವೆಂಕಪ್ಪಾಚಾರ್ಯರು (ವೆಂಕಟವಿಟ್ಠಲ), ಆನಂದತೀರ್ಥಪ್ಪ (ಹಯವದನವಿಟ್ಠಲ), ಮೀನಪ್ಪ (ಮುದ್ದುವಿಟ್ಠಲ), ಕೂಡಲಿ (ಕೊಂಡಲಗಿ) ಮಧ್ವಾಚಾರ್ಯರು (ಮಧ್ವೇಶವಿಟ್ಠಲ), ಶೇಷಗಿರಿದಾಸರು (ಹಯಗ್ರೀವವಿಟ್ಠಲ) ಇವರೂ ವಿಜಯದಾಸರಿಂದ ಅಂಕಿತಪಡೆದು ಹರಿದಾಸರಾದರು. ಇವರೆಲ್ಲ ದಾಸಕೂಟವು ಜನಪ್ರಿಯವಾಗಲು ಕಾರಣರಾದರು.

ಮೋಹನದಾಸರು ೧೭೮೦ರ ಸುಮಾರಿಗೆ ತೀರಿಕೊಂಡಂತೆ ಕಾಣುತ್ತದೆ. ಇವರು ಬಳ್ಳಾರಿ ಜಿಲ್ಲೆಯಲ್ಲಿ ಚಿಪ್ಪರಗಿಯೆಂಬ ಹಳ್ಳಿಯವರು; ಪುರಂದರದಾಸರಂತೆ ಇವರೂ ಮುಂಚೆ ಚಿನಿವಾರರಾಗಿದ್ದರು. ಹರಿದಾಸರಾದಮೇಲೆ ನಲವತ್ತು ಪದಗಳನ್ನೂ ಎರಡು ಸುಳಾದಿಗಳನ್ನೂ ರಚಿಸಿದರು. ಇವರ ಮಗ ವೆಂಕಪ್ಪನೆಂಬುವನೂ ಹರಿದಾಸನಾಗಿ 'ತಂದೆ ಮೋಹನವಿಠ್ಠಲ' ಎಂಬ ಅಂಕಿತದಿಂದ ಪದಗಳನ್ನು ಬರೆದನು; ವಿಜಯದಾಸರ ಕೃತಿಗಳ ಶುದ್ಧ ಹಸ್ತ ಪ್ರತಿ ಮಾಡಿಟ್ಟ ಪುಣ್ಯ ಈತನದು. ಈ ಮಗನಲ್ಲದೆ ಮೋಹನದಾಸರಿಗೆ 'ಮಧ್ವವರದವಿಠ್ಠಲ', 'ವಿರಜಿ ಪ್ರಾಣೇಶವಿಠ್ಠಲ' ಎಂಬಿಬ್ಬರು ಪ್ರಮುಖ ಶಿಷ್ಯರಿದ್ದರು. 'ಪ್ರಸನ್ನ ವೆಂಕಟವಿಠ್ಠಲ'ನೆಂಬ ಅಂಕಿತದಿಂದ ಪದಗಳನ್ನು ಬರೆದ ಚಿಕ್ಕೇನಹಳ್ಳಿ ತಿಮ್ಮಣ್ಣದಾಸರೆಂಬುವರೂ ಇವರ ಶಿಷ್ಯರೇ ಎಂದು ಹೇಳುತ್ತಾರೆ.

ವಿಜಯದಾಸರ ಇನ್ನೊಬ್ಬ ಶಿಷ್ಯರಾದ ಗೋಪಾಲದಾಸರು (೧೭೨೨-೧೭೬೫) ಸುಪ್ರಸಿದ್ಧರು, ಅವರ ಪರಂಪರೆ ಇಂದಿನವರೆಗೂ ಉಳಿದುಬಂದಿದೆ. ರಾಯಚೂರು ಜಿಲ್ಲೆಯ ಮೊಸರುಕಲ್ಲು ಎನ್ನುವ ಹಳ್ಳಿ ಇವರ ಸ್ಥಳ; ಭಾಗಣ್ಣನೆಂಬುದು ಅವರ ಲೌಕಿಕವಾಗಿದ್ದ ಹೆಸರು. ಉತ್ತರಾದಿಮಠದ ಸತ್ಯಬೋಧತೀರ್ಥರಿಂದ ಸನ್ಮಾನಿತರಾದ ಇವರು ೨೩೩ ಪದಗಳನ್ನೂ ೭೧ ಸುಳಾದಿಗಳನ್ನೂ ರಚಿಸಿದ್ದಾರೆ. ಇವರ ಶಿಷ್ಯಕೋಟಿ ದೊಡ್ಡದಾಗಿದ್ದಿತು. ಸುಪ್ರಸಿದ್ಧರಾದ ಜಗನ್ನಾಥದಾಸರು ಇವರ ಶಿಷ್ಯರೇ. ಗದ್ವಾಲದ ಸುಬ್ಬಣ್ಣದಾಸರು (ಕೇಶವವಿಟ್ಠಲ), ಸೀನಪ್ಪದಾಸರು (ಗುರುಗೋಪಾಲವಿಟ್ಠಲ), ದಾಸಪ್ಪದಾಸರು (ವರದಗೋಪಾಲವಿಟ್ಠಲ) ಇವರೂ ಗೋಪಾಲದಾಸರ ಶಿಷ್ಯರಾಗಿ ತಂತಮ್ಮ ಶಿಷ್ಯ ಪರಂಪರೆಗಳನ್ನು ಬೆಳೆಸಿದರು.

ಗದ್ವಾಲದ ಸುಬ್ಬಣ್ಣದಾಸರ ಶಿಷ್ಯರಲ್ಲಿ ಸುರಪುರದ ಆನಂದದಾಸರು ೧೭೯೦ರ ಸುಮಾರಿಗಿದ್ದವರು; 'ಕಮಲೇಶವಿಟ್ಠಲ' ಎಂಬ ಅಂಕಿತದಿಂದ ಹಲವಾರು ಪ್ರೌಢಪದಗಳನ್ನು ರಚಿಸಿದ್ದಾರೆ. ಇವರಿಗೆ ಸುರಪುರದ ಭೀಮದಾಸರು (ಶ್ರೀಶಕೇಶವವಿಟ್ಠಲ) ಮತ್ತು ಸಂತೇಬೆನ್ನೂರಿನ ರಾಮಾಚಾರ್ಯರು (ಕಮಲಾಪತಿ ವಿಟ್ಠಲ) ಎಂಬ ಇಬ್ಬರು ಹಿರಿಮೆಯ ಶಿಷ್ಯರಿದ್ದರು. ೧೮೨೦ರ ಸುಮಾರಿಗೆ ಜೀವಿಸಿದ್ದ ರಾಮಾಚಾರ್ಯರು ಸಂಸ್ಕೃತ ಕನ್ನಡ ಎರಡರಲ್ಲೂ ಪಂಡಿತರಾಗಿದ್ದು ಹೆಸರಾಂತ ಹರಿದಾಸರಾದರು. ಇವರ ಉತ್ಸಾಹದ ಫಲವಾಗಿ ಶ್ರೀಮಂತ, ಸುಸಂಸ್ಕೃತ ಗೃಹಸ್ಥರನೇಕರು

ದಾಸಕೂಟಕ್ಕೆ ಸೇರಿದರು. ಇವರ ಪ್ರಭಾವ ಉಟಕೂರು, ಕೊಲ್ಲಾಪುರ, ಕುಂಭಕೋಣ, ಗರ್ಗೇಶ್ವರಿ, ಜಮಖಂಡಿ, ಹಡಗಲಿ, ಕುಡತಿನಿ ಇಲ್ಲೆಲ್ಲ ಇದ್ದಿತು.

ಸೀನಪ್ಪದಾಸರು ರಾಯಚೂರು ಜಿಲ್ಲೆಯ ಮೊಸರಕಲ್ಲಿನವರು. 'ಗುರುಗೋಪಾಲವಿಟ್ಠಲ' ಎಂಬ ಅಂಕಿತದಲ್ಲಿ ಸುಂದರವಾದ ಕೀರ್ತನೆಗಳನ್ನು ರಚಿಸಿದ್ದಾರೆ; ಇವುಗಳಲ್ಲಿ ೭೫ ಪದಗಳೂ ಒಂದು ಸುಳಾದಿಯೂ ಕೆಲವು ಉಗಾಭೋಗಗಳೂ ಪ್ರಚುರವಾಗಿವೆ. ಇವರಿಗೆ ನಾಲ್ವರು ಶಿಷ್ಯರಿದ್ದು ಇವರ ಪರಂಪರೆಯನ್ನು ಮುಂದುವರೆಸಿದರು.

ದಾಸಪ್ಪದಾಸರು ಗೋಪಾಲದಾಸರ ತಮ್ಮನೆಂದೇ ಹೇಳುತ್ತಾರೆ. ಅವರು ಅಣ್ಣನಿಂದಲೇ ಅಂಕಿತಪಡೆದು ೧೩೮ ಪದಗಳನ್ನೂ, ೩೦ ಸುಳಾದಿಗಳನ್ನೂ, ಕೆಲವು ಉಗಾಭೋಗಗಳನ್ನೂ ರಚಿಸಿದರು. ಇವರಿಗೆ ಹತ್ತುಮಂದಿ ಶಿಷ್ಯರಿದ್ದರಂತೆ. ಇವರಲ್ಲಿ ಹಲವರ ಪರಂಪರೆಗಳು ಇಂದಿಗೂ ಇವೆಯೆಂದು ಹೇಳುತ್ತಾರೆ.

ಪಂಗನಾಮದ ತಿಮ್ಮಣ್ಣದಾಸರು ವಿಜಯದಾಸರ ಶಿಷ್ಯರಾಗಿ ಗೋಪಾಲದಾಸರ ಸತೀರ್ಥರಾಗಿದ್ದವರು. ಇವರ ಊರು ಬಳ್ಳಾರಿ ಜಿಲ್ಲೆಯ ಆದವಾನಿ; ಕಾಲ ೧೭೬೮ರ ಆಸುಪಾಸು ಎನ್ನಬಹುದು. 'ವೇಣುಗೋಪಾಲ' ಎಂಬ ಅಂಕಿತದಿಂದ ಇವರು ೩೭ ಪದಗಳನ್ನೂ ಹನ್ನೆರಡು ಸುಳಾದಿಗಳನ್ನೂ ರಚಿಸಿದ್ದಾರೆ. ಇವರ ಶಿಷ್ಯರಲ್ಲಿ ಬ್ಯಾಗವಟ್ಟಿ ನರಸಿಂಹಾಚಾರ್ಯರು (ನರಸಿಂಹವಿಠ್ಠಲ), ಕಲ್ಲೂರು ಸುಬ್ಬಣ್ಣದಾಸರು (ವ್ಯಾಸವಿಟ್ಠಲ) ಮತ್ತು ಜನಾರ್ದನಾಚಾರ್ಯರು (ಜನಾರ್ದನ ವಿಟ್ಠಲ) ಇವರು ಪ್ರಸಿದ್ಧರು. ನರಸಿಂಹಾಚಾರ್ಯರು ಜಗನ್ನಾಥದಾಸರ ತಂದೆ, ಅವರ ಸ್ಥಳ ರಾಯಚೂರು ಜಿಲ್ಲೆಯ ಬ್ಯಾಗವಟ್ಟಿ. ಅವರು ೧೭೬೫ರಲ್ಲಿ ಕಾಲವಾದರೆಂದು ತಿಳಿದುಬರುತ್ತದೆ.

ಕಲ್ಲೂರು ಸುಬ್ಬಣ್ಣದಾಸರ ಪರಂಪರೆ ಬಹುಕಾಲ ಉಳಿಯಿತು. ಕಲ್ಲೂರೆಂಬ ಹಳ್ಳಿ ಹೈದರಾಬಾದು ಸೀಮೆಯಲ್ಲಿದೆ. ೧೭೭೫ ಸುಮಾರಿಗಿದ್ದ ಇವರು ಪಂಗನಾಮದ ದಾಸರಿಂದ 'ವ್ಯಾಸವಿಟ್ಠಲ' ಎಂಬ ಅಂಕಿತವನ್ನು ಸ್ವೀಕರಿಸಿ ೨೬ ಪದಗಳನ್ನೂ ನಾಲ್ಕು ಸುಳಾದಿಗಳನ್ನೂ ರಚಿಸಿದ್ದಾರೆ. ಇವರ ಶಿಷ್ಯರಲ್ಲಿ ಕಲ್ಲೂರು ಭುಜಂಗದಾಸರು (ಶ್ರೀನಿವಾಸವಿಟ್ಠಲ) ಮತ್ತು ಕಲ್ಲೂರು ವೈರಾಗ್ಯಶಾಲಿ ತಿಮ್ಮಣ್ಣದಾಸರು (ರಘುಪತಿವಿಟ್ಠಲ) ಇವರಿಬ್ಬರು ಪ್ರಸಿದ್ಧರು. ಭುಜಂಗದಾಸರಿಗೆ ಕಲ್ಲೂರು ಶ್ರೀನಿವಾಸದಾಸ (ತಂದೆ ಶ್ರೀನಿವಾಸ ವಿಟ್ಠಲ) ಎಂಬ ಶಿಷ್ಯನೂ, ಬೆಂಗಳೂರು ಕೃಷ್ಣದಾಸ (ಗುರು ಶ್ರೀನಿವಾಸ ವಿಟ್ಠಲ) ನೆಂಬ ಪ್ರಶಿಷ್ಯನೂ ಇದ್ದರು. ವೈರಾಗ್ಯಶಾಲಿ ತಿಮ್ಮಣ್ಣದಾಸರು ವ್ಯಾಸವಿಠ್ಠಲರಿಂದ ಅಂಕಿತ ಪಡೆದು ಮೂರು ಪದಗಳನ್ನೂ ೨೨ ಸುಳಾದಿಗಳನ್ನೂ 'ಅಧ್ಯಾತ್ಮಮಾಲೆ'ಯೆಂಬ ಗ್ರಂಥವನ್ನೂ ರಚಿಸಿದರು. ಇವರ ಪ್ರಶಿಷ್ಯರಾದ ಹರಪನಹಳ್ಳಿ ಶ್ರೀಪತಿದಾಸರು (ಶ್ರೀಪತಿವಿಟ್ಠಲ) ಖ್ಯಾತಿವೆತ್ತ ಹರಿದಾಸರು. ೧೮೦೨ರ ಸುಮಾರಿಗೆ ಗದ್ವಾಲದ ನಿವಾಸಿಗಳಾಗಿದ್ದ ಇವರು ಕೆಂಭಾವಿ ದಾಸಾಚಾರ್ಯರಿಂದ ದೀಕ್ಷೆಪಡೆದು ೩೫ ಪದಗಳನ್ನೂ ಮೂರು ಸುಳಾದಿಗಳನ್ನೂ ಬರೆದರು. ಇವರ ಶಿಷ್ಯ ಹರಪನಹಳ್ಳಿ ವೆಂಕಟದಾಸರು 'ತಂದೆ ಶ್ರೀಪತಿವಿಟ್ಠಲ' ಎಂಬ ಅಂಕಿತದಿಂದ ೨೭ ಪದಗಳನ್ನೂ ಒಂದು ಸುಳಾದಿಯನ್ನೂ ಬರೆದಿದ್ದಾರೆ. ಇವರು ೧೮೩೦ರಲ್ಲಿ ತೀರಿಕೊಂಡರೆಂದು ತಿಳಿದುಬರುತ್ತದೆ. ಇವರ ಶಿಷ್ಯ ದೀಪದ ಅಣ್ಣಯ್ಯಾಚಾರ್ಯರು (ಶ್ರೀನಿಧಿವಿಟ್ಠಲ) ಧಾರವಾಡದವರು;

ಇವರ ಮಗ ದೀಪದ ಗೋವಿಂದಾಚಾರ್ಯರು (೧೮೮೫) ಹರಿದಾಸರಾಗಿ ಹೆಸರು ಹೊತ್ತರು. ಅಣ್ಣಯ್ಯಾಚಾರ್ಯರ ಇನ್ನೊಬ್ಬ ಶಿಷ್ಯ ಸೌದಿ ರಾಮಚಂದ್ರಪ್ಪನಿಗೆ ದೊಡ್ಡಬಳ್ಳಾಪುರದ ರಾಘವೇಂದ್ರದಾಸರು (ಮುದ್ದುಮೋಹನವಿಟ್ಠಲ) ಎಂಬ ಶಿಷ್ಯರಿದ್ದರು. ೧೮೯೮ರಲ್ಲಿ ತೀರಿಕೊಂಡ ಇವರ ವಂಶಸ್ಥರು ಇಂದಿಗೂ ಇದ್ದಾರೆ.

ಗೋಪಾಲದಾಸರ ಶಿಷ್ಯರಾದ ಜಗನ್ನಾಥದಾಸರು ಹರಿದಾಸಪಂಥದಲ್ಲಿ ಹೊಸಯುಗವೊಂದರ ಪ್ರವರ್ತಕರೆನ್ನಬಹುದು. ರಾಯಚೂರು ಜಿಲ್ಲೆಯ ಬ್ಯಾಗವಟ್ಟಿ ಇವರ ಊರು. ಇವರ ತಂದೆಯೂ ಗೋಪಾಲದಾಸರ ಸತೀರ್ಥರಾದ ಪಂಗನಾಮದಾಸರಿಂದ ಅಂಕಿತ ಪಡೆದ ಹರಿದಾಸರೇ ಎಂದು ಈಗಾಗಲೇ ತಿಳಿದಿದೆಯಷ್ಟೆ. ಇವರ ಮುಂಚಿನ ಹೆಸರು ಸೀನಪ್ಪನೆಂದೂ ಇವರ ಜನ್ಮ ಸಂವತ್ಸರ ೧೭೨೭ ಎಂದೂ ತಿಳಿದುಬಂದಿದೆ. ಗುರುಗಳಾದ ಗೋಪಾಲದಾಸರೊಂದಿಗೆ ತಿರುಪತಿಗೆ ಹೋಗಿದ್ದಾಗ ಅಲ್ಲಿ ದಿವ್ಯಾನುಭವವಾಗಿ ಇವರ ಹರಿದಾಸದೀಕ್ಷೆ ಬಲಿಯಿತಂತೆ. ಇವರು ರಚಿಸಿರುವ 'ಹರಿಕಥಾಮೃತಸಾರ'ವೆಂಬ ಮೂವತ್ತೆರಡು ಸಂಧಿಗಳ ಗ್ರಂಥ ದಾಸಸಾಹಿತ್ಯದ ಅಪೂರ್ವರತ್ನವೆಂದರೆ ಉತ್ಪ್ರೇಕ್ಷೆಯಲ್ಲ. ಈ ಗ್ರಂಥಕ್ಕೆ ಕಮಲಾಪತಿದಾಸರು, ಸಂಕರ್ಷಣ ಒಡೆಯರು, ಪದ್ಮನಾಭದಾಸರು ಮುಂತಾದವರು ವ್ಯಾಖ್ಯಾನ ಬರೆದು ಉಪಕಾರಮಾಡಿದ್ದಾರೆ. ಈ ಗ್ರಂಥವಲ್ಲದೆ ಇವರು 'ತತ್ವಸುವ್ವಾಲಿ'ಯೆಂಬ ಸುದೀರ್ಘವಾದ ಕಾವ್ಯವನ್ನೂ ರಚಿಸಿದ್ದಾರೆ. ಇವರು ರಚಿಸಿದ ೨೨೫ ಪದಗಳೂ, ಮೂರು ಸುಳಾದಿಗಳೂ, ಹಲವಾರು ಉಗಾಭೋಗಗಳೂ ಪ್ರಚುರವಾಗಿವೆ. ಇವರು ರಾಯಚೂರಿನ ಮಾನವಿಯೆಂಬಲ್ಲಿ ೧೮೦೯ರಲ್ಲಿ ತೀರಿಕೊಂಡಂತೆ ತೋರುತ್ತದೆ.

ಇವರ ಶಿಷ್ಯಸಂಪತ್ತು ವಿಪುಲವಾಗಿದ್ದಿತು. ಅವರ ಹತ್ತಾರು ಶಿಷ್ಯರ ಪರಂಪರೆ ಇಂದಿನವರೆಗೂ ಉಳಿದುಬಂದಿದೆ. ಲಿಂಗಸೂಗೂರಿನ ಯೋಗೀಂದ್ರಪ್ಪ (ಪ್ರಾಣೇಶವಿಟ್ಠಲ) ಮತ್ತು ಸುರಪುರದ ಪ್ರೇಮದಾಸರು (ಅಭಿನವ ಜನಾರ್ದನವಿಟ್ಠಲ) ಇವರ ಶಿಷ್ಯ ಪ್ರಶಿಷ್ಯರು; ಹರಿದಾಸ ಪ್ರಪಂಚದಲ್ಲಿ ಹೆಸರು ಮಾಡಿದ್ದಾರೆ. ಯೋಗೀಂದ್ರಪ್ಪನು ಬಡತನದಲ್ಲಿ ಇದ್ದು ತೊನ್ನು ಹಿಡಿದು ಸಂಕಟಪಡುತ್ತಿದ್ದಾಗ ಜಗನ್ನಾಥದಾಸರು ಅವನ ಮೇಲೆ ಕೃಪೆ ಮಾಡಿ ಅಂಕಿತವಿತ್ತು ಅವನಿಗೆ ಶಾಸ್ತ್ರಾಭ್ಯಾಸದ ವ್ಯವಸ್ಥೆ ಮಾಡಿಸಿದರಂತೆ. ರಾಘವೇಂದ್ರ ಸ್ವಾಮಿಮಠದ ವರದೇಂದ್ರಸ್ವಾಮಿಗಳು ಲಿಂಗಸೂಗೂರಿಗೆ ಬಂದಾಗ ಇವರನ್ನು ಅನುಗ್ರಹಿಸಿದರಂತೆ. ಇವರು ಸಂಸ್ಕೃತದಲ್ಲಿ ಹಲವಾರು ಪ್ರೌಢವಾದ ಶಾಸ್ತ್ರಗ್ರಂಥಗಳನ್ನೂ ಕನ್ನಡದಲ್ಲಿ ಹದಿನಾರು ಪದ್ಯಗ್ರಂಥಗಳನ್ನೂ ಬರೆದಿದ್ದಾರೆ;' ಇಷ್ಟಲ್ಲದೆ ೨೫೨ ಪದಗಳನ್ನೂ ಮೂರು ಸುಳಾದಿಗಳನ್ನೂ ಎಂಟು ಉಗಾಭೋಗಗಳನ್ನೂ ಬರೆದಿದ್ದಾರೆ. ಇವರು ೧೮೨೨ರಲ್ಲಿ ತೀರಿಕೊಂಡರು. ಇವರ ಮೊಮ್ಮಗ ರಾಮದಾಸರೆಂಬುವರು ತಮ್ಮ ಸೋದರಮಾವನಿಂದ 'ಶ್ರೀಶಪ್ರಾಣೇಶವಿಟ್ಠಲ' ಎಂಬ ಅಂಕಿತಪಡೆದು ೨೪ ಪದಗಳನ್ನು ರಚಿಸಿ ಹಲವಾರು ಶಿಷ್ಯರನ್ನು ಸಂಗ್ರಹಿಸಿ ೧೮೯೦ರಲ್ಲಿ ಸ್ವರ್ಗಸ್ಥರಾದರು. ಇವರ ಪರಂಪರೆ ಇಂದಿನವರೆಗೂ ಬಂದಿದೆ.

ಜಗನ್ನಾಥದಾಸರ ಇನ್ನೊಬ್ಬ ಶಿಷ್ಯರಾಗಿದ್ದ ಪ್ರೇಮದಾಸರು ಬಾಲ್ಯದಿಂದ ಹೆಳವರಾಗಿದ್ದು ರಾಘವೇಂದ್ರಸ್ವಾಮಿಗಳನ್ನು ಮಂತ್ರಾಲಯದಲ್ಲಿ ಸೇವಿಸಿ ಸ್ವಸ್ಥರಾದರಂತೆ. ಇವರು 'ಅಭಿನವ ಜನಾರ್ದನವಿಟ್ಠಲ' ಎಂಬ ಅಂಕಿತದಿಂದ ೮೨ ಪದಗಳನ್ನೂ ಒಂಬತ್ತು ಸುಳಾದಿಗಳನ್ನೂ ರಚಿಸಿದ್ದಾರೆ.

ರಾಘವೇಂದ್ರ ಸ್ವಾಮಿಗಳ ಮೇಲೆ ಅವರು ಮಾಡಿರುವ ಸ್ತೋತ್ರಕೃತಿಗಳು ಇಂದಿಗೂ ಮನೆಮನೆಗಳಲ್ಲಿ ಬಳಕೆಯಲ್ಲಿವೆ. ಇವರ ಕಾಲ ೧೮೨೫ರ ಸುಮಾರು ಎಂದು ಹೇಳುತ್ತಾರೆ. ಇವರ ಶಿಷ್ಯಪರಂಪರೆಯಲ್ಲಿ ಬಂದ ಬಾಗೇಪಲ್ಲಿ ಸುಬ್ಬರಾಯದಾಸರು (ಗುರುರಾಮವಿಟ್ಠಲ) ಸುಮಾರು ಐವತ್ತು ವರ್ಷಗಳ ಕೆಳಗೆ ಪ್ರಸಿದ್ಧರಾಗಿದ್ದವರು.

ಸಾಂಪ್ರದಾಯಿಕವಾಗಿ ಗುರುಗಳಿಂದ ಅಂಕಿತವಾಗಿ ಹರಿದಾಸದೀಕ್ಷೆ ದೊರೆತಮೇಲೆ ಹರಿದಾಸರೆನ್ನಿಸಿಕೊಳ್ಳುವುದು ಸಾಧಾರಣ ನಿಯಮ. ಆದರೆ ಇದಕ್ಕೆ ಅಪವಾದವಾಗಿ ಅಂತರ್ವಾಣಿಯ ಪ್ರೇರಣೆಯಿಂದ ಸ್ವತಂತ್ರವಾಗಿ ತಾವೇ ಅಂಕಿತವನ್ನು ಪರಿಗ್ರಹಿಸಿ ದೀಕ್ಷೆ ತಳೆದು ಹರಿದಾಸರಾಗಿರುವ ನಿದರ್ಶನಗಳು ಹಲವಾರು ಉಂಟು. ಹೆಳವನಕಟ್ಟೆ ಗಿರಿಯಮ್ಮನೆಂಬಾಕೆ ಯಾವ ಗುರುವಿನಿಂದಲೂ ಅಂಕಿತ ಪಡೆಯದೆ ತಾನೇ ಹರಿದಾಸ್ಯವನ್ನು ಕೈಕೊಂಡು ಹಲವಾರು ಕೃತಿಗಳನ್ನು ರಚಿಸಿ ಅಪರೋಕ್ಷಜ್ಞಾನಿಯೆಂದು ದಾಸಕೂಟದಲ್ಲಿ ಪ್ರಖ್ಯಾತಳಾದಳು. ೧೭೫೦ರ ಸುಮಾರಿಗಿದ್ದ ಈಕೆ ಧಾರವಾಡ ಜಿಲ್ಲೆಯ ರಾಣೆಬೆನ್ನೂರಿನವಳು. ಈಕೆಯನ್ನು 'ಹೆತ್ತೋರ ಮನದೈವ ಶ್ರೀ ಮೈಲಾರ'ನಂತೆ. ಈಕೆಯ ಗಂಡನ ಮನೆ ಹರಿಹರ ತಾಲ್ಲೂಕಿನ ಮಲೇಬೆನ್ನೂರೆಂಬ ಹಳ್ಳಿ. ಗೃಹಸುಖ ಅಷ್ಟಾಗಿ ಇದ್ದಂತೆ ತೋರುವುದಿಲ್ಲ. ತನ್ನ ಇಡೀ ಬಾಳನ್ನೆಲ್ಲ ಈಕೆ ನಾಮಸಂಕೀರ್ತನೆ, ಕವಿತೆ, ಪೂಜೆಗಳಲ್ಲೇ ಕಳೆದಳು. 'ಹೆಳವನಕಟ್ಟೆ ರಂಗ' ಎಂಬ ಅಂಕಿತದಿಂದ ಈಕೆ 'ಸೀತಾಸ್ವಯಂವರ', 'ಚಂದ್ರಹಾಸ ಚರಿತ್ರೆ' ಎಂಬೆರಡು ಕನ್ನಡ ಖಂಡಕಾವ್ಯಗಳನ್ನು ಸಾಂಗತ್ಯದ ಶೈಲಿಯಲ್ಲಿ ರಚಿಸಿದ್ದಾಳೆ. 'ಗಜೇಂದ್ರ ಮೋಕ್ಷ', 'ಶಂಕರಗಂಡನ ಕಥೆ', 'ಗಿಳಿ ಪಾರಿಜಾತ' ಮುಂತಾದ ಇತರ ಗ್ರಂಥಗಳನ್ನೂ ರಚಿಸಿದ್ದಾಳೆಂದು ತಿಳಿದುಬಂದಿದೆ.

'ಅರಿಯೆನು ಕವಿತಾಚಾತುರ್ಯದ ಮಹಿಮೆಯ।
ಗುರುಮುಖದಲ್ಲಿ ಕೇಳಲಿಲ್ಲ!
ಹೆಚ್ಚಾಗಿ ಅರಿಯೆನು ಹೆಣ್ಣುಬಾಲೆಯು ನಾನು।
ಅಚ್ಚಚಾತುರ್ಯದ ಪದನ।
ನೆಚ್ಚಿನ ನಿನ್ನನು ಹೆಳವನಕಟ್ಟೆ ರಂಗಯ್ಯ।

ಉಚ್ಚರಿಸಿದೆ ಕ್ಷಮಿಸುವುದು' ಎಂದು ಆಕೆ ನಿವೇದಿಸಿಕೊಂಡಿರುವುದು ಹೃದ್ಯವಾಗಿದೆ.

ಉಡುಪಿಯ ಪೆರಂಪಳ್ಳಿಯವನಾದ ನೆಕ್ಕಾರೆ ಕೃಷ್ಣರಾಯನೆಂಬ ಕವಿ ಈಕೆಯ ಸಮಕಾಲಿಕ ನಾಗಿದ್ದವನು. ಮಧುರವಾಗಿ, ಮನೋಜ್ಞವಾಗಿ ಬರೆಯಬಲ್ಲ ಈತನಿಗೂ ಸಾಂಪ್ರದಾಯಿಕವಾದ ಅಂಕಿತ ದೊರೆಯಲಿಲ್ಲ. ತಿರುಪತಿಯ ವರಾಹಸ್ವಾಮಿ ಮತ್ತು ವೆಂಕಟೇಶ್ವರರ ಭಕ್ತನಾಗಿದ್ದ ಈತ 'ವರಾಹತಿಮ್ಮಪ್ಪ'ನೆಂಬ ಅಂಕಿತವನ್ನು ಗ್ರಹಿಸಿ ಹಲವಾರು ಕೀರ್ತನೆಗಳನ್ನು ರಚಿಸಿದ್ದಾನೆ. ನಾಲ್ಕು ಸಂಧಿಗಳಲ್ಲಿ ಉಡುಪಿಯ ಕೃಷ್ಣನ ಚರಿತ್ರೆ ಸಾಂಗತ್ಯಶೈಲಿಯಲ್ಲಿರುವುದು ಈತನ ಕೃತಿ.

ಕದರಮಂಡಲಗಿಯ ದಾಸರೆಂದು ಪ್ರಸಿದ್ಧರಾದ ಹಿರೇ ಭೀಮಾಚಾರ್ಯರು ಕೂಡ ಈ ಕಾಲದಲ್ಲೇ ಇದ್ದವರು. ಇವರು ಮುಂಚಿನ ಮೈಸೂರು ಸೀಮೆಯ ಹರಿಹರದವರಾದರೂ ಧಾರವಾಡ ಪ್ರಾಂತ್ಯದ ಕದರಮಂಡಲಗಿಯಲ್ಲಿ ನೆಲೆಸಿ ಅಲ್ಲಿನ ಹನುಮಂತದೇವರ ಪೂಜೆಯಿಂದ ಪ್ರಶಸ್ತಿಗಳಿಸಿದರು.

ಈ ಹನುಮಂತನ ಸ್ಫೂರ್ತಿಯಿಂದಲೇ ಇವರು ಉತ್ತೇಜಿತರಾಗಿ 'ಕದರಮಂಡಲಗಿ ಹನುಮಯ್ಯ' ನೆಂಬ ಅಂಕಿತದಿಂದ ಹಲವಾರು ಪದಗಳನ್ನು ರಚಿಸಿದರು.

'ಬಂದ ಕಾರ್ಯವ ಬಿಟ್ಟು ಮಂದಮತಿತನದಿಂದ'
ಬೆಂದ ದುರ್ವಿಷಯದಲಿ ತೊಳುತಲಿದ್ದೆ।
ತಂದೆ ಕದರಮಂಡಲಗಿ ಹನುಮಯ್ಯನಾ ಪಾದ
ಹೊಂದಿದಾ ದಿನದಿಂದ ಹೊಸಪರಿಯ ಕಂಡೆ'

ಎಂಬುದು ಅವರು ಬರೆದ ಮೊದಲ ಕೃತಿಯ ಕಡೆಯ ಸಾಲುಗಳು.

ಕದರಮಂಡಲಗಿಯ ಹನುಮಂತನಿಂದಲೇ ಸ್ಫೂರ್ತಿ ಪಡೆದ ಇನ್ನೊಬ್ಬ ಪ್ರಸಿದ್ಧ ದಾಸರೆಂದರೆ ಶ್ರೀನಪ್ಪದಾಸರು; ೧೮೬೦ರ ಸುಮಾರಿಗೆ ಜೀವಿಸಿದ್ದವರು. 'ಕದರಮಂಡಲಗಿಯ ಶ್ರೀ ಪಾಂಡುರಂಗ' ಎಂಬ ಅಂಕಿತದಿಂದ ಇವರು ಹಲವಾರು ಕೃತಿಗಳನ್ನು ರಚಿಸಿದ್ದಾರೆ.

೧೭೯೦ರ ಸುಮಾರಿನಲ್ಲಿದ್ದ ಏರಿ ಶೇಷಾಚಾರ್ಯರು ಕೋಲಾರದ ಬಳಿ ಚಿಂತಾಮಣಿ ಯವರು. ಇವರು 'ಏರಿ ವೆಂಕಟೇಶ' ಎಂಬ ಅಂಕಿತದಲ್ಲಿ ರಚಿಸಿರುವ 'ಶ್ರೀನಿವಾಸಕಲ್ಯಾಣ' ವೆಂಬ ಕನ್ನಡದ ಚಂಪೂಗ್ರಂಥ ಮಾಧ್ವರ ಮನೆಗಳಲ್ಲಿ ಇಂದಿಗೂ ವಾಡಿಕೆಯಲ್ಲಿದೆ; ಹಿರಿಯ ಹೆಂಗಸರು ಹಬ್ಬಹರಿದಿನಗಳಲ್ಲಿ ಇದನ್ನು ಹಾಡಿಕೊಳ್ಳುತ್ತಾರೆ. ಇವರಿಗೂ ಸಾಂಪ್ರದಾಯಿಕವಾದ ಹರಿದಾಸದೀಕ್ಷೆ ಆಗಿರಲಿಲ್ಲ.

ಜೀವಂತರಾದ ಯಾವ ಗುರುಗಳಿಂದಲೂ ಹರಿದಾಸದೀಕ್ಷೆಯಾಗದೆ ಕನಸಿನಲ್ಲಿ ಹಿಂದಿನ ಹರಿದಾಸರೊಬ್ಬರು ಕಾಣಿಸಿಕೊಂಡು ಅಂಕಿತಕೊಡುವ ಉಲ್ಲೇಖ ಅಲ್ಲಲ್ಲಿ ಉಂಟು. ವಿಜಯದಾಸರಿಗೇ ಯಾವ ಪ್ರತ್ಯಕ್ಷ ಗುರುವೂ ಇರಲಿಲ್ಲವಷ್ಟೆ; ಪುರಂದರದಾಸರು ಸ್ವಪ್ನದಲ್ಲಿ ಅವರಿಗೆ ಅಂಕಿತವನ್ನಿತ್ತರೆಂದೇ ವಿವರವಿರುವುದು. ಹೀಗೆಯೇ ೧೮೬೦ರ ಸುಮಾರಿನಲ್ಲಿದ್ದ ಚಿನ್ನಪಲ್ಲಿ ಶೇಷದಾಸರಿಗೆ ವಿಜಯದಾಸರು ಸ್ವಪ್ನದಲ್ಲಿ ದರ್ಶನ ಕೊಟ್ಟು 'ಗುರು ವಿಜಯವಿಟ್ಠಲ' ಎಂಬ ಅಂಕಿತವನ್ನಿತ್ತರಂತೆ. ವಿಜಯದಾಸರೇ ಮೊದಲಕಲ್ಲು ಶೇಷಪ್ಪನೆಂಬ ಪ್ರತಿಭಾಶಾಲಿಯಾಗಿದ್ದ ಗೃಹಸ್ಥನಿಗೂ ಸ್ವಪ್ನದಲ್ಲಿ ಕಾಣಿಸಿಕೊಂಡು ಹರಿದಾಸದೀಕ್ಷೆ ಕೊಟ್ಟರಂತೆ. ಇವರು ೧೮೧೦ರ ಸುಮಾರಿಗೆ ಗದ್ವಾಲದಲ್ಲಿ ದರೂರು ಎಂಬಲ್ಲಿ ಹುಟ್ಟಿನಂತರ ಮೊದಲುಕಲ್ಲೆಂಬ ಗ್ರಾಮದ ಶಾನುಭೋಗ- ಕುಲಕರ್ಣಿಯಾದರು. ಸ್ವಪ್ನಾಂಕಿತವಾದಮೇಲೆ ಲೌಕಿಕ ವ್ಯವಹಾರವನ್ನು ಬಿಟ್ಟು ಹರಿದಾಸರಾಗಿ ಮೂರು ಪದಗಳನ್ನೂ, ೪೩ ಸುಳಾದಿಗಳನ್ನೂ ಹನ್ನೊಂದು ಉಗಾಭೋಗಗಳನ್ನೂ ರಚಿಸಿದರು. ಇವರ ಸುಳಾದಿಗಳು ತತ್ತ್ವ ಪ್ರಯೋಗಗಳಿಂದ ತುಂಬಿ ಗಂಭೀರವಾಗಿವೆ; ಅವುಗಳಲ್ಲಿ ಹದಿನೆಂಟು ತಾಳಗಳ ಸುಳಾದಿಯೊಂದು ಸ್ವಾರಸ್ಯವಾಗಿದೆ. ಐಹೊಳೆಯ ವೆಂಕಟದಾಸರೆಂಬುವರಿಗೂ (೧೯೦೦ರ ಸುಮಾರಿಗೆ) ಸ್ವಪ್ನದಲ್ಲೇ ಅಂಕಿತವಾಯಿತು.

ಸುರಪುರದ ಆನಂದದಾಸರೆಂಬುವರು ಮೈಸೂರಿನ ಅರಸು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿದ್ದವರು. ರಾಯಚೂರು ಜಿಲ್ಲೆಯ ಸುರಪುರ ಅವರ ಊರು. ಅವರು

ಶಾಸ್ತ್ರದಲ್ಲಿ ಎತ್ತಿದ ಕೈ; ಹಾಗೆಯೇ ಮಧುರವಾದ ಶಾರೀರ ಇದ್ದ ಕಾರಣ ಸಂಗೀತಕಲೆಯಲ್ಲಿ ಸಿದ್ಧಿಪಡೆದರು. ಅವರು ಹಾಡುವುದನ್ನು ಕೇಳಿ ಮೈಸೂರು ಸದಾಶಿವರಾಯರೂ ಮುಗ್ಧರಾದರಂತೆ. ಅವರು ವೀಣೆಯನ್ನೂ ಚೆನ್ನಾಗಿ ನುಡಿಸುತ್ತಿದ್ದರು. ಸರ್ಕಾರದಲ್ಲಿ ದೊಡ್ಡ ಕೆಲಸವೂ ಇದ್ದಿತು. ತಮ್ಮ ೫೩ನೆಯ ವಯಸ್ಸಿನಲ್ಲಿ ಲೌಕಿಕಜೀವನದಲ್ಲಿ ಜುಗುಪ್ಸೆ ತಾಳಿ ಹರಿದಾಸರಾಗಿ ಹೊರಟರು. 'ಕಮಲೇಶವಿಟ್ಠಲ' ಎಂಬ ಅಂಕಿತದಿಂದ ಇವರು ಹಲವಾರು ಪದಗಳನ್ನೂ ರಚಿಸಿದ್ದಾರೆ. ಮುಮ್ಮಡಿ ಕೃಷ್ಣರಾಜ ಒಡೆಯರು ಇವರನ್ನು ಬಹುವಾಗಿ ಸನ್ಮಾನಿಸುತ್ತಿದ್ದರು.

ಹೀಗೆ ವಿಜಯದಾಸರಿಂದ ಬಲಗೊಂಡ ದಾಸಕೂಟದಲ್ಲಿ ಹಲವಾರು ಪರಂಪರೆಗಳು ಬಂದವು; ಹರಿದಾಸ ಪ್ರವಾಹದ ಹೊನಲುಗಳಲ್ಲಿ ಉತ್ತಮರಾದ ವ್ಯಕ್ತಿಗಳು ಉತ್ತಮವಾದ ಕೃತಿಗಳನ್ನು ರಚಿಸಿದರು. ಕನ್ನಡದೇಶದಲ್ಲಿ ನೂರಾರು ಮಂದಿ ಭಕ್ತರು, ಭಾವುಕರು, ಭಾಗವತರು, ವಾಗ್ಗೇಯಕಾರರು ಹರಿದಾಸಪಂಥದ ಆಸರೆಯಿಂದ ಕಾಣಿಸಿಕೊಂಡರು. ಇವರೆಲ್ಲರ ಎಲ್ಲ ವಿವರಗಳೂ ಉಪಲಬ್ಧವಿಲ್ಲವಾಗಿ ಮೇಲಿನ ಪಟ್ಟಿ ಸಮಗ್ರವಾಗುವುದು ಸಾಧ್ಯವಾಗಿಲ್ಲ. ಲಿಂಗಸೂಗೂರಿನ ವರದೇಂದ್ರ ಸಾಹಿತ್ಯಮಂಡಲದವರು ಸುಮಾರು ಮೂನ್ನೂರ ಒಂಬತ್ತು ಹರಿದಾಸರ ಪಟ್ಟಿಯನ್ನು ಸಿದ್ಧಮಾಡಿ ಅದರಲ್ಲಿ ಹಲವರ ವಿವರಗಳನ್ನು ಸಂಗ್ರಹಿಸಿದ್ದಾರೆ.

ಸಾರಸ್ವತ ಸಾಮಗ್ರಿ

ಪುರಂದರದಾಸರನ್ನು ಕುರಿತಂತೆ ಅನೇಕ ಹೊತ್ತಿಗೆಗಳು ಹೊರಬಂದಿವೆ. ಅವುಗಳಲ್ಲಿ ನನಗೆ ಮುಖ್ಯವೆನಿಸಿದ್ದನ್ನು ಇಲ್ಲಿ ಪಟ್ಟಿಮಾಡಿದ್ದೇನೆ-

೧. ಹರಿದಾಸ ಸಾಹಿತ್ಯ (ಬೇಲೂರು ಕೇಶವದಾಸರು, ೧೯೪೪)

೨. ಶ್ರೀಪುರಂದರದಾಸರ ಜೀವನಚರಿತ್ರೆ, (ರಾಘವೇಂದ್ರಾಚಾರ್ಯ ಪಂಚಮುಖಿ, ೧೯೫೬) ಶ್ರೀ ಪುರಂದರ ಸೇವಾ ಮಂಡಲ, ಹೊಸಪೇಟೆ) ೧೯೫೬

೩. ಹರಿದಾಸ ಸಾಹಿತ್ಯ (ರಾಘವೇಂದ್ರಾಚಾರ್ಯ ಪಂಚಮುಖಿ)

೪. ಕನ್ನಡ ಸಾಹಿತ್ಯ ಚರಿತ್ರೆ (ರಂ ಶ್ರೀ ಮುಗಳಿ. ೧೯೫೩)

೫. ಕರ್ಣಾಟಕ ಭಕ್ತವಿಜಯ (ಬೇಲೂರು ಕೇಶವದಾಸರು, ೧೯೩೨), ಭಾಗ-೧

೬. ಕರ್ಣಾಟಕ ಸಂಗೀತವೂ ದಾಸಕೂಟವೂ (ಹುಲಗೂರು ಕೃಷ್ಣಾಚಾರ್ಯರು, ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ, ೧೯೫೧)

೭. ಶ್ರೀ ಪುರಂದರದಾಸರು ಮತ್ತು ಹರಿದಾಸರ ಪರಂಪರೆ (ವರದೇಂದ್ರ ಸಾಹಿತ್ಯ ಮಂಡಲ, ೧೯೪೪)

೮. ಹರಿದಾಸರ ಕಥೆಗಳು (ಕಲಮದಾನಿ ಗುರುರಾಯರು, ೧೯೫೯)

೯. ಪುರಂದರ ಸಾಹಿತ್ಯ ವಿಮರ್ಶೆ (ಕನ್ನಡ ಸಾಹಿತ್ಯ ಪರಿಷತ್ತು, ೧೯೭೭)

೧೦. ಪ್ರಸಾದಯೋಗ (ವ. ಆ. ದಿವಾಣಜಿ, ಉಷಾ ಸಾಹಿತ್ಯಮಾಲೆ, ಮೈಸೂರು, ೧೯೭೨)

೧೧ Popular Culture in Karnataka (ಮಾಸ್ತಿ ವೆಂಕಟೇಶ ಅಯ್ಯಂಗಾರ್, ೧೯೩೭)

೧೨. Mystic Teachings of the Haridasas of Karnataka (ಎ.ಪಿ. ಕರಮರಕರ್ ಮತ್ತು ಎನ್. ಬಿ. ಕಲಮದಾನಿ ೧೯೩೯)

ಹಲವರು ಪುರಂದರದಾಸರ ರಚನೆಗಳನ್ನು ಸಂಕಲನ ಮಾಡಿ ಪ್ರಕಟಿಸಿದ್ದಾರೆ.
ಅವುಗಳಲ್ಲಿ ನನಗೆ ನೆರವಾದುವನ್ನು ಕೆಳಗೆ ಕಾಣಿಸಿದ್ದೇನೆ.

೧. ಪುರಂದರ ದಾಸರ ಕೀರ್ತನೆಗಳು (ಪಾವಂಜೆ ಗುರುರಾಯರು, ಉಡುಪಿ)

೨. ಪುರಂದರದಾಸರ ಕೃತಿಗಳು (ಸುಬೋಧ ಎಂ. ರಾಮರಾಯರು, ಬೆಂಗಳೂರು)

೩. ಪುರಂದರದಾಸರ ಪದಗಳು (ಗೋರಾಬಾಳ ಹನುಮಂತ ರಾಯರು, ವರದೇಂದ್ರ ಸಾಹಿತ್ಯ ಮಂಡಲ, ಲಿಂಗಸೂಗೂರು)

೪. ಪುರಂದರದಾಸರ ಪದಗಳು (ಪಣಿಯಾಡಿ ಶ್ರೀನಿವಾಸ ಉಪಾಧ್ಯಾಯರು ಮತ್ತಿತರರು, ತುಳುನಾಡು ಪ್ರೆಸ್, ಉಡುಪಿ)

೫. ಪುರಂದರದಾಸರ ಪದಗಳು (ಎಸ್. ಎಸ್. ಕಾರಂತರು, ಹುಬ್ಬಳ್ಳಿ)

೬. ಪುರಂದರೋಪನಿಷತ್ (ಭದ್ರಗಿರಿ ಕೇಶವದಾಸರು, ಬೆಂಗಳೂರು)

೭. ಪುರಂದರದಾಸರು (ಸಂಪಾದಕರು, ಬುರ್ಲಿ, ಮಿಂಚಿನಬಳ್ಳಿ ಕಾರ್ಯಾಲಯ, ಧಾರವಾಡ, ೧೯೬೪)

೮. ಹರಿ ಭಕ್ತಿಸಾಧನೆ (ಸಂಗ್ರಹ, ಕೃ. ಶ್ರೀ, ಬೆಟಗೇರಿ, ಮಿಂಚಿನಬಳ್ಳಿ ಕಾರ್ಯಾಲಯ, ಧಾರವಾಡ, ೧೯೬೫)

೯. ಪುರಂದರ ದರ್ಶನ (ವೆಂಕಟ್ರಾಯ ಶೆಣೈ) ❐

ಅಧ್ಯಾಯ ಮೂರು

ಕನಕದಾಸರು

೧

ಕನ್ನಡ ನಾಡಿನಲ್ಲಿ ಕನಕದಾಸರ ಹೆಸರನ್ನು ಕೇಳದವರು ಯಾರು? ಶಾಲೆಯ ಮಕ್ಕಳು ಕೂಡ ಅವರ ಪದ್ಯಗಳನ್ನು ಓದಿರುತ್ತಾರೆ, ಗಟ್ಟಿಮಾಡಿರುತ್ತಾರೆ. ಅವರ ವಿಚಾರವಾಗಿ ನಾಲ್ಕಾರು ಕತೆಗನ್ನಾದರೂ ಕೇಳಿರುತ್ತಾರೆ. 'ದಾಸರು' ಎಂದೊಡನೆ ನಮ್ಮ ನೆನಪಿಗೆ ಬರುವುದು ಪುರಂದರ ದಾಸರಷ್ಟೆ? ಅವರನಂತರ ಅಷ್ಟೇ ಪ್ರಖ್ಯಾತಿಯ ಹೆಸರೆಂದರೆ ಕನಕದಾಸರದ್ದು. ಇಬ್ಬರೂ ಒಂದೇ ಕಾಲದಲ್ಲಿದ್ದವರು, ಒಬ್ಬರೇ ಗುರುಗಳ ಬಳಿ ಕಲಿತವರು, ಒಟ್ಟಿಗೆ ಓಡಿಯಾಡಿದವರು, ಒಬ್ಬರನ್ನೊಬ್ಬರು ಮೆಚ್ಚಿಕೊಂಡಿದ್ದವರು. ಅವರು ಕಾಲವಾಗಿ ಇಂದಿಗೆ ನಾನ್ನೂರು ಮೀರಿ ವರ್ಷಗಳು ಮುಗಿದಿವೆ; ಆದರೂ ಅವರ ಕೀರ್ತಿಯೇನೂ ಕಡಮೆಯಾಗಿಲ್ಲ.

ಕನಕದಾಸರು ಯಾರು? ಎಲ್ಲಿಯವರು? 'ಕಾಗಿನೆಲೆಯ ಕನಕ' ಎಂದು ಮಾತಿದೆ. ಈ ಕಾಗಿನೆಲೆಯು ಧಾರವಾಡ ಜಿಲ್ಲೆಯಲ್ಲಿ ಹಿರೇಕೆರೂರು ತಾಲ್ಲೂಕಿನೊಳಗೆ ಸೇರಿದ ಸಣ್ಣದೊಂದು ಹಳ್ಳಿ; ಹಾವೇರಿ ರೇಲ್ವೆ ಸ್ಟೇಷನ್ ನಿಂದ ಒಂಬತ್ತು ಮೈಲಿ ದೂರದಲ್ಲಿದೆ. ಮೊದಲಿಗೆ ಅವರು 'ಬಾಡ'ದವರಂತೆ; ಬಾಡ ಎಂಬ ಹಳ್ಳಿ ಕಾಗಿನೆಲೆಯಿಂದ ಸುಮಾರು ಮೂವತ್ತು ಮೈಲಿ ದೂರದಲ್ಲಿದೆ. ಬಾಡವೆನ್ನುವುದು ಬಂಕಾಪುರಕ್ಕೆ ಹತ್ತಿರವೇ ಇರುವ ಹಳ್ಳಿ. ಬಂಕಾಪುರ ಆ ಕಾಲಕ್ಕೆ ತುಂಬ ಹೆಸರು ಪಡೆದ ಪಟ್ಟಣ. ಕಾಗಿನೆಲೆಯೂ ಬನವಾಸಿ ರಾಜ್ಯಕ್ಕೆ ಸೇರಿದ್ದ, ಕೋಟೆ ಕೊತ್ತಳವಿದ್ದ ಪುರಾತನ ಪಟ್ಟಣವಾಗಿದ್ದಿತು.

ಕನಕದಾಸರ ಹಿರಿಯರು ಬಾಡದವರು, ಕಾರಣಾಂತರದಿಂದ ಕನಕದಾಸರು ಬಾಡ ಬಿಟ್ಟು ಕಾಗಿನೆಲೆಗೆ ಬಂದು ನೆಲೆಸಿದರು. ಬರುವಾಗ ಅಲ್ಲಿನ 'ಬಾಡದಾದಿ ಕೇಶವನ' ಮೂರ್ತಿಯನ್ನೂ ತಮ್ಮೊಡನೆ ತಂದು ಕಾಗಿನೆಲೆಯಲ್ಲಿ ಇಟ್ಟರು. ಮೊದಲಿಗೆ ಕಾಗಿನೆಲೆಯಲ್ಲಿ ಲಕ್ಷ್ಮೀನರಸಿಂಹನ ಗುಡಿಯೊಂದೇ ಇದ್ದಿತು; ಈಗಲೂ ಊರಿಗೆ ಅದೇ ಮುಖ್ಯ ದೇವಾಲಯ. ಎಂಟು ಹತ್ತು ಅಡಿಗಳಷ್ಟು ದೂರದಲ್ಲಿಯೇ ಕೇಶವನ ಗುಡಿಯೂ ಇದೆ. ನರಸಿಂಹನ ಗರ್ಭಗುಡಿಯ ಮೇಲೆ ವಿಮಾನವಿರುವುದನ್ನೂ, ಕೇಶವನ ಗುಡಿಯ ಮೇಲೆ ಇಲ್ಲದಿರುವುದನ್ನೂ ಕಾಣಬಹುದು. ಎರಡೂ

ಗುಡಿಗಳನ್ನು ಸೇರಿಸಿ ಊರವರು 'ಶ್ರೀ ಲಕ್ಷ್ಮೀನರಸಿಂಹಾದಿಕೇಶವ ದೇವಸ್ಥಾನ' ಎಂದು ಕರೆಯುವ ವಾಡಿಕೆಯಿದೆ.

ಬಾಡದಲ್ಲಿ ಈಗ ಗುಡಿಯಿಲ್ಲ; ಮೊದಲು ಗುಡಿಯಿದ್ದ ಜಾಗವನ್ನು 'ರಂಗನ ಬಯಲು' ಎಂದು ತೋರಿಸುತ್ತಾರೆ. ಇಲ್ಲೆಲ್ಲ ಮುಸಲ್ಮಾನರ ಪ್ರಾಬಲ್ಯ ಹೆಚ್ಚಾಗಿದ್ದು ಅವರು ಗುಡಿಯನ್ನು ಹಾಳುಮಾಡಿದರೆಂದು ತೋರುತ್ತದೆ. ಅಂತೂ ಕನಕದಾಸರಿಗೆ ಈ ಆದಿಕೇಶವನ ಮೇಲೆ ತುಂಬ ಒಲವು. ತಮ್ಮೊಂದಿಗೆ ಆ ಮೂರ್ತಿಯನ್ನು ಕಾಗಿನೆಲೆಗೆ ಕೊಂಡೊಯ್ದುದು ಮಾತ್ರವಲ್ಲ. ತಮ್ಮ ಬರಹಗಳಿಗೆಲ್ಲ 'ಕಾಗಿನೆಲೆಯಾದಿ ಕೇಶವ' ಎಂಬ ಅಂಕಿತವನ್ನೇ ಇಟ್ಟಿದ್ದಾರೆ. ಈ ಕೇಶವ ದೇವರನ್ನು ತಿರುಪತಿಯ ವೆಂಕಟೇಶನೆಂದೇ ಅವರು ಬಗೆದಿದ್ದರು. ಜನರು ಇಂದಿಗೂ ಹಾಗೆಯೇ ಭಾವಿಸುತ್ತಾರೆ. ಊರ ಜನರು ತಿರುಪತಿಗೆ ಕಟ್ಟಿಕೊಂಡ ಹರಕೆಗಳನ್ನು ಈ ಕಾಗಿನೆಲೆಯ ಕೇಶವಸ್ವಾಮಿಯ ಸನ್ನಿಧಿಯಲ್ಲಿಯೇ ಸಮರ್ಪಿಸುವ ವಾಡಿಕೆ ಕನಕದಾಸರ ಕಾಲದಿಂದ ಬಂದಿದೆ; ಈಗಲೂ ಉಳಿದಿದೆ. ದಾಸರು ಈ ದೇವರನ್ನು 'ತಿರುಪತಿ ನೆಲೆಯಾದಿ ಕೇಶವಹರಿಯೇ' ಎಂದು ಬಣ್ಣಿಸಿದ್ದಾರೆ.

ಅಂತೂ ಕನಕದಾಸರು ಹುಟ್ಟಿ ಬೆಳೆದ ಊರು ಬಾಡ; ಪ್ರಾಯವನ್ನು ಕಳೆದ ಊರು ಕಾಗಿನೆಲೆ. ಹರಿದಾಸರಾಗಿ ಕನ್ನಡ ದೇಶದಲ್ಲೆಲ್ಲ ಸುತ್ತಾಡಿದರು. ಉಡುಪಿ, ಬೇಲೂರು, ಹಂಪಿಗಳಲ್ಲಿ ಹೆಚ್ಚುಕಾಲ ವಾಸವಾಗಿದ್ದರು. ವರ್ಷಕ್ಕೊಮ್ಮೆ ತಿರುಪತಿಗೆ ಯಾತ್ರೆ ಹೋಗಿ ಬರುತ್ತಿದ್ದರು. ಕಡೆಗಾಲವನ್ನು ಕಾಗಿನೆಲೆಯಲ್ಲಿಯೇ ಕಳೆದರು.

ಕನಕದಾಸರ ತಂದೆಯ ಹೆಸರು ಬೀರೇಗೌಡ, ತಾಯಿಯ ಹೆಸರು ಬಚ್ಚಮ್ಮ, ಇವರಿಗೆ ದಾಸರನ್ನು ಬಿಟ್ಟು ಬೇರೆ ಮಕ್ಕಳಿರಲಿಲ್ಲ. ಹಿರಿಯರು ತಿರುಪತಿಯ ವೆಂಕಟೇಶ್ವರನ ಒಕ್ಕಲು; ಆ ದೇವರಿಗೆ ಹರಕೆ ಹೊತ್ತು ಈ ಮಗನನ್ನು ಪಡೆದರು. ಹಾಗೆಂದೇ ಮಗನಿಗೆ 'ತಿಮ್ಮಪ್ಪ' ಎಂದು ಆ ದೇವರ ಹೆಸರನ್ನೇ ಇಟ್ಟರು. 'ತಿಮ್ಮಪ್ಪ' ಎನ್ನುವುದು 'ತಿರುಮಲೆಯಪ್ಪ' (ತಿರುಮಲೆಯೆನ್ನುವುದು ತಿರುಪತಿ ಬೆಟ್ಟದ ಹೆಸರು; ಅದರ ಒಡೆಯ ತಿರುಮಲೆಯಪ್ಪ) ಎನ್ನುವ ಮಾತಿನ ಮೊಟಕು ರೂಪ ಅಷ್ಟೆ. ಮುಂದೆ ಇವರ ಮಗ ಹರಿದಾಸನಾದ ಅನಂತರ 'ಕನಕದಾಸ'ನೆಂಬ ಹೆಸರನ್ನು ಇಟ್ಟುಕೊಂಡನು; ಈ ಹೆಸರೂ ತಿರುಪತಿಗೆ ಸಂಬಂಧಿಸಿದ್ದೇ; ಕನಕಗಿರಿ (ಬಂಗಾರದ ಬೆಟ್ಟ) ಎನ್ನುವುದು ತಿರುಮಲೆಗೇ ಹೆಸರು. ಅಂತೂ ತಿರುಪತಿಯ ದೇವರು ಕನಕದಾಸರಿಗೂ ಅವರ ಹಿರಿಯರಿಗೂ ಮನೆದೇವರು.

ದಾಸರ ಹಿರಿಯರು ಹಂಡೆಕುರುಬ ಜಾತಿಯವರು. ಒಂದು ಕಾಲಕ್ಕೆ ಕನ್ನಡ ನಾಡಿನಲ್ಲಿ ಮಾತ್ರವಲ್ಲ, ನೆರೆಹೊರೆಯ ನಾಡುಗಳಲ್ಲೆಲ್ಲ, ಕುರುಬರು ಹರಡಿದ್ದರು, ಪ್ರಬಲರಾಗಿದ್ದರು. ಬೆಟ್ಟಗುಡ್ಡಗಳಲ್ಲಿ ವಾಸಮಾಡಿಕೊಂಡು, ಕುರಿಹಿಂಡುಗಳನ್ನು ಸಾಕಿಕೊಂಡು, ಕಾಡಿನಲ್ಲಿ ಬೇಟೆಯಾಡಿ ಹೊಟ್ಟೆ ಹೊರೆಯುತ್ತಿದ್ದ ಈ ಜನ ಬರುಬರುತ್ತ ಊರು ಗಳಿಸಿ, ರಾಜ್ಯ ಕಟ್ಟಿ ಪ್ರಸಿದ್ಧರಾದರು. ಅವರು ಕನ್ನಡದ ಜನವೇ. ಪೂರ್ವಘಟ್ಟದಲ್ಲಿ ಇವರ ವ್ಯಾಪ್ತಿ ಹೆಚ್ಚಾಗಿದ್ದಿತು. ತಿರುಪತಿ, ಚಂದ್ರಗಿರಿ, ದೋಮಲಚೆರುವು, ಆರ್ಕಾಡು, ನಾರಾಯಣವನಂ, ವಳ್ಳಿಮಲೆ ಮೊದಲಾದ ಕಡೆಗಳಲ್ಲಿ ಈ ಜನರು ಪಾಳೈಗಾರರಾಗಿ, ಕೋಟೆಕೊತ್ತಳಗಳನ್ನು ಕಟ್ಟಿಕೊಂಡು ಇರುತ್ತಿದ್ದರು. ಇವರ ರಾಜ 'ಕೋಮಂದು-ಕುರುಂಬ-ಪ್ರಭು' ಎನ್ನುವವನು ಪಲ್ಲವ ವಂಶದವನೆಂದು ಪ್ರತೀತಿಯಿದೆ.

ಇದು ಹೇಗಾದರೂ ಇರಲಿ, ಕುರುಬರೆಂದರೆ ಬರಿಯ ಕುರಿಕಾಯುವ ಮಂದಿ ಅಲ್ಲ; ವೀರರು, ದಕ್ಷರು, ಪಾಳೈಗಾರರು; ರಾಜರು ಆಗಿದ್ದುದೂ ಉಂಟು. ಮೊದಲಿಗೆ ಇವರೆಲ್ಲ ಶೈವಧರ್ಮದವರು. ಕಾಳಹಸ್ತೀಶ್ವರನ (ತಿರುಕ್ಕಾಳತ್ತಿ ದೇವರ) ಒಕ್ಕಲಾಗಿದ್ದವರು. ಬಹುಮಟ್ಟಿಗೆ ಗಂಗಮ್ಮ, ಮುತ್ಯಾಲಮ್ಮ, ಪೊನ್ನಿಯಮ್ಮ, ಯಲ್ಲಮ್ಮ, ಅಂಕಾಲಮ್ಮ, ಪೋಲೇರಮ್ಮ ಮೊದಲಾದ ಗ್ರಾಮ ದೇವತೆಗಳನ್ನೇ ಪೂಜೆ ಮಾಡುತ್ತಿದ್ದರು. ಸಂಪ್ರದಾಯವೇನೋ ಶೈವವೇ. ಕುರುಬರ ಕುಲದೇವರಾದ ಬೀರೇ ದೇವರು ಶಿವನನ್ನೇ ಪ್ರತಿನಿಧಿಸುತ್ತದೆ. 'ಸೊಕ್ಕಿನಿಂದ ಸೊಂಟಮುರುಕ ಬೈರೇದೇವ'ರ ಪ್ರಸ್ತಾಪವನ್ನು ಕನಕದಾಸರೇ ಮಾಡಿದ್ದಾರೆ. ಬೈರೇದೇವರೆಂದರೆ ಕಾಳಭೈರವ; ಶಿವನ ಒಂದು ಲೀಲಾವತಾರ.

ಆದರೆ ಯಾವುದೋ ಕಾಲದಲ್ಲಿ ಕುರುಬರೆಲ್ಲ ತಿರುಪತಿಯ ದೇವರಿಗೆ ಒಕ್ಕಲಾಗಿಬಿಟ್ಟರು. ಅವರ ಪ್ರಮುಖ ಗ್ರಾಮದೇವತೆಯಾದ ಗಂಗಮ್ಮ ತಿರುಪತಿಯ ವೆಂಕಟೇಶ್ವರನ ತಂಗಿಯೆಂದೇ ನಂಬಿಕೆಯಿದೆ. ಈಗಲೂ ತಿರುಪತಿಯಲ್ಲಿ ನಡೆಯುವ ಗಂಗಮ್ಮನ ಜಾತ್ರೆಯಲ್ಲಿ ವೆಂಕಟೇಶ್ವರನಿಗೆ ವಿಶೇಷವಾದ ಸ್ಥಾನವಿದೆ. ಈ ಕಾಲದಲ್ಲಿಯೂ ಕುರುಬರೆಲ್ಲ ಬಹುಮಟ್ಟಿಗೆ ವೆಂಕಟೇಶ್ವರನ ಒಕ್ಕಲೇ. ತೊಂಡಮಂಡಲದಲ್ಲಿ ರಾಜ್ಯವಾಳುತ್ತಿದ್ದ ಯಾದವರಾಯರು ಕುರುಬರೇ; ಅವರ ಮುಖ್ಯ ನಗರವಾಗಿದ್ದುದು ಗವೇಂಟರಿ (ಅಥವಾ ಕನಕಪುರ).

ಕನಕದಾಸರ ತಂದೆ ಬೀರೇಗೌಡನೂ ಹೀಗೆ ಬಾಡದಲ್ಲಿ ಸಣ್ಣದೊಂದು ಪಾಳೆಯಪಟ್ಟನ್ನು ಕಟ್ಟಿಕೊಂಡಿದ್ದನು. ಹಿಂದಿನಿಂದ ಅನುಕೂಲವಾಗಿಯೇ ಇದ್ದ ಮನೆತನದ ಆಸ್ತಿ ಇನ್ನಷ್ಟು ಹೆಚ್ಚಿತು. ಆದರೆ ದಾಸರು ಇನ್ನೂ ಎಳೆಯ ವಯಸ್ಸಿನಲ್ಲಿದ್ದಾಗಲೇ ತಂದೆ-ತಾಯಿ ಇಬ್ಬರೂ ತೀರಿಕೊಂಡರು. ಊರಜನರೇ ಮಗುವನ್ನು ಸಾಕಬೇಕಾಯಿತು. ಹೇಳುವವರು, ಕೇಳುವವರು ಯಾರೂ ಇಲ್ಲದೆ ಮನೆಯ ಸಂಪತ್ತೆಲ್ಲ ಮಾಯವಾಯಿತು. ತಿಮ್ಮ (ಕನಕದಾಸರಿಗೆ ತಂದೆ ತಾಯಿಯರಿಟ್ಟ ಹೆಸರು) ಅನಾಥ ಬಾಲಕನ ಹಾಗೆಯೇ ಬೆಳೆಯಬೇಕಾಗಿ ಬಂದುದು ದುರ್ದೈವ.

ಏನೊಂದು ಪದಾರ್ಥವೂ ಇಲ್ಲದೆ ಬರಿದಾಗಿದ್ದ ತನ್ನ ಮನೆಯಲ್ಲಿ ಕುಳಿತು ತಿಮ್ಮ ದಿನವೆಲ್ಲಾ ಕಳೆಯುತ್ತಿದ್ದ; ನೆಂಟರಿಲ್ಲ, ಆಪ್ತರಿಲ್ಲ. ಊಟ ಊರವರ ದಯೆಯಿಂದ ನಡೆಯುತ್ತಿತ್ತು. ಮಗುವಿಗೆ ವಯಸ್ಸು ಬಂದು ಪ್ರಾಯ ಮೂಡಿತು. ಒಂದು ದಿನ ಮನೆಯಲ್ಲಿ ಏನೋ ನೆಲವನ್ನು ಕೆದಕುತ್ತಿದ್ದ ತಿಮ್ಮನಿಗೆ ಇದ್ದಕ್ಕಿದ್ದಂತೆ ಹೂಳಿಟ್ಟ ಬಂಗಾರದ ಕೊಡವೊಂದು ದೊರಕಿತು. ಬದುಕಿ ಬಾಳಿದವರ ಮನೆಯಲ್ಲವೆ? ಪಾಳೈಗಾರನಾಗಿದ್ದ ತಂದೆ ಕಳ್ಳಕಾಕರರಿಗೆ ಹೆದರಿ ತನ್ನ ಐಶ್ವರ್ಯವನ್ನು ಹೀಗೆ ಹೂಳಿಟ್ಟಿದ್ದನೆಂದು ತೋರುತ್ತದೆ. ಆ ನಿಧಿ ಈಗ ತಿಮ್ಮನಿಗೆ ದೊರಕಿದುದು ಆಕಸ್ಮಿಕ; ಸುದೈವ.

ಹೀಗೆ ಅಕಸ್ಮಾತ್ತಾಗಿ ದೊರೆತ ನಿಧಿಯನ್ನು ತಿಮ್ಮ ಪೋಲುಮಾಡದೆ, ಜಾಗರೂಕತೆಯಿಂದ ಬಳಸಿ ಮತ್ತೆ ಅಧಿಕಾರವನ್ನು ಗಳಿಸಲೆತ್ನಿಸಿದ. ಅಷ್ಟು ಶ್ರೀಮಂತನಾದವನನ್ನು 'ತಿಮ್ಮ' ಎಂದು ಯಾರು ಕರೆಯುತ್ತಾರೆ? ಜನರೆಲ್ಲ ಅವನನ್ನು 'ಕನಕನಾಯಕ'ನೆಂದು ಕರೆಯತೊಡಗಿದರು. ಸಂಸ್ಕೃತದಲ್ಲಿ 'ಕನಕ' ಎಂದರೆ ಚಿನ್ನ, ಬಂಗಾರ. ಬರಬರುತ್ತ ಕನಕನಾಯಕನಿಗೆ ಊರಿನ ಒಳಗೂ ಹೊರಗೂ ವಿಶೇಷವಾದ ಮರ್ಯಾದೆ ದೊರಕಿತು. ತಂದೆಗಿದ್ದ ಪಾಳೆಯಪಟ್ಟನ್ನು ಮತ್ತೆ ಗಿಟ್ಟಿಸುವುದಂತೂ ಸಾಧ್ಯವಿರಲಿಲ್ಲ.

ಆಗ ಬಂಕಾಪುರ ಪ್ರಾಂತ್ಯವು ವಿಜಯನಗರದ ಅರಸರ ಅಧೀನವಾಗಿದ್ದಿತು. ಬನವಾಸಿಗೆ ಸೇರಿದ ಕಾಗಿನೆಲೆಯಲ್ಲಿ ಕದನ ಜರುಗುತ್ತಲೇ ಇದ್ದಿತು. 'ಪನ್ನೆರಡರ ಪಟ್ಟಣ'ವಾದ ಕಾಗಿನೆಲೆಯನ್ನು ವಶಪಡಿಸಿಕೊಳ್ಳಲು ಕದಂಬರು, ಚಾಳುಕ್ಯರು, ದೇವಗಿರಿಯ ಯಾದವರು, ಕಳಚೂರಿಯರು ಹವಣಿಸಿ ಕದನಗಳನ್ನು ನಡೆಸಿದ್ದ ನೆನಪು ಇನ್ನೂ ಉಳಿದಿದ್ದಿತು. ವಿಜಯನಗರದ ಅರಸ ಮೊದಲನೆಯ ಹರಿಹರನ ತಮ್ಮ ಮಾರಪನು ಈ ಪಟ್ಟಣವನ್ನು ಬನವಾಸಿಗೋವೆಯ ಕದಂಬರಿಂದ ಕಸಿದುಕೊಂಡಿದ್ದು ಅಲ್ಲಿ ತನ್ನ ಸೈನ್ಯವನ್ನು ಇಟ್ಟಿದ್ದನು.

ಕನಕನಾಯಕನಾದ ತಿಮ್ಮನು ಈ ಬಂಕಾಪುರದಲ್ಲಿದ್ದ ಈ ವಿಜಯನಗರದ ಸೇನೆಗೆ ಸೇರಿ, ತನ್ನ ಬುದ್ಧಿಶಕ್ತಿಯಿಂದಲೂ, ಸಾಹಸ-ಶೌರ್ಯಗಳಿಂದಲೂ ಅರಸನನ್ನು ಮೆಚ್ಚಿಸಿ ಸೇನೆಗೆಲ್ಲ ಅಧಿಪತಿಯಾದನು. ಬಂಕಾಪುರದಲ್ಲಿ ಕಾಗಿನೆಲೆಯ ಸಲುವಾಗಿ ಯುದ್ಧ ನಡೆಯುತ್ತಲೆ ಇದ್ದಿತೆಂದು ಹೇಳಿದೆವಲ್ಲ? ಕನಕನಾಯಕನು ತನ್ನ ಪ್ರಾಯವನ್ನೆಲ್ಲ ಯುದ್ಧಗಳಲ್ಲಿಯೇ ಕಳೆಯಬೇಕಾಯಿತು. ಯುದ್ಧದಲ್ಲಿ ಅವನು ವೀರನೇ, ಹಲವಾರು ಸಮರಗಳನ್ನು ಗೆದ್ದವನೇ. ಆದರೆ ಅದೃಷ್ಟ ಒಂದೇ ಸಮನೆ ಇರುತ್ತದೆಯೇ? ಒಂದು ಬಾರಿ ಬಲವಾದ ಯುದ್ಧ ನಡೆಯುತ್ತಿದ್ದಾಗ ಕನಕನಾಯಕನೇ ದಳಪತಿಯಾಗಿ ಹೋರಾಡುತ್ತಿದ್ದನು. ಇದ್ದಕ್ಕಿದ್ದಂತೆ ಎದುರಾಳಿಯ ಕೈ ಮೇಲಾಗಿ, ಕನಕನಾಯಕನಿಗೆ ಪೆಟ್ಟು ಬಿದ್ದು ಕುದುರೆಯಿಂದ ಬಿದ್ದು ಬಿಟ್ಟ. ಅವನ ಕಡೆಯವರೆಲ್ಲ ದಿಕ್ಕಾಪಾಲಾಗಿ ಓಡಿದರು. ಕನಕನಾಯಕನನ್ನು ಕೇಳುವವರೇ ಇರಲಿಲ್ಲ.

ಇಷ್ಟರಲ್ಲಿ ಸಂಜೆಯಾಯಿತು; ಯುದ್ಧರಂಗದಲ್ಲಿ ಸತ್ತವರಷ್ಟೇ ಉಳಿದರು. ಉಳಿದವರೆಲ್ಲ ಹೊರಟು ಹೋದರು. ಕನಕನಾಯಕನಿಗೆ ಗಾಯಗಳು ವಿಪರೀತವಾಗಿದ್ದವು; ಎದ್ದು ಓಡಾಡುವುದಿರಲಿ, ಮಲಗಿದಲ್ಲೇ ಹೊರಳಾಡುವುದೂ ಕಷ್ಟವೆನಿಸಿದ್ದಿತು. ನೋವನ್ನು ತಡೆಯಲಾರದೆ ಅರಚಿಕೊಳ್ಳುತ್ತಿದ್ದನು, ಕಣ್ಣೀರಿಡುತ್ತಿದ್ದನು. ಬದುಕಿನಲ್ಲೇ ತುಂಬ ಬೇಸರವಾಯಿತು; ತಡೆಯಲಾರೆ, ತಾಳಲಾರೆ, ಬಾಳಲಾರೆ, ಎನಿಸಿತು. ತುಂಬ ಪೆಟ್ಟು ಬಿದ್ದಿದ್ದುದರಿಂದ ತಾನು ಬದುಕುವುದೂ ಕಷ್ಟವೆಂದು ಅವನಿಗೆ ಮನದಟ್ಟಾಯಿತು. ನೋವನ್ನು ತಡೆಯಲಾರದೆ ಪ್ರಜ್ಞೆ ತಪ್ಪಿ ಮಲಗಿದನು.

ಇಂಥ ಸ್ಥಿತಿಯಲ್ಲಿ ಅವನಿಗೊಂದು ಕನಸಾಯಿತು. ಕನಸಿನಲ್ಲಿ ದೇವರು ಬಂದು, "ನನ್ನ ದಾಸನಾಗುವೆಯಾ, ಕನಕ?" ಎಂದು ಕೇಳಿದಂತೆ, "ಎಲ್ಲಿಯಾದರೂ ಉಂಟೆ? ಅರಸಾಗಬಲ್ಲವನು ನಾನು, ಆಳಾಗುವುದೇತಕ್ಕೆ?" ಎಂದು ಇವನು ಉತ್ತರವಿತ್ತನಂತೆ. "ನೋಡು, ದಾಸನಾಗುವಿಯಾದರೆ ಬದುಕುವೆ" ಎಂದು ದೇವರು ಹೇಳಿದಂತೆ ಭಾಸವಾಯಿತು. ನಾಯಕನಿಗೆ ಒಡನೆಯೇ ಎಚ್ಚರವಾಯಿತು. ಎಚ್ಚರ ತಪ್ಪಿದ್ದಾಗ ಮಾಯವಾಗಿದ್ದ ವೇದನೆ ಎಚ್ಚರವಾಗುತ್ತಲೇ ಮತ್ತೆ ತಲೆದೋರಿತು. ವ್ಯಥೆಯನ್ನು ತಾಳಲಾರದೆ "ದಾಸನಾಗುತ್ತೇನೆ, ಈ ನೋವನ್ನು ತಪ್ಪಿಸು!" ಎಂದು ಅಂಗಲಾಚಿ ಬೇಡಿಕೊಂಡನು.

ಮನಸ್ಸಿನಲ್ಲಿ ಈ ಸಂಕಲ್ಪ ಮೂಡಿದೊಡನೆಯೇ ಕನಸಿನಲ್ಲಿ ಕಂಡ ದೇವರು ಒಲಿದಂತಾಯಿತು. ಇದ್ದಕ್ಕಿದ್ದಂತೆ ಮೈಮೇಲಿದ್ದ ಹುಣ್ಣುಗಳೆಲ್ಲ ಮಾಯವಾದುವು. ತಡೆಯಲಾರದೆ ಇದ್ದ ನೋವು ಈಗ ಹೆಸರಿಲ್ಲದೆ ಓಡಿಹೋಯಿತು. ಎದ್ದು ಓಡಿಯಾಡುವ ಚೈತನ್ಯ ಬಂದಿತು. ಬೆಳಕು ಮೂಡಿದಾಗ ಕನಕನಾಯಕನು ಹೊಸ ಮನುಷ್ಯನಾಗಿದ್ದನು.

ಅಲ್ಲಿಯವರೆಗೆ ದೇವರ ಗೋಜಿಗೆ ಅವನು ಹೋದವನಲ್ಲ; ಧರ್ಮವೆಂದರೆ ಅವನಿಗೆ ಅಷ್ಟಾಗಿ ಅಭಿಮಾನವೇನಿರಲಿಲ್ಲ. ಸಾಹಸ, ವೀರ್ಯ, ಪರಾಕ್ರಮ ಇಷ್ಟರಲ್ಲೇ ಅವನ ಪ್ರವೃತ್ತಿ ಎಲ್ಲವೂ ಮುಗಿದಿತ್ತು. ಬಾಹುಬಲವಿದ್ದರೆ, ಧೈರ್ಯ ಕೌಶಲವಿದ್ದರೆ ಏನನ್ನಾದರೂ ಜಯಿಸಬಹುದು; ಯಾವ ಬಯಕೆಯನ್ನಾದರೂ ತೀರಿಸಿಕೊಳ್ಳಬಹುದು ಎನ್ನುವುದು ಅವನ ವಿಶ್ವಾಸವಾಗಿದ್ದಿತು. ಆದರೆ ಈಗ ಮನುಷ್ಯನ ಮಿತಿಯನ್ನು ಮೀರಿದ ವಸ್ತುವೊಂದಿದೆ, ದೇವರ ಸಂಕಲ್ಪಕ್ಕೆ ಬರದಿದ್ದರೆ ಏನೂ ಆಗುವುದಿಲ್ಲ ಎನ್ನುವ ಅರಿವು ಅವನ ಬದುಕನ್ನೇ ಮಿಡಿಯಿತು. ತಾನು ಆವರೆಗೆ ಬದುಕಿದ ಬಾಳು ನಿರರ್ಥಕವೆನಿಸಿ, ಉಳಿದ ಆಯಷ್ಯವನ್ನು ದೇವರ ದಾಸನಾಗಿ ಕಳೆಯುವುದೆಂದು ನಿಶ್ಚಯಿಸಿದನು. ಹಾಗೆ ವಾಗ್ದಾನವನ್ನೂ ಮಾಡಿದ್ದನಷ್ಟೆ!

ಆಗ ಅವನಿಗೆ ಒಳ್ಳೆಯ ಪ್ರಾಯ. ಹುಡುಗನಿದ್ದಾಗಲೇ ಮದುವೆಯಾಗಿದ್ದಿತೆಂದೂ, ತಾರುಣ್ಯದ ಆರಂಭದಲ್ಲೇ ಹೆಂಡತಿಯು ತೀರಿಕೊಂಡಿದ್ದಳೆಂದೂ ಪ್ರತೀತಿ. ಅಂತೂ ಬದುಕಿನಲ್ಲಿ ಬೇಸರ ಬಂದು, ಭಗವಂತನಲ್ಲಿ ಭಕ್ತಿ ಮೂಡಿದಾಗ ಅವನನ್ನು ಸಂಸಾರದಲ್ಲೇ ತಡೆಹಿಡಿಯುವವರು ಯಾರೂ ಇರಲಿಲ್ಲ; ಸಾಮಾನ್ಯವಾದ ಬಾಳುವೆಯಲ್ಲಿ ಪರಮಾರ್ಥಕ್ಕೆ ಅಡ್ಡಿಯೆನಿಸುವ ವಿವರಗಳೇನೂ ಇರಲಿಲ್ಲ. ಹೀಗಾಗಿ ಕನಕನಾಯಕ ಯುದ್ಧ ಭೂಮಿಯಿಂದ ಹೊರಟವನು ಪರಮಾರ್ಥವನ್ನರಸಿಯೇ ಹೊರಟ.

೨

ಕನಕನಾಯಕನಿಗೂ ವಿಜಯಗರ ಸಂಸ್ಥಾನಕ್ಕೂ ಸಂಬಂಧವಿದ್ದಿತಷ್ಟೆ. ಅದರ ಅರಸನಿಗೆ ಸೇರಿದ ಬಂಕಾಪುರ ಪ್ರಾಂತ್ಯದಲ್ಲೇ ಕನಕ ಸೈನ್ಯಾಧಿಪತಿಯಾಗಿದ್ದುದು. ಆಗ ವಿಜಯನಗರದ ರಾಜಗುರುಗಳು ತಿರುಮಲೆ ತಾತಾಚಾರ್ಯರೆಂಬುವರು. ಇವರು ಶ್ರೀವೈಷ್ಣವ ಸಂಪ್ರದಾಯದ ಆಚಾರ್ಯಪುರುಷರು. ತಿರುಪತಿಯ ವೆಂಕಟೇಶ್ವರನಲ್ಲಿ ಭಕ್ತಿ ಮಾಡಬೇಕೆಂಬ ತತ್ತ್ವವನ್ನು ತೆಲುಗು, ತಮಿಳು, ಕನ್ನಡ ದೇಶಗಳಲ್ಲೆಲ್ಲ ಇವರು ಪ್ರಚಾರ ಮಾಡುತ್ತ, ಅಲ್ಲಲ್ಲಿ ವೆಂಕಟೇಶ್ವರನ ಅಥವಾ ನರಸಿಂಹನ ಗುಡಿಗಳನ್ನು ಕಟ್ಟುತ್ತ, ಜನರನ್ನು ಶ್ರೀವೈಷ್ಣವ ಸಿದ್ಧಾಂತಕ್ಕೆ ತಿರುಗಿಸುತ್ತ ಇದ್ದವರು. ಅಂಥ ಆಚಾರ್ಯಪುರುಷರ ಮನೆತನದ ಹೆಸರು ತಿರುಮಲೆ ತಾತಾಚಾರ್ಯರೆಂದು; ಅದು ಯಾವೊಬ್ಬ ವ್ಯಕ್ತಿಯ ನಿರ್ದಿಷ್ಟ ಹೆಸರೂ ಅಲ್ಲ. ತಿರುಮಲೆ ತಾತಾಚಾರ್ಯರೆಂದೇ ಆ ಆಚಾರ್ಯರನ್ನೆಲ್ಲ ಜನ ಕರೆಯುತ್ತಿದ್ದುದು. ಇವರ ಧರ್ಮಪ್ರಚಾರವು ಜಾತಿಮತಗಳ ತಡೆಯಿಲ್ಲದೆ ನಡೆಯುತ್ತಿದ್ದಿತು; ಇವರು ಕೀಳು ಜನ, ಇವರು ಮೇಲುಜನ, ಇವರ ಜಾತಿ ಕೆಳದರ್ಜೆಯದು, ಇವರು ಅಂತ್ಯಜರು ಹೀಗೆ ಅವರು ಯೋಚಿಸುತ್ತಿರಲಿಲ್ಲ. ಹಲವಾರು ಗುಡ್ಡಗಾಡಿನ ಬುಡಕಟ್ಟಿನ ಜನರೂ ಇವರ ಬೋಧೆಯನ್ನು ಪಡೆದರು; ಶ್ರೀವೈಷ್ಣವ ಮತದೀಕ್ಷೆಯನ್ನು ಕೈಕೊಂಡರು. ಈಗ ಕೊಂಡದಾಸರಿ, ಮೂಲ ದಾಸರಿ ಎನ್ನುವ ಗುಂಪಿನ ಶ್ರೀವೈಷ್ಣವರು ಮೊದಲು ಸಮಾಜದಲ್ಲಿ ಅಷ್ಟೇನು ಮರ್ಯಾದೆಯ ಸ್ಥಾನವನ್ನು ಪಡೆದಿರಲಿಲ್ಲ; ಆದರೆ ತಿರುಮಲೆ ತಾತಾಚಾರ್ಯರ ಪ್ರಭಾವದಿಂದ ಅವರ ಉದ್ಧಾರವೂ ಆಯಿತು. ಹೀಗೆ ತಿರುಮಲೆ ತಾತಾಚಾರ್ಯರಿಂದ ಶ್ರೀವೈಷ್ಣವ ದೀಕ್ಷೆ ಪಡೆದವರಲ್ಲಿ ಕುರುಬ ಮನೆತನದವರೂ ಹಲವರಿದ್ದರು. ನಮ್ಮ ಕನಕನಾಯಕನ ತಂದೆಯೂ ಒಬ್ಬ ತಿರುಮಲೆ ತಾತಾಚಾರ್ಯನ ಶಿಷ್ಯನೇ; ಹೀಗೆ ಕನಕನಾಯಕನ ಮನೆತನ ಶ್ರೀವೈಷ್ಣವ ಸಂಪ್ರದಾಯಕ್ಕೇ ಸೇರಿದ್ದಿತು.

ಕನಕನಾಯಕನು ಬದುಕಿನಲ್ಲಿ ಬೇಸರಗೊಂಡು ಪರಮಾರ್ಥವನ್ನರಸಿ ಹೊರಟಾಗ, ತನ್ನ ಕುಲಗುರುಗಳಾದ ತಿರುಮಲೆ ತಾತಾಚಾರ್ಯರನ್ನೇ ಹುಡುಕಿಕೊಂಡು ಹೋದುದು ಆಶ್ಚರ್ಯವಲ್ಲ. ಈ ತಾತಾಚಾರ್ಯರು ವಿಜಯನಗರ ಸಾಮ್ರಾಜ್ಯದಲ್ಲಿ ತುಂಬ ಪ್ರಭಾವಶಾಲಿಯಾಗಿದ್ದವರು; ಆ ಅರಸರಲ್ಲೆಲ್ಲ ವಿಖ್ಯಾತನಾದ ಶ್ರೀ ಕೃಷ್ಣದೇವರಾಯ ಮಹಾರಾಯನ ಆಸ್ಥಾನ ಪಂಡಿತರಾಗಿದ್ದವರು. ಮುಂದೆ ರಾಜನಾದ ಅಳಿಯ ರಾಮರಾಯನಿಗಂತೂ ಅಚ್ಚು ಮೆಚ್ಚಿನ ಗುರುಗಳು. ವಿದ್ವಾಂಸರು ಮಾತ್ರವಲ್ಲ, ಪರಮ ಭಾಗವತರೆಂದು ಪ್ರಸಿದ್ಧರಾಗಿದ್ದವರು.

ಕನಕನಾಯಕನು ನೇರವಾಗಿ ಇವರ ಬಳಿ ಬಂದನು. ತಾತಾಚಾರ್ಯರು ನಾಯಕನಿಗೆ ಶ್ರೀ ವೈಷ್ಣವ ದೀಕ್ಷೆಯನ್ನು ವಿಧ್ಯುಕ್ತವಾಗಿ ಕೊಟ್ಟು, ರಾಮಾನುಜಾಚಾರ್ಯರ ಸಿದ್ಧಾಂತದ ರಹಸ್ಯಗಳನ್ನೆಲ್ಲ ತಿಳಿಯಹೇಳಿದರು. ಪ್ರಪತ್ತಿಯನ್ನು ಪಡೆದವರಿಗೆ 'ದಾಸರಿ' (ಅಥವಾ ದಾಸರು) ಎಂದು ಹೆಸರು ಬರುವುದು ವಾಡಿಕೆ. ಭಗವಂತನ ದಾಸರು ಅವರು. ತಮ್ಮ ಇಡೀ ಆಯುಷ್ಯವನ್ನು ದೇವರ ಸೇವೆಯಲ್ಲಿಯೇ ಕಳೆಯುವ ಜನ. ದೇವರನ್ನಲ್ಲದೆ ಮತ್ತೆ ಯಾರನ್ನೂ ಯಾವುದಕ್ಕೂ ಯಾಚಿಸುವುದಿಲ್ಲ ಅವರು. ಅವರು ಶರಣರು, ಪ್ರಪನ್ನರು, ಭಕ್ತರು, ದಾಸರು. ಈ ದೀಕ್ಷೆಯನ್ನು ಪಡೆದನಂತರ ಕನಕನಾಯಕನು 'ಕನಕದಾಸ'ರಾದರು.

ಹೀಗೆ ಕನಕದಾಸರಿಗೆ ಪರಮಾರ್ಥದಲ್ಲಿ ಪ್ರವೇಶ ದೊರೆಯಿತು. ಅವರು ಮುಂದೆ 'ಮೋಹನತರಂಗಿಣಿ' ಎನ್ನುವ ಕಾವ್ಯವೊಂದನ್ನು ಬರೆದರು; ಅದರಲ್ಲಿ ಸಂಪ್ರದಾಯದ ಪರಮಾಚಾರ್ಯರಾದ ರಾಮಾನುಜರನ್ನೂ, ತಮಗೆ ದೀಕ್ಷೆಕೊಟ್ಟ ತಾತಾಚಾರ್ಯರನ್ನೂ ಆರಂಭದಲ್ಲಿಯೇ ಸ್ಮರಿಸಿಕೊಂಡಿದ್ದಾರೆ-

ಶ್ರೀಮದ್ಗುರುರಾಯ ದುರಿತವಿಜೇಯ ದು
ಷ್ಕಾಮ ವಿಚ್ಛೇದನಾಹ್ಲಾದ।
ತಾಮಸಗುಣನಾಶ ಸಾತ್ವಿಕೋಲ್ಲಾಸ ಶ್ರೀ-
ರಾಮಾನುಜ ಮುನಿ ಶರಣು॥

ಇದು ರಾಮಾನುಜಾಚಾರ್ಯರನ್ನು ಕುರಿತ ಪದ್ಯ; ಕಾವ್ಯದ ಮೊದಲನೆಯದೇ. ಮುಂದಿನ ಪದ್ಯದಲ್ಲಿ ಅವರು ತರ್ಕದಲ್ಲಿ ತುಂಬ ಗಟ್ಟಿಗರೆಂದೂ, ಅವರಿಗೆ ಸರಿದೂಗುವಂಥವರು ಯಾರೂ ಇಲ್ಲವೆಂದೂ ಕೊಂಡಾಡಿದ್ದಾರೆ. ಮೂರನೆಯ ಪದ್ಯ ತಾತಾಚಾರ್ಯರನ್ನು ಕುರಿತದ್ದು-

ಈ ರೀತಿ ಪೆಂಪುವಡೆದ ಸದ್ಗುರುಕರ-
ವಾರಿಜೋದ್ಭವ ಶಿಷ್ಯ ಜನರ।
ಪೇರಿಸಿ ನಾಲ್ವಗೆ ಫಲವೀವ ತಾತಾ
ಚಾರಿಯರಡಿಗೆರಗುವೆನು॥

ಕನಕದಾಸರ ಧಾರ್ಮಿಕ ಪ್ರವೃತ್ತಿ ಹೀಗೆ ಆರಂಭವಾಯಿತಾದರೂ, ಅದು ಪಕ್ವವಾದದ್ದು ವ್ಯಾಸತೀರ್ಥರ ಸಂಪರ್ಕದಿಂದ. ಶ್ರೀ ಕೃಷ್ಣದೇವರಾಯ ಮಹಾರಾಯನಿಗೆ ಗುರುಗಳು ವ್ಯಾಸತೀರ್ಥರು.

ವಿಜಯನಗರದ ಸಾಮ್ರಾಜ್ಯದ ಸ್ಥಾಪನೆಯಾದುದು ವಿದ್ಯಾರಣ್ಯರಿಂದ; ಆದರೆ ಅದು ಉಚ್ಛ್ರಾಯ ಸ್ಥಿತಿಯನ್ನು ಮುಟ್ಟಿದುದು ವ್ಯಾಸತೀರ್ಥರ ಕಾಲದಲ್ಲಿ. ಅವರ ಪ್ರಭಾವದಿಂದಲೇ ಕೃಷ್ಣದೇವರಾಯನು ಭಾರತದೇಶದ, ಅಷ್ಟೇಕೆ ಪ್ರಪಂಚದ, ಶ್ರೇಷ್ಠ ಚಕ್ರವರ್ತಿಗಳಲ್ಲಿ ಒಬ್ಬನಾದದ್ದು. ಅವನು ಹೀಗಾಗಲು ಕಾರಣ ವ್ಯಾಸತೀರ್ಥರ ಮಾರ್ಗದರ್ಶನ. ವ್ಯಾಸತೀರ್ಥರನ್ನು ಕೇಳಿಯೇ, ಅವರ ಒಪ್ಪಿಗೆಯನ್ನು ಪಡೆದೇ ರಾಜನು ಯಾವ ಕೆಲಸವನ್ನಾದರೂ ಮಾಡುತ್ತಿದ್ದುದು. ವ್ಯಾಸತೀರ್ಥರನ್ನು ತನ್ನ ಸಿಂಹಾಸನದ ಮೇಲೆ ಕೂರಿಸಿ ರಾಜನು ಅವರಿಗೆ ರತ್ನಗಳಿಂದ ಅಭಿಷೇಕ ಮಾಡಿದ್ದನು. ಇಡೀ ಸಾಮ್ರಾಜ್ಯದಲ್ಲಿ ಅವರ ಹಿರಿಮೆ ಎಲ್ಲರಿಗೂ ತಿಳಿದಿದ್ದಿತು. ವ್ಯಾಸರಾಯ ಸ್ವಾಮಿಗಳು ಎಂದೇ ಅವರ ಪ್ರಸಿದ್ಧಿ.

ಇಂಥವರೊಂದಿಗೆ ಕನಕದಾಸರ ಸಂಬಂಧ ಬೆಳೆದು ಬಂದುದು ಆಶ್ಚರ್ಯವೇನಲ್ಲ. ತಾತಾಚಾರ್ಯರು ಮೊದಲ ಗುರುಗಳು, ಅವರು ರಾಮಾನುಜ ಸಂಪ್ರದಾಯದವರಾದರೆ, ವ್ಯಾಸತೀರ್ಥರು ಮಾಧ್ವ ಸಂಪ್ರದಾಯವರು. ವಿಜಯನಗರದ ರಾಜಧಾನಿಯಾದ ಹಂಪಿಯಲ್ಲಿ ಅವರ ಮಠವಿದ್ದಿತು. ಅವರು ಸಂಸತದಲ್ಲಿ, ಶಾಸ್ತ್ರದಲ್ಲಿ ಎಷ್ಟು ದೊಡ್ಡ ಪಂಡಿತರೋ ಕನ್ನಡದಲ್ಲಿ, ದಾಸಸಾಹಿತ್ಯದಲ್ಲಿ ಅಷ್ಟೇ ಆಸಕ್ತರು. ಕನಕದಾಸರು ಅವರ ಬಳಿ ಬರುವ ವೇಳೆಗೆ ವ್ಯಾಸತೀರ್ಥರು ಮುದುಕರಾಗಿದ್ದ ರೆಂದು ತೋರುತ್ತದೆ.

ಕನಕದಾಸರು ವ್ಯಾಸತೀರ್ಥರನ್ನು ಕಂಡ ಸಂದರ್ಭ ಸ್ವಾರಸ್ಯವಾದುದು. ವಿಜಯನಗರದ ಅರಸ ಕೃಷ್ಣದೇವರಾಯನು ವ್ಯಾಸತೀರ್ಥಸ್ವಾಮಿಗಳಿಗೆ ಒಂದು ಗ್ರಾಮವನ್ನು ಉಂಬಳಿಯಾಗಿ ಕೊಟ್ಟಿದ್ದನು; ಈ ಗ್ರಾಮವನ್ನು ಈಗ 'ವ್ಯಾಸಸಮುದ್ರ' ಎಂದು ಕರೆಯುತ್ತಾರೆ. 'ಸಮುದ್ರ' ಹೇಗೆ ಗೊತ್ತೆ? ಅಲ್ಲಿ ಸಮುದ್ರದ ಹಾಗಿರುವ ದೊಡ್ಡದೊಂದು ಕರೆಯಿದೆ; ಊರಿಗೂ ನೆರೆಯೂರುಗಳಿಗೂ ಸಾಗುವಳಿಗೆ ಇದೇ ಆಧಾರ. ಇದನ್ನು ಕಟ್ಟಿಸಿದವರು ವ್ಯಾಸತೀರ್ಥರೇ. ಅವರು ಕೆರೆಯನ್ನು ತೋಡಿಸುತ್ತಿರುವಾಗ, ಕಟ್ಟೆಯನ್ನು ಕಟ್ಟಿಸುತ್ತಿರುವಾಗಲೇ ಕನಕದಾಸರು ಅಲ್ಲಿಗೆ ಹೋದದ್ದು.

ವ್ಯಾಸತೀರ್ಥರ ಯೋಜನೆಗೆ ಬಲವಾದ ಒಂದು ಅಡ್ಡಿಯಿದ್ದಿತು. ಕೆರೆಗೆ ನೀರು ಹರಿದು ಬರಲು ದೊಡ್ಡ ಬಂಡೆಯೊಂದು ಅಡ್ಡವಾಗಿದ್ದಿತು; ಎಷ್ಟು ಜನ ಸೇರಿ ಅದನ್ನು ಸರಿಸಲು ಯತ್ನಿಸಿದರೂ ಸಾಧ್ಯವಾಗಲಿಲ್ಲ. ಬಂಡೆಯನ್ನು ತೆಗೆಯದೆ ಕೆರೆಗೆ ನೀರು ತುಂಬುವುದು ಹೇಗೆ? ವ್ಯಾಸರಾಯ ಸ್ವಾಮಿಗಳಿಗೆ ಇದು ದೊಡ್ಡ ಸಮಸ್ಯೆಯಾಯಿತು. ಅವರು ಜನರೊಂದಿಗೆ ಇದರ ವಿಚಾರ ಆಲೋಚಿಸುತ್ತಿರುವಾಗ ಕನಕದಾಸರು ಸ್ವಾಮಿಗಳನ್ನು ನೋಡಲೆಂದು ಬಂದರು. ಬಂದವರೇ, "ಗುರುಗಳೇ, ನನಗೆ ಮಂತ್ರೋಪದೇಶವಾಗಬೇಕು" ಎಂದು ಸ್ವಾಮಿಗಳ ಮುಂದೆ ಅಡ್ಡಬಿದ್ದು, ಕೈಮುಗಿದು ಬೇಡಿಕೊಂಡರು. ಸ್ವಾಮಿಗಳು ಅವರ ಕಡೆ ತಿರುಗಿ "ಯಾರು ನೀನು?" ಎಂದು ಕೇಳಿದರು. ದಾಸರು "ಗುರುಗಳೇ, ನಾನೊಬ್ಬ ಕುರುಬ" ಎಂದಷ್ಟೇ ಹೇಳಿ ಸುಮ್ಮನಾದರು. ಅದಕ್ಕೆ ಸ್ವಾಮಿಗಳು ನಗುತ್ತ "ಕುರುಬನಿಗೇನು ಮಂತ್ರವೋ? ಕೋಣನ ಮಂತ್ರ ಅಷ್ಟೆ!" ಎಂದು ಹೇಳಿದರು. ದಾಸರು ಕೈ ಮುಗಿದು "ಗುರುಗಳೇ, ಮಹದನುಗ್ರಹವಾಯಿತು" ಎಂದು ಹೇಳಿ ಹೊರಟುಹೋದರು.

ದೂರ ಏನೂ ಹೋಗಲಿಲ್ಲ. ಹತ್ತಿರದಲ್ಲೇ ಯಾರೂ ಇರದ ಜಾಗದಲ್ಲಿ ಕುಳಿತು ಕೋಣನ ಮಂತ್ರವನ್ನೇ ನಿಷ್ಠೆಯಿಂದ ಪುರಶ್ಚರಣೆ ಮಾಡತೊಡಗಿದರು. 'ಕೋಣ, ಕೋಣ' ಎಂದೇ ಅವರ ಇಡೀ ಬದುಕು ಆಗ ಮಿಡಿಯುತ್ತಿತ್ತು; ಅವರ ಬುದ್ಧಿಗೂ, ಹೃದಯಕ್ಕೂ ಕೋಣವನ್ನು ಬಿಟ್ಟು ಬೇರೆ

ಯಾವುದೂ ದಿಟವಾಗಿರಲಿಲ್ಲ. ಧ್ಯಾನವೆಂದರೆ ಅಷ್ಟು ಅಚ್ಚುಕಟ್ಟಾಗಿ ಮಾಡಿದರು. ಇದರ ಫಲವಾಗಿ ಏನಾಯಿತು ಗೊತ್ತೆ? ದೊಡ್ಡದೊಂದು ಕೋಣ ಅವರ ಮುಂದೆ ಬಂದು ನಿಂತಿತು. ಈ ಲೋಕದ ಕೋಣವಲ್ಲ ಅದು; ದಿವ್ಯವಾಗಿ, ಥಳಥಳನೆ ಹೊಳೆಯುತ್ತ, ಕಣ್ಣನ್ನು ಕೋರೈಸುತ್ತ, ಆಳೆತ್ತರ ನಿಂತ ಆ ಕೋಣ ಯಮಧರ್ಮರಾಯನ ವಾಹನವಾಗಿದ್ದ ಕೋಣವೇ (ಕನಕದಾಸರು ಯಮನ ಅಂಶವನ್ನು ತಳೆದು ಹುಟ್ಟಿದವರು ಎಂದು ನಂಬಿಕೆಯಿದೆ)!

ಸರಿ, ಆ ಕೋಣವನ್ನು ಏನು ಮಾಡಬೇಕು? ಕೋಣನ ಮಂತ್ರವೇನೋ ಫಲಿಸಿತು; ಮುಂದೇನು? ಒಡನೆಯೇ ದಾಸರು ಎದ್ದು ಕೋಣವನ್ನೂ ಕರೆದುಕೊಂಡು ಗುರುಗಳ ಬಳಿಗೆ ಹೋದರು; ಅವರ ಮುಂದೆ ನಿಲ್ಲಿಸಿ ನಡೆದುದನ್ನು ವಿವರಿಸಿದರು. ಸ್ವಾಮಿಗಳು ಕನಕನದಾಸರ ತಪಃಶಕ್ತಿಯನ್ನು ಕಂಡು ಬೆರಗಾದರು. ಆದರೆ ಬುದ್ಧಿವಂತರಾದ ಅವರ ಮನಸ್ಸಿಗೆ ತಟ್ಟನೆ ಈ ದಿವ್ಯ ಕೋಣದಿಂದ ಆಗಬಹುದಾದ ಪ್ರಯೋಜನವು ಹೊಳೆಯಿತು. ಕನಕನನ್ನು ಕುರಿತು. "ಅಯ್ಯಾ, ನಿನ್ನ ಮಂತ್ರಮೂರ್ತಿಯಾದ ಈ ಕೋಣದಿಂದ ಆ ಬಂಡೆಯನ್ನು ಜರುಗಿಸು" ಎಂದು ನೀರಿಗೆ ಅಡ್ಡವಾಗಿದ್ದ ದೊಡ್ಡ ಬಂಡೆಯ ಕಡೆ ತೋರಿಸಿದರು. ತೋರಿಸಿದುದೇ ತಡ, ಕೋಣವು ಒಡನೆಯೇ ಹೋಗಿ ಬಂಡೆಯನ್ನು ತನ್ನ ತಲೆಯಿಂದ ಪಕ್ಕಕ್ಕೆ ನೂಕಿಬಿಟ್ಟಿತು; ಯಮನ ಕೋಣವಲ್ಲವೆ, ಅದು? ಬಂಡೆ ಸರಿದೊಡನೆ ಕೆರೆಗೆ ನೀರು ಝುಳಝುಳನೆ ಹರಿದು ತುಂಬಿಬಿಟ್ಟಿತು. ಸ್ವಾಮಿಗಳ ಸಮಸ್ಯೆ ಬಗೆ ಹರಿಯಿತು.

ಬಂಡೆಯಿದ್ದ ಜಾಗವನ್ನು ಈಗಲೂ ತೋರಿಸುತ್ತಾರೆ; ಅದಕ್ಕೆ 'ಕೋಣನ ತೂಬು' ಎಂದೇ ಹೆಸರಿದೆ. ಕನಕದಾಸರ ಪುಣ್ಯ ಪ್ರಭಾವದಿಂದ ಊರಿನ ಕೆರೆ ತುಂಬಿತು; ಜನರಿಗೆ ಉಪಕಾರವಾಯಿತು.

ಕನಕದಾಸರ ವಿಚಾರದಲ್ಲಿ ವ್ಯಾಸರಾಯಸ್ವಾಮಿಗಳಿಗೆ ತುಂಬ ಗೌರವಬುದ್ಧಿ ಬೆಳೆಯಿತು ಎಂದರೆ ಆಶ್ಚರ್ಯವಲ್ಲ. ದಾಸರನ್ನು ತಮ್ಮ ಬಳಿಯೇ ಇರಿಸಿಕೊಂಡು, ಅವರಿಗೆ ವೇದಾಂತದ ಮರ್ಮಗಳನ್ನೆಲ್ಲ ಬೋಧಿಸಿದರು. ಅವರಿಗೆ ಅಂಕಿತ ಕೊಟ್ಟು ಹರಿದಾಸರನ್ನಾಗಿ ಮಾಡಿ, ಹಾಡುಗಳನ್ನು ಬರೆಯುವಂತೆ ಹೇಳಿದರು. ವ್ಯಾಸರಾಯರ ಬಳಿ ದಾಸರು ಇದ್ದು ನೂರಾರು ದೇವರ ನಾಮಗಳನ್ನು ರಚಿಸಿದರು. ಹಲವಾರು ಕಾವ್ಯಗ್ರಂಥಗಳನ್ನು ಸಿದ್ಧಪಡಿಸಿದರು. ಸ್ವಾಮಿಗಳಿಗೆ ಕನಕದಾಸರೆಂದರೆ ತುಂಬ ಅಭಿಮಾನ, ವಿಶ್ವಾಸ.

ವ್ಯಾಸರಾಯಸ್ವಾಮಿಗಳು ಮಠಾಧಿಪತಿಗಳು. ಮಠವೆಂದರೆ ನೂರಾರು ಪಂಡಿತರು, ಆಚಾರ್ಯರು, ಭಾಗವತರು, ಪ್ರವಚನಕಾರರು, ಕವಿಗಳು ಇರುತ್ತಿದ್ದ ಕಾಲವದು. ಅವರಿಗೆಲ್ಲ ಸ್ವಾಮಿಗಳು ಆಶ್ರಯ ಕೊಟ್ಟಿದ್ದರು; ಒಬ್ಬೊಬ್ಬರಿಗೂ ಸ್ವಾಮಿಗಳ ವಿಶ್ವಾಸವನ್ನು ಗಳಿಸಿಕೊಳ್ಳಬೇಕೆನ್ನುವ ಆಸೆ; ಏಕೆಂದರೆ ಸಭಾಸನ್ಮಾನ, ಪುರಸ್ಕಾರ, ಧನ ಸಹಾಯ ಎಲ್ಲವೂ ಈ ವಿಶ್ವಾಸವನ್ನು ಅವಲಂಬಿಸಿರುತ್ತದೆ ತಾನೆ? ಅವರೆಲ್ಲ ವೇದಗಳನ್ನೂ, ಶಾಸ್ತ್ರಗಳನ್ನೂ, ಕಾವ್ಯಗಳನ್ನೂ ಓದಿ, ಪ್ರೌಢಿಮೆಯನ್ನು ಗಳಿಸಿ, ವ್ಯಾಖ್ಯಾರ್ಥ ಮಾಡಬಲ್ಲ ಸಮರ್ಥರಾದ, ವಯಸ್ಸಾದ ಪಂಡಿತರು. ಇನ್ನೂ ನಡುಪ್ರಾಯದ ಕನಕದಾಸರು ಬ್ರಾಹ್ಮಣರೂ ಅಲ್ಲ, ಮಾಧ್ವರಂತೂ ಮೊದಲೇ ಅಲ್ಲ; ಕುರುಬರು; ಸಂಸತ ಬಾರದು, ಶಾಸ್ತ್ರ ತಿಳಿಯದು. ಎಲ್ಲಿಂದಲೋ ಬಂದ ಇಂಥವರನ್ನು ಸ್ವಾಮಿಗಳು

ಗೌರವದಿಂದ ಕಾಣುತ್ತಾರೆ, ಅವರಲ್ಲಿ ವಿಶೇಷ ವಿಶ್ವಾಸವನ್ನಿಟ್ಟಿದ್ದಾರೆ ಎಂದರೆ ಈ ಪಂಡಿತರಿಗೆಲ್ಲ ಹೊಟ್ಟೆಯುರಿ ಒದಗದೆ ಇರುತ್ತದೆಯೇ?

ವ್ಯಾಸರಾಯಸ್ವಾಮಿಗಳು ಕನಕದಾಸರ ವಿಚಾರವಲ್ಲಿ ಎಷ್ಟು ಗೌರವ ತೋರಿಸುತ್ತಿದ್ದರೆಂದರೆ, ಪೂಜೆ ನಡೆದು ನೆರೆದವರಿಗೆ ತೀರ್ಥ ಕೊಡುವ ಸಂದರ್ಭದಲ್ಲಿ 'ಕನಕ ಎಲ್ಲಿ, ಕರೆಯಿರಿ' ಎಂದು ಹೇಳುತ್ತಿದ್ದರು! ಸಾಮಾನ್ಯವಾಗಿ ಸ್ವಾಮಿಗಳು ಮೊದಲು ತೀರ್ಥ ಕೊಡುವುದು ಸಂಸ್ಥಾನದ ಮಹಾಪಂಡಿತರಿಗೆ, ಮಠದ ವಿದ್ವಾಂಸರಿಗೆ; ಅನಂತರ ಇತರ ಬ್ರಾಹ್ಮಣರಿಗೆ, ಗೃಹಸ್ಥರಿಗೆ. ಅದರಲ್ಲಿಯೂ ತಾರತಮ್ಯವಿರುತ್ತದೆ. ಹೀಗಿರುವಾಗ ಮೊದಲ ತೀರ್ಥವನ್ನು ಕುರುಬರಾದ ಕನಕದಾಸರಿಗೆ ಕೊಟ್ಟರೆ ನೆರೆದ ಮಹಾ ವಿದ್ವಾಂಸರಿಗೆ ಅಪಮಾನ, ಅಸಮಾಧಾನವಲ್ಲವೆ? ಸ್ವಾಮಿಗಳಂತೂ ಇದನ್ನು ಮನಸ್ಸಿಗೆ ತಂದುಕೊಳ್ಳುತ್ತಿರಲಿಲ್ಲ; ಅವನು ಮಹಾಜ್ಞಾನಿ ಎನ್ನುವುದು ಅವರಿಗೆ ತಿಳಿದಿದ್ದಿತು, ಅದಕ್ಕೇ ಮೊದಲ ತೀರ್ಥ ಅವನಿಗೆ.

ಆದರೆ ಮಠದ ಪಂಡಿತರು ಸುಮ್ಮನಿರುತ್ತಾರೆಯೆ? ಸ್ವಾಮಿಗಳನ್ನು ದೂರತೊಡಗಿದರು; 'ಸಾರ್ಥಕವಾಯಿತು ಇವರ ಸಂನ್ಯಾಸಿತನ! ಯೋಗ್ಯತೆ ತಿಳಿಯದು, ಔಚಿತ್ಯ ತಿಳಿಯದು, ಎಂಥ ಸ್ವಾಮಿಗಳು! ಆ ಕುರುಬನನ್ನು ಕಟ್ಟಿಕೊಂಡು ಮಠ ನಡೆಸುತ್ತಾರೆ!" ಎಂದು ಮುಂತಾಗಿ ಆಡಿಕೊಳ್ಳತೊಡಗಿದರು. ಇದು ವ್ಯಾಸರಾಯಸ್ವಾಮಿಗಳ ಕಿವಿಗೂ ಬಿದ್ದಿತು; 'ಇರಲಿ, ಕನಕನ ಹಿರಿಮೆ ಇವರಿಗೆ ತಿಳಿಯದು! ತೋರಿಸಿ ಕೊಡುತ್ತೇನೆ.' ಎಂದುಕೊಂಡರು.

ಮಾರನೆಯ ದಿನ ದೇವರ ಪೂಜೆಯಾಯಿತು; ಸ್ವಾಮಿಗಳು ಪಂಡಿತರಿಗೆಲ್ಲ ತೀರ್ಥಕೊಟ್ಟರು; ಪ್ರಸಾದದ ಬಾಳೆಯ ಹಣ್ಣನ್ನು ಒಬ್ಬೊಬ್ಬರಿಗೆ ಒಂದೊಂದು ಕೊಟ್ಟರು; ಕನಕದಾಸರಿಗೂ ಒಂದು ಸಿಕ್ಕಿತು. ಆಗ ಎಲ್ಲ ಪಂಡಿತರನ್ನೂ, ಕನಕದಾಸರನ್ನೂ ಕರೆದು "ಯಾರೂ ಇಲ್ಲದ ಕಡೆ ಹೋಗಿ ಈ ಬಾಳೆಯಹಣ್ಣನ್ನು ತಿಂದು ಬನ್ನಿ," ಎಂದು ಹೇಳಿ ಕಳುಹಿಸಿದರು. ಪಂಡಿತರು ಒಬ್ಬೊಬ್ಬರೂ ಒಂದೊಂದು ಕಡೆ ಹೋದರು; ಕಂಬದ ಹಿಂದೆ ಮರೆಯಲ್ಲಿ, ಮನೆಯ ಹಿಂದೆ ಓಣಿಯಲ್ಲಿ, ಕೋಣೆಯಲ್ಲಿ ಬಾಗಿಲು ಭದ್ರಪಡಿಸಿ, ಊರ ಹೊರಗೆ ಮರವನ್ನೇರಿ ಕುಳಿತು-ಹೀಗೆ ಯಾರೂ ಇರದ ಜಾಗವನ್ನು ಅರಸಿ ಎಲ್ಲರೂ ಹೋಗಿ ಬಾಳೆಯ ಹಣ್ಣನ್ನು ತಿಂದು ಹಿಂದೆಬಂದರು. ಕನಕದಾಸರು ಒಬ್ಬರು ಮಾತ್ರ ಬಾಳೆಯ ಹಣ್ಣನ್ನು ತಿನ್ನದೆ ಹಾಗೆಯೇ ತಂದಿದ್ದರು.

ಸ್ವಾಮಿಗಳು, "ಏನು ಕನಕ, ತಿನ್ನದೆ ಬಂದಿದ್ದೀ? ಯಾರೂ ಇಲ್ಲದ ಸ್ಥಳವೇ ಸಿಗಲಿಲ್ಲವೋ?" ಎಂದು ನಗುತ್ತ ಕೇಳಿದರು. ಅದಕ್ಕೆ ಕನಕದಾಸರು. "ಇಲ್ಲ, ಗುರುಗಳೇ, ಏಕಾಂತ ನನಗೆ ತೋರಲಿಲ್ಲ. ಯಾರೂ ಇಲ್ಲದ ಕಡೆ ಯಾವುದು? ದೇವರು ಇಲ್ಲದೆಡೆ ಯಾವುದು?" ಎಂದು ಕೇಳಿದರು. ಸ್ವಾಮಿಗಳು ಪಂಡಿತರ ಕಡೆ ತಿರುಗಿ, "ನೋಡಿದಿರಾ, ನಮ್ಮ ಕನಕನ ದೃಷ್ಟಿ? ಅವನ ಕಣ್ಣಿಗೆ ದೇವರು ಎಲ್ಲೆಲ್ಲೂ ಕಾಣುತ್ತಿದ್ದಾನೆ. ಈ ಅರಿವಿನಲ್ಲೇ ತನ್ನ ಬದುಕನ್ನು ಕಳೆಯುತ್ತಾ ಬಂದಿದ್ದಾನೆ ಕನಕ. ಹಾಗೆಂದೇ ಅವನು ನಮ್ಮೆಲ್ಲರಿಗಿಂತ ಉತ್ತಮ! ನಾವು ಜಗತ್ತನ್ನು, ಜನರನ್ನು ನೋಡುತ್ತಿದ್ದೇವೆ, ಅವನು ದೇವರನ್ನು ನೋಡುತ್ತಿದ್ದಾನೆ!" ಎಂದು ಪಂಡಿತರಿಗೆ ಬುದ್ಧಿ ಹೇಳಿದರು.

ಪಂಡಿತರು ನಾಚಿಕೆಯಿಂದ ತಲೆತಗ್ಗಿಸಿಕೊಂಡು ನಿಂತರು. ಮುಂದೆ ಅವರು ಯಾರೂ ಕನಕದಾಸರ ವಿಚಾರವಾಗಿ ಸಣ್ಣ ಮಾತನ್ನು ಆಡಲಿಲ್ಲ. ಅವರ ಬಗ್ಗೆ ಕರುಬಲಿಲ್ಲ. ಸ್ವಾಮಿಗಳ

ವಿಶ್ವಾಸ ಅನುಚಿತವೆಂದು ಬಗೆಯಲಿಲ್ಲ. ಈ ಕತೆಯನ್ನು ಪುರಂದರದಾಸರು ತಮ್ಮ ಒಂದು ಹಾಡಿನಲ್ಲಿ ಹೇಳಿದ್ದಾರೆ. ಈ ಪ್ರಸಂಗ ನಡೆದಾಗ ಅವರು ಅಲ್ಲೇ ಇದ್ದರು.

ಕನಕದಾಸರು ಮೂವತ್ತು ವರ್ಷಗಳ ಪ್ರಾಯದಲ್ಲಿದ್ದಾಗ ವ್ಯಾಸರಾಯಸ್ವಾಮಿಗಳು ವಿಜಯನಗರದಲ್ಲಿ ತೀರಿಕೊಂಡರು; ತುಂಗಾನದಿಯ ತೀರದಲ್ಲಿ ಇವರ ಬೃಂದಾವನವಿದೆ. ಅವರ ಶಿಷ್ಯರಲ್ಲಿ ಸೋದೆಯ ವಾದಿರಾಜಸ್ವಾಮಿಗಳು ಒಬ್ಬರು. ವ್ಯಾಸತೀರ್ಥರ ಅನಂತರ ಕನಕದಾಸರು ಇವರನ್ನು ಆಶ್ರಯಿಸಿದರು. ಇವರ ಪ್ರಭಾವ ದಾಸರ ಮೇಲೆ ತುಂಬ ಬಿದ್ದಿತು; ದಾಸರು ತಮ್ಮನ್ನು ಒಂದು ಪದ್ಯದಲ್ಲಿ 'ತ್ರಿವಿಕ್ರಮದಾಸಸ್ಯ ದಾಸ' (ಎಂದರೆ ವಾದಿರಾಜರ ದಾಸ) ಎಂದು ಕರೆದುಕೊಂಡಿದ್ದಾರೆ.

೩

ಉಡುಪಿಯ ಕೃಷ್ಣನನ್ನು ತಪ್ಪದೆ ಪೂಜೆ ಮಾಡುವ ಸಲುವಾಗಿ ಮಧ್ವಾಚಾರ್ಯರು ಎಂಟು ಮಠಗಳನ್ನು ಸ್ಥಾಪಿಸಿ, ಒಂದೊಂದು ಮಠಕ್ಕೆ ಒಬ್ಬೊಬ್ಬ ಬಾಲಸಂನ್ಯಾಸಿಯನ್ನು ನೇಮಿಸಿದ್ದರು. ಈ ಎಂಟು ಮಠಗಳಲ್ಲಿ ಸೋದೆ ಮಠ ಒಂದು. ಮಧ್ವಾಚಾರ್ಯರ ತಮ್ಮ ವಿಷ್ಣುತೀರ್ಥರೇ ಈ ಮಠದ ಮೂಲಪುರುಷರು. ಆದರೆ ಮಧ್ವಾಚಾರ್ಯರ ಅನಂತರ ವಾದಿರಾಜತೀರ್ಥರಷ್ಟು ಪ್ರಭಾವಶಾಲಿಗಳಾದ ಸ್ವಾಮಿಗಳು ಎಂಟು ಮಠಗಳಲ್ಲಿ ಯಾವ ಮಠದಲ್ಲಿಯೂ ಬರಲಿಲ್ಲ. ಉಡುಪಿಯಲ್ಲಿ ಈಗಿರುವ ಪರ್ಯಾಯ ವ್ಯವಸ್ಥೆಯನ್ನು ಏರ್ಪಡಿಸಿದವರು ಅವರೇ. ಸಂಸತದಲ್ಲಿ ಅವರು ಉತ್ತಮ ಕವಿಗಳು; ಶಾಸ್ತ್ರದಲ್ಲಿ ಅವರ ಪ್ರೌಢಿಮೆ ಮುಗಿಲು ಮುಟ್ಟಿತ್ತು; ಕನ್ನಡದಲ್ಲಿಯೂ ಸ್ವಾರಸ್ಯವಾದ ದೇವರನಾಮಗಳನ್ನು ಬರೆದಿದ್ದಾರೆ. ಇವರು ವ್ಯಾಸತೀರ್ಥರ ಬಳಿ ಓದನ್ನು ಮುಗಿಸಿ ಉಡುಪಿಗೆ ಹಿಂದಿರುಗಿದನಂತರ ಸೋದೆಯಲ್ಲಿ ತ್ರಿವಿಕ್ರಮದೇವರ ಗುಡಿಯನ್ನು ಕಟ್ಟಿಸಿದರು. ವಿಷ್ಣುವಿನ ತ್ರಿವಿಕ್ರಮರೂಪ ಅವರಿಗೆ ತುಂಬ ಮೆಚ್ಚಿನದು. 'ತ್ರಿವಿಕ್ರಮದಾಸ' ಎಂದು ಅವರು ಪ್ರಸಿದ್ಧರಾಗಿದ್ದರು.

ದೇಶವನ್ನೆಲ್ಲ ಸುತ್ತಾಡಿ, ಹೋದೆಡೆಯಲ್ಲೆಲ್ಲ ಕೀರ್ತಿ ಗಳಿಸಿ, ಉಡುಪಿಗೆ ಬಂದನಂತರ, ಕನಕದಾಸರನ್ನು ಅಲ್ಲಿಗೆ ಮತ್ತೆ ಮತ್ತೆ ಕರೆಸಿಕೊಳ್ಳುತ್ತಿದ್ದರು. ವ್ಯಾಸತೀರ್ಥರು ತೀರಿಕೊಂಡನಂತರವಂತೂ ಕನಕದಾಸರು ಉಡುಪಿಗೆ ಹೋಗಿ ಅಲ್ಲಿ ಹೆಚ್ಚಿನ ಕಾಲ ಕಳೆದರು. ತಾವು ತಾತಾಚಾರ್ಯರ ಶಿಷ್ಯರಾಗಿ ರಾಮಾನುಜಸಿದ್ಧಾಂತದಲ್ಲಿ ದೀಕ್ಷೆಪಡೆದಿದ್ದರೂ ಮಾಧ್ವ ಸಂಪ್ರದಾಯದ ವಾದಿರಾಜರ ಶಿಷ್ಯರೂ ಆಗಿರಲು ಸಂಕೋಚಪಡಲಿಲ್ಲ. ಇದು ಅವರ ಮನೋವೈಶಾಲ್ಯವನ್ನು ತೋರಿಸುತ್ತದೆ. ವ್ಯಾಸತೀರ್ಥರಂತೆಯೇ ವಾದಿರಾಜಸ್ವಾಮಿಗಳೂ ಕನಕದಾಸರ ವಿಚಾರದಲ್ಲಿ ತುಂಬ ಗೌರವವನ್ನಿಟ್ಟುಕೊಂಡಿದ್ದರು.

ಕನಕದಾಸರನ್ನು ವಾದಿರಾಜಸ್ವಾಮಿಗಳು ಉಡುಪಿಗೆ ಕರೆಯಿಸಿಕೊಂಡಿದ್ದಾಗ ಒಂದು ಬಾರಿ ಒಂದು ಸೋಜಿಗ ನಡೆಯಿತು. ದಾಸರು ಉಡುಪಿಗೆ ಬಂದ ಹೊಸದು; ಅವರ ಹಿರಿಮೆ ಅಲ್ಲಿಯವರಿಗೆ ಅಷ್ಟಾಗಿ ತಿಳಿದಿರಲಿಲ್ಲ. ಆಗ ವಾದಿರಾಜಸ್ವಾಮಿಗಳೂ ಸೋದೆ ಗ್ರಾಮದಲ್ಲಿದ್ದರು. ದಾಸರು ಕೃಷ್ಣನ

ದರ್ಶನಕ್ಕೆಂದು ಗುಡಿಗೆ ಹೋದರು. ಗುಡಿಯಲ್ಲಿ ವೈಭವದಿಂದ ಪೂಜೆ ನಡೆಯುತ್ತಿದ್ದಿತು; ಹಿರಿಯರು, ಬ್ರಾಹ್ಮಣರು, ಶ್ರೀಮಂತರು ಎಲ್ಲರೂ ನೆರೆದಿದ್ದರು. ಕುರುಬನಾದ ಕನಕನನ್ನು ಒಳಗೆ ಬಿಡುತ್ತಾರೆಯೇ? ಹೋಗುಹೋಗೆಂದು ಅಟ್ಟಿಬಿಟ್ಟರು.

ಕನಕದಾಸರು ಮಹಾದ್ವಾರದಿಂದ ಹೊರಬಂದು ಗುಡಿಯ ಹಿಂಭಾಗದಲ್ಲಿ ನಿಂತರು. ದೇವರ ಪ್ರತಿಮೆ ಪೂರ್ವಾಭಿಮುಖವಾಗಿ ನಿಂತಿದ್ದಿತು; ಕನಕದಾಸರು ಅದರ ಹಿಂಭಾಗದಲ್ಲಿ ಬಂದು ನಿಂತು "ಕೃಷ್ಣಾ, ನಿನ್ನ ದರ್ಶನಕ್ಕೆ ಬಂದರೆ ಹೀಗೆ ಅಟ್ಟಿ ಬಿಡುತ್ತೀಯಾ? ನನಗೆ ಕಾಣಿಸಿಕೊಳ್ಳಬಾರದೆ?" ಎಂದು ಭಕ್ತಿಯಿಂದ ಬೇಡಿಕೊಂಡರು.

ಈ ಸಂದರ್ಭದಲ್ಲಿ ಕನಕದಾಸರು ಒಂದು ದೇವರ ನಾಮವನ್ನು ರಚಿಸಿದ್ದಾರೆ. ಅವರ ಮೊದಲ ಪದ್ಯ ಹೀಗಿದೆ-

ಪೂರ್ವಜನ್ಮದಲ್ಲಿ ನಾ ಮಾಡಿದ ಕರ್ಮದಿಂ
ಮುರ್ವಿಯೊಳು ಜನಿಸಿದೆನೊ ಕೃಷ್ಣ
ಕಾರುಣ್ಯನಿಧಿ ಎನ್ನ ಕಾಯಬೇಕಯ್ಯ ಹರಿ
ವಾರಿಜನಾಭನೆ ಮುದ್ದು ಉಡುಪಿಯ ಕೃಷ್ಣ

ಆಗ ಗರ್ಭಗುಡಿಯಲ್ಲಿ ಪೂರ್ವಕ್ಕೆ ಮುಖಮಾಡಿ ನಿಂತಿದ್ದ ಕೃಷ್ಣ ಇದ್ದಕ್ಕಿದ್ದಂತೆ ತಿರುಗಿ ಪಶ್ಚಿಮಕ್ಕೆ ಮುಖ ಮಾಡಿ ನಿಂತು ಬಿಟ್ಟ! ಹಿಂಬದಿಯ ಗೋಡೆಯಲ್ಲಿ, ಬಿರುಕುಬಿಟ್ಟು ಕನಕದಾಸರು ನೇರವಾಗಿ ಕೃಷ್ಣನನ್ನು ನೋಡುವಂತಾಯಿತು ಕನಕದಾಸರ ಎದುರೇ ಕೃಷ್ಣ ನಿಂತಿದ್ದ. ಗುಡಿಯ ಒಳಗಿದ್ದವರಿಗೆಲ್ಲ ಆಶ್ಚರ್ಯವಾಯಿತು; 'ಏನಿದು ಅದ್ಭುತ!' ಎಂದು ಮೂಗಿನ ಮೇಲೆ ಬೆರಳಿರಿಸಿಕೊಂಡರು. ಅರ್ಚಕರು ದಿಗಿಲು ಬಿದ್ದು ಓಡಿಬಂದು ಕನಕದಾಸರ ಕಾಲಿಗೆರಗಿದರು; ತಪ್ಪನ್ನು ಮನ್ನಿಸಬೇಕೆಂದು ಬೇಡಿಕೊಂಡರು.

ಕೃಷ್ಣನೇನೋ ಮಹಾದ್ವಾರಕ್ಕೆ ಬೆನ್ನು ಮಾಡಿ ನಿಂತವನು ಹಾಗೆಯೇ ಉಳಿದ. ಈಗಲೂ ಮಹಾದ್ವಾರವನ್ನು ಮುಚ್ಚಿರುತ್ತಾರೆ; ಕೃಷ್ಣನನ್ನು ಕಾಣಬೇಕಾದರೆ ಹಿಂಬದಿಯಲ್ಲಿರುವ ಕಿಟಕಿಯಿಂದಲೇ ಕಾಣಬೇಕು. ಕನಕನಿಗೆ ಕೃಷ್ಣನು ಕಾಣಿಸಿಕೊಂಡಾಗ ಗೋಡೆಯಲ್ಲಿ ಬಿದ್ದ ಬಿರುಕನ್ನೇ ಈಗ ಕಿಟಕಿಯನ್ನಾಗಿ ಮಾಡಿ ನವಗ್ರಹಗಳನ್ನು ಅಲ್ಲಿ ಅಳವಡಿಸಿ ಗಾಯತ್ರೀ ಯಂತ್ರದಿಂದ ಬಿಗಿದಿದ್ದಾರೆ. ವಾದಿರಾಜ ಸ್ವಾಮಿಗಳು ಉಡುಪಿಗೆ ಹಿಂದಿರುಗಿ ಬಂದು, ನಡೆದ ಪ್ರಸಂಗವನ್ನು ತಿಳಿದು, ಈ ನವಗ್ರಹ ಕಿಟಕಿಯನ್ನು ವ್ಯವಸ್ಥೆ ಮಾಡಿ, ಇನ್ನು ಮುಂದೆ ಈ ಕಿಟಕಿಯಿಂದಲೇ ದೇವರ ದರ್ಶನ ಮಾಡಬೇಕೆಂದು ಅಪ್ಪಣೆ ಮಾಡಿದರು. ಇದು 'ಕನಕನ ಕಿಂಡಿ' ಎಂದು ಪ್ರಸಿದ್ಧವಾಗಿದೆ. ಕೃಷ್ಣನನ್ನು ಕನಕದಾಸರು ನೋಡಿದಂತೆ ಉಳಿದವರೂ ಕೃಷ್ಣನನ್ನು ಕಾಣಬೇಕೆಂಬ ವ್ಯವಸ್ಥೆ ವಾದಿರಾಜರದ್ದೇ. ಈ ಗುಡಿಯ ಹಿಂಬದಿಯಲ್ಲಿ ಕನಕದಾಸರು ನಿಂತು ಕೃಷ್ಣನನ್ನು ನೋಡಿದ ಸ್ಥಳದಲ್ಲಿ ವಾದಿರಾಜರು ಒಂದು ಮಂಟಪವನ್ನು ಕಟ್ಟಿಸಿದರು. ಇಂದಿಗೂ ಅದು 'ಕನಕನ ಗೋಪುರ' ಎಂದು ಪ್ರಸಿದ್ಧವಾಗಿದೆ. ಈಚೆಗೆ ಅದರ ಬಳಿ ಕನಕದಾಸರ ಪ್ರತಿಮೆಯೊಂದನ್ನೂ ಮಾಡಿಸಿ ಇರಿಸಿದ್ದಾರೆ.

ಅಂತೂ ಕನಕದಾಸರಿಂದಾಗಿ ಕೃಷ್ಣನ ದರ್ಶನ ಎಲ್ಲರಿಗೂ ಎಲ್ಲ ಕಾಲದಲ್ಲೂ ನಡೆಯುವ ಸೌಕರ್ಯವಾಯಿತು. ಈ 'ಕಿಂಡಿ' ಯಾವಾಗಲೂ ತೆರೆದೇ ಇರುತ್ತದೆ. ರಾತ್ರಿ, ಹಗಲು ಯಾವಾಗ ಬೇಕಾದರೂ ಕೃಷ್ಣನ ದರ್ಶನವನ್ನು ಪಡೆಯಬಹುದು. ಈ ವ್ಯವಸ್ಥೆ ಸಾಮಾನ್ಯವಾಗಿ ಬೇರೆ ಯಾವ ಗುಡಿಯಲ್ಲಿಯೂ ಇಲ್ಲ; ಗೊತ್ತಾದ ವೇಳೆಗಳಲ್ಲಿ ಮಾತ್ರ ದೇವರನ್ನು ನೋಡಲು ಭಕ್ತಾದಿಗಳನ್ನು ಒಳಗೆ ಬಿಡುತ್ತಾರೆ. ಉಡುಪಿಯಲ್ಲಿ ಈ ಅಡ್ಡಿಯೇನೂ ಇಲ್ಲ. ವಾದಿರಾಜರು ಕನಕದಾಸರ ವಿಚಾರವಾಗಿ ಎಷ್ಟು ಗೌರವವನ್ನು ತೋರಿಸುತ್ತಿದ್ದರು ಎನ್ನುವುದು ಈ ಪ್ರಸಂಗದಿಂದ ಸ್ಪಷ್ಟವಾಗುತ್ತದೆ.

ಕನಕದಾಸರು ಬೇಲೂರಿಗೆ ಬಂದು, ಅಲ್ಲಿ ಕೆಲವು ದಿನಗಳವರೆಗೆ ತಂಗಿದ್ದರು. ಉಡುಪಿಯಲ್ಲಿ ವಾದಿರಾಜ ಸ್ವಾಮಿಗಳ ಬಳಿ ಶಿಷ್ಯತ್ವ ವಹಿಸಿದಂತೆಯೇ, ಬೇಲೂರಿನಲ್ಲಿ ವೈಕುಂಠದಾಸರ ಶಿಷ್ಯರಾಗಿದ್ದರು. ವೈಕುಂಠದಾಸರು ಬೇಲೂರಿನವರು, ಚೆನ್ನಕೇಶವದೇವರ ಭಕ್ತರು; ಶ್ರೀವೈಷ್ಣವ ಸಂಪ್ರದಾಯಕ್ಕೆ ಸೇರಿದವರು; ಬಹುಶಃ ಕನಕದಾಸರ ದೀಕ್ಷಾ ಗುರುಗಳಾದ ತಿರುಮಲೆ ತಾತಾಚಾರ್ಯರೇ ಇವರಿಗೂ ದೀಕ್ಷೆ ಕೊಟ್ಟವರೆಂದು ತೋರುತ್ತದೆ. ಇವರು ಬೇಲೂರನ್ನು ಬಿಟ್ಟು ಹೊರಗೆ ಎಲ್ಲಿಯೂ ಸಂಚಾರ ಮಾಡದಿದ್ದರೂ ಅವರ ಪ್ರಖ್ಯಾತಿಯಂತೂ ದೂರದ ವಿಜಯನಗರದವರೆಗೂ ಹಬ್ಬಿದ್ದಿತು.

ವಿಜಯನಗರವೇನು ಅಷ್ಟು ದೂರವೆಂದಲ್ಲ. ಬೇಲೂರಿಗೂ ವಿಜಯನಗರಕ್ಕೂ ಮೊದಲಿಂದ ಹತ್ತಿರದ ಸಂಬಂಧವೇ ಇದ್ದಿತು; ಹೊಯ್ಸಳರೂ ವಿಜಯನಗರದ ಅರಸರೂ ಯದುಕುಲದವರೇ, ವಿಜಯಗರದ ಅರಸರು 'ಹೊಯ್ಸಳರ ಪೂರ್ವದ ಮರ್ಯಾದೆಯನ್ನು' ಪೊರೆಯುತ್ತಿದ್ದವರು. ಆ ಸಾಮ್ರಾಜ್ಯದಲ್ಲಿ ಶ್ರೀವೈಷ್ಣವಪಂಥ ಬಲಗೊಂಡಾಗ ಬೇಲೂರಿನ ಚೆನ್ನಕೇಶವನೇ ಅರಸರ ಕುಲದೇವತೆಯಾದ. ವಿರೂಪಾಕ್ಷರಾಯನಿಗೆ ಮೊದಲು 'ಹಂಪೆಯ ವಿರೂಪಾಕ್ಷ'ನ ಒಪ್ಪವೇ ಅರಸರ ಶಾಸನಗಳಲ್ಲಿರುತ್ತಿದ್ದುದು. ವಿರೂಪಾಕ್ಷರಾಯನು ಬೇಲೂರಿನ ಚೆನ್ನಕೇಶವನ ಭಕ್ತನಾದನಂತರ 'ಶ್ರೀರಾಮ' ಮುದ್ರೆ ಶಾಸನಗಳಲ್ಲಿ ಕಾಣಬರುತ್ತದೆ.

ಅಂತೂ ಕನಕದಾಸರು ವೈಕುಂಠದಾಸರ ಹಿರಿಮೆಯನ್ನು ಮೊದಲೇ ಕೇಳಿ ತಿಳಿದು ಅವರನ್ನು ಕಾಣಲೆಂದು ಬೇಲೂರಿಗೆ ಹೋದರು. ವೈಕುಂಠದಾಸರೂ ಕನಕದಾಸರ ವಿಚಾರವನ್ನು ಕೇಳಿ ತಿಳಿದಿದ್ದರು. ಇಬ್ಬರೂ ಮೊದಲು ಭೆಟ್ಟಿಯಾಗಿರಲಿಲ್ಲ ಅಷ್ಟೆ; ಪರಸ್ಪರ ಗೌರವ ವಿಶ್ವಾಸಗಳು ಬೆಳೆದು ಬಂದಿದ್ದವು. ಕನಕದಾಸರು ಬೇಲೂರಿಗೆ ಬಂದು ವೈಕುಂಠದಾಸರ ಮನೆಯನ್ನು ಹುಡುಕಿಕೊಂಡು ಹೋಗಿ, ಅವರಲ್ಲಿ ಊಳಿಗಕ್ಕೆ ಸೇರಿದರು. ತಾವು ಇಂಥವರೆಂದು ವೈಕುಂಠದಾಸರಿಗೆ ತಿಳಿಯಪಡಿಸಲಿಲ್ಲ. ಅವರು ಹೇಳಿದ ಕೆಲಸಗಳನ್ನೆಲ್ಲ ನಿಷ್ಠೆಯಿಂದ, ಭಕ್ತಿಯಿಂದ, ಬೇಸರಪಡದೆ ಮಾಡುತ್ತಿದ್ದರು.

ಎಲ್ಲಿಂದಲೋ ಬಂದ ಈ ಕುರುಬ ಇಷ್ಟು ಸಂತೋಷದಿಂದ, ಎಲ್ಲ ಕೆಲಸಗಳನ್ನೂ ಇಷ್ಟು ಅಚ್ಚು ಕಟ್ಟಾಗಿ ಮಾಡುತ್ತಿರುವುದನ್ನು ಕಂಡು ವೈಕುಂಠದಾಸರಿಗೆ ಸಂತೋಷವೂ ಆಯಿತು, ಇವರು ಯಾರೆಂದು ತಿಳಿಯುವ ಕುತೂಹಲವೂ ಆಯಿತು. ಕಡೆಗೆ, ತಮ್ಮ ಬಳಿ ಕೆಲಸಮಾಡುತ್ತಿರುವವರು ಕನಕದಾಸರೇ ಎಂದು ಅವರಿಗೆ ಗೊತ್ತಾಗಿಬಿಟ್ಟಿತು. ವೈಕುಂಠದಾಸರಿಗೆ ತುಂಬ ಸಂಕೋಚವಾಯಿತು; ದಿಗಿಲಾಯಿತು. ಇಷ್ಟು ದೊಡ್ಡ ಹರಿದಾಸರು ಬಂದು ಮನೆಯಲ್ಲೇ ಇದ್ದಾಗಲೂ ತಾವು ಅವರನ್ನು ಗುರುತಿಸಿ ಗೌರವಿಸುವುದು ಸಾಧ್ಯವಾಗಲಿಲ್ಲವೆಂದು ಪಶ್ಚಾತ್ತಾಪಪಟ್ಟು ಕನಕದಾಸರ ಕಾಲುಹಿಡಿದು ಕೊಂಡು, ಕೆಲಸ ಮಾಡಿಸಿಕೊಂಡುದಕ್ಕಾಗಿ ಮನ್ನಿಸಬೇಕೆಂದು ಬಗೆಬಗೆಯಾಗಿ ಬೇಡಿಕೊಂಡರು.

ಕುರುಬರಾದರೇನು, ಹರಿದಾಸರು ದೇವರಿಗಿಂತಲೂ ದೊಡ್ಡವರು ಎನ್ನುವ ನಂಬಿಕೆ ವೈಕುಂಠದಾಸರದ್ದು. ಅಲ್ಲದೆ ಕನಕದಾಸರ ಹಿರಿಮೆಯನ್ನು ಅವರು ಮೊದಲೇ ಕೇಳಿ ತಿಳಿದಿದ್ದರು.

ಕನಕದಾಸರಿಗೂ ವೈಕುಂಠದಾಸರಂಥ ಜ್ಞಾನಿಗಳ ಸೇವೆ ಮಾಡಬೇಕೆನ್ನುವ ಆಸೆಯಿದ್ದಿತು. ತಮ್ಮ ಪರಿಚಯವನ್ನು ಮೊದಲೇ ತಿಳಿಸಿಬಿಟ್ಟರೆ ಈ ಅವಕಾಶ ದೊರೆಯಲಾರದೆಂದು ಸಂದೇಹಪಟ್ಟು ತಾವು ಯಾರೆಂದು ವೈಕುಂಠದಾಸರಿಗೆ ತಿಳಿಸಲಿಲ್ಲ. ಪರಿಚಯವನ್ನು ತಿಳಿದನಂತರ ವೈಕುಂಠದಾಸರು ತಮ್ಮ ಕ್ಷಮೆಯನ್ನು ಕೇಳಿಕೊಳ್ಳುತ್ತಿದ್ದಾಗ ಕನಕದಾಸರು-

"ಬಂಟನಾಗಿ ಬಾಗಿಲ ಕಾಯ್ವೆ ಹರಿಯೆ
ವೈಕುಂಠದಾಸೋತ್ತಮದಾಸರ ಮನೆಯ

ಹೊರಸುತ್ತ ಪ್ರಾಕಾರ ಸುತ್ತಿ ಬರುವೆ
ಬರುವ ಹೋಗುವರ ವಿಚಾರಿಸಿ ಬಿಡುವೆ
ಕರದಿ ಕಂಬಿಯ ಪೊತ್ತು ಅಲ್ಲಿ ನಿಂದಿರುವೆ
ಹರಿಯ ಸಮ್ಮುಖದ ಓಲಗದೊಳಿರುವೆ

ಎಂಜಲ ಹರಿವಾಣಂಗಳ ಬೆಳಗುವೆ
ಕಂಜನಾಭನ ಪಾದಂಗಳ ತೊಳೆವೆ
ರಂಜಿಪ ಕುಸುಮ ಮಾಲಿಕೆಗೆಳ ತರುವೆ
ಸಂಜೆಗೆ ಪಂಜಿನ ದಾಸನಾಗಿರುವೆ.

ಮೀಸಲ ಊಳಿಗ ನಾ ಮಾಡಿಕೊಂಡಿರುವೆ
ಶೇಷ ಪ್ರಸಾದವ ಉಂಡುಕೊಂಡಿರುವೆ
ಶೇಷಾಚಲ ಕಾಗಿನೆಲೆಯಾದಿಕೇಶವನ
ದಾಸರ ದಾಸರ ದಾಸರ ಮನೆಯ"

ಎಂದು ಹಾಡಿದರು. ವೈಕುಂಠದಾಸರ ಮನೆಯಲ್ಲಿ ಈ ಕೆಲಸಗಳನ್ನೆಲ್ಲ ಮಾಡುತ್ತಿದ್ದರು. ಅದರಿಂದ ಹರಿಯ ಪ್ರೀತಿಯಾಯಿತೆಂದು ಅವರ ಸಂತೋಷ.

ಅಲ್ಲಿಂದ ಮುಂದೆ ಕನಕದಾಸರು ಕೆಲವು ತಿಂಗಳುಗಳು ವೈಕುಂಠದಾಸರ ಮನೆಯಲ್ಲೇ ಇದ್ದು, ಸತ್ಸಂಗವನ್ನು ಪಡೆದರು. ಇಬ್ಬರು ದಾಸರೂ ಒಬ್ಬರನ್ನೊಬ್ಬರು ಬಹುವಾಗಿ ಮೆಚ್ಚಿಕೊಂಡರು. ಕನಕದಾಸರು ಅಲ್ಲಿದ್ದಾಗಲೇ 'ಹರಿಭಕ್ತಿಸಾರ' ಎನ್ನುವ ಕಾವ್ಯಗ್ರಂಥವನ್ನು ರಚಿಸಿ ಅದನ್ನು ಬೇಲೂರಿನ ಚೆನ್ನಕೇಶವಸ್ವಾಮಿಗೆ (ಸುರಪುರನಿಲಯ ಚೆನ್ನಿಗರಾಯನಿಗೆ) ಅರ್ಪಿಸಿದರು. 'ಕೇಶವನೊಲುಮೆಯು ಆಗುವತನಕ' ಎಂದು ಆರಂಭವಾಗುವ ಪ್ರಸಿದ್ಧ ದೇವರನಾಮವನ್ನು ಬೇಲೂರಿನಲ್ಲೇ ರಚಿಸಿದರು; ಅದರ ಕೊನೆಯಲ್ಲಿ 'ವರವೇಲಾಪುರದಾದಿ ಕೇಶವನ' ಸ್ಮರಣೆಯಿದೆ. 'ನಳಚರಿತ್ರೆ' ಎನ್ನುವ ಕನಕದಾಸರ ಇನ್ನೊಂದು ಕಾವ್ಯ, ಭಾಮಿನೀ ಷಟ್ಪದಿಯಲ್ಲಿರುವುದು. ಇದನ್ನೂ ಅವರು ಬೇಲೂರಿನಲ್ಲೇ ರಚಿಸಿದರು. ಅದು 'ವರಪುರದ ಚೆನ್ನಿಗರಾಯ'ನಿಗೆ ಅಂಕಿತವಾಗಿದೆ.

ಅಂತೂ ಕನಕದಾಸರು ಬೇಲೂರಿನಲ್ಲಿ ತುಂಬ ಸಮಯ ಕಳೆಯದಂತೆ ತೋರುತ್ತದೆ; ಅವರ ಸಾರಸ್ವತ ವ್ಯವಸಾಯವೂ ಬಹುಮಟ್ಟಿಗೆ ಇಲ್ಲಿಯೇ ನಡೆಯಿತು. ವೈಕುಂಠದಾಸರ ಸಹವಾಸವೇ ಇದಕ್ಕೆ ಸ್ಫೂರ್ತಿಯಾಗಿದ್ದಿತು.

ಕನಕದಾಸರು ಇನ್ನೂ ಎಲ್ಲೆಲ್ಲಿ ಹೋಗಿದ್ದರೋ ತಿಳಿದುಬಂದಿಲ್ಲ. ಪುರಂದರದಾಸರಿಗಿರದಿದ್ದಂತೆಯೆ ಕನಕದಾಸರಿಗೂ ಶಿಷ್ಯರು ಯಾರೂ ಇರಲಿಲ್ಲ; ಹೀಗಾಗಿ ಅವರ ವೃತ್ತಾಂತ ಸರಿಯಾಗಿ ಉಳಿದು ಬಂದಿಲ್ಲ. ಮೇಲೆ ಹೇಳಿರುವುದೆಲ್ಲ ಪ್ರಚಲಿತವಾದ ಕತೆಗಳು ಅಷ್ಟೆ; ಅವಕ್ಕೆ ಆಧಾರವೂ ಇಲ್ಲದೆ ಇಲ್ಲ. ಇಷ್ಟನ್ನು ಮೀರಿ ಉಳಿದ ವಿವರಗಳು ಅಷ್ಟಾಗಿ ನಮ್ಮವರೆಗೆ ಬಂದಿಲ್ಲ. ಅವರು ತುಂಬು ಆಯುಷ್ಯದಿಂದ ಬಾಳಿದರು; ಅವರು ದೇಹವಿಡುವಾಗ ಅವರಿಗೆ ತೊಂಬತ್ತೆಂಟು ವರ್ಷಗಳಾಗಿದ್ದುವು. ಅವರ ಕಾಲ ೧೫೦೮ರಿಂದ ೧೬೦೬ ಎಂದು ಹೇಳಬಹುದು. ಕಡೆಗಾಲವನ್ನು ತಮ್ಮ ಊರಾದ ಕಾಗಿನೆಲೆಯಲ್ಲಿಯೇ ಕಳೆದರೆಂದೂ ಅಲ್ಲಿನ ನರಸಿಂಹನ ಗುಡಿಯಲ್ಲಿಯೇ ದೇವರ ಎದುರೇ ಪ್ರಾಣಬಿಟ್ಟರೆಂದೂ ಪ್ರತೀತಿಯಿದೆ. ಪ್ರತಿ ವರ್ಷವೂ ತಿರುಪತಿಗೆ ಹೋಗಿ ಬರುವ ವಾಡಿಕೆಯಿದ್ದು ಅವರು ಕಡೆಗಾಲವನ್ನು ತಿರುಪತಿ ಬೆಟ್ಟದ ಮೇಲೇ ಕಳೆದರೆಂದು ಹೇಳುವವರೂ ಇದ್ದಾರೆ.

ಇದು ಹೇಗಾದರೂ ಇರಲಿ. ಕನಕದಾಸರ ಕಾಲದಲ್ಲಿ ಅವರಂತೆಯೇ ಮಹನೀಯರಾದವರು ಹಲವರಿದ್ದರು. ಕನ್ನಡ ನಾಡಿನಲ್ಲಿ ಮಾತ್ರವಲ್ಲ, ಇಡೀ ಭಾರತ ದೇಶದಲ್ಲಿಯೇ ಧಾರ್ಮಿಕ ವಾತಾವರಣ ಬಲಗೊಂಡಿದ್ದಿತು; ಭಕ್ತಿಯ ಸಂದೇಶ ಎಲ್ಲ ಕಡೆಯೂ ಹರಡುತ್ತಿದ್ದಿತು; ಭಾಗವತಪಂಥ ಬೇರೂರುತ್ತ ಇದ್ದಿತು. ಕನಕದಾಸರು ಇಂಥ ಕಾಲದ ಸಂಕೇತವಾಗಿಯೇ ಹುಟ್ಟಿದರೆಂದು ಕಾಣುತ್ತದೆ.

೪

ಕನ್ನಡನಾಡಿನಲ್ಲಿ ಕನಕದಾಸರ ಪರಿಚಯವಿದ್ದವರೇ ಅವರೊಡನೆ ಓಡಿಯಾಡಿದವರೇ ಹಲವರು ಮಹಾಪುರುಷರಿದ್ದರು. ಅವರ ಗುರುಗಳಾದ ವ್ಯಾಸರಾಯ ಸ್ವಾಮಿಗಳು, ವಾದಿರಾಜತೀರ್ಥರು, ಪುರಂದರದಾಸರು, ವೈಕುಂಠದಾಸರು ಇವರೆಲ್ಲರ ಪ್ರಸ್ತಾಪ ಆಗಲೇ ಬಂದಿದೆಯಷ್ಟೆ. ವ್ಯಾಸರಾಯರ ಗುರುಗಳಾದ ಶ್ರೀಪಾದರಾಜರು ಕನಕದಾಸರು ಹುಟ್ಟಿದಾಗ ಇನ್ನೂ ಬದುಕಿದ್ದರು; ದಾಸರಿಗೆ ಮೂರು ವರ್ಷ ತುಂಬಿದಾಗ ಮುಳುಬಾಗಿಲಿನಲ್ಲಿ ಇವರು ತೀರಿಕೊಂಡರು. ಹರಿದಾಸ ಪರಂಪರೆಗೆ ಆದ್ಯ ಆಚಾರ್ಯರೆನಿಸಿಕೊಂಡವರು ಶ್ರೀಪಾದರಾಜರು; ತುಂಬ ಮಹಿಮಾನ್ವಿತರು. ವಿಜಯನಗರ ಸಾಮ್ರಾಜ್ಯದ ಧಾರ್ಮಿಕ ಸಂಪತ್ತಿಗೆ ಇವರೇ ಮೂಲ ಕಾರಣ ಎಂದರೆ ತಪ್ಪಾಗದು.

ವ್ಯಾಸರಾಯರ ಬಳಿಯೇ ಇದ್ದವರಲ್ಲಿ ಸೋದೆ ಮಠದ ವಿಜಯೀಂದ್ರತೀರ್ಥರು, ಕೂಡಲಿಮಠದ ನಾರಾಯಣಯತಿಗಳು, ಬಿಡಿ ಸಂನ್ಯಾಸಿಗಳಾದ ಗೋವಿಂದ ಒಡೆಯರು ಇವರೂ ಮಹಾನುಭಾವರು. ವಿಬುಧೇಂದ್ರ ತೀರ್ಥರು, ರಘುನಾಥಯತಿಗಳು, ಗದುಗಿನ ವೀರನಾರಾಯಣನ ಅಂಕಿತದಲ್ಲಿ ಭಾರತವನ್ನು ಬರೆದ ನಾರಣಪ್ಪ, ಆಂಧ್ರ ವಾಗ್ಗೇಯಕಾರರಾದ ತಿರುಪತಿಯ ತಾಳ್ಳಪಾಕ ಚಿನ್ನ ತಿರುಮಲಯ್ಯ, ದಾಸರಾದ ವೆಂಕಟಗಿರಿನಾಥರು, 'ವರದ ರಾಜಕೃಷ್ಣ'ರು, ಲಕ್ಕಸದ ತಿಮ್ಮಮ್ಮ

ಇವರೆಲ್ಲರೂ ಆಗ ಕನ್ನಡ ನಾಡಿನಲ್ಲೇ ಇದ್ದು ಹೆಸರು ಪಡೆದವರು. ವಿಜಯನಗರದ ಅರಸರಲ್ಲಿ ಕೃಷ್ಣದೇವರಾಯನು, ಕನಕದಾಸರು ಎಳೆಯ ಮಗುವಾಗಿದ್ದಾಗ ಪಟ್ಟದಲ್ಲಿದ್ದವನು. ಕನಕದಾಸರ ತಾರುಣ್ಯದಲ್ಲಿ ಅಚ್ಯುತರಾಯ ದೊರೆ; ಅವರಿಗೆ ವಯಸ್ಸಾಗುತ್ತಿದ್ದಾಗ ಸದಾಶಿವರಾಯ, ತಿರುಮಲರಾಯ, ಶ್ರೀರಂಗರಾಯ ಇವರು ರಾಜ್ಯವಾಳುತ್ತಿದ್ದರು. ಕನಕದಾಸರು ತೀರಿಕೊಂಡ ಸಮಯದಲ್ಲಿ ಅರವೀಡು ವೆಂಕಟಪತಿ ದೇವರಾಯ ರಾಜನಾಗಿದ್ದನು. ಇವನ ಗುರುಗಳಾಗಿದ್ದವರು ಕನಕದಾಸರ ದೀಕ್ಷಾಗುರುಗಳಾಗಿದ್ದ ತಿರುಮಲೆ ತಾತಾಚಾರ್ಯರ ಮಗ ಕುಮಾರ ತಾತಾಚಾರ್ಯರು, ಇವರೂ ಪ್ರತಿಭಾವಂತರಾದ, ಪ್ರಭಾವಶಾಲಿಗಳಾದ ಆಚಾರ್ಯಪುರುಷರು.

ಕನ್ನಡನಾಡಿನ ಹೊರಗೆ ಕೂಡ ಭಾಗವತಧರ್ಮ ದೊಡ್ಡ ಮರವಾಗಿ ಬೆಳೆದಿತ್ತು. ಉತ್ತರದೇಶದ ಸಂತರಲ್ಲೆಲ್ಲ ಪ್ರಸಿದ್ಧರಾದ ಕಬೀರದಾಸರು ಕನಕದಾಸರ ಕಾಲದಲ್ಲಿಯೇ ಇದ್ದವರು; ಕನಕದಾಸರು ಹತ್ತು ವರ್ಷದ ಹುಡುಗನಾಗಿದ್ದಾಗ ಕಬೀರರು ತೀರಿಕೊಂಡರು. ಕನಕದಾಸರ ಇನ್ನೊಬ್ಬ ಹಿರಿಯ ಸಮಕಾಲೀನರೆಂದರೆ ಬಂಗಾಳದ ಕೃಷ್ಣಚೈತನ್ಯ ಪ್ರಭು (ಇವರನ್ನು ಗೌರಾಂಗ ದೇವನೆಂದೂ ಕರೆಯುತ್ತಾರೆ). ಹಾಗೆಯೇ ಗುಜರಾತಿನ ವಲ್ಲಭಾಚಾರ್ಯರೂ ದಕ್ಷಿಣ ದೇಶಕ್ಕೆ ಯಾತ್ರೆ ಬಂದಿದ್ದರು. ಆದರೆ ಕನಕ ಇನ್ನೂ ಆಗ ದಾಸನಾಗಿರಲಿಲ್ಲ.

ರಾಜಾಸ್ಥಾನದ ಸಂತರಲ್ಲಿ ಪ್ರಖ್ಯಾತರಾದ ರಯಿದಾಸ ಮತ್ತು ಮೀರಾಬಾಯಿ ಇವರೂ, ಕಾಶೀಪ್ರಾಂತ್ಯದ ರಾಮಾನಂದರೂ, ಮಹಾರಾಷ್ಟ್ರದ ಸಂತರಾದ ನಾಮದೇವರೂ, ಪಂಜಾಬದಲ್ಲಿ ಸಿಖ್ ಪಂಥದ ಪ್ರವರ್ತಕರಾದ ನಾನಕ ಸಾಹೇಬರೂ, 'ರಾಮಚರಿತಮಾನಸ'ವನ್ನು ಬರೆದು ಹಿಂದೀ ಸಂತರಲ್ಲಿ ಅಗ್ರಗಣ್ಯರೆನಿಸಿದ ತುಳಸೀದಾಸರೂ ಅದೇ ಕಾಲದವರು.

ಅಂತೂ ಆ ಕಾಲದಲ್ಲಿ ಜ್ಞಾನಕ್ಕಿಂತ ಭಕ್ತಿ ಮುಖ್ಯ ಎನ್ನುವ ತತ್ತ್ವವನ್ನು ಈ ಎಲ್ಲ ಮಹನೀಯರೂ ಪ್ರಚಾರ ಮಾಡಿದ್ದರು. ಭಗವಂತನು ಭಕ್ತಿಗೆ ಒಲಿಯುವ ಹಾಗೆ, ಸಂಗೀತ ಮಾಧುರ್ಯದಿಂದ ಪ್ರಸನ್ನನಾಗುವ ಹಾಗೆ ಕರ್ಮಗಳಿಂದ, ಜಾತಿಮತಗಳ ನಿಷ್ಠುರ ಧರ್ಮದಿಂದ, ಪುಸ್ತಕ ಪಾಂಡಿತ್ಯದಿಂದ, ತರ್ಕ-ವಾಕ್ಯಾರ್ಥಗಳಿಂದ ಒಲಿಯುವುದಿಲ್ಲ, ಪ್ರಸನ್ನನಾಗುವುದಿಲ್ಲ. ದೇವರನ್ನು ಪ್ರೀತಿಪಡಿಸುವುದು ಕಷ್ಟವೇನಲ್ಲ; ಉತ್ತಮವಾದ, ಉತ್ಕಟವಾದ ಭಕ್ತಿಯಿರಬೇಕಷ್ಟೆ. ಭಕ್ತಿಯೊಂದು ದೃಢವಾಗಿದ್ದರೆ, ಅದು 'ನಿರಂತರವಾದ ಪ್ರೇಮಪ್ರವಾಹ'ವಾದರೆ ದೇವರು, "ನಿನ್ನ ಜಾತಿ ಯಾವುದು? ಯಾವ ಧರ್ಮವನ್ನು ಆಚರಿಸಿದ್ದೀಯೆ? ಎಷ್ಟು ಗುಡಿಗಳನ್ನು ಕಟ್ಟಿದ್ದೀಯೆ? ಎಲ್ಲೆಲ್ಲಿ ತೀರ್ಥಯಾತ್ರೆ ಮಾಡಿದ್ದೀ? ಎಷ್ಟು ಶಾಸ್ತ್ರ ಓದಿದ್ದೀ?" ಎಂದೆಲ್ಲ ಕೇಳುವುದಿಲ್ಲ.

"ಸತ್ಯವಂತರ ಸಂಗವೇ ತೀರ್ಥ; ಮನುಜ ಸೇವೆಯು ಸಾಕು ಸಾಕು; ಹರಿಯೇ ಸರ್ವೋತ್ತಮ, ಹರಿಮಯವೆಲ್ಲವೂ; ರಂಗ ಜಗದಂತರ್ಯಾಮಿ; ಸತ್ಯ ಸುಖವುಳ್ಳ ಜನರಿಗೆ ಕುಲವಿಲ್ಲ; ಕೇಶವನೊಲುಮೆಯು ಆಗುವ ತನಕ ಮನಸ್ಸು ಹರಿದಾಸರೊಳಿರಬೇಕು; ದಾನ ಧರ್ಮವ ಮಾಡಿ ಮನಸ್ಸು ಸುಖಿಯಾಗಬೇಕು."

ಮೇಲಿನ ಮಾತುಗಳೆಲ್ಲ ಕನಕದಾಸರವೇ; ಅವರ ಹಾಡುಗಳಿಂದಲೇ ಆಯ್ದವು. ಆ ಯುಗದ

ಮನೋಧರ್ಮ ಹೇಗಿದ್ದಿತು ಎಂದು ತಿಳಿಯಲು ಈ ಮಾತುಗಳು ನೆರವಾಗುತ್ತವೆ. ಈ ಮನೋಧರ್ಮ ಕನ್ನಡ ನಾಡಿನಲ್ಲಿ ಬೇರೂರುವಂತೆ ಮಾಡಿದ ಮಹನೀಯರಲ್ಲಿ ಮುಖ್ಯರಾದವರು ಕನಕದಾಸರು. ಇದೇ ಅವರು ಮಾಡಿದ ಕೆಲಸ ಎನ್ನಬಹುದು. ಜನಸಾಮಾನ್ಯರಿಗೆ ವೇದಾಂತದ ತಿರುಳನ್ನು ಸುಲಭವಾಗಿ ತಿಳಿಸಿ, ಪರಮಾರ್ಥದ ಕಡೆ ಅವರ ಮನಸ್ಸನ್ನು ಒಲಿಸಿ, ಕಟ್ಟಿನಂತೆ ಬಿಗಿಯುವ ಜಾತಿ, ಕುಲ, ಒಣ ಆಚಾರ, ಮಡಿ, ಮೈಲಿಗೆ ಮೊದಲಾದುವನ್ನು ಸಡಿಲಿಸಿ, ವಾತಾವರಣದಲ್ಲಿ ಹೊಸ ಉತ್ಸಾಹವನ್ನೂ ತೇಜಸ್ಸನ್ನೂ ಮೂಡಿಸಿದರು ಅವರು.

ಕನಕದಾಸರು ಅಷ್ಟೇನು ಕಲಿತವರಲ್ಲ. ಮೊದಲಿನಿಂದ ಅವರ ಪ್ರಕೃತಿಯೇ ಬೇರೆ; ವಿದ್ಯೆಯಿಂದ ಅವರಿಗೇನು ಪ್ರಯೋಜನವಿರಲಿಲ್ಲ. ಎಳೆಯ ವಯಸ್ಸಿನಲ್ಲಿ ತಂದೆ ತಾಯಿಯರನ್ನು ಕಳೆದುಕೊಂಡು, ಊರವರ ಔದಾರ್ಯದಿಂದ ಬೆಳೆದು, ನಿಧಿ ಸಿಕ್ಕೊಡನೆ ಸೇನಾಧಿಕಾರಿಯಾದ ಅವರು ಓದುವುದು ಯಾವಾಗ? ಕಡೆಗೆ ಬರೆಯಲು, ಓದಲು, ಕೂಡ ಬರುತ್ತಿತ್ತೋ ಇಲ್ಲವೋ! ಆದರೆ ಎಷ್ಟು ಪ್ರೌಢವಾದ ಕಾವ್ಯಗಳನ್ನು ಬರೆದಿದ್ದಾರೆ! ಎಷ್ಟು ರಸಭರಿತವಾದ ಹಾಡುಗಳನ್ನು ರಚಿಸಿದ್ದಾರೆ ಎಂದು ಗಮನಿಸಿದರೆ ಆಶ್ಚರ್ಯವಾಗುತ್ತದೆ. ಅಭ್ಯಾಸದಿಂದ ಮೂಡಿಬಂದ ಪ್ರತಿಭೆ ಅವರದ್ದಲ್ಲ; ಸಹಜವಾದ ಪ್ರತಿಭೆ. ಸಂದರ್ಭ ಸರಿಯಾಗಿಲ್ಲದೆ ಅದು ಮುಸುಕಿನಲ್ಲಿದ್ದುದು, ವ್ಯಾಸತೀರ್ಥರ ಸಾನ್ನಿಧ್ಯದಲ್ಲಿ ಪುಷ್ಪವಾಗಿ ಪ್ರಕಟವಾಯಿತೆಂದು ತೋರುತ್ತದೆ. ವ್ಯಾಸರಾಯಸ್ವಾಮಿಗಳೂ ವಾದಿರಾಜತೀರ್ಥರೂ ಅವರಿಗೆ ಪಾಠ ಹೇಳಿದರು. ಅವರೊಂದಿಗೆ ಧರ್ಮ, ವೇದಾಂತ, ಆಚಾರ, ವ್ಯವಹಾರಗಳ ವಿಚಾರವಾಗಿ ಚರ್ಚೆ ನಡೆಸಿದರು. ಗುರುಗಳಿಬ್ಬರೂ ಕವಿಗಳು; ಸರಸವಾದ ಮನೋಜ್ಞವಾದ ಕಾವ್ಯಗಳನ್ನು ರಚಿಸಿದರು. ಇದರ ಪ್ರಭಾವವೂ ಕನಕದಾಸರ ಮೇಲೆ ಇದ್ದಿತು.

ಕನ್ನಡದಲ್ಲಿ ಕನಕದಾಸರು ಉತ್ತಮವಾದ ಕಾವ್ಯಗಳನ್ನು ರಚಿಸಿದ್ದಾರೆ; ಸಂಸ್ಕೃತದ ಪುರಾಣ, ಕಾವ್ಯಗಳ ಪರಿಚಯ ಅವರಿಗಿದ್ದುದು ಈ ಕಾವ್ಯಗಳಲ್ಲಿ ಸ್ಪಷ್ಟವಾಗುತ್ತದೆ. ವೃತ್ತಗಳನ್ನು ಧೈರ್ಯದಿಂದಲೂ ಜಾಣ್ಮೆಯಿಂದಲೂ ನಿರ್ವಹಿಸಿದ್ದಾರೆ. ಕಾವ್ಯಗುಣ ಹೇಗಿರಬೇಕು ಎನ್ನುವುದು ಅವರಿಗೆ ಚೆನ್ನಾಗಿ ತಿಳಿದಿದ್ದಂತಿದೆ. ಬೇರೆ ಬೇರೆ ರಾಗಗಳಲ್ಲಿ ನೂರಾರು ದೇವರನಾಮಗಳನ್ನು ರಚಿಸಿದ್ದಾರೆ; ಸಂಗೀತದ ಪರಿಚಯ ಅವರಿಗೆ ಸಾಕಷ್ಟು ಇದ್ದಿತು ಎನ್ನಲು ಇವು ನಿದರ್ಶನ. ಅವುಗಳಲ್ಲಿ ಗೇಯಗುಣ ಸೊಗಸಾಗಿದೆ.

ಇವರ ಕಾವ್ಯಗಳಲ್ಲಿ 'ಮೋಹನ ತರಂಗಿಣಿ', 'ಹರಿ ಭಕ್ತಿಸಾರ', 'ನಳಚರಿತ್ರೆ', ಮತ್ತು 'ರಾಮಧಾನ್ಯ ಚರಿತ್ರೆ' ಇವು ಪ್ರಸಿದ್ಧವಾಗಿವೆ. 'ಮೋಹನತರಂಗಿಣಿ' ಎನ್ನುವುದು ಸಾಂಗತ್ಯದ ಧಾಟಿಯಲ್ಲಿದ್ದು, ಜನರಾಡುವ ನುಡಿಯನ್ನೇ ಬಳಸಿ, ನಲವತ್ತೆರಡು ಸಂಧಿಗಳಲ್ಲಿ ಬರೆದ ಕಾವ್ಯ; ೧೬೫೯ ಪದ್ಯಗಳಿವೆ ಇದರಲ್ಲಿ. ಕೃಷ್ಣನ ಚರಿತ್ರೆಯೇ ಈ ಕಾವ್ಯದ ವಸ್ತು. ರುಕ್ಮಿಣಿಯನ್ನು ಕೃಷ್ಣನು ಮದುವೆಯಾದ ಸಂದರ್ಭದಿಂದ ಕಾವ್ಯ ಆರಂಭವಾಗಿ ದ್ವಾರಕೆಯಲ್ಲಿ ಅನಿರುದ್ಧನ ಹೆಂಡತಿ ಉಷೆಯನ್ನು ತಂದುಕೊಂಡು ಮನೆ ತುಂಬಿಸಿಕೊಳ್ಳುವ ಸಂದರ್ಭದಲ್ಲಿ ಮುಗಿಯುತ್ತದೆ. ಇದರಲ್ಲಿ ತುಂಬ ಸ್ವಾರಸ್ಯವಾದ ವರ್ಣನೆಗಳಿವೆ. ಆದರೆ ಇದು ಪ್ರೌಢಕಾವ್ಯವಾದುದರಿಂದ ಅಷ್ಟಾಗಿ ಬಳಕೆಗೆ ಬರಲಿಲ್ಲ.

ಅವರ 'ಹರಿಭಕ್ತಿಸಾರ' (ಅಥವಾ ಭಕ್ತಿಸಾರ) ತುಂಬ ಜನಪ್ರಿಯವಾಯಿತು. ಭಾಮಿನೀ ಷಟ್ಪದಿ ಎನ್ನುವ ವೃತ್ತದಲ್ಲಿ ನೂರಹತ್ತು ಪದ್ಯಗಳಿರುವ ಈ ಸಣ್ಣ ಕಾವ್ಯದ ಪ್ರತಿಯೊಂದು ಪದ್ಯದ ಕೊನೆಯಲ್ಲಿ 'ರಕ್ಷಿಸು ನಮ್ಮನನವರತ' ಎನ್ನುವ ಪ್ರಾರ್ಥನೆಯಿದೆ. ಭಕ್ತಿ, ವಿರಕ್ತಿ ಎರಡನ್ನೂ ತುಂಬ ಸ್ವಾರಸ್ಯವಾಗಿ ಇದರಲ್ಲಿ ನಿರೂಪಿಸಿದ್ದಾರೆ. ಗಹನವಾದ ತತ್ತ್ವಗಳು ಸುಲಭವಾಗಿ ವಿವರಿಸಲ್ಪಟ್ಟಿವೆ. ವ್ಯವಹಾರಜ್ಞಾನವೂ ರಸವತ್ತಾಗಿ ಬಂದಿದೆ. ಹಳೆಯ ಕಾಲದಲ್ಲಿ ಮಕ್ಕಳು ಈ ಪದ್ಯಗಳನ್ನು ಬಾಯಿಗೆ ಗಟ್ಟಿಮಾಡುತ್ತಿದ್ದರು; ಶಾಲೆಗಳಲ್ಲಿ ಓದಿಸುತ್ತಿದ್ದರು, ಕಲಿಸುತ್ತಿದ್ದರು. ಜನರಿಗೂ ಹರಿಭಕ್ತಿಸಾರದ ಪದ್ಯಗಳು ನೆನಪಿನಲ್ಲಿರುತ್ತಿದ್ದುವು. ಜಾನಪದ ಸಂಸ್ಕೃತಿ ಚೆನ್ನಾಗಿ ಬೆಳೆಯಲು ಈ ಗ್ರಂಥ ಬಹುಮಟ್ಟಿಗೆ ನೆರವಾಯಿತು.

'ನಳಚರಿತ್ರೆ'ಯು ಮಹಾಭಾರತದಲ್ಲಿ ಬರುವ ನಳ ದಮಯಂತಿಯರ ಕಥೆಯನ್ನು ಹೇಳುವ ಸಣ್ಣ ಕಾವ್ಯ ಗ್ರಂಥ. ಇದರಲ್ಲಿ ಒಂಬತ್ತೇ ಸಂಧಿಗಳು, ನಾನ್ನೂರ ಎಂಬತ್ತೊಂದು ಪದ್ಯಗಳು. ಇದನ್ನು ಬರೆದಿರುವ ವೃತ್ತವೂ ಭಾಮಿನೀಷಟ್ಪದಿಯೇ.

'ರಾಮಧಾನ್ಯ ಚರಿತ್ರೆ' ಭಾಮಿನೀ ಷಟ್ಪದಿಯಲ್ಲಿ ರಚಿಸಿರುವ ೧೫೬ ಪದ್ಯಗಳ 'ಮಹಾಕಥೆ'. ರಾಮನಿಗೆ ಋಷಿಗಳು ಮಾಡಿದ ಔತಣದಲ್ಲಿ ನರೆದಲೆಗಕ್ಕೂ ವ್ರೀಹಿಗೂ ತಾನು ಹೆಚ್ಚು ತಾನು ಹೆಚ್ಚೆಂದು ಜಗಳವಾಗಿ, ಕಡೆಗೆ ರಾಮನಿಂದ ನಿರ್ದೇಶಿಸಲ್ಪಟ್ಟು ಇಂದ್ರನು ನರೆದಲೆಗವೇ ಸಾರಹೃದಯವೆಂದು ನಿಶ್ಚಯಿಸಲು, ರಾಮನು ಅದನ್ನು 'ರಾಘವ' ಎಂದು ತನ್ನ ಹೆಸರಿನಿಂದಲೇ ಕರೆದು ಸನ್ಮಾನಿಸಿದನು. ಅಂದಿನಿಂದ ಅದು 'ರಾಮಧಾನ್ಯ'ವಾಯಿತು.

ಇವೆಲ್ಲ ಕಾವ್ಯಗ್ರಂಥಗಳಾದುವು. ಆದರೆ ಆಗಾಗ, ಅಲ್ಲಿಲ್ಲಿ, ಬೇರೆ ಬೇರೆ ಪ್ರಸಂಗಗಳನ್ನವಲಂಬಿಸಿ ಅವರು ಹಾಡುಗಳನ್ನೂ, ದೇವರನಾಮಗಳನ್ನೂ ಬರೆದುದು ಉಂಟು. ಇವು ಆ ಕಾಲದಿಂದಲೂ ಜನರ ಬಾಯಲ್ಲಿ ಉಳಿದಿವೆ. ಸುಮಾರು ನೂರ ಎಪ್ಪತ್ತು ದೇವರನಾಮಗಳು ಅವರವೆಂದು ಬಳಕೆಯಲ್ಲಿವೆ. ತಿಳಿಯಾದ ಕನ್ನಡ, ನೇರವಾದ ಮಾತು, ಗಹನವಾದ ವಿಚಾರ ಇವು ಈ ದೇವರನಾಮಗಳ ಸ್ವಾರಸ್ಯ. ಕೊನೆಯಲ್ಲಿ 'ಬಾಡದಾದಿ ಕೇಶವ' "ಕಾಗಿನೆಲೆಯಾದಿ ಕೇಶವ' ಎಂಬ ಅಂಕಿತಗಳು ಕಾಣಬರುತ್ತವೆ.

ಕನಕದಾಸರ ಪದಗಳು ಜನರ ಮನಸ್ಸನ್ನು ಸೂರೆಗೊಂಡವು. ನಿತ್ಯಜೀವನಕ್ಕೆ ಅಗತ್ಯವಾದ ಎಷ್ಟೋ ವಿಚಾರಗಳು ಈ ಪದಗಳಲ್ಲಿ ಮೂಡಿಬಂದಿವೆ. ಬಣಗು ದೈವಗಳನ್ನು (ಮಾರಿ, ಮಸಣಿ, ಚೌಡಿ, ಮೈಲಾರಿ, ಎಕ್ಕು ನಾತಿಯರು, ಜಕ್ಕಿಯರು ಮುಂತಾದ) ನಂಬಿ 'ಬತ್ತಲೆ ದೇವರ' ಮುಂದೆ 'ಬಾಳುತಿಪ್ಪ ಕೋಣ ಕುರಿಯ ಏಳಬೀಳ ಕೊರಳ ಕೊಯಿದು', 'ಕಳ್ಳುಕೊಡನ ಬರಿದು ಮಾಡಿ' ಪೂಜೆ ಮಾಡುವ ಕುರುಡು ನಂಬಿಕೆಯನ್ನು ಅವರು ಜರೆದು, "ಪೊಳ್ಳುದೈವರ ಗೊಡವೆ ಬೇಡ, ನರಕ ತಪ್ಪದು" ಎಂದು ಸಾರಿದ್ದಾರೆ. ದೇವರು ಒಲಿದ ಮೇಲೆ 'ಯಾತರ ಕುಲವಯ್ಯಾ? ಕುಲಕುಲವೆನ್ನುತಿಹರು, ಕುಲವ್ಯಾವುದು ಸತ್ಯ ಸುಖವುಳ್ಳ ಜನರಿಗೆ?', "ಎಲ್ಲರು ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ," 'ತನು ನನ್ನದು, ಜೀವನ ನಿನ್ನದು, ಅನುದಿನಗಳಲ್ಲಿ ಬಾಹ ಸುಖದುಃಖ ನಿನ್ನದಯ್ಯ!", "ತಲ್ಲಣಿಸದಿರು ಕಂಡ್ಯ ತಾಳು ಮನವೇ, ಎಲ್ಲರನು ಸಲಹುವನು

ಇದಕೆ ಸಂಶಯಬೇಡ," "ಧರೆಯ ಭೋಗವನು ನೋಡಿ ಹರಿಯ ಮರೆದು ಕೆಡಲಿ ಬೇಡ, ಧರೆಯ ಭೋಗ ಕನಸಿನಂತೆ ಕೇಳು ಮಾನವ" ಇವೆಲ್ಲ ಜನರಿಗೆ ಪರಿಚಿತವಾದ ಹಾಡುಗಳೇ.

ಕನಕದಾಸರ ಬರಹಗಳಲ್ಲೆಲ್ಲ ತುಂಬ ಜನಪ್ರಿಯವಾದುದು ಒಂದು ಕತೆ. ಮುಖ್ಯವಾಗಿ ಮಕ್ಕಳಿಗೆಂದು ಬರೆದ ಈ ಹಾಡುಕತೆಯ ಸ್ವಾರಸ್ಯವನ್ನು ಸವಿಯದೆ ಇದ್ದವರೇ ಇಲ್ಲ. ಇದನ್ನು ಭೋಗ ಷಟ್ಪದಿಯಲ್ಲಿ ಬರೆದಿದ್ದಾರೆ; ಮಕ್ಕಳಿಗೂ ಅರ್ಥವಾಗುವ ಭಾಷೆ; ಬೇಗ ಮನದಟ್ಟಾಗುವ ವಿಚಾರ-

ಧರೆಯ ಭೋಗವನ್ನು ನೋಡಿ
ಹರಿಯ ಮರೆದು ಕೆಡಲಿ ಬೇಡ
ಧರೆಯ ಭೋಗ ಕನಸಿನಂತೆ ಕೇಳು ಮಾನವ।

ತಿರುಕನೋರ್ವನೂರ ಮುಂದೆ
ಮುರುಕು ಧರ್ಮಶಾಲೆಯಲ್ಲಿ
ಒರಗಿರುತ್ತಲಿರಲು ಕನಸ ಕಂಡನೆಂತೆನೆ॥

ಪುರದ ರಾಜ ಸತ್ತನವಗೆ
ವರಕುಮಾರರಿಲ್ಲದಿರಲು
ಕರಿಯ ಕೈಗೆ ಕುಸುಮ ಮಾಲೆಯಿತ್ತು ಪುರದೊಳು॥

ಬಿಡಲದಾರ ಕೊರಳಿನಲ್ಲಿ
ತೊಡರಿಸಲ್ಕೆಯವರ ಪಟ್ಟ
ದೊಡೆಯರನ್ನು ಮಾಳ್ಪೆನೆಂದು ಬಿಟ್ಟರಲ್ಲಿಯೆ॥

ಒಡನೆ ತನ್ನ ಕೊರಳಿನಲ್ಲಿ
ತೊಡರಿಸುವುದ ಕಂಡು ತಿರುಕ
ಪೊಡವಿಯಾಣ್ಮನಾದೆನೆಂದು ಹಿಗ್ಗುತಿದ್ದನು॥

ಪಟ್ಟಗಟ್ಟಲಾಗ ನೃಪರು
ಕೊಟ್ಟರವಗೆ ಕಪ್ಪಗಳನು
ನೆಟ್ಟನವನು ರಾಜ್ಯವಾಳ್ದ ಕನಸಿನಲ್ಲಿಯೆ॥

ಪಟ್ಟದರಸಿಯೊಳಗೆ ಸುಖವ
ಪಟ್ಟು ಮನದಿ ಹರುಷಪಡಲು
ಪುಟ್ಟಿದವು ಹೆಣ್ಣು ಗಂಡು ಮಕ್ಕಳಾಗಲೆ॥

ಓಲಗದಲಿರುತ್ತ ತೊಡೆಯ

ಮೇಲೆ ಮಕ್ಕಳಾಡುತಿರಲು
ಲೀಲೆಯಿಂದ ಚಾತುರಂಗ ಬಲವ ನೋಡುತ॥

ಲೋಲನಾಗಿ ನೆನೆದು ಮನದಿ
ಪೇಳೆ ಮಂತ್ರಿಗಳಿಗೆ ಆಗ
ಬಾಲೆಯರನು ನೋಡಿ ಮದುವೆ ಮಾಳ್ಪೆನೆಂದನು॥

ನೋಡಿ ವರರನೆನುತ ಕಳುಹೆ
ನೋಡಿ ಬಂದೆವೆನಲು ಜೀಯ
ಮಾಡಿ ಮದುವೆ ಮಂಟಪವನು ರಚಿಸಿರೆಂದನು॥

ಗಾಢ ಸಂಭ್ರಮದಿಂದ ಕೂಡಿ
ಮಾಡಿದನು ಮದುವೆಗಳನ್ನು
ರೂಢಿಪಾಲರೆಲ್ಲ ಕೇಳಿ ಮೆಚ್ಚುವಂದದಿ॥

ಧನದ ಮದವು ರಾಜ್ಯಮದವು
ವನಿತೆ ಮದವು ಸುತರ ಮದವು
ಕನಸಿನಲ್ಲಿ ಕಂಡ ತಿರುಕ ಹಿಗ್ಗುತ್ತಿದ್ದನು॥

ಇನಿತಿರೊಳಗೆ ನೃಪರ ದಂಡು
ಮನೆಯ ಮುತ್ತಿದಂತೆ ಇರಲು
ಕನಸಿನಲ್ಲಿ ಕಂಡು ಭಯದಿ ಕಣ್ಣು ತೆರೆದನು॥

ಮೆರೆಯುತ್ತಿದ್ದ ಭಾಗ್ಯವೆಲ್ಲ
ಹರಿದುಹೋಯಿತೆಂದು ತಿರುಕ
ತಿರಿವುದಕೆ ನಾಚುತಿದ್ದ ಮರುಳನಂದದಿ॥

ಸಿರಿಯು ಕನಸಿನಂತೆ ಕೇಳು
ಅರಿತು ಆದಿಕೇಶವನ್ನ
ಹರುಷದಿಂದ ಭಜಿಸೆ ನಿತ್ಯ ಸುಖವನೀವನು॥

ಹಾಗೆಯೇ ಮಕ್ಕಳಿಗೂ ದೊಡ್ಡವರಿಗೂ ಹಿಡಿಸುವಂಥ ಇನ್ನೊಂದು ಪದ ಕನಕದಾಸರದ್ದೇ ಪ್ರಸಿದ್ಧವಾಗಿದೆ. ಮೇಲಿನ ಪದದಲ್ಲಿ ಐಶ್ವರ್ಯಕ್ಕಾಗಿ ಅತ್ಯಾಶೆ ಪಟ್ಟರೆ ಏನಾದೀತೆಂದು ಕತೆಯ ಮೂಲಕ ತಿಳಿಯಪಡಿಸಿದ್ದಾರೆ. ಕೆಳಗಿನ ಪದ ಲೋಕದಲ್ಲಿ ನಾವು ಹೇಗೆ ಬಾಳಬೇಕು, ನೀತಿ ಎಂದರೇನು, ಹೇಗೆ ನಡೆದುಕೊಂಡರೆ ಒಳ್ಳೆಯದು ಎನ್ನುವುದನ್ನು ಬಿಡಿಸಿಹೇಳುತ್ತದೆ.

ಕೇಶವನೊಲುಮೆಯು ಆಗುವ ತನಕ ಹರಿ
ದಾಸರೊಳಿರು ಹೇ ಮನುಜ (ಪಲ್ಲವಿ)

ಆಶೆಪಾಶವ ಹರಿದು ವಿಲಾಸದಿ
ಶ್ರೀಶನ ನುತಿಗಳ ಪೊಗಳುತ ಮನದೊಳು (ಅನುಪಲ್ಲವಿ)

೧. ಮೋಸದಿ ಜೀವಿಯ ಘಾಸಿ ಮಾಡಿದ ಫಲ
ಕಾಶಿಗೆ ಹೋದರೆ ಹೋದೀತೇ
ಶ್ರೀಶನ ಭಕುತರ ದೂಷಿಸಿದ ಫಲ
ಕಾಸುಕೊಟ್ಟರೆ ಬಿಟ್ಟೀತೆ
ಭಾಷೆಯ ಕೊಟ್ಟು ನಿರಾಸೆ ಮಾಡಿದ ಫಲ
ಕ್ಲೇಶವ ಗೊಳಿಸದೆ ಬಿಟ್ಟೀತೆ
ಭೂಸುರಸ್ವವ ಹ್ರಾಸ ಮಾಡಿದ ಫಲ
ಏಸೇಸು ಜನುಮಕೆ ಬಿಟ್ಟೀತೆ
೨. ಸತ್ಯ ಧರ್ಮಗಳ ನಿತ್ಯವು ಬೋಧಿಸೆ
ತೊತ್ತಿನ ಮನಸಿಗೆ ಸೊಗಸೀತೆ
ತತ್ವದರ್ಥ ವಿಚಿತ್ರದಿ ಬೋಧಿಸೆ
ಕತ್ತೆಯ ಚಿತ್ತಕೆ ಹತ್ತೀತೆ
ಪುತ್ಥಳಿ ಬೊಂಬೆಯ ಚಿತ್ರದಿ ಬಣ್ಣಿಸಿ
ಮುತ್ತು ಕೊಟ್ಟರೆ ಮಾತನಾಡೀತೆ
ಕಸ್ತೂರಿ ತಿಲಕವನೊತ್ತಿ ಫಣೆಯೊಳಿಡೆ
ಅರ್ಥಿಯ ತೋರದೆ ಇದ್ದೀತೆ
೩. ನ್ಯಾಯವ ಬಿಟ್ಟನ್ಯಾಯವ ಪೇಳುವ
ನಾಯಿಗೆ ನರಕವು ತಪ್ಪೀತೆ
ಬಾಯ ಕೊಬ್ಬಿನಲಿ ಬೈಯುವ ಮನುಜಗೆ
ಘಾಯವಾಗದೆ ಬಿಟ್ಟೀತೆ
ತಾಯಿತಂದೆಯರ ನೋಯಿಸಿದವನಿಗೆ
ಮಾಯದ ಮರಣವು ತಪ್ಪೀತೆ
ಮಾಯಾಜಾಲವ ಕಲಿತ ಮನುಜನಿಗೆ
ಕಾಯಕಷ್ಟವು ಬಿಟ್ಟೀತೆ
೪. ಸಾಧುಸಜ್ಜನರ ನೋಯಿಸಿದ ಮಾಯಾ
ವಾದಿಗೆ ನರಕವು ತಪ್ಪೀತೆ
ಬಾಧಿಸಿ ಪರರರ್ಥವ ತೆಗೆದರೆ
ವ್ಯಾಧಿಯು ಕಾಡದೆ ಬಿಟ್ಟೀತೆ
ಭೇದವೆಣಿಸಿ ಬಲು ಕ್ಷುದ್ರವ ಕಲಿತರೆ
ಮೋದವೆಂದಿಗು ಆದೀತೆ
ಕದ್ದು ಒಡಲ ಪೊರೆಯುವವನ ಮನೆಯೊಳ
ಗಿದ್ದದ್ದೋಗದೆ ಉಳಿದೀತೆ

೫. ಜೇನನ ವಶದೊಳು ನಾನಾ ದ್ರವ್ಯವಿರೆ
ದಾನಧರ್ಮಕೆ ಮನಸಾದೀತೆ
ಹೀನಮನುಜಗೆ ಜ್ಞಾನವ ಬೋಧಿಸೆ
ಹೀನ ವಿಷಯವಳಿದ್ಹೋದೀತೆ
ಮಾನಿನಿ ಮನ ನಿಧಾನವಿಲ್ಲದಿರೆ
ಮಾನಾಭಿಮಾನಗಳುಳಿದೀತೆ
ಭಾನುಪ್ರಕಾಶನ ಭಜನೆಯ ಮಾಡದ
ಹೀನಗೆ ಮುಕುತಿಯು ದೊರಕೀತೆ

೬. ಅಂಗಜ ವಿಷಯಗಳನು ತೊರೆದಾತಗೆ
ಅಂಗನೆಯರ ಸುಖ ಸೊಗಸೀತೆ
ಸಂಗ ದುಃಖಗಳ ಹಿಂಗಿದ ಮನುಜಗೆ
ಶೃಂಗಾರದ ಬಗೆ ರುಚಿಸಿತೇ
ಇಂಗಿತವರಿತ ನಿಸ್ಸಂಗಿ ಶರೀರ
ವಜ್ರಾಂಗಿಯಾಗದೆ ತಾನಿದ್ದೀತೆ
ಮಂಗಳ ಮಹಿಮನ ಅಂಘ್ರಿಯ ಕಾಣದ
ಮಂಗಗೆ ಮುಕುತಿಯು ದೊರಕೀತೆ

೭. ಕರುಣಾಮೃತದಾಭರಣವ ಧರಿಸಿದ
ಶರಣಗೆ ಸಿರಿಯು ತಪ್ಪೀತೆ
ಕರಣಪಾಶದುರವಣೆ ಹರಿದಾತಗೆ
ಶರಣರ ಕರುಣವು ತಪ್ಪೀತೆ
ಅರಿತು ಶಾಸ್ತ್ರವಾಚರಿಸುವ ಯೋಗ್ಯಗೆ
ಗುರು ಉಪದೇಶವು ತಪ್ಪೀತೆ
ವರವೇಲಾಪುರದಾದಿಕೇಶವನ
ಸ್ಮರಿಸುವನಿಗೆ ಮೋಕ್ಷವು ತಪ್ಪೀತೆ.

೫

ವ್ಯಾಸತೀರ್ಥರು ಹರಿದಾಸರನ್ನು ಮುಂದೆ ಮಾಡಿಕೊಂಡು ಅಂದೋಳನವನ್ನು ಹರಿಯಬಿಟ್ಟಾಗ ಕನಕದಾಸರೂ ಪುರಂದರದಾಸರೂ ಅದರ ಎರಡು ಕಣ್ಣುಗಳಾಗಿದ್ದವರು. ಇವರಿಬ್ಬರಲ್ಲಿ ಕನಕದಾಸರು ಹಿರಿಯರು. ಪುರಂದರದಾಸರಿಗಿಂತ ಮೊದಲೇ ವ್ಯಾಸತೀರ್ಥರ ಬಳಿ ಬಂದು ಸೇರಿದ್ದವರು. ಇಲ್ಲಿ ನಾವು ಗಮನಿಸಬೇಕಾದ ಅಂಶವೆಂದರೆ ವ್ಯಾಸತೀರ್ಥರ ಮೇಲೆ ಕನಕದಾಸರ ಪ್ರಭಾವ ಹೇಗೆ ಮೂಡಿಬಂದಿತು ಎನ್ನುವುದು. ಗುರುವಿನ ಪ್ರಭಾವ ಶಿಷ್ಯನ ಮೇಲೆ ಮೂಡುವುದೇ ಸಾಮಾನ್ಯವಾಗಿ ಪ್ರಸಿದ್ಧವಾದದ್ದು. ಆದರೆ ಕೆಲವೊಮ್ಮೆ ಶಿಷ್ಯನು ಗುರುವಿನ ಮೇಲೆ ತನ್ನ ವರ್ಚಸ್ಸನ್ನು ಮೂಡಿಸುತ್ತಾನೆ.

ವ್ಯಾಸತೀರ್ಥರ ಬಳಿ ಕನಕದಾಸರು ಶಿಷ್ಯವೃತ್ತಿ ಮಾಡಿದರೂ, ಕನಕದಾಸರಿಂದ ಅವರ ಮನೋವೃತ್ತಿಯೇ ಮಾರ್ಪಟ್ಟದ್ದು ತಿಳಿದುಬರುತ್ತದೆ. ವ್ಯಾಸತೀರ್ಥರ ಒಲವು ಹರಿದಾಸ್ಯದ ಕಡೆ ಹರಿಯುವ ಮೊದಲು, ಅವರು ಪಂಡಿತರು, ಕರ್ಮಠರು, ಜ್ಞಾನಪಕ್ಷಪಾತಿಗಳು. ಅವರು ಬರೆದಿರುವ ನ್ಯಾಯಾಮೃತ, ತರ್ಕತಾಂಡವ, ಚಂದ್ರಿಕಾ ಎಂಬ ಸಂಸ್ಕೃತದ ವೇದಾಂತಗ್ರಂಥಗಳನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ. ಇವುಗಳಲ್ಲಿ ತರ್ಕವೇ ಎದ್ದು ಕಾಣುವ ವಿವರ. ಭಾಷೆ ಜಟಿಲವಾದದ್ದು, ವಾದ ವಿವಾದಗಳು ಹರಿತವಾದುವು. ಅವರ ಕನ್ನಡ ಕೃತಿಗಳಲ್ಲಿ ಕಾಣುವ ಮನೋಧರ್ಮದ ಸುಳಿವನ್ನು ಈ ಉದ್ಗ್ರಂಥಗಳಲ್ಲಿ ಕಾಣಲಾರೆವು. ಆದರೆ ಅವರು ತಿರುಪತಿಯ ಬೆಟ್ಟದ ಮೇಲೆ ವೆಂಕಟೇಶನನ್ನು ಹತ್ತಾರು ವರ್ಷ ಪೂಜಿಸುತ್ತಿರುವಾಗ ಒಂದು ಮಾರ್ಪಾಟು ಒದಗಿತು. ಅದು ಹರಿದಾಸರ ಸಂಗವಾದದ್ದರ ಫಲ. ಅವರ ಕೃತಿಗಳಲ್ಲಿ ಕೆಲವೆಡೆ ಇದರ ಇಣುಕುನೋಟ ದೊರಕುತ್ತದೆ. ಒಂದೆಡೆ "ಏನು ಸುಖವೊ ಎಂಥ ಸುಖವೋ ಹರಿಯ ಧ್ಯಾನ ಮಾಡುವವರ ಸಂಗ" ಎಂದು ಮೊದಲಾಗುವ ಕೀರ್ತನೆಯಲ್ಲಿ ತಂಬೂರಿ ಮೀಟುತ್ತಾ, ಗೆಜ್ಜೆಯನ್ನು ಕಾಲಲ್ಲಿ ಕಟ್ಟಿ, ಭಕ್ತಿಭಾವದಿಂದ ಕಣ್ಣೀರು ತುಂಬಿ, ಸಂಭ್ರಮದಿಂದ, ಸಂತೋಷದಿಂದ ಲಜ್ಜೆ ಬಿಟ್ಟು ಹರಿಯ ನಾಮವನ್ನು ಹಾಡುತ್ತಿರುವ ಹರಿದಾಸರ ವರ್ಣನೆಯಿದ್ದು:

"ಪರ್ವತವಾಸನ ಕಂಡು ಉರ್ವಿಯೊಳಿಹರ ಸಂಗ"

ಎಂಬ ಮಾತು ಬರುತ್ತದೆ. ಬೆಟ್ಟದೊಡೆಯ ವೆಂಕಟೇಶನನ್ನು ಕಂಡಾಗಲೆ ಹರಿದಾಸರನ್ನು ಕಂಡದ್ದು ಎನ್ನುವ ಸೂಚನೆಯೂ ಇದೆ.

"ಹರಿದಾಸರ ಸಂಗಕೆ ಸರಿಯುಂಟೆ."

ಎಂದು ಆರಂಭವಾಗುವ ಇನ್ನೊಂದು ಕೀರ್ತನೆಯಲ್ಲಿ ತಮಗೆ ಒದಗಿದ ಪ್ರಭಾವವನ್ನು ಸ್ಪಷ್ಟಗೊಳಿಸಿದ್ದಾರೆ

"ಕುರುಡಗೆ ದಿವ್ಯಾಂಜನವ ಹಚ್ಚಿ ಕಣ್ಣಿತ್ತು
ತೆರೆತೆರದಲಿ ಉಂಬ ನಿಧಿಯನಿತ್ತಂತೆ
ಪರಮ ಮೂಢನಾದೆನಗೆ ಸುಜ್ಞಾನವನಿತ್ತು
ನರಹರಿ ಪಾದ ಸಂದರುಶನವನ್ನೀವ"

ಎಂಬ ಚರಣದಲ್ಲಿ ನರಹರಿಯನ್ನು ಕುಲದೈವವಾಗಿ ಉಳ್ಳ ಕನಕದಾಸರ ಸ್ಮರಣೆಯಿದೆ ಎಂದು ನನಗೆ ತೋರುತ್ತದೆ. ಭಕ್ತಿಯಿಂದ ಆವರೆಗೆ ವಿಮುಖರಾಗಿದ್ದು ದೇವರನ್ನು ಜ್ಞಾನದ, ಕರ್ಮದ ಚೌಕಟ್ಟುಗಳಲ್ಲಷ್ಟೆ ಕಾಣುತ್ತಿದ್ದ ವ್ಯಾಸತೀರ್ಥರಿಗೆ ಹೊಸದೊಂದು ಬಾಗಿಲು ತೆರೆದುಕೊಂಡಿತು. ಅಲ್ಲಿಯವರೆಗೆ ಅವರು ನಂಬಿದ್ದ ಕಾಣ್ಕೆಯನ್ನೂ ಪಡೆದಿರದಿದ್ದ ಕಣ್ಣಿಗೆ ಎಲ್ಲವನ್ನೂ ಕಾಣಿಸುವ ಅಂಜನ ಹಚ್ಚಿದಂತಾಯಿತು. ಜ್ಞಾನವನ್ನಾಗಲಿ ಕರ್ಮವನ್ನಾಗಲಿ ಅನುಭವಕ್ಕೆ ತಂದುಕೊಳ್ಳುವಂತೆ ಭಕ್ತಿ ಮಾಡಿದುದೇ 'ಉಣ್ಣುವ ನಿಧಿ'.

ಕನಕದಾಸರಿಂದ ಪ್ರಭಾವಿತರಾಗಿಯೇ ವ್ಯಾಸತೀರ್ಥರು ತಮ್ಮ ಶಿಷ್ಯಕೋಟಿಯಲ್ಲೆಲ್ಲ ಕನಕದಾಸರಿಗೆ ವಿಶೇಷವಾದ ಗೌರವವನ್ನು ತೋರಿಸುತ್ತಿದ್ದರು. ಈ ಮಾತಿಗೆ ಸಾಕ್ಷಿಯಾಗಿ, ವ್ಯಾಸತೀರ್ಥರಿಂದಲೇ 'ದಾಸರೆಂದರೆ ಪುರಂದರದಾಸರಯ್ಯಾ' ಎಂದು ಹೊಗಳಿಸಿಕೊಂಡ ಪುರಂದರದಾಸರ 'ಕನಕನ ಮೇಲೆ ದಯಮಾಡಲು' ಎಂಬ ಕೃತಿಯಿದೆಯಷ್ಟೆ. ಸಮಯ ಸಿಕ್ಕಾಗಲೆಲ್ಲ ಕನಕನ ಹಿರಿಮೆಯನ್ನು ಜನರಿಗೆ ವ್ಯಾಸತೀರ್ಥರು ತೋರಿಸಿಕೊಡುತ್ತಿದ್ದ ಕಥೆಗಳೂ ಬಳಕೆಯಲ್ಲಿವೆಯಷ್ಟೆ.

ವ್ಯಾಸತೀರ್ಥರು ಹರಿದಾಸ್ಯದಲ್ಲಿ ಉತ್ಸಾಹವನ್ನು ತಳೆದದ್ದಕ್ಕೆ ಮೊದಲು ಕನಕದಾಸರೂ, ಆನಂತರ ಪುರಂದರದಾಸರೂ ಕಾಣರಾದರು. ಅವರ ಸುತ್ತ ನೆರೆದಿದ್ದ ಶಿಷ್ಯರಲ್ಲಿ ನಾಲ್ವರು ಮಾತ್ರ ಮುಂದಿನ ಹರಿದಾಸರ ಪರಂಪರೆಯಲ್ಲೂ ಹೆಸರುಗೊಂಡಿದ್ದಾರೆ-

"ವಿಜಯೀಂದ್ರ ವಾದಿರಾಜ ಮೊದಲಾದ
ನಿಜವರ ಶಿಷ್ಯರುಗಳ
ವ್ರಜಕೆ ಶಾಸ್ತ್ರಾರ್ಥವನು ಬೋಧಿಸುತ
ದ್ವಿಜಕುಲ ಸಂಭವರಾದ ಪುರಂದರ
ಸುಜನ ಶಿರೋಮಣಿ ಕನಕ ಪ್ರಮುಖ
ಪೂಜಿತಪದಯುಗಳಾಂಬುಜ ಯತಿಶೇಖರ
ವಿಜಯಸಾರಥಿಯು ಪ್ರಸನ್ನನಾಗಲೆಂದು"

ಎಂದು ಮುಂದಿನ ಹರಿದಾಸರೊಬ್ಬರು ವ್ಯಾಸತೀರ್ಥರನ್ನು ಬಣ್ಣಿಸಿದ್ದಾರೆ. ವಿಜಯೀಂದ್ರರೂ, ವಾದಿರಾಜರೂ ಸನ್ಯಾಸಿಗಳು, ಮುಂದೆ ಮಠಾಧಿಪತಿಗಳಾದವರು. ಅವರಿಗೆ ಶಾಸ್ತ್ರಾರ್ಥ ಹೇಳಿದ್ದು ಸರಿಯೆ; ವ್ಯಾಸಕೂಟದ ನಾಯಕರಾಗಲೆಂದು. ಉಳಿದ ಇಬ್ಬರಲ್ಲಿ ಪುರಂದರದಾಸರನ್ನು 'ದ್ವಿಜ ಕುಲ ಸಂಭವ'ರೆಂದೂ ಕನಕದಾಸರನ್ನು 'ಸುಜನ ಶಿರೋಮಣಿ'ಯೆಂದೂ ಬಣ್ಣಿಸಿರುವುದರಲ್ಲಿ ಕನಕದಾಸರಿಗೇ ಅಗ್ರಪಟ್ಟವೆಂಬುದು ಧ್ವನಿಸುತ್ತದೆಯಲ್ಲವೇ?

ಇದು ಹೇಗಾದರೂ ಇರಲಿ. ಪುರಂದರದಾಸರೂ ಕನಕದಾಸರೂ ಒಡನಾಡಿಗಳಾಗಿ ಇದ್ದ ಕಾಲದಲ್ಲಿ ಹರಿದಾಸ ಪರಂಪರೆಯೆಂಬುದು ಇರಲಿಲ್ಲ. ಆ ಕಾಲವಾದ ನೂರಾರು ವರ್ಷಗಳು ಕಳೆದ ಮೇಲೆ ವಿಜಯದಾಸರಿಗೆ ಕನಸಿನಲ್ಲಿ ಪುರಂದರದಾಸರಿಂದ ದೀಕ್ಷೆ ಒದಗಿ ಹರಿದಾಸ ಪರಂಪರೆ ಆರಂಭವಾದದ್ದು. ಆದ್ದರಿಂದಲೇ ಪುರಂದರದಾಸರನ್ನು ವಿಜಯದಾಸರು ಆದ್ಯರೆಂದು ಗ್ರಹಿಸಿದ್ದು. ಪುರಂದರದಾಸರಿಗೇ ಹರಿದಾಸ ಪರಂಪರೆಯ ಉದ್ದೇಶವಾಗಲಿ ಕಲ್ಪನೆಯಾಗಲಿ ಇದ್ದಂತೆ ಕಾಣುವುದಿಲ್ಲ. ದಾಸಕೂಟವೇನೋ ಇದ್ದಿತು. ಪುರಂದರದಾಸರ, ಕನಕದಾಸರ, ವ್ಯಾಸತೀರ್ಥರ ಕೃತಿಗಳಿಂದಲೇ ಇದು ಹೊರಡುತ್ತದೆ. ಆದರೆ ಮಾಧ್ವಮತದ ಚೌಕಟ್ಟಿನಲ್ಲಿ ಮೈವಡೆದ ಹರಿದಾಸ ಪಂಥವನ್ನು ಪುರಂದರದಾಸರಾಗಲಿ, ಕನಕದಾಸರಾಗಲಿ, ಕಡೆಗೆ ಅವರಿಬ್ಬರ ಗುರುಗಳಾದ ವ್ಯಾಸತೀರ್ಥರೇ ಆಗಲಿ ಅರಿತಿರಲಿಲ್ಲ. ಮೂವರಿಗೂ ಪ್ರೇರಕವಾದದ್ದು ಮತೀಯ ಭಾವನೆಗಳಲ್ಲ. ಯಾವುದೇ ಒಂದು ತಾತ್ವಿಕ ನಿಲುವಲ್ಲ. ಮಾನವ ಕೋಟಿಯ ಉದ್ಧಾರವೆಂಬ ಕಲ್ಪನೆ. ವ್ಯಾಸತೀರ್ಥರು

"ನಂಬಿ ಕೆಟ್ಟವರಿಲ್ಲವೋ ರಂಗಯ್ಯನ
ನಂಬದೆ ಕೆಟ್ಟರೆ ಕೆಡಲಿ"

ಎಂದು ಹಾಡಿದಾಗ ಮೊದಲನೆಯ ಸಾಲಿನ ಆಶಯವನ್ನು ಪುರಂದರ ಕನಕರಿಬ್ಬರೂ ಒಪ್ಪಿದರು. ಎರಡನೆಯ ಸಾಲಿನ ಉಪೇಕ್ಷೆಯನ್ನು ಒಪ್ಪಲಿಲ್ಲ. ನಂಬದೆ ಇದ್ದವರೂ ನಂಬುವಂತಾಗಲಿ, ಕೆಡುವುದು ಬೇಡ ಎಂಬ ಉದ್ದೇಶದಿಂದಲೇ ಅವರಿಬ್ಬರೂ ತಮ್ಮ ಬಾಳನ್ನು ಕಡೆದವರು. ಪುರಂದರದಾಸರು 'ಮಾನವ ಜನ್ಮ ದೊಡ್ಡದು, ಇದ ಹಾನಿಮಾಡಲಿಬೇಡಿ ಹುಚ್ಚಪ್ಪಗಳಿರ' ಎಂದಂತೆಯೇ ಕನಕದಾಸರು 'ದಾಸನಾಗೋ, ಭವಪಾಶನೀಗೋ, ವಿಶೇಷನಾಗೋ' ಎಂದು ಕರೆಕೊಟ್ಟರು. ನಂಬಿದಾಗ, ದಾಸನಾದಾಗ ಮುಖ್ಯವಾದುವು ಪಾಂಡಿತ್ಯವಲ್ಲ, ಮಡಿವಂತಿಕೆಯಲ್ಲ, ಕರ್ಮಠತನವಲ್ಲ. ದಿನನಿತ್ಯದ ಬದುಕಿನಲ್ಲಿ ಶೀಲ ಶುದ್ಧಿ, ಭಾವ, ಭಕ್ತಿ, ಇಷ್ಟನ್ನೆ ಇಬ್ಬರೂ ದಾಸರು ಎತ್ತಿ ಹೇಳಿದರು. ಪುರಂದರದಾಸರು ಮಡಿವಂತಿಕೆಯನ್ನೂ ಪಾಂಡಿತ್ಯದ ಮೇಲಾಟವನ್ನೂ ಖಂಡಿಸಿ, ಹಳಿದು, ಹಾಸ್ಯ ಮಾಡಿದುದನ್ನು ಎಲ್ಲರು ಬಲ್ಲರು. 'ಗಂಡನ ಕಾಣದೆ ಮುಂಡೆಯರಾದರು ಪಂಡಿತರೆಲ್ಲ'ನ್ನು 'ದಾಟುಕಾಲಲಿ ಬರುವ ಬೂಟತನ', 'ಮಡಿಮಡಿಯೆಂದಡಿಗಡಿಗ್ಹಾರುವುದು' ಇವೆಲ್ಲ ಅವರ ಮಾತುಗಳೇ. ಪುರಂದರದಾಸರಿಗಿದ್ದ 'ಸಿನಿಕ' ಪ್ರವೃತ್ತಿ ಕನಕದಾಸರಿಗಿರಲಿಲ್ಲ.

ಆದರೆ ಕನಕದಾಸರ 'ರಾಮಧಾನ್ಯ ಚರಿತ್ರೆ'ಯ ವಸ್ತುವನ್ನು ನೋಡಿ. ಅಲ್ಲಿ ಬರುವ ಅಕ್ಕಿ ರಾಗಿಗಳ ವಿವಾದದಲ್ಲಿ ಕೆಲವರು ಮೇಲು-ಕೀಳು ವರ್ಗಗಳ ವಿರಸವನ್ನು ಕಾಣುತ್ತಾರೆ. ಇದು ಸರಿಯೆಂದು ನನಗೆ ಕಾಣುವುದಿಲ್ಲ. ಅಲ್ಲಿ ಬರುವ ಅಕ್ಕಿಯ ಅಥವಾ ರಾಗಿಯ ವರ್ಣನೆಯಲ್ಲಿ ಈ ಧ್ವನಿಯಿರದು. ಅಕ್ಕಿಯನ್ನು ಅವರು ವ್ರೀಹಿಗನೆಂದೇ ಕರೆದಿರುವುದನ್ನು ಗಮನಿಸಬೇಕು. ಸಂಸ್ಕೃತದಲ್ಲಿ ವ್ರೀಹಿಯೆಂದರೆ ಯಜ್ಞಯಾಗಾದಿಗಳಿಗೆ ಉಪಯುಕ್ತವಾಗುವ ಧಾನ್ಯ ವಿಶೇಷ, ಶುಭ ಕರ್ಮಗಳಿಗೂ ಬರುತ್ತದೆ, ಹೆಣದ ಬಾಯಿಗೆ ತುತ್ತೂ ಆಗುತ್ತದೆ ಎಂದು ಕನಕದಾಸರ ವರ್ಣನೆಯೇ ಇದೆ. ಇದು ಕರ್ಮನಿಷ್ಠೆಯನ್ನು, ಪಾಂಡಿತ್ಯವನ್ನು, ಮಡಿವಂತಿಗೆಯನ್ನು ಸಂಕೇತಿಸುವ ಮಾತು. ರಾಗಿಯಾದರೋ ಬಲ್ಲಿದರು ಬಡವರುಗಳೆನ್ನದೆ, ಎಲ್ಲರನ್ನು ರಕ್ಷಿಸುವ ಜನಸಾಮಾನ್ಯರ ಧಾನ್ಯ. ಎಂದರೆ ವ್ಯವಹಾರಕ್ಕೆ ಬೇಕಾದ ಆಚಾರಶುದ್ಧಿ.

ಅಕ್ಕಿರಾಗಿಗಳ ನಡುವೆ ನಡೆದ ವಿವಾದವನ್ನು ಪರಿಹರಿಸಲು ಎರಡನ್ನೂ ಆರು ತಿಂಗಳು ಸೆರೆಮನೆಗೆ ದೂಡಿದಾಗ, ಅವಧಿ ಕಳೆದ ಮೇಲೆ ನೋಡಿದರೆ ಅಕ್ಕಿ ಮುಗ್ಗಿ ಹೋಗಿತ್ತು. ರಾಗಿ ಎಂದಿನಂತೆಯೇ ಗೆಲುವಾಗಿತ್ತು. ಪುರಂದರರ, ಕನಕರ ಕಾಲದಲ್ಲಿದ್ದ ಪಂಡಿತರು, ಕರ್ಮಠರು, ಮಡಿವಂತರು ಈ ಐನೂರು ವರ್ಷಗಳಾದ ಮೇಲೆ ಏನಾಗಿದ್ದಾರೆ? ಹೇಳ ಹೆಸರಿಲ್ಲದೆ ಮರೆಯಾಗಿದ್ದಾರೆ! ಅಕ್ಕಿಯ ಗತಿ ಅದು. ಕನಕದಾಸರು, ಪುರಂದರದಾಸರು ಇಂದಿಗೂ ಉಳಿದುಕೊಂಡಿದ್ದಾರೆ. ರಾಗಿಯ ಮೇಲ್ಮೆ ಅದು. ರಾಗಿ 'ರಾಘವಧಾನ್ಯ'ವೆಂದರೆ 'ರಾಮೋ ವಿಗ್ರಹವಾನ್ ಧರ್ಮಃ' ಎಂಬ ವಾಲ್ಮೀಕಿಯ ಅರ್ಥದಲ್ಲಿ. ಹರಿದಾಸ ಪಂಥ ಪ್ರವೃತ್ತವಾದದ್ದು ಜನಸಾಮಾನ್ಯರ ನಿತ್ಯ ಜೀವನಕ್ಕೆ ಅಗತ್ಯವಾದ ಧರ್ಮವನ್ನು ಮನವರಿಕೆಮಾಡಿಕೊಡಲೆಂದೇ. ಧರ್ಮ ಜನರನ್ನು ಕೆಡಲು ಬಿಡುವುದಿಲ್ಲ ಮಾತಿನ ಅರ್ಥವೇ ಅದು. ಇಲ್ಲಿ ರಾಗಿಯು ಧರ್ಮದ

ಪ್ರತಿಮೆಯಾಗಿ ಕಾಣಿಸಿಕೊಳ್ಳುತ್ತದೆ. ಈ ರಾಮ ಧಾನ್ಯ ಚರಿತ್ರೆಯ ನಿರೂಪಣೆಯನ್ನು ಮೆಚ್ಚಿಕೊಂಡೇ ಪುರಂದರದಾಸರ 'ರಾಗಿ ತಂದೀರಾ ಭಿಕ್ಷಕೆ' ಎಂಬ ಕೃತಿ ಸಿದ್ಧವಾಗಿರಬೇಕು. 'ಯೋಗ್ಯರಾಗಿ, ಭಾಗ್ಯವಂತರಾಗಿ' ಎಂದು ದಾಸರು ತಿರುವನ್ನು ಕೊಟ್ಟು ಹೇಳಿರುವುದನ್ನು ಗಮನಿಸಬೇಕು.

ಇವರಿಬ್ಬರೂ ಹರಿದಾಸರು ಸ್ವತಂತ್ರವಾಗಿ ಬಾಳಿದರು; ಯಾವೊಂದು ಮಠಕ್ಕಾಗಲಿ, ಮತಕ್ಕಾಗಲಿ ಅಂಟಿಕೊಳ್ಳದೆ, ವ್ಯವಹಾರದಿಂದ ದೂರಾಗಿ 'ಮಧುಕರವೃತ್ತಿ'ಯನ್ನು ಹಿಡಿದರು. ತಮ್ಮದೊಂದು ಪರಂಪರೆಯನ್ನು ಉಳಿಸಬೇಕೆಂಬ ತವಕ ಅವರಿಗಿರಲಿಲ್ಲ. ಆದರೆ ಅವರ ಕಾಲವಾದ ಬಹುದಿನಗಳ ಮೇಲೆ ವಿಜಯದಾಸರು ಪುರಂದರದಾಸರನ್ನು ಹರಿದಾಸಪರಂಪರೆಯ ಪ್ರವರ್ತಕರೆಂದು ಎಣಿಸಿ, ತಮ್ಮ ದೀಕ್ಷಾಗುರುಗಳೆಂದು ಭಾವಿಸಿಕೊಂಡು, ಅವರ ಅಳಿದುಳಿದ ಕೃತಿಗಳನ್ನು ಸಂಗ್ರಹಿಸತೊಡಗಿದಾಗ 'ಮಾಧ್ವಮತದ ಪ್ರಕ್ರಿಯೆಗಳೆ ಮುಖ್ಯವಾದುವು. ಮಾನವ ಜನ್ಮ ದೊಡ್ಡದೆಂದು ಹೇಳಿದ ದಾಸರ ಬಾಯಿಂದ' 'ಮಾಧ್ವಮತವ ಬಿಡಬೇಡಿ, ಬಿಟ್ಟು ಕೆಡಬೇಡಿ' ಎಂಬ ಮಾತುಗಳನ್ನೂ ಹೊರಡಿಸಲು ಹರಿದಾಸಪರಂಪರೆಯು ಹಿಂಜರಿಯಲಿಲ್ಲ. ವಿಜಯದಾಸರಿಂದ ಸ್ಫೂರ್ತಿ ತಳೆದು ಸಿದ್ಧವಾದ ದಾಸಕೂಟದಲ್ಲಿ ಪುರಂದರದಾಸರು 'ಗುರು', 'ದಾಸ ಶ್ರೇಷ್ಠ' ರೆಂದಾದದ್ದು ಮೇಲೆ ಕಾಣಿಸಿದಂತೆ ದ್ವಿಜಕುಲ ಸಂಭವರಾದುದರಿಂದಲೇ ಇದ್ದೀತು. ಸುಜನ ಶಿರೋಮಣಿಗಳಾದರೂ, ವ್ಯಾಸತೀರ್ಥರ ಪ್ರೀತಿಯನ್ನೂ ಪುರಂದರದಾಸರ ಆದರವನ್ನೂ ಪಡೆದುಕೊಂಡಿದ್ದರೂ ಕನಕದಾಸರು ಈ ಕೂಟದಲ್ಲಿ ಮುಖ್ಯರೆನಿಸಲಿಲ್ಲ. ವ್ಯಾಸತೀರ್ಥರ ಕಾಲದಲ್ಲಿದ್ದ ದಾಸಕೂಟಕ್ಕೆ ಪುರಂದರದಾಸರೊಂದು ಕಣ್ಣು, ಕನಕದಾಸರಿನ್ನೊಂದು ಕಣ್ಣು. ವಿಜಯದಾಸರನಂತರ ರೂಪುಗೊಂಡ ದಾಸಕೂಟಕ್ಕೆ ಒಂದೇ ಕಣ್ಣು.. ಸಹಜವಾಗಿಯೇ ಅದರ ನೋಟ ಸಣ್ಣದಾಯಿತು, ಹರವು ಕುಗ್ಗಿತು, ಅಂದ ಕೆಟ್ಟಿತು. ಹೀಗೆ ಅದರ ಅವನತಿ ಮೊದಲಲ್ಲೇ ಸಿದ್ಧವಾಯಿತು ಎಂದರೂ ತಪ್ಪಾಗಲಾರದು.

ಪುರಂದರದಾಸರ, ಕನಕದಾಸರ ಆದರ್ಶವನ್ನೂ ಮನೋವೃತ್ತಿಯನ್ನೂ ಹಿಡಿದ ಹರಿದಾಸರಿರಲಿಲ್ಲವೆಂದಲ್ಲ; ಆದರೆ ಅವರ ಸಂಖ್ಯೆ ಕಡಮೆ. ಅವರ ಪ್ರಭಾವ ಇನ್ನೂ ಕಡಮೆ. ವೈದಿಕ ಕರ್ಮಠರ ನಡುವೆಯೇ ಬಾಳಬೇಕಾಗಿಬಂದುದರಿಂದ, ಮಠದವರ ಆಸರೆಯನ್ನು ಪಡೆದುಕೊಳ್ಳುವ ತವಕದಿಂದ ಹಲವರು ಹರಿದಾಸರು ಹರಿದಾಸ್ಯದ ನಿಯಮಗಳನ್ನೆ ಸಡಿಲಿಸಿದರು, ಯುಗ ಧರ್ಮದ ಹೊಡೆತ ಮುಂಚಿನ ನೆಲೆಯನ್ನು ಇರಗೊಡಿಸಲಿಲ್ಲ. 'ದಾಸರೆಂದರೆ ಪುರಂದರದಾಸರಯ್ಯ' ('ಕನಕದಾಸರಯ್ಯ'ಎಂದೂ ಸೇರಿಸಿ)ಎಂದು ವ್ಯಾಸತೀರ್ಥರು ಎಳೆದ ಉದ್ಗಾರ ಮುಂದೆಯೂ ಸರಿಯಾಯಿತು, ಇಂದಿಗೂ ಸರಿಯಾಗಿಯೇ ಇದೆ. ಅವರಿಬ್ಬರಂತಹ ದಾಸರು ಮತ್ತೆ ಕಾಣಿಸಿಕೊಳ್ಳಲಿಲ್ಲ. ಹರಿದಾಸ ಪಂಥ ಬಡವಾದುದು ಸಹಜವೇ.

ಕನಕದಾಸರ ಕೃತಿಗಳಲ್ಲಿ ಒಗಟು, ಮುಂಡಿಗೆಗಳು ಇವೆಯೆಂದು ಎಲ್ಲರೂ ಬಲ್ಲರಷ್ಟೆ. ಅವರ ಬದುಕೇ ಒಂದು ಮುಂಡಿಗೆ, ಒಂದು ಒಗಟು. ಪುರಂದರದಾಸರ ವಿಚಾರವಾಗಿ ಇದ್ದಂತೆ ಕನಕದಾಸರ ವಿಚಾರವಾಗಿಯೂ ಹಲವಾರು ಕಥೆಗಳಿವೆ, ಬಹುಮಟ್ಟಿಗೆ ಕಾಲಿಲ್ಲದವು, ಮುಂದೆ ಎಂದೋ ಮೈದಳೆದವು. ಅವರ ಕೃತಿಗಳಲ್ಲೇ ತಡುಕಾಡಿದರೆ ಅವರ ಬದುಕಿನ ಮೇಲೆ ಚೆಲ್ಲಬಹುದಾದ ಬೆಳಕು ತೀರ ಕಡಮೆ. 'ಕುಲಕುಲ ಕುಲವೆಂದು ಬಡಿದಾಡದಿರಿ, ಕುಲದ ನೆಲೆಯನೇನಾದರು ಬಲ್ಲಿರಾ',

ಎಂದು ಹೇಳಿದ ಕೇಳಿದ ಕನಕದಾಸರ ಕುಲವನ್ನೇ ಕುರಿತು ಜಿಜ್ಞಾಸೆ ನಡೆದಿದೆ. ಅವರು ಕುರುಬರೊ, ಕಬ್ಬಲಿಗರೋ, ಬೇಡರೊ, ನಾಯಕರೋ, ಬ್ರಾಹ್ಮಣರೋ ಎಂದು ಚರ್ಚೆ ನಡೆದಿದೆ. ಇಂಥ ಚರ್ಚೆ ಪ್ರಸ್ತುತವೂ ಅಲ್ಲ, ಉಚಿತವೂ ಅಲ್ಲ. ಕನಕದಾಸರ ಸಂದೇಶವನ್ನು ಅರ್ಥಮಾಡಿಕೊಳ್ಳಲಾರದೆ, ನಮ್ಮ ಅನಿಸಿಕೆಗಳ ತೊಳಲಾಟದಲ್ಲೆ ಇದ್ದುಕೊಂಡು ಅವರಿಗೆ ಒಂದಲ್ಲ ಒಂದು ಕುಲವನ್ನು ಹಚ್ಚಿದರೆ ಮಾತ್ರ ನಮ್ಮ ಮನಸ್ಸಿಗೆ ನೆಮ್ಮದಿಯಾದೀತು! ಕುಲದ ನೆಲೆಯನ್ನು ಮೀರಿ ನಿಂತ ಕನಕದಾಸರು' 'ಕುರುಬರು ನಾವು, ನಮ್ಮ ದೇವರು ಬೀರೇ ದೇವರು' ಎಂದಾಗ ಅವರು ತಮ್ಮ ಕುಲವನ್ನೆ ಗುರುತಿಸಿಕೊಂಡರೋ, ಅಥವಾ ಮುಂದೆ ಅದೇ ಕೃತಿಯಲ್ಲಿ ಬರುವಂತೆ 'ಸರ ಕುರಿಯನ್ನು ಕಾಯುವ ಕುರುಬತನ'ವನ್ನು ಹೇಳಿಕೊಂಡರೋ? ಪುರಂದರದಾಸರೂ 'ಜಂಗಮರು ನಾವು ಲಿಂಗಾಂಗಿಗಳು' ಎಂದು ಹೇಳಿದರಲ್ಲವೇ? ಕುಲದ ಕಟ್ಟನ್ನು ಕಳಚಿಕೊಂಡು ಮೇಲೆದ್ದು ನಿಂತ ಚೇತನವನ್ನು ಕುರಿತು ಕುಲದ ಸೊಲ್ಲನ್ನೆ ಎತ್ತುವುದು ಏನು ಚೆನ್ನು? ಹಾಗೆ ಎತ್ತಿದಾಗ ದಾಸರ ಉಪದೇಶ ನಮ್ಮನ್ನು ಮುಟ್ಟಲಿಲ್ಲವೆಂದೇ ಅರ್ಥವಲ್ಲವೆ?

ಕನಕದಾಸರ ಬಾಳುವೆಯನ್ನು ಕುರಿತಂತೆ ಇಷ್ಟಂತೂ ಗಟ್ಟಿಯಾಗಿ ನಿಲ್ಲುತ್ತದೆ. ೧. ಬಾಡ, ಕಾಗಿನೆಲೆಯ ಕಡೆಯವರು, ಅಲ್ಲಿನ ಕೇಶವ (ನರಹರಿ) ಇಷ್ಟದೈವವಾಗಿ ಉಳ್ಳವರು; ವಿಜಯನಗರ ಸಾಮ್ರಾಜ್ಯ ತಲೆಯೆತ್ತಿ ನಿಂತಿದ್ದಾಗ ಬದುಕಿ ಬಾಳಿದವರು; ಕನ್ನಡ ನಾಡಿನಲ್ಲೆಲ್ಲ ಸುತ್ತಾಡಿದವರು; ತಿರುಪತಿಯ ದೇವರಿಗೆ (ಪ್ರೌಢವಿಗಧಿಕ ವಿಜಯನಗರದೊಡೆಯ ಕಟ್ಟೆ ವೆಂಕಟೇಶ) ನಡೆದುಕೊಂಡವರು.

೨. 'ತಾಮಸಗುಣನಾಶ ಸಾತ್ವಿಕೋಲ್ಲಾಸ' ರಾಮಾನುಜ ಮುನಿಯ ಮತಕ್ಕೆ ಸೇರಿದವರಾಗಿದ್ದು ಆನೆಗುಂದಿ ತಾತಾಚಾರ್ಯರಿಂದ ದೀಕ್ಷೆ ಪಡೆದಿದ್ದವರು. 'ಮೋಹನ ತರಂಗಿಣಿ'ಯೆಂಬ ಕನ್ನಡ ಕಾವ್ಯವನ್ನು ರಚಿಸಿದ್ದು ಅವರ ಬಾಳುವೆಯ ಈ ಮೊದಲ ಘಟ್ಟದಲ್ಲೆ.

೩. ತಿರುಪತಿಯ ಬೆಟ್ಟದ ಮೇಲೆ ಹತ್ತಾರು ವರ್ಷ ನೆಲೆಸಿದ್ದು ದೇವರಿಗೆ ಪೂಜಾ ಕೈಂಕರ್ಯ ಸಲ್ಲಿಸುತ್ತಿದ್ದ ವ್ಯಾಸತೀರ್ಥರನ್ನು ಅಲ್ಲಿಯೆ ಕಂಡು ಅವರಿಂದ ಪ್ರಭಾವಿತರಾಗಿ ಅವರ ಹರಿದಾಸ ಶಿಷ್ಯರಾದರು; ಮುಂದೆ ವ್ಯಾಸತೀರ್ಥರನ್ನು ಹಂಪಿಯಲ್ಲಿ ಕೂಡಿಕೊಂಡ ಪುರಂದರದಾಸರ ಒಡನಾಡಿಯಾದರು.

೪. ಕನ್ನಡದ ಕವಿಯಾಗಿ 'ಹರಿಭಕ್ತಿ ಸಾರ', 'ನಳ ಚರಿತ್ರೆ', 'ರಾಮ ಧಾನ್ಯ ಚರಿತ್ರೆ'ಗಳನ್ನೂ ನೂರಾರು ಬಿಡಿಪದಗಳನ್ನೂ ರಚಿಸಿದರು.

ಇಷ್ಟನ್ನು ಬಿಟ್ಟು ಉಳಿದದ್ದೆಲ್ಲ ಊಹೆಯೆಂದೆ, ಮುಂದಿನ ಕಾಲದ ಕಲ್ಪನೆಯೆಂದೆ ತೋರುತ್ತದೆ. ಹರಿದಾಸರಾಗಿ ಹರಿಯೆ ಸರ್ವೋತ್ತಮನೆಂದು ನಂಬಿದರೆನ್ನುವಾಗ, 'ವೈಷ್ಣವರ ಮನೆಯ ದಾಸ'ನೆಂದು ತಮ್ಮನ್ನು ಕರೆದುಕೊಂಡಾಗ, ಮತೀಯ ಛಲವನ್ನು ಅವರಿಗೆ ಆರೋಪಿಸಲಾಗದು. ಅವರ ಗುರುಗಳಾದ ವ್ಯಾಸತೀರ್ಥರ 'ಅಂತರಂಗದಲಿ ಹರಿಯ ಕಾಣದವ ಹುಟ್ಟು ಕುರುಡನೋ' ಎನ್ನುವ ಪದದಲ್ಲಿ ಶಿವನಿಂದ, ಉಳಿದ ದೇವತೆಗಳಿಂದ ಬೇರೆಯಾದ ವಿಶಿಷ್ಟ ದೈವ ಎನ್ನುವ ಸಂಕುಚಿತ ದೃಷ್ಟಿಯಲ್ಲವಷ್ಟೆ. ಕನಕದಾಸರಾಗಲಿ ಹರಿಯನ್ನು ಕಂಡುಕೊಂಡವರು. ಅವರ ಪಾಲಿಗೆ ಹರಿ ಎನ್ನುವುದು ಎಲ್ಲರಲ್ಲೂ ಇರುವ ಒಬ್ಬನೇ ದೇವರನ್ನು, ಆತ್ಮಾಂತರಾತ್ಮನಾಗಿಯೆ ಇರುವ ವಸ್ತುವನ್ನು, ಹೇಳುವ

ಮಾತು. ಹರಿಯೆಂದು. ಹರನೆಂದು ಕಿತ್ತಾಡುವ ಜನರಿಂದ ದೂರ ನಿಂತಿದ್ದವರು ಇವರು. ಹೊರಗೆ ಗೊಂಬೆಗಳಲ್ಲಿ ತೋರಿಕೊಳ್ಳುವ 'ಕಾಕುದೈವಗಳ' ಮೇಲಾಟಕ್ಕೆ ಮನವೊಲಿಯದಿದ್ದವರು. ಕನಕದಾಸರ ಮಾತು:

"ಪುತ್ಥಳಿ ಬೊಂಬೆಯ ಚಿತ್ರದಿ ಬಣ್ಣಿಸಿ
ಮುತ್ತು ಕೊಟ್ಟರೆ ಮಾತನಾಡೀತೆ"

ದಾಸರು ಹರಿಯ ಭಕ್ತರೆನ್ನುವಾಗ, ಹರಿಯೆಂದರೆ ನಮ್ಮ ನಿಮ್ಮ ಕಲ್ಪನೆಯಲ್ಲಿ ಮೂಡಿಬರುವ ಚತುರ್ಭುಜ ಶಂಖಚಕ್ರ ಗದಾಧಾರಿಯಾದ, ಊರ್ಧ್ವಪುಂಡ್ರದ ವಿಷ್ಣುವೆಂದು ಬಗೆಯಬಾರದು. ಅವರು ವೈಷ್ಣವರೆಂದಾಗ, ಈಗ ವಾಡಿಕೆಯಲ್ಲಿರುವ ಅರ್ಥವನ್ನು ಹಚ್ಚಬಾರದು. ನಮ್ಮ ನೋಟವನ್ನು ಕಿರಿದು ಮಾಡಿಕೊಂಡು, ದಾಸರ ದೈವವನ್ನು ಸಂಕುಚಿತ ಮಾಡಿನೋಡಿದರೆ ದಾಸರಿಂದ ನಾವು ಪಡೆದುಕೊಳ್ಳುವ ಪ್ರಯೋಜನವು ಕುಗ್ಗುತ್ತದೆ. ಮೋಹನ ತರಂಗಿಣಿಯಲ್ಲಿ ಕನಕದಾಸರು ಹೇಳಿರುವ ಮಾತು ಈ ಸಂದರ್ಭಕ್ಕೂ ಅನ್ವಯಿಸುತ್ತದೆ-

"ಕೊಡವಾಲು ಪುಳಿವೆರೆದಳಿವುದಲ್ಲದೆ. ಪಾ
ಲ್ಗಡಲು ನಾಶನೈದುವುದೆ?"

ಕನಕದಾಸರ ಕಾವ್ಯಗಳನ್ನು ಕುರಿತು, ಅವರ ಕಾವ್ಯಧರ್ಮವನ್ನು ಕುರಿತು ಈಗಾಗಲೇ ಸಾಕಾದಷ್ಟು ವಿವೇಚನೆ ನಡೆದಿದೆ. ಅವರ ಬಿಡಿ ಪದಗಳನ್ನು ಕುರಿತು, ಸಂಗೀತಕ್ಕೆ ಸಂಬಂಧಪಟ್ಟಂತೆ ಅದರ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ, ವಿಮರ್ಶೆ ಕೊಂಚಮಟ್ಟಿಗೆ ನಡೆದಿದೆ. ಕರ್ನಾಟಕ ಸಂಗೀತದ ಶಾಸ್ತ್ರೀಯ ಪ್ರಕಾರದಲ್ಲಿ ಪುರಂದರದಾಸರನ್ನು 'ಪಿತಾಮಹ' ರೆಂದು ಗುರುತಿಸಿ, ಆ ಪ್ರಕಾರದ ಪದ್ಧತಿಯಲ್ಲಿ ಪುರಂದರದಾಸರ ಕೆಲವು ಕೃತಿಗಳ ವಿನಿಕೆ ನಡೆಯುವ ವಾಡಿಕೆಯಿದೆಯಷ್ಟೆ. ಅವರಂತೆಯೆ ಕೃತಿಗಳನ್ನು ರಚಿಸಿದ ಕನಕದಾಸರ ರಚನೆಗಳನ್ನು ಅಷ್ಟಾಗಿ ಹಾಡುವುದಿಲ್ಲವೇಕೆ ಎಂದು ಒಂದು ಪ್ರಶ್ನೆ. ಪುರಂದರದಾಸರಿಗೂ ಶಾಸ್ತ್ರೀಯ ಕರ್ನಾಟಕ ಸಂಗೀತಕ್ಕೂ ಇರುವ ನಂಟು ಪ್ರಮುಖವಾಗಿ ಅವರು ಕಲಿಕೆಯ ಅನುಕೂಲಕ್ಕಾಗಿ ಆರಂಭದ ರಾಗ ತಾಳ ಜ್ಞಾನಕ್ಕಾಗಿ ಸಿದ್ಧಪಡಿಸಿದ ಗೀತಗಳು, ಸ್ವರಾವಳಿ, ಅಲಂಕಾರ ಇವುಗಳಲ್ಲಿಯೆ. ಅವರ ಸುಳಾದಿಗಳನ್ನು ಸಂಗೀತರಸಿಕರು ಅಲ್ಲಲ್ಲಿ ಮೆಚ್ಚಿಕೊಂಡಿದ್ದುದು ದಿಟವಾದರೂ ಅವರ ಕೃತಿಗಳಿಗೆ ಸಂಪ್ರದಾಯದ ಸಂಗೀತ ಅಷ್ಟಾಗಿ ಒತ್ತುಕೊಡಲಿಲ್ಲ. ಪುರಂದರದಾಸರು ತ್ಯಾಗರಾಜರಿಗೇ ಮಾನ್ಯರಾಗಿದ್ದುದರಿಂದ ಪುರಂದರದಾಸರ ಪ್ರಸಿದ್ಧಿ ಈ ಕ್ಷೇತ್ರದಲ್ಲಿ ಉಳಿದುಕೊಂಡು ಬಂದಿತು ಅಷ್ಟೆ ಎಂದು ಕಾಣುತ್ತದೆ. ಸಭೆಯಲ್ಲಿ ನಡೆಯುತ್ತಿರುವ ಸಂಗೀತಕ್ಕೆ ಪುರಂದರದಾಸರಾಗಲಿ ಕನಕದಾಸರಾಗಲಿ ಎಂದೂ ದೂರವೆ.

ಇದಕ್ಕೆ ಕಾರಣ ಪುರಂದರದಾಸರ ಅಥವಾ ಕನಕದಾಸರ ಕೃತಿಗಳಲ್ಲಿ ಗೇಯಗುಣ ಇಲ್ಲವೆಂದಲ್ಲ. ಆದರೆ ಈಗಿನ ಶಾಸ್ತ್ರೀಯ ಸಂಗೀತ ಸಿದ್ಧವಾದ ಸಮಯದಲ್ಲಿ, ಸ್ಥಳದಲ್ಲಿ ಇವರ ಕೃತಿಗಳ ಬಳಕೆ ಅಷ್ಟಾಗಿ ಇರದಿದ್ದುದೇ ಕಾರಣ. ಪುರಂದರ - ಕನಕರ ಕಡೆಗಾಲದಲ್ಲಿ ವಿಜಯನಗರ ಸಾಮ್ರಾಜ್ಯ ಮಣ್ಣುಗೂಡಿತಷ್ಟೆ. ಆಗ ಕಲೆಗಳೆಲ್ಲ ಕಾಡುಪಾಲಾದುವು. ವಿಜಯನಗರ ಸಾಮ್ರಾಜ್ಯದ ಉಚ್ಛ್ರಾಯ

ಸ್ಥಿತಿಯಲ್ಲಿ ಶಾಸ್ತ್ರೀಯ ಸಂಗೀತ ಅಲ್ಲಿನ ಅರಮನೆಯ ಆಸರೆಯಲ್ಲಿ ರೂಪುಗೊಂಡಿತು. ಹರಿದಾಸರು ಎಂದೂ ಅರಮನೆಯಿಂದ ದೂರವಿದ್ದವರು ತಾನೆ? ಶಾಸ್ತ್ರೀಯ ಸಂಗೀತದ ನಿರ್ಮಾಣದ ಕೆಲಸ ಆಸ್ಥಾನಕ್ಕೆ ಸೇರಿದ ರಸಿಕರಿಂದಲೂ ಪಂಡಿತರಿಂದಲೂ ನಡೆಯಿತು; ದಾಸರು ಪಂಡಿತರಿಗೂ ರಸಿಕರಿಗೂ ಆಗದವರೇ. ಹೀಗಾಗಿ ದಾಸರ ಕೃತಿಗಳು ನೇರವಾಗಿ ಸಂಪ್ರದಾಯ ಸಂಗೀತದ ಚೌಕಟ್ಟಿನಲ್ಲಿ ಸೇರಲಿಲ್ಲ. ವಿಜಯನಗರದ ಅರಸೊತ್ತಿಗೆ ಅಳಿದಮೇಲೆ, ಮತ್ತೆ ಈ ಶಾಸ್ತ್ರೀಯ ಸಂಗೀತ ತಲೆಯೆತ್ತಿದ್ದು ತಂಜಾವೂರಿನಲ್ಲಿ, ಏನಿಲ್ಲೆಂದರೂ ಸುಮಾರು ನೂರ ಐವತ್ತು ವರ್ಷಗಳ ನಂತರ. ತಂಜಾವೂರು ಕಲೆಯ ತೌರೂರಾದದ್ದು ಅಲ್ಲಿನ ನಾಯಕರಿಂದ. ಇವರ ಮನೆಮಾತು ತೆಲುಗು, ವ್ಯವಹಾರದಲ್ಲಿ ಬಳಕೆಯ ಮಾತು ಮರಾಠಿ; ಕನ್ನಡ ನಾಡಿನ ಮಂತ್ರಿಗಳಿದ್ದರೂ ಸಂಗೀತ ಸಾಹಿತ್ಯಗಳ ಹರವಿನಲ್ಲಿ ಕನ್ನಡ ಅಷ್ಟಾಗಿ ಕೂಡಿಕೊಳ್ಳಲಿಲ್ಲ. ಹೀಗಾಗಿ ವಿಜಯನಗರದ ಸುವರ್ಣಯುಗ ಕಳೆದ ಮೇಲೆ ದಾಸರ ಗೇಯಕೃತಿಗಳು ಉಳಿದು ಕೊಂಡುದೂ ಅಲ್ಪಸ್ವಲ್ಪವೆ; ಉಳಿದುಕೊಂಡುವಕ್ಕೂ ತಂಜಾವೂರಿನ ಸಂಪರ್ಕ ಒದಗಿದುದು ಕಡಮೆಯೆ. ಶಾಸ್ತ್ರೀಯ ಸಂಗೀತ ಅರಮನೆಯ ಪರಿಸರದಿಂದ ಬಿಡುಗಡೆ ಹೊಂದಿ ಮಹಾಜನರ ಸೇವೆಗೆ ಸಿದ್ಧವಾಗುವಾಗ, ಈ ಸಂಗೀತದ ರೂಪು ರೇಷೆಗಳನ್ನು ನಿರ್ಧರಿಸಿದವರು ತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರು, ಶ್ಯಾಮ ಶಾಸ್ತ್ರಿಗಳು, ಮತ್ತಿತರ ವಾಗ್ಗೇಯಕಾರರು. ಈ ಸಮಯದಲ್ಲಿ ಕನ್ನಡನಾಡಿನವರ ಕೊಡುಗೆ ದೊಡ್ಡದಾಗಿ ಎದ್ದು ಕಾಣುವುದಿಲ್ಲ.

ಈ ಶಾಸ್ತ್ರೀಯ ಸಂಗೀತದ ಕ್ಷೇತ್ರದಲ್ಲಿ ಮತ್ತೆ ದಾಸರ ಕೃತಿಗಳಿಗೆ ಪ್ರವೇಶ ದೊರೆತಾಗ ಆ ಕೃತಿಗಳು ಮೊದಲಿನ ಸ್ವರೂಪವನ್ನು ಬಿಟ್ಟು, ಆಗ ಬಳಕೆಗೆ ಬಂದ ಎನಿಕೆಯ ಪದ್ಧತಿಯ ಮೂಸೆಯಲ್ಲಿಯೆ ಬರಬೇಕಾಯಿತು. ದಾಸರ ಕೃತಿಗಳನ್ನು ತ್ಯಾಗರಾಜರ ಕೀರ್ತನೆಗಳ ಧಾಟಿಯಲ್ಲೆ, ಮೊದಲಚ್ಚಿನಲ್ಲೆ ಹಾಡುವ ಕಾತರ ಆಗಿನ ಸಂಗೀತ ವಿದ್ವಾಂಸರಿಗೆ ಇದ್ದುದು ಸೋಜಿಗವೇನಲ್ಲ. ನಮ್ಮ ಕಡೆ ಬಿಡಾರದ ಕೃಷ್ಣಪ್ಪನವರು ಶಾಸ್ತ್ರೀಯ ಸಂಗೀತ ಸಭೆಗಳಲ್ಲಿ ದಾಸರ ಪದಗಳನ್ನು ವಿಶೇಷವಾಗಿ ಹಾಡುವ ಪ್ರಯತ್ನ ಮಾಡಿದರಲ್ಲವೆ? ಅವರು ಹಾಡುತ್ತಿದ್ದ ಬಗೆ ಹೇಗೆ? ತ್ಯಾಗರಾಜ ಕೀರ್ತನೆಯ ಎರಕದಲ್ಲೆ. ಈಗಲೂ ಬಹುಮಟ್ಟಿಗೆ ದಾಸರ ಪದಗಳನ್ನು ಸಂಗೀತ ವಿದ್ವಾಂಸರು ನಿರೂಪಿಸುವುದು ಹೀಗೆಯೆ. ಇದರಿಂದ ದಾಸರಿಗೆ ಮರ್ಯಾದೆ ಸಲ್ಲಿಸಿದಂತಾಯಿತು ಎಂದವರ ಎಣಿಕೆಯಿದ್ದೀತು; ಆದರೆ ದಿಟವಾಗಿ ಇದು ದಾಸರಿಗೆ ಅಪಚಾರವೆ. ದಾಸರ ಕೃತಿಗಳಿಗೆ ಸಹಜವಾದ ಗೇಯ ಗುಣ, ಭಾವ, ನಿರೂಪಣ ಕ್ರಮ ಇವುಗಳನ್ನು ಎಳ್ಳಷ್ಟೂ ಗಮನಿಸದೆ ಮುಂದೆ ಎಂದೋ ಎಲ್ಲಿಯೋ ಸಿದ್ಧವಾದ ಕವಚದಲ್ಲಿ ಇವನ್ನು ತೂರಿಸಲೆತ್ನಿಸುವುದು ಎಷ್ಟರಮಟ್ಟಿಗೆ ಸಮಂಜಸವಾದೀತು? ಹೀಗೆ ದಾಸ ಸಾಹಿತ್ಯವನ್ನು ಅನುಚಿತವಾದ ಉತ್ಸಾಹಕ್ಕೆ ಬಲಿಗೊಡದೆ ಅದರ ಪಾಡಿಗೆ ಬಿಟ್ಟಿದ್ದರೆ ಎಷ್ಟೋ ಚೆನ್ನಾಗಿರುತ್ತಿತ್ತು!

ಈ ಇಬ್ಬರೂ ದಾಸರ ಕೃತಿಗಳು ಭಾವಪ್ರಧಾನವಾದುವು. ಜನರ ನೇರವಾದ ಸಂಪರ್ಕಕ್ಕೆ ಬಂದು ಆಡುಭಾಷೆಯಲ್ಲೇ ಬದುಕಿನ ಒಳಿತನ್ನು ತಿಳಿಯಹೇಳುವುದು ದಾಸರ ಉದ್ದೇಶ. ಹಾಗೆ ಹೇಳುವಾಗ ಅವರು ಬಳಸಿದ ಗೇಯ ಮಾಧ್ಯಮವು ಸರಳವಾಗಿ, ಸುಖಬೋಧವಾಗಿ, ಹೃದ್ಯವಾಗಿ ಇದ್ದುದು ಸಹಜವೆ. ಅವರ ಕೃತಿಗಳಲ್ಲಿ ಸಾಹಿತ್ಯವೇ ಮುಖ್ಯವಾದ ಅಂಶ; ಸಂಗೀತ ಗೌಣ. ಸಂಗೀತದ ಬಿರುಗಾಳಿಯಲ್ಲಿ ಸಾಹಿತ್ಯ ತೂರಿಹೋದರೆ ದಾಸಸಾಹಿತ್ಯದ ಸಾರ್ಥಕತೆಯೇ ಮರೆಯಾದಂತೆ.

ಮೇಲಾಗಿ ದಾಸಸಾಹಿತ್ಯ, ಉಳಿದ ಪ್ರಕಾರಗಳಂತೆ, ಮನೋರಂಜನೆಗಾಗಿ ಅಲ್ಲ, ವಿಲಾಸಿಗಳ ಓಲಾಟಕ್ಕಾಗಿ ಅಲ್ಲ. ತಂಜಾವೂರಿನ ಕಡೆ ಮೈದುಂಬಿ ಬಂದ ಶಾಸ್ತ್ರೀಯಸಂಗೀತದ ಪ್ರಯೋಗವಾದರೋ ರಸಿಕಶ್ರೀಮಂತರ ಒತ್ತಾಸೆಯಿಂದಲೆ. ಹಾಗೆಂದೇ ತ್ಯಾಗರಾಜರು, ಪುರಂದರದಾಸರ ಆದರ್ಶವನ್ನು ಎತ್ತಿ ಹಿಡಿದು, ಸಂಗೀತ ಇರುವುದು ಆತ್ಮೋದ್ಧಾರಕ್ಕಾಗಿ, ಭಗವತ್ಸೇವೆಗಾಗಿ ಎಂದು ಒತ್ತಿ ಹೇಳಬೇಕಾಯಿತು. 'ತಾಳ ಮೇಳಗಳಿದ್ದು ಪ್ರೇಮವಿಲ್ಲದ ಗಾನ'ವನ್ನು ಪುರಂದರದಾಸರು 'ಡಂಭಕದ ಕೂಗಾಟ' ವೆಂದು ಬಣ್ಣಿಸಿದಂತೆಯೆ ತ್ಯಾಗರಾಜರು 'ಸಂಗೀತಜ್ಞಾನಮು ಭಕ್ತಿ ವಿನಾ ಸನ್ಮಾರ್ಗಮು ಗಲದು' ಎಂದರು. ತ್ಯಾಗರಾಜರ ಸಾಧನೆಯ ಫಲವಾಗಿ ಶಾಸ್ತ್ರೀಯಸಂಗೀತವು ಭಗವದಾರಾಧನೆಯ ಪ್ರಕಾರವೆಂದೇ ಪರಿಗಣಿತವಾದರೂ ಉಳಿದ ವಾಗ್ಗೇಯಕಾರರ, ರಸಿಕರ ಒಲವು ಮನೋರಂಜನೆಯ ಕಡೆಗೇ ಇದ್ದಿತು; ಈಗಲೂ ಹಾಗೆಯೇ ಇದೆಯಷ್ಟೆ.

ದಾಸರ ಕೃತಿಗಳಲ್ಲಿ ಧಾರಾಳವಾದ ಗೇಯ ಗುಣವಿಲ್ಲದಿಲ್ಲ; ಎಷ್ಟೆಂದರೂ ಅವು ಹಾಡುಗಳು. ತಂಬೂರಿ, ಚಿಟಿಕೆ ಎರಡೂ ಹರಿದಾಸರಿಗೆ ಅಗತ್ಯವಾದ ಪರಿಕರಗಳೆ; ಕಾಲಿಗೆ ಗೆಜ್ಜೆಯೂ ಉಂಟು. ಹಾಡಿನಲ್ಲಿರುವ ಲಯ, ಗತಿ, ಗತ್ತು, ಪ್ರಾಸಬಂಧ ಇವೆಲ್ಲ ಮುಖ್ಯವಾದ ವಿವರಗಳೇ. ಆದರೆ ಕನಕದಾಸರ ಕೃತಿಗಳಲ್ಲಿ ಕಾವ್ಯಗುಣದ ಮೇಲ್ಮೆಯಿದೆಯೆಂಬುದನ್ನು ಮರೆಯಬಾರದು. ಅವರ ಮೋಹನ ತರಂಗಿಣಿಯೇ ಆಗಲಿ, ನಳಚರಿತ್ರೆಯೇ ಆಗಲಿ, ರಾಮಧಾನ್ಯ ಚರಿತ್ರೆಯೆ ಆಗಲಿ ಹೇಳಿ ಕೇಳಿ ಕಾವ್ಯಗಳು. ಹರಿಭಕ್ತಿಸಾರವೂ ಕಾವ್ಯವೇ. ಇಲ್ಲೆಲ್ಲ ಭಾಮಿನೀಷಟ್ಪದಿಯನ್ನು ಅವರು ನಿರ್ವಹಿಸಿರುವ ರೀತಿ ಸೊಗಸಾದದ್ದು. ಅಂಶವೃತ್ತವನ್ನಳವಡಿಸಿ ಛಂದಸ್ಸಿಗೆ ಒಗ್ಗಿ ಬಂದ ತ್ರಿಪದಿಯಾಗಲಿ, ಷಟ್ಪದಿಯಾಗಲಿ, ರಗಳೆಯಾಗಲಿ, ಸಾಂಗತ್ಯವಾಗಲಿ ಹಾಡಿಗೆ ತಕ್ಕದ್ದೇ; ಆದರೆ ಹಾಡಿಕೆಗೆ ಒಂದು ಸ್ಪಷ್ಟವಾದ, ನಿರ್ದಿಷ್ಟವಾದ ಚೌಕಟ್ಟನ್ನು ಛಂದಸ್ಸು ಒದಗಿಸುತ್ತದೆ. ಪದಬಂಧವನ್ನು ಬೇಕಾದಂತೆ ಎಳೆದಾಡಲಾಗದು. ಭಾಮಿನಿಷಟ್ಪದಿ ಕನಕದಾಸರಿಗೆ ಪ್ರಿಯವಾದ ಛಂದೋ ವಿಶೇಷವೆಂದು ತೋರುತ್ತದೆ. ಅವರ ಕಾವ್ಯರಚನೆ ಬಹುಮಟ್ಟಿಗೆ ಇದರಲ್ಲೆ ನಡೆದಿರುವುದು. ಅವರ ಬಿಡಿ ಕೀರ್ತನೆಗಳಲ್ಲೂ ಇದರ ಒಂದು ಬಗೆಯ ಬಳಕೆ ಕಾಣಸಿಗುತ್ತದೆ. ಸಾಂಗತ್ಯವೂ ಅವರಿಗೆ ಇಷ್ಟವೆಂದೇ ಕಾಣುತ್ತದೆ. ಅದರಲ್ಲಿ ಅವರ ರಚನೆಯೆನ್ನಲಾದ ನೃಸಿಂಹಸ್ತವ ಇಂದು ಉಪಲಬ್ಧವಿಲ್ಲ. ಮತ್ತೆ ಕಂದಪದ್ಯಗಳು, ಸೀಸಪದ್ಯಗಳು, ಎಳೆಗಳು ಅವರ ಕೃತಿರಚನೆಯ ಮೇಲೆ ಪ್ರಭಾವವನ್ನು ಬೀರಿವೆ.

ಕನಕದಾಸರ ಪದಗಳನ್ನು ಹಾಡುವಾಗ ಛಂದಸ್ಸಿನ ಬಿಕ್ಕಟ್ಟನ್ನು ಗಮನಿಸಲೇಬೇಕು. ಅದಲ್ಲದೆ, ಇವರ ಕೃತಿಗಳಲ್ಲಿ ಅರ್ಥದ ಹರವು, ಭಾವದ ಬೆಡಗು ಎದ್ದು ಕಾಣುವುದರಿಂದ, ಹಾಡಿಕೆ ಅವನ್ನು ಮರೆಮಾಚದಿರಬೇಕು. ಪ್ರಧಾನವಾಗಿ, ಕನಕದಾಸರ ಬಿಡಿರಚನೆಗಳು ಜಾನಪದಪದ್ಧತಿಯಿಂದ ದೂರವಲ್ಲದೆ ಇವೆ. ದಶಾವತಾರವನ್ನು ಜಾನಪದ ಧಾಟಿಯಲ್ಲಿ ಬಣ್ಣಿಸಿರುವ

"ದೇವಿ ನಮ್ಮ ದ್ಯಾವರು ಬಂದರು
ಬನ್ನಿರೆ ನೋಡ ಬನ್ನಿರೆ"

ಎನ್ನುವ ಕೃತಿಯನ್ನು ನೋಡಿ. ಇದು ಬೀರೇದೇವರ ಡೊಳ್ಳು ಕುಣಿತಕ್ಕೆ ಎಷ್ಟು ಚೆನ್ನಾಗಿ ಹೊಂದಿಕೊಳ್ಳುತ್ತದೆ ಎಂಬುದನ್ನು ಗಮನಿಸಬೇಕು. ಆದಿ, ಅಟ್ಟ, ಝಂಪೆ ಮೊದಲಾದ ತಾಳಗಳನ್ನು ಅವರು ಲೀಲಾಜಾಲವಾಗಿ ನಿರ್ವಹಿಸುತ್ತಾರೆ. ಮಾತುಗಳಲ್ಲಿ ಲಯದ ಬಿಕ್ಕಟ್ಟು ಮಾರ್ಮಿಕವಾಗಿ ಸಹಜವಾಗಿ ಬರುತ್ತದೆ. ನಿದರ್ಶನಕ್ಕೆ

"ಈಶ ನಿನ್ನ ಚರಣಭಜನೆ
ಆಶೆಯಿಂದ ಮಾಡುವೇನು
ದೋಷರಾಶಿ ನಾಶಮಾಡೊ
ಶ್ರೀಶ ಕೇಶವ"

ಎಂದು ಮೊದಲಾದ ಆದಿತಾಳದ ದ್ವಾದಶ ನಾಮ ಸಂಕೀರ್ತನೆಯಾಗಲಿ,

"ಕೇಶವನೊಲುಮೆಯು ಆಗುವ ತನಕ ಹರಿ
ದಾಸರೊಳಿರುತಿರು ಹೇ ಮನುಜ"

ಎಂದು ಮೊದಲಾಗುವ ಅಟ್ಟತಾಳದ ಕೃತಿಯನ್ನಾಗಲಿ,

"ಕಂಡೆ ನಾ ತಂಡತಂಡದ ಹಿಂಡು ದೈವ ಪ್ರಂಚಂಡರಿಪು
ಗಂಡ ಉದ್ದಂಡ ನರಸಿಂಹನ ಕಂಡೆನಯ್ಯ"

ಎಂಬ ಝಂಪೆತಾಳದ ಕೃತಿಯನ್ನಾಗಲಿ ನೋಡಬಹುದು. ಇವೆಲ್ಲ ಜಾನಪದ ಚೌಕಟ್ಟಿನಲ್ಲೇ ಬೆಳಗಬೇಕು. ಇವನ್ನು ಸಂಪ್ರದಾಯದ ಶಾಸ್ತ್ರೀಯ ಸಂಗೀತ ಸಭೆಗಳಲ್ಲಿ ಹಾಡುವುದಕ್ಕಿಂತ ಭಜನೆ ಪದ್ಧತಿಯಲ್ಲಿ ಹಾಡಿದರೆ ಸೊಗಸು. ಮಾತಿನ ಮೋಡಿ, ಬೀಗುವ ಭಾವ ಎರಡನ್ನೂ ಮರೆಸದಂತೆ ಸಂಗೀತ ಇರಬೇಕು. ಆದ್ದರಿಂದ ಕನಕದಾಸರ ಕೃತಿಗಳನ್ನು ಹಾಡುವವರಿಗೆ ಕಾವ್ಯಗುಣದ, ಛಂದಸ್ಸಿನ, ಅರ್ಥಪುಷ್ಟಿಯ, ಭಾವದ ಪರಿಚಯ ಚೆನ್ನಾಗಿ ಇರಬೇಕಾಗುತ್ತದೆ. ಬಳಸುವ ರಾಗವಾಗಲಿ, ತಾಳವಾಗಲಿ ಇವೆಲ್ಲ ವಿವರಗಳನ್ನು ಅವಲಂಬಿಸಿಯೆ ಇರಬೇಕು. 'ತಿಳಿದು ಪಾಡಲಿ ಬೇಕು'. ❐

ಅಧ್ಯಾಯ ನಾಲ್ಕು

ಇತಿಹಾಸದ ಇಕ್ಕಟ್ಟಿನಲ್ಲಿ

೧

ದಕ್ಷಿಣದೇಶದ ಇತಿಹಾಸದಲ್ಲಿ ವಿಜಯನಗರ ಸಾಮ್ರಾಜ್ಯ ಮೂಡಿಕೊಂಡದ್ದು, ಬೆಳೆದು ಬಂದದ್ದು, ಮುಳುಗಿ ಮರೆಯಾದದ್ದು ಪ್ರಮುಖ ಘಟ್ಟಗಳು. ಎಲ್ಲ ಸಾಮ್ರಾಜ್ಯಗಳಂತೆ ಈ ಸಾಮ್ರಾಜ್ಯದಲ್ಲಿಯೂ ಅರಸೊತ್ತಿಗೆಗಳ ಏರಾಟವಿದ್ದಿತು, ಅಧಿಕಾರಗಳ ಒಳಸಂಚಿದ್ದಿತು, ಕದನದ ಕುತೂಹಲವಿದ್ದಿತು, ದಾಳಿದಂಗೆಗಳ ಬೆದರಿಕೆಯಿದ್ದಿತು, ಆಡಳಿತದ ಒಡಕು-ಬಿರುಕುಗಳಿದ್ದುವು. ಆದರೆ ಇವೆಲ್ಲ ಮುಖ್ಯವಾದ ವಿವರಗಳೆನಿಸುವುದಿಲ್ಲ. ಈ ಸಾಮ್ರಾಜ್ಯದ ಉನ್ನತಿ-ಅವನತಿಗಳು ಜನಜೀವನದ ಮೇಲೆ ಬೀರಿದ ಪ್ರಭಾವ ಮುಖ್ಯವಾದುದು. ಹೆಚ್ಚೂ ಕಡಮೆ, ಇಡೀ ದಕ್ಷಿಣ ಭೂಭಾಗವೆಲ್ಲ ಸಾಂಸ್ಕೃತಿಕವೆಂದು ಗುರುತಿಸಬಹುದಾದ ನೆಲೆಯಲ್ಲಿ ಒಂದುಗೂಡಿದುದು ಈ ಸಾಮ್ರಾಜ್ಯದ ಆಸರೆಯಲ್ಲೇ. ವಿಜಯನಗರ ಸಾಮ್ರಾಜ್ಯವೇನೋ ಪ್ರಬಲವಾದ, ವ್ಯಾಪ್ತವಾದ ರಾಜ್ಯವೇ. ಆದರೆ ಅಲ್ಲಲ್ಲಿ ಸಣ್ಣ ಪುಟ್ಟ ಪಾಳೆಯಪಟ್ಟುಗಳೂ, 'ನಾಯಂಕರ'ಗಳೂ (ನಾಯಕರ ಆಡಳಿತಕ್ಕೆ ಒಳಪಟ್ಟ ಪ್ರದೇಶಗಳು), ಮಂಡಲೇಶ್ವರರ ಸಂಸ್ಥಾನಗಳೂ, ದುರ್ಗಾಧಿಪತಿಗಳ ಬೀಡು ಬತೇರಿಗಳೂ ಇದ್ದವು; ಇವುಗಳ ನಡುವೆ ಹಗರಣಗಳೂ ಇದ್ದುವು. ಆದರೂ ಇವನ್ನೆಲ್ಲ ಮೀರಿ ಜನರಲ್ಲಿ ಸಂಸ್ಕೃತಿಯ ಹರವಿಗೆ ನೆರವಾದುದು ಸಾಮ್ರಾಜ್ಯದ ಅರಸರ ವಿಶೇಷಗುಣ. ಸಾಹಿತ್ಯ, ಸಂಗೀತ, ಶಿಲ್ಪ, ವಾಸ್ತು, ಚಿತ್ರ, ಕುಶಲಕರಕಲೆ, ಶಾಸ್ತ್ರ ಶಿಕ್ಷಣ, ಧರ್ಮ, ಆಚಾರ, ವಿಚಾರ ಇವಕ್ಕೆಲ್ಲ ಒಂದು ಗೊತ್ತುಗುರಿ ಒದಗಿಬಂದುದು ಈ ಅರಸರ ಒತ್ತಾಸೆಯಿಂದ. ಇಡೀ ದಕ್ಷಿಣದೇಶದ ಜನರಿಗೆಲ್ಲ ಈ ವಿವರಗಳ ಅನ್ವಯವಾದುದೂ ಅವರ ಹಂಬಲದಿಂದಲೇ. 'ಮಾರ್ಗೀ' ಸಂಸ್ಕೃತಿಯು 'ದೇಸೀ' ಸಂಸ್ಕೃತಿಯಾದದ್ದು ಈ ಸಾಮ್ರಾಜ್ಯದ ವಿಶಿಷ್ಟಸಾಧನೆ.

ಪುರಂದರದಾಸರ ಕಾಲ, ದೇಶಗಳಿಗೂ ವಿಜಯನಗರ ಸಾಮ್ರಾಜ್ಯದ ಉನ್ನತಿ, ಅವನತಿಗಳಿಗೂ ನಂಟು ಉಂಟು. ಪುರಂದರದಾಸರ ಕಾಲಮಾನ (ಸ್ವಾಮಿಕಣ್ಣು ಪಿಳ್ಳೆಯವರ ಗುಣಿತದಂತೆ) ೧೪೮೪ರಿಂದ ೧೫೬೪ರ ನಡುವೆ; ಅವರಿದ್ದುದು ಬಹುಮಟ್ಟಿಗೆ ಹಂಪಿಯಲ್ಲೇ, ವಿಜಯನಗರ ಸಾಮ್ರಾಜ್ಯ ಮೈದಳೆದದ್ದು ಮೊದಲನೆಯ ಬುಕ್ಕ ಮಹಾರಾಯನ ಕಾಲದಲ್ಲಿ, ಎಂದರೆ ೧೩೫೫-೧೩೭೭ರ ಸುಮಾರಿಗೆ. ದಾಸರು ಹುಟ್ಟುವ ಕಾಲಕ್ಕೇ ಸಾಮ್ರಾಜ್ಯ ಸುಭದ್ರವಾಗಿ ನಿಂತು,

ಬೆಳೆಯುತ್ತಲಿದ್ದಿತು; ಆದರೆ ಅದರ ವೈಭವ ಇನ್ನೂ ಮುಗಿಲು ಮುಟ್ಟಿರಲಿಲ್ಲ. ಸಾಳುವ ನರಸಿಂಹದೇವ ಪಟ್ಟಕ್ಕೆ ಬಂದುದೂ, ಪುರಂದರದಾಸರು ಹುಟ್ಟಿದುದೂ ಸುಮಾರು ಒಂದೇ ಕಾಲದಲ್ಲಿ. ಸಾಮ್ರಾಜ್ಯದ ಹಿರಿಮೆಯನ್ನು ಗಗನಕ್ಕೇರಿಸಿದ ಕೃಷ್ಣದೇವರಾಯ ಮಹಾರಾಯನು ಪಟ್ಟವನ್ನೇರಿದಾಗ (೧೫೦೯ರಲ್ಲಿ) ಪುರಂದರದಾಸರು ಹರೆಯವನ್ನು ಮುಟ್ಟಿದ್ದರು. ಅವರ ಪ್ರಖ್ಯಾತಿಯೂ ಅರಸನ ಗಮನಕ್ಕೆ ಬಂದಿದ್ದಿತು. ಕೃಷ್ಣದೇವರಾಯ ಮಹಾರಾಯನು ಸಾಧಿಸಿದ ಸುವರ್ಣಯುಗದುದ್ದಕ್ಕೂ ದಾಸರು ಬದುಕಿಬಾಳಿದರು. ಈ ಅರಸನು ೧೫೩೦ರಲ್ಲಿ ಕಣ್ಣುಮುಚ್ಚಿಕೊಂಡು ವೈಭವದ ಪರ್ವಕ್ಕೆ ತೆರೆ ಸರಿಸಿದಾಗ ದಾಸರು ಮುಪ್ಪಿಗೆ ಸಮ್ಮುಖರಾಗಿದ್ದರು. ಮುಂದೆ ಅಚ್ಯುತರಾಯನ ಕಾಲದಿಂದ ಅರವೀಡು ಮನೆತನದ ಅಳಿಯ ರಾಮರಾಯನ ಕಾಲದವರೆಗೆ ಸಾಮ್ರಾಜ್ಯದ ಕಳೆ ಕೆಳಮುಖವಾಗಿ, ಜನಜೀವದಲ್ಲಿ ನೆಮ್ಮದಿ ತಪ್ಪಿ, ಆಡಳಿತದಲ್ಲಿ ಆತಂಕ ಕಾಡುತ್ತಿದ್ದಾಗ ದಾಸರು ಮುದುಕರು. ಅವರು ತೀರಿಕೊಂಡ ವರ್ಷವೇ, ಅಥವಾ ಮರುವರ್ಷವೇ ವಿಜಯನಗರ ಸಾಮಾಜ್ಯವನ್ನು ಮಣ್ಣುಗೂಡಿಸಿದ ರಕ್ಕಸತಂಗಡಿ-ಕದನ (ಮುಸಲ್ಮಾನ ಬರಹಗಾರರ ಮಾತಿನಲ್ಲಿ ತಾಳಿಕೋಟೆ ಕದನ) ನಡೆದುದು! (೧೫೬೫)

ಹೀಗೆ ಸಾಮ್ರಾಜ್ಯದ ಉನ್ನತಿ, ಅವನತಿಗಳನ್ನು ಕಂಡವರು ಪುರಂದರದಾಸರು. ಬಾಳುವೆಯ ಬೆಳಗಿನ ಹೊತ್ತು ಅವರ ಅರಿವಿಗೆ ಬಂದುದು ಆಳರಸರಿಂದ ಊಳಿಗದವರವರೆಗೆ, ನಗರದಿಂದ ಗ್ರಾಮದವರೆಗೆ, ಕೇರಿ ಕೇರಿಗಳಲ್ಲಿ, ದಿನನಿತ್ಯದ ಬದುಕಿನಲ್ಲಿ ಹರಡಿಕೊಳ್ಳುತ್ತಿದ್ದ ಸಂಸ್ಕೃತಿಯ ಹರವು. ಅವರಿಗೆ ಮನದಟ್ಟಾದುದು ಇದರ ಸ್ವಾರಸ್ಯ. ನಿತ್ಯಜೀವನದಲ್ಲಿ ನೆಲೆಗೊಂಡಿದ್ದ ನೆಮ್ಮದಿಯನ್ನು ಕೊಚ್ಚಿಕೊಂಡು ಹೋದ ರಾಜಕಾರಣ ವಿಪ್ಲವದ ನೆರೆ ನುಗ್ಗಿ ಬರುವಾಗಲೂ ದಾಸರ ಬಾಳಕತೆಯಿನ್ನೂ ಮುಗಿದಿರಲಿಲ್ಲ; ಬಾಳುವೆಯ ಇಳಿಹೊತ್ತನ್ನು ಮುಟ್ಟಿದ್ದರು ಅಷ್ಟೆ. ಅರಸರ ಆಸರೆ ತಪ್ಪಿದ ಸಂಸ್ಕೃತಿಗೆ ತಮ್ಮ ಹರಿದಾಸ್ಯದ ಊರುಗೋಲನ್ನು ಕೊಟ್ಟು ನಿಲ್ಲಿಸುವ ಸಾಹಸದಲ್ಲಿ ತಮ್ಮ ಕಡೆಗಾಲವನ್ನು ಸವೆಸಿದರು. ಸುಭದ್ರವಾಗಿ, ವೈಭವದಿಂದ ಮೆರೆದ ಮಹಾಸಾಮ್ರಾಜ್ಯದ ತಳ ಕುಸಿದುಬಿದ್ದುದನ್ನು ಕಣ್ಣಾರೆ ಕಂಡರು. ಇಂಥ ಸೌಭಾಗ್ಯದ ಭ್ರಮೆಯನ್ನು ನೆಚ್ಚಬೇಡಿರೆಂದು ಜನರನ್ನು ಎಚ್ಚರಿಸುವ ಕೆಲಸವನ್ನೇ ಕೈಗೊಂಡರು.

ವಿಜಯನಗರ ಸಾಮ್ರಾಜ್ಯ ಕಂಗಾಲಾಗಿ, ಅದರ ವೈಭವ ಕಾಡುಪಾಲಾದ ಮೇಲೆ ಸುಮಾರು ಒಂದು ನೂರು ವರ್ಷಗಳು ದಕ್ಷಿಣದೇಶಕ್ಕೆ ಕಷ್ಟದ ಕಾಲವೇ. ಸಾಳುವ-ತುಳುವ-ಅಳಿಯ ಅರಸೊತ್ತಿಗೆಗಳು ಮರೆಯಾದುವೆಂದಲ್ಲ; ಇತಿಹಾಸದಲ್ಲಿ ಯಾವ ಅರಸೊತ್ತಿಗೆಗೂ ಉಳಿಗಾಲವಿಲ್ಲ. ಆದರೆ ಜನಜೀವನದಲ್ಲಿ ಒದಗಿದ್ದ ನೆಮ್ಮದಿ ತಪ್ಪಿತು; ವ್ಯಾಪಕವಾಗಿ ಹರಡಿಕೊಳ್ಳುತ್ತಿದ್ದ ಸಂಸ್ಕೃತಿಗೆ ತೊಡರುಗಳು ಒದಗಿಬಂದುವು. ಆಡಳಿತದಲ್ಲಿ ಅವ್ಯವಸ್ಥೆ, ಆರ್ಥಿಕವಾಗಿ ಅತಂತ್ರ, ಧರ್ಮದಲ್ಲಿ ಗೊಂದಲ, ವ್ಯವಹಾರದಲ್ಲಿ ಅನೀತಿ ಇವೆಲ್ಲವನ್ನೂ ದಾಸರು ಸಾಮ್ರಾಜ್ಯದ ಅವನತಿಯ ದಿನಗಳಲ್ಲೇ ಕಂಡಿದ್ದರು. ಈಗಂತೂ ಅದು ದಡ ಕುಸಿದ ನದಿಯ ಪ್ರವಾಹದಂತೆ ಹುಚ್ಚೆದ್ದು ಹರಿಯತೊಡಗಿತು. ಸಾಮ್ರಾಜ್ಯದ ವೈಭವ ಮಣ್ಣುಪಾಲಾದಾಗಲೇ ದಾಸರ ಸೇವೆಯೂ ಕಣ್ಮರೆಯಾಯಿತು. ಸಾಮ್ರಾಜ್ಯದ ಉತ್ತರಾಧಿಕಾರಿಗಳಾದ ಅರಸರೇನೋ ತಲೆತಪ್ಪಿಸಿಕೊಂಡು ದೂರ ದೂರ ಓಡಿ ಉಳಿದು ಕೊಂಡರು. ದಾಸರ ಸೇವೆಯ ಉತ್ತರಾಧಿಕಾರಿಗಳು ಏನಾದರೋ, ಎಲ್ಲಿ ಹೋದರೋ ತಿಳಿಯದು.

ಪುರಂದರದಾಸರ ಹೆಸರು ಮೊಟ್ಟಮೊದಲಿಗೆ ನಮ್ಮ ಗಮನಕ್ಕೆ ಬರುವುದು ಬಳ್ಳಾರಿ ಜಿಲ್ಲೆಯ ಕಮಲಾಪುರದ (ಕಂಪಲಿಯ) ತಾಮ್ರ ಶಾಸನದಲ್ಲಿ. ಪಾಂಡುರಂಗರಾವ್ ದೇಸಾಯಿಯವರಿಂದ ಪತ್ತೆಯಾದ ಈ ಶಾಸನ ಎಪಿಗ್ರಾಫಿಯ ಇಂಡಿಕದಲ್ಲಿ (ಸಂ. ೨೧. ಪುಟಗಳು ೧೩೯ಮುಂದೆ) ಪ್ರಕಟವಾಗಿದೆ. ಈ ಶಾಸನ ಹೊರಟಿದ್ದು ಶಾಲಿವಾಹನ ಶಕ ೧೪೪೭ ಪಾರ್ಥಿವ ಸಂವತ್ಸರದ ಫಾಲ್ಗುಣಮಾಸದ ಶುದ್ಧ ದ್ವಾದಶಿಯಂದು, ಎಂದರೆ ೧೫೨೬ ಫೆಬ್ರವರಿ ೨೪ರಂದು. ಪುರಂದರದಾಸರು ಬದುಕಿದ್ದಾಗಲೇ ಹೊರಟ ಶಾಸನ ಇದು. ಆಗ ವಿಜಯನಗರದ ಅರಸನಾಗಿದ್ದ ಕೃಷ್ಣ ದೇವರಾಯನು ತುಂಗಭದ್ರಾ ತೀರದ ಹಂಪಿಯ ವಿಠ್ಠಲೇಶ್ವರ ಸನ್ನಿಧಿಯಲ್ಲಿ ರಾಜ ಗುರುಗಳಾಗಿದ್ದ ವ್ಯಾಸತೀರ್ಥರಿಗೆ (ಎಂದರೆ ಪುರಂದರದಾಸರ ದೀಕ್ಷಾಗುರುಗಳಿಗೆ) 'ವ್ಯಾಸಸಮುದ್ರ' ಎಂಬ ನಾಮಾಂಕಿತದ ಬೆಟ್ಟಕೊಂಡಗ್ರಾಮವನ್ನು ಸರ್ವಮಾನ್ಯ ಏಕಭೋಗ್ಯ ದತ್ತಿಯನ್ನಾಗಿ ಕೊಟ್ಟಿದ್ದನು. ಈ ದತ್ತಿಯನ್ನು ಪಡೆದುಕೊಂಡ ವ್ಯಾಸತೀರ್ಥರು ಅದನ್ನು ಮುನ್ನೂರ ಎಂಟು ವಿದ್ವಾಂಸರಿಗೆ ವೃತ್ತಿಗಳನ್ನಾಗಿ (ವಿದ್ಯಾದಾನ) ಹಂಚಿಕೊಟ್ಟದ್ದನ್ನು ಈ ಶಾಸನ ತಿಳಿಸುತ್ತದೆ.

ಹೀಗೆ ವ್ಯಾಸತೀರ್ಥರಿಂದ ವೃತ್ತಿಗಳನ್ನು ಪಡೆದುಕೊಂಡ ವಿದ್ವಾಂಸರಲ್ಲಿ "ಶ್ರೀ ಪುರಂದರದಾಸ" ರಾದ (ಎಂದರೆ ಪುರಂದರದಾಸರ ಮಕ್ಕಳಾದ) ಮೂವರ ಹೆಸರುಗಳಿವೆ; ಲಕ್ಷ್ಮಣದಾಸ (೧೭೫), ಹೇಬ(ವ)ಣದಾಸ (೨೯೧) ಮತ್ತು ಮಧ್ವಪದಾಸ (೨೯೨) ಇವರು ಮೂವರನ್ನೂ ವಸಿಷ್ಠ ಗೋತ್ರದವರೆಂದೂ ಯಾಜುಷಶಾಖೆಯವರೆಂದೂ ವಿದ್ವಾಂಸರೆಂದೂ ಶಾಸನ ಒಕ್ಕಣಿಸುತ್ತದೆ. ಪುರಂದರದಾಸರು ಬದುಕಿದ್ದರೂ, ವ್ಯಾಸತೀರ್ಥರಿಂದ ಆ ವೇಳೆಗಾಗಲೆ ಹರಿದಾಸ ದೀಕ್ಷೆಯನ್ನು ತಳೆದಿದ್ದರೂ (ಶಾಸನದಲ್ಲಿ "ಶ್ರೀ ಪುರಂದರದಾಸಜ"ರೆಂದೇ ಪದವಿದೆ), ಪ್ರಖ್ಯಾತರಾಗಿದ್ದರೂ ಅವರಿಗೆ ವೃತ್ತಿಯನ್ನೇನೂ ಒದಗಿಸಿಲ್ಲ; ಅವರು ತೀರ ವಿರಕ್ತರಾಗಿದ್ದರೆಂದು ತೋರುತ್ತದೆ. ಅವರ ಮೂವರು ಮಕ್ಕಳನ್ನೂ ದಾಸರೆಂದೇ ವಿಶೇಷಣ ಹಚ್ಚಿ ಕರೆದಿರುವುದರಿಂದ ಅವರಿಗೂ ಹರಿದಾಸದೀಕ್ಷೆ ಆಗಲೇ ಒದಗಿದ್ದಿರಬೇಕು. ಈ ಶಾಸನವನ್ನು ಬಿಟ್ಟರೆ ಪುರಂದರದಾಸರನ್ನು ಉಲ್ಲೇಖಿಸುವ ಮತ್ತೊಂದು ಶಾಸನ ದೊರೆಯುವುದಿಲ್ಲ. ಈ ಶಾಸನವೂ ಅವರ ಕಾಲನಿರ್ಣಯಕ್ಕೆ ನೆರವಾಗುತ್ತದೆ ಅಷ್ಟೆ; ಮತ್ತೇನು ಅದರಿಂದ ಬೆಳಕು ದೊರೆಯಲಾರದು. ಕೃಷ್ಣದೇವರಾಯನು ಆಳುತ್ತಿದ್ದಾಗ (೧೫೦೯-೧೫೩೦) ಪುರಂದರದಾಸರ ಮೂವರು ಮಕ್ಕಳು ಹಂಪಿಯಲ್ಲೇ ಇರುತ್ತಿದ್ದು ವೃತ್ತಿದಾನಕ್ಕೆ ಯೋಗ್ಯತೆಯನ್ನು ಪಡೆದುಕೊಂಡಿದ್ದರೆಂಬುದು ಶಾಸನದಿಂದ ಸ್ಪಷ್ಟವಾಗುವ ವಿವರ. ಈ ವಯಸ್ಸಿನ ಮೂವರು ಮಕ್ಕಳ ತಂದೆಯಾದ ಪುರಂದರದಾಸರು ಆ ವೇಳೆಗೆ ನಡುವಯಸ್ಸಿನವರಾದರೂ ಆಗಿದ್ದಿರಬೇಕು; ಆ ವೇಳೆಗೆ ಬಹುಶಃ ಹಂಪಿಯಲ್ಲಿರದೆ, ಕ್ಷೇತ್ರ ಪರ್ಯಟನ ಮಾಡುತ್ತಿದ್ದಿರಬಹುದು. ವ್ಯಾಸತೀರ್ಥರಿಂದಲೇ ಪುರಂದರದಾಸರ ಮಕ್ಕಳಿಗೂ ದಾಸದೀಕ್ಷೆ ದೊರಕಿರಬಹುದು.

ಇತಿಹಾಸದ ಎಳೆಗಳಲ್ಲಿ ಪುರಂದರದಾಸರ ಪ್ರಸ್ತಾಪವನ್ನು ಎರಡನೆಯ ಬಾರಿ ನಾವು ಕಾಣುವುದು, ಅವರ ಕಾಲದಲ್ಲೇ ಬದುಕಿದ್ದ ತೆಲುಗು ಕವಿ ತಾಳ್ಲಪಾಕಂ ಚಿನ್ನ ತಿರುವೇಂಗಳನಾಥನು ತನ್ನ ಅಜ್ಜ ಅಣ್ಣಮಾಚಾರ್ಯರನ್ನು ಕುರಿತು ಬರೆದ ದ್ವಿಪದ ಪ್ರಬಂಧವೊಂದರಲ್ಲಿ. ಇಲ್ಲಿ ಬರುವ ಒಕ್ಕಣೆಯಂತೆ, ತಿರುಮಲೆ-ತಿರುಪತಿಯ ದೇವಾಲಯದಲ್ಲಿ ಪುರಂದರದಾಸರು ಅಣ್ಣಮಾಚಾರ್ಯರನ್ನು

ಕಂಡು ಮಾತುಕತೆ ನಡೆಸಿದರು. ತಾಳ್ಳಪಾಕಂ ಅಣ್ಣಮಾಚಾರ್ಯರು (೧೪೦೮-೧೫೦೩) ತಿರುಮಲೆಯ ವೆಂಕಟೇಶ್ವರನ ಗುಡಿಯಲ್ಲಿ ಸಂಕೀರ್ತನಸೇವೆ ಮಾಡಿಕೊಂಡು ಇರುತ್ತಿದ್ದವರು. ವೇಂಕಟೇಶ್ವರನ ಅಂಕಿತದಲ್ಲೇ ಸಾವಿರಾರು ಕೃತಿಗಳನ್ನು ರಚಿಸಿದರು. ಮುಂದೆ ಅವರ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಎಲ್ಲರೂ ಇದೇ ಸೇವೆಯನ್ನು ಮುಂದುವರಿಸಿಕೊಂಡುಬಂದರು; ಸ್ವತಃ ಕವಿಗಳಾಗಿ ಕೃತಿಗಳನ್ನೂ ರಚಿಸಿದರು.

ಅಣ್ಣಮಾಚಾರ್ಯರ ಮಗ ಪೆದತಿರುಮಲಾಚಾರ್ಯ ಎಂಬವರ ನಾಲ್ಕನೆಯ ಮಗನೇ ಮೇಲೆ ಹೇಳಿದ ಚಿನ್ನತಿರುವೇಂಗಳನಾಥ (ಚಿನ್ನನ್ನ). ಇವನು ಹುಟ್ಟಿದ ವರ್ಷ ೧೪೯೮ಎಂದು ತಿಳಿದುಬರುತ್ತದೆ. ಇವನಿಗೆ ಬ್ರಹ್ಮೋಪದೇಶವನ್ನೂ, ಮೊದಲ ಸಂಸ್ಕೃತ ಶಿಕ್ಷಣವನ್ನೂ, ಅಜ್ಜ ಅಣ್ಣಮಾಚಾರ್ಯರೇ ಒದಗಿಸಿದರೆಂದು ಹೇಳಿಕೊಂಡಿದ್ದಾನೆ. ತನ್ನ ಅಜ್ಜನನ್ನು ಕುರಿತು ತೆಲುಗಿನಲ್ಲಿ ನಾಲ್ಕು ದ್ವಿಪದ ಪ್ರಬಂಧಗಳನ್ನು ರಚಿಸಿದ್ದಾನೆ. ಅವುಗಳಲ್ಲಿ ಒಂದು ಪ್ರಬಂಧ ತನ್ನ ಅಜ್ಜ ಅಣ್ಣಮಾಚಾರ್ಯರಿಗೂ ಹರಿದಾಸರಾದ ಪುರಂದರದಾಸರಿಗೂ ನಡೆದ ಭೇಟಿಯನ್ನು ಉಲ್ಲೇಖಿಸಿದೆ. ತಿರುಮಲೆಗೆ ಮತ್ತೆ ಮತ್ತೆ ಬರುತ್ತಿದ್ದ ಪುರಂದರದಾಸರು ಒಮ್ಮೆ ಬಂದಾಗ ಅಲ್ಲಿ ಹಣ್ಣು ಹಣ್ಣು ಮುದುಕರಾಗಿದ್ದ ಅಣ್ಣಮಾಚಾರ್ಯರನ್ನು ಕಂಡರಂತೆ. ಅಣ್ಣಮಾಚಾರ್ಯರು ದೇವರೆದುರು ನಿಂತು ಮಾಡಿದ ಸಂಕೀರ್ತನ ಸೇವೆಯನ್ನು ದಾಸರು ತುಂಬ ಮೆಚ್ಚಿಕೊಂಡು "ಸಾಕ್ಷಾತ್ ವೇಂಕಟೇಶ್ವರನನ್ನೇ ಕಂಡಂತಾಯಿತು" ಎಂದು ಹೇಳಿದರಂತೆ. ಅನಂತರ ಅಣ್ಣಮಾಚಾರ್ಯರ ಅಪೇಕ್ಷೆಯಂತೆ ಅವರು ತಮ್ಮ ಕನ್ನಡ ದೇವರ ನಾಮಗಳನ್ನು ಹಾಡಿದಾಗ, ಅಣ್ಣಮಾಚಾರ್ಯರು "ದಿವ್ಯವಾದ ಗಾನ, ಪಾಂಡುರಂಗ ವಿಠಲನೇ ಎದುರಿಗೆ ನಿಂತಂತಿದೆ" ಎಂದು ಹೇಳಿದರಂತೆ.

ತಾಳ್ಳಪಾಕಂ ಅಣ್ಣಮಾಚಾರ್ಯರೇನೋ ದೀರ್ಘಜೀವಿ. ತಮ್ಮ ಹದಿನಾರನೆಯ ವಯಸ್ಸಿನಲ್ಲಿ ಭಗವಂತನ ಸಾಕ್ಷಾತ್ಕಾರವಾಗಿ ಮುಂದೆ ಎಂಬತ್ತು ವರ್ಷಗಳು ತಿರುಮಲೆಯ ವೇಂಕಟೇಶ್ವರನ ಸನ್ನಿಧಿಯಲ್ಲೇ ನಿಂತು ಸಂಕೀರ್ತನಸೇವೆ ನಡೆಸಿದರೆಂದು ಉಲ್ಲೇಖವಿದೆ. ತೀರಿಕೊಂಡಾಗ ಅವರಿಗೆ ತೊಂಬತ್ತೊಂಬತ್ತು ವರ್ಷಗಳು. ದೇವಾಲಯದಲ್ಲಿ ಸಂಕೀರ್ತನ ಭಂಡಾರವೊಂದು ಅವರಿಗಾಗಿಯೇ ಸಿದ್ಧವಾಯಿತು; ಅದರ ತಲೆಬಾಗಿಲ ಮೇಲೆ ಅಣ್ಣಮಾಚಾರ್ಯರ ಶಿಲಾ ಪ್ರತಿಕೃತಿಯನ್ನು ಇರಿಸಿದರು. ಆ ಕಾಲಕ್ಕೆ, ವಿಜಯನಗರದ ಅರಸರು ಅದರದಿಂದ ನಡೆದುಕೊಳ್ಳುತ್ತಿದ್ದ ದೇವರೆಂದರೆ ತಿರುಮಲೆಯ ವೇಂಕಟೇಶ್ವರ; ದೇವಾಲಯದ ಸಂಪತ್ತಿಗೂ, ವೈಭವಕ್ಕೂ, ಪ್ರಸಿದ್ಧಿಗೂ ಕಾರಣರಾದವರೇ ಅವರು. ಅದರಲ್ಲೂ, ಕೃಷ್ಣದೇವರಾಯ ಮಹಾರಾಯನಂತೂ ತನ್ನ ಬಿಡುವಿಲ್ಲದ ಕೆಲಸದಲ್ಲೂ ಅಡಿಗಡಿಗೆ ಬೆಟ್ಟದ ಮೇಲೆ ಬಂದು ದೇವರಿಗೆ ಸೇವೆ ಸಲ್ಲಿಸುತ್ತಿದ್ದ ಬಗೆಗೆ ಶಾಸನಗಳೇ ಇವೆ. ವಿಜಯನಗರ ಸಾಮ್ರಾಜ್ಯದ ಸಂಬಂಧವಿದ್ದವರಿಗೆಲ್ಲ ತಿರುಮಲೆ-ತಿರುಪತಿ ಮಿಗಿಲಿಲ್ಲದ ಕ್ಷೇತ್ರ. ಪುರಂದರದಾಸರೂ ಇಲ್ಲಿಗೆ ಅಡಿಗಡಿಗೆ ಬರುತ್ತಿದ್ದವರೇ; ಅವರ ದೇವರನಾಮಗಳಲ್ಲಿ ವೇಂಕಟೇಶ್ವರನನ್ನು ಕುರಿತವು ಹೇರಳವಾಗಿವೆ. ಆದರೆ ಅಣ್ಣಮಾಚಾರ್ಯರೂ ಅವರ ವಂಶದವರೂ (ನಾಲ್ಕು ತಲೆಮಾರುಗಳು) ದೇವಾಲಯದ ಊಳಿಗದಲ್ಲೇ ನೆಲೆನಿಂತರಾಗಿ ಅವರ ರಚನೆಗಳೆಲ್ಲ ಉಳಿದುಕೊಂಡು ಬಂದುವು; ಅದಕ್ಕಾಗಿ ಸಂಕೀರ್ತನ ಭಂಡಾರವೇ ಒಂದು ಇದ್ದಿತಷ್ಟೆ. ಪುರಂದರದಾಸರು ಗೊಂದಲದ ಹಂಪಿಯಲ್ಲೇ ಬಹುಕಾಲ ಇದ್ದರಾಗಿ, ರಕ್ಕಸತಂಗಡಿಯ ಕದನದಲ್ಲಿ ಹಂಪಿ ನಿರ್ನಾಮವಾದಾಗ ಅವರ ರಚನೆಗಳೆಲ್ಲ ಬಹು ಮಟ್ಟಿಗೆ ನಾಶವಾದುವೆಂದು ತೋರುತ್ತದೆ.

೨

ಪುರಂದರದಾಸರ ಸೊಲ್ಲು ಮತ್ತೆ ನಮ್ಮ ಕಿವಿಗೆ ಬೀಳುವುದು ಅವರು ತೀರಿಕೊಂಡು ನೂರು ವರ್ಷಗಳು ಕಳೆದಮೇಲೇ. ಎರಡು ಆಕರಗಳಿಂದ: ಒಂದು ಬಾಗಲ ಕೋಟೆಯ ಹತ್ತಿರ ಕಾಖಂಡಿ ಎಂಬ ಗ್ರಾಮದ ಹರಿದಾಸರೂ ಕವಿಗಳೂ ಆಗಿದ್ದ ಪ್ರಸನ್ನವೆಂಕಟದಾಸರು (ತೀರಿಕೊಂಡ ವರ್ಷ ೧೬೭೪); ಇನ್ನೊಂದು ಅವರಿಗಿಂತ ಹೆಸರಾದ ವಿಜಯದಾಸರು (೧೬೮೭-೧೭೫೫) ಇವರ ಪದಗಳಲ್ಲಿ ಬರುವ ಉಲ್ಲೇಖಗಳಿಂದ. ಪ್ರಸನ್ನವೆಂಕಟದಾಸರ 'ತಂದೆ ಪುರಂದರದಾಸರ ಸ್ಮರಿಸುವೆ' ಎಂಬ ಪದದಲ್ಲಿ ಪುರಂದರದಾಸರ ವ್ಯಕ್ತಿತ್ವ ಮತ್ತು ವಾಙ್ಮಯ ಎರಡರ ಉಲ್ಲೇಖವೂ ಇದೆ. ಆದರೆ ಪುರಂದರದಾಸರ ಹೆಸರು ಉಳಿದದ್ದು, ಬೆಳೆದದ್ದು ವಿಜಯದಾಸರ ಉಲ್ಲೇಖದಿಂದಲೇ. ರಾಯಚೂರು ಜಿಲ್ಲೆಯ ಮಾನ್ವಿ ಹತ್ತಿರ ಚೀಕಲಪರವಿ ಎಂಬುದೊಂದು ಹಳ್ಳಿ. ಈಗಾಗಲೇ ಹೇಳಿರುವಂತೆ, ಅಲ್ಲಿಯ ದಾಸಪ್ಪ ಎಂಬ ಗೃಹಸ್ಥ ಉತ್ತರ ಭಾರತಕ್ಕೆ ಯಾತ್ರೆ ಹೊರಟು ಕಾಶಿಗೆ ಬಂದು ಗಂಗೆಯನ್ನು ದಾಟಿ ವ್ಯಾಸಕಾಶಿಯಲ್ಲಿ ತಂಗಿದ್ದಾಗ ಇರುಳು ಕನಸಿನಲ್ಲಿ ಆತನಿಗೆ ಪುರಂದರದಾಸರು ಕಾಣಿಸಿಕೊಂಡು ಹರಿದಾಸ ದೀಕ್ಷೆಯನ್ನೂ 'ವಿಜಯವಿಠಲ' ನೆಂಬ ಅಂಕಿತವನ್ನೂ ನೀಡಿ ಮರೆಯಾದರಂತೆ. ಈ ಪ್ರಸಂಗದಿಂದಾಗಿ ಏನೇನೂ ಅರಿಯದ ದಾಸಪ್ಪ ಎಲ್ಲ ಬಲ್ಲವನಾದ ವಿಜಯದಾಸನಾದ. ಮುಂದೆ ವಿಜಯದಾಸರು ಕನ್ನಡನಾಡಿನಲ್ಲಿ ಸುಪ್ರಸಿದ್ಧ ಹರಿದಾಸರಾದರು; ಇಪ್ಪತ್ತೈದು ಸಾವಿರ ಕೃತಿಗಳನ್ನು ರಚಿಸಿದರೆಂದು ಪ್ರತೀತಿ; ದೇಶದಲ್ಲೆಲ್ಲ ತಿರುಗಾಡಿ ಭಾಗವತ ಧರ್ಮವನ್ನು ಹರಡಿದರು. ಅವರ ಶಿಷ್ಯರಾದ ಗೋಪಾಲದಾಸರು, ಮೋಹನದಾಸರು ಮತ್ತು ಜಗನ್ನಾಥದಾಸರಿಂದ ಹರಿದಾಸ ಪಂಥ ಇನ್ನಷ್ಟು ಊರ್ಜಿತವಾಯಿತು. ಇಲ್ಲಿ ನಮಗೆ ಪ್ರಸಕ್ತವಾದ ವಿಚಾರ ವಿಜಯದಾಸರಿಗೆ ಹರಿದಾಸ ದೀಕ್ಷೆ ಪುರಂದರದಾಸರಿಂದಲೇ ದೊರಕಿತೆನ್ನುವುದು. ಪುರಂದರದಾಸರ ಸಾಹಿತ್ಯವನ್ನು ಉಳಿಸಿದವರು, ಪುರಂದರದಾಸರ ವಿಚಾರವಾಗಿ ಈಗ ಪ್ರಚಲಿತವಾಗಿರುವ ಎಲ್ಲ ವಿವರಗಳಿಗೆ, ಪ್ರಸಂಗಗಳಿಗೆ, ಕತೆಗಳಿಗೆ ಮುಖ್ಯ ಆಕರವಾದವರು ಇವರೇ. ಪುರಂದರದಾಸರನ್ನು ಕುರಿತು ಇಪ್ಪತ್ತಕ್ಕೂ ಮೀರಿ ಅವರ ಪದಗಳಿವೆ.

ಪುರಂದರದಾಸರು ವಿಜಯದಾಸರ ಕನಸಿನಲ್ಲಿ ಕಾಣಿಸಿಕೊಂಡರೆಂದಮಾತ್ರಕ್ಕೆ ಪುರಂದರದಾಸರು ಕೇವಲ ಕಾಲ್ಪನಿಕವ್ಯಕ್ತಿ ಎಂದು ಯಾರೂ ಬಗೆಯಲಾರರು. ಅವರ ಐತಿಹಾಸಿಕತೆ ಬೇರೆ ಆಕರಗಳಿಂದ ಸಿದ್ಧವಾಗುತ್ತದೆ. ಆದರೆ ಪುರಂದರದಾಸರು ತೀರಿಕೊಂಡದ್ದು ಒಂದು ಎಣಿಕೆಯಂತೆ ೧೫೬೪ರಲ್ಲಿ ಅಥವಾ ೧೫೬೫ರಲ್ಲಿ; ವಿಜಯದಾಸರು ಹುಟ್ಟಿದ್ದೇ ೧೬೮೭ರಲ್ಲಿ. ಎರಡೂ ಪ್ರಸಂಗಗಳ ನಡುವೆ ಒಂದು ನೂರು ಮತ್ತೆ ಇಪ್ಪತ್ತು ವರ್ಷಗಳಿಗೂ ಮೀರಿ ಅಂತರವಿದೆ. ಈ ಅಂತರದಲ್ಲಿ ಪುರಂದರದಾಸರ ಪ್ರಖ್ಯಾತಿ, ಅವರ ಸಾಹಿತ್ಯ ಉಳಿದಿದ್ದವೆ? ಹಾಗೆ ಹೇಳಲು ಬೇರೆ ಪುರಾವೆಗಳೇನೂ ದೊರಕುವುದಿಲ್ಲ, ದಿಟ. ಆದರೆ ಹಾಗೆ ಹೇಳದೆ ವಿಧಿಯಿಲ್ಲ. ಕಣ್ಮರೆಯಾಗಿದ್ದ ಪುರಂದರಸಾಹಿತ್ಯವನ್ನೆಲ್ಲ ಮತ್ತೆ ಪಡೆದುಕೊಂಡದ್ದಕ್ಕೆ ಲೆಕ್ಕವಿಲ್ಲದಷ್ಟು ಇತರ ಕನಸುಗಳನ್ನೂ ಕಲ್ಪಿಸಿಕೊಳ್ಳಬೇಕಾದೀತು! ಹಂಪಿ ಹಾಳಾದರೇನು, ಅಲ್ಲಿ ಬೆಳೆದ ಹರಿದಾಸ ಪಂಥವೂ ಹೇಳಹೆಸರಿಲ್ಲದೆ ಹೋಯಿತೆ? ಹರಿದಾಸರು ದೂರ ದೂರ ಚೆಲ್ಲಾಪಿಲ್ಲಿಯಾಗಿ ಸರಿದರು, ಅಲ್ಲಲ್ಲಿ ತಮ್ಮ ದೀಕ್ಷೆಯನ್ನು ನಡೆಸಿಕೊಂಡು ಬಂದರು;

ಇದರ ಅಂಗವಾಗಿ ಪುರಂದರದಾಸರ ಸಾಹಿತ್ಯವನ್ನೂ ತಮಗೆ ಶಕ್ಯವಿದ್ದಷ್ಟು ಉಳಿಸಿಕೊಂಡರು. ಚೀಕಲಪರಿವೆಯ ದಾಸಪ್ಪನಿಗೆ ಪುರಂದರದಾಸರು ಕನಸಿನಲ್ಲಿ ಕಾಣಿಸಿಕೊಂಡದ್ದು ಹರಿದಾಸದೀಕ್ಷೆಯನ್ನು ಕೊಡಲೆಂದು ಅಷ್ಟೆ. ಅದಕ್ಕೆ ಮುಂಚೆ ಆತನಿಗೆ ಪುರಂದರದಾಸರ ವಿಚಾರವೇ ತಿಳಿದಿರಲಿಲ್ಲ ಎಂದಾಗಲೀ, ಹರಿದಾಸಪಂಥದ ಕ್ರಮ ಆತನಿಗೆ ಪರಿಚಯವಿರಲಿಲ್ಲ ಎಂದಾಗಲೀ ಹೇಳಲಾಗದು. ಪುರಂದರದಾಸರ ಸಾಹಿತ್ಯಕ್ಕೆ ಅಷ್ಟು ಪ್ರಚಾರ ಸಿಕ್ಕಿರಲಿಲ್ಲವೆಂದರೆ ತಡೆದೀತು; ವಿಜಯದಾಸರ ಪ್ರತಿಭೆಯಿಂದ, ಪ್ರಭಾವದಿಂದ ಪುರಂದರದಾಸರ ಭಾಗ್ಯವೂ ಬದಲಾಯಿಸಿತು ಎಂದರೂ ತಪ್ಪಲ್ಲ. ಮುಂದೆ ವಿಜಯದಾಸರೆಂದಾದ ದಾಸಪ್ಪನೂ ಹರಿದಾಸಮನೆತನಕ್ಕೇ ಸೇರಿದ್ದಿರಬಹುದು. ಎಳೆತನದಿಂದ ಪುರಂದರದಾಸರ ಕೃತಿಗಳ ಪರಿಚಯವನ್ನು ಪಡೆದಿದ್ದಿರಬಹುದು, ಪುರಂದರದಾಸರ ವಿಚಾರವಾಗಿ ತುಂಬ ಆದರವನ್ನೂ ತಳೆದಿದ್ದಿರಬಹುದು. ಅನಂತರ ಶ್ರಮವಹಿಸಿ ಹರಿದು ಹಂಚಿಹೋಗಿದ್ದ ಪುರಂದರ ಕೃತಿಗಳನ್ನೆಲ್ಲ ತಮಗೆ ಸಾಧ್ಯವಾದಷ್ಟು ಸಂಗ್ರಹಿಸಿ ತಮ್ಮ ಶಿಷ್ಯಕೋಟಿಯಲ್ಲಿ ಅದನ್ನು ಹೆಚ್ಚು ಪ್ರಚಾರಕ್ಕೆ ತಂದಿರಬಹುದು.

ತಮಿಳುಭಾಷೆಯಲ್ಲಿ ವೈಷ್ಣವ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಇದೇ ಬಗೆಯ ಪ್ರಸಂಗವೊಂದು ನಡೆದುದನ್ನು ನೆನಪಿಗೆ ತಂದುಕೊಳ್ಳಬಹುದು. ಅದು ನಮ್ಮಾಳ್ವಾರರ 'ತಿರುವಾಯ್‌ಮೊಳಿ' ಎಂಬ ಪಾಶುರ ಸಂಗ್ರಹವನ್ನು ಕುರಿತದ್ದು. ಕ್ರಿಸ್ತಾಬ್ದ ಮೊದಲ ಶತಮಾನಗಳಲ್ಲಿ ಬದುಕಿ ಬಾಳಿದ ಹತ್ತು ಮಂದಿ ಆಳ್ವಾರರು ಹಾಡಿದ ಕವಿತೆಗಳನ್ನೆಲ್ಲ ಸೇರಿಸಿ 'ನಾಲ್ಕು ಸಾವಿರ ಪ್ರಬಂಧಗಳು' (ನಾಲಾಯಿರ ಪ್ರಬಂಧಂ) ಎಂದು ಕರೆಯುವ ವಾಡಿಕೆಯಿದೆ. ಈ ಸಂಗ್ರಹದಲ್ಲಿ ಕಡೆಯ ಆಳ್ವಾರರು, ನಮ್ಮಾಳ್ವಾರರೆಂದು ಹೆಸರಾದವರು, ರಚಿಸಿದ ಪ್ರಬಂಧಗಳು 'ತಿರುವಾಯ್ ಮೊಳಿ' ("ಸಿರಿಬಾಯನುಡಿ") ಎಂದು ತುಂಬ ಪ್ರಚಲಿತವಾಗಿವೆ. ಆದರೆ ಒಂಬತ್ತನೆಯ ಶತಮಾನದಲ್ಲಿದ್ದ ವೈಷ್ಣವ ಆಚಾರ್ಯರಾದ ನಾಥಮುನಿಗಳ ಕಾಲಕ್ಕೆ ಈ ಪ್ರಬಂಧಗಳೆಲ್ಲವೂ ಕಣ್ಮರೆಯಾಗಿದ್ದವು. ನಾಥಮುನಿಗಳು ತೀರ್ಥಯಾತ್ರೆ ಮಾಡುತ್ತ ಈಗಿನ ದಕ್ಷಿಣ ಆರ್ಕಾಡು ಜಿಲ್ಲೆಯಲ್ಲಿರುವ ವೀರನಾರಾಯಣಪುರವೆಂಬ ಕ್ಷೇತ್ರಕ್ಕೆ ಬಂದಾಗ, ಅಲ್ಲಿನ ಗುಡಿಯಲ್ಲಿ ನೆರೆದಿದ್ದ ಪರವೂರಿನ ಕೆಲವರು ಯಾತ್ರಿಕರು ದೇವರೆದುರು ಕೆಲವು ತಮಿಳು ಹಾಡುಗಳನ್ನು ಹಾಡಿ ಸೇವೆ ಸಲ್ಲಿಸುತ್ತಿದ್ದರು. ನಾಥಮುನಿಗಳು ಅವರು ಹಾಡಿದ 'ಆರಾವಮುದೇ ಅಡಿಯೇನುಡಲಂ ನಿನ್ನ ಪಾಲನ್ಬಾಯೇ...' ಎಂದು ಮೊದಲಾಗುವ ಒಂದು ಹಾಡನ್ನು ಕೇಳಿ, ಅದರ ಸೊಗಸನ್ನು ಮೆಚ್ಚಿಕೊಂಡರು. ಅದೇ ಕವಿಯ ಇನ್ನು ಕೆಲವು ಹಾಡುಗಳನ್ನು ಹಾಡುವಂತೆ ಆ ಯಾತ್ರಿಕರನ್ನು ಕೇಳಿಕೊಂಡರು. ಯಾತ್ರಿಕರಾದರೋ ತಮಗೆ ತಿಳಿಯದೆಂದೂ, ಈ ಒಂದು ಹಾಡನ್ನು ತಾವು ತಿರುಕ್ಕುಡಂದೈ (ಎಂದರೆ ಈಗಿನ ಕುಂಭಘೋಣಂ) ಕ್ಷೇತ್ರದ ಗುಡಿಯಲ್ಲಿ ಹಾಡುತ್ತಿದ್ದುದನ್ನು ಕೇಳಿ ಕಲಿತರೆಂದೂ ತಿಳಿಸಿದರು. ನಾಥಮುನಿಗಳು ಒಡನೆಯೇ ತಿರುಕ್ಕುಡಂದೈಗೆ ತೆರಳಿ ಅಲ್ಲಿನ ಗುಡಿಯಲ್ಲಿ ವಿಚಾರಿಸಲಾಗಿ ಅಲ್ಲಿ ನಮ್ಮಾಳ್ವಾರರ ಹತ್ತು ಪಾಶುರಗಳು ಬಳಕೆಯಲ್ಲಿದ್ದುದು ತಿಳಿದುಬಂದಿತು. ಈ ಹತ್ತು ಪಾಶುರಗಳನ್ನು ನಾಥಮುನಿಗಳು ಸಂಗ್ರಹಿಸಿದುದೇ 'ನಾಲ್ಕು ಸಾವಿರ ಪ್ರಬಂಧ'ಗಳನ್ನು ಮುಂದೆ ಪತ್ತೆ ಹಚ್ಚುವುದಕ್ಕೆ ಮೊದಲ ಹೆಜ್ಜೆಯಾಯಿತು. ಆ ಗುಡಿಯಲ್ಲಿ ವಿಚಾರಿಸಿದಾಗ ನಾಥಮುನಿಗಳಿಗೆ ತಿರುಕ್ಕುರುಗೂರಿನಲ್ಲಿ (ಎಂದರೆ ಈಗಿನ ಆಳ್ವಾರ್ ತಿರುನಗರಿಯಲ್ಲಿ) ಹೆಚ್ಚು

ಪಾಶುರಗಳ ಬಳಕೆಯಿರುವುದಾಗಿ ತಿಳಿಯಿತು; ಅವರು ತಿರುಕ್ಕುರುಗೂರಿಗೆ ಹೋಗಿ ಅಲ್ಲಿ ನಮ್ಮಾಳ್ವಾರರ ಇಡೀ 'ತಿರುವಾಯ್ ಮೊಳಿ'ಯನ್ನು (ಒಂದು ಸಾವಿರ, ನೂರೆರಡು ಪದ್ಯಗಳು) ಪಡೆದುಕೊಂಡರು.

ವಿಜಯದಾಸರು ಪುರಂದರದಾಸರಿಗೆ ಸಲ್ಲಿಸಿದ ಸೇವೆ, ನಾಥಮುನಿಗಳು ನಮ್ಮಾಳ್ವಾರರಿಗೆ ಸಲ್ಲಿಸಿದ ಸೇವೆ ಒಂದೇ ಬಗೆಯದು. ಜನರಿಂದ ಮರೆಯಾಗಿದ್ದ ಸಾಹಿತ್ಯವನ್ನು ಮತ್ತೆ ಜನರಿಗೆ ಒದಗಿಸಿದುದೇ ಈ ಸೇವೆಯ ಸ್ವಾರಸ್ಯ. ಭಾವುಕರ ನಂಬಿಕೆಯಲ್ಲಿ ಪುರಂದರದಾಸರು ವ್ಯಾಸಕಾಶಿಯಲ್ಲಿ ವಿಜಯದಾಸರಿಗೆ ಕನಸಿನಲ್ಲಿ ಕಾಣಿಸಿಕೊಂಡಂತೆಯೇ, ನಮ್ಮಾಳ್ವಾರರ ಚೇತನ ತಿರುಕ್ಕುರುಗೂರಿನಲ್ಲಿ ನಾಥಮುನಿಗಳಿಗೆ ಗೋಚರವಾಯಿತು. ಈ ನಂಬಿಕೆಯ ವಿಮರ್ಶೆ ನಮಗಿಂದು ಇಲ್ಲಿ ಪ್ರಸಕ್ತವಲ್ಲ. ಮುಖ್ಯವಾದ ವಿಚಾರವೆಂದರೆ ಉತ್ತಮವಾದ ಒಂದು ಸಾಹಿತ್ಯರಾಶಿ ಕೆಲಕಾಲ ಮರೆಯಾಗಿದ್ದು ಹಲವು ತಲೆಮಾರುಗಳ ನಂತರ ಮತ್ತೆ ಜನರೆದುರು ತೋರಿಕೊಂಡದ್ದು. ಅದಕ್ಕೆ ಕಾರಣಪುರುಷರೆಂದಾದವರ ಶ್ರದ್ಧೆ, ಸಾಹಸ, ಉದಾತ್ತವಾದ ಆದರ್ಶ ಇವು ಎದ್ದು ಕಾಣುತ್ತವೆ.

ವಿಜಯದಾಸರ ಕಾಲದಲ್ಲೂ ಪುರಂದರ ಸಾಹಿತ್ಯ ಸಂಪೂರ್ಣವಾಗಿ ನಶಿಸಿಹೋಗಿರಲಿಲ್ಲ; ಬಹುಮಟ್ಟಿಗೆ ಪ್ರಚಾರದಿಂದ ತಪ್ಪಿತ್ತು ಅಷ್ಟೆ. ಈ ವಿಚಾರ ನಮಗೆ ಇನ್ನೊಂದು ಕಡೆಯಿಂದ ಸ್ಪಷ್ಟವಾಗುತ್ತದೆ. ತಂಜಾವೂರಿನಲ್ಲಿ ಮಹಾರಾಷ್ಟ್ರದ ಭೋಸಲೆ ವಂಶದ ಅರಸರು ೧೬೭೪ರಿಂದ ಆಳಲು ತೊಡಗಿದರಷ್ಟೆ. ಅವರೆಲ್ಲರೂ ಕಾವ್ಯ, ನಾಟಕ, ಸಂಗೀತ, ನೃತ್ಯ, ಯಕ್ಷಗಾನಗಳನ್ನು ಪ್ರೋತ್ಸಾಹಿಸುತ್ತ ಬಂದು, ದಕ್ಷಿಣ ದೇಶದ ಸಾಹಿತ್ಯ-ಸಂಗೀತಗಳೆರಡಕ್ಕೂ ಸುವರ್ಣಯುಗವೊಂದನ್ನು ಒದಗಿಸಿದರು. ಅವರಲ್ಲಿ ಪ್ರಸಿದ್ಧನಾದ ತುಳಜೇಂದ್ರ (ಮೊದಲ ತುಳಜಾಜಿ, ಅವನಿಗೆ ತುಕ್ಕೋಜಿಯೆಂದೂ ಹೆಸರಿದ್ದಿತು, ೧೭೨೮-೧೭೩೬) ಸಾಹಿತಿ, ಸಂಗೀತರಸಿಕಕ, ಶಾಸ್ತ್ರಜ್ಞ, ಬಹುಭಾಷಾವಿಶಾರದ. ಇವನು 'ಸಂಗೀತಸಾರಾಮೃತ'ವೆಂಬ ಗ್ರಂಥವನ್ನು ಸಂಸ್ಕೃತದಲ್ಲಿ ರಚಿಸಿದ್ದಾನೆ. ಇದರಲ್ಲಿ ಪುರಂದರದಾಸರ ಗುರುಗಳಾದ ವ್ಯಾಸತೀರ್ಥರನ್ನು ತನ್ನ ಗುರುಗಳೆಂದೇ ಭಾವಿಸಿರುವುದಲ್ಲದೆ ಪುರಂದರದಾಸರ ಸುಳಾದಿಗಳನ್ನೂ ಕೆಲವು ರಾಗಗಳಿಗೆ ಲಕ್ಷ್ಯವಾಗಿ ಉಲ್ಲೇಖಿಸಿದ್ದಾನೆ. ತುಳಜಾಜಿ ಪಟ್ಟವೇರಿದಾಗ ಪುರಂದರದಾಸರು ತೀರಿಕೊಂಡು ಒಂದುನೂರು ಅರವತ್ತುನಾಲ್ಕು ವರ್ಷಗಳು ಸಂದಿದ್ದುವು. ಆದರೂ ಪುರಂದರದಾಸರ ಕೃತಿಗಳ ಪ್ರಖ್ಯಾತಿ ಉಳಿದುಕೊಂಡಿದ್ದಿತು. ತುಳಜಾಜಿಯ ಕಾಲದಲ್ಲೇ ಇದ್ದ ವಿಜಯದಾಸರೇನು ಉಲ್ಲೇಖಕ್ಕೆ ಬಂದಿಲ್ಲ!

ತಂಜಾವೂರಿನಲ್ಲಿ ಈ ಭೋಸಲೆ ವಂಶದ ಅರಸರ ಆಳ್ವಿಕೆ ಮೊದಲಾಗುವ ಮುಂಚೆ ಆಳುತ್ತಿದ್ದ ನಾಯಕ ಅರಸರೂ ಸಂಗಿತ-ಸಾಹಿತ್ಯ ರಸಿಕರಾಗಿದ್ದವರೇ. ಅವರಲ್ಲಿ ರಘುನಾಥನಾಯಕ (೧೬೬೦-೧೬೩೪) ಎಂಬುವನು 'ಸಂಗೀತಸುಧಾ' ಎಂಬ ಗ್ರಂಥವನ್ನು ರಚಿಸಿದ್ದ; ಅವನು ಸ್ವತಃ ಗಾಯಕ, ವೈಣಿಕ, ವಾಗ್ಗೇಯಕಾರ, ಶಾಸ್ತ್ರಜ್ಞ, ಮೇಲಾಗಿ, ಅವನಿಗೆ ಮಾರ್ಗದರ್ಶಿಗಳೂ ಆಪ್ತಸಚಿವರೂ ಆಗಿದ್ದ ಗೋವಿಂದದೀಕ್ಷಿತರು ಕರ್ನಾಟಕದವರು, ಭಾಗವತರು, ಸ್ವತಃ ಸಂಗೀತಶಾಸ್ತ್ರಜ್ಞರು. ಅರಸನಿಗೆ ಅಂಕಿತವಾದ 'ಸಂಗೀತಸುಧಾ' ದಿಟವಾಗಿ ಅವರ ರಚನೆಯೇ ಎನ್ನಿ. ಅವರಾಗಲಿ ಪುರಂದರದಾಸರ ಕೃತಿಗಳನ್ನು ಎತ್ತಿ ಕಾಣಿಸಲಿಲ್ಲವಲ್ಲ? ಇದೊಂದು ಒಗಟು. ಮಹಾರಾಷ್ಟ್ರದಿಂದ ಬಂದ ತುಳಜಾಜಿಗೆ ಪುರಂದರದಾಸರ ಸುಳಾದಿಗಳ ಪರಿಚಯವಿದ್ದಿತು; ಕನ್ನಡನಾಡಿನಿಂದಲೇ ಹೋದ ಗೋವಿಂದದೀಕ್ಷಿತರಿಗೆ ತಿಳಿದಿರಲಿಲ್ಲ! ಎಂದರೆ, ಪುರಂದರದಾಸರ

ನಂತರ ಹರಿದಾಸರು ಮಹಾರಾಷ್ಟ್ರ ಮತ್ತು ಉತ್ತರ ಭಾರತದ ಕಡೆ ಹೋದಂತೆ ತೋರುತ್ತದೆ; ಅಲ್ಲೆಲ್ಲ ಪುರಂದರದಾಸರ ಕೃತಿಗಳು ಪ್ರಚಾರದಲ್ಲಿ ಇದ್ದಿರಬೇಕು. ಹಾಗಲ್ಲವಾದರೆ ರಾಯಚೂರಿನ ಕಡೆಯ ವಿಜಯದಾಸರಿಗೆ ಪುರಂದರದಾಸರು, ಕನಸಿನಲ್ಲೇ ಆಗಲಿ, ಕಾಣಿಸಿಕೊಂಡದ್ದು ದೂರದ ವ್ಯಾಸಕಾಶಿಯಲ್ಲಿ ಏಕೆ? ಪುರಂದದಾಸರ ಪದಗಳ ಸಂಗ್ರಹ ಮೊಟ್ಟಮೊದಲು ಕಲ್ಲಚ್ಚು ಕಂಡದ್ದು ಮರಾಠೀ ಲಿಪಿಯಲ್ಲೇ ಎಂಬುದನ್ನೂ ನಾವು ಗಮನಿಸಬೇಕು. ಅಬಾಜಿ ರಾಮಚಂದ್ರ ಸಾವಂತರು ಬೆಳಗಾಂವಿಯಲ್ಲಿ ೧೮೮೦ರಷ್ಟು ಹಿಂದೆ ಈ ಸಂಗ್ರಹವನ್ನು ಹೀಗೆ ಪ್ರಕಟಗೊಳಿಸಿದರು. ಈಗ ಉಪಲಬ್ಧವಿರುವ ಪುರಂದರ ಸಾಹಿತ್ಯದ ತುಂಬ ಹಳೆಯ ಕೋರಿಕಾಗದದ ಹಸ್ತಪ್ರತಿಗಳೆಲ್ಲ ಇರುವುದು ದೇವನಾಗರಿ (ಮರಾಠಿಯಲ್ಲಿ ಬಾಳಬಂಧು) ಲಿಪಿಯಲ್ಲೆ. ಧಾರವಾಡದ ಕರ್ನಾಟಕ ವಿಶ್ವವಿದ್ಯಾನಿಲಯದ ಸಂಗ್ರಹದಲ್ಲೇನೋ ಕನ್ನಡಲಿಪಿಯ ಕೆಲವು ಓಲೆಗರಿ ಪುಸ್ತಕಗಳಲ್ಲಿ ಪುರಂದರ ಸಾಹಿತ್ಯವಿದೆಯೆನ್ನಿ. ಆದರೆ ಇಂಥವು ತೀರ ವಿರಳ.

ಪುರಂದರದಾಸರಿಂದ ಸ್ಫೂರ್ತಿಯನ್ನೂ ಮಾರ್ಗದರ್ಶವನ್ನೂ ಪಡೆದುಕೊಂಡ ತ್ಯಾಗರಾಜರು (೧೭೬೭-೧೮೪೭) ಪುರಂದರದಾಸರ ಪದಗಳನ್ನು ಕಲಿತುಕೊಂಡದ್ದು ತಮ್ಮ ತಂದೆಯಿಂದಲೇ; ತಂದೆ ರಾಮಬ್ರಹ್ಮ ತಂಜಾವೂರು ಇಮ್ಮಡಿ ತುಳಜಾಜಿಯ (೧೭೬೩-೧೭೮೭) ಆಸ್ಥಾನದಲ್ಲಿ ರಾಮಾಯಣ ಕಾಲಕ್ಷೇಪ ಮಾಡುತ್ತಿದ್ದವರು; ಅವರಿಗೆ ಪುರಂದರದಾಸರ ಪರಿಚಯವಾದದ್ದು ಮಹಾರಾಷ್ಟ್ರದಿಂದ ಬಂದಿದ್ದ ಗಾಯಕರಿಂದಲೇ ಇರಬೇಕು. ಈ ಗಾಯಕರಿಂದಲೇ ಹರಿಕಥೆ, ನಾಮಸಂಕೀರ್ತನ, ಭಜನೆಗಳು ಈ ಕಡೆ ವಾಡಿಕೆಗೆ ಬಂದದ್ದು. ಮರಾಠೀ 'ಪದ'ಗಳನ್ನು ಬರೆದವರಲ್ಲೂ ಮೇರುಸ್ವಾಮಿ, ಮಾಧವಸ್ವಾಮಿ, ಆನಂದಬ್ರಹ್ಮಸ್ವಾಮಿ, ಆನಂದತನಯ, ರಾಮಜೋಶಿ ಮೊದಲಾದವರೆಲ್ಲ ತಂಜಾವೂರು ಅರಸರ ಆದರವನ್ನು ಪಡೆದುಕೊಂಡಿದ್ದವರೇ.

೩

ಹೀಗಾಗಿ ಮೊದಲಿಂದ ಪುರಂದರದಾಸರಿಗೂ ಮಹಾರಾಷ್ಟ್ರ, ಉತ್ತರ ಕರ್ನಾಟಕ ಭಾಗಗಳಿಗೂ ನಂಟು ಹೆಚ್ಚಿನದು. ಪುರಂದರದಾಸರು ಹುಟ್ಟಿದ್ದು ಪುರಂದರಘಡದಲ್ಲಿ ಎಂದು ಪ್ರತೀತಿಯಿದೆಯಷ್ಟೆ. ಪುರಂದರಘಡವೆನ್ನುವುದು ಮಹಾರಾಷ್ಟ್ರದಲ್ಲಿ ಪುಣೆಯ ಹತ್ತಿರ ಇರುವ ಊರು. ಈ ಊರಿನಲ್ಲಾಗಲಿ ಸುತ್ತ ಮುತ್ತ ಆಗಲಿ ಪುರಂದರದಾಸರನ್ನು ನೆನಪಿಗೆ ತರುವಂಥ ಕತೆಗಳಾಗಲಿ ಇತರ ವಿವರಗಳಾಗಲಿ ದೊರೆಯುವುದಿಲ್ಲ; ಈ ಪ್ರದೇಶವನ್ನು ನೆನಪಿಗೆ ತರುವಂಥ ಒಕ್ಕಣೆಯಾಗಲಿ ವಾಗ್ಧೋರಣೆಯಾಗಲಿ ಪುರಂದರ ಸಾಹಿತ್ಯದಲ್ಲಿ ದೊರೆಯುವುದಿಲ್ಲ. ಪುರಂದರದಾಸರಿಗೂ ಪುರಂದರಘಡಕ್ಕೂ ಗಂಟು ಏರ್ಪಟ್ಟುದು ಪುರಂದರಸಾಹಿತ್ಯದ ಪ್ರಚಾರ ಮಹಾರಾಷ್ಟ್ರ ಪ್ರದೇಶದಲ್ಲಿ ಆದಮೇಲೇ ಎಂದು ತೋರುತ್ತದೆ; ಇದು ಪುರಂದರದಾಸರು ಕಾಲವಾದಮೇಲೇ ಇರಬೇಕು. ಕಪಟರಾಳ ಕೃಷ್ಣರಾಯರು ಈ ವಿಚಾರವಾಗಿ ಸಂಶೋಧನೆ ನಡೆಸಿ ಪುರಂದರದಾಸರ ಜನ್ಮಸ್ಥಳ ಮಹಾರಾಷ್ಟ್ರದ ಪುರಂದರಘಡವಲ್ಲ, ಶಿವಮೊಗ್ಗ ಜಿಲ್ಲೆಯ ಅರಗದ ಹತ್ತಿರ ಪುರಂದರ ಎಂಬ ಹೆಸರಿದ್ದ ಹಳ್ಳಿ ಎಂದು ಸೂಚಿಸಿದ್ದಾರೆ. ಇದೂ ಊಹೆಯೇ; ಸಮರ್ಥಿಸುವ ವಿವರಗಳು ಅಷ್ಟಕ್ಕಷ್ಟೇ. ಇದು ಹೀಗೇ ಎಂದು ಏನನ್ನು ಹೇಳುವುದೂ ಕಷ್ಟ. ಮೇಲಾಗಿ, ಪುರಂದರದಾಸರೆಂಬ ಹೆಸರಿಗೆ ಮೂಲವಾಗಿ ಪುರಂದರವೆಂಬ ಹೆಸರನ್ನು ಹೊತ್ತ ಊರೇ ಇರಬೇಕೆ?

ಪುರಂದರದಾಸರು ಪಂಢರಪುರದಲ್ಲಿ ಹನ್ನೆರಡು ವರ್ಷಗಳು ವಾಸಮಾಡಿದರೆಂದು ಇನ್ನೊಂದು ಪ್ರತೀತಿ. ದಾಸರು ಪಂಢರಪುರದ ಅಧಿದೈವವಾದ ಪಾಂಡುರಂಗ ವಿಠಲನ ಭಕ್ತರೇನೋ ಹೌದು; ಹರಿದಾಸಪಂಥದಲ್ಲಿ ವಿಠಲನಿಗೆ ಹೆಗ್ಗಳಿಕೆ ಇರುವುದೂ ಸರಿಯೇ. ಇದರ ವಿಚಾರ ಮುಂದೆ ಬರುತ್ತದೆ. ಈಗ ಪಂಢರಪುರ ಮಹಾರಾಷ್ಟ್ರದಲ್ಲಿನ ಮುಖ್ಯ ಕ್ಷೇತ್ರ. ಸೊಲ್ಲಾಪುರ ಜಿಲ್ಲೆಯಲ್ಲಿ ಭೀಮಾ (ಅಲ್ಲಿನ ಹೆಸರು ಚಂದ್ರಭಾಗ) ನದಿಯ ದಂಡೆಯ ಮೇಲಿರುವ ಈ ಕ್ಷೇತ್ರ ಮಹಾರಾಷ್ಟ್ರದಲ್ಲಿ ಭಕ್ತಿಪಂಥ, ಭಾಗವತ ಧರ್ಮಗಳಿಗೆ ಕೇಂದ್ರಸ್ಥಾನ. ಅಲ್ಲಿನ ಪಾಂಡುರಂಗ ಮರಾಠೀ ಸಾಹಿತ್ಯದ ಭಕ್ತಿ ಸ್ರೋತಕ್ಕೆ ಚೇತನಸ್ವರೂಪ; ನಾಮದೇವ, ಜ್ಞಾನೇಶ್ವರ, ತುಕಾರಾಮ, ನಿವೃತ್ತಿನಾಥ, ರಾಮದಾಸ ಮೊದಲಾದ ಸಂತರೆಲ್ಲ ಪಂಢರಪುರದ ಗುಡಿಯಿಂದ ಸ್ಫೂರ್ತಿಯನ್ನು ತಳೆದವರೇ, ಅಲ್ಲಿನ ದೇವರನ್ನು ಹಾಡಿ ಹೊಗಳಿದವರೇ.

ಆದರೆ ಈ ಕ್ಷೇತ್ರವನ್ನು ಕುರಿತ ಅತಿ ಪ್ರಾಚೀನವಾದ ಶಾಸನದಲ್ಲಿ ಇದನ್ನು 'ಪಂಡರಗೆ'ಯೆಂದು ಕನ್ನಡ ಹೆಸರಿನಿಂದಲೇ ಕರೆಯಲಾಗಿದೆ. ೧೨೩೭ರ ಹೊಯ್ಸಳ ಸೋಮೇಶ್ವರನ ಈ ಶಾಸನದಲ್ಲಿ (ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ) 'ಭೀಮರಥೀ ನದೀತೀರಸಂನಿವಿಷ್ಟ ಪಂಡರಗೆ ನಾಮಾನಂ ಮಹಾಗ್ರಾಮಮಧಿವಸತೇ ಪುಂಡರೀಕಮನಃ ಕುಮುದವಿಕಸ ಸುಧಾಕರಾಯ ಭಗವತೇ ವಿಠ್ಠಲದೇವಾಯ' ಎಂಬ ಒಕ್ಕಣೆಯಿದೆ. ಹೊಯ್ಸಳ ರಾಜನಾದ ವಿಷ್ಣುವರ್ಧನನ (ಬಿಟ್ಟಿಗ, ಬಿಟ್ಟಿದೇವ, ೧೧೧೭-೧೧೩೭) ತಮ್ಮ ವೀರಬಲ್ಲಾಳನು ಈ ಪ್ರದೇಶವನ್ನು ಗೆದ್ದು, ಅಲ್ಲಿ ಪುಂಡಲೀಕನೆಂಬ ಭಕ್ತನನ್ನು ಕಂಡು ಅವನಿಗಾಗಿ ವಿಷ್ಣುದೇವಾಲಯವೊಂದನ್ನು ಕಟ್ಟಿಸಿದನೆಂದೂ, ಅರಸನಾದ ಬಿಟ್ಟಿಗನ ಹೆಸರನ್ನೇ ದೇವರಿಗೆ ಇಟ್ಟದ್ದರಿಂದ 'ವಿಟ್ಠಲ'ನೆಂದಾಯಿತೆಂದೂ ಮಹಾರಾಷ್ಟ್ರದಲ್ಲಿಯೇ ಇರುವ ನಂಬಿಕೆ. ಇದನ್ನು 'ಟೆಂಪಲ್ಸ್ ಎಂಡ್ ಲೆಜೆಂಡ್ಸ್ ಆಫ್ ಮಹಾರಾಷ್ಟ್ರ' ಗ್ರಂಥವನ್ನು ಬರೆದ ಎಂ. ಎಸ್. ಮೋತೆ (ಭಾರತೀಯ ವಿದ್ಯಾಭವನ, ಮುಂಬಯಿ, ೧೯೬೨) ಉಲ್ಲೇಖಿಸಿದ್ದಾರೆ. ವಿಟ್ಠಲನು ಕನ್ನಡಿಗರ ದೇವರೆಂದು ಮರಾಠೀ ಸಂತರ ಹೇಳಿಕೆಯೂ ಇದೆ. ನಾಮದೇವನ 'ಕಾನಡಾ ವಿಟ್ಠಲ ಹೋ ಉಭಾ ಭಿವರೇತೀರಿ' ("ಭೀಮಾನದಿಯ ದಂಡೆಯ ಮೇಲೆ ನಿಂತ ವಿಟ್ಠಲನು ಕನ್ನಡದವನು"). 'ನಾಮ ಬರವೇ ರೂಪ ಬರವೇ ದರ್ಶನ ಬರವೇ ಕಾನಡಿಯಾ' ("ಈ ಕನ್ನಡದವನ ಹೆಸರೇ ಸೊಗಸಿನದು, ರೂಪ ಚೆಲುವಾದುದು, ನೋಟವಂತೂ ಮೋಹಕವಾದುದು!") ಎಂಬ ಮಾತುಗಳೂ, ಜ್ಞಾನದೇವನ ಅಭಂಗಮಾಲೆಯಲ್ಲಿ ಬರುವ 'ಕಾನಡಾ ಹೋ ವಿಟ್ಠಲ ಕರ್ನಾಟಕೂ ("ವಿಟ್ಠಲನು ಕನ್ನಡಿಗ, ಕರ್ನಾಟಕದವನು") ಎಂಬ ಮಾತೂ ನಿದರ್ಶನಗಳು.

'ವಿಷ್ಣು' ಎಂಬ ಸಂಸ್ಕೃತಪದಕ್ಕೆ 'ವಿಟ್ಠ' ಎಂಬುದು ಅಪಭ್ರಂಶರೂಪ; ಕನ್ನಡದಲ್ಲಿ 'ಬಿಟ್ಟಿಗ'ನೆಂದಾಗುತ್ತದೆ. ಆರನೇ ಶತಮಾನದ ರಾಷ್ಟ್ರಕೂಟ ರಾಜ ಅವಿಧೇಯನ ಪಾಂಡುರಂಗಪಲ್ಲಿ (ಎಂದರೆ ಪಂಡರಪುರ) ದತ್ತಿ ಶಾಸನದಲ್ಲಿ 'ಜಯದ್ವಿಟ್ಠ' ಎಂಬ ಒಕ್ಕಣೆಯನ್ನು ಕಾಣುತ್ತೇವೆ. ವಿಟ್ಠಲನೆಂಬ ಮಾತಿಗೇನೋ ಈ ಅಪಭ್ರಂಶ ರೂಪವೇ ಮೂಲ; ಹೊಯ್ಸಳ ರಾಜ ಬಿಟ್ಟಿಗನ ಹೆಸರನ್ನೇ ತಳೆದ ದೇವರೆನ್ನುವುದೂ ಸರಿಯೇ ಇದ್ದೀತು. ಕನ್ನಡ ಜನರಿಗೂ ಈ ಕ್ಷೇತ್ರ ಆದರಣೀಯವಾಗಿದ್ದಿತೆಂದು ಹಲವಾರು ಆಕರಗಳಿಂದ ಸ್ಪಷ್ಟವಾಗುತ್ತದೆ. ಹದಿಮೂರನೆಯ ಶತಮಾನದ ಕನ್ನಡ ಕವಿ ಚೌಂಡರಸ ತನ್ನ 'ಅಭಿನವದಶಕುಮಾರಚರಿತೆ'ಯನ್ನು ಅಭಂಗವಿಟ್ಠಲನಿಗೇ ಅಂಕಿತ

ಮಾಡಿದ್ದಾನೆ; ತನ್ನನ್ನು "ಶ್ರೀಮದಭಂಗವಿಟ್ಠಲ ಅವರ ಪದಾಂಭೋಜಮತ್ತಮಧುಕರ"ನೆಂದು ಬಣ್ಣಿಸಿಕೊಂಡಿದ್ದಾನೆ. ಪುರಂದರದಾಸರಲ್ಲದೆ ಅವರ ಪೂರ್ವಸೂರಿಗಳಾದ ಶ್ರೀಪಾದರಾಜರೂ ವ್ಯಾಸರಾಯರೂ ವಿಟ್ಠಲನ ಭಕ್ತರೇ. ಶ್ರೀಪಾದರಾಜರ ಒಂದು ಕೃತಿಯಲ್ಲಿ 'ಪಂಡರಂಗಿ ಪುರೀ ಪತಿ ಸಿರಿರಂಗ ವಿಟ್ಠಲ'ನೆಂದು ಅಂಕಿತವಿದೆ. ಸ್ವಯಂ ಮಧ್ವಾಚಾರ್ಯರೇ ವಿಟ್ಠಲ ಮೂರ್ತಿಗಳನ್ನು ತಾವು ಸ್ಥಾಪಿಸಿದ ಅಷ್ಟ ಮಠಗಳಲ್ಲಿ ಎರಡು ಮಠಗಳಿಗೆ (ಸೀರೂರು, ಪುತ್ತಿಗೆ) ಕೊಟ್ಟದ್ದಿದೆ. ಪುರಂದರದಾಸರ ಕಾಲದಲ್ಲಿ ವಿಜಯನಗರದ ಅರಸ ಕೃಷ್ಣದೇವರಾಯ ಮಹಾರಾಯನು ಹಂಪಿಯಲ್ಲಿ ವಿಜಯವಿಟ್ಠಲನ ಗುಡಿಯೊಂದನ್ನು ಕಟ್ಟಿಸಿದ. ತಾನು ಉದಯಗಿರಿಯಿಂದ ತಂದ ವಿಟ್ಠಲ ಮೂರ್ತಿಗೆ ಆಲಯವೆಂದು ಈ ಗುಡಿಯನ್ನು ಕಟ್ಟಿಸಿದನಂತೆ; ಉದಯಗಿರಿಯಲ್ಲಿದ್ದುದು ಪಂಢರಪುರದಿಂದ ಕೊಂಡೊಯ್ದ ಮೂರ್ತಿಯೇ ಎಂದೂ, ಮರಾಠೀ ಸಂತ ಏಕನಾಥನ ಅಜ್ಜ ಭಾನುದಾಸನ ಕೋರಿಕೆಯ ಮೇಲೆ ಕೃಷ್ಣದೇವರಾಯನು ವಿಟ್ಠಲಮೂರ್ತಿಯನ್ನು ಪಂಢರಪುರಕ್ಕೆ ಹಿಂದಿರುಗಿಸಿದನೆಂದೂ ಹೇಳುತ್ತಾರೆ. ಆದರೆ ಪುರಂದರದಾಸರ ಕಾಲದಲ್ಲಿ ಈ ಮೂರ್ತಿ ಹಂಪಿಯಲ್ಲೇ ಇದ್ದಿರಬೇಕು; ಏಕೆಂದರೆ ಅವರ ಸಮಕಾಲೀನರಾದ, ವ್ಯಾಸರಾಯಸ್ವಾಮಿಗಳ ಶಿಷ್ಯರೇ ಆಗಿದ್ದ, ವಾದಿರಾಜ ಸ್ವಾಮಿಗಳು ತಮ್ಮ 'ತೀರ್ಥ ಪ್ರಬಂಧ'ದಲ್ಲಿ ಈ ಮೂರ್ತಿಯನ್ನು ಅಲ್ಲಿದ್ದಂತೆ ಉಲ್ಲೇಖಿಸಿದ್ದಾರೆ. ಇದು ಹೇಗಾದರೂ ಇರಲಿ, ವಿಟ್ಠಲನ ಪ್ರಖ್ಯಾತಿ ವಿಜಯನಗರ ಸಾಮ್ರಾಜ್ಯದಲ್ಲಿದ್ದಿತು ಎನ್ನುವುದು ಸ್ಪಷ್ಟವಾಗುತ್ತದೆ. ಪುರಂದರದಾಸರಿಗೂ ವಿಟ್ಠಲನಿಗೂ ನಂಟು ಹೇಗೆ ಒದಗಿತೆಂದು ವಿವರಿಸಲು ದೂರ ಹೋಗಬೇಕಾದುದಿಲ್ಲ.

ಇದನ್ನು ಹೇಳುವಾಗಲೇ ಇದಕ್ಕೆ ಸಂಬಂಧಪಟ್ಟ ಇನ್ನೊಂದು ವಿವರವನ್ನೂ ಪರಿಶೀಲಿಸಬೇಕು. ಪಂಢರಪುರದ ಗುಡಿಯಲ್ಲಿ 'ಪುರಂದರದಾಸರ ಕಂಬ'ವೆಂದು ಕಾಣಿಸುವ ವಿಚಾರ ಇದು. ಅದಕ್ಕೆ ಹಿನ್ನೆಲೆಯಾಗಿ ಕತೆಯೊಂದನ್ನು ಹೇಳಿ, ಪುರಂದರದಾಸರನ್ನು ಯಾವುದೋ ಕಾರಣಕ್ಕಾಗಿ ಆ ಕಂಬಕ್ಕೆ ಕಟ್ಟಿ ಹೊಡೆಸಿದರೆಂದೂ, ಆಗ ಅವರು "ಮುಯ್ಯಕ್ಕೆ ಮುಯ್ಯ ತೀರಿತು, ಜಗದಯ್ಯ, ವಿಜಯ್ಯ, ಸಹಾಯ್ಯ, ಪಂಢರಿರಾಯ' ಎಂದು ಮೊದಲಾಗುವ ಕೃತಿಯನ್ನು ಹಾಡಿದರೆಂದೂ ಪ್ರತೀತಿಯಿದೆ. ಆದರೆ ಈ ಕತೆಯಲ್ಲಿ ಏನೇನೂ ತಿರುಳಿಲ್ಲದಿರುವುದು ಮಾತ್ರವಲ್ಲ, ಸ್ವಾರಸ್ಯವೂ ಇಲ್ಲ, ತಥ್ಯವಂತೂ ಮೊದಲೇ ಇಲ್ಲ. ಪಂಢರಪುರದ ವಿಟ್ಠಲನ ಗುಡಿಯಲ್ಲಿ ದೇವರ ಎದುರಿಗೆ 'ಸೋಳಹ ಕಂಭಾ' (ಪದಿನಾರು ಕಂಬಗಳ ಮಂಟಪ) ಎನ್ನುವ ಆವರಣವಿದೆ. ಅದರಲ್ಲಿ ಎರಡನೆಯ ಸಾಲಿನಲ್ಲಿರುವ ಎರಡನೆಯ ಕಂಬಕ್ಕೆ ಬೆಳ್ಳಿಯ ತಗಡನ್ನು ಹೊದ್ದಿಸಿ ಕುಂದಣದ ಕೆಲಸವನ್ನು ಮಾಡಿಸಿದ್ದಾರೆ. ಭಕ್ತರು ಈ ಕಂಬವನ್ನು ಅಪ್ಪಿಕೊಂಡು, ಕಾಣಿಕೆ ಸಲ್ಲಿಸಿ ಅನಂತರ ವಿಟ್ಠಲನ ದರ್ಶನ ಮಾಡುವುದು ವಾಡಿಕೆ. ಇದನ್ನೇ 'ಪುರಂದರದಾಸರ ಕಂಬ'ವೆಂದು ಉತ್ಸಾಹಿಗಳು ಗುರುತಿಸುವುದು. ಆದರೆ ಆ ಕಂಬಕ್ಕೂ ಪುರಂದರದಾಸರಿಗೂ ಯಾವ ಬಗೆಯ ಸಂಬಂಧವಾಗಲಿ ಇದ್ದಂತೆ ಸ್ಥಳ ಪುರಾಣದಿಂದಾಗಲೀ ಗುಡಿಯ ವಿಚಾರವಾದ ಒಕ್ಕಣೆಯಿಂದಾಗಲೀ, ಅಲ್ಲಿ ಬಳಕೆಯಲ್ಲಿರುವ ಕಥೆಗಳಿಂದಾಗಲೀ ಸಿದ್ಧವಾಗುವುದಿಲ್ಲ. ಅಲ್ಲಿಯವರು ಅದನ್ನು ಪುರಂದರದಾಸರ ಕಂಬವೆಂದು ಕರೆಯುವುದೂ ಇಲ್ಲ. ಅಲ್ಲಿಯವರಿಗೆ ಅದು 'ಗರುಡಖಂಭ'; ಕಂಬದ ಮೇಲೆ ಕೆತ್ತಿರುವ ಮೂರ್ತಿ ವಿಷ್ಣುವಿನದು. ಪಂಢರಪುರದ ಗುಡಿಯ ಇತಿಹಾಸದಲ್ಲಿ ಪುರಂದರದಾಸರ ಉಲ್ಲೇಖ ಎಳ್ಳಷ್ಟೂ ಬರುವುದಿಲ್ಲ.

ಪುರಂದರದಾಸರ ಕಾಲಕ್ಕೆ ಕನ್ನಡನಾಡು, ಮಹಾರಾಷ್ಟ್ರ, ಆಂಧ್ರಪ್ರದೇಶ ಎಂದು ಈಗಿರುವಂತೆ ನಿಖರವಾದ ನಿರ್ದೇಶನವಿರಲಿಲ್ಲ; ಜನಜೀವನದಲ್ಲಿ ಆಡುಮಾತುಗಳ ಹರವು ಆಡಳಿತದ ಗಡಿಗಳನ್ನು ಅವಲಂಬಿಸಿರಲಿಲ್ಲ. ಈಗ ಮಹಾರಾಷ್ಟ್ರ ಎಂದು ಸ್ಪಷ್ಟವಾಗಿ ಕಾಣಿಸುವ ಪ್ರದೇಶದಲ್ಲಿ ಕೂಡ ಆ ಕಾಲಕ್ಕೆ ಕನ್ನಡ ಮಾತು ವಿಶೇಷವಾಗಿಯೇ ವ್ಯವಹಾರದಲ್ಲಿದ್ದಿತು. ಮರಾಠಿಯ ಬಾಹುಳ್ಯ ಇದ್ದಲ್ಲೂ ಕನ್ನಡಕ್ಕೆ ಮನ್ನಣೆಯಿದ್ದಿತೆನ್ನುವುದು ಜ್ಞಾನದೇವನ 'ಅಭಂಗಮಾಲೆ'ಯಲ್ಲಿ ಕಾಣಸಿಗುವ ಒಂದು ಕನ್ನಡ ಅಭಂಗದಿಂದ ತಿಳಿಯುತ್ತದೆ (ಅಭಂಗ ಸಂಖ್ಯೆ ೩೪೫)-

ಆ ಆ ನೀ ಕೇಳೆ ಮಾತು ಕೇಳಲೆ
ಘನಿಗೆ ಮರುಳಾದೆನೆ ೧
ಚೆಲುವಾನೆ ಚೆಲುವಾನೆ ಪಂಢರಿರಾಯ ಚೆಲುವಾನೆ
ಎಲ್ಲೆ ದೊರೆಕ್ಯಾನೆ ಎಲ್ಲೆ ಬಾರನ್ನೆ ಧ್ರು
ಪುಂಡಲೀಕನ ಭಕ್ತಿಗೆ ಬಂದಾ
ರಖುಮಾದೇವೀ ವರವಿಟ್ಠಲುನೇ ೨

(ಈ ಅಭಂಗದ ಪಾಠವನ್ನು ಡಿ. ಕೆ. ಭೀಮಸೇನರಾಯರು ಉಸ್ಮಾನಿಯ ಯೂನಿವರ್ಸಿಟಿ ರಿಸರ್ಚ್‌ಬೋರ್ಡ್‌ನ ಮೂರನೆಯ ಪ್ರಕಟನೆಯಾಗಿ ಬರೆದ 'ಹದಿಮೂರನೆಯ ಶತಮಾನದ ಕರ್ನಾಟಕಾಂಧ್ರ ಮಹಾರಾಷ್ಟ್ರ ಸಾಹಿತ್ಯಾವಲೋಕನ' ಎಂಬ ಪ್ರಬಂಧದಲ್ಲಿ ಕೊಟ್ಟಿದ್ದಾರೆ. ೧೯೪೨, ಪು. ೬೯ ಈ ಪಾಠದಲ್ಲಿರುವ ಒಂದೆರಡು ತಪ್ಪುಗಳನ್ನು ಇಲ್ಲಿ ತಿದ್ದಿದ್ದೇನೆ). ಪುರಂದರದಾಸರು ಪುರಂದರಘಡದವರೋ ಅಲ್ಲವೋ, ಪಂಢರಪುರದ ವಿಟ್ಠಲನ ಭಕ್ತರಂತೂ ಹೌದು. ಪಂಢರ ಪುರದ ನಂಟನ್ನು ತಮ್ಮ ಬಾಳಿನುದ್ದಕ್ಕೂ ಉಳಿಸಿಕೊಂಡಿದ್ದರೂ ಆಶ್ಚರ್ಯವಲ್ಲ. ಮರಾಠೀ ಸಂತವಾಙ್ಮಯದ ಪ್ರಭಾವ ಪುರಂದರಸಾಹಿತ್ಯದ ಮೇಲೆ ಚೆನ್ನಾಗಿಯೇ ಬಿದ್ದಿದೆ. ಪುರಂದರದಾಸರ ಸಾಹಿತ್ಯವೂ ಮರಾಠಿಯಲ್ಲಿ ಬಳಕೆಗೆ ಬಂದಿದೆ. ಪುರಂದರದಾಸರು ತಮ್ಮ ತಾಯ್ನುಡಿಯಾದ ಕನ್ನಡದಲ್ಲೇ ಕೃತಿರಚನೆ ಮಾಡಿದರೂ ಅದು ಊರ್ಜಿತವಾದದ್ದು ಮೊದಲು ಮಹಾರಾಷ್ಟ್ರದ ಕಡೆಯೇ. 'ಮರಾಠೀ ಸಂತಮಾಲೆ'ಯಲ್ಲಿ ಪುರಂದರದಾಸರು ಸೇರುತ್ತಾರೆ; ಅಜಗಾಂವಕರರ 'ಮಹಾರಾಷ್ಟ್ರ ಕವಿಚರಿತೆ'ಯಲ್ಲಿ ಇವರ ಹೆಸರೂ ಇದೆ.

ವಿಜಯದಾಸರು ಪುರಂದರದಾಸರನ್ನು ತಮ್ಮ ದೀಕ್ಷಾಗುರುಗಳು ಎಂದು ಸ್ವೀಕರಿಸಿದ ನಂತರ ಪುರಂದರಸಾಹಿತ್ಯವನ್ನು ಹೆಚ್ಚು ಬಳಕೆಗೆ ತಂದುದಲ್ಲದೆ ಭಾಗವತಧರ್ಮವನ್ನು ಹರಡಲೆಂದು ತಾವೇ ದಾಸಸಾಹಿತ್ಯವನ್ನು ರಚಿಸಿದರು. ಅವರ ಕೃತಿಗಳಲ್ಲಿ ತಮ್ಮ ಪ್ರಾಸಾದಿಕ ಗುರುಗಳಾದ ಪುರಂದರದಾಸರ ಹೆಗ್ಗಳಿಕೆಯನ್ನು ಹೇಳುವ, ಅವರಿಗೆ ತಮ್ಮ ಕೃತಜ್ಞತೆಯನ್ನು ಸೂಚಿಸುವ, ಅವರ ಬಾಳಕತೆಯನ್ನು ತಿಳಿಯಹೇಳುವ ಅನೇಕ ಕೃತಿಗಳಿವೆ. ಇವುಗಳಲ್ಲಿ ಇಪ್ಪತ್ತೆರಡನ್ನು ಲಿಂಗಸೂಗೂರಿನ ಶ್ರೀ ಗೊರಾಬಾಳ ಹನುಮಂತರಾಯರು (ವರದೇಂದ್ರ ಹರಿದಾಸ ಸಾಹಿತ್ಯ ಮಂಡಳ) ಒಂದೆಡೆ ಕಲೆಹಾಕಿ ಕಾಣಿಸಿದ್ದಾರೆ. ಈ ಸಂಗ್ರಹದಿಂದ ವ್ಯಕ್ತವಾಗುವ ಅಂಶವೆಂದರೆ ಪುರಂದರದಾಸರ ಬಾಳುವೆಯ ವಿಚಾರವಾಗಿ ನಿಖರವಾದ ಮಾಹಿತಿ ವಿಜಯದಾಸರಿಗೆ ಇರಲಿಲ್ಲವೆಂಬುದು. ನಂಬಿಕೆಗಳು,

ಪ್ರತೀತಿಗಳು, ಕತೆಗಳು, ಕಲ್ಪನೆಗಳು ಇವನ್ನೆಲ್ಲ ಅವಲಂಬಿಸಿ ಕೆಲವು ಪ್ರಸಂಗಗಳನ್ನು ಅವರು ಹೆಣೆದಿರುವುದು ಎದ್ದು ಕಾಣುತ್ತದೆ. ಅವರ ಬೇರೆ ಬೇರೆ ಕೃತಿಗಳಲ್ಲಿ ಬೇರೆ ಬೇರೆ ಒಕ್ಕಣೆಗಳಿವೆ; ಹೊಂದಾಣಿಕೆ ಅಷ್ಟಾಗಿ ಇರದು. ಇನ್ನು, ಅವರ ಜಾಡಿನಲ್ಲಿ ನಡೆದುಬಂದ ಇತರ ಹರಿದಾಸರು ಪುರಂದರದಾಸರನ್ನು ಕುರಿತು ತಂತಮ್ಮ ಕಲ್ಪನೆಗಳನ್ನೇ ಮುಂದೆಮಾಡಿಕೊಂಡು ರಂಜಕವಾದ, ಆದರೆ ಅಬದ್ಧವಾದ, ಕತೆಗಳನ್ನು ಕಟ್ಟಿದ್ದಾರೆ.

ಪುರಂದರದಾಸರ ಕೃತಿಗಳಲ್ಲಿ ಕೆಲವಕ್ಕೆ ಸಂದರ್ಭಗಳನ್ನು ಸೃಷ್ಟಿಸಿ, ಅವನ್ನು ಅವರ ಬದುಕಿಗೆ ಹೊಂದಿಸಿರುವುದೂ ಇದೆ. 'ಗಿಳಿಯು ಪಂಜರದೊಳಿಲ್ಲ' ಎಂಬ ಹಾಡು ತಮ್ಮ ಮಗನು ತೀರಿಕೊಂಡಾಗ; 'ಮುಯ್ಯಿಕ್ಕೆ ಮುಯ್ಯ ತೀರಿತಯ್ಯ' ಎಂಬ ಹಾಡು ಪಂಢರಪುರದಲ್ಲಿ ಅಧಿಕಾರಿಗಳು ತಮ್ಮನ್ನು ಕಂಬಕ್ಕೆ ಕಟ್ಟಿಸಿ ಹೊಡೆಸಿದಾಗ; 'ಹರಿಶರಣರೆನ್ನ ಮನೆಯ ಮೆಟ್ಟಲು' ಎಂಬ ಸುಳಾದಿ ಕುಮಾರವ್ಯಾಸ ಕವಿಯು ಅವರನ್ನು ಕಾಣಲು ಬಂದಾಗ; 'ಆದದ್ದೆಲ್ಲ ಒಳಿತೇ ಆಯಿತು' ಎಂದು ಮೊದಲಾಗುವ ಹಾಡು ತಮಗೆ ಹೆಂಡತಿಯ ನೆರವಿನಿಂದ ವಿರಕ್ತಿ ಒದಗಿದಾಗ; 'ಬದುಕಿದೆನು ಬದುಕಿದೆನು ಭವವೆನಗೆ ಹಿಂಗಿತು' ಎಂಬ ಪದ ಅವರಿಗೆ ವ್ಯಾಸತೀರ್ಥರಿಂದ ಹರಿದಾಸ ದೀಕ್ಷೆ ಒದಗಿದಾಗ; 'ಕರೆದರೆ ಓ ಎನಬಾರದೆ?' ಎಂದು ಮೊದಲಾಗುವ ಹಾಡು ತಮ್ಮ ಮಲತಾಯಿ ತಮಗೆ ವಿಷವುಣಿಸಿ ಕೊಲ್ಲಲು ಯತ್ನಿಸಿ ವಿಫಲಳಾದಾಗ; 'ತಿಳಿಯದು ಜನರಿಗೆ ಜ್ಞಾನಿಗಳ ಮಹಿಮೆ' ಎಂಬ ಹಾಡು ತಮ್ಮ ಮಗಳು ಅತ್ತೆ ಮಾವಂದಿರಿಂದ ಅವಮಾನಿತಳಾದಾಗ ; 'ನಿಮ್ಮ ಭಾಗ್ಯ ದೊಡ್ಡದೋ ನಮ್ಮ ಭಾಗ್ಯ ದೊಡ್ಡದೋ?' ಎಂಬ ಹಾಡು ಕೃಷ್ಣದೇವರಾಯ ಮಹಾರಾಯನು ತಮ್ಮನ್ನು ಪರೀಕ್ಷೆಗೆ ಒಳಪಡಿಸಿದಾಗ; 'ಕದವನಿಕ್ಕಿದಳಿದೆಕೋ ಗೈಯಾಳಿ' ಎಂಬ ಹಾಡು ತಾವು ನಿತ್ಯಯಾತ್ರೆಯಲ್ಲಿ ಒಬ್ಬಾಕೆಯ ಮನೆಯ ಮುಂದೆ ಬಂದು ನಿಂತಾಗ; 'ಎಂದಪ್ಪಿಕೊಂಬೆ ರಂಗಯ್ಯನ' ಎಂಬ ಹಾಡು ತಮ್ಮ ಶಿಷ್ಯ ಅಪ್ಪಣ್ಣ ಭಾಗವಂತನಂತೆ ವಿಟ್ಠಲನೇ ಮೈವೆತ್ತಿ ಬಂದು ತುಪ್ಪವನ್ನು ಬಡಿಸಿದಾಗ; ಇತ್ಯಾದಿ ಇತ್ಯಾದಿ. ಆದರೆ ಈ ಪ್ರಸಂಗಗಳೆಲ್ಲ ಕೇವಲ ಕಲ್ಪನೆಗಳು; ವಿಚಾರದ ವಂದರಿಯಲ್ಲಿ ನಿಲ್ಲದೆ ತೂರಿಹೋಗುವಂಥವು. ಇವುಗಳನ್ನು ವಿಜಯದಾಸರೂ ಪ್ರಸ್ತಾಪಿಸಿಲ್ಲ ವೆನ್ನುವುದು ಸಮಾಧಾನದ ಮಾತು.

ಪುರಂದರದಾಸರನ್ನು ಕುರಿತಂತೆ ವಿಜಯದಾಸರ ಬೇರೆ ಬೇರೆ ಒಕ್ಕಣೆಗಳಲ್ಲಿ ಹೊಂದಾಣಿಕೆ ಯಿಲ್ಲದ, ವಿಚಾರಕ್ಕೆ ನಿಲ್ಲಲಾರದ, ಸಂದಿಗ್ಧವೆನಿಸುವ ವಿವರಗಳನ್ನು ಬಿಟ್ಟರೆ ಉಳಿಯುವ ಹಂದರ ಇಷ್ಟೇ (ವಿಜಯದಾಸರ ಮಾತಿನಲ್ಲೇ)-

(೧) 'ಪುರಂದರವೆಂಬ ನಗರಿಯಲಿ ಜನಿತರಾದರು' (ಒಂದು ಪದದಲ್ಲಿ ಇಷ್ಟೇ ವಿವರ, ಇನ್ನೊಂದು ಪದದಲ್ಲಿ 'ಪುರಂದರಗಡದ ಒಳಗೆ ಹಿರಿಯ ಸಾವುಕಾರರೆನಿಸಿ', ಮತ್ತೊಂದು ಪದದಲ್ಲಿ 'ಪುರಂದರಾಲಯಘಟ್ಟದಲಿ');

(೨) 'ಕೆಲವು ದಿನ ಸಂಸಾರವೃತ್ತಿಯಲಿ ಚರಿಸಿದರು' (ಒಂದರಲ್ಲಿ ಇದು ವಿವರ, ಇನ್ನೊಂದರಲ್ಲಿ 'ಪರಿಪರಿಯ ಸೌಖ್ಯಗಳ ಸುರಿಸುತ ಇರುತಿರಲು');

(೩) ಅನಂತರ 'ಜರಿದು ವೈರಾಗ್ಯವನು ತೊಟ್ಟು ದೃಢಮನಸಿನಲಿ, ತರುಣಿಮಕ್ಕಳು ಸಹಿತ ಸೇರಿದರು ಕಿಷ್ಕಿಂಧವರತುಂಗ ಪಂಪದಲ್ಲಿ; (ಎಂದರೆ ವಿರಕ್ತರಾಗಿ ಹಂಪಿಗೆ ಬಂದರು);

(೪) 'ವಾಸವನೆ ಮಾಡಿದರು... ವ್ಯಾಸರಾಯರ ಬಳಿ ಮುದ್ರೆ ಗುರುಮಂತ್ರ ಉಪದೇಶವನು ಕೊಂಡು ವೈಷ್ಣವರಾಗಿ ಪುರಂದರ ದಾಸರೆಂಬ ಪೆಸರಲಿ';

(೫) ದೇಶವನೆ ತಿರುಗಿ ಪುಣ್ಯಕ್ಷೇತ್ರಗಳ ಮೆಟ್ಟಿ, ಲೇಸಾಗಿ ಅಲ್ಲಿದ್ದ ಮಹಿಮೆಗಳ ಪೇಳಿ, ದುರಾಶೆಯನು ತೊರೆದು ವಿಟ್ಠಲನ ಸನ್ನಿಧಿಯಲ್ಲಿ ವಾಸವಾದರು ಧರ್ಮನಡತೆಯಲಿ' (ಇದು ಪಂಢರಪುರವೋ ಹಂಪಿಯ ವಿಜಯವಿಟ್ಠಲಾಲಯವೋ ತಿಳಿಯದು);

(೬) 'ಅವರಿಂದ ವಚನಗಳು ಎಲ್ಲ ವೇದಾರ್ಥವಾಗಿ ಅವನಿಯೊಳು ತುಂಬಿಹವು.'

ವಿಜಯದಾಸರು ಪುರಂದರದಾಸರ ದೀಕ್ಷೆಗೆ ಮುಂಚಿನ ಹೆಸರನ್ನಾಗಲಿ, ಅವರ ತಂದೆಯ ಹೆಸರನ್ನಾಗಲಿ ಹೆಂಡತಿಯ ಹೆಸರನ್ನಾಗಲಿ ಹೇಳಿಲ್ಲ. ಒಂದು ಸಂದಿಗ್ಧವಾದ ಅವರ ಕೃತಿಯಲ್ಲೇನೋ ತಂದೆಯ ಹೆಸರು ವರದಪ್ಪನಾಯಕನೆಂದಿದೆ; ಜಗನ್ನಾಥದಾಸರೂ 'ವರದನಾಮಕಭೂಸುರನ ಮಡದಿಯ ಬಸಿರಿನಲ್ಲಿ ಬಂದ'ವರೆಂದು ಹೇಳಿದ್ದಾರೆ ('ದಾಸರಾಯಾ ಪುರಂದರದಾಸರಾಯಾ' ಎನ್ನುವ ಹಾಡಿನಲ್ಲಿ). 'ಪುರಂದರವಿಠಲ'ನೆಂಬ ಅಂಕಿತ ಅವರಿಗೆ ವ್ಯಾಸತೀರ್ಥರಿಂದ ದೊರೆತ ಮೇಲೆ ಅವರು 'ಪುರಂದರದಾಸ'ರೆನಿಸಿದರೆಂದು ವಿಜಯದಾಸರ ಹೇಳಿಕೆ. ಅದಕ್ಕೆ ಮೊದಲು ಅವರ ಹೆಸರು ಸೀನಪ್ಪ (ಶ್ರೀನಿವಾಸ) ನಾಯಕನೆಂದೋ ಕೃಷ್ಣಪ್ಪ ನಾಯಕನೆಂದೋ ಇದ್ದಿತೆಂದು ಸಂಪ್ರದಾಯದ ನಂಬಿಕೆ. ನಾಯಕನೆನ್ನುವ ಮಾತು ವೃತ್ತಿಯನ್ನಾಗಲಿ ಅಧಿಕಾರವನ್ನಾಗಲಿ ಕುಲವನ್ನಾಗಲಿ ಸೂಚಿಸುವಂಥದಲ್ಲ. ಹಂಪಿಯಲ್ಲಿದ್ದರೂ, ಕೃಷ್ಣದೇವರಾಯನ ಪರಿಚಿತರಾದರೂ, ವ್ಯಾಸರಾಯರ ಆಶ್ರಿತರಾದರೂ ಅವರು ಯಾವ ಅಧಿಕಾರವನ್ನೂ ಎಂದೂ ನಿರ್ವಹಿಸಿದವರಲ್ಲ. ದಾಸರಾಗುವ ಮೊದಲು ಶ್ರೀಮಂತ ಗೃಹಸ್ಥರಾಗಿದ್ದರೆಂದು ಮಾತ್ರ ಹೇಳಬಹುದು. 'ಗುರು ಪುರಂದರದಾಸ'ರೆಂಬುವರ ಹಾಡಿನಲ್ಲಿ ತಂದೆಯ ಹೆಸರು ವಿಟ್ಠಲನೆಂದೂ, ವೃತ್ತಿಯಲ್ಲಿ ಚಿನಿವಾರರೆಂದೂ, 'ಪಟ್ಟೆ ಧನಧಾನ್ಯ ಕೋಟ್ಯಾಧಿಕಾರಿಯು ಆಗಿ, ಅಷ್ಟದಿಕ್ಕಿಲಿ ದ್ರವ್ಯ ಮೆರೆಯುತ್ತಿದ್ದಿ' ತೆಂದೂ ಹೇಳಿದೆ. ಸಾಮಾನ್ಯವಾಗಿ ನಂಬಲಾಗಿರುವ ಲೋಭಸ್ವಭಾವ ಪುರಂದರದಾಸರಿಗಿದ್ದಿತೆಂದು ವಿಜಯದಾಸರ ಬಾಯಿಂದ ಬಂದಿಲ್ಲ.

ವಿಜಯದಾಸರ ಕಾಲಕ್ಕೆ ಸ್ವಲ್ಪ ಮುಂಚೆ ಬದುಕಿ ಬಾಳಿದ ಪ್ರಸನ್ನ ವೇಂಕಟದಾಸರ (ನಿರ್ಯಾಣ ಸಂವತ್ಸರ ೧೬೭೪) ಪ್ರಸ್ತಾಪ ಆಗಲೇ ಬಂದಿತು. ಈಗಾಗಲೇ ಉಲ್ಲೇಖಿಸಿರುವ ಇವರ ಪದವೊಂದರಲ್ಲಿ ಪುರಂದರದಾಸರನ್ನು ಕುರಿತು ಈ ವಿವರಣೆಗಳನ್ನು ಒದಗಿಸಿದ್ದಾರೆ.

ತಂದೆ ಪುರಂದರದಾಸರ ಸ್ಮರಿಸುವೆ-ಎನ್ನ
ಮಂದಮತಿಗಳ ಕಳೆದು ಹರಿಭಟನೆನಿಸುವ
ಗುರು ವ್ಯಾಸರಾಯರ ಚರಣಾಷಟ್ಚರಣ
ವಿರತಿ-ಭಕುತಿ-ಜ್ಞಾನಾರ್ಣವನ।
ವರ ಉಪನಿಷದ್ವಾರಿಧಿಗೆ ತಿಮಿಂಗಿಲನಹನ
ಧರೆಯ ಕವಿಕುಲ ಶಿಖಾಮಣಿಯೆನಿಪನ ೧

ದಿನದಿನ ದ್ರವ್ಯಾರ್ಥಿಲಾಭದಲಿ ತುಷ್ಟನ
ಕನಕಲೋಷ್ಟಸಮಾನ ನಿರೀಕ್ಷಿಸುವವನ
ಘನ ಸಿದ್ಧಿಗಳು ತಾವು ಬರಲೊಡಂಬಡದೆ ಹರಿ
ಗುಣ-ಕೀರ್ತನೆಯಲಿ ಪರವಶನಾಗಿಹನ ೨

ಭವಜಲಧಿ ಗೋಷ್ಪದಕೆ ಸರಿಮಾಡಿ ಕಾಮಕ್ರೋ-
ಧವ ಮೆಟ್ಟಿ ಭಕ್ತಿ ಸುಧೆಯುಂಡು ತೇಗಿ
ಭುವಿಯೊಳು ನಿಜಕೀರ್ತಿ ಹರಹಿ ಪವನಮತ-
ದವರೆನಿಪ ದಾಸರಿಗೆ ತವರೂಪ ತೋರಿದವನ ೩

ಕವನೋಕ್ತಿ ಮಳೆಗರೆದು ಹರಿದಾಸವರ್ಗಳಿಗೆ
ಅವಿರಳಾನಂದ ವಿತರ್ಥಿಸುವರ
ನವ ಭಕುತಿಯನು ಕಂಡು ಸವೆಯದಾನಂದಪುರ ಪ-
ಥವನು ತೋರಿಸಿದಂಥ ಬಹುಕೃಪಾಕರನ ೪

ಗೀತ ಠಾಯಿ ಸುಳಾದ್ಯುಗಾಭೋಗ ಪದ ಪದ್ಯ
ವ್ರಾತ ಪ್ರಬಂಧ ರಚಿಸಿ ವಿಟ್ಠಲನ
ಪ್ರೀತಿ ಪಡಿಸಿ ಪ್ರತ್ಯಕ್ಷ ಕಂಡು ನಲಿವ ವೈಷ್ಣವಾಗ್ರ-
ನಾಥ ಪ್ರಸನ್ನ ವೆಂಕಟ ಕೃಷ್ಣ ಪ್ರಿಯನ ೫

ಇದರಲ್ಲಿ ಪುರಂದರದಾಸರ ವ್ಯಕ್ತಿತ್ವದ ಹೆಗ್ಗಳಿಕೆ, ಹರಿದಾಸ್ಯದ ಹಿರಿಮೆ, ಬದುಕಿನ ಉತ್ಕೃಷ್ಟ ಮೌಲ್ಯಗಳು ಉಲ್ಲೇಖಗೊಂಡಿವೆಯಷ್ಟೆ. ಅವರ ಬದುಕಿನ ವಿವರಗಳಾಗಲಿ, ಕತೆಗಳಾಗಲಿ, ಪ್ರತೀತಿಗಳಾಗಲಿ ಏನೂ ಕಾಣಸಿಗುವುದಿಲ್ಲ. ವಿಜಯದಾಸರ ಕಾಲಕ್ಕೆ ಮುಂಚೆ ಇವು ಯಾವುವೂ ಇನ್ನೂ ಸಿದ್ಧವಾಗಿರಲಿಲ್ಲವೆಂದು ತೋರುತ್ತದೆ! ವ್ಯಾಸರಾಯರ ಶಿಷ್ಯರೆಂಬುದೇನೋ ಇಲ್ಲಿ ಪ್ರಸ್ತಾಪಕ್ಕೆ ಬಂದಿದೆ.

ದಾಸರನ್ನು ಕುರಿತು ಮಾಡಿರುವ ಈ ಒಂದು ಹಾಡು ಆ ಕಾಲಕ್ಕೆ ಪುರಂದರದಾಸರನ್ನು ಕುರಿತು ಇದ್ದ ಕಲ್ಪನೆಯನ್ನು ಸ್ಪಷ್ಟಪಡಿಸುತ್ತದೆ. ಇದರಲ್ಲಿ ಯಾವ ಅತ್ಯುಕ್ತಿಯಾಗಲಿ, ಆಡಂಬರವಾಗಲಿ, ಅದ್ಭುತಪ್ರಸಂಗಗಳಲ್ಲಿ ಪ್ರೀತಿಯಾಗಲಿ, ಅನಗತ್ಯ ವಿಚಾರವಾಗಲಿ ಇಲ್ಲದಿರುವುದನ್ನು ಗಮನಿಸಬೇಕು.

ದಾಸರಾಯಾ ಪುರಂದರ ದಾಸರಾಯಾ

ದಾಸರಾಯ ಪ್ರತಿವಾಸರದಲಿ ಶ್ರೀನಿ-
ವಾಸನ ತೋರೊ ದಯಾಸಾಂದ್ರಮೂರುತಿ

ವರದನಾಮಕ ಭೂಸುರನ ಮಡದಿಯ ಬ-
ಸಿರಲಿ ಬಂದು ನೀ ಮೆರೆದೆ ಧರಣಿಯೊಳು ೧

ಕುಲಿಶಧರಾಹ್ವಯ ಪೊಳಲೊಳು ಮಡದಿಮ-
ಕ್ಕಳ ಕೂಡಿ ಸುಖದಿಂ ಕೆಲಕಾಲವಿರುತಿದ್ದೆ ೨
ಮನೆ ಧನ ಧಾನ್ಯ ವಾಹನ ವಸ್ತುಗಳನೆಲ್ಲ
ತೃಣಕೆ ಬಗೆದು ಕೃಷ್ಣಾರ್ಪಣವೆಂದೆ ಬುಧರಿಗೆ ೩

ವ್ಯಾಸರಾಯರಲಿ ಭಾಸುರಮಂತ್ರೋಪ-
ದೇಶವ ಕೊಂಡು ರಮೇಶನನೊಲಿಸಿದೆ ೪

ಪ್ರಾಕೃತ ಭಾಷೆಯಲಿ ನೀ ಕೃತಿಪೇಳಿ ಅ-
ಪ್ರಾಕೃತ ಹರಿಯಿಂದ ಸ್ವೀಕೃತ ನೀನಾದೆ ೫

ತೀರ್ಥಕ್ಷೇತ್ರಗಳ ಮೂರ್ತಿಮಹಿಮೆಗಳ
ಕೀರ್ತಿಸಿ ಜಗದಿ ಕೃತಾರ್ಥನೆಂದೆನಿಸಿದೆ ೬

ಪಾತಕವನನಿಧಿಪೋತನೆನಿಪ ಜಗ-
ನ್ನಾಥ ವಿಠಲನ ಸಂಪ್ರೀತಿಯ ಪಡೆದೆ ೭

ಪುರಂದರದಾಸರಿಗೆ ಮೂವರು ಗಂಡುಮಕ್ಕಳಿದ್ದ ವಿಚಾರ ಅವರ ಕಾಲದಲ್ಲಿಯೇ ಹೊರಟ ಕಮಲಾಪುರದ ತಾಮ್ರ ಶಾಸನದಲ್ಲಿ ಉಲ್ಲೇಖವಾಗಿರುವುದನ್ನು ಈಗಾಗಲೇ ಗಮನಿಸಿದ್ದೇವೆ. ಶಾಸನದಲ್ಲಿ ಅವರ ಹೆಸರುಗಳನ್ನೂ ಹೇಳಲಾಗಿದೆ-ಲಕ್ಷ್ಮಣದಾಸ, ಹೇಬ(ವ)ಣದಾಸ ಮತ್ತು ಮಧ್ವಪದಾಸ ಎಂದು. ಆದರೆ ವಿಜಯದಾಸರ ಸುಳಾದಿಯೊಂದರಲ್ಲಿ ಪುರಂದರದಾಸರಿಗಿದ್ದವರು ನಾಲ್ವರು ಮಕ್ಕಳೆಂದೂ ('ದಾಸರು ದಾಸರ ಸುತರು ನಾಲ್ವರ ಮುಂದೆ...') ಅವರೊಂದಿಗೆ ಕೂಡಿಕೊಂಡು ಪುರಂದರದಾಸರು 'ಪುರಂದರ', 'ವರದ', 'ಗುರು', 'ಅಭಿನವ', 'ಗುರುಮಧ್ವಪತಿ' ಎಂಬ ಅಂಕಿತಗಳಿಂದ ಕೃತಿರಚನೆ ಮಾಡಿದರೆಂದೂ ಹೇಳಿದೆ. ಇದರಿಂದ ನಾಲ್ವರು ಮಕ್ಕಳ ಹೆಸರುಗಳು ವರದಪ್ಪ, ಗುರುರಾಯ, ಅಭಿನವ, ಮಧ್ವಪತಿಯೆಂದು ಸಂಪ್ರದಾಯದ ಎಣಿಕೆ. ಈ ಹೆಸರುಗಳು ಮೇಲೆ ಕಾಣಿಸಿದ ಶಾಸನದಲ್ಲಿ ಬರುವ ಹೆಸರುಗಳಿಗಿಂತ ಬೇರೆಯಾಗಿವೆಯಲ್ಲವೆ? ಕಡೆಯವನಾದ ಮಧ್ವಪದಾಸನೇ ಮಧ್ವಪತಿದಾಸನೆಂದೇನೋ ಬಗೆಯಬಹುದು. ಶಾಸನದ ಲಕ್ಷ್ಮಣದಾಸ, ಹೇಬ(ವ)ಣದಾಸರಿಗೇನು ಹೇಳುವುದು? ಹೇಬ(ವ)ಣ ಎಂಬ ಹೆಸರು ಸೋಜಿಗವಾದುದು. ಬಹುಶಃ 'ಹಯವದನ' ಎನ್ನುವುದರ ಅಪಭ್ರಂಶವಿದ್ದೀತು: ಹೈವಣ ಎಂದಿದ್ದು ಹೇವ (ಬ)ಣ ಎಂದಾಯಿತೋ ಏನೋ. ಇರಲಿ, ಸಂಪ್ರದಾಯದ ನಾಲ್ಕನೆಯವನೆಲ್ಲಿಂದ ಬಂದ? ಸಂಪ್ರದಾಯದಲ್ಲಿ ಇನ್ನೂ ಒಂದು ಎಣಿಕೆಯಿದೆ, ಪುರಂದರದಾಸರು ಬದುಕಿರುವಾಗಲೇ ಮೊದಲ ಮೂವರು ಮಕ್ಕಳು ತೀರಿಕೊಂಡರೆಂಬುದು. ಮತ್ತೂ ಒಂದು ವಿವರದ ಸೇರ್ಪಡೆ, ಪುರಂದರದಾಸರಿಗೆ ಮಗಳೂ ಒಬ್ಬಳು ಇದ್ದಳೆಂಬುದು! ಇದಕ್ಕೆ ಎಲ್ಲಿಯ ಆಧಾರವೋ ತಿಳಿಯದು.

ದಾಸಕೂಟದವರಲ್ಲಿ ಬಳಕೆಯಲ್ಲಿರುವ ಕೆಲವು ಹಾಡುಗಳಲ್ಲಿ 'ವರದಪುರಂದರ', 'ಗುರುಪುರಂದರ', 'ಅಭಿನವ ಪುರಂದರ', 'ಗುರುಮಧ್ವಪತಿ ವಿಠಲ' ಎಂಬ ಅಂಕಿತಗಳಿರುವುದು

ಕಂಡುಬರುತ್ತದೆ. ಆದರೆ ಅವೆಲ್ಲ ಪುರಂದರದಾಸರ ಮಕ್ಕಳ ಕೃತಿಗಳೆಂದು ಹೇಳಲು ಆಧಾರ ಸಾಲದು. 'ಗುರುಮಧ್ವಪತಿ ವಿಠಲ'ನೆಂಬ ಅಂಕಿತವನ್ನು ಹೊತ್ತ ಎರಡು ಹಾಡುಗಳಲ್ಲಿ ಒಂದು ಪುರಂದರದಾಸರ ಬಾಳುವೆಯಲ್ಲಿ ನಡೆದದ್ದೆಂಬ ಪ್ರಸಂಗವನ್ನು ಕುರಿತದ್ದು : 'ಕಂದಗ್ಹೇಳಿದರು ಪುರಂದರದಾಸರು' ಎಂದು ಮೊದಲಾಗುತ್ತದೆ. ಇಲ್ಲಿ ಹಂಪಿಯ ಯಂತ್ರೋದ್ಧಾರ ಪ್ರಾಣದೇವರಿಗೆ ನೈವೇದ್ಯವನ್ನಿಟ್ಟು ಬಾರೆಂದು ಮಗನಾದ ತನ್ನನ್ನು ಕಳುಹಿಸಿದರೆಂದೂ, ತಾನು ಮುಗ್ಧಭಕ್ತಿಯಿಂದ ಇರಿಸಿದ ನೈವೇದ್ಯವನ್ನು ಕಲ್ಲಿನ ಹನುಮಂತನು ತಿಂದನೆಂದೂ ಒಕ್ಕಣೆಯಿದೆ. ಪುರಂದರದಾಸರ ಹಿರಿಮೆಯನ್ನು ಸಾರುವುದಕ್ಕಿಂತ ಹೆಚ್ಚಾಗಿ ತನ್ನ ಹೆಗ್ಗಳಿಕೆಯನ್ನೇ ಹಾಡಿ ಹೊಗಳಿಕೊಂಡಿರುವ ಈ ಪದ ಎಷ್ಟರಮಟ್ಟಿಗೆ ಅಷ್ಟು ಹಳೆಯದೋ ತಿಳಿಯದು. ಮತ್ತೆ ಇದರಲ್ಲಿ ಕೋಳೂರು ಕೊಡಗೂಸಿನ ಕತೆಯ ಪ್ರಭಾವ ಎಷ್ಟರಮಟ್ಟಿಗೆ ಇದೆಯೋ?

ಇನ್ನೊಂದು ಹಾಡು ಪುರಂದರದಾಸರ ಮರಣವನ್ನು ಕುರಿತದ್ದು: 'ತೆರಳಿದರು ಹರಿಪುರಕಿಂದು' ಎಂದು ಮೊದಲಾಗುತ್ತದೆ. ರಕ್ತಾಕ್ಷಿ ಸಂವತ್ಸರದ ಪುಷ್ಯ ಬಹುಳ ಅಮಾವಾಸ್ಯೆ ಭಾನುವಾರದಂದು 'ವಿರೂಪಾಕ್ಷ ಕ್ಷೇತ್ರದಿ' (ಎಂದರೆ ಹಂಪಿಯಲ್ಲಿ) 'ವಿಠಲನ ಸನ್ನಿಧಿಯಲಿ' (ಎಂದರೇನೋ ತಿಳಿಯದು, ವಿಜಯವಿಠಲನ ಗುಡಿಯಲ್ಲೋ?) 'ಶರೀರವನು ಇರಿಸಿ ಅನಾಥರನು ಹರಸಿ...' ಇತ್ಯಾದಿಯಾಗಿ. ಶರೀರವಿತ್ತ ತಂದೆಯೂ, ಸ್ವರೂಪೋದ್ಧಾರ ಮಾಡಿದ ದೀಕ್ಷಾಗುರುವೂ, ಸರ್ವಸನ್ಮಾನ್ಯರೂ ಆಗಿದ್ದ ಪುರಂದರದಾಸರು ತೀರಿಕೊಳ್ಳುವಾಗ ಹತ್ತಿರದಲ್ಲೇ ಇದ್ದ ಮಗ, ಕವಿಯೂ ಹರಿದಾಸನೂ ಆಗಿದ್ದವನು, ರಚಿಸಿರುವ ಕವಿತೆಯಂತೆ ಅದೇನು ತೋರುವುದಿಲ್ಲ. ಮರಣದ ಉದಾಸೀನ ದಾಖಲೆಯಂತೆ ಸಿದ್ಧವಾದ ಈ ಕೃತಿ ಯಾರದ್ದೋ, ಯಾವಾಗ ಸಿದ್ಧವಾಯಿತೋ ಹೇಳುವುದು ಕಷ್ಟ. ಆದರೆ ಪುರಂದರದಾಸರು ತೀರಿಕೊಂಡ ವರ್ಷವನ್ನು ತಿಳಿಸುವುದರಿಂದ ಈ ಹಾಡಿಗೆ ಸ್ವಲ್ಪ ಬೆಲೆಯಿದೆ.

೪

ನಾಯಕರಾಗಿದ್ದು 'ಮಡದಿಮಕ್ಕಳ ಕೂಡಿ ಸುಖದಿಂ' ಇರುತಿದ್ದು, 'ಪರಿಪರಿಯ ಸೌಖ್ಯಗಳ' ಅನುಭವಿಸುತ್ತಿದ್ದವರು 'ಜರಿದು ವೈರಾಗ್ಯವನು' ತಳೆದದ್ದು ಹೇಗೆ? 'ಮನೆ ಧನ ಧಾನ್ಯ ವಾಹನ ವಸ್ತುಗಳನ್ನೆಲ್ಲ ತೃಣಕೆ ಬಗೆದು ಬುಧರಿಗೆ ಕೃಷ್ಣಾರ್ಪಣ'ವೆಂದದ್ದು ಹೇಗೆ? ಇದನ್ನು ಹೇಳಲು ಮುತ್ತಿನ ಮೂಗುತಿಯ ಕತೆ ಈಗ ಎಲ್ಲರಿಗೂ ಪರಿಚಿತವಾದದ್ದಷ್ಟೆ. ಈ ಕತೆಗೆ ಮೂಲ ಎಲ್ಲಿಯದು? ದಾಸರ ಪದಗಳಲ್ಲೇನೋ ಇದರ ಸೂಚನೆಯೂ ಇಲ್ಲ, ಧ್ವನಿಯೂ ಇಲ್ಲ. ಇದು ಮೊಟ್ಟ ಮೊದಲು ನಮ್ಮ ಕಣ್ಣಿಗೆ ಬೀಳುವುದು ವಿಜಯದಾಸರದ್ದೆಂದು ಹೇಳುವ 'ಬೇಸರದೆ ಭಜಿಸಿರೋ ಪುರಂದರದಾಸರ' ಎಂಬ ಹಾಡಿನಲ್ಲಿ . ಇದರ ವಿಚಾರವಾಗಿ ಆಗಲಿ, ಪುರಂದರದಾಸರು ಪರಮಲೋಭಿಗಳಾಗಿದ್ದರೆಂಬ ವಿಚಾರವಾಗಲಿ ವಿಜಯದಾಸರ ಇನ್ನಾವ ಕೃತಿಯಲ್ಲಿ, ಅದೇ ಕಾಲದ ಪ್ರಸನ್ನವೇಂಕಟದಾಸರ, ಜಗನ್ನಾಥದಾಸರ ಕೃತಿಗಳಲ್ಲಿ ಕಂಡುಬರುವುದಿಲ್ಲ. ಈ ಕತೆ ಮೂಡಿಕೊಂಡು ಬಂದಿರುವ ಹಾಡೂ ವಿಜಯದಾಸರದ್ದೇ ಎಂಬುದು ಖಚಿತವಲ್ಲ. ಈ ಹಾಡಿನ ಹಳೆಯ ಒಂದೆರಡು ಹಸ್ತ ಪ್ರತಿಗಳಲ್ಲಿ 'ಕೇಶವವಿಠಲ' ಎಂಬ ಅಂಕಿತವಿರುವುದನ್ನು ಧಾರವಾಡದ ಶ್ರೀ ಪುರಂದರದಾಸರ ೪೦೦ನೇ ಉತ್ಸವ ಸಮಿತಿಯ ಸಂಪಾದಕರು ಗಮನಿಸಿದ್ದಾರೆ (ಶ್ರೀ ಪುರಂದರದಾಸರ ಸಾಹಿತ್ಯ-೬,

'ಸಂಕೀರ್ಣಸಂಗ್ರಹ', ೧೯೬೬, ಪು. ೨೮). ಈ ಅಂಕಿತದ ದಾಸರು ೧೯ನೆಯ ಶತಮಾನದಲ್ಲಿದ್ದವರು; 'ಅಭಿನವಜನಾರ್ದನವಿಠಲ'ನೆಂಬ ಅಂಕಿತವುಳ್ಳ ದಾಸರ ಶಿಷ್ಯರು. ಮುತ್ತಿನ ಮೂಗುತಿಯ ಕತೆಯ ಪ್ರಾಚೀನತೆ ಇಷ್ಟೇ!

ಕತೆಗೆ ಕಾಲಬಲ ಇಲ್ಲದಿದ್ದರೂ, ಅದರಲ್ಲಿ ಸ್ವಾರಸ್ಯ ಸಾಲದಾದರೂ, ಪುರಂದರದಾಸರ ಹೆಸರಿನೊಂದಿಗೆ ಎಡೆಬಿಡದೆ ಹೊಂದಿಕೊಂಡು ಬಂದಿರುವುದರಿಂದ ಅದರ ಮೂಲಸ್ವರೂಪವನ್ನು ಇಲ್ಲಿ ಕಾಣಿಸಿದರೆ ತಪ್ಪಾಗದು. ಈ ಮೊದಲೇ, ಬೇರೊಂದು ಸಂದರ್ಭದಲ್ಲಿ ಕೆಲವೊಂದು ಪಾಠಭೇದದಿಂದ ಉಲ್ಲೇಖಿಸಿದ ವಿಜಯದಾಸರದ್ದೆಂಬ, ಹಾಡಿನಲ್ಲಿ ಬಂದಿರುವ ಒಕ್ಕಣೆಯನ್ನು ಮತ್ತೆ ಗಮನಿಸಿ-

ಪುರಂದರಗಡದೊಳಗೆ ಹಿರಿಯ ಸಾವುಕಾರನೆನಿಸಿ
ಪರಮ ಸೌಖ್ಯಗಳ ಸುರಿಸುತ ಇರುತಿರಲು
ನರಹರಿ ತ್ವರಿತ ಬ್ರಾಹ್ಮಣನಾಗುತ ಕರುಣದಲ್ಲಿ ಅವರನು-
ದ್ಧರಿಸಲೋಸುಗ ಮನೆಗೆ ಪೋಗುತ ಯಜಮಾನನ ಕಂಡು
ಜರಿದು ಬ್ರಾಹ್ಮಣನ ಹೊರಗೆ ಹಾಕಲು ಮರುದಿವಸ ಮತ್ತ್ಹೋಗಿ
ನಿಂತ ೧

ಬಾರಿಬಾರಿಗೆ ಸಾಹುಕಾರನ ಮೋರೆಗ್ಹತ್ತಿ ಮೋರೆಯಿಲ್ಲದೆ
ಆರುತಿಂಗಳು ಬೆನ್ನಬೀಳಲು ನಾಯಕರೀತನ
ಆರು ಬಿಟ್ಟಾರೆಂದು ಬೈಯುತ ಬೇಸತ್ತು ಎರಡು
ಹೇರು ರೊಕ್ಕ ಮುಂದೆ ಸುರಿಯುತ 'ಅದರೊಳಗೊಂದು
ದುಡ್ಡಾರಿಸಿಕೊ' ಎಂದು ಪೇಳಲು ನಾರಾಯಣ ಬಿಟ್ಹೋದ
ನಗುತ ೨

ಹಿತ್ತಲಾ ಬಾಗಿಲಿಗೆ ಹೋಗಿ ಮತ್ತವನ ಮಡದಿಗಾಗಿ
ಹತ್ತಿಬಿದ್ದನು 'ವಿತ್ತ ತಾ' ಎನುತ ತನ ಮಗನ ಮುಂಜ್ಯೆಂ
ದೆತ್ತಿ ಕರವನು ಬಾಯಿ ತೆರೆಯುತಲಾ ಪ್ರಾಣೆ ನುಡಿದಳು
'ಎತ್ತಣ ದ್ರವ್ಯವು ತನಗೆ' ನುತ 'ನಿನ್ನ ಮೂಗಿನ
ಮುತ್ತಿನಾ ಮೂಗುತಿಯ ಕೊಡು' ಎನೆ ಉತ್ತಮನಳು
ತೆಗೆದಿತ್ತಳಾಕ್ಷಣದಿ ೩

ಜೋಕೆಯಿಂ ಮೂಗುತಿಯನೊಯ್ದು ಆಕೆ ಗಂಡನ ಕಣ್ಣೆದುರಿ
ಗ್ಹಾಕಿದನು 'ತಾಪಾಕಿ ಕೊಡು' ಎನುತ, ಅದ ಕಂಡು 'ಇದು ನ
ಮ್ಮಾಕೆಯದೆಂ'ದು ಈತ ನುಡಿಯುತ್ತ 'ಅನ್ಯರದು ಇಂಥಾ
ದ್ಯಾಕಿರಬಾರದೇ' ಎನುತ್ತ 'ಬೆಲೆ ಹೇಳು' ಎನಲು

'ನಾಕು ನೂರಕು ಪಾಕಿ ಕೊಡು' ಎಂದ್ವಾಕಿ ಹೋದನು ತಿರುಗಿ
ಬಾರದೆಲೆ ೪

ತಿರುಗಿ ಬ್ರಾಹ್ಮಣ ಬಾರದಿರಲು ಕರೆದು ತನ್ಹೆಂಡತಿಯ
ಬರಿಯ ನಾಸಿಕವನ್ನೆ ಕಂಡನು 'ಮೂಗುತಿಯು ಎಲ್ಲೆ'ನೆ
'ಮುರಿದಿಹುದೆಂ'ದಾಕೆ ಪೇಳಲು 'ಒಳಗ್ಹೋಗಿ ನೀ ತಾರದಿರೆ
ಅರೆವೆ ನಿನ್ನಯ ಜೀವವನೆ'ನ್ನಲು 'ವಿಷ ಕೊಂಬೆನೆಂ'ದು
ಭರದಿ ಬಟ್ಟಲ ಧರಿಸಲಾಕ್ಷಣ ತ್ವರಿತ ಹರಿ ಅದರೊಳ್ಹಾಕಿದ ೫

ಹರುಷದಿ ಮೂಗುತಿಯನೊಯ್ದು ಪುರುಷನ ಕೈಯೊಳಗೆ ಇಡಲು
ತರಿಸಿ ತನ್ನಲಿದ್ದ ಪೆಟ್ಟಿಗೆಯ ಅದರಲ್ಲಿ ಕಾಣದಿರಲು
ಬೆರಗಾಗಿ ನೋಡಿದನು ಮಡದಿಯ 'ನಿಜ ಪೇಳು' ಎಂದೆನಲು
ಅರಸಿ ಪೇಳ್ದಳು ಕೊಟ್ಟ ಸುದ್ದಿಯ, ಅಭಿಮಾನಕಂಜಿ
ಅರೆದು ವಿಷವ ಕುಡಿವೆನೆಲು ಸಿರಿರಮಣ ತಾ ಕೊಟ್ಟ ಖರೆಯು ೬

'ದೇವದೇವನು ಎನ್ನ ಮನದ ಭಾವವನು ತಿಳಿವುದಕೆ
ತಾ ವೃದ್ಧ ಬ್ರಾಹ್ಮಣನಾಗಿ ಬಂದಿದ್ದ, ಪರಿಪಕ್ವವೆನಗಿ
ನ್ನ್ಯಾವ ಕಾಲಕೆ ಆಗಬೇಕೆಂ'ದು ವೈರಾಗ್ಯ ಭಾವದಿ
ಜೀವಿಸಿಕೊಂಡಿರುವುದೇ ಚಂದ' ಹೀಗೆನುತ ಮನೆ ಧನ
ಕೋವಿದರ ಕರೆದಿತ್ತ ಹರುಷದಿ ಕಾವನಯ್ಯನ ದಾಸನಾದ ೭

ಕತೆಯಲ್ಲಿರಬಹುದಾದ (!) ಸ್ವಾರಸ್ಯವನ್ನೂ ಹಾಡಿನಲ್ಲಿರಬಹುದಾದ ಸೊಗಸನ್ನೂ ನಿರೂಪಣೆಯಲ್ಲಿರಬಹುದಾದ ಸೌಂದರ್ಯವನ್ನೂ ಭಾವುಕರಾದ ವಿಮರ್ಶಕರು ಪರಿಶೀಲಿಸಬೇಕು! ಈ ಹಾಡನ್ನು ವಿಜಯದಾಸರ ಮಡಿಲಿಗೆ ಹಾಕಿದರೆ ವಿಜಯದಾಸರ ಕವಿತಾಚಾತುರ್ಯಕ್ಕೆ ಬೆಲೆ ಬಾರದು! ಇರಲಿ, ಇದು ಕತೆಯ ಮೂಲಪಾಠ. ಮುಂದೆ ಇದು ಬಗೆಬಗೆಯಾಗಿ ಮಾರ್ಪಟ್ಟುದೂ ಉಂಟು; ಪವಾಡಕ್ಕೆ ಮನಸೋಲದ ಬುದ್ಧಿವಂತರು ಅದಕ್ಕೆ ಯುಕ್ತಿಯುಕ್ತವಾದ ಕವಚವನ್ನು ತೊಡಿಸಿರುವುದೂ ಉಂಟು. ಕತೆಗೆ ದಿಕ್ಕು ಕಾಣಿಸಲು ಪುರಂದರದಾಸರ ಅಂಕಿತದಿಂದ 'ಎತ್ತ ಹೋದನಮ್ಮಾ, ವಿಪ್ರನ ಎತ್ತ ಹುಡುಕಲಮ್ಮಾ?' ಎಂಬ ಪದವನ್ನು ಹೊರಡಿಸಿರುವುದೂ ಇದೆ!

ಈ ವಿಚಾರವನ್ನು ಇಷ್ಟಕ್ಕೆ ಕೈಬಿಡೋಣ. ಕತೆಯ ವಾಸ್ತವಿಕತೆ ಏನೇ ಇರಲಿ, ದಾಸರ ವಿರಕ್ತಿಗೆ ಕಾರಣ ತಮ್ಮ ಹೆಂಡತಿಯ ವ್ಯಕ್ತಿತ್ವದ ಹಿರಿಮೆ ಎಂಬುದನ್ನು ದಾಸರೇ ನಿರೂಪಿಸಿರುವುದಿದೆ. ವಿರಕ್ತಿಗೆ ಮೊದಲು ದಾಸರು ಜಿಪುಣರಾಗಿದ್ದರೋ ಇಲ್ಲವೋ, ಅವರಲ್ಲಿ ದೈವಭಕ್ತಿ ಇದ್ದಿತೋ ಇಲ್ಲವೋ, ಆಧ್ಯಾತ್ಮಿಕ ಪ್ರವೃತ್ತಿಯಂತೂ ಇರಲಿಲ್ಲವೆಂದು ವಿಜಯದಾಸರ ಹೇಳಿಕೆಯೇ ಇದೆ. ಪ್ರಾಪಂಚಿಕಭೋಗದಲ್ಲೇ ತೊಡಗಿದ್ದವರು ಇದ್ದಕ್ಕಿದ್ದಂತೆ ಪಾರಮಾರ್ಥಿಕ ಹಂಬಲವನ್ನು ಹಿಡಿದರು. ಈ ಪರಿವರ್ತನೆ ಅವರ ಮನಸ್ಸಿಗೇ ಸೋಜಿಗವೆನಿಸಿದ್ದಿರಬೇಕು. ಅದನ್ನು ವಿಶ್ಲೇಷಣೆ ಮಾಡಿದಾಗ

ಹೆಂಡತಿಯ ಪ್ರಭಾವ ಮನದಟ್ಟಾಯಿತೆಂದು ತೋರುತ್ತದೆ. 'ಆದದ್ದೆಲ್ಲ ಒಳಿತೇ ಆಯಿತು' ಎಂದು ಮೊದಲಾಗುವ ಪೂರ್ವೀರಾಗದ ಪದವೊಂದರಲ್ಲಿ ಇದನ್ನು ಕಾಣಬಹುದು-

ದಂಡಿಗೆ ಬೆತ್ತ ಹಿಡಿಯುವುದಕ್ಕೆ
ಮಂಡೆ ಬಾಗಿ ನಾಚುತಲಿದ್ದೆ

ಹೆಂಡತಿ ಸಂತತಿ ಸಾಸಿರವಾಗಲಿ
ದಂಡಿಗೆ ಬೆತ್ತ ಹಿಡಿಸಿದಳಯ್ಯ ೧

ಗೋಪಾಳ ಬುಟ್ಟಿ ಹಿಡಿಯುವುದಕ್ಕೆ
ಭೂಪತಿಯಂತೆ ನಾಚುತಲಿದ್ದೆ
ಆ ಪತ್ನಿಯು ತಾ ಪ್ರೀತಿಯಿಂದಲಿ
ಗೋಪಾಳಬುಟ್ಟಿಯ ಹಿಡಿಸಿದಳಯ್ಯ ೨

ತುಳಸೀಮಾಲೆಯ ಹಾಕುವುದಕ್ಕೆ
ಅಲಸಿಕೊಂಡು ನಡೆಯುತಲಿದ್ದೆ
ಜಲಜಾಕ್ಷಿಯು ಶ್ರೀ ಪುರಂದರ ವಿಠಲನ
ತುಳಸೀಮಾಲೆಯ ಹಾಕಿಸಿದಳಯ್ಯ ೩

ದಂಡಿಗೆ-ಬೆತ್ತವೆಂದರೆ ಹರಿದಾಸರು ಬಳಸುತ್ತಿದ್ದ ತಂತೀವಾದ್ಯ; ಅದನ್ನು ನುಡಿಸುತ್ತ, ಹಾಡುತ್ತ ನಡೆಯುವರು. ಗೋಪಾಳಬುಟ್ಟಿಯೆಂದರೆ ಎಡಭುಜದಿಂದ ಇಳಿಬಿದ್ದ ಭಿಕ್ಷಾಪಾತ್ರೆ (ಬಿದಿರಿನ ಬುಟ್ಟಿ); ಹಾಡುತ್ತ ಬೀದಿಯಲ್ಲಿ ನಡೆಯುತ್ತಿರುವಾಗ, ಮನೆಗಳ ಮುಂದೆ ಹೆಂಗಸರು ಹಿಡಿ ಅಕ್ಕಿಯನ್ನು ಆ ಪಾತ್ರೆಯೊಳಗೆ ಸುರಿಯುವರು. ತುಳಸೀಮಾಲೆ ಹರಿದಾಸದೀಕ್ಷೆಯ ಪ್ರತೀಕ. ಬಡತನದಲ್ಲೇ ಉಳಿದು, ಅಂದಂದಿನ ಕೂಳನ್ನು ಆಗಾಗ ಗಳಿಸಿ, ನಾಳೆಗೆಂದು ಏನನ್ನೂ ಇಡದೆ, ಸಾಲದೆಂದು ಕರುಬದೆ, ಬಂದದ್ದರಲ್ಲಿ ತೃಪ್ತರಾಗಿ, ಸಂತೋಷದಿಂದ ಹರಿಭಜನೆ ಮಾಡುತ್ತ ಬಾಳನ್ನು ಕಳೆಯುವುದೇ ಹರಿದಾಸ ದೀಕ್ಷೆ. ದಾಸರು ವಿರಕ್ತರಾದ ಮೇಲೆ ಒಲಿದು ನಡೆಸಿಕೊಂಡು ಬಂದ ಬದುಕಿನ ಬಗೆಯ ಚಿತ್ರಣವೂ ಇಲ್ಲಿದೆ.

ವಿರಕ್ತಿ ಒದಗಿದಮೇಲೆ ಹಂಪಿಗೆ ಬಂದದ್ದು, ಅಲ್ಲಿ ವ್ಯಾಸರಾಯಸ್ವಾಮಿಗಳ ದರ್ಶನವಾದದ್ದು, ಅವರಿಂದ ಹರಿದಾಸದೀಕ್ಷೆ ಪಡೆದುಕೊಂಡದ್ದು ಗಟ್ಟಿಯಾದ ವಿವರಗಳು. ಪ್ರಾಚೀನ ಆಕರಗಳೆಲ್ಲ ಇವನ್ನು ಸಮರ್ಥಿಸುತ್ತವೆ; ಪುರಂದರದಾಸರ ಪದಗಳಲ್ಲಿಯೂ ಇವು ಸ್ಪಷ್ಟವಾಗಿಯೇ ಮೂಡಿಬಂದಿವೆ. ಸುಳಾದಿಯೊಂದರಲ್ಲಿ

ವ್ಯಾಸರಾಯರ ಚರಣಕಮಲ ದರುಶನವೆನಗೆ
ಏಸುಜನ್ಮದ ಸುಕೃತಫಲದಿ ದೊರಕಿತೋ
ಎನ್ನ ಸಾಸಿರ ಕುಲಕೋಟಿ ಪಾವನ್ನವಾಯಿತು

ಶ್ರೀಶನ ಭಜಿಸುವುದಕಧಿಕಾರಿ ನಾನಾದೆ
ದೋಷರಹಿತನಾದ ಪುರಂದರ ವಿಠಲನ
ದಾಸರ ಕರುಣವು ಎನ್ನ ಮೇಲೆ ಇರಲಾಗಿ

ಮತ್ತು

ಗುರುವ್ಯಾಸರಾಯರ ಚರಣವೆನಗೆ ಗತಿ
ಪುರಂದರವಿಠಲನ ಅರಿತೆ ಇವರಿಂದ

ಎನ್ನುವ ಒಕ್ಕಣೆಗಳಿವೆ. ಮತ್ತೆ ತಮಗೆ ಪುರಂದರವಿಠಲನೆಂಬ ಅಂಕಿತವು ಅವರಿಂದ ದೊರೆತದ್ದನ್ನೂ ಇದೇ ಸುಳಾದಿಯಲ್ಲಿ ಕಾಣಿಸಿದ್ದಾರೆ.

ಅಂಕಿತವಿಲ್ಲದ ದೇಹ ನಿಷೇಧ
ಅಂಕಿತವಿಲ್ಲದ ಕಾವ್ಯ ಶೋಭಿಸದು
ಅಂಕಿತವಿಲ್ಲದೆ ಇರಬಾರದೆಂದು ಚ
ಕ್ರಾಂಕಿತವನು ಮಾಡಿ ಎನ್ನಂಗಕೆ
ಪಂಕಜನಾಭ ಶ್ರೀಪುರಂದರವಿಠಲನ
ಅಂಕಿತವೆನಗಿತ್ತ ಗುರುವ್ಯಾಸಮುನಿರಾಯ

ದಾಸರು ಮೊದಲಿಗೆ ಭಾಗವತ ಸಂಪ್ರದಾಯದ ವೈಷ್ಣವರಾಗಿದ್ದರೆಂದೂ, ವ್ಯಾಸರಾಯರಿಂದ ಅವರಿಗೆ ತಪ್ತ ಮುದ್ರಾಂಕನ, ಮೂಲಮಂತ್ರೋಪದೇಶ, ಹರಿದೀಕ್ಷೆ, ಕಾವ್ಯಾಂಕಿತಗಳು ದೊರೆತು ಮಾಧ್ವವೈಷ್ಣವ ಗೃಹಸ್ಥರಾದರೆಂದೂ ಹರಿದಾಸ ಪಂಥದಲ್ಲಿ ನಂಬಿಕೆ. ಈ ವಿಚಾರವಾಗಿ ಸ್ವಲ್ಪ ಪರಿಶೀಲನೆಯ ಅಗತ್ಯವಿದೆ. ಪುರಂದರದಾಸರು ಎಳೆತನದಲ್ಲಿ ಇದ್ದಿರಬಹುದಾದ ಪ್ರದೇಶದಲ್ಲಿ ಭಕ್ತಿಪಂಥ ಹರಡಲು ಮುಖ್ಯವಾಗಿ ಮರಾಠೀ ಸಂತರು ಕಾರಣವಾಗಿದ್ದರು. ಅವರೊಂದಿಗೆ ಮಹಾನುಭಾವ ಪಂಥದ ಪ್ರಾಬಲ್ಯವೂ ಆ ಕಡೆ ಇದ್ದಿತು. ಸೌರಾಷ್ಟ್ರದ ಚಕ್ರಧರನೆಂಬ ಸಂತನು (ಜನ್ಮ ೧೧೫೩ ರಲ್ಲಿ) ಸ್ಥಾಪಿಸಿದ ಈ ಪಂಥವು ಉತ್ತರ ಕರ್ನಾಟಕ, ಮಹಾರಾಷ್ಟ್ರ, ವರಹಾಡ, ಗುರ್ಜರ ಇಲ್ಲೆಲ್ಲ ಪ್ರಭಾವವನ್ನು ಬೀರಿತು. ಇದನ್ನು 'ಅಚ್ಯುತ ಪಂಥ'ವೆಂದು ಕರೆಯುವುದೂ ಇದೆ. ಇದರ ಪ್ರಭಾವವನ್ನು ಮರಾಠೀ ಸಂತರು (ಅವರಲ್ಲೂ ಪ್ರಮುಖವಾಗಿ ಜ್ಞಾನದೇವ) ಮೂಡಿಸಿಕೊಂಡರು. ವೈದಿಕ ಚೌಕಟ್ಟಿನಲ್ಲೇ ಇವರ ಧರ್ಮ, ಕರ್ಮ, ಆಚಾರ, ವಿಚಾರಗಳೆಲ್ಲ ಸಿದ್ಧವಾದರೂ ವರ್ಣಾಶ್ರಮ ವೈವಿಧ್ಯದ ಕಡೆ ಇವರು ಅಷ್ಟಾಗಿ ಗಮನ ಹರಿಸುವುದಿಲ್ಲ; ವೈದಿಕ ಕರ್ಮಠರ ಮಡಿವಂತಿಕೆಯನ್ನು ಇವರು ಪುರಸ್ಕರಿಸುವುದಿಲ್ಲ. ಧಾರ್ಮಿಕ ವಿಚಾರಗಳಲ್ಲೂ ದಿನನಿತ್ಯದ ವ್ಯವಹಾರದಲ್ಲೂ ಗಂಡಸರಿಗೂ ಹೆಂಗಸರಿಗೂ ಸಮಾನಾಧಿಕಾರವೇ. ಈ ಪಂಥದ ಮುಖ್ಯ ವಿವರವೆಂದರೆ ಕೃಷ್ಣಭಕ್ತಿ; ಭಗವದ್ಗೀತೆ, ಭಾಗವತ ಎರಡೂ ಇವರಿಗೆ ತುಂಬ ಆದರಣೀಯವಾದ ಗ್ರಂಥಗಳು. ಇವರು ಪ್ರೋತ್ಸಾಹಿಸಿದ ಭಾಗವತ ಧರ್ಮ ಈ ಪ್ರದೇಶದಲ್ಲಿ ಬೇರೂರಿದ ಮೇಲೆ ವಿಟ್ಠಲನ ಉಪಾಸನೆಗೆ ವಿಶೇಷವಾದ ಒತ್ತು ದೊರಕಿತು. ಹದಿಮೂರನೆಯ ಶತಮಾನದ ವೇಳೆಗೆ

ಈ ಪ್ರದೇಶದಲ್ಲಿ ಮಹಾನುಭಾವ ಪಂಥ, ಭಾಗವತಧರ್ಮ, ವಿಟ್ಠಲ ಭಕ್ತಿ ಇವು ಹರಡಿಕೊಂಡಿದ್ದುವು. ಈ ಮೂರಕ್ಕೂ ವಿರೋಧವಿಲ್ಲದೆ ಮಧ್ವಾಚಾರ್ಯರು ಏರ್ಪಡಿಸಿದ ವೈಷ್ಣವ ಸಂಪ್ರದಾಯ ತಲೆ ಎತ್ತಿಕೊಳ್ಳುತ್ತಿದ್ದಿತು.

ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾದ ಹಂಪಿಯಲ್ಲಿ ಯಾವೊಂದು ನಿರ್ದಿಷ್ಟ ಧಾರ್ಮಿಕ ಪಂಥಕ್ಕೆ ಪುರಸ್ಕಾರವಿದ್ದಿತೆಂದು ಹೇಳಬರುವುದಿಲ್ಲ. ಆಡಳಿತದ ಅಥವಾ ಅರಸರ ದೃಷ್ಟಿಯಲ್ಲಿ ಮತನಿಷ್ಠೆ, ಧರ್ಮಭೇದಗಳು ಯಾವ ಕಾಲಕ್ಕೂ ಹಿತವಲ್ಲ. ವಿಜಯನಗರ ಸಾಮ್ರಾಜ್ಯದ ಮೊದಲ ಅವಧಿಯಲ್ಲಿ ಶಂಕರಾಚಾರ್ಯರ ಸಂಪ್ರದಾಯವನ್ನು ಹಿಡಿದ ವಿದ್ಯಾರಣ್ಯರ ಪ್ರಭಾವ ವಿದ್ದಿತು: ಪಾಶುಪತ ಪ್ರಕ್ರಿಯೆಯ ಕ್ರಿಯಾಶಕ್ತಿಗುರುಗಳ ಪ್ರಭಾವವಿದ್ದಿತು; ಅನಂತರ ರಾಮಾನುಜಾಚಾರ್ಯರ ಸಂಪ್ರದಾಯದಲ್ಲಿ ಬಂದ ತಾತಾಚಾರ್ಯ ಸ್ವಾಮಿಗಳ ಪ್ರಭಾವ ಹೆಚ್ಚಿತು; ಮಾಧ್ವ ಸಂಪ್ರದಾಯದ ಶ್ರೀಪಾದತೀರ್ಥರ, ವ್ಯಾಸತೀರ್ಥರ ಪ್ರಭಾವವೂ ಇದ್ದಿತು. ಪುರಂದರದಾಸರ ಕಾಲದಲ್ಲಿಯೇ ಇದ್ದ ಕೃಷ್ಣದೇವರಾಯಮಹಾರಾಯ ಸ್ವಂತನಿಷ್ಠೆಯಲ್ಲಿ ಶ್ರೀ ವೈಷ್ಣವ; ರಾಜಗುರುಗಳು ತಾತಾಚಾರ್ಯರೇ. ಆದರೆ ಮಾಧ್ವ ಸಂನ್ಯಾಸಿಗಳಾದ ವ್ಯಾಸತೀರ್ಥರಲ್ಲೂ ಅವನಿಗೆ ತುಂಬ ಗೌರವಾದರಗಳು. ಪುರಂದರದಾಸರು ವಿರಕ್ತಿಯನ್ನು ತಳೆದು ಹಂಪಿಗೆ ಬಂದಾಗ ವ್ಯಾಸತೀರ್ಥರ ಬಳಿಯೇ ಹೋದುದರ ಹಿನ್ನೆಲೆ ತಿಳಿಯುವುದಿಲ್ಲ. ಅಂತೂ ಹಾಗೆ ಹೋದಾಗ ಅವರಿಗೆ ಒದಗಿದ ದೀಕ್ಷೆ ಮಾಧ್ವಸಂಪ್ರದಾಯದ್ದೇ ಎನ್ನುವುದೇನೋ ಸಹಜವೇ. ಮೊದಲಿಗೆ ಭಾಗವತ ಸಂಪ್ರದಾಯ ದವರಾಗಿದ್ದುದರಿಂದ ದ್ವಾದಶನಾಮಗಳ ಧಾರಣೆ, ತುಳಸೀಮಣಿಯ ಮಾಲೆ, ಚಂದನದ ಬಳಕೆ, ಹರಿನಾಮ ದೀಕ್ಷೆ ಇವೆಲ್ಲ ಮೊದಲೇ ಇದ್ದಿರಬೇಕು; ತಪ್ತಮುದ್ರಾಂಕನವೂ ಅಂಕಿತವೂ ಮಾಧ್ವರಾದದ್ದರ ಕುರುಹು.

೫

ವ್ಯಾಸತೀರ್ಥರ ವಿಚಾರ ಮೊದಲೇ ಬಂದಿದೆ. ಮತ್ತೆ ನೆನಪಿಗೆ ತಂದುಕೊಂಡರೆ ತಪ್ಪಲ್ಲ (ವಿಜಯನಗರದ ಅರಸರ ಆದರವನ್ನು ಪಡೆದುಕೊಂಡರಾಗಿ ಇವರನ್ನು ವ್ಯಾಸರಾಯರು ಅಥವಾ ವ್ಯಾಸರಾಜರು ಎಂದೂ ಕರೆಯುವುದು ವಾಡಿಕೆ). ೧೪೪೭ರಲ್ಲಿ (ಅಥವಾ ೧೪೭೮ರಲ್ಲಿ, ಇದು ಬಿ. ವೆಂಕೋಬರಾಯರ ಎಣಿಕೆ) ಹುಟ್ಟಿ, ಬ್ರಹ್ಮಣ್ಯತೀರ್ಥರೆಂಬುವರ ಬಳಿ ಶಿಕ್ಷಣವನ್ನು ಪಡೆದು, ಮುಳುಬಾಗಿಲಿನಲ್ಲಿ ಶ್ರೀಪಾದರಾಜರೆಂಬ ಸುಪ್ರಸಿದ್ಧ ಮಾಧ್ವಯತಿಗಳಲ್ಲಿ (ತೀರಿಕೊಂಡ ವರ್ಷ ೧೪೮೦) ಶಿಷ್ಯವೃತ್ತಿ ಮಾಡಿ ವಿಜಯನಗರದ ಅರಸರ ಸಾಮಂತ ಸಾಳುವ ನರಸಿಂಹನ ಕರೆಯನ್ನು ಮನ್ನಿಸಿ ಚಂದ್ರಗಿರಿಗೆ ೧೪೭೬ರ ಸುಮಾರಿಗೆ ಹೋದರು. ಕೃಷ್ಣದೇವರಾಯ ಮಹಾರಾಯನು ಇವರ ವ್ಯಕ್ತಿತ್ವದಿಂದ ಆಕರ್ಷಿತನಾಗಿ ಅವರನ್ನು ಹಂಪಿಯಲ್ಲೇ ಇರಿಸಿಕೊಂಡನು. ಅವನಿಗೆ ಮಾರಕವಾಗಿ ಒದಗಿದ್ದ ಕುಹೂಯೋಗವನ್ನು ಇವರು ಪರಿಹರಿಸಿದರೆಂದು ಪ್ರತೀತಿ. ಇವರು ಕರ್ನಾಟಕ ಪ್ರಾಂತ್ಯದಲ್ಲೆಲ್ಲ ಸಂಚರಿಸಿ ಭಾಗವತ ಧರ್ಮವನ್ನು ವಿಶೇಷವಾಗಿ ಪ್ರಚಾರ ಮಾಡಿದರು. ಅವರ ಶಿಷ್ಯರಲ್ಲಿ ರಾಘವೇಂದ್ರಸ್ವಾಮಿಗಳ ಪರಮಗುರುಗಳಾದ ವಿಜಯೀಂದ್ರತೀರ್ಥರು (೧೫೧೪- ೧೫೯೫), ಪ್ರಾಸಾದಿಕಗುರುಗಳೂ ಗ್ರಂಥಕರ್ತರೂ ವಿದ್ವಾಂಸರೂ ಆದ ಉಡುಪಿಯ

ವಾದಿರಾಜಸ್ವಾಮಿಗಳು (೧೪೮೦-೧೬೦೦), ಬಂಗಾಳದ ಕೃಷ್ಣಚೈತನ್ಯರ ಪೂರ್ವಸೂರಿಗಳಾದ ಲಕ್ಷ್ಮೀ ತೀರ್ಥರು, ಪುರಂದರದಾಸರು, ವೈಕುಂಠದಾಸರು, ಕನಕದಾಸರು ಸೇರಿದ್ದಾರೆ. ಅವರು ತೀರಿಕೊಂಡದ್ದು ೧೫೩೯ರಲ್ಲಿ ; ವಿಳಂಬಿ ಸಂವತ್ಸರದ ಫಾಲ್ಗುಣಬಹಳ ಚವುತಿ ಸ್ಥಿರವಾರದಲ್ಲಿ, ಎಂದರೆ ಮಾರ್ಚ್ ಎಂಟರಂದು.

ಇವರನ್ನು ಕುರಿತು ಪುರಂದರದಾಸರು ಸುಳಾದಿಯೊಂದನ್ನು ರಚಿಸಿ ಅವರ ವ್ಯಕ್ತಿತ್ವದ ಹಿರಿಮೆಯನ್ನೂ, ಸಾಧನೆಯ ಮುಖಗಳನ್ನೂ ವಿವರಿಸಿದ್ದಾರೆ-

ಶೇಷಾವೇಷ ಪ್ರಹ್ಲಾದನವತಾರವೆನಿಸಿದೆ
ವ್ಯಾಸರಾಯನೆಂಬ ಪೆಸರು ನಿನಗೆಂದಂತೆ
ದೇಶಾಧಿಪಗೆ ಬಂದ ಕುಹುಯೋಗವನು ನೂಕಿ
ನೀ ಸಿಂಹಾಸನವನೇರಿ ಮೆರೆದೆ ಜಗವರಿಯೆ
ವ್ಯಾಸಾಬ್ಧಿಯನು ಬಲಿಸಿ ಕಾಶಿದೇಶದೊಳೆಲ್ಲ
ಭಾಸುರ ಕೀರ್ತಿಯನು ಪಡೆದೆ ನೀ ಗುರುರಾಯ
ವಾಸುದೇವ ಪುರಂದರವಿಠಲನ ದಾಸರೊಳು
ಲೇಶ ನಿನ್ನಂತೆ ವೆಗ್ಗಳರ ಕಾಣೆ ನಾನು
ಸಿರಿನಾರಾಯಣಯೋಗಿ ಶ್ರೀಪಾದರಾಯರಲ್ಲಿ
ವರವಿದ್ಯಾಭ್ಯಾಸವ ಮಾಡಿದೆ ನೀನು
ಧರೆಯೊಳು ವಿಜಯೀಂದ್ರ ವಾದಿರಾಜರೆಂಬ
ಪರಮಶಿಷ್ಯರ ಪಡೆದು ಮೆರೆದೆ ಕೀರುತಿಯ
....
ವರಮಧ್ವಮತವೆಂಬ ಸಾಗರದೊಳು ಅವ
ತರಿಸಿದೆ ಪೂರ್ಣಚಂದ್ರಮನಂತೆ ನೀನು
ಧರೆಯೊಳು ಬ್ರಹ್ಮಣ್ಯರ ಕುವರನೆಂದೆನಿಸಿದೆ ನೀನು
ಪುರಂದರ ವಿಠಲನ ಕರುಣವ ಪಡೆದೆ
ಕರುಣಾಕರನವ ಪರನೆಂದು ಅರುಹಲು
ದುರಿತಗಳೆಲ್ಲವ ಪರಿಹರಿಸಿಕೊಂಡೆ ನಾನು

ವ್ಯಾಸತೀರ್ಥರ ಬಳಿ ಪುರಂದರದಾಸರು ಕೆಲಕಾಲ ಉಳಿದುಕೊಂಡು ಅವರಿಂದ ಉಪದೇಶವನ್ನು ಪಡೆದುಕೊಂಡರೆಂದು ವಿಜಯದಾಸರ ಪದವೊಂದು ತಿಳಿಸುತ್ತದೆ-

ವಾಸವನೆ ಮಾಡಿದರು ಪ್ರಹ್ಲಾದನವತಾರ
ವ್ಯಾಸರಾಯರ ಬಳಿಯೆ ಮುದ್ರೆ ಗುರುಮಂತ್ರ ಉಪ
ದೇಶವನು ಕೊಂಡು ವೈಷ್ಣವರಾಗಿ ಪುರಂದರ
ದಾಸರೆಂಬುವ ಪೆಸರಲಿ

ವ್ಯಾಸತೀರ್ಥರಿಂದ ಮಂತ್ರೋಪದೇಶ-ಅಂಕಿತಗಳನ್ನು ಸ್ವೀಕರಿಸಿದನಂತರ ಕೃತಿರಚನೆಗೆ ತೊಡಗಿದರೆಂದು ಜಗನ್ನಾಥದಾಸರ ಪದವೊಂದರ ಒಕ್ಕಣೆ-

'ವ್ಯಾಸರಾಯರಲಿ ಭಾಸುರಮಂತ್ರೋಪ
ದೇಶವನು ಕೊಂಡು ರಮೇಶನನೊಲಿಸಿದೆ
ಪ್ರಾಕೃತಭಾಷೆಯಲಿ ನೀ ಕೃತಿ ಪೇಳಿ ಅ
ಪ್ರಾಕೃತ ಪರಿಯಿಂದ ಸ್ವೀಕೃತ ನೀನಾದೆ

ಆದರೆ ಹಂಪಿಯಲ್ಲೇ ಎಲ್ಲಕಾಲವೂ ನೆಲೆಸದೆ ಹರಿದಾಸರಾಗಿ ಊರೂರು ತಿರುಗಲು ಮೊದಲಿಟ್ಟರು; ಹೋದೆಡೆಯಲ್ಲೆಲ್ಲ ಧರ್ಮಪ್ರಚಾರ, ಕೃತಿರಚನೆಗಳು ನಡೆದುವು. ವಿಜಯದಾಸರ ಪದದಲ್ಲಿ

ದೇಶವನೆ ತಿರುಗಿ ಪುಣ್ಯಕ್ಷೇತ್ರಗಳ ಮೆಟ್ಟಿ
ಲೇಸಾಗಿ ಅಲ್ಲಿದ್ದ ಮಹಿಮೆಗಳ ಪೇಳಿ ದು
ರಾಶೆಯನು ತೊರೆದು ವಿಟ್ಠಲನ ಸನ್ನಿಧಿಯಲ್ಲಿ
ವಾಸವಾದರು ಧರ್ಮನಡತೆಯಲ್ಲಿ

ಎಂದು ಹೇಳಿರುವುದರಿಂದ, ಕಡೆಗಾಲದಲ್ಲಿ ಮತ್ತೆ ಹಂಪಿಗೆ ಹಿಂದಿರುಗಿದರೆಂದು ಭಾವಿಸಬೇಕು.

ವ್ಯಾಸತೀರ್ಥರನ್ನು ಪುರಂದರದಾಸರು ಕಂಡದ್ದು ಎಂದು ಎಂಬ ವಿಚಾರ ಸ್ಪಷ್ಟ ವಾಗುವುದಿಲ್ಲ. ಆದರೆ ಕೆಲವು ವಿವರಗಳು ಇದನ್ನು ನಿರ್ಧರಿಸಲು ಅಷ್ಟಿಷ್ಟು ನೆರವಾಗುತ್ತವೆ. ಪುರಂದರದಾಸರು ಹಂಪಿಗೆ ಬಂದಾಗ ವ್ಯಾಸರಾಯರು ಅಲ್ಲಿಯೇ ಇರುತ್ತಿದ್ದರು; ಕೃಷ್ಣದೇವರಾಯನು ಅರಸನಾಗಿದ್ದ. ಕೃಷ್ಣದೇವರಾಯನ ಅಧಿಕಾರದ ಅವಧಿ ೧೫೦೯ರಿಂದ ೧೫೩೦ರವರೆಗೆ. ವ್ಯಾಸತೀರ್ಥರು ಚಂದ್ರಗಿರಿಗೆ ಬಂದದ್ದು ಸಾಳುವ ನರಸಿಂಹನ ಕಾಲದಲ್ಲಿ, ೧೪೭೬ರಲ್ಲಿ. ಅನಂತರ ೧೫೦೦ರ ಸುಮಾರಿಗೆ ದೇಶಸಂಚಾರವನ್ನು ಕೈಗೊಂಡು ಕನ್ನಡನಾಡಿನಲ್ಲಿ ೭೩೨ ಹನುಮಂತನ ಶಿಲಾ ಮೂರ್ತಿಗಳನ್ನು ಪ್ರತಿಷ್ಠೆ ಮಾಡಿದರೆಂದು ಪ್ರತೀತಿಯಿದೆ. ಅವರು ಹಂಪಿಗೆ ಬಂದದ್ದು ಕೃಷ್ಣದೇವರಾಯನು ಪಟ್ಟಕ್ಕೆ ಬಂದ ಮೇಲೆ ಇರಬೇಕು. ಕೃಷ್ಣದೇವರಾಯನಿಗೆ ೧೫೨೧ರಲ್ಲಿ ಒದಗಿದ ಕುಹೂಯೋಗವನ್ನು ಇವರು ಪರಿಹರಿಸಿದರೆಂಬ ಪ್ರತೀತಿ ಬಲವಾಗಿದೆ; ಇದನ್ನು ಪುರಂದರದಾಸರೂ ಪ್ರಸ್ತಾಪಿಸಿದ್ದಾರೆ. ಸೋಮನಾಥನ 'ವ್ಯಾಸಯೋಗಿ ಚರಿತೆ'ಯೆಂಬ ಸಂಸ್ಕೃತ ಕಾವ್ಯ ಗ್ರಂಥದಲ್ಲೂ ಇದರ ಉಲ್ಲೇಖವಿದೆ. ಆದರೆ ಇದು ಎಷ್ಟು ಐತಿಹಾಸಿಕವೋ ತಿಳಿಯದು. ಎಂದಮೇಲೆ ಆ ಕಾಲದಲ್ಲಿ ಅವರು ಹಂಪಿಯಲ್ಲೇ ಇದ್ದಿರಬೇಕು. ೧೫೨೬ರ ಫೆಬ್ರುವರಿ ೨೪ರಂದು ಕಮಲಾಪುರದ ತಾಮ್ರಶಾಸನ ಹೊರಟದ್ದು; ಈ ಮೊದಲೇ ಪ್ರಸ್ತಾಪಿಸಿದಂತೆ ಕೃಷ್ಣದೇವರಾಯನು ತಮಗೆ ಕೊಟ್ಟ ಭೂಮಿಯನ್ನು ವ್ಯಾಸತೀರ್ಥರು ಹಲವು ಮಂದಿಗೆ ಹಂಚಿಕೊಟ್ಟದ್ದನ್ನು ತಿಳಿಸುವ ಈ ಶಾಸನದಲ್ಲಿ ಪುರಂದರದಾಸರ ಮೂವರು ಮಕ್ಕಳ ಪ್ರಸ್ತಾಪವಿದೆಯಷ್ಟೆ. ಎಂದರೆ ಆ ವೇಳೆಗೆ ಪುರಂದರದಾಸರು ಹಂಪಿಯಲ್ಲೇ ಇದ್ದಿರಬೇಕು. ಅವರ ಮಕ್ಕಳು ದಾನಾರ್ಹ

ರೆಂದು ಸ್ವಾಮಿಗಳಿಗೆ ಮನವರಿಕೆಯಾಗಲು ಐದಾರು ವರ್ಷಗಳ ಪರಿಚಯವಾದರೂ ಇದ್ದಿರಬೇಕಲ್ಲವೆ?

ಪುರಂದರದಾಸರು ಕುಟುಂಬ ಸಮೇತ ಹಂಪಿಗೆ ೧೫೨೦ರ ಹಿಂಚುಮುಂಚು ಬಂದರೆಂದು ಹೇಳಬಹುದು. ಎಂದರೆ ಆಗ ಪುರಂದರದಾಸರಿಗೆ ಸುಮಾರು ನಲವತ್ತುವರ್ಷ ಪ್ರಾಯ; ವ್ಯಾಸತೀರ್ಥರಿಗೆ ಸುಮಾರು ಎಂಬತ್ತು ವರ್ಷಗಳು. ವ್ಯಾಸತೀರ್ಥರು ತಮ್ಮ ತೊಂಬತ್ತೆರಡನೆಯ ವಯಸ್ಸಿನಲ್ಲಿ ತೀರಿಕೊಂಡದ್ದು, ೧೫೩೯ರಲ್ಲಿ; ಅಷ್ಟು ವೇಳೆಗಾಗಲೇ ಕೃಷ್ಣದೇವರಾಯ ಮಹಾರಾಯನು ತೀರಿಕೊಂಡಿದ್ದು, ಅಚ್ಯುತದೇವರಾಯನು ಅರಸನಾಗಿದ್ದ. ಕೃಷ್ಣದೇವರಾಯನ ಅಳಿಯ ರಾಮರಾಯನಿಗೂ ಅಚ್ಯುತದೇವರಾಯನಿಗೂ ನಡುವೆ ಇದ್ದ ವೈಮನಸ್ಯ, ಗೋಲಕೊಂಡ ಸುಲ್ತಾನನು ವಿಜಯನಗರದ ರಾಜಧಾನಿಗೆ ಕೊಡುತ್ತಿದ್ದ ಕಿರುಕುಳ, ಅಲ್ಲಿದ್ದ ಗೊಂದಲ ಪರಿಸ್ಥಿತಿ, ಅರಸನು ದಂಡಯಾತ್ರೆಗೆಂದು ಪದೇ ಪದೇ ಹಂಪಿಯನ್ನು ಬಿಟ್ಟು ಹೋಗುತ್ತಿದ್ದುದು ಇವುಗಳಿಂದಾಗಿ ಹಂಪಿಯೇನು ಪುರಂದರದಾಸರ ವಾಸ್ತವ್ಯಕ್ಕೆ ಅನುಕೂಲವಾದ ತಾಣವೆನಿಸಿರಲಾರದು. ವ್ಯಾಸತೀರ್ಥರ ಮರಣಾನಂತರ ದಾಸರು ಹಂಪಿಯನ್ನು ಬಿಟ್ಟು ದೇಶಸಂಚಾರಕ್ಕೆ ಹೊರಟರೆಂದು ತೋರುತ್ತದೆ.

ಪುರಂದರದಾಸರು ವ್ಯಾಸತೀರ್ಥರೊಂದಿಗೆ ಹಂಪಿಯಲ್ಲಿರುತ್ತಿದ್ದಾಗ ಅವರಿಗೆ ಕನಕದಾಸರ ಪರಿಚಯ, ಸ್ನೇಹ ಒದಗಿದವು. ಕನಕದಾಸರೂ ವ್ಯಾಸತೀರ್ಥರಿಂದ ಹರಿದಾಸದೀಕ್ಷೆಯನ್ನು ಪಡೆದುಕೊಂಡಿದ್ದವರು. ಬಹುಶಃ ಪುರಂದರದಾಸರು ಹಂಪಿಗೆ ಬರುವ ಮೊದಲೇ ಕನಕದಾಸರು ವ್ಯಾಸತೀರ್ಥರ ಶಿಷ್ಯರಾಗಿದ್ದು, ಕವಿಯೆಂದು ಹೆಸರಾಗಿದ್ದರು. ಪುರಂದರದಾಸರಿಗೆ ಕನಕದಾಸರಲ್ಲಿ ತುಂಬ ಗೌರವಬುದ್ಧಿಯಿದ್ದಿತು. 'ಕನಕದಾಸನ ಮೇಲೆ ದಯಮಾಡಲು ವ್ಯಾಸ, ಮುನಿಯ ಮಠದವರೆಲ್ಲ ದೂರಿ ಕೊಂಬುವರು' ಎಂದು ಮೊದಲಾಗುವ ಕಾಂಬೋದಿರಾಗದ ಹಾಡೊಂದರಲ್ಲಿ ಕನಕ ದಾಸರ ಹಿರಿಮೆಯನ್ನು ಬಣ್ಣಿಸಿದ್ದಾರೆ. ಕನಕದಾಸರ ಕೃತಿಗಳಲ್ಲಿ ಪುರಂದರದಾಸರ ಉಲ್ಲೇಖ ಕಾಣಸಿಗುವುದಿಲ್ಲ. ಬಹುಶಃ ಕನಕದಾಸರ ಜೀವಿತಕಾಲದಲ್ಲಿ ಪುರಂದರದಾಸರ ಪ್ರಖ್ಯಾತಿಯಿನ್ನೂ ಮೂಡಿಕೊಂಡಿರಲಾರದು.

ಪುರಂದರದಾಸರು ಹಂಪಿಯನ್ನು ಬಿಟ್ಟಂದು ಕ್ಷೇತ್ರಾಟನೆಗೆ ತೊಡಗಿದರೆಂದು ತೋರುತ್ತದೆ. ಅವರು ಮತ್ತೆ ಮತ್ತೆ ಹೋಗುತ್ತಿದ್ದುದು ತಿರುಮಲೆ-ತಿರುಪತಿಯ ಗುಡಿಗೆ; ಸಾಸಿರನಾಮದ ವೇಂಕಟರಮಣ ಅವರ ಇಷ್ಟದೈವ. ಈ ದೇವರನ್ನು ಕುರಿತು ಅವರು ರಚಿಸಿರುವ ಕೃತಿಗಳಿಗೆ ಲೆಕ್ಕವೇ ಇಲ್ಲ. ಈ ಕ್ಷೇತ್ರದ ಪ್ರಖ್ಯಾತಿ ಪುರಂದರದಾಸರು ಹುಟ್ಟಿ ಬೆಳೆದಿರಬಹುದಾದ ಪ್ರದೇಶದಲ್ಲಿಯೂ ಇದ್ದಿತು, ವಯಸ್ಸಾದ ಮೇಲೆ ಬಂದು ವಾಸಮಾಡತೊಡಗಿದ ವಿಜಯನಗರ ರಾಜ್ಯದಲ್ಲೂ ಇದ್ದಿತು. ಅರಸ ಕೃಷ್ಣದೇವರಾಯ, ಅವನನಂತರ ಅಚ್ಯುತದೇವರಾಯ ಇವರಿಬ್ಬರೂ ಆ ದೇವರಿಗೆ ನಿಷ್ಠೆಯಿಂದ ನಡೆದುಕೊಂಡವರು. ತಮ್ಮ ಗುರುಗಳಾದ ವ್ಯಾಸತೀರ್ಥರೂ ಈ ದೇವರ ಭಕ್ತರೇ; ಬೆಟ್ಟದ ಮೇಲೇ ನಿಂತು ೧೪೮೬ರಿಂದ ೧೪೯೮ ರವರೆಗೆ ದೇವರಿಗೆ ನಿತ್ಯಾರ್ಚನೆ ಸಲ್ಲಿಸುತ್ತ ಇದ್ದರೆಂಬ ಪ್ರತೀತಿಯೂ ಇದೆ. ಹೀಗಾಗಿ ಪುರಂದರದಾಸರು ತಿರುಮಲೆ-ತಿರುಪತಿಯನ್ನು ಮೆಚ್ಚಿಕೊಂಡಿದ್ದರೆಂದರೆ ಆಶ್ಚರ್ಯವೇನಿಲ್ಲ.

ಇದಲ್ಲದೆ ಶ್ರೀರಂಗ, ಕಂಚಿ, ಕಾಳಹಸ್ತಿ, ಸಿಂಹಗಿರಿ, ಹಸ್ತಿಶೈಲ, ಶ್ರೀಮುಷ್ಣ, ಮನ್ನಾರುಗುಡಿ, ಶ್ರೀಶೈಲ, ಉಡುಪಿ, ಸೇತು ಮೊದಲಾದ ಕ್ಷೇತ್ರಗಳಲ್ಲೆಲ್ಲ ಸುತ್ತಾಡಿದ್ದರೆಂದು ಅವರ ಪದಗಳಿಂದ ತಿಳಿದುಬರುತ್ತದೆ. ಹೋದಕಡೆಯಲ್ಲೆಲ್ಲ ಕ್ಷೇತ್ರದ ಮಹಾತ್ಮೆ, ಅಲ್ಲಿನ ಅರ್ಚಾಮೂರ್ತಿಯ ವೈಭವ, ಅಲ್ಲಿನ ಪುರಾಣ ಪ್ರಸಕ್ತಿ ಇವನ್ನು ಕುರಿತು ಕೃತಿಗಳನ್ನು ರಚಿಸತೊಡಗಿದರು. ಜಗನ್ನಾಥದಾಸರು

ತೀರ್ಥಕ್ಷೇತ್ರಗಳ ಮೂರ್ತಿಮಹಿಮೆಗಳ
ಕೀರ್ತಿಸಿ ಜಗದಿ ಕೃತಾರ್ಥನೆಂದೆನಿಸಿ
ಪಾತಕವನನಿಧಿ ಪೋತನೆನಿಪ ಜಗ
ನ್ನಾಥ ವಿಠಲನ ಸಂಪ್ರೀತಿಯ ಪಡೆದೆ

ಎಂದು ನೆನೆಸಿಕೊಂಡಿದ್ದಾರೆ ('ದಾಸರಾಯಾ ಪುರಂದರದಾಸರಯಾ' ಎಂಬ ಪದದ ಕಡೆಯ ಭಾಗ).

ಪುರಂದರದಾಸರು ತಾವು ತೀರಿಕೊಳ್ಳುವ ಕಾಲಕ್ಕೆ ಹಂಪಿಗೆ ಹಿಂದಿರುಗಿರಬಹುದೆಂದು ತೋರುತ್ತದೆ; ಈ ವಿಚಾರವನ್ನು ಮೊದಲೇ ಹೇಳಿದೆ. ಅವರ ಮಗ ಮಧ್ವಪತಿಯ ರಚನೆಯೆಂಬ ಪದದಲ್ಲಿ ('ಗುರು ಮಧ್ವಪತಿವಿಠಲ'ನೆಂಬ ಅಂಕಿತವಿದೆ) ಅವರು 'ಶರೀರವನಿರಿಸಿದರು', 'ವಿರೂಪಾಕ್ಷ ಕ್ಷೇತ್ರದಿ ವಿಠಲನ ಸನ್ನಿಧಿಯಲಿ' ಎಂದು ಸ್ಪಷ್ಟೋಕ್ತಿಯಿದೆ. ಆದರೆ ವಿಜಯದಾಸರು ಈ ವಿಚಾರವಾಗಿ ತಮ್ಮದೊಂದು ಸುಳಾದಿಯಲ್ಲಿ

'ಮುಕ್ತ್ಯರ್ಥ ಹರಿಪಾದಾಸಕ್ತರಾಗಿ ಧ್ಯಾನಿಸುತ್ತ
ರಕ್ತಾಕ್ಷಿವತ್ಸರದರ್ಕವಾರ ಇಂದುಕ್ಷಯ
ಯುಕ್ತ ಪುಷ್ಯಮಾಸದಿ ಉದ್ಯುಕ್ತರಾಗಿ ಪುಷ್ಪಕದಿ
....
ಮುಕ್ತಿಗೆ ಸಾರಿದರು ವಿರಕ್ತಿಮಾರ್ಗವನ್ನೆ ಪಡೆದು'

ಎಂದಷ್ಟೇ ಹೇಳಿದ್ದಾರೆ; ನಿರ್ಯಾಣದ ಸ್ಥಳವನ್ನು ಸೂಚಿಸಿಲ್ಲ. ನಿರ್ಯಾಣದ ದಿನವೇನೋ ಎರಡೂ ಒಕ್ಕಣೆಗಳಲ್ಲಿ ರಕ್ತಾಕ್ಷಿ ಸಂವತ್ಸರವೇ, ಪುಷ್ಯ ಮಾಸವೇ, ಕೃಷ್ಣ ಪಕ್ಷವೇ, ಭಾನುವಾರವೇ, ಸ್ವಾಮಿಕಣ್ಣು ಪಿಳ್ಳೆಯವರ ಗುಣಿತದಂತೆ ಇದು ಕ್ರಿಸ್ತಾಬ್ದ ೧೫೬೫ರ ಜನವರಿ ಎರಡನೆಯ ದಿನವಾಗುತ್ತದೆ.

೬

ಪುರಂದರದಾಸರ ಹಿರಿಮೆಯನ್ನು ಮೊದಲು ಗುರುತಿಸಿದವರು ಅವರ ದೀಕ್ಷಾಗುರುಗಳಾದ ವ್ಯಾಸತೀರ್ಥರೇ. ಪ್ರಸ್ತುತ ಸಂದರ್ಭದಲ್ಲಿ, ಹಿಂದೆ ಹೇಳಿದ ಕೆಲವು ವಿವರಗಳನ್ನು ಮತ್ತೆ ನೆನಪಿಗೆ ತಂದುಕೊಳ್ಳಬೇಕು. ಇನ್ನೂ ಕೆಲವು ಸಂಗತಿಗಳು ಸೇರಿಕೊಳ್ಳಬೇಕು, ಚಿತ್ರದ ಸಮಗ್ರತೆಗಾಗಿ. ವ್ಯಾಸತೀರ್ಥರು ಸ್ವತಃ ಪಂಡಿತರು, ಕವಿಗಳು, ಸಂಸ್ಕೃತ-ಕನ್ನಡ ಎರಡೂ ಭಾಷೆಗಳಲ್ಲಿ ಕೃತಿರಚನೆ ಮಾಡಿದವರು. ಶಾಸ್ತ್ರನಿಷ್ಠವಾದ ವ್ಯಾಸಕೂಟ ಮತ್ತು ಹರಿದಾಸ್ಯ ನಿಷ್ಠವಾದ ದಾಸಕೂಟ ಎರಡನ್ನೂ

ಎತ್ತಿ ಹಿಡಿದವರು. ಚನ್ನಪಟ್ಟಣ ತಾಲ್ಲೂಕಿನ ಬನ್ನೂರ ಗ್ರಾಮದಲ್ಲಿ ಹುಟ್ಟಿದ ಇವರು ತಮ್ಮ ಎಳಸೆಯ ವಯಸ್ಸಿನಲ್ಲೇ ಅಬ್ಬೂರಿನ ಬ್ರಹ್ಮಣ್ಯತೀರ್ಥರಿಂದ ಸಂನ್ಯಾಸಾಶ್ರಮವನ್ನು ಸ್ವೀಕರಿಸಿ, ಅವರಲ್ಲಿಯೇ ಕೊಂಚ ಕಾಲ ವಿದ್ಯಾಭ್ಯಾಸಮಾಡಿ, ಅನಂತರ ಕಾಶಿಗೆ ಹೋಗಿ ಅಲ್ಲಿ ಹಲವಾರು ಶಾಸ್ತ್ರಗಳನ್ನು ಸಾಂಗವಾಗಿ ಅಧ್ಯಯನ ಮಾಡಿ, ಉತ್ತರಭಾರತದಲ್ಲಿ ಸಂಚರಿಸಿ ನವ್ಯನ್ಯಾಯದಲ್ಲಿ ಸಿಂಹಸ್ವರೂಪರೆನಿಸಿದ ಗದಾಧರ ಮಿಶ್ರ, ಪಕ್ಷಧರಮಿಶ್ರ ಮೊದಲಾದ ಪಂಡಿತರೊಂದಿಗೆ ವಾಗ್ವಾದಮಾಡಿ ಜಯಪತ್ರವನ್ನು ಪಡೆದುಕೊಂಡು ಕನ್ನಡನಾಡಿಗೆ ಹಿಂದಿರುಗುವವರೆಗೆ ಅವರು ವೇದಾಂತಶಾಸ್ತ್ರದಲ್ಲೇ ನಿಷ್ಣರು. ಅವರ 'ತರ್ಕತಾಂಡವ' (ನ್ಯಾಯ ವೈಶೇಷಿಕ ಮತ ಖಂಡನ), 'ನ್ಯಾಯಮೃತ' (ಅದ್ವೈತ ಮತಖಂಡನ), 'ಚಂದ್ರಿಕಾ' (ತತ್ತ್ವಪ್ರಕಾಶಿಕೆಯ ಟಿಪ್ಪಣಿ), 'ಭೇದೋಜ್ಜೀವನ' (ಅದ್ವೈತಮತಖಂಡನ), 'ಮಂದಾರಮಂಜರಿ' (ಖಂಡನತ್ರಯ ವ್ಯಾಖ್ಯಾನ) ಈ ಸಂಸ್ಕೃತಗ್ರಂಥಗಳನ್ನು ಪರಿಶೀಲಿಸಿದವರಿಗೆ ಅವರ ವೈದುಷ್ಯ, ವಾದಕೌಶಲ, ಪ್ರಮೇಯ ನಿರೂಪಣಾಸಾಮರ್ಥ್ಯಗಳು ಮನದಟ್ಟಾಗುತ್ತವೆ. ದ್ವೈತಮತವೇ ವೇದವ್ಯಾಸರ ಮತ ಎಂಬ ಶ್ರದ್ಧೆಯುಳ್ಳ, ಶಾಸ್ತ್ರರಸಿಕರಾದ ವೈದಿಕಾಚಾರನಿಷ್ಠರಾದ ಪಂಡಿತರು ವ್ಯಾಸತೀರ್ಥರ ಗ್ರಂಥಗಳನ್ನು ಅವರ ಬಳಿಯೇ ಓದಿ, ಅವನ್ನು ಶಿಷ್ಯರಿಗೆ ಪಾಠಹೇಳಿ, ಅವಕ್ಕೆ ಟೀಕೆ ಟಿಪ್ಪಣಿಗಳನ್ನು ಬರೆದು ಕೃತಾರ್ಥರಾಗುವೆವೆಂದರು. ಇವರದ್ದೇ 'ವ್ಯಾಸಕೂಟ'ವಾಯಿತು. ಇಂಥ ಪಂಡಿತರು ಅವರ ಸುತ್ತ ನೆರೆದದ್ದು ಸಹಜವೇ.

ಆದರೆ ಉತ್ತರದೇಶದ ದಿಗ್ವಿಜಯವನ್ನು ಮುಗಿಸಿ ಅವರು ತಾಯ್ನಾಡಿಗೆ ಹಿಂದಿರುಗಿದಾಗ ಅವರು ಸೇರಿಕೊಂಡದ್ದು ಮುಳುಬಾಗಿಲಿನ ಶ್ರೀಪಾದರಾಜರನ್ನು. ಶ್ರೀಪಾದರು ಚನ್ನಪಟ್ಟಣದ ಅಬ್ಬೂರಿನಲ್ಲಿ ಹುಟ್ಟಿ, ಪದ್ಮನಾಭತೀರ್ಥರ ಪರಂಪರೆಯಲ್ಲಿ ಸಂನ್ಯಾಸಿಗಳಾದವರು. ಇವರ ದಿಟವಾದ ಹೆಸರು ಲಕ್ಷ್ಮೀನಾರಾಯಣತೀರ್ಥರೆಂದು. ಉತ್ತರಾದಿಮಠದ ರಘುನಾಥತೀರ್ಥರು ಇವರ ಪಾಂಡಿತ್ಯ, ಪ್ರತಿಭೆಗಳಿಗೆ ಬೆರಗಾಗಿ ಇವರನ್ನು 'ಶ್ರೀಪಾದರಾಜ'ರೆಂದು ಕರೆದು ಗೌರವಿಸಿದರು. ಈ ಹೆಸರೇ ನಿಂತಿತು. 'ನ್ಯಾಯಸುಧಾ' ಎಂಬ ವೇದಾಂತಗ್ರಂಥಕ್ಕೆ ಇವರು ಸಂಸ್ಕೃತದಲ್ಲಿ 'ವಾಗ್ವಜ್ರ'ವೆಂಬ ವ್ಯಾಖ್ಯಾನವನ್ನು ರಚಿಸಿದ್ದಾರೆ ಎಂದು ಪ್ರತೀತಿ. ಆದರೆ ಈಗ ದೊರೆತಿರುವ ಹಸ್ತಪ್ರತಿ ತೀರ ಅಪೂರ್ಣ; ಅದು ಶ್ರೀಪಾದರಾಜರದ್ದೇ ಎಂಬುದೂ ಸ್ಪಷ್ಟವಾಗುವುದಿಲ್ಲ. ಇದು ಅವರ ಬದುಕಿನಲ್ಲಿ ಮುಖ್ಯವಾದ ವಿವರವಲ್ಲ.

ಅವರು ಮುಖ್ಯವಾಗಿ ಭಕ್ತ, ಭಾವುಕ, ಕವಿ, ಗಾಯಕ, ವಾಗ್ಗೇಯಕಾರ. ಹೊಸಗನ್ನಡದಲ್ಲಿ ದೇವರನಾಮಗಳನ್ನು ರಚಿಸುವುದು ಅವರ ಪ್ರಿಯವಾದ ಹವ್ಯಾಸ. ಹಳೆಯ ವೃತ್ತನಾಮ ಪದ್ಧತಿ ಯೆಂಬ ರಚನೆಯನ್ನು ಇವರು ಮತ್ತೆ ವಾಡಿಕೆಗೆ ತಂದರು. ಹಳೆಯ ವೃತ್ತನಾಮ ಪದ್ಧತಿಗಳೆಲ್ಲ ಸಂಸ್ಕೃತದಲ್ಲಿದ್ದುವು; ಇವರು ಕನ್ನಡದಲ್ಲಿ ವೃತ್ತನಾಮ ಪದ್ಧತಿಗಳನ್ನು ರಚಿಸಿದರು. ಈ ಪದ್ಧತಿಯಲ್ಲಿ ಮೊದಲು ಪಲ್ಲವಿ, ಅನಂತರ ಒಂದು ವೃತ್ತ, ಅದಕ್ಕೆ ಹೊಂದಿಕೊಂಡು ಬಂದ ಒಂದು ಚರಣ, ಮತ್ತೆ ಒಂದು ವೃತ್ತ ಹೀಗೆ ಕ್ರಮ. ರಾತ್ರಿಯ ವೇಳೆ ಸ್ವಾಮಿಗಳು ನಡೆಸುವ ದೇವರಪೂಜೆಯಲ್ಲಿ ಬಳಕೆಗೆ ಬರುವಂಥ ಹಲವಾರು ವೃತ್ತನಾಮಗಳನ್ನು ಇವರೇ ರಚಿಸಿದರು. ಸುಳಾದಿಗಳ ಬಾಹುಳ್ಯವೂ ಇವರ ಕೊಡುಗೆಯೇ. ಇವರೇ ನೂರ ಮೂವತ್ತು ಮೂರು ಸುಳಾದಿಗಳನ್ನು ರಚಿಸಿದ್ದರಂತೆ. ಇವರ ಹೆಸರಿನಲ್ಲಿ ಮೂರು ಉಗಾಭೋಗಗಳೂ ಇವೆ. ಇವಲ್ಲದೆ ಕನ್ನಡದಲ್ಲಿ ಗೋಪೀಗೀತಾ,

ಭ್ರಮರಗೀತಾ, ವೇಣುಗೀತಾ, ರುಕ್ಮಿಣೀಸತ್ಯಭಾಮಾವಿಲಾಸ, ಲಕ್ಷ್ಮೀ ನರಸಿಂಹಪ್ರಾದುರ್ಭಾವ ದಂಡಕ ಮೊದಲಾದ ಹಲವು ಸೊಗಸಾದ ರಚನೆಗಳು ಇವರವೇ. ಇವರ ಭ್ರಮರಗೀತೆ (ಮುಖಾರಿರಾಗ, ಅಟ್ಟತಾಳ, 'ಭೃಂಗ ಬೆನ್ನಟ್ಟಿದಾನೆ ಶ್ರೀರಂಗ ಮಧುರೇಲಿ ನಿಂದು' ಎಂದು ಮೊದಲಾಗುತ್ತದೆ) ಅವರ ಸಾಹಿತ್ಯ-ಸಂಗೀತ ಪ್ರೌಢಿಮೆಗೆ ಸಾಕ್ಷಿಯಾಗಿ ಉಳಿದಿದೆ. ಅವರ ಅಂಕಿತ 'ರಂಗವಿಠಲ'. ಅವರು ಮುಳುಬಾಗಿಲಿನ ಹತ್ತಿರ ನರಸಿಂಹತೀರ್ಥದಲ್ಲಿ ೧೪೮೭ರ ಸುಮಾರಿಗೆ ತೀರಿಕೊಂಡರು.

ವ್ಯಾಸತೀರ್ಥರು ಶ್ರೀಪಾದರಾಜರ ಬಳಿ ಬಂದಾಗ ಅವರು ಕಂಡುಕೊಂಡದ್ದು ಹರಿಭಕ್ತಿಯ ಸ್ವಾರಸ್ಯವನ್ನು. ಹರಿಯ ಹಿರಿಮೆಯನ್ನು ಹಾಡಿ ಹೊಗಳಲು ತಾವೇ ಕನ್ನಡ ರಚನೆಗಳನ್ನು ಮಾಡಿ, ಅವನ್ನು ತಾವೇ ಹಾಡುತ್ತ, ರಾತ್ರಿಯ ಪೂಜೆಯ ಸಂದರ್ಭಲ್ಲಿ ತಾವೇ ನರ್ತನಸೇವೆಯನ್ನೂ ಮಾಡುತ್ತಿದ್ದ ಶ್ರೀಪಾದರಾಜರ ವ್ಯಕ್ತಿತ್ವ ವ್ಯಾಸತೀರ್ಥರ ಮೇಲೆ ಪ್ರಬಲವಾದ ಪ್ರಭಾವವನ್ನು ಬೀರಿತು. ಅವರ ಪಾಂಡಿತ್ಯ, ವಾಕ್ಯಾರ್ಥ ಪ್ರೌಢಿಮೆ, ವಾದಪ್ರಸಕ್ತಿ ಇವೆಲ್ಲ ಹಿಂದೆ ಸರಿದು ನಿಂತವು; ಭಗವದ್ಭಕ್ತಿ, ಸಾಧನಸಂಗೀತ, ಹರಿದಾಸ್ಯ ವೃತ್ತಿ ಇವುಗಳಿಗೆ ಅವರ ಮನಸ್ಸು ಸೋತಿತು. ಅಲ್ಲಿಂದ ಮುಂದೆ ಅವರು 'ವ್ಯಾಸಕೂಟ'ದ ವಿಚಾರವಾಗಿ ಉದಾಸೀನರಾಗಿ 'ದಾಸಕೂಟ'ವನ್ನು ಪ್ರೋತ್ಸಾಹಿಸುತ್ತ ಬಂದರು.

'ದಾಸಕೂಟ'ದವರಲ್ಲಿ ಅಧ್ಯಾತ್ಮದ ನಿಷ್ಠೆಯಿದ್ದರೂ ಮತದ ಛಲ ಕಣ್ಣು ಕುಕ್ಕುವುದಿಲ್ಲ; ನೀತಿಗೆ ಆದರವಿದ್ದರೂ ಮಡಿವಂತಿಗೆಯ ಹಟವಿಲ್ಲ; ಆಚಾರಕ್ಕೆ ಮಾನ್ಯತೆಯಿದ್ದರೂ ಅದು ದಾರಿಯಾಗಿ ಅಷ್ಟೆ; ಅದೇ ಗುರಿಯೆಂದಲ್ಲ. ವ್ಯಾಸತೀರ್ಥರ ದಾಸಕೂಟದಲ್ಲಿ ಇದ್ದವರೆಲ್ಲ ಮಾಧ್ವ ಸಂಪ್ರದಾಯದವರಲ್ಲ. ಪುರಂದರದಾಸರೇನೋ ಮಾಧ್ವಸಂಪ್ರದಾಯದವರು. ಆದರೆ ವ್ಯಾಸತೀರ್ಥರ ಶಿಷ್ಯರಲ್ಲಿ ವೈಕುಂಠದಾಸರು ಶ್ರೀವೈಷ್ಣವ ಪಂಥದವರು, ನಾರಾಯಣಯತಿ ಸ್ಮಾರ್ತ ಭಾಗವತರು, ಕನಕದಾಸರು ಬ್ರಾಹ್ಮಣರೇ ಅಲ್ಲ, ಅಂಡೆ ಕುರುಬರು. ಆದರೆ ಎಲ್ಲರೂ ದಾಸಕೂಟದಲ್ಲಿ ಸಮಾನರೇ. ಅವರೆಲ್ಲ ವೇದಾಂತದ ಪ್ರಮೇಯಗಳನ್ನೇ ನಂಬುವವರಾದರೂ ಅವನ್ನು ಅರಿತುಕೊಳ್ಳಲು ಸಂಸ್ಕೃತವೇ ಗತಿ ಎಂದು ನಂಬುವುದಿಲ್ಲ. ತಮ್ಮ ತಾಯ್ನುಡಿಯಲ್ಲೇ ಎದೆಯಾಳದ ಭಾವನೆಗಳನ್ನು ಭಕ್ತಿಯ ಹೊನಲಿನಲ್ಲಿ ಹೊರಹೊಮ್ಮಿಸಿದರೆ ಭಗವತ್‌ಪ್ರೀತಿಗೆ ಏನೇನೂ ಆತಂಕವಿರದೆಂದು ಅವರ ನಂಬಿಕೆ. ಹೀಗಾಗಿ ಅವರು ಬಳಸುವ ಹಾಡುಗಳೆಲ್ಲ ಕನ್ನಡದವೇ; ಮಟ್ಟು ಕನ್ನಡದ್ದೇ, ನುಡಿಗಟ್ಟು ಕನ್ನಡದ್ದೇ; ತಿರುಳೂ ಕನ್ನಡ ಜಾಯಮಾನದ್ದೇ.

ವ್ಯಾಸತೀರ್ಥರು ಎತ್ತಿ ಕಟ್ಟಿದ 'ದಾಸಕೂಟ' ಹರಿದಾಸಪರಂಪರೆಯನ್ನು ಉಳಿಸಿ ಬೆಳೆಸಿತು. ಹರಿದಾಸಪರಂಪರೆ ಆರಂಭವಾದದ್ದು ಯಾವಾಗ ಎಂದು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ಆದರೆ ಇದು ಕನ್ನಡನಾಡಿಗೆ ವಿಶಿಷ್ಟವಾದುದು ಎಂಬುದೇನೋ ದಿಟ. ಹರಿದಾಸರೆಲ್ಲ ಕನ್ನಡಿಗರೇ; ಹರಿದಾಸ ಸಾಹಿತ್ಯವೆಲ್ಲ ಇರುವುದು ಕನ್ನಡದಲ್ಲೇ. ಇದರಲ್ಲಿ ವಿಟ್ಠಲಭಕ್ತಿ, ಭಾಗವತಧರ್ಮ, ಮಹಾನುಭಾವ ಪಂಥ, ರಾಮಾನುಜಸಂಪ್ರದಾಯ, ಮಾಧ್ವ ಸಿದ್ಧಾಂತ ಪ್ರಮೇಯಗಳು ಇವೆಲ್ಲ ಕೂಡಿಕೊಂಡುಬಂದುವು. ಮಧ್ವಾಚಾರ್ಯರ (೧೨೩೮-೧೩೧೭) 'ದ್ವಾದಶ ಸ್ತೋತ್ರ'ವೇ ಹರಿದಾಸ

ಮನೋಧರ್ಮಕ್ಕೆ ಬುನಾದಿಯಾಯಿತು ಎಂದು ಹೇಳುವವರಿದ್ದಾರೆ. ಅವರಿಗೆ ಪೂರ್ವದಲ್ಲೇ ಅರವತ್ತು ಮೂರು ಮಂದಿ ಆದ್ಯರು, ಆರಾಧ್ಯರು ಈ ಪರಂಪರೆಯನ್ನು ಬೆಳೆಸಿದರು ಎಂದೂ ಕೆಲವರ ಎಣಿಕೆ. ಹೈಗಣಪುರದ ಅಚಲಾನಂದದಾಸರು 'ಆದ್ಯ'ರಲ್ಲಿ ಆದ್ಯರಂತೆ; ಇವರು ಕನ್ನಡದಲ್ಲಿ ನಾಲ್ಕೈದು ಕೀರ್ತನೆಗಳನ್ನು ರಚಿಸಿದರೆಂಬ ಪ್ರತೀತಿಯಿದೆ. ಅವರ ನಂತರ "ಮುದ್ದು ವಿಟ್ಠಲ', 'ಯೋಗೀಂದ್ರ ವಿಠಲ', 'ನರಕಂಠೀರವ ವಿಠಲ', 'ಸೊಬಗು ವಿಠಲ', 'ಸಿರಿಕೃಷ್ಣ ವಿಠಲ' ಮುಂತಾದ ಕೆಲವು ಪುರಾತನರ ಕೃತಿಗಳನ್ನು ಲಿಂಗಸೂಗೂರಿನ ವರದೇಂದ್ರ ದಾಸ ಸಾಹಿತ್ಯ ಮಂಡಳಿಯ ಗೊರಾಬಾಳ ಹನುಮಂತರಾಯರು ಸಂಗ್ರಹಿಸಿದ್ದಾರೆ.

ಹರಿದಾಸಪಂಥದವರಲ್ಲಿ ಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯರಾದ ನರಹರಿ ತೀರ್ಥರಿಂದ ಈ ಪರಂಪರೆ ಮೊದಲಾಯಿತೆಂಬ ಕಲ್ಪನೆಯೂ ಇದೆ. ನರಹರಿತೀರ್ಥರು ೧೨೬೪ರಿಂದ ೧೨೯೩ರವರೆಗೆ ಕಳಿಂಗದೇಶದಲ್ಲಿ ಆಳುತ್ತಿದ್ದ ಗಾಂಗವಂಶದ ಅರಸ ಮೊದಲನೆಯ ಭಾನುದೇವನ ಕಾಲದಲ್ಲಿ ಅಲ್ಲೇ ಇದ್ದವರು. 'ಭಾನುದೇವಾಶ್ರಿತಃ', 'ಮುದುಸಲಿ ಸಚಿವುಡು ನರಹರಿ ಮುನೀಶ್ವರುಡು' ಎಂಬ ಶಾಸನಗಳಿವೆ. ಎಂದರೆ ಕಳಿಂಗದೇಶದಲ್ಲಿ ಆಡಳಿತವನ್ನೂ ನಡೆಸುತ್ತಿದ್ದವರು. ಶ್ರೀಕೂರ್ಮ, ಸಿಂಹಾಚಲಗಳಲ್ಲಿ ದಾನಧರ್ಮಗಳನ್ನು ನಡೆಸಿ ಶಕವರ್ಷ ೧೧೯೩ರಲ್ಲಿ (ಎಂದರೆ ಕ್ರಿಸ್ತಾಬ್ದ ೧೨೭೧ರಲ್ಲಿ) ತಾವೇ ಶಾಸನವನ್ನು ಹೊರಡಿಸಿದ್ದಾರೆ. ಹತ್ತು ವರ್ಷಗಳ ನಂತರ ಶ್ರೀ ಕೂರ್ಮನಾಥನ ಆಲಯದ ಎದುರು ಯೋಗಾನಂದ ನರಸಿಂಹಾಲಯವನ್ನು ಕಟ್ಟಿಸಿ, ಮತ್ತೆ ಹತ್ತು ವರ್ಷಗಳು ಕಳೆದಾಗ ಸಿಂಹಾಚಲದ ನರಸಿಂಹನಿಗೆ ಅಖಂಡದೀಪದಾನವನ್ನು ಮಾಡಿರುವ ಶಾಸನಗಳು ತೆಲುಗು ಭಾಷೆಯಲ್ಲಿವೆ. ಶಾಸನದಲ್ಲಿ "ಶ್ರೀಮದಾನಂದ ತೀರ್ಥ ಪೂಜ್ಯಪಾದಾಚಾರ್ಯ ಶಿಷ್ಯುಲೈನ ಶ್ರೀ ನರಹರಿ ತೀರ್ಥ ಶ್ರೀಪಾದುಲು" ಎನ್ನುವ ಒಕ್ಕಣೆಯಿದೆ. ದೂರದ ಕಳಿಂಗದಲ್ಲಿದ್ದರೂ, ಲೌಕಿಕ ವ್ಯವಹಾರಗಳಲ್ಲಿ ತೊಡಗಿದ್ದರೂ, ಕನ್ನಡದಲ್ಲಿ ದೇವರನಾಮಗಳನ್ನು ರಚಿಸಿದರು. ಅವರು ೧೩೨೪ರಿಂದ ೧೩೩೩ರ ವರೆಗೂ ಮಧ್ವಾಚಾರ್ಯರ ಸಂಸ್ಥಾನವನ್ನು ಆಳುತ್ತ ಕನ್ನಡನಾಡಿನಲ್ಲೇ ಇರುವಾಗ ಈ ಪ್ರಸಕ್ತಿ ಇನ್ನೂ ಹೆಚ್ಚಿತು. 'ರಘುಪತಿ', 'ರಘುಕುಲ ತಿಲಕ' ಎಂಬ ಅಂಕಿತಗಳಲ್ಲಿರುವ ಕನ್ನಡ ದೇವರನಾಮಗಳು ಇವರವೇ. "ಹರಿಯೇ, ಇದು ಸರಿಯೇ" ಎಂಬ ಶ್ರೀರಾಗದ ಕೀರ್ತನೆಯೊಂದು, "ಎಂತು ಮರುಳಾದೆ, ನಾನೆಂತು ಮರುಳಾದೆ" ಎಂಬ ಆನಂದಭೈರವಿ ರಾಗದ ಕೀರ್ತನೆ ಇವರ ರಚನೆಗಳಲ್ಲಿ ಇಂದಿಗೂ ಜನಪ್ರಿಯವಾಗಿ ಉಳಿದಿವೆ.

ನರಹರಿತೀರ್ಥರಿಂದ ಹರಿದಾಸಸಾಹಿತ್ಯ ಮೊದಲಾದುದು ದಿಟವಿದ್ದೀತು. ಆದರೆ ಹರಿದಾಸಪರಂಪರೆ ಅವರಿಂದ ಮೊದಲಾದುದಕ್ಕೆ ಪುರಾವೆಗಳಿಲ್ಲ. ಅವರನಂತರ ಧರ್ಮ ಸಂಸ್ಥಾನದಲ್ಲಿ ಪಟ್ಟವೇರಿದ ಮಾಧವತೀರ್ಥರು, ಅಕ್ಷೋಭ್ಯತೀರ್ಥರು, ಜಯತೀರ್ಥರು, ವಿದ್ಯಾಧಿರಾಜತೀರ್ಥರು ಮೊದಲಾದವರು ಯಾರೂ ಈ ದಿಸೆಯಲ್ಲಿ ಆಸಕ್ತಿ ತೋರಿಸಿದಂತೆ ಕಾಣಬರುವುದಿಲ್ಲ. ಅದೇ ಪೀಳಿಗೆಯಲ್ಲಿ ಎಂಬತ್ತೇಳು ವರ್ಷಗಳ ನಂತರ ಶ್ರೀಪಾದರಾಜರಲ್ಲಿ (ಲಕ್ಷ್ಮೀನಾರಾಯಣ ತೀರ್ಥರು, ಆಳ್ವಿಕೆ ೧೪೬೦-೧೪೮೦) ಮತ್ತೆ ನರಹರಿತೀರ್ಥರ ಹರಿದಾಸ್ಯದ ಒಲವು ಮರುಕರುಳಿಸಿತು. ಮತ್ತು ಈಗ ದಾಸಸಾಹಿತ್ಯಸೃಷ್ಟಿ ಮಾತ್ರವಲ್ಲದೆ ಪೂಜೆಯಲ್ಲಿ ಅದರ ಅನ್ವಯವೂ ಒದಗಿಬಂದಿತು; ಮೇಲಾಗಿ, ಹರಿದಾಸರಿಗೆ ಪ್ರೋತ್ಸಾಹವೂ ಸಿದ್ಧವಾಯಿತು. ತಮ್ಮ ಸಂನ್ಯಾಸಿ ಶಿಷ್ಯರಾದ ವ್ಯಾಸತೀರ್ಥರಿಗೇ ಈ ಗೀಳನ್ನು ಹಿಡಿಸಿದರಲ್ಲವೆ? ಹೀಗಾಗಿ ಶ್ರೀಪಾದರಾಜರನ್ನು

ಹರಿದಾಸ ಪರಂಪರೆಯ ಪ್ರವರ್ತಕರೆಂದರೆ ತಡೆಯುತ್ತದೆ. ಹರಿದಾಸಪರಂಪರೆಯಲ್ಲೂ ಸಾಂಪ್ರದಾಯಿಕವಾದ ಪೂರ್ವಸೂರಿ ಸ್ಮರಣೆಯಲ್ಲಿ ಇವರ ಹೆಸರೇ ಮೊದಲು ಬರುತ್ತದೆ-

'ನಮಃ ಶ್ರೀಪಾದರಾಜಾಯ ನಮಸ್ತೇ ವ್ಯಾಸಯೋಗಿನೇ
ನಮಃ ಪುರಂದರಾರ್ಯಾಯ ವಿಜಯಾರ್ಯಾಯ ತೇ ನಮಃ'

ಆದರೆ ದಿಟವಾಗಿ ಪರಂಪರೆ ವ್ಯಾಸತೀರ್ಥರಿಂದಲೇ ಮೊದಲಾಯಿತೆನ್ನಬೇಕು. ದಾಸಕೂಟವನ್ನು ಕಟ್ಟಿ ಅದರಲ್ಲಿ ತಮ್ಮ ಗೃಹಸ್ಥ ಶಿಷ್ಯರನ್ನು ತೊಡಗಿಸಿದವರು ಅವರೇ. ಅವರನಂತರ ದಾಸಕೂಟದ ಅಧ್ವರ್ಯು ಪುರಂದರದಾಸರಾದರು. ಕಾರಣಾಂತರಗಳಿಂದ, ಪರಂಪರೆ ಪ್ರಕಟವಾಗಿ ಪ್ರಸಿದ್ಧವಾಗಿ ಉಳಿದುಕೊಳ್ಳದೆ ವಿಜಯದಾಸರ ಕಾಲದವರೆಗೆ ಗುಪ್ತಗಾಮಿನಿಯಾಯಿತು. ಮುಂದೆ ಹಲಕಾಲ ಇದು ಉಳಿಯಿತು, ಬೆಳೆಯಿತು. ಆದುದರಿಂದಲೇ ಸ್ತುತಿರೂಪವಾದ ಈ ಶ್ಲೋಕದಲ್ಲಿ ಹರಿದಾಸಪಂಥಕ್ಕೆ ಪ್ರೇರಣೆಯನ್ನು ಒದಗಿಸಿದ ಶ್ರೀಪಾದರಾಜರು, ಹರಿದಾಸಪರಂಪರೆಯ ಪ್ರವರ್ತಕರಾದ ವ್ಯಾಸತೀರ್ಥರು, ಸಂಪ್ರದಾಯದ ಸತ್ವಕ್ಕೆ, ಪ್ರಚಾರಕ್ಕೆ, ಜನಪ್ರೀತಿಗೆ ಕಾರಣರಾದ ಪುರಂದರದಾಸರು, ಮತ್ತು ಪರಂಪರೆಯನ್ನು ಪುನರುಜ್ಜೀವನಗೊಳಿಸಿದ ವಿಜಯದಾಸರು ಈ ನಾಲ್ವರ ಹೆಸರನ್ನು ಎತ್ತಿಕೊಂಡಿದ್ದಾರೆ.

ವಿಜಯದಾಸರಿಗೆ ಪೂರ್ವಿಕರೆಂದು ಹೆಸರಾದ 'ಗುರು ಮಹೀಪತಿ' ಎಂಬ ಅಂಕಿತದ ದಾಸರ 'ನೆನೆದು ನೆನಸುವೆ' ಎಂದು ಮೊದಲಾಗುವ ಹಾಡಿನಲ್ಲಿ ಇರುವ ಒಕ್ಕಣೆ

ಶರಣೆಂದು ಆದ್ಯರ ಸಕಲ ಪ್ರಸಿದ್ಧರ
ಶ್ರೀಪಾದಪ್ರೀಯ ಶುಭ ವ್ಯಾಸರಾಯರ
ವರ ಹಯಗ್ರೀವ ಜಗವರಿತ ವಾದಿರಾಜ
ಪುರಂದರದಾಸರ ಪುನ್ನರವ ಮಾಳವ (?)
ನೆರೆ ತಾಳಪಾಕರ ಸಂತಮತಿ ಕನಕರ
ಹರಿಭಕ್ತಿ ಉಲ್ಲಾಸರ ಬಂಡೆರಂಗನರಿತಿಹ ನಿಜದಾ
ಸರ ಮಹೀಪತಿ ಗುರುಶರಣರ ತೋಷರ ವಾರಂ ವಾರಂ

ಇಲ್ಲಿ ಹರಿದಾಸರಪರಂಪರೆಗೆ ಆದ್ಯರನ್ನು ಬಿಟ್ಟರೆ ಶ್ರೀಪಾದರಾಜರೇ ಮೊದಲಿಗರು; ಅನಂತರ ವ್ಯಾಸರಾಯರು, ವಾದಿರಾಜರು, ಪುರಂದರದಾಸರು, ತಾಳ್ಳಪಾಕ ಕವಿಗಳು, ಕನಕದಾಸರು ಇವರು ಉಲ್ಲೇಖಿಗೊಂಡಿದ್ದಾರೆ. ಇಲ್ಲಿ ತಾಳ್ಳಪಾಕದವರ ಉಲ್ಲೇಖ ಬಂದಿರುವುದು ಸ್ವಾರಸ್ಯವಾಗಿದೆ. ಪುರಂದರದಾಸರಿಗೂ ತಾಳ್ಳಪಾಕ ಅಣ್ಣಾಮಚಾರ್ಯರಿಗೂ ಅವರ ಮಕ್ಕಳಿಗೂ ಹರಿದಾಸ ಸಂಪ್ರದಾಯದ ಸಮಾನಧರ್ಮವಿದ್ದಿತೆಂದು ಇದರಿಂದ ತೋರುತ್ತದೆ. 'ಗುರು ಮಹೀಪತಿ'ಗಳ ಈ ಪದವನ್ನು ಗೋರಾಬಾಳ ಹನುಮಂತರಾಯರ 'ಶ್ರೀ ಜಗನ್ನಾಥದಾಸರು, ತತ್ ಶಿಷ್ಯ ಪ್ರಶಿಷ್ಯರ ಸುಳಾದಿಗಳು ಉಗಾಭೋಗಗಳು' (ಲಿಂಗಸೂಗೂರಿನ ಶ್ರೀ ವರದೇಂದ್ರ ಹರಿದಾಸ ಸಾಹಿತ್ಯ ಮಂಡಲಿ, ೧೯೫೮) ಎಂಬ ಸಂಗ್ರಹದಲ್ಲಿ ಕಾಣಬಹುದು.

ವ್ಯವಹಾರದ ದೃಷ್ಟಿಯಿಂದ ಶ್ರೀಪಾದರಾಜರಿಗಿಂತ ವ್ಯಾಸತೀರ್ಥರು ಹೆಚ್ಚು ಪ್ರಭಾವಶಾಲಿಗಳಾಗಿದ್ದವರು. ವಿಜಯನಗರ ಸಾಮ್ರಾಜ್ಯದ ರಾಜಧಾನಿಯಲ್ಲೇ ಇರುತ್ತಿದ್ದವರು, ಅರಸನಾದ ಕೃಷ್ಣದೇವರಾಯ ಮಹಾರಾಯನಿಗೆ ಬೇಕಾದವರು. ಈ ಅರಸನು ಗೌರಾಪುರಶಾಸನದಲ್ಲಿ (ಶಕ ೧೪೩೯ ಎಂದರೆ ಕ್ರಿ.ಶ. ೧೫೨೭) ಇವರನ್ನು "ನಿಗಮಾಗಮನಿರ್ಣೀತ ನಿರ್ಜರಾಧೀಶಮಂತ್ರಿ", "ನೃಪೇಂದ್ರಮುಕುಟೀರತ್ನ ನೀರಾಜಿತನಿಜಾಂಘ್ರಿ", "ನಿರಹಂಕಾರಚಿತ್ತ", "ನೀತಿಮಾರ್ಗೋಪದೇಶಕ", "ವಿದ್ವದಿಂದೀವರೇಂದು" ಎಂದು ಮುಂತಾಗಿ ಕೊಂಡಾಡಿರುವುದನ್ನು ಈ ಮೊದಲೇ ಉಲ್ಲೇಖಿಸಲಾಗಿದೆ. ಧಾರ್ಮಿಕಪ್ರಪಂಚದಲ್ಲೂ ಲೋಕವ್ಯವಹಾರದಲ್ಲೂ ಅವರ ಯಶಸ್ಸು ಉಜ್ವಲವಾಗಿದ್ದಿತು. ಇಂಥವರು ಕೈಹಿಡಿದ ಕೆಲಸ ಊರ್ಜಿತವಾಗುವುದೇನು ಕಷ್ಟ? ಹರಿದಾಸರ ಸಂಘಟನೆ, ವ್ಯವಸ್ಥೆ, ಪ್ರೋತ್ಸಾಹ ಅವರಿಗೆ ಪ್ರಿಯವಾಗಿದ್ದ ವಿಚಾರ. ಇದಕ್ಕೆ ಎದುರಾಗಿ ಬಂದ ಅಡ್ಡಿ ಅಡಚಣೆಗಳನ್ನೆಲ್ಲ ನಿವಾರಿಸುವುದು ಅವರಿಗೆ ಏನೂ ಕಷ್ಟವಾಗಿರಲಿಲ್ಲ. ಮೇಲಾಗಿ ತಾವೇ ಪ್ರಖ್ಯಾತರಾದ ಗ್ರಂಥಕರ್ತರು. ಕನ್ನಡದಲ್ಲೂ ಅವರು ಇನ್ನೂರಕ್ಕೂ ಮೀರಿ ಕೀರ್ತನೆಗಳನ್ನು ರಚಿಸಿದವರು; ಹದಿಮೂರು ಸುಳಾದಿಗಳು ಅವರ ಹೆಸರಿನಲ್ಲಿವೆ, ಕೆಲವು ಉಗಾಭೋಗಗಳನ್ನೂ ರಚಿಸಿದ್ದಾರೆ. ಮತ್ತು ಗುಣಗ್ರಾಹಿಗಳು; ಜಾತಿ, ಮತ ಎಂಬ ಭೇದವನ್ನೆಣಿಸದೆ ಯೋಗ್ಯತೆಯಿದ್ದಲ್ಲಿ ಆದರ ನೀಡುವ ಉದಾರಿಗಳು. ಅವರು ವೈದಿಕರ ಆಡಂಬರ, ಕುಹಕಗಳಿಗೆ ಮಣಿಯದೆ ಪಂಡಿತರೂ ವೈದಿಕರೂ ಅಲ್ಲದೆ ಹರಿದಾಸರಾದ ಪುರಂದರದಾಸರನ್ನು ಮೇಲೆತ್ತಿ ಹಿಡಿದರು; ಮಠದ ಪಂಡಿತರ ಆಕ್ಷೇಪಗಳನ್ನು ಕಡೆಗಣಿಸಿ ವೈದಿಕಪಂಡಿತರಿರಲಿ, ಬ್ರಾಹ್ಮಣರೂ ಅಲ್ಲದೆ ಅಂಡೆಕುರುಬರಾದ ಕನಕದಾಸರ ಹಿರಿಮೆಯನ್ನು ಸಾರಿದರು. ಹರಿದಾಸರ ಸಂಪ್ರದಾಯಕ್ಕೆ, ಜೀವನವಿಧಾನಕ್ಕೆ, ಮನೋವೃತ್ತಿಗೆ, ಸಾಹಿತ್ಯರಚನೆಗೆ ವ್ಯಾಸತೀರ್ಥರಿಂದ ದೊರೆತ ಉತ್ತೇಜನ ಮನನೀಯವಾದುದು.

ವ್ಯಾಸಕೂಟ-ದಾಸಕೂಟಗಳೆಂಬ ಮಾತುಗಳೇನೋ ಈಚಿನವು; ಸುಮಾರು ನೂರುವರ್ಷಗಳಿಗೆ ಮೀರಿ ಅವುಗಳ ಪ್ರಾಚೀನತೆ ಕಾಣುವುದಿಲ್ಲ. ಮೇಲಾಗಿ, ದಾಸಕೂಟವೆನಿಸಿಕೊಳ್ಳಬಲ್ಲ ಹರಿದಾಸರ ಸಂಘಟನೆಯಾದಂತೆ ವಾದವಿವಾದರಸಿಕರಾದ ಗೊಡ್ಡು ಪಂಡಿತರ ಸಂಘಟನೆ ಯಾವ ಕಾಲಕ್ಕೂ ಆಗಲಿಲ್ಲ. ಆಯಾ ಮಠಕ್ಕೆ ಅಂಟಿಕೊಂಡು ಈ ಪಂಡಿತರು ಮೆರೆಯುತ್ತಿದ್ದರಷ್ಟೇ ವಿನಾ ವ್ಯಾಸ-ಕೂಟವೆಂಬ ವಿಶಾಲವಾದ ವ್ಯವಸ್ಥೆ ಎಂದೂ ಇರಲಿಲ್ಲ. 'ವ್ಯಾಸಕೂಟ'ವೆಂಬ ಹೆಸರಿನಲ್ಲಿನ 'ವ್ಯಾಸ' ಎಂಬುದು ವ್ಯಾಸತೀರ್ಥರಿಗೆ ಅನ್ವಯಿಸುವುದಿಲ್ಲ; ಬ್ರಹ್ಮಸೂತ್ರಸಂಪ್ರದಾಯವನ್ನು ಸ್ಪಷ್ಟಗೊಳಿಸಿದ ವೇದವ್ಯಾಸ (ಅಥವಾ ಬಾದರಾಯಣ) ರನ್ನು ಸೂಚಿಸುತ್ತದೆ. ಪಂಡಿತರಿಗೆ ಪರಮಪ್ರಮಾಣ ಇದೇ ತಾನೆ? 'ದಾಸ-ಕೂಟ'ವೇನೋ ವಿಶಿಷ್ಟವಾಗಿ ವಿಶಾಲವ್ಯಾಪ್ತಿಯಿಂದ ಮೈದಳೆದದ್ದು ದಿಟ. ಇದು ಹೀಗೆ ಮೈದಳೆಯಲು ವ್ಯಾಸತೀರ್ಥರ ನೆರವು ಕಾರಣವಾಯಿತೆನ್ನಬಹುದು.

ಇನ್ನು ಕೆಲವರು ಹೀಗೆ ವ್ಯಾಸಕೂಟ ದಾಸಕೂಟಗಳೆಂಬ ಇಬ್ಭಾಗದ ವ್ಯವಸ್ಥೆ ಕೇವಲ ಕಾಲ್ಪನಿಕವಾದುದು ಎನ್ನುವುದುಂಟು. ಇದು ಸ್ವಲ್ಪ ಮಟ್ಟಿಗೆ ದಿಟ. ವ್ಯಾಸಕೂಟ-ದಾಸಕೂಟಗಳೆಂದು ಎರಡು ಅಧಿಕೃತ ಸಂಸ್ಥೆಗಳಾಗಿ ಕೆಲಸ ಮಾಡುತ್ತಿದ್ದುವೆಂದೂ, ಅವುಗಳ ನಡುವೆ ವಿರಸ, ಸೆಣಸಾಟ,

ಮೇಲಾಟಗಳು ನಡೆಯುತ್ತಲೇ ಇದ್ದುವೆಂದು ಯಾರೂ ಭಾವಿಸಲಾರರು. ಆದರೆ ಮಡಿವಂತಿಕೆಯ ಪಂಡಿತರು ಸಂಸ್ಕೃತ, ಶಾಸ್ತ್ರಾಧ್ಯಯನ, ವಾದ, ವಾಕ್ಯಾರ್ಥಗಳನ್ನೇ ಮುಂದೆಮಾಡಿಕೊಂಡು ಹರಿದಾಸರ ಮನೋವೃತ್ತಿಯನ್ನೂ ನಡಾವಳಿಯನ್ನೂ ಜರಿಯುವುದು, ತೆಗಳುವುದು ಈ ಕಾಲ ದಲ್ಲಿಯೂ ಇದ್ದೇ ಇದೆಯೆಂದಮೇಲೆ ಮೂರು-ನಾಲ್ಕುನೂರು ವರ್ಷಗಳ ಹಿಂದೆ ಇದು ಎಷ್ಟು ಪ್ರಬಲ ವಾಗಿದ್ದಿತೆಂದು ಊಹಿಸಿಕೊಳ್ಳಬಹುದು. ಹರಿದಾಸರು ಪಂಡಿತರಲ್ಲದುದು ಮಾತ್ರವಲ್ಲ, ಪಾಂಡಿತ್ಯವನ್ನೂ ಅಲ್ಲಗಳೆದರು; ಪಂಡಿತರ ಜ್ಞಾನಪಾರಮ್ಯವನ್ನು ಒಪ್ಪಿಕೊಳ್ಳದೆ ಭಕ್ತಿಯೇ ಸಾಧನವೆಂದು ಹಟಹಿಡಿದರು. ಶಾಸ್ತ್ರದಲ್ಲಿ ಭಕ್ತಿಯೇ ಉತ್ತಮ ಸಾಧನವೆಂಬ ಪ್ರಕ್ರಿಯೆಯಿದ್ದರೂ, ವ್ಯವಹಾರದಲ್ಲಿ ಜ್ಞಾನಾರ್ಜನೆಗಿದ್ದ ಬೆಲೆ ಭಕ್ತಿಸಂಪನ್ನತೆಗಿರಲಿಲ್ಲ. ಪಂಡಿತರ ಪಾಲಿಗೆ ಜ್ಞಾನವೇ ಮುಖ್ಯವೆಂದಾಯಿತು, ಜ್ಞಾನವೆಂದರೆ ಶಾಸ್ತ್ರಜ್ಞಾನವೇ ಎಂಬ ಸಂಕುಚಿತಾರ್ಥವೂ ಉಳಿದುಕೊಂಡಿತು. ಈ ಬಗೆಯ ಜ್ಞಾನಕ್ಕೆ ಅಧಿಕಾರವನ್ನು ಹೇಳುವಾಗ ಜಾತಿ, ಮತ, ಕುಲ, ಮನೆತನ, ಆಚಾರ, ಆಡಂಬರಗಳೆಲ್ಲ ಸೇರಿಕೊಂಡು ಬಂದುವು.

ಹರಿದಾಸರು ಹೀಗೆ ಜ್ಞಾನಾಧಿಕಾರಿಗಳೆಂದು ಪಂಡಿತರು ಒಪ್ಪಲು ಸಿದ್ಧರಾಗಿರಲಿಲ್ಲ. ಹರಿದಾಸರಾದರೋ ಭಾವುಕರು, ಪಾಂಕ್ತವಾದ ಶಾಸ್ತ್ರಜ್ಞಾನವಿರದಿದ್ದರೂ ಅಪರೋಕ್ಷಜ್ಞಾನದ ಸ್ವಭಾವವನ್ನು ಅರಿತುಕೊಂಡಿದ್ದರು. ತಾರಕವಾದ ಜ್ಞಾನವನ್ನು ಪಡೆದುಕೊಳ್ಳಲು ಸುದೀರ್ಘವಾದ ಅಧ್ಯಯನವೇ ದಾರಿಯೆಂದು ಅವರು ಬಗೆಯಲಿಲ್ಲ; ಅನುಗ್ರಹವೆಂಬ ಪ್ರಕಾರದಲ್ಲಿ ಅವರ ಶ್ರದ್ಧೆ ಹೆಚ್ಚಿನದು. ಅನುಗ್ರಹವಾದರೆ ಕೋಣವೂ ವೇದವನ್ನು ವದರೀತು; ಅನುಗ್ರಹವಿಲ್ಲದಿದ್ದರೆ 'ಪಂಡಿತರೆಲ್ಲ ಗಂಡನ ಕಾಣದೆ ಮುಂಡೇರಾದರು'. ಈ ಎರಡು ವಿಭಿನ್ನ ಮನೋವೃತ್ತಿಗಳು ಹಿಂದಿನ ಕಾಲದಲ್ಲೂ ಇದ್ದುವು; ಇಂದಿಗೂ ಮರೆಯಾಗಿಲ್ಲ. ಈ ಎರಡನ್ನು ಸ್ಥೂಲವಾಗಿ ಬೇರ್ಪಡಿಸಿ ನಿರ್ದೇಶಿಸಲು 'ವ್ಯಾಸಕೂಟ', 'ದಾಸಕೂಟ'ಗಳೆಂಬ ಮಾತುಗಳನ್ನು ಹೊಸೆದರು ಅಷ್ಟೆ.

ವ್ಯಾಸತೀರ್ಥರು ಪಂಡಿತರೂ ಹೌದು, ಹರಿದಾಸರೂ ಹೌದು. ಪಂಡಿತರಾಗಿ ವಾದಗ್ರಂಥಗಳನ್ನು ರಚಿಸಿ, ದೇಶಸಂಚಾರಮಾಡಿ ವಾದಗಳನ್ನು ನಡೆಸಿ ಯಶಸ್ಸು ಗಳಿಸಿದನಂತರ ಅವರಿಗೆ ಹರಿದಾಸ್ಯದ ಸ್ವಾರಸ್ಯ ಮನವರಿಕೆಯಾಗಿ ಅದನ್ನೇ ತಾವು ಹಿಡಿದುದು ಮಾತ್ರವಲ್ಲ, ಅದರ ಪ್ರಚಾರವನ್ನೂ ಕೈಗೊಂಡರು. ವೇದವ್ಯಾಸರ ಬ್ರಹ್ಮಸೂತ್ರದಂಥ ನಿರ್ಣಾಯಕಗ್ರಂಥವನ್ನು ಪಂಡಿತರು ಕೂಡ ಮಡಿಯಲ್ಲೇ ಅಧ್ಯಯನ ಮಾಡಬೇಕೆಂಬ ಹಟವಿದ್ದಾಗ, ಬ್ರಾಹ್ಮಣರೇ ಆಗಲಿ ಅಧಿಕಾರ ವಿರದಿದ್ದರೆ ಅದರ ಹತ್ತಿರವೂ ಸುಳಿಯಬಾರದೆಂಬ ಆಗ್ರಹವಿದ್ದಾಗ, ವ್ಯಾಸತೀರ್ಥರು ಬ್ರಹ್ಮಸೂತ್ರದ ಅರ್ಥವನ್ನು ಎಲ್ಲರಿಗೂ ದೊರಕುವಂತೆ ತಿಳಿಗನ್ನಡದಲ್ಲಿ ತಿಳಿಯಹೇಳಹೊರಟದ್ದು ಅವರ ಸಾಹಸಕ್ಕೊಂದು ಸಾಕ್ಷಿ. ಬ್ರಹ್ಮಸೂತ್ರದ ಮೊದಲನೆಯ ಸೂತ್ರವನ್ನು ಅವರು 'ಜಿಜ್ಞಾಸುವಿಗೆ ಜ್ಞಾನ ಕಾರಣ। ಜ್ಞಾನಿಗೆ ಅಪರೋಕ್ಷ ಕಾರಣ। ಅಪರೋಕ್ಷಿಗೆ ಅಧಿಕಾನಂದ ಕಾರಣ। ಮುಕ್ತಗೆ ತಾನೇ ಫಲರೂಪ। ಸಿರಿಕೃಷ್ಣನ ಪಾದಸೇವೆ। ಇದರ ತೂಕಕ್ಕೆ ಸಾಕೆ ಕೈವಲ್ಯ।।' ಎಂದು ವಿವರಿಸಿದಾಗ ಹರಿದಾಸ್ಯದ ಹೆಚ್ಚಳವನ್ನೇ ಪ್ರತಿಪಾದಿಸಿದರು.

ಪಂಡಿತರಲ್ಲಿ ಬೂಟಕತನವಿದ್ದಂತೆ ಹರಿದಾಸರಲ್ಲೂ ಇದ್ದಿತು. ಅವರಲ್ಲಿ ಜ್ಞಾನದ

ಆಡಂಬರವಿದ್ದರೆ, ಇವರಲ್ಲಿ ಭಕ್ತಿಯ ಸೋಗು. ಪಂಡಿತರಾದರೆ ಮಠದ ಕಟ್ಟುಪಾಡಾದರೂ ಉಂಟು, ಹರಿದಾಸರಿಗೆ ಅದೂ ಇಲ್ಲವಲ್ಲ! ಹೊಟ್ಟೆ ಹೊರೆದುಕೊಳ್ಳಲು, ಜನರ ಆದರವನ್ನು ಸೂರೆಗೊಳ್ಳಲು ವಂಚಕರಾದ ಹರಿದಾಸರು ಹೆಚ್ಚಿದುದು ಸಹಜವೇ. ವ್ಯಾಸತೀರ್ಥರ ಗಮನಕ್ಕೇನು ಇದು ಬಾರದೆ ಹೋಗಲಿಲ್ಲ. ಈಗಾಗಲೆ ಮೊದಲಲ್ಲೇ ಉಲ್ಲೇಖಿಸಿದ 'ದಾಸರೆಂದರೆ ಪುರಂದರದಾಸರಯ್ಯ' ಎಂಬ ಕೀರ್ತನೆಯಲ್ಲಿ ಅವರು ಹರಿದಾಸರ ವಂಚಕತನವನ್ನು ಎತ್ತಿ ಆಡಿದ್ದಾರೆ-

ದಾಸರೆಂದರೆ ಪುರಂದರದಾಸರಯ್ಯ
ವಾಸುದೇವ ಕೃಷ್ಣನ್ನ ಸೂಸಿ ಪೂಜಿಸುವ ಪ

ಗ್ರಾಸಕಿಲ್ಲದೆ ಪೋಗಿ ಪರರ ಮನೆಗಳ ಪೊಕ್ಕು
ದಾಸನೆಂದು ತುಳಸೀ ಮಾಲೆಗಳ ಧರಸಿ
ಬೇಸರಿಲ್ಲದೆ ಅವರ ಬೇಡಿ ಬಳಲಿಸುತ್ತ
ಕಾಸು ಗಳಿಸುವ ಪುರುಷ ಹರಿದಾಸನೇ ೧

ಪಾತಕನ ತೆರನಂತೆ ಪದಗಳನೇ ತಾ ಪಾಡಿ
ಕೂಟಜನರ ಮನಸು ತೋಷಬಡಿಸಿ
ಗೂಟನಾಮವನಿಟ್ಟು ಕೋವಿದನು ತಾನೆನುತ
ಬೂಟಿಕೆಯ ಮಾಡಲವ ಹರಿದಾಸನೇ ೨

ಡಂಭದಿಂ ಹರಿಸ್ಮರಣೆ ಮಾಡಿ ಜನರ ಮುಂದೆ
ಸಂಭ್ರಮದಿ ತಾನುಂಬ ಊಟ ಬಯಸೀ
ಅಂಬುಜೋದ್ಭವ ಪಿತನ ಆಗಮಗಳರಿಯದೆ
ತಂಬೂರಿ ಮೀಟಿದವ ಹರಿದಾಸನೇ ೩

ಯಾಯವಾರವ ಮಾಡಿ ವಿಪ್ರರಿಗೆ ಮೃಷ್ಟಾನ್ನ
ಪ್ರೀಯದಲಿ ತಾನೊಂದು ಕೊಡದ ಲೋಭಿ
ಮಾಯಾಸಂಸಾರದಲಿ ಮಮತೆ ಹೆಚ್ಚಾಗಿಟ್ಟು
ಗಾಯನವ ಮಾಡಲವ ಹರಿದಾಸನೇ ೪

ನೀತಿಯೆಲ್ಲವನರಿತು ನಿಗಮವೇದ್ಯನ ನಿತ್ಯ
ಮಾತುಮಾತಿಗೆ ಬಿಡದೆ ವರ್ಣಿಸುತಲಿ
ಗೀತನರ್ತನದಿ ಶ್ರೀಕೃಷ್ಣನ್ನ ಪೂಜಿಸುವ
ಪೂತಾತ್ಮದಾಸ ಪುರಂದರದಾಸರಯ್ಯ ೫

ವ್ಯಾಸರಾಯರ ಶಿಷ್ಯವರ್ಗದಲ್ಲಿ ಪುರಂದರದಾಸರು, ಕನಕದಾಸರು, ವೈಕುಂಠದಾಸರು ಮೊದಲಾದ ಹರಿದಾಸರೂ ಇದ್ದರು; ವಿಜಯೀಂದ್ರತೀರ್ಥರು, ವಾದಿರಾಜರು, ಗೋವಿಂದ ಒಡೆಯರು, ನಾರಾಯಣಯತಿಗಳು ಮೊದಲಾದ ಪಂಡತರೂ ಇದ್ದರು. ಮೊದಲ ಗುಂಪಿನವರು

ಹರಿದಾಸರಲ್ಲಿ ಉತ್ತಮರಾಗಿದ್ದಂತೆ ಎರಡನೆಯ ಗುಂಪಿನವರು ಪಂಡಿತರಲ್ಲಿ ಉತ್ತಮರು; ಅವರನ್ನು 'ದಾಸಕೂಟಾಗ್ರ ಗಣ್ಯ'ರೆನ್ನಬಹುದಾದರೆ ಇವರು 'ವ್ಯಾಸಕೂಟಾಗ್ರಗಣ್ಯ'ರು. ಹರಿದಾಸರೆಂದ ಮಾತ್ರಕ್ಕೆ ಅವರು ಪಂಡಿತರಲ್ಲವೆಂದಲ್ಲ; ಪಂಡಿತರೆಂದಮಾತ್ರಕ್ಕೆ ಹರಿದಾಸರಲ್ಲವೆಂದಲ್ಲ. ಜ್ಞಾನವು ಮುಕ್ತಿಗೆ ಕಾರಣವೆಂದು ಹರಿದಾಸರೂ ಬಲ್ಲರು; ಭಕ್ತಿಯೇ ಉತ್ತಮ ಸಾಧನವೆಂದು ಪಂಡಿತರೂ ಬಲ್ಲರು. ಹರಿಸರ್ವೋತ್ತಮ, ವಾಯು ಜೀವೋತ್ತಮ, ಪಂಚಭೇದ, ತಾರತಮ್ಯ ಮೊದಲಾದ ವೇದಾಂತ ಪ್ರಮೇಯಗಳೆಲ್ಲ ಎರಡೂ ಗುಂಪಿನವರಿಗೆ ಸಮಾನವಾಗಿಯೇ ಮಾನ್ಯ.

ಶ್ರುತಿಸ್ಮೃತೀತಿಹಾಸಪುರಾಣಗಳನ್ನು ಎರಡೂ ಗುಂಪಿನವರು ನಂಬುವರು; ಆದರೆ ಹರಿದಾಸರಿಗೆ ಪುರಾಣ ಪ್ರಸಕ್ತಿ ಹೆಚ್ಚು. ದಾಸರು ಪುರಾಣಗಳ ಪರಿಚಯದಿಂದಲೇ ತಮ್ಮ ತಾತ್ವಿಕವಾದ ನಿಲುವನ್ನು ಪಡೆದುಕೊಂಡರು. ಪಂಡಿತರಂತೆ ಮಾಧ್ವಸಿದ್ಧಾಂತದ ಪ್ರಮೇಯಗ್ರಂಥಗಳನ್ನೆಲ್ಲ ವ್ಯಾಕರಣ-ತರ್ಕಗಳ ನೆರವಿನಿಂದ ಅಧ್ಯಯನಮಾಡಿ, ಶ್ರುತಿ-ಸ್ಮೃತಿಗಳಿಗೆ ಸಮ್ಮತವಾಗುವಂತೆ ಶಾಸ್ತ್ರದ ಶೈಲಿಯಲ್ಲಿಯೇ ಕೇವಲ ಸಂಸತದಲ್ಲಿ ಅಥವಾ ಸಂಸತಭೂಯಿಷ್ಠವಾದ ದೇಶಭಾಷೆಯಲ್ಲಿ, ಪ್ರವಚನ ಮಾಡಬಲ್ಲ ಪಂಡಿತರು 'ವ್ಯಾಸಕೂಟ'ದವರೆನಿಸಿಕೊಂಡರು. ಸಾಮಾನ್ಯ ಜನರಾಗಲಿ, ಅನಧಿಕಾರಿ ವರ್ಗದವರಾಗಲಿ, ಪೂರ್ವಸಿದ್ಧತೆಯಿಲ್ಲದವರಾಗಲಿ ಇವರಿಂದ ದೂರವೇ. ಆದರೆ ಸಿದ್ಧಾಂತದ ಪ್ರಮುಖ ಪ್ರಮೇಯಗಳನ್ನು ಸ್ಥೂಲವಾಗಿ ಗುರುಮುಖದಿಂದಲೋ ಗ್ರಂಥಾವಲೋಕನದಿಂದಲೋ ಪಡೆದುಕೊಂಡಿದ್ದರೂ ಮುಖ್ಯವಾಗಿ ಪುರಾಣಗಳನ್ನೇ ಅವಲಂಬಿಸಿ ಜಾಣ್ಮೆಯಿಂದ ನಾಣ್ನುಡಿಗಳಿಂದ ಧರ್ಮದ, ಭಕ್ತಿಯ ಆಧಿಕ್ಯವನ್ನು ಜನಸಾಮಾನ್ಯರಿಗೆ ಅರ್ಥವಾಗುವ ಭಾಷೆಯಲ್ಲಿ ಶೈಲಿಯಲ್ಲಿ ತಿಳಿಯಹೇಳುವ ಹೊಣೆಯನ್ನು ಹರಿದಾಸರು ಹೊತ್ತುಕೊಂಡರು. ಹೀಗೆ ಅವರು ಸಿದ್ಧಾಂತದ ನಿಲುವನ್ನು 'ಸೀಮೆಯೊಳು ಪ್ರಾಕೃತಗೀತೆಯಲಿ' ಬಯಲು ಮಾಡುವರೆಂದು ಪಂಡಿತರ ಮುನಿಸು. ಹರಿದಾಸರ ಕನ್ನಡಾಭಿಮಾನವನ್ನು ನಾವು ಗಮನಿಸಬೇಕು. ಪಂಡಿತರು ಸಂಸತದಲ್ಲಿ ಸಿದ್ಧಾಂತವನ್ನು ವಿವರಿಸಲು ಉದ್ಗ್ರಂಥಗಳನ್ನು ಬರೆದರು. ವ್ಯಾಸತೀರ್ಥರೇ ನ್ಯಾಯಾಮೃತ, ತರ್ಕತಾಂಡವ, ತಾತ್ಪರ್ಯಚಂದ್ರಿಕಾ, ಮಂದಾರಮಂಜರೀ, ಭೇದೋಜ್ಜೀವನ ಮೊದಲಾದ ಗ್ರಂಥಗಳನ್ನು ಬರೆದರು; ಅವನ್ನು ಓದಿ ಅರ್ಥಮಾಡಿಕೊಳ್ಳಲು ಪಂಡಿತರೇ ಹೆಣಗಾಡಬೇಕು; ಭಾಷೆಯಾಗಲಿ ವಸ್ತುವಾಗಲಿ ಕಬ್ಬಿಣದ ಕಡಲೆಯೇ. ಆದರೆ ಪುರಂದರದಾಸರ ಸಾಹಿತ್ಯ ಅದೇ ವಿಷಯವನ್ನು ಕುರಿತದ್ದಾದರೂ ಪಂಡಿತಪಾಮರಗ್ರಾಹ್ಯ; ವಿಜಯದಾಸರ ಮಾತಿನಲ್ಲಿ 'ಮುನಿಮಧ್ವಹೃದಯವೇ ಪ್ರಾಕೃತಗ್ರಂಥವಿದು'.

ಮೇಲಾಗಿ, ಹರಿದಾಸಪಂಥದಲ್ಲಿ ದೀಕ್ಷೆ ತಳೆದವರಿಗೆಲ್ಲ ಅನ್ವಯವಾಗುವ ಕೆಲವು ನಿರ್ದಿಷ್ಟ ವಿಧಿ ನಿಷೇಧಗಳುಂಟು. ಸಾಮಾನ್ಯವಾದ ಆಚಾರ, ವರ್ಣಾಶ್ರಮಧರ್ಮ. ನಿತ್ಯ ನೈಮಿತ್ತಿಕ ಕ್ರಿಯೆಗಳು ಇವೆಲ್ಲ ಉಳಿದ ವೈದಿಕರೊಂದಿಗೆ ಸಮನೇ ಆದರೂ ಸ್ಪಷ್ಟವಾದ ಈ ಕೆಲವು ಕಟ್ಟುಪಾಡುಗಳು ಅವರನ್ನು ಬೇರ್ಪಡಿಸುವಂಥವು-

'ಶ್ರುತಿ, ಸ್ಮೃತಿ, ಇತಿಹಾಸ, ಪುರಾಣಗಳನ್ನು ನಂಬುವೆನು'
'ಸಾಲ ಮಾಡೆನು; ಸಾಲದೆನೆನು; ನಾಳೆಗಿಡೆನು'
'ಹರಿದಿನ-ವ್ರತಾಚರಣೆ ಬಿಡೆನು'

'ಗುರುನಿಂದೆ, ಹರಿನಿಂದೆ ಆಲಿಸಿದೊಡೆ ಆತ್ಮಶುದ್ಧಿಯ ಮಾಡಿಕೊಳುವೆನು'
'ಹರಿಸೇವೆಗೆಂದು ಈ ಬದುಕನ್ನು ಮೀಸಲಿಡುವೆನು'

ಇದಲ್ಲದೆ, ಹರಿದಾಸರ ವೇಷ-ಭೂಷಣ (ಕಾಲಲ್ಲಿ ಗೆಜ್ಜೆ, ಕೊರಳಲ್ಲಿ ತುಳಸಿ ಮಾಲೆ, ಹಣೆಯ ಮೇಲೆ ಚಂದನದ ನಾಮ, ಮೈಮೇಲೆ ಮುದ್ರಾಂಕನ), ಅವರು ಒಯ್ಯುವ ವಾದ್ಯ ಮತ್ತಿತರ ಸಾಮಗ್ರಿ (ದಂಡಿಗೆಬೆತ್ತ, ಗೋಪಾಳ ಬುಟ್ಟಿ, ಚಿಟಿಗೆ), ಅವರ ಯಾಯವಾರ ವೃತ್ತಿ (ಮಧುಕರ ವೃತ್ತಿ, ಊರಿನ ಕೇರಿಗಳಲ್ಲಿ ತಿರುಗುತ್ತ ಮನೆ ಮನೆಯಿಂದ ಭಿಕ್ಷೆ ಬೇಡಿ ತರುವುದು), ಅವರ ಗಾಯನ, ನರ್ತನ ಮೊದಲಾದುವು ದಾಸಕೂಟದ ನಿರ್ದೇಶನಕ್ಕೆ ನೆರವಾದುವು. ವ್ಯಾಸಕೂಟದ ಪಂಡಿತರಂತಲ್ಲದೆ ಹರಿದಾಸರು ಒಂದೆಡೆ ನೆಲೆಸದೆ ತೀರ್ಥಕ್ಷೇತ್ರಗಳ ಸಂದರ್ಶನಕ್ಕೆಂದು ಊರೂರು ತಿರುಗುತ್ತಿದ್ದರು. ವಾದಿರಾಜರ ಸುಳಾದಿಯೊಂದು ಹರಿದಾಸರ ಈ ದೀಕ್ಷೆಯನ್ನು ಎತ್ತಿ ಹೇಳುತ್ತದೆ-

ಗಾತ್ರವ ಬಳಲಿಸಿ ಶ್ರೋತ್ರದಿ ಕೇಳುತ
ಯಾತ್ರೆಯ ಮಾಡು ವೇಂಕಟಪತಿ ಮೂರ್ತಿಯ
ನೇತ್ರದಿ ನೋಡು ಕಾಮಿತಾರ್ಥವ ಕೊಡುವ ಸ
ದ್ಭಕ್ತರ ಕಂಡು ಸರ್ವೋತ್ತಮನ ನಂಬು

ಯಾತ್ರೆಯೆಂದರೆ ಭಗವಂತನ ಅರ್ಚಾವತಾರಗಳನ್ನು ಕಣ್ಣಾರೆ ಕಂಡು, ಅಲ್ಲಲ್ಲಿನ ಲೀಲೆಗಳನ್ನು ಕೇಳಿ, ಅಲ್ಲಿ ನೆರೆದಿರುವ ಭಕ್ತರನ್ನು ಸೇರಿ, ಭಗವಂತನ ಮಹಿಮೆಯನ್ನು ದೃಢಪಡಿಸಿಕೊಳ್ಳುವುದು ಎಂದು ದಾಸಕೂಟದವರ ನಂಬಿಕೆ.

೮

ಇನ್ನು ಹರಿದಾಸ ಸಾಹಿತ್ಯವನ್ನು ಕುರಿತಂತೆ ಇಲ್ಲಿ ಮಾಡಬೇಕಾಗಿರುವುದು ಪುರಂದರದಾಸರ ಸಾಹಿತ್ಯದ ಗಾತ್ರ, ಸ್ವರೂಪಗಳ ವಿಚಾರ. ಪುರಂದರದಾಸರು ಹರಿದಾಸವೃತ್ತಿಯನ್ನವಲಂಬಿಸಿದ ಮೇಲೆ ತಮ್ಮ ಎಂಬತ್ತೈದನೆಯ ವಯಸ್ಸಿನಲ್ಲಿ ತೀರಿಕೊಳ್ಳುವವರೆಗೂ ಕನ್ನಡದಲ್ಲಿ ಎಡೆಬಿಡದೆ ಹಾಡುಗಳನ್ನು ತಾವೇ ರಚಿಸಿ ಹಾಡಿದರು. ಈ ಹಾಡುಗಳನ್ನು ದೇವರನಾಮಗಳೆಂದೂ ಪದಗಳೆಂದೂ ಕರೆಯುವ ವಾಡಿಕೆಯಿದೆ. ಒಟ್ಟು ಅವರ ಕೃತಿಗಳು ಒಂದು ಲಕ್ಷ ಎಪ್ಪತ್ತೈದು ಸಾವಿರವೆಂದು ನಂಬಿಕೆ; ಒಂದು ಲಕ್ಷ ಇಪ್ಪತ್ತೈದು ಸಾವಿರವೆಂದು ಇನ್ನೊಂದು ಪಾಠ. ನಿಖರವಾದ ಸಂಖ್ಯೆ ಏನಾದರಿರಲಿ, ಇಷ್ಟು ದೊಡ್ಡ ಪ್ರಮಾಣದಲ್ಲಿ ಕೃತಿರಚನೆ ಮಾಡುವುದು ಎಂಥ ಪ್ರತಿಭಾಶಾಲಿ ಗಾದರೂ ಸಾಧ್ಯವೇ ಎಂದು ವಿಮರ್ಶಕರು ತರ್ಕಮಾಡುವುದು ಸರಿಯೇ. ಮೇಲೆ ಕಾಣಿಸಿದ ನಂಬಿಕೆಗೆ ಆಧಾರ ಪುರಂದರದಾಸರದ್ದೇ ಎಂದು ಕಾಣಿಸುವ ಒಂದು ಪದದಲ್ಲಿ ಬಂದಿರುವ ಪ್ರಸ್ತಾಪ; ಅದನ್ನು ಸಮರ್ಥಿಸುವಂತೆ ವಿಜಯದಾಸರ ಒಂದು ಹೇಳಿಕೆ.

ಪುರಂದರದಾಸರು 'ವಾಸುದೇವನ ನಾಮಾವಳಿಯ ಕ್ಲುಪ್ತಿಯನು, ವ್ಯಾಸರಾಯರ ದಯದಿಂದ ಬಿನ್ನೈಸುವೆನು' ಎಂದು ಆರಂಭಮಾಡಿ,

ನಾಲ್ಕು ಲಕ್ಷಯಿ(ಯೆ)ಪ್ಪತ್ತೈದು ಸಾವಿರ ಕೃತಿಯು
ಕಂತುಜನಕನ ನಾಮ ಘನಮಹಿಮೆ
ಸಂತಸದಿ ಶ್ರುತಿಸ್ಮೃತಿ ಸಮ್ಮತದಿಂದ
ಪುರಂದರವಿಟ್ಠಲ ವ್ಯಾಸಮುನಿಗಳು ಪೇಳಿಸಿದರು

ಎಂದಿದ್ದಾರೆ. ವಿಜಯದಾಸರ ಸುಳಾದಿಯೊಂದರಲ್ಲಿ

ಸೃಷ್ಟಿಯೊಳಗೆ ಎಲ್ಲ ಗಣಿತ ಮಾಡಲಾಗಿ
ಮೆಟ್ಟಿಗೆ ತ್ರಿಪಾದ ಕಡಮೆ ಐದು ಲಕ್ಷ
ಇಷ್ಟಾದವು ದಾಸರು ಪೇಳಿದ ಪದ
ಇಷ್ಟ ದೈವನಾಮ ವಿಜಯವಿಠಲ ಹರಿಯ
ಗುಟ್ಟಿನಿಂದಲಿ ಸಲಿಸಿ ಕುಣಿಕುಣಿಸುತಲಿ

ಎಂಬ ಒಕ್ಕಣೆಯಿದೆ. 'ಐದು ಲಕ್ಷಕ್ಕೆ ತ್ರಿಪಾದ ಕಡಮೆ'ಯೆಂದರೆ ನಾಲ್ಕು ಲಕ್ಷ ಇಪ್ಪತ್ತೈದು ಸಾವಿರವಾಯಿತು. ಇಂದಿರೇಶಕವಿ ಸಂಸ್ಕೃತದಲ್ಲಿ ರಚಿಸಿರುವ 'ದಾಸಾರ್ಯಸ್ತುತಿ'ಯಲ್ಲಿ

'ಪಾದೋಜ್ಝಿತೇಷು ಸಮಸಂಖ್ಯಕಲಕ್ಷ ಲಕ್ಷ್ಮೀ
ನಾಥಾಮೃತೋತ್ತಮ ವಿಭೂತಿಕಥಾಪದಾನಿ

ಎಂದು 'ಒಂದು ಪಾದ ಕಡಮೆ' ಎಂದಿದೆ; ಎಂದರೆ ನಾಲ್ಕು ಲಕ್ಷ ಎಪ್ಪತ್ತೈದು ಸಾವಿರವಾಯಿತು. ಇದೇ ಅರ್ಥ ಬರುವಂತೆ ವಿಜಯದಾಸರದ್ದೇ ಆದ ಇನ್ನೊಂದು ಹೇಳಿಕೆಯಿದೆ.

ಲಕ್ಷ್ಮೀಪತಿಯ ಪಾದದಲ್ಲಿ ಲಕ್ಷ್ಯವಿಟ್ಟು, ವ್ಯಾಸರಾಯ
ಶಿಕ್ಷೆಯಿಂದಲಿ ಅಂಕಿತ ಕೊಳ್ಳುತ, ಪದಕೊರತೆ ಐದು
ಲಕ್ಷ ಪದ-ಸುಳಾದಿ ಪೇಳ್ದಾತ

ದಾಸಕೂಟದವರೂ ಪುರಂದರದಾಸರು ಒಟ್ಟು ಐದು ಲಕ್ಷ ಕೃತಿಗಳನ್ನು ರಚಿಸಬೇಕೆಂದು ಸಂಕಲ್ಪಿಸಿದ್ದರೆಂದೂ, ತಮ್ಮ ಸಾವಿಗೆ ಮುಂಚೆ ನಾಲ್ಕು ಲಕ್ಷ ಎಪ್ಪತ್ತೈದು ಸಾವಿರದಷ್ಟು ಮಾತ್ರ ರಚಿಸಲು ಸಾಧ್ಯವಾಯಿತೆಂದೂ, ಇನ್ನುಳಿದ ಇಪ್ಪತ್ತೈದು ಸಾವಿರ ('ಪಾದ') ಕೃತಿಗಳನ್ನು ವಿಜಯದಾಸರು ರಚಿಸಿ ಐದು ಲಕ್ಷವನ್ನು ಪೂರಯಿಸಿದರೆಂದೂ ನಂಬುತ್ತಾರೆ.

ಮೇಲೆ ಕಾಣಿಸಿದ ಪುರಂದರದಾಸರ ಪದದಲ್ಲಿ ತಮ್ಮ ಕೃತಿಗಳ ವಸ್ತು ವಿವರಗಳನ್ನು ಹೀಗೆ ವಿಂಗಡಿಸಿರುವುದಿದೆ. ಈ ಪಟ್ಟಿ ಮೊದಲೇ ಬಂದಿತಾದರೂ, ಮತ್ತೊಮ್ಮೆ ನೆನಪಿಸಿಕೊಳ್ಳಬಹುದು.

೧. ತೀರ್ಥಕ್ಷೇತ್ರ ಮಹಿಮೆ
(ಕೇದಾರದಿಂದ ರಾಮೇಶ್ವರದವರೆಗೆ) ೧,೨೫,೦೦ ಕೃತಿಗಳು

೨. ಮಧ್ವರಾಯರಿಂದ ವ್ಯಾಸರಾಯರವರೆಗೆ ಗುರು

ಸ್ತವನ, ತಂತ್ರಸಾರೋಕ್ತ ದೇವತಾ ತಾರತಮ್ಯ,
ಶಾಸ್ತ್ರ ಪ್ರಮೇಯಗಳು   ೫,೦೦೦ ಕೃತಿಗಳು

೩. ದೇವತಾಲೋಕ ವರ್ಣನೆಗಳು
(ಬ್ರಹ್ಮಲೋಕ, ಕೈಲಾಸ, ದಿಕ್ಪಾಲಕರು)   ೯೦,೦೦೦ ಕೃತಿಗಳು

೪. ಪುರಾಣಕಥೆಗಳು (ಭಗವದ್ಭಕ್ತರ ಕಥಾಸಾರ)   ೯೦,೦೦೦ ಕೃತಿಗಳು

೫. ದೇವತಾಮೂರ್ತಿಧ್ಯಾನ ಇತ್ಯಾದಿ
(ಕೀರ್ತಿ, ಶಾಲಗ್ರಾಮ ಲಕ್ಷಣ)   ೬೦,೦೦೦ ಕೃತಿಗಳು

೬. ಆಹ್ನಿಕ ಪದ್ಧತಿ, ಏಕಾದಶೀ ನಿರ್ಣಯ ಇತ್ಯಾದಿ   ೧೬,೦೦೦ ಕೃತಿಗಳು

೭. ಸುಳಾದಿಗಳು   ೧೪,೦೦೦ ಕೃತಿಗಳು

೮. ದೇವರನಾಮಗಳು   ೨೫,೦೦೦ ಕೃತಿಗಳು

ಒಟ್ಟು ೪,೨೫,೦೦೦

ಈ ಮೊತ್ತವನ್ನು ನಾಲ್ಕು ಲಕ್ಷ ಎಪ್ಪತ್ತೈದು ಸಾವಿರಕ್ಕೆ ಹಿಗ್ಗಿಸಲು ಕೆಲವರು ದೇವತಾ ಮೂರ್ತಿಧ್ಯಾನ ಇತ್ಯಾದಿ ೬೪,೦೦೦, ಆಹ್ನಿಕ ಪದ್ಧತಿ, ಏಕಾದಶೀ ನಿರ್ಣಯ ಇತ್ಯಾದಿ ೬೦,೦೦೦, ಸುಳಾದಿಗಳು ೬೦,೦೦೦, ಹೀಗೆ ಪಾಠಾಂತರಗಳನ್ನು ಸೂಚಿಸಿ, ಇವಲ್ಲದೆ ಶ್ವೇತದ್ವೀಪ, ಅನಂತಾಸನ, ವೈಕುಂಠ ಮಹಿಮೆ, ಶೇಷನ ಚರಿತ್ರೆ ೧೬,೦೦೦ ಎಂಬ ಇನ್ನೊಂದು ಪ್ರಕಾರವನ್ನೂ ಸೇರಿಸಿದ್ದಾರೆ. ಆದರೆ ವಿಜಯದಾಸರು ತಮ್ಮ ಉದಯರಾಗ ವಾರ್ಧಕ ಷಟ್ಪದಿಗೆ ಪರಿಶಿಷ್ಟವಾಗಿ ಕೊಟ್ಟಿರುವ ಪಟ್ಟಿಯೂ ೪,೨೫,೦೦೦ದ ಮೊತ್ತವನ್ನೇ ಹಿಡಿಯುತ್ತದೆ.

೧,೨೫,೦೦೦ ಪುಣ್ಯ ಕ್ಷೇತ್ರಾದಿಗಳ ಮಹಿಮೆ ಪದಗಳು; ಗುರು ಮಧ್ವರಾಯರ ಮಹಿಮೆ; ಯತಿಸಂತತಿ

೨೫,೦೦೦	ತಂತ್ರ ಸಾರೋಕ್ತ ಮೂರ್ತಿಧ್ಯಾನ ಕ್ರಮ, ದೇವತಾ ತಾರತಮ್ಯ, ಗುರುಧ್ಯಾನ, ಆ ಆ ಗುರುಗಳ ಚರಿತ್ರೆ
೬೪, ೦೦೦	ಸುಳಾದಿಗಳು
೩೬,೦೦೦	ವೃತ್ತನಾಮಗಳು
೬೦,೦೦೦	ಶ್ವೇತದ್ವೀಪ, ಅನಂತಾಸನ, ವೈಕುಂಠ, ಸತ್ಯಲೋಕ, ಕೈಲಾಸಾದಿ ದಿಕ್ಪಾಲರನಿಲವರ
೪೦,೦೦೦	ಕಲ್ಯಾಣ ಚರಿತೆ (ದಶಕಲ್ಯಾಣ ದಶಚರಿತ್ರೆ)
೭೫,೦೦೦	ಅಹನ್ನೇಕ (ನಿತ್ಯಾಹ್ನಿಕ), ಏಕಾದಶಿ, ಜನ್ಮಾಷ್ಟಮಿ ನಿರ್ಣಯ, ಗಂಡಕಶಿಲಾ

(ಶಾಲಗ್ರಾಮ) ಮಹಿಮೆ, ಉಗಾಭೋಗಾದಿ

೪,೨೫,೦೦೦ ಒಟ್ಟು ನಾಲ್ಕು ಲಕ್ಷದ ಯಿಪ್ಪತ್ತೈದುಸಾವಿರ

(ನೋಡಿ, 'ಶ್ರೀ ಪುರಂದರದಾಸರು ಮತ್ತು ಶ್ರೀ ಹರಿದಾಸರ ಪರಂಪರೆ', ವರದೇಂದ್ರ ಹರಿದಾಸ ಸಾಹಿತ್ಯ ಮಂಡಲಿ, ಲಿಂಗಸೂಗೂರು).

ಈಗ ನಮಗೆ ಪುರಂದರದಾಸರ ಹೆಸರಿನಲ್ಲಿ ದೊರಕುವ ಕೃತಿಗಳನ್ನೆಲ್ಲ ಕೂಡಿಸಿದರೆ ಒಂದೂವರೆ ಸಾವಿರವನ್ನೂ ಮುಟ್ಟುವುದಿಲ್ಲ. ಇನ್ನು ವಸ್ತು, ಶೈಲಿ, ಭಾಷೆ, ಅಂಕಿತ ಮೊದಲಾದ ವಿವರಗಳನ್ನು ಪರಿಶೀಲಿಸಿದರೆ ಅವರದ್ದೇ ಎನ್ನಬಹುದಾದ ಎಲ್ಲವನ್ನೂ ರಚಿಸಿದರೆನ್ನುವುದು ಉತ್ಪ್ರೇಕ್ಷೆಯೇ ಎಂಬುದು ಯಾರಿಗಾದರೂ ತಟ್ಟನೆ ಹೊಳೆಯುವ ವಿಚಾರ. ಅಂದಿನಿಂದ ಇಂದಿನವರೆಗೆ ಉಪಲಬ್ಧವಿರುವ ದಾಸಸಾಹಿತ್ಯವನ್ನೆಲ್ಲ ನೋಡಿದರೂ ಕೃತಿಗಳ ಮೊತ್ತ ಇಷ್ಟಾಗಲಾರದು. ವಿಮರ್ಶಕರ ಎಣಿಕೆಯಂತೆ, ಈ ವಿವರವಿರುವ ಪುರಂದರದಾಸರ ಪದ ಪ್ರಕ್ಷಿಪ್ತವಾದುದೆನ್ನಬಹುದು; ವಿಜಯದಾಸರು ತಮ್ಮ ಪ್ರಾಸಾದಿಕ ಗುರುಗಳ ಮೇಲಣ ಭಕ್ತಿಯ ಭರದಲ್ಲಿ ಅವರ ರಚನೆಗಳ ಸಂಖ್ಯೆಯನ್ನು ತೀರ ಹಿಗ್ಗಿಸಿದರೆನ್ನಬಹುದು. ಹಿಂದಿನವರಿಗೆ, ಅದರಲ್ಲೂ ಹರಿದಾಸರಿಗೆ, ಲಕ್ಷವೆನ್ನುವ ಪರಿಮಿತಿಯ ಅರಿವೇ ಇರಲಿಲ್ಲ ಎಂದು ಹೇಳಬಹುದು; ಹಳೆಯ ಕಾಲದವರು 'ತುಂಬ ಹೆಚ್ಚಿನ ಪ್ರಮಾಣ' ಎನ್ನುವುದಕ್ಕೆ ನೂರು, ಸಾವಿರ, ಲಕ್ಷ ಎಂದೆಲ್ಲ ಪದಗಳನ್ನು ಪರ್ಯಾಯವಾಗಿ ಬಳಸುತ್ತಿದ್ದುದುಂಟು.

ಆದರೆ ಸಂಪ್ರದಾಯದಲ್ಲಿ ಬಂದ ಒಂದು ವಿವರವನ್ನು ಹೀಗೆ ಒಟ್ಟಾರೆ ತಳ್ಳಿಹಾಕುವುದು ಅಷ್ಟೇನು ಉತ್ತಮವಾದ ಮನೋಧರ್ಮವಲ್ಲ. ಮೇಲೆ ಕಾಣಿಸಿರುವ ಪುರಂದರದಾಸರ ಪದವೇನೋ ಪ್ರಕ್ಷಿಪ್ತವಾದುದೇ ಇರಬಹುದು; ಆದರೆ ಅದು ಹೇಳುವ ವಿವರವನ್ನು ಅವರ ಅನುಯಾಯಿಗಳು ಅಂಗೀಕರಿಸಿದ್ದಾರಲ್ಲವೆ? ವಿಜಯದಾಸರ ಸುಳಾದಿಯನ್ನೂ ಹಾಗೆಯೇ ಪ್ರಕ್ಷೇಪವೆನ್ನಲು ಬರುತ್ತದೆಯೆ? ಅವರೂ ಅದೇ ವಿವರವನ್ನು ಸಮರ್ಥಿಸಿದ್ದಾರಲ್ಲವೆ? ಆದುದರಿಂದ ಅವರ ರಚನೆಗಳ ಗಾತ್ರವನ್ನು ನಾಲ್ಕು ಲಕ್ಷ ಚಿಲ್ಲರೆ ಎಂದು ನಿರ್ಧರಿಸಿದಾಗ, ಅದಕ್ಕೆ ಏನೋ ಒಂದು ಆಧಾರವಿರಬೇಕು; ಅದು ಆ ಕಾಲಕ್ಕೆ ಎಲ್ಲರಿಗೂ ತಿಳಿದಿದ್ದು ಈಗ ಅದು ಬಳಕೆಯಿಂದ ಜಾರಿರಬಹುದು. ಸಂಸ್ಕೃತದಲ್ಲಿ ಮೂವತ್ತೆರಡು ಅಕ್ಷರಗಳ ಸಮುದಾಯಕ್ಕೆ ಗ್ರಂಥವೆಂಬ ಹೆಸರಿದೆ; ಈಗ ಗ್ರಂಥವೆಂದರೆ ಬೇರೆಯ ಅರ್ಥವೇ ಇದೆಯಲ್ಲ?

ಮೇಲಾಗಿ, ಪುರಂದರದಾಸರ ಪದದಲ್ಲಿ ಅವರು ನಾಲ್ಕು ಲಕ್ಷಯಿ (ಯೆ) ಪ್ಪತ್ತೈದು ಸಾವಿರ "ಕೃತಿ"ಯನ್ನು ಹೇಳಿದುದಾಗಿ ಇದೆ. ಇಲ್ಲಿ, 'ಕೃತಿ' ಯೆಂದರೇನು ಎಂಬುದು ಸ್ಪಷ್ಟವಾಗುವುದಿಲ್ಲ. ವಿಜಯದಾಸರು "ಪದಕೊರತೆ ಐದುಲಕ್ಷ ಪದ-ಸುಳಾದಿಗಳ 'ಪೇಳ್ದ'"ರೆಂದು ಪ್ರಸ್ತಾಪಿಸಿದ್ದಾರೆ. ಇಲ್ಲಿ 'ಪದ'ವೆಂದರೇನು? 'ಸುಳಾದಿ'ಯೆಂದರೇನು? ಒಂದು ಹಾಡಿನಲ್ಲಿ ಹಲವಾರು 'ಪದ'ಗಳಿರುವ ಉಲ್ಲೇಖವಿದೆ; ಈಗ 'ಚರಣ' ವೆನ್ನುವ ಭಾಗಕ್ಕೆ 'ಪದ'ವೆನ್ನುವ ವಾಡಿಕೆಯಿದ್ದಿತು. ಈಗ ದೊರೆತಿರುವ ದೇವರನಾಮಗಳಲ್ಲಿ (ಅಥವಾ ಪದಗಳಲ್ಲಿ) ನಾಲ್ಕೈದು, ಕೆಲವು ವೇಳೆ ಇನ್ನೂ ಹೆಚ್ಚು, ನುಡಿಗಳಿರುತ್ತವೆ. ಈ ನುಡಿಗಳನ್ನೆಲ್ಲ ಬೇರೆ ಬೇರೆಯಾಗಿ ಪರಿಗಣಿಸುತ್ತಿದ್ದುದೂ ಉಂಟು. ಈಗ ನಮಗೆ ಪರಿಚಿತವಾಗಿರುವ ಸುಳಾದಿಗಳಲ್ಲಿ ಐದಕ್ಕೆ ಕಡಮೆಯಿಲ್ಲದೆ ಎಂಟಕ್ಕೆ ಹೆಚ್ಚಿಲ್ಲದೆ ಬೇರೆ ಬೇರೆ ತಾಳಗಳಲ್ಲಿ ಅಂಗಗಳಿವೆ;

ಈ ಒಂದೊಂದು ಭಾಗಕ್ಕೂ ಸುಳಾದಿಯೆಂದೇ ಹೆಸರು. ಒಂದು ಭಾಗವನ್ನು ಇಡೀ ಸುಳಾದಿಯಿಂದ ಬೇರ್ಪಡಿಸಿದಾಗ ಅದು ಉಗಾಭೋಗವೆನಿಸಿಕೊಳ್ಳುವುದೂ ಉಂಟು. ಇನ್ನು 'ವೃತ್ತನಾಮಾವಳಿ'ಯಲ್ಲಿ ಒಂದೊಂದು ವೃತ್ತವೂ ನಾಮವೂ ಸ್ವತಂತ್ರವಾದ ಭಾಗಗಳೇ. ಈ ಧೋರಣೆಯನ್ನು ಹಿಡಿದರೆ ನಾಲ್ಕೈದು ಲಕ್ಷವೆನ್ನುವುದು ಅಸಂಭಾವ್ಯವೆಂದೇನು ಎನಿಸುವುದಿಲ್ಲ. ಆ ಸಂಖ್ಯೆಯ ಸಂಜ್ಞೆಯೇನು ಎನ್ನುವುದು ತಿಳಿಯಬೇಕಷ್ಟೆ. ಅದು ಮಾತ್ರ ಸ್ಪಷ್ಟವಾಗಿಲ್ಲ!

ಈಗ ದೊರೆತಿರುವ ಪುರಂದರದಾಸರ 'ಕೃತಿ'ಗಳಲ್ಲಿ ಎಲ್ಲವೂ ಈ ಕಾಲದ 'ಕೃತಿ'ಯೆಂಬ ಲಕ್ಷಣಕ್ಕೆ ಒಪ್ಪುವಂತಿಲ್ಲ. ಅವರ ಒಂದೊಂದು 'ಕೃತಿ'ಯಲ್ಲೂ ಏಕಾರ್ಥವಿದೆ. ಒಂದೇ ಸಂದರ್ಭದ ಸ್ಫೂರ್ತಿಯಿದೆ, ಒಂದೇ ವಿಚಾರಧಾರೆಯಿದೆ ಎನ್ನಲಾಗದು; ಬೇರೆ ಬೇರೆ ನುಡಿಗಳಲ್ಲಿ ಬೇರೆ ಬೇರೆ ವಿಚಾರಗಳೂ ಧೋರಣೆಗಳೂ ಕಾಣಸಿಗುತ್ತವೆ. ಕೆಲವು 'ಕೃತಿ'ಗಳಲ್ಲಿ ನುಡಿಗಳು ಅಸಂಗತವಾಗಿರುವುದೂ ಉಂಟು. ಹಾಡಿನ ಮೊದಲಸಾಲನ್ನು ಹಿಡಿದು ಅಂಕಿತ ಬರುವ ನುಡಿಯವರೆಗೆ ಒಂದೇ 'ಕೃತಿ'ಯೆಂದು ಬಗೆದು, ಅದನ್ನು ಅಖಂಡವಾದ ಒಂದು 'ಕೃತಿ'ಯೆಂದು ಅಚ್ಚಿನಲ್ಲಿ ಕಾಣಿಸುವ, ಅದನ್ನೊಂದು ಸಂಖ್ಯೆಯಿಂದ ನಮೂದಿಸುವ ವಾಡಿಕೆ ಬಂದುದು ಈ ಗೊಂದಲಕ್ಕೆ ಕಾರಣವಾಗಿದೆ.

ಪುರಂದರದಾಸರೇನು ತಮ್ಮ ಕವಿತೆಗಳನ್ನೆಲ್ಲ ಕಾಗದದ ಮೇಲೆ ಅಚ್ಚುಕಟ್ಟಾಗಿ ಬರೆದಿಡಲಿಲ್ಲ; ಬರೆದಿಟ್ಟುಕೊಳ್ಳುವಂಥ ಶಿಷ್ಯರಾದರೂ ಅವರಿಗೆ ಇದ್ದರೋ ಅದೂ ನೆಚ್ಚಿಗೆಯಿಲ್ಲ. ಆದರೆ ಅವರ ಕವಿತೆಗಳು ಬಹುಮಟ್ಟಿಗೆ ಒಮ್ಮೆ ಕೇಳಿದರೆ ಮರೆಯಲಾರದಂಥ ಗುಣವನ್ನು ಹೊಂದಿರುವುದರಿಂದ ಜನರ ನೆನಪಿನಲ್ಲಿ ಪಡಿಯಚ್ಚಾಗಿ ಉಳಿದುಕೊಂಡು ಬಂದವು. ಮತ್ತೆ ರಾಜಗುರುಗಳಂತಿದ್ದ ವ್ಯಾಸತೀರ್ಥರೇ ದಾಸಕೂಟವೆಂಬ ವ್ಯವಸ್ಥೆಗೆ ಪ್ರೇರಕರಾಗಿದ್ದುದರಿಂದ, ಅವರು ಪುರಂದರದಾಸರನ್ನು ಮೆಚ್ಚಿಕೊಂಡಿದ್ದುದರಿಂದ, ದಾಸಕೂಟದವರು ಪುರಂದರದಾಸರ ಹಾಡುಗಳನ್ನೆಲ್ಲ ಸಂಗ್ರಹಿಸಿದ್ದರೆಂದರೆ ಆಶ್ಚರ್ಯವೇನಿಲ್ಲ. ದಾಸಕೂಟಕ್ಕೆ ಪುರಂದರದಾಸರೇ ಕೇಂದ್ರ ಸ್ಥಾನದಲ್ಲಿದ್ದವರು. ಹಾಗೆ ಇತರರು ಅವರ ರಚನೆಗಳನ್ನು ಸಂಗ್ರಹಿಸಿದಾಗ ಅದು ಬರವಣಿಗೆಯಲ್ಲೂ ಮೂಡಿಕೊಂಡಿರಬೇಕು. ಅದಕ್ಕಿಂತ ಹೆಚ್ಚಾಗಿ ಆ ಹಾಡುಗಳನ್ನು ದಾಸಕೂಟದಲ್ಲಿ ಮತ್ತೆ ಮತ್ತೆ ಹಾಡುತ್ತ ಬಂದಿರಬೇಕು. ಪುರಂದರದಾಸರ 'ಕೃತಿ'ಗಳ ಪ್ರಚಾರವಾದುದು ಹೀಗೆ ಎಂದು ತೋರುತ್ತದೆ.

ಪುರಂದರದಾಸರು ಕಾಲವಾದ ತರುಣದಲ್ಲೇ ಹಂಪಿ ಹಾಳಾಯಿತಷ್ಟೆ; ಆರು ತಿಂಗಳ ಕಾಲ ಅದನ್ನು ಶತ್ರುಗಳು ಕೊಳ್ಳೆ ಹೊಡೆದದ್ದು ಇತಿಹಾಸದ ಪುಟಗಳಲ್ಲೇ ಇದೆ. ಈ ಪರಿಸ್ಥಿತಿಯಲ್ಲಿ ದಾಸಕೂಟದವರ ಪಾಡೇನು? ಅವರು ಎಲ್ಲೆಲ್ಲಿ ಓಡಿಹೋದರೊ, ಅವರಲ್ಲಿ ಎಷ್ಟು ಮಂದಿ ಹರಿದಾಸ ದೀಕ್ಷೆಯನ್ನು ಉಳಿಸಿಕೊಂಡರೋ ಹೇಳುವುದು ಹೇಗೆ? ಪುರಂದರದಾಸರ 'ಕೃತಿ'ಗಳು ಹೀಗೆ ಬಳಕೆಯಿಂದ ಜಾರಿದ ಮೇಲೆ ನೂರಾರು ವರ್ಷಗಳ ನಂತರ ವಿಜಯದಾಸರು ಶ್ರಮವಹಿಸಿ ಅವನ್ನು ಸಂಗ್ರಹಿಸಿ ತಮ್ಮ ದಾಸಕೂಟದಲ್ಲಿ ಮತ್ತೆ ಬಳಕೆಗೆ ತಂದರು. ಪುರಂದರದಾಸರ 'ಕೃತಿ'ಗಳಲ್ಲಿ ಬಹುಭಾಗ ವಿಜಯದಾಸರ ಕಾಲದಲ್ಲಿ ಸಿದ್ಧವಾದ ಪಾಠವೇ. ಪುನಃ ಈ ದಾಸಕೂಟವೂ ದುರವಸ್ಥೆಗೀಡಾಗಿ ಮೂಲೆಗುಂಪಾದಾಗ ಈ ಪಾಠ ಹೇಗೆ ಉಳಿದುಕೊಂಡಿತೋ ಹೇಳಬಲ್ಲವರಾರು? ಪುರಂದರದಾಸರ ಹೆಸರಿನಲ್ಲಿರುವ ಕೃತಿಗಳೆಲ್ಲ ಅವರ ಕಾಲದಲ್ಲಿದ್ದಂತೆಯೇ ಉಳಿದುಕೊಂಡು

ಬಂದಿವೆಯೆಂದು ಯಾರೂ ಶಪಥಮಾಡಿ ಹೇಳಲಾರರು. ಬಹುಮಟ್ಟಿಗೆ ಮೌಖಿಕ ಪರಂಪರೆಯಿಂದಲೇ ಬಂದಿರುವ ಆ ಹಾಡುಗಳ ಪಾಠವಾಗಲಿ ಕ್ರಮವಾಗಲಿ ಯಥಾವತ್ತಾಗಿ ಉಳಿದುಕೊಂಡು ಬಂದಿರುವುದು ಸಾಧ್ಯವಿಲ್ಲ.

ಈಗ ದೊರೆಯುವಷ್ಟೆ 'ಕೃತಿ'ಗಳನ್ನು ಕೂಡ ಅವರೇ ರಚಿಸಿದರು ಎನ್ನುವುದಾಗಲಿ, ಈಗ ದೊರೆಯುವಂತೆಯೇ ಅವುಗಳು ಇದ್ದುವೆಂದಾಗಲಿ ಹೇಳಲಾರೆವು. ಈಗ ದೊರೆತಿರುವುದಕ್ಕಿಂತ ಹೆಚ್ಚಿನ ಕೃತಿಗಳು ಕಾಲಕ್ರಮದಲ್ಲಿ ನಷ್ಟವಾದುವು ಎನ್ನುವುದೇ ಹೆಚ್ಚಿನ ಸಂಭವ. ಈಗ ಉಳಿದಿರುವ ಕೃತಿಗಳನ್ನು ತಮ್ಮ ಮನೆತನದಲ್ಲಿ ಉಳಿಸಿಕೊಂಡು ಬಂದ ಹರಿದಾಸರು ಅವುಗಳ ಪಾಠ, ಗಾಯನಕ್ರಮ, ರಾಗ, ತಾಳ, ನುಡಿಗಳ ಆನುಪೂರ್ವಿ ಇವುಗಳ ಮೇಲೆ ಕೈಯಾಡಿಸಲಿಲ್ಲವೆಂದು ಹೇಳುವುದು ಹೇಗೆ? ಮೇಲಾಗಿ, ಹಲವರು ಹರಿದಾಸರು ತಾವೇ ವಾಗ್ಗೇಯಕಾರರಾಗಿ ಕೃತಿರಚನೆಯಲ್ಲಿ ತೊಡಗಿರುತ್ತಿದ್ದಾಗಿ, ತಮಗೆ ತೋರಿದಂತೆ ಪುರಂದರದಾಸರ ಕೃತಿಗಳನ್ನು ಮಾರ್ಪಡಿಸಿ ಹಾಡುತ್ತಿದ್ದರು; ತಮ್ಮ ಭಾವನೆಗಳನ್ನೂ ಅನಿಸಿಕೆಗಳನ್ನೂ 'ದಾಸರಾಯರ' ಪದಗಳಲ್ಲಿ ಮೂಡಿಸುತ್ತಿದ್ದರೆ ಆಶ್ಚರ್ಯವೇನಿಲ್ಲ. ಈಗ ಬಳಕೆಯಲ್ಲಿರುವ ಪುರಂದರದಾಸರ ರಚನೆಗಳನ್ನು ಪರಿಶೀಲಿಸಿದರೆ ಏಕಕರ್ತೃಕವೆನ್ನಬಹುದಾದ ಗುಣ ಕಾಣಿಸುವುದಿಲ್ಲ. ಒಕ್ಕಣೆ, ಧೋರಣೆ, ವಸ್ತು, ತತ್ತ್ವ ಇವುಗಳಲ್ಲಿ ಏಕತಾನತೆಯಿರದು. ಮೂಲಸಾಮಗ್ರಿ ಪುರಂದರದಾಸರದ್ದೇ ಇರಬಹುದಾದರೂ ಹಲವರು ಹರಿದಾಸರ ಕೈವಾಡವನ್ನು ಊಹಿಸಿಕೊಳ್ಳಬಹುದು.

ಈ ವಿಚಾರ ಹಾಗಿರಲಿ, ಈಗ ನಮ್ಮ ಕಾಲಕ್ಕೆ ದಾಸಕೂಟದವರ ಶ್ರದ್ಧೆಯಿಂದ ಉಳಿದುಬಂದಿರುವ ಪುರಂದರಸಾಹಿತ್ಯವನ್ನು ಗಮನಿಸಿದರೆ, ಬಿಡಿ 'ಕೃತಿ'ಗಳ ಮೊತ್ತ ಸುಮಾರು ಎಂಟುನೂರು ಎನ್ನಬಹುದು. ಇವುಗಳಲ್ಲಿ, ಮೇಲೆ ಪುರಂದರದಾಸರೇ ತಮ್ಮ ಕೃತಿಗಳ ವಿಭಾಗವನ್ನು ಮಾಡಿರುವ ಕ್ರಮವನ್ನು ಗುರುತಿಸಲಾರೆವು. ಆ ಪಟ್ಟಿಯ ಹಲವು ವಿವರಗಳಲ್ಲಿ ದಾಸರ ಕೃತಿಗಳು ಇಲ್ಲವೇ ಇಲ್ಲ; ಮತ್ತೆ ಕೆಲವು ವಿವರಗಳು ಖಂಡತುಂಡಾಗಿ ಅಷ್ಟಿಷ್ಟು ಒದಗಿಬಂದಿವೆ ಅಷ್ಟೆ. 'ದೇವರ ನಾಮ'ಗಳೆಂಬ ಬೇರೆ ವಿಭಾಗವನ್ನೇ ಕಾಣಿಸಿದ್ದಾರಲ್ಲ. ಅದರ ಸ್ವರೂಪವೇನೆಂಬುದು ತಿಳಿಯುವುದಿಲ್ಲ. ವಿಜಯದಾಸರ ಒಕ್ಕಣೆಯಲ್ಲಿ 'ವೃತ್ತನಾಮ'ಗಳೆಂಬ ವಿಭಾಗವಿದೆ. ಇವೇ ಇಲ್ಲಿನ 'ದೇವರ ನಾಮ'ಗಳೋ? ಈಗೇನೋ ಎಲ್ಲ ರಚನೆಗಳಿಗೂ 'ದೇವರ ನಾಮ'ವೆಂಬ ಹೆಸರೇ ಬಂದಿದೆ. ಸುಳಾದಿಗಳ ಸಂಖ್ಯೆ 'ಹದಿನಾಲ್ಕು ಸಾವಿರ' ಎಂದು ಹೇಳಿದ್ದಾರೆ: ಈಗ ಉಪಲಬ್ಧವಿರುವ ಪುರಂದರದಾಸರ ಸುಳಾದಿಗಳು ಐವತ್ತಮೂರು ಅಷ್ಟೆ. ಅಂತೂ, ಉಳಿದುಬಂದಿರುವ ಪುರಂದರ ಸಾಹಿತ್ಯವನ್ನು ಪುರಂದರದಾಸರ ಅಥವಾ ವಿಜಯದಾಸರ ವಿಭಜನಕ್ರಮದಲ್ಲಿ ಅಳವಡಿಸುವುದು ಸಾಧ್ಯವಿಲ್ಲ.

ವಿಜಯದಾಸರ ಸಮಕಾಲಿಕರಾದ ಪ್ರಸನ್ನವೆಂಕಟದಾಸರು ಪುರಂದರ ಸಾಹಿತ್ಯದ ಸ್ವರೂಪವನ್ನು ಕುರಿತು ಇನ್ನೊಂದು ಒಕ್ಕಣೆಯನ್ನು ಒದಗಿಸಿದ್ದಾರೆ-

ಗೀತತಾಯಿ ಸುಳಾದ್ಯುಗಾಭೋಗ ಪದ್ಯ ಪದ
ವ್ರಾತ ಪ್ರಬಂಧ ರಚಿಸಿ ವಿಟ್ಠಲನ

ಪ್ರೀತಿ ಬಡಿಸಿ ಪ್ರತ್ಯಕ್ಷ ಕಂಡು ನಲಿವ ವೈಷ್ಣವಾಗ್ರ
ನಾಥ ಪ್ರಸನ್ನ ವೇಂಕಟಕೃಷ್ಣಪ್ರಿಯನ

ಇದರಲ್ಲಿ ಗೀತ, ಠಾಯಿ, ಸುಳಾದಿ, ಉಗಾಭೋಗ, ಪದ್ಯ, ಪದ ಎಂಬ ಆರು ಬಗೆಯ ಪ್ರಬಂಧಗಳನ್ನು ಪುರಂದರದಾಸರು ರಚಿಸಿದರೆಂದು ಹೇಳಿದೆ. ಈ ಮಾತುಗಳ ವಿವರಣೆ ಮುಂದೆ ದಾಸಸಂಗೀತವನ್ನು ಕುರಿತು ವಿಚಾರ ಮಾಡುವಾಗ ಬರುತ್ತದೆ. ಈ ಪ್ರಕಾರಗಳಲ್ಲಿ ಗೀತ (ಗೇಯ ಪ್ರಧಾನವಾದ ಲಘುಸಾಹಿತ್ಯ), ಠಾಯಿ (ಸಂಸತದ 'ಸ್ಥಾಯೀ' ಎಂಬ ಮಾತಿನ ಕನ್ನಡ ರೂಪ, ಮನೋಧರ್ಮಪ್ರಧಾನವಾದ ವಿಲಂಬಿತಲಯದ ಅನಿಬದ್ಧರಾಗ ವಿಸ್ತರಣೆ), ಸುಳಾದಿ (ತಾಳಮಾಲಿಕಾ ಪ್ರಬಂಧ), ಉಗಾಭೋಗ (ವಚನಶೈಲಿಯಲ್ಲಿ ಮಾತ್ರಾಗಣ, ಲಯಬಂಧ, ಕಾವ್ಯಗುಣಗಳನ್ನೆಲ್ಲ ಒಳಗೊಂಡ ಸಾಹಿತ್ಯಭಾಗ) ಇಷ್ಟೂ ಸಂಗೀತಕ್ಕೆ ಸೇರಿದುವು. ಪದ್ಯವೆನ್ನುವುದು ಮುಖ್ಯವಾಗಿ ಸಾಹಿತ್ಯವೇ; ಛಂದಸ್ಸು, ವೃತ್ತಗಳ ಸಮಾವೇಶವಿದ್ದರೂ ಕಾವ್ಯಗುಣವೇ ಎದ್ದುಕಾಣುವ ವಿವರ. ಇದನ್ನು ನಿರೂಪಿಸಲು ಸಾಂಪ್ರದಾಯಿಕ ಸಂಗೀತದ ಅಗತ್ಯವಿರದು; ರಾಗಾಲಾಪನೆ, ತಾಳನಿರ್ಬಂಧಗಳು ಅರ್ಥದ ಸ್ವಾರಸ್ಯವನ್ನು ಮೊಟಕು ಮಾಡುವುದೂ ಸಾಧ್ಯ. ಪದವೆನ್ನುವ ಪ್ರಕಾರದಲ್ಲಿ ಸಂಗೀತದ ಪಾತ್ರವಿದ್ದರೂ ಸರಳವಾಗಿರುತ್ತದೆ; ಮಾತಿನ ಅರ್ಥ ಮನಮುಟ್ಟುವಂತೆ ವಿನಿಕೆಮಾಡಿದರೆ ತೀರಿತು. ಹೀಗೆ ದಾಸರ ಕೃತಿಗಳಲ್ಲಿ ಸಂಗೀತಸಂಪ್ರದಾಯದ ಜಾಯಮಾನಕ್ಕೆ ಹೊಂದಿಕೊಂಡುಬಂದವೂ ಇವೆ; ಸಾಂಪ್ರದಾಯಿಕ ಸಂಗೀತದ ನೆರವನ್ನು ಪಡೆಯುವ ಅಗತ್ಯ ವಿಲ್ಲದೆ ಯಾರಾದರೂ, ಎಂದರೆ ಸಂಗೀತಾನಭಿಜ್ಞರೂ, ಸುಸ್ವರದಲ್ಲಿ ಶುದ್ಧಕಂಠದಿಂದ ನೇರವಾಗಿ ಹಾಡುವಂಥವೂ ಇವೆ. ಸಂಗೀತಸಂಪ್ರದಾಯಕ್ಕೆ ಒಗ್ಗಿರುವ ಕೃತಿಗಳಲ್ಲಿ ಕೂಡ ಸಾಹಿತ್ಯ ಭಾಗವೇ ಮುಖ್ಯ ಎಂಬುದನ್ನು ಮರೆಯಬಾರದು.

ದಾಸರ ಕೃತಿಗಳಲ್ಲಿ ಹೆಚ್ಚು ಜನಪ್ರಿಯವಾದುವೆಂದರೆ 'ಪದ'ಗಳೇ. ಪದಗಳನ್ನು ಹಾಡಲು ಸಂಗೀತದ ಶಿಕ್ಷಣ ಬೇಕಾದುದಿಲ್ಲ. ರಾಗಜ್ಞಾನ ಅನಿವಾರ್ಯವೆಂದೇನಿಲ್ಲ. ಒಂದೆರೆಡರು ಸಾರಿ ಕೇಳಿದರೆ ಸಾಕು ಮಾತಿನ ಮೋಡಿ, ಹಾಡುವ ಧಾಟಿ ಎರಡೂ ಮನವರಿಕೆಯಾಗಿಬಿಡುತ್ತವೆ. ಸುಳಾದಿಗಳಲ್ಲಿರುವಂತೆ ವಿವಿಧ ತಾಳಗಳ ಬಿಗಿಯಿಲ್ಲ, ಠಾಯಿಯಲ್ಲಿರುವಂತೆ ರಾಗವಿಸ್ತರಣೆಯ ಅಗತ್ಯವಿಲ್ಲ, ಉಗಾಭೋಗದಲ್ಲಿರುವಂತೆ ಮಾತ್ರಾಗಣ, ಲಯಬಂಧಗಳ ಕಟ್ಟುಪಾಡಿಲ್ಲ. ಪುರಂದರದಾಸರ ಪದಗಳೆಲ್ಲ ಸುಮಾರು ಮೂವತ್ತು ರಾಗಗಳಲ್ಲಿ ಮೂಡಿಬಂದಿವೆ ಅಷ್ಟೆ; ತಾಳಗಳಲ್ಲಿ ವಿಶೇಷವಾಗಿ ಬಳಸಿರುವುದೆಂದರೆ ಚಾಪು, ಝಂಪೆ. ಪದದಲ್ಲಿ ಪಲ್ಲವ (ಪಲ್ಲವಿ), ಅನುಪಲ್ಲವ (ಅನುಪಲ್ಲವಿ) ಮತ್ತು ನುಡಿಗಳೆಂದು (ಚರಣ, ಅಂಘ್ರಿ) ಮೂರು ವಿಭಾಗಗಳು. ಒಂದೊಂದು ನುಡಿಯಾದ ಮೇಲೂ ಪಲ್ಲವವನ್ನು ಮತ್ತೆ ಎತ್ತಿಕೊಳ್ಳುವುದು ಕ್ರಮ. ಪದಗಳನ್ನೇ 'ದೇವರ ನಾಮ'ಗಳೆಂದೂ ನಿರ್ದೇಶಿಸುವುದು ವಾಡಿಕೆ.

ಈಗ ಉಪಲಬ್ಧವಿರುವ ಪುರಂದರ ಸಾಹಿತ್ಯದಲ್ಲಿ ಪದಗಳೇ ಹೆಚ್ಚು ಸಂಖ್ಯೆಯಲ್ಲಿರುವವು. ಉಗಾಭೋಗಗಳು ನೂರನಲವತ್ತನ್ನು ಮೀರುವುದಿಲ್ಲ. ಸುಳಾದಿಗಳು ಅರವತ್ತನ್ನು ಮೀರುವುದಿಲ್ಲ;

ಉಳಿದವೆಲ್ಲ ಪದಗಳೇ. ಪದಗಳಲ್ಲಿ ಸ್ತುತಿ, ತತ್ತ್ವ ಬೋಧೆ, ಸಿದ್ಧಾಂತ ಪ್ರಮೇಯ ನಿರೂಪಣೆ, ರಸವ್ಯಂಜನ ಮೊದಲಾದ ಪ್ರಯೋಜನಗಳು ಅಡಕವಾಗಿವೆ. ದಾಸರು ಇವನ್ನೆಲ್ಲ ಪ್ರಯತ್ನ ಪೂರ್ವಕವಾಗಿ ರಚಿಸಿದರೆಂದು ಹೇಳಲು ಬರುವುದಿಲ್ಲ. ಹಲವು ಸಂದರ್ಭಸ್ಫೂರ್ತಿಯಿಂದ ಹೊರಹೊಮ್ಮಿದುವು; ಮತ್ತೆ ಕೆಲವು ಭಕ್ತಿಯ ಆವೇಶದಿಂದ ಮೂಡಿಕೊಂಡವು; ಇನ್ನು ಕೆಲವು ಮನಸ್ಸಿನ ದುಗುಡದಿಂದ ಅಥವಾ ಹುಮ್ಮಸದಿಂದ ಮೈದಳೆದವು. ಇವುಗಳಲ್ಲಿ ನೇರವಾದ ಆಡು ಮಾತಿನ ಬಳಕೆ ಎದ್ದುಕಾಣುವ ವಿವರ; ಕಾವ್ಯಲಂಕಾರದ ಗುಣ ಕಡಮೆಯೇ. ಹಲವು ಪದಗಳಲ್ಲಿ ಗ್ರಾಮ್ಯಪದಪ್ರಯೋಗಗಳೂ ಬಂದಿವೆ. ಲೋಕದ ರೀತಿನೀತಿಗಳ ವಿಡಂಬನೆ ಕಾಣುತ್ತದೆ; ಉದಾತ್ತವಾದ ಆದರ್ಶವೂ ಇದೆ. ಕೌಟುಂಬಿಕ ಜೀವನ, ಸಾಮಾಜಿಕ ಮೌಲ್ಯಗಳು, ಧರ್ಮದ ದಿಟವಾದ ನೆಲೆ, ಅಧ್ಯಾತ್ಮದ ಸ್ವಾರಸ್ಯ ಇವೆಲ್ಲದರ ಉಲ್ಲೇಖ ಪದಗಳಲ್ಲೆಲ್ಲ ಹಾಸುಹೊಕ್ಕಾಗಿ ಬಂದಿದೆ. ಶಾಸ್ತ್ರಗ್ರಂಥ ಗಳಿಗಿಂತ ಹೆಚ್ಚಾಗಿ ಪುರಾಣ, ಇತಿಹಾಸ ಇವುಗಳನ್ನು ಅವಲಂಬಿಸಿರುವುದು ತಿಳಿದುಬರುತ್ತದೆ. ತಮ್ಮ ಮೆಚ್ಚುಗೆಗೆ ಪಾತ್ರವಾದ ಮಾಧ್ವಮತದ ನಿಷ್ಠೆಯಂತೂ ಸ್ಪಷ್ಟವಾಗಿದೆ.

ಪುರಂದರ ಸಾಹಿತ್ಯದ ಮೊದಲ ಸಂಗ್ರಹ ನಡೆದದ್ದು ವಿಜಯದಾಸರ ಕಾಲದಲ್ಲೇ ಎಂದು ತೋರುತ್ತದೆ. ಆ ವೇಳೆಗಾಗಲೇ ದಾಸಕೂಟದ ಪ್ರಾಬಲ್ಯ ಇಳಿಮುಖವಾಗಿ ಅಲ್ಲಲ್ಲಿ ಕೆಲವರು ಹರಿದಾಸರು ಇರುತ್ತಿದ್ದು, ತಂತಮ್ಮ ಮನೆಗಳಲ್ಲಿ ಪುರಂದರದಾಸರ, ಅವರ ಪೂರ್ವಿಕರ, ಸಮಕಾಲಿಕರ ಹಾಡುಗಳನ್ನು ಲಿಖಿತವಾಗಿಯೋ ಮೌಖಿಕವಾಗಿಯೋ ಉಳಿಸಿಕೊಂಡು ಬಂದಿದ್ದಿರಬೇಕು. ವಿಜಯದಾಸರು ಇಂಥವರಿಂದಲೇ ಪುರಂದರದಾಸರ ಕೃತಿಗಳನ್ನು ಪಡೆದುಕೊಂಡು ತಾವು ಅದನ್ನು ಪ್ರತಿಮಾಡಿಸಿ ಮತ್ತೆ ಪ್ರಚಾರಕ್ಕೆ ತಂದರೆಂದು ಕಾಣುತ್ತದೆ. ಹರಿದಾಸ ಪರಂಪರೆಯಲ್ಲಿ ವಿಜಯದಾಸರದ್ದು ಎರಡನೆಯ ಘಟ್ಟ: ಆಗ ನಡೆದದ್ದು ಪುರಂದರ ಸಾಹಿತ್ಯದ ಪುನರುಜ್ಜೀವನ. ವಿಜಯದಾಸರು ತಾವು ಸಂಗ್ರಹಿಸಿದ ಪುರಂದರ ಸಾಹಿತ್ಯವನ್ನು ವರ್ಗೀಕರಣ ಮಾಡಿದುದು ಅವರ ಸುಳಾದಿಯೊಂದರಿಂದ ತಿಳಿದುಬರುತ್ತದೆ. ಈ ವಿಭಜನೆಯ ವಿವರಗಳನ್ನು ನೋಡಿದರೆ ವಿಜಯ ದಾಸರ ಕಾಲಕ್ಕೆ ಪುರಂದರ ಸಾಹಿತ್ಯ ವಿಪುಲವಾಗಿಯೇ ಇದ್ದಿರಬೇಕು.

ನಮ್ಮ ಕಾಲದಲ್ಲಿ ಪುರಂದರ ಸಾಹಿತ್ಯದ ಸಂಗ್ರಹಕ್ಕೂ ಅಳಿದುಳಿದ ಹರಿದಾಸ ಮನೆತನಗಳಲ್ಲಿ ಕಳೆದುಳಿದ ಓಲೆಗರಿ ಅಥವಾ ಹಳೆಯ ಕೋರಿಕಾಗದದ ಹಸ್ತಪ್ರತಿಗಳೇ ಮೂಲ ಆಕರ. ಅವನ್ನು ಸಾರ್ವಜನಿಕರ ಗಮನಕ್ಕೆ ತರುವ ಪ್ರಯತ್ನ ಮೊಟ್ಟ ಮೊದಲಿಗೆ ನಡೆದದ್ದು ೧೮೫೦ರಲ್ಲಿ, ಮಂಗಳೂರಿನಿಂದ. ಆಗ ಹೊರಬಂದ ಕಲ್ಲಚ್ಚಿನ ಪ್ರತಿಯೊಂದು ಇಪ್ಪತ್ತು ವರ್ಷಗಳನಂತರ ಆಗಿನ ಮೈಸೂರು ಸರ್ಕಾರದ ಜೆ. ಗ್ಯಾರೆಟ್ ಎಂಬ ಅಧಿಕಾರಿಯ ಆಸಕ್ತಿಯಿಂದ ಪುನರ್ಮುದ್ರಣಗೊಂಡಿತು; ಅದನ್ನು ಪರಿಷ್ಕರಿಸಿ ಮುದ್ರಣಕ್ಕೆ ಸಿದ್ಧಮಾಡಿದವರ ಹೆಸರು ಹೊಳಕಲ್ಲು ನರಸಿಂಹಯ್ಯ. ಇದರಲ್ಲಿ ಪುರಂದರದಾಸರೂ ಸೇರಿದಂತೆ ಹಲವರು ಹರಿದಾಸರ ಒಟ್ಟು ಒಂದುನೂರು ಎಪ್ಪತ್ತಮೂರು 'ಕೀರ್ತನೆ'ಗಳು ಅಡಕವಾಗಿದ್ದುವು. ಇದೇ ಬಗೆಯ ಇನ್ನೊಂದು ಪ್ರಯತ್ನ ಇನ್ನೆರಡು ವರ್ಷಗಳನಂತರ ಮದರಾಸಿನಿಂದ ನಡೆಯಿತು. ಪುರಂದರದಾಸರ ಕೃತಿಗಳನ್ನೇ ಸಂಗ್ರಹಿಸಿ ಮೊಟ್ಟಮೊದಲು ಅಚ್ಚು ಮಾಡಿಸಿದವರು ಮಡಕಶಿರಾ ಬಾಲಕೃಷ್ಣರಾಯರು; ಇವರು ಮದರಾಸಿನಿಂದ ೧೮೯೪ಳರಲ್ಲಿ

ಹೊರಡಿಸಿದ ಪುಸ್ತಕ ತೆಲುಗು ಲಿಪಿಯಲ್ಲಿದ್ದಿತು ('ಪುರಂದರದಾಸುಲುವಾರು ಪಾಡಿನ ಕೀರ್ತನಲು'). ಬೆಳಗಾವಿಯಲ್ಲಿ ಅಬಾಜಿ ರಾಮಚಂದ್ರ ಸಾವಂತರು ಅದೇ ಸಮಯದಲ್ಲಿ 'ದಾಸರ ಪದಗಳ ಸಂಗ್ರಹ'ವನ್ನು ದೇವನಾಗರಿಲಿಪಿಯಲ್ಲಿ ಹೊರತಂದು (೧೮೮೦-೧೮೯೪, ನಾಲ್ಕು ಭಾಗಗಳಲ್ಲಿ), ಸುಳಾದಿಗಳ ಸಂಕಲನವನ್ನೂ ಪ್ರಕಟಿಸಿದರು (೧೯೦೮).

ಬೆಂಗಳೂರಿನ ಟಿ. ಎನ್. ಕೃಷ್ಣಯ್ಯಶೆಟ್ಟರು ೧೯೧೪ರಲ್ಲಿ ಪುರಂದರದಾಸರ ಪದಗಳ ಸಂಗ್ರಹವನ್ನು ಅಚ್ಚು ಮಾಡಿಸಿದರು; ಇದರಲ್ಲಿ ಒಟ್ಟು ಎಂಟುನೂರ ಎರಡು ಕೃತಿಗಳು ಸೇರಿದ್ದುವು. ಉಡುಪಿಯಲ್ಲಿ ಪಾವಂಜೆ ಗುರುರಾಯರು ತಮ್ಮ ಶ್ರೀಮನ್ಮಧ್ವ ಸಿದ್ಧಾಂತ ಗ್ರಂಥಾಲಯದಿಂದ ಪುರಂದರದಾಸರ ಒಂದುಸಾವಿರ ಐವತ್ತು ಕೀರ್ತನೆಗಳನ್ನು ಐದು ಭಾಗಗಳಲ್ಲಿ ಹೊರತಂದರು; ಕಡೆಯ ಭಾಗದಲ್ಲಿ ಒಂದುನೂರ ನಲವತ್ತನಾಲ್ಕು ಉಗಾಭೋಗಗಳೂ ಸೇರಿದುವು. ಮೊದಲನೆಯ ಭಾಗ ೧೯೧೨ ರಲ್ಲಿಯೂ ಕಡೆಯದು ೧೯೩೨ರಲ್ಲಿಯೂ ಪ್ರಕಟವಾದುವು. ಇದೇ ಈವರೆಗೆ ಹೊರಬಂದಿರುವ ಸಂಗ್ರಹಗಳಲ್ಲಿ ವ್ಯಾಪಕವಾದುದು. ಅಂಥದೇ ಇನ್ನೊಂದು ಸಂಗ್ರಹ ೧೯೨೫ರಲ್ಲಿ ಸುಬೋಧ ರಾಮರಾಯರ 'ಹರಿದಾಸಕೀರ್ತನತರಂಗಿಣಿ' ಗ್ರಂಥಮಾಲೆಯಿಂದ ಆರಂಭವಾಯಿತು. ಎರಡು ಭಾಗಗಳಲ್ಲಿ ಅಚ್ಚಾದ ಈ ಸಂಗ್ರಹದಲ್ಲಿ (೧೯೨೬) ಪುರಂದರದಾಸರ ಐನೂರು ನಲವತ್ತಮೂರು ಕೃತಿಗಳು ಸೇರಿವೆ; ಪದಗಳೆನಿಸಿಕೊಳ್ಳುವ ಈ ಕೃತಿಗಳಲ್ಲದೆ ಒಂದುನೂರ ಇಪ್ಪತ್ತೆಂಟು ಉಗಾಭೋಗಗಳೂ, 'ದ್ರೌಪದೀವಸ್ತ್ರಾಪಹರಣ' ಮತ್ತು 'ಗಜೇಂದ್ರ ಮೋಕ್ಷ' ಎಂಬೆರಡು ಉದಯರಾಗಗಳೂ, ಹದಿನೈದು ಸುಳಾದಿಗಳೂ ಒಂದು ಗದ್ಯವೂ ಸೇರಿವೆ. ಈ ಸಂಗ್ರಹದ ಪಾಠ ಶುದ್ಧವಾಗಿದ್ದು ಮುದ್ರಣವೂ ಸುಂದರವಾಗಿದೆ.

ಪಣಿಯಾಡಿ ಲಕ್ಷ್ಮೀನಾರಾಯಣ ಉಪಾಧ್ಯಾಯ, ವೆಂಕಟರಮಣಾಚಾರ್ಯ ಮತ್ತು ಲಕ್ಷ್ಮೀನಾರಾಯಣ ಅಡಿಗರು ೧೯೪೦ರಲ್ಲಿ ತುಳುನಾಡು ಪ್ರೆಸ್ಸಿನಿಂದ ಒಂದು ಸಂಕಲನವನ್ನು ನಾಲ್ಕು ಭಾಗಗಳಲ್ಲಿ ಹೊರತಂದರು. ಇದಾದ ನಾಲ್ಕು ವರ್ಷಗಳಲ್ಲಿ ಲಿಂಗಸೂಗೂರಿನ ವರದೇಂದ್ರ ಹರಿದಾಸ ಸಾಹಿತ್ಯ ಮಂಡಲದ ಗೊರಾಬಾಳ ಹನುಮಂತರಾಯರು ಮತ್ತೊಂದು ಸಂಕಲನವನ್ನು ಪ್ರಕಟಿಸಿದರು. ಇವರೇ ೧೯೫೭ರಲ್ಲಿ ಪುರಂದರದಾಸರ ಐವತ್ತೈದು ಸುಳಾದಿಗಳನ್ನು ಪ್ರತ್ಯೇಕವಾಗಿ ಹೊರತಂದರು. ಈ ಮಧ್ಯೆ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತು ಧಾರವಾಡದ ರಾಘವೇಂದ್ರಾಚಾರ್ಯ ಸ್ವಾ. ಪಂಚಮುಖಿಯವರಿಂದ 'ಹರಿದಾಸ ಸಾಹಿತ್ಯ'ವನ್ನು ಕುರಿತು ಸಂಗ್ರಾಹ್ಯವಾದ, ವಿಮರ್ಶಾತ್ಮಕವಾದ ಪುಸ್ತಕವೊಂದನ್ನು ಬರೆಯಿಸಿ ಪ್ರಕಟಿಸಿತು (೧೯೫೨). ಈ ವಿದ್ವಾಂಸರೇ ೧೯೫೬ರಲ್ಲಿ ಪುರಂದರದಾಸರ ಜೀವನಚರಿತ್ರೆಯನ್ನೂ ಬರೆದರು (ಶ್ರೀ ಪುರಂದರದಾಸ ಸೇವಾ ಮಂಡಲ, ಹೊಸಪೇಟೆ). ತುಳುನಾಡು ಪ್ರೆಸ್ಸಿನ ಮೇನೇಜರಾಗಿ ಕೆಲಸ ಮಾಡುವಾಗ ದಾಸರ ಕೃತಿಗಳ ನಿಕಟ ಪರಿಚಯವನ್ನು ಪಡೆದುಕೊಂಡಿದ್ದ ಎಸ್. ಎಸ್. ಕಾರಂತರು ಹುಬ್ಬಳ್ಳಿಯಿಂದ ೧೯೫೯ರಲ್ಲಿ ಆರುನೂರ ಐವತ್ತಾರು ಪದಗಳ ಸಂಗ್ರಹವೊಂದನ್ನು ಹೊರತಂದರು; ಇದರಲ್ಲಿ ಮೂವತ್ತಾರು ಸುಳಾದಿಗಳ ಸೇರ್ಪಡೆಯಿದ್ದಿತು.

ಮುಂದೆ, ಪುರಂದರದಾಸರ ಚತುರ್ಥ ಶತಮಾನೋತ್ಸವ ಸಂದರ್ಭದಲ್ಲಿ (೧೯೬೩-೬೪ರ ಸುಮಾರಿಗೆ) ಬೆಂಗಳೂರು ಮತ್ತು ಧಾರವಾಡಗಳಲ್ಲಿ ಉತ್ಸವಸಮಿತಿಗಳು ಏರ್ಪಟ್ಟು ಪುರಂದರದಾಸರ

ಸಾಹಿತ್ಯ, ಅವರನ್ನು ಕುರಿತ ವಿಚಾರ, ಅವರ ಕೃತಿಗಳಿಗೆ ಸಂಗೀತಸಂಯೋಜನೆ ಈ ಬಗೆಗೆ ಪ್ರಕಟಣೆಗಳು ಬಂದುವು. ಬೆಂಗಳೂರಿನ ಉತ್ಸವ ಸಮಿತಿಯು ನನ್ನಿಂದ ಪುರಂದರದಾಸರನ್ನು ಕುರಿತ ಗ್ರಂಥವೊಂದನ್ನು ಬರೆಯಿಸಿ ಕನ್ನಡ, ತೆಲುಗು, ಇಂಗ್ಲಿಷ್ ಭಾಷೆಗಳಲ್ಲಿ ಹೊರತಂದಿತು (೧೯೬೪); ನನ್ನ ನಿರ್ದೇಶನದಲ್ಲಿ ದಾಸರ ಒಂದು ನೂರು ಕೃತಿಗಳಿಗೆ ಸ್ವರಪ್ರಸ್ತಾರವನ್ನು ಅಳವಡಿಸಿ ಮತ್ತೊಂದು ಗ್ರಂಥವೂ ಪ್ರಕಟವಾಯಿತು (ಕೃತಿಶತಕ). ಪುರಂದರಸಾಹಿತ್ಯವನ್ನು ಪಾಠಾಂತರಗಳೊಂದಿಗೆ ಪರಿಷ್ಕರಿಸಿ ಪ್ರಕಟಿಸಬೇಕೆಂಬ ಯೋಜನೆಯಿದ್ದಿತು; ಕೈಗೂಡಲಿಲ್ಲ. ಆದರೆ ಧಾರವಾಡದ ಸಮಿತಿಯವರು ಮಿಂಚಿನಬಳ್ಳಿ ಕಾರ್ಯಾಲಯದ ಬುರ್ಲಿ ಬಿಂದುಮಾಧವಾಚಾರ್ಯರ ಸಮರ್ಥ ನೇತೃತ್ವದಲ್ಲಿ ದಾಸರ ಸಾಹಿತ್ಯವನ್ನು (ಒಂಬತ್ತುನೂರ ಒಂದು ಕೃತಿಗಳನ್ನು) ಆರು ಸಂಪುಟಗಳಲ್ಲಿ ಪ್ರಕಟಿಸಿದರು. ಬೆಟಗೇರಿ ಕೃಷ್ಣಶರ್ಮರೂ ಬೆಂಗೇರಿ ಹುಚ್ಚೂರಾಯರೂ ಸಂಪಾದಕರಾಗಿ ಈ ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು. ಮೊದಲನೆಯ ಸಂಪುಟವಾದ 'ಪೂಜಾತತ್ತ್ವ' ೧೯೬೩ರ ಕಡೆಯ ಭಾಗದಲ್ಲಿ ಪ್ರಕಟವಾಯಿತು. ಮರುವರ್ಷ ಎರಡನೆಯ ಸಂಪುಟ 'ಆರ್ತಭಾವ' ಮತ್ತು ಮೂರನೆಯದಾದ 'ಮಹಾತ್ಮ್ಯಜ್ಞಾನ'; ಮುಂದಿನ ವರ್ಷ ನಾಲ್ಕನೆಯದಾದ 'ಕೃಷ್ಣಲೀಲೆ' ಮತ್ತು ಐದನೆಯದಾದ 'ಲೋಕನೀತಿ'; ೧೯೬೫ರಲ್ಲಿ ಕಡೆಯ ಸಂಪುಟವಾದ 'ಸಂಕೀರ್ಣಸಂಗ್ರಹ' ಪ್ರಕಟವಾಗಿ ಸಂಪಾದಕರೂ ಪ್ರಕಾಶಕರೂ ಕೃತಾರ್ಥರಾದರು. ಈ ಸಂಪುಟಗಳಲ್ಲಿ ಶುದ್ಧವಾದ ಪಾಠ, ಅಗತ್ಯವಾದ ಪಾಠಾಂತರಗಳು, ಪರಿಶಿಷ್ಟವಾಗಿ ಶಬ್ದಾರ್ಥ, ಸಂದರ್ಭಕಥೆ, ಭೌಗೋಲಿಕ ಮತ್ತು ಐತಿಹಾಸಿಕ ವಿವರಣೆ ಇವೆಲ್ಲವೂ ಸೇರಿದ್ದು ತುಂಬ ಉತ್ತಮವಾದ, ಉಪಯುಕ್ತವಾದ ಸಂಕಲನವಾಗಿದೆ. ಇವಲ್ಲದೆ ಕಲಮದಾನಿ ಗುರುರಾಯರ ಸಂಕಲನ (ಎಂಟುನೂರು ಕೃತಿಗಳು), ಹುಬ್ಬಳ್ಳಿಯ ಎ. ಎಂ. ಕರಡಿಯವರ ಸಂಕಲನ (ಆರುನೂರು ಕೃತಿಗಳು), ಬೆಂಗಳೂರಿನ ಉಪಾಧ್ಯಾಯ ಪ್ರಕಟನಾಲಯದ ಸಂಕಲನ (೧೯೫೪, ಇನ್ನೂರ ಐವತ್ತು ಕೃತಿಗಳು), ಗದಗ ಬಿ. ಜಿ. ಸಂಕೇಶ್ವರರ ಸಂಕಲನ (ಆರುನೂರ ಇಪ್ಪತ್ತಾರು ಕೃತಿಗಳು) ಇವೂ ಪ್ರಚಾರದಲ್ಲಿವೆ.

ಪುರಂದರದಾಸರ ಸಾಹಿತ್ಯಕ್ಕೆ ಮಾತ್ರ ಗಮನವನ್ನು ಸೀಮಿತಗೊಳಿಸದೆ ಇತರ ದಾಸರಿಂದಲೂ ಆಯ್ದ ಪದಗಳ ಸಂಕಲನಗಳು ಹಲವಾರಿವೆ. ಬೆಳಗಾವಿಯ ಅಬಾಜಿ ರಾಮಚಂದ್ರ ಸಾವಂತರ ಸಂಗ್ರಹವನ್ನು (೧೮೯೪) ಆಗಲೇ ಪ್ರಸ್ತಾಪಿಸಲಾಗಿದೆ; ಮದರಾಸಿನ 'ಹರಿಭಜನ ಕೀರ್ತನೆ' (೧೮೭೮) ಇದಕ್ಕೂ ಮೊದಲೇ ಹೊರಬಂದ ಸಂಗ್ರಹ. ೧೯೨೫ರಿಂದ ಮುಂದೆ ಸುಬೋಧ ರಾಮರಾಯರು 'ಹರಿದಾಸ ಕೀರ್ತನ ತರಂಗಿಣಿ' ಮಾಲೆಯಲ್ಲಿ ಹಲವಾರು ದಾಸರ ಪದಗಳನ್ನು ಪ್ರಕಟಿಸಿದರು. ೧೯೩೫ರಲ್ಲಿ ರಂಗನಾಥ ರಾಮಚಂದ್ರ ದಿವಾಕರರು 'ಹರಿಭಕ್ತಿಸುಧೆ' (ಆಧ್ಯಾತ್ಮ ಕಾರ್ಯಾಲಯ, ಹುಬ್ಬಳ್ಳಿ) ಎಂಬ ಹೆಸರಿನಿಂದ ಉತ್ತಮವಾದ ಒಂದು ಸಂಕಲನವನ್ನು ಅಂದವಾಗಿ ಹೊರತಂದರು. ಬೆಟಗೇರಿ ಕೃಷ್ಣಶರ್ಮ ಮತ್ತಿತರ 'ಹರಿದಾಸ ಭಕ್ತಿಸಾಧನೆ' (ಮಿಂಚಿನ ಬಳ್ಳಿ ಕಾರ್ಯಾಲಯ, ಧಾರವಾಡ, ೧೯೬೫), ಜಿ. ವರದರಾಜರಾಯರ 'ಹರಿದಾಸ ಹೃದಯ' (ಶಾರದಾ ಮಂದಿರ, ಮೈಸೂರು, ೧೯೬೭), ಅವರ ಸಂಪಾದಕತ್ವದಲ್ಲಿ ಹೊರಬಂದ 'ಹರಿದಾಸ ಸಾಹಿತ್ಯ ಸಮೀಕ್ಷೆ' (ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ೧೯೭೩) ಮೊದಲಾದ ಪುಸ್ತಕಗಳು ದಾಸಸಾಹಿತ್ಯವನ್ನು ಕುರಿತು ಆಸಕ್ತಿಯನ್ನು ಕೆರಳಿಸಿದುವು, ಅಧ್ಯಯನಕ್ಕೆ ನೆರವಾದವು. ಕಿನ್ನರಿ ವಿದ್ವಾಂಸರಾಗಿದ್ದ ಹುಲಗೂರು

ಕೃಷ್ಣಾಚಾರ್ಯರು ದಾಸಸಾಹಿತ್ಯದಲ್ಲಿ ಸಂಗೀತದ ಪಾತ್ರವನ್ನು ಕುರಿತು ೧೯೫೧ರಲ್ಲಿ 'ಕರ್ನಾಟಕ ಸಂಗೀತವೂ ದಾಸಸಾಹಿತ್ಯವೂ' ಎಂಬ ಸೊಗಸಾದ, ಸಂಶೋಧನಾತ್ಮಕವಾದ ಗ್ರಂಥವನ್ನು ಬರೆದರು (ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ). ನನ್ನ ಸನ್ಮಾನ್ಯ ಮಿತ್ರರಾದ ರಾ. ಸತ್ಯನಾರಾಯಣ ಅವರು ದಾಸಸಾಹಿತ್ಯದಲ್ಲಿ ಸುಳಾದಿ-ಉಗಾಭೋಗಗಳನ್ನು ಕುರಿತು ಆಳವಾಗಿ ಅಭ್ಯಾಸಮಾಡಿ ಸುದೀರ್ಘವಾದ ಪ್ರಬಂಧವೊಂದನ್ನು ಸಿದ್ಧಪಡಿಸಿ, ಧಾರವಾಡದ ಸಮಿತಿಯವರು ೧೯೬೫ರಲ್ಲಿ ಹೊರತಂದ 'ಕೃಷ್ಣಲೀಲಾ' ಎಂಬ ನಾಲ್ಕನೆಯ ಸಂಪುಟಕ್ಕೆ ಉಪೋದ್ಘಾತ ರೂಪವಾಗಿ ಪ್ರಕಟಿಸಿದರು.

ಈ ಎಲ್ಲ ಪ್ರಯತ್ನದಿಂದ ದಾಸಸಾಹಿತ್ಯ ಪ್ರಪಂಚದಲ್ಲಿ ಪುರಂದರದಾಸರ ಸ್ಥಾನಮಾನಗಳನ್ನು ಕುರಿತು ಹಲವಾರು ವಿವರಗಳು ಪ್ರಸಿದ್ಧಗೊಂಡವು. 'ಶ್ರೀಪುರಂದರದಾಸರು' (ವಿವಿಧ ಲೇಖಕರು, ಸಂಪಾದನೆ ಬುರ್ಲಿ ಬಿಂದುಮಾಧವ, ಮಿಂಚಿನಬಳ್ಳಿ ಕಾರ್ಯಾಲಯ, ಧಾರವಾಡ, ೧೯೬೪), 'ಪ್ರಸಾದಯೋಗ' (ವ.ಅ. ದಿವಾಣಜಿ, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೭೨) 'ಪುರಂದರದಾಸರ ಸಾಹಿತ್ಯ ವಿಮರ್ಶೆ' (ರಾ. ಸ್ವಾ. ಪಂಚಮುಖಿ, ಸಾ. ಕೃ. ರಾಮಚಂದ್ರರಾವ್, ತ. ಸು. ಶಾಮರಾವ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೭) 'ಶ್ರೀ ಪುರಂದರದಾಸ ದರ್ಶನ' (ಸಂಪಾದಕರು, ಕೆ. ವಿಶ್ವಂಭರ ಉಪಾಧ್ಯಾಯ, ಭಾರತೀಪ್ರಕಾಶನ, ಕುಂಭಾಸಿ, ೧೯೬೩), 'ಪುರಂದರ ದರ್ಶನ' (ವೆಂಕಟ್ರಾಯ ಆನಂದ ಶೆಣೈ, ಮುಂಬಯಿ, ೧೯೬೩) ವೀ. ಸೀತಾರಾಮಯ್ಯನವರ 'ಶ್ರೀಪುರಂದರದಾಸರು' (ನ್ಯಾಷನಲ್ ಬುಕ್ ಟ್ರಸ್ಟ್, ದೆಹಲಿ, ೧೯೭೯) ಮೊದಲಾದ ಪ್ರಕಟಣೆಗಳು ಗಮನಾರ್ಹವಾದುವು. ಇವೆಲ್ಲದರ ನೆರಳಿನಲ್ಲಿ ಬಂದದ್ದೇ ನನ್ನ 'ಪುರಂದರ ಸಾಹಿತ್ಯ ದರ್ಶನ' (ನಾಲ್ಕು ಸಂಪುಟಗಳಲ್ಲಿ, ಕರ್ನಾಟಕ ಸರ್ಕಾರ.) ❒

ಅಧ್ಯಾಯ ಐದು

ಹರಿದಾಸರ ಆಧ್ಯಾತ್ಮಿಕ ದೃಷ್ಟಿ

೧

ಪುರಂದರದಾಸರು ಹರಿದಾಸರು; ಹರಿಯ ಸೇವೆಗೆಂದು ತಮ್ಮ ಬದುಕನ್ನೆಲ್ಲ ಮೀಸಲಾಗಿ ಇರಿಸಿದವರು. ತಮಗೆ ದೊರೆತಿರುವ ಶರೀರವು ಸಾಧನಶರೀರವೆಂದೂ, ಮಾನವಜನ್ಮವನ್ನು ಹಾನಿಮಾಡಿಕೊಳ್ಳದೆ ಅದರ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳಬೇಕೆಂದೂ ಹರಿದಾಸರ ನಂಬಿಕೆ. ಪುರಂದರದಾಸರು ಹೀಗೆ ಹರಿದಾಸರಾಗುವ ಮೊದಲು ಅವರ ಧರ್ಮವೇನು, ನಿಲುವೇನು, ಆಚಾರವೇನು ಆಗಿದ್ದಿತು ಎಂಬುದು ಸ್ಪಷ್ಟವಾಗುವುದಿಲ್ಲ. ಅವರಿಗೆ ಹರಿದಾಸದೀಕ್ಷೆಯನ್ನು ಒದಗಿಸಿದ ವ್ಯಾಸರಾಯಸ್ವಾಮಿಗಳೇನೋ ಮಾಧ್ವ ಸಂಪ್ರದಾಯದವರು, ವೈಷ್ಣವ ಭಾಗವತರು. ಅವರನ್ನು ಗುರುಗಳೆಂದು ಬಗೆದ ಪುರಂದರದಾಸರೂ ಅದೇ ಸಂಪ್ರದಾಯವನ್ನು ಹಿಡಿದುದು ಸಹಜವೇ. ಅವರ ಕೃತಿಗಳಲ್ಲಿ ಮಾಧ್ವಮತದ, ದ್ವೈತದರ್ಶನದ, ಮಧ್ವಾಚಾರ್ಯರ ಹಿರಿಮೆಯನ್ನು ಹೇಳುವ ಪದಗಳು ಹಲವಾರು ಇವೆ. ಅವರು ಮಾಧ್ವಸಂಪ್ರದಾಯದ ನಿಷ್ಠೆಯಲ್ಲಿದ್ದವರೆಂಬುದು ಸ್ಪಷ್ಟವಾಗಿದೆ. ಆದರೆ ಹರಿದಾಸರ ಮನೋವೃತ್ತಿ ಇತರ ಪಂಡಿತರಂತೆ ಸಂಕುಚಿತವಾಗಿರದೆ ಉದಾರವಾಗಿರುವುದರಿಂದ ಅವರ ತಾತ್ವಿಕ ನಿಲುವಾಗಲಿ ಧಾರ್ಮಿಕ ಧೋರಣೆಯಾಗಲಿ ಈ ಸಿದ್ಧಾಂತಕ್ಕೇ ಸೀಮಿತವಾಗಿಲ್ಲ. ದ್ವೈತ ಸಿದ್ಧಾಂತದ ಪ್ರಮೇಯಗಳು ಅವರ ಪದಗಳಲ್ಲಿ ಅಡಿಗಡಿಗೆ ಬಂದರೂ, ದಾಸರ ಆಧ್ಯಾತ್ಮಿಕ ದೃಷ್ಟಿ ಅಷ್ಟಕ್ಕೇ ಮುಗಿಯುವುದಿಲ್ಲ. ಇನ್ನೂ ವ್ಯಾಪಕವಾಗಿರುವ ಮನೋಧರ್ಮ ಅವರದ್ದು.

ಪುರಂದರದಾಸರ ಪಾಲಿಗೆ ಸಿದ್ಧಾಂತಕ್ಕಿಂತ ಸಾಧನೆ ಮುಖ್ಯವಾದುದು. ವ್ಯಾಸಕೂಟ-ದಾಸಕೂಟಗಳ ಭೇದವನ್ನು ನಾವು ಮತ್ತೆ ಗಮನಿಸಬೇಕು. ನಿಷ್ಠಾವಂತರಾದ, ಶಾಸ್ತ್ರೈಕನಿಷ್ಠರಾದ, ಸ್ವಮತಮಂಡನೆ-ಪರಮತಖಂಡನೆಯೇ ಪರಮಾರ್ಥಕ್ಕೆ ದಾರಿ ಎಂದು ಹಟ ಹಿಡಿದ ಮಡಿ ಮಡಿಯ ಗುಂಪಿಗೆ ವ್ಯಾಸಕೂಟವೆಂದು ಹೆಸರಾಯಿತು. ಇದಕ್ಕೆ ಸೇರಿದವರಿಗೆ ಸಂಸತಪಾಂಡಿತ್ಯ, 'ಸಚ್ಛಾಸ್ತ್ರ' ವ್ಯಾಸಂಗ, ಸಿದ್ಧಾಂತ ಪ್ರಮೇಯಗಳ ಯುಕ್ತಿಯುಕ್ತ ಸಮರ್ಥನೆ, ಶಾಸ್ತ್ರಾಭ್ಯಾಸದಿಂದ ಬಂದ ಜ್ಞಾನ, ವರ್ಣಾಶ್ರಮಧರ್ಮಗಳ ಪಾಲನೆ ಇವು ಮುಖ್ಯವಾದುವು. ಭಕ್ತಿಯ ಅಗತ್ಯವನ್ನು ಪ್ರಮೇಯವಾಗಿ ಗ್ರಹಿಸಿದರೂ ಅವರ ಒಲವೆಲ್ಲ ಜ್ಞಾನದ ಕಡೆಯೇ. ಸಾಧನೆಯ ಸ್ವಾರಸ್ಯವನ್ನು

ಅವರು ಗ್ರಂಥಗಳಲ್ಲಿ ಬಲ್ಲರೇ ವಿನಾ ಅನುಭವದಲ್ಲಿ ಕಂಡರಿಯರು. ಆದರೆ ದಾಸಕೂಟದವರಿಗೆ ಭಕ್ತಿ ಮುಖ್ಯ, ಶಾಸ್ತ್ರಜ್ಞಾನ ಗೌಣ; ಸಾಧನೆಯ ಅನುಭವ ಮುಖ್ಯ, ಸಿದ್ಧಾಂತ ಗೌಣ. ದಾಸರು ವಾದವಿವಾದಗಳಿಗೆ ಮನಸೋತವರಲ್ಲ; ವ್ಯಾಸಂಗ-ಪ್ರವಚನಗಳಲ್ಲಿ ಬಾಳನ್ನು ಕಳೆದವರಲ್ಲ. ಅವರ ಬಾಳಿನಲ್ಲಿ ಸಾಧನೆಗೇ ಹಿರಿಯ ಪಟ್ಟ. ಸಾಧನೆಯೆಂದರೆ ಭಗವತ್ತತ್ತ್ವ, ಸಾಕ್ಷಾತ್ಕಾರ, ಭಕ್ತಿ ಇವು. ಇವಕ್ಕೆ ಯಾವುದೇ ಮತನಿಷ್ಠವಾದ ಸಿದ್ಧಾಂತವೊಂದರ ಕಟ್ಟುಪಾಡನ್ನು ತೊಡಿಸುವುದು ಸರಿಯಲ್ಲ. ಎಲ್ಲ ಸಂತರಿಗೂ ಸಮಾನವಾದ ಗುಣವನ್ನು ನಾವು ಪುರಂದರದಾಸರಲ್ಲಿ ಗುರುತಿಸಬೇಕು. ಅವರು ಕೇವಲ ಮಾಧ್ವಸಂಪ್ರದಾಯದ ಪ್ರಚಾರಕರು ಎಂದು ಕಾಣಿಸಿದರೆ ತಪ್ಪಾಗುತ್ತದೆ; ಅವರ ಎತ್ತರವನ್ನು ಮುಟ್ಟಿದಂತೆ ಆಗುವುದಿಲ್ಲ.

ಆದರೆ ಹರಿದಾಸಪಂಥದಲ್ಲಿ ಬರುಬರುತ್ತ ಮಾಧ್ವಮತನಿಷ್ಠೆ ಹೆಚ್ಚಿದುದು ದಿಟ. ಪುರಂದರದಾಸರನಂತರ ಹೆಸರಾದ ಹರಿದಾಸರೆಂದರೆ ವಿಜಯದಾಸರಷ್ಟೆ? ಅವರ ಕೃತಿಗಳಲ್ಲಾಗಲೇ ಈ ಬಗೆಯ ಏಕದೇಶಿಯವಾದ ನಿಷ್ಠೆಯನ್ನು ನಾವು ಕಾಣಬಹುದು. ಅವರ ಶಿಷ್ಯವರ್ಗಕ್ಕೆ ಸೇರಿದ ಜಗನ್ನಾಥದಾಸರಂತೂ ಈ ನಿಷ್ಠೆಯ ಪರಾಕಾಷ್ಠೆಯನ್ನು ಮುಟ್ಟಿದವರು! ವ್ಯಾಸಕೂಟದ ಪಂಡಿತರು ತಮ್ಮನ್ನು ಕೀಳಾಗಿ ಕಾಣುವರೆಂದು ಬಗೆದು (-ಇದು ದಿಟವೂ ಇದ್ದೀತು-) ಹರಿದಾಸರು ಈ ಪಂಡಿತರಿಗಿಂತ ಹೆಚ್ಚಾಗಿ ಪಟಹಿಡಿದು ಮಾಧ್ವಸಿದ್ಧಾಂತದ ಪ್ರಚಾರವನ್ನು ಕೈಗೊಂಡಂತೆ ಕಾಣುತ್ತದೆ. ವಿಜಯದಾಸರನಂತರ ಬೆಳೆದುಬಂದ ಹರಿದಾಸಪಂಥ ಬಹುಮಟ್ಟಿಗೆ ಮಾಧ್ವಸಂಪ್ರದಾಯದ ಚೌಕಟ್ಟಿನಲ್ಲೇ ಉಳಿದುಕೊಂಡುಬಂದಿತು. ಸಾಧನೆಯ ಕಡೆ ಗಮನ ಇಳಿಮುಖವಾಗಿ ಸಿದ್ಧಾಂತ ಪ್ರಮೇಯಗಳ ಮೇಲೆ ಒತ್ತು ಹೆಚ್ಚಾಯಿತು. ಮುಂದಿನ ದಾಸರ ಸುಳಾದಿಗಳೂ ಪದಗಳೂ ದ್ವೈತಶಾಸ್ತ್ರದ ನಿರೂಪಣೆಗಾಗಿಯೇ ಸಿದ್ಧವಾದುವು. ಹರಿದಾಸಪಂಥದ ಅವನತಿಗೂ ಈ ಅತಿರೇಕದ ಮತನಿಷ್ಠೆ ಕಾರಣವಾಯಿತೋ ಏನೋ!

ಈ ಮನೋಧರ್ಮ ಬೆಳೆದು ಬೇರೂರಲು ನೂರಾರು ವರ್ಷಗಳ ಮೊದಲೇ ಇದ್ದವರು ಪುರಂದರದಾಸರು. ಅವರ ಕಾಲಕ್ಕೆ ಮಾಧ್ವಸಂಪ್ರದಾಯದಲ್ಲಿ ಇನ್ನೂ ಭಗವದ್ಭಕ್ತಿಯೇ ಮುಖ್ಯವಾದ ವಿಚಾರವಾಗಿದ್ದಿತು. ಸಿದ್ಧಾಂತ ಪ್ರಮೇಯಗಳನ್ನು ಕುರಿತ ವಾದವಿವಾದಗಳನ್ನೂ ವಾಕ್ಯಾರ್ಥಗಳನ್ನೂ ಪಂಡಿತರ ಪಾಲಿಗೆ ಬಿಟ್ಟು, ನಿತ್ಯಜೀವನದಲ್ಲಿ ಭಗವನ್ಮಾಹಾತ್ಮ್ಯಜ್ಞಾನ, ಭಗವದ್ಭಕ್ತಿ, ಸದಾಚಾರ, ಸಾಧುವೃತ್ತಿ ಇವುಗಳನ್ನು ಜನರ ನಡುವೆ ಹರಡಬೇಕೆಂದೇ ಶ್ರೀಪಾದರಾಜರೂ ಅವರ ಶಿಷ್ಯರಾದ ವ್ಯಾಸರಾಯಸ್ವಾಮಿಗಳೂ ಹರಿದಾಸರ ಸಂಪ್ರದಾಯವನ್ನು ಎತ್ತಿನಿಲ್ಲಿಸಿದುದು. ಅವರಿಬ್ಬರೂ ಮಾಧ್ವಸಂಪ್ರದಾಯದ ಸ್ವಾಮಿಗಳೇ, ಶಾಸ್ತ್ರಸಂಪನ್ನರೇ, ವಾದಗ್ರಂಥಗಳನ್ನು ರಚಿಸಿದ್ದವರೇ. ಆದರೆ ಅವರ ಕನ್ನಡ ಕೃತಿಗಳಲ್ಲಿ ಮಾಧ್ವಸಿದ್ಧಾಂತದ ಪ್ರಮೇಯಗಳ ಕಡೆ ಗಮನ ಕಡಮೆ; ಇಲ್ಲವೇ ಇಲ್ಲವೆಂದರೂ ತಡೆದೀತು.

ಶ್ರೀಪಾದರಾಜರ ಕೃತಿಗಳು ನೂರನ್ನು ಮೀರಿ ದೊರೆತಿವೆ. ಇವುಗಳಲ್ಲಿ, ನಾನು ಗಮನಿಸಿದಂತೆ, ಎರಡು ಮಾತ್ರ ಮಾಧ್ವಮತದ ಮೇಲ್ಮೆಯನ್ನು ಹೇಳುವಂಥವು- 'ಮರುದಂಶರ ಮತ ಪಿಡಿಯದೆ' ಎಂದು ಆರಂಭವಾಗುವುದು ಒಂದು, 'ಜಯ ಜಯ ಜಗತ್ರಾಣ ಜಗದೊಳಗೆ ಸುತ್ರಾಣ'

ಎಂಬುದಿನ್ನೊಂದು. ಉಳಿದ ಎಲ್ಲ ಕೃತಿಗಳಲ್ಲೂ ನಮಗೆ ಕೇಳಿಬರುವುದು ಕವಿವಾಣಿ, ಸಂತವಾಣಿ; ನಮಗೆ ಮನವರಿಕೆಯಾಗುವುದು ಅವರ ಭಕ್ತಿ, ಭಾವುಕತೆ, ಪಾರವಶ್ಯತೆ. ಎರಡು ಕೃತಿಗಳಲ್ಲೂ ಶಾಸ್ತ್ರಪ್ರಕ್ರಿಯೆಗಳನ್ನೇನು ಅವರು ಅಟ್ಟಕ್ಕೆ ಏರಿಸಿಲ್ಲ. ಮೊದಲನೆಯ ಕೃತಿಯಲ್ಲಿ 'ತಾರತಮ್ಯ ಜ್ಞಾನ' ವೆಂಬ ಮಾತೇನೋ ಇದೆ. ಆದರೆ 'ಮರುದಂಶರ' (ಎಂದರೆ ಮಧ್ವಾಚಾರ್ಯರ) ಮತ ಇರುವುದು ಇಹದಲ್ಲಿ ಮತ್ತು ಪರದಲ್ಲಿ ಸುಖಕ್ಕಾಗಿ ಎಂದು ಹೇಳುವಾಗ ಅದರ ಮುಖ್ಯಾಂಶಗಳಾಗಿ 'ಸೂರಿಜನಸಂಗ', 'ಸಾರವೈರಾಗ್ಯ', 'ಅರಿವು', 'ವಿವೇಕ' ಇಷ್ಟನ್ನೇ ಎತ್ತಿ ತೋರಿಸಿದ್ದಾರೆ. ಎರಡನೆಯದು ಮಾಧ್ವಪಂಗಡದಲ್ಲಿ 'ಮಧ್ವನಾಮ'ವೆಂದೇ ಪ್ರಸಿದ್ಧವಾಗಿರುವ ಕೃತಿ. ಇದರಲ್ಲಿ ಹನುಮ-ಭೀಮ-ಮಧ್ವ ಎಂಬ ಅವತಾರತ್ರಯದ ವರ್ಣನೆಯಿದೆಯಷ್ಟೇ ವಿನಾ ಸಿದ್ಧಾಂತದ ವಿವರಗಳನ್ನಾಗಲಿ ಪರಮತನಿಂದೆಯನ್ನಾಗಲಿ ಕಾಣಲಾರೆವು. ಆದರೆ ಜಗನ್ನಾಥದಾಸರು (ವಿಜಯದಾಸರ ಶಿಷ್ಯರು) ಶ್ರೀಪಾದರಾಜರ ಉಳಿದೆಲ್ಲ ಕೃತಿಗಳನ್ನೂ ಬಿಟ್ಟು 'ಶ್ರೀಪಾದರಾಯ ಪೇಳಿದ ಮಧ್ವನಾಮ ಸಂ, ತಾಪ ಕಳೆದಖಿಳ ಸೌಖ್ಯವನೀಹುದು' ಎಂದು ಹೇಳುವ ವೇಳೆಗಾಗಲೇ ಹರಿದಾಸರ ಕೂಟದಲ್ಲಿ ಮಾಧ್ವಛಲ ಬೇರೂರಿದ್ದಿತು ಎಂದು ಹೇಳಿದೆ ಇರಲಾರೆ.

ವ್ಯಾಸತೀರ್ಥರ ಕೃತಿಗಳಲ್ಲಿಯೂ ಶ್ರೀಪಾದರಾಜರ ಮನೋಧರ್ಮವೇ ಎದ್ದುಕಾಣುತ್ತದೆ. ಅವರಿಗೆ ಮುಖ್ಯವಾಗಿದ್ದುದು ಭಕ್ತಿ, ಅದನ್ನು ಬೆಳೆಸುವ ಬಗೆ. ಯಾವ ಸಂಪ್ರದಾಯದವರಾದವರೂ ಶ್ರೀಪಾದರಾಯರ ಮತ್ತು ವ್ಯಾಸರಾಯಸ್ವಾಮಿಗಳ ಕೃತಿಗಳನ್ನು ಓದಿ, ಮನಗಂಡು ಮೆಚ್ಚಿಕೊಳ್ಳಬಹುದು. ಪುರಂದರದಾಸರೂ ಬಹುಮಟ್ಟಿಗೆ ಈ ಹಾದಿಯನ್ನೇ ತುಳಿದವರು. ಆದರೆ ಈ ಮಾತನ್ನು ನಾವು ವಿಜಯದಾಸರ ಅಥವಾ ಜಗನ್ನಾಥದಾಸರ ವಿಚಾರವಾಗಿ ಹೇಳುವಂತಿಲ್ಲ. ಅವರ ಕೃತಿಗಳು ಮಾಧ್ವಮತದಲ್ಲಿ ನಿಷ್ಠೆಯುಳ್ಳವರಿಗೆ ಮಾತ್ರ ರುಚಿಸುತ್ತವೆ. ಮುಂದಿನ ಹರಿದಾಸರ ವಿಚಾರ ಹೇಳುವುದೇನು?

ಪುರಂದರದಾಸರ ಪದಗಳಲ್ಲಿ ಮಾಧ್ವಮತನಿಷ್ಠೆ ಅವರ ಗುರುಗಳ ಮತ್ತು ಪರಮಗುರುಗಳ ಪದಗಳಲ್ಲಿರುವುದಕ್ಕಿಂತ ಹೆಚ್ಚೆಂದು ತೋರಬಹುದು. ಆದರೆ ಅವರ ರಚನೆಗಳ ಬಾಹುಳ್ಯವನ್ನು ಗಮನಿಸಿದರೆ ಮಾಧ್ವಮತದ ಪ್ರಮೇಯಗಳನ್ನು ಪ್ರಕಟವಾಗಿ ಹೇಳುವುವು ತೀರ ಕಡಮೆ. ದೊರೆತಿರುವ ಸುಮಾರು ಒಂದು ಸಾವಿರ ಕೃತಿಗಳಲ್ಲಿ ನಲವತ್ತಕ್ಕಿಂತ ಹೆಚ್ಚಾಗಿ ಇಲ್ಲ. ಇನ್ನು ಮಾಧ್ವಮತದ ಮೇಲ್ಮೆಯನ್ನು ಯಾವ ಸಂಕೋಚವೂ ಇಲ್ಲದೆ ಹಾಡಿ ಹೊಗಳುವಂಥವು ಇನ್ನೂ ಕಡಮೆ, ಹತ್ತಕ್ಕಿಂತ ಹೆಚ್ಚಿಲ್ಲ. ಇವುಗಳಲ್ಲಿ ಅವರವೇ ಎಂದು ಖಚಿತವಾಗಿ ಹೇಳಬಹುದಾದುವು ಎಷ್ಟೋ, ಬೇರೆಯವರು ರಚಿಸಿ ಅವರ ಅಂಕಿತವನ್ನು ಹಾಕಿರುವುವು ಎಷ್ಟೋ! ಅವರ ಕಾಲಕ್ಕೆ ಹತ್ತಿರದಲ್ಲೇ ಇದ್ದಿರಬಹುದಾದ 'ಗುರುಪುರಂದರವಿಠಲ', 'ಮಧ್ವಪತಿ ಪುರಂದರ ವಿಠಲ' ಎಂಬಂಕಿತದ ದಾಸರು ಮತನಿಷ್ಠೆಯನ್ನು ಮೇಲೇರಿಸಿಕೊಂಡವರು; ಅವರವೆಂಬ ರಚನೆಗಳಲ್ಲಿ ಇದು ಸ್ಪಷ್ಟವಾಗಿ ಕಾಣುತ್ತದೆ. ಅವರಿಬ್ಬರೂ ಪುರಂದರದಾಸರ ಮಕ್ಕಳೇ ಎಂಬ ನಂಬಿಕೆಯೂ ದಾಸಕೂಟದವರಲ್ಲಿದೆ; ಈ ನಂಬಿಕೆ ವಿಜಯದಾಸರ ಕಾಲಂದಿಂದೀಚೆಗೆ ಕಾಣಬರುತ್ತದೆ. ಪುರಂದರದಾಸರ ಹೆಸರಿನಲ್ಲಿರುವ ಮಾಧ್ವಮತ ನಿಷ್ಠೆಯ ಪದಗಳಲ್ಲಿ ಇವರಿಬ್ಬರ ಕೈವಾಡ ಇದ್ದೀತೆಂದು ತೋರುತ್ತದೆ.

ಸಂಪ್ರದಾಯಶರಣನಾದ ಯಾವುದೇ ವ್ಯಕ್ತಿಯಾಗಲಿ ತನ್ನ ಸಂಪ್ರದಾಯದ ಬಗ್ಗೆ ಶ್ರದ್ಧೆಯನ್ನು

ತಾಳುವುದು ಸಹಜವೇ; ಅದರಲ್ಲಿ ತಪ್ಪೇನಿಲ್ಲ. ಆದರೆ ಲೋಕೋಪಕಾರಕ್ಕೆ ಹೊರಟಾಗ (-ಹರಿದಾಸರು ಹೊರಟದ್ದು ಇದಕ್ಕೇ-) ತಮ್ಮ ಸಂಪ್ರದಾಯವನ್ನೇ ಎತ್ತಿ ಹಿಡಿದು, ಎಲ್ಲ ಜನರೂ ಅದನ್ನೇ ಹಿಡಿಯಬೇಕೆಂದು ಹಟಮಾಡುವುದು ಪ್ರಶಸ್ತವಾದ ಮನೋಧರ್ಮವಲ್ಲ. 'ಮಾನವಜನ್ಮ ದೊಡ್ಡದು' ಎಂದು ಜನರನ್ನು ಎಚ್ಚರಿಸಿದ ಪುರಂದರದಾಸರು 'ಮಾಧ್ವಜನ್ಮ ದೊಡ್ಡದು' ಎಂದು ಹೇಳಿಯಾರೆಂದು ಯಾರು ನಂಬಿಯಾರು? ತಮ್ಮ ಸಂದೇಶ ಇಡೀ ಮಾನವಕುಲಕ್ಕೆಂದು ಅವರ ಭಾವನೆ; ಅದು ಎಲ್ಲ ದೇಶಗಳಲ್ಲಿ ಎಲ್ಲ ಕಾಲಕ್ಕೂ ಎಲ್ಲರಿಗೂ ಅನ್ವಯವಾಗಬೇಕೆಂದು ಅವರ ಆಶಯ. 'ಕುಲವು ಪ್ರಾಧಾನ್ಯವಲ್ಲ ಜಲಜನಾಭನ ಭಜಿಸೆ' ಎಂದು ಹೇಳಿದವರು ಒಂದು ನಿರ್ದಿಷ್ಟ ಮತದ ಚೌಕಟ್ಟಿನಲ್ಲಿ ಅಡಗಿಗೊಂಡು ಕೂತರೆಂದು ಹೇಳುವುದು ಹೇಗೆ? ಪುರಂದರದಾಸರ ನೂರಾರು ಕೃತಿಗಳಲ್ಲಿ ಕಾಣುವ ಮನೋಧರ್ಮ ಅವರ ಕೆಲವು ಪದಗಳಲ್ಲಿ ಕಾಣುವುದಿಲ್ಲವೆಂದರೆ ಈ ಪದಗಳ ಪ್ರಾಮಾಣಿಕತೆಯನ್ನು ಕುರಿತು ಸಂಶಯ ಏಳುವುದು ಸರಿಯೇ.

ಈ ಗೋತ್ರಕ್ಕೆ ಸೇರಿದ ರಚನೆಗಳು ಕೆಲವೇ ಎಂದಾದರೂ ಅವು ಅವರವೇ ಎಂದು ದಾಸಕೂಟದವರಲ್ಲಿ ಶ್ರದ್ಧೆ. ಈ ಶ್ರದ್ಧೆಯನ್ನು ಅಲ್ಲಗಳೆಯುವಂಥ ಪುರಾವೆಗಳು ಸದ್ಯಕ್ಕೆ ನಮ್ಮ ಬತ್ತಳಿಕೆಯಲ್ಲಿಲ್ಲ! ಹಾಗೆಂದೇ ಅವನ್ನೆಲ್ಲ ನನ್ನ ಸಂಕಲನದಲ್ಲಿ ಸೇರಿಸಿದೆನು. ಸಹೃದಯರು ಅವನ್ನು ಓದುವಾಗ ಅವುಗಳ ಪ್ರಾಮಾಣಿಕತೆ ಸಂದಿಗ್ಧವಾದುದು ಎಂಬುದನ್ನು ಗಮನಿಸಬೇಕು. ಒಂದು ವೇಳೆ ಅವೆಲ್ಲ ಪುರಂದರದಾಸರವೇ ಎಂಬುದು ದಿಟವಾದರೆ, ಪುರಂದರದಾಸರನ್ನು ಮೆಚ್ಚಿಕೊಳ್ಳುವವರು ಅವನ್ನೂ ಮೆಚ್ಚಿಕೊಳ್ಳಬೇಕಾದುದಿಲ್ಲ. ಅಥವಾ ಈ ಕೆಲವು ಪದಗಳನ್ನು ರಚಿಸಿದರೆಂದು ಪುರಂದರದಾಸರ ಸಾಹಿತ್ಯವನ್ನೆಲ್ಲ ಕಸವೆಂದು ಹೊರದೂಡುವ ಕಾರಣವೂ ಇಲ್ಲ. ಈ ಪದಗಳಲ್ಲಿ ಮಧ್ವಾಚಾರ್ಯರ ಗುಣಗಾನವಿರುವುದೇನು ದೋಷವಲ್ಲ! ಮಧ್ವಾಚಾರ್ಯರು ಅವರ ಗುರುಪರಂಪರೆಗೆ ಮೂಲ; ಗುರುಸ್ತುತಿ ಯಾರಿಗಾದರೂ ಉಚಿತವಾದುದೇ, ಅಗತ್ಯವಾದುದೇ. ಆದರೆ ಪರಮತದ ನಿಂದನೆ, ಅವಹೇಳನೆ, ಖಂಡನೆ, ಇವನ್ನು ಮಾಡಲೇಬೇಕಾದ ಅಗತ್ಯವೇನು? ಅದ್ವೈತಿಗಳನ್ನು ಪರಾಭವ ಗೊಳಿಸಿದರೆಂದೇ ಮಧ್ವಾಚಾರ್ಯರ ಹಿರಿಮೆಯೆ? ಅದನ್ನು ಮತನಿಷ್ಠೆಯುಳ್ಳ ಪಂಡಿತರು ಬೇಕಿದ್ದರೆ ಎತ್ತಿ ಆಡಲಿ, ಕವಿಹೃದಯದ ಸಂತರಾದ ಹರಿದಾಸರು ಅದನ್ನು ಆಡುವುದು ಏನು ಚೆನ್ನು? ಪರಮತಖಂಡನೆ, ದೂಷಣೆಗಳಿರುವ ಪದಗಳು ಪುರಂದರದಾಸರವೇ ಆಗಿದ್ದರೆ (-ಆಗಿರಲಾರದೆಂದು ನನ್ನ ಊಹೆ-) ಪುರಂದರದಾಸರ ಹಿರಿಮೆಗೆ ಅದೊಂದು ಕುಂದು ಎಂದು ಹೇಳಬೇಕು.

ಅನಗತ್ಯವೆನಿಸಿದರೂ ಈ ವಿಚಾರವನ್ನು ಇಷ್ಟು ವಿಸ್ತಾರವಾಗಿ ಎತ್ತಿಕೊಂಡುದು ನಾಡಿನ ಆಧ್ಯಾತ್ಮಿಕವಿಕಾಸಕ್ಕೆ ಪುರಂದರದಾಸರ ಕೊಡುಗೆ ಏನು ಎಂಬುದನ್ನು ನಿರ್ಧರಿಸಲು ಇದು ನೆರವಾಗಲೆಂದು. ಪುರಂದರದಾಸರು ಇಡೀ ನಾಡಿನ (ಎಂದರೆ ಎಲ್ಲ ಮತಧರ್ಮಗಳಿಗೆ ಸಾಮಾನ್ಯವಾದ), ಎಲ್ಲ ಕಾಲದ, ಆಧ್ಯಾತ್ಮಿಕ ನೆಲೆಯಲ್ಲಿ ನಿಂತವರು; ನಮ್ಮ ಇಡೀ ಸಂಸ್ಕೃತಿಗೆ ಸಹಜವಾದ ಹಂಬಲವನ್ನು ಅವರ ಕೃತಿಗಳು ಪ್ರತಿನಿಧಿಸುತ್ತವೆ ಎಂಬುದು ಸುಳ್ಳಾದರೆ ಅವರನ್ನು ನಾಡು ನೆನೆಸಿಕೊಳ್ಳಬೇಕಾದ ಅಗತ್ಯವಿರದು! ಜನರ ನಡುವೆ ಪುರಂದರದಾಸರ ಹಿರಿಮೆ ಹರಡಿರುವುದು ಅವರ ಭಾವನೆಗಳು, ಅವರ ಬೋಧನೆ ಎಲ್ಲರ ನಿತ್ಯಜೀವನದಲ್ಲಿ ಬೆಳಕನ್ನು ನೀಡಬಲ್ಲುವು ಎಂಬ ಕಾರಣದಿಂದ. ಇದನ್ನು ಒತ್ತಿಹೇಳಲು ಮೇಲಿನ ಪ್ರಸ್ತಾಪ ಬೇಕಾಯಿತು.

೨

ಪುರಂದರದಾಸರು ಮಾಧ್ವಸಂಪ್ರದಾಯದ ಮಡಿಲಿಂದ ಎದ್ದವರು ಎಂಬುದೇನೋ ದಿಟವೇ. ಮಾಧ್ವಸಿದ್ಧಾಂತದ ಪ್ರಮೇಯಗಳು ಅವರ ಆಧ್ಯಾತ್ಮಿಕ ಜೀವನದ ದಾರಿದೀಪಗಳಾದುವು ಎಂಬುದೂ ಸರಿಯೇ. ಒಬ್ಬೊಬ್ಬರೂ ಒಂದೊಂದು ದಾರಿ ಹಿಡಿಯುವಂತೆ, ಪುರಂದರದಾಸರು ಮಧ್ವಾಚಾರ್ಯರು ತೋರಿಸಿದ ದಾರಿ ಹಿಡಿದರು; ಅದಕ್ಕೆ ಕಾರಣ ಅವರು ವ್ಯಾಸರಾಯಸ್ವಾಮಿಗಳ ಬಳಿ ದೀಕ್ಷೆಯನ್ನು ತಳೆದದ್ದು. ಇದೊಂದು ಐತಿಹಾಸಿಕ ಸಂದರ್ಭವಷ್ಟೆ. ಅವರು ಕನ್ನಡಿಗರಾಗಿದ್ದುದು ಹೇಗೋ ಹಾಗೆ; ಅವರ ಮಾತು ತಮಿಳಾಗಿದ್ದಿದ್ದರೆ ಅವರ ರಚನೆಗಳು ತಮಿಳಿನಲ್ಲಿರುತ್ತಿದ್ದುವು. ಅದರಿಂದ ಅವರ ಪ್ರತಿಭೆಗೇನು ಕೊರತೆಯೂ ಇರುತ್ತಿರಲಿಲ್ಲ, ಹೆಗ್ಗಳಿಕೆಯೂ ಇರುತ್ತಿರಲಿಲ್ಲ. ಪುರಂದರದಾಸರು ಶಾಂಕರ ಸಂಪ್ರದಾಯದ ಅಥವಾ ರಾಮಾನುಜ ಸಂಪ್ರದಾಯದ ದೀಕ್ಷೆಯನ್ನು ಪಡೆದಿದ್ದರೆ ಅವರ ಸಿದ್ಧಾಂತಪ್ರಮೇಯಗಳು ಬೇರೆಯಾಗಿರುತ್ತಿದ್ದುವು. ಸಂಪ್ರದಾಯ ಯಾವುದಿದ್ದರೂ ಅದು ತೋರಿಸುವುದು ದಾರಿಯನ್ನು, ಸಾಧನಾಮಾರ್ಗವನ್ನು. ಆಧ್ಯಾತ್ಮಿಕಚೌಕಟ್ಟು ಇಷ್ಟರಲ್ಲಿ ಮುಗಿಯುವುದಿಲ್ಲ. ಶಂಕರಾಚಾರ್ಯರ ಪ್ರಕ್ರಿಯೆಯನ್ನು ಹಿಡಿದವರಿಗೆ ಶಾಂಕರಮೋಕ್ಷ, ಮಧ್ವಾಚಾರ್ಯರ ಪ್ರಕ್ರಿಯೆಯನ್ನು ಹಿಡಿದವರಿಗೆ ಮಾಧ್ವಮೋಕ್ಷ ಎಂದೇನು ಇದೆಯೆ? ಒಂದು ಊರಿಗೆ ಹಲವಾರು ದಾರಿಗಳು; ದಾರಿಗೊಂದು ಊರು ಎನ್ನಲಾದೀತೆ?

ಪುರಂದರದಾಸರ ಆಧ್ಯಾತ್ಮಿಕ ನಿಲುವನ್ನು ಅರಿತುಕೊಳ್ಳುವಾಗ ಮಾಧ್ವಸಿದ್ಧಾಂತದ ಪ್ರಮೇಯಗಳ ಪಾತ್ರ ಇಲ್ಲದಿಲ್ಲ, ಆದರೆ ಅಲ್ಲಿ ಅದರ ಹರವು ಹೆಚ್ಚಿನದಲ್ಲ. ಯಾವುದೇ ಮತಧರ್ಮವಾಗಲಿ, ಅದರಲ್ಲಿ ಸಿದ್ಧಾಂತದ ಭಾಗ ಒಂದಿದೆ, ಸಾಧನೆಯ ಭಾಗ ಇನ್ನೊಂದಿದೆ. ಹಲವಾರು ಮತಧರ್ಮಗಳಲ್ಲಿ ಸಿದ್ಧಾಂತ ಪ್ರಮೇಯಗಳು ಬೇರೆ ಬೇರೆಯಾಗಿದ್ದ ಮಾತ್ರಕ್ಕೆ ಸಾಧನೆಗಳೂ ಬೇರೆ ಬೇರೆಯಾಗಿರಬೇಕು ಎಂಬ ನಿಯಮವೇನಿಲ್ಲ. ಸಿದ್ಧಾಂತಕ್ಕೆ ಅಂಟಿಕೊಂಡದ್ದು ವ್ಯಾಸಕೂಟ, ಸಾಧನೆಗೆ ಮನಸೋತದ್ದು ದಾಸಕೂಟ ಎಂದು ಮೇಲೆ ಹೇಳಿದೆ. ಸಿದ್ಧಾಂತವು ಸಾಧನೆಗೆ ಹಿನ್ನೆಲೆ ಎಂಬುದನ್ನು ವ್ಯಾಸಕೂಟದವರು ಮರೆತರು. ದಾಸಕೂಟ ತಲೆಯೆತ್ತಿಕೊಂಡುದು ಈ ತಪ್ಪನ್ನು ತಿದ್ದಲೆಂದೇ. ಶ್ರೀಪಾದರಾಜರೂ ವ್ಯಾಸರಾಯ ಸ್ವಾಮಿಗಳೂ ಸಿದ್ಧಾಂತ-ಸಾಧನೆ, ಪ್ರಮೇಯ-ಉಪಾಸನೆ ಎರಡನ್ನೂ ಸಮಪ್ರಧಾನವಾಗಿ ಆದರಿಸಿದವರು. ಹಾಗೆಂದೇ ವ್ಯಾಸಕೂಟದ ಕೊರತೆಯನ್ನು ದಾಸಕೂಟದಿಂದ ತುಂಬಲು ಯತ್ನಿಸಿದರು. ಹಾಗೆ ಮಾಡುವಾಗ ವ್ಯಾಸಕೂಟದಲ್ಲಿ ಮೂಡಿಕೊಂಡಿದ್ದ ಸಿದ್ಧಾಂತದ ನಿಲುವನ್ನೇ ಕೊಂಚಮಟ್ಟಿಗೆ ಮಾರ್ಪಡಿಸಿದರು. ಈ ಮಾರ್ಪಾಟನ್ನು ಅರಿತುಕೊಳ್ಳಬೇಕಾದ ಅಗತ್ಯವಿದೆ. ಏಕೆಂದರೆ ಈ ಮಾರ್ಪಾಟಿನ ಮೊದಲ ಫಲವೇ ಪುರಂದರದಾಸರು.

ಮಧ್ವಾಚಾರ್ಯರು (೧೨೩೮-೧೩೧೭) ತಾವು ಮನಗಂಡ ವೇದಾಂತಸಿದ್ಧಾಂತವನ್ನು ಪ್ರತಿಪಾದಿಸಲು ಭಾಷ್ಯ, ನಿರ್ಣಯ, ಪ್ರಕರಣ ಗ್ರಂಥಗಳನ್ನು ರಚಿಸಿದರಷ್ಟೆ. ಅವರೇನು ಈ ಸಿದ್ಧಾಂತದ ಪ್ರವರ್ತಕರಲ್ಲ; ಪ್ರಾಚೀನವಾಗಿದ್ದ ಸಿದ್ಧಾಂತವನ್ನು ಪುನರುಜ್ಜೀವನಗೊಳಿಸಿದವರು. ಅವರ ನೇರವಾದ ಶಿಷ್ಯರೇ ಕೆಲವರು (ತ್ರಿವಿಕ್ರಮ ಪಂಡಿತಾಚಾರ್ಯರು, ಪದ್ಮನಾಭತೀರ್ಥರು, ನರಹರಿತೀರ್ಥರು) ಅವರ ಗ್ರಂಥಗಳಿಗೆ ವ್ಯಾಖ್ಯಾನಗಳನ್ನು ಸಿದ್ಧಪಡಿಸಿದರು. ಆದರೆ ಮಾಧ್ವ

ಸಿದ್ಧಾಂತವನ್ನು ನಿರ್ದಿಷ್ಟವಾಗಿ, ಇತರ ಸಿದ್ಧಾಂತಗಳಿಂದ ಬೇರೆಯಾಗಿ, ತೋರುವಂತೆ ವ್ಯಾಖ್ಯಾನಗಳನ್ನು ಬರೆದವರು ಜಯತೀರ್ಥರು (ಪೀಠಾಧಿಪತ್ಯ ೧೩೬೫-೧೩೮೮). ಮಧ್ವಾಚಾರ್ಯರು ಕಣ್ಮರೆಯಾಗಿ ಸುಮಾರು ಅರ್ಧ ಶತಮಾನದವರೆಗೆ, ಜಯತೀರ್ಥರು ಕಾಣಿಸಿಕೊಳ್ಳುವವರೆಗೆ, ಪ್ರತ್ಯೇಕವಾದ ಮಾಧ್ವಪಂಥ ಎಂಬುದಿರಲಿಲ್ಲ. ಜಯತೀರ್ಥರ ಪೂರ್ವಪ್ರಸ್ಥಾನವಾದ 'ತತ್ವಪ್ರಕಾಶಿಕಾ' ಮತ್ತು ಉತ್ತರ ಪ್ರಸ್ಥಾನವಾದ 'ನ್ಯಾಯಸುಧಾ' ಇವೆರಡೂ ಗ್ರಂಥಗಳು ಕ್ರಾಂತಿಕಾರಕವಾದುವು. ಇವುಗಳಿಂದ ಮಾಧ್ವ ಸಿದ್ಧಾಂತದ ದೃಷ್ಟಿಕೋಣ ಖಚಿತವಾಯಿತೆಂದರೆ ತಪ್ಪಲ್ಲ. ಈ ಗ್ರಂಥಗಳಲ್ಲಿ ವಿಚಾರಕ್ಕೆ ಹೆಚ್ಚಿನ ಬೆಲೆ; ಉಪಾಸನೆಯ ಕಡೆ ಗಮನ ಕಡಮೆ. ಮುಂದಿನ ಮಾಧ್ವ ವೇದಾಂತದ ವಾಙ್ಮಯವೆಲ್ಲ ಜಯತೀರ್ಥರ ಜಾಡನ್ನೇ ಹಿಡಿಯಿತು. ಆದರೆ ಈ ವೇದಾಂತದಲ್ಲಿಯೂ ಬರುಬರುತ್ತ ಹಲವಾರು ಬೇರೆ ಬೇರೆ ನಿಲುವುಗಳು ಮೂಡಿಕೊಂಡುವು ಎಂಬುದು ರಾಘವೇಂದ್ರಸ್ವಾಮಿಗಳ (೧೬೨೩-೧೬೭೧) "ಪ್ರಸ್ಥಾನಭೇದ ಪ್ರೋಕ್ತಾರ್ಥ ಸಂಗ್ರಹ"ವೆಂಬ ಒಕ್ಕಣೆಯಿಂದ ('ತಂತ್ರದೀಪಿಕಾ', ಇದಕ್ಕೆ ಸೂತ್ರಾರ್ಥಸಂಗ್ರಹವೆಂಬ ಹೆಸರೂ ಇದೆ) ಸೂಚಿತವಾಗುತ್ತದೆ.

ಜಯತೀರ್ಥರ ಗ್ರಂಥಗಳಲ್ಲಿರುವ ಆಶಯವನ್ನು ಸ್ಪಷ್ಟಪಡಿಸಲು ಯತ್ನಿಸಿದವರಲ್ಲಿ ವ್ಯಾಸರಾಯಸ್ವಾಮಿಗಳು ಮುಖ್ಯರು. ಹಾಗೆಂದೇ 'ಶ್ರೀಮುಷ್ಣಮಾಹಾತ್ಮೆ'ಯಲ್ಲಿ ಮಧ್ವರು, ಜಯತೀರ್ಥರು, ವ್ಯಾಸಾರ್ಯರು ಇವರನ್ನು 'ಮುನಿತ್ರಯ'ವೆಂದು ಕರೆಯಲಾಗಿದೆ. ಜಯತೀರ್ಥರ ಕಾಲಕ್ಕೂ ವ್ಯಾಸರಾಯಸ್ವಾಮಿಗಳ ಕಾಲಕ್ಕೂ ಮತ್ತೆ ಸುಮಾರು ಒಂದು ಶತಮಾನದ ಅಂತರ. ಈ ನಡುವೆ ವಿಷ್ಣುದಾಸಾಚಾರ್ಯ (೧೩೯೦-೧೪೪೦)ರೆಂಬ ಗ್ರಂಥಕಾರರು ಖಂಡನ-ಮಂಡನಗಳ ಕಾವನ್ನು ಏರಿಸಿದ್ದರು. ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಈ ಸಿದ್ಧಾಂತಗಳು ಪರಸ್ಪರ ವಿರೋಧಿ ಬಣಗಳಾಗಿ, ಕದನಕುತೂಹಲಿಗಳಾಗಿ ಕಾಣಿಸಿಕೊಂಡುವು. ವಾದರತ್ನಾವಳಿ (ಉಪಲಬ್ಧ), ಖಂಡನಖಂಡನ, ವಿವರಣಖಂಡನ (ಎರಡೂ ಅನುಪಲಬ್ಧ) ಎಂಬ ಗ್ರಂಥಗಳನ್ನು ಬರೆದು ಖಂಡನಮಂಡನಗಳಿಗೆ ಭೂಮಿಕೆಯನ್ನು ಸಿದ್ಧಪಡಿಸಿದ ಈ ವಿಷ್ಣುದಾಸಾಚಾರ್ಯರು ಕಾಲವಾಗಿ ನಲವತ್ತು ವರ್ಷಗಳ ಮೇಲೆ ಬಂದ ವ್ಯಾಸರಾಯಸ್ವಾಮಿಗಳು ಈ ವಾದಪ್ರಸಕ್ತಿಯಿಂದ ಮುಕ್ತರಾದವರಂತೆ ಇರಲಿಲ್ಲ. ಅವರ 'ತಾತ್ಪರ್ಯಚಂದ್ರಿಕಾ' ಮತ್ತು 'ನ್ಯಾಯಾಮೃತ'ಗಳು ವಾದಗ್ರಂಥಗಳೇ; ಅವುಗಳಲ್ಲಿ ಖಂಡನಮಂಡನದ ಪ್ರಕ್ರಿಯೆ ಇದೆ. ಆದರೆ ಅವರ ಮನೋವೃತ್ತಿ ಇದಕ್ಕೆ ಅನುಕೂಲವಾಗಿರಲಿಲ್ಲ. ಈ ಗೀಳಿನಿಂದ ಬೇಗ ಪಾರಾದರು. ಸಾಧನೆಯ ಕಡೆಗೇ ಅವರ ಒಲವು ಇದ್ದುದರಿಂದ ವಾದವಿವಾದಗಳ ಹವ್ಯಾಸ ಅವರಿಗೆ ಅಷ್ಟಾಗಿ ಹಿಡಿಸಲಿಲ್ಲ. ತಮ್ಮ ಬದುಕಿನ ಕಡೆಯ ಭಾಗದಲ್ಲಿ ಅವರಿಗೆ ಸಿದ್ಧಾಂತ ಪ್ರಮೇಯಗಳ ಪ್ರತಿಪಾದನೆಗಿಂತ ಉಪಾಸನೆಯೇ ದಿಟವಾಗಿ ಮಧ್ವಾಚಾರ್ಯರ ಆಶಯ ಎಂಬುದು ಮನದಟ್ಟಾಯಿತು.

ಈ ಪರಿಸ್ಥಿತಿಯಲ್ಲೇ ಅವರು ಹರಿದಾಸರನ್ನು ಪ್ರೋತ್ಸಾಹಿಸಿದುದು; ಪುರಂದರದಾಸರನ್ನು ಮನಸಾರೆ ಮೆಚ್ಚಿಕೊಂಡುದು. ಪುರಂದರದಾಸರು ಧನ್ಯಾಸಿ ರಾಗದ ಕೀರ್ತನೆಯೊಂದರಲ್ಲಿ ತಮ್ಮ ಕಾಲದಲ್ಲಿ ವಾದವಿವಾದಗಳಲ್ಲೇ ತೊಡಗಿರುತ್ತ, ತಮ್ಮ ಸಾಧನೆಯ ಕಡೆಗೆ ಏನೇನೂ ಗಮನವನ್ನು ಹರಿಸದ ಮಾಧ್ವ ಸಂಪ್ರದಾಯದ ಗೊಡ್ಡು ಪಂಡಿತರನ್ನು ಕುರಿತು ಆಡಿರುವ ಆಕ್ರೋಶದ ಮಾತುಗಳನ್ನು ಗಮನಿಸಿ-

-ಇಂಥ ತುಡುಗಮುಂಡೇಗಂಡರಿಗಿನ್ನು ವೈಷ್ಣವ ಸಲ್ಲುವುದೆ?

ಗಡ್ಡ ಮೀಸೆ ಬೋಳಿಸಿಕೊಂಡು ಗೊಡ್ಡುನಾಮವ ತೀಡಿಕೊಂಡು
ಅಡ್ಡಾದಿಡ್ಡಿ ಮುದ್ರೆಗಳ ಬಡಿದುಕೊಂಡಿನ್ನು
ದೊಡ್ಡ ದೊಡ್ಡ ಮಾತುಗಳಾಡಿ ದೊಡ್ಡವರೆಂದ್ಹೇಳಿಕೊಂಬ
ಬಡ್ಡೀಥಗಡೀ ಮಕ್ಕಳಿಗಿನ್ನು ವೈಷ್ಣವ ಸಲ್ಲುವುದೆ?

ಭಾಗವತರನ್ನೆ ಕಂಡು ಕಂಡ್ಹಾಂಗೆ ನಿಂದೆ ಮಾಡುತ್ತ
ಸೋಗಿಲಿರುವ ಜೋಗೀ ತೊತ್ತಿನ ಮಕ್ಕಳಾದವರು
ನಾವೇ ಶ್ರೇಷ್ಠರೆಂದು ಹೇಳಿಕೊಂಡು ತಿರುಗುವಂಥ
ಗೂಗೆ ಮೋರೆ ನೀಚರಿಗಿನ್ನು ವೈಷ್ಣವ ಸ್ಲಲುವುದೆ?

ಹಿಂದೆಯೇ ಹೇಳಿದಂತೆ ದಾಸರನ್ನು ಇಷ್ಟು ಸಿಟ್ಟಿಗೆಬ್ಬಿಸಿರುವ ಹಿನ್ನೆಲೆಯ ಸಂದರ್ಭವೇನೋ ತಿಳಿಯದು! ಆದರೆ ಹೀಗೆ ಗ್ರಾಮ್ಯವಾದ ಬೈಗಳನ್ನೂ ಬೀರಲು ಹಿಂದೆ ಮುಂದೆ ನೋಡದ ಧೈರ್ಯ ವ್ಯಾಸರಾಯಸ್ವಾಮಿಗಳ ಪ್ರೋತ್ಸಾಹದಿಂದಲೇ ಬಂದಿರಬೇಕು. ದುರಾಸೆಯಿಂದ ಮಠಕ್ಕೆ ಅಂಟಿಕೊಂಡು, ತಮ್ಮ ಪಾಂಡಿತ್ಯದಿಂದ ಹೊಟ್ಟೆ ಹೊರೆದುಕೊಂಡು, ಹೃದಯಸಂಸ್ಕಾರವಿಲ್ಲದೆ ಆಚಾರಶೀಲರೆಂದೂ ಕರ್ಮಠರೆಂದೂ ಮೆರೆಯುತ್ತ ಇದ್ದ ಪಂಡಿತರೇ ದಾಸರ ಕಣ್ಣನ್ನು ಕುಕ್ಕಿದವರು. ಇಂಥವರನ್ನು ನೋಡಿಯೇ ದಾಸರ ಗುರುಗಳಾದ ವ್ಯಾಸರಾಯಸ್ವಾಮಿಗಳೂ "ಅಂತರಂಗದಲಿ ಹರಿಯ ಕಾಣದವ ಹುಟ್ಟು ಕುರುಡನೋ" ಎಂದು ಮರುಗಿದರು. ಅವರು ಕಂಠಚಾಮಿಕರನ್ಯಾಯದಿಂದ

ನಿಧಿಯ ಮೇಲಿದ್ದು ನಿಧಿಯನರಿಯದಂತೆ
ತನ್ನ ಕಂಠಮಣಿಯ ತಾ ಮರೆತಂತೆ
ಕಣ್ದೆರೆಯದ ಹುಸುಳೆ ತಾಯನರಿಯದಂತೆ
ಎನ್ನಲ್ಲಿ ಹೊಂದಿಪ್ಪ ನಿನ್ನನರಿಯದಂತೆ
ನಿನ್ನ ತೋರಿದರೆನಗೆ ನಿನ್ನ ದಾಸರು ಸಿರಿಕೃಷ್ಣ

ಎಂದು ನುಡಿದದ್ದು ಮಧ್ವಶಾಸ್ತ್ರಸಂಪನ್ನರಾದ ಗೊಡ್ಡು ಪಂಡಿತರು ಶಾಸ್ತ್ರದ ಸಾರವಾದ ಅಧ್ಯಾತ್ಮಸಾಧನೆಗೆ ಒಂದಿಷ್ಟೂ ಗಮನ ಕೊಡದಿದ್ದುದನ್ನು ಕಂಡೇ. ಗ್ರಂಥಸ್ಥವಾದ ಶಾಸ್ತ್ರಕ್ಕೂ ಬದುಕಿಗೆ ತಕ್ಕ ಸಾಧನೆಗೂ ಇದ್ದ ಅಂತರ ಅವರ ಮನಸ್ಸಿಗೆ ನಾಟಿರಬೇಕು. ಸಾಧನೆಗೆ ಒಲಿದ ಹರಿದಾಸರ ಜೊತೆಯಲ್ಲೇ ಹೆಚ್ಚು ಹೆಚ್ಚು ಕಾಲವನ್ನು ಕಳೆಯತೊಡಗಿದರೆಂದು ಈ ಪದ ಸೂಚಿಸುತ್ತದೆ-

ಹರಿದಾಸರೆಂಬ ನೆರವಿಲ್ಲದೆ ಹರಿಸೇವೆಯೆಂಬ ಪಥ ಕಾಣದೆ
ಹರಿಪದವೆಂಬ ಜನುಮ ಭೂಮಿಯ ಪರಿದು
ದೂರದಲಿ ತಪ್ಪೀಗ ಕಾಣದೆಲೆ
ಮರುಳಾದೆ ಭವಾಟವಿಯಲಿ
ಸಿರಿಪತಿ ನಿನ್ನ ಸೇರಿಸೋ ಸಿರಿಕೃಷ್ಣ

"ಹರಿದಾಸರ ಸಂಗ, ಗುರುಕರುಣೆಗಳಿಗೆ ಪ್ರತಿಯಿಲ್ಲ" ಎಂದು ಅವರು ಮನಸ್ಸಿನಲ್ಲಿ ದೃಢಮಾಡಿಕೊಂಡರು; "ಹರಿಯ ಹೆಸರಿಂದ ಬದುಕುವ ದಾಸ ನಾನು, ಸಿರಿಕೃಷ್ಣ ದಾಸರ ದಾಸ ನಾನು" ಎಂದು ಸಮಾಧಾನ ತಂದುಕೊಂಡರು. ಅವರು ತಮ್ಮ ಶಿಷ್ಯರಿಗೆ ಮಾಡಿದ ಬೋಧೆಯಲ್ಲಿ ಶಾಸ್ತ್ರವ್ಯಾಸಂಗ, ಮತಾಚಾರ ಮೊದಲಾದ ವಿವರಗಳಿಗೆ ಎಡೆಯಿಲ್ಲ-

ನಾಲಗೆಯ ಮೇಲೆ ಹರಿನಾಮ
ಎಲ್ಲರ ಮೇಲೆ ದಯಮಾಡುತಿರಬೇಕು
ಪಾಪರಹಿತನಾಗಿರಬೇಕು
ಕಾಮಲೋಭಗಳನ್ನು ತ್ಯಜಿಸಬೇಕು
ಮಧ್ವರಾಯರನ್ನು ಯಾವಾಗಲೂ ಸ್ಮರಿಸಬೇಕು
ದೊರೆತದ್ದರೊಳಗೆ ತೃಪ್ತನಾಗಿರಬೇಕು
ಪ್ರಪಂಚದಲ್ಲಿ ತೃಪ್ತಿಯಿಂದಿರಬೇಕು

ಇದು ಎಲ್ಲ ಸಾಧಕರಿಗೂ ಸಾಮಾನ್ಯ ಧರ್ಮ. ಮಧ್ವರಾಯರನ್ನು ಸ್ಮರಿಸಬೇಕೆಂಬ ಒಂದು ವಿವರವನ್ನು ಬಿಟ್ಟರೆ ಉಳಿದವು ಯಾರಿಂದಲಾದರೂ ಯಾವ ಕಾಲದಲ್ಲಾದರೂ ಗ್ರಾಹ್ಯವೇ. ತಮ್ಮ ಗುರುಪರಂಪರೆಗೆ ಮೂಲರಾದ ಮಧ್ವಾಚಾರ್ಯರನ್ನು ಸ್ಮರಿಸದೆ ಅವರು ಏನನ್ನೂ ಮಾಡುವಂತಿರಲಿಲ್ಲ. ಮಧ್ವಾರಾಯರನ್ನು ಸ್ಮರಿಸುತ್ತಲೇ ಇದ್ದ ಗೊಡ್ಡಪಂಡಿತರು ನಡೆದುಕೊಳ್ಳುತ್ತಿದ್ದ ರೀತಿಯನ್ನು ನೋಡಿ ಬೇಸತ್ತಿದ್ದ ಅವರು ಬೆಳಕಿಗಾಗಿ ಮತ್ತೊಮ್ಮೆ ಮಧ್ವಾಚಾರ್ಯರ ಗ್ರಂಥಗಳನ್ನು ನೋಡಿದ್ದರೆ ಸೋಜಿಗವಲ್ಲ. ಆಚಾರ್ಯರ ಉಪದೇಶಕ್ಕೂ ಗೊಡ್ಡು ಪಂಡಿತರ ಆಚಾರಕ್ಕೂ ಅಂತರ ಒದಗಿಬರುವುದು ಹೇಗೆಂದು ಅವರ ಕುತೂಹಲ ಕೆರಳಿರಬೇಕು.

ಸಿದ್ಧಾಂತ ಪ್ರಮೇಯಗಳಲ್ಲಿ ಪ್ರಕಟವಾಗಿ ನಿರೂಪಣೆಗೆ ಬಂದಂಥವುಗಳನ್ನು ಶಾಸ್ತ್ರಗ್ರಂಥಗಳು ಯುಕ್ತಿಯಿಂದ, ಆಗಮಪ್ರಮಾಣಗಳಿಂದ ಸಮರ್ಥಿಸುತ್ತವೆ, ವಿವರಿಸುತ್ತವೆ. ಆದರೆ ಈ ಪ್ರಮೇಯಗಳ ಪ್ರಯೋಜನವೇ ಆದ ಸಾಧನಾಭಾಗ ಅನುಭವದಿಂದ ಸಿದ್ಧವಾಗಬೇಕೇ ವಿನಾ ಯುಕ್ತಿಯಿಂದ ಅಲ್ಲ. ತಾವು ಯುಕ್ತಿಯಿಂದ ತತ್ತ್ವವನ್ನು ನಿರ್ಧರಿಸುತ್ತೇವೆ ಎಂದು ಪಂಡಿತರು ಬಗೆಯುವುದೂ 'ಸ್ವಾತಂತ್ರ್ಯ ಭ್ರಮ'ವೇ! ಅದು ಅಪರಾಧವೇ ಆಗುತ್ತದೆ. ಅದಕ್ಕಾಗಿಯೇ ಶ್ರೀಪಾದರಾಜರು "ಹರಿಯೇ ದಯೆಯಿಂದ ದಾಸ್ಯ ಭಾವವನ್ನು ಕೊಡಬೇಕೆ"ಂದು ಸೂಚಿಸಿರುವುದು. ಬುದ್ಧಿಯ ಪ್ರಖರತೆಯಿಂದ, ಪಾಂಡಿತ್ಯದಿಂದ, ವಾಕ್ಯಾರ್ಥಕೌಶಲದಿಂದ ಮುಕ್ತಿಯನ್ನು ಯಾರೂ ಪಡೆದುಕೊಳ್ಳಲಾರರು. ಶ್ರೀಪಾದರಾಜರ

'ಭಕ್ತಿ ಬೇಕು ವಿರಕ್ತಿ ಬೇಕು ಸರ್ವ ಶಕ್ತಿಬೇಕು
ಮುಕ್ತಿಯ ಮುಂದೆ ಬಯಸುವಗೆ'

ಎಂಬ ಮಾತು ವ್ಯಾಸರಾಯಸ್ವಾಮಿಗಳಿಗೆ ಮೇಲೆ ಪ್ರಭಾವವನ್ನು ಬೀರಿರಬೇಕು. ಶ್ರೀಪಾದರಾಜರಂತೆ ಅವರ ಶಿಷ್ಯ ವ್ಯಾಸರಾಯಸ್ವಾಮಿಗಳೂ ಅಂತರಂಗಸಾಧನೆಗೆ ಒಲಿದವರು; ಇದೇ ಹರಿದಾಸರಿಗೆ

ಹಿರಿಯರಿಂದ ಬಂದ ಬಳುವಳಿಯಾದದ್ದು. ಅನುಭವವೇ ಗುರಿಯಾಗಿ ಅದಕ್ಕೆ ಅನುಗುಣವಾದ ಹಂದರವನ್ನು ವ್ಯಾಸರಾಯ ಸ್ವಾಮಿಗಳು ಸಿದ್ಧಪಡಿಸಿದರು; ಹಾಗೆ ಮಾಡುವಾಗ ಸಿದ್ಧಾಂತಕ್ಕೊಂದು ಹೊಸ ತಿರುವನ್ನು ಕೊಡಬೇಕಾಯಿತು. ಅವರು ಕೊಟ್ಟ ತಿರುವು ಮುಂದೆ ಹರಿದಾಸರಿಗೆ ಪಾಥೇಯವಾಯಿತು; ಪ್ರಕೃತ, ಪುರಂದರದಾಸರ ಆಧ್ಯಾತ್ಮಿಕನಿಲುವಿಗೆ ಅದೇ ಒಂದು ಚೌಕಟ್ಟಾಯಿತು. ದಾಸಕೂಟದ ವೈಶಿಷ್ಟ್ಯವನ್ನೂ, ವಿಶಿಷ್ಟಸಾಧನೆಯನ್ನೂ ಅರಿತುಕೊಳ್ಳಬೇಕಾದರೆ ಇದನ್ನು ಗಮನಕ್ಕೆ ತಂದುಕೊಳ್ಳಬೇಕು. ದಾಸಕೂಟದ 'ಮಾಧ್ವನಿಷ್ಠೆ'ಗೂ ವ್ಯಾಸಕೂಟದ 'ಮಾಧ್ವನಿಷ್ಠೆ'ಗೂ ಇರುವ ಅಂತರವೇ ಅವೆರಡರ ನಡುವೆ ಸೆಣಸಾಟವನ್ನು ತಂದೊಡ್ಡಿತು. ಎರಡೂ ನಿಷ್ಠೆಗಳಿಗೆ ಮೂಲ ಪ್ರಮೇಯಗಳು ಸಮನಾದರೂ ಅವುಗಳ ಅನ್ವಯದಲ್ಲಿ, ಒತ್ತಿನಲ್ಲಿ, ವಿವರಣೆಯಲ್ಲಿ ಗಮನಾರ್ಹವಾದ ವ್ಯತ್ಯಾಸವಿದೆ.

೩

ಇದಕ್ಕೆ ಐತಿಹಾಸಿಕ ಸಂದರ್ಭವೂ ನೆರವಾಯಿತು. ಶ್ರೀಪಾದರಾಜರೂ ವ್ಯಾಸ ರಾಯಸ್ವಾಮಿಗಳೂ ಪುರಂದರದಾಸರೂ ಬದುಕಿ ಬಾಳಿದ ಕಾಲದಲ್ಲಿ ದೇಶದಲ್ಲೆಲ್ಲ ಭಕ್ತಿಯ ಹೆಗ್ಗಳಿಕೆ ಒದಗಿದ್ದಿತು. ಈ ಮೂವರು ಇದ್ದ ದೇಶ ಕನ್ನಡ-ಮರಾಠೀ ಪ್ರಾಂತ್ಯಗಳು. ಈ ಪ್ರಾಂತ್ಯಗಳಲ್ಲಿ ನಾಥಪಂಥ, ಮಹಾನುಭಾವಪಂಥ, ವಾರಕರೀ ಪಂಥಗಳು ಜಯಪ್ರಿಯವಾಗಿದ್ದುವು. ನಾಥ ಪಂಥಕ್ಕೆ ಸೇರಿದ ಮುಕುಂದರಾಜನ 'ವಿವೇಕಸಿಂಧು', 'ಪರಮಾಮೃತ'ಗಳು ಬಳಕೆಯಲ್ಲಿದ್ದುವು. ಮಹಾನುಭಾವಪಂಥದ ಪ್ರವರ್ತಕನಾದ ಚಕ್ರಧರ (೧೨೬೩ರಿಂದ ಮುಂದೆ) ಕೃಷ್ಣಭಕ್ತಿಯನ್ನು ಅಲ್ಲೆಲ್ಲ ಹರಡಿದ್ದ. ಈ ಪರಂಪರೆಯ ಕೇಶವಾನಂದ ಸೂರಿಯ ವಚನಸಾಹಿತ್ಯ ಜನರ ಬಾಯಲ್ಲಿ ನಿಂತಿತು. ಚಕ್ರಧರನ ಸೇವಿಕೆಯಾಗಿದ್ದ ಮಹದಂಬೆ ಕೃಷ್ಣನ ವಿವಾಹವನ್ನು ಕುರಿತು ಬರೆದ ಶೃಂಗಾರರಚನೆಗಳನ್ನು ಜನ ಮೆಚ್ಚಿಕೊಂಡರು. ಸಂತ ಜ್ಞಾನೇಶ್ವರನ ಕಾಲದಲ್ಲಿ ಬಲಗೊಂಡ ವಾರಕರೀ ಸಂಪ್ರದಾಯ (ಪಂಢರಪುರದ ಯಾತ್ರೆಗೆ 'ವಾರೀ'ಎಂದು ಹೆಸರು ; ಅದನ್ನು ಕೈಗೊಳ್ಳುವವರು ವಾರೀಕರಿಗಳು, ವಾರಕರಿಗಳು) ಪಂಢರಪುರದ ಪಾಂಡುರಂಗವಿಟ್ಠಲನನ್ನು ಕೃಷ್ಣಭಕ್ತಿಯ ಕೇಂದ್ರವನ್ನಾಗಿ ಮಾಡಿಕೊಂಡಿತು. ಜ್ಞಾನೇಶ್ವರನ ಶಿಷ್ಯ ನಾಮದೇವ-ಸಿಂಪಿ (೧೨೭೦-೧೩೫೦) ಅಧ್ಯಾತ್ಮ ಸಾಧಕರಲ್ಲಿ ಅಗ್ರಗಣ್ಯನೆನಿಸಿದ; ಅವನ ಪ್ರಭಾವ ನಾಲ್ಕೂ ಕಡೆ ಹರಡಿತು. ಅವನು ಕಾಲವಾಗಿ ಇನ್ನೂರು ವರ್ಷಗಳು ಕಳೆಯಲು ಕಾಣಿಸಿಕೊಂಡ ಏಕನಾಥನೆಂಬ ಸಂತನೂ ಪ್ರಭಾವಶಾಲಿಯೇ. ಇವರಿಂದ ಏಕಾದಶಿಯ ಹಿರಿಮೆ, ಚಕ್ರಾದಿಮುದ್ರೆಗಳ ಅಗತ್ಯ, ಚಂದನ-ತುಳಸೀಮಾಲೆಗಳ ಸ್ವಾರಸ್ಯ ಇವೆಲ್ಲ ವೈಷ್ಣವ ಜನರಲ್ಲೆಲ್ಲ ವಾಡಿಕೆಗೆ ಬಂದವು. ನಾಮದೇವನ ಸಮಕಾಲಿಕರಾದ ಮಧ್ವಾಚಾರ್ಯರು (೧೨೩೮-೧೩೧೭) ವಿಷ್ಣುಭಕ್ತಿಯ ಹೆಗ್ಗಳಿಕೆಯನ್ನು ಶ್ರುತಿಸ್ಮೃತೀತಿಹಾಸ ಪುರಾಣಗಳಿಂದ ಸಿದ್ಧಪಡಿಸಿದರು.

ಇವೆಲ್ಲ ಒಂದೇ ನದಿಯ ಹಲವು ಸೀಳುಗಳು. ಈ ಕಾಲದಲ್ಲಿ ಜನರ ಆಸಕ್ತಿಯನ್ನು ಸೂರೆಗೊಂಡದ್ದು ಭಕ್ತಿಯ ಸಾಧನೆ; ಅದರಲ್ಲೂ 'ನ್ಯಾಯಸುಧಾವಾಗ್ವಜ್ರ'ವೆಂಬ ಶಾಸ್ತ್ರಪ್ರಕರಣ

ಗ್ರಂಥವನ್ನು ಬರೆದು ಪಾಂಡಿತ್ಯ ಪ್ರೌಢಿಮೆಯನ್ನು ಯಶಸ್ಸನ್ನು ಪಡೆದು ಮಠಾಧಿಪತಿಗಳೂ ಆಗಿದ್ದ ಶ್ರೀಪಾದರಾಜರು "ನೆನಹಿನಾತುರ ಕೊಟ್ಟು ದಾಸನೆಂದೆನಿಸಯ್ಯ" ಎಂಬ ಭಾವವನ್ನು ಹೊರ ಹೊಮ್ಮಿಸಿದರೆ ಅದು ಆ ಯುಗಧರ್ಮದ ಪ್ರಭಾವವನ್ನು ಸೂಚಿಸುತ್ತದೆ; ಇದು ಕೇವಲ ವ್ಯಾಸಕೂಟದ ಪ್ರಕಾರಕ್ಕೆ ಸೇರಿದ 'ಮಾಧ್ವನಿಷ್ಠೆ'ಯಿಂದ ಹೊರಬಂದದ್ದಲ್ಲ. ಅವರಿಗಿಂತ ಪ್ರಭಾವಶಾಲಿಗಳೂ, ಉದ್ದಾಮ ಪಂಡಿತರೂ, ಗ್ರಂಥಕಾರರೂ, ವಿಜಯನಗರದ ಅರಸನ ಗುರುಗಳೂ ಮಠಾಧಿಪತಿಗಳೂ ಆಗಿದ್ದ ವ್ಯಾಸರಾಯಸ್ವಾಮಿಗಳು "ಸಿರಿಕೃಷ್ಣದಾಸರ ದಾಸ ನಾನು" ಎಂದು ಹೇಳಿದಾಗ ಮತ್ತೆ ಈ ಯುಗಧರ್ಮದ ಪ್ರಭಾವವನ್ನೇ ನಾವು ಗುರುತಿಸಬೇಕು. ಯುಗಧರ್ಮದ ಈ ಪ್ರಭಾವವನ್ನು ಅಳವಡಿಸಿಕೊಂಡು ವ್ಯಾಸರಾಯಸ್ವಾಮಿಗಳು ಮಾಧ್ವಸಿದ್ಧಾಂತದ ಮೂಲಪ್ರಮೇಯಗಳಿಗೆ ಹೊಸದೊಂದು ರೂಪವನ್ನು ಒದಗಿಸಿದರು. ಇದು ದಾಸಕೂಟದ 'ಮಾಧ್ವನಿಷ್ಠೆ'ಗೆ ಮೂಲ ಸಾಮಗ್ರಿಯಾಯಿತು.

ಈ ಘಟ್ಟದಲ್ಲಿ, ಮಧ್ವಾಚಾರ್ಯರ 'ತಂತ್ರಸಾರಸಂಗ್ರಹ'ವೆಂಬ ಗ್ರಂಥ ಮುಖ್ಯವಾಯಿತು. ಅಲ್ಲಿಯವರೆಗೆ ಇದು 'ಸರ್ವಮೂಲ' ಗ್ರಂಥಗಳಲ್ಲಿ ಸೇರಿದ್ದರೂ, ಪಂಡಿತರ ಗಮನವನ್ನು ಅಷ್ಟಾಗಿ ಸೆಳೆದಿರಲಿಲ್ಲ; ಈಗಲೂ ಮಾಧ್ವ ಪಂಡಿತಮಂಡಲದಲ್ಲಿ ಇದಕ್ಕಿರುವ ಪ್ರಾಶಸ್ತ್ಯ ಅಷ್ಟಕ್ಕಷ್ಟೇ. ಬ್ರಹ್ಮಸೂತ್ರಗಳ ಮೇಲೆ ಮಧ್ವಾಚಾರ್ಯರು ಬರೆದ ನಾಲ್ಕು ಗ್ರಂಥಗಳಿಗೇ (ಅದರಲ್ಲಿಯೂ ಅನುವ್ಯಾಖ್ಯಾನಕ್ಕೆ) ವ್ಯಾಸಕೂಟದಲ್ಲಿ ಅಗ್ರಪಟ್ಟ, ಅವರ 'ಮಾಧ್ವನಿಷ್ಠೆ'ಯೆಲ್ಲ ಹೆಚ್ಚೂ ಕಡಮೆ ಇಷ್ಟಕ್ಕೇ ಸೀಮಿತ. ಆದರೆ ಸಾಧನೆಯ ನಿರ್ದಿಷ್ಟ ವಿವರಗಳು ಬಂದಿರುವುದು ಆಚಾರ್ಯರ 'ತಂತ್ರಸಾರ ಸಂಗ್ರಹ'ದಲ್ಲಿಯೇ. ಅದರ ಕಡೆಗೆ ಮಧ್ವಾಚಾರ್ಯರ ಕಾಲದಲ್ಲೇ ಇದ್ದ ತ್ರಿವಿಕ್ರಮ ಪಂಡಿತಾಚಾರ್ಯ ರಾಗಲಿ, ನಾರಾಯಣ ಪಂಡಿತಾಚಾರ್ಯರಾಗಲಿ, ಪದ್ಮನಾಭತೀರ್ಥರಾಗಲಿ, ನರಹರಿತೀರ್ಥರಾಗಲಿ ಗಮನವನ್ನು ಹರಿಸಲಿಲ್ಲ. ಮುಂದೆ ಮಧ್ವಾಚಾರ್ಯರ ತತ್ತ್ವವಾದವನ್ನು ಸಿದ್ಧಾಂತದ ನೆಲೆಗೇರಿಸಿದ ಮತ್ತು ಮಧ್ವಾಚಾರ್ಯರ ಹಲವಾರು ಗ್ರಂಥಗಳ ಮೇಲೆ ಟೀಕೆಗಳನ್ನು ಬರೆದು ಟೀಕಾಚಾರ್ಯರೆಂದು ಹೆಸರಾದ ಜಯತೀರ್ಥರೂ ಈ ಗ್ರಂಥವನ್ನು ಅಷ್ಟಾಗಿ ಎತ್ತಿಕೊಳ್ಳಲಿಲ್ಲ. ಇದಕ್ಕೆ ಸುಮಾರು ವಿಸ್ತಾರವಾದ ವ್ಯಾಖ್ಯಾನ ಮೊಟ್ಟಮೊದಲು, ಅದೇ ಕಟ್ಟಕಡೆಗೆ, ಸಿದ್ಧವಾದದ್ದು ಶೇಷಚಂದ್ರಿಕಾಚಾರ್ಯರೆಂದು ಹೆಸರಾದ ರಘುನಾಥತೀರ್ಥರಿಂದ (೧೬೯೫-೧೭೪೨). ಇವರು ವ್ಯಾಸರಾಯಸ್ವಾಮಿಗಳ ಪರಂಪರೆಯಲ್ಲೇ ಬಂದವರು. ಈ ಗ್ರಂಥಕ್ಕೆ ಇತರ ಟೀಕಾಗ್ರಂಥಗಳಿದ್ದರೂ, ಅವೆಲ್ಲ ಅಪ್ರಖ್ಯಾತ ಪಂಡಿತರಿಂದ. ವ್ಯಾಸರಾಯಸ್ವಾಮಿಗಳ ಸಂಸ್ಕೃತ ಗ್ರಂಥಗಳು ಜಯತೀರ್ಥರು ತೋರಿಸಿದ ದಾರಿಯನ್ನೇ ಹಿಡಿದವು. ಅವರ ಗಮನ 'ತಂತ್ರಸಾರಸಂಗ್ರಹ'ದ ಕಡೆಗೆ ಹೋದದ್ದು ಅವರು ಸಂಸ್ಕೃತ ಗ್ರಂಥರಚನೆಯನ್ನು ಬಿಟ್ಟಮೇಲೆ ಎಂದು ತೋರುತ್ತದೆ. ಈ ಗ್ರಂಥದ ಪ್ರಭಾವವನ್ನು ಅವರ ಕನ್ನಡ ಪದಗಳಲ್ಲೂ, ಪುರಂದರದಾಸರ ಕೃತಿಗಳಲ್ಲೂ ನಾವು ಗುರುತಿಸಬಹುದು.

'ತಂತ್ರಸಾರಸಂಗ್ರಹ'ವು ದಾಸಕೂಟದಲ್ಲಿ ಹೆಚ್ಚಾಗಿ ಮಾನ್ಯವಾಯಿತು ಎಂಬುದಕ್ಕೆ ಇನ್ನೂ ನಿದರ್ಶನ ಬೇಕಿದ್ದರೆ ವಿಜಯದಾಸರ 'ಕಂಕಣಾಕಾರ' ಸುಳಾದಿಯನ್ನು ನೋಡಬೇಕು. ಮಧ್ವಾಚಾರ್ಯರು 'ತಂತ್ರಸಾರಸಂಗ್ರಹ'ದಲ್ಲಿ ಚಕ್ರಾಬ್ಜಮಂಡಲದ ಉಪಾಸನೆಯನ್ನು ಉಲ್ಲೇಖಿಸಿದ್ದಾರೆ; ಅದನ್ನು ಮೊಟ್ಟ ಮೊದಲು ಗಮನಿಸಿ, ಅದರ ವಿಸ್ತೃತವಾದ ವಿವರಣೆಯನ್ನು ಒದಗಿಸಿದವರು ವಿಜಯದಾಸರು

ಮತ್ತು ಅವರ ಶಿಷ್ಯ ಗೋಪಾಲದಾಸರು. ಈ ಉಪಾಸನೆಯಲ್ಲಿ ತಾಂತ್ರಿಕ ಪ್ರಕ್ರಿಯೆಗಳೂ, ಯೋಗ ವಿಧಾನಗಳೂ ವಿಶೇಷವಾಗಿ ಬರುತ್ತವೆ. ಹರಿದಾಸರ ಆಧ್ಯಾತ್ಮಿಕ ನಿಲುವು, ಸಾಧನಾ ಭಾಗ ಸ್ಪಷ್ಟವಾಗುವುದು ಇಲ್ಲಿಯೇ. ವ್ಯಾಸಕೂಟದ 'ಮಾಧ್ವನಿಷ್ಠೆ'ಯು ಸೂತ್ರ ಭಾಷ್ಯಗ್ರಂಥಗಳ ಜಾಡನ್ನು ಹಿಡಿದರೆ, ದಾಸಕೂಟದ 'ಮಾಧ್ವನಿಷ್ಠೆ'ಯು ತಂತ್ರಸಾರ ಸಂಗ್ರಹದ ಜಾಡನ್ನು ಹಿಡಿಯುತ್ತದೆ ಎಂದು ಹೇಳಿದರೆ ತಪ್ಪಾಗದು. 'ತಂತ್ರಸಾರ ಸಂಗ್ರಹ'ವು ಉಪಾಸನೆಗಾಗಿಯೇ ಸಿದ್ಧವಾದ ಗ್ರಂಥ; ಇದರಲ್ಲಿ ಪಾಂಚರಾತಾಗ್ರಮದ ಪ್ರಭಾವವಿದ್ದು ಮಂಡಲ, ಯೋಗ ವಿಧಿ, ಅರ್ಚನೆ, ಪ್ರತಿಮೆ, ಕ್ಷೇತ್ರ, ಧ್ಯಾನ, ಜಪ ಮೊದಲಾದ ಸಾಮಾನ್ಯ ವಿವರಗಳು ಇರುವುದರಿಂದ, ಮೂಲಭೂತವಾದ ಮತ್ತು ವಿಶಿಷ್ಟವಾದ ಪ್ರಮೇಯಗಳ ಕಟ್ಟುಪಾಡು ಕಡಮೆ. ಇದು ಯಾವ ಸಂಪ್ರದಾಯದ ಸಾಧಕನಿಗಾದರೂ ಉಪಯುಕ್ತವಾದ ಗ್ರಂಥ. ಹರಿದಾಸರ ಧೋರಣೆ ಉದಾರವಾದುದು ಹೀಗೆ.

೪

'ತಂತ್ರಸಾರಸಂಗ್ರಹ'ದಲ್ಲಿ ಹಾಸುಹೊಕ್ಕಾಗಿ ಬರುವ ವಿಚಾರವೆಂದರೆ ಉಪಾಸನೆ, ಅದರ ಪ್ರಕಾರಗಳು, ವಿಧಿಗಳು. ಮಾಧ್ವಸಂಪ್ರದಾಯದ ಉಪಾಸನೆಯನ್ನು 'ಬಿಂಬೋಪಾಸನೆ'ಯೆಂದು ಗುರುತಿಸಬಹುದು. ಈ ಉಪಾಸನೆಯ ಗೊತ್ತುಗುರಿಗಳನ್ನು, ನೆಲೆಹಿನ್ನೆಲೆಗಳನ್ನು ಪ್ರಕಟಪಡಿಸಿದವರು ಹರಿದಾಸರು. ಶ್ರೀಪಾದರಾಜರ, ವ್ಯಾಸರಾಯಸ್ವಾಮಿಗಳ, ಮತ್ತು ಪುರಂದರದಾಸರ ರಚನೆಗಳಲ್ಲಿ ಇದು ಮಧ್ವಾಚಾರ್ಯರ ಗ್ರಂಥಕ್ಕೆ ಸಂಬಂಧಿಸಿದುದೆಂದು ಪ್ರಕಟವಾಗಿ ತೋರಿಕೊಳ್ಳುವುದಿಲ್ಲ. ವಾದಿರಾಜರು, ವಿಜಯದಾಸರು ಅವರನಂತರ ಬಂದ ಹರಿದಾಸರು ತಮ್ಮ ರಚನೆಗಳಲ್ಲಿ ಈ ನಂಟನ್ನು ಸ್ಪಷ್ಟವಾಗಿ ಕಾಣಿಸಿದ್ದಾರೆ; ಶಾಸ್ತ್ರಪ್ರಕ್ರಿಯೆಗಳನ್ನು ಬಳಸಿಕೊಂಡಿದ್ದಾರೆ. ಪಂಡಿತರೊಂದಿಗೆ ಸೇರಿ, ಅವರಿಂದ ಮಾನ್ಯರಾಗಬೇಕೆಂಬ ಚಪಲ ದಾಸಕೂಟದಲ್ಲಿ ವಿಜಯದಾಸರ ನಂತರ ಒದಗಿತೆಂದು ಮೊದಲೇ ಸೂಚಿಸಿದ್ದೇನೆ. ಅದು ಹೇಗಾದರಿರಲಿ, ಬಿಂಬೋಪಾಸನೆಯ ಸ್ವಾರಸ್ಯವನ್ನು ಸ್ವಲ್ಪಮಟ್ಟಿಗೆ ಇಲ್ಲಿ ನಾವು ಪರಿಗಣಿಸಬೇಕಾಗುತ್ತದೆ.

ವ್ಯಾಸರಾಯಸ್ವಾಮಿಗಳು ಸಿದ್ಧಾಂತದ ಮುಖ್ಯ, ಮೂಲ ಪ್ರಮೇಯಗಳನ್ನು ಒಂದು ಪ್ರಸಿದ್ಧವಾದ ಶ್ಲೋಕದಲ್ಲಿ ಸಂಗ್ರಹಿಸಿದ್ದಾರೆ-

ಶ್ರೀಮನ್ಮಧ್ವಮತೇ ಹರಿಃ ಪರತರಃ ಸತ್ಯಂ ಜಗತ್ತತ್ತ್ವತೋ
ಭೇದಾ ಜೀವಗಣಾ ಹರೇರನುಚರಾಃ ನೀಚೋಚ್ಚಭಾವಂ ಗತಾಃ।
ಮುಕ್ತಿರ್ನೈಜಸುಖಾನುಭೂತಿರಮಲಾ ಭಕ್ತಿಶ್ಚ ತತ್ಸಾಧನಂ
ಹ್ಯಕ್ಷಾದಿತ್ರಿತಯಂ ಪ್ರಮಾಣಮಖಿಲಾಮ್ನಾಯೈಕವೇದ್ಯೋ ಹರಿಃ॥

'ಪ್ರಮೇಯ ರತ್ನಾವಳಿ'ಯ ಈ ಶ್ಲೋಕದ ತಾತ್ಪರ್ಯ ಇದು. ಮಧ್ವಾಚಾರ್ಯರು ಪ್ರತಿಪಾದಿಸಿದ ತತ್ತ್ವವಾದದಲ್ಲಿ ಹರಿಯು (ಪರಮಾತ್ಮ, ಪರಬ್ರಹ್ಮ, ನಾರಾಯಣ) ಸ್ವತಂತ್ರ, ಸರ್ವೋತ್ತಮ, ಸರ್ವನಿಯಾಮಕ, ಸರ್ವಾತ್ಮಕ; 'ಏಕಮೇವ, ಅದ್ವಿತೀಯ'. ಜೀವರು ಅಸಂಖ್ಯಾತರು, ಅವರು ಹರಿಗೆ ಪರಾಧೀನರೇ; ಅವರಲ್ಲಿ ಅವರವರ ಸ್ವರೂಪ, ಯೋಗ್ಯತೆಗಳನ್ನನುಸರಿಸಿ, ತರತಮಭಾವವಿದೆ.

ಎಲ್ಲ ಜೀವರೂ ಉತ್ತಮ, ಮಧ್ಯಮ, ಅಧಮ ಎಂಬ ಮೂರು ವರ್ಗಕ್ಕೆ ಸೇರಿದವರು (ಜೀವತ್ರೈವಿಧ್ಯ); ಈ ವಿಭಾಗ ಸಾತ್ತ್ವಿಕ, ರಾಜಸ, ತಾಮಸ ಗುಣಗಳನ್ನು ಅವಲಂಬಿಸಿದ್ದು; ಜಾತಿ, ಕುಲ, ಮತ, ಧನ ಮೊದಲಾದುವನ್ನಲ್ಲ. ಜಡ-ಜೀವಗಳಿಂದ ಕೂಡಿರುವ ಜಗತ್ತು ಪ್ರವಾಹಸತ್ಯವಾದುದು; ಆದರೆ ಪರಮಾತ್ಮನಂತೆ ಸ್ವತಂತ್ರವಾದ ಸತ್ಯವಲ್ಲ. ಪರಮಾತ್ಮನಿಂದಲೆ ಅದರ ಸೃಷ್ಟಿ, ಸ್ಥಿತಿ, ಸಂಹಾರ, ನಿಯಮನ. ಜೀವನಂತೆ ಜಗತ್ತೂ ಅಸ್ವತಂತ್ರ ತತ್ತ್ವ. ಜೀವನು ತನ್ನ ಮೂಲ ರೂಪವನ್ನು (ಸತ್, ಚಿತ್, ಆನಂದ) ಮುಚ್ಚುವ ಅಜ್ಞಾನವನ್ನು ಕಳೆದುಕೊಂಡು, ತನ್ನ ದಿಟವಾದ ರೂಪವನ್ನು ಮರಳಿ ಪಡೆದುಕೊಳ್ಳುವುದು ಮುಕ್ತಿ. ಇದಕ್ಕೆ ಸಾಧನ 'ಅಮಲಭಕ್ತಿ', ಪ್ರತ್ಯಕ್ಷ ಅನುಮಾನ ಮತ್ತು ಆಗಮ ಎಂಬ ಮೂರು ಪ್ರಮಾಣಗಳು. ಪರಮಾತ್ಮನನ್ನು ಪ್ರತ್ಯಕ್ಷದಿಂದ ಅಥವಾ ಅನುಮಾನದಿಂದ ಸಿದ್ಧಪಡಿಸಲಾಗದು; ಈ ವಿಚಾರದಲ್ಲಿ ಆಗಮ (ಎಂದರೆ ವೇದ, ಶ್ರುತಿ) ಒಂದೇ ಪ್ರಮಾಣ.

ಈಗ ಮಾಧ್ವಸಿದ್ಧಾಂತದಲ್ಲಿ ಅತಿಮುಖ್ಯ ವಿಚಾರಗಳೆನಿಸಿದ ದೇವತಾ ತಾರತಮ್ಯವಾಗಲಿ, ಪಂಚಭೇದವಾಗಲಿ ಇಲ್ಲಿ ಸ್ಪಷ್ಟ ಉಲ್ಲೇಖಕ್ಕೆ ಬಂದಿಲ್ಲವೆಂಬುದನ್ನು ಗಮನಿಸಬೇಕು. ವ್ಯಾಸರಾಯಸ್ವಾಮಿಗಳಿಗೆ ಅವು ಅಷ್ಟು ಮುಖ್ಯವಾದ ವಿವರಗಳೆಂದು ತೋರಲಿಲ್ಲ. ಅವರ ಕನ್ನಡ ಕೃತಿಗಳಲ್ಲೂ ಇವೆರಡರ ಮೇಲಾಟವಿರದು. ಪುರಂದರದಾಸರ ಕೃತಿಗಳಲ್ಲೇನೋ ಕೆಲವೆಡೆ ಇವು ಪ್ರಸ್ತಾಪಕ್ಕೆ ಬಂದಿವೆಯೆನ್ನಿ. ಆದರೆ ಮುಂದೆ ದಾಸಸಾಹಿತ್ಯದಲ್ಲಿ ಇವು ತುಂಬ ಪ್ರಧಾನವಾದ ವಿಚಾರಗಳಾದುವು. ಅದಿರಲಿ, ಈಗ ನಮಗೆ ಪ್ರಸ್ತುತವಾದವು ಪರಮಾತ್ಮನ ಸರ್ವೋತ್ತಮತ್ವ, ಜೀವಾತ್ಮರ ಸ್ವರೂಪ ಮತ್ತು ಮುಕ್ತಿಯ ಸಾಧನೆ ಈ ವಿವರಗಳು. ಇವೆಲ್ಲ ಪ್ರಮೇಯಗಳೂ ಮಾಧ್ವಸಿದ್ಧಾಂತದಲ್ಲಿ ಏನೊಂದು ಭಿನ್ನಾಭಿಪ್ರಾಯವಿಲ್ಲದೆ ಅಂಗೀಕೃತವಾಗಿವೆ. ಆದರೆ ಈ ವಿವರಗಳಲ್ಲಿರುವ ಪರಸ್ಪರ ಸಂಬಂಧವನ್ನು ಕುರಿತಂತೆ ಪ್ರಸ್ಥಾನಭೇದವಿದೆ. ನಾವಿಲ್ಲಿ ವ್ಯಾಸರಾಯಸ್ವಾಮಿಗಳ ಕೃತಿಗಳಲ್ಲಿ ಕಾಣಸಿಗುವ ಧೋರಣೆಯನ್ನು ಮಾತ್ರ ಪರಿಶೀಲಿಸಬೇಕು; ಏಕೆಂದರೆ ಅದೇ ಪುರಂದರದಾಸರ ನಿಲುವು.

ವ್ಯಾಸರಾಯಸ್ವಾಮಿಗಳ ಸುಳಾದಿಯೊಂದರಲ್ಲಿ ಬರುವ ಈ ಮಾತುಗಳನ್ನು ಮೊದಲು ಎತ್ತಿಕೊಳ್ಳುತ್ತೇನೆ, ಏಕೆಂದರೆ ಇದು ಸಾಧನೆಯ ಆಗತ್ಯವನ್ನು ಹೇಳುವ ಮೊದಲು ಪರಿಶೀಲಿಸಬೇಕಾದ ವಿವರ.

ಚೈತನ್ಯವೆಂದರೆ ಅಣುವಾಗಿದ್ದರೂ ದೀಪದಂತೆ ತಾನೇ ತನ್ನನ್ನು ಬೆಳಗಿಸಿ, ಬಳಿಯಲ್ಲಿರುವ ವಿಷಯಗಳನ್ನೂ ಬೆಳಗಿಸುವ, ಎಂದರೆ ಸಂಪರ್ಕಕ್ಕೆ ಬಂದ ವಿಷಯಗಳನ್ನು ಅನುಭವಿಸುವ, ಶಕ್ತಿ. ಚೇತನಗಳಲ್ಲಿ ಎರಡು ಬಗೆ. ಒಂದು ಪರಮಾತ್ಮ (ಸರ್ವ ನಿಯಾಮಕ, ಈಶ್ವರ; ಲಕ್ಷ್ಮಿಯೂ ಈ ಬಗೆಯಲ್ಲೇ ಸೇರುವಳು), ಮತ್ತೊಂದು ಅನಂತವಾದ ಜೀವರಾಶಿ. ಜೀವವೆನ್ನುವ ಬಗೆಯಲ್ಲಿ ದೇವತೆಗಳು, ಗಂಧರ್ವರು, ಅಸುರರು, ಋಷಿಗಳು, ಪಿತೃಗಳು, ಮನುಷ್ಯೋತ್ತಮರು, ಮನುಷ್ಯರು, ಜಂಗಮ ಪ್ರಾಣಿಗಳು, ಸ್ಥಾವರ ಪ್ರಾಣಿಗಳು (ಮರ-ಗಿಡಗಳು) ತಾರತಮ್ಯ ಕ್ರಮದಿಂದ ಸೇರುತ್ತಾರೆ (ನೋಡಿ ತಾರತಮ್ಯಸ್ತೋತ್ರ). ಇವರಲ್ಲಿ ವಾಯು (ಮುಖ್ಯಪ್ರಾಣ, ಮಾರುತಿ, ಹನುಮ) ಜೀವೋತ್ತಮ; ಜೀವಕೋಟಿಯಲ್ಲಿ ಪರಮಾತ್ಮನಿಗೆ ತುಂಬ ಹತ್ತಿರದ ಚೇತನ. ಪರಮಾತ್ಮನೊಬ್ಬ ಸ್ವತಂತ್ರ; ಜೀವರೆಲ್ಲ ಅಸ್ವತಂತ್ರರು.

ಜೀವರ ಸ್ವರೂಪಗುಣಗಳು ನಿತ್ಯ, ಅಣು, ಅಸ್ವತಂತ್ರ (ಸ್ವರೂಪ ಎಂದರೆ ತನ್ನ ಇರವು, ಪ್ರಮಿತಿ ಎಂದರೆ ಅರಿವು, ಪ್ರವೃತ್ತಿ ಎಂದರೆ ಕೆಲಸ ಮೂರೂ ಪ್ರಕಾರಗಳಲ್ಲಿ ಪರಮಾತ್ಮನಿಗೆ ಅಧೀನ), ಅಲ್ಪಜ್ಞ(ಪರಮಾತ್ಮನೊಬ್ಬ ಸರ್ವಜ್ಞ, ಜೀವರೆಲ್ಲ ತಮ್ಮ ತಮ್ಮ ಯೋಗ್ಯತೆಯನ್ನನುಸರಿಸಿ, ಎಂದರೆ ತಾರತಮ್ಯಕ್ರಮದಲ್ಲಿ, ತಮ್ಮನ್ನೂ ಇತರ ಪದಾರ್ಥಗಳನ್ನೂ ತಿಳಿದುಕೊಳ್ಳುತ್ತಾರೆ; ಎಲ್ಲವನ್ನೂ ಒಟ್ಟಿಗೆ ತಿಳಿಯುವುದು ಜೀವಕೋಟಿಗೆ ಸಾಧ್ಯವಿಲ್ಲ). ಜೀವರಲ್ಲಿ ಮೂರು ವಿಧ (ತ್ರೈವಿಧ್ಯ) ; ಸಾತ್ತ್ವಿಕರು, ರಾಜಸರು, ತಾಮಸರು ಎಂದು. ಸಾತ್ತ್ವಿಕ ಜೀವಗಳಿಗೆ ಮಾತ್ರ ಪರಮಾತ್ಮ, ಜೀವಸ್ವರೂಪ, ಬಂಧ, ದುಃಖ, ಮುಕ್ತಿ, ಸಾಧನೆಗಳ ಕಡೆ ಮನಸ್ಸು ಹೋಗುತ್ತದೆ. ಅವರು ಉತ್ತಮರು; ಅವರಿಗೆ ಸುಖ. ರಾಜಸರು ಸಂಸಾರದಲ್ಲಿಯೇ ತೊಡಗಿರುತ್ತ, ಇಲ್ಲಿನ ಭೋಗಗಳನ್ನು ಅರಸುತ್ತ ಸುಖದುಃಖಾದಿಗಳನ್ನು ಅನುಭವಿಸುವರು; ಇವರದ್ದು ಮಧ್ಯಮವರ್ಗ (ವ್ಯಾಮಿಶ್ರರು). ಇನ್ನು ತಾಮಸವೆಂದರೆ ವಿಷಯ ಸುಖಗಳಲ್ಲೇ ಲೋಲುಪರಾಗಿ, ಧರ್ಮಾಧರ್ಮ ವಿವೇಚನೆಯಿಲ್ಲದೆ, ಪಾಪ ಕರ್ಮಗಳನ್ನೇ ಮಾಡುತ್ತ ಎಂದೂ ದುಃಖವನ್ನು ಪಡೆಯುವವರು.

ಜೀವನಲ್ಲಿ ಬೀಜರೂಪವಾಗಿರುವ ಸ್ವರೂಪಗುಣಗಳು ಮೊಳೆತು, ಬೆಳೆದು, ತಮ್ಮ ಪರಾಕಾಷ್ಠೆಯನ್ನು ಮುಟ್ಟುವ ಸಲುವಾಗಿ ಜೀವನಿಗೆ ದೇಹ ಒದಗುತ್ತದೆ; ಇಂದ್ರಿಯಗಳು ಒದಗುತ್ತವೆ; ಮನಸ್ಸು ಸಿದ್ಧವಾಗುತ್ತದೆ. ದೇಹವು ಅನುಭವಕ್ಕೆ ಆಸರೆ, ಇಂದ್ರಿಯಗಳೂ ಮನಸ್ಸೂ ಅನುಭವವನ್ನು ಒದಗಿಸುವ ಸಾಧನಗಳು. ಈ ಜಡಶರೀರದ ಸಂಯೋಗವನ್ನೇ ನಾವು ಹುಟ್ಟು ಎಂದು ಕರೆಯುವುದು. ಈ ಸಂಯೋಗವಾಗುವುದು ಪರಮಾತ್ಮನ ಸಂಕಲ್ಪದಿಂದಲೇ; ನಿಯತವಾದ ಕರ್ಮಫಲಗಳನ್ನು ಅನುಭವಿಸಲೆಂದೇ ಸ್ಥೂಲ ದೇಹವನ್ನು ಹೊಂದಿಸುವನು (ಸಾಧಕ ಪ್ರಯೋಜಕ). ಅನಾದಿಕರ್ಮದ ಕಲ್ಪನೆಯಿರುವುದನ್ನೂ ಗಮನಿಸಬೇಕು. ಅನಾದಿ ಕರ್ಮದಿಂದ ಜೀವನಿಗೆ ದೇಹ ಸಂಯೋಗ, ದೇಹ ಸಂಯೋಗದಿಂದ ತ್ರೈವಿಧ್ಯ. ಜೀವನು ತನ್ನ ಸ್ವರೂಪಯೋಗ್ಯತೆಗನುಸಾರವಾಗಿ ಲಿಂಗದೇಹದೊಂದಿಗೆ ಕೂಡಿಕೊಂಡು ಅದರಿಂದ ಬದ್ಧನಾಗುವುದನ್ನು ವ್ಯಾಸರಾಯಸ್ವಾಮಿಗಳು ಕೃಷ್ಣನ ಮಾಯೆಯೆಂದು ಕರೆದಿದ್ದಾರೆ. ಇಲ್ಲಿ ಮಾಯೆಯೆಂದರೆ ಬಂಧಕಶಕ್ತಿ; ಜೀವನು ಪ್ರಕೃತಿಯಿಂದ ಬದ್ಧನಾಗಿ ಸಂಸಾರದಲ್ಲಿ ತೊಳಲುವುದು. ಇದನ್ನೇ ಮೇಲೆ ಉದ್ಧರಿಸಿದ ಸುಳಾದಿಯ ಮಾತಿನಲ್ಲಿ 'ಆದ್ಯಪರಾಧ ಮಿಥ್ಯಾಜ್ಞಾನ'ವೆಂದು ವಿವರಿಸಿರುವುದು.

ಈ ಮಿಥ್ಯಾಜ್ಞಾನದ ಫಲವಾಗಿ 'ನಾನೇ ಸ್ವತಂತ್ರವಾಗಿ ಕೆಲಸ ಮಾಡುತ್ತೇನೆ' (ಸ್ವಗತ ಕರ್ತೃತ್ವ), 'ನಾನೇ ಸ್ವತಂತ್ರವಾಗಿ ಭೋಗಿಸುವವನು' (ಭೋಕ್ತೃತ್ವ ಸ್ವಾತಂತ್ರ್ಯ), 'ನನ್ನ ಶರೀರ, ಇಂದ್ರಿಯ, ಮನಸ್ಸುಗಳನ್ನು ಸ್ವೇಚ್ಛೆಯಿಂದ ನಡೆಸುತ್ತೇನೆ' (ಕಾರಕ ಮುಖ್ಯಸ್ವಾಮ್ಯ), 'ನನ್ನ ಕೆಲಸಗಳಿಗೆ ತಕ್ಕಂಥ ಫಲವನ್ನು ನಾನೇ ನನ್ನ ಇಚ್ಛೆಯಿಂದ ಪಡೆದುಕೊಳ್ಳುತ್ತೇನೆ' (ಕ್ರಿಯಾಫಲ ಮುಖ್ಯ ಸ್ವಾಮಿತ್ವ), 'ಲೋಕಿಕವಾದ ವಿಷಯಸುಖವೇ ಸುಖ' (ಪುರುಷಾರ್ಥತ್ವ) ಮತ್ತು 'ಈ ಬಗೆಯ ಲೌಕಿಕವಾದ ವಿಷಯಸುಖಕ್ಕೆ ನೆರವಾಗುವ ಎಲ್ಲವೂ ಹಿತವಾದುದೇ' (ತತ್ಸಾಧನ, ಅಪರ ಪರ್ಯಾಯ, ಶೋಭನತ್ವ) ಹೀಗೆ ಆರು ವಿಧವಾದ ಅಭಿಮಾನಗಳು ಹುಟ್ಟಿಕೊಳ್ಳುತ್ತವೆ. ಆಗ ಹರಿಯ ಸ್ವಾತಂತ್ರ್ಯದಲ್ಲಿ, ತನ್ನ ಪರಾಧೀನತೆಯಲ್ಲಿ ಅರಿವು ಜಾರಿ ಹೋಗುತ್ತದೆ. ಇದು 'ಹರಿಯ ವಿಸ್ಮರಣೆ'ಯೆಂಬ ದ್ವಿತೀಯ ಅಪರಾಧ.

ಹರಿವಿಸ್ಮರಣೆಯ ದೃಷ್ಟಫಲವೆಂದರೆ ಪ್ರಾಪಂಚಿಕ ವಿಷಯಗಳಲ್ಲೇ ತೊಡಗಿ, ಧರ್ಮದಿಂದ ಒದಗುವ ಅಭ್ಯುದಯ-ನಿಃಶ್ರೇಯಸಗಳ ಬಯಕೆಯಿಲ್ಲದೆ ಪಾಪಕಾರ್ಯಗಳಲ್ಲಿ ರತಿ; ಅದರಿಂದ ತನ್ನ ಹಿತಕ್ಕೇ ಘಾಸಿ. ಪರಮಾತ್ಮನಿಗೆ ಅಪ್ರೀತಿ ಎಂಬ ಅರಿವೂ ಇರದೆ ಶಾಸ್ತ್ರವು ಕೂಡದೆಂದು ಹೇಳುವುದರಲ್ಲಿ ಪ್ರವೃತ್ತಿ (ನಿಷಿದ್ಧಾಚರಣೆ) ಮತ್ತು ಶಾಸ್ತ್ರವು ಮಾಡೆಂದು ಹೇಳುವುದರಲ್ಲಿ ನಿವೃತ್ತಿ (ವಿಹಿತದ ಅನಾಚರಣೆ). ಇದು ಮೂರನೆಯ ಅಪರಾಧ. ನಾಲ್ಕನೆಯ ಅಪರಾಧ ಯೋಗ್ಯನಲ್ಲದ ಗುರುವಿನಿಂದ ಉಪದೇಶ ಪಡೆದು, ಇರುವ ಸೌಲಭ್ಯವನ್ನೂ ಕಳೆದುಕೊಂಡು, ದಾರಿ ತಪ್ಪಿ, ಮಾನವ ಜನ್ಮವನ್ನು ಹಾನಿ ಮಾಡಿಕೊಳ್ಳುವುದು. ಇಲ್ಲಿ ನಮಗೆ ಪ್ರಸಕ್ತವಾದುದು ಮೊದಲ ಎರಡು ಅಪರಾಧಗಳು-ಮಿಥ್ಯಾಜ್ಞಾನ ಮತ್ತು ಹರಿಯ ವಿಸ್ಮರಣೆ.

ಮೊದಲನೆಯ ತಪ್ಪನ್ನು ತಿದ್ದಿಕೊಳ್ಳುವುದು ಜ್ಞಾನದಿಂದ. ಮಿಥ್ಯಾಜ್ಞಾನಕ್ಕೆ ವಿರುದ್ಧವಾದುದು ಸಮ್ಯಕ್‌ಜ್ಞಾನ. ಈ ಜ್ಞಾನದಲ್ಲಿ ಜೀವನು ಅಸ್ವತಂತ್ರನೆಂದು ಮನಗಾಣುವುದು ಮೊದಲ ಸಾಧನವೆಂದೂ, ಹರಿಯೇ ಸ್ವತಂತ್ರನೆಂದು ಮನದಟ್ಟುಮಾಡಿಕೊಳ್ಳುವುದು ಎರಡನೆಯ ಸಾಧನವೆಂದೂ ದಾಸಕೂಟದಲ್ಲಿ ನಂಬಿಕೆ. ಒಟ್ಟಿನಲ್ಲಿ ಇದು ಹರಿಯ ಮಾಹಾತ್ಮ್ಯಜ್ಞಾನ. ಹರಿಯು ಜೀವನಾದ ತನಗೆ, ಎಲ್ಲ ಜೀವರಿಗೆ, ಇಡೀ ಬ್ರಹ್ಮಾಂಡಕ್ಕೆ, ಬ್ರಹ್ಮಾಂಡದಲ್ಲೆಲ್ಲ ವ್ಯಾಪ್ತನಾದ ವಾಯುದೇವರಿಗೆ ಬಿಂಬನೆಂದು ತಿಳಿಯುವುದೇ ಮಾಹಾತ್ಮ್ಯ ಜ್ಞಾನ. ಎರಡನೆಯ ಅಪರಾಧವಾದ ವಿಸ್ಮರಣೆಗೆ ಅಖಂಡಸ್ಮೃತಿ, ಇದನ್ನೇ ಸುದೃಢವಾದ ಸ್ನೇಹವೆಂದು ಕರೆಯುತ್ತಾರೆ. ಮಾಹಾತ್ಮ್ಯ ಜ್ಞಾನವೂ ಸುದೃಢ ಸ್ನೇಹವೂ ಸೇರಿದರೆ ಭಕ್ತಿಯೆಂದು ಮಧ್ವಾಚಾರ್ಯರ ಮಾತೇ ಇದೆ-

'ಮಾಹಾತ್ಮ್ಯ ಜ್ಞಾನಪೂರ್ವಸ್ತು ಸುದೃಢಃ ಸರ್ವತೋಽಧಿಕಃ।
ಸ್ನೇಹೋ ಭಕ್ತಿರಿತಿ ಪ್ರೋಕ್ತಃ ತಯಾ ಮುಕ್ತಿರ್ನಚಾನ್ಯಥಾ॥'

ಇದು ಅವರ ಭಾರತತಾತ್ಪರ್ಯನಿರ್ಣಯದಲ್ಲಿ ಬರುವ ಮಾತು. ಅಲ್ಲಿಯೇ 'ಜ್ಞಾನಪೂರ್ವಪರ ಸ್ನೇಹ'ವೆಂದು ಭಕ್ತಿಗೆ ಸರಳವಾದ ನಿರ್ವಚನವೂ ಇದೆ. ಹರಿದಾಸರ ಎಣಿಕೆಯಲ್ಲಿ ಜ್ಞಾನವೆಂದರೆ ಹರಿಯು ಬಿಂಬನೆಂಬ, ಜೀವನು ಪ್ರತಿಬಿಂಬನೆಂಬ ಅರಿವು; ಪರಸ್ನೇಹವೆಂದರೆ ಬಿಂಬೋಪಾಸನೆ. ಎರಡೂ ಕೂಡಿ ಭಕ್ತಿಯೆಂದರೆ ಬಿಂಬಾಪರೋಕ್ಷ.

ವಿಜಯದಾಸರ ಶಿಷ್ಯರಾದ ಗೋಪಾಲದಾಸರು (೧೭೨೨-೧೭೬೫) ವ್ಯಾಸರಾಯರು ಹೀಗೆ ಹೇಳಿದ ಮಿಥ್ಯಾಜ್ಞಾನವನ್ನು ಹೋಗಲಾಡಿಸಲು ಬಿಂಬ ಕ್ರಿಯಾ ಜ್ಞಾನವು ಸಮರ್ಥವಾಗುವುದೆಂದು ತಿಳಿಸುತ್ತಾರೆ. ಅದಕ್ಕೆ ಹಿನ್ನೆಲೆಯಾಗಿ 'ಬಿಂಬ ಪೂರ್ಣ, ಪ್ರತಿಬಿಂಬ ಅಪೂರ್ಣ' ಎಂಬ ಜ್ಞಾನ, 'ಬಿಂಬ ಚಲಿಸೆ, ಪ್ರತಿಬಿಂಬ ಚಲಿಸುವ' ಎಂಬ ಜ್ಞಾನ, 'ಎನ್ನ ಬಿಂಬನೆ ಸರ್ವಬಿಂಬ' ಎಂಬ ಜ್ಞಾನ ಎಂದು ಅವರ ಪದವೊಂದು ವಿವರಿಸುತ್ತದೆ. ಹೀಗೆ ಬಿಂಬ ತತ್ತ್ವವು ಗುರೂಪದೇಶದಿಂದ ನಿಶ್ಚಿತವಾದ ಮೇಲೆ, ಅದನ್ನು ಕುರಿತು ಎಡೆಬಿಡದೆ ಮನಸ್ಸಿಗೆ ತಂದುಕೊಳ್ಳುವುದು ಧ್ಯಾನವೆನಿಸಿಕೊಳ್ಳುತ್ತದೆ. ಆಚಾರ್ಯರು 'ಧ್ಯಾನಂ ನಿಶ್ಚಿತ ತತ್ತ್ವಸ್ಯ' ಎಂದು ಸಾಧನಾಮಾರ್ಗವನ್ನು ಸೂಚಿಸಿದ್ದಾರೆ. ಧ್ಯಾನವೆಂದರೆ ಎಡೆಬಿಡದ ಚಿಂತನೆ ('ಅಖಂಡೊ ಧ್ಯಾನಮುಚ್ಯತೇ'); ನಿರಂತರವಾದ ಬಿಂಬೋಪಾಸನೆ. ಇದನ್ನೇ ಶ್ರೀಪಾದರಾಜರು ತಮ್ಮ ಪದವೊಂದರಲ್ಲಿ "ನೆನೆಹಿನಾತುರ"ವೆಂದು

ಬಣ್ಣಿಸಿದ್ದಾರೆ. ಇದು ಕೈಗೂಡುವ ಮೊದಲು ಧಾರಣೆಯೆಂಬ ಹಂತ; 'ಖಂಡಸ್ಮೃತಿಃ ಧಾರಣಾ ಸ್ಯಾತ್' ಎಂದು ಮಧ್ವಾಚಾರ್ಯರದ್ದೇ ನಿರ್ದೇಶನ. ಧಾರಣೆ ಮೊದಲು, ಧ್ಯಾನ ಅನಂತರ. ಆದರೆ ಧಾರಣೆಗೂ ಮೊದಲಿನ ಹಂತಗಳಿವೆ. ಈ ಹಂತಗಳನ್ನು ಎರಡು ಗುಂಪಾಗಿ ವಿಂಗಡಿಸಿದ್ದಾರೆ. ಒಂದು ಅಷ್ಟಾಂಗಯೋಗದ ಚೌಕಟ್ಟಿನಲ್ಲಿ ಯೋಗಾಭ್ಯಾಸದ ದಾರಿ; ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರಗಳಾದಮೇಲೆ ಧಾರಣ, ಧಾರಣವಾದಮೇಲೆ ಧ್ಯಾನ. ಇನ್ನೊಂದು ಶಾಸ್ತ್ರಾವಮರ್ಶನವೆಂಬ ಪ್ರಕ್ರಿಯೆ. ಸಚ್ಛಾಸ್ತ್ರಗಳನ್ನು ಯೋಗ್ಯ ಗುರುಗಳಲ್ಲಿ ಅಭ್ಯಾಸಮಾಡಿ (ಶ್ರವಣ), ಅವುಗಳ ತಾತ್ಪರ್ಯವನ್ನು ಮನಸ್ಸಿನಲ್ಲಿ ಗಟ್ಟಿಮಾಡಿಕೊಂಡು (ಮನನ), ಆ ತಾತ್ಪರ್ಯದ ಮುಖ್ಯ ಪ್ರಮೇಯವಾದ ವಿಷ್ಣುತತ್ತ್ವದಲ್ಲಿ ಮನಸ್ಸು ನೆಲೆಗೊಳ್ಳುವಂತೆ ಮಾಡುವುದು (ನಿದಿಧ್ಯಾಸನ).

ಇವೆರಡು ದಾರಿಗಳೂ ಖಂಡಸ್ಮೃತಿಗೆ ಸಂಬಂಧಪಟ್ಟವೇ. ಇವನ್ನು ಮೀರಿದ ಭಕ್ತಿ ಅಖಂಡಸ್ಮೃತಿಯೆನಿಸಿಕೊಳ್ಳುತ್ತದೆ. ಮಧ್ವಾಚಾರ್ಯರು ತಮ್ಮ ಬೃಹದಾರಣ್ಯಕಭಾಷ್ಯದಲ್ಲಿ ಮೋಕ್ಷಕ್ಕೆ ಮಾರ್ಗವನ್ನು ಹೇಳುವಾಗ ಪೈಂಗೀಶ್ರುತಿಯನ್ನುದ್ಧರಿಸುತ್ತ "ಶ್ರವಣಂ ಮನನಂ ಚೈವ ಧ್ಯಾನಂ ಭಕ್ತಿಸ್ತಥಾ ದೃಶಿಃ" ಎಂದು ಹೇಳಿದ್ದಾರೆ. ಇಲ್ಲಿ ಧ್ಯಾನವೆಂದರೆ ನಿದಿಧ್ಯಾಸನವೇ. ಧಾರಣೆಯೆಂದರೆ ಖಂಡಸ್ಮೃತಿ, ಧ್ಯಾನ ಅಖಂಡಸ್ಮೃತಿ ಎಂದು ಒಂದು ವಿವರಣೆ. ಆದರೆ ಪ್ರಯೋಗದಲ್ಲಿ ಧ್ಯಾನವನ್ನು ಮೀರಿದ ಭಕ್ತಿ ಎನ್ನುವುದೇ ದಿಟವಾಗಿ ಅಖಂಡಸ್ಮೃತಿಯೆನಿಸಿಕೊಳ್ಳುವುದು. ಮಧ್ವಾಚಾರ್ಯರ ಈ ಒಕ್ಕಣೆಯನ್ನನುಸರಿಸಿ ವಾದಿರಾಜ ಸ್ವಾಮಿಗಳು ಹರಿದಾಸರಾಗಿ ಹೇಳಿದ್ದು-

> 'ಅವನ ಶ್ರವಣಮನನ ನಿದಿಧ್ಯಾಸನ
> ಆ ವಿಷ್ಣುವಿನ ಭಕ್ತಿ ಮಹಾಪ್ರಸಾದಂಗಳು
> ಕೈವಲ್ಯಪದಕೆ ಇಕ್ಕಿದ ನಿಚ್ಚಣಿಕೆ'

ಆದರೆ ಯುಕ್ತಿಮಲ್ಲಿಕೆಯಲ್ಲಿ ಅವರೇ

> ಶ್ರವಣಂ ಮನನಂ ಚೈವ ಧ್ಯಾನಂ ಚೇತಿ ಕ್ರಮಾತ್ ತ್ರಯಂ
> ಪ್ರಧಾನಾಂಗಂ ಹಿ ಮನಸೋ ದ್ರಷ್ಟವೇ ಪರಮಾತ್ಮನಿ'

ಎಂದು ಹೇಳಿ ಧ್ಯಾನದಲ್ಲಿ ನಿಲ್ಲಿಸಿದ್ದಾರೆ. ಇದು ಶಾಸ್ತ್ರಾವಮರ್ಶನದ ದಾರಿ; ಸಾಮಾನ್ಯವಾಗಿ ವ್ಯಾಸಕೂಟದವರು ಎತ್ತಿ ಹಿಡಿಯುವುದು ಇದನ್ನೇ. ಯೋಗಾಭ್ಯಾಸದ ಇನ್ನೊಂದು ದಾರಿಯ ಮೇಲೆ ದಾಸಕೂಟದವರ ಒಲುವು ಹೆಚ್ಚು. ಅದರಲ್ಲಿ ಇಂದ್ರಿಯ ನಿಗ್ರಹ, ಗುರೂಪದೇಶ, ವಿರಕ್ತಿ, ಸಾಧುಸಂಗ, ಹರಿಕಥಾಶ್ರವಣ, ನಾಮಸ್ಮರಣೆ ಇವುಗಳಿಂದ ಹರಿಯಲ್ಲಿ ಮನಃಪ್ರಾವಣ್ಯ, ಅನಂತರ ಹಂಸೋಪಾಸನೆ, ಬಿಂಬೋಪಾಸನೆಗಳು ಮುಖ್ಯವಾದ ವಿವರಗಳು.

ಇದು ವ್ಯಾಸಕೂಟ- ದಾಸಕೂಟಗಳಲ್ಲಿರುವ ಭೇದಕ್ಕೆ ಕಾರಣವಾಯಿತು. ಎರಡೂ ದಾರಿಗಳಿಗೆ ಪೂರ್ವಾಂಗವಾಗಿ ಮಾಹಾತ್ಮ್ಯಜ್ಞಾನ, ಉತ್ತರಾಂಗವಾಗಿ ಭಕ್ತಿ, ಪ್ರಸಾದಗಳು ಸಮ್ಮತವೇ. ಮಧ್ವಾಚಾರ್ಯರು ಬ್ರಹ್ಮಸೂತ್ರಭಾಷ್ಯದ ಜಿಜ್ಞಾಸಾಧಿಕರಣದಲ್ಲಿ ನಾರದೀಯದ ಒಂದು ಮಾತನ್ನು ಉದ್ಧರಿಸಿ 'ಶ್ರವಣಂ ಮನನಂ ಚೈವ ಧ್ಯಾನಂ ಭಕ್ತಿಸ್ತಥೈವ ಚ। ಸಾಧನಂ ಜ್ಞಾನಸಂಪತ್ತೌ ಪ್ರಧಾನಂ

ನಾನ್ಯದಿಷ್ಯತೇ॥' ಎಂದು ಭಕ್ತಿಯನ್ನು ಬೇರೆಯಾಗಿ, ಮೊದಲ ಮೂರಕ್ಕಿಂತ ಮಿಗಿಲಾದ ಸಾಧನವೆಂದು ಕಾಣಿಸಿದ್ದಾರೆ. ನಡುವೆ ವ್ಯಾಸಕೂಟದವರು ಶಾಸ್ತ್ರಾವಮರ್ಶನ, ದಾಸಕೂಟದವರು ಯೋಗಾಭ್ಯಾಸಗಳನ್ನು ಹೇಳುತ್ತಾರೆ. ವ್ಯಾಸಕೂಟದವರಿಗೆ ವೇದಾಂತದ (ಎಂದರೆ ಉಪನಿಷತ್ತುಗಳು, ಬ್ರಹ್ಮಸೂತ್ರ) ಆಲಂಬನೆ ಹೆಚ್ಚು, ದಾಸಕೂಟದವರಿಗೆ ತಂತ್ರಪ್ರಕ್ರಿಯೆಗಳ (ಪಾಂಚರಾತ್ರಾಗಮ, ತಂತ್ರಸಾರ, ಯೋಗ) ಅಲಂಬನೆ ಹೆಚ್ಚು. ವ್ಯಾಸಕೂಟದವರು ಆಚಾರ್ಯರು ಹೇಳಿದರೆಂದು ಭಾಗವತ, ಭಾರತ, ಮೂಲರಾಮಾಯಣ, ವೈಷ್ಣವಪುರಾಣಗಳ ಪ್ರಾಮಾಣ್ಯವನ್ನು ಒಪ್ಪುವರಾದರೂ ದಾಸಕೂಟದವರಂತೆ ಅವನ್ನೇ ಮೇಲೇರಿಸಿಕೊಳ್ಳುವುದಿಲ್ಲ; ಅವರಿಗೆ ವೇದವ್ಯಾಸರ ಸೂತ್ರವೇ ದಾರಿದೀಪ. ಹಾಗೆಂದೇ ಅವರದ್ದು ವ್ಯಾಸಕೂಟ; ಯೋಗದ ಪ್ರಕ್ರಿಯೆಯಾದ ಬಿಂಬೋಪಾಸನೆ ಹರಿದಾಸರ ವಿಶಿಷ್ಟ ಸಾಧನೆಯಾದುದು ಸಹಜವೇ. ಬಿಂಬೋಪಾಸನೆಯಲ್ಲಿ ಜೀವನ ದಾಸ್ಯ ಭಾವನೆಯೇ ಮುಖ್ಯವಾದುದರಿಂದ ಇವರದ್ದು 'ದಾಸಕೂಟ'.

ಈ ಕೂಟದ ಪ್ರವರ್ತಕರಾದ ಶ್ರೀಪಾದರಾಜರ ಶಿಷ್ಯರೂ, ಈ ಕೂಟವನ್ನು ಬೆಳಗಿದವರೂ ಆದ ವ್ಯಾಸರಾಯಸ್ವಾಮಿಗಳು ದಾಸಕೂಟದ ನಿಲುವನ್ನು ಸ್ಪಷ್ಟಪಡಿಸಿದ್ದಾರೆ.

ಹರಿಚರಿತೆ ಶ್ರವಣ ದುರಿತಕುಚ್ಚಾಟನ
ಹರಿನಾಮ ಕೀರ್ತನೆ ಭವರೋಗಕ್ಕೆ ಸಿದ್ಧೌಷಧ
ಹರಿಚರಣಸ್ಮರಣ ಮುಕ್ತರೊಳಗರ್ಪಣ
ಇಂತು ಹರಿಪಾದಸೇವೆ ಅನಂತಫಲಸಾಧನ

ಇಂತೆಂಬುದೊಂದು ಪೆರ್ಮೆಗೆ ಹರಿಸೇವೆ ಫಲರೂಪ
ಶ್ರವಣವೆ ಶುಭದ ಬೆಳಸು ಕೀರ್ತನೆಯ ಲೇಸಿನ ಹೆಚ್ಚಿಗೆ
ಸ್ಮರಣವಚ್ಚಸುಖವೆಂಬ ತೊಟ್ಟಿಲು ಎಂಬುದನುಭವಸಿದ್ಧ
ಸಿರಿಕೃಷ್ಣನ್ನ ಪಾದಸೇವೆಯಲೆ ಮುಕ್ತಿಕನ್ನಿಕೆ ಸೇರುವೆ

೫

ಇನ್ನು ಬಿಂಬೋಪಾಸನೆಯ ವಿಚಾರವಾಗಿ ಸ್ವಲ್ಪಮಟ್ಟಿಗೆ ಹೇಳಬೇಕಾದದ್ದಿದೆ. ದಾಸಕೂಟದವರು 'ಹರಿದಾಸ'ರೆಂದೇ ಆದುದು ಏಕೆ? ವಿಷ್ಣುವಿಗೆ ಹಲವಾರು ಹೆಸರುಗಳಿದ್ದರೂ ಇದೊಂದನ್ನು ದಾಸರು ಆರಿಸಿಕೊಂಡುದಕ್ಕೆ ಕಾರಣವಿದೆ. ಮಧ್ವಾಚಾರ್ಯರು ತಮ್ಮ ಗೀತಾಭಾಷ್ಯದಲ್ಲಿ 'ಸರ್ವೇಷಾಂ ಬಿಂಬರೂಪೋ ಹರಿರೇವ' (ಎಂದರೆ ಎಲ್ಲ ಮುಕ್ತಿಯೋಗ್ಯ ಜೀವರಿಗೂ ಬಿಂಬರೂಪಿಯಾಗಿರುವ ಪರಮಾತ್ಮನು ಹರಿಯೇ) ಎಂದು ಹೇಳಿದುದೇ ಕಾರಣ. ಜೀವನೊಂದಿಗೆ ಇರುವ ವಿಷ್ಣುವು ಹರಿ ನಾಮಕನೇ ('ಜೀವೇ ವಿಷ್ಣುಃ ಹರಿನಾಮಕೇನ ಬಿಂಬರೂಪೇಣ ಮುಖೇ ಮುಖಂ ಇತ್ಯನೇನ ಕ್ರಿಯೇಣ ಆಸ್ತೇ', ಆರಣ್ಯಕಾಚಾರ್ಯರ ಷೋಡಶೀ); ಜೀವಿಯ ಮುಖದಲ್ಲಿ ತನ್ನ ಮುಖ, ಅವನ ಅಂಗೋಪಾಂಗಗಳಲ್ಲಿ ತನ್ನ ಅಂಗೋಪಾಂಗಗಳು ಇರುವುದರಿಂದ ಬಿಂಬರೂಪ. ಮತ್ತು ಹರಿಯೆಂಬ ಹೆಸರಿನಲ್ಲಿ ಜೀವರ ಅಧಿಕಾರ, ಯೋಗ್ಯತೆಗಳನ್ನು ಪರಿಗಣಿಸದೆ ಪಾಪಗಳನ್ನೆಲ್ಲ

ಹೋಗಲಾಡಿಸುವ ಅರ್ಥವಿದೆ ('ಹರಿರ್ಹರತಿ ಪಾಪಾನಿ ದುಷ್ಟಚಿತ್ತೈರಪಿ ಸ್ಮೃತಃ'). ಆಚಾರ್ಯರ ಉಪನಿಷದ್ಭಾಷ್ಯದಲ್ಲಿ ಇನ್ನೂ ಒಂದು ಒಕ್ಕಣೆಯಿದೆ, ಹರಿಯೆನ್ನುವ ಮಾತು ಯಾವ ದೋಷವೂ ಎಂದೂ ಇಲ್ಲದವನು, ಸಾಧಕನ ಬದುಕಿನಲ್ಲಿ ಸಾರವಾದವನು ಎಂಬ ಅಕ್ಷರಾರ್ಥಗಳನ್ನು ಸೂಚಿಸುತ್ತದೆ ('ನಿತ್ಯ ಹೀನೋಽಖಿಲೈರ್ದೋಷೈಃ ಸಾರರೂಪೋ ಯತೋ ಹರಿಃ'). ಇದೇ ಬಿಂಬನ ಲಕ್ಷಣವಾದುದರಿಂದ, ಬಿಂಬೋಪಾಸನೆಯೇ ಸಾಧನೆಯಾಗಿ ಉಳ್ಳವರು ಹರಿ-ದಾಸರಾದರು.

ಬಿಂಬರೂಪಿಯಾದ ಹರಿಯೆಂದರೆ ಸಾಧಕನ ಹೃದಯದಲ್ಲೇ ಅಡಗಿರುವವನು. ಬಿಂಬವೆಂಬ ಸಂಸತಮಾತಿನ ನಿಷ್ಪತ್ತಿ ನಿರ್ದಿಷ್ಟವಾಗಿಲ್ಲ; ಆದರೆ ಆ ಮಾತಿನ ಪ್ರಾಚೀನ ಪ್ರಯೋಗ ಸೂರ್ಯಮಂಡಲ, ಚಂದ್ರಮಂಡಲ ಎಂಬರ್ಥಗಳಲ್ಲಿ. ಪ್ರತಿಬಿಂಬವೆಂಬ ಮಾತಿನ ಬಳಕೆಯಿಂದಲೇ ಬಿಂಬವೆಂಬ ಮಾತಿಗೆ ಬೆಲೆ. ನೀರಿನಲ್ಲಿ ಅಥವಾ ಕನ್ನಡಿಯಲ್ಲಿ ಸೂರ್ಯನ ಅಥವಾ ಚಂದ್ರನ ಪ್ರತಿಬಿಂಬವನ್ನು ನೋಡಿ ಅದರ ಮೂಲ ಸೂರ್ಯ ಅಥವಾ ಚಂದ್ರ ಎಂದು ಗುರುತಿಸುವುದು, ಪ್ರತಿಬಿಂಬ ಚಲಿಸಿದರೂ ಬಿಂಬ ಚಲಿಸದೆ ಇರುವುದು, ಒಂದೇ ಬಿಂಬವಿದ್ದರೂ ಹಲವಾರು ಪ್ರತಿಬಿಂಬಗಳಿರುವುದು, ಪ್ರತಿಬಿಂಬಗಳು ನೀರು, ಕನ್ನಡಿ ಮೊದಲಾದ ಉಪಾಧಿಗಳನ್ನ ವಲಂಬಿಸಿರುವುದು, ಬಿಂಬ ಬಲುದೂರದಲ್ಲಿದ್ದು ಪ್ರತಿಬಿಂಬ ಹತ್ತಿರದಲ್ಲಿರುವುದು, ಬಿಂಬ ಅಗ್ರಾಹ್ಯವಾಗಿ ಪ್ರತಿಬಿಂಬ ಗ್ರಾಹ್ಯವಾಗಿರುವುದು, ಪ್ರತಿಬಿಂಬ ಕಾಣದಾದರೂ ಬಿಂಬ ಇದ್ದೇ ಇರುವುದು, ಇವೆಲ್ಲ ಬಿಂಬ-ಪ್ರತಿಬಿಂಬ ಕಲ್ಪನೆಯಲ್ಲಿ ಅವಶ್ಯವಾಗಿ ಸೇರುವ ವಿವರಗಳು. ಮಧ್ವಾಚಾರ್ಯರು ಮಾಡಿದ ಹರಿಯು ಬಿಂಬ, ಜೀವನು ಪ್ರತಿಬಿಂಬ ಎಂಬ ನಿರೂಪಣೆಯಲ್ಲಿ ಇವೆಲ್ಲ ವಿವರಗಳೂ ಸೇರುತ್ತವೆ.

ಸರ್ವೋತ್ತಮನಾದ, ಸರ್ವೇಶ್ವರನಾದ, ಸರ್ವಾತ್ಮಕನಾದ, ಏಕಮೇವಾದ್ವಿತೀಯನಾದ ಪರಮಾತ್ಮನಿಗೆ ಸ್ವಭಾವವಾಗಿರುವ ಅಚಿಂತ್ಯಾದ್ಭುತ, ಅನನ್ಯಸಾಧಾರಣ ಶಕ್ತಿಯಿಂದ ಹಲವಾರು ರೂಪಗಳಲ್ಲಿ ಅವನ ಮಹಿಮೆ ಸ್ಪಷ್ಟವಾಗುತ್ತದೆ. ಸಾಧಕರಲ್ಲಿ ಕರುಣೆ ತೋರಿ ಮತ್ಸ್ಯ, ಕೂರ್ಮ, ವರಾಹ ಮೊದಲಾದ ದಶಾವತಾರಗಳನ್ನು ತಳೆಯುತ್ತಾನೆ; ಉಪಾಸನೆಗೆ ಅನುಕೂಲವಾಗಿ ನಾರಾಯಣ, ನರ, ಶೌರಿ ಮೊದಲಾದ ಶತರೂಪಗಳಲ್ಲಿ, ವಿಶ್ವ, ವಿಷ್ಣು ಮೊದಲಾದ ಸಹಸ್ರರೂಪಗಳಲ್ಲಿ (ವಿಷ್ಣು ಸಹಸ್ರ ನಾಮಗಳಲ್ಲಿ ಬರುವುದು), ಪರಾದಿ ಬಹುರೂಪಗಳಲ್ಲಿ, ಅಜಿತಾದಿ ಅನಂತರೂಪಗಳಲ್ಲಿ ತೋರಿಕೊಳ್ಳುತ್ತಾನೆ. ಈ ರೂಪಗಳನ್ನೆಲ್ಲ ಮೂರು ವಿಭಾಗಗಳಲ್ಲಿ ಅಳವಡಿಸುವುದುಂಟು. ಮೊದಲನೆಯದು ಮಹತ್ತತ್ತ್ವವನ್ನು ಹೊರಹೊಮ್ಮಿಸಿ ಸೃಷ್ಟಿಕಾರ್ಯದಲ್ಲಿ ತೊಡಗಿರುವ ರೂಪ (ಪುರುಷ); ಎರಡನೆಯದು ಬ್ರಹ್ಮಾಂಡದೊಳಗೆ ವ್ಯಾಪ್ತನಾಗಿ ನಿಯಾಮಕನಾಗಿರುವ ರೂಪ (ಪರಮಾತ್ಮಾ); ಮೂರನೆಯದು ಜೀವರಲ್ಲಿ ಅಂತರ್ಯಾಮಿಯಾಗಿರುವ ರೂಪ (ಬಿಂಬ).

'ವಿಷ್ಣೋಸ್ತು ತ್ರೀಣಿ ರೂಪಾಣಿ ಪುರುಷಸ್ಯ ಮಹಾತ್ಮನಃ
ಪ್ರಥಮಂ ಮಹತಃಸ್ರಷ್ಟುರ್ದ್ವಿತೀಯಂ ತ್ವಂಡಸಂಸ್ಥಿತಿಃ
ತೃತೀಯಂ ದೇಹಿನಾಂ ದೇಹೇ ತಾನಿ ಜ್ಞಾತ್ವಾ ವಿಮುಚ್ಯತೇ'

ಮತ್ತೆ ಈ ಮೂರನ್ನು ಸಂಗ್ರಹಿಸಿ ಎರಡು ರೂಪಗಳೆಂದು ಹೇಳುತ್ತಾರೆ.

‘ಬಹೀಸ್ಥ’ರೂಪ, ಎಂದರೆ ಜೀವರ ಹೊರಗಡೆ ಬ್ರಹ್ಮಾಂಡದಲ್ಲಿ ತೋರಿಕೊಳ್ಳುವ ಅವತಾರಾದಿ ರೂಪಗಳು, ವಿಭವಗಳು; ಮತ್ತು ‘ಜೀವಾಂತಃ ಸ್ವರೂಪ’ ಎಂದರೆ ಪ್ರತಿಬಿಂಬರಾದ ಜೀವರ ಒಳಗೆ ಬಿಂಬನಾಗಿ ಇರುವ ರೂಪ. ಇವೆರಡು ರೂಪಗಳಿಗೆ ಇರುವ ವ್ಯತ್ಯಾಸ, ಬಹೀಸ್ಥರೂಪವು ಎಲ್ಲ ರೂಪಗಳಿಗೂ ಒಂದೇ ಅಧಿಷ್ಠಾನವಾಗಿ ಅವೆಲ್ಲ ಒಂದೇ ಕಡೆ ಲೀನವಾಗುತ್ತವೆ. (ಏಕತ್ರ ಲೀನ); ಅಂತಸ್ಥರೂಪವಾದರೋ ಪ್ರತಿಜೀವಕ್ಕೂ ಬೇರೆ ಬೇರೆಯಾಗಿ ಬಿಂಬಗಳು, ಸಂಸಾರದಲ್ಲಾಗಲಿ ಮುಕ್ತಿಯಲ್ಲಾಗಲಿ ಅವು ಒಂದೆಡೆ ಲೀನವಾಗುವುದಿಲ್ಲ. ಹೀಗೆ ಎರಡು ರೂಪಗಳೋ ಮೂರು ರೂಪಗಳೋ, ದಶಾವತಾರಗಳೋ, ಶತ ಸಹಸ್ರ ಬಹು ಅನಂತರೂಪಗಳೋ ಎಷ್ಟಿದ್ದರೂ ಹೇಗಿದ್ದರೂ ಪರಮಾತ್ಮನಲ್ಲಿ ಭೇದವಿಲ್ಲ. ಅವನ ಅವತಾರಗಳಿಗೂ, ಆಯುಧಗಳಿಗೂ, ಅಂಗಗಳಿಗೂ ಯಾವ ಬಗೆಯ ಭೇದವೂ ಇರದೆ ಇರುವುದರಿಂದ ಅವನು ‘ಸ್ವಗತಭೇದ ವಿವರ್ಜಿತ’ (ಪ್ರಮೇಯ ಮಾಲಿಕೆ).

ಎಲ್ಲ ರೂಪಗಳಲ್ಲಿಯೂ ಅವನು ‘ಜ್ಞಾನಾನಂದಾದಿ ಅನಂತಗುಣಗಣಪರಿಪೂರ್ಣ’. ಲೀಲಾವತಾರಗಳಲ್ಲಿ ಅವಕ್ಕೆ ತಕ್ಕಂಥ ಗುಣ, ಕ್ರಿಯೆಗಳಿದ್ದರೂ ಅವನೊಬ್ಬನೆ; ಅವತಾರಗಳಲ್ಲಿಯಾಗಲಿ ಇತರ ರೂಪಗಳಲ್ಲಾಗಲಿ ಅವನು ತಳೆಯುವ ದೇಹ ಶುಕ್ಲಶೋಣಿತ ವಿಕಾರಗಳಿಲ್ಲದುವು. ಅವನ ಸ್ವರೂಪಗುಣಗಳಾದ ಸೃಷ್ಟ್ಯಾದ್ಯಷ್ಟಕರ್ತೃತ್ವ (ಎಂದರೆ ಸೃಷ್ಟಿ, ಸ್ಥಿತಿ, ಸಂಹಾರ, ನಿಯಮನ, ಜ್ಞಾನ, ಅಜ್ಞಾನ, ಬಂಧ, ಮುಕ್ತಿ ಎಂಬ ಎಂಟು ಮಹಾಕಾರ್ಯಗಳನ್ನು ಮಾಡುವುದು), ಪಾರತಂತ್ರ್ಯಾದಿ ದೋಷರಾಹಿತ್ಯ (ಇವನ್ನು ಮಾಡುವಾಗ ಬೇರೊಂದು ತತ್ತ್ವವನ್ನು ಆಶ್ರಯಿಸದೆ ಇರುವುದು), ಸರ್ವವಿಲಕ್ಷಣತ್ವ (ಉಳಿದೆಲ್ಲಕ್ಕಿಂತಲೂ ಭಿನ್ನವಾಗಿರುವುದು), ಚತುರ್ವಿಧ ನಾಶರಹಿತತ್ವ (ಪ್ರಾಗಭಾವ ಮೊದಲಾದ ನಾಲ್ಕು ಬಗೆಯ ನಾಶಗಳಿಲ್ಲದಿರುವುದು, ದೇಶ ಕಾಲ ಗುಣಗಳಿಂದ ಪರಿಪೂರ್ಣವಾಗಿರುವುದು), ಸರ್ವಜ್ಞತ್ವ (ಎಲ್ಲವನ್ನೂ ಆಲೋಚನೆಯಿಲ್ಲದೆ ಅರಿಯುವುದು), ಸರ್ವಶಕ್ತಿತ್ವ (ಎಲ್ಲವನ್ನೂ ಮಾಡುವ ಸಾಮರ್ಥ್ಯ), ಸಮಾಧಿಕರಹಿತತ್ವ (ತನಗೆ ಎಣೆಯಾಗಲಿ ಮಿಗಿಲಾಗಲಿ ಯಾರೂ ಯಾವುದೂ ಇಲ್ಲದಿರುವುದು), ಜಗತ್ತಿಗೆ ಯಥಾಯೋಗ್ಯವಾಗಿ ಸತ್ತಾ (ಇರವು), ಪ್ರಮಿತಿ (ಅರಿವು), ಪ್ರವೃತ್ತಿ (ಕೆಲಸ)ಗಳನ್ನು ನೀಡುವ ಶಕ್ತಿ ಇವು ಯಾವ ರೂಪದಲ್ಲೂ ಎಷ್ಟು ಮಾತ್ರಕ್ಕೂ ಕೊರೆಯಾಗುವುದಿಲ್ಲ.

ಹೀಗೆ ಅನಂತರೂಪಗಳುಳ್ಳ, ಸರ್ವವ್ಯಾಪ್ತನಾದ ಪರಮಾತ್ಮನೇ ತನ್ನಲ್ಲಿ ಹೃದಯಾಂತರ್ಗತ ಬಿಂಬರೂಪಿಯಾದ ಹರಿಯಾಗಿದ್ದಾನೆ ಎಂದು ಅರಿತುಕೊಳ್ಳುವುದೇ ಗಟ್ಟಿಮಾಡಿಕೊಳ್ಳುವುದೇ ಬಿಂಬೋಪಾಸನೆ. ಸ್ವಾಭಾವಿಕವಾಗಿಯೇ ಜೀವನು ಪರಮಾತ್ಮನಿಗೆ ಪ್ರತಿಬಿಂಬ, ಬಿಂಬರೂಪಿಯಾದ ಪರಮಾತ್ಮನ ವಶವರ್ತಿ, ಪರತಂತ್ರ, ದಾಸ. ಆದರೆ ವ್ಯಾಸರಾಯಸ್ವಾಮಿಗಳು ಹೇಳಿದ ಆದ್ಯಪರಾಧದಿಂದ ಜೀವನು ತಾನೇ ಸ್ವತಂತ್ರನೆಂಬ ಭ್ರಮೆಗೆ ಪಕ್ಕಾಗುತ್ತಾನೆ. ಇದರಿಂದ ಕಳಚಿಕೊಳ್ಳಲೆಂದೇ ಬಿಂಬೋಪಾಸನೆ. ಅನಾದಿಕಾಲದಿಂದಲೂ ಅನಂತಜೀವರಿಗೆ ಬಿಂಬರೂಪಿಯಾಗಿ, ಅವರ ದೇಹ ಇಂದ್ರಿಯ ಮನಸ್ಸು ತತ್ತ್ವಗಳು ಎಲ್ಲದರಲ್ಲಿಯೂ ಆಯಾ ರೂಪವಾಗಿ, ಆಯಾ ಗುಣವಾಗಿ, ಆಯಾ ಕಾರ್ಯವಾಗಿ, ತತ್ತ್ವಾಭಿಮಾನಿ ದೇವತೆಗಳಿಗೆ ಪ್ರೇರಕನಾಗಿ (ಪ್ರದ್ಯುಮ್ನ ಮತ್ತು ಅನಿರುದ್ಧ ರೂಪಗಳಿಂದ), ನಿಯಾಮಕನಾಗಿ (ಸಂಕರ್ಷಣ ರೂಪದಿಂದ), ಸಾಕ್ಷಿಯಾಗಿ

(ವಾಸುದೇವ ರೂಪದಿಂದ) ಇರುವನೆಂಬುದನ್ನು ಮನಗಾಣುವುದು ಬಿಂಬೋಪಾಸನೆ. 'ನೀನು ಕುಣಿದಂತೆ ನಾನು ಕುಣಿವೆ' ('ಬಿಂಬಕ್ರಿಯಯಾ ಏವ ಕ್ರಿಯಾವಾನ್') ಎಂಬ ಹರಿದಾಸರ ನಿಲುವು ಇದರ ನಿದರ್ಶನ.

ಪರಮಾತ್ಮನ ಹಲವು ರೂಪಗಳು ಉಪಾಸನೆಗೆ ಯೋಗ್ಯವಾದುವೇ. ಆದರೆ ಜೀವರಿಗೆ ತಮ್ಮ ಬಿಂಬರೂಪನಾದ ಹರಿಯ ಉಪಾಸನೆಯೇ ಸರಳ, ಸುಲಭ, ನೇರ, ಯುಕ್ತ. ಬಿಂಬನ ಜ್ಞಾನವೇ ಮೋಕ್ಷಕ್ಕೆ ಕಾರಣವಾಗುವುದು. ಇತರ ರೂಪಗಳ ಉಪಾಸನೆಯಿಂದ ಮೋಕ್ಷಕ್ಕೆ ಅಡ್ಡಿಯಾಗುವ ಕಾರಣಗಳು ತೊಡೆದುಹೋಗುತ್ತವೆ ಅಷ್ಟೆ; ಮೋಕ್ಷಪ್ರತಿಬಂಧಕ ನಿವೃತ್ತಿ. ಸಾಧನೆಯಲ್ಲಿ ತೊಡಗುವ ಮನಸ್ಸನ್ನು (ಮನಃಪ್ರಾವಣ್ಯ) ಒದಗಿಸುವವನು ಬಿಂಬನೇ, ತತ್ತ್ವೇಶರ ಮೂಲಕ. ಸಾತ್ತ್ವಿಕ ಚೇತನರಿಗೆ ಸಾಧನಾರಂಭದಲ್ಲಿ ಗುರುವನ್ನು ಒದಗಿಸುವವನೂ ಬಿಂಬನೇ; ತಾನೇ ಗುರುವಿನಲ್ಲಿ ನಿಂತು ಯೋಗ್ಯವಾದ ಉಪದೇಶವನ್ನು ನೀಡುತ್ತಾನೆ, ಎಲ್ಲ ಸಾಧನೆಗಳನ್ನೂ ತಿಳಿಯಪಡಿಸುತ್ತಾನೆ. ಅವುಗಳ ಮೂಲಕ ಜಯವನ್ನೂ ಕೊಡುತ್ತಾನೆ. ಹೀಗೆ ತನ್ನೊಳಗೆ ಬಿಂಬವನ್ನು ಕಂಡುಕೊಳ್ಳುವುದಕ್ಕಾಗಿ ನಡೆಸುವ ಸಾಧನೆ ಬಿಂಬೋಪಾಸನೆಯೆನಿಸಿಕೊಳ್ಳುತ್ತದೆ. ಬಿಂಬವನ್ನು ನೇರವಾಗಿ ತತ್ತ್ವದಂತೆ ಕಂಡುಕೊಳ್ಳುವುದು, ಸಾಕ್ಷಾತ್ಕರಿಸಿಕೊಳ್ಳುವುದು ಬಿಂಬಾಪರೋಕ್ಷ.

ಒಂದೊಂದು ಜೀವಕ್ಕೆ ತಕ್ಕಂತೆ ಒಂದೊಂದು ಬಿಂಬ; ಒಬ್ಬೊಬ್ಬರ ಬಿಂಬವೂ ಬೇರೆ ಬೇರೆ. ಎಷ್ಟು ಜೀವಗಳೋ ಅಷ್ಟು ಬಿಂಬಗಳು. ಹೀಗೆಂದಮಾತ್ರಕ್ಕೆ ಪರಮಾತ್ಮನಲ್ಲಿ ಅನೇಕತ್ವವನ್ನು ಅಥವಾ ವೈವಿಧ್ಯವನ್ನು ಹೇಳಲಾಗದು; ಅವನು ಹೇಗೂ ಸ್ವಗತಭೇದವಿವರ್ಜಿತ. ಜೀವರಲ್ಲಿರುವ ಭೇದ ಅವರವರ ಗುಣಸಾಮಗ್ರಿಯನ್ನು ಅನುಸರಿಸಿದ್ದು. ಜೀವರಲ್ಲಿ ಸಾತ್ತ್ವಿಕ (ಉತ್ತಮ), ರಾಜಸ (ಮಧ್ಯಮ), ತಾಮಸ (ಅಧಮ) ಎಂಬ ಮೂರು ಬಗೆಗಳಿರುವುದನ್ನು ಆಗಲೇ ಹೇಳಿದೆ. ಅವರವರ ಕರ್ಮ, ಪುಣ್ಯ, ಪಾಪ, ಉಪಾಸನೆ, ಸ್ವರೂಪ, ಯೋಗ್ಯತೆಗಳನ್ನನುಸರಿಸಿ 'ಭಿನ್ನಾ ಜೀವಗಣಾಃ'. ಅದಕ್ಕೆ ತಕ್ಕಂತೆ ಪ್ರೇರಣೆ, ನಿಯಮನ, ಕರ್ಮಫಲಭೋಗದಾನ. ಈ ವಿಚಾರವನ್ನು ಹೇಳುವಾಗ ಬಿಂಬನು ಜೀವರಲ್ಲಿ ಹೇಗೆ ಇರುವನೆಂಬುದನ್ನೂ ಗಮನಿಸಬೇಕು. ದೇವತಾ ತಾರತಮ್ಯದಲ್ಲಿ ಕಡೆಯವನು (ಅವರ) ಪುಷ್ಕರನಾಮಕನೆಂದು ಹೇಳಿದೆ. ಜೀವನಿಗೆ ಅವನೇ ದಿಟವಾಗಿ ಬಿಂಬ. ಆದರೆ ಆ ದೇವತೆಯೂ ಜೀವಕೋಟಿಯಲ್ಲಿ ಸೇರಿದ್ದು ಪ್ರತಿಬಿಂಬನೇ; ಅವನಿಗೆ ಬಿಂಬರೂಪವಾದುದು ಅವನಿಗಿಂತ ಉತ್ತಮವಾದ ದೇವತೆ ಶನೈಶ್ಚರ. ಅವನಿಗೂ ಇದೆ ಗತಿ. ಪುಷ್ಕರನಿಗೆ ಬಿಂಬನಾದರೂ ತನಗಿಂತ ಉತ್ತಮಳಾದ ಉಷಾದೇವಿಗೆ ಪ್ರತಿಬಿಂಬನೇ. ಹೀಗೆಯೇ ಆರೋಹಣಕ್ರಮದಲ್ಲಿ ಆಕಾಶತತ್ತ್ವಾಭಿಮಾನಿಯಾದ ಗಣಪತಿ ಜೀವರಿಗೆ ಪರಂಪರೆಯಿಂದ ಬಿಂಬನಾಗುತ್ತಾನೆ. ಮತ್ತೆ ಹೀಗೆಯೇ ತಾರತಮ್ಯದ ಆರೋಹಣಕ್ರಮದಲ್ಲಿ ರುದ್ರ ಶೇಷಗರುಡರು, ಸರಸ್ವತಿ ಭಾರತೀಯರು, ಬ್ರಹ್ಮವಾಯುಗಳು ಬಿಂಬರಾಗುತ್ತಾರೆ; ವಾಯುವು ಜೀವನಿಗೆ ಪರಂಪರೆಯಿಂದ ಬಿಂಬವಾದರೂ ಲಕ್ಷ್ಮಿಗೆ ಪ್ರತಿಬಿಂಬನೇ. ಲಕ್ಷ್ಮಿಯು ವಾಯುವಿಗೆ ಬಿಂಬವಾದರೂ ಪರಮಾತ್ಮನಿಗೆ ಪ್ರತಿಬಿಂಬಳೇ. ಆದರೆ ಪರಮಾತ್ಮನು ಜೀವನಿಗೆ ಬಿಂಬನಾಗುವುದು ಲಕ್ಷ್ಮಿಯನ್ನು ಆಸರೆಯಾಗಿರಿಸಿಕೊಂಡು (ಅಧಿಷ್ಠಾನ).

ಹೀಗೆ ಪರಮಾತ್ಮನು ತತ್ತ್ವಾಭಿಮಾನಿಗಳ ಮೂಲಕವಾಗಿ ಜೀವನಿಗೆ ಬಿಂಬ. ಬಿಂಬವೆಂಬ ಕಲ್ಪನೆಯಲ್ಲಿ ದ್ರವ್ಯಬಿಂಬ, ಗುಣಬಿಂಬ, ಕ್ರಿಯಾಬಿಂಬವೆಂದು ಮೂರು ವಿಭಾಗಗಳು. ದ್ರವ್ಯ ವೆಂದರೆ ಇರುವ ಎಲ್ಲದರಲ್ಲೂ ಬಿಂಬರೂಪವಾಗಿರುವುದು. ದೇವತಾತಾರತಮ್ಯದಲ್ಲಿ ಹರಿ ಮೊದಲು, ಪುಷ್ಕರ ಕಡೆ. ನಡುವೆ ಹಲವಾರು ದೇವತೆಗಳು ಒಬ್ಬೊಬ್ಬರೂ ಒಂದೊಂದು ತತ್ತ್ವಕ್ಕೆ ಅಭಿಮಾನಿಗಳಾಗಿ ಇದ್ದಾರೆ. ಎಲ್ಲರೂ ಹಾಲು-ನೀರಿನಂತೆ ಕಲೆತಿರುತ್ತಾರೆ; ವಿಭಾಗ ಮಾಡುವುದಾಗದು. ಆದರೆ ಅವರೆಲ್ಲ ಇರುವ ರೀತಿ 'ಬಾಹ್ಯಾಭ್ಯಂತರ ಭಾವ'; ಎಂದರೆ, ಒಬ್ಬ ತತ್ತ್ವೇಶ ಹೊರಗೆ, ಇನ್ನೊಬ್ಬ ತತ್ತ್ವೇಶ ಒಳಗೆ; ಒಳಗಿರುವ ತತ್ತ್ವೇಶ ತನ್ನೊಳಗಿರುವ ತತ್ತ್ವೇಶನಿಗೆ ಹೊರಗೆ. ಹೀಗೆ ಕ್ರಮವಾಗಿ ತತ್ತ್ವೇಶರ ವ್ಯವಸ್ಥೆ. ಆದರೆ ಎಲ್ಲ ತತ್ತ್ವೇಶರಲ್ಲಿಯೂ ಎಡೆಬಿಡದೆ ವ್ಯಾಪಿಸಿಕೊಂಡಿರುವವನು ಪರಮಾತ್ಮನೇ. ಎಲ್ಲ ತತ್ತ್ವೇಶರೂ ಜೀವರೇ, ಪರಮಾತ್ಮನೇ ಅವರಿಗೆಲ್ಲ ಬಿಂಬ. ಮನುಷ್ಯನ ದೇಹದಲ್ಲಿ ಎಲ್ಲ ತತ್ತ್ವಗಳೂ ಇವೆ; ಬ್ರಹ್ಮಾಂಡದಲ್ಲಿರುವುದೆಲ್ಲ ಪಿಂಡಾಂಡದಲ್ಲಿದೆ. ಈ ಸಾಮರಸ್ಯಕಲ್ಪನೆ ತಂತ್ರಶಾಸ್ತ್ರದಲ್ಲೂ ಇರುವುದನ್ನೂ ಗಮನಿಸಬೇಕು. ಎಂದಮೇಲೆ ಮನುಷ್ಯನಲ್ಲೇ ಹರಿ ಮೊದಲಾಗಿ ಪುಷ್ಕರನವರೆಗೆ ಎಲ್ಲ ತತ್ತ್ವೇಶರೂ ಇದ್ದಾರೆ. ಬೇರೆ ಬೇರೆ ಅವಯವಗಳಲ್ಲಿ, ಅಂಗೋಪಾಂಗಗಳಲ್ಲಿ ಶರೀರದ ಮೂಲ ಘಟಕಗಳಲ್ಲಿ ಬೇರೆ ಬೇರೆ ತತ್ತ್ವೇಶರು ಅಡಗಿದ್ದಾರೆ; ಅವರಲ್ಲೆಲ್ಲ ಹರಿಯು ಬಿಂಬರೂಪದಲ್ಲಿ ಇರುತ್ತಾನೆ. 'ಮುಖದಲ್ಲಿ ಮುಖವಾಗಿ, ಕಣ್ಣಲ್ಲಿ ಕಣ್ಣಾಗಿ, ಅವಯವಗಳಲ್ಲಿ ಅವಯವವಾಗಿ ಇರ್ಪ', 'ಚಕ್ಷುಷಶ್ಚಕ್ಷುಃ ಶ್ರೋತ್ರಸ್ಯ ಶ್ರೋತ್ರಃ' ಎನ್ನುವ ಉಪನಿಷತ್ತಿನ ವಚನದ ಕನ್ನಡರೂಪ.

ಒಂದೊಂದು ಜೀವಕ್ಕೂ ನಿಯತವಾದ, ಸ್ವರೂಪಯೋಗ್ಯತಾನುಸಾರವಾದ ಗುಣಗಳು; ಶರೀರದ ಗುಣಗಳು. ಇಂದ್ರಿಯದ ಗುಣಗಳು. ಮನಸ್ಸಿನ ಗುಣಗಳು. ಈ ಗುಣಗಳ ಮೂಲವಾಗಿ ಆಯಾ ತತ್ತ್ವೇಶರ ಗುಣಗಳು. ತತ್ತ್ವೇಶರ ಗುಣ ವೈವಿಧ್ಯವೇ ನಮಗೆ ಕಾಣುವ ಗುಣ ವೈವಿಧ್ಯದ ಕಾರಣ. ಈ ತತ್ತ್ವೇಶರ ವೈವಿಧ್ಯವನ್ನು ಅವರವರ ಯೋಗ್ಯತಾನುಸಾರವಾಗಿ ಏರ್ಪಡಿಸುವವನು ಅವರಿಗೆಲ್ಲ ಬಿಂಬವಾದ ಪರಮಾತ್ಮನೇ. ಇದು ಗುಣಬಿಂಬವೆಂಬ ವಿಭಾಗ.

ಹಾಗೆಯೇ ಶರೀರದ ಬೇರೆ ಬೇರೆ ಅಂಗಗಳಲ್ಲಿ ಬೇರೆ ಬೇರೆ ಕ್ರಿಯೆಗಳು; ಒಂದೊಂದು ಇಂದ್ರಿಯಕ್ಕೂ ಒಂದೊಂದು ಕ್ರಿಯೆ; ಪ್ರತಿಯೊಂದು ತತ್ತ್ವಕ್ಕೂ ಅದಕ್ಕನುಗುಣವಾಗಿ ವ್ಯಾಪಾರ. ಇದನ್ನು ಆಯಾ ಜೀವನ, ಅವನಲ್ಲಿರುವ ತತ್ತ್ವೇಶರ ಯೋಗ್ಯತಾನುಸಾರವಾಗಿ ವ್ಯವಸ್ಥೆ ಮಾಡುವವನು ಬಿಂಬರೂಪದ ಪರಮಾತ್ಮನೇ. ಎಂದರೆ ನಾವು ಮಾಡುವ ಒಂದೊಂದು ಕೆಲಸವೂ ದಿಟವಾಗಿ ಬಿಂಬನೇ ಮಾಡುವುದು; ನಮ್ಮ ಮೂಲಕ ಮಾಡಿಸುತ್ತಾನಷ್ಟೆ. "ನಾಹಂ ಕರ್ತಾ ಹರಿಃ ಕರ್ತಾ" ಎಂಬ ನಿರೂಪಣೆಯ ತಾತ್ಪರ್ಯ ಇದೇ. ಪುರಂದರದಾಸರ "ಅಪರಾಧಿ ನಾನಲ್ಲ, ಅಪರಾಧವೆನಗಿಲ್ಲ" ಎಂದು ಮೊದಲಾಗುವ ಕೀರ್ತನೆಯಲ್ಲಿ ಇದೇ ಕಲ್ಪನೆಯಿದೆ. ಇದು ಬಿಂಬಕ್ರಿಯೆಯೆನ್ನುವ ವಿಭಾಗ.

ತ್ರಿವಿಧ ಜೀವರಲ್ಲಿ ದ್ರವ್ಯ, ಗುಣ, ಕ್ರಿಯೆಗಳ ತಾರತಮ್ಯವಿದೆ. ಇದಕ್ಕೆ ಕಾರಣ ತ್ರಿವಿಧ ಬಿಂಬ ವ್ಯಾಪಾರ. ಹೀಗೆ ಮನವರಿಕೆಯಾದ ಮೇಲೆ ಸಾಧಕನು ತಾನಿರುವ ಬಗೆ, ತನ್ನ ಗುಣಗಳು, ತಾನು ಮಾಡುವ ಕೆಲಸ ಎಲ್ಲವೂ ಬಿಂಬಕ್ಕೆ ಸೇರಿದ್ದು, ತಾನು ಆ ಬಿಂಬದ ಪ್ರತಿಬಿಂಬವಷ್ಟೆ, ತನಗೆ ತನ್ನವೇ ಆದ ಯಾವ ಸ್ವಾತಂತ್ರ್ಯವೂ ಇರದು ಎಂಬ ಭಾವನೆಯಿಂದ ಎಲ್ಲವನ್ನೂ ಪರಮಾತ್ಮನಿಗೇ ಅರ್ಪಣೆ ಮಾಡುವುದು ಹರಿದಾಸರ ನಿಲುವು

"ಸರ್ವ ಸ್ವತಂತ್ರ ಹರಿ ತಾನು ಸೂತ್ರನಾಟಕ
ಸರ್ವಚೇಷ್ಟಿ ತಾ ಮಾಡಿಸೆ ಕೀರ್ತಿ ಅಪಕೀರ್ತಿ
ಜೀವರ್ಗೆ ತಂದೀವ...."

"ಹರಿ ಮಾಡಿಸಿದಂತೆ ಎಲ್ಲ ಮಾಡುವೆನಯ್ಯಾ ನಾನು"
"ಹರಿಯೆ ಸ್ವತಂತ್ರ ಆನು ಅಸ್ವತಂತ್ರ"

"ನಿನ್ನ ಚಿತ್ತಕ್ಕೆ ಬಂದುದನು ಮಾಡು ಸರ್ವೇಶ
ಎನ್ನ ಸ್ವಾತಂತ್ರ್ಯ ಲವಮಾತ್ರ ಉಂಟೇ ಸ್ವಾಮಿ"

ಈ ನಿಲುವಿನಲ್ಲಿ ಜೀವನು ತಾನು ಮಾಡಿದ ಕೆಲಸವೆಲ್ಲವನ್ನೂ ಹರಿಗೆ ಅರ್ಪಣೆ ಮಾಡುವುದಲ್ಲದೆ, ಕೆಲಸ ಮಾಡಿದ ಕರ್ತೃವೂ ತಾನಲ್ಲ, ಹರಿಯೇ ಮುಖ್ಯ ಕರ್ತೃ, "ಅವನು ಕುಣಿದಂತೆ ನಾನು ಕುಣಿವೆ", "ಹರಿ ಮಾಡಿಸಲು ನಾನು ಮಾಡಿದೆನೆಂಬುವಗೆ ಶರಧಿ ಅರಕಾಲು ಪರಿಮಾಣ ಜಲವು; ಹರಿಯ ಕರ್ತೃತ್ವವು ಅರಿತೆಂತಲ್ಲ ಭವಜಲಧಿ ಬತ್ತುವುದಿನ್ನು" ಎಂದು ತನ್ನನ್ನೂ ಅರ್ಪಣೆ ಮಾಡಿಕೊಳ್ಳುವುದು ಇಲ್ಲಿನ ಮುಖ್ಯ ವಿಚಾರ. ಕರ್ತೃಸ್ವಾತಂತ್ರ್ಯ ಭೋಕ್ತೃ ಸ್ವಾತಂತ್ರ್ಯ, ಸತ್ತಾ ಸ್ವಾತಂತ್ರ್ಯ, ಪ್ರಮಿತಿ ಸ್ವಾತಂತ್ರ್ಯ, ಪ್ರವೃತ್ತಿ ಸ್ವಾತಂತ್ರ್ಯಎಲ್ಲವೂ ಹರಿಯವೇ ಎಂಬ ತವಕದಿಂದಲೇ ದಾಸ್ಯ ಭಾವನೆ ಮೂಡುವುದು. ವ್ಯಾಸರಾಯಸ್ವಾಮಿಗಳು.

"ಆಳು ನಾ ನಿನ್ನಾಳು ನಿನ್ನಾಳು ನಾನು
ನೀನು ತಂದೆ ನಿನ್ನ ಕಂದ ನಾನು
ಶರಣ್ಯ ನಾ ನಿನ್ನ ಶರಣಾಗತನು
ಓವ ನೋವಿತ್ತಿಂತು ಕಾವರು ಯಾರಿನ್ನು
ಶ್ರೀಪತಿ ಸಿರಿಕೃಷ್ಣ ನೀ ಎನ್ನ ಸಲಹಬಹುದೊ"

ಎಂದು ಹೇಳಿದುದು ಇದೇ ಭಾವನೆಯ ಕಾವಿನಲ್ಲಿ. ದಾಸಕೂಟದವರಲ್ಲಿ ಬಳಕೆಯಲ್ಲಿರುವ 'ಜೀವಹೋಮ', ಸ್ವರೂಪಯಜ್ಞ' ಮೊದಲಾದ ಪ್ರಕ್ರಿಯೆಗಳು ಹರ್ಯರ್ಪಣ ಬುದ್ಧಿಯನ್ನು ಊರ್ಜಿತಗೊಳಿಸಲೆಂದೇ. ಹರಿದಾಸರ ಸಿದ್ಧಾಂತವೆಲ್ಲ ಅಡಗಿರುವುದು 'ಕೃಷ್ಣಾರ್ಪಣ' ಎಂಬ ಸಂಗ್ರಹವಾಕ್ಯದಲ್ಲೇ!

ವ್ಯಾಸರಾಯಸ್ವಾಮಿಗಳ ಸುಳಾದಿಯೊಂದರಲ್ಲಿ ನಾಲ್ಕು ಬಗೆಯ ಉಪಾಯಗಳನ್ನು ಹೇಳುತ್ತಾರೆ. ಸಾತ್ವಿಕರಾಗಿ ಮುಕ್ತಿಮಾರ್ಗಕ್ಕೆ ಅಧಿಕಾರಿಗಳಾದವರು ಪರಮಾತ್ಮನನ್ನು ನಾಲ್ಕು ಗುಣಗಳುಳ್ಳವನೆಂದು ಬಗೆದು, ಆ ಪರಮಾತ್ಮನೇ ತನ್ನ ಬಿಂಬವೆಂದು ಭಾವಿಸಿ, ತನ್ನ ಯೋಗ್ಯತಾನುಸಾರವಾಗಿ ನಾಲ್ಕರಲ್ಲಿ ಒಂದು ಗುಣವನ್ನೋ ಎಲ್ಲ ಗುಣಗಳನ್ನೋ ಉಪಾಯವೆಂದು ಅಳವಡಿಸಿಕೊಂಡು ಉಪಾಸನೆ ಮಾಡುವುದು ಇಲ್ಲಿನ ಸಂದರ್ಭ. ಆ ನಾಲ್ಕು ಗುಣಗಳು ಯಾವುವೆಂದರೆ

ಸತ್, 'ಇರುವವ' ('ಶೋಕಾದಿ ದೋಷಾತಿದೂರ'); ವಾಸುದೇವ;

ಚಿತ್, 'ಅರಿಯುವವ' ('ಜ್ಞಾನೈಕರಸದಿವ್ಯ ಮೂರುತಿ'); ಸಂಕರ್ಷಣ;
ಆನಂದ, 'ನಲಿಯುವವ' ('ಅಲೌಕಿಕಾಮಂದಾನಂದಸಾಂದ್ರ); ಪ್ರದ್ಯುಮ್ನ;
ಆತ್ಮ, ('ಸಾಕುವ ತನ್ನ ನಿಜಸ್ವಾಮಿ'); ಅನಿರುದ್ಧ.

ಕಂಸದಲ್ಲಿರುವ ಮಾತುಗಳು ವ್ಯಾಸರಾಯಸ್ವಾಮಿಗಳ ಒಂದು ಸುಳಾದಿಯಿಂದ ಎತ್ತಿಕೊಂಡವು. "ನಾಲ್ಕು ಬಗೆಯ ಉಪಾಸನೆಯಿಲ್ಲದವಗೆ ಶ್ರೀಕೃಷ್ಣ ತನ್ನ ಮೂರುತಿಯ ತೋರಂಗಡ" ಎಂದು ಸುಳಾದಿ ಮುಗಿಯುತ್ತದೆ. ಹರಿದಾಸರ ಒಲುಮೆ ಇರುವುದು ಕಡೆಯ ಗುಣದಲ್ಲಿ; ಅದರಲ್ಲಿ ಉಳಿದ ಮೂರೂ ಸೇರಿಕೊಳ್ಳುತ್ತವೆ. ಇದೇ ಬಿಂಬೋಪಾಸನೆಯ ಸ್ವಾರಸ್ಯ, ಪ್ರಾಚೀನ ಹರಿದಾಸರೊಬ್ಬರು (ವಿಜಯದಾಸರಿಗಿಂತ ಹಳಬರು, ಪುರಂದರದಾಸರಿಗಿಂತಲೂ ಹಿಂದಿನವರೆಂದು ಕೆಲವರ ಅಭಿಪ್ರಾಯ) ಇದೆನ್ನು ಸೊಗಸಾಗಿ ನಿರೂಪಿಸಿದ್ದಾರೆ-

'ಮಾಡುವನು ಹರಿ ಸಾಕ್ಷಿಯಾಗಿ ಜೀವರೊಳಿದ್ದು
ಮಾಡಿಸುವ ಪ್ರೇರಿಸಿ ತಾನೊಡೆಯನಾಗಿ
ಮಾಡಿದ ಸತ್ಕರ್ಮದಿಂದ ಪೂಜೆಯಗೊಂಡು
ನೀಡುವನು ಅವರ ಯೋಗ್ಯತೆಗೆ ತಕ್ಕ ಫಲವನ್ನು
ಬಿಡದೆ ಭಜಿಸಿರೊ ನಮ್ಮ ಮುದ್ದುವಿಠಲರೇಯ
ನಾಡಿನೊಳಗವನೆ ಜಗದೊಡೆಯ ಪರದೈವ'

'ಆತ್ಮ' ಗುಣದಿಂದ ಉಪಾಸನೆ ಮಾಡುವಾಗ ಬಿಂಬನಿಗೆ ಮೂರು ಕರ್ತೃತ್ವಾಂಶಗಳಿರುತ್ತವೆ -ಪ್ರೇರಕ, ನೇಮಕ, ಸಾಕ್ಷಿಕ ಎಂದು; ಎಲ್ಲ ಕೆಲಸಗಳನ್ನೂ ಮಾಡಲು ತೊಡಗಿಸುವುದು, ಕೆಲಸಕ್ಕೆ ತಕ್ಕ ಫಲವನ್ನು ಜೀವ ಪಡೆಯುವಂತೆ ಮಾಡುವುದು, ಕರ್ಮದ ಅಥವಾ ಫಲದ ಲೇಪವಿಲ್ಲದೆ ಶುದ್ಧನಾಗಿರುವುದು. ಜೀವನು ಕೆಲಸ ಮಾಡುವುದು, ಅದರ ಫಲಗಳನ್ನು ಅನುಭವಿಸುವುದು ತನ್ನ ಸ್ವರೂಪವಾದ ಅಲ್ಪಾಂಶದಿಂದ; ಇದೂ ದಿಟವಾಗಿ ಬಿಂಬನ ಅಂಶವೇ. ಜೀವನು ಮೂಲಪ್ರಕೃತಿಯಾದ ಲಕ್ಷ್ಮಿಯನ್ನು ಪೂಜಿಸುವಾಗ, ಬಿಂಬನ ಅಂಶಪೂಜೆಯೇ ತಾತ್ಪರ್ಯ. ಅನಾದಿ ಕರ್ಮದ ಸಂಬಂಧದಿಂದ ಜೀವನು ತನ್ನ ಬಿಂಬನ ತ್ರಿವಿಧಕರ್ತೃತ್ವವನ್ನು ಮರೆತು, ಸುಖದುಃಖದ ಅನುಭವಕ್ಕೆ ಕಾರಣವಾದ ಕರ್ಮಗಳನ್ನು ಮಾಡುತ್ತಾನೆ; ಈ ದೇಹದಿಂದ ಪಡೆದುಕೊಂಡು ಕರ್ಮಫಲವನ್ನು ಕರ್ತೃತ್ವದೊಂದಿಗೆ ಜೀವನು ಬಿಂಬನಿಗೇ ಅರ್ಪಣೆಮಾಡಿದಾಗ, ಬಿಂಬನು ಅದನ್ನು ತನ್ನ ಪೂಜೆಯೆಂದು ಬಗೆದು ಒಪ್ಪಿಸಿಕೊಳ್ಳುವನು. ತಂದೆಯು ತನ್ನ ಮಗುವಿನ ಕೈಯಿಂದ ಕೆಲಸಮಾಡಿಸಿ ನೋಡಿ ಸಂತೋಷಪಡುವಂತೆ ಬಿಂಬನೂ ಜೀವನಿಂದ ಕೆಲಸಮಾಡಿಸಿ ಅದನ್ನು ತನ್ನ ಪೂಜೆಯೆಂದು ತಿಳಿದು ಮೆಚ್ಚುವನೆಂದು ಮಧ್ವಾಚಾರ್ಯರು ತಮ್ಮ ಗೀತಾಭಾಷ್ಯದಲ್ಲಿ ಹೇಳಿದ್ದಾರೆ. ಜೀವನು ಕರ್ತೃತ್ವವನ್ನೂ, ಕರ್ಮವನ್ನೂ, ಫಲಭೋಗವನ್ನೂ ತನ್ನ ಬಿಂಬನಿಗೇ ಸಮರ್ಪಿಸಿದಾಗ ಬಿಂಬನಿಗೆ ಸ್ವರೂಪಸುಖವುಂಟಾಗುವುದೆಂದೂ ಅದೇ ಪರಮಾತ್ಮನ ಒಲುಮೆಯೆಂದೂ ಮೆಚ್ಚುಗೆಯೆಂದೂ ಭಾವನೆ. ಇದನ್ನೇ ಹರಿದಾಸರು 'ಹರಿಪ್ರೀತಿ'ಯೆಂದು ಬಣ್ಣಿಸಿದ್ದಾರೆ; 'ನಲಿವ, ನಲಿದರೆ ಒಲಿವ'.

ಹರಿಪ್ರೀತಿಗಾಗಿ ಹರಿಯ ವಿಭೂತಿಗಳನ್ನು ಮನನಮಾಡುವ ಪ್ರಕ್ರಿಯೆಯೂ ಹರಿದಾಸರಲ್ಲುಂಟು. ಮಧ್ವಾಚಾರ್ಯರು 'ತಂತ್ರಸಾರಸಂಗ್ರಹ'ದಲ್ಲಿ ಹತ್ತು ತೆರನಾದ ವಿಭೂತಿಗಳನ್ನು ಎಣಿಸಿದ್ದಾರೆ-

೧) ನೀತ- ಪ್ರತಿಮೆಗಳಲ್ಲಿ ಸಾಮಾನ್ಯರು ಕಾಣುವುದು ('ಪ್ರತಿಮಾಸು ಅಪ್ರಬುದ್ಧಾನಾಂ'), ಚಕ್ರಾಬ್ಜಮಂಡಲ, ಅಚಲ (ಶಿಲೆಯ ಪ್ರತಿಮೆಗಳು), ಹೃದಯ (ವಾಸನಾಮಯವಾದ ಮನಸ್ಸಿನಲ್ಲಿ ಮೂರ್ತಿಯಾಗಿ), ಜಲ (ಪುಣ್ಯತೀರ್ಥ, ಕಲಶೋದಕ ಇತ್ಯಾದಿ), ಸ್ಥಲ (ಕ್ಷೇತ್ರ) ಇವುಗಳಲ್ಲಿ ದೇವತಾಸಾನ್ನಿಧ್ಯವನ್ನು ಕಾಣುವುದು. ಮಧ್ವಾಚಾರ್ಯರು ಚಕ್ರಾಬ್ಜಮಂಡಲವನ್ನು ಉಲ್ಲೇಖಿಸಿದ್ದಾರಷ್ಟೆ; ವಿವರಿಸಲಿಲ್ಲ. ವಿಜಯದಾಸರ ಕಂಕಣಾಕಾರಸುಳಾದಿ ಇದನ್ನು ವಿವರಿಸುತ್ತದೆ.

೨) ಸಾಧಾರಣ- ಸ್ಥಾವರ, ಜಂಗಮ, ಪ್ರಾಣಿಪಕ್ಷಿಗಳಲ್ಲಿ ದೇವತಾಸಾನ್ನಿಧ್ಯವನ್ನು ಕಾಣುವುದು ('ಸಮಃ ಸರ್ವೇಷು ಭೂತೇಷು').

೩) ವಿಶೇಷ- ಕೆಲವು ಐತಿಹಾಸಿಕ , ಪೌರಾಣಿಕ ವ್ಯಕ್ತಿಗಳಲ್ಲಿ; ಪೃಥು, ಅರ್ಜುನ, ಬಲರಾಮ ಮೊದಲಾದವರಲ್ಲಿ ಆವಿಷ್ಟರೂಪವಾಗಿ ಪರಮಾತ್ಮನನ್ನು ಕಾಣುವುದು.

೪) ಸಜಾತಿ- ಹತ್ತು ಅವತಾರಗಳು (ವಿವರಣೆಗೆ ಮುಂದೆ ನೋಡಿ).

೫) ನೈಜ- ದೇವತೆಗಳೂ ಋಷಿಗಳೂ ತಂತಮ್ಮ ಯೋಗ್ಯತೆಗನುಗುಣವಾಗಿ, ಉಪಾಸನೆ ಮಾಡಿ ಅಪರೋಕ್ಷಾನುಭೂತಿಯನ್ನು ಪಡೆದುಕೊಂಡಾಗ ಅವರಲ್ಲಿ ದೇವತಾಸಾನ್ನಿಧ್ಯವನ್ನು ಕಂಡುಕೊಳ್ಳುವುದು ('ನಿಜೈಶ್ವರ್ಯಯುತಾ').

೬) ಆಹಿತ- ಸ್ವರೂಪೋದ್ಧಾರಕರಾದ ಗುರುಗಳು, ಆಚಾರ್ಯರು. ಪೂಜಾರ್ಹರಾದ ಅತಿಥಿಗಳು, ಹಿರಿಯರು ಇವರಲ್ಲಿ ದೇವತಾಸಾನ್ನಿಧ್ಯವನ್ನು ಗುರುತಿಸುವುದು.

೭) ಸಹಜ- ಕಲಿಕಾಲದಲ್ಲಿ ಸಾತ್ತ್ವಿಕರನ್ನು ಉದ್ಧರಿಸುವ ಸಲುವಾಗಿ ವಿವಿಧ ಕ್ಷೇತ್ರಗಳಲ್ಲಿ ಸ್ವಯಂವ್ಯಕ್ತರೂಪದಿಂದ ಪರಮಾತ್ಮನು ತೋರಿಕೊಳ್ಳುವುದು (ವೇಂಕಟಾಚಲ, ಉಡುಪಿ, ಶ್ರೀರಂಗ, ಪಂಢರಪುರ ಮೊದಲಾದುವು); ಅರ್ಚಾವತಾರಗಳು.

೮) ವಿಜಾತಿ- ಬೇರೆ ಬೇರೆ ತತ್ತ್ವೇಶರಲ್ಲಿ ಆಯಾ ರೂಪಿಗಳಂತೆಯೇ ಕಾಣಿಸಿಕೊಳ್ಳುವುದು; ಮಹತ್ತತ್ತ್ವದ ಅಭಿಮಾನಿಯಾದ ಬ್ರಹ್ಮನಲ್ಲಿ ಬ್ರಹ್ಮನಂತೆ, ಅಹಂಕಾರತತ್ತ್ವದ ಅಭಿಮಾನಿಯಾದ ರುದ್ರನಲ್ಲಿ ರುದ್ರನಂತೆ, ಆಕಾಶಾಭಿಮಾನಿಯಾದ ಗಣಪತಿಯಂತೆ ಇತ್ಯಾದಿ. ಒಂದೊಂದು ಈ ಬಗೆಯ ದೇವತೆಯೂ ದಿಟವಾಗಿ ಒಬ್ಬನೇ ಪರಮಾತ್ಮನ ವಿಶಿಷ್ಟ ವಿಭೂತಿಯೇ.

೯) ಖಂಡ- ತನ್ನ ಅನಂತಾಂಶದಿಂದ ಒಂದೊಂದು ಪದಾರ್ಥದಲ್ಲೂ, ಪದಾರ್ಥದ ಒಂದೊಂದು ತುಣುಕಿನಲ್ಲೂ ಇರುವನೆಂಬುದು; ಇಡೀ ಬ್ರಹ್ಮಾಂಡವನ್ನೆಲ್ಲ ಒಳಗೆ ಮತ್ತು ಹೊರಗೆ ವ್ಯಾಪಿಸಿರುವ ಭಾವ ('ಅಂತರ್ಬಹಿಶ್ಚ ತತ್ ಸರ್ವಂ ವ್ಯಾಪ್ಯ ನಾರಾಯಣಃ')

೧೦) ಅಖಂಡ-ಶಾಲಗ್ರಾಮಶಿಲೆ ಮೊದಲಾದುವಲ್ಲಿ ವಿಭೂತಿಯನ್ನು ಒಟ್ಟಾರೆ ಇರಿಸಿರುವುದು.

ಈ ಕಲ್ಪನೆಯಿರುವುದರಿಂದ ಹರಿದಾಸರು ತಮ್ಮ ಆಧ್ಯಾತ್ಮಿಕ ಪ್ರವೃತ್ತಿಯನ್ನು ಹಲವು

ಪ್ರಕಾರಗಳಲ್ಲಿ ಹರಿಸಿದರು: ಪುರಾಣಕತೆಗಳು, ಭಕ್ತರು, ಭಾಗವತರು, ತೀರ್ಥಕ್ಷೇತ್ರಗಳು, ಅರ್ಚಾಮೂರ್ತಿಗಳು, ಅಧ್ಯಾತ್ಮಚಿಂತನೆ ಮುಂತಾಗಿ. ಹರಿದಾಸರ ಮುಖ್ಯ ನಿಲುವೆಂದರೆ ಪರಮಾತ್ಮನು ಸಗುಣನೆಂಬುದು. "ಸತ್ಯವಿದು ಹರಿಯ ಸದ್ಗುಣಗಳೆಂಬೋ ರಾಶಿ" (ಮುದ್ದುವಿಠಲ). ಪ್ರಾಕೃತವಾದ ಆಕಾರವಿಲ್ಲದ್ದರಿಂದ ಪ್ರಾಕೃತವಾದ ಗುಣಗಳಿಲ್ಲ: ಆದರೆ ದಿವ್ಯದೇಹವಿದ್ದು ಬ್ರಹ್ಮಾಂಡದ ಎಂಟು ಮಹಾ ಕಾರ್ಯಗಳನ್ನೂ (ಸೃಷ್ಟಿ, ಸ್ಥಿತಿ, ಸಂಹಾರ, ನಿಯಮನ, ಅಜ್ಞಾನ, ಜ್ಞಾನ, ಬಂಧ, ಮುಕ್ತಿ) ನಡೆಸುವವನಾದ್ದರಿಂದ ಸಗುಣನೇ. ಪರಮಾತ್ಮನ ಎಲ್ಲ ಆಕಾರಗಳೂ ಎಲ್ಲ ಗುಣಗಳೂ ಅವನ ಇಚ್ಛೆಯಂತೆಯೆ-

> 'ನ ತೇ ರೂಪಂ ನ ಚಾಕಾರೋ ನಾಯುಧಾನಿ ನ ಚಾಸ್ಪದಂ।
> ತಥಾಪಿ ಪುರುಷಾಕಾರಃ ಭಕ್ತಾನಾಂ ತ್ವಂ ಪ್ರಕಾಶಸೇ॥'

ಜೀವಾಂತರ್ಯಾಮಿಯಾದ ಬಿಂಬನೇ ಸಗುಣ ಬ್ರಹ್ಮ; ವಿಶ್ವ, ವಿಷ್ಣು, ವಷಟ್ಕಾರ. ಅವನಿಗೆ ಅನಂತಾವತಾರಗಳು ಸಂಗತವೇ. ಜಗಜ್ಜನ್ಮಕ್ಕೆ ಕಾರಣನಾದವನೇ ಇಂದ್ರಿಯ ಪ್ರವರ್ತಕ. ಬ್ರಹ್ಮಾಂಡದ ನಾಯಕನೇ ಪಿಂಡಾಂಡಕ್ಕೂ ನಾಯಕ. ಪರಬ್ರಹ್ಮನೆಂದು ಶ್ರುತಿ ಹೇಳುವುದು ಬಿಂಬವನ್ನು ಕುರಿತೇ.

ಈ ದೃಷ್ಟಿಯಿರುವುದರಿಂದ ಬಿಂಬೋಪಾಸನೆಯಲ್ಲಿ ಸಗುಣವರ್ಣನೆಯೇ ಎದ್ದು ಕಾಣುತ್ತದೆ. ಪರಮಾತ್ಮನ ಪುರುಷಾಕಾರ, ಸೌಂದರ್ಯ, ಕಾರುಣ್ಯ, ವೀರ್ಯ, ತೇಜಸ್ಸು, ಮೊದಲಾದುವನ್ನು ವರ್ಣಿಸುವುದರಲ್ಲಿ ಹರಿದಾಸರ ಪ್ರೀತಿ ಹೆಚ್ಚು; ಅವತಾರಗಳ ತಾತ್ಪರ್ಯ, ಸ್ವಾರಸ್ಯಗಳನ್ನು ಹಾಡಿ ಹೊಗಳುವುದು ಅವರಿಗೆ ಇಷ್ಟವಾದುದು. ಅವರ ರಚನೆಗಳಿಗೆ ಸಾಮಗ್ರಿ ಪುರಾಣಗಳಿಂದಲೇ ಬಹುಮಟ್ಟಿಗೆ ಒದಗಿರುವುದು ಈ ಕಾರಣದಿಂದ. ಆಗಮಗಳಲ್ಲಿ ಅಪೌರುಷೇಯ, ಪೌರುಷೇಯ ಎಂದು ಎರಡು ವಿಭಾಗ. ಮೊದಲನೆಯದರಲ್ಲಿ ವೇದ, ಉಪನಿಷತ್ತು, ಅವನ್ನನುಸರಿಸಿದ ಭಗವದ್ಗೀತೆ, ಬ್ರಹ್ಮಸೂತ್ರಗಳು ಸೇರುತ್ತವೆ. ಎರಡನೆಯದರಲ್ಲಿ ಭಾರತ, ಪಾಂಚರಾತ್ರ, ಮೂಲರಾಮಾಯಣ, ಮತ್ತು ತತ್ತ್ವನಿಶ್ಚಯಕ್ಕೆ ಅನುಕೂಲವಾಗುವ ಪುರಾಣ ಇತಿಹಾಸ ಸ್ಮೃತಿಗಳು ಸೇರುತ್ತವೆ. ಇಲ್ಲಿಯೂ ವ್ಯಾಸಕೂಟ , ದಾಸಕೂಟಗಳಿಗಿರುವ ವ್ಯತ್ಯಾಸವನ್ನು ನೆನಪಿಗೆ ತಂದುಕೊಳ್ಳಬೇಕು. ವ್ಯಾಸಕೂಟದವರಿಗೆ ಅಪೌರುಷೇಯ ಆಗಮಗಳ ಮೇಲೆ ಹೆಚ್ಚಿನ ವಿಶ್ವಾಸ; ಹರಿದಾಸರಿಗೆ ಪಾಂಚರಾತ್ರ, ಭಾರತ, ಪುರಾಣ ಮೊದಲಾದ ಪೌರುಷೇಯ ಆಗಮಗಳ ಮೇಲೆ ಆದರ.

ಭಾರತ, ಭಾಗವತ, ಪುರಾಣ ಮೊದಲಾದುವುಗಳಲ್ಲಿ ಬರುವ ವಿವರಗಳು ಹರಿಯ ಮಾಹಾತ್ಮ್ಯೆಯನ್ನು ತಿಳಿಯಪಡಿಸುವುದರಿಂದ ಅವು ಹರಿದಾಸರಿಗೆ ಮಾನ್ಯ. ಶ್ರೀಪಾದರಾಜರೂ ವ್ಯಾಸರಾಯಸ್ವಾಮಿಗಳೂ ಪುರಾಣಪ್ರಕ್ರಿಯೆಯನ್ನು ಹೆಚ್ಚಾಗಿ ಬಳಸಿಕೊಂಡರು. ಇದಕ್ಕೆ ಕಾರಣವನ್ನು ವ್ಯಾಸರಾಯಸ್ವಾಮಿಗಳ ಶಿಷ್ಯರಾದ ವಾದಿರಾಜರು ತಿಳಿಸುತ್ತಾರೆ-

> 'ಈ ಕಲಿಯುಗದಲ್ಲಿ ಬೇಕಾದ ಪುರಾಣ ವಾಕು ವಿ
> ವೇಕದಿ ಮನದಿ ವಿಚಾರಿಸಿ
> ಸ್ವೀಕರಿಸು ವೈಷ್ಣವರ ಮತವ'

ವ್ಯಾಸರಾಯಸ್ವಾಮಿಗಳೇ "ಹರಿಚರಿತೆ ಶ್ರವಣ ದುರಿತಕುಚ್ಚಾಟನ" ಎಂದಿದ್ದಾರೆ. ಹೀಗೆ ಪುರಾಣಗಳಿಂದ, ಹರಿಕಥಾಶ್ರವಣದಿಂದ ಸಿದ್ಧವಾಗುವುದು "ಸಗುಣ ಸಾಕಾರ ಸಕಲ ಸುರರೊಡೆಯ, ನಿರ್ಜರರೆಲ್ಲ ಹರಿಯ ಕಿಂಕರರೆಂ"ಬುದು. ಪುರಾಣಗಳಲ್ಲಿ ಬರುವ ನಾಮಸ್ಮರಣೆ, ಸಂಕೀರ್ತನೆ, ಭಜನೆಗಳು ಹರಿದಾಸರಿಗೆ ವಿಹಿತವಿಧಿಗಳಾದುವು. ಇಲ್ಲಿ ಮುಖ್ಯವಾಗಿ ತೋರಿಕೊಳ್ಳುವ ಭಕ್ತಿಗೆ ದಾಸಕೂಟದಲ್ಲಿ ಒತ್ತು ಹೆಚ್ಚಿದುದು ಸಹಜವೇ; ನವವಿಧಭಕ್ತಿಗಳ ಪರಿಪಾಟಿಯೂ ಒದಗಿಬಂದಿತು.

ಭಕ್ತಿಗೆ ತಾತ್ತ್ವಿಕವಾದ ಹಿನ್ನೆಲೆಯನ್ನೂ ಗಮನಿಸಬೇಕು. ಭಕ್ತಿಯನ್ನು ಮಾಡಬೇಕಾದವನು ಜೀವ; ಭಕ್ತಿಗೆ ಗುರಿಯಾಗುವವನು ಹರಿ. ಜೀವನು ಅಣು, ನಿತ್ಯ, ಸ್ವಪ್ರಕಾಶ, ಕುದುರೆಯ ಬಾಲದ ಒಂದು ಕೂದಲನ್ನು ನೇರವಾಗಿ ಒಂದು ಸಾವಿರ ಸೀಳುಗಳಾಗಿ ವಿಭಾಗಮಾಡುವುದಾದರೆ, ಒಂದು ಸೀಳು ಜೀವನ ಸ್ವರೂಪ ಪರಿಮಿತಿ. ಈ ಜೀವನ ಹೃದಯ ಕಮಲದಲ್ಲಿ ಹರಿಯು ಮೂರು ತೆರನಾಗಿ ಇದ್ದಾನೆ. ಹೃದಯಕಮಲದ ಕರ್ಣಿಕೆಯ ತುದಿಯಲ್ಲಿ, ಸಾಧಕನ ಹೆಬ್ಬೆರಳು ಗೆಣ್ಣಿನ ಪ್ರಮಾಣದಲ್ಲಿ, 'ಅಗ್ರೇಶ'; ಇವನನ್ನು ಪ್ರಾಜ್ಞರೂಪವೆಂದು ಕರೆಯುತ್ತಾರೆ. ಜೀವರ ನಿದ್ರೆಗೆ ಇವನೇ ಕಾರಣ. ಹೃದಯಾಕಾಶದಲ್ಲಿ ಎಲ್ಲೆಲ್ಲೂ ವ್ಯಾಪಿಸಿಕೊಂಡು ಪ್ರಾದೇಶ ಪರಿಮಿತನಾಗಿ (ಎಂದರೆ ಹೃದಯಾಕಾಶವೆಷ್ಟಿದೆಯೋ ಅಷ್ಟು ಪ್ರದೇಶವನ್ನು ತುಂಬಿ) 'ಪೂರ್ಣ'. ಹೃದಯಕಮಲದ ಬುಡದಲ್ಲಿ ಹೆಬ್ಬೆರಳ ತುದಿಯಷ್ಟು ಪರಿಮಿತಿಯುಳ್ಳ 'ಮೂಲೇಶ'. ಇವನನ್ನು ವಿಜ್ಞಾನಾತ್ಮನೆಂದೂ ಕರೆಯುತ್ತಾರೆ. ಈ ಮೂಲೇಶನ ಪಾದವನ್ನಾಶ್ರಯಿಸಿ ಮುಖ್ಯಪ್ರಾಣ (ಹನುಮಂತ). ಶ್ವಾಸರೂಪನಾಗಿರುವ ಮುಖ್ಯಪ್ರಾಣನು ಹಂಸಮಂತ್ರವನ್ನು ಎಡೆಬಿಡದೆ ಜಪಿಸುತ್ತ ಇರುವನು; ಮತ್ತು ಇದೇ ಜಪವನ್ನು ಜೀವನಿಂದ ಮಾಡಿಸುತ್ತಲೂ ಇರುವನು. ಉಸಿರಾಡುವಾಗ ಉಸಿರನ್ನು ಒಳಗೆ ಎಳೆದುಕೊಳ್ಳುವುದು 'ಹಂ', ಹೊರಕ್ಕೆ ಬಿಡುವುದು 'ಸಃ'. ಇದೇ ಹಂಸಜಪ. ಪ್ರತಿಯೊಬ್ಬನೂ ದಿನಕ್ಕೆ ಇಪ್ಪತ್ತೊಂದುಸಾವಿರ ಆರುನೂರು ಸಂಖ್ಯೆಯ ಹಂಸಜಪವನ್ನು ಮಾಡುತ್ತಾನೆ. ಇದನ್ನು ಅವನಿಂದ ಮಾಡಿಸುವ ಮುಖ್ಯಪ್ರಾಣನು ಹರಿಪ್ರೀತಿಗಾಗಿಯೇ ಮಾಡಿಸುತ್ತಾನೆ.

ಎಂದರೆ ಜೀವನಿಗೆ ಸ್ವಭಾವದಲ್ಲಿಯೇ ಭಕ್ತಿಯಿದೆ. ಪ್ರತಿಬಿಂಬನಾದ ಅವನ ಹೃದಯದಲ್ಲೇ ಭಕ್ತಿಯನ್ನು ಮಾಡಿಸುವ ಮುಖ್ಯಪ್ರಾಣನೂ ಇದ್ದಾರೆ, ಭಕ್ತಿಗೆ ಗುರಿಯಾಗುವ ಪರಮಾತ್ಮನೂ ಬಿಂಬವಾಗಿ ಇದ್ದಾನೆ. ಇರುವುದು ಮಾತ್ರವಲ್ಲ, ಜೀವನನ್ನು ಉದ್ಧಾರಮಾಡಬೇಕೆಂಬ ಸಂಕಲ್ಪವನ್ನೂ ಹೊಂದಿರುತ್ತಾನೆ; ಇದೇ ಕಾರುಣ್ಯವೆನ್ನುವ ಗುಣ. ಬಿಂಬನಲ್ಲಿ ಕಾರುಣ್ಯ ಸ್ವಭಾವಸಿದ್ಧವಾದುದು. ಬಿಂಬನ ಕಾರುಣ್ಯವು ಅವನ ಪ್ರತಿಬಿಂಬರಾದ ಎಲ್ಲ ತತ್ತ್ವೇಶರಲ್ಲೂ ಇದೆ. ಜೀವನಿಗೆ ಅವರೆಲ್ಲರೂ ಆಪ್ತರೇ; ಆದರೆ ಬಿಂಬರೂಪಿಯಾದ ಪರಮಾತ್ಮನು ಆಪ್ತತಮ, ಪರಮಾಪ್ತ. ಜೀವನು ಮಾಡುವ ಭಕ್ತಿಗೆ ಪರಮಾತ್ಮನ ಪ್ರಸಾದ ಫಲರೂಪವಾದುದು. ಜೀವನಲ್ಲಿ ಸ್ವಭಾವಸಿದ್ಧವಾಗಿ ಭಕ್ತಿಯಿದ್ದರೂ ಪರಮಾತ್ಮನಲ್ಲಿ ಸ್ವಭಾವಸಿದ್ಧವಾಗಿ ಕಾರುಣ್ಯವು ಇದ್ದರೂ, ಎರಡರ ಸಮಾಗಮವಾಗಲು ಸಾಧನಸಾಮಗ್ರಿ ಇರಬೇಕು. ಸಾಧನಸಾಮಗ್ರಿಯನ್ನು ಮಧ್ವಾಚಾರ್ಯರು ತಮ್ಮ ಋಗ್ಭಾಷ್ಯದಲ್ಲಿ ಹೀಗೆ ಎಣಿಸಿದ್ದಾರೆ-

'ಸ್ವಾಧ್ಯಾಯಸ್ತತ್ತ್ವ ವಿಜ್ಞಾನಂ ವಿಷ್ಣುಭಕ್ತಿರ್ವಿರಾಗತಾ

ನಿಷಿದ್ಧಕರ್ಮಣಾಂ ತ್ಯಾಗೋ ವಿಹಿತಸ್ಯ ಸದಾ ಕ್ರಿಯಾ
ಸದಾ ವಿಷ್ಣುಸ್ಮೃತಿಶ್ಚ....'

ವಿಷ್ಣುವು ಸರ್ವೋತ್ತಮನೆಂಬ ತತ್ತ್ವದ ಅರಿವು, ವಿಷ್ಣುವಿನಲ್ಲಿ ಭಕ್ತಿ, ವಿಷಯ ಸುಖಗಳಲ್ಲಿ ವೈರಾಗ್ಯ, ಶಾಸ್ತ್ರವು ಮಾಡಬಾರದೆಂದು ಹೇಳಿರುವುದನ್ನು ಮಾಡದೆ ಇರುವುದು, ಶಾಸ್ತ್ರವು ವಿಧಿಸಿರುವುದನ್ನು ಮಾಡುವುದು, ಎಡೆಬಿಡದೆ ವಿಷ್ಣುವಿನ ಸ್ಮರಣೆ ಇವು ಸಾಧನಗಳು. ಅವರೇ ತಮ್ಮ ಅನುವ್ಯಾಖ್ಯಾನದಲ್ಲಿ "ಸಾಧನೆಗಳಲ್ಲೆಲ್ಲ ಭಕ್ತಿಯೇ ಹೆಚ್ಚಿನದು, ಅದರಂತೆ ಇರುವುದು ಯಾವುದೂ ಇಲ್ಲ" ('ಸಾಧನೇಭ್ಯೋऽಧಿಕಾ ಭಕ್ತಿಃ, ನೈವಾನ್ಯತ್ ತಾದೃಶಂ ಕ್ವಚಿತ್') ಎಂದು ಹೇಳಿದ್ದಾರೆ. ಮೋಕ್ಷಕ್ಕೆ ಜ್ಞಾನವೇ ಕಾರಣ ಎಂದು ವೇದಾಂತಿಗಳೆಲ್ಲ ಒಪ್ಪಿಕೊಳ್ಳುವಾಗ, ಮಧ್ವಾಚಾರ್ಯರು ಮೋಕ್ಷಕ್ಕೇ ಕಾರಣವಾಗುವ ಜ್ಞಾನ ಭಕ್ತಿಯ ಅಂಶವೇ ('ಭಕ್ತ್ಯಂಶಕಂ ಯತೋ ಜ್ಞಾನಂ') ಎಂದು ಹೇಳಿ ಭಕ್ತಿಯು ಜ್ಞಾನ ಮತ್ತು ಸ್ನೇಹಗಳ ಸಮಾವೇಶವೆಂದು ('ಜ್ಞಾನಸ್ನೇಹಾತ್ಮಿಕಾ ಹಿ ಸಾ') ನಿರ್ದೇಶಿಸುತ್ತಾರೆ (ಭಾಗವತ ತಾತ್ಪರ್ಯ ನಿರ್ಣಯ).

ಹರಿದಾಸರು ಮಾಡುವ ಸಾಧನ ಸಾಮಗ್ರಿಗಳ ಎಣಿಕೆ ಸ್ವಲ್ಪ ಬೇರೆ ಬಗೆಯದು. ನಿದರ್ಶನಕ್ಕೆ, ವ್ಯಾಸರಾಯಸ್ವಾಮಿಗಳು ಹೇಳಿರುವುದನ್ನು ಇನ್ನೊಂದು ಸಂದರ್ಭದಲ್ಲಿ ಆಗಲೇ ಉಲ್ಲೇಖಿಸಿದ್ದೇನೆ:

'ನಾಲಗೆಯ ಮೇಲೆ ಹರಿನಾಮ
ಎಲ್ಲರ ಮೇಲೆ ದಯ ಮಾಡಬೇಕು
ಪಾಪರಹಿತನಾಗಿರಬೇಕು
ಕಾಮಲೋಭಗಳನ್ನು ತ್ಯಜಿಸಬೇಕು
ಮಧ್ವರಾಯರನ್ನು ಯಾವಾಗಲೂ ಸ್ಮರಿಸಬೇಕು
ದೊರೆತದ್ದರೊಳಗೆ ತೃಪ್ತನಾಗಿರಬೇಕು
ಪ್ರಪಂಚದಲ್ಲಿ ತೃಪ್ತಿಯಿಂದಿರಬೇಕು'

ಅವರ ಶಿಷ್ಯರಾದ ವಾದಿರಾಜಸ್ವಾಮಿಗಳ ಎಣಿಕೆ ಹೀಗೆ-

'ಗುರುಭಕುತಿ ಬೇಕು
ಹಿರಿಯರ ಕರುಣ ಬೇಕು
ಹರಿಕಥೆಗಳ ನಿತ್ಯ ಕೇಳುತಿರಬೇಕು
ವಿರಕುತಿ ಬೇಕು
ವಿಷ್ಣುವಿನಾರಾಧನೆ ಬೇಕು
ವರಮಂತ್ರಜಪ ಬೇಕು
ತಪ ಬೇಕು ಪರಗತಿಗೆ
ಸಿರಿಹಯವದನ ಪರಮಾನುಗ್ರಹ ಬೇಕು'

ಹರಿದಾಸರು ವಿರಕ್ತಿಯ ಪ್ರಯೋಜನವನ್ನು ಎತ್ತಿ ಹೇಳುತ್ತಾರೆ. ಶ್ರೀಪಾದರಾಜರು "ಭಕ್ತಿ

ಬೇಕು" ಎಂದು ಹೇಳಿದೊಡನೆ "ವಿರಕ್ತಿ ಬೇಕು" ಎಂದು ಸೇರಿಸುತ್ತಾರೆ. ವ್ಯಾಸರಾಯಸ್ವಾಮಿಗಳ ಪ್ರಕಾರ ಸಾಧನಾಮಾರ್ಗದಲ್ಲಿ ಮೊದಲ ಹೆಜ್ಜೆಯೇ ವಿರಕ್ತಿ, ಸಂಸಾರವು ಅಸಾರವೆಂದು ಮನವರಿಕೆಮಾಡಿಕೊಂಡು 'ಗಾಳಿಗಿಕ್ಕಿದ ದೀವಿಗೆಯಂತೆ ದೇಹ', ಅದರಲ್ಲಿ ಹೇಯಬುದ್ಧಿಯನ್ನು ಬೆಳೆಸಿಕೊಳ್ಳುವುದು. ಇದರಿಂದ ಇಂದ್ರಿಯನಿಗ್ರಹ, ಇಂದ್ರಿಯನಿಗ್ರಹದಿಂದ ಸಜ್ಜನಸಂಗ, ಸಜ್ಜನಸಂಗದಿಂದ ಪರಮಾತ್ಮನಲ್ಲಿ ಅತ್ಯಧಿಕವಾದ ಸ್ನೇಹ (ಭಕ್ತಿ), ಅದರಿಂದ ಕೃಷ್ಣನೇ ಶರಣೆಂಬ ದೃಢವಾದ ವಿಶ್ವಾಸ. ಈ ಹೆದ್ದಾರಿಯನ್ನು ಹಿಡಿದು ಪುರಂದರದಾಸರೂ "ಕಟಪಟಿ ಸಂಸಾರ", "ಲೊಳಲೊಟ್ಟೆ", "ನೀರಮೇಲಣ ಗುಳ್ಳೆಯಂತೆ ನಿಜವಲ್ಲ", "ನೆಚ್ಚದಿರೀ ಭಾಗ್ಯ ಸ್ಥಿರವಲ್ಲ", "ಎಂತಾದರೂ ಚಿಂತೆ ಬಿಡದು" ಎಂದು ಬಗೆಬಗೆಯಾಗಿ ಸಂಸಾರದ ಅಸಾರತೆಯನ್ನು ವಿವರಿಸಿ ವಿರಕ್ತಿಯ ಅಗತ್ಯವನ್ನು ಸೂಚಿಸಿದ್ದಾರೆ.

ಸಂಸಾರದಲ್ಲಿ, ವಿಷಯಸುಖಗಳಲ್ಲಿ ಸಾಮಾನ್ಯಜನರಿಗಿರುವ ಆಸಕ್ತಿ, ಅನುರಾಗಗಳನ್ನು ಮಧ್ವಾಚಾರ್ಯರು 'ವಿರುದ್ಧರಾಗ'ವೆಂದು ಕರೆದಿದ್ದಾರೆ, ಮತ್ತು ಈ ರಾಗದ ವಿನಾಶವಾಗುವವರೆಗೆ ಅಪರೋಕ್ಷದರ್ಶನವಿರದು ಎಂದೂ ಸ್ಪಷ್ಟಪಡಿಸಿದ್ದಾರೆ (ಛಾಂದೋಗ್ಯಭಾಷ್ಯ, 'ವಿರುದ್ಧರಾಗಿಣಾಂ ನೈವ ಹ್ಯಪರೋಕ್ಷದೃಶಿರ್ಭವೇತ್, ಯಾವದ್ರಾಗವಿನಾಶಃ ಸ್ಯಾತ್ ವಿರಕ್ತೋ ಭಕ್ತಿಸಂಯುತಃ'). ಹೀಗೆ ಅವರು ಭಕ್ತಿಗೆ ವಿರಕ್ತಿಯೇ ಮೂಲ ಸಾಮಗ್ರಿ ಎಂದು ಹೇಳಿರುವುದು ಹರಿದಾಸರ ಮನಸ್ಸಿಗೆ ನಾಟಿತು. ಭಕ್ತಿಯು ಅನಾದಿಯಾಗಿದ್ದರೂ (ಎಂದರೆ ಜೀವರಿಗೆ ಸ್ವಭಾವಸಿದ್ಧವಾಗಿದ್ದರೂ) ಅದು ಬೆಳೆಯಲು, ಬೇರೂರಲು ವಿರಕ್ತಿಯ ಅಗತ್ಯವಿದೆ. ಸಾಧನೆಯ ದಾರಿಗೆ ವಿರಕ್ತಿಯೇ ಹೆಬ್ಬಾಗಿಲು. ಹಾಗೆಂದೇ ಪುರಂದರದಾಸರು ಸಾಧನಮಾರ್ಗವನ್ನು ಸಂಗ್ರಹಿಸಿ

> 'ವಿಷಯದ ವಿಚಾರ ಬಿಡು
> ವಿಹಿತಕರ್ಮವ ಮಾಡು
> ವೈರಾಗ್ಯಭಾಗ್ಯವ ಬೇಡು'

ಎಂದು ಸೂಚನೆಮಾಡಿದ್ದಾರೆ. ವ್ಯಾಸರಾಯಸ್ವಾಮಿಗಳ ಪ್ರಮೇಯಮಾಲಿಕೆಯಲ್ಲಿ ಬರುವ 'ಅಮಲಾ ಭಕ್ತಿಶ್ಚ ತತ್ಸಾಧನಂ' ಎಂಬ ಮಾತಿನಲ್ಲಿ 'ಅಮಲವಾದ ಭಕ್ತಿ'ಯೆಂದರೆ ವಿಷಯಕಾಮ ಅಥವಾ ಫಲೇಚ್ಛೆಯಿಲ್ಲದೆ, ವಿಷಯಭೋಗದಲ್ಲಿರುವ ಅಸಾರತೆಯನ್ನು ಅರಿತುಕೊಂಡು, ವಿರಕ್ತಿಯನ್ನು ತಳೆದು ಅಲಂಬುದ್ಧಿಯನ್ನು (ಎಂದರೆ ದೊರೆತಷ್ಟು ಸಾಕು ಎನ್ನುವ ಬುದ್ಧಿ) ಬೆಳೆಸಿಕೊಂಡು, ಅನಂತರ ಮೋಕ್ಷವನ್ನೇ ಪ್ರಯೋಜನವಾಗಿರಿಸಿಕೊಂಡ ಭಕ್ತಿ. ಸಾಮಾನ್ಯವಾಗಿ ಜನರು ಲೌಕಿಕ ಫಲಾಪೇಕ್ಷೆಯಿಂದ ಮಾಡುವ ಭಕ್ತಿ 'ಮಲಭಕ್ತಿ', ಕೊಳೆಯಿಂದ ಕೂಡಿದ ಭಕ್ತಿ. ಅದು ಮೋಕ್ಷಕ್ಕೆ ನೆರವಾಗುವುದಿಲ್ಲ.

ಹರಿದಾಸರ ಇನ್ನೊಂದು ಒತ್ತು ಭಕ್ತಿಯಾಗಲಿ, ಅದಕ್ಕೆ ದಾರಿಯಾದ ವಿರಕ್ತಿಯಾಗಲಿ, ಪರಮಾತ್ಮನ ಅನುಗ್ರಹದಿಂದಲೇ ಒದಗಿಬರಬೇಕು. ಇದನ್ನು ಶ್ರೀಪಾದರಾಜರು ಶಕ್ತಿಯೆಂದು ಕರೆದು

> ಭಕ್ತಿಬೇಕು ವಿರಕ್ತಿಬೇಕು ಸರ್ವ ಶಕ್ತಿಬೇಕು
> ಮುಕ್ತಿಯ ಮುಂದೆ ಬಯಸುವವಗೆ

ಎಂದು ಹೇಳಿದರು. ಭಕ್ತಿಯಲ್ಲಿ ಆಶ್ರಯಾಶ್ರಯಿಸಂಬಂಧವನ್ನು ಹೇಳುತ್ತಾರೆ. ಆಶ್ರಯನಾದವನು ಪರಮಾತ್ಮ; ಆಶ್ರಿತನಾದವನು ಜೀವ; ಭಕ್ತಿಯೆಂಬುದು ಆಶ್ರಯಕ್ಕೂ ಆಶ್ರಿತನಿಗೂ ಇರುವ ಸಂಬಂಧ. ಭಕ್ತಿಯು ಜೀವನಿಷ್ಠವಾದರೆ ಸೇವೆ, ದಾಸ್ಯ; ಅದೇ ಪರಮಾತ್ಮನಿಷ್ಠವಾದರೆ ಅನುಗ್ರಹ, ಪ್ರಸಾದ, ಒಲುಮೆ. ಇದು ಜೀವ ಪರಮಾತ್ಮರ ನಿತ್ಯಸಂಬಂಧ; ಇದರಲ್ಲಿ ಸತ್ತ್ವವೇ ಮುಖ್ಯಪ್ರಾಣ. ಅದರಲ್ಲಿ ರಜಸ್ಸು, ತಮಸ್ಸು ಸೇರಿಕೊಂಡರೆ ಅದು 'ಮಲಭಕ್ತಿ'; ಅದರಲ್ಲಿ ರಾಗದ್ವೇಷಾದಿಗಳು ಕೆಲಸ ಮಾಡುತ್ತವೆ. ರಜಸ್ಸು ಕೂಡಿಕೊಂಡು ಭಕ್ತಿ ಮಾಡುವವರು ಮಧ್ಯಾಧಿಕಾರಿಗಳು; ತಮಸ್ಸು ಕೂಡಿಕೊಂಡು ಭಕ್ತಿಮಾಡುವವರು ಮಂದಾಧಿಕಾರಿಗಳು. ರಜಸ್ಸಾಗಲಿ ತಮಸ್ಸಾಗಲಿ ಕೂಡಿಕೊಳ್ಳದೆ ಕೇವಲ ಸತ್ತ್ವವೇ ಇದ್ದರೆ ಅದು 'ಅಮಲ ಭಕ್ತಿ', ಅಮಲಭಕ್ತಿಯುಳ್ಳವನು ಉತ್ತಮಾಧಿಕಾರಿಯೆಂದೇ ಅರ್ಥ. ಉತ್ತಮಾಧಿಕಾರಿಗೆ ಪರಮಾತ್ಮನ ಅನುಗ್ರಹವೇ ಬೆಂಬಲ.

ಭಕ್ತಿಯಲ್ಲಿ ಜ್ಞಾನದ ಅಂಶ, ಸ್ನೇಹದ ಅಂಶ ಎರಡೂ ಸೇರುವುದೆಂದು ಹೇಳಿದೆವಷ್ಟೆ. ಯಾವುದಾದರೂ ವಸ್ತುವಿನಲ್ಲಿ ಸ್ನೇಹ ಒದಗುವುದು ಆ ವಸ್ತುವಿನ ಬಗ್ಗೆ ಇರುವ ಅರಿವಿನಿಂದ; ಮತ್ತು ಆ ವಸ್ತುವನ್ನು ಪಡೆದುಕೊಳ್ಳುವ ಬಗೆ ಹೇಗೆಂದು ತಿಳಿದಮೇಲೇ (ಇಷ್ಟಸಾಧನತಾ ಜ್ಞಾನ). ಭಕ್ತಿಯಲ್ಲಿ ಜ್ಞಾನ ಸ್ನೇಹ ಎರಡೂ ಸೇರುವಾಗ, ಸಮ ಪ್ರಧಾನವಾಗಿರಬಹುದು (ನಿದರ್ಶನಕ್ಕೆ ದೇವತೆಗಳಲ್ಲಿ), ಜ್ಞಾನ ಪ್ರಧಾನವಾಗಿದ್ದು ಸ್ನೇಹ ಅಪ್ರಧಾನವಾಗಿರಬಹುದು (ಮುನಿಗಳಲ್ಲಿ), ಅಥವಾ ಜ್ಞಾನ ಅಪ್ರಧಾನವಾಗಿದ್ದು ಸ್ನೇಹ ಪ್ರಧಾನವಾಗಿರಬಹುದು (ವಸುದೇವ ಮೊದಲಾದ ಭಕ್ತರಲ್ಲಿ). ಹರಿದಾಸರ ದೃಷ್ಟಿ ಸ್ನೇಹವನ್ನು ಬೆಳೆಸಿಕೊಳ್ಳುವುದರ ಕಡೆಗೆ; ಹಾಗೆಂದೇ ಭಕ್ತರ ಕತೆಗಳು ಅವರಿಗೆ ಪ್ರಿಯವಾದುವು. ಶ್ರವಣ, ಮನನ, ನಿಧಿಧ್ಯಾಸನಗಳನ್ನು ಅವರು ಬೇರೆ ಬಗೆಯಾಗಿಯೇ ವಿವರಿಸುತ್ತಾರೆ. ಶ್ರವಣವೆಂದರೆ ಹರಿಕಥಾಶ್ರವಣ; ಅದರಿಂದ ಮನಸ್ಸಿನ ದೋಷಗಳು ತೊಲಗುವುವು. ಮನನವೆಂದರೆ ನಾಮಸ್ಮರಣೆ (ಖಂಡಸ್ಮೃತಿ); ಭಗವಂತನ ರೂಪ, ಗುಣ, ಕ್ರಿಯೆಗಳನ್ನು ಬೇರೆ ಬೇರೆಯಾಗಿ ಮನಸ್ಸಿಗೆ ತಂದುಕೊಳ್ಳುವುದು; ಅದರಿಂದ ತತ್ತ್ವನಿರ್ಣಯ. ನಿದಿಧ್ಯಾಸನವೆಂದರೆ ಸಂಕೀರ್ತನದಲ್ಲಿ ಮೈಮರೆಯುವುದು (ಅಖಂಡಸ್ಮೃತಿ); ಭಗವಂತನ ಮಾಹಾತ್ಮ್ಯೆಯನ್ನು ಬಾಳುವೆಯಲ್ಲಿ ಬೇರೂರಿಸುವುದು. ಅದರಿಂದ ಪರಮಾತ್ಮನಲ್ಲಿ ಅತ್ಯಧಿಕವಾದ ಭಕ್ತಿ ಒದಗುವುದು. ಸಾಂಪ್ರದಾಯಿಕವಾದ ಶ್ರವಣಮನನಗಳನ್ನು ಹರಿದಾಸರು ಜರಿದು ಹೀಗೆ ಹೇಳುತ್ತಾರೆ-

ಮನವು ಸ್ಥಿರಗೊಳ್ಳದವನ ಶ್ರವಣವೇತಕೆ
ನೆನೆವು ನೆಲೆಗೊಳ್ಳದಿರೆ ಮನನವೇತಕೆ
ತನುವು ಘನವ ಕಾಣದ ಅನುಭವವ್ಯಾತಕೆ
ದಾನಿ ಮಹೀಪತಿಸ್ವಾಮಿಯ ಕಾಣದ ಜನುಮವೇತಕೆ

ಈಗಿನ ಕಾಲಕ್ಕೆ ಹರಿಕಥಾಶ್ರವಣ, ನಾಮಸ್ಮರಣೆಗಳೇ ಸರಿಯಾದ ದಾರಿಯೆಂದು ಹದಿದಾಸರ ಶ್ರದ್ಧೆ.

ಧ್ಯಾನವು ಕೃತಯುಗದಲ್ಲಿ ಯಜ್ಞ

ಯಾಗವು ತ್ರೇತಾಯುಗದಲ್ಲಿ
ಅರ್ಚನೆ ದ್ವಾಪರಯುಗದಲ್ಲಿ
ಕೀರ್ತನೆ ಮಾತ್ರದಿ ಕಲಿಯುಗದಲ್ಲಿ ಮು
ಕುತಿಯನ್ನೀವ ಪುರಂದರವಿಠಲ

ಎನ್ನುವ ಉಗಾಭೋಗವಿದೆಯಷ್ಟೆ. ಇದು ಪುರಂದರವಿಠಲಾಂಕಿತ. ಇದೇ ಉಗಾಭೋಗ ವ್ಯಾಸರಾಯಸ್ವಾಮಿಗಳ ಹೆಸರಿನಲ್ಲೂ ಇದೆಯೆನ್ನುವುದು ಸ್ವಾರಸ್ಯ. ವ್ಯಾಸರಾಯಸ್ವಾಮಿಗಳ ಶಿಷ್ಯರೇ ಆಗಿದ್ದ ವಿಜಯೀಂದ್ರತೀರ್ಥರು ಶಾಸ್ತ್ರಸಂಪನ್ನರೇ ಆಗಿದ್ದು ವಾದಗ್ರಂಥಗಳನ್ನು ರಚಿಸಿದರಾದರೂ ವ್ಯಾಸರಾಯಸ್ವಾಮಿಗಳ ಈ ದೃಷ್ಟಿ ಅವರ ಮೇಲೆ ಪ್ರಭಾವ ಬೀರದಿರಲಿಲ್ಲ. ಅವರದ್ದೊಂದು ಪದ

'ನಿನ್ನ ಕೀರುತಿ ಕಿವಿಗೆ ನಾಮವೆನ್ನ ನಾಲಗೆಗೆ
ಎನ್ನ ಕಣ್ಣಿಗೆ ನಿನ್ನ ಮೂರುತಿ ದೊರೆಯಲೋ
ಎನ್ನ ಮನಕೆ ನೆನವ ಸಿರಿ ವಿಜಯೀಂದ್ರ ರಾಮ'

ವ್ಯಾಸರಾಯಸ್ವಾಮಿಗಳ ಇನ್ನೊಬ್ಬ ಶಿಷ್ಯ ವೈಕುಂಠದಾಸರೂ ಇದೇ ತಾತ್ಪರ್ಯವನ್ನು ಇದೇ ಧಾಟಿಯಲ್ಲಿ ಹೇಳಿದ್ದಾರೆ-

'ನಿನ್ನ ಕೀರುತಿ ಕಿವಿಗೆ ನಾಮ
ಎನ್ನ ನಾಲಿಗ್ಗೆ ಚಾರು ಲಾವಣ್ಯ
ಎನ್ನ ಕಣ್ಣಿಗೆ ಆ ಆ ಇದೆ ಸಾರವಯ್ಯ
ಸಿರಿ ವೈಕುಂಠವಿಠಲ ವೇಲಾಪುರಧೀಶ'

ಪುರಂದರದಾಸರಂತೂ ಈ ದೃಷ್ಟಿಯನ್ನೇ ಪ್ರಧಾನವಾಗಿ ಹಿಡಿದಿದ್ದಾರೆ. ಅವರ ಕೀರ್ತನೆಗಳಲ್ಲಿ ಬಹುಮಟ್ಟಿಗೆ ಬರುವುದು ನಾಮಸ್ಮರಣೆಯ ಹೆಗ್ಗಳಿಕೆ, ಸಂಕೀರ್ತನ ಪದ್ಧತಿಯ ಹಿರಿಮೆ.

ಇದರಿಂದಾಗಿ ಆಧ್ಯಾತ್ಮಿಕ ಸಾಧನೆಯಲ್ಲಿ ಪೂಜೆಯ ಕಟ್ಟುಪಾಡು ಸಡಿಲವಾಯಿತು. ಶಾಸ್ತ್ರದಲ್ಲಿ ಹೇಳುವಂತೆ ವಿಸ್ತಾರವಾಗಿ, ಹಲವಾರು ಪರಿಕರಗಳಿಂದ ಕೂಡಿ, ವಿಧ್ಯುಕ್ತವಾಗಿ ಮಾಡುವ ದೇವರ ಪೂಜೆಯಲ್ಲಿ ಸಂಪತ್ತಿನ ಅಗತ್ಯವೂ ಇದೆ, ಆಡಂಬರದ ಪಾತ್ರವೂ ಇದೆ. ಮಠಗಳಲ್ಲಿ ಶ್ರೀಮಂತರ ಮನೆಗಳಲ್ಲಿ ನಡೆಯುವ ಪೂಜೆ ಹರಿದಾಸರ ಗಮನಕ್ಕೆ ಬಂದಿರಬೇಕು. ತಾವೇ ಮಠಾಧಿಪತಿಗಳಾಗಿದ್ದ ವ್ಯಾಸರಾಯಸ್ವಾಮಿಗಳಿಗೂ ಇದರ ಆಭಾಸ ಮನದಟ್ಟಾಗಿರಬೇಕು. ಹಾಗೆಂದೇ

'ಒಂದೆ ಹೂವು ಒಂದು ಫಲವೊಂದೆ
ಬಿಂದುಜಲವೊಂದೆ ತುಳಸಿದಳ
ಒಂದೇ ಕೇವಲದನೆಯೊಂದೆ ಪ್ರದಕ್ಷಿಣೆ
ಒಂದನರ್ಪಿಸಿದೊಡೆ ಕುಂದದಾನಂದವೀವ'

ಎಂದೂ

'ನುಡಿದ ಶಬ್ದಗಳೆಲ್ಲ ಹೂವುಗಳು
ನಡೆವುದೆಲ್ಲವು ನಾಟ್ಯಂಗಳು'

ಎಂದೂ

'ನಿನ್ನ ಮೂರುತಿ ಒಮ್ಮೆ ನೆನೆದೊಡೆ ನೋಡಿದೊಡೆ
ನಿನ್ನ ನಾಮವನೊಮ್ಮೆ ಪಾಡಿದೊಡೆ
ಘನ್ನ ಭವಬಂಧ ಹರಿವುದೋ'

ಎಂದೂ ಹೇಳಿದರು. ಸುಲಭಪೂಜೆಯ ಮಾರ್ಗವನ್ನು ಎತ್ತಿ ತೋರಿಸಿದವರು ಅವರೇ. ಬಹಿರಂಗವಾಗಿ ಆಡಂಬರದಿಂದ ಮಾಡುವ ಪೂಜೆಗಿಂತ 'ಅಂತರಂಗದಲಿ ಹರಿಯಕಾಣು'ವುದರ ಸ್ವಾರಸ್ಯವನ್ನು ಕಾಣಿಸಿದರು. ಮಾನಸಪೂಜೆಯ ಹಿರಿಮೆಯನ್ನೂ ಅವರು ತೋರಿಸಿದರು-

'ಅನ್ಯದೇವತೆ ಯಾಕೆ
ಅನ್ಯ ಪ್ರತಿಮೆ ಯಾಕೆ
ಅನ್ಯವಾದ ಮಂತ್ರ ತಂತ್ರವೇಕೆ
ಎನ್ನಲ್ಲಿ ಭರಿತ ಸಾಧನೆಗಳಿರುತಿರಲು
ಚೆನ್ನಾಗಿ ಶ್ರೀಕೃಷ್ಣಸ್ವಾಮಿಯ ಪೂಜಿಸುವೆ'

ಹರಿದಾಸಸಂಪ್ರದಾಯದಲ್ಲಿ ಮಾನಸಪೂಜೆಗೆ ಬೆಲೆ ಹೆಚ್ಚು. ವಿಷ್ಣುತೀರ್ಥರು (ಅಡವಿ ಆಚಾರ್ಯರು, ೧೭೫೦-೧೮೦೬) ತಮ್ಮ ಚತುರ್ದಶೀ ಗ್ರಂಥದಲ್ಲಿ ಶರೀರವೇ ದೇವಮಂದಿರ, ಹೃದಯಕಮಲವೇ ಮಂಟಪ, ಜೀವಸ್ವರೂಪವೇ ಪ್ರತಿಮೆ, ಅದರಲ್ಲಿ ಸನ್ನಿಹಿತವಾಗಿರುವುದೇ ಪರಮಾತ್ಮನ ಬಿಂಬ, ಅವನ ಅಖಂಡಸ್ಮೃತಿಯೇ ಧ್ಯಾನ ಎಂದು ಮೊದಲುಮಾಡಿ ಬಹಿಃಪೂಜೆಯ ಎಲ್ಲ ವಿವರಗಳಿಗೂ ಮಾನಸಪ್ರವೃತ್ತಿಗಳನ್ನು ಸಾಂಕೇತಿಕವಾಗಿ ಸೂಚಿಸಿದ್ದಾರೆ. ಇದು 'ಅನಾಯಾಸದಿಂದ ಮಾಡುವ ಪೂಜೆ', ಸುಲಭಪೂಜೆ ಎಂದೂ ಹೇಳಿದ್ದಾರೆ. ಅವರ ಗುರುಗಳಾದ ವ್ಯಾಸತತ್ತ್ವಜ್ಞರು (ಐಜೀ ಆಚಾರ್ಯರು ೧೭೦೪-೧೮೦೦) ತಮ್ಮ 'ಮಾನಸಸ್ಮೃತಿ'ಯಲ್ಲಿ ಸಾಧಕನು ತನ್ನ ದೇಹವನ್ನು ವಿಷ್ಣುರಥವೆಂದೂ ಅದ್ಭುತವಾದ ಈಶಾಧಿಷ್ಠಾನವೆಂದೂ ಬಗೆದು ಅದರಲ್ಲೇ ಬಿಂಬೋಪಾಸನೆಯನ್ನು ಮಾನಸಧ್ಯಾನಪದ್ಧತಿಯಲ್ಲಿ ನೆರವೇರಿಸುವ ವಿಧಿಯನ್ನು ವಿವರಿಸಿದ್ದಾರೆ. ಹರಿದಾಸರ ನಿಲುವನ್ನು ಸಂಸ್ಕೃತದಲ್ಲಿ ನಿರೂಪಿಸಿರುವ ಗ್ರಂಥಗಳು ಇವೆರಡು. ಗ್ರಂಥಕರ್ತರಿಬ್ಬರೂ ವ್ಯಾಸಕೂಟದಲ್ಲೂ ಸೈ ಎನಿಸಿಕೊಂಡಿದ್ದವರು. ಹರಿದಾಸರ ಆಧ್ಯಾತ್ಮಿಕ ಪ್ರವೃತ್ತಿ ಹರಡಿಕೊಳ್ಳುತ್ತಿದ್ದುದರ ಸೂಚನೆ ಇದು.

ಅಂತೂ, ಶ್ರೀಪಾದರಾಜರು, ವ್ಯಾಸರಾಯಸ್ವಾಮಿಗಳು, ಪುರಂದರದಾಸರು ಇವರು ಮೂವರು ಹರಿದಾಸರ ಆಧ್ಯಾತ್ಮನಿಷ್ಠೆಯ ಗೊತ್ತುಗುರಿಯನ್ನು ನಿರ್ಧರಿಸಿದರೆನ್ನಬಹುದು. ಅದು ದಿಟವಾಗಿ ಅಧ್ಯಾತ್ಮ (ಅಧಿ-ಆತ್ಮ) ನಿಷ್ಠೆಯೇ; ಸಾಧಕನು ತನ್ನ ಆತ್ಮನಲ್ಲೇ ಪರಮಾತ್ಮನನ್ನು ಕಾಣುವ ತವಕ, ಕಾಣುವ ಪರಿ. 'ಅಂತರಂಗದಲಿ ಹರಿಯ ಕಾಣದವ ಹುಟ್ಟು ಕುರುಡನೋ' ಎಂದು ವ್ಯಾಸರಾಯರು ಹೇಳಿದುದೇ ಮೂಲಸೂತ್ರವಾಯಿತು. ಇದಕ್ಕೆ ವ್ಯಾಖ್ಯಾನರೂಪವಾಗಿ ಪುರಂದರದಾಸರು

'ಕಣ್ಣಿನೊಳಗೆ ನೋಡೊ ಹರಿಯ ಒಳ
ಗಣ್ಣಿನಿಂದಲಿ ನೋಡೊ ಮೂಜಗದ ಧೊರೆಯ

ಆಧಾರ ಮೊದಲಾದ ಆರು ಚಕ್ರವ
ಶೋಧಿಸಿ ಬಿಡಬೇಕು ಏಷಣಾತ್ರಯ
ಸಾಧಿಸಿ ಸುಷುಮ್ನಾ ಏರಿ ಅಲ್ಲಿ
ಭೇದಿಸಿ ನೀ ಪರಬ್ರಹ್ಮನ್ನ ಸೇರು'

ಎಂದು ಮೊದಲಾಗಿ ಹೇಳಿದುದು ಸಾಧಕರಿಗೆ ಉಪನಿಷದ್ವಾಕ್ಯಗಳಂತೆ ಮಾನ್ಯವಾದುವು.

ಪುರಂದರದಾಸರ ಪದಗಳನ್ನು ಅವರ ಗುರುಗಳಾದ ವ್ಯಾಸರಾಯಸ್ವಾಮಿಗಳು ಪುರಂದರೋಪನಿಷತ್ತೆಂದೇ ಕರೆದರೆಂದು ಉಲ್ಲೇಖವಿದೆ. ಇದರ ಹಿನ್ನೆಲೆಯಲ್ಲಿ ದಾಸರ ಮಗನೆನ್ನಲಾದ ಗುರುರಾಯ ಹೇಳಿದ ಕತೆಯೂ ಹಿಂದೆ ಬಂದಿದೆ. ಕತೆಯಲ್ಲಿ ತಥ್ಯಾಂಶವೆಷ್ಟಿದೆಯೋ ತಿಳಿಯದು; ಸ್ವಾರಸ್ಯವಂತೂ ಇದೆ. ಮತ್ತೊಮ್ಮೆ ಹೇಳಬಹುದು. ಒಮ್ಮೆ ಮಠದಲ್ಲಿ ಭೋಜನವಾದ ಮೇಲೆ ಸ್ವಾಮಿಗಳು ಶಿಷ್ಯರೊಂದಿಗೆ ಕುಳಿತಿದ್ದಾಗ ಅವರ ಮುಂದೆ ಎಂದಿನಂತೆ ಸಂಸ್ಕೃತದ ಶಾಸ್ತ್ರಗ್ರಂಥಗಳು ಇದ್ದುವಂತೆ. ಪುರಂದರದಾಸರು ಬಂದು ಗುರುಗಳಿಗೆ ನಮಸ್ಕರಿಸಿ ತಾವು ಬರೆದಿದ್ದ ಕನ್ನಡ ಕೀರ್ತನೆಗಳ ಕಟ್ಟೊಂದನ್ನು ತಂದು ನೆಲದ ಮೇಲೆ ಗುರುಗಳ ಮುಂದಿರಿಸಿದರಂತೆ. ಆ ಕಟ್ಟು ಒಡನೆಯೇ ನೆಲದಿಂದ ಜಿಗಿದು ಗುರುಗಳ ಮುಂದಿದ್ದ ಶಾಸ್ತ್ರಗ್ರಂಥಗಳ ಮೇಲೆ ಕುಳಿತಿತಂತೆ. ಸ್ವಾಮಿಗಳ ಪರಿಚಾರಕರು, ಪಂಡಿತರು ಸಂಸ್ಕೃತಶಾಸ್ತ್ರಗ್ರಂಥಗಳ ಮೇಲೆ ಕನ್ನಡದ ಪದಗಳು ಕೂರುವುದು ಸರಿಯಲ್ಲವೆಂದು ಬಗೆದು ಅವನ್ನು ತೆಗೆದು ನೆಲದ ಮೇಲೆ ಅಸಡ್ಡೆಯಿಂದ ನೂಕಿದರಂತೆ-

'ಪದಗಳು ಬರೆದ ವಹಿ ಮುಂಕೊಂಡು ಪೋಗಿ
ಮಧ್ವಶಾಸ್ತ್ರದ ಮೇಲೆ ಕುಳ್ಳಿರಲಾಗ ಕಂಡು
ಹದನನರಿಯದೆ ದಿಂಡಿಯವನೊಬ್ಬನು ಆ
ಪದದೋಹಿ ತೆಗೆದು ಬಿಸುಟನಾಗ'

ಆದರೆ ಪದಗಳು ಮತ್ತೆ ಜಿಗಿದು ಶಾಸ್ತ್ರಗ್ರಂಥಗಳ ಮೇಲೇ ಕುಳಿತುವಂತೆ. ಹೀಗೆ ಮತ್ತೆರಡು ಬಾರಿ ಆಯಿತಂತೆ. ಆಗ ವ್ಯಾಸರಾಯಸ್ವಾಮಿಗಳು

'ವರನಾಲ್ಕು ವೇದಗಳುಂಟು ಅಲ್ಲ
ನರರುತ್ತಮರೆಲ್ಲ ನೋಡಿ ಹರುಷದಿಂದ
ಧರೆಯೊಳಗೆ ಪುರಂದರ ಉಪನಿಷತ್ತೆಂದರು'

ವೇದಗಳಿಗೂ ಉಪನಿಷತ್ತಿಗೂ ಇರುವ ಪ್ರಧಾನವಾದ ಭೇದವೆಂದರೆ ವೇದದಲ್ಲಿ ಬಹಿಃಪ್ರವೃತ್ತಿ, ಉಪನಿಷತ್ತುಗಳಲ್ಲಿ ಅಂತಃಪ್ರವೃತ್ತಿ; ವೇದದ ಅಧಿದೈವದ ದೃಷ್ಟಿ, ಉಪನಿಷತ್ತಿನ ಅಧ್ಯಾತ್ಮ ದೃಷ್ಟಿ. ಹೀಗೆ ವ್ಯಾಸರಾಯಸ್ವಾಮಿಗಳು 'ಪುರಂದರೋಪನಿಷತ್ತೆ'ಂದು ಪುರಂದರದಾಸರ ರಚನೆಗಳನ್ನು ಕರೆದದ್ದು ಸರಿಯೇ. ವ್ಯಾಸರಾಯಸ್ವಾಮಿಗಳೂ ಉಪನಿಷತ್ತಿನ ಧೋರಣೆಯನ್ನೇ ಹಿಡಿದು.

'ಬಲ್ಲವಗಿಲ್ಲಿದೆ ವೈಕುಂಠ, ಬಲ್ಲವಗೆಲ್ಲೋ ಶ್ರೀಹರಿಪೂಜೆ'

ಎಂದು ಮುಕ್ತಿಯನ್ನು ನಿತ್ಯಜೀವನದಲ್ಲೇ ಕಾಣಿಸಿದರು. ವೈಕುಂಠವೆಂಬುದು ಎಲ್ಲೋ ಇರುವ ಲೋಕವೇ? ಸಾಧಕನ ಅಂತರಂಗದಲ್ಲೇ ಇರುವ ಪರಮಾತ್ಮನ ನಿತ್ಯನಿವಾಸ. ಅದನ್ನರಿಯದೆ ಪಂಡಿತಮೂರ್ಖರು ಬರಿದೆ ಪರದಾಡುತ್ತಾರೆ. ಪುರಂದರದಾಸರ ಮಾತಿನಲ್ಲಿ "ಪಿಂಡಾಂಡದೊಳಗಿನ ಗಂಡನ ಕಾಣದೆ ಮುಂಡೇರಾದರು ಪಂಡಿತರೆಲ್ಲ"! ಇದು ದಾಸರು ತೋರಿಸಿದ ದಾರಿ-

'ಮನವ ದಂಡಿಸಿ ಪರಮಾತ್ಮನ್ನ ಕಾಣೋ
ಕೊನೆಗೆ ನಿನ್ನೊಳಗೆ ನೀ ಜಾಣೋ ಮುಕ್ತಿ
ನಿನಗೆ ದೂರಿಲ್ಲವು ಒಂದೆ ಗೇಣೋ'

ಅಧ್ಯಾಯ ಆರು

ಹರಿದಾಸರ ಸಂಪ್ರದಾಯ ಸಂಗೀತ

ಬದುಕಿನಲ್ಲೇ ಸಂಪ್ರದಾಯಕ್ಕೊಂದು ನೆಲೆಯಿದೆ, ಬೆಲೆಯಿದೆ ಎಂದ ಮೇಲೆ ಬದುಕಿನ ಒಂದು ಪ್ರಕಾರವಾದ ಕಲೆಯಲ್ಲಿ ಸಾಂಪ್ರದಾಯಿಕತೆಯ ಪಾತ್ರವಿರದೆ? ಸಂಗೀತಪ್ರಪಂಚದಲ್ಲಿ ಸಂಪ್ರದಾಯ ಸಂಗೀತವೆಂಬ ವಿಭಾಗವಿದೆಯಷ್ಟೆ. ಸ್ವಚ್ಛಂದ ಸಂಗೀತವೆಂಬ ವಿಭಾಗದಿಂದ ಬೇರ್ಪಡಿಸಿಯೇ ಈ ವಿಭಾಗ. ಜಗತ್ತಿನ ಎಲ್ಲ ಸಂಗೀತಪದ್ಧತಿಗಳಲ್ಲೂ ಈ ವಿಭಾಗವಿದೆ. 'ಕ್ಲಾಸಿಕಲ್', 'ಟ್ರೆಡಿಷಿನಲ್' ಎಂಬ ಹೆಸರುಗಳಿಂದ ಹೊರದೇಶಗಳಲ್ಲಿ ಪ್ರಚುರವಾಗಿದೆ. ನಮ್ಮಲ್ಲಿ 'ಶಾಸ್ತ್ರೀಯ', 'ಪರಂಪರಾಗತ' ಎಂಬ ಹೆಸರುಗಳೂ ವಾಡಿಕೆಯಲ್ಲಿವೆ. ಹೊರದೇಶಗಳ ಸಂಪ್ರದಾಯ ಸಂಗೀತಕ್ಕೆ ಶಾಸ್ತ್ರದ ಚೌಕಟ್ಟು ಅಷ್ಟು ಸ್ಪಷ್ಟವಾಗಿಲ್ಲ; ಮುಖ್ಯವಾದ ಪ್ರಕಾರ ಎಂದೆನಿಸಿಕೊಂಡೂ ಇಲ್ಲ. ಆದರೆ ನಮ್ಮಲ್ಲಿ ಸಂಪ್ರದಾಯ ಸಂಗೀತ ಇಂದಿಗೂ ಪ್ರಧಾನವಾಗಿಯೇ ಉಳಿದು ಕೊಂಡುಬಂದಿದೆ. ಅದಕ್ಕೆ ಶಾಸ್ತ್ರದ ಚೌಕಟ್ಟು ಮಾತ್ರವಲ್ಲದೆ ಅಧ್ಯಾತ್ಮ ಪ್ರಕ್ರಿಯೆಗಳ ಒಡನಾಟವೂ ಇದೆ; ಯೋಗದ ನಂಟೂ ಇಲ್ಲದೆ ಇಲ್ಲ.

ಸಂಪ್ರದಾಯವೆಂದರೆ ಯಾವುದೋ ಓಬೀರಾಯನ ಕಾಲದ್ದೆಂದೂ, ಇಂದಿಗೆ ಅದು ಪ್ರಸ್ತುತತೆಯನ್ನು ಕಳೆದುಕೊಂಡಿದೆಯೆಂದೂ, ಕಾಲಕ್ಕೆ ತಕ್ಕಂತೆ ಮಾರ್ಪಡದೆ ನಿಂತು ನಾರುತ್ತಿರುವ ನೀರೆಂದೂ ಕೆಲವರು ಭಾವಿಸುವಂತೆ ತೋರುತ್ತದೆ. ಸಂಪ್ರದಾಯ ಸಂಗೀತಕ್ಕೆ ಅಂಟಿಕೊಂಡಿರುವವರಲ್ಲಿ ಕೂಡ ಈ ಭಾವನೆಯಿದೆ; ಅದು ಬೆಳೆಯುತ್ತಲೂ ಇದೆ. ಆಧುನಿಕರು ತಮ್ಮನ್ನು ಸಂಪ್ರದಾಯಶೀಲ ರೆಂದು ಎಲ್ಲಿ ಕಡೆಗಣ್ಣಿಂದ ಕಂಡಾರೋ ಎಂಬ ಅಂಜಿಕೆಯಿದೆಯಾಗಿ, ಆಧುನಿಕರನ್ನನುಕರಿಸಿ ಸಂಪ್ರದಾಯಸಂಗೀತಗಾರರೂ ತಮ್ಮ ವೇಷ-ಭೂಷ, ನಡೆ-ನುಡಿಗಳನ್ನು ಮಾರ್ಪಡಿಸಿಕೊಳ್ಳುತ್ತಿದ್ದಾರೆ. ಈ ಕೀಳರಿಮೆ (ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್) ಅಷ್ಟಕ್ಕೆ ಮಾತ್ರ ನಿಲ್ಲದೆ, ಅವರ ಸಂಗೀತದಲ್ಲೂ ಕಾಣಬರುತ್ತಿದೆ. ಸ್ವಚ್ಛಂದವಾದ ವಿನ್ಯಾಸ, ವಿನೂತನವಾದ ನಿರೂಪಣೆ, ಅಪೂರ್ವರಾಗಗಳ ನಿರ್ಮಿತಿ, ಸುಗಮ ಸಂಚಾರ, ವ್ಯವಹಾರಶೀಲತೆ ಮುಂತಾದುವು ಕಾಣಿಸಿಕೊಳ್ಳುತ್ತಿವೆ.

ಅಲ್ಪಸಂತೋಷಿಗಳಾದ ಸಂಗೀತರಸಿಕರು, ಅಲ್ಪಸಾಧನೆಯ ಸಂಗೀತವಿದ್ವಾಂಸರು; ಶ್ರವಣಸುಖವೇ ಮುಖ್ಯವೆನ್ನುವ ಶ್ರೋತೃಗಳು, ರಂಜನೆಯೇ ಪ್ರಧಾನವೆನ್ನುವ ಗಾಯಕರು, ಅಂತೆಗೆ ತಕ್ಕ ಬೊಂತೆ! ಸಭೆಯಲ್ಲಿರುವವರಾಗಲಿ, ಸಭೆಗೆ ಸಂತೋಷ ನೀಡಲು ಬಂದ ಕಲಾವಿದರಾಗಲಿ

ಸಂಸ್ಕಾರವಿಲ್ಲದವರಾದರೆ ಸಂಪ್ರದಾಯಸಂಗೀತದಲ್ಲಿ ರುಚಿ ಕಾಣುವುದು ಕಷ್ಟ. ಸಂಪ್ರದಾಯ ಸಂಗೀತದಲ್ಲಿ ಅಭಿರುಚಿಯಷ್ಟೆ ಇದ್ದರೆ ಸಾಲದು; ಶ್ರದ್ಧೆಯೂ ಇರಬೇಕು, ಜ್ಞಾನವೂ ಇರಬೇಕು, ದೃಷ್ಟಿಯೂ ಇರಬೇಕು. ಈ ಮಾತು ಸಂಗೀತವಿದ್ವಾಂಸರಿಗೂ ಸಂಗೀತರಸಿಕರಿಗೂ ಸಮನಾಗಿಯೇ ಅನ್ವಯಿಸುತ್ತದೆ. ಸಂಪ್ರದಾಯ ಸಂಗೀತವೆಂದರೆ ಗಾಬರಿಯಾಗಿ ಓಡುವ, ಅಥವಾ ರೊಚ್ಚಿಗೆದ್ದು ಮೂಗುಮುರಿಯುವ ಸಂಗೀತವಲ್ಲ. ರಸಿಕಶಿಖಾಮಣಿಗಳಿಗೂ ಸಂಪ್ರದಾಯಸಂಗೀತದ ದಿಟವಾದ ನಿಲುವು ಏನೆಂಬುದು ತಿಳಿಯಬೇಕು.

ಸಂಪ್ರದಾಯವೆಂಬ ಮಾತಿನ ಮೂಲಾರ್ಥ 'ಹಿಂದಿನವರು ನಮ್ಮ ಹಿತಕ್ಕೆಂದು ಕೊಟ್ಟದ್ದು; ನಾವು ಅದನ್ನು ಸ್ವೀಕರಿಸಿ ಉಳಿಸಿಕೊಂಡದ್ದು'. ಭರತಮುನಿಗಳು 'ಗುರುಪರಂಪರೆಯಿಂದ ಬಂದ ಸದುಪದೇಶ' ಎಂದು ಈ ಮಾತಿಗೆ ಅರ್ಥ ಮಾಡಿದ್ದಾರೆ. ಶಿಷ್ಟರೆಂದರೆ ಯಾರು? ಉಪದೇಶಮಾಡುವವರು, ಹೀಗೆ ಮಾಡೆಂದು ಶಾಸನಮಾಡುವವರು. ಅವರು ಮಾಡುವ ಉಪದೇಶವಾಗಲಿ ಶಾಸನವಾಗಲಿ ಅವರ ಸ್ವಂತ ಬುದ್ಧಿಯಿಂದ ಬಂದದ್ದಾಗಿರದೆ ಶಾಸ್ತ್ರದಿಂದ ಬಂದದ್ದಾಗಿರಬೇಕೆಂದು ಪತಂಜಲಿ ಮುನಿಗಳ ಒಕ್ಕಣೆ ('ಶಾಸ್ತ್ರಪೂರ್ವಿಕಾ ಹಿ ಶಿಷ್ಟಿಃ'). ಅವರ ವ್ಯಾಕರಣ ಮಹಾಭಾಷ್ಯದಲ್ಲಿ ಶಿಷ್ಟರು ಶಾಸ್ತ್ರಕುಶಲರು ಮಾತ್ರವಲ್ಲದೆ, ಅಲೋಲುಪರೂ (ಎಂದರೆ ಅತಿ ಆಶೆಯಿಲ್ಲದವರೂ), ಅಗ್ರಹಮಾಣಕಾರಣರೂ (ಎಂದರೆ ಯಾವುದಾಗಲಿ ಲೌಕಿಕವಾದ ಉದ್ದೇಶವನ್ನಿರಿಸಿಕೊಳ್ಳದವರು) ಯಾವೊಂದು ಪ್ರಯೋಜನದ ಬಯಕೆಯೂ ಇರದೆ ವಿದ್ಯೆಯನ್ನು ಕಲಿತು ಪಾರಂಗತರಾದವರೂ ಆಗಿರಬೇಕೆಂದು ಹೇಳಿದೆ (ತತ್ರ ಭವಂತಃ ಶಿಷ್ಟಾಃ). ಪತಂಜಲಿ ಮುನಿಗಳನ್ನೇ ಭರ್ತೃಹರಿ ತನ್ನ ಭಾಷ್ಯದೀಪಿಕೆಯಲ್ಲಿ 'ಆದಿಶಿಷ್ಟ'ರೆಂದು ಕರೆದಿದ್ದಾನೆ (ಶಿಷ್ಟರಲ್ಲಿ ಪ್ರಮುಖರೆಂದರ್ಥ).

ಮತ್ಸ್ಯಪುರಾಣದಲ್ಲಿ ಶಿಷ್ಟರು ಯಾರೆಂಬುದಕ್ಕೆ ಕೊಟ್ಟಿರುವ ವಿವರಣೆ - ಯಾರು ಜನರನ್ನು ಸಂತೋಷಪಡಿಸುವುದೇ ತಮ್ಮ ಮುಖ್ಯೋದ್ದೇಶವಾಗಿರಿಸಿಕೊಂಡು, ಧರ್ಮವನ್ನು ಸಾಧಿಸಲು ತೊಡಗುವರೋ ಅವರು ('ಲೋಕಸಂತೋಷಕಾರಣಾತ್, ತಿಷ್ಠಂತೀಹ ಧರ್ಮಾರ್ಥಂ ತಾನ್ ಶಿಷ್ಟಾನ್ ಪರಿಚಕ್ಷತೇ'). ಧರ್ಮ ಬೆಳೆಯುವುದೂ ಶಿಷ್ಟರಾದವರ ಆಚರಣೆಯಿಂದಲೇ ('ಶಿಷ್ಟಾಚಾರ ವಿವೃದ್ಧಸ್ತು ಧರ್ಮಃ'). ಎಂದರೆ ಧರ್ಮವೆಂಬ ಪುರುಷಾರ್ಥಕ್ಕೂ ಶಿಷ್ಟರಿಗೂ ನಂಟಿದೆಯೆಂದಾಯಿತು. ಮನುಷ್ಯನ ಬಯಕೆಯನ್ನೆಲ್ಲ ಗಮನಿಸಿ ನಾಲ್ಕು ಪುರುಷಾರ್ಥಗಳೆಂದು ವಿಂಗಡಿಸಿದೆಯಷ್ಟೆ? ಧರ್ಮ, ಅರ್ಥ, ಕಾಮ, ಮೋಕ್ಷ ಎಂದು. ಅರ್ಥವೆಂದರೆ ಹಣದ ಸಂಪಾದನೆ, ಕಾಮವೆಂದರೆ ವಿಷಯಸುಖಗಳನ್ನು ಪಡೆದುಕೊಳ್ಳುವುದು. ಇವೆರಡಕ್ಕೆ ಶಾಸ್ತ್ರದ ಅಗತ್ಯವೇನಿರದು; ವ್ಯವಹಾರದಿಂದಲೇ ತಿಳಿದುಕೊಳ್ಳುವೆವು. ಧರ್ಮವೆಂದರೆ ಸದಾಚಾರ ನಿಷ್ಠೆ, ಮೋಕ್ಷವೆಂದರೆ ಸಂಸಾರದ ಬಂಧದಿಂದ ಬಿಡುಗಡೆ. ಇವೆರಡೂ ಶಾಸ್ತ್ರದಿಂದಲೇ ತಿಳಿದುಬರಬೇಕು. ಶಿಷ್ಟರ ಪ್ರಯೋಜನ ಜನರಿಗಿರುವುದು ಈ ಎರಡು ವಿಚಾರಗಳಲ್ಲಿ. ಪ್ರಸಿದ್ಧ ಶಾಸ್ತ್ರಮೀಮಾಂಸಕರಾದ ಕುಮಾರಿಲಭಟ್ಟರು ತಮ್ಮ ತಂತ್ರವಾರ್ತಿಕದಲ್ಲಿ ಹೀಗೆಯೇ ಹೇಳಿದ್ದಾರೆ. ('ಯದ್ಧರ್ಮಮೋಕ್ಷಸಂಬಂಧಿ ತದ್ವೇದಪ್ರಭವಂ; ಯತ್ತು ಅರ್ಥಸುಖವಿಷಯಂ ತಲ್ಲೋಕವ್ಯವಹಾರಮಿತಿ ವಿವೇಕ್ತವ್ಯಂ')

ಎಂದರೆ, ಸಂಪ್ರದಾಯದಲ್ಲಿ ಮುಖ್ಯವಾದ ವಿವರಗಳು ಧರ್ಮವನ್ನು ಕುರಿತಂತೆ, ಮೋಕ್ಷವನ್ನು ಕುರಿತಂತೆ ಇರತಕ್ಕವು. ಶಾಸ್ತ್ರವಾದರೋ ನಾಲ್ಕೂ ಪುರುಷಾರ್ಥಗಳನ್ನು ಸಮನಾಗಿಯೇ ಎತ್ತಿಕೊಳ್ಳುತ್ತದೆ. ಅರ್ಥಶಾಸ್ತ್ರ, ಕಾಮಶಾಸ್ತ್ರ, ಧರ್ಮಶಾಸ್ತ್ರ, ವೇದಾಂತಗಳಿಲ್ಲವೆ? ಆದರೆ ಧರ್ಮ-ಮೋಕ್ಷ ಪರವಾದ ಶಾಸ್ತ್ರವೇ ಸಂಪ್ರದಾಯಕ್ಕೆ ಅನುಗುಣವಾಗುವುದು. ಶಂಕರಾಚಾರ್ಯರು ಗೀತಾಭಾಷ್ಯದಲ್ಲಿ 'ಯಾರಾಗಲಿ, ಎಲ್ಲ ಶಾಸ್ತ್ರಗಳನ್ನು ತಿಳಿದವನಾದರೂ, ಸಂಪ್ರದಾಯವನ್ನು ಅರಿಯದವನಾದರೆ ದಡ್ಡನೆಂದು ಅವನನ್ನು ದೂರವಿರಿಸಬೇಕು' ('ಸರ್ವಶಾಸ್ತ್ರವಿದಪಿ ಅಸಂಪ್ರದಾಯವಿತ್ ಮೂರ್ಖವದು ಪೇಕ್ಷಣೀಯಃ') ಎಂದು ಹೇಳಿರುವುದು ಇದೇ ಅಭಿಪ್ರಾಯದಲ್ಲಿಯೇ. ಪತಂಜಲಿಮುನಿಗಳು ಶಿಷ್ಟರಿಗೆ ಹೇಳಿರುವ ಲಕ್ಷಣಗಳು ಸಂಪ್ರದಾಯಶುದ್ಧವಾದ ಶಾಸ್ತ್ರಪ್ರಕ್ರಿಯೆಯನ್ನೇ ಎತ್ತಿಹಿಡಿಯುತ್ತವೆ.

ಇಷ್ಟು ಸಾಮಾನ್ಯವಾಗಿ ಸಂಪ್ರದಾಯದ ವಿಚಾರವಾಯಿತು. ಇನ್ನು ಸಂಪ್ರದಾಯಸಂಗೀತ ವೆಂದರೇನು? ಮೇಲೆ ಕಾಣಿಸಿದ ಸಂಪ್ರದಾಯದ ಚೌಕಟ್ಟಿನಲ್ಲಿ ಮೂಡಿಕೊಂಡು ಬಂದ ಸಂಗೀತ. ಅದು ಸಂಗೀತಶಾಸ್ತ್ರಕ್ಕೆ ಅನ್ವಯಿಸುವ ಮಾತಲ್ಲ. ಶಾಸ್ತ್ರೀಯಸಂಗೀತವೇ ಸಂಪ್ರದಾಯ ಸಂಗೀತ ಎನ್ನುವಂತಿಲ್ಲ. ಅರ್ಥಶಾಸ್ತ್ರದಂತೆ, ಕಾಮಶಾಸ್ತ್ರದಂತೆ, ಸಂಗೀತಶಾಸ್ತ್ರವೂ ಸಂಗೀತದ ಪ್ರಕಾರಗಳನ್ನೂ, ಪರಿಕರಗಳನ್ನೂ, ಉಪಕರಣಗಳನ್ನೂ, ಪ್ರಯೋಗವನ್ನೂ ವಿವೇಚನೆ ಮಾಡಹೊಡುತ್ತದೆ. ಅದರ ಹಿಂದಿರಬೇಕಾದ ಮನೋಸಿದ್ಧತೆಯನ್ನಾಗಲಿ, ಅದು ಹೊಂದಿರಬೇಕಾದ ಉದ್ದೇಶವನ್ನಾಗಲಿ ಅದು ಚರ್ಚೆಗೆ ಎತ್ತಿಕೊಳ್ಳುವುದಿಲ್ಲ; ಅದು ಸಂಪ್ರದಾಯಕ್ಕೆ ಸೇರಿದ ವಿಚಾರ. ಹೀಗಿರುವುದರಿಂದ, ಶಾಸ್ತ್ರದ ಚೌಕಟ್ಟಿಗೆ ಸೇರಿಕೊಂಡ ಮಾತ್ರದಿಂದ ಅದು ಸಂಪ್ರದಾಯ ಸಂಗೀತವಾಯಿತು ಎಂದು ಹೇಳುವ ಹಾಗಿಲ್ಲ. ಶಾಸ್ತ್ರೀಯ ಸಂಗೀತದ ನೆಲೆಯೇ ಬೇರೆ, ಸಂಪ್ರದಾಯ ಸಂಗೀತದ ನೆಲೆಯೇ ಬೇರೆ. ಎರಡೂ ಕೂಡಿಕೊಳ್ಳುವುದೇನೋ ಸಾಧ್ಯವೇ. ಕರ್ನಾಟಕಸಂಗೀತದ ಹೆಚ್ಚುಗಾರಿಕೆ ಶಾಸ್ತ್ರೀಯ-ಸಂಪ್ರದಾಯ ಸಂಗೀತಗಳೆರಡರ ಸಂಗಮವಾಗಿರುವುದೇ. ಉತ್ತರಾದಿ ಸಂಗೀತದಲ್ಲಿ ಭಜನೆಯೊಂದನ್ನು ಬಿಟ್ಟರೆ ಸಂಪ್ರದಾಯಸಂಗೀತದ ಸ್ವಾರಸ್ಯವನ್ನು ಅಷ್ಟಾಗಿ ಕಾಣಲಾರೆವು; ಶಾಸ್ತ್ರೀಯವೆಂಬ ಅಂಶವೇನೋ ಇದೆ.

ಇದನ್ನು ಹೇಳುವ ಕಾಣರವೇನೆಂದರೆ ನಮ್ಮ ಸಂಪ್ರದಾಯಸಂಗೀತ ಬೆಳೆದುಬಂದ ದಾರಿಯನ್ನು ಗುರುತಿಸಬೇಕೆಂದರೆ ಬರಿಯ ಶಾಸ್ತ್ರ ಪರಂಪರೆಯ ಇತಿಹಾಸವನ್ನು ಹಿಡಿದರೆ ಸಾಲದು ಎಂದು ಸೂಚಿಸುವುದು. ಶಾಸ್ತ್ರೀಯ ಸಂಗೀತಕ್ಕೂ ಸಂಪ್ರದಾಯ ಸಂಗೀತಕ್ಕೂ ಇರುವ ಅಂತರವನ್ನು ಪುರಂದರದಾಸರೇ ತಮ್ಮ 'ತಾಳಬೇಕು, ತಕ್ಕ ಮೇಳ ಬೇಕು' ಎಂಬ ಹಾಡಿನಲ್ಲಿ-

'ತಾಳಮೇಳಗಳಿದ್ದು ಪ್ರೇಮವಿಲ್ಲದ ಗಾನ
ಕೇಳನೋ ಹರಿ ತಾಳನೋ'

ಎಂದು ಮಾರ್ಮಿಕವಾಗಿ ಸೂಚಿಸಿದ್ದಾರೆ. ತ್ಯಾಗರಾಜಸ್ವಾಮಿಗಳೂ 'ಸಂಗೀತಜ್ಞಾನಮು ಭಕ್ತಿವಿನಾ ಸನ್ಮಾರ್ಗಮು ಗಲದು' ಎಂದು ಪ್ರತಿಧ್ವನಿಸಿದ್ದಾರೆ. ಶಾಸ್ತ್ರೀಯ ಸಂಗೀತವನ್ನು ಸಂಪ್ರದಾಯ ಸಂಗೀತಕ್ಕೆ ಅಳವಡಿಸಿದ ಯಶಸ್ಸು ಇವರಿಬ್ಬರಿಗೂ ಸೇರುತ್ತದೆ. ಶಾಸ್ತ್ರೀಯಸಂಗೀತಕ್ಕೂ ಸಂಪ್ರದಾಯ ಸಂಗೀತಕ್ಕೂ ಸಹಜವಾದ ಒಂದು ನಂಟಿದೆ ಎಂಬುದನ್ನೂ ಇವರಿಬ್ಬರು ಮನವರಿಕೆ ಮಾಡಿಕೊಟ್ಟರು.

ಎಟ್ಟಯಾಪುರಂ ಸುಬ್ಬರಾಮದೀಕ್ಷಿತರು ೧೯೦೪ರಲ್ಲಿ ತಮ್ಮ 'ಸಂಗೀತಸಂಪ್ರದಾಯ ಪ್ರದರ್ಶಿನಿ'ಯನ್ನು ಪ್ರಕಟಿಸಿದರು. ಇದು ಸಂಪ್ರದಾಯಸಂಗೀತವನ್ನು ಕುರಿತದ್ದಲ್ಲ; ಶಾಸ್ತ್ರೀಯ ಸಂಗೀತದ ಸಂಪ್ರದಾಯವನ್ನು ಕುರಿತದ್ದು. ಪರಂಪರಾಗತವಾದ ಲಕ್ಷ್ಯ-ಲಕ್ಷಣಜ್ಞಾನ ಇದರಲ್ಲಿ ಸಂಗ್ರಹವಾಗಿರುವುದರಿಂದ ಇದು ಪ್ರಮಾಣಗ್ರಂಥವೆನಿಸಿತು. ಇದರ ಚೌಕಟ್ಟಿನಲ್ಲಿ ರೂಪುಗೊಂಡ ಶಾಸ್ತ್ರೀಯ ಸಂಗೀತವನ್ನೇ ಸಂಪ್ರದಾಯಸಂಗೀತವೆಂದು ಗುರುತಿಸುವ ವಾಡಿಕೆ ಬೆಳೆದುಬಂದಿದೆ. ಈ ಗ್ರಂಥದ ಹೆಸರಲ್ಲಿರುವ 'ಸಂಪ್ರದಾಯ'ಕ್ಕೆ ನಾವು ಮೇಲೆ ಕಾಣಿಸಿದ ಸಂಪ್ರದಾಯಾರ್ಥವಿಲ್ಲ; ಪರಂಪರೆಯೆಂಬುದಷ್ಟೆ ಇಲ್ಲಿ ಧ್ವನಿತವಾಗುವ ವಿವರ.

ಸಂಗೀತವು ಪ್ರಮುಖವಾಗಿ ಪ್ರಯೋಗನಿಷ್ಠವಾದ ಕಲೆ. ಶಾಸ್ತ್ರಗ್ರಂಥಗಳಿಂದ ಪ್ರಯೋಗದ ಭಾಗ ಸಿದ್ಧವಾಗುವುದಿಲ್ಲ. ಪ್ರಯೋಗದಲ್ಲಿ ಪ್ರಚುರವಾದುದನ್ನು ಶಾಸ್ತ್ರ ಎತ್ತಿಕೊಂಡು ಅದನ್ನು ಉಪದೇಶವಾಗಿಯೋ ಆದೇಶವಾಗಿಯೋ ಕಾಣಿಸುತ್ತದೆಯೆಂದು ಹೇಳಬಹುದಷ್ಟೆ. ಅದರಲ್ಲಿ ಶಾಸ್ತ್ರಕಾರನ ಸ್ವಂತ ನಿಲುವು, ಒಲವು, ಗುಣ, ದೋಷ ಕೆಲಸಮಾಡುವುದಿಲ್ಲವೆ? ಶಾಸ್ತ್ರದ ಆದೇಶವೂ ಶಿಷ್ಟರ ಪ್ರಯೋಗವೂ ಸೇರಿಬಂದರೆ ಸಂಪ್ರದಾಯವಾಗುವ ಸಾಧ್ಯತೆಯಿದೆಯೆಂದು ಸುಬ್ಬರಾಮ ದೀಕ್ಷಿತರೂ ಸೂಚಿಸಿದ್ದಾರೆ. ಶಾಸ್ತ್ರದ ಮಾತು ಕಾಲಕ್ರಮದಲ್ಲಿ ಮರೆಯಾಗುವುದು ಸಹಜ; ಆದರೆ ಉಳಿದುಕೊಳ್ಳುವುದೂ ಉಂಟು, ಗ್ರಂಥವಾದುದರಿಂದ. ಪ್ರಯೋಗವಾದರೋ ಮೊದಲಿಗೆ ತೀರ ಕ್ಷಣಿಕವಾದದ್ದು; ಅದಕ್ಕೆ ಕಾಲಾಂತರದ ಅಸ್ತಿತ್ವವೆಂಬುದು ಸ್ವತಂತ್ರವಾಗಿರುವುದು ಸಾಧ್ಯವಿರಲಿಲ್ಲ. ಈಗೇನೂ ಧ್ವನಿಮುದ್ರಣದ ವ್ಯವಸ್ಥೆಯಿಂದ ಪ್ರಯೋಗವನ್ನು ಹಿಡಿದಿಟ್ಟುಕೊಳ್ಳುವುದೂ ಸಾಧ್ಯ ವಾಗಿದೆ. ಶಾಸ್ತ್ರಕ್ಕೆ ಗ್ರಂಥವಿದೆ, ಪ್ರಯೋಗಕ್ಕೆ ಯಂತ್ರವಿದೆ. ಈ ಸೌಲಭ್ಯ ಇರದಿದ್ದಾಗ ಪ್ರಯೋಗವೇನಿದ್ದಿತೆಂಬುದು ಪರಂಪರೆಯಿಂದಲೇ ತಿಳಿಯಬೇಕು.

ವೇದಾಧ್ಯಯನದಂತೆ, ವೇದಪಾಠದಂತೆ ಸಂಗೀತವನ್ನೂ ಗುರುಪರಂಪರೆಯಲ್ಲೇ ಮೌಖಿಕಪದ್ಧತಿಯಲ್ಲಿ ಉಳಿಸಿಕೊಂಡುಬಂದದ್ದು ನಮ್ಮವರ ವಿಶೇಷ ಸಾಹಸ. ಗುರು -ಶಿಷ್ಯ ಪರಂಪರೆಯಲ್ಲಿ ಶಿಷ್ಯನಿಗೆ ಕೆಲವು ಲಕ್ಷಣಗಳನ್ನು ಹೇಳಿದ್ದಾರೆ- 'ಶಾಂತಃ, ವಿನೀತಃ, ಶುದ್ಧಾತ್ಮಾ, ಶ್ರದ್ಧಾವಾನ್, ಧಾರಣಕ್ಷಮಃ, ಸಮರ್ಥಃ, ಕುಲೀನಃ, ಪ್ರಾಜ್ಞಃ, ಸಚ್ಚರಿತಃ, ವ್ರತೀ'. ಅತಿಯಾದ ಆಸೆಯಿರದೆ ಇದ್ದದ್ದರಲ್ಲಿ ನೆಮ್ಮದಿಯಿಂದಿರುವವನು ಶಾಂತ. ಗುರುವಿನ ಬಗ್ಗೆ ಗೌರವವಿರಿಸಿಕೊಂಡು ಅವನ ಅಣತಿಯನ್ನು ಅನುಸರಿಸುವವನು ವಿನೀತ. ತನ್ನ ವಿದ್ಯೆಯಿಂದ ತನ್ನ ಪಾರಮಾರ್ಥಿಕವಾದ ಉನ್ನತಿಯಾಗಬೇಕಷ್ಟೆ ಎಂದು ನಂಬಿರುವವನು ಶುದ್ಧಾತ್ಮ. ತಾನು ಕಲಿಯುವ ವಿದ್ಯೆ ಬೇರೊಂದು ಆಸರೆಯ ನೆರವಿಲ್ಲದೆ ತಾನೇ ಪುರುಷಾರ್ಥಗಳನ್ನು ನೀಡಬಲ್ಲುದು ಎಂಬುದು ಶ್ರದ್ಧೆ. ಒಳ್ಳೆಯ ನಡತೆಯಿರುವವನು ಸಚ್ಚರಿತ. ಬುದ್ಧಿವಂತನಾದವನು ಸಮರ್ಥ. ಗುರು ಹೇಳಿಕೊಟ್ಟದ್ದನ್ನು ಹಾಗೆಯೇ ಮನದಟ್ಟು ಮಾಡಿಕೊಳ್ಳುವವನು, ಅದರ ಸ್ವರೂಪವಾಗಲಿ ಸ್ವಭಾವವಾಗಲಿ ಕೆಡದಂತೆ ಉಳಿಸಿಕೊಳ್ಳ ಬಲ್ಲವನು ಧಾರಣಕ್ಷಮ. ಈ ಲಕ್ಷಣಗಳನ್ನು ನೋಡಿದಾಗ ಸಂಪ್ರದಾಯ ಸಂಗೀತಕ್ಕೆ ಅಗತ್ಯವಾದ ವಿವರಗಳು ತಿಳಿದುಬರುತ್ತವೆ. ನೆಮ್ಮದಿ, ವಿನಯ, ಬುದ್ಧಿ, ಶ್ರದ್ಧೆ, ಧಾರಣಕ್ಷಮತೆ ಇರದಿದ್ದರೆ ಪರಂಪರೆಯ ಸಂಪ್ರದಾಯ ಮುಂದುವರಿಯಲಾರದು.

ಆದರೆ ಗುರು-ಶಿಷ್ಯಪರಂಪರೆಯು ಮೊದಲಿದ್ದಂತೆಯೇ ಸಂಗೀತಪ್ರಯೋಗವನ್ನು ಎಲ್ಲ ಕಾಲಕ್ಕೂ ಹಿಡಿದಿಟ್ಟಿರುತ್ತದೆ ಎಂದು ಯಾರು ಹೇಳಿಯಾರು? ಶಿಷ್ಯನಿಗೆ ಪ್ರತಿಭೆಯಿದ್ದರೆ ಪ್ರಯೋಗವನ್ನು ಮಾರ್ಪಡಿಸಿಯಾನು, ಇನ್ನಷ್ಟು ಆಕರ್ಷಣೆಯನ್ನು ಅದರಲ್ಲಿ ತುಂಬಿಯಾನು, ಶಾಸ್ತ್ರದ ಚೌಕಟ್ಟಿನಲ್ಲೇ ಹೊಸ ಪ್ರಯೋಗಗಳನ್ನು ನಡೆಸಿಯಾನು. ಶಾಸ್ತ್ರಪ್ರಕ್ರಿಯೆಯಲ್ಲಿ ವೈಯಾಕರಣೆಯಾದ ಕೈಯಟನು 'ಯಥೋತ್ತರಂ ಮುನೀನಾಂ ಪ್ರಾಮಾಣ್ಯಂ' ಎಂಬ ಸೂತ್ರವನ್ನು ಹೇಳಿದ್ದಾನೆ. ಮುಂದೆ ಬಂದ ಮುನಿಯು ಹಿಂದಿನ ಮುನಿಗಿಂತ ಹೆಚ್ಚು ಪ್ರಮಾಣಭೂತನಾದವನು ಎಂದು ಇದರ ಅರ್ಥ. ವ್ಯಾಕರಣ ಕ್ಷೇತ್ರದಲ್ಲಿ ಪಾಣಿನಿ, ಅವನ ನಂತರ ಕಾತ್ಯಾಯನ, ಅವನ ನಂತರ ಪತಂಜಲಿ ಹೀಗೆ ಮುನಿಗಳು ಬಂದರು; ಇವರಲ್ಲಿ ಪಾಣಿನಿಯ ಆದೇಶಕ್ಕಿಂತ ಕಾತ್ಯಾಯನನ ಆದೇಶಕ್ಕೆ ಹೆಚ್ಚು ಬೆಲೆ; ಕಾತ್ಯಾಯನನ ಮಾತಿಗಿಂತ ಪತಂಜಲಿಯ ಮಾತು ಹೆಚ್ಚಿನ ಬೆಲೆಯುಳ್ಳದ್ದು. ಈ ಸೂತ್ರದ ಅನ್ವಯ ಸಂಗೀತ ಪರಂಪರೆಗೂ ಅನ್ವಯಿಸುತ್ತದೆ.

ಪ್ರಯೋಗಪ್ರಪಂಚದಲ್ಲಿ ಇದು ಅನಿವಾರ್ಯವೇ ಆಗುತ್ತದೆಯೆನ್ನಿ. ಸದ್ಯದ ಗುರುವೇ ಪ್ರಮಾಣ ಪುರುಷ; ಅವನ ಹಿಂದಿನವರನ್ನು ಕಟ್ಟಿಕೊಂಡು ನಾವೇನು ಮಾಡಿಯೇವು? ಅರಿಯಕ್ಕುಡಿ ರಾಮಾನುಜ ಅಯ್ಯಂಗಾರ್ಯರ ವಿನಿಕೆಯನ್ನು ಕೇಳಿದ್ದೇನೆ, ಮೆಚ್ಚಿಕೊಂಡಿದ್ದೇನೆ. ನನ್ನ ಮಟ್ಟಿಗೆ ಅವರೇ ಪ್ರಮಾಣ ಪುರುಷರು. ಅವರ ಗುರುಗಳಾಗಿದ್ದ ರಾಮನಾಥಪುರಂ ಶ್ರೀನಿವಾಸಯ್ಯಂಗಾರ್ಯರು, ಅವರ ಗುರುಗಳಾದ ಪಟ್ಟಣಂ ಸುಬ್ರಹ್ಮಣ್ಯಅಯ್ಯರ್, ಅವರ ಗುರುಗಳಾದ ಮಾನಂಬುಚಾವಡಿ ವೆಂಕಟಸುಬ್ಬಯ್ಯರ್, ಅವರ ಗುರುಗಳಾದ ತ್ಯಾಗರಾಜರು ಇವೆಲ್ಲರ ಪ್ರಯೋಗಸಂಗೀತ ಹೇಗಿದ್ದಿತೆಂಬುದು ಯಾರಿಗೆ ತಿಳಿದಿದೆ? ಅವರ ವಿಚಾರವಾಗಿ ಕತೆ, ಕಿಂವದಂತಿಗಳಿವೆಯಷ್ಟೆ; ಅವುಗಳಿಂದ ಅವರ ಸಂಗೀತದ ಸ್ವರೂಪವೇನಾದರೂ ಅರಿವಿಗೆ ಬರುತ್ತದೆಯೆ? ಅವರ ಕೃತಿಗಳನ್ನು ಗಮನಿಸಿದರೂ ಅವರು ಹೇಗೆ ಹಾಡುತ್ತಿದ್ದರೆಂಬುದು ತಿಳಿದೀತೆ? ಧ್ವನಿಮುದ್ರಣವಿದ್ದಿದ್ದರೆ ಆ ಮಾತು ಬೇರೆ.

ಇನ್ನು, ಶಾಸ್ತ್ರಪರಂಪರೆಯಲ್ಲಿ ಮೈಲಿಗಲ್ಲುಗಳು ಕಾಣಸಿಗುತ್ತವೆ. ಶಾರ್ಙ್ಗದೇವನಿಂದ ತೊಡಗಿ ಸುಬ್ಬರಾಮದೀಕ್ಷಿತರವರೆಗೆ ಹಲವಾರು ಘಟ್ಟಗಳನ್ನು ಎಣಿಸಬಹುದು. ಶಾರ್ಙ್ಗದೇವನಿಗೂ ಮುಂಚೆ ಭೂಲೋಕಮಲ್ಲನೆನಿಸಿದ ಸೋಮೇಶ್ವರನ (ಆಳ್ವಿಕೆ ೧೧೧೬-೧೧೨೭) 'ಮಾನಸೋಲ್ಲಾಸ' (ಅಥವಾ 'ಅಭಿಲಷಿತಾರ್ಥ ಚಿಂತಾಮಣಿ'), ಅವನ ಮಗ ಜಗದೇಕಮಲ್ಲನ (ರಾಜ್ಯಭಾರ ೧೧೩೪-೧೧೪೩) 'ಸಂಗೀತ ಚೂಡಾಮಣಿ' (ಪ್ರಬಂಧ, ತಾಳ, ರಾಗ, ವಾದ್ಯ, ನೃತ್ಯಗಳೆಂಬ ಐದು ಅಧ್ಯಾಯಗಳನ್ನೊಳಗೊಂಡ ಗ್ರಂಥ) ಇವರ ಬರಹಗಳಿಂದ ಶಾಸ್ತ್ರಪ್ರಕ್ರಿಯೆಯ ಅರಿವಾಗುತ್ತದೆ. ಮುಂದೆ ನಿಃಶಂಕಶಾರ್ಙ್ಗದೇವ (ಸುಮಾರು ೧೨೩೦) 'ಸಂಗೀತರತ್ನಾಕರ'ವನ್ನು ಸಿದ್ಧಪಡಿಸಿದ್ದು ಶಾಸ್ತ್ರೀಯ ಸಂಗೀತ ಪರಂಪರೆಯಲ್ಲಿ ಮೊದಲ ಮೈಲಿಗಲ್ಲೆನ್ನಬಹುದು. ಶಾರ್ಙ್ಗದೇವನು ಜಗದೇಕಮಲ್ಲನನ್ನು ಉಲ್ಲೇಖಿಸಿಕೊಂಡಿರುವುದೇನೋ ದಿಟ. ಆದರೆ ಸಂಗೀತ ಕ್ಷೇತ್ರದಲ್ಲಿ ಶಾರ್ಙ್ಗ ದೇವನ ಸಂಗೀತರತ್ನಾಕರ' ಪಡೆದ ಪ್ರಸಿದ್ಧಿ ಹಿಂದಿನೆಲ್ಲವನ್ನೂ ಹಿಂದಕ್ಕೆ ಸರಿಸಿಬಿಟ್ಟಿತು.

ಮುಂದೆ ಪಾರ್ಶ್ವದೇವನ 'ಸಂಗೀತಸಮಯಸಾರ' (ಸುಮಾರು ೧೨೫೦),

ದ್ಯಾರಣ್ಯ ಸ್ವಾಮಿಗಳ 'ಸಂಗೀತಸಾರ' (೧೩೨೦-೧೩೮೦), ಚತುರ ಕಲ್ಲಿನಾಥನ 'ಕಲಾನಿಧಿ' (ಶಾರ್ಙ್ಗದೇವನ 'ಸಂಗೀತ ರತ್ನಾಕರ'ಕ್ಕೆ ವ್ಯಾಖ್ಯಾನ, ೧೪೨೦), ಬಯಕಾರ ರಾಮಾಮಾತ್ಯನ 'ಸ್ವರಮೇಳಕಳಾನಿಧಿ' (೧೫೫೦ ರ ಸುಮಾರು), ಗೋವಿಂದದೀಕ್ಷಿತನ 'ಸಂಗೀತಸುಧಾ' (೧೬೦೦ ರ ಸುಮಾರು), ವೇಂಕಟಮಖಿಯ 'ಚತುರ್ದಂಡಿ ಪ್ರಕಾಶಿಕೆ' (೧೬೬೦), ತುಳಜಾಜಿಯ 'ಸಂಗೀತಸಾರಾಮೃತ' (೧೭೩೫), ಕಡೆಗೆ ಎಟ್ಟಯಾಪುರದವರ 'ಸಂಗೀತಸಂಪ್ರದಾಯ ಪ್ರದರ್ಶಿನಿ' (೧೯೦೪), ಇವೆಲ್ಲ ನಮ್ಮ ಶಾಸ್ತ್ರೀಯ ಸಂಗೀತದ ಮೈಲಿಗಲ್ಲುಗಳೇ. ಈ ಗ್ರಂಥಗಳಲ್ಲಿ ಆಯಾಕಾಲದ ಪ್ರಬಂಧಗಳು, ರಾಗಗಳು, ತಾಳಗಳು, ವಾದ್ಯಗಳು, ಗಾಯನಕ್ರಮ ಮೊದಲಾದ ವಿವರಗಳು ದೊರೆಯುತ್ತವೆ. ಆದರೆ ಯಾವ ಶಾಸ್ತ್ರಗ್ರಂಥವಾಗಲಿ ಪ್ರಯೋಗದಲ್ಲಿ ಸಂಗೀತದ ಸ್ವರೂಪ ಹೇಗಿದ್ದಿತೆಂಬುದನ್ನು ಕುರಿತಂತೆ ಬೆಳಕನ್ನು ಚೆಲ್ಲಲಾರದು. ಇದು ಬರವಣಿಗೆಗೆ ಸಿಗುವಂಥ ವಿವರವಲ್ಲ

ಮೇಲಾಗಿ, ರಾಮಾಮಾತ್ಯನು ಹೇಳುವಂತೆ 'ಲಕ್ಷ್ಯ-ಲಕ್ಷಣಯೋರ್ಬಹುಧಾ ವಿರೋಧಃ' ಎಂಬುದು ಈ ಎಲ್ಲ ಘಟ್ಟಗಳಲ್ಲೂ ಇದ್ದಿರಬೇಕು. ಲಕ್ಷಣವೆಂದರೆ ಶಾಸ್ತ್ರಗ್ರಂಥಗಳಲ್ಲಿ ಬರುವ ಒಕ್ಕಣೆ; ಲಕ್ಷ್ಯವೆಂದರೆ ಈ ಒಕ್ಕಣೆಯನ್ನು ಪ್ರಯೋಗದಲ್ಲಿ ಇಳಿಸಿದಾಗ, ಅನ್ವಯಿಸಿದಾಗ ಕಾಣಿಸಿಕೊಳ್ಳುವ ಪ್ರಯೋಗಾನುಕೂಲದ ರಚನೆ. ಇವೆರಡರ ನಡುವೆ ಅಂತರವಿರುವುದನ್ನು ಎಲ್ಲ ಶಾಸ್ತ್ರಕಾರರೂ ಗಮನಿಸಿರಬೇಕು. ಶಾಸ್ತ್ರವಿಹಿತವಾದುದು ಒಂದು; ಪ್ರಯೋಗದಲ್ಲಿ ಬರುವುದು ಇನ್ನೊಂದು. ಹಿಂದಿನ ಘಟ್ಟದಲ್ಲಿ ಶಾಸ್ತ್ರದುಷ್ಟವೆನಿಸಿದರೂ ಪ್ರಯೋಗಸಿದ್ಧವಾದುದು ಮುಂದಿನ ಘಟ್ಟದಲ್ಲಿ ಶಾಸ್ತ್ರವಿಹಿತವೇ ಆಗುವುದೂ ಉಂಟು. ಸಂಗೀತದಂಥ ಕಲೆಯಲ್ಲಿ ಪ್ರಯೋಗವನ್ನನುಸರಿಸಿಯೇ ಶಾಸ್ತ್ರವಲ್ಲವೆ? ರಾಮಾಮಾತ್ಯನ ಗ್ರಂಥದಲ್ಲಿಯೂ 'ಲಕ್ಷ್ಯಾನುಸಾರತಃ', 'ಲಕ್ಷ್ಯಾನುರೋಧಾತ್', 'ಲಕ್ಷ್ಯೇ ತು ಕುತ್ರಚಿತ್' ಮುಂತಾದ ಮಾತುಗಳನ್ನು ಗಮನಿಸಬಹುದು.

ತಾತ್ಪರ್ಯವಿಷ್ಟೆ- ಮೊದಲು ಪ್ರಯೋಗ, ಅನಂತರ ಶಾಸ್ತ್ರ. ವ್ಯಾಕರಣ ಶಾಸ್ತ್ರವನ್ನು ಓದಿ ಮಾತನಾಡಲು ಕಲಿಯುವುದುಂಟೆ? ಭಾಷೆ ಸಹಜವಾಗಿ ಹರಡಿಕೊಂಡಮೇಲೇ ಅದರಲ್ಲಿ ಸಾಧುವಾದ ಪ್ರಯೋಗ ಯಾವುದು, ಅಸಾಧುವಾದ ಪ್ರಯೋಗ ಯಾವುದು, ಶಬ್ದಾರ್ಥಗಳಿಗಿರುವ ಸಂಬಂಧವೇನು ಮುಂತಾಗಿ ವಿವೇಚನೆಯನ್ನು ವ್ಯಾಕರಣಶಾಸ್ತ್ರ ಮಾಡುತ್ತದೆ. ವ್ಯಾಕರಣದಿಂದ ಭಾಷೆ ಹುಟ್ಟುವುದಿಲ್ಲ.

ಆದರೆ ವಾಡಿಕೆಯಲ್ಲಿ ಆಡುವ ಮಾತೇ ಸಾಹಿತ್ಯವಾಗಲಾರದು. ಸಾಹಿತ್ಯವಾಗಲು ವ್ಯಾಕರಣದ ನೆರವು ಬೇಕು, ಅಲಂಕಾರಶಾಸ್ತ್ರದ ಅನ್ವಯವಿರಬೇಕು. ಹೀಗೆಯೇ ಸಂಗೀತದಲ್ಲಿಯೂ ಪ್ರಯೋಗ ಸಾಕಷ್ಟು ನಡೆದಮೇಲೇ ಶಾಸ್ತ್ರ ಸಿದ್ಧವಾಗಿರಬೇಕು.

ಇಲ್ಲಿ ಪ್ರಯೋಗದ ವಿಚಾರ ನಮಗೆ ಮುಖ್ಯವಾಗುತ್ತದೆ. ಯಾವ ಪ್ರಯೋಗವನ್ನು ಅವಲಂಬಿಸಿ ಕರ್ನಾಟಕ ಸಂಗೀತಶಾಸ್ತ್ರ ಮೈದಳೆಯಿತು? ಎಲ್ಲಿನ ಪ್ರಯೋಗ ಶಾಸ್ತ್ರಕ್ಕೆ ಅನುಕೂಲವಾಯಿತು? ಶಾಸ್ತ್ರಕಾರರಿಗೆ ಪ್ರೇರಣೆಯನ್ನೊದಗಿಸಿದವರು ಯಾರು? ಈ ವಿಚಾರವಾಗಿ ಬೆಳಕು ಚೆಲ್ಲಲು ವರ್ತಮಾನದಿಂದ ಹಿಂದಕ್ಕೆ ಹೋಗುವುದು ಸುಲಭದ ದಾರಿಯಾದೀತು. ಈಗ ಕರ್ನಾಟಕಸಂಗೀತದ ತೌರೂರೆಂದರೆ ತಮಿಳುನಾಡು ತಾನೆ? ಅದರಲ್ಲಿಯೂ ತಂಜಾವೂರು. ತಂಜಾವೂರು ಆಗಿನ ಮದ್ರಾಸ್ ಪ್ರೆಸಿಡೆನ್ಸಿಗೆ, ಎಂದರೆ ಈಗಿನ ತಮಿಳುನಾಡಿಗೆ, ಸೇರಿದ್ದು ೧೭೯೯ರಲ್ಲಿ. ಆಗ ತಂಜಾವೂರಿನ

ದೊರೆಯಾಗಿದ್ದ ಇಮ್ಮಡಿ ಶರಭೋಜಿಯ (೧೭೯೮-೧೮೩೨) ಆಸ್ಥಾನದಲ್ಲಿ ತಮಿಳು ಸಂಸತಿಗೆ ಪುರಸ್ಕಾರ ದೊರೆತು ಮದ್ರಾಸು ಸಾಂಸತಿಕ ಕೇಂದ್ರವಾಯಿತು. ಸಂಪ್ರದಾಯ ಸಂಗೀತಕ್ಕೆ ಮದ್ರಾಸು ನೆಲೆಮನೆಯಾದದ್ದು ಆಗ. ಅದಕ್ಕೆ ಮೊದಲು ತಂಜಾವೂರಿನ ಆಳ್ವಿಕೆಯನ್ನು ಅಮರಸಿಂಹನು (೧೭೮೭-೧೭೯೮), ಇನ್ನೂ ಎಳೆಯ ವಯಸ್ಸಿನಲ್ಲಿದ್ದ ಇಮ್ಮಡಿಶರಭೋಜಿಯ ಪ್ರತಿನಿಧಿಯಾಗಿ, ಕೈಗೊಂಡಾಗ ಅವನು ದರ್ಬಾರು ನಡೆಸುತ್ತಿದ್ದುದು ತಿರುವಡೈಮರದೂರಿನಲ್ಲಿ; ತಮಿಳು ಭಾಷೆ ಸಂಪ್ರದಾಯಸಂಗೀತಕ್ಕೆ ಹತ್ತಿರವಾಗಿ ಹೊಂದಿಕೊಂಡು ಬಂದದ್ದು ಆಗಲೇ. ಅವನ ಆಸ್ಥಾನದಲ್ಲಿದ್ದ ಘನಂ ಕೃಷ್ಣಯ್ಯರ್ ಮತ್ತು ಗೋಪಾಲಕೃಷ್ಣ ಭಾರತಿ ತಮಿಳು ಪದಗಳನ್ನು ಶಾಸ್ತ್ರೀಯ ಚೌಕಟ್ಟಿನಲ್ಲಿ ರಚಿಸತೊಡಗಿದರು.

ಸಂಪ್ರದಾಯ ಸಂಗೀತಕ್ಕೆ ನಿಃಸಂದೇಹವಾಗಿ, ನಿರ್ವಿವಾದವಾಗಿ ಪ್ರಮಾಣಪುರುಷರಾದ ತ್ಯಾಗರಾಜ ಸ್ವಾಮಿಗಳು ತಂಜಾವೂರು ಪ್ರಾಂತ್ಯದಲ್ಲಿ ಬದುಕಿದ್ದುದು ಇಮ್ಮಡಿ ತುಳಜಾಜಿ (೧೭೬೩-೧೭೮೭) ಮತ್ತು ಇಮ್ಮಡಿ ಶರಭೋಜಿ (೧೭೯೮-೧೮೩೨) ಈ ದೊರೆಗಳ ಕಾಲದಲ್ಲಿ; ಆದರೆ ದೊರೆಗಳ ಆಸ್ಥಾನಕ್ಕೂ ಅವರಿಗೂ ಯಾವ ಸಂಬಂಧವೂ ಇರಲಿಲ್ಲ. ಪರಂಪರಾಸಂಗೀತದ ದೃಷ್ಟಿಯಿಂದ ಕೃತಿಯ ಸ್ವರೂಪ ಸ್ಪಷ್ಟವಾದದ್ದು, ವಿನಿಕೆಯ ರೀತಿ ಖಚಿತವಾದದ್ದು ಅವರಿಂದ. ಅವರ ಲಕ್ಷ್ಯ ರಚನೆಗಳು ಮುಂದಿನ ಸಂಗೀತಪದ್ಧತಿಗೆ ಪ್ರಧಾನಸಾಮಗ್ರಿಯಾದುವು, ಮೊದಲಾಕೃತಿಗಳಾದುವು, ಪ್ರೇರಣೆಯನ್ನೊದಗಿಸಿದವು. ತಂಜಾವೂರಿನ ಅರಸೊತ್ತಿಗೆ ಆರಂಭವಾದನಂತರ ತೆಲುಗೇ ಸಂಗೀತಪ್ರಪಂಚದ ಭಾಷೆಯೆನಿಸಿಕೊಂಡಿದ್ದಿತು; ತ್ಯಾಗರಾಜರಿಂದಾಗಿ ಆ ಭಾಷೆಗೊಂದು ವಿಶೇಷ ಕಳೆಯೊದಗಿಬಂದಿತು.

ತ್ಯಾಗರಾಜಸ್ವಾಮಿಗಳಿಗೆ ಪ್ರೇರಣೆಯಾದುದು ಪ್ರೋದ್ಬಲವಾದುದು ಪುರಂದರದಾಸರ ಕೃತಿಗಳಿಂದು ಅವರೇ ಸೂಚಿಸಿದ್ದಾರೆ. ಈ ವಿಚಾರವಾಗಿ ಮಾಹಿತಿಗಳು ಸಾಕಷ್ಟು ದೊರೆತಿವೆ; ಅವನ್ನು ಈ ಮೊದಲೆ ಬೇರೆಡೆ ಕಾಣಿಸಿದ್ದೇನೆ. ತ್ಯಾಗರಾಜರ ಅನೇಕ ಕೃತಿಗಳಿಗೆ ಪುರಂದರದಾಸರ ಕೃತಿಗಳು ಸ್ಫೂರ್ತಿಯನ್ನು ನೀಡಿವೆ- 'ಗ್ರಹಬಲಮೇಮಿ' (ಸಕಲಗ್ರಹಬಲ ನೀನೆ), 'ಮೇಲುಕೋವಯ್ಯ' (ಏಳಯ್ಯ ಬೆಳಗಾಯಿತು), 'ಊರಕೆ ಗಲುಗುನಾ', (ಸುಮ್ಮನೆ ಬರುವುದೆ ಮುಕ್ತಿ) 'ಏಮಿ ಜೇಸಿತೇನೇಮಿ' (ಏನು ಮಾಡಿದರೇನು), 'ನೀ ಚಿತ್ತಮು ನಿರ್ಮಲಮು' (ನೀನೆ ನಿರ್ಮಲ ಚಿತ್ತ), 'ಅನುರಾಗಮುಲೇನಿ' (ಪ್ರೇಮವಿಲ್ಲದ ಗಾನ), 'ನಿನ್ನೇ ನೆರನಮ್ಮಿ ನಾನು' (ನಿನ್ನನೆ ನಂಬಿದೆನೋ), 'ಕಾಲಹರಣಮೇಲರಾ' (ಕಾಲ ಕಳೆದನಲ್ಲಾ), 'ತವ ದಾಸೋಹಂ' (ದಾಸನ ಮಾಡಿಕೋ), 'ಕನುಗೊಂಟಿನಿ' (ಕಂಡೆ ನಾ ಗೋವಿಂದನ) ಇತ್ಯಾದಿ. ಪದಬಂಧದಲ್ಲೂ ಭಾವಬಂಧುರತೆಯಲ್ಲೂ ಸಾದೃಶ್ಯವಿದೆ. ಶಾಸ್ತ್ರೀಯ ಸಂಗೀತ ಪರಂಪರೆಯಲ್ಲಿ ತ್ಯಾಗರಾಜರ ಪಾತ್ರ ಪ್ರಮುಖವಾದುದು ಅವರ ಲಕ್ಷ್ಯ ರಚನೆಗಳಿಂದ, ರಾಗಸ್ವರೂಪ ನಿರ್ಧಾರಣದಿಂದ, ಸ್ವರಸಂಚಾರಕ್ರಮದಿಂದ, ರಾಗಭಾವ ಪೋಷಣೆಯಿಂದ. ಇಲ್ಲಿ ನಾರದರ 'ಸ್ವರಾರ್ಣವ' ಅವರಿಗೆ ನೆರವಾಗಿದ್ದಿತೆಂದು ಸೂಚನೆಯಿದೆ. ಆದರೆ ಸಂಪ್ರದಾಯ ಸಂಗೀತದ ಮೇಲಣ ಒಲವು ಪುರಂದರದಾಸರು ಒದಗಿಸಿದ ಸ್ಫೂರ್ತಿಯಿಂದ ಬಂದದ್ದು. ಆದರೆ ಪುರಂದರದಾಸರಿಗೂ ತ್ಯಾಗರಾಜರಿಗೂ ನಡುವೆ ಸುಮಾರು ಮುನ್ನೂರು ವರ್ಷಗಳಷ್ಟು ಅಂತರ. ಈ ಅವಧಿಯಲ್ಲಿ ಸಂಪ್ರದಾಯ ಸಂಗೀತದ ಸ್ವರೂಪವನ್ನೂ ಸ್ವಭಾವವನ್ನೂ ಉಳಿಸಿಕೊಂಡಿದ್ದುಂಟು.

ತಂಜಾವೂರಿನಲ್ಲೇ ದೊರೆ ಷಹಜಿ (೧೬೮೪-೧೭೧೨) ಆಳುತ್ತಿದ್ದಾಗ ಶ್ರೀಧರ ಅಯ್ಯಾವಾಳ್, ಬೋಧೇಂದ್ರ ಸದ್ಗುರು, ಮರುದಾನನಲ್ಲೂರು ಸ್ವಾಮಿ ಮುಂತಾದವರು ನಾಮಸಂಕೀರ್ತನ ಪದ್ಧತಿಯನ್ನೂ ಭಜನಸಂಪ್ರದಾಯವನ್ನೂ ಅವಲಂಬಿಸಿ, ಎತ್ತಿ ಹಿಡಿದದ್ದು ತ್ಯಾಗರಾಜರಿಗೆ ಹಿನ್ನೆಲೆಯಾಗಿದ್ದಿತು.

ಪುರಂದರದಾಸರ ಪ್ರಭಾವವನ್ನು ತಳೆದು, ತ್ಯಾಗರಾಜರ ಮೇಲೆ ಪ್ರಭಾವವನ್ನು ಬೀರಿದ ಪೆದ್ದ ದಾಸರಿಯೆಂಬ ವಾಗ್ಗೇಯಕಾರರು ಸಿಂಹಾಚಲದ ವರಾಹನರಸಿಂಹಸ್ವಾಮಿಯ ಭಕ್ತರು. ಅವರ ಕಾಲದಲ್ಲಿ ತಂಜಾವೂರು ದೊರೆಯಾಗಿದ್ದ ವಿಜಯರಾಘವನಾಯಕನು (೧೬೩೩-೧೬೭೩) ತನ್ನನ್ನು ಕುರಿತು ಕೃತಿರಚನೆ ಮಾಡೆಂದಾಗ ಇವರು "ನಾರಸಿಂಹನಿ ಪಾಡಿನ ನೋಟನೂರಸಿಂಹನು ಪಾಡನು" (ಆ ನರಸಿಂಹನೆಲ್ಲಿ? ಈ ಗ್ರಾಮಸಿಂಹನೆಲ್ಲಿ? ಅವನನ್ನು ಹಾಡಿದ ನಾಲಗೆ ಇವನನ್ನು ಹಾಡೀತೆ?) ಎಂದು ನಿರಾಕರಿಸಿದವರು. ಪುರಂದರದಾಸರ 'ಸಕಲಗ್ರಹಬಲ ನೀನೆ' ಎಂಬ ಕೃತಿಯ ಛಾಪು ಇವರ 'ಗ್ರಹಫಲಮೀಯುನಿ' ಎಂಬ ರೇವಗುಪ್ತಿಯ ಕೃತಿಯಲ್ಲಿ ಕಾಣಬಹುದು. ಈ ಧೋರಣೆಯ ನೇರವಾದ ಅನುಸರಣೆಯನ್ನು ತ್ಯಾಗರಾಜರ 'ಸಕಲಗ್ರಹಬಲಮೇಮಿ' ಎಂಬ ಕೃತಿಯಲ್ಲಿ ಗುರುತಿಸಬಹುದು. ಇವರ ಅಧ್ಯಾತ್ಮ ನಿಷ್ಠೆ, ಸಂಪ್ರದಾಯ ಸಂಗೀತದ ಸೊಗಸು, ಭಕ್ತಿಪಾರವಶ್ಯ, ವೈರಾಗ್ಯಗಳು ಆ ಕಾಲಕ್ಕೆ ಪ್ರಸಿದ್ಧವಾಗಿದ್ದರೂ, ರಾಜಾಶ್ರಯಕ್ಕೆ ಅವರು ಒಪ್ಪದಿದ್ದು, ಶಿಷ್ಯ ಸಂಪತ್ತು ಇರಲಿಲ್ಲವಾಗಿ, ಅವರ ಕೃತಿಗಳು ಪ್ರಚಾರಕ್ಕೆ ಬರಲಿಲ್ಲ.

ತ್ಯಾಗರಾಜರ ಶಾಸ್ತ್ರೀಯ ಸಂಗೀತ ಪರಂಪರೆಯನ್ನು ವಾಲಾಜಪೇಟೆ ವೆಂಕಟರಮಣ ಭಾಗವತರೂ ಉಮೈಯಾಳ್ಪುರಂ ಕೃಷ್ಣಭಾಗವತರೂ, ತಿಲ್ಲೈಸ್ಥಾನಂ ರಾಮ ಅಯ್ಯಂಗಾರ್ಯರೂ ಮೂರು ಕವಲುಗಳಲ್ಲಿ ಮುಂದುವರಿಸಿಕೊಂಡುಬಂದರಷ್ಟೆ? ಸಂಪ್ರದಾಯ ಸಂಗೀತ ಪರಂಪರೆಯಾದರೋ ತ್ಯಾಗರಾಜರನಂತರ ಮರೆಯಾದಂತೆ ತೋರುತ್ತದೆ. ಅರಸರ ಔದಾರ್ಯ, ರಸಿಕರ ಒತ್ತಾಸೆ, ಪ್ರಾಪಂಚಿಕ ಪ್ರಲೋಭನೆಗಳು, ವೃತ್ತಿ ಮನೋಧರ್ಮ, 'ನಿಧಿ ಚಾಲು, ಸುಖಮು' ಎಂಬ ಧೋರಣೆ ಇವು ಸಂಪ್ರದಾಯ ಸಂಗೀತದ ಮೌಲ್ಯಗಳನ್ನು ಉಳಿಯಗೊಡಲಿಲ್ಲ. ಶಾಸ್ತ್ರೀಯ ಸಂಗೀತವೇನೋ ಬೇರೂರಿ ನಿಂತಿತು. ಈ ವಿಚಾರವನ್ನು ಇಷ್ಟಕ್ಕೆ ಕೈಬಿಟ್ಟು, ಸಂಪ್ರದಾಯ ಸಂಗೀತವು ತ್ಯಾಗರಾಜರವರೆಗೆ ಬಂದ ದಾರಿಯನ್ನು ಹಿಡಿದು ಹಿಂದೆ ಹೊರಟರೆ ನಮಗೆ ಸಿಗುವ ಸುಳುವುಗಳು ಯಾವುದೆಂದು ಹುಡುಕೋಣ.

ಪುರಂದರದಾಸರನ್ನಂತೂ ತ್ಯಾಗರಾಜರೇ ಉಲ್ಲೇಖಿಸಿಕೊಂಡಿದ್ದಾರೆ; ಭಕ್ತಿಯಿಂದ ಸ್ಮರಿಸಿದ್ದಾರೆ. ಪುರಂದರದಾಸರು ಎತ್ತಿ ಹಿಡಿದು ನಿಲ್ಲಿಸಿದ ಹರಿದಾಸ ಪಂಥವು ತ್ಯಾಗರಾಜರ ಕಾಲದಲ್ಲೂ ಇದ್ದುದು ತ್ಯಾಗರಾಜರ 'ಹರಿದಾಸುಲು ವೆಡಲೆ' ಎಂಬ ಯಮುನಾಕಲ್ಯಾಣಿರಾಗದ ಕೃತಿಯಿಂದ ಸ್ಪಷ್ಟವಾಗುತ್ತದೆ. ಈ ಕೃತಿಯಲ್ಲಿ ಬರುವ 'ಜ್ಞಾನಮುತೋ ರಾಮಧ್ಯಾನಮುತೋ, ಮಂಚಿ ಗಾನಮುತೋ' ಎಂಬ ಒಕ್ಕಣೆಯಿಂದ ಸಂಪ್ರದಾಯ ಸಂಗೀತದ ಮುಖ್ಯ ಪ್ರಮೇಯಗಳ ಅರಿವಾಗುತ್ತದೆ. ಗೌಳಿಪಂತು ರಾಗದ 'ಕಾಸಿಚ್ಚೆಡೆ ಗೊಪ್ಪಯೆನು ರಾ' ಎನ್ನುವ ಕೃತಿಯಲ್ಲಿ-

'ಕಲಿಲಾ ರಾಜುಲಕು
ಹರಿದಾಸುಲು ಸೇವಿಂಪರನುಚು
ದಯಮಾನಿರಿ ಪರಮಂಚಕಪೋಯಿರಿ'

ಎಂದು ಹೇಳಿರುವುದನ್ನೂ ಗಮನಿಸಬೇಕು.

'ಚಕ್ಕನಿ ಹರಿಚೆ ಜಿಕ್ಕಿತಮನಿ ಮತಿ
ಸೊಕ್ಕುಚು ನಾಮವೆ ದಿಕ್ಕನಿ ಪೊಗಡುಚು'

ಹರಿದಾಸರಿಗೆ ಸಾಧನೆಯ ದಾರಿ ಸಿಕ್ಕಿತೆಂಬುದೆ ಸಂತೋಷ; ಅದರಲ್ಲಿ ಮೈಮರೆಯುತ್ತಾರೆ. ನಾಮಸಂಕೀರ್ತನೆಯೇ ಅಭ್ಯುದಯ-ನಿಃಶ್ರೇಯಸಗಳಿಗೆ ಆಸರೆ ಎಂಬುದು ಅವರ ಶ್ರದ್ಧೆ.

ತ್ಯಾಗಯ್ಯನವರನ್ನು "ವಾಗ್ಗೇಯಕಾರಕ ಶ್ರೇಷ್ಠುಲೈ ವಿಲಸಿಲ್ಲಿನ' ಎಂದು ವರ್ಣಿಸಿದ ಎಟ್ಟಯಾಪುರದ ಸುಬ್ಬರಾಮದೀಕ್ಷಿತರು ತಮ್ಮ 'ಪ್ರಥಮಾಭ್ಯಾಸ ಪುಸ್ತಕಮು'ನಲ್ಲಿ 'ಶ್ರೀಶಾರ್ಙ್ಗದೇವ (೧೨೩೦ರ ಸುಮಾರು) ಪುರಂದರದಾಸವೇಂಕಟಮಖಿ (೧೬೬೦ರ ಸುಮಾರು) ಪ್ರಮುಖುಲೈನ ಪೂರ್ವಾಚಾರ್ಯುಲ ಪರಮಾನುಗ್ರಹಮುವಲ್ಲ' ಎಂದು ಮುನ್ನುಡಿಯಲ್ಲೇ ಕಾಣಿಸಿ "ಪುರಂದರ ವಿಠಲದಾಸುಲು" ಅವರ ಮಲಹರಿ ಪಿಳ್ಳಾರಿಗೀತಗಳನ್ನು ಮೊಟ್ಟಮೊದಲೇ ಕೊಟ್ಟಿದ್ದಾರೆ; "ಪ್ರಥಮಾಭ್ಯಾಸಶೀಲುಲಕುಪಯೋಗಮುಲೈನ ಕೀರ್ತನಮುಲು" ಎಂಬ ಶೀರ್ಷಿಕೆಯಲ್ಲಿ ಪುರಂದರದಾಸರ ಎರಡು ಕೀರ್ತನೆಗಳನ್ನು (ಕುರುಂಜಿಯ 'ನಾರಾಯಣ ಹರಿ ನಾರಾಯಣ ಎನು ಮನವೇ', ಮತ್ತು ಕೇದಾರದ 'ಇಂದಿಲ್ಲಾ ಮತ್ತೊಂದಿಲ್ಲಾ ಗೋವಿಂದನ ನೆನೆದಲ್ಲದೆ ಇಹಪರವಿಲ್ಲಾ') ಮೊದಲಲ್ಲೇ ಕೊಟ್ಟು (ಪು.೯೫) ಅನಂತರ ಭದ್ರಾಚಲ ರಾಮದಾಸರು, ಕ್ಷೇತ್ರಯ್ಯ, ತಾಳ್ಲಪಾಕಂ ಚಿನ್ನಯ್ಯ, ಪಲ್ಲವಿ ಶೇಷಯ್ಯಂಗಾರ್, ಕುಲಶೇಖರಮಹಾರಾಜ ಮೊದಲಾದವರ ಕೃತಿಗಳನ್ನು ಕಾಣಿಸಿದ್ದಾರೆ. 'ಸಂಗೀತಸಂಪ್ರದಾಯ ಪ್ರದರ್ಶಿನಿ'ಯಲ್ಲಿ ಪುರಂದರದಾಸರ ಎರಡು ಸುಳಾದಿಗಳನ್ನು ಸ್ವರಸಹಿತವಾಗಿ ಉಲ್ಲೇಖಿಸಿದ್ದಾರೆ.

ಇನ್ನೂ ಹಿಂದೆ, ಸುಮಾರು ಇನ್ನೂ ೨೫೦ ವರ್ಷಗಳಿಗೂ ಮುಂಚೆ, ತುಳಜಾಜಿ ಮಹಾರಾಜನೂ (೧೭೨೮-೧೭೩೬) ತನ್ನ 'ಸಂಗೀತಾಸಾರಾಮೃತ'ದಲ್ಲಿ

'ಇತಿ ಸಾಲಗಸೂಡಸ್ಥಗೀತಾನಾಂ ಲಕ್ಷ್ಯಕೀರ್ತನಂ।
ಶ್ರೀಪುರಂದರದಾಸಾರ್ಯೈರಭಿಯುಕ್ತೈಃ ಪುರಾತನೈಃ॥
ಪ್ರಯುಕ್ತೇಷು ಪ್ರಸಿದ್ಧೇಷು ಲಕ್ಷ್ಯೇಷು ವಿವಿಧೇಷ್ವಪಿ।
ಧ್ರುವಾದಿಷು ತ್ವದುಕ್ತಾನಿ ಲಕ್ಷಣಾನಿ ಮಹಾಮತೇ॥'

ಎಂದು ಹರಿದಾಸರ ಕೊಡುಗೆಯನ್ನು ಸ್ಮರಿಸಿಕೊಂಡಿದ್ದಾನೆ. ಇವೆಲ್ಲ ಉಲ್ಲೇಖಗಳಿಂದ ಒಂದು ಕಾಲಕ್ಕೆ ಸಂಪ್ರದಾಯಸಂಗೀತಕ್ಕೂ ಶಾಸ್ತ್ರೀಯಸಂಗೀತಕ್ಕೂ ಎಷ್ಟು ನಿಕಟವಾದ ನಂಟಿದ್ದಿತೆಂಬುದು ತಿಳಿಯುತ್ತದೆ. ಶಾಸ್ತ್ರಕಾರರ ಕಣ್ಣಿಗೆ ತಟ್ಟನೆ ಬೀಳುತ್ತಿದಿದ್ದುದು ಹರಿದಾಸರ ಸಂಪ್ರದಾಯಸಂಗೀತವೇ;

ಇದೇ ಲಕ್ಷ್ಯ ಸಾಮಗ್ರಿ. ಇವೆಲ್ಲ ದೇಶಭಾಷೆಯಲ್ಲಿರುತ್ತಿದ್ದು, 'ಪ್ರಸಿದ್ಧ'ವಾಗಿ ಬಯಕಾರ ರಾಮಾಮಾತ್ಯನ ಕಾಲದಿಂದಲೂ (ಎಂದರೆ ತುಳಜಾಜಿಗೆ ಮುಂಚೆ ಸುಮಾರು ಮುನ್ನೂರು ವರ್ಷಗಳಿಂದಲೂ) ವಾಡಿಕೆಯಲ್ಲಿದ್ದುದು ತಿಳಿದುಬರುತ್ತದೆ. ರಾಮಾಮಾತ್ಯನ 'ಸ್ವರಮೇಳಕಳಾನಿಧಿ'ಯಲ್ಲಿ (೧೫೬೦)

> 'ದೇಶಭಾಷಾಪ್ರಸಿದ್ಧೇನ ರಾಗನಾಮ್ನಾ ವಿಶೇಷಿತಾನ್।
> ತತ್ತದ್ರಾಗಪ್ರಧಾನತ್ವಾನ್ಮೇಲಾನ್ ವಕ್ಷ್ಯೇ....॥'

ಎಂಬ ಉಲ್ಲೇಖವಿದೆ. ಇಲ್ಲಿ 'ದೇಶಭಾಷೆ'ಯೆಂದರೆ ಯಾವುದು?

ವಿಶಿಷ್ಟಾದ್ವೈತ ಕ್ಷೇತ್ರದಲ್ಲಿ ಪ್ರಖ್ಯಾತದಾರ್ಶನಿಕರಾದ ವೇದಾಂತದೇಶಿಕರು ಹದಿಮೂರನೆಯ ಶತಮಾನದವರು; ಪುರಂದರದಾಸರಿಗಿಂತ ಪ್ರಾಚೀನರು. ಅವರ ಕಾರ್ಯಕ್ಷೇತ್ರ ಹೆಚ್ಚಾಗಿ ಶ್ರೀರಂಗ ಕಾಂಚೀಪುರಗಳು; ತಮಿಳುನಾಡಿನಲ್ಲಿರುವುವು. ಅವರ 'ಹಂಸಸಂದೇಶ'ವೆಂಬ ಕಾವ್ಯದಲ್ಲಿ ಸಂಗೀತ ಪ್ರಯೋಗದ ಸಂದರ್ಭ ಬಂದಾಗ

> 'ಕರ್ಣಾಟಾಂಧ್ರವ್ಯತಿಕರವಶಾದ್ ಕರ್ಬುರೇ ಗೀತಿಭೇದೇ'

ಎಂಬ ಮಾತನ್ನಾಡಿದ್ದಾರೆ (೨೦). ಇಲ್ಲಿ ಕನ್ನಡ, ತೆಲುಗು ಭಾಷೆಗಳಲ್ಲಿ ಸಂಗೀತಸಾಹಿತ್ಯವಿದ್ದುದನ್ನು ಅವರು ಪ್ರಸ್ತಾಪಿಸಿದ್ದಾರೆ. ಅವರು ತಮಿಳುನಾಡಿನಲ್ಲೇ ಬಹುವಾಗಿ ಸಂಚಾರ ಮಾಡಿದವರು. ಅವರ ಗ್ರಂಥಗಳೆಲ್ಲ ಬಹುಮಟ್ಟಿಗೆ ಸಂಸತದಲ್ಲೇ ಇದ್ದರೂ, ಅವರಿಗೆ ತಮಿಳು ಭಾಷೆಯಲ್ಲಿ ವಿಶೇಷ ಪರಿಶ್ರಮವಿದ್ದುದು ಅವರ 'ರಹಸ್ಯತ್ರಯಸಾರ' ಮೊದಲಾದ ಕೃತಿಗಳಿಂದ ತಿಳಿಯುತ್ತದೆ. ಮತ್ತು ದಿವ್ಯಸೂರಿಗಳೆನಿಸಿದ ಆಳ್ವಾರರ ತಮಿಳು ಪಾಶುರಗಳ (ಪ್ರಬಂಧದ) ಪರಿಚಯ ಅವರಿಗೆ ಚೆನ್ನಾಗಿಯೇ ಇದ್ದಿತು. ಆದರೂ 'ಗೀತಭೇದ'ಗಳ ವಿಚಾರ ಬಂದಾಗ ಅವರ ನೆನಪಿಗೆ ಬಂದದ್ದು ಕನ್ನಡ ಮತ್ತು ತೆಲುಗು ಹಾಡುಗಳೇ. ನರಹರಿತೀರ್ಥರನ್ನು (೧೨೦೫-೧೨೧೫ ಪೀಠ) ಬಿಟ್ಟರೆ (ಅವರ ಹೆಸರಿನಲ್ಲಿ 'ಹರಿಯೆ ಇದು ಸರಿಯೇ', 'ಎಂತು ಮರುಳಾದೆ' ಎಂಬೆರಡು ಕೃತಿಗಳಿವೆಯೆಂದು ಹೇಳುತ್ತಾರೆ) ಹರಿದಾಸಪಂಥದ ಪ್ರವರ್ತಕರೆನಿಸಿದವರು ಶ್ರೀಪಾದರಾಜರು. ತಂದೆ ವೆಂಕಟೇಶ ವಿಠಲದಾಸರು ಅವರನ್ನು "ಹರಿದಾಸ ಮೊದಲಿಗ"ರೆಂದೂ "ದಾಸಭಾವ ವಹಿಸಿ ಪದ್ಯಪದವಾ ದೇಶಿಯಲಿ ರಚಿಸಿ ಪ್ರಕಾಶಗೈಸಿದ" ರೆಂದೂ ಬಣ್ಣಿಸಿದ್ದಾರೆ. ಹರಿದಾಸಕೂಟದವರು ಇಂದಿಗೂ ಅವರ ಸ್ಮರಣೆಯನ್ನು 'ನಮಃ ಶ್ರೀಪಾದರಾಜಾಯ' ಎಂದು ತಪ್ಪದೆ ಮಾಡುತ್ತಾರೆ. ಶ್ರೀಪಾದರಾಜರು ತಮ್ಮ ಎಳೆತನವನ್ನೂ ನಡುವಯಸ್ಸನ್ನೂ ಶ್ರೀರಂಗದಲ್ಲಿಯೇ ಕಳೆದರು. ಆಳ್ವಾರರ ತಮಿಳು ಪ್ರಬಂಧಗಳ ಪರಿಚಯ ಅವರಿಗಿಲ್ಲದಿರುವುದು ಸಾಧ್ಯವೆ? ಶ್ರೀರಂಗದ ಗುಡಿಯಲ್ಲಿ ಅರೈಯಾರರು ಈ ಪ್ರಬಂಧಗಳನ್ನು ಹಾಡುವ ಪರಿಪಾಟ ಆಗಲೇ ಇದ್ದಿತು. ಶ್ರೀಪಾದರಾಜರು ಕನ್ನಡದಲ್ಲಿ ದಾಸವಾಙ್ಮಯವನ್ನು ಸಿದ್ಧಗೊಳಿಸಲು ಈ ಪಾಶುರಗಳೇ ಸ್ಫೂರ್ತಿಯನ್ನೊದಗಿಸಿರಬೇಕು.

ಪಾಶುರಗಳು ಆ ವೇಳೆಗೆ ಸಂಪ್ರದಾಯಸಂಗೀತದ ವಲಯದೊಳಗೆ ಬಂದಿರಲಾರದು. ಆರಾಧನೆಯ ಸಂದರ್ಭದಲ್ಲಿ, ಉತ್ಸವಗಳಲ್ಲಿ ನಡೆಯುತ್ತಿದ್ದ ಪ್ರಬಂಧಪಾರಾಯಣ 'ಇಯಲ್'

ಎಂಬ ಪದ್ಧತಿಗೆ ಸೇರಿದ್ದು. 'ಇಯಲ್ ಸೇವಿಕ್ಕುಂ ಶ್ರೀವೈಷ್ಣವರ್ಗಳ್' ಎಂದು ಶಾಸನದ ಮಾತೇ ಇದೆ. 'ಇಯಲ್' ಎನ್ನುವುದು ಸಹಜವಾಗಿ, ಮನೋಧರ್ಮವೇ ಮುಖ್ಯವಾಗಿ, ಭಕ್ತಿಭಾವದಿಂದ ಹಾಡುವ ಪದ್ಧತಿ. ಅದರಲ್ಲಿ ಅದಕ್ಕೆ ಅನುಕೂಲವೆನಿಸಿದ ಅಭಿನಯವೂ ಇರುತ್ತಿದ್ದಿತು, ಕುಣಿತವೂ ಅಷ್ಟಿಷ್ಟು ಇರುತ್ತಿದ್ದಿತು. ರಾಗ-ತಾಳಗಳ ಕಟ್ಟುಪಾಡು ಅಷ್ಟಿಲ್ಲ. ಅದಕ್ಕಿಂತ ಬೇರೆಯಾದ 'ಇಶೈ' ಪದ್ಧತಿಯಲ್ಲಾದರೋ ರಾಗ ತಾಳಗಳೇ ಪ್ರಧಾನ; ಮಾತಿಗಿಂತ ಧಾತು ಮುಖ್ಯ. ಇಯಲ್‌ನಲ್ಲಿ ಸಂಪ್ರದಾಯಸಂಗೀತದ ಛಾಪನ್ನು ಕಾಣುವೆವಾದರೆ ಇಶೈನಲ್ಲಿ ಶಾಸ್ತ್ರೀಯ ಸಂಗೀತ ಕಾಣಸಿಗುತ್ತದೆ. ತಮಿಳುನಾಡಿನಲ್ಲಿ ಕರ್ನಾಟಕ ಸಂಗೀತ ಬೆಳೆದುಬಂದದ್ದು ಇಶೈ ದಾರಿಯನ್ನು ಹಿಡಿದೇ.

ತಂದೆ ವೆಂಕಟೇಶ ವಿಠಲದಾಸರು ಶ್ರೀಪಾದರಾಜರನ್ನು "ಹರಿದಾಸ ಮೊದಲಿಗನೇ" ಎಂದು ಕರೆದು "ದಾಸಭಾವ ವಹಿಸಿ ಪದ ಪದ್ಯವಾ। ದೇಸಿಯಲಿ ರಚಿಸಿ ಪ್ರಕಾಶಗೈಸಿದ'ನೆಂದು ಬಣ್ಣಿಸಿದರು. ಶ್ರೀಪಾದರಾಜರು ದೇಶಿಯಲ್ಲಿ ಪದಪದ್ಯಗಳನ್ನು ರಚಿಸತೊಡಗಿದಾಗ, ಅವರು ಒಲಿದದ್ದು ಧಾತುವಿಗಿಂತ ಮಾತು ಮುಖ್ಯವೆನಿಸಿದ ಇಯಲ್ ಪ್ರಕಾರಕ್ಕೇ ಎಂದು ತೋರುತ್ತದೆ. ಹಾಗೆಂದೇ ಅವರ 'ಒಲ್ಲೆನವ್ವ ನಮ್ಮ ನಲ್ಲ', 'ಮಾನನಿಧಿ ಸಿರಿಕೃಷ್ಣ', 'ಸದ್ದುಮಾಡಲಿಬೇಡವೋ', 'ಭೃಂಗ ನಿನ್ನಟ್ಟಿದಾನೆ' ಮುಂತಾದ ರಚನೆಗಳಲ್ಲಿ, ಮುಂದೆ ಬಂದ ಪದ, ಜಾವಳಿಗಳ ಹಿನ್ನೆಲೆಯನ್ನು ಗುರುತಿಸಬಹುದು. ಆದರೆ ಶ್ರೀಪಾದರಾಜರು ಬದುಕಿದ್ದ ಕಾಲ ಚತುರಕಲ್ಲಿನಾಥನು ತನ್ನ 'ಕಲಾನಿಧಿ'ಯನ್ನು ಬರೆದ ಕಾಲವೇ (೧೪೪೦ರ ಸುಮಾರು). ಶಾಸ್ತ್ರೀಯ ಸಂಗೀತದಲ್ಲಿ ಅದೊಂದು ಪರ್ವಕಾಲವೆನ್ನಬೇಕು.

ಶ್ರೀಪಾದರಾಜರು ತಮ್ಮ ಉಗಾಭೋಗವೊಂದರಲ್ಲಿ

'ಕಲಿಯುಗದಿ ಗಾನದಲಿ ಕೇಶವ ಎ
ನಲು ಕೈಗೂಡುವನು ರಂಗವಿಠ್ಠಲ'

ನೆಂದದ್ದು 'ತಾಳದಂಡಿಗೆ ಗೀತವಾದ್ಯ ಸಮ್ಮೇಳದಿ ಮಾಳ್ಪ ಹರಿದಾಸರ' ಗಾನ-ನೃತ್ಯ ಪದ್ಧತಿಗೆ ನಾಂದಿಯಾಯಿತು. ಅವರೇ

'ಬುದ್ಧಿ ನಿನ್ನೊಳು ಕುಣಿದಾಡಲಿ,
ಚಿತ್ತ ನಿನ್ನಲಿ ನಲಿದಾಡಲಿ ಹರಿಯೆ!'

ಎಂದು ಬೇಡಿಕೊಂಡರು. ಭಾಗವತರು 'ಸದಾ ಬಾಗಿ ರಾಗರಾಗದಲಿ ಪಾಡು'ವರು; 'ಸ್ತೋತ್ರದಿ ಪಾಡಿ ಹಿಗ್ಗುವರು'. ಭಗವಂತನಾದರೋ 'ಪಾಡಿದವರಿಗೆ ಬೇಡಿದ ವರಗಳ ನೀಡುವವ'.

'ಪಾಡಿ ಪೊಗಳುವರಿಂಗೆ
ಭವಭಯಗಳುಂಟೆ?'

'ರಾಗದಿಂದಲಿ ಪುರಂದರ ವಿಠಲನ
ನೆನೆಯಬೇಕು
ಯೋಗಿಯಾದರೇನು ಭೋಗಿಯಾದರೇನು?'

'ಹರುಷದಿಂದ ಹಾಡಿ ಪಾಡಿ
ಕುಣಿಕುಣಿದು ಚಪ್ಪಾಳಿಕ್ಕುತ
ಪುರಂದರವಿಠಲ ಪರದೈವವೆಂದು'

'ಜ್ಞಾನಭಕ್ತಿವೈರಾಗ್ಯವು ಸಂತತ
ಪುರಂದರವಿಠಲನ ಸಂಕೀರ್ತನೆ
ಪಾಡಲು ಸಕಲವು ಬಾಹೋದು ಸಾಯುಜ್ಯ'

'ಕೃಷ್ಣನ ಪಾಡುವ ಕಂಠವೇ ವೈಕುಂಠ'

'ಅಂದುಗೆ ಕಿರುಗೆಜ್ಜೆ ಮುಂಗಾಲಿಲೆವೆಟ್ಟು
ಧೀಂ ಧಿಮಿ ಧಿಮಿಕೆಂದು ಕುಣಿಯುವ ದಾಸರ ಕಂಡು'

'ತಂಬೂರಿ ಮೀಟಿದವ ಭವಾಬ್ಧಿ ದಾಟಿದವ
ತಾಳವ ಕಟ್ಟಿದವ ಸುರರೊಳು ಸೇರಿದವ
ಗೆಜ್ಜೆಯ ತಟ್ಟಿದವ ಖಳರೆದೆ ಮೆಟ್ಟಿದವ
ಗಾಯನ ಪಾಡಿದವ ಹರಿಮೂರ್ತಿ ನೋಡಿದವ
ಪುರಂದರವಿಠಲನ ನೋಡಿದವ ವೈಕುಂಠಕೋಡಿದವ'

ಹೀಗೆ ಹರಿದಾಸ ಪದ್ಧತಿಯ ದೀಕ್ಷೆಯಲ್ಲಿ ತಂಬೂರಿ, ತಾಳ, ತುಳಸಿಮಣಿಯ ಮಾಲೆ, ಗೋಪಾಳಬುಟ್ಟಿ, ಗೆಜ್ಜೆ ಇವು ಪಂಚಾಂಗಗಳಾಗಿ ಸೇರಿಕೊಂಡಿತಾಗಿ ಇದು ಇಯಲ್ ಸಂಗೀತನೃತ್ಯ ಸಂಪ್ರದಾಯದ ಸೂಚನೆಯೇ. ಶ್ರೀಪಾದರಾಜರ ಶಿಷ್ಯರು ವ್ಯಾಸತೀರ್ಥರು (೧೪೪೭-೧೫೩೯). ಹರಿದಾಸಪಂಥದವರು "ನಮಃ ಶ್ರೀಪಾದರಾಜಾಯ" ಎಂದು ಹೇಳಿದೊಡನೆಯೇ "ನಮಸ್ತೇ ವ್ಯಾಸಯೋಗಿನೇ" ಎಂದು ಅವರನ್ನು ಸ್ಮರಿಸಿಕೊಳ್ಳುತ್ತಾರೆ. ಇವರೂ ತಮ್ಮ ಗುರುಗಳನ್ನನುಸರಿಸಿ ಕನ್ನಡದಲ್ಲಿ 'ಪದಪದ್ಯ'ಗಳನ್ನು ರಚಿಸಿದರು. ಶ್ರೀಪಾದರಾಜರಿಗೆ ಪ್ರಾಯಶಃ ಇರದಿದ್ದ ಸಂಪ್ರದಾಯಸಂಗೀತ ಮತ್ತು ಶಾಸ್ತ್ರೀಯಸಂಗೀತಗಳಲ್ಲಿ ಪರಿಶ್ರಮ ಇವರಿಗಿದ್ದಿತೆಂದು ತೋರುತ್ತದೆ. ತುಳಜಾಜಿಮಹಾರಾಜನು ತನ್ನ 'ಸಂಗೀತಾಸಾರಾಮೃತ'ದಲ್ಲಿ ಈ ವ್ಯಾಸತೀರ್ಥರೇ ಇದೊಂದು ಪರ್ವಕಾಲದ ಪ್ರವರ್ತಕರೆಂದು ಸೂಚಿಸಿದ್ದಾನೆ (ಪು. ೧೫೭)-

'ಪ್ರಸಿದ್ಧಸಂಗೀತವಿದ್ಯಾಸಂಪ್ರದಾಯಪ್ರವರ್ತಕಃ।
ವಿದ್ಯಾಸಿಂಹಾಸನಾಧ್ಯಕ್ಷಃ ಕಲ್ಪನಾಚತುರಾನನಃ।
ವ್ಯಾಸಪ್ಪಾಚಾರ್ಯ ಏವಾಸ್ಮತ್ಪೂರ್ವಾಚಾರ್ಯೇತಿ ವಿಶ್ರುತಃ"॥

ವ್ಯಾಸತೀರ್ಥರು ಶಾಸ್ತ್ರಕಾರರಿಗೆ ಪೂರ್ವಾಚಾರ್ಯರಂತೆ; 'ಸಂಗೀತವಿದ್ಯಾಸಂಪ್ರದಾಯ'ವು ಅವರಿಂದಲೇ ಸಿದ್ಧವಾದುದಂತೆ; ಗೀತ, ಠಾಯಿ, ಸುಳಾದಿ, ಉಗಾಭೋಗಗಳನ್ನು ರಚಿಸಿ 'ಚತುರಾನನ'ರಾದವರಂತೆ. ಈ ಒಕ್ಕಣೆಯ ತಾತ್ಪರ್ಯವೇನೆಂದರೆ ಶಾಸ್ತ್ರೀಯಸಂಗೀತವನ್ನು

ಅಳವಡಿಸಿಕೊಂಡು ಸಂಪ್ರದಾಯಸಂಗೀತ ಜನಪ್ರಿಯವಾಗತೊಡಗಿದ್ದು ವ್ಯಾಸತೀರ್ಥರ ಸಾಹಸದಿಂದ. ಅವರ ವೃತ್ತನಾಮ, ಪದ್ಯ, ಸಾಂಗತ್ಯ, ದೇವರನಾಮ, ಸುಳಾದಿಗಳು ಇಂದಿಗೂ ಉಳಿದಿವೆ.

ವ್ಯಾಸತೀರ್ಥರಿಂದ ದೀಕ್ಷೆಯನ್ನು ಪಡೆದು ವಾಗ್ಗೇಯ ರಚನೆಗೆ ಟೊಂಕಕಟ್ಟಿದ ಪುರಂದರ ದಾಸರು (೧೪೮೪-೧೫೬೪) ಶಾಸ್ತ್ರೀಯ ಸಂಗೀತ ಪರಂಪರೆಯಲ್ಲೂ ಆದ್ಯರೆನ್ನುವುದು ಎಟ್ಟಯಾಪುರದ ಸುಬ್ಬರಾಮ ದೀಕ್ಷಿತರು ತಮ್ಮ 'ಪ್ರಥಮಾಭ್ಯಾಸ ಪುಸ್ತಕ'ದಲ್ಲಿ ಗ್ರಂಥಕರ್ತ ಪೀಠಿಕೆ ಯಲ್ಲಿ ಹೇಳಿರುವುದನ್ನು (ಹಿಂದೆಯೇ ನಾನು ಉಲ್ಲೇಖಿಸಿರುವುದನ್ನು) ಗಮನಿಸಿದರೆ ತಿಳಿಯುತ್ತದೆ. ಅವರು ಬರೆದಿರುವುದೇನೆಂದರೆ-

> "ಶ್ರೀ ಶಾರ್ಙ್ಗದೇವ ಪುರಂದರದಾಸ ವೇಂಕಟಮಖಿ ಪ್ರಮುಖುಲೈನ
> ಪೂರ್ವಾಚಾರ್ಯುಲ ಪರಮಾನುಗ್ರಹಮುವಲ್ಲ ನಾನೇರ್ಚಿನ ಕೊಲದಿ
> ವ್ರಾಯ ಬೂನಿತಿನಿ"

ಇಲ್ಲಿ 'ಸಂಗೀತರತ್ನಾಕರ'ವನ್ನು ರಚಿಸಿದ ಶಾರ್ಙ್ಗದೇವ (೧೨೩೦ರ ಸುಮಾರು) ನಾದ ಮೇಲೆ, 'ಚತುರ್ದಂಡಿ-ಪ್ರಕಾಶಿಕೆ'ಯನ್ನು ರಚಿಸಿದ ವೇಂಕಟಮಖಿ (೧೬೬೦)ಗೆ ಮೊದಲು ಪುರಂದರದಾಸರನ್ನು ಎಣಿಸಲಾಗಿದೆ. 'ಸಂಗೀತರತ್ನಾಕರ' ಮತ್ತು 'ಚತುರ್ದಂಡಿ ಪ್ರಕಾಶಿಕೆ'ಗಳೇನೋ ಪ್ರಸಿದ್ಧ ಶಾಸ್ತ್ರಗ್ರಂಥಗಳು. ಆದರೆ ಪುರಂದರದಾಸರ ಹೆಸರಿನಲ್ಲಿ ಯಾವ ಶಾಸ್ತ್ರಗ್ರಂಥವೂ ಇದ್ದಂತಿಲ್ಲ. ಮತ್ತೆ ಎಟ್ಟಯಾಪುರದ ಸುಬ್ಬರಾಮದೀಕ್ಷಿತರು ಶಾರ್ಙ್ಗದೇವ, ವೇಂಕಟಮಖಿಗಳ ಸಾಲಿನಲ್ಲಿ ಪುರಂದರದಾಸರನ್ನು ಸೇರಿಸಿರುವುದರ ಕಾರಣವೇನು? ಲಕ್ಷಣ ಪರಂಪರೆಯಲ್ಲಿ 'ಸಂಗೀತರತ್ನಾಕರ'ವೂ 'ಚತುರ್ದಂಡಿ ಪ್ರಕಾಶಿಕೆ'ಯೂ ಪ್ರಮುಖ ಘಟ್ಟಗಳು; ಲಕ್ಷ್ಯ ಪರಂಪರೆಯಲ್ಲಿ ಪುರಂದರದಾಸರದ್ದು ಪ್ರಮುಖ ಘಟ್ಟ. ಪುರಂದರದಾಸರ ಲಕ್ಷ್ಯ ರಚನೆಯಲ್ಲಿ ಲಕ್ಷಣ ವಿಶೇಷಗಳೆಲ್ಲವೂ ಅಡಕವಾಗಿದ್ದುದರಿಂದ, ಲಕ್ಷಣಜ್ಞಾನಕ್ಕೆಂದೇ ಅವರು ಅನೇಕ ರಚನೆಗಳನ್ನು ಮಾಡಿದ್ದುದರಿಂದ, ಎಟ್ಟಯಾಪುರದ ಸುಬ್ಬರಾಮದೀಕ್ಷಿತರು ಅವರ ಉಪಕಾರವನ್ನು ಹೀಗೆ ಸ್ಮರಿಸಿಕೊಂಡಿದ್ದಾರೆ. ಪುರಂದರದಾಸರು-

> 'ಗೀತಠಾಯಸುಳಾದ್ಯುಗಾಭೋಗ ಪದ ಪದ್ಯ
> ವ್ರಾತ ಪ್ರಬಂಧ ರಚಿಸಿ ವಿಟ್ಠಲನ
> ಪ್ರೀತಿಬಡಿಸಿ ಪ್ರತ್ಯಕ್ಷ ಕಂಡು'

ನಲಿದರೆಂದು, ನೂರೈವತ್ತು ವರ್ಷಗಳನಂತರ ಪ್ರಸನ್ನವೆಂಕಟದಾಸರು ಪುರಂದರದಾಸರು ಕೊಟ್ಟು ಹೋಗಿರುವ ಲಕ್ಷ್ಯ ಸಂಪತ್ತನ್ನು ಉಲ್ಲೇಖಿಸಿದ್ದಾರೆ.

ವೇಂಕಟಮಖಿಯ ಕಾಲವಾದಮೇಲೆ 'ವಾಗ್ಗೇಯಕಾರಶ್ರೇಷ್ಠ'ರೆನಿಸಿದ ತ್ಯಾಗರಾಜಸ್ವಾಮಿಗಳ ಲಕ್ಷ್ಯ ಸಾಮಗ್ರಿಯ ಘಟ್ಟ. ಎಟ್ಟಯಾಪುರದ ಸುಬ್ಬರಾಮದೀಕ್ಷಿತರು 'ತ್ಯಾಗರಾಜಯ್ಯ'ನನ್ನು ಪರಿಚಯಮಾಡಿ ಕೊಡುತ್ತ "ವೇಂಕಟಮಖಿ ಪ್ರಪೌತ್ರ, ಮುದ್ದುವೇಂಕಟಮಖಿಯ ಶಿಷ್ಯ ಸೊಂಟಿ

ವೇಂಕಟಸುಬ್ಬಯ್ಯನ ಶಿಷ್ಯ"ನೆಂದು ಹೇಳಿದ್ದಾರೆ. ವೇಂಕಟಮಖಿಯ ಮತ್ತು ಮುದ್ದು ವೇಂಕಟಮಖಿಯ ಜಾಡನ್ನೆ ಹಿಡಿದು ಗೋವಿಂದಾಚಾರ್ಯರು ತಮ್ಮ 'ಸಂಗ್ರಹಚೂಡಾಮಣಿ'ಯಲ್ಲಿ ಎಲ್ಲ ಜನಕ-ಜನ್ಯರಾಗಗಳಿಗೆ ಲಕ್ಷಣ ಗೀತಗಳನ್ನು ರಚಿಸಿದ್ದು ತ್ಯಾಗರಾಜರ ಕೃತಿರಚನೆಗೆ ಆಧಾರವಾದಂತೆ ತೋರುತ್ತದೆ. ವೇಂಕಟಮಖಿಯ ತಂದೆ ಗೋವಿಂದ ದೀಕ್ಷಿತರು ('ಸಂಗೀತಸುಧೆ'ಯನ್ನು ರಚಿಸಿದವರು, ೧೬೨೦ರಲ್ಲಿ ರಚಿತವಾದ ಗ್ರಂಥ ಇದು) ಕನ್ನಡ ದೇಶದವರು, "ಕರ್ನಾಟಕ ಸಿಂಹಾಸನ ಭಾಗ್ಯ ವಿದ್ಯಾರಣ್ಯ ಶ್ರೀಚರಣಾಗ್ರಣೀಭ್ಯಃ" ರಚಿತವಾದ 'ಸಂಗೀತಸಾರ'ವನ್ನು ನೆನಪಿನಲ್ಲಿ ಉಳಿಸಿದವರು. ಮತ್ತು ಅವರ ಗ್ರಂಥದಲ್ಲಿ ಶಾರ್ಙ್ಗದೇವನ ದಾರಿಯನ್ನೇ ಹಿಡಿದಿರುವುದು ಕಾಣುತ್ತದೆ. ಶಾರ್ಙ್ಗದೇವನು ದೇವಗಿರಿಯ ಯಾದವಸಿಂಘಣನ ಓಲಗದಲ್ಲಿದ್ದವನು; ಮೂಲ ಏನಾದರಿರಲಿ, ಕನ್ನಡನಾಡಿಗೇ ಸೇರಿದವನು.

ಹೀಗೆ ಸಂಗೀತಪರಂಪರೆ ಕರ್ನಾಟಕವೆಂಬ ಪ್ರದೇಶದಲ್ಲೇ ಕಾಣಿಸಿಕೊಂಡು ಬೆಳೆದದ್ದರಿಂದ ಕರ್ನಾಟಕ ಸಂಗೀತವೆನಿಸಿಕೊಂಡದ್ದು ಸೋಜಿಗವೂ ಅಲ್ಲ, ಅನುಚಿತವೂ ಅಲ್ಲ. ತ್ಯಾಗರಾಜ ಸ್ವಾಮಿಗಳವರೆಗೂ ಸಂಪ್ರದಾಯ-ಶಾಸ್ತ್ರೀಯ ಪ್ರಕಾರಗಳು ಒಡಗೂಡಿ ಬೆಳೆದು ಬಂದುವೆನ್ನಬಹುದು. ಅಲ್ಲಿಂದ ಮುಂದೆ ದಾರಿ ಬೇರೆ ಬೇರೆಯಾಯಿತು.

ತ್ಯಾಗರಾಜಸ್ವಾಮಿಗಳು ಪುರಂದರದಾಸರಿಂದ ಪ್ರಭಾವಿತರಾದರೂ ಅವರಿಬ್ಬರ ರಚನೆಗಳಲ್ಲಿರುವ ಒಂದು ಅಂತರವನ್ನು ಗಮನಿಸಬೇಕು. ಪುರಂದರದಾಸರ ಕೃತಿಗಳಲ್ಲಿ ಕಾವ್ಯಭಾವ ಎದ್ದುಕಾಣುತ್ತದೆ; ರಾಗಭಾವ ಹಿಂದೆ ನಿಲ್ಲುತ್ತದೆ. ಧಾತುವಿಗಿಂತ ಮಾತಿನ ಮೇಲ್ಮೆ. ತ್ಯಾಗರಾಜರ ಕೃತಿಗಳಲ್ಲಾದರೋ ಮಾತು ಮಿತವಾದದ್ದು; ಧಾತುವಿನ ಸೊಗಸು ಮೇಲೆದ್ದು ಕಾಣುತ್ತದೆ. ರಾಗಭಾವದಲ್ಲಿ ಗೇಯ ಸ್ವರೂಪ, ಸಂಚಾರಿವ್ಯವಸ್ಥೆ, ತಾಳಾವರ್ತದಲ್ಲಿ ಸಾಹಿತ್ಯದ ಸಮರ್ಪಕವಾದ ಸೇರ್ಪಡೆ, ಮನೋಧರ್ಮಾನುಸಾರಿಯಾಗಿ ಸಂಗತಿ ಪ್ರಪಂಚನ ಇವೆಲ್ಲ ತ್ಯಾಗರಾಜರ ರಚನೆಗಳನ್ನು ಜನಪ್ರೀತಿಗೆ ಪಾತ್ರವಾಗಿಸಿವೆ. ಪುರಂದರದಾಸರಿಗೆ ಸಾಹಿತ್ಯ ಮುಖ್ಯವಾಗಿದ್ದಂತೆಯೂ ತ್ಯಾಗರಾಜರಿಗೆ ಸಂಗೀತ ಮುಖ್ಯವಾಗಿದ್ದಂತೆಯೂ ತೋರುತ್ತದೆ.

ಆದರೆ ಪುರಂದರದಾಸರ ಸಾಹಿತ್ಯವಾಗಲಿ ತ್ಯಾಗರಾಜರ ಸಂಗೀತವಾಗಲಿ ಸಂಪ್ರದಾಯವೆಂಬ ಚೌಕಟ್ಟಿನೊಳಗೆ ಅಡಕವಾಗುತ್ತದೆ. ಅವರಿಬ್ಬರಿಗೂ ಭಕ್ತಿಯೇ ಮುಖ್ಯವಾದ ರಸ. ಅವರಿಬ್ಬರ ಕೃತಿಗಳಲ್ಲೂ ಅಧ್ಯಾತ್ಮದ ಹಂದರವೇ ಕಾಣಸಿಗುವುದು. ತಾತ್ವಿಕಮೌಲ್ಯಗಳನ್ನೇ ಅವರಿಬ್ಬರೂ ಎತ್ತಿ ಹಿಡಿದದ್ದು. ನೀತಿ, ಆಚಾರ, ವಿವೇಕ, ವೈರಾಗ್ಯ, ಶಮೆ, ಗುರುಭಕ್ತಿ, ಜ್ಞಾನ, ಭಗವದನುಸಂಧಾನ ಈ ಬಗೆಯ ವಸ್ತುವೈವಿಧ್ಯ ಇಬ್ಬರ ರಚನೆಗಳಲ್ಲೂ ಇದೆ. ಅವರಿಬ್ಬರ ಪಾಲಿಗೂ ಉಪಾದೇಯವಾದ, ಅನುಸಂಧಾನಕ್ಕೆ ಯೋಗ್ಯವಾದ ಪುರುಷಾರ್ಥಗಳು ಎರಡೇ- ಧರ್ಮ ಮತ್ತು ಮೋಕ್ಷ. ಹೀಗೆ ಇವರಿಬ್ಬರು ಹಿಡಿದ ದಾರಿ ಸಂಪ್ರದಾಯ ಸಂಗೀತದ್ದೇ; ಅದರೊಂದಿಗೆ ಗೌಣವಾಗಿ, ಅನುಬಂಧಿಯಾಗಿ ಶಾಸ್ತ್ರೀಯ ಸಂಗೀತ ಸೇರಿಕೊಂಡು ಬಂದಿತು.

ಪುರಂದರದಾಸರು ಸಂಗೀತವನ್ನು ಉತ್ತಮ ಮತ್ತು ಹೀನ ಎಂಬುದಾಗಿ ಎರಡು ವಿಭಾಗ ಮಾಡಿದರಷ್ಟೆ? ('ಕೇಳನೋ ಹರಿ ತಾಳನೋ' ಎನ್ನುವ ಕೃತಿಯಲ್ಲಿ ಬರುವ ಸೂಚನೆ). ಉತ್ತಮ ಸಂಗೀತದಲ್ಲಿ ಭಕ್ತಿ (ಪ್ರೇಮ, ಭಗವಂತನಲ್ಲಿ ನಿರತಿಶಯಪ್ರೀತಿ) ವಿಶೇಷವಾದುದು-

'ಅಡಿಗಡಿಗಾನಂದ ಬಾಷ್ಪಪುಳಕದಿಂದ
ನುಡಿನುಡಿಗೆ ಶ್ರೀಹರಿಯೆನುತ್ತ
ದೃಢಭಕ್ತರನು ಕೂಡಿ ಹರಿಕೀರ್ತನೆ ಮಾಡಿ
ಕಡೆಗೆ ಪುರಂದರವಿಠಲನೆಂದರೆ ಕೇಳ್ವ.'

ಭಕ್ತಿಯ ಪ್ರಕಾರಗಳೂ ಉಲ್ಲೇಖಕ್ಕೆ ಬಂದಿವೆ-

'ತಾಳಬೇಕು ತಕ್ಕ ಮೇಳಬೇಕು
ಶಾಂತವೇಳೆ ಬೇಕು ಗಾನವನ್ನು ಕೇಳಬೇಕೆಂಬುವರಿಗೆ'

ಇದು ಧ್ಯಾನಭಕ್ತಿ.

'ಯತಿಪ್ರಾಸವಿರಬೇಕು, ಗತಿಗೆ ನಿಲ್ಲಿಸಬೇಕು
ರತಿಪತಿಪಿತನೊಳು ಅತಿಪ್ರೇಮವಿರಬೇಕು'

ಇದು ಜ್ಞಾನ ಭಕ್ತಿ.

'ಗಳ ಶುದ್ಧವಿರಬೇಕು ತಿಳಿದು ಪಾಡಲಿಬೇಕು
ಕಳವಳ ಬಿಡಬೇಕು ಕಳೆಮುಖವಿರಬೇಕು'

ಇದು ನಿಶ್ಚಲ ಭಕ್ತಿ.

'ಅರಿತವರಿರಬೇಕು ಹರುಷ ಹೆಚ್ಚಲಿಬೇಕು
ಪುರಂದರವಿಠಲನೆ ಪರದೈವವೆನಬೇಕು'

ಇದು ಏಕಾಂತಭಕ್ತಿ.
ಇನ್ನು ಹೀನ ಸಂಗೀತವೆಂದರೆ 'ಡಂಭಕದ ಕೂಗಾಟ'-

'ನಾನಾ ಬಗೆಯ ರಾಗಭಾವ ತಿಳಿದು ಸ್ವರ
ಜ್ಞಾನ ಮನೋಧರ್ಮಜಾತಿಯಿದ್ದು
ದಾನವಾರಿಯ ದಿವ್ಯನಾಮರಹಿತವಾದ
ಹೀನ ಸಂಗೀತ ಸಾಹಿತ್ಯಕ್ಕೆ ಮನವಿತ್ತು'

ವ್ಯಾಸತೀರ್ಥರು 'ಪುರಂದರದಾಸರೇ ದಾಸರು' ಎನ್ನುವಾಗ ವ್ಯತಿರೇಕನ್ಯಾಯದಿಂದ

'ಬೇಸರಿಲ್ಲದೆ ಅವರಿವರ ಕಾಡಿ ಬಳಲಿಸುತ್ತ
ಕಾಸುಗಳಿಸುವ ಪುರುಷ ಹರಿದಾಸನೇ?'

'ಅಂಬುಜೋದ್ಭವಪಿತನ ಆಗಮಗಳರಿಯದೆ
ತಂಬೂರಿ ಮಿಡಿಟಲವ ಹರಿದಾಸನೇ?

'ಮಾಯಾಸಂಸಾರದಲಿ ಮಮತೆ ಹೆಚ್ಚಾಗಿಟ್ಟು
ಗಾಯನವ ಮಾಡಲವ ಹರಿದಾಸನೇ?'

'ಪಾತಕನ ತೆರನಂತೆ ಪದಗಳನು ತಾ ಬೊಗಳಿ
ಕೂಟ ಜನರ ಸಂತೋಷ ಪಡಿಸಿ
ಬೂಟಕವ ಮಾಡಲವ ಹರಿದಾಸನೇ?'

ಎಂದು ಬಣ್ಣಿಸಿರುವುದು ಹೀನಸಂಗೀತವನ್ನೇ

ಸಂಪ್ರದಾಯಸಂಗೀತದ ಉದ್ದೇಶ ಲೋಕರಂಜನೆಯಲ್ಲ, ಮನೋರಂಜನೆಯಲ್ಲ, ರಸಿಕರ ಹೃದಯಸಂಸ್ಕಾರ. ಶ್ರವಣ ಸುಖಕ್ಕಿಂತ ಮಿಗಿಲಾಗಿ ಭಾವಬೋಧ ಇರಬೇಕೆಂಬುದು ಇಲ್ಲಿನ ತತ್ತ್ವ. ಇದಕ್ಕೆ ನೆರವಾಗುವ ಸಾಮಗ್ರಿಯನ್ನು ಒದಗಿಸುವುದು ಸಮರ್ಥರಾದ, ತುಳಜಾಜಿಯು 'ಅಭಿಯುಕ್ತ'ರೆಂದು ನಿರ್ದೇಶಿಸಿರುವ, ವಾಗ್ಗೇಯಕಾರರ ಕೆಲಸ. ಸಾಹಿತ್ಯಶುದ್ಧಿ, ಶಾಸ್ತ್ರಶುದ್ಧಿ, ಭಾವಶುದ್ಧಿಗಳನ್ನು ಔಚಿತ್ಯವರಿತು ಮೇಳೈಸಿಕೊಳ್ಳುವವನು ವಾಗ್ಗೇಯಕಾರ. ಇಲ್ಲಿನ ಮಾತಾಗಲಿ (ವಾಕ್) ಧಾತುವಾಗಲಿ (ಗೇಯ) ಸುಸಂಸತವಾದ ಹೃದಯದಿಂದ, ಪ್ರತಿಭೆಯ ಮೂಸೆಯಲ್ಲಿ ಪುಟವಿಡಿದು ಬರುತ್ತದೆ; ಎರಡೂ ಸಮನಾಗಿಯೇ ಕಾಣಿಸಿಕೊಂಡು ಅನ್ಯೋನ್ಯವಾಗಿ ಕಳೆಯನ್ನು ಕೂಡಿಸುತ್ತವೆ. ಪುರುಷ ಪ್ರಯತ್ನದ ಪಾತ್ರ ಇಲ್ಲಿ ಅಷ್ಟಾಗಿ ಇರುವುದಿಲ್ಲ. ಭಾವನೆಗಳು ರಸಮಯವಾಗಿ ತಾನುತಾನೆಂದು ಮುನ್ನುಗ್ಗಿ ಬರುವುದರಿಂದಲೇ ಪುರಂದರದಾಸರೂ ತ್ಯಾಗರಾಜಸ್ವಾಮಿಗಳೂ ಅಷ್ಟು ಅಧಿಕವಾದ ಸಂಖ್ಯೆಯಲ್ಲಿ ಕೃತಿರಚನೆ ಮಾಡುವುದಾಯಿತು.

ಇವರಿಬ್ಬರ ಸಾಲಿಗೆ ನಾವು ತಾಳ್ಲಪಾಕಂ ಅಣ್ಣಮಾಚಾರ್ಯರನ್ನೂ (೧೪೨೪-೧೫೦೩) ಸೇರಿಸಬೇಕು. ಪುರಂದರದಾಸರ ಸಮಕಾಲೀನರು, ಪುರಂದರದಾಸರು ವಿಟ್ಠಲರೂಪೀ ಭಗವದ್ಭಕ್ತರಾದರೆ ಇವರು ವೆಂಕಟೇಶ್ವರರೂಪೀ ಭಗವದ್ಭಕ್ತರು. ಅಣ್ಣಮಾಚಾರ್ಯರ ರಚನೆಗಳೂ ವಿಪುಲವಾಗಿವೆ. ವಿವಿಧ ಪ್ರಕಾರಗಳಲ್ಲಿವೆ; ಆಧ್ಯಾತ್ಮ ಪರವಾಗಿವೆ; ನೀತಿಬೋಧಕವಾಗಿವೆ. ಧರ್ಮ-ಮೋಕ್ಷಗಳೇ ಇಲ್ಲಿಯೂ ಮುಖ್ಯವಸ್ತು. ವಾಗ್ಗೇಯಕಾರರು ಭಕ್ತರೂ ಭಾವುಕರೂ ಆಗಿದ್ದುದು ಅವರೆಲ್ಲ ಕೃತಿಗಳಲ್ಲೂ ಕಾಣುತ್ತದೆ. ಸಂಪ್ರದಾಯ ಸಂಗೀತಕ್ಕೆ ಸಾಮಗ್ರಿಯಾದ ಪ್ರಬಂಧಗಳು ಹೀಗೆಯೇ ಇರಬೇಕಲ್ಲವೇ? ಪುರಂದರದಾಸರು, ಅಣ್ಣಮಾಚಾರ್ಯರು, ತ್ಯಾಗರಾಜರು ಮೂರೂ ಮಂದಿ ಸಂಗೀತಶಾಸ್ತ್ರದಲ್ಲೂ ವಿಶೇಷವಾದ ಪರಿಶ್ರಮವನ್ನು ಪಡೆದಿದ್ದರಾಗಿ ಸಂಪ್ರದಾಯ ಸಂಗೀತ ಅವರಿಂದ ಜನಪ್ರೀತಿಯನ್ನು ಗಳಿಸುವಂತಾಯಿತು.

ತ್ಯಾಗರಾಜರ ಕಾಲದನಂತರ ಈ ಸಂಪ್ರದಾಯಸಂಗೀತ ತಂಜಾವೂರಿನ ವಲಯವನ್ನು ದಾಟಿ ತಮಿಳುನಾಡಿನ ಮತ್ತಿತರ ಕಡೆಗಳಲ್ಲಿ ಬೆಳೆಯಿತು, ಬೇರೂರಿತು. ಇಲ್ಲೆಲ್ಲ ತಂಜಾವೂರಿನ ಅರಸೊತ್ತಿಗೆಯ ಪ್ರಭಾವದಿಂದ ತೆಲುಗುಭಾಷೆ ಜನರ ಪರಿಚಯದಲ್ಲಿದ್ದಿತು. ಪುರಂದರದಾಸರ ರಚನೆಗಳು ಕನ್ನಡದಲ್ಲೇ ಇದ್ದುವಾಗಿ ಇಲ್ಲಿ ಬಳಕೆಯಿಂದ ಜಾರಿದುದು ಸೋಜಿಗವೇನಲ್ಲ.

ಅಣ್ಣಮಾಚಾರ್ಯರಿಗೆ ಪುರಂದರದಾಸರಿಗಿದ್ದಂತೆ ದಾಸಕೂಟದ ಬೆಂಬಲವಾಗಲಿ, ತ್ಯಾಗರಾಜರಿಗಿದ್ದಂತೆ ಶಿಷ್ಯ ಪರಂಪರೆಯಾಗಲಿ ಇರದೆ ಅವರ ಕೃತಿಗಳು ಬಹುಕಾಲದವರೆಗೆ ಬೆಳಕಿಗೇ ಬರಲಿಲ್ಲ. ಶಾಸ್ತ್ರೀಯ ಸಂಗೀತ ಸಭೆಗಳಲ್ಲಿ ತ್ಯಾಗರಾಜರ ಕೃತಿಗಳೇ ಹೆಚ್ಚು ಪ್ರಚಾರಕ್ಕೆ ಬಂದುದು ಈ ಕಾರಣದಿಂದ.

ತ್ಯಾಗರಾಜರ ಪ್ರಭಾವದಿಂದ ಕೊಂಚಕಾಲ ಶಾಸ್ತ್ರೀಯ ಸಂಗೀತವು ಸಂಪ್ರದಾಯ ಸಂಗೀತ ವನ್ನಳವಡಿಸಿಕೊಂಡೇ ಮುಂದರಿಯಿತು. ತ್ಯಾಗರಾಜರ ಸಾಕ್ಷಾಚ್ಛಿಷ್ಯರೆಲ್ಲ ಸಂಪ್ರದಾಯ ಸಂಗೀತಕ್ಕೆ ಒಲಿದವರೇ. ತ್ಯಾಗರಾಜರೇ ತಮ್ಮೆಲ್ಲ ಶಿಷ್ಯರೊಡಗೂಡಿ ತಿರುವಯ್ಯಾರಿನ ಸಪ್ತಸ್ಥಾನೋತ್ಸವದಲ್ಲಿ ಭಜನಗೋಷ್ಠಿ ನಡೆಸುತ್ತಿದ್ದ ಉಲ್ಲೇಖವಿದೆ. ಇದು ಸಂಪ್ರದಾಯ ಸಂಗೀತದ ಜಾಡಿನಲ್ಲೇ. ತ್ಯಾಗರಾಜರ ನೇರಶಿಷ್ಯ ಉಮ್ಮೈಯಾಳ್ಪುರಂ ಕೃಷ್ಣ ಭಾಗವತರ ಶಿಷ್ಯ ಸ್ವಾಮಿ ಭಾಗವತರು ಮದರಾಸಿನ ಕಪಾಲೀಶ್ವರ ದೇವಾಲಯದಲ್ಲಿ ಧನುರ್ಮಾಸದಂದು ಗುಡಿಯ ಸುತ್ತ ನಾಲ್ಕು ಬೀದಿಗಳಲ್ಲಿ ಮುಂಜಾನೆ ನಾಲ್ಕೂವರೆಯಿಂದ ಆರೂವರೆಯವರೆಗೆ ಗೋಷ್ಠಿಯಲ್ಲಿ ಪ್ರದಕ್ಷಿಣೆಯಾಗಿ ಬಂದು ಅಲ್ಲಲ್ಲಿ ನಿಂತು ತ್ಯಾಗರಾಜರ ಕೀರ್ತನೆಗಳನ್ನೂ ದಿವ್ಯನಾಮಸಂಕೀರ್ತನವನ್ನೂ ಮಾಡುತ್ತಿದ್ದರು. ದಿನವೂ ಬೇರೆ ಬೇರೆ ಕೀರ್ತನೆಗಳು. ಹೀಗಾಗಿ ಧನುರ್ಮಾಸದ ಅವಧಿಯಲ್ಲಿ ಸುಮಾರು ಐನೂರು ಆರುನೂರು ತ್ಯಾಗರಾಜ ಕೀರ್ತನೆಗಳನ್ನು ಬಹು ಜನರು ಸಂಪ್ರದಾಯದ ಪರಿಸರದಲ್ಲೇ ಕೇಳುತ್ತಿದ್ದರು. ಇಂಥದು ಅನೇಕ ಕಡೆ ನಡೆಯುತ್ತಿದ್ದಿರಬೇಕು.

ಗ್ರಾಮ ನಗರಗಳಲ್ಲಿ ಹಲವಾರು ಭಜನಗೋಷ್ಠಿಗಳು ನೆರೆದು ಕಾಲಕಾಲಕ್ಕೆ ಸಂಪ್ರದಾಯ ಸಂಗೀತದ ವಿನಿಕೆ ಬಳಕೆಯಲ್ಲಿದ್ದು, ಜನರ ಸಂಸ್ಕಾರಕ್ಕೆ ಇದು ಬಹುಮಟ್ಟಿಗೆ ನೆರವಾಗುತ್ತಿದ್ದಿತು. ಆದರೆ ಬರುಬರುತ್ತ ಶಾಸ್ತ್ರೀಯ ಸಂಗೀತವು ಸಂಪ್ರದಾಯ ಸಂಗೀತದ ಕಳೆಯನ್ನು ಕಳೆದುಕೊಂಡಿತು. ಭಕ್ತಿಗಿಂತ ಯುಕ್ತಿ, ಭಾವುಕತೆಗಿಂತ ಚಮತ್ಕಾರ, ಅಧ್ಯಾತ್ಮಕ್ಕಿಂತ ಆಡಂಬರ ಇವು ಹೆಚ್ಚಿ ಸಂಗೀತಸಭೆಗಳು ಕುತೂಹಲವನ್ನೂ ವಿಷಯಸುಖವನ್ನೂ ತಣಿಸುವ ಸಾಧನಗಳಾದುವು. ಸಂಗೀತವು ಪ್ರವೃತ್ತಿಯಾಗಿ ಮಾತ್ರ ಉಳಿಯದೆ ವೃತ್ತಿಯೂ ಆದುದು ಸಂಪ್ರದಾಯದ ಬಿಗಿಯನ್ನು ಸಡಿಲಿಸಿತು. ಭಗವದ್ಭಕ್ತಿಯಾಗಲಿ, ಭಾವುಕತೆಯಾಗಲಿ, ಧರ್ಮಬುದ್ಧಿಯಾಗಲಿ, ಮೋಕ್ಷಕಾಮನೆಯಾಗಲಿ ಜೀವನೋಪಾಯವಾಗಿಬಿಟ್ಟರೆ ಹೇಗೆ? 'ನಾದೋಪಾಸನ ಜೇಸೆ', 'ನಿಧಿಚಾಲಾ ಸುಖಮಾ', 'ಭಕ್ತಿವಿನಾ ಸನ್ಮಾರ್ಗಮು', 'ಶಾಂತಮು ಲೇಕ' ಇವೆಲ್ಲ ವಿನಿಕೆಗೆ ಮಾತ್ರ ಸಂದರೆ ಸಾಕೆ? ಬದುಕಿನ ದಾರಿಯನ್ನು ತೋರಿಸದ ಸಂಗೀತ ಸಂಪ್ರದಾಯ ಸಂಗೀತವಾಗಲಾರದು.

ಸಂಗೀತವು ವೃತ್ತಿಪರವಾದದ್ದು ಬಹು ಹಿಂದೆಯೇ. ಅರಸರ ಒಡ್ಡೋಲಗಗಳಲ್ಲಿ ಗಾಯಕರಿಗೆ, ವಾದಕರಿಗೆ, ಗಮಕಿಗಳಿಗೆ, ವಾಗ್ಮಿಗಳಿಗೆ ಎಡೆಯಿರುತ್ತಿದ್ದುದು ಇದಕ್ಕೆ ಕಾರಣ. ಅರಸರ ಆಶ್ರಯದಲ್ಲಿ ರಸಿಕರೂ ಮೈದಳೆಯುತ್ತಿದ್ದರು; ಶ್ರೀಮಂತರಾದ ರಸಿಕರು ತಮ್ಮದೇ ಒಡ್ಡೋಲಗವನ್ನು ನೆರೆಯಿಸುತ್ತಿದ್ದರು. ಅಲ್ಲಿಯೂ ಗಾಯಕರು, ವಾದಕರು. ಇನ್ನು ಅರಸೊತ್ತಿಗೆಯಿದ್ದಲ್ಲೆಲ್ಲ ಆಸ್ಥಾನ ವಿದ್ವಾಂಸರು, ಅಷ್ಟಿಷ್ಟು ರಾಜಕಾರಣದಲ್ಲಿ ತೊಡಗಿರುತ್ತಿದ್ದುದು ಸಹಜವೇ; ಅವರ ದೃಷ್ಟಿಯೆಲ್ಲ ಲೌಕಿಕ ಲಾಭ ಸನ್ಮಾನಗಳ ಮೇಲೇ. ಮೈಸೂರಿನಲ್ಲೇ ಮುಮ್ಮಡಿ ಕೃಷ್ಣರಾಜ ಒಡೆಯರ ಆಪ್ತ ಸಲಹೆಗಾರ (ಮೂಸಾಹಿಬ್)ರಲ್ಲಿ ಒಬ್ಬ ಆಗಿದ್ದು, ತಮ್ಮ ಸ್ವಾರ್ಥದಿಂದ, ದುರ್ಬುದ್ಧಿಯಿಂದ ಜನರಲ್ಲಿ ಅಶಾಂತಿಯನ್ನುಂಟುಮಾಡಿ

ಅರಸರಿಗೆ ಅಧಿಕಾರ ತಪ್ಪಲು ಕಾರಣರಾದವರಲ್ಲಿ ಮುಖ್ಯನಾದವನು ವೀಣೆ ವೆಂಕಟಸುಬ್ಬಯ್ಯನೆಂಬ ಸಂಗೀತ ವಿದ್ವಾಂಸನೇ (ಸುಮಾರು ೧೮೧೯ ರಲ್ಲಿ ಇವನು ಪ್ರಬಲನಾದದ್ದು) (೧೭೯೨-೧೮೬೮). ಇದೊಂದು ಅತಿರೇಕದ ಉದಾಹರಣೆಯೆನ್ನಿ. ಆದರೆ ಅರಸರ, ಅಧಿಕಾರಗಳ ಓಲಗದಲ್ಲಿದ್ದುಕೊಂಡು ಒಳಜಗಳಗಳಲ್ಲಿ ಪಾಲ್ಗೊಂಡು ಯಥಾಶಕ್ತಿ ಸ್ವಾರ್ಥವನ್ನು ಸಾಧಿಸಿಕೊಂಡ ಸಂಗೀತವಿದ್ವಾಂಸರ ಸಂಖ್ಯೆ ಕಡಮೆಯೇನಲ್ಲ. ಅರಸರ ಆಳ್ವಿಕೆ ಹೋದಮೇಲೆ ಸಂಸ್ಥೆ ಕಟ್ಟುವವರೂ, ಪಟ್ಟಭದ್ರರೂ, ಪ್ರಭಾವಶಾಲಿಗಳೂ ಬಂದಿದ್ದಾರಷ್ಟೆ; ಇಲ್ಲಿಯೂ ಸ್ವಾರ್ಥಸಾಧನೆಯೇನು ತಪ್ಪಿದ್ದಲ್ಲ!

ಶಾಸ್ತ್ರೀಯ ಸಂಗೀತವು ಸಂಸ್ಕಾರವಿಲ್ಲದ ರಸಿಕರ ಒತ್ತಾಸೆಗೆ ಮಣಿದು ಸಂಪ್ರದಾಯದ ಚೌಕಟ್ಟಿನಿಂದ ದೂರವಾಯಿತು. ಸಂಗೀತವೆಂದರೆ ಅದೊಂದು ಕಲಾಪ್ರಕಾರ, ಕಲೆಯ ಪ್ರಯೋಜನ ಸಂತೋಷ, ಸಂತೋಷವೆಂದರೆ ಲೌಕಿಕವಾದದ್ದೇ ಎಂಬ ಕಲ್ಪನೆ ಎಲ್ಲೆಲ್ಲಿಯೂ ಹರಡಿಕೊಂಡಿತು. ಬಯಕೆಗೆ ತಕ್ಕಂತೆ ನೀಡಿಕೆ, ನೀಡಿಕೆಗೆ ತಕ್ಕಂತೆ ಬಯಕೆ. ಇದೊಂದು ಸಂಗೀತ ವಿದ್ವಾಂಸ-ರಸಿಕರ ನಡುವೆ ತೋರಿಕೊಂಡಿರುವ ವಿಷವೃತ್ತ. ಎರಡೂ ಕಡೆಯವರಿಗೂ ಸಂಪ್ರದಾಯ ಸಂಗೀತದಿಂದ ಪ್ರಯೋಜನವಿರದು. ತಾತ್ಕಾಲಿಕ ಸುಖ, ಕಲಾರಸಿಕನೆಂಬ ಜನಪ್ರೀತಿ, ಪ್ರಾಪಂಚಿಕಮನ್ನಣೆ ಇಷ್ಟಾದರೆ ಅವರಿಗೆ ಸಾಕು. ಇದರ ಫಲವೇನು? ಮನೋವೃತ್ತಿಯಲ್ಲಿ ಲಾಘವ; ದಿಟವಾಗಿ ಘನವೆನಿಸಿದ್ದು ಯಾರಿಗೂ ಬೇಡ.

ಶಾಸ್ತ್ರೀಯ ಸಂಗೀತವೂ ಸುಗಮವಾಗಿರಬೇಕೆಂಬುದು ಈಗಿನ ರಸಿಕರ ಬಯಕೆ. 'ಗಳಶುದ್ಧಿ'ಯಿದ್ದರೆ ಸಾಕು; 'ತಿಳಿದು ಪಾಡಲಿ' ಬೇಕಾದುದಿಲ್ಲ. 'ತಾಳವಿದ್ದರಾ'ಯಿತು, 'ಕಳವಳ ಬಿಡಬೇಕೆ'ಂಬ ನಿಯಮವೇನಿಲ್ಲ. 'ಹಾಡಿದ್ದೇ ಹಾಡುವರು, ಕೇಳಿದ್ದೇ ಕೇಳುವರು' ಎಂಬಂತಿರಬಾರದು; ಹೊಸ ಹೊಸ ಹಾಡುಗಳು, ಹೊಸ ಹೊಸ ಹಾಡಿಕೆ, ಹೊಸ ಹೊಸ ರಾಗಗಳು ಇರಬೇಕು. ವೇಗಕ್ಕೆ ಮೊದಲ ಪಟ್ಟ; ಚಮತ್ಕಾರಕ್ಕೆ ಮರ್ಯಾದೆ. ಬೇರೆ ಬೇರೆ ಸಂಗೀತ ಪದ್ಧತಿಗಳನ್ನು ಕಲೆಸುವ ಕುತೂಹಲ ಬೇರೆ; ಎಷ್ಟು ಕಲಬೆರಕೆಯಾದರೆ ಅಷ್ಟು ಸೊಗಸು! ಭಾವಶುದ್ಧಿ ರುಚಿಸುವುದಿಲ್ಲ; ತಂತ್ರಪ್ರೌಢಿಮೆಯಾದರೋ ಮನಸೆಳೆಯುತ್ತದೆ. ಇದು ಸ್ವಚ್ಛಂದ ಸಂಗೀತದ ಯುಗಧರ್ಮ.

ಎಟ್ಟಯಾಪುರದ ಸುಬ್ಬರಾಮ ದೀಕ್ಷಿತರ ಕಾಲದಲ್ಲೇ (ಎಂದರೆ ಸುಮಾರು ನೂರು ವರ್ಷಗಳ ಹಿಂದೆಯೆ) ಈ ಬಗೆಯ ಮನೋವೃತ್ತಿ ಬೆಳೆಯತೊಡಗಿದ್ದುದು ಅವರ ಈ ಮಾತುಗಳಿಂದ ತಿಳಿದುಬರುತ್ತದೆ-

> "ಹಿಂದೂಸಂಗೀತಮುಲಕು ಪೂರ್ವಮಂದೇ ಏರ್ಪಡಿಯುಂಡಿನ
> ಗೌರವಮುನು, ಸಂಖ್ಯಲೇನಿ ಲಕ್ಷ್ಯಲಕ್ಷಣಗ್ರಂಥಂಬುಲನು
> ಕೊಂಚಮೈನ ತೆಲಿಯಕ, ತಮತಮ ಮನಸ್ಸು ಬೋಯಿನ ರೀತಿಗಾನೇ
> ಸಂಗೀತವಿದ್ಯಕು ಲಕ್ಷಣಮುಲನು ಅಮರ್ಚುವಿಕೊನಿ ವಾಗ್ಗೇಯ-
> ಕಾರಲು...ಕೊಂದರು ತಿರುಗುಚುನ್ನಾರು "

ಅವರ ಕಾಲದಲ್ಲಿ ಈ ಪ್ರವೃತ್ತಿ ಕೊಂಚವಾಗಿದ್ದಿತಂತೆ; ಆಗಲೇ ಅವರು ಖಿನ್ನರಾದರು.

ನಮ್ಮ ಕಾಲದಲ್ಲಿ ಇದು ಹುಚ್ಚು ಹೊಳೆಯಾಗಿ ಹರಡಿಕೊಂಡಿದೆ; ನಮ್ಮ ಖೇದವೆಷ್ಟೆಂದು ಹೇಳೋಣ? ತಾವೇ ವಾಗ್ಗೇಯಕಾರರೆನಿಸಿಕೊಳ್ಳಬೇಕೆಂಬ ತವಕ ಇಂದಿನ ಎಲ್ಲ ಸಂಗೀತ ವಿದ್ವಾಂಸರಿಗೂ ಇರುವಂತಿದೆ; ನಮ್ಮ ಪುಣ್ಯಕ್ಕೆ, ಅವರೆಲ್ಲರಿಗೂ ಸಾಹಸಪ್ರವೃತ್ತಿಯಿಲ್ಲ! 'ದೇವತೆಗಳು ಅಡಿಯಿಡಲು ಹಿಂಜರಿಯುವೆಡೆ ಮೂರ್ಖರು ಮುನ್ನುಗ್ಗುತ್ತಾರೆ' ಎಂಬುದೊಂದು ಗಾದೆ ಇಂಗ್ಲಿಷಿನಲ್ಲಿದೆ. ಅದರ ಅನ್ವಯವನ್ನು ನಾವು ಈಗ ನಡೆಯುತ್ತಿರುವ ಕೃತಿರಚನೆಯ ಮಹಾಪೂರದಲ್ಲಿ ಕಾಣಬಹುದು, ಸಂಗೀತನಿರೂಪಣೆಯ ವಿಪರ್ಯಾಸಗಳಲ್ಲಿ ಕಾಣಬಹುದು. ನವ್ಯತೆಯೇ ಒಂದು ಸ್ವತಂತ್ರಮೌಲ್ಯ ವಾಗಬಹುದೆ? ಅಪೂರ್ವವೆಂದಮಾತ್ರಕ್ಕೆ ಅದು ಅದ್ಭುತವಾದೀತೆ?

ಆದರೆ ಕಾಲ ಕೆಟ್ಟಿತೆಂದು ಗೋಳುಕರೆಯುವ ಅಗತ್ಯವೇನಿರದು. ಈಗ ಕಾಣುತ್ತಿರುವ ವೈಪರೀತ್ಯ ವಿಪರ್ಯಾಸಗಳು ಎಲ್ಲ ಕಾಲದಲ್ಲೂ ಇದ್ದುವು. ಹೀಗಿದ್ದುದನ್ನು ಪುರಂದರದಾಸರೇ ತಮ್ಮ ಕೃತಿಗಳಲ್ಲಿ ಕಾಣಿಸಿದ್ದಾರೆ; ತ್ಯಾಗರಾಜರು ಉಲ್ಲೇಖಿಸಿದ್ದಾರೆ. ನಮ್ಮ ಯುಗಕ್ಕೇ ಹೊಸದಾಗಿ ಅಂಟಿಕೊಂಡು ಬಂದ ಪಿಡುಗೇನಲ್ಲ ಇದು. ಆದರೆ ನಮ್ಮ ಕಣ್ಣ ಮುಂದೆ ಕಾಣಿಸಿಕೊಂಡುದು ದೊಡ್ಡದಾಗಿ ತೋರಿಕೊಳ್ಳುತ್ತದೆಯಲ್ಲವೆ? ಸಂಪ್ರದಾಯ ಸಂಗೀತವೆಂದು ಹೇಳಿಕೊಳ್ಳುವ ವಿದ್ವಾಂಸರಿಗೆ ಸಂಪ್ರದಾಯದ ತಾತ್ಪರ್ಯ ತಿಳಿದಿರದಿದ್ದರೆ ಅದು ಅಭಾಸವೆನಿಸುತ್ತದೆ; ಅವರು ನೀಡಿದ್ದೇ ಸಂಪ್ರದಾಯ ಸಂಗೀತವೆಂಬ ಭ್ರಮೆಯೂ ರಸಿಕರ ಪಾಲಿಗೆ ಒದಗಿಬರುತ್ತದೆ. ಅವರಿಬ್ಬರ ಕಣ್ಣಿನ ಕಾಮಾಲೆ ಕರಗದಿದ್ದರೆ ಸಂಪ್ರದಾಯ ಸಂಗೀತದ ದಿಟವಾದ ಸ್ವಾರಸ್ಯ ಅರಿವಿಗೆ ಬರುವುದಿಲ್ಲ.

ಅವರ ಅರಿವಿಗೆ ಬರಬೇಕಾದ ಮುಖ್ಯ ವಿಚಾರವೆಂದರೆ ಸಂಗೀತದಲ್ಲಿ ಸಾಂಪ್ರದಾಯಿಕತೆ ಒದಗಿ ಬಂದುದು ದೇವಾಲಯಗಳಲ್ಲಿ, ಉತ್ಸವ ಸಂರ್ಭದಲ್ಲಿ, ಭಜನಗೋಷ್ಠಿಗಳಲ್ಲಿ, ಊಂಛ ವೃತ್ತಿಯ ಸಂದರ್ಭದಲ್ಲಿ. ತ್ಯಾಗರಾಜರ ಕಾಲಕ್ಕೆ ಮೊದಲು ಈ ಸಂಗೀತಕ್ಕೆ ಯಾವ ಸಾಮಗ್ರಿಗಳಿದ್ದುವೋ ತಿಳಿದು ಬರುವುದಿಲ್ಲ. ಅವರ ಕಾಲದ ಮೇಲೆ ಪುರಂದರದಾಸರು, ತ್ಯಾಗರಾಜರು, ಭದ್ರಾಚಲ ರಾಮದಾಸರು, ನಾರಾಯಣತೀರ್ಥರು, ಬೋಧೇಂದ್ರ ಸದ್ಗುರು ಇವರ ರಚನೆಗಳೇ ಮುಖ್ಯವಾಗಿ ಬಳಕೆಗೆ ಬರುತ್ತಿದ್ದುವು. ಸ್ವಾಮಿ ಭಾಗವತರು ನಡೆಸುತ್ತಿದ್ದ ಭಜನ ಗೋಷ್ಠಿಯ ವಿಚಾರ ಆಗಲೇ ಬಂದಿತಷ್ಟೆ. ಅವರು ತ್ಯಾಗರಾಜರ ಕೀರ್ತನೆಗಳನ್ನೇ ಹಾಡುತ್ತಿದ್ದರು.

ಮದ್ರಾಸಿನ ಕಪಾಲೀಶ್ವರ ದೇವಸ್ಥಾನದ ಸುತ್ತ ನಾಲ್ಕೂ ಬೀದಿಗಳಲ್ಲಿ ಅವರು ಭಜನಗೋಷ್ಠಿ ನಡೆಸುವಾಗ ಕ್ರಮ ಹೀಗಿದ್ದಿತು. ಬೀದಿಯ ಆರಂಭದಲ್ಲಿ ಮತ್ತು ಬೀದಿಯ ಕೊನೆಗೆ ಬಂದಾಗ ಅಲ್ಲಿ ಕೊಂಚ ಕಾಲ ನಿಂತು ಕೀರ್ತನೆಗಳನ್ನು ಆಲಾಪನೆ, ಸಂಗತಿ, ನೆರವಲ್, ಸ್ವರ ವಿಸ್ತಾರಗಳ ಸಮೇತ ಹಾಡುವುದು; ಮುಂದೆ ಸಾಗುವಾಗ ನಾಮ ಸಂಕೀರ್ತನೆ; ಭಾಗವತರು ಹಾಡಿ ಮುಗಿಸುವಾಗ ಕಡೆಯ 'ಪುಂಡರೀಕ'ವನ್ನು ನೆರೆದ ಜನರೆಲ್ಲ ಅವರೊಂದಿಗೆ ದನಿಗೂಡಿಸಿ ಹಾಡುವರು. ಹೀಗೆ ಏಳೆಂಟು ಬಾರಿ ಸಂಗೀತದ ವಿನಿಕೆ ಸಾಂಗವಾಗಿ ನಡೆಯುವುದು; ಬೇರೆ ಬೇರೆ ರಾಗಗಳು, ಬೇರೆ ಬೇರೆ ಕೃತಿಗಳು (ತ್ಯಾಗರಾಜವೇ).

ಪರಿಸರ, ಸಮಯ, ಸಂದರ್ಭ ಎಲ್ಲವೂ ಭಕ್ತಿಗೆ, ಭಾವುಕತೆಗೆ ಹೊಂದಿಕೊಂಡಿರುತ್ತಿದ್ದುವು. ಸಂಪ್ರದಾಯದ ಮೌಲ್ಯಗಳು (ಧರ್ಮ ಮತ್ತು ಮೋಕ್ಷ) ಈ ಸಂಗೀತದ ಜೀವಾಳವಾಗಿರುತ್ತಿದ್ದುವು.

ಅದೇ ಅರಸರ ಓಲಗದಲ್ಲೋ ರಸಿಕರ ಮನೆಯಲ್ಲೋ ಸಂಗೀತ ಸಮಾರಾಧನೆ ನಡೆಯುವಾಗ ಇಂಥ ಸಾಂಪ್ರದಾಯಿಕತೆಗೆ ಬೆಲೆಯಿಲ್ಲ, ಔಚಿತ್ಯವೂ ಇಲ್ಲ. ಇದು ದಿಟವಾಗಿ ಕಚೇರಿ ಸಂಗೀತ; 'ಕಚೇರಿ'ಯದೇ ಸ್ವಭಾವ; ಸಭಾರಂಜನೆಯೇ ಮೌಲ್ಯ. ನಮ್ಮಲ್ಲಿ ಇದೇ ಇಂದಿಗೂ ಹರಡಿಕೊಂಡಿರುವ ಪ್ರಕಾರ. ಇದು ಒಂದು ಕಲಾ ಸಂವಿಧಾನವೆಂಬ ಎಣಿಕೆ ಅಷ್ಟೆ. ಇಲ್ಲಿನ ಪುರುಷಾರ್ಥಗಳು ಅರ್ಥ ಮತ್ತು ಕಾಮ. ರಸಿಕರಿಗೆ ಉಣಬಡಿಸುವ ಎಡೆಯಾದಾಗ ಅದರಲ್ಲಿ ನವ್ಯತೆ, ಕೌಶಲ, ಚಮತ್ಕಾರ, ಸ್ಪರ್ಧೆ, ಆಡಂಬರ, ಆರ್ಭಟ ಎಲ್ಲವೂ ಸೇರಿಬಂದುವು. ಪ್ರದರ್ಶನದ ಪಾತ್ರ ಹೆಚ್ಚಾಗಿ ಮನೋಧರ್ಮ ಸೊರಗಿತು. ನವ್ಯತೆಯನ್ನು ಸಾಧಿಸಲು ಹಲವಾರು ವಾಗ್ಗೇಯಕಾರರ ರಚನೆಗಳು ಹೊರಬಂದುವು. ಇದೊಂದು ಮೆಚ್ಚತಕ್ಕ ವಿಷಯವೆನ್ನಿ. ಆದರೆ ರಚನೆಗಳ ಪ್ರಸಿದ್ಧಿ ಅವುಗಳಲ್ಲಿ ಕಾಣುವ ಮೌಲ್ಯಗಳಲ್ಲಲ್ಲದೆ ಸಂಗೀತಾನುಕೂಲ್ಯದಲ್ಲೇ ಇದ್ದುದು ಈ ಪರಿಸರಕ್ಕೆ ಸಹಜವೇ.

ಈ ಸಂದರ್ಭದಲ್ಲಿ ಸಂಗೀತರಸಿಕರೆಂಬ ಹೊಸವರ್ಗವೊಂದು ಹುಟ್ಟಿಕೊಂಡಿತು. ಇವರ ಸಂತೃಪ್ತಿಯೇ ಸಂಗೀತದ ಮುಖ್ಯೋದ್ದೇಶವೆನಿಸಿತು. ಇವರಲ್ಲಿ ಪ್ರಭಾವಶಾಲಿಗಳಾದವರನ್ನು ಆಶ್ರಯಿಸುವುದು, ಸಂಗೀತಗಾರರಿಗೆ ಅನಿವಾರ್ಯವಾಯಿತು. ಅವರು ಬಯಸಿದ್ದು, ಇವರು ನೀಡಿದ್ದು ಎಂಬ ವ್ಯಾಪಾರ ಮನೋವೃತ್ತಿ ಬೆಳೆಯಿತು. ನಮ್ಮ ಕರ್ನಾಟಕ ಸಂಗೀತ ತಮಿಳುನಾಡಿನಲ್ಲಿ ಹೆಮ್ಮರನಾಗಿ ಬೆಳೆದಾಗ ಈ 'ಕಚೇರಿ' ಪದ್ಧತಿಯೇ ಊರ್ಜಿವಾದದ್ದು. ಹಿಂದಿನ ಅರಸರು ಹೋಗಿ ಇಂದಿನ ರಸಿಕರು ತೋರಿಕೊಂಡು ಸಂಪ್ರದಾಯ ಸಂಗೀತದ ಸತ್ವವನ್ನು ಗಾಳಿಗೆ ತೂರಿದರು. ವೇದಿಕೆಯ ಮೇಲೆ ದೇವರ ಪಟವೊಂದನ್ನಿರಿಸಿ ಅದಕ್ಕೆ ಹೂಮಾಲೆ ಹಾಕಿದರೆ ಆಯಿತು; ಸಾಂಪ್ರದಾಯಿಕತೆಯ ಋಣ ತೀರಿತು! ವಿದ್ವಾಂಸರಿಗಾಗಲಿ ನೆರೆದವರಿಗಾಗಲಿ ಭಕ್ತಿಯೂ ಬೇಕಾದುದಿಲ್ಲ, ಭಾವುಕತೆಯೂ ಬೇಕಾದುದಿಲ್ಲ. ವಿನಿಕೆಯಾಗುವ ಸಾಹಿತ್ಯದ ಅರ್ಥವನ್ನು ಅರಿತುಕೊಳ್ಳಬೇಕೆಂಬ ಕಾತರವಾಗಲಿ ಯಾರಿಗೂ ಇಲ್ಲ. ಆ ಹೊತ್ತಿಗೆ ಮೈಮರೆತರೆ ಸಾಕು. ಇಂಥ ಸಂಗೀತದಿಂದ ಸಂಸ್ಕಾರವು ಸಂಪನ್ನವಾಗುವುದಾದರೂ ಹೇಗೆ? ಇನ್ನು ಸಂಗೀತಗಾರರ ಸಾಧನೆಯ ವಿಚಾರವಾಗಿಯಾಗಲಿ ರಸಿಕರ ಪೂರ್ವಸಿದ್ಧತೆಯ ವಿಚಾರವಾಗಿಯಾಗಲಿ ಹೇಳುವುದೇನಿದೆ? ಸಂಗೀತದಿಂದ ಒಳ್ಳೆಯ ಬದುಕು ಸಾಧ್ಯವೇ ಇಲ್ಲವೆಂಬ ಆತಂಕದಿಂದ ಬೇರೆ ಬೇರೆ ಉದ್ಯೋಗಗಳನ್ನು ಹಿಡಿದು, ಬಿಡುವಿನ ವೇಳೆಯಲ್ಲಿ ಮಾತ್ರ ಸಂಗೀತದ ಕಡೆ ಕಣ್ಣು ಹಾಯಿಸುವ ವಿದ್ವಾಂಸರಿಗೆ ಸಾಧನೆಯೆಂಥದು? ಸಾಧನೆಯ ಹಿನ್ನೆಲೆಯಲ್ಲಿರಬೇಕಾದುದು ಶ್ರದ್ಧೆ. ನಾದೋಪಾಸನೆಯಿಂದಲೇ ಅಭ್ಯುದಯ-ನಿಃಶ್ರೇಯಸಗಳು ಕೈಗೂಡುತ್ತವೆ ಎಂಬುದು ಶ್ರದ್ಧೆ. ಅದಿಲ್ಲದೆ ಸಾಧನೆಯಲ್ಲಿ ಒಲವು ಹೇಗೆ ಬಂದೀತು? ಪ್ರವೃತ್ತಿ-ನಿವೃತ್ತಿಗಳ ಸೆಣಸಾಟದಲ್ಲಿ ಸೊರಗುವುದು ಸಂಗೀತವೇ ! ಹವ್ಯಾಸಿಗಳ ಕೈಗೆ ಸಿಕ್ಕಾಗ ಸಾಧನೆಯಲ್ಲಿ ಶೈಥಿಲ್ಯವಲ್ಲದೆ ಮತ್ತೇನು?

ಯಾವುದೇ ಕಲೆಯಾಗಲಿ, ಪ್ರತಿಭೆಯಿರಬೇಕು, ವ್ಯುತ್ಪತ್ತಿಯಿರಬೇಕು, ಅಭ್ಯಾಸವಿರಬೇಕು. ಪ್ರತಿಭೆಯೇನೋ ನಿಸರ್ಗಸಿದ್ಧವಾದುದು; ಅದರಿಂದಲೇ ಪ್ರವೃತ್ತಿಯೊದಗುವುದು. ವ್ಯುತ್ಪತ್ತಿಯೆಂದರೆ ಲೋಕಾನುಭವ, ಶಾಸ್ತ್ರವ್ಯಾಸಂಗ, ಮನನಗಳಿಂದ ಒದಗಿಬರುವುದು. ಅಭ್ಯಾಸವೆಂದರೆ ಸಾಧನೆಯೇ. ಪ್ರತಿಭೆ-ಪ್ರವೃತ್ತಿಗಳೆರಡೂ ಸಾರ್ಥಕವಾಗುವುದು ಅಭ್ಯಾಸದಿಂದಲೇ. ಹೇಳಿಕೊಟ್ಟದ್ದನ್ನು ಮತ್ತೆ ಮತ್ತೆ ಹಾಡಿಯೋ ನುಡಿಸಿಯೋ ಗಟ್ಟಿಮಾಡಿಕೊಳ್ಳುವುದಷ್ಟೇ ಸಾಧನೆಯೆನಿಸಿಕೊಳ್ಳುವುದಿಲ್ಲ.

ವೇದಾಧ್ಯಯನದಲ್ಲಿ ಕೂಡ ಬರಿಯ ಕಂಠಪಾಠಕ್ಕೆ ಪ್ರಾಶಸ್ತ್ಯವಿಲ್ಲ; 'ಸಕಲ್ಪಂ ಸರಹಸ್ಯಂ' ಎಂಬ ವಿಧಿಯೇ ಇದೆ. ಮಂತ್ರಗಳ ಅರ್ಥವನ್ನೂ, ಅನ್ವಯವನ್ನೂ, ವಿನಿಯೋಗವನ್ನೂ, ತಾತ್ಪರ್ಯವನ್ನೂ ತಿಳಿದುಕೊಳ್ಳದಿದ್ದರೆ ವೇದಾಧ್ಯಯನ ಸಂಪೂರ್ಣವಾಗುವುದಿಲ್ಲ. ಹಾಗೆಯೇ ಸಂಗೀತದಲ್ಲಿಯೂ ಲಕ್ಷ್ಯ-ಲಕ್ಷಣಜ್ಞಾನ ಪ್ರೌಢವಾಗಿರಬೇಕು; ಕೃತಿಗಳ ಅರ್ಥಾನುಸಂಧಾನ ಮಾಡಬೇಕು; ರಾಗಸ್ವರೂಪದ ಸಾಕ್ಷಾದಪರೋಕ್ಷವಾಗಬೇಕು; ಅಧ್ಯಾತ್ಮದ ತಾತ್ಪರ್ಯ ಮನದಟ್ಟಾಗಬೇಕು. ಇವೆಲ್ಲ ಸಾಧನೆಯಲ್ಲಿ ಸೇರಿಬರಬೇಕಾದ ವಿವರಗಳೇ.

ಸಂಪ್ರದಾಯ ಸಂಗೀತದಲ್ಲಿ ಮುಖ್ಯವಾದುದೆಂದರೆ ಅದರ ಬಗ್ಗೆ ಇರುವ, ಇರಬೇಕಾದ, ದೃಷ್ಟಿ. ಸಂಗೀತವೆಂಬುದು ಬರಿಯ ಕಲಾಪ್ರಕಾರವಲ್ಲ, ಆಧ್ಯಾತ್ಮಿಕ ಸಾಧನೆ. ಅದರಿಂದ ನಮ್ಮ ಸಂಸ್ಕಾರ ಊರ್ಜಿತವಾಗಿ, ಅಂತಃಕರಣಶುದ್ಧಿಯೊದಗಿ, ಧರ್ಮಸಾಧನೆಯೂ ಆಗುತ್ತದೆ. ಪರಮಪುರುಷಾರ್ಥದೆಡೆಗೂ ನಡೆಯುವಂತಾಗುತ್ತದೆ. ಈ ದೃಷ್ಟಿ ಪುರಂದರದಾಸರಿಗೂ ಇದ್ದಿತು, ತ್ಯಾಗರಾಜಸ್ವಾಮಿಗಳಿಗೂ ಇದ್ದಿತು. ಇದೇ ಹರಿದಾಸರು ತೋರಿಸಿದ ದಾನಿ, ಅವರು ಕಾಣಿಸಿದ ದೃಷ್ಟಿ ಈ ದೃಷ್ಟಿಗೆ ದಾರ್ಢ್ಯ ತಪ್ಪಿದಾಗ ಹರಿದಾಸರೂ ಹಾಳಾದರು. ತ್ಯಾಗರಾಜರ ಪರಂಪರೆಯೂ ಕೆಟ್ಟಿತು. ಈ ಶ್ರದ್ಧೆಯನ್ನು ಉಳಿಸಿಕೊಂಡವರು, ಬೆಳೆಸಿಕೊಂಡವರು ಎಲ್ಲ ಕಾಲದಲ್ಲಿಯೂ ಇರುತ್ತಾರೆ; ಈಗಲೂ ಅಂಥವರು ಇಲ್ಲದೆ ಇಲ್ಲ. ಆದರೆ ಅವರು ಜನರ ಕಣ್ಣನ್ನು ಕುಕ್ಕುವಂತೆ ಕಾಣಿಸಿಕೊಳ್ಳುವುದಿಲ್ಲ. ತಮ್ಮ ಪಾಡಿಗೆ ತಾವು ಸಾಧನೆಯಲ್ಲಿ ತೊಡಗಿದ್ದು ಕೃತಾರ್ಥರಾಗುತ್ತಾರೆ; ಸಂಗೀತದಿಂದ ಕ್ಷುಲ್ಲಕವಾದ ಲಾಭ ಪಡೆಯಲು ಅವರು ಹಾತೊರೆಯುವುದಿಲ್ಲ. ಇವರಿಂದ ಅದೃಷ್ಟವಾದರೂ ದಿಟವಾದ ಪ್ರಯೋಜನ ಸಂಗೀತ ಪ್ರಪಂಚಕ್ಕಿದ್ದೇ ಇದೆ. ಇವರನ್ನು ಗಮನಿಸಿಯೇ ತ್ಯಾಗರಾಜರು 'ಎಂದರೋ ಮಹಾನುಭಾವುಲು, ಅಂದರಿಕಿ ವಂದನಮು' ಎಂದು ಹೇಳಿದ್ದು. ನಾವು ಹೇಳಬೇಕಾದುದೂ ಅದನ್ನೇ ತಾನೆ? ❐

ಅಧ್ಯಾಯ ಏಳು

ಸಂಪ್ರದಾಯ ಸಂಗೀತದಲ್ಲಿ ಸಾಹಿತ್ಯ

೧

ನಮ್ಮ ಸಂಗೀತತಜ್ಞರೂ ಸಂಗೀತರಸಿಕರೂ ಸಂಗೀತದಲ್ಲಿ ಸಾಹಿತ್ಯದ ಪಾತ್ರವೆಷ್ಟು, ಎಂಥದು ಎಂಬುದನ್ನು ಕುರಿತು ವಿಚಾರ ಮಾಡಬೇಕೆಂದು ನನಗನಿಸುತ್ತದೆ. ಇದಕ್ಕೆ ಭೂಮಿಕೆಯೊಂದನ್ನು ಒದಗಿಸುವುದು ನನ್ನ ಸದ್ಯದ ಉದ್ದೇಶ. ಸಂಗೀತಕ್ಕೂ ಸಾಹಿತ್ಯಕ್ಕೂ ಇರುವ (ಅಥವಾ ಇರಬೇಕಾದ) ನಂಟು ಏನೆಂಬುದನ್ನು ನನಗೆ ತಿಳಿದ ಮಟ್ಟಿಗೆ ತಿಳಿಯಹೇಳಲು ಯತ್ನಿಸುತ್ತೇನೆ.

ಸಂಗೀತವನ್ನು ಭಾವದ ಭಾಷೆಯೆಂದು ಬಣ್ಣಿಸುವುದನ್ನು ನೀವು ಕೇಳಿದ್ದೀರಿ. ಬದುಕಿನಲ್ಲಿ ಭಾಷೆಯ ಅಗತ್ಯವನ್ನು ಯಾರರಿಯರು? ಮನಸ್ಸಿನಲ್ಲಿರುವ ಭಾವಗಳನ್ನೋ ಅಭಿಪ್ರಾಯಗಳನ್ನೋ ಹೊರಹೊಮ್ಮಿಸುವುದು ಭಾಷೆಯ ಕೆಲಸ. ನಮ್ಮ ಮಟ್ಟಿಗೆ ಹೊರಹೊಮ್ಮಿಸಿದರೆ ಮುಗಿಯಿತು. ಎಂದರೆ ಅದು ಅಭಿವ್ಯಕ್ತಿ; ನಮ್ಮ ಭಾವಗಳು, ಅಭಿಪ್ರಾಯಗಳು ಬೇರೆಯವರಿಗೂ ಮುಟ್ಟಬೇಕು ಎಂದರೆ ಅದು ವಿನಿಮಯ. ಎರಡರಲ್ಲೂ ಬಳಸುವ ಭಾಷೆಗೆ ಧ್ವನಿಯೂ ಇದೆ, ಅರ್ಥವೂ ಇದೆ. ಎರಡೂ ಅಂಶಗಳನ್ನು ಒಳಗೊಳ್ಳದೆ ಅದು ಭಾಷೆಯಾಗುವುದಿಲ್ಲ. ಧ್ವನಿಯಲ್ಲಿ ಔಚಿತ್ಯವೂ ಅರ್ಥದಲ್ಲಿ ರಮಣೀಯತೆಯೂ ಸೇರಿಕೊಂಡರೆ ಅದನ್ನು ಸಾಹಿತ್ಯ ಎನ್ನುತ್ತೇವೆ. ರಸಾತ್ಮಕವಾದ ಶಬ್ದಾರ್ಥಗಳ ಸಮ್ಮಿಳನ, ಸಹಿತತೆ ಸಾಹಿತ್ಯವೆನಿಸಿಕೊಳ್ಳುತ್ತದೆ.

ಅಭಿಪ್ರಾಯಗಳು ಗೌಣವಾಗಿದ್ದು ಭಾವ ಪ್ರಧಾನವಾಗಿದ್ದರೆ ಅದು ಕಾವ್ಯಕ್ಕೆ, ಸಂಗೀತಕ್ಕೆ, ನೃತ್ಯಕ್ಕೆ ತಕ್ಕ ಸಾಹಿತ್ಯವಾಗುತ್ತದೆ. ನಮ್ಮ ಆದಿಕವಿಯ ಶೋಕ ಶ್ಲೋಕವಾಗಿ ಮಾರ್ಪಟ್ಟಾಗ ರಾಮಾಯಣ ಸಿದ್ಧವಾಯಿತಲ್ಲವೇ? ರಾಮಾಯಣ ಆದಿಕಾವ್ಯ ಮಾತ್ರವಲ್ಲ; ಲವ-ಕುಶರ ಗಾನಕ್ಕೆ ಸಾಮಗ್ರಿ ಯಾದದ್ದೂ ಅದೇ. 'ಪಾಠ್ಯೇ ಗೇಯೇ ಚ ಮಧುರಂ' ಎಂದು ಅವರ ಹಿರಿಮೆ. ರಾಮಾಯಣಕ್ಕೆ ಮೂಲವಾದ ಶ್ಲೋಕ (ಶೋಕ ರೂಪವಾದುದು) ತಾನೇ ತಾನಾಗಿ ಕವಿಯ ಬಾಯಿಂದ ಹೊರ ಬಂದಾಗ ಹಾಡಲು ಅನುಕೂಲವಾಗಿದ್ದಿತು. ಭೋಜ ತನ್ನ ಚಂಪೂ ರಾಮಾಯಣದಲ್ಲಿ "ವಾಲ್ಮೀಕೇರ್ವದನಾರವಿಂದಾಚ್ಛಂದೋಮಯೀ ಕಾಚಿದೇವಂ ನಿಃಸಸಾರ ಸರಸ್ವತೀ" ಎನ್ನುತ್ತಾನೆ. ಛಂದಸ್ಸೆಂದರೆ ಲಯ; ಕವಿತಾವೇಶಕ್ಕೆ ನಿಸರ್ಗಸಿದ್ಧವಾದ ರೂಪವೆಂದರೆ ಲಯವೆ. ಹೃದಯವನ್ನು

ಸೆಳೆದುಕೊಳ್ಳುವ ಶಕ್ತಿ ಇರುವುದು ಲಯಕ್ಕೇ. ಕಾವ್ಯದಲ್ಲಿಯಾಗಲಿ, ಸಂಗೀತದಲ್ಲಿಯಾಗಲಿ, ನೃತ್ಯದಲ್ಲಿಯಾಗಲಿ ಲಯವೇ ಉಗಮ, ಲಯವೇ ಪ್ರಧಾನ. ಮಾತುಗಳಲ್ಲಿ ಲಯ ಒದಗಿಬಂದರೆ ಅದು ಛಂದಸ್ಸಾಯಿತು. ಲಯದೊಂದಿಗೆ ರಮಣೀಯವಾದ ಅರ್ಥವೂ ಶಬ್ದವೂ ಕೂಡಿಕೊಂಡರೆ ಕಾವ್ಯವಾಯಿತು.

ಲಯದ ಪಾತ್ರವಿರದ ಸಾಹಿತ್ಯಭಾಗ ಪಾಠ್ಯ ಅಥವಾ ಗದ್ಯವೆನಿಸಿಕೊಳ್ಳುತ್ತದೆ. ಇದು ಅಭಿಪ್ರಾಯವಿನಿಮಯಕ್ಕೆ ತಕ್ಕದು; ಇದರಲ್ಲಿ ಹೆಚ್ಚಾಗಿ ಕೆಲಸ ಮಾಡುವುದು ಬುದ್ಧಿ. ಮಾತು ಇಲ್ಲಿ ತರ್ಕಬದ್ಧವಾಗಿರಬೇಕು, ಭಾಷೆಯ ಸ್ವಭಾವಕ್ಕೆ ಅನುಗುಣವಾಗಿಯೇ ಇರಬೇಕು; ಬಳಸುವ ಪದಗಳಲ್ಲಿ ಕ್ರಮ ಇರಬೇಕು. ಆಲೋಚನೆಯಿಂದಲೇ ಮೂಡಿಬಂದು ಆಲೋಚನೆಯನ್ನು ಪ್ರಚೋದಿಸುವಂತೆ ಇರಬೇಕು; ಇಲ್ಲವೇ ಕೆಲಸದಲ್ಲಿ ತೊಡಗಲು ನೆರವಾಗಬೇಕು. ಈ ತೆರನಾದ ಸಾಹಿತ್ಯವನ್ನು ಕಾವ್ಯದಲ್ಲಾಗಲಿ, ಸಂಗೀತದಲ್ಲಾಗಲಿ, ನೃತ್ಯದಲ್ಲಾಗಲಿ ಕಾಣಲಾರೆವು. ಅಲ್ಲಿ ಮಾತಿನ ಮೋಡಿ ಭಾವವನ್ನವಲಂಬಿಸುತ್ತದೆ; ಒದಗಿದ ಆವೇಶಕ್ಕೆ ಅನುಗುಣವಾಗಿ ಮಾತು. ಭಾವುಕತೆ, ರಮಣೀಯತೆ, ಉಕ್ತಿ ವೈಚಿತ್ರ್ಯ, ಚಮತ್ಕಾರ ಇವೆಲ್ಲ ಗೇಯಕ್ಕೆ ಒಗ್ಗುವಂಥವು. ಇಲ್ಲಿ ಕೆಲಸ ಮಾಡುವುದು ಬುದ್ಧಿಗಿಂತ ಹೆಚ್ಚಾಗಿ ಹೃದಯ. ಇಲ್ಲಿನ ಅಗತ್ಯ ತರ್ಕವಲ್ಲ, ರಸ; ವಿಚಾರವಲ್ಲ, ಅಲಂಕಾರ. ಪಾಠ್ಯವಾದರೆ ಹೊರಗಣ ಪ್ರೇರಣೆ, ಪ್ರಯತ್ನಗಳು ಬೇಕು; ಗೇಯವಾದರೆ ಪ್ರೇರಣೆ ಒಳಗಿನದು; ತಾನೇ ತಾನಾಗಿ ರೂಪು ತಳೆಯುತ್ತದೆ, ಪ್ರಯತ್ನ ಬೇಕಾದುದಿಲ್ಲ. ವಾಲ್ಮೀಕಿಯ ಬಾಯಿಂದ ಹೊರಬಂದ ಶ್ಲೋಕ ಒಳಗಿನ ಶೋಕದಿಂದ ಎದ್ದುದು; ಅದರಲ್ಲಿ ವಾಲ್ಮೀಕಿಯ ಸಂಕಲ್ಪವೂ ಇರಲಿಲ್ಲ, ಪ್ರಯತ್ನವೂ ಇರಲಿಲ್ಲ. ತಾನೇ ತಾನಾಗಿ ಹೊರಬಂದುದು 'ತಂತ್ರೀಲಯ ಸಮನ್ವಿತ'ವಾಯಿತು. ಛಂದೋಬದ್ಧವಾಯಿತು. ಪುರಂದರದಾಸರ ಪದಗಳು, ತ್ಯಾಗರಾಜರ ಕೀರ್ತನೆಗಳು ಇದೇ ಗೋತ್ರಕ್ಕೆ ಸೇರಿದವು.

ಕಾವ್ಯದಲ್ಲಿ ಗೇಯಕಾವ್ಯ, ತತ್ತ್ವಕಾವ್ಯ ಎಂದು ಬೇರ್ಪಡಿಸುವುದಿದೆ. ಗೇಯಕಾವ್ಯ ಹೆಸರಿಗೆ ತಕ್ಕಂತೆ ಸಂಗೀತ ಪ್ರಧಾನವಾದುದು; ಅದರ ಪ್ರಯೋಜನ ರಸಾನುಭೂತಿ, ಹೃದಯ ವಿಕಾಸ. ಇದರಲ್ಲಿ ಬಳಸುವ ಮಾತು ಗೌಣ, ಸೂಚಿಸುವ ಭಾವ ಮುಖ್ಯ. ತತ್ತ್ವಕಾವ್ಯವಾದರೋ ಸಾಹಿತ್ಯ ಪ್ರಧಾನವಾದುದು; ಅದರಲ್ಲಿ ಬುದ್ಧಿವಿಕಾಸ, ಉಪದೇಶ, ವ್ಯವಹಾರ ಜ್ಞಾನ ಮುಖ್ಯವಾಗುತ್ತದೆ. ಮಮ್ಮಟನ 'ಕಾವ್ಯಪ್ರಕಾಶ'ದಲ್ಲಿ ಕಾವ್ಯದ ಪ್ರಯೋಜನಗಳನ್ನು ಪಟ್ಟಿ ಮಾಡುವ ಸಂದರ್ಭ ಬಂದಿದೆ. "ಕಾವ್ಯಂ ಯಶಸೇರ್ಥಕೃತೇ ವ್ಯವಹಾರವಿದೇ ಶಿವೇತರಕ್ಷತಯೇ ಸದ್ಯಃಪರನಿರ್ವೃತಯೇ ಕಾಂತಾ ಸಮ್ಮಿತತಯೋಪದೇಶಯುಜೇ" ಎಂದು ಮಮ್ಮಟನ ಒಕ್ಕಣೆ. ಯಶಸ್ಸು, ಹಣ, ವ್ಯವಹಾರಜ್ಞಾನ, ಅಮಂಗಳವನ್ನು ಹೋಗಲಾಡಿಸಿಕೊಳ್ಳುವುದು ಇವೆಲ್ಲ ತತ್ತ್ವಕಾವ್ಯದ ಪ್ರಯೋಜನಗಳು; ಒಡನೆಯೇ ಸಂತೋಷವನ್ನೋ ನೆಮ್ಮದಿಯನ್ನೋ (ನಿರ್ವೃತಿ ಎಂಬ ಮಾತಿಗೆ ಎರಡೂ ಅರ್ಥಗಳಿವೆ) ಒದಗಿಸುವುದು ಗೇಯಕಾವ್ಯದ ಕೆಲಸ. ಮಮ್ಮಟನೇ ಮುಂದರಿದು ಕಾವ್ಯಕ್ಕಿರುವ ದಿಟವಾದ ಪ್ರಯೋಜನವೆಂದರೆ ರಸಾನುಭೂತಿಯೇ ಎನ್ನುತ್ತಾನೆ. "ಸಕಲ ಪ್ರಯೋಜನ ಮೌಳಿಭೂತಂ ಸಮನಂತರಮೇವ ರಸಾಸ್ವಾದನಸಮುದ್ಭೂತಂ ವಿಗಳಿತವೇದ್ಯಾಂತರಂ ಆನಂದಮೇವ". ಇದು ಗೇಯ ಕಾವ್ಯದಲ್ಲೇ ಕೈಗೂಡುವುದು.

ಗೇಯಕಾವ್ಯದಲ್ಲೂ ಸಾಹಿತ್ಯದ ಭಾಗ ಇರಲೇಬೇಕಲ್ಲ? ಮಾತುಗಳ ಬಳಕೆಯೂ ಅಗತ್ಯವೇ, ಮಾತುಗಳು ರಮಣೀಯಾರ್ಥಪ್ರತಿಪಾದಕವಾಗಿರುವುದೂ ಅಗತ್ಯವೇ, ಲಯದ ಬಿಕ್ಕಟ್ಟು ಅಗತ್ಯವೇ. ಇವಿಲ್ಲದಿದ್ದರೆ ಕಾವ್ಯವೇ ಆಗಲಾರದಲ್ಲ? ಮಾತುಗಳಿಗೆ ಕಳೆಕೂಡಿಸಲು ಅಲಂಕಾರದ ನೆರವು ಇದ್ದದ್ದೇ. ಆದರೆ ಮಾತೂ ಅಲಂಕಾರವೂ ಗೇಯಗುಣಕ್ಕೆ ಹೊಂದಿಕೊಳ್ಳಬೇಕು. ನಮ್ಮ ಅಲಂಕಾರಿಕರು ಅಲಂಕಾರ ಮತ್ತು ಲಕ್ಷಣ ಇವೆರಡಕ್ಕೆ ವ್ಯತ್ಯಾಸವನ್ನು ಕಾಣಿಸುವುದುಂಟು. ಅಂಲಕಾರವನ್ನು 'ಪೃಥಕ್ ಸಿದ್ಧ'ವೆಂದೂ ಲಕ್ಷಣವನ್ನು 'ಅಪೃಥಕ್ ಸಿದ್ಧ'ವೆಂದೂ ಬಣ್ಣಿಸುತ್ತಾರೆ. ಕೊರಳಿಗೆ ಹಾರ ತೊಡಿಸಿದರೆ ಅದು ಅಲಂಕಾರ. ಕೊರಳಿನಿಂದ ಹಾರವು ಬೇರ್ಪಟ್ಟದ್ದು; ಹಾರವಿಲ್ಲದೆ ಕೊರಳಿರುವುದು ಸಾಧ್ಯ. ಕೊರಳಿಲ್ಲದೆ ಹಾರವಿರುವುದೂ ಸಾಧ್ಯ. ಆದರೆ ಸಾಮುದ್ರಿಕ (ಬೆರಳಚ್ಚಿನ) ಲಕ್ಷಣಗಳಾದ ಶಂಖ-ಚಕ್ರಗಳು (ನಮ್ಮ ಬೆರಳ ತುದಿಯಲ್ಲಿ ಕಾಣಿಸಿಕೊಳ್ಳುವಂಥವು) ಶರೀರದಲ್ಲೇ ಇರುವುವು; ಅವನ್ನು ಬೇರ್ಪಡಿಸುವುದು ಸಾಧ್ಯವಿಲ್ಲ.

ತ್ಯಾಗರಾಜರ ಕೀರ್ತನೆಗಳಲ್ಲಿ ಗೇಯಗುಣ ಮತ್ತು ಉಕ್ತಿ ವೈಚಿತ್ರ್ಯ ಅಲಂಕಾರಗಳಲ್ಲ; ಲಕ್ಷಣಗಳು. ಅಲ್ಲಿ ಸಂಗೀತವನ್ನು ಬಿಟ್ಟರೆ ಸಾಹಿತ್ಯಕ್ಕೆ ಬೆಲೆಯೇನಿರದು; ಸಾಹಿತ್ಯವನ್ನು ಬಿಟ್ಟರೆ ಸಂಗೀತಕ್ಕೂ ಬೆಲೆಯೇನಿರದು. ಮಾತಿನ ಸೊಗಸು ಗೇಯಗುಣಕ್ಕೆ ಎಡೆಬಿಡದೆ ಮತ್ತು ಚೆನ್ನಾಗಿ ಹೊಂದಿಕೊಳ್ಳುವುದರಿಂದಲೇ ತ್ಯಾಗರಾಜರ ಕೀರ್ತನೆಗಳು ಅಷ್ಟು ಜನಪ್ರಿಯವಾಗಿರುವುದು. ಯಾವುದೋ ಒಂದು ಮನೋವೃತ್ತಿಯಲ್ಲಿ ಸಾಹಿತ್ಯವನ್ನು ಸಿದ್ಧಪಡಿಸಿ ಬೇರೊಂದು ಮನೋವೃತ್ತಿಯಲ್ಲಿ ಅದಕ್ಕೆ ಯತ್ನದಿಂದ ಸಂಗೀತವನ್ನು ಜೋಡಿಸುವ ವಾಗ್ಗೇಯಗಾರಿಕೆ ತ್ಯಾಗರಾಜರದ್ದಲ್ಲ, ಪುರಂದರದಾಸರದ್ದಲ್ಲ. ಮಾತು ಹೊರಬರುವಾಗಲೇ ಗೇಯಗುಣವನ್ನು ತಳೆದೇ ಇರುವುದು ಈ ಮಹನೀಯರ ಕೃತಿಗಳ ಹೆಗ್ಗಳಿಕೆ. ಗೇಯಗುಣವನ್ನು ಕೈಬಿಟ್ಟರೆ ಅವರ ಸಾಹಿತ್ಯದಲ್ಲಿ ಸೊಗಸು ತೀರಾ ಸಾಮಾನ್ಯವಾದುದು. ಆದ್ದರಿಂದಲೇ ತೆಲುಗು ಸಾಹಿತ್ಯದಲ್ಲಿ ತ್ಯಾಗರಾಜರಿಗೆ ಯಾವ ಸ್ಥಾನವೂ ಇರದು. ಪುರಂದರದಾಸರಿಗೇನೊ ಕನ್ನಡ ಸಾಹಿತ್ಯದಲ್ಲಿ ಒಂದು ಸ್ಥಾನವಿದೆ; ಆದರೂ ಕವಿಯೆಂದೇನು ಅಲ್ಲ.

ಭಾವದ ಬಲವಿಲ್ಲದೆ, ಆವೇಶದ ಪಾರತಂತ್ರವಿಲ್ಲದೆ ಸಂಗೀತ ಮತ್ತು ಸಾಹಿತ್ಯಗಳು ಪರಸ್ಪರ ಲಕ್ಷಣಗಳಾಗಲಾರವು. ಎರಡೂ ಒಂದೇ ನೆಲೆಯಿಂದ ಒಟ್ಟಿಗೇ ಮೇಲೆದ್ದು ಬರುವುದೇ 'ವಾಗ್ಗೇಯ'ದ ಸ್ವಾರಸ್ಯ. ಸಹೃದಯಹೃದಯಾವರ್ಜಕವಾದ ರಸದ ಅಭಿವ್ಯಕ್ತಿ (ಮಮ್ಮಟ ಹೇಳುವ 'ಸದ್ಯಃಪರನಿರ್ವತಿ') ಆಗುವುದು ಅಲ್ಲಿಯೆ. ವಾಕ್ ಎಂದರೆ ಬಳಸುವ ಮಾತು ('ವ್ಯಕ್ತಾಯಾಂ ವಾಚಿ' ಎಂದೇ ಈ ಮಾತಿನ ನಿರ್ವಚನ). ಮಾತಿನಲ್ಲಿ ಶಬ್ದ ಮತ್ತು ಅರ್ಥ ಎರಡೂ ಕೂಡಿಕೊಳ್ಳುತ್ತವೆ. ಅದರಲ್ಲಿ ಧ್ವನಿಯ ಅಂಶವೂ ಇದೆ. ಇನ್ನು ಗೇಯವೆಂದರೆ ಸ್ವರಗಳನ್ನವಲಂಬಿಸಿದ್ದು; ಅಲ್ಲಿ ಧ್ವನಿಯಿದ್ದರೂ ಅರ್ಥವೆಂಬುದಿಲ್ಲ. ಮಾತಿಗೆ ಹಂದರವಾಗಿ ನಿಲ್ಲುವ ಸ್ವರಗಳೇ ಗೇಯಸಾಮಗ್ರಿ; ಅವನ್ನೇ ಧಾತುವೆನ್ನುವರು. ('ಧೀಯತೇ ಅಸ್ಮಿನ್ ಇತಿ' ಎಂಬ ನಿರ್ವಚನದಿಂದ, ಮಾತನ್ನು ಎಲ್ಲಿ ಇಡುವೆವೋ ಅದು ಧಾತು).

ಮಾತು ವ್ಯಕ್ತವಾದ ಧ್ವನಿ; ಧಾತು ಅವ್ಯಕ್ತವಾದ ಧ್ವನಿ. ವ್ಯಕ್ತವಾದದ್ದರಲ್ಲಿ ಅರ್ಥವನ್ನು ಹೊಂದಿರುವ ಗುಣವಿದೆ (ಅರ್ಥವತ್ತ್ವ); ದೇಶ, ಕಾಲ ಸಂದರ್ಭಗಳಿಗೆ ಅನುಸಾರವಾಗಿ ಅದರಲ್ಲಿ ಮಾರ್ಪಾಟು

ಉಂಟು (ವಿಕಾರವತ್ವ); ಸಂಸ್ಕಾರ, ವ್ಯುತ್ಪತ್ತಿ, ಪ್ರತಿಭೆಗಳಿಗೆ ಅನುಸಾರವಾಗಿ ಅದರಲ್ಲಿ ತರತಮ ಭಾವವಿದೆ. ಅವ್ಯಕ್ತವಾದದ್ದೋ ಕೇವಲ ಭಾವಬೋಧಕವಾದದ್ದು; ಅದಕ್ಕೆ ದೇಶ, ಕಾಲ, ಸಂದರ್ಭಗಳ ಕಟ್ಟುಪಾಡಿಲ್ಲ. ಮಾತು ಬುದ್ಧಿಯನ್ನು ಮುಟ್ಟುವಂತೆ, ಧಾತು ಮಾತನ್ನು ಎತ್ತಿ ನಿಲ್ಲಿಸಿ ಅದಕ್ಕೊಂದು ವಿಶೇಷವಾದ ಕಳೆಯನ್ನು ಮೂಡಿಸಬೇಕು; ಹಾಗೆಯೇ ಮಾತು ಧಾತುವಿಗೆ ಒತ್ತಾಸೆಯಾಗಿ ನಿಂತು ಅದನ್ನು ಮೇಲೆತ್ತಬೇಕು. ಹೀಗೆ ಧಾತು-ಮಾತುಗಳು ಅನ್ಯೋನ್ಯಾಶ್ರಿತವಾಗಿರುವಾಗಲೇ ಭವಭೂತಿ ಹೇಳುವ 'ಚಿತ್ತವಿದ್ರುತಿ' (ಎಂದರೆ ಹೃದಯ ಕರಗುವುದು) ಅಥವಾ ಭೋಜ ಹೇಳುವ 'ಚಿತ್ತವಿಕಾಸ' (ಹೃದಯ ತನ್ನ ಕಟ್ಟುಗಳನ್ನು ಕಳಚಿ ಕಿತ್ತೊಗೆದು ಬಿಡಿಬೀಸಾಗಿ ನಿಂತು ಉಬ್ಬುವುದು) ರಸಿಕನಿಗೆ ಒದಗುವುದು. ಇದನ್ನೇ ಆಲಂಕಾರಿಕರು ಆಹ್ಲಾದವೆನ್ನುತ್ತಾರೆ; ಇದೇ ರಸಾನುಭೂತಿ.

ಹೀಗೆ ಧಾತು-ಮಾತುಗಳು ಹಿತವರಿತು ಕೂಡಿದರೇನೇ ಗೀತ ಎಂದು ಶಾಸ್ತ್ರ ಗ್ರಂಥಗಳಲ್ಲಿ ಹೇಳಿದೆ-

'ಧಾತು ಮಾತು ಸಮಾಯುಕ್ತಂ ಗೀತಮುಚ್ಯತೇ ಬುಧೈಃ।
ತತ್ರ ನಾದಾತ್ಮಕೋ ಧಾತುರ್ಮಾತುರಕ್ಷರ ಸಂಚಯಃ॥'

ಗೀತದೊಂದಿಗೆ ವಾದ್ಯವೂ ನೃತ್ಯವೂ ಕೂಡಿಕೊಂಡರೆ ಸಂಗೀತವೆನಿಸಿಕೊಳ್ಳುತ್ತದೆ. ("ಗೀತಂ ವಾದ್ಯಂ ತಥಾ ನೃತ್ಯಂ ತ್ರಯಂ ಸಂಗೀತಮುಚ್ಯತೇ'). ಈ ಮಾತುಗಳಿಗೆ ಹಾಡುಗಾರಿಕೆ, ತನಿವಾದ್ಯವಿನಿಕೆ, ಭರತನಾಟ್ಯ ಪ್ರದರ್ಶನ ಮೂರೂ ಬೇರೆ ಬೇರೆಯಾಗಿ ಸಂಗೀತವೆಂಬುದರಲ್ಲಿ ಸೇರುತ್ತವೆ ಎಂದರ್ಥವಲ್ಲ. ಮೂರೂ ಒಟ್ಟಿಗೆ ಇರುವುದೇ ಸಂಗೀತ. ಇದು ನಡುಯುಗದ ಸಂಕೀರ್ತನ ಪದ್ಧತಿಯ ಚೌಕಟ್ಟಿನಲ್ಲಿ ಸಿದ್ಧವಾದ ಪದ. ಕನಕದಾಸರ 'ಹ್ಯಾಂಗೆ ನೀ ದಾಸನಾದಿ, ಪ್ರಾಣಿ' ಎನ್ನುವ ಪದದಲ್ಲಿ ಬರುವ ಒಕ್ಕಣೆ ಇದು ನೋಡಿ -

'ಕಾಲುಗೆಜ್ಜೆಯ ಕಟ್ಟಿ ಮೇಲೆ ಕರತಾಳ ಪಿಡಿದು
ಶ್ರೀಲೋಲನ ಗುಣ ಪೊಗಳಿ ನಟಿಸದಲೆ

ಕುಣಿದು ಹರಿಯ ಮುಂದೆ ಮಣಿದು ಸಜ್ಜನಪದಕೆ' ಇತ್ಯಾದಿ.

ಹರಿದಾಸರ ಊಂಛವೃತ್ತಿಯಲ್ಲಿ ಗೀತ, ವಾದ್ಯ, ನೃತ್ಯ ಮೂರೂ ಸೇರುತ್ತಿದ್ದುವು. ಪುರಂದರದಾಸರ ಮಧುಕರ ವೃತ್ತಿಯ ವರ್ಣನೆಯಲ್ಲಿ

'ಕಾಲಿಗೆ ಗೆಜ್ಜೆ ಕಟ್ಟಿ ನೀಲವರ್ಣನ ಗುಣ
ಆಲಾಪಿಸುತ್ತಾ ಬಲು ಓಲಗ ಮಾಡುವಂಥ'

ಎಂಬ ಉಲ್ಲೇಖವಿದೆ. ವಿಜಯದಾಸರ ವೆಂಕಟೇಶ ಸ್ತೋತ್ರದಲ್ಲಿ

'ದಂಡಿಗೆ ಶಂಖ ತಾಳ ತಂಬೂರಿ ಜಾಗಟೆಯ
ಗೊಂಡು ನಿನ್ನಯ ಪರಮ ಪ್ರೀತ್ಯರ್ಥ ದಾಸರು

ತಂಡತಂಡದಿ ಗೆಜ್ಜೆ ಕಟ್ಟಿ ಅಭಿನಯ ತಿರುಹಿ
ಕೊಂಡಾಡೆ ಶಬ್ದ ಪ್ರತಿಶಬ್ದವಾಗುತಿದೆ
ಭೂಮಂಡಲದೊಳಗೆ'

ಎಂದು ಬರುತ್ತದೆ. ಸಂಗೀತವೆಂಬ ಪ್ರಕಾರದ ಈ ಚಿತ್ರಣ ಹರಿದಾಸರ ಉಂಛವೃತ್ತಿಯಲ್ಲಿದೆ. ಹಾಡುವವರೇ ತಂಬೂರಿ ಮೊದಲಾದ ಅಖಿಲ ವಾದ್ಯಗಳನ್ನೊಳಗೊಂಡು, ಹಾಡಿನ ಲಯಕ್ಕೆ ಕಾಲು ಬಡಿಯುತ್ತಾ ಅಭಿನಯವನ್ನೂ ಮಾಡುವುದು ಶ್ರೀರಂಗದಂಥ ದೇವಾಲಯಗಳಲ್ಲಿ ಅರೈಯಾರರು ನಡೆಸುತ್ತಲ್ಲಿದ್ದ ಸಂಗೀತ ಸೇವೆಯಲ್ಲೂ ಕಾಣಿಸುತ್ತದೆ. ತ್ಯಾಗರಾಜರ 'ನೀ ಭಜನಗಾನರಸಿಕುಲ ನೇನೆಂದು ಗಾನರಾ' ಎಂಬ ಕೀರ್ತನೆಯ ತಾತ್ಪರ್ಯವನ್ನೇ ಗಮನಿಸಿ. ಅವರ "ಹರಿದಾಸುಲು ವೆಡಲೆ ಮುಚ್ಚಟಗನಿ, ಯಾನಂದಮಾಯೆ" ಎನ್ನುವ ಕೀರ್ತನೆಯಲ್ಲೂ -

ಸಂಗತಿಗಾನು ಮೃದಂಗ ಘೋಷಮುಲಚೆ
ಪೊಂಗುಚೆ ವೀಧುಲ ಕೆಂಗುಚು ಮೆರೆಯುಚು
ದಿಟ್ಟಮುಗ ನಡುಗಟ್ಟುತೋ ನಡುಗುಲು
ಬೆಟ್ಟುಚು ತಾಳಮು ಬಟ್ಟೆ ಗಲ್‌ಗಲ್ಲನಗ
ಜ್ಞಾನಮುತೋ ರಾಮಧ್ಯಾನಮುತೋ ಮಂಚಿ
ಗಾನಮುತೋಮೆನುದಾನ ಮೊಸಂಗುಚು

ಸಂಗೀತದ ಇದೇ ತಾತ್ಪರ್ಯ ಹೊರಡುತ್ತದೆ.

ಎಂದರೆ, ಸಂಗೀತಕ್ಕೆ ಸರಿಯಾದ ಸಾಹಿತ್ಯ ಹಾಡಿಕೆಗೂ, ವಾದ್ಯವಿನಿಕೆಗೂ, ಅಭಿನಯಕ್ಕೂ ಹೊಂದುವಂತಿರಬೇಕು. ವಾದ್ಯದ ವಿನಿಕೆಯೂ ಗಾಯನವನ್ನೇ ಅನುಸರಿಸಬೇಕು; ಅಭಿನಯವು ಹಾಡಿನ ಅರ್ಥವನ್ನೇ ಹಿಡಿಯುವುದಂತೂ ಸರಿಯೇ ಸರಿ. ಎಲ್ಲಿ ಸಾಹಿತ್ಯದ ಭಾವ ಅಥವಾ ತಾತ್ಪರ್ಯವು ಗೇಯ ಗುಣವನ್ನು ತಳೆದು, ಲಯಬದ್ಧವಾಗಿ, ಅಭಿನಯಪೂರ್ವಕವಾಗಿ ರಸಾನುಭೂತಿಗೆ ಎಡೆಮಾಡಿಕೊಡುವುದೋ ಅದು ಸಂಗೀತ. ಕಾಲಕ್ರಮದಲ್ಲಿ ಬೇರೆ ಬೇರೆ ರಸಾಭಿವ್ಯಕ್ತಿಯ ಸಲುವಾಗಿ ನೃತ್ಯ ಬೇರ್ಪಟ್ಟು ಬೆಳೆಯಿತು; ಶೃಂಗಾರ, ಕರುಣ, ವೀರ ಮುಂತಾದ ರಸಗಳು ನೃತ್ಯಕ್ಕೆ ನೃತ್ಯ ರೂಪಕಗಳಿಗೆ, ನಾಟಕಗಳಿಗೆ ವಸ್ತುವಾದುವು. ಭಕ್ತಿಯೊಂದು ಮಾತ್ರ ಗೀತದ ನೆಲೆಯಲ್ಲಿ ನಿಂತಿತು. ಎರಡಕ್ಕೂ ವಾದ್ಯ ನೆರವಾಯಿತು.

ಉತ್ತರ ದೇಶದಲ್ಲಿ ಸಂಕೀರ್ತನ ಪದ್ಧತಿಯ ಪ್ರವರ್ತಕನೆನಿಸಿದ ಶ್ರೀ ಕೃಷ್ಣಚೈತನ್ಯನ ಪರಿವಾರದಲ್ಲಿ ಸೇರಿದ್ದ ಶ್ರೀರೂಪ ಗೋಸ್ವಾಮಿಯು ತನ್ನ 'ಉಜ್ವಲನೀಲಮಣಿ'ಎಂಬ ಗ್ರಂಥದಲ್ಲಿ ನವರಸ ಗಳಲ್ಲದೆ, ಅವುಗಳಿಗಿಂತ ಬೇರೆಯಾಗಿ ಅವುಗಳೆಲ್ಲಕ್ಕೂ ಒಡೆಯನಂತೆ ಇರುವ ಭಕ್ತಿಯೆಂಬ ರಸವನ್ನು ಹೇಳುತ್ತಾನೆ (ಪೃಥಗೇವ ಭಕ್ತಿರಸರಾಟ್ ಸವಿಸ್ತರೇಣೋಚ್ಯತೇ ಮಧುರಃ'). ಇದನ್ನು ಮಧುರ ರತಿಯೆಂದು ನಿರ್ದೇಶಿಸಿ ಇಲ್ಲಿ ಚಿತ್ತದ್ರವವೇ (ಎಂದರೆ ಹೃದಯವು ಕರಗಿ ನೀರಾಗಿ ಹರಿಯುವುದು) ಸ್ಥಾಯಿಭಾವವೆಂದು ಹೇಳುತ್ತಾನೆ.

ಉತ್ತರಪ್ರದೇಶದ ಸಂಕೀರ್ತನ ಪದ್ಧತಿ, ದಕ್ಷಿಣ ದೇಶದ ಹರಿದಾಸ ಪರಂಪರೆಗಳೆರಡೂ ಭಗವದ್ಭಕ್ತಿಯನ್ನೇ ಅವಲಂಬಿಸಿ ಸಂಗೀತವನ್ನು ಸಿದ್ಧಪಡಿಸಿದುವಾಗಿ, ಸಂಪ್ರದಾಯ ಸಂಗೀತದಲ್ಲಿ ಇಂದಿಗೂ ಸಾಹಿತ್ಯ ಭಾಗದಲ್ಲಿ ಭಕ್ತಿರಸ ಪ್ರಧಾನವಾಗಿ ಉಳಿದಿದೆ. ತ್ಯಾಗರಾಜಾದಿ ತ್ರಿಮೂರ್ತಿಗಳೂ ಈ ನೆಲೆಯನ್ನೇ ಹಿಡಿದಿದ್ದಾರೆ. ತ್ಯಾಗರಾಜ ಸ್ವಾಮಿಗಳ 'ಸಂಗೀತಜ್ಞಾನಮು ಭಕ್ತಿವಿನಾ ಸನ್ಮಾರ್ಗಮು ಗಲದೇ', 'ಸ್ವರರಾಗ ಸುಧಾರಸಯುತ ಭಕ್ತಿ ಸ್ವರ್ಗಾಪವರ್ಗಮುರಾ' ಮೊದಲಾದ ಕೀರ್ತನೆಗಳನ್ನು ನೋಡಿ. ಭಕ್ತಿಯ ನೆಲೆಯಲ್ಲಿ ಸಂಗೀತವಿದ್ದರೆ "ಸದ್ಯಃಫಲಂ ತು ಸಂಗೀತಂ" ಎನ್ನುತ್ತಾರೆ. ಇದೇ ಮಮ್ಮಟನ 'ಸದ್ಯಃಪರನಿರ್ವೃತಿ'. ಭಕ್ತಿಯ ಚೌಕಟ್ಟಿನಲ್ಲಿಯೇ ಶೃಂಗಾರ, ವೀರ, ಅದ್ಭುತ ಮೊದಲಾದ ರಸಗಳನ್ನು ಹೊರಸೂಸುವ ಸಾಹಿತ್ಯಖಂಡಗಳೂ ಸೇರಿಕೊಂಡು ಬಂದಿವೆ. ಕ್ಷೇತ್ರಯ್ಯನ ಪದಗಳೋ, ತಾಳ್ಳಪಾಕದವರ ಶೃಂಗಾರ ಕೀರ್ತನೆಗಳೋ ನಿದರ್ಶನ. ಹರಿದಾಸ ಸಾಹಿತ್ಯದಲ್ಲೂ ಇದು ವಿಪುಲವಾಗಿದೆ.

೨

ಯಾವುದೇ ರಸವಾಗಲಿ ಅದು ಇರುವುದು ಸಾಹಿತ್ಯ ಭಾಗದಲ್ಲೇ; ಮಾತಿನಲ್ಲಿ, ಧಾತುವಿನಲ್ಲಲ್ಲ. ಏಕೆಂದರೆ, ರಸಾನುಭೂತಿಗೆ ಭಾವ ಅಗತ್ಯವಾದ ಪರಿಕರ; ಭಾವ ಮೂಡುವುದು ವ್ಯಕ್ತವಾದದ್ದರಲ್ಲೇ. ಮಾತು ಆಲಂಬನ; ಧಾತು ಅದನ್ನು ಉದ್ದೀಪನಗೊಳಿಸಬಹುದು. ಭಾವದ ಅಭಿವ್ಯಕ್ತಿಗೆ ಸಂಗೀತ ತುಂಬ ನೆರವಾಗುತ್ತದೆ, ದಿಟ; ಆದರೆ ಭಾವ ಮೂಲತಃ ಇರುವುದು ಸಾಹಿತ್ಯ ಭಾಗದಲ್ಲೇ. ಆದ್ದರಿಂದಲೇ ಪುರಂದರದಾಸರು 'ತಿಳಿದು ಪಾಡಲಿಬೇಕು' ಎಂದು ಹೇಳಿದ್ದು.

ಈ ದೃಷ್ಟಿಯಿಂದ ಯಾವೊಂದು ಸ್ವರಸಮುದಾಯವಾದ ರಾಗಕ್ಕೂ ಅದರದ್ದೇ ಆದ ಭಾವವೊಂದಿದೆ ಎನ್ನುವುದು ಸರಿಯಲ್ಲ. 'ರಾಗಭಾವ' ಎಂಬ ಮಾತು ಔಪಚಾರಿಕವಾದುದು ಅಷ್ಟೆ. ಇಲ್ಲಿ ಭಾವವೆಂದರೆ ಸ್ವಭಾವ, ವೈಶಿಷ್ಟ್ಯ, ವ್ಯಕ್ತಿತ್ವ ಎಂದರ್ಥ. ರಸಭಾವ ಎಂದಲ್ಲ. ಯಾವುದೇ ಭಾವವನ್ನು ಯಾವುದೇ ರಾಗ ಉದ್ದೀಪನಗೊಳಿಸಬಹುದು. ಲೋಕ ವ್ಯವಹಾರದಲ್ಲಿ ಮಾತಿನ ಧೋರಣೆಯನ್ನೇ ಹಿಡಿದು ಕೆಲವೊಂದು ಸ್ವರಸಂಚಾರಗಳಲ್ಲಿ ಶೃಂಗಾರ, ವೀರ, ದೈನ್ಯ, ಭಕ್ತಿ ಮುಂತಾದ ಭಾವಗಳನ್ನು ಗುರುತಿಸುವುದೇನೋ ಸಾಧ್ಯವೇ. ಆದರೆ ಹಾಗೆ ಗುರುತಿಸುವಾಗ ಕೆಲಸ ಮಾಡುವುದು ನಮ್ಮ ಸಂಸ್ಕಾರ, ಸ್ಮೃತಿ.

ಈ ಸಂದರ್ಭದಲ್ಲಿ 'ಕಾಕು' ಎಂಬ ಕಲ್ಪನೆಯ ಪ್ರಸ್ತುತತೆಯನ್ನು ಗಮನಿಸಬಹುದು. ಭರತನ ನಾಟ್ಯಶಾಸ್ತ್ರದಲ್ಲಿ ನಟನು ಆಡುವ ಮಾತಿನ ಸ್ವಾರಸ್ಯವನ್ನು ಹೆಚ್ಚಿಸಲು 'ಕಾಕು'ವನ್ನು ಬಳಸಬೇಕೆಂದು ಹೇಳಿದೆ. 'ಕಾಕು' ಎಂದರೆ ಧ್ವನಿಯನ್ನು ಮಾರ್ಪಡಿಸಿಕೊಳ್ಳುವುದು (ಧ್ವನೇರ್ವಿಕಾರಃ). ಶೋಕ, ಭಯ ಮೊದಲಾದವುಗಳನ್ನು ಮಾತಿನ ಉಚ್ಚಾರಣೆಯಲ್ಲೇ ಸ್ಪಷ್ಟಪಡಿಸುವುದು ಅದರ ಉದ್ದೇಶ. ಹಾಗೆಯೇ ಶಾರ್ಙ್ಗದೇವನ ಸಂಗೀತರತ್ನಾಕರದಲ್ಲೂ (ಪ್ರಕೀರ್ಣಕಾಧ್ಯಾಯದಲ್ಲಿ) ರಾಗದ ಅವಯವವಾಗಿ 'ಸ್ಥಾಯ' ಅಥವಾ 'ಕಾಕು'ವಿನ ಉಲ್ಲೇಖವಿದೆ. ರಾಗವೆಂದರೆ ಸ್ವರಸಂನಿವೇಶ ಮತ್ತು ರಂಜಕತ್ವ ಎರಡೂ ಕಲೆತಿರುವುದು. ಕೇಳುವವರಿಗೆ ಹಿತವಾಗಿರುವಂತೆ, ರಂಜಕವಾಗುವಂತೆ ಸ್ವರಗಳನ್ನು ಬಗೆಬಗೆಯಾಗಿ ಏರ್ಪಡಿಸಿಕೊಂಡು ಮಾರ್ಪಡಿಸುವುದು 'ಕಾಕು'.

ಇದರಲ್ಲಿ ಆರು ಬಗೆಗಳನ್ನು ಅಲ್ಲಿ ಹೇಳಿದೆ; ಮೊದಲ ಮೂರು ರಾಗ ನಿರೂಪಣೆಗೆ ಸಂಬಂಧಿಸಿದುವು; ಅನಂತರದ ಮೂರು ಉಚ್ಚಾರಣೆಗೆ. ಮೊದಲ ಮೂರು ನಮಗಿಲ್ಲಿ ಪ್ರಕೃತ. ಸ್ವರಕ್ಕೇ ಮೂಲಭೂತವಾದ ಶ್ರುತಿಯಲ್ಲಿ ಹೆಚ್ಚು ಕಡಮೆ ಮಾಡಿ ಬೇರೆ ಸ್ವರದ ಛಾಯೆಯನ್ನೇ ಒದಗಿಸಿದರೆ ಅದು 'ಸ್ವರಕಾಕು' ('ಶ್ರುತಿನ್ಯೂನಾಧಿಕತ್ವೇನ ಯಾ ಸ್ವರಾಂತರ ಸಂಶ್ರಯಾ'). ರಾಗಕ್ಕೆ ಸಹಜವಾದ ಲಕ್ಷಣವನ್ನು ಎತ್ತಿತೋರಿಸುವ ಸಲುವಾಗಿ ಮಾಡಿಕೊಳ್ಳುವ ಮಾರ್ಪಾಟು 'ರಾಗಕಾಕು' ('ಯಾ ರಾಗಸ್ಯ ನಿಜಚ್ಛಾಯಾ'). ಒಂದು ರಾಗದಲ್ಲಿ ಬೇರೊಂದು ರಾಗದ ಛಾಯೆಯನ್ನು ಒದಗಿಸಿದರೆ ಅದು 'ಅನ್ಯರಾಗಕಾಕು' ('ರಾಗೇ' ರಾಗಂತರಾಶ್ರಯಾ'). ಎಂದರೆ, 'ಕಾಕು'ವಿನಲ್ಲಿ ಭಾವಾಭಿವ್ಯಕ್ತಿಯ ಉದ್ದೇಶವಿರುತ್ತದೆ. ನಾಟ್ಯದಲ್ಲಿ 'ಕಾಕು' ಮಾತಿಗೆ ಸಂಬಂಧಿಸಿದ್ದು; ಸಂಗೀತದಲ್ಲಿ ಧಾತುವಿಗೆ ಸಂಬಂಧಿಸಿದ್ದು. ಆದರೆ ಧಾತುವಿನ ಕಾಕುವಿಗೆ ಮಾತಿನಿಂದಲೇ ಪ್ರೇರಣೆ ಒದಗಬೇಕಷ್ಟೆ?

ವಾಗ್ಗೇಯಕಾರರು ಹಾಡಿಕೊಂಡೇ ನುಡಿಗಟ್ಟನ್ನು ಸಿದ್ಧಪಡಿಸುವಾಗ ಸಾಹಿತ್ಯಕ್ಕೆ ಹೊಂದಿಕೊಂಡಂತೆ 'ರಾಗಭಾವ' ಮೂಡಿಕೊಳ್ಳುತ್ತದೆ. ಅವರ ಮನಸ್ಸಿನಲ್ಲಿರುವ ಭಾವವನ್ನು ಆ ಸಮಯದಲ್ಲಿ ಆ ರಾಗ ಹೊರಹೊಮ್ಮಿಸಲು ನೆರವಾಯಿತು ಎನ್ನಬೇಕು. ಕೆಲವು ರಾಗಗಳಿಗೆ ಹೀಗೆ ನೆರವಾಗಲು ಸಾಮರ್ಥ್ಯವಿರುತ್ತದೆ; ಕೆಲವೊಮ್ಮೆ ನೆರವು ವಿಪುಲವಾಗಿ ದೊರಕುವುದೂ ಉಂಟು.

ರಾಮಾಮಾತ್ಯನು 'ಸ್ವರಮೇಳಕಳಾನಿಧಿ'ಯಲ್ಲಿ ಕೆಲವು (ಇಪ್ಪತ್ತು) ರಾಗಗಳನ್ನು ಉತ್ತಮವಾದುದೆಂದೂ, ಮತ್ತೆ ಕೆಲವು (ಹದಿನೈದು) ರಾಗಗಳನ್ನು ಮಧ್ಯಮವೆಂದೂ, ಇತರ ಕೆಲವು (ಮೂವತ್ತಮೂರು) ರಾಗಗಳನ್ನು ಅಧಮವೆಂದೂ ವಿಭಾಗ ಮಾಡಿದ್ದಾನಷ್ಟೆ. ಈ ವಿಭಾಗದ ನೆಲೆಯೇನು? "ಗೀತ ಪ್ರಬಂಧಕಾಲಾಪಠಾಯಯೋಗ್ಯ"ವಾದುವು ಉತ್ತಮ ಎನ್ನುತ್ತಾನೆ. ಯಾವ ರಾಗವನ್ನು ಹಿಡಿದು ಗೀತ-ಪ್ರಬಂಧ ಆಲಾಪ-ಠಾಯಗಳನ್ನು (ಚತುರ್ದಂಡಿಯನ್ನು) ಚೆನ್ನಾಗಿ ಹಾಡಬಹುದೋ ಅದು ಉತ್ತಮವಾದ ರಾಗ. ಪ್ರಬಂಧ ಖಂಡಗಳನ್ನಷ್ಟನ್ನೆ ಹಾಡಬಹುದಾದುದು ಮಧ್ಯಮವಂತೆ.

ಅವನ ಒಕ್ಕಣೆಯಂತೆ ಇನ್ನೂ ಹಲವು ರಾಗಗಳಿವೆ. ಅವನ್ನು ಸಂಗೀತಕೋವಿದರು ಪರಿಗ್ರಹಿಸಬಾರದು; ಏಕೆಂದರೆ ಅವೆಲ್ಲ "ಠಾಯಾಲಾಪಪ್ರಬಂಧಾನಾಮಯೋಗ್ಯಾಃ". ಗೀತ ಪ್ರಬಂಧಗಳು ಸಾಹಿತ್ಯ ಪ್ರಧಾನವಾದ ಅಂಶಗಳು; ಆಲಾಪ ಠಾಯಗಳು ಸಂಗೀತ ಪ್ರಧಾನವಾದವುಗಳು. ಗೀತಪ್ರಬಂಧಗಳ ಆಸರೆಯ ಮೇಲೆ ಆಲಾಪ-ಠಾಯಗಳು ನಿಲ್ಲಬೇಕೆಂಬುದರಿಂದಲೇ ರಾಮಾಮಾತ್ಯನ ಉತ್ತಮ ರಾಗದ ವರ್ಣನೆಯಲ್ಲಿ ಗೀತ-ಪ್ರಬಂಧ-ಆಲಾಪ-ಠಾಯ ಎಂಬ ಕ್ರಮವನ್ನು ಕಾಣುತ್ತೇವೆ.

ಶಾರ್ಙ್ಗದೇವನ ಸಂಗೀತರತ್ನಾಕರದಲ್ಲಿ (ಪ್ರಬಂಧಾಧ್ಯಾಯ) ಗೀತವನ್ನು ಗಾಂಧರ್ವ, ಗಾನ ಎಂದು ವಿಂಗಡಿಸಿರುವುದನ್ನು ಕಾಣುತ್ತೇವೆ. ಇದು ತುಂಬಾ ಪ್ರಾಚೀನವಾದ ವಿಂಗಡಣೆಯೆಂದು ತೋರುತ್ತದೆ. ರಾಮಾಮಾತ್ಯನ ಸ್ವರಮೇಳ ಕಳಾನಿಧಿಯಲ್ಲೂ ಇದು ಕಾಣಸಿಗುತ್ತದೆ. ಇಲ್ಲಿ ಗೀತವೆಂದರೆ 'ರಂಜಕವಾದ ಸ್ವರಸಂದರ್ಭ'. ಗಾಂಧರ್ವವೆನ್ನಲು ಇಲ್ಲಿರುವ ನಿರ್ದೇಶನ ಅನಾದಿ ಸಂಪ್ರದಾಯದಿಂದ ಸಿದ್ಧವಾದುದು ಮತ್ತು ಮನುಷ್ಯನ ಆತ್ಯಂತಿಕ ಉನ್ನತಿಗೆ ಅನುಕೂಲವಾದುದು (ಶ್ರೇಯಸೋ ಹೇತುಃ). ಗಾನವೆಂದರೆ ವಾಗ್ಗೇಯಕಾರರಿಂದ ರಚಿತವಾದುದು. ಲಕ್ಷಣಗಳಿಂದ ಕೂಡಿದ್ದು. ದೇಶೀರಾಗಗಳಿಂದ ಹಾಡಲ್ಪಡುವುದು, ಜನರಂಜನೆಯನ್ನುಂಟುಮಾಡುವುದು.

ಗಾಂಧರ್ವ ದೇವಲೋಕದ್ದು, ಗಾನ ಭೂಲೋಕದ್ದು ಎನ್ನುವುದರಲ್ಲಿ ಏನು ಸ್ವಾರಸ್ಯವೂ ಇರದು. ಗಾಂಧರ್ವವನ್ನು ಮಾರ್ಗವೆಂದೂ ಗಾನವನ್ನು ದೇಶೀಯೆಂದೂ ಬಣ್ಣಿಸುವುದರಲ್ಲಿ ಹೆಚ್ಚು ಅರ್ಥವಿರುವಂತೆ ತೋರುವುದಿಲ್ಲ. ಆದರೆ ಭರತನ ನಾಟ್ಯಶಾಸ್ತ್ರದಲ್ಲಿ (ಅಧ್ಯಾಯ ೨೮) 'ತಂತ್ರೀಕೃತ'ವಾದುದು, 'ನಾನಾವಾದ್ಯಸಮಾಶ್ರಯ'ವಾದುದು, 'ಸ್ವರತಾಳಪದಾತ್ಮಕ'ವಾದುದು ಗಾಂಧರ್ವವೆಂಬ ಒಕ್ಕಣೆಯಿದೆ. ಈ ಒಕ್ಕಣೆಯಿಂದ ಒದಗುವ ಸೂಚನೆ ಪೂರ್ವಸಿದ್ಧತೆ ಯಿಂದಲೂ, ಹಲವಾರು ಪರಿಕರಗಳಿಂದಲೂ ಗೊತ್ತಾದ ಕ್ರಮವರಿತು ಉಂಟಾಗುವ ಸಂಗೀತ ಗಂಧರ್ವ ರೀತಿಯದು; ತುಂಬಾ ಹಿಂದಿನಿಂದ ಬಂದ ಸಂಪ್ರದಾಯದ ಚೌಕಟ್ಟನ್ನು ಸ್ವಲ್ಪವೂ ಮೀರದೆ ಇರುವುದು. ಇದಕ್ಕೆ ಬೇರ್ಪಟ್ಟಂತೆ ಜನರು ಅವರವರ ಇಚ್ಛೆಗನುಸಾರವಾಗಿ, ಬಳಕೆಯಲ್ಲಿರುವ ರಾಗಗಳನ್ನೇ ಬಳಸಿ, ತಮಗೆ ರುಚಿತೋರುವಂತೆ ಹಾಡಿಕೊಳ್ಳುವುದು ಗಾನ.

ಗಾಂಧರ್ವದಲ್ಲಿ ಲಕ್ಷಣಕ್ಕೆ ಅಗ್ರಪಟ್ಟ; ಗಾನದಲ್ಲಿಯಾದರೋ ಲಕ್ಷ್ಯಕ್ಕೆ. ಧಾತುವನ್ನು ಮಾತ್ರ ಆಶ್ರಯಿಸಿದುದು ಗಾಂಧರ್ವ; ಧಾತುವಿನೊಂದಿಗೆ ಮಾತನ್ನೂ ಹಿಡಿದುದು ಗಾನ. ವೇಂಕಟಮಖಿ ತನ್ನ ಗುರುವಾದ ತಾನಪ್ಪಾಚಾರ್ಯರ ಮೇಲೆ ರಚಿಸಿರುವ ಆರಭಿರಾಗದ ಗೀತದಲ್ಲಿ "ಗಂಧರ್ವಜನತಾಖರ್ವದುರ್ವಾರಗರ್ವಭಂಜನು ರೇ" ಎನ್ನುವಾಗ ತಾನಪ್ಪಾಚಾರ್ಯರು ಗಾಂಧರ್ವಪ್ರಕಾರದ ಹೆಗ್ಗಳಿಕೆಯನ್ನು ದೂರಮಾಡಿ ಗಾನಪ್ರಕಾರಕ್ಕೆ ಮೇಲ್ಪಂಕ್ತಿಯನ್ನು ಒದಗಿಸಿದುದನ್ನು ಸೂಚಿಸುತ್ತದೆ.

ಈ ವಿಭಾಗದಲ್ಲಿ ಸಂಗೀತಕ್ಕೂ, ಸಾಹಿತ್ಯಕ್ಕೂ ಇರುವ ನಂಟು ಎದ್ದು ಕಾಣುತ್ತದೆ. ಗಾಂಧರ್ವವೆಂಬುದು ಈಗ ನಮ್ಮ ನಡುವೆ ಇಲ್ಲ; ಸ್ವರ್ಗದಲ್ಲಿ ಮಾತ್ರ ಅದು ಉಳಿದುಕೊಂಡಿತು ಎಂದರೆ ಒಮ್ಮೆ ನಮ್ಮಲ್ಲಿದ್ದು ಕಾಲಕ್ರಮದಲ್ಲಿ ಕಣ್ಮರೆಯಾಯಿತು. ಕಣ್ಮರೆಯಾಗಲು ಕಾರಣವೇನು? ಸಾಹಿತ್ಯದ ನೆರವನ್ನು ಪಡೆದುಕೊಳ್ಳದಿದ್ದುದೇ ಕಾರಣ. ಶಿಲ್ಪದಂತೆ, ಚಿತ್ರದಂತೆ ತೋರಿಕೊಂಡ ಮೇಲೂ ಉಳಿದುಕೊಳ್ಳುವ ಕಲೆಯಲ್ಲ ಸಂಗೀತ; 'ತೋರಿಯಡಗುವ' ತಾತ್ಕಾಲಿಕ ಸ್ವಭಾವ ಅದರದ್ದು. ಸಂಗೀತ ಸೃಷ್ಟಿಯಾಗುತ್ತಿರುವ ಸಮಯದಲ್ಲೇ ಅದರ ಅವಸಾನವೂ ಸಿದ್ಧವಾದುದು; ಅದನ್ನು ಕೇಳುತ್ತಿರುವ ಸಮಯದಲ್ಲಷ್ಟೇ ಅದರ ಆಯಸ್ಸು, ಅದರ ಅನುಭವ. (ಈಗಿನ ಯಾಂತ್ರಿಕ ಸಾಧನಗಳು ಸಂಗೀತವನ್ನು ಹೆಚ್ಚು ಕಾಲ ಉಳಿಸುತ್ತಿವೆಯೆನ್ನಿ).

ಸ್ವರತಾಳಗಳಿಂದ ಕೂಡಿ, ವಾದ್ಯಗಳಿಂದ ಉದ್ದೀಪನಗೊಂಡು ಮೈದಳೆದ ರಾಗರಚನೆ ಉಳಿಯಬೇಕೆಂದರೆ ಅದಕ್ಕೆ ಸಾಹಿತ್ಯದ ನೆರವು ಅಗತ್ಯವಲ್ಲವೆ? ಧಾತುವನ್ನು ಉಳಿಸಲು, ಮೆರೆಸಲು ಮಾತು ಬೇಡವೆ? ಸಾಹಿತ್ಯ ರಚನೆಗಳು ಇರದಿದ್ದರೆ ರಾಗ ಸ್ವರೂಪಗಳು ಉಳಿಯುವುದಾದರೂ ಹೇಗೆ? ಗಾನವೆಂಬ ವಿಭಾಗ ಜನಪ್ರಿಯವಾದುದು, ಭೂಲೋಕದಲ್ಲಿ ಉಳಿದುಕೊಂಡುದು, ರಾಗಲಕ್ಷಣಗಳಿಗೆ ಲಕ್ಷ್ಯದ ಸಂಜೀವಿನಿಯನ್ನು ಒದಗಿಸಿದಾಗಲೆ.

೨

ಹರಿದಾಸರು ಏನು ಮಾಡಿದರೋ ಖಚಿತವಾಗಿ ಹೇಳಲಾರೆ; ತ್ಯಾಗರಾಜರಂತೂ ಹಲವಾರು ದೇಸೀಮಟ್ಟುಗಳನ್ನು ರಾಗಗಳ ನೆಲೆಗೆ ಎತ್ತಿದರೆಂಬುದನ್ನು ಎಲ್ಲರೂ ಬಲ್ಲರು. ಅವರು ಆ ಜಾನಪದ

ಮಟ್ಟುಗಳಿಗೆ ಸ್ವಲ್ಪ ಸಂಸ್ಕಾರವನ್ನೊದಗಿಸಿ ಅವುಗಳಲ್ಲಿ ಕೃತಿ ರಚನೆ ಮಾಡಿರದಿದ್ದರೆ, ಆ ಮಟ್ಟುಗಳು ಗಾಂಧರ್ವಗೀತೆಯಂತೆ ಕಣ್ಮರೆಯಾಗಿಬಿಡುತ್ತಿದ್ದುವು. ಪುರಂದರದಾಸರು ಗೀತೆಗಳನ್ನು ಮಲಹರಿ ರಾಗದಲ್ಲಿ ರಚಿಸಿದ್ದರಿಂದ ಆ ರಾಗ ನಮಗಿಂದು ಉಳಿದುಕೊಂಡಿತು. ಇಲ್ಲವಾದರೆ ಸವತಿ ಸಾವೇರಿಯ ಜನಪ್ರೀತಿಯಲ್ಲಿ ಇದು ನಿರ್ನಾಮವಾಗಿ ಹೋಗುತ್ತಿತ್ತು. ಉತ್ತರಭಾರತದಿಂದ ನಮ್ಮಲ್ಲಿಗೆ ವಲಸೆ ಬಂದ ಕಾಫಿ, ಬೇಹಾಗ್, ಜಂಜೂಟಿ, ಕಮಾಸ್ ಮೊದಲಾದ ರಾಗಗಳು ನಮ್ಮ ದಕ್ಷಿಣಾದಿ ಪದ್ಧತಿಗೆ ಒಗ್ಗಿಹೋದದ್ದು ಆ ರಾಗಗಳಲ್ಲಿ ನಮ್ಮವರು ಮಾಡಿದ ಕೃತಿಗಳಿಂದಲೇ. ತ್ಯಾಗರಾಜರು 'ಸೀತಾಪತೇ ನಾ ಮನಸುನಾ' ಎಂಬ ಕೃತಿಯನ್ನು ರಚಿಸದಿದ್ದರೆ ಕಮಾಸು ನಮ್ಮದಾಗುತ್ತಿದ್ದಿತೋ ಇಲ್ಲವೋ ಹೇಳಬಲ್ಲವರಾರು? ಯರುಕಲು (ಎಂದರೆ ದೋಣಿ ನಡೆಸುವವರು) ಹಾಡುತ್ತಿದ್ದ ಮಟ್ಟು ಯದುಕುಲ ಕಾಂಬೋದಿಯಾಗಿ ಉಳಿದುಕೊಂಡದ್ದು ಅದರಲ್ಲಿ ಸಾಹಿತ್ಯ ಮೂಡಿ ಬಂದಾಗಲೇ ಅಲ್ಲವೆ?

ಇನ್ನು ನಮ್ಮ ಸಂಗೀತದಲ್ಲಿರುವ ಸಾಹಿತ್ಯ ಸಂಪತ್ತಿನ ಕಡೆ ಗಮನವನ್ನಿಷ್ಟು ಹರಿಸೋಣ. ಮತಂಗನ ಬೃಹದ್ದೇಶಿಯಿಂದ ಹಿಡಿದು ವೇಂಕಟಮಖಿಯ ಚತುರ್ದಂಡಿ ಪ್ರಕಾಶಿಕೆಯವರೆಗೆ ಶಾಸ್ತ್ರಕಾರರು ಉಲ್ಲೇಖಿಸಿರುವ ಪ್ರಾಚೀನ ಪ್ರಬಂಧಗಳನ್ನು ಕೈಬಿಡುತ್ತೇನೆ. ಅವಕ್ಕೂ ಈಗಿನ ನಮ್ಮ ಸಂಗೀತಕ್ಕೂ ಏನು ಸಂಬಂಧವಿರಬಹುದೋ ನಾನರಿಯೆ. ನನಗೆ ತಿಳಿದ ಮಟ್ಟಿಗೆ ನಮ್ಮ ಸಂಪ್ರದಾಯ ಸಂಗೀತದ ಹಿನ್ನೆಲೆಯಲ್ಲಿ ನಾವು ಗಮನಿಸಬೇಕಾದುದು ಹರಿದಾಸರ ರಚನೆಗಳನ್ನು. ಶ್ರೀಪಾದರಾಜರು (೧೪೮೬ರಲ್ಲಿ ನಿರ್ಯಾಣ), ವ್ಯಾಸತೀರ್ಥರು (೧೪೪೭-೧೫೩೯) ಮತ್ತು ಪುರಂದರದಾಸರು (೧೪೮೪-೧೫೬೪) ಇವರು ಸಂಪ್ರದಾಯ ಸಂಗೀತದೊಂದಿಗೆ ನೇರವಾದ, ನಿಕಟವಾದ ನಂಟನ್ನು ಹೊಂದಿದ್ದುದು ಹಲವಾರು ಅಂಶಗಳಿಂದ ಸ್ಪಷ್ಟವಾಗುತ್ತದೆ. ಮತ್ತು ಅವರ ಸಮಕಾಲಿಕರಾದ ತಾಳ್ಲಪಾಕದ ಅಣ್ಣಮಾಚಾರ್ಯರ (೧೪೦೮-೧೫೦೩) ಕೃತಿಗಳನ್ನು ಗಮನಿಸಬೇಕು.

ಇವರೆಲ್ಲ ಲಕ್ಷ್ಯ ಸಂಗೀತದ ಕೊರತೆಯನ್ನು ನೀಗಿಸಿ ಉಪಕಾರಮಾಡಿದವರು. ಹರಿದಾಸರ ಕನ್ನಡ ರಚನೆಗಳು, ತಾಳ್ಲಪಾಕದವರ ತೆಲುಗು ಸಂಕೀರ್ತನಗಳು ರಾಗ-ಸಾಹಿತ್ಯ ಸಂಯೋಜನೆಗೆ ದಾರಿ ತೋರಿಸಿದುವು. ಇವರ ಕಾಲಕ್ಕೆ ಸ್ವಲ್ಪ ಮುಂಚೆ ಅರುಣಗಿರಿನಾಥರ ತಮಿಳು ಭಾಷೆಯ ತಿರುಪ್ಪುಗಳು ಹಾಡಿಗೆ ತಕ್ಕ ನಡೆಗೆ ನಿದರ್ಶನಗಳಾಗಿದ್ದುವು; ಅವೆಲ್ಲ ತಾಳಕ್ಕೆ ಸಾಹಿತ್ಯವನ್ನು ಹೊಂದಿಸುವ ಯತ್ನಗಳು. ಇವೆಲ್ಲ ಪ್ರಯೋಗಗಳಿಗೆ ತುಂಬ ಮೊದಲೇ ತಮಿಳು ಭಾಷೆಯಲ್ಲಿ ಆಳ್ವಾರರ ಪಾಶುರಗಳು ಮತ್ತು ಮೊದಲ ಮೂವರು ನಾಯನ್ಮಾರರ ತೇವಾರವೂ ಭಾವ-ರಾಗ-ತಾಳಗಳಿಂದ ಕೂಡಿದ ಸಾಹಿತ್ಯವಾಗಿದ್ದುವು; ಆದರೆ ಸಂಪ್ರದಾಯ ಸಂಗೀತಕ್ಕೂ ಇವಕ್ಕೂ ನೇರವಾದ ಸಂಬಂಧವೇನು ಇರಲಿಲ್ಲವೆನ್ನಿ. ನೇರವಾದ ಸಂಬಂಧ ಒದಗಿದ್ದು ಹರಿದಾಸರಿಂದಲೇ, ಅದರಲ್ಲೂ ಮುಖ್ಯವಾಗಿ ಪುರಂದರದಾಸರಿಂದಲೇ, ಎನ್ನಬಹುದು.

ಹರಿದಾಸರಿಗೆ ಪೂರ್ವದಲ್ಲೆ ಶಿವಶರಣರ ಕನ್ನಡ ವಚನಗಳು ಗೇಯಗುಣವನ್ನೂ ಹೊಂದಿದ್ದು ಜನಪ್ರಿಯವಾಗಿದ್ದುವು; ಹರಿದಾಸರ ಪ್ರಯೋಗಕ್ಕೆ ಮಾರ್ಗದರ್ಶನ ಮಾಡಿದುವು. ಆದರೆ ಅವುಗಳ

ಮಾತು ಬೇರೆ. ಸಂಪ್ರದಾಯಸಂಗೀತದ ಕಟ್ಟುಪಾಡಿಗೆ ಅವು ಅಷ್ಟಾಗಿ ಒಳಪಡುವವಲ್ಲ. ಬಸವಣ್ಣನವರೇ ಹೇಳಿದಂತೆ -

'ತಾಳಮಾನಸರಿಸವನರಿಯೆ
ಓಜೆ ಬಜಾವಣೆಯ ಲೆಕ್ಕವನರಿಯೆ
ಅಮೃತಗಣ ದೇವಗಣಗಳನರಿಯೆ
ಕೂಡಲಸಂಗಮದೇವ ನಿನಗೆ
ಕೇಡಿಲ್ಲವಾಗಿ ಆನು ಒಲಿದಂತೆ ಹಾಡುವೆ'

ಈ ಮಾತು ಹರಿದಾಸರ ಬಹುಪಾಲು ಕೃತಿಗಳಿಗೂ ಅನ್ವಯಿಸುತ್ತದೆಯೆನ್ನಿ. ಆದರೆ ವ್ಯಾಸರಾಯಸ್ವಾಮಿಗಳೂ, ಪುರಂದರದಾಸರೂ ಸಂಪ್ರದಾಯಸಂಗೀತದ ಲಕ್ಷಣವನ್ನು ಬಲ್ಲವರು; ಲಕ್ಷ್ಯ ಸಂಗೀತವನ್ನು ಸಿದ್ಧಪಡಿಸಲೆಂದೇ ಹೊರಟವರು. ಅವರ ಮತ್ತು ಸಂಪ್ರದಾಯಸಂಗೀತದ ನಡುವೆ ಇರುವ ನಂಟು ನೇರವಾದುದು. ಹೀಗೆಂದಮಾತ್ರಕ್ಕೆ ಮುಂದೆ ಸಿದ್ಧವಾದ ಸಾಂಪ್ರದಾಯಿಕ ಸಂಗೀತದ ಕೊಡುಗೆಯನ್ನು ಹಿಂದಿನ ದಾಸರ ರಚನೆಗಳಿಗೆ ಹೊಂದಿಸುವ ಯತ್ನ ಈಗ ನಡೆಯುತ್ತಿರುವುದು ಸರಿಯೆನ್ನಲಾಗದು. ದಾಸರ ಪದಗಳನ್ನು ಹಾಡಬೇಕಾದ ರೀತಿ ಬೇರೆಯದು. ಅದನ್ನು ಬೇರೊಂದು ಕಡೆ ಚರ್ಚೆ ಮಾಡಿದ್ದೇನೆ.

ಸಂಪ್ರದಾಯ ಸಂಗೀತಕ್ಕೆ ಹಿನ್ನೆಲೆಯಾಗಿಯೇ ನಾವು ಗಮನಿಸಬೇಕಾದ ಮತ್ತೆ ಕೆಲವು ಸಾಹಿತ್ಯ ಪ್ರಯೋಗಗಳಿವೆ. ಹನ್ನೆರಡನೆಯ ಶತಮಾನದಲ್ಲಿ ಜಯದೇವ ಕವಿಯ ಗೀತಗೋವಿಂದವು ಭಕ್ತಿಪರವಾದರೂ ಶೃಂಗಾರಕಾವ್ಯ, ಸಂಗೀತ ನಾಟಕ. ಇದರ ಹನ್ನೆರಡು ಸರ್ಗಗಳಲ್ಲಿ ಬರುವ ಇಪ್ಪತ್ತನಾಲ್ಕು ಅಷ್ಟಪದಿ ಕೀರ್ತನೆಗಳು ಜನಪ್ರಿಯವಾದುದು ಮಾತ್ರವಲ್ಲ, ಎಲ್ಲೆಡೆ ಪ್ರಭಾವವನ್ನೂ ಬೀರಿದುವು. ನಿದರ್ಶನಕ್ಕೆ ಹದಿನಾರನೆಯ ಶತಮಾನದಲ್ಲಿ ನಾರಾಯಣ ತೀರ್ಥರ ಕೃಷ್ಣ ಲೀಲಾ ತರಂಗಿಣಿಯೂ ಸಂಗೀತನಾಟಕವೆ; ಅಲ್ಲಿ ಬರುವ ಹಾಡುಗಳು ತರಂಗಗಳಾದುವು.

ಜಯದೇವನ ಪ್ರಭಾವ ಕೇರಳದಲ್ಲಿಯೂ ಮೂಡಿಬಂದಿತು. ಅಲ್ಲಿನ ಕಥಕಳಿ, ಕೃಷ್ಣನಾಟ್ಟಂ ಮತ್ತು ಸೋಪಾನ ಸಂಗೀತ ಮೂರರಲ್ಲೂ ಅಷ್ಟಪದಿಗಳ ಪ್ರಭಾವವನ್ನು ಗುರುತಿಸಬಹುದು. ಅಲ್ಲಿ ಸೋಪಾನ ಸಂಗೀತದಿಂದ ಬೇರ್ಪಟ್ಟಂತೆ ಇರುವ ದೇಶೀಯ ಪದ್ಧತಿಯಲ್ಲಿ ಈ ಪ್ರಭಾವವಿರದು. ಅದರಲ್ಲಿರುವುದು ದಕ್ಷಿಣಾದಿ ಸಂಗೀತದ ಸ್ವಭಾವವೇ. ಹದಿನಾರನೆಯ ಶತಮಾನದಲ್ಲೇ ಭದ್ರಾಚಲ ರಾಮದಾಸರ ತೆಲುಗು ಕೀರ್ತನೆಗಳು ಸಂಗೀತದಲ್ಲಿ ಭಕ್ತಿಯ ಪಾತ್ರವನ್ನು ದೃಢಪಡಿಸಿದುವು. ಹಾಗೆಯೇ ತಮಿಳಿನಲ್ಲಿ ಅರುಣಾಚಲ ಕವಿರಾಯರ (೧೭೧೧-೧೭೭೮) ರಾಮನಾಟಕ, ಮುಂದಿನ ತಲೆಮಾರಿನಲ್ಲಿ ಗೋಪಾಲಕೃಷ್ಣ ಭಾರತಿಯ ನಂದನಾರ್ ಚರಿತ್ರಂ, ತಿರುನೀಲಕಂಠರ್ ಚರಿತ್ರಂ, ಇಯರ್ ಪಗೈನಾಯನಾರ್ ಚರಿತ್ರಂ, ಕಾರೈಕ್ಕಾಲ್ ಅಮ್ಮೈಯಾರ್ ಚರಿತ್ರಂ ಮೊದಲಾದುವೂ ಸಂಗೀತ ಭಕ್ತಿಗಳ ಸಂಯೋಜನೆಗೆ ಮಾರ್ಗದರ್ಶನ ಮಾಡಿದುವು. ಇವೆಲ್ಲ ಜಯದೇವನ ಹೆದ್ದಾರಿಯನ್ನು ಹಿಡಿದ ಪ್ರಯೋಗಗಳು.

ಅಷ್ಟೇಕೆ, ಸಂಗೀತ ಸಂಪ್ರದಾಯ ಪ್ರವರ್ತಕನೆನ್ನ ಬಹುದಾದ ವೇಂಕಟಮಖಿಯೇ ಜಯದೇವನ

ಅಷ್ಟಪದಿಗಳಂತೆ ತಿರುವಾರೂರಿನ ವೀಧೀವಿಟಂಕತ್ಯಾಗರಾಜಸ್ವಾಮಿಯ ಮೇಲೆ ಇಪ್ಪತ್ತು ನಾಲ್ಕು ಅಷ್ಟಪದಿಗಳನ್ನು ರಚಿಸಿದನಂತೆ. ಇದರ ಉಲ್ಲೇಖ ಸಂಗೀತ ಸಂಪ್ರದಾಯಪ್ರದರ್ಶಿನಿಯಲ್ಲೇ ಇದೆ.

ಹೀಗೆ ಸಂಪ್ರದಾಯ ಸಂಗೀತದ ಹಿನ್ನೆಲೆಯಲ್ಲಿ ಇದ್ದುವೆಂದರೆ ಸಂಕೀರ್ತನೆ, ಭಜನೆ, ಉತ್ಸವ ಪದ್ಧತಿ, ಹರಿಕಥೆ, ಪ್ರಸಂಗ ಮೊದಲಾದುವು. ಗುಡಿಯಲ್ಲಾಗಲಿ, ಬೀದಿಯಲ್ಲಾಗಲಿ, ಬಯಲಲ್ಲಾಗಲಿ, ರಂಗಭೂಮಿಯ ಮೇಲಾಗಲಿ ನಡೆಯುತ್ತಿದ್ದ ಹಲವಾರು ಕಲಾ ಪ್ರಕಾರಗಳಲ್ಲಿ ಭಕ್ತಿರಸವನ್ನೇ ಆರಿಸಿಕೊಂಡು ಸಂಗೀತವೋ ನಾಟಕವೋ ಸಂಗೀತನಾಟಕವೋ ನಾಟ್ಯವೋ ಸಿದ್ಧವಾದಾಗ ಲಕ್ಷ್ಯ ಸಂಪ್ರದಾಯದ ಚೌಕಟ್ಟು ಪ್ರಸಕ್ತವಾಯಿತು. ಇವುಗಳಿಗೆ ಸಾಹಿತ್ಯವನ್ನು ಒದಗಿಸಿದವರು ಸಂತರು, ಹರಿದಾಸರು, ಭಕ್ತರು, ವಿರಕ್ತರು. ಪ್ರಾಯೋಗಿಕವಾದ ಸಂಪ್ರದಾಯ ಸಂಗೀತ ಮೈದಳೆದದ್ದು ಅರಸರ ಒಡ್ಡೋಲಗದಲ್ಲಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ರಾಜಾಸ್ಥಾನಗಳಲ್ಲಿದ್ದವರು ಶಾಸ್ತ್ರಕಾರರು; ಅವರಿಗೆ ಭಕ್ತಿಯ ಸಂದರ್ಭ ಎಷ್ಟಾದರೂ ದೂರವಾದುದು. ಅವರು ಲಕ್ಷಣದ ಕಡೆಗೇ ಗಮನ ವಿತ್ತುದು ಸಹಜವೇ.

ಹೀಗಾಗಿ ಲಕ್ಷ್ಯ-ಲಕ್ಷಣಗಳ ನಡುವೆ ಮತ್ತೆ ಮತ್ತೆ ವಿರೋಧ ತಲೆದೋರಿಕೊಂಡದ್ದು ಆಶ್ಚರ್ಯವೇನಲ್ಲ.

> 'ಸಂಗೀತ ಶಾಸ್ತ್ರೇ ಬಹುಧಾ ವಿರೋಧಾಃ
> ಸಂತ್ಯೇವ ಲಕ್ಷ್ಯೇಷು ಚ ಲಕ್ಷಣೇಷು'

ಎಂದು ರಾಮಯಾಮಾತ್ಯನು ತನ್ನ ಅಳಲನ್ನು ತೋಡಿಕೊಂಡಿದ್ದಾನಲ್ಲವೆ? ಅವನು ರಾಜಾಶ್ರಯದಲ್ಲಿದ್ದವನು. ಅವನ ಗ್ರಂಥರಚನೆಯೂ ರಾಜನ ಪ್ರೀತ್ಯರ್ಥವಾಗಿಯೇ. ಇದನ್ನು ಅವನೇ ಹೇಳಿಕೊಂಡಿದ್ದಾನೆ. ಗ್ರಂಥದ ಅವತರಣಿಕೆಯಲ್ಲಿ ಇನ್ನೂ ಒಂದು ಮಾತು ಸ್ವಾರಸ್ಯವಾಗಿ ಬಂದಿದೆ - "ಕೆಲವರು ಸಂಗೀತದ ಲಕ್ಷಣವನ್ನು ಮಾತ್ರ ತಿಳಿದವರು, ಮತ್ತೆ ಕೆಲವರು ಲಕ್ಷ್ಯವನ್ನಷ್ಟೆ ಬಲ್ಲವರು".

> "ವಿಜಾನತೇ ಲಕ್ಷಣ ಮಾತ್ರಮೇಕೇ
> ವಿದಂತಿ ಲಕ್ಷ್ಯಂ ಕತಿಚಿಜ್ಜಗತ್ಯಾಂ!'

ತಾನು ಎರಡನ್ನೂ ಬಲ್ಲವನು ಎಂಬ ಅವನ ಹೆಮ್ಮೆಯ ಮಾತನ್ನು ಬಿಡಿ. ಶಾಸ್ತ್ರಕಾರರಿಗೆ ಲಕ್ಷ್ಯ ಸಂಗೀತದ ಪರಿಚಯವಿರದಿದ್ದುದಂತೂ ಈ ಮಾತಿನಿಂದ ಹೊರಡುವುದಿಲ್ಲವೇ?

ರಾಮಾಮಾತ್ಯನ ಕಾಲದಲ್ಲೇ ಹರಿದಾಸರ ರಚನೆಗಳೂ ತಾಳ್ಳಪಾಕದವರ ಸಂಕೀರ್ತನಗಳೂ ಪ್ರಸಿದ್ಧವಾಗಿದ್ದುವು. ಆದರೆ ಇವು ಲಕ್ಷ್ಯ ಸಂಗೀತದ ನಿದರ್ಶನಗಳೆಂದು ಅವನ ಗಮನಕ್ಕೆ ಬರಲಿಲ್ಲ. ಅವು ಸಂಗೀತವೇ ಅಲ್ಲ ಎಂದು ಅವನು ಭಾವಿಸಿದ್ದಿರಲೂಬಹುದು ! ಮುಂದೆ ಚತುರ್ದಂಡಿ ಪ್ರಕಾಶಿಕೆಯನ್ನು (೧೬೫೦ ಸುಮಾರು) ಬರೆದ ವೇಂಕಟಮಖಿಯೂ ರಾಜಾಶ್ರಯದಲ್ಲಿದ್ದವನೇ, ಅವನಿಗೂ ಲಕ್ಷ್ಯವೆಂದರೆ ಪೂರ್ವಾಚಾರ್ಯ ಪ್ರಣೀತ ಪ್ರಬಂಧಗಳೇ. ಜನರ ನಡುವೆ ಬಳಕೆಯಲ್ಲಿದ್ದ

ಹರಿದಾಸರ ಮತ್ತು ತಾಳ್ಲಪಾಕದವರ ರಚನೆಗಳು ಅವನ ಲಕ್ಷ್ಯಕ್ಕೆ ಬರಲಿಲ್ಲ. ವ್ಯಾಸತೀರ್ಥರೂ, ಪುರಂದರದಾಸರೂ ಶಾಸ್ತ್ರಕಾರರಿಂದ ಸಮ್ಮತಿಯ ಮರ್ಯಾದೆಯನ್ನು ಪಡೆದುಕೊಳ್ಳಲು ಸಂಗೀತ ಸಾರಾಮೃತವನ್ನು (೧೭೩೦ರ ಸುಮಾರಿನಲ್ಲಿ) ಬರೆದ ತಂಜಾವೂರಿನ ಅರಸ ತುಳಜಾಜಿಯ ಕಾಲದವರೆಗೆ ಕಾಯಬೇಕಾಯಿತು !

೩

ಆದರೆ ಹರಿದಾಸರ ಹೆಗ್ಗಳಿಕೆಯನ್ನು ಅರಿತುಕೊಂಡು ಅವರ ದಾರಿಯನ್ನೇ ಹಿಡಿದು ಬದುಕಿದ ತ್ಯಾಗರಾಜಸ್ವಾಮಿಗಳು (೧೭೬೭-೧೮೪೭) ಅರಸರ ಒಡ್ಡೋಲಗವನ್ನು ದೂರವೇ ಇರಿಸಿ, ಭಕ್ತಿರಸವೊಂದನ್ನೇ ಕಾಪಾಡಿಕೊಂಡು ಸಂಪ್ರದಾಯ ಸಂಗೀತಕ್ಕೆ ವಿಪುಲವಾಗಿ ಸಾಹಿತ್ಯವನ್ನು ಸಲ್ಲಿಸಿದರು. ನಮ್ಮ ಸಂಗೀತದ ಸಾಂಪ್ರದಾಯಿಕತೆ ಸಂಪನ್ನವಾದದ್ದು ಈ ಸಂತರಿಂದ, ಅರಸನ ಆಶ್ರಯದಲ್ಲಿದ್ದ ಶಾಸ್ತ್ರಕಾರರಿಂದಲೂ ಅಲ್ಲ, ಆಸ್ಥಾನ ಸಂಗೀತ ವಿದ್ವಾಂಸರಿಂದಲೂ ಅಲ್ಲ. ತ್ಯಾಗರಾಜರು ಬದುಕಿ ಬಾಳಿದ ಕಾಲದಲ್ಲೇ ಇದ್ದ ಶ್ಯಾಮಶಾಸ್ತ್ರಿಗಳು (೧೭೬೩-೧೮೨೭) ಅವರಂತೆ ಉಂಛವೃತ್ತಿ ಮಾಡದಿದ್ದರೂ ಅವರಂತೆಯೇ ಭಗವದ್ಭಕ್ತಿಯ ಆವೇಶದಲ್ಲೇ ಬಾಳನ್ನು ಕಳೆದವರು. ಅವರಿಂದಲೂ ಸಂಪ್ರದಾಯ ಸಂಗೀತದ ಕಳೆಯೇರಿತು. ಇವರಿಬ್ಬರೂ ಭಕ್ತರು, ಭಾವುಕರು, ಕಲಾರಸಿಕರು, ಸ್ವಭಾವಸಿದ್ಧ ಕವಿಗಳು. ಅವರ ಸಂಗೀತ-ಸಾಹಿತ್ಯಗಳೆರಡೂ ಅಯತ್ನ ಸಿದ್ಧವಾಗಿ ಅವಿನಾಭಾವದಿಂದ ಕೂಡಿ ಹೊರಬಂದುವು. ಅವರ ಕವಿತೆಗಳಲ್ಲಿ ಶಬ್ದಾಲಂಕಾರ ಕಡಮೆ; ಅರ್ಥಾಲಂಕಾರಕ್ಕೆ ಒತ್ತು ಹೆಚ್ಚು. 'ಅರ್ಥಾಲಂಕಾರರಹಿತಾ ವಿಧವೇವ ಸರಸ್ವತೀ' ಎಂಬ ಮಾತು ಅವರಿಗೆ ತಿಳಿದಿದ್ದಿತು. ಹಾಗಿದ್ದುದರಿಂದ. ಅವರ ಸಂಗೀತ ಸಾಹಿತ್ಯಕ್ಕೆ ವಿಶೇಷವಾದ ಮೆರುಗು ಬಂದಿತು.

ಅವರಿಬ್ಬರ ಸಮಕಾಲಿಕರಾಗಿದ್ದ ಮುತ್ತುಸ್ವಾಮಿ ದೀಕ್ಷಿತರು (೧೭೭೫-೧೮೩೫) ಸ್ವಭಾವದಲ್ಲಿ ಅವರಿಬ್ಬರಿಗಿಂತ ಬೇರೆ. ಭಗವದ್ಭಕ್ತರಾದರೂ ವ್ಯವಹಾರದಲ್ಲಿ ನುರಿತವರು, ಪಾಂಡಿತ್ಯದಲ್ಲಿ ಮೇಲ್ಮೆ ಪಡೆದವರು, ಮಂತ್ರ-ತಂತ್ರಶಾಸ್ತ್ರದಲ್ಲಿ ನಿಷ್ಣಾತರು; ಸಂಗೀತದ ಲಕ್ಷಣ-ಲಕ್ಷ್ಯ ಎರಡರಲ್ಲೂ ಅವರದ್ದು ಎತ್ತಿದ ಕೈ. ತ್ಯಾಗರಾಜರಂತೆ, ಶ್ಯಾಮಶಾಸ್ತ್ರಿಗಳಂತೆ ಹಿಂದಿನ ಪುರಂದರ ದಾಸರಂತೆ, ಅರಸರ ಆದರವನ್ನು ಕಡೆಗಣ್ಣಿಂದ ಕಂಡವರಲ್ಲ.

ತ್ಯಾಗರಾಜರಂತೆ ನರಸ್ತುತಿಯನ್ನು ಮಾಡೆನೆಂಬ ಹಟವೇನು ಅವರಿಗೆ ಇರಲಿಲ್ಲ. ಮೇಘರಂಜಿನಿ ರಾಗದಲ್ಲಿ ದೀಕ್ಷಿತರು ಎಟ್ಟಯಾಪುರದ ಅರಸನ ಮೇಲೆ "ವೆಂಕಟೇಶ್ವರ ಯೆಟ್ಟೆಪ್ಪ ಭೂಪತಿ ಮಾಶ್ರಯೇಹಂ" ಎಂಬ ಕೀರ್ತನೆಯನ್ನೂ ರಚಿಸಿದರು. ಸಂಗೀತ ಸಂಪ್ರದಾಯ ಪ್ರದರ್ಶಿನಿಯಲ್ಲಿ ಸುಬ್ಬರಾಮ ದೀಕ್ಷಿತರು ಈ ಅರಸನು ವಿಷ್ಣುವಿನ ಅಂಶದಿಂದ ಕೂಡಿದ್ದವನೆಂದು ಸಮಾಧಾನವನ್ನೇನೋ ಹೇಳಿದ್ದಾರೆನ್ನಿ!

ಅವರ ರಚನೆಗಳಲ್ಲಿ ತೋರಿಕೊಳ್ಳುವ ಠೀವಿ, ಶ್ರೀಮದ್ಗಾಂಭೀರ್ಯ, ಪ್ರೌಢಿಮೆ, ಅಧ್ಯವಸಾಯಗಳನ್ನು ಯಾರಾದರೂ ಗುರುತಿಸಬಹುದು. ಅವರ ಕವಿತೆಗಳಲ್ಲಿ ಶಬ್ದಾಲಂಕಾರವನ್ನು ಹೆಚ್ಚಾಗಿ ಕಾಣುತ್ತೇವೆ. ರಾಗಸ್ವರೂಪವನ್ನು ಶಾಸ್ತ್ರ ಸಮ್ಮತವಾಗಿ ಸ್ಪಷ್ಟಪಡಿಸುವ ಸಾಮರ್ಥ್ಯ ಅವರ

ಒಂದೊಂದು ಕೃತಿಯಲ್ಲೂ ಕಾಣಸಿಗುತ್ತದೆ. ಲಕ್ಷ್ಯ-ಲಕ್ಷಣಗಳ ನಡುವೆ ಸಮನ್ವಯವನ್ನು ಸಂಪೂರ್ಣವಾಗಿ ಸಾಧಿಸಿದವರೆಂದರೆ ದೀಕ್ಷಿತರೇ. ಆದರೆ ಅವರ ಸಾಹಿತ್ಯದಲ್ಲಿ ಸಹಜತೆ ಕಡಮೆಯೆ ಎಂದು ನನಗನಿಸುತ್ತದೆ. ಭಾವಪರತೆಯೂ ಅಷ್ಟಾಗಿ ನನಗೇನು ಕಾಣದು. ಸಂಗೀತದ ಕಡೆಯೆ ಗಮನ ಹೆಚ್ಚು ಎನಿಸುತ್ತದೆ.

ಸಂಗೀತಕ್ಷೇತ್ರಕ್ಕೆ ತ್ಯಾಗರಾಜರ ಕೊಡುಗೆಗಳಲ್ಲಿ ಸಂಗತಿಗಳ ಏರ್ಪಾಟು ಒಂದು ಎಂದು ಎಲ್ಲರೂ ಬಲ್ಲರಷ್ಟೆ. ಸಂಗತಿಗಳ ಸ್ವಾರಸ್ಯವೇನು? ಸಾಹಿತ್ಯಭಾಗವನ್ನು ಅರ್ಥಭಾವವನ್ನುಸರಿಸಿ ಹಮ್ಮೈಸುವುದು ಮುಖ್ಯವಾದುದು. ಹೀಗೆ ಮಾಡುವಾಗ ರಾಗದ ಸ್ವರೂಪ, ಸ್ವರಗಳ ಸಂಚಾರ, ನಡೆಯ ಸೊಬಗು ಎಲ್ಲವೂ ಸ್ಪಷ್ಟವಾಗಿ ಎದ್ದು ಕಾಣುವಂತೆ ಸಂಗತಿಗಳಿರಬೇಕು ನಿಜ; ಆದರೆ ಸಾಹಿತ್ಯದ ತಾತ್ಪರ್ಯ ಭಾವುಕರಿಗೆ ಮನದಟ್ಟಾಗುವುದು ಉದ್ದೇಶ. ಮಾತುಗಳನ್ನೇ ಧಾತುವಿನ ಚೌಕಟ್ಟಿನಲ್ಲಿ ವಿಸ್ತರಿಸುವಾಗ ಮಾತುಗಳಿಗೆ ವಿಶೇಷವಾದ ಕಳೆ ಕೂಡಿಬರುತ್ತದೆ. ಮಾತುಗಳು ಬಗೆಬಗೆಯ ವಿನ್ಯಾಸದಲ್ಲಿ ಕೇಳುತ್ತಿರುವಾಗ ಮನಸ್ಸಿಗೆ ಸಂಸ್ಕಾರ ಒದಗುತ್ತದೆ. ಮಾತು ಏರಿಬರುವ ಧಾತುವಿನ ಸೊಬಗು ಮಾತಿನ ಮೇಲ್ಮೆಯನ್ನು ಮನದಟ್ಟು ಮಾಡಿಕೊಡುತ್ತದೆ. ಸಂಗತಿಗಳಿರುವುದು ರಾಗಭಾವವನ್ನಷ್ಟೆ ಸ್ಪಷ್ಟಪಡಿಸಲೆಂದಲ್ಲ; ಅದಕ್ಕೆ ಸಂಗೀತವಿನಿಕೆಯಲ್ಲಿ ನೆರವಲ್ ಮುಂತಾದ ಬೇರೆ ಎಡೆಗಳಿವೆ. ಸಾಹಿತ್ಯದ ತಾತ್ಪರ್ಯವನ್ನು ರಸಿಕ ಚೆನ್ನಾಗಿ ಅನುಭವಿಸಲೆಂದೇ ಸಂಗತಿಯ ವಿನಿಯೋಗ.

ತ್ಯಾಗರಾಜರಿಂದಾಗಿ ಕೃತಿಯ ಸ್ವರೂಪ ಸ್ಪಷ್ಟವಾಯಿತು ಎಂಬುದನ್ನೂ ಎಲ್ಲರೂ ಬಲ್ಲರಷ್ಟೆ. ಹಳೆಯ ಪ್ರಬಂಧಗಳಲ್ಲಿ ಏನಿದ್ದಿತೋ ಏನಿರಲಿಲ್ಲವೋ, ಈಗಂತೂ ಸಂಗೀತ-ಸಾಹಿತ್ಯಗಳ ಸಮ್ಮಿಳನ ಕೈಗೂಡಿತು ಎನ್ನಬಹುದು. ತ್ಯಾಗರಾಜರು ಕೃತಿಯ ಸ್ವರೂಪವನ್ನು ಕುರಿತು ಹೇಳಿರುವ ಒಕ್ಕಣೆಯನ್ನು ಗಮನಿಸಬೇಕು. 'ಸೊಗಸುಗಾ ಮೃದಂಗತಾಳಮು ಜತಗೂರ್ಚಿ' ಎಂದು ಮೊದಲಾಗುವ ಕೃತಿಯು 'ಕೃತಿಚೇ ಭಜಿಯಂಚು ಕಿ'' ಎಂದು ಕೊನೆಗಾಣುತ್ತದೆ-

> ನಿಗಮಶಿರೋರ್ಥಮು ಗಲ್ಗಿನ
> ನಿಜವಾಕ್ಕುಲತೋ ಸ್ವರಶುದ್ಧಮುತೋ
> ಯತಿ ವಿಶ್ರಮ ಸದ್ಭಕ್ತಿ-ವಿರತಿ
> ದ್ರಾಕ್ಷಾರಸ-ನವರಸಯುತ
> ಕೃತಿಚೇ ಭಜಿಯಿಂಚು

ಕೃತಿಯಿರುವುದು ಭಜನೆಗಾಗಿ ಎನ್ನುವುದಂತೂ ನಿರ್ದಿಷ್ಟವಾಯಿತು ಕೃತಿಯಾದರೂ ಹೇಗಿರಬೇಕು? ವೇದಾಂತದ ತಾತ್ಪರ್ಯವನ್ನೊಳಗೊಂಡಿರಬೇಕು, ಎಂದರೆ ಅಧ್ಯಾತ್ಮ ಪರವಾಗಿರಬೇಕು; ಒಳ್ಳೆಯ ಭಕ್ತಿಭಾವವಿರಬೇಕು, ವಿರಕ್ತಿಯಿರಬೇಕು; ಪ್ರಾಮಾಣಿಕವಾದ (ಎಂದರೆ ಸಹಜವಾದ) ಮಾತುಗಳಿರಬೇಕು; ಛಂದೋಬದ್ಧವಾಗಿರಬೇಕು. ಆಗತಾನೆ ಅನುಭವಕ್ಕೆ ಬಂದ ಭಾವಕ್ಕೆ ರಸಾಭಿವ್ಯಕ್ತಿಯಿರಬೇಕು. ಇಷ್ಟೂ ಸಾಹಿತ್ಯ ಭಾಗಕ್ಕೆ ಸೇರಿದ ವಿವರಗಳು. ಇನ್ನು ಸ್ವರಶುದ್ಧಿಯಿರಬೇಕು. ತಾಳಲಯದ ಸಂಯೋಗವಿರಬೇಕು.' ಇದು ಸಂಗೀತಭಾಗ.

ಸಂಗೀತ-ಸಾಹಿತ್ಯದ ವಿನಿಯೋಗ ಭಗವದ್ಭಕ್ತಿಯಲ್ಲಿ; ಸನ್ಮಾರ್ಗಕ್ಕೆ ಸಾಧನೆಯಾಗುವುದು ಭಕ್ತಿಯಿಂದ ಕೂಡಿದ ಸಂಗೀತಜ್ಞಾನದಿಂದಲೇ ಎಂದು ಅವರ ಇನ್ನೊಂದು ಕೃತಿ ಹೇಳುತ್ತದೆ. ದೇವರು 'ನಾದತನು' ವಾದರೆ, ಸಂಗೀತ ನಾದೋಪಾಸನೆಯಾಗಬೇಕು. ಸಂಗೀತದಿಂದ ಶ್ರವಣರಂಜನೆಯಾದರೆ ಸಾಲದು; ಚಿತ್ತಶುದ್ಧಿಯೂ ಆಗಬೇಕು. ಇದು ಹರಿದಾಸರೆಲ್ಲರೂ ಹಿಡಿದ ಸಂಪ್ರದಾಯ ಸಂಗೀತದ ದೃಷ್ಟಿ. ಹೀಗೆ ಸಂಗೀತದಲ್ಲಿ ಭಾವ (ಸಾಹಿತ್ಯ), ರಾಗ, ತಾಳ (ಸಂಗೀತ), ಮೂರೂ ಬೆರೆಯುತ್ತವೆ. ಭಾವದ ಬೆಳಕಿನಲ್ಲಿ ರಾಗ, ತಾಳಗಳು ಮೂಡಿಕೊಳ್ಳುತ್ತವೆ. ತ್ಯಾಗರಾಜರ ಕೃತಿ ಸ್ಪಷ್ಟಪಡಿಸಿದ್ದು ಇದನ್ನು. ನೈಜವಾದ ಭಾವದ ಸೊಬಗನ್ನೂ ಅದರ ಜಾಡನ್ನು ಹಿಡಿದು ರಾಗ-ತಾಳಗಳು ಮೈಮರೆಸುವಂತೆ ಮೈದಳೆಯುವ ಮಾಟವನ್ನು ತ್ಯಾಗರಾಜರ ಕೃತಿಗಳಲ್ಲಿ ಮತ್ತು ಶ್ಯಾಮಶಾಸ್ತ್ರಿಗಳ ರಚನೆಗಳಲ್ಲಿ ನಾವು ವಿಶೇಷವಾಗಿ ಕಾಣಬಹುದು. ಸಂಗೀತ-ಸಾಹಿತ್ಯಗಳೆರಡನ್ನೂ ಸಮಪ್ರಧಾನವಾಗಿ ಮಾಡಿದ ಮಹನೀಯರು ಇವರಿಬ್ಬರು.

ಆದರೆ, ಆ ಕಾಲದಲ್ಲೇ ಪದಗಳೋ ಕೀರ್ತನೆಗಳೋ ಭಗವದ್ಭಕ್ತಿಯ ಭರದಲ್ಲಿಯೂ ಮೈದಳೆಯುತ್ತಿದ್ದವು ಎನ್ನಲು ನಿದರ್ಶನ ತಂಜಾವೂರು ವಿಜಯರಾಘವನಾಯಕನ (೧೬೩೩-೧೬೭೩) ಕಾಲದಲ್ಲೇ ಇದ್ದ ಪೆದ್ದ ದಾಸರಿ ಎಂಬುವರ ರಚನೆಗಳು. ಪುರದರದಾಸರ ಮತ್ತು ಅಣ್ಣಮಾಚಾರ್ಯರ ಪರಂಪರೆಯಲ್ಲೇ ಬಂದು, ಅವರ ಪ್ರಭಾವವನ್ನು ತಳೆದು ಇವರು ಸಿಂಹಾಚಲದ ವರಾಹ ನರಸಿಂಹನ ಭಕ್ತರು; ನರಸ್ತುತಿಯನ್ನು ಮಾಡಲೊಪ್ಪದವರು. ಅವರ ತೆಲುಗು, ಸಂಸ್ಕೃತ ರಚನೆಗಳಲ್ಲಿ ಭಕ್ತಿಯಿಂದ ಕಾಣಿಸಿಕೊಂಡ ಸಾಹಿತ್ಯವೇ ಇರುವುದು.

ಈ ಮುಮ್ಮೂರ್ತಿಗಳ ನಂತರ ಇವರ ಮಟ್ಟವನ್ನೇರಬಲ್ಲ ವಾಗ್ಗೇಯಕಾರರು ಬರಲಿಲ್ಲವೆಂದು ಒಪ್ಪಿಕೊಳ್ಳಬೇಕು. ಇದಕ್ಕೆ ಕಾರಣವೂ ಇದೆಯೆನ್ನಿ. ಮುಂದಿನ ಕಾಲದಲ್ಲಿ ಸಂಗೀತದ ಪಾರಮಾರ್ಥಿಕ ಸಂದರ್ಭ ಶಿಥಿಲವಾಗುತ್ತಾ ಬಂದಿದ್ದು ಲೌಕಿಕಪ್ರಸಕ್ತಿ ಹೆಚ್ಚಿ, ಸಂಪ್ರದಾಯ ಸಂಗೀತ ಮುಂದೆ ಬೆಳೆದುದು ರಾಜಾಸ್ಥಾನಗಳಲ್ಲೇ, ಶ್ರೀಮಂತರ ಆಶ್ರಯದಲ್ಲಿಯೇ, ರಸಿಕರ ಒತ್ತಾಸೆಯಿಂದಲೇ. ಕಲೆಗೆ ಸಹಜವಾದ ಶೃಂಗಾರ, ರಂಜನೆಗಳ ಪಾತ್ರ ಸಂಪ್ರದಾಯಸಂಗೀತದಲ್ಲೂ ದೊಡ್ಡದಾಯಿತು. ಭಕ್ತಿಯ ಚೌಕಟ್ಟೇನೋ ಹೆಸರಿಗೆ ಮಾತ್ರ ಉಳಿದುಕೊಂಡಿತು. ಆದರೆ ಭಕ್ತಿಯ ನಿರ್ಭರತೆ ಸೊರಗಿ, ಚೌಕಟ್ಟು ಟೊಳ್ಳಾಯಿತು. ದೇವರ ಹೆಸರನ್ನು ಹೇಗಾದರೂ ಸಾಹಿತ್ಯದಲ್ಲಿ ತೂರಾಡಿ ಒದಗಿಸಿದರೆ, ಭಕ್ತಿಗೆ ತೆರಬೇಕಾದ ಸುಂಕ ಸಂದಿತು ಎಂದು ಭಾವಿಸುವ ವಾಗ್ಗೇಯಕಾರರೇ ಹೆಚ್ಚಾದರು. ಬದುಕಿನಲ್ಲಿ ಪಾರಮಾರ್ಥಿಕ ಹಂಬಲವಿರದೆ, ಭಕ್ತಿಯ ಸ್ವಾರಸ್ಯವನ್ನು ಅನುಭವಿಸದೆ, ಭಾವುಕತೆಯ ಪ್ರಭಾವವಿರದೆ ಯಾವ ಬಗೆಯ ಭಕ್ತಿಕವಿತೆ ತೋರಿಕೊಂಡೀತು?

ಸಂಗೀತದಲ್ಲಿ ಪ್ರತ್ಯೇಕವಾದ ಪ್ರಾವೀಣ್ಯವಿರಬಹುದು, ಸಾಹಿತ್ಯದ ಮೇಲೂ ಹಾಗೆಯೇ ಪ್ರಭುತ್ವವಿರಬಹುದು. ಆದರೆ ಎರಡೂ ಒಂದೇ ಚೌಕಟ್ಟಿನಲ್ಲಿ ಕೂಡಿಕೊಳ್ಳುವಾಗ ಭಕ್ತಿಯ ಅಥವಾ ಭಾವುಕತೆಯ ಬೆಸುಗೆ ಅಗತ್ಯವಾಗುತ್ತದೆ. ಇದು ದುರ್ಲಭವಾದರೆ ವಾಗ್ಗೇಯಕ್ಕೆ ಶೋಭೆಯಿರುವುದು ಹೇಗೆ? ನೂರಾರು ಮಂದಿ ವಾಗ್ಗೇಯಕಾರರೆನಿಸಿಕೊಳ್ಳುವವರೇನೋ ಇದ್ದಾರೆ. ಆದರೆ ಅವರೆಲ್ಲರೂ ಶಾಸ್ತ್ರದಲ್ಲಿ ಹೇಳುವ ವಾಗ್ಗೇಯಕಾರ ಲಕ್ಷಣಗಳಿಗೆ ಲಕ್ಷ್ಯವಾಗಲಾರರು. ಇಲ್ಲಿಯೂ ಲಕ್ಷ್ಯಲಕ್ಷಣಗಳಿಗೆ ವಿರೋಧವೇ!

ಇನ್ನೇನಿರದಿದ್ದರೂ, 'ಶಬ್ದಾನುಶಾಸನ ಜ್ಞಾನ' (ವ್ಯಾಕರಣದ ಪರಿಚಯ), 'ಛಂದಃ ಪ್ರಭೇದವೇದಿತ್ವ' (ಬೇರೆ ಬೇರೆ ಛಂದಸ್ಸುಗಳ ತಿಳಿವಳಿಕೆ), 'ರಸಭಾವ ಪರಿಜ್ಞಾನ' (ರಸವನ್ನು ಹೊರಸೂಸುತ್ತ ಭಾವಗಳನ್ನು ಸ್ಪಷ್ಟಪಡಿಸುವುದು ಹೇಗೆಂಬ ಅರಿವು), 'ಅಲಂಕಾರೇಷು ಕೌಶಲ' (ಶಬ್ದಾಲಂಕಾರ ಮತ್ತು ಅರ್ಥಾಲಂಕಾರಗಳಲ್ಲಿ ಸಾಮರ್ಥ್ಯ('ಪ್ರಬಂಧೇಷು ಕೌಶಲ') 'ಶಬ್ದಾಲಂಕಾರ ಪ್ರಗಲ್ಭತಾ' (ಗೇಯ ರೂಪವಾದ ನುಡಿಕಟ್ಟಿನ ಮೇಲೆ ಹಿಡಿತ) ಮತ್ತು 'ಅನುಚ್ಛಿಷ್ಟೋಕ್ತಿ ನಿರ್ಬಂಧ' (ಹಿಂದಿನವರ ಕೃತಿಗಳಿಂದ ಧಾತು ಭಾಗಗಳನ್ನೋ ಮಾತಿನ ಭಾಗಗಳನ್ನೋ ಕದ್ದು ತಮ್ಮದೆಂದು ಕಾಣಿಸಿಕೊಳ್ಳದೆ ಇರುವುದು) ಇಷ್ಟಾದರೂ ಇರಬೇಕಲ್ಲವೆ? ಧಾತುವನ್ನೂ ಮಾತನ್ನೂ ಒಟ್ಟಿಗೆ ರಚಿಸುವವರು ಎಂಬಷ್ಟು ಅರ್ಥದಲ್ಲಿ ಇವರು ವಾಗ್ಗೇಯಕಾರರು ಅಷ್ಟೇ!

ಆದರೂ ಇವರಲ್ಲಿ ಕೆಲವರಿಂದ ಉತ್ತಮವಾದ ಗೇಯ ಸಾಹಿತ್ಯ, ಪ್ರೌಢವಾದ ಸಂಗೀತರಚನೆ ಸಾಗಿಬಂದಿದೆ. ಕೆಲವು 'ಕೈಶಿಕೀ' ವೃತ್ತಿಯವು; ಎಂದರೆ ಕೋಮಲವಾದ ರಚನೆಗಳು, ಶೃಂಗಾರ ಮತ್ತು ಕರುಣ ರಸಗಳನ್ನು ತೋರಿಸುವಂಥವು. ಹಲವು ಕೃತಿಗಳಲ್ಲಿ ಗೇಯಗುಣವೂ ಸೊಗಸಾಗಿಯೇ ಇರುತ್ತದೆ. ಆದರೆ ಒಟ್ಟಾರೆ ಪರಿಶೀಲಿಸಿದಾಗ ಈಚಿನ ವಾಗ್ಗೇಯಕಾರರಲ್ಲಿ ಧಾತುವಿನಲ್ಲಿ ಕಾಣುವ ಪ್ರೌಢಿಮೆ ಮಾತಿನಲ್ಲಿ ಕಾಣುವುದಿಲ್ಲ; ಅರ್ಥಗೌರವವಾಗಲಿ ಭಾವಸಂಪತ್ತಿಯಾಗಲಿ ಕಡಮೆಯೆ.

ಈ ಮಾತಿಗೆ ಅಪವಾದಗಳಿಲ್ಲವೆಂದೇನು ಅಲ್ಲ. ನಿದರ್ಶನಕ್ಕೆ, ನಮ್ಮ ಕಾಲದಲ್ಲೇ ತಮಿಳು ವಾಗ್ಗೇಯಕಾರರಾಗಿದ್ದ ಪಾಪನಾಶಂ ಶಿವನ್ ಅವರ ಕೃತಿಗಳು ಎಲ್ಲ ದೃಷ್ಟಿಯಿಂದಲೂ ಅತ್ಯುತ್ತಮವಾದುವು; ಅವುಗಳಲ್ಲಿ ಪ್ರಾಮಾಣಿಕವಾದ ಭಕ್ತಿಯೂ, ನೈಜವಾದ ಭಾವುಕತೆಯೂ ಎದ್ದು ಕಾಣುತ್ತವೆ, ರಾಗದ ಸ್ವರೂಪವು ಸ್ಪಷ್ಟವಾಗುತ್ತದೆ. ತ್ಯಾಗರಾಜಸ್ವಾಮಿಗಳ ಪ್ರಭಾವವನ್ನು ತಮ್ಮಲ್ಲಿ ನೈಜವಾಗಿ ಅಳವಡಿಸಿಕೊಂಡದ್ದರಿಂದ ಅವರು ಹೀಗೆ ಕೃತಿರಚನೆ ಮಾಡುವುದೂ ಸಾಧ್ಯವಾಯಿತು ಎಂದು ಅವರೇ ಹೇಳಿಕೊಂಡಿದ್ದಾರೆ.

೪

ಸಂಪ್ರದಾಯ ಸಂಗೀತಕ್ಕೆ ಹೊಂದಿಸಿರುವ ಸಾಹಿತ್ಯದಲ್ಲಿ ವೈವಿಧ್ಯವೂ ಸಂಗೀತ ರಚನೆಗಳ ವೈವಿಧ್ಯವನ್ನನುಸರಿಸಿಯೇ ಇರುವುದು ಸಹಜ. ಕೀರ್ತನೆ, ಗೀತ, ಸ್ವರಜತಿ, ಪದ, ವರ್ಣ, ತಿಲ್ಲಾನ, ಜಾವಳಿ, ದರು, ಮಂಗಳ, ಚೂರ್ಣಿಕೆ, ತರಂಗ ಮೊದಲಾದ ವಿಭಾಗ ಎಲ್ಲರಿಗೂ ತಿಳಿದದ್ದೇ. ವಾಗ್ಗೇಯಕಾರನ ಒಲವು, ಪ್ರತಿಭೆ, ವ್ಯುತ್ಪತ್ತಿ, ಪ್ರೇರಣೆ ಮೊದಲಾದ ಹಲವು ವಿವರಗಳನ್ನು ಅವಲಂಬಿಸಿ ಈ ವೈವಿಧ್ಯ; ಅಷ್ಟು ಮಾತ್ರವಲ್ಲದೆ ಯುಗಧರ್ಮವೂ ಕೊಂಚಮಟ್ಟಿಗೆ ಕೆಲಸ ಮಾಡುತ್ತದೆ. ಮೊದಲಿಗೆ ಬಳಕೆಯಲ್ಲಿದ್ದು ಶಾಸ್ತ್ರಗ್ರಂಥಗಳಲ್ಲಿ ಉಲ್ಲೇಖಗೊಂಡಿರುವ ನೂರಾರು ಪ್ರಬಂಧಗಳು ಹರಿದಾಸರು ಕಾಣಿಸಿಕೊಂಡ ಕಾಲಕ್ಕೇ ಕಣ್ಮರೆಯಾಗಿದ್ದುವು. ಹರಿದಾಸರ ಕಾಲದಲ್ಲಿ ಬಳಕೆಗೆ ಬಂದ ಪದ, ವೃತ್ತನಾಮ, ಸುಳಾದಿ, ಉಗಾಭೋಗ, ಗುಂಡಕ್ರಿಯೆ, ಭ್ರಮರಗೀತ ಮೊದಲಾದ ಬಗೆಗಳೂ ತ್ಯಾಗರಾಜರ ಕಾಲಕ್ಕಾಗಲೇ ಬಳಕೆಯಿಂದ ಜಾರಿದ್ದುವು. ತ್ಯಾಗರಾಜರಿಂದಾಗಿ ಕೀರ್ತನೆಗಳು ಜನಪ್ರಿಯವಾದುವು. ಮುಂದೆ ಸಂಗೀತವಿನಿಕೆಯೆಂದರೆ ಕೀರ್ತನೆಗಳದ್ದೇ ಮೇಲುಗೈ. ಅವರ ಕಾಲಕ್ಕೆ

ಮೊದಲೇ ಇದ್ದ ಪದ, ವರ್ಣ, ಸ್ವರಜತಿ, ದರು, ತಿಲ್ಲಾನ ಮೊದಲಾದುವು ತ್ಯಾಗರಾಜರ ಮನೋಧರ್ಮಕ್ಕೆ ಒಗ್ಗಿಬರಲಿಲ್ಲ. ಕಲಿಕೆಯ ಹಂತದಲ್ಲೋ ವಿನಿಕೆಯ ಕೊನೆಯಲ್ಲಿ ರಂಜನೆಗೆಂದೊ ಕೆಲವು ಪ್ರಕಾರಗಳು ಉಳಿದುಕೊಂಡವು ಅಷ್ಟೆ.

ತ್ಯಾಗರಾಜರ ಸ್ವಭಾವದಲ್ಲಿ ಆಧ್ಯಾತ್ಮಿಕತೆಯ ಪಾತ್ರ ಹೆಚ್ಚಿನದು. ಇದರಿಂದಾಗಿ ನಮ್ಮ ಸಂಪ್ರದಾಯಸಂಗೀತದಲ್ಲೂ ಅಧ್ಯಾತ್ಮದ ಪ್ರಸಕ್ತಿ ರೂಢಮೂಲವಾಗಿದೆ. ಅಧ್ಯಾತ್ಮದ ವಿವರಗಳನ್ನು ಸ್ಪಷ್ಟಪಡಿಸುವ ಸಾಹಿತ್ಯವೇ ಸಂಗೀತಕ್ಕೆ ಅಗತ್ಯವಾಯಿತು. ಸಂಗೀತದಲ್ಲಿ ಸಾಹಿತ್ಯ ಪ್ರಧಾನವಾದುದೂ ಈ ಕಾರಣದಿಂದಲೆ. ಆದರೆ ಶೃಂಗಾರಕ್ಕೂ ಸಂಗೀತಕ್ಕೂ ಇರುವ ನಂಟು ಅಧ್ಯಾತ್ಮಕ್ಕೂ ಸಂಗೀತಕ್ಕೂ ಇರುವ ನಂಟಿಗಿಂತ ಹೆಚ್ಚು ಸಹಜವಾದುದು, ಪ್ರಾಚೀನವಾದುದು, ನಿಕಟವಾದುದು, ವ್ಯಾಪಕವಾದುದು. ರಸಿಕರೇನೋ ಶೃಂಗಾರಕ್ಕೂ ಆಧ್ಯಾತ್ಮಕ್ಕೂ ನಂಟನ್ನು ಒದಗಿಸಿ, ಸಂಗೀತವನ್ನು ಸಂಧಿಯಾಗಿ ಏರ್ಪಡಿಸಿ ಕೊಂಡರಷ್ಟೆ. ಭಗವತ್ಸೇವೆಗೆಂದೇ ತಮ್ಮ ಬಾಳನ್ನು ಮುಡಿಪಿಟ್ಟ ತಾಳ್ಳಪಾಕದ ಅಣ್ಣಮಾಚಾರ್ಯರೂ ಶೃಂಗಾರ ಸಂಕೀರ್ತನೆಗಳನ್ನು ರಚಿಸಲಿಲ್ಲವೆ? ಭಗವದ್ಭಕ್ತಿಯೆ ಮುಖ್ಯರಸವಾಗಿ ಉಳ್ಳ ಹರಿದಾಸರ ರಚನೆಗಳಲ್ಲೇ ಶೃಂಗಾರ ಎದ್ದು ಕಾಣುವುದಿಲ್ಲವೆ? ಸಂನ್ಯಾಸಿಯಾದ ನಾರಾಯಣ ತೀರ್ಥರ ತರಂಗಗಳಲ್ಲಿ ಶೃಂಗಾರವಿಲ್ಲವೆ? ಮುವ್ವ ವೇಣುಗೋಪಾಲನ ಅನನ್ಯ ಭಕ್ತನಾದ ಕ್ಷೇತ್ರಯ್ಯ ರಚಿಸಿದ್ದು ವಿಶೇಷವಾಗಿ ಶೃಂಗಾರ ಪದಗಳನ್ನೇ. ತ್ಯಾಗರಾಜರಿಗೆ ಪೂರ್ವದಲ್ಲೆ ಸಂಪ್ರದಾಯ ಸಂಗೀತಕ್ಕೆ ಇದ್ದ ಆಧ್ಯಾತ್ಮಿಕ ಆಸರೆ ಬಡವಾಗುತ್ತ ಬಂದಿದ್ದಿತು.

ಕ್ಷೇತ್ರಯ್ಯನ ಪದಗಳಲ್ಲಿ ಅಧ್ಯಾತ್ಮದ ಅರ್ಥವನ್ನು ಗುರುತಿಸುವುದು ಕಷ್ಟವಲ್ಲ. ಆದರೆ ಅವು ಪ್ರಧಾನವಾಗಿ ಭಾವಪದಗಳು. ಕ್ಷೇತ್ರಯ್ಯನು ಮುಂದೆ ಬಂದ ತ್ಯಾಗರಾಜರಂತೆ 'ರಾಮುನಿ ಸನ್ನಿಧಿ ಸೇವ'ಕ್ಕೇ ಅಂಟಿಕೊಂಡಿರಲಿಲ್ಲ. ತಂಜಾವೂರು, ಮಧುರೆ, ಗೋಲ್ಕೊಂಡ ಅರಸರ ಆಶ್ರಯವನ್ನು ಪಡೆದುಕೊಂಡಿದ್ದವನು; ಆಯಾ ಅರಸರನ್ನು ಕುರಿತು ಭಾವಪದಗಳನ್ನು ರಚಿಸಿದವನು. ಅವನ ಪದಗಳಲ್ಲಿ ಅಧ್ಯಾತ್ಮದ ಕಳೆಗಿಂತ ಹೆಚ್ಚಾಗಿ ಶೃಂಗಾರ, ವಿಪ್ರಲಂಭ ಮೊದಲಾದ ಭಾವಗಳನ್ನು ಹೊರಸೂಸುವ ಕೌಶಲವೇ ಇದೆ. ಶೃಂಗಾರದೊಂದಿಗೆ ನರಸ್ತುತಿಯೂ ಹಲವೆಡೆ ಕಾಣಿಸಿಕೊಳ್ಳುತ್ತದೆ. ಅಭಿನಯಕ್ಕೂ ಒಗ್ಗುವಂಥ ಪದಗಳು ಅವು. ಭಾವಾಭಿನಯಕ್ಕೆ ತಕ್ಕಂತೆ ರಾಗ ಸಂಯೋಜನೆ ಮಾಡಿರುವುದು ಕ್ಷೇತ್ರಯ್ಯನ ಹೆಗ್ಗಳಿಕೆ. ಸಾಹಿತ್ಯಕ್ಕೆ ತಕ್ಕಂತೆ ಸಂಗೀತವೆಂದರೆ ಇವನದ್ದು. ಅಧ್ಯಾತ್ಮವನ್ನು ಇಂಗಿತವೆಂದೋ ಧ್ವನಿಯೆಂದೋ ಕಲ್ಪಿಸಿಕೊಳ್ಳಬೇಕಷ್ಟೆ.

ಮುಂದೆ ಇವನಿಂದ ಪ್ರೇರಣೆಯನ್ನು ಪಡೆದುಕೊಂಡು ಮುವ್ವಲೂರು ಸಭಾಪತಿ, ಘನಂ ಕೃಷ್ಣಯ್ಯ, ರಾಮಭಾರತಿ, ವಾಸುದೇವ ಕವಿ, ಪರಿಮಳ ರಂಗ ಮೊದಲಾದವರು ತೆಲುಗು, ತಮಿಳು, ಸಂಸ್ಕೃತಗಳಲ್ಲಿ ಪದಗಳನ್ನು ರಚಿಸಿದರು; ಸಂಪ್ರದಾಯ ಸಂಗೀತದ ಆಯಕಟ್ಟಿನಲ್ಲಿ ಪದಕ್ಕೊಂದು ಸ್ಥಾನವನ್ನು ಒದಗಿಸಿದರು. ಅಷ್ಟು ಮಾತ್ರವಲ್ಲದೆ ಸಂಗೀತಕ್ಕೂ ನೃತ್ಯಕ್ಕೂ ನಂಟು ನಿಕಟವಾಯಿತು. ಅರಸರ ಆಶ್ರಯದಲ್ಲಿ, ರಸಿಕರ ಒತ್ತಾಸೆಯಿಂದ ಸಂಪ್ರದಾಯಸಂಗೀತದಲ್ಲಿ ಅಧ್ಯಾತ್ಮದ ಪಾತ್ರ ನೆಪಮಾತ್ರಕ್ಕೆ ಉಳಿದುಕೊಂಡು ಶೃಂಗಾರದ ಊಳಿಗಕ್ಕೆ ಸಂದಿತು.

ವಾಸುದೇವ ಕವಿಯ ಸಂಸ್ಕೃತ, ತಮಿಳು, ತೆಲುಗು, ಮಣಿಪ್ರವಾಳ ಪದಗಳಲ್ಲಿ ಉತ್ತಮವಾದ

ಸಾಹಿತ್ಯ ಭಾಗವಿದೆ; ಭಾವಕ್ಕೆ ಹೊಂದಿಕೊಳ್ಳುವ ರಾಗಸಂದರ್ಭವೂ ಇದೆ. ಇವನ 'ದೌತ್ಯ ಪಂಚಕ'ವೆಂಬ ಸಂಸ್ಕೃತ ಪ್ರಬಂಧದಲ್ಲಿ ದರುಗಳನ್ನೂ ರಚಿಸಿರುವುದಿದೆ. ಗಿರಿರಾಜ ಕವಿ, ಸೋಮು ಕವಿ, ಪಟ್ಟಾಭಿ ರಾಮಯ್ಯ ಮೊದಲಾದವರ ಶೃಂಗಾರ ಪದಗಳು ಸಾಹಿತ್ಯ ಪ್ರಮುಖವಾದ ಸಂಗೀತ ರಚನೆಗಳು.

ಆಧ್ಯಾತ್ಮಿಕವಾದ ಪ್ರೇರಣೆಯಿಂದಲೇ ಪದಗಳನ್ನೂ ಕೀರ್ತನೆಗಳನ್ನೂ ರಚಿಸಿದವರಲ್ಲಿ, ಪುರಂದರದಾಸರ ಮತ್ತು ಅಣ್ಣಮಾಚಾರ್ಯರ ಮೇಲ್ಪಂಕ್ತಿಯನ್ನನುಸರಿಸಿ ತೆಲುಗು-ಸಂಸ್ಕೃತಗಳಲ್ಲಿ ಕೃತಿರಚನೆ ಮಾಡಿದ ಪೆದ್ದದಾಸರಿ ಒಬ್ಬರು. ತಂಜಾವೂರು ವಿಜಯರಾಘವನಾಯಕನ ಕಾಲದಲ್ಲೇ (೧೬೩೩-೧೬೭೩) ಇದ್ದವರು; ಸಿಂಹಾಚಲದ ವರಾಹನರಸಿಂಹನ ಭಕ್ತರು; 'ನಾರಸಿಂಹನಿ ಪಾಡಿನ ನೋಟ ನೂರಸಿಂಪನಿ ಪಾಡನು' ಎಂದು ನರಸ್ತುತಿಯನ್ನು ಹೀನಾಯವಾಗಿ ಕಂಡವರು. ಆದರೆ ಇಂಥವರ ಪ್ರಭಾವ ಎಷ್ಟರ ಮಟ್ಟಿಗೆ ಇದ್ದೀತು?

ಸಂಪ್ರದಾಯಸಂಗೀತದ ಈಗಣ ಸಾಹಿತ್ಯ ಪ್ರಕಾರಗಳ ಕಲ್ಪನೆ ಸ್ಪಷ್ಟವಾದದ್ದು ತಂಜಾವೂರು ರಾಜಾಸ್ಥಾನದಲ್ಲಿಯೇ. ಪ್ರತಾಪಸಿಂಹನೆಂಬ ಅರಸನ (೧೭೩೯-೧೭೬೩) ಆಸ್ಥಾನವಲ್ಲಿದ್ದ ಮೇಲಟ್ಟೂರು ವೀರಭದ್ರಯ್ಯನನ್ನು 'ಮಾರ್ಗದರ್ಶಿ'ಯೆಂದು ಕರೆಯುವುದಿದೆ. ಸ್ವರಜತಿ, ವರ್ಣ, ರಾಗಮಾಲಿಕೆ, ತಿಲ್ಲಾನ, ಕೀರ್ತನೆ ಈ ಪ್ರಕಾರಗಳಲ್ಲಿ ರಚನೆ ಮಾಡಿದವರಲ್ಲಿ ಈತನೆ ಮೊದಲಿಗನೆಂದು ಹೇಳುತ್ತಾರೆ. ಈತನ ಹುಸೇನಿ ರಾಗದ ಸ್ವರಜತಿಯ ಪ್ರೇರಣೆಯಿಂದಲೇ ಪದವರ್ಣ ಮೈದಳೆಯಿತೆಂದು ಹೇಳುತ್ತಾರೆ. 'ಅಚ್ಯುತವರದ' ಮತ್ತು 'ಪ್ರತಾಪರಾಮ' ಎಂಬೆರಡು ಈತನ ಮುದ್ರಿಕೆ. 'ಉನ್ನತ ಪುರೀಶ' ತನ್ನ ಇಷ್ಟದೈವವನ್ನು ಕುರಿತದ್ದು. ರಾಜಾಸ್ಥಾನದಲ್ಲಿರುತ್ತ ಮಹಾರಾಷ್ಟ್ರ ಅರಸರ ಮನವೊಲಿಸಲು ಉತ್ತರಾದಿ ಸಂಗೀತದ 'ತರಾನಾ' ಪದ್ಧತಿಯಲ್ಲಿ ತೆಲುಗು ಭಾಷೆಯ ತಿಲ್ಲಾನಗಳನ್ನು ರಚಿಸಿದ್ದು ಮಾತ್ರವಲ್ಲದೆ, ಅರಸರೇ ಮರಾಠಿಯಲ್ಲಿ ತಿಲ್ಲಾನಗಳನ್ನು ರಚಿಸಲು ನೆರವಾದವನು ಈತ. ಅರಸರ ಓಲಗದಲ್ಲಿ ಕುಣಿತಕ್ಕೆ ಎತ್ತಿದ್ದು ಈ ಪ್ರಕಾರದ ರಚನೆ. ಪದದಲ್ಲಿ ಭಾವ ಮತ್ತು ಅಭಿನಯ ಮುಖ್ಯವಾದರೆ ತಿಲ್ಲಾನದಲ್ಲಿ ಲಯ ಮತ್ತು ನೃತ್ತ. ಹೀಗಾಗಿ ಪದದಲ್ಲಿರುವಂಥ ಸಾಹಿತ್ಯವೇನು ತಿಲ್ಲಾನಕ್ಕೆ ಬೇಕಾದುದಿಲ್ಲ.

ವೀರಭದ್ರಯ್ಯನ ಕಿರಿಯ ಸಮಕಾಲಿಕನಾಗಿ, ಅದೇ ಆಸ್ಥಾನದಲ್ಲಿದ್ದ 'ಸರಸ ಸಾಹಿತ್ಯ-ಮಧುರ-ವಾಗ್‌ಝರಿ' ಮಾತೃಭೂತಯ್ಯ ಸಂಗೀತವನ್ನು ನಾಟಕದಲ್ಲಿ ಅಳವಡಿಸಿ ಹೊಸದೊಂದು ಆಯಾಮವನ್ನು ಕಲ್ಪಿಸಿಕೊಟ್ಟ. ಅವನ 'ಪಾರಿಜಾತಾಪಹರಣ' ಒಂದು ಸಂಗೀತ ನಾಟಕ. ಅದರಲ್ಲಿ ಯಕ್ಷಗಾನ ತೋಡಯಗಳೂ, ದರುಗಳೂ, ಮಂಗಳಗಳೂ, ಶೋಭನ ಪದಗಳೂ, ಚೂರ್ಣಿಕೆಗಳೂ, ಪದಗಳೂ ಕಾಣಿಸಿಕೊಳ್ಳುತ್ತವೆ. ಇವೆಲ್ಲ ಭಾವಪ್ರಧಾನವಾದ ರಚನೆಗಳು; ರಸಾಭಿವ್ಯಕ್ತಿಗೆಂದು ಸಿದ್ಧವಾದುವು. ಇದರಿಂದ ಸ್ಫೂರ್ತಿ ಪಡೆದ ಮೇಲಟ್ಟೂರು ವೆಂಕಟರಾಮ ಶಾಸ್ತ್ರಿಯ ಸಂಗೀತ ನಾಟಕಗಳಲ್ಲಿ ಪದವರ್ಣ (ಆನಂದಭೈರವಿ) ಮೊಟ್ಟ ಮೊದಲಿಗೆ ಕಾಣಿಸಿಕೊಂಡಿತು. ಸಾಹಿತ್ಯ ಪ್ರಧಾನವಾದ ಇದರಲ್ಲಿ ಧಾತು-ಮಾತುಗಳ ಒಕ್ಕೂಟವನ್ನು ಗಮನಿಸಬೇಕು. ಇದೇ ಸಮಯದಲ್ಲಿ ಅಲ್ಲಿಯೇ ಪಚ್ಚಿಮಿರಿಯಂ ಆದಿಯಪ್ಪಯ್ಯನ ತಾನವರ್ಣ ಮೈದಳೆಯಿತು. ಇದಾದರೋ ರಾಗದ ಚಿತ್ರಣಕ್ಕೆಂದೇ ಸಿದ್ಧವಾದುದು; ಸಾಹಿತ್ಯದ ಪಾತ್ರ ಗೌಣವಾದುದು.

ಹೀಗೆ ತ್ಯಾಗರಾಜರಿಗೆ ಪೂರ್ವದಲ್ಲೇ ಹಲವಾರು ಸಂಗೀತ-ಸಾಹಿತ್ಯ ಪ್ರಕಾರಗಳು ತಂಜಾವೂರು

ಅರಸರ ಒತ್ತಾಸೆಯಿಂದ ರೂಪು ತಳೆದಿದ್ದುವು. ತ್ಯಾಗರಾಜರ ವಿದ್ಯಾಗುರುವಾದ ಸೊಂಟಿ ವೆಂಕಟರಮಣಯ್ಯನ ತಂದೆ ವೆಂಕಟಸುಬ್ಬಯ್ಯನೂ ತುಳಜಾಜಿ ಮಹಾರಾಜನನ್ನು ಹಾಡಿ ಹೊಗಳುವ ಬಿಲಹರಿ ವರ್ಣವನ್ನು ರಚಿಸಿದ್ದನು. ಈ ಹಲವಾರು ಪ್ರಕಾರಗಳಲ್ಲಿ ಭಜನ ಪದ್ಧತಿಗೆಂದೇ ರಚಿತವಾದ ಕೀರ್ತನೆಗಳೂ ಇದ್ದುವು. ಉತ್ತುಕ್ಕಾಡು ವೆಂಕಟಸುಬ್ಬಯ್ಯರ 'ರಸಶಬ್ದ' ಕೀರ್ತನೆಗಳು ಕೃಷ್ಣಪರವಾಗಿದ್ದು ಬಹುವಾಗಿ ಜನಪ್ರಿಯವಾದುವು. ಇವುಗಳಲ್ಲಿ ಸಂಗೀತಭಾಗವೂ ಸಾಹಿತ್ಯಭಾಗವೂ ಸಮನಾಗಿಯೇ ಮೇಲ್ಮಟ್ಟದವು. ನಾರಾಯಣ ತೀರ್ಥರ ತರಂಗಗಳು, ಶ್ರೀಧರ ಅಯ್ಯಾವಾಳ್ ಮತ್ತು ಬೋಧೇಂದ್ರ ಸದ್ಗುರು ಇವರ ನಾಮ ಸಂಕೀರ್ತನ ಸಾಹಿತ್ಯ ಮತ್ತು ಸದಾಶಿವ ಬ್ರಹ್ಮೇಂದ್ರರ ಕೀರ್ತನೆಗಳು ಸಂಪ್ರದಾಯಸಂಗೀತದಲ್ಲಿ ಭಕ್ತಿಯ ಪುನರುಜ್ಜೀವನಕ್ಕೆ, ಮತ್ತು ಮೇಲ್ಮೆಗೆ, ನೆರವಾದುವು. ಈ ಹಿನ್ನೆಲೆಯಿಂದ ಮೈದಳೆದು ಸಂಗೀತವನ್ನು ಆಧ್ಯಾತ್ಮಿಕ ಸಾಧನೆಯಾಗಿ ಉಳಿಸಿ, ಬೆಳೆಸಿದವರು ತ್ಯಾಗರಾಜ ಸ್ವಾಮಿಗಳು.

ಆದರೆ ತ್ಯಾಗರಾಜರ ಅನಂತರ ವಾಗ್ಗೇಯಕಾರರಾಗಿ ಮೆರೆದ ಅವರ ಶಿಷ್ಯ-ಪ್ರಶಿಷ್ಯರೂ ಇತರರೂ ತಮ್ಮ ವೃತ್ತಿಯಲ್ಲೂ ಪ್ರವೃತ್ತಿಯಲ್ಲೂ ಭಕ್ತಿಗೊಂದು ಸ್ಥಾನವನ್ನು ಸಲ್ಲಿಸಿದರಾದರೂ ಭಕ್ತಿಯ ಅಗತ್ಯವನ್ನು ಮರೆಯಲಿಲ್ಲ. ವ್ಯವಹಾರದಲ್ಲಿ ನರಸ್ತುತಿಯ ಲೌಕಿಕ ಪ್ರಯೋಜನವನ್ನೂ ಕಂಡುಕೊಂಡರು. ಅವರು ವಿರಕ್ತಿಗಿಂತ ಶೃಂಗಾರಕ್ಕೆ ಹೆಚ್ಚು ಒಲಿದವರು; ಭಾವುಕತೆಗಿಂತ ಹೆಚ್ಚಾಗಿ ಪ್ರಯತ್ನವನ್ನು ಅವಲಂಬಿಸಿದವರು; ತಂಜಾವೂರಿನ ಮರಾಠೀ ಅರಸರ ಓಲಗದಲ್ಲಿ ನಡೆಯುತ್ತಿದ್ದ ರಸಿಕತೆಯ ಸಮಾರಾಧನೆಯಲ್ಲಿ ಪಾಲ್ಗೊಳ್ಳಲು ಹಾತೊರೆದವರು!

ಅರಸರ ಒತ್ತಾಸೆಯಿಂದ ಮುತ್ತುಸ್ವಾಮಿ ದೀಕ್ಷಿತರ ಬಳಿ ಹಲವಾರು ವರ್ಷ ಶಿಷ್ಯವೃತ್ತಿ ಮಾಡಿದ ಪೊನ್ನಯ್ಯ-ಪಿಳ್ಳೆ ೧೮೦೦ರ ಸುಮಾರಿಗೆ ಹೊಸದೊಂದು ನಾಟ್ಯ ಪ್ರಕಾರವೊಂದನ್ನು ಏರ್ಪಡಿಸಿ ಅದಕ್ಕೆ ಸಾಂಪ್ರದಾಯಿಕವೆಂಬಂಥ ಒಂದು ವೇಷವನ್ನು ತೊಡಿಸಿದನಷ್ಟೆ. ಆಗ ಈ ನಾಟ್ಯಕ್ಕೆ ತಕ್ಕ ಸಂಗೀತ-ಸಾಹಿತ್ಯಗಳನ್ನು ಒದಗಿಸುವತ್ತ ವಾಗೇಯಕಾರರ ದೃಷ್ಟಿ ಹರಿದದ್ದು ಸೋಜಿಗವೇನಲ್ಲ. ಜತಿಸ್ವರ, ಸ್ವರಜತಿ (ಶ್ಯಾಮಶಾಸ್ತ್ರಿಗಳ ಮೂರು ಸ್ವರಜತಿಗಳನ್ನು ಬಿಟ್ಟು), ವರ್ಣ, ತಿಲ್ಲಾನ, ಪದ, ದರು, ಜಾವಳಿ ಮೊದಲಾದುವೆಲ್ಲ ನೃತ್ಯಕ್ಕೆ ಅನುಕೂಲವಾದ ಸಾಹಿತ್ಯ ಭಾಗಗಳೇ; ಇಲ್ಲೆಲ್ಲ ಶೃಂಗಾರದ ಮಧುರರತಿಯ ಮೇಲಾಟವೇ ಇದ್ದರೆ ಆಶ್ಚರ್ಯವೇನು?

ಈ ಯುಗಧರ್ಮದಲ್ಲಿ ಸಾಹಿತ್ಯವನ್ನು ಮೆಟ್ಟಿ ಸಂಗೀತ ನಿಲ್ಲಬೇಕೆಂಬ ಹಂಬಲ ಕಾಣಿಸಿಕೊಳ್ಳುತ್ತದೆ. ಅದರ ನಿಲುವು ಹೀಗೆ; ಸಂಗೀತಕ್ಕೆ ಸ್ವತಂತ್ರವಾದ ಒಂದು ಸ್ಥಾನವಿದೆ; ಸಾಹಿತ್ಯವಾದರೋ ಅದರ ಸೇವೆಗೆ ಸಿದ್ಧವಾಗಿರಬೇಕು ಅಷ್ಟೆ. ಸಂಗೀತದ ಓಟದಲ್ಲಿ ಸಾಹಿತ್ಯ ಮುಗ್ಗರಿಸಿದರೂ, ಮರೆಯಾದರೂ, ಮುಕ್ಕಾದರೂ ನಷ್ಟವೇನಿಲ್ಲ. ಸಂಗೀತದಲ್ಲಿ ರಾಗಭಾವ ಮುಖ್ಯವೇ ಹೊರತು ಅರ್ಥಭಾವವಲ್ಲ. ಸಾಹಿತ್ಯಭಾಗದ ಗೇಯಗುಣವನ್ನು ಹೆಚ್ಚಿಸಲು ಬಳಸುವ ಚಿಟ್ಟಸ್ವರ, ಮಧ್ಯಮಕಾಲ ಸಾಹಿತ್ಯ, ಶೊಲ್ಕಟ್ಟು ಮೊದಲಾದುವೆಲ್ಲ ಕೇವಲ ಸಂಗೀತ ಪರಿಕರಗಳೇ. ಮೇಲಟ್ಟೂರು ವೀರಭದ್ರಯ್ಯನ ಹುಸೇನಿ ರಾಗದ ವರ್ಣದ ಎಲ್ಲ ಅಂಗಗಳಿಗೂ ಸಾಹಿತ್ಯವಿದ್ದಿತು; ಆದರೆ ಮುಂದೆ ತಾನವರ್ಣದಲ್ಲಿ ಸಾಹಿತ್ಯಾಂಶ ಸೊರಗಿ ತೀರ ಅಲ್ಪವಾಗಿ ಉಳಿದುಕೊಂಡಿದ್ದರಿಂದ

ವರ್ಣದ ಸ್ವಾರಸ್ಯ ಮತ್ತು ಜನಪ್ರೀತಿ ಹೆಚ್ಚಲಿಲ್ಲವೆ? ಪದದಲ್ಲಿ ಸಾಹಿತ್ಯ ಹೆಚ್ಚಾಗಿಯೆ ಇರಬಹುದು. ಆದರೆ ಅದರ ಸೊಗಸನ್ನು ಅನುಭವಿಸುವುದು ಅದು ನೃತ್ಯದಲ್ಲಿ ಸೇರಿ, ಅಭಿನಯದ ಮೂಲಕ ಕಾಣಿಸಿಕೊಂಡಾಗಲೆ ಅಲ್ಲವೆ? ಸಂಗೀತಕ್ಕೆ ಸಾಹಿತ್ಯವಿರಲೇಬೇಕು ಎಂದೇನು ನಿಯಮ? ವಾಗ್ಗೇಯಕಾರರಾಗಲಿ, ಗಾಯಕರಾಗಲಿ ತಮ್ಮ ಗಮನ ಹರಿಸಬೇಕಾದುದು ವಾಗರ್ಥದ ಕಡೆಗಲ್ಲ, ಗೇಯಗುಣದ ಕಡೆಗೆ ಇದೊಂದು ವಾದ.

೫

ಈ ವಾದ ರಸಿಕರ ದೃಷ್ಟಿಯಿಂದ ಸರಿಯಾದುದೇ. ಆದರೆ ಸಂಗೀತದಲ್ಲಿ ಸಾಂಪ್ರದಾಯಿಕತೆ ಎಂಬುದೊಂದಿದೆಯಲ್ಲ? ರಂಜನೆಯಷ್ಟೆ ಸಂಗೀತದ ಪ್ರಯೋಜನ ಎನ್ನುವುದು ಸಂಪ್ರದಾಯವಲ್ಲ. ಜನರಿಗೆ ಸಂಸ್ಕಾರವನ್ನು ಒದಗಿಸಬೇಕು, ಬದುಕನ್ನು ತಿದ್ದಿಕೊಳ್ಳಲು ನೆರವಾಗಬೇಕು, ಸಾಧನೆಯ ದಾರಿಯಲ್ಲಿ ಮುಂದರಿಯುವಂತಾಗಬೇಕು, ಚಿತ್ತಾಹ್ಲಾದದ ಜೊತೆಗೆ ಚಿತ್ತ ವಿಕಾಸವೂ ಕೈಗೂಡಬೇಕು.- ಇದು ಸಂಪ್ರದಾಯ ಸಂಗೀತದ ಉದ್ದೇಶ. ಹೀಗಿರುವಾಗ ಸಂಗೀತಕ್ಕೆ ಸೇರುವ ಸಾಹಿತ್ಯ 'ಆಪಾತ ಮಧುರ' ವಾದರೆ ಸಾಲದು, 'ಆಲೋಚನಾಮೃತ'ವೂ ಆಗಿರಬೇಕು. ಮೈಮರೆಯಿಸುವ ಸಂಗೀತಕ್ಕಿಂತ ಮೇಲೆತ್ತುವ ಸಂಗೀತ ಶಿಷ್ಟಜನ ಸಮ್ಮತವಾಗುತ್ತದೆ. ಸಾಹಿತ್ಯದ ನೆರವಿಲ್ಲದೆ ಇದು ಆದೀತೆ?

ಸಂಪ್ರದಾಯ ಸಂಗೀತವೆಂದರೆ ಯಾವುದೋ ಕೆಲವು ಹಳೆಯ ಶಾಸ್ತ್ರಗ್ರಂಥಗಳ ಸಾಲನ್ನು ಹಿಡಿದು ಉಳಿದುಕೊಂಡಿರುವ ಕ್ರಮವಲ್ಲ. ಸಂಪ್ರದಾಯವೆನ್ನುವ ಮಾತು ಮೌಲ್ಯಗಳನ್ನು ಕುರಿತದ್ದು. ನಮ್ಮ ಸಂಸ್ಕೃತಿಯಲ್ಲಿ ಸಾರಭೂತವೆನಿಸಿರುವ ಅಧ್ಯಾತ್ಮಿಕತೆಯ ಚೌಕಟ್ಟಿನಲ್ಲಿ ಸಾಧನೆಯನ್ನೋ ವಿಚಾರವನ್ನೋ ಪ್ರತಿಬಿಂಬಿಸಿದರೆ ಅದು ಸಾಂಪ್ರದಾಯಿಕ. ಸಂಗೀತವನ್ನು ಭಗವದ್ಭಕ್ತಿಗಾಗಿಯೋ, ಧರ್ಮಸಂಹಿತೆಗಾಗಿಯೋ, ಆಧ್ಯಾತ್ಮಿಕ ಅಭ್ಯುದಯಕ್ಕಾಗಿಯೋ, ಸನ್ಮಾರ್ಗಕ್ಕಾಗಿಯೋ, ನಿಃಶ್ರೇಯಸಕ್ಕಾಗಿಯೋ ಬಳಸಿಕೊಂಡಾಗ ಅದು ಸಂಪ್ರದಾಯ ಸಂಗೀತವೆನಿಸಿಕೊಳ್ಳುತ್ತದೆ. ಇದನ್ನೇ ನಾದೋಪಾಸನೆಯೆಂದೂ ಕರೆಯುವುದಿದೆ. ಮುಖ್ಯವಾದ ಮಾತೆಂದರೆ, ಹೊರಗಣ ವಿವರಗಳಿಂದ ಮನಸ್ಸನ್ನು ಅಥವಾ ಹೃದಯವನ್ನು ಬೇರ್ಪಡಿಸುವುದು, ಬೇರೊಂದು ಕಲ್ಪನೆಯ ಲೋಕಕ್ಕೆ ಒಯ್ಯುವುದು ಒಂದು ಘಟಕ; ನಮ್ಮ ಒಳಗೆ ಆಳಕ್ಕೆ ಇಳಿಯುವಂತೆ ಮಾಡುವುದು ಮತ್ತೊಂದು ಘಟಕ. ಇವೆರಡೂ ಸಂಗೀತವೆಂಬ ಸಾಧನೆಯಿಂದ ಆಗಬೇಕು. ಎಂದ ಮೇಲೆ ಅದು ರಂಜಕವೂ ಆಗಿರಬೇಕು, ಬೋಧಕವೂ ಆಗಿರಬೇಕು, ಸ್ವರಗೀತಿ ರಂಜಕವಾದರೆ ಅದಕ್ಕೆ ಒಗ್ಗಿಬರುವ ಸಾಹಿತ್ಯ ಬೋಧಕ, ಸಂಪ್ರದಾಯ ಸಂಗೀತ ಆಪಾತಮಧುರವೂ ಹೌದು, ಆಲೋಚನಾಮೃತವೂ ಹೌದು. ಒಂದನ್ನು ಇನ್ನೊಂದು ಬಿಡದೆ ಇದ್ದಾಗಲೇ ಸಂಪ್ರದಾಯ ಸಂಗೀತದ ಸ್ವಾರಸ್ಯ.

ಸಾಹಿತ್ಯವನ್ನು ಅವಲಂಬಿಸದೆ ಶುದ್ಧ ಸಂಗೀತವೆನಿಸಿಕೊಂಡ ಆಲಾಪನೆ, ಸ್ವರ ಕಲ್ಪನೆ, ಮುಂತಾದವು ಕೂಡ ಕೃತಿ ನಿರೂಪಣೆಯ ಸಂಪರ್ಕವನ್ನು ಪಡೆದುಕೊಂಡಾಗಲೇ ಅವುಗಳ ಪ್ರಯೋಜನ, ಸಾರ್ಥಕ್ಯ, ವಿನಿಯೋಗ ಅಲ್ಲವೆ? ಕೃತಿಯ ಸ್ವಾರಸ್ಯಕ್ಕೆ ಸಮರ್ಥವಾದ ಭೂಮಿಕೆ ಆಲಾಪನೆ; ಕೃತಿಯ ಸೌಂದರ್ಯವನ್ನು ಹೆಚ್ಚಿಸಲು ಸ್ವರಕಲ್ಪನೆ. ಇವೆರಡೂ ಸಾಹಿತ್ಯದ ಭಾವಕ್ಕೆ

ಸಂಗೀತ ಇರಿಸುವ ರಾಗ-ಲಯದ ಹೊಂಗಳಶಗಳು. ಕಳಶಗಳೇನೋ ಪ್ರತ್ಯೇಕವಾದ, ವಿಶಿಷ್ಟವಾದ, ಸ್ವತಂತ್ರವಾದ ಅಂಗಗಳೇ. ಅವುಗಳ ರಚನೆಯಲ್ಲಿ ಕೌಶಲವೂ, ಕಲ್ಪನಾ ಶಕ್ತಿಯೂ, ಪ್ರತಿಭೆಯೂ ಎದ್ದು ಕಾಣುತ್ತವೆ. ಆದರೆ ಅವಕ್ಕೆಲ್ಲ ಆಸರೆಯಾಗಿ ಒಂದು ಪೂರ್ವಸಿದ್ಧವಾದ ಕಟ್ಟಡ ಇರಬೇಕಲ್ಲ? 'ತೋಟ ಶೃಂಗಾರ, ಒಳಗೆ ಗೋಣಿಸೊಪ್ಪು' ಎಂದಾದರೆ ಹೇಗೆ?

ಆಲಾಪನೆಯ ವಿಚಾರವಾಗಿ ನನ್ನದೊಂದು ತಕರಾರು. ಆಲಾಪನೆಗೇನೋ ಸಾಹಿತ್ಯವಿಲ್ಲ; ಆದರೆ ಅದಕ್ಕೆ ಸಾಹಿತ್ಯದ ಸಂಬಂಧವೇ ಇಲ್ಲ ಎನ್ನುವುದನ್ನು ಒಪ್ಪಲಾರೆ. ಈಗ ಮೊದಲು ಆಲಾಪನೆ, ಅನಂತರ ಕೃತಿಗಾಯನ, ಆಮೇಲೆ ಕಲ್ಪನಾಸ್ವರಗಳು ಎಂಬ ವಾಡಿಕೆಯಿದೆಯಷ್ಟೆ? ಇದನ್ನು ಹೀಗೆ ಮಾಡಬೇಕೆಂದು ಯಾವ ಶಾಸ್ತ್ರದಲ್ಲಿ ಹೇಳಿದೆ? ಈಗಿನ ಕಚೇರಿ ಕ್ರಮವನ್ನು ಬಹುಮಟ್ಟಿಗೆ ರೂಪಿಸಿದವರು ಅರಿಯಕ್ಕುಡಿ ರಾಮಾನುಜ ಅಯ್ಯಂಗಾರ್ಯರು. ಅವರ ಪಾಲಿಗೆ ಸಂಗೀತವೆಂದರೆ ರಾಗತಾಳಗಳೆರಡೆ; ಭಾವದ ಕಡೆ ಅವರ ಗಮನ ಕಡಮೆಯೆ. ಆದರೆ ರಾಗವಿದ್ದಲ್ಲಿ ಭಾವ ಇರಲೇಬೇಕೆಂಬುದು ಸಂಪ್ರದಾಯದ ನಿಷ್ಠೆ. ಮೊದಲು ಸಾಲನ್ನು ಸಂಗತಿ ಸಮೇತ ಹಾಡಿ ಅದಕ್ಕೆ ಹೊಂದಿಕೊಂಡಂತೆಯೆ ಆಲಾಪನೆಯನ್ನು ಎತ್ತಿಕೊಂಡರೆ ಆಗ ಆಲಾಪನೆಗೆ ಭಾವಪೋಷಣೆ ಒದಗಿಬರುತ್ತದೆ. ಸಾಹಿತ್ಯದಲ್ಲಿನ ಭಾವ ಆಲಾಪನೆಯಲ್ಲಿ ವರ್ಧಿಸುತ್ತದೆ.

ಹಾಗೆಯೆ ನೆರವಲ್ ಎಂಬ ಕಸರತ್ತಿನಲ್ಲಿ ಸಾಹಿತ್ಯಭಾಗವೊಂದನ್ನು ಎತ್ತಿಕೊಂಡು ಅದನ್ನು ಹಮ್ಮೈಸುವಾಗ ಭಾವದ ಪಾತ್ರವನ್ನು ಕೈಬಿಡುವುದು ವಾಡಿಕೆ. ಸ್ವರ ಕಲ್ಪನೆಯನ್ನು ಮಾಡಿದ ಮೇಲೆ, ಮೊದಲು ಎತ್ತಿಕೊಂಡ ಸಾಹಿತ್ಯ ಭಾಗವನ್ನು ಖಂಡತುಂಡಾಗಿ ಒಡೆದು ಚೂರುಪಾರನ್ನು ಚೆಲ್ಲುತ್ತ ಮುಂದೆ ಸಾಗುವುದೂ ವಾಡಿಕೆಯೆ. ಅರ್ಥಬರುವಂತೆ ಒಂದು ಸಾಲನ್ನು ಪೂರ್ಣವಾಗಿ ಹೇಳುವ ತಾಳ್ಮೆಯೂ ಇರದು. ಅಲ್ಲಿಗೆ ಸಾಹಿತ್ಯದ ಋಣ ತೀರಿತು.!

೬

ಸ್ವರ ಕಲ್ಪನೆಗೂ ಸಾಹಿತ್ಯದ ಭಾಗಕ್ಕೂ ಅಲ್ಲಿ ಬರುವ ಭಾವಕ್ಕೂ ಸಂಬಂಧವಿರಬೇಡವೆ? ಬರಿಯ ತಾಳದ ಲೆಕ್ಕಾಚಾರ ಸರಿಯಾದರೆ ಮುಗಿಯಿತೆ? ಅಥವಾ ರಾಗ ಒಂದು ಕಡೆ, ತಾಳ ಇನ್ನೊಂದು ಕಡೆ, ಭಾವ ಮತ್ತೊಂದು ಕಡೆ ಎಂದು ಹರಿದು ಹಂಚಬಹುದೊ? ಕಲ್ಪನೆಗಾದರೂ ಸರಿಯಾದ ಸಾಹಿತ್ಯ ಭಾಗವನ್ನು ಆರಿಸಿಕೊಳ್ಳಬೇಡವೆ?. ಆರಿಸಿಕೊಂಡದ್ದನ್ನು ಪೂರ್ಣವಾಗಿ ಹಾಡಬೇಡವೆ?

ವಾದ್ಯಸಂಗೀತಕ್ಕೂ ಸಾಹಿತ್ಯಕ್ಕೂ ಇರುವ ನಂಟು ಪರೋಕ್ಷವಾದದ್ದೇ. ಆದರೆ ಹಾಡಿಕೆಯನ್ನನುಸರಿಸಿ ವಾದ್ಯ ನುಡಿಯಬೇಕೆಂಬುದು ತುಂಬ ಪ್ರಾಚೀನವಾದ, ಸಹಜವಾದ, ಅರ್ಥವತ್ತಾದ ಕಲ್ಪನೆ. ವಾದ್ಯದ ವಿನಿಕೆಯಲ್ಲಿ ವಾದನಕ್ರಮ, ಗಾಯನಕ್ರಮ ಎಂಬೆರಡು ಪ್ರಕಾರಗಳನ್ನೂ ಅಳವಡಿಸಿಕೊಳ್ಳುವುದುಂಟಲ್ಲವೆ? ತಾಳವಾದ್ಯಗಳು ಕೂಡ ಸ್ವರ-ಸಾಹಿತ್ಯಗಳಿಗೆ ಹೊಂದಿಕೊಳ್ಳ ಬೇಕೆಂದು ಕೀರ್ತಿಶೇಷರಾದ ಪಾಲಕ್ಕಾಡು ಮಣಿ ಅಯ್ಯರ್ ಅವರು ಹೇಳಿದುದನ್ನು ಕೇಳಿದ್ದೇನೆ. ಸಾಹಿತ್ಯವೆಂದರೆ ಬರಿಯ ಸ್ವರಗಳ ಸಮುದಾಯ ಎಂದು ಭಾವಿಸಬಾರದು; ಅರ್ಥದಿಂದ ಒದಗಿಬಂದ

ಭಾವದ ಬಲೆ ಅದರ ಮುಖ್ಯ ವಿವರ. ಪದ್ಯವೇ ಆಗಲಿ, ಹಾಡಿಕೆಯೇ ಆಗಲಿ ಭಾವವನ್ನು ಬಿಟ್ಟುಕೊಟ್ಟರೆ ಸಂಗೀತವಾಗಲಾರದು.

ಹಾಗೆಂದರೆ, ಗಮಕ, ಲಘುಸಂಗೀತ, ಕಾವ್ಯವಾಚನ, ಭಜನೆ, ಸ್ತೋತ್ರಪಾಠ ಮೊದಲಾದುವುಗಳಿದ್ದೇ ಇವೆಯಲ್ಲ, ಇನ್ನು ಸಂಪ್ರದಾಯ ಸಂಗೀತ ಏತಕ್ಕೆ ಎಂಬ ಪ್ರಶ್ನೆ ಎದ್ದುಕೊಳ್ಳುತ್ತದೆ. ಈ ಪ್ರಕಾರಗಳಿಗೂ ಸಂಪ್ರದಾಯ ಸಂಗೀತಕ್ಕೂ ನಡುವೆ ಇರುವ ಅಂತರವನ್ನು ಅರಿತುಕೊಳ್ಳುವುದು ಕಷ್ಟವಲ್ಲ. ಸಂಪ್ರದಾಯ ಸಂಗೀತದಲ್ಲಿ ಸಾಹಿತ್ಯ-ಸಂಗೀತಗಳಿಗೆ ಸಮನಾದ ಪ್ರಾಧಾನ್ಯ; ಅವೆರಡೂ ಅನ್ಯೋನ್ಯಾಶ್ರಯದಲ್ಲಿರುವುವು, ಅವಕ್ಕಿರುವುದು ಅವಿನಾಭಾವ ಸಂಬಂಧ ಎಂದರೂ ತಡೆದೀತು. ಸಂಪ್ರದಾಯ ಸಂಗೀತದಲ್ಲಿ ರಾಗ-ತಾಳಗಳ ಕಟ್ಟುಪಾಡು ಸಡಿಲವೇನಲ್ಲ; ಸಾಹಿತ್ಯವನ್ನೆ ಅವಲಂಬಿಸಿ ನಿಂತವೂ ಅಲ್ಲ. ರಾಗ, ತಾಳ, ಭಾವ ಮೂರೂ ಸಮರ್ಪಕವಾಗಿ ಬೆರೆತುಕೊಂಡದ್ದೇ ಸಂಪ್ರದಾಯವೆನಿಸಿಕೊಳ್ಳುತ್ತದೆ. ಭಾವ ಸಾಹಿತ್ಯಕ್ಕೆ ಸಂಬಂಧಿಸಿದ್ದು. ತ್ಯಾಗರಾಜರು ತಮ್ಮ ಆರಭಿ ರಾಗದ 'ನಾದಸುಧಾರಸಂಬಿಲನು' ಎನ್ನುವ ಕೃತಿಯಲ್ಲಿ ರಾಗವೇ ಬಿಲ್ಲು, ತಾಳ ಅದಕ್ಕೆ ಹೂಡುವ ಬಾಣ, 'ಸರಸ ಸಂಗತಿ ಸಂದರ್ಭ' (ಎಂದರೆ ಭಾವ) ಮುಟ್ಟಬೇಕಾದ ಗುರಿ ಎಂದು ವರ್ಣಿಸಿದ್ದಾರೆ.

ಸಂಪ್ರದಾಯ ಸಂಗೀತದಲ್ಲಿ ಸಾಹಿತ್ಯ ಮಾಡಬೇಕಾದ ಕೆಲಸ ರಸಾಭಿವ್ಯಕ್ತಿಯಷ್ಟೇ ಅಲ್ಲ; ಲೋಕಸಂಗ್ರಹಕಾರ್ಯವೂ ಅದರಿಂದ ನಡೆಯಬೇಕು. ತ್ಯಾಗರಾಜರದ್ದೇ ಇನ್ನೊಂದು ಕೃತಿ, ಧನ್ಯಾಸಿಯ 'ಸಂಗೀತ ಜ್ಞಾನಮು' ಎನ್ನುವುದು, ಸಂಗೀತದ ಪ್ರಯೋಜನ ಇರುವುದು ಸನ್ಮಾರ್ಗಕ್ಕೆ ವಿವರಣೆಯಾಗಿ "ನ್ಯಾಯಾನ್ಯಯಮು ತೆಲುಸುನು" ಎಂದೂ ಒಕ್ಕಣೆ ಅಲ್ಲಿಯೇ ಬರುತ್ತದೆ. ದೇಶೀಪದ್ಧತಿಗೆ ರಂಜನೆಯಷ್ಟೇ ಚೌಕಟ್ಟು; ಮಾರ್ಗಿಗಾದರೋ ಬದುಕನ್ನು ನಡೆಸುವುದರಲ್ಲೂ ಪಾಲುಗೊಳ್ಳುವುದಿದೆ. ಕಾವ್ಯದಲ್ಲಿ ಕಾಂತಾಸಮ್ಮಿತೆಗಿರುವ ಸ್ಥಾನ ಕಲೆಯಲ್ಲಿ ಸಂಗೀತಕ್ಕೆ. ಸಂಗೀತ ಆಪಾತಮಧುರವಾಗಿದ್ದರೆ ಸಾಲದು; ಆಲೋಚನಾಮೃತವೂ ಆಗಿರಬೇಕು.

ಆದ್ದರಿಂದಲೇ ಶಾಸ್ತ್ರಗ್ರಂಥಗಳು ಗಾನಕ್ಕಿರುವ ದಶವಿಧ ಗುಣವೃತ್ತಿಗಳಲ್ಲಿ ರಾಗವನ್ನು ಕುರಿತು ರಕ್ತ (ವಾದ್ಯಗೀತ ಸ್ವರಗಳ ಹೊಂದಾಣಿಕೆ), ಪೂರ್ಣ (ಸ್ವರ-ಶ್ರುತಿ-ಛಂದಸ್ಸುಗಳ ಪೂರೈಕೆ), ಅಲಂಕೃತ (ಸ್ವರಗಳ ರಂಜಕ ಪ್ರಯೋಗಗಳು) ಮತ್ತು ಮಧುರ (ಕಿವಿಗೆ ಹಿತವಾಗಿರುವುದು) ಎಂಬ ಗುಣಗಳನ್ನೂ, ತಾಳವನ್ನು ಕುರಿತು ಸಮ (ಏರುಪೇರಿರದ ನಡೆ), ಶ್ಲಕ್ಷ್ಣ (ಅದ್ರುತ, ಅವಿಲಂಬಿತ ಇತ್ಯಾದಿ) ಮತ್ತು ಪ್ರಸನ್ನ (ನೆಮ್ಮದಿಯನ್ನುಂಟು ಮಾಡುವುದು) ಎಂಬ ಗುಣಗಳನ್ನೂ, ಭಾವವನ್ನು ಕುರಿತು ವ್ಯಕ್ತ (ಸಾಹಿತ್ಯದ ಮಾತುಗಳನ್ನು ಸ್ಪಷ್ಟವಾಗಿ ಉಚ್ಚರಿಸಿ ಅರ್ಥವನ್ನು ಹೊರಹೊಮ್ಮಿಸುವುದು. 'ಸಮ್ಯಗುಪಪಾದನ'), ವಿಕೃಷ್ಟ (ಪದಗಳನ್ನು ಅರ್ಥವರಿತು ಬಿಡಿಸುವುದು) ಮತ್ತು ಸುಕುಮಾರ (ಹಿತವಾದ ಉಚ್ಚಾರಣೆ) ಎಂಬ ವಿಭಾಗ ಮಾಡುತ್ತವೆ. ಎಂದರೆ ಗಾಯನದಲ್ಲಿ ರಾಗ, ತಾಳ, ಭಾವಗಳಿಗೆ ಸಮನಾದ ಸ್ಥಾನ ಇರಬೇಕು. ಇದನ್ನರಿಯದೆ ಹಾಡಿದಾಗ ರಂಜನೆಯೂ ಆಗದು, ಸಾರ್ಥಕವೂ ಆಗದು; ರಸಾಭಾಸವೇನೋ ಆದೀತು!

ಸಂಪ್ರದಾಯ ಸಂಗೀತದ ಪ್ರಸ್ತುತ ಪರಿಸ್ಥಿತಿಯಲ್ಲಿ ಸಂಪ್ರದಾಯಶೀಲತೆ ಸಾಕಷ್ಟು ಶಿಥಿಲವಾಗಿದೆಯೆಂದು ನನಗನಿಸುತ್ತದೆ. ಸಂಗೀತದಲ್ಲಿ ಪ್ರವೃತ್ತಿಯಿಲ್ಲದವರು ಸಂಗೀತವನ್ನು ವೃತ್ತಿಯಾಗಿ

ಕೈಗೊಳ್ಳುವುದು, ಸಂಗೀತದಲ್ಲಷ್ಟೇ ಒಲವುಳ್ಳವರು ಸಂಪ್ರದಾಯದಲ್ಲಿ ಶ್ರದ್ಧೆಯಿರದೆ ಯಾವುದೋ ಕಾರಣದಿಂದ ಈ ಕ್ಷೇತ್ರದಲ್ಲಿ ತೊಡಗಿರುವುದು, 'ತಿಳಿದು ಪಾಡಲಿಬೇಕು' ಎಂಬ ದಾಸರ ಮಾತಿಗೆ ಕಿವಿ ಕೊಡದವರು ತಿಳಿಯದೆ ಪಾಡುತ್ತಲಿರುವುದು, ಸಂಪ್ರದಾಯ ಸಂಗೀತದ ಸ್ವಾರಸ್ಯವನ್ನೂ ವೈಶಿಷ್ಟ್ಯವನ್ನೂ ಅರಿತುಕೊಳ್ಳದೆ ನಿರಂಕುಶಮತಿಗಳಾಗಿ ಚಾಪಲ್ಯದಿಂದ ಸ್ವಚ್ಛಂದ ಪ್ರಯೋಗಗಳನ್ನು ನಡೆಸುತ್ತಿರುವುದು, ಯುಗಧರ್ಮದಲ್ಲೇ ಮಾರ್ಪಾಟು ಒದಗಿರುವುದು, ಜನಜೀವನದಲ್ಲಿ ಸಂಗೀತದ ಸ್ಥಾನ ಬದಲಾಗಿರುವುದು ಹೀಗೆ ಹಲವು ಕಾರಣಗಳನ್ನು ಕಾಣಿಸಬಹುದು. ಆದರೆ ಸಂಗೀತದಲ್ಲಿ ಸಂಪ್ರದಾಯ ಶೈಥಿಲ್ಯ ನಮ್ಮ ಕಾಲದಲ್ಲೆ ಮೊದಲಾಯಿತೆನ್ನುವ ಹಾಗಿಲ್ಲ. ನಮ್ಮ ಹಿಂದಿನ ಒಂದೆರಡು ತಲೆಮಾರುಗಳಲ್ಲೆ ಇದರ ಉಗಮವನ್ನು ಗುರುತಿಸಬಹುದು. ರಂಜನೆಯ ಪ್ರಯೋಜನವೆ ಮುಖ್ಯವೆನಿಸಿದಾಗ ಸಂಪ್ರದಾಯದ ನಿಷ್ಠೆಗಿಂತ ಹೆಚ್ಚಾಗಿ ಜನರ ನಿರೀಕ್ಷೆಯ ಕಡೆ ಗಮನ ಹೆಚ್ಚುತ್ತ ಬಂದುದು ಹಿಂದಿನಿಂದ ಬಂದದ್ದೇ. ಜನಜೀವನದಲ್ಲಿ ಆದರ್ಶ ಸಡಿಲಗೊಳ್ಳುವುದು ಎಂದೂ ಇದ್ದದ್ದೇ.

ಇಲ್ಲಿ ಮೂಲಭೂತವಾದ ಒಂದು ಪ್ರಶ್ನೆ ಎದ್ದುಕೊಳ್ಳುತ್ತದೆ. ಯಾವುದೇ ಕಲಾವಿದನ ಕೆಲಸ ತನ್ನ ಯುಗಧರ್ಮವನ್ನು ಯಥಾವತ್ತಾಗಿ ಪ್ರತಿನಿಧಿಸುವುದಷ್ಟೇಯೊ ಅಥವಾ ಯಾವುದಾದರೊಂದು ಶಿಷ್ಟಸಮ್ಮತವಾದ, ಮತ್ತು ಪ್ರಾಚೀನವಾದರೂ ಎಲ್ಲ ಕಾಲಕ್ಕೂ ಪ್ರಸ್ತುತವಾಗಬಲ್ಲ ಸಂಪ್ರದಾಯವನ್ನು ಎತ್ತಿ ಹಿಡಿಯುವುದೊ ಎಂಬುದು. ಮೊದಲನೆಯದರಲ್ಲಿ, ಜನರಿಗೆ ಬೇಕಾದುದನ್ನು ಒದಗಿಸಿ ಅವರ ಮನೋರಂಜನೆಗೆ ನೆರವಾಗುವ ಪ್ರವೃತ್ತಿ; ಎರಡನೆಯದರಲ್ಲಿ, ಜನರ ಅಭಿರುಚಿಯ ಮಟ್ಟವನ್ನೇ ಹೆಚ್ಚಿಸಬೇಕೆಂಬ ನಿಲುವು. ಎರಡನೆಯದರಲ್ಲಿ ರಂಜನೆ ಇರಲಾರದೆಂದಲ್ಲ, ಇರಬಾರದೆಂದೂ ಅಲ್ಲ. ಆದರೆ ರಂಜನೆಯ ನೆಪದಿಂದ ಸಂಪ್ರದಾಯವನ್ನು ಬಿಟ್ಟುಕೊಡುವ ಕಾತರ ಕಾಣುವುದಿಲ್ಲ. ರಂಜನೆ ಹೇಗೂ ನಡೆಯುತ್ತದೆ; ರಂಜನೆಯನ್ನು ಬಯಸುವವರು ಸಂಪ್ರದಾಯಸಂಗೀತವನ್ನೇ ಆಶ್ರಯಿಸಬೇಕಾದುದಿಲ್ಲ; ಬೇರೆ ಸಂಗೀತ ಪ್ರಕಾರಗಳು ಇದ್ದೆ ಇವೆಯಲ್ಲ? ನಮ್ಮ ಸಂಸ್ಕೃತಿಯಲ್ಲಿರುವ ಮೌಲ್ಯಗಳನ್ನು ಸಾಧ್ಯವಾದ ಮಟ್ಟಿಗೆ ಸಾಧಿಸಿಕೊಳ್ಳಬೇಕೆನ್ನುವವರಿಗೆ ಸಂಪ್ರದಾಯಸಂಗೀತ ಅಗತ್ಯವೆನಿಸುತ್ತದೆ. ಇದೇ ಸರಿಯೆಂದು ನನ್ನ ಅನಿಸಿಕೆ.

ಸಂಪ್ರದಾಯದ ಮೌಲ್ಯಗಳನ್ನು ತಾನೆ ತನ್ನ ಬದುಕಿನಲ್ಲಿ ಅಳವಡಿಸಿಕೊಳ್ಳದೆ, ಅವುಗಳನ್ನು ಕುರಿತು ಅಭಿಮಾನ ತಾಳದೆ ಸಂಪ್ರದಾಯ ಸಂಗೀತಗಾರನು ಸಾಧಿಸುವುದಾದರೂ ಏನನ್ನು? ಅದರಲ್ಲಿ ಒಲವಿಲ್ಲದೆ, ಬರಿದೆ ತನ್ನ ಸ್ವಾರ್ಥಕ್ಕಾಗಿ ಸಂಪ್ರದಾಯ ಸಂಗೀತವನ್ನು ಬಳಸಿಕೊಳ್ಳುವುದು ಏನು ಚೆನ್ನು? ಈ ವಿಚಾರವಾಗಿ ನಮ್ಮ ರಸಿಕರಲ್ಲೂ ಕಲಾವಿದರಲ್ಲೂ ಸ್ವಲ್ಪ ಚಿಂತನೆ ನಡೆಯಬೇಕೆಂದು ನನ್ನ ಸೂಚನೆ; ಹೃದಯ ಶೋಧನೆಯೂ ನಡೆಯಬೇಕೆನ್ನಿ. ಸಂಪ್ರದಾಯ ಸಂಗೀತ ರಸಿಕರಾಗಿ ನಾವು ಅಪೇಕ್ಷಿಸುವುದು ಏನನ್ನು, ಸಂಪ್ರದಾಯ ಸಂಗೀತ ಕುಶಲರಾಗಿ ಅವರು ನೀಡಬೇಕಾದುದು ಏನನ್ನು ಎಂಬ ವಿಚಾರ ಪ್ರತಿಯೊಂದು ಯುಗದಲ್ಲೂ ಮತ್ತೆ ಮತ್ತೆ ಪ್ರಸಕ್ತವಾಗುತ್ತದೆ. ಈ ವಿಚಾರದ ಚೌಕಟ್ಟನ್ನು ಮರೆತರೆ ಸಂಪ್ರದಾಯವು ಶಿಥಿಲವಾಗದೆ ಇದ್ದೀತೆ?

ಇಲ್ಲಿಯೇ ಪುರಂದರದಾಸರು ಸಂಪ್ರದಾಯ ಸಂಗೀತಕ್ಕೆ ಒದಗಿಸಿದ ಚೌಕಟ್ಟು ಪ್ರಸಕ್ತವಾಗುವುದು, ಅವರು ಮೌಲ್ಯ ಚಿಂತನೆಯನ್ನು ಕೈಬಿಡಲಿಲ್ಲ, ಲೋಕ ಸಂಗ್ರಹದ ಉದ್ದೇಶವನ್ನೂ ಕಡೆಗಣಿಸಲಿಲ್ಲ. ಮನೋ ರಂಜನೆಯನ್ನೂ ಮರೆಯಲಿಲ್ಲ. ರಾಗ, ತಾಳ, ಭಾವಗಳ ಒಕ್ಕೂಟವನ್ನೇ ಸಾಧಿಸಿದರು. ❐

ಅಧ್ಯಾಯ ಎಂಟು

ಹರಿದಾಸ ಸಂಸ್ಕೃತಿ

ಹರಿದಾಸ್ಯಕ್ಕೆ ಒಲಿದ ಮಂದಿ ಹಿಂದೆ ಎಂದೆಂದೂ ಇದ್ದವರೇ; ಮುಂದೆ ಎಂದೆಂದೂ ಇರುವವರೇ. ಆದರೆ ಕನ್ನಡನಾಡಿನಲ್ಲಿ ಹರಿದಾಸರು ಪ್ರಕಟವಾಗಿ ವ್ಯವಸ್ಥೆಗೊಂಡು ಸಮುದಾಯ ಜೀವನದ ಮೇಲೆ ತಮ್ಮ ಪ್ರಭಾವವನ್ನು ಮೂಡಿಸಿ, ಕನ್ನಡ ನುಡಿಯನ್ನು ತಮ್ಮದೇ ಆದ ಕೊಡುಗೆಯಿಂದ ಸಿಂಗರಿಸಿ, ತಮ್ಮ ನಡೆ-ನುಡಿ ಆಚಾರ-ವಿಚಾರಗಳಿಂದ ನಾಡಿನ ಸಂಸ್ಕೃತಿಯನ್ನು ಹಿಗ್ಗಿಸಿದ ಘಟ್ಟವೊಂದಿದ್ದಿತು. ೧೪೦೪ರಲ್ಲಿ ಹುಟ್ಟಿದ ಶ್ರೀಪಾದರಾಜರಿಂದ ಈ ಘಟ್ಟವು ಮೊದಲಾಯಿತೆನ್ನಬಹುದು; ೧೫೬೪ರಲ್ಲಿ ತೀರಿಕೊಂಡ ಪುರಂದರದಾಸರ ಕಾಲದಲ್ಲಿ ಇದು ಮುಗಿಲು ಮುಟ್ಟಿತು. ಮುಂದೆ ೧೮೦೯ರಲ್ಲಿ ದೇಹವಿಟ್ಟ ಜಗನ್ನಾಥದಾಸರ ಕಾಲದವರೆಗೂ ಈ ಘಟ್ಟ ಮುಂದರಿಯಿತು. ಇದೇನು ಇದ್ದಕ್ಕಿದ್ದಂತೆ ಎದ್ದುಕೊಳ್ಳಲಿಲ್ಲ; ಇದ್ದಕ್ಕಿದ್ದಂತೆ ಕಣ್ಮರೆಯಾಗಲೂ ಇಲ್ಲ. ಶ್ರೀ ಪಾದರಾಜರಿಗೆ ಮೊದಲೇ, ಎಂದರೆ ಸುಮಾರು ಆರುನೂರು ವರ್ಷಗಳ ಹಿಂದೆಯೇ ಇದರ ಉಗಮವನ್ನು ಗುರುತಿಸಬಹುದು. ಜಗನ್ನಾಥ ದಾಸರನಂತರವೂ ಇದು ಉಳಿದುಕೊಂಡು ಬಂದಿತು. ಇಂದಿಗೂ ಪೂರ್ಣವಾಗಿ ಮರೆಯಾಗಿಲ್ಲ. ಆದರೆ ಈ ಘಟ್ಟವೆಂಬುದೊಂದು ಪರ್ವಕಾಲ. ಆಗ ಹುಟ್ಟಿಕೊಂಡ ಸಾಹಿತ್ಯ, ಸೂಚನೆಗೊಂಡ ಸುಧಾರಣೆ, ಬೇರೂರಿಕೊಂಡ ಸಾಂಸ್ಕೃತಿಕ ಪ್ರಕಾರ ಇವು ನಾಡಿನ ಜನರಿಗೆ ಇಂದಿಗೂ ಪ್ರಸಕ್ತವಾಗುತ್ತವೆ.

ಕನ್ನಡ ನಾಡಿನ ಜನಜೀವನದಲ್ಲಿ ಹರಿದಾಸರು ಕೈಕೊಂಡ ಕೆಲಸ, ಗಳಿಸಿದ ಗೆಲುವು, ತೋರಿದ ದಾರಿ, ಸಿದ್ಧಪಡಿಸಿದ ಸಾಹಿತ್ಯ ಇವುಗಳ ಹೆಗ್ಗಳಿಕೆಯನ್ನು ಗುರುತಿಸಬೇಕೆಂದರೆ ಈ ಪರ್ವಕಾಲದಲ್ಲೂ ಪುರಂದರದಾಸರು ಬದುಕಿದ ಸಮಯವನ್ನೆ (೧೪೮೪-೧೫೬೪) ನೋಡಬೇಕಾಗುತ್ತದೆ. ನೂರಾರು ದಾಸರ ಉಲ್ಲೇಖವಿದ್ದರೂ, ಹತ್ತಾರು ದಾಸರ ರಚನೆಗಳು ಉಪಲಬ್ಧವಿದ್ದರೂ, 'ದಾಸರೆಂದರೆ ಪುರಂದರದಾಸರಯ್ಯಾ' ಎಂದು ಅವರ ಗುರುಗಳಾದ ವ್ಯಾಸತೀರ್ಥರೇ ಹೇಳಿದ್ದು ಈ ಸಂದರ್ಭದಲ್ಲಿಯೂ ಸರಿಯಾದುದೇ. ಈ ಪರ್ವಕಾಲವನ್ನು ಅಧ್ಯಯನಮಾಡುವಾಗಲೂ ಪುರಂದರದಾಸರಿಗೆ ಮೊದಲು, ಪುರಂದರದಾಸರ ಕಾಲ, ಪುರಂದರದಾಸರಾದ ಮೇಲೆ ಎಂದು ಮೂರು ವಿಭಾಗಗಳನ್ನು ಮಾಡಿಕೊಳ್ಳುವುದಿದೆ. ಅದು ಸಮರ್ಪಕವಾದುದೂ ಹೌದು. ವ್ಯಾಸತೀರ್ಥರು ತಮ್ಮ ಶಿಷ್ಯ ಪುರಂದರದಾಸರನ್ನು ಕುರಿತು 'ಕಂಗಳಿಗೆ ಹಬ್ಬವಾಯಿತಯ್ಯ, ಮಂಗಳಾತ್ಮಕ

ಪುರಂದರದಾಸರನು ಕಂಡು' ಎಂದು ಹೇಳಿದ್ದು ದಾಸಪರಂಪರೆಯಲ್ಲಿ ಪುರಂದರದಾಸರ ಸ್ಥಾನವನ್ನು ಸೂಚಿಸುತ್ತದೆ.

ಹರಿದಾಸಪಂಥದ ಸೊಗಡು ಶ್ರೀಪಾದರಾಜರಿಂದಲೇ (ಬೃಂದಾವನ ೧೪೮೬) ಪ್ರಕಟವಾಯಿತಾದರೂ ಅದು ಮೈದುಂಬಿಬಂದದ್ದು ಅವರ ಶಿಷ್ಯರಾದ ವ್ಯಾಸತೀರ್ಥರ ಕಾಲದಲ್ಲಿ (೧೪೪೭-೧೫೩೯). ದಾಸಸಾಹಿತ್ಯ, ಶಾಸ್ತ್ರೀಯ ಸಂಗೀತ, ಜಾನಪದ ಕಲೆ ಇವುಗಳಿಗೆ ಒಂದಾದ ನೆಲೆಯನ್ನು ಕಾಣಿಸಿದವರು ಅವರು. ಅವರಿಗೆ ಅವರ ಕೆಲಸದಲ್ಲಿ ಎರಡು ಭುಜಗಳಂತಿದ್ದವರು ಪುರಂದರದಾಸರು, ಕನಕದಾಸರು (೧೫೦೮-೧೬೦೬). ಹರಿದಾಸ ಸಂಸ್ಕೃತಿಗೆ ಎರಡು ಕಣ್ಣುಗಳು ಇವರಿಬ್ಬರು. ಇವರಿಬ್ಬರ ಕೊಡುಗೆಗೆ, ಕಾಯಕಕ್ಕೆ ಸರಿಸಾಟಿಯಾಗಿ ಉಳಿದ ಯಾವ ದಾಸರದ್ದೂ ಇರಲಾರದು. ಹೀಗೆಂದಮಾತ್ರಕ್ಕೆ ಉಳಿದ ದಾಸರತ್ತ ನಾವು ಗಮನ ಹರಿಸುವ ಕೆಲಸವಿರದು ಎಂದೇನು ಅರ್ಥವಲ್ಲ. ಹರಿದಾಸಪಂಥವೆಂಬ ಆಂದೋಳನಕ್ಕೆ ಇಂಬುಕೊಟ್ಟು, ಹರಿದಾಸ್ಯವೆಂಬ ದೊಡ್ಡ ತೇರನ್ನು ಎಳೆದು, ಸಾಹಿತ್ಯಸೇವೆ ಸಂಸ್ಕೃತಿ ಕೈಂಕರ್ಯಗಳನ್ನು ಕೈಗೂಡಿಸಿಕೊಂಡ ಹಲವರು ಹರಿದಾಸರು ನಮ್ಮ ಎಣಿಕೆಗೆ ಬರುತ್ತಾರೆ. ಅವರನ್ನು ಮರೆಯಲಾಗದು.

ಪ್ರಸಿದ್ಧರಾದ ಹರಿದಾಸರು ಕೆಲವರು ಮಾತ್ರ ಜನರ ನೆನಪಿನಲ್ಲಿ ನಿಂತಿದ್ದಾರೆ ದಿಟ. ಆದರೆ ಅಜ್ಞಾತರಾದ ಅಪ್ರಸಿದ್ಧರಾದ ಎಷ್ಟೋ ಮಂದಿ ಹರಿದಾಸರಿಂದ ಆಗಾಗ, ಅಲ್ಲಲ್ಲಿ, ಅಷ್ಟಿಷ್ಟು ಜನಜಾಗ್ರತಿ ನಡೆದೇ ಇದೆ. ಈ ಮಾತು ಶಿವಶರಣರಿಗೂ, ಸಿದ್ಧರಿಗೂ, ಅವಧೂತರಿಗೂ, ಸಾಧು-ಸಂತರಿಗೂ ಒಪ್ಪುತ್ತದೆ. ಊರು ಕೇರಿಗಳಲ್ಲಿ ತಿರುಗಾಡಿ ಸಜ್ಜನಿಕೆಯ ಬೆಳಕನ್ನು ಜನಸಾಮಾನ್ಯರ ನಡುವೆ ಬೆಳಗಿಸಿ, ಅದರಿಂದಲೇ ಕೃತಾರ್ಥರಾದ ಇಂಥವರಿಂದಲೇ ನಾಡಿನ ಸಂಸ್ಕೃತಿ ಊರ್ಜಿತವಾಗಿರುವುದು. ಇವರಿಗೆ ಜಾತಿ, ಮತ, ಪಂಥ-ಪರಂಪರೆ, ಶಾಸ್ತ್ರಸಂಬಂಧ ಇವು ಯಾವುವೂ ಅಡ್ಡಗೋಡೆಗಳಾಗಲಿಲ್ಲ. ಈ ಕೆಲಸವಾದರೋ ಹೆಸರುಗೊಂಡ ನೇತಾರರಿಂದ ನಡೆಯಲಿಲ್ಲ; ಪಟ್ಟಭದ್ರ ಮಠಮಾನ್ಯರಿಂದ ನಡೆಯಲಿಲ್ಲ.

ಹರಿದಾಸರು ಕೈಗೊಂಡ ಕೆಲಸ ನಡೆದದ್ದು ಜನಸಾಮಾನ್ಯರ ನಡುವೆಯೇ, ಜನಸಾಮಾನ್ಯರ ಸಲುವಾಗಿಯೇ, ಜನಸಾಮಾನ್ಯರ ನೆಲೆಯಲ್ಲಿಯೇ. ಹರಿದಾಸರೂ ಜನಸಾಮಾನ್ಯರೇ. ಇದು ಮುಖ್ಯವಾದ ವಿಚಾರ. ಅವರು ಜನಸಾಮಾನ್ಯರ ಅರಿವಿಗೆ ಬರುವಂಥ ಕನ್ನಡ ನುಡಿಯನ್ನೇ ಬಳಸಿಕೊಂಡರು; ಜನರ ದಿನನಿತ್ಯದ ಬದುಕಿನ ವಿಚಾರಗಳನ್ನೇ ಎತ್ತಿಕೊಂಡರು. ನುಡಿಕಟ್ಟಿನಲ್ಲಿಯೂ ಕ್ಲಿಷ್ಟತೆಯನ್ನು ಕೈಬಿಟ್ಟರು; ಸರಳತೆಗೆ ಒಲಿದರು. ತಾವು ಪಂಡಿತರಾದರೂ, ಜನರೆದುರು ತಮ್ಮ ಪಾಂಡಿತ್ಯವನ್ನು ಮೆರೆಯಲಿಲ್ಲ. ತಮ್ಮ ಮಾತುಗಳಿಗೆ ಶಾಸ್ತ್ರದ ಒತ್ತಾಸೆಯಿದ್ದರೂ ಶಾಸ್ತ್ರದ ಸೊಲ್ಲನ್ನು ಎತ್ತಿ ಹಿಡಿಯಲಿಲ್ಲ. ಆಧ್ಯಾತ್ಮವು ಜನರಿಗೆ ದಕ್ಕಬೇಕೆಂದೇ ಅವರು ದಾಸರಾದುದು. ಪಂಡಿತರೂ ಶಾಸ್ತ್ರವೇತ್ತರೂ ಅದುವರೆಗೆ ಅಧ್ಯಾತ್ಮವನ್ನು ಜನರಿಂದ ದೂರ ಮಾಡಿದ್ದುದನ್ನು ಕಂಡಿದ್ದವರು ಹರಿದಾಸರು. ಆ ದೋಷವನ್ನು ದೂರಮಾಡಲು ತೊಡಗಿದವರು ಅವರು.

ದಾಸಕೂಟ ಎಂಬ ಮಾತು ವಾಡಿಕೆಯಲ್ಲಿದೆಯಷ್ಟೆ? ಇದಕ್ಕೆ ಪ್ರತಿಯೋಗಿಯಾಗಿ ವ್ಯಾಸಕೂಟ ಎಂಬುದೂ ಬಳಕೆಯಲ್ಲಿದೆ. ದಿಟವಾಗಿ ಇವೇನು ಇದ್ದಂಥ ಯಾವುದೊಂದು ವ್ಯವಸ್ಥೆಯಲ್ಲ.

ವ್ಯಾಸಕೂಟವೆಂಬ ಮಾತಿನ ಧ್ವನಿ ವೇದವ್ಯಾಸರು ಸಿದ್ಧಪಡಿಸಿದ ಬ್ರಹ್ಮಸೂತ್ರಗಳನ್ನು ಹಿಡಿದು, ಅದಕ್ಕೆ ಮಧ್ವಾಚಾರ್ಯರು ರಚಿಸಿರುವ ಭಾಷ್ಯ-ಅನುವ್ಯಾಖ್ಯಾನ ಮೊದಲಾದ ಗ್ರಂಥಗಳನ್ನು, ಅವುಗಳಿಗೆ ಜಯತೀರ್ಥರೇ ಮೊದಲಾದವರು ಒದಗಿಸಿರುವ ಟೀಕೆ ಟಿಪ್ಪಣೆಗಳನ್ನೂ ಅಧ್ಯಯನ ಮಾಡುತ್ತ, ಅಲ್ಲಿರುವ ಸಿದ್ಧಾಂತವನ್ನೆ ಸಮರ್ಥಿಸುತ್ತ ಇರುವ ಪಂಡಿತರ ತಂಡ. ಇದಕ್ಕೆ ಕಾಲ-ದೇಶಗಳ ಭೇದವಿರದು. ವ್ಯಾಸತೀರ್ಥರ ಕಾಲದಲ್ಲಿಯೂ ಇದು ಪ್ರಧಾನವಾಗಿ ಇದ್ದು, ವ್ಯಾಸಕೂಟವೆನಿಸಿ ಕೊಂಡಿತೋ ಏನೋ. ಮಧ್ವಾಚಾರ್ಯರು ಉಪಾಸನೆಯ ಎರಡು ಬಗೆಗಳನ್ನು ಹೇಳಿದರು. ಒಂದು ಶಾಸ್ತ್ರಾವಮರ್ಶನ, ಇನ್ನೊಂದು ಧ್ಯಾನ. ಮೊದಲನೆಯ ಬಗೆಯನ್ನು ಹಿಡಿದವರು ವ್ಯಾಸಕೂಟದವರು. ಹಾಗೆ ಮಾಡದೆ ಭಾಗವತರಾಗಿ ಭಕ್ತಿಯೊಂದನ್ನೆ ಹಿಡಿದವರು ದಾಸರು.

ಆದರೆ ಇದೇನು ಖಂಡತುಂಡಾದ ವಿಭಾಗವಲ್ಲ. ಪೇಜಾವರಮಠಾಧೀಶರಾಗಿದ್ದ ವಿಜಯಧ್ವಜತೀರ್ಥರು ಭಾಗವತಕ್ಕೆ ವ್ಯಾಖ್ಯಾನವನ್ನು ರಚಿಸಿ ಭಾಗವತ ಧರ್ಮವನ್ನೇ ಎತ್ತಿಹಿಡಿದರು. ಸೋದೆಮಠದ ವಾದಿರಾಜಸ್ವಾಮಿಗಳು ಮಠಾಧೀಶರಾಗಿದ್ದರೂ ಹರಿದಾಸರಲ್ಲಿ ಅಗ್ರಮಾನ್ಯರು. ದಾಸಸಾಹಿತ್ಯಕ್ಕೆ ಅವರ ಕೊಡುಗೆ ವಿಶಿಷ್ಯವಾದುದು. ಉಡುಪಿಯ ಹಲವು ಮಠಗಳಲ್ಲಿ ಹರಿದಾಸರಿಗೆ ಮರ್ಯಾದೆಯ ಸ್ಥಾನವುಂಟು; ಪೂಜೆಯಲ್ಲಿ ಅವರು ಪಾಲ್ಗೊಳ್ಳುವುದುಂಟು. ಆದರೂ ಪಂಡಿತರು ಬೇರೆ, ದಾಸರು ಬೇರೆ ಎಂಬ ಎಣಿಕೆಯೇನೋ ಇದ್ದೇ ಇದೆ. ಪಂಡಿತರು ದಾಸರಾಗಿರುವುದೂ, ದಾಸರು ಪಂಡಿತರಾಗಿರುವುದೂ ಅಸಂಭವವೇನಲ್ಲದಿದ್ದರೂ ಬಹುಮಟ್ಟಿಗೆ ಕಾಣಸಿಗುವುದಿಲ್ಲ ವೆಂಬುದು ದಿಟ. ದಾಸರು ಜನರೊಂದಿಗೆ ಬೆರೆತುಕೊಂಡು ಆಧ್ಯಾತ್ಮದ ಒಲವನ್ನು ಅವರ ನೆಲೆಯಲ್ಲೇ ಅವರಲ್ಲಿ ಒಡಮೂಡಿಸಿದರು. ಪಂಡಿತರಾದರೋ ಜನರಿಂದ ದೂರ ನಿಂತು, ಅವರ ಮೇಲೆ ಇರುವವರು ಎಂಬುವಂತೆ ತೋರಿಕೊಂಡು, ಮೇಲಿನ ನೆಲೆಯಿಂದ ಅಧ್ಯಾತ್ಮವನ್ನು ಉಪದೇಶಿಸಿದರು; ಅವರ ಬೋಧೆ ನಿರರ್ಥಕವಾದುದು ಸೋಜಿಗವೇನಲ್ಲ !

ಅದು ಏನಾದರಿರಲಿ, ವಾಡಿಕೆಯಲ್ಲಿ ಬಂದ ವ್ಯಾಸಕೂಟ-ದಾಸಕೂಟಗಳ ನಡುವೆ ಇದ್ದ ಅಂತರವನ್ನು ಅರಿತುಕೊಳ್ಳಬೇಕು. ದಾಸಕೂಟವೆಂಬ ಕಲ್ಪನೆಗೆ ಕಾರಣವಾದವರು ವ್ಯಾಸತೀರ್ಥರೇ; ಅವರ ಕಣ್ಮಣಿಗಳಾಗಿದ್ದವರು ಪುರಂದರದಾಸರು, ಕನಕದಾಸರು. ಇವರಿಬ್ಬರ ದಾರಿಯನ್ನು ಹಿಡಿದ ಹರಿದಾಸರಿಗೊಂದು ನೆಲೆಯನ್ನು ಕಲ್ಪಿಸಿಕೊಡುವುದು ಅವರ ಆಶಯವಾಗಿದ್ದಿತು. ಆದರೆ ಅವರು ಸಂಪ್ರದಾಯವೊಂದರ ಮಠಾಧೀಶರೂ ಆಗಿದ್ದವರು. ಮಠದ ಆಡಳಿತವ್ಯವಸ್ಥೆಯ ಅಧಿಕಾರವಿದ್ದುದು ಹರಿದಾಸರಲ್ಲದವರ ಕೈಯಲ್ಲಿಯೇ. ಮಠಾಧೀಶರು ತಾವೇ ಹರಿದಾಸರಂತೆ ತೋರಿಕೊಂಡು, ಹರಿದಾಸರನ್ನು ಆದರಿಸಿ, ಅವರೊಂದಿಗೇ ಇರತೊಡಗಿದಾಗ ಮಠದ ಅಧಿಕಾರಿಗಳಿಗೆ ಕಸವಿಸಿಯಾದುದು ಸಹಜವೇ. ಮಠದ ಪಂಡಿತರು ಅಧಿಕಾರಿಗಳನ್ನು ಆಶ್ರಯಿಸುತ್ತಿದ್ದವರು; ಎಷ್ಟು ವೈದಿಕರಾದರೂ ವ್ಯವಹಾರದಲ್ಲಿ ಲೌಕಿಕರೇ. ಆದರೆ ಹರಿದಾಸರೇನು ಮಠದ ಅಧಿಕಾರಿಗಳನ್ನು ಓಲೈಸುವವರಲ್ಲ. ಅರಸನ ಓಲಗದಿಂದಲೇ ದೂರ ಇರುವವರು ಅವರು; ಅವರಿಗೆ ಅಧಿಕಾರಿಗಳಿಂದ ಆಗಬೇಕಾದುದೇನು? ಪರಮಾರ್ಥದ ನೆವದಿಂದ ವ್ಯವಹಾರದಲ್ಲೇ ಇರುವವರು ಪಂಡಿತರು; ವ್ಯವಹಾರದಲ್ಲಿದ್ದರೂ ವ್ಯಾಸತೀರ್ಥರ ಆದೇಶವೇ ಅದು- 'ಪರಮಪದವನೀವ ಶ್ರೀಕೃಷ್ಣ ನಿರಲಾಗಿ ನರರ ಸೇವಿಸಬೇಡವೊ !'

ಪರಮಾರ್ಥವನ್ನೇ ನಂಬಿಕೊಂಡವರು ಹರಿದಾಸರು. ತಮ್ಮ ನೆಲೆಯನ್ನು ತಮಗಾಗಿ ಗಟ್ಟಿಗೊಳಿಸಿಕೊಳ್ಳುವ ಹಂಬಲ ಅವರದ್ದು; ಬೇರೆಯವರಿಗೂ ಅಧ್ಯಾತ್ಮದಲ್ಲಿ ರುಚಿ ಬರಲೆಂಬ ಬಯಕೆ ಇವರದ್ದು. ಹೀಗೆ ವ್ಯಾಸಕೂಟದವರದ್ದು ಸ್ವಾರ್ಥ; ದಾಸಕೂಟದವರದ್ದು ಪರಾರ್ಥ. ವ್ಯಾಸಕೂಟವೆಂಬ ಹೆಸರು ಅವರ ಬಳಿ ಶಿಷ್ಯ ವೃತ್ತಿಮಾಡಿದ ವಿಜಯೀಂದ್ರ ತೀರ್ಥರು, ವಾದಿರಾಜ ಸ್ವಾಮಿಗಳು, ಶ್ರೀನಿವಾಸ ತೀರ್ಥರು, ಗೋವಿಂದ ಒಡೆಯರು ಮೊದಲಾಗಿ ಇಪ್ಪತ್ತು ನಾಲ್ಕು ಮಂದಿ ಯತಿಗಳಿಂದ ಆಗಿರಬಹುದು. ಚಂದ್ರಿಕಾ, ನ್ಯಾಯಾಮೃತ, ತರ್ಕತಾಂಡವ ಎಂಬ 'ವ್ಯಾಸತ್ರಯಿ'ಯೂ ಕಾರಣ ಇದ್ದಿರಬಹುದು. ವ್ಯಾಸತೀರ್ಥರು ತಮ್ಮ 'ಎದುರಾರೊ ಗುರುವೆ ಸಮನಾರೋ' ಎಂಬ ಹಾಡಿನಲ್ಲಿ ಜಯತೀರ್ಥರನ್ನು ಕುರಿತು 'ವ್ಯಾಸಸೂತ್ರಗಳೆಂಬ ಮಂದರವನು ವೇದರಾಶಿಯೆಂಬ ವಾರಾಶಿಯೊಳಿಟ್ಟು ಶ್ರೀ ಸರ್ವಜ್ಞರ ವಾಕ್ಯಪಾಶದಿ ಸುತ್ತಿ ಭಾಸುರ ನ್ಯಾಯಸುಧಾ ಪಡೆದ ಯತೀಂದ್ರ' ಎಂದು ಉಲ್ಲೇಖಿಸಿದ ಹಿನ್ನೆಲೆಯೂ ಇರಬಹುದು. ಆದರೆ 'ಕೂಟ' ವೆಂದಾಗ ಮೇಲೆ ಕಾಣಿಸಿದ ಯತಿಗಳ ಪಂಡಿತ ಶಿಷ್ಯರೂ, ವ್ಯಾಸತ್ರಯಿಯನ್ನೇ ನಂಬಿಕೊಂಡು ವಾದ ವಿವಾದಗಳನ್ನು ನಡೆಸುತ್ತಿದ್ದವರೂ, ಜಯತೀರ್ಥರ ಸುಧಾಪಾರಾಯಣದಲ್ಲೇ ಕೃತಾರ್ಥರಾದ ಮಡಿವಂತರೂ ಮುಖ್ಯವಾಗಿ ಕಾಣಿಸಿಕೊಳ್ಳುತ್ತಾರೆ.

ವ್ಯಾಸಕೂಟದವರಿಗೆ ಶಾಸ್ತ್ರವೊಂದೇ ಆಸರೆ; ಜ್ಞಾನವನ್ನು ಬಯಸಿದರೂ ಆಚಾರದಲ್ಲಿ ಕರ್ಮಠರು; ಅವರದ್ದು ಮಡಿವಂತಿಕೆ. ಬಹುವೇಳೆ ಅದು ತೋರಿಕೆಯಷ್ಟೆ. ಆದರೂ ಅವರಿಗೆ ವಿಚಾರ ಮಾಡಲು ಅಂಜಿಕೆ. ಹರಿದಾಸರಿಗೆ ಭಗವದನುಭವ ಮುಖ್ಯ; ಶಾಸ್ತ್ರ ಅದಕ್ಕೆ ನೆರವಾದರೆ ಸರಿ, ಶಾಸ್ತ್ರದ ಪ್ರಯೋಜನ ಅಷ್ಟೇ. ಶಾಸ್ತ್ರವನ್ನೇ ತಲೆಯ ಮೇಲೇರಿಸಿಕೊಳ್ಳಲೇಕೆ? ಆಚಾರವೂ ಅಷ್ಟೆ. ಸತ್ ಪ್ರವೃತ್ತಿಗಾಗಿ ಆಚಾರ ಇರಬೇಕಷ್ಟೆ; ಆಚಾರಕ್ಕೆ ಆಚಾರ ಎನ್ನಲೇಕೆ? 'ಮಡಿ ಮಡಿಯೆಂದು ಅಡಿಗಡಿಗೆ ಹಾರುವ' ಬಿಕನಾಸಿ ಮಡಿವಂತಿಕೆಯನ್ನು ಹರಿದಾಸರು ಮೂದಲಿಸಿದರು. ವ್ಯಾಸಕೂಟದ ಪಂಡಿತರದ್ದು 'ಉದರ-ವೈರಾಗ್ಯ'ವೆಂದು ಬಗೆದರು. ಬರಿಯ ಆಚಾರ, ಶಾಸ್ತ್ರವಿಚಾರಗಳಲ್ಲಿ ತೊಡಗಿರುವುದು 'ಹೋಗದೂರಿನ ದಾರಿ ಕೇಳಿದಂತೆ' ಎಂದು ಪುರಂದರದಾಸರೇ ಹೇಳಿದರು. ಈ ಕಾರಣದಿಂದಲೇ ವ್ಯಾಸಕೂಟದ ವಿದ್ವಾಂಸರು ಹರಿದಾಸರನ್ನು ಅನಾಚಾರಿಗಳೆಂದು ಜರಿದು ದೂರವಿಟ್ಟರು.

ಹರಿದಾಸರೇನು ವ್ಯಾಸಕೂಟದ ಮಡಿವಂತರನ್ನು ಗೇಲಿ ಮಾಡಲು ಹಿಂಜರಿಯಲಿಲ್ಲ. ಪುರಂದರದಾಸರ 'ಗಿಣಿಯು ಪಂಜರದೊಳಿಲ್ಲ' ಎಂಬ ಹಾಡನ್ನೇ ನೋಡಿ. ಮಗ ತೀರಿಕೊಂಡಾಗ ದುಗುಡದಿಂದ ರಚಿಸಿದ್ದು ಎಂದು ಕಥೆ. ಆದರೆ ಅದಕ್ಕೆ ಕಾಲಿಲ್ಲ. ಇದೊಂದು ರೂಪಕ. ಇಲ್ಲಿ ಗಿಣಿಯೆಂದರೆ ಭಕ್ತಿ; ಭಾಗವತದಲ್ಲಿನ ಶುಕ. ಪಾಂಡಿತ್ಯದ ಪಂಜರದಲ್ಲಿಟ್ಟ ಭಕ್ತಿಯೆಂಬ ಗಿಣಿ ಅಲ್ಲಿರಲಾರದೆ ಹಾರಿ ಹೋಯಿತು! ರಾಮ ರಾಮ ಎಂಬ ಗಿಣಿ, ಒಂಬತ್ತು ಬಾಗಲ ಮನೆಯಲ್ಲಿ (ಎಂದರೆ ನಮ್ಮ ಶರೀರದಲ್ಲಿ, 'ನವದ್ವಾರೇ ಪುರೇ'), ತುಂಬಿದ ಸಂದಣಿ ಇರಲು (ಪ್ರಾಪಂಚಿಕ ವ್ಯವಹಾರ ತುಂಬಿಕೊಂಡಿರಲು, ಶಾಸ್ತ್ರ ಪ್ರಮೇಯಗಳೇ ನೆರೆದಿರಲು), ಅಂಬರಕ್ಕೆ (ಬಯಲಾಗಿ) ಹಾರಿಹೋಯಿತು. ಮಡಿವಂತರಾದ ಪಂಡಿತರ ಕೈಗೆ ಭಕ್ತಿ ಸಿಗಲಾರದು ಎಂದು ಇಲ್ಲಿನ ತಾತ್ಪರ್ಯ. ಅದು 'ರಂಗಪುರಂದರವಿಠಲನಂತರರಂಗದೊಳಿಹ ಗಿಣಿ'.

ಹಾಗೆಯೇ 'ಡೊಂಕು ಬಾಲದ ನಾಯಕರು' ವ್ಯಾಸಕೂಟದ ಹಿರಿಯರು; ಹರಿದಾಸರು ಹುಗ್ಗಿ ಮಾಡುವಲ್ಲಿ ತಗ್ಗಿ ಬಗ್ಗಿ ನೋಡುವವರು ಇವರು. 'ಹೀರೇ ಬೀದಿಯಲೋಡುವವರು'. ಹಿರಿಯ ಬೀದಿಯೆಂದರೆ ಜ್ಞಾನ; ವ್ಯಾಸಕೂಟದಲ್ಲಿ ಜ್ಞಾನಕ್ಕೇ ಮನ್ನಣೆಯ ಮಣೆ. ಆದರೆ ಕರೇ ಬೂದಿಯಲಿ ಹೊರಳುವವರು; ತಮಸ್ಸು ತುಂಬಿದ ಪ್ರಾಪಂಚಿಕ ವ್ಯವಹಾರದಲ್ಲಿ ಮುಳುಗಿರುವವರು. ಅರ್ಥವಿಲ್ಲದ ಮಡಿವಂತಿಕೆಯೇ ಅವರ ಡೊಂಕುಬಾಲ. ಬಾಲ ಹಿಂದಿರಬೇಕು; ಮುಂದಾಗಬಾರದು. ಅದರ ಸ್ವಭಾವವೇ ಡೊಂಕು, ಎಷ್ಟು ನೇರ ಮಾಡಿದರೂ ಡೊಂಕಾಗಿಬಿಡುತ್ತದೆ. ಭಕ್ತಿ ಮುಂದಿದ್ದು ಮಡಿವಂತಿಗೆ ಹಿಂದಿರಬೇಕು. ಎಷ್ಟಾದರೂ, ಮಡಿವಂತಿಗೆ ಕರ್ಮಠರ ದಾರಿ; ಬಾಹ್ಯಾಂಗ. 'ನೀವೇನೂಟ ಮಾಡಿದಿರಿ?' ಎಂದು ಮಾರ್ಮಿಕವಾಗಿ ಕೇಳುತ್ತಾರೆ. ಪಂಡಿತರ ಶಾಸ್ತ್ರಾವಮರ್ಶನದ ಫಲವೇನು? ಅದರಿಂದ ಭಗವದನುಭವವಾದೀತೆ? ಆದರೇನೋ ಸರಿಯೆ, ಶಾಸ್ತ್ರಾವಮರ್ಶನ ಸಾರ್ಥಕವಾಯಿತು. ಇಲ್ಲವಾದರೆ ಊಟ ಮಾಡಿದ ತೃಪ್ತಿ ಇರಲಾರದು.

'ಕದವ ಮುಚ್ಚಿದಳದೆಕೊ ಗಯ್ಯಾಳಿ ಮೂಳಿ' ಎಂಬುದೂ ಹರಿದಾಸರನ್ನು ಅನಾಚಾರದವರೆಂದು ಜರಿಯುವ ಪಂಡಿತರನ್ನೇ ಕುರಿತದ್ದು. ಮಠದೊಳಗೆ ಅವರನ್ನು ಸೇರಿಸದೆ ಹೊರಗೆ ತಳ್ಳಿದ ಸಂದರ್ಭ ಅದು.

'ಅಂದುಗೆ ಕಿರುಗೆಜ್ಜೆ
ಮುಂಗಾಲಲಳವಟ್ಟ
ಧಿಂ ಧಿಮಿ ಧಿಮಿಕೆಂದು
ಕುಣಿವ ದಾಸರ ಕಂಡು'

ತಮ್ಮೊಳಗಿದ್ದ ಪಾಪ ಬಯಲಾದೀತೆಂದು ಅಂಜಿ, ಕದವನ್ನು ಮುಚ್ಚಿಕೊಳ್ಳುತ್ತಾರೆ. ಈ ಜನರದ್ದು 'ಉದರ ವೈರಾಗ್ಯ', 'ಊಟದ ಮಾರ್ಗದ ಜ್ಞಾನ'-

'ಬೂಟಕತನದಲಿ ಬಹು ಭಕ್ತಿಯ ಮಾಡಿ
ದಿಟನೀತ ಸರಿ ಯಾರಿಲ್ಲೆನಿಸಿ
ನಾಟಕಸ್ತ್ರೀಯಂತೆ ಬಯಲ ಡಂಬವ ತೋರಿ!'

ಬೂಟಾಟಿಕೆಯ ಆಚಾರವನ್ನು ಕಂಡು ದಾಸರಿಗೆ 'ನಗೆಯು ಬರುತಿದೆ'-

'ಹರಿವ ನೀರೊಳಗೆ ಮುಳುಗಿ
ಬೆರಳ ಎಣಿಸುವರ ಕಂಡು'

ಮನಸ್ಸೆಲ್ಲೋ, ಜಪದ ಸೊಲ್ಲೆಲ್ಲೋ! ಮತ್ತೆ ಈ ಮಡಿವಂತರು ದಾಸರನ್ನು ಜರಿದು ಮೂದಲಿಸುವ ಸಂದರ್ಭದಲ್ಲಿಯೂ, ದಾಸರು ಧೈರ್ಯದಿಂದ-

'ನಾ ನಿನ್ನ ಧ್ಯಾನದೊಳಿರಲು ಸದಾ
ಹೀನಮಾನವರೇನು ಮಾಡಬಲ್ಲರೋ, ರಂಗಾ?'

ಎಂದು ತಲೆಕೆಡಿಸಿಕೊಳ್ಳದೆ ನೆಮ್ಮದಿಯಿಂದಲೆ ಇದ್ದರು. ವ್ಯಾಸಕೂಟದವರಿಗೆ ಸ್ವಮತಮಂಡನೆ, ಪರಮತಖಂಡನೆ ಇದೇ ಮುಖ್ಯವಾಯಿತು. ತಮ್ಮ ಸಿದ್ಧಾಂತವನ್ನು ಯುಕ್ತಿಯಿಂದ ಸಮರ್ಥಿಸಿಕೊಂಡರೆ ಕೃತಾರ್ಥರು. ಮತ್ತೆ ತರ್ಕ,ನ್ಯಾಯ, ವ್ಯಾಕರಣ ಇವುಗಳದ್ದೇ ಮೇಲಾಟ. ತಮ್ಮ ಸ್ವರೂಪೋದ್ಧಾರ (ಆತ್ಮೋದ್ಧಾರ) ದ ಕಡೆ ಗಮನ ಕಡಮೆ; ಲೋಕೋದ್ಧಾರದ ಉದ್ದೇಶವಂತೂ ದೂರವೇ ಉಳಿಯಿತು! ಸದಾಚಾರಪಾಲನೆಯ ಒಣ ಕಾತರದಲ್ಲಿ ಆಧ್ಯಾತ್ಮಿಕನಿಷ್ಠೆ ಬಡವಾಯಿತು. ಈ ಕೊರತೆಗಳನ್ನೆಲ್ಲ ತೀರಿಸಿದವರು ಹರಿದಾಸರು, ದಾಸಕೂಟದವರು. ನಾಡಿನ ಸಂಸ್ಕೃತಿಯಲ್ಲಿ ಶಾಸ್ತ್ರಪಾಂಡಿತ್ಯದ ಭಾರ ಬಿಗಿದುಕೊಂಡಾಗ, ಆ ಒತ್ತಡವನ್ನು ಪರಿಹರಿಸಿದವರು ಇವರು.

ಕನಕದಾಸರ ಒಂದು ಪದದಲ್ಲಿ ವ್ಯಾಸಕೂಟದವರನ್ನು ದಿಟವಾಗಿ ಮಧ್ವದ್ವೇಷಗಳೆಂದೇ ಕರೆದಿರುವುದನ್ನು ಕಾಣಬಹುದು. ('ಅಂಧ ತಮಸು ಇನ್ನಾರಿಗೆ' ಎಂಬ ಕೃತಿಯಲ್ಲಿ)-

'ವ್ಯಾಸರ ಮಾತುಗಳಾಡುತ್ತ ವಿ
ಶ್ವಾಸಘಾತುಕತನ ಮಾಡುತ
ದೋಷವೆಂದರಾನುಡಿ ಕೇಳದೆ ಸಂ
ತೋಷವೆಂದರೆ ನೋಡಿ ಬಾಳದೆ
ಶೇಷಶಯನ ಆದಿಕೇಶವರಾಯನ
ದಾಸರೊಡೆಯ ಮಧ್ವದ್ವೇಷಿಗಳಲ್ಲದೆ'

ಇಲ್ಲಿ ವ್ಯಾಸರ ಮಾತುಗಳೆನ್ನುವಾಗ ಬ್ರಹ್ಮಸೂತ್ರಕಾರಣರಾದ ವೇದವ್ಯಾಸರೂ ಆಗಬಹುದು, ತಮ್ಮ ಗುರುಗಳಾದ ವ್ಯಾಸತೀರ್ಥರೂ ಆಗಬಹುದು. ಇಬ್ಬರ ಮಾತುಗಳೂ ಮೋಕ್ಷಕ್ಕೆ ಕಾರಣವಾಗುವಂಥವೇ. ಆದರೆ ಮಾತಿನ ಇಂಗಿತ ತಿಳಿದುಕೊಳ್ಳದೆ, ಮಾತುಗಳನ್ನೇ ಪುನರುಚ್ಚಾರಣೆ ಮಾಡಿದರೆ ಬಂದ ಫಲವೇನು? ಇದು ವಿಶ್ವಾಸಘಾತುಕತನ. ಅವರು ಇನ್ನೊಂದು ಕೃತಿಯಲ್ಲಿ 'ಬರಿದಹಂಕಾರದಲಿ ತತ್ವದ ಕುರುಹು ಕಾಣದೆ, ನಿನ್ನ ದಾಸರ ಜರೆದು ವೇದಪುರಾಣ ಶಾಸ್ತ್ರವನೋದಿ ಫಲವೇನು?' ಎಂದು ಕೇಳಿದ್ದಾರೆ.

ದಾಸಕೂಟವೆಂದರೆ ಅದೊಂದು ಸಂಘಟಿತವಾದ ಸಂಸ್ಥೆಯೆಂದೋ, ನಿರ್ದಿಷ್ಟವಾದ ವ್ಯವಸ್ಥೆಯೆಂದೋ ಬಗೆಯಬಾರದು. ಅದೊಂದು ಕಲ್ಪನೆ ಅಷ್ಟೆ. ಹರಿದಾಸರು ಎಲ್ಲೆಲ್ಲಿ ಇರುತ್ತಿದ್ದರೂ ಯಾವ ಯಾವ ಕಾಲದಲ್ಲಿ ಇರುತ್ತಿದ್ದರೂ ಅವರ ಒಡಲೊಳಗೆ ತಾವು ದಾಸಕೂಟಕ್ಕೆ ಸೇರಿದವರೆಂಬ ಭಾವನೆ ಇರುವುದು ಮುಖ್ಯವಾದ ವಿವರ. ಅದು ಭಾವಪ್ರಧಾನವಾದುದು. ಇದೇನು ಮಠದಂತೆ ಯಾರೊಬ್ಬರ ಅಂಕೆಗೆ, ಆಡಳಿತಕ್ಕೆ ಒಳಪಟ್ಟಿದ್ದಲ್ಲ. ಅದಕ್ಕೊಂದು ಪ್ರಾದೇಶಿಕವಾದ ನೆಲೆ ಎಂಬುದಾಗಲಿ, ಮೂರ್ತಸ್ವರೂಪವಾಗಲಿ ಇರದು. ಅದಕ್ಕೇನು ಸದಸ್ಯತ್ವವೆಂಬುದಿಲ್ಲ. ಶುಲ್ಕವಿಲ್ಲ, ನಿಯಾಮಾವಳಿಯಿಲ್ಲ, ಪ್ರವೇಶವಿಲ್ಲ, ಉಚ್ಚಾಟನೆಯಿಲ್ಲ. ಹರಿದಾಸರು ಎಲ್ಲಿ ಸೇರಿದರಲ್ಲಿ ದಾಸಕೂಟ ತೋರಿಕೊಳ್ಳುವುದು. ಭಜನೆಮಾಡುವಾಗ ದಾಸಕೂಟ; ಗೋಪಾಳ ಬುಟ್ಟಿಹಿಡಿದು ಹೊರಟಾಗ ದಾಸಕೂಟ; ಸಂಕೀರ್ತನ ನಡೆಯುವಾಗ ದಾಸಕೂಟ. ಲೌಕಿಕದಲ್ಲಿ ಅದಿರದು; ವ್ಯವಹಾರಕ್ಕೆ ಅದರ ಅಗತ್ಯವಿರದು. ಆದರೆ ದಾಸ ಕೂಟದವರಿಗೆ ಅಂಕಿತವಿಲ್ಲದೆ ದೇಹವಿರಬಾರದು;

ಅಂಕಿತವಾದರೋ ಗುರುವಿನಿಂದಲೇ ದೊರಕುವುದು. ಗುರುವೆಂದರೆ ಹಿರಿಯ ದಾಸನೇ; ಅವನೇನು ಸಂನ್ಯಾಸಿಯೂ ಅಲ್ಲ, ಮಠಾಧೀಶನೂ ಅಲ್ಲ. ಹರಿದಾಸರ ಪೀಳಿಗೆಯಲ್ಲಿ ಬಂದ ಗೃಹಸ್ಥನೇ. ಇದೊಂದು ಪದ್ಧತಿಯಿದೆ. ಅಂಕಿತ ನೀಡುವ ಹಿರಿಯರೆಲ್ಲರಿಗೆ ಮತ್ತೊಬ್ಬ ಹಿರಿಯ, ನಾಯಕ ಎಂಬುದಿಲ್ಲ. ಎಲ್ಲ ಹಿರಿಯರ ಸಂಘ-ಸಮಿತಿ ಎಂಬುದೂ ಇಲ್ಲ. ಆದರೆ ಪರಂಪರೆ ಮುಖ್ಯ. ಅಂಕಿತ ಕೊಡುವ ಹಿರಿಯ ತಾನು ಅಂಕಿತ ಪಡೆದುಕೊಂಡಿರಬೇಕು.

ವ್ಯಾಸತೀರ್ಥರೇ ದಾಸಕೂಟವನ್ನು ಬಣ್ಣಿಸಿರುವುದಿದೆ-

'ಏನು ಸುಖವೊ ಎಂಥ ಸುಖವೋ ಹರಿಯ ಧ್ಯಾನ ಮಾಡುವವರ ಸಂಗ ||ಪ||

ತಂಬೂರಿ ಮೀಟುತ ದ್ವಯ ಅಂಬಕದಿ ಬಾಷ್ಪಬಿಂದು ತುಂಬಿ ಆ ನಂದದಿಂದ
ಸಂಭ್ರಮವಾಗಿಹರ ಸಂಗ ||೧||

ಗೆಜ್ಜೆಯ ಕಾಲಲಿ ಕಟ್ಟಿ ಲಜ್ಜೆ ಬಿಟ್ಟು ಹರಿಯ ನಾಮ ಗರ್ಜನೆ ಮಾಡುತ್ತ
ಅಘವರ್ಜಿತರಾಗಿಪ್ಪರ ಸಂಗ ||೨||

ತುಚ್ಛವಿಷಯವ ತೊರೆದು ನಿಶ್ಚಲಭಕುತಿಯಿಂದ ಅಚ್ಯುತಾನಂತನ ಪಾದ ಮೆಚ್ಚಿಸಿದವರ
ಸಂಗ ||೩||

ದರ್ವಿಯಂತೆ ಜೀವವನು ಸರ್ವತ್ರ ತಿಳಿದು ಶೇಷ ಪರ್ವತವಾಸನ ಕಂಡು
ಉರ್ವಿಯೊಳಿಹರ ಸಂಗ ||೪||

ನಡೆವುದು ನುಡಿವುದು ಕೊಡುವುದು ಕೊಂಬುವುದು ಒಡೆಯನ ಪ್ರೇರಣೆಯೆಂದು
ನುಡಿದು ಹಿಗ್ಗುವರ ಸಂಗ ||೫||

ಸೃಷ್ಟಿಗೊಡೆಯನ ಮನವಿಟ್ಟು ಭಜಿಸುತ ಜ್ಞಾನ-
ಶಿಷ್ಟರಾಗಿ ಸಿರಿಕೃಷ್ಣಗಿಷ್ಟರಾಗಿಪ್ಪರ ಸಂಗ ||೬||

ದಾಸರನ್ನು ಕುರಿತು ಸ್ಪಷ್ಟವಾದ ಶಬ್ದಚಿತ್ರ ಇದು. 'ಹರಿಯ ಹೆಸರಿನಿಂದ ಬದುಕುವ ದಾಸ ನಾನು' ಎಂದು ತಮ್ಮನ್ನೇ ತಾವು ಗುರುತಿಸಿಕೊಂಡರು. ಅವರ ಒಲವು ಇದ್ದದ್ದು ಹರಿದಾಸರ ಕಡೆಗೇ ಎಂಬುದಂತೂ ನಿರ್ವಿವಾದ. ಅವರೇ ಇನ್ನೊಂದು ಕೃತಿಯಲ್ಲಿ,

'ಧನ್ಯನಾದೆನು ನಾನು ಮನುಜಜನ್ಮದಿ ಪುಟ್ಟಿ
ಮಾನ್ಯನಾದೆನು ಇನ್ನು ಈ ಜಗದೊಳಗೆ ಪನ್ನಂಗಶಯನ ಶ್ರೀಕೃಷ್ಣನ ದಾಸರನು
ಚೆನ್ನಾಗಿ ಸ್ಮರಿಸಿ ಪಾವನ್ನನಾದೆನಿಂದು'.

ಎಂದು ದಾಸರನ್ನು ಮೆಚ್ಚಿಕೊಂಡಿದ್ದಾರೆ.

ಹರಿದಾಸರಾಗುವವರು 'ಸಾಲಮಾಡಲಿಬೇಡ, ಸಾಲದೆಂದೆನಬೇಡ, ನಾಳಿಗೇನೆಂಬ ಚಿಂತೆ ಬೇಡ' ಎಂಬ ಸೂತ್ರವನ್ನು ಗಟ್ಟಿಯಾಗಿ ಹಿಡಿದವರು. ಹರಿದಾಸರು ಗೃಹಸ್ತರೇ ಆದುದರಿಂದ,

ಲೌಕಿಕವೃತ್ತಿಯನ್ನು ಸಾಮಾನ್ಯವಾಗಿ ಹಿಡಿಯದೆ ಇರುವುದರಿಂದ, ಲೌಕಿಕ ಪ್ರವೃತ್ತಿ ಇಲ್ಲವೆ ಇರುವುದರಿಂದ ಅವರು ಬದುಕನ್ನು ನಿರ್ವಹಿಸುವುದು ಸುಲಭವೇನಲ್ಲ.

'ಹರಿದಾಸ ದೀಕ್ಷೆ ಬಲು ಕಷ್ಟ ಕಷ್ಟವೆಂದು ಕಾಣೋ
ಮನುಜಾಧಮಗೆ ಇದು ಸುಲಭವಲ್ಲವೋ ಪ್ರಾಣೆ!'

ಇದ್ದುದರಲ್ಲಿ, ತಾನಾಗಿ ಬಂದದ್ದರಲ್ಲಿ ತೃಪ್ತರಾಗಿರಬೇಕು. ಶ್ರೀಪಾದರಾಜರು ಹೇಳಿದಂತೆ 'ಇಟ್ಹಾಂಗೆ ಇರುವೆನೋ ಹರಿಯೆ, ಎನ್ನ ಧೊರೆಯೆ!' ಎಂಬುದೇ ಹರಿದಾಸರ ಜೀವನಸೂತ್ರ. ಬದುಕು ಚೆನ್ನಾಗಿರಬೇಕೆಂದು ಪ್ರಪಂಚದ ಬಲೆಯಲ್ಲಿ ಸಿಲುಕಿಕೊಂಡರೆ ಕೆಲಸ ಕೆಡುತ್ತದೆ. 'ಸಾಲದು, ಇನ್ನಷ್ಟು ಬೇಕು' ಎಂದರೆ, 'ನಾಳೆಗಿಡಬೇಕು' ಎಂಬ ಸಂಗ್ರಹಬುದ್ಧಿಯಿದ್ದರೆ ಅವನು ಹರಿದಾಸನಲ್ಲ. 'ಇಷ್ಟು ದೊರಕಿದರೆ ಇನ್ನಷ್ಟರಾಸೆ' ಇದ್ದಾಗ 'ಎಂತಾದರೂ ಚಿಂತೆ ಬಿಡದು'. ಹರಿದಾಸನ ಮುಖ್ಯಲಕ್ಷಣ ಅವನು ನಿಶ್ಚಿಂತನಾಗಿರುವುದು, ಅಂಜಿಕೆ-ಕಳವಳ ಬಿಟ್ಟಿರುವುದು, 'ಹರಿಚಿತ್ತ ಸತ್ಯ'ವೆಂದು ಗಟ್ಟಿಯಾಗಿ ನಂಬಿರುವುದು. 'ನಾನೇಕೆ ಬಡವನೋ, ನಾನೇಕೆ ಪರದೇಶಿ, ಶ್ರೀನಿಧೇ ಹರಿ ನೀನಿರುವತನಕ?' ಎಂಬುದು ಅವರ ಧೈರ್ಯ.

ಇದೊಂದು ಮನೋಧರ್ಮ, ಜೀವನಕ್ರಮ. ಕಾಲಲ್ಲಿ ಗೆಜ್ಜೆ, ಕೊರಳಲ್ಲಿ ತುಳಸೀಮಾಲೆ, ಹಣೆಯ ಮೇಲೆ ಊರ್ಧ್ವಪುಂಡ್ರ, ಕೈಯಲ್ಲಿ ದಂಡಿಗೆ ಬೆತ್ತ, ಗೋಪಾಳಬುಟ್ಟಿ, ಗಾಯನ-ನರ್ತನ, ಹರಿದಿನವ್ರತ, ಮಧುಕರ ವೃತ್ತಿ ಇವೆಲ್ಲ ಈ ಮನೋಧರ್ಮದ ಅಭಿವ್ಯಕ್ತಿಯೇ. ಇದನ್ನು ವೃತ್ತಿಯಾಗಿ ಹಿಡಿದವರೂ ಇದ್ದರೆನ್ನಿ; ಹರಿದಾಸರಾಗಿಯೂ ಬೇರೆ ವೃತ್ತಿಗಳನ್ನು ಹಿಡಿದವರೂ ಇದ್ದರು. ಆದರೆ ಅವರೆಲ್ಲರ ಮನೋಧರ್ಮ ಹರಿದಾಸ್ಯದ್ದು. ಶರೀರವು ಸಾಧನ ಶರೀರವೆಂಬ ಎಣಿಕೆ ಅವರದ್ದು; ಪುರಂದರದಾಸರು ಹೇಳಿದಂತೆ 'ಮಾನವಜನ್ಮ ದೊಡ್ಡದು' ಎಂಬ ನಂಬಿಕೆ; ಅದನ್ನು ಹಾನಿಮಾಡಬಾರದೆಂಬ ತವಕ. ಶ್ರೀಪಾದರಾಜರು ಹರಿದಾಸರ ಮನೋಧರ್ಮವನ್ನು 'ಇದನಾರು ಕೊಡದಿದ್ದರೆ' ಎಂಬ ಕೀರ್ತನೆಯಲ್ಲಿ ಸಂಗ್ರಹಿಸಿದ್ದಾರೆ. ಅವರು ದೇವರನ್ನು ಬೇಡಿಕೊಂಡು ಬಯಸುವುದಿಷ್ಟೆ - 'ವಾಸುದೇವನೆ, ನಿನ್ನ ದಾಸರ ದಾಸರ ದಾಸ್ಯವ ಕೊಡು ಸಾಕು' ಎಂಬುದು -

'ಗ್ರಾಸವಾಸಗಳಿಗೆ ಇಲ್ಲವೆಂದು ನಿನ್ನ
ಬೇಸರಿಸಿ ಬೇಡಬಂದುದಿಲ್ಲ!
ಸತಿಸುತರುಗಳ ಸಹಿತನಾಗಿ ನಾ
ಹಿತದಿಂದ ಇರಬೇಕೆಂಬೊದಿಲ್ಲ!

....

ಸಾಲವಾಯಿತೆಂದು ಸಂಬಳ ಎನಗೆ
ಸಾಲದೆಂದು ಬೇಡಬಂದುದಿಲ್ಲ!

....

ಒಡವೆಗಳಿಲ್ಲ ಒಡ್ಯಾಣಗಳಿಲ್ಲೆಂದು
ಬಡವನೆಂದು ಬೇಡಬಂದುದಿಲ್ಲ!

....
ಆಗಬೇಕು ರಾಜ್ಯಭೋಗಗಳೆನಗೆಂದು
ಈಗ ನಾ ಬೇಡಬಂದುದಿಲ್ಲ!"

'ಇತರ ವಿಷಯಂಗಳಿಗೆರಗಿಸದೆ ಮನಕೆ ನಿನ್ನ ಕಥಾಮೃತವ ಕೊಡು', 'ನಾಲಗೆಯಲ್ಲಿ ನಿನ್ನ ನಾಮದುಚ್ಚಾರಣೆಯ ಪಾಲಿಸು', 'ಒಡೆಯ ನಿನ್ನಡಿಗಳಿಗೆರಗುವುದಕೆ ಮನ ಬಿಡದಿಹದೊಂದನು ಕೊಡು' ಎಂದು ಬೇಡಿಕೊಳ್ಳುತ್ತಾರೆ.

ಇಲ್ಲಿ ಇದೊಂದು ವಿಚಾರವನ್ನೂ ಗಮನಿಸಬೇಕು. ದಾಸಕೂಟವೆಂದರೆ ಮಾಧ್ವಮತಕ್ಕೆ ಸೇರಿದ್ದೆಂಬ ಕಲ್ಪನೆಯಿದೆ. ಇದರಲ್ಲಿ ಸ್ವಲ್ಪ ಮಟ್ಟಿಗೆ ತಥ್ಯಾಂಶವಿದ್ದರೂ, ಅದು ಸಂಪೂರ್ಣವಾಗಿ ದಿಟವಲ್ಲ. ಮಧ್ವಾಚಾರ್ಯರೇ ಹರಿದಾಸರಾಗಿದ್ದವರು; ಅವರ ದ್ವಾದಶಸ್ತೋತ್ರವೇ ಇದಕ್ಕೆ ಸಾಕ್ಷಿ. ಅವರ ನೇರವಾದ ಶಿಷ್ಯ ನರಹರಿತೀರ್ಥರು ಹರಿದಾಸಪರಂಪರೆಯ ಪ್ರವರ್ತಕರೆಂದು ಹೇಳುವವರಿದ್ದಾರೆ. ಇವರ ಒಂದೆರಡು ಕನ್ನಡ ಹಾಡುಗಳೂ ಉಳಿದುಬಂದಿವೆಯೆನ್ನಿ. ಮಾಧ್ವವೇದಾಂತದ ಕೆಲವು ಪ್ರಮೇಯಗಳನ್ನು ಎತ್ತಿ ಹಿಡಿಯುವ ಪದಗಳು ಪುರಂದರದಾಸರ ಸಾಹಿತ್ಯ ಸೃಷ್ಟಿಯಲ್ಲಿ ಸೇರಿಬಂದಿರುವುದೂ ದಿಟ. ಶ್ರೀಪಾದರಾಜರೂ ವ್ಯಾಸತೀರ್ಥರೂ ಮಾಧ್ವವೇದಾಂತದ ನಿಲುವನ್ನು ಸಮರ್ಥಿಸಿ ಸಂಸ್ಕೃತದಲ್ಲಿ ಗ್ರಂಥರಚನೆ ಮಾಡಿರುವುದೂ ಹೌದು.

ಆದರೆ ಇಷ್ಟರಿಂದ ದಾಸಪಂಥದ ಧೋರಣೆ ಮಾಧ್ವಮತಕ್ಕೆ ಸೀಮಿತವಾದುದು ಎಂದರೆ ತಪ್ಪಾಗುತ್ತದೆ. ವಿಜಯದಾಸರೂ ಅವರನಂತರ ಹಲವು ದಾಸರೂ ತಾವು ಹದಿನಾರಾಣೆ ಮಾಧ್ವರೆಂಬುದನ್ನು ಕಾಣಿಸಿಕೊಂಡರು; ಈ ಮಾತನ್ನು ಮೊದಲ ದಾಸರಿಗೆ ಅನ್ವಯಿಸುವಂತಿಲ್ಲ. ಶ್ರೀಪಾದರಾಜರು, ವ್ಯಾಸತೀರ್ಥರು, ಪುರಂದರದಾಸರು, ಕನಕದಾಸರು ಇವರಿಂದ ಸಿದ್ಧವಾದ ದಾಸಸಾಹಿತ್ಯ ಹೀಗೆ ಸಂಕುಚಿತವಾದುದಲ್ಲ; ಕೇವಲ ಮಾಧ್ವವೆಂಬಂಥ ಒಲವು ಅಲ್ಲಿ ಕಾಣಸಿಗುವುದಿಲ್ಲ. ಮಾನವಸಹಜವಾದ ಶೀಲ, ಮೌಲ್ಯಗಳನ್ನೇ ಅವರು ಎತ್ತಿಹಿಡಿದರು. ಪುರಂದರದಾಸರಂತೂ 'ಮಾನವನ ಜನ್ಮ ದೊಡ್ಡದು' ಎಂದೇ ಸ್ಪಷ್ಟವಾಗಿ ಹೇಳಿದರು. ವ್ಯಾಸತೀರ್ಥರು 'ಹ್ಯಾಗೆ ಪದ್ಮಕ್ಕೆ ಪಾಣಿಯ ಲೇಪವಿಲ್ಲ, ಹಾಗೆ ಭಕ್ತಿಗೆ ಸಂಸ್ಕೃತಿಯಿಲ್ಲ' (ಭಗವದ್ಗೀತಾ ವೃತ್ತನಾಮ) ಎಂದದ್ದು ಕುಲ, ಶೀಲ, ವಿದ್ಯೆ, ಧನ ಎಲ್ಲವನ್ನೂ ತೊರೆದು ನಿಂತದ್ದು ಭಕ್ತಿ ಎಂಬರ್ಥದಲ್ಲಿ; ಮನುಷ್ಯನಾದರೆ ಸಾಕು ಎಂಬ ಎಣಿಕೆ. 'ಎಲ್ಲರನು ಸಲಹುವನು, ಇದಕೆ ಸಂಶಯ ಬೇಡ' ಎಂಬ ಆಶ್ವಾಸನೆ ನೀಡಿದರು. 'ಬಲ್ಲಿದನು ನೀನೆಂದು ಬಡವರ ಬಾಯ ಬಡಿಯದಿರು' ಎಂದು ಎಚ್ಚರಿಸಿದರು. ತಾತ್ವಿಕ ನಿಲುವು ಏನೇ ಇರಲಿ, ವ್ಯವಹಾರದಲ್ಲಿ ಮಾನವೀಯತೆಗೆ ಒತ್ತುಕೊಡುವುದು ದಾಸ ಸಾಹಿತ್ಯದಲ್ಲಿ ಎದ್ದು ಕಾಣುತ್ತದೆ.

ವ್ಯಾಸಕೂಟ ಮಡಿವಂತಿಕೆಯ ಪ್ರತೀಕವೆನಿಸಿದರೆ ದಾಸಕೂಟದ ನೋಟ ವಿಶಾಲ ವಾದುದು. ವ್ಯಾಸರಾಯರು ಕನಕದಾಸರ ಮೇಲೆ ಪ್ರೀತಿಮಾಡಿದುದನ್ನು ಎಲ್ಲರೂ ಬಲ್ಲರು. ಅಷ್ಟು ಪ್ರಸಿದ್ಧಿಗೆ ಬರದ ಅನೇಕ ನಿದರ್ಶನಗಳಿವೆ. ಗೋಪಾಲದಾಸರ ಶಿಷ್ಯರಾಜ ರಾಮಾವಧೂತರು ಶೇಖ ಬಡೆಸಾಬ (೧೮೮೨-೧೯೪೦)ರಿಗೆ ಹಂಪೆಯಲ್ಲಿ ಹರಿದಾಸ ದೀಕ್ಷೆ ಕೊಟ್ಟರು; ಇವರು

ಶ್ರೀರಾಮ ಎಂಬಂಕಿತದಿಂದ ೭೭೦ ಕೀರ್ತನೆಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಹಲವು ನೂರರಷ್ಟು ಉಗಾಭೋಗಗಳಿವೆ. ದಖನೀ, ಹಿಂದಿ, ಉರ್ದು ಭಾಷೆಗಳಲ್ಲಿಯೂ ಇವೆ. ಬಡೆಸಾಬರ ರಚನೆಗಳು ಅಚ್ಚಾಗಿವೆ. ಇವರ ಎಳವೆಯಲ್ಲಿ ಗೊನವಾರದ ಜೋಯಿಸರಾಗಿದ್ದ ಹನುಮಂತಾ ಚಾರ್ಯರು, ವೆಂಕಟಭೀಮಾಚಾರ್ಯರಿಗೆ ಇವರು ಅಚ್ಚುಮೆಚ್ಚಾಗಿ, ಅವರೊಂದಿಗೆ ಶಾಸ್ತ್ರಾಧ್ಯಯನ, ಪುರಾಣಪಠಣ, ಹರಿಸಂಕೀರ್ತನ, ಭಜನೆಗಳಲ್ಲಿ ಪಾಲ್ಗೊಂಡು, ವಯಸ್ಸಾದ ಮೇಲೆ ಹಂಪಿಯಲ್ಲಿ ರಾಮಾವಧೂತರ ಬಳಿ ಶಿಷ್ಯರಾಗಿ ರಾಮಾಯಣ, ಮಹಾಭಾರತ, ಭಾಗವತಗಳ ಗಾಢವಾದ ಪರಿಚಯವನ್ನು ಪಡೆದುಕೊಂಡರು. ಪಿಂಜಾರಮನೆತನದವರಾದ ಇವರು ಭಾಗವತ ಹರಿದಾಸರಾದದ್ದು ಹೀಗೆ. ಬಡೆಸಾಹೇಬರು ಶ್ರೀರಾಮದಾಸರಾದರು. ಲಿಂಗದಹಳ್ಳಿಯಲ್ಲಿರುವ ಅವರ ಗೋರಿಯ ಕಲ್ಲಿನಲ್ಲಿ ಹನುಮಂತನ ಮೂರ್ತಿಯಿದ್ದು, ಅಲ್ಲಿ ಆರಾಧನೆ ನಡೆಯುತ್ತದೆ. ರಾಯಚೂರಿನ ದೇವದುರ್ಗ ತಾಲೂಕಿನ ಜನರಿಗೆ ಇವರು ಮುಸಲ್ಮಾನರಲ್ಲ, ತುಳಸೀದಾಸರ ಅವತಾರ !

ರಾಯಚೂರು ಪ್ರಾಂತ್ಯದ ಚಂದರಕಿಯ ದೊರೆಗಳು ಬೇಡರಾಗಿದ್ದವರು ಭಾಗವತರಾದದ್ದೂ ಗೋಪಾಲದಾಸರಂಥ ಹರಿದಾಸರ ಪ್ರಭಾವದಿಂದಲೇ. ಕೋಸಗಿಯ ಜಗನ್ನಾಥದಾಸರು ಹಲವಾರು ನೇಕಾರರಿಗೆ ದೀಕ್ಷೆಯನ್ನು ನೀಡಿ ಹರಿದಾಸರನ್ನಾಗಿ ಮಾಡಿದರು. ಅಸ್ಥಿಹಾಳ ಗೋವಿಂದದಾಸರೆಂಬ ರಾಯಚೂರಿನ ಹರಿದಾಸರು ಅನೇಕ ನಾಯಂದರಿಗೆ ಹರಿದಾಸದೀಕ್ಷೆಯನ್ನು ಕೊಟ್ಟರು. ಮಾನವಿಯ ಶ್ಯಾಮಸುಂದರ ವಿಠಲದಾಸರು ಹರಿಜನನಾದ ಮೂರ್ತೆಪ್ಪನನ್ನು ತಮ್ಮ ಆಪ್ತವರ್ಗ ದಲ್ಲಿ ಸೇರಿಸಿಕೊಂಡರು; ಹರಿದಾಸನನ್ನಾಗಿ ಮಾಡಿದರು. ಚಂಡರಕಿ ರಾಘವೇಂದ್ರದಾಸರು ಹೂಗಾರನೊಬ್ಬನ ಮೇಲೆ ಕೃಪೆ ಮಾಡಿ ಅವನನ್ನು ದಾಸಕೂಟದಲ್ಲಿ ಸೇರಿಸಿಕೊಂಡರು. ಈತನು ಭೀಮದಾಸನೆನಿಸಿ ಕೆಲವು ಕೃತಿಗಳನ್ನು ರಚಿಸಿದ್ದಾನೆ. ಬೆಂಗಳೂರಿನ ದಾಸರ ಲಕ್ಷ್ಮೀನಾರಾಯಣರಾಯರು ನಡೆಸುತ್ತಿದ್ದ ಭಜನಗೋಷ್ಠಿಗಳಲ್ಲಿ ಎಲ್ಲ ಜಾತಿಯ ಜನರಿಗೂ ಪ್ರವೇಶವಿದ್ದಿತು. ಇಷ್ಟು ನನಗೆ ತಿಳಿದು ಬಂದಿರುವ ವಿವರಗಳು. ನನ್ನ ಅರಿವಿಗೆ ಬಾರದೆ ಹೋದ ಇಂಥ ನಿದರ್ಶನಗಳು ಎಷ್ಟೋ!

ವ್ಯಾಸರಾಯರ ಮಾತಿನಲ್ಲಿ ಹರಿದಾಸಕೂಟವೆಂದರೆ ಗೆಜ್ಜೆಯ ಕಾಲಲಿ ಕಟ್ಟಿ, ಲಜ್ಜೆಬಿಟ್ಟು, ಹರಿಯ ನಾಮ ಗರ್ಜನೆ ಮಾಡುತ್ತ ಅಘವರ್ಜಿತರಾಗಿಪ್ಪರ ಸಂಘ. ಪುರಂದರದಾಸರು 'ಸಂಘವಾಗಲಿ ಸಾಧುಸಂಗವಾಗಲಿ' ಎಂದಾಗ ತಮ್ಮ ಗುರುಗಳು ಹೇಳಿದ ಸಂಘವೇ ಅವರ ನೆನಪಿನಲ್ಲಿದ್ದುದು. ಸಾಧುಗಳ ಸಂಗವೆಂದರೆ ವರ್ಣಾಶ್ರಮಗಳ ಎಣಿಕೆಯೇನಿರದು. 'ಯಾವ ಕುಲದವನಾದರೇನು, ಆವನಾದರೇನು ಆತ್ಮಭಾವವನರಿತಮೇಲೆ?' ಎಂದರು ಪುರಂದರದಾಸರು. ಕನಕದಾಸರು 'ದಾಸನಾಗೋ ಭವಪಾಶ ನೀಗೋ ವಿಶೇಷನಾಗೋ!' ಎಂದು ಕರೆಕೊಟ್ಟರಲ್ಲವೆ? ದಾಸನೆಂದರೆ ವಿಶೇಷ ವ್ಯಕ್ತಿ; ಭವದ ಯಾವ ಪಾಶವೂ ಅವನನ್ನು ಕಟ್ಟಿಹಾಕಲಾರದು. ಕುಲ, ಜಾತಿ, ಮತ, ಮಮತೆ, ಅಭಿಮಾನ, ಆಚಾರ, ಪುಣ್ಯ, ಪಾಪ ಎಲ್ಲವೂ ಭವದ ಪಾಶಗಳೇ ತಾನೆ? ಇವುಗಳಿಗೆ ಅಂಟಿಕೊಂಡವನು ದಾಸನು ಹೇಗಾದಾನು? ಎಂದರೆ, ಅವನು ಅನಾಚಾರಿಯಾಗಿರುವನೆಂದರ್ಥವಲ್ಲ; ಅವನು ಅನಾಚಾರಿಯಾಗಿರುವುದು ಸಾಧ್ಯವೂ ಇಲ್ಲ. ತನ್ನೊಳಗೆ ಭಗವದನುಭವವನ್ನು ಪಡೆದುಕೊಂಡವನು ಮಿಥ್ಯಾಚಾರದಲ್ಲಿ ಹೇಗೆ ತಾನೆ ತೊಡಗಿಯಾನು? ಇತರರಂತೆ ಅವನು

ಅದನ್ನು ಮೇಲೇರಿಸಿಕೊಂಡು ಎಲ್ಲೆಲ್ಲಿಯೂ ಇರುವ ಭಗವಂತನ ಅರಿವಿನಿಂದ ಜಾರುವುದಿಲ್ಲ. ದೋಣಿ ನೀರಿನಲ್ಲಿರಬೇಕು; ಆದರೆ ನೀರು ದೋಣಿಯೊಳಗೆ ಸೇರಬಾರದು. ಇದೇ ವಿಶೇಷ.

ಇಲ್ಲೊಂದು ಸ್ವಾರಸ್ಯವಾದ ಸಂಗತಿಯನ್ನು ಗಮನಿಸಬೇಕು. ವ್ಯಾಸತೀರ್ಥರನ್ನು ಪುರಂದರದಾಸರು ಸಂಧಿಸಿದ್ದು ಹಂಪಿಯ ಬಳಿ ಚಕ್ರತೀರ್ಥದಲ್ಲಿ; ಸುಮಾರು ೧೫೨೫ರಲ್ಲಿ. ಆಗ ವ್ಯಾಸತೀರ್ಥರಿಗೆ ೭೭ವರ್ಷ ವಯಸ್ಸು; ಪುರಂದರದಾಸರಿಗೆ ೪೦ರ ಸುಮಾರು. ಆ ವೇಳೆಗಾಗಲೆ ವ್ಯಾಸತೀರ್ಥರು ಪ್ರಸಿದ್ಧರಾಗಿದ್ದರು. ವಿಜಯನಗರದ ಅರಸ ಕೃಷ್ಣದೇವರಾಯನು ಅವರನ್ನು 'ನಿಗಮಾಗಮ ನಿರ್ಣೀತ ನಿರ್ಜರಾಧೀಶಮಂತ್ರಿ' ಯೆಂದೂ, 'ನೃಪೇಂದ್ರಮುಕುಟೀರತ ನೀರಾಜಿತನಿಜಾಂಘ್ರಿನಿರಹಂಕಾರಚಿತ್ತ' ರೆಂದೂ, 'ನೀತಿಮಾರ್ಗೋಪದೇಶಿ'ಯೆಂದೂ ಬಣ್ಣಿಸಿದ್ದಿದೆ. ಕನಕದಾಸರು ಮೊದಲೇ ವ್ಯಾಸತೀರ್ಥರ ಬಳಿ ಇದ್ದವರು. ಪುರಂದರದಾಸರೇನೋ ಅವರನ್ನು ಕಂಡಾಗ ಕೃತಾರ್ಥತಾಭಾವವನ್ನನುಭವಿಸಿದರು.

'ವ್ಯಾಸರಾಯರ ಚರಣಕಮಲ ದರುಶನವೆನಗೆ
ಏಸು ಜನ್ಮದ ಸುಕೃತಫಲದಿ ದೊರಕಿತೋ'

ಆದರೆ ಪುರಂದರದಾಸರನ್ನು ಕಂಡಾಗ, ಅಥವಾ ಅದಕ್ಕೂ ಮೊದಲೆ ಕನಕದಾಸರನ್ನು ಕಂಡಾಗ, ವ್ಯಾಸತೀರ್ಥರಲ್ಲೂ ಒಂದು ಪರಿವರ್ತನೆ ಯಾಯಿತೆಂಬುದನ್ನು ಹಲವರು ತಿಳಿಯರು. ವ್ಯಾಸತೀರ್ಥರ ಹಲವು ಕೃತಿಗಳು ಇದನ್ನು ತಿಳಿಸುತ್ತವೆ-

'ನಿಧಿಯ ಮೇಲೆ ಇದ್ದು ನಿಧಿಯನರಿಯದಂತೆ
ತನ್ನ ಕಂಠಮಣಿಯ ತಾ ಮರೆತಂತೆ
ಕಣ್ದೆರೆಯದ ಹಸುಳೆ ತಾಯನರಿಯದಂತೆ
ಎನ್ನಲ್ಲಿ ಹೊಂದಿಪ್ಪ ನಿನ್ನನರಿಯದಂತೆ
ನಿನ್ನ ತೋರಿದರೆನಗೆ ನಿನ್ನ ದಾಸರು ಸಿರಿಕೃಷ್ಣ'

ದಾಸರು ಹಿಡಿದ ದಾರಿ ಬಿಂಬೋಪಾಸನೆಯದು; ಭಾಗವತಪಂಥದ ದಾರಿಯೂ ಇದೇ. ಮಾಧ್ವದರ್ಶನದ ಶಾಸ್ತ್ರಗ್ರಂಥಗಳಲ್ಲಿ ಮೂಲವಾಗಿ ಎತ್ತಿ ಹಿಡಿದಿರುವುದು ಇದನ್ನೇ. ಆದರೂ ಶಾಸ್ತ್ರದ ವಾದವಿವಾದ ಪ್ರಕ್ರಿಯೆಗಳಲ್ಲಿ ಇದನ್ನು ಮರೆಯುವುದು ಇದ್ದದ್ದೇ. ಮೋಕ್ಷಕ್ಕೆ ಕಾರಣವಾಗುವುದು ಸಾಧನೆಯೇ ವಿನಾ ಶಾಸ್ತ್ರಪಾಂಡಿತ್ಯವಲ್ಲ. ಆಧ್ಯಾತ್ಮಿಕ ಸಾಧನೆ ಮುಖ್ಯವಾದದ್ದು. ಶಾಸ್ತ್ರಾವಮರ್ಶನ ಇದಕ್ಕೆ ಅನುಕೂಲವಾಗಿರಬೇಕು. ಇದನ್ನು ವ್ಯಾಸತೀರ್ಥರು ಕಂಡುಕೊಂಡದ್ದು ಪುರಂದರದಾಸರ ಕನಕದಾಸರ, ಸಂದರ್ಶನವಾದಾಗ. ಅವರ ಇನ್ನೊಂದು ಕೃತಿ-

'ಏನು ಸುಖವೋ ಎಂಥ ಸುಖವೋ
ಹರಿಯ ಧ್ಯಾನ ಮಾಡುವವರ ಸಂಗ॥

ತಂಬೂರಿ ಮೀಟುತ ದ್ವಯ ಅಂಬಕದಿ ಬಾಷ್ಪದಿಂದ
ತುಂಬಿ ಆನಂದದಿಂದ ಸಂಭ್ರಮವಾಗಿಹರ ಸಂಗ॥

ನಡೆವುದು ನುಡಿವುದು ಕೊಡುವುದು ಕೊಂಬುವುದು
ಒಡೆಯನ ಪ್ರೇರಣೆಯೆಂದು ನುಡಿದು ಹಿಗ್ಗುವರ ಸಂಗ॥'

ದಾಸರಿಗೆ ಒದಗಿದಂತೆ ಅವರಿಗೂ ಒಂದು ಕೃತಾರ್ಥತಾಭಾವ ಮೂಡಿಬಂದಿತು.

'ಧನ್ಯನಾದೆನು ನಾನು ಮನುಜಜನ್ಮದಲ್ಲಿ ಪುಟ್ಟಿ
ಮಾನ್ಯನಾದೆನು ಇನ್ನು ಈ ಜಗದೊಳಗೆ
ಪನ್ನಂಗಶಯನ ಶ್ರೀಕೃಷ್ಣನ ದಾಸರನು
ಚೆನ್ನಾಗಿ ಸ್ಮರಿಸಿ ಪಾವನ್ನನಾದೆನಿಂದು!'

ಹರಿದಾಸಸಂಪ್ರದಾಯಕ್ಕೆ ಪ್ರಧಾನವಾದ ಪ್ರೇರಣೆ ಭಾಗವತಧರ್ಮವೆಂಬುದನ್ನು ಮರೆಯಬಾರದು. ಹದಿನೆಂಟು ಪುರಾಣಗಳಲ್ಲೊಂದಾದ ಭಾಗವತವೆಂಬ ಗ್ರಂಥದಿಂದ ಹೊರಹೊಮ್ಮಿದ್ದು ಭಾಗವತಧರ್ಮವಲ್ಲ; ಪ್ರಾಚೀನವಾದ ಭಾಗವತಧರ್ಮದ ಸ್ವಾರಸ್ಯವನ್ನು ಪ್ರತಿಪಾದಿಸಲು, ಸಮರ್ಥಿಸಲು ಸಿದ್ಧವಾದದ್ದು ಭಾಗವತಪುರಾಣ. ಭಾಗವತಪುರಾಣವೇ ಆಗಲಿ, ಅದಕ್ಕೊಂದು ವಿಶಾಲವಾದ, ಸ್ವತಂತ್ರವಾದ ನೆಲೆಯಿದೆ. ಇದು ಎಲ್ಲ ಮತಗಳವರಿಗೂ ಸಮ್ಮತವಾದದ್ದೇ. ಇದಕ್ಕೆ ವ್ಯಾಖ್ಯಾನ ರಚಿಸಿರುವವರಲ್ಲಿ ಅದ್ವೈತಿಗಳೂ ಇದ್ದಾರೆ, ವಿಶಿಷ್ಟಾದ್ವೈತಿಗಳೂ ಇದ್ದಾರೆ, ದ್ವೈತಿಗಳೂ ಇದ್ದಾರೆ, ಇತರರೂ ಇದ್ದಾರೆ. ಇದರ ಹಿನ್ನೆಲೆಯಲ್ಲಿರುವ ಭಾಗವತಧರ್ಮ ಮಹಾಭಾರತದಲ್ಲೇ ಕಾಣಸಿಗುತ್ತದೆ;. ಭಗವದ್ಗೀತೆಯೂ ಭಾಗವತಧರ್ಮವನ್ನು ಪುರಸ್ಕರಿಸುವ ಗ್ರಂಥವೇ. ಮಧ್ವಾಚಾರ್ಯರು ಈ ಧರ್ಮವನ್ನು ವಿಶೇಷವಾಗಿ ಎತ್ತಿಹಿಡಿದರೆಂಬುದೇನೋ ದಿಟ; ಅವರ ತಾತ್ವಿಕ ನಿಲುವು ಬಹುಮಟ್ಟಿಗೆ ಭಾಗವತ ಸಂಪ್ರದಾಯಕ್ಕೆ ಹೊಂದಿಕೊಂಡು ಬಂದಿತು. ಅಂತರಂಗ ಶುದ್ಧಿ, ಬಹಿರಂಗ ಶೀಲ, ಬಿಂಬೋಪಾಸನೆ, ಏಕಾಂತ ಭಕ್ತಿ, ಸರ್ವಭೂತಹಿತ, ಸರ್ವಸಮತಾಭಾವ, ಇವು ಭಾಗವತಸಂಪ್ರದಾಯದಲ್ಲಿ ಹಾಸುಹೊಕ್ಕಾಗಿ ಸೇರಿಬರುವ ವಿವರಗಳು. ದಾಸಸಾಹಿತ್ಯದಲ್ಲಿ ಪ್ರಮುಖವಾಗಿ ಕಾಣಸಿಗುವ ವಿವರಗಳು ಇವೇ.

ಈ ವಿವರಗಳಿಗೆಲ್ಲ ಉಗಮಸ್ಥಾನವೆಂದರೆ ಏಕಾಂತ ಭಕ್ತಿಯೇ. 'ಸಕಲ ಸಾಧನಕೆಲ್ಲ ಸಿದ್ಧಗೊಳಿಸುವುದು ಭಕುತಿ ಸಾಧನವಲ್ಲದನ್ಯ ಸಾಧನವುಂಟೇ?' ಭಕ್ತಿಯು ಪರಿಪಾಕವಾಗಿ ಗಾನದಲ್ಲಿ ಮಾರ್ಪಡುತ್ತದೆಯೆಂಬ ಕಾರಣದಿಂದಲೇ ದಾಸರು ಸಂಗೀತಮಾಧ್ಯಮವನ್ನು ಹಿಡಿದರು. ಭಾಗವತ ಧರ್ಮದ ಸಂದೇಶವಾಗಿ ಶ್ರೀಪಾದರಾಜರು ಉಗಾಭೋಗವೊಂದರಲ್ಲಿ-

'ಧ್ಯಾನವು ಕೃತಯುಗದಿ
ಯಜನ ಯಜ್ಞವು ತ್ರೇತಾಯುಗದಿ
ದಾನವಾಂತಕನ ದೇವತಾರ್ಚನೆ ದ್ವಾಪರ ಯುಗದಿ
ಆ ಮಾನವರಿಗೆಷ್ಟು ಫಲವೊ ಅಷ್ಟೆ ಫಲವು
ಕಲಿಯುಗದಿ ಗಾನದಲಿ ಕೇಶವಯೆನಲು
ಕೈಗೂಡುವನು ರಂಗವಿಠಲ!'

ಎಂದು ಹೇಳಿದರು. 'ರಂಗನೇ ಕೊಳಲನೂದುತ ಬಂದ' ನೆಂದಮೇಲೆ ಅವನ ಭಕ್ತರ ವಿಚಾರ ಹೇಳುವುದೇನು? 'ಗಾಯನವ ಮಾಡಿದವ ಹರಿಮೂರ್ತಿ ನೋಡಿದವ' ಎಂದರು ಪುರಂದರದಾಸರು. ಸಂಗೀತದ ಸ್ವಾರಸ್ಯವಿರುವುದು, ಸಾರ್ಥಕತೆಯಿರುವುದು ಏಕಾಂತಭಕ್ತಿಯಲ್ಲಿ; ಭಗವನ್ಮಾಹಾತ್ಮ್ಯ ಜ್ಞಾನ-ಪೂರ್ವಕವಾದ ಪ್ರೇಮದಲ್ಲಿ. ಪುರಂದರದಾಸರು ಹೇಳಿದಂತೆ 'ತಾಳ ಮೇಳಗಳಿದ್ದು, ಪ್ರೇಮವಿಲ್ಲದ ಗಾನ'ವನ್ನು ಹರಿಯು ನಂಬಲಾರ; ಅದು ಬರಿಯ ಡಂಭಕದ ಕೂಗಾಟ.

ಹರಿದಾಸ ಪದ್ಧತಿಯ ಇನ್ನೊಂದು ವಿಶೇಷವೆಂದರೆ ಬಿಂಬೋಪಾಸನೆಯ ಮೇಲೆ ಅವರು ಕೊಟ್ಟ ಒತ್ತು. ಇದು ಭಾಗವತ ಸಂಪ್ರದಾಯದಲ್ಲಿನ ಲಕ್ಷಣವೇ. ಮಧ್ವಾಚಾರ್ಯರೂ ಇದನ್ನು ಎತ್ತಿ ಹಿಡಿದರಾದರೂ ಶಾಸ್ತ್ರಾವಮರ್ಶೆಯ ಜೋರಿನಲ್ಲಿ, ಖಂಡನಮಂಡನಗಳ ಕಾವಿನಲ್ಲಿ, ಸ್ವಸಿದ್ಧಾಂತ ರಕ್ಷಣೆಯ ಭರದಲ್ಲಿ ಇದು ಹಿಂದೆ ಸರಿದು ನಿಂತಿತು! ಮತ್ತೆ ಇದನ್ನು ಮೇಲೆತ್ತಿ ನಿಲ್ಲಿಸಿದವರು ಹರಿದಾಸರು. ಎಲ್ಲರ ಒಡಲೊಳಗೆ ಇರುವ ಪರಮಾತ್ಮನ ಮೂರ್ತಿಯನ್ನು ಜೀವನ ಅಂತರ್ಯಾಮಿಯನ್ನು, ಇಂದ್ರಿಯಗಳ ನಿಯಾಮಕನನ್ನು, ದೇಹದಲ್ಲೆಲ್ಲ ವ್ಯಾಪಕವಾದವನನ್ನು, ಆದರೆ ಅದಕ್ಕಿಂತ ವಿಲಕ್ಷಣನಾದವನನ್ನು ಬಿಂಬವೆನ್ನುತ್ತಾರೆ. ಇದನ್ನು ಸಾಕ್ಷಾತ್ಕಾರಿಸಿಕೊಳ್ಳುವುದೇ ಸಾಧನೆ, ಉಪಾಸನೆ. ಇದು ಅಂತರಂಗಪೂಜೆ, ಮಾನಸಪೂಜೆ. ವಿಜಯದಾಸರ ಹರಿದಾಸಲಕ್ಷಣ ಸುಳಾದಿಯಲ್ಲಿ ಈ ಉಪಾಸನೆಯ ವಿವರಗಳನ್ನು ತಿಳಿಸುತ್ತ 'ನೆರೆದ ಸಂದಣಿಯೊಳುಪಚರಿಸದೆ..... ತನ್ನೊಳು ಪರಮತತ್ತ್ವ ತಿಳಿದು.......ಸುರಿಯಬೇಕು ಸುಖ ಮರಳಿ ಮರಳಿ ನೆನೆದು! ಪರಮ ಗುಪ್ತನಾದ ವಿಜಯವಿಠಲನ! ನೆರೆನಂಬಲಿ ಬೇಕು ಕುರುಹು ಕಾಣಿಸುವಂತೆ!' ಎಂಬುದನ್ನು ಮನಗಾಣಿಸಿದ್ದಾರೆ. ಬಿಂಬೋಪಾಸನೆಯ ಬಹಿರಂಗಗಳನ್ನೂ ಅವರೇ ಬೇರೆಡೆ ತಿಳಿಸಿದ್ದಾರೆ-

'ದುರಿತರಾಶಿಯ ಬಿಡಿಸು। ದುಸ್ಸಂಗವನು ಕೆಡಿಸು । ನಿರುತ
ನಿನ್ನವರೊಳಗೆ ಸುಖ ಪಡಿಸೋ। ಪರಮವಚನ ನುಡಿಸು। ಸನ್ಮಾರ್ಗದಲಿ
ನಡಿಸು। ಪರಮರಹಸ್ಯದುಪದೇಶ ಕೊಡಿಸೋ।

ಕಂಡಕಂಡದ್ದೆಲ್ಲ ಕಮಲನಾಭನ ಮೂರ್ತಿ।
ಉಂಡು ಉಟ್ಟದ್ದೆಲ್ಲ ವಿಷ್ಣುಪೂಜೆ।
ತಂಡತಂಡದ ವಾರ್ತೆ ವಾರಿಜಾಕ್ಷನ ಕೀರ್ತಿ।
ಹಿಡಿದ ಹಟ ಪೂರೈಸಲದು ಹರಿಸಂಕಲ್ಪ।
ನಡೆದಾಡುವುದೆಲ್ಲ ತೀರ್ಥಯಾತ್ರೆ।
ಸಡಗರದಲಿಪ್ಪುದೇ ಶ್ರೀಶನಾಜ್ಞೆ॥'

ಶ್ರೀಪಾದರಾಜರ 'ಬಾರೋ ಮನೆಗೆ ಗೋವಿಂದ' ಎನ್ನುವ ಕೀರ್ತನೆಯಲ್ಲಿ ಮನೆಯೆಂಂದರೆ ಮನುಷ್ಯನ ಒಡಲೆಂದೇ ಅರ್ಥ. ಕಡೆಯಲ್ಲಿ ಅವರು

'ಪ್ರಾಣಪತಿ ಹೃದಯಾಬ್ಜಮಂಟಪ
ಸ್ಥಾನದೊಳಗಭಿವ್ಯಾಪ್ತಚಿನುಮಯ
ಧ್ಯಾನಗೋಚರನಾಗಿ ಕಣ್ಣಿಗೆ
ಕಾಣಿಸುವೆ ಶ್ರೀರಂಗವಿಠಲ'

ಎಂದು ಸ್ಪಷ್ಟಪಡಿಸಿದ್ದಾರೆ. ಬಿಂಬಮೂರ್ತಿಯ ಸ್ಥಾನ ಹೃದಯ. ಅವರೇ ಇನ್ನೊಂದು ಕೃತಿಯಲ್ಲಿ

'ನಾ ನಿನಗೇನು ಬೇಡುವುದಿಲ್ಲ ಎನ್ನ।
ಹೃದಯ ಕಮಲದೊಳು ನಿಂದಿರೊ ಹರಿಯೆ।'

ಎಂದೂ,

'ಬುದ್ಧಿ ನಿನ್ನೊಳು ಕುಣಿದಾಡಲಿ ಎನ್ನ।
ಚಿತ್ತ ನಿನ್ನಲಿ ನಲಿದಾಡಲಿ ಹರಿಯೆ।'

ಎಂದೂ ಬೇಡಿಕೊಂಡಿದ್ದಾರೆ. ಹೀಗೆಯೇ ಮೊದಲಾಗುವ ಇನ್ನೊಂದು ಕೃತಿಯಲ್ಲಿ

'ಚಿತ್ತ ನಿನ್ನೊಳು ಮುಳುಗಾಡಲಿ ಹರಿಯೆ ವೃತ್ತಿ
ಯೋಗಾಭ್ಯಾಸಕಾಗಲಿ ರಂಗ ವಿಠಲ ನಿನ್ನ ದಯವಾಗಲಿ ಹರಿಯೇ।'

ಎಂದಿದ್ದಾರೆ.

'ಕಂತುಪಿತನೆ ಎನ್ನ ಅಂತರಂಗದಿ ನಿನ್ನ।
ಸಂತತ ನೆನೆವಂತೆ ಚಿಂತನೆ ನಿಲಿಸೆಂದು'

ಸೆರೆಗೊಡ್ಡಿ ಬೇಡಿಕೊಂಡಿರುವ ಮತ್ತೊಂದು ಕೃತಿಯಿದೆ. 'ನಿನ್ನಾಧೀನ ಶರೀರ ಕರಣ ಚೇಷ್ಟೆಗಳೆಲ್ಲ' ಎಂದು ಮೊದಲಾಗುವ ಸುಳಾದಿಯಲ್ಲಿ 'ಅಂತರಾತ್ಮನೆ ನಿನ್ನ ಮಹಿಮೆಗೆ ನಮೊ ಎಂಬೆ' ಎಂಬ ಸೊಲ್ಲು ಬರುತ್ತದೆ.

ಹೀಗೆ ತಮ್ಮ ಗುರುಗಳಾದ ಶ್ರೀಪಾದರಾಜರು ತೋರಿದ ದಾರಿಯನ್ನೆ ಹಿಡಿದ ವ್ಯಾಸತೀರ್ಥರು 'ಶ್ರೀಕೃಷ್ಣ ನಿನ್ನ ಪಾದನಖಚಂದ್ರಿಕೆಯಲ್ಲಿ, ಸಾಕೆನ್ನ ಚಿತ್ತ ಚಕೋರ' ಎಂದು ಬೇಡಿಕೊಂಡು, 'ಅಂತರಂಗದಲಿ ಹರಿಯ ಕಾಣದವ ಹುಟ್ಟುಕುರುಡನೋ' ಎಂದು ಸ್ಪಷ್ಟವಾಗಿ ಹೇಳಿ ಬಿಂಬೋಪಾಸನೆಯ ಅಗತ್ಯವನ್ನು ಅರುಹಿದರು. ಅದರ ಸ್ವರೂಪವನ್ನೂ ಸೂಚಿಸಿದರು-

'ಎನ್ನ ಬಿಂಬ ಮೂರುತಿಯ ಪೂಜಿಸುವೆ ನಾನು।
ಮನಮುಟ್ಟಿ ಅನುದಿನದಿ ಮರೆಯದೇ ಜನರೆ॥

ಗಾತ್ರವೇ ಮಂದಿರ ಹೃದಯವೇ ಮಂಟಪ।
ನೇತ್ರವೇ ಮಹದ್ದೀಪ ಹಸ್ತ ಚಾಮರವೋ।
ಯಾತ್ರೆ ಪ್ರದಕ್ಷಿಣೆ ಶಯನ ನಮಸ್ಕಾರ
ಶಾಸ್ತ್ರ ಮಾತುಗಳೆಲ್ಲ ಮಂತ್ರಂಗಳೋ॥

ಎನ್ನ ಸ್ವರೂಪವೆಂಬುದೆ ರನ್ನಗನ್ನಡಿ।
ಎನ್ನ ಮನೋವೃತ್ತಿಯೆಂಬುದೆ ಛತ್ರಿಕೆ।
ಇನ್ನು ನುಡಿದ ಹರಿನಾಮಾಮೃತವೆ ತೀರ್ಥ।
ಎನ್ನ ಮನವೆಂಬುದೇ ರತ್ನ ಸಿಂಹಾಸನವು॥

ಅನ್ಯದೇವತೆ ಯಾಕೆ ಅನ್ಯ ಪ್ರತಿಮೆ ಯಾಕೆ?
ಅನ್ಯವಾದ ಮಂತ್ರ ತಂತ್ರಗಳು ಯಾಕೆ?
ಎನ್ನಲ್ಲಿ ಭರಿತ ಸಾಧನೆಗಳು ಇರುತಿರಲು
ಚೆನ್ನಾಗಿ ಸಿರಿಕೃಷ್ಣನನು ಪೂಜಿಸುವೆ॥'

ಅವರ ಇನ್ನೊಂದು ಕೃತಿ-

'ರಂಗಯ್ಯ ಮನೆಗೆ ಬಂದರೆ ಅಂತ-
ರಂಗದಿ ಗುಡಿ ಕಟ್ಟಿ ಕುಣಿವೆ ನಾ।'

ಎಂದು ಆರಂಭವಾಗುತ್ತದೆ. ಇಲ್ಲಿ ಮನೆಯೆಂದರೆ ಮನುಷ್ಯನ ದೇಹವೇ, ರಂಗ ಅಲ್ಲಿಗೆ ಬರುವುದೆಂದರೆ ಅವನು ಅಲ್ಲಿಯೇ ಇರುವ ಅರಿವು ಮೂಡುವುದಷ್ಟೆ. ಸುಳಾದಿಯೊಂದರಲ್ಲಿ ಬಿಂಬೋಪಾಸನೆಯ ಸ್ವಾರಸ್ಯವನ್ನು ತಾವು ಹರಿದಾಸರಿಂದಲೇ (ಎಂದರೆ ಪುರಂದರದಾಸರು, ಕನಕದಾಸರಿಂದಲೇ) ಕಂಡುಕೊಂಡುದನ್ನು ಮರೆಮಾಚದೆ ತಿಳಿಸಿದ್ದಾರೆ; ಪ್ರಾಮಾಣಿಕವಾದ ಕೃತಜ್ಞತೆಯ ಮಾತನಾಡಿದ್ದಾರೆ. ಇದನ್ನು ಈ ಮೊದಲೆ ಉಲ್ಲೇಖಿಸಿದೆ-

'ನಿಧಿಯ ಮೇಲೆ ಇದ್ದು ನಿಧಿಯನರಿಯದಂತೆ
ತನ್ನ ಕಂಠಮಣಿಯ ತಾ ಮರೆತಂತೆ
ಕಣ್ದೆರೆಯದ ಹಸುಳೆ ತಾಯನರಿಯದಂತೆ
ಎನ್ನಲ್ಲಿ ಹೊಂದಿಪ್ಪ ನಿನ್ನನರಿಯದಂತೆ
ನಿನ್ನ ತೋರಿದರೆನಗೆ ನಿನ್ನ ದಾಸರು ಸಿರಿಕೃಷ್ಣ ॥'

'ಅಂತರಂಗದಿ ಬ್ರಹ್ಮಾನಂದನಾಗಿ ನೀನಿರಲು ಅಂತಕನ ಭಯವೇನಯ್ಯ ಶ್ರೀಹರಿಯೆ?' ಎಂದು ಅವರೇ ಒಂದು ಸುಳಾದಿಯಲ್ಲಿ ಹೇಳಿದ್ದಾರೆ. ಬಿಂಬೋಪಾಸನೆಯ ಫಲ ಇದು. ಪುರಂದರದಾಸರ ರಚನೆಗಳಲ್ಲಿ ಬಿಂಬೋಪಾಸನೆಯ ವಿಚಾರ ಧಾರಾಳವಾಗಿ ಬಂದಿದೆ ('ಕಣ್ಣಿನೊಳಗೆ ನೋಡೊ ಹರಿಯ, ಒಳಗಣ್ಣಿನಿಂದಲಿ ನೋಡೊ ಮೂಜಗದ ದೊರೆಯ।' ಮೊದಲಾದ

ಕೀರ್ತನೆಗಳಲ್ಲಿ). ಬಿಂಬೋಪಾಸನೆಯ ಕ್ರಮವಿಡಿದ ನಿರೂಪಣೆ ನಮಗೆ ದೊರಕುವುದು ವಿಜಯದಾಸರ ಮತ್ತು ಗೋಪಾಲದಾಸರ ಕೃತಿಗಳಲ್ಲಿ, ಮತ್ತು ಜಗನ್ನಾಥದಾಸರ ಹರಿಕಥಾಮೃತಸಾರದಲ್ಲಿ. 'ಬಿಂಬ ಮೂರುತಿ ಧ್ಯಾನ ಇಂಬಾಗಿ ಮಾಡಲು, ಇಂಬುತೋರುವನಲ್ಲಿ ವಿಜಯವಿಠಲ ಪೊಳೆದು', 'ಡಿಂಬದೊಳಗೆ ಹೃದಯಾಂಬರದಲಿ ಪೊಳೆವ', 'ಅಧ್ಯಾತ್ಮ ತಿಳಿವುದು ಭೌತಿಕದೇಹದೊಳು', 'ಬಿಂಬಮೂರುತಿಯಪರೋಕ್ಷವಾಗದೆ ಗತಿಯೆಂಬುದು ಸಲ್ಲ', 'ಬಿಂಬನೆಂಬ ಪ್ರಾಜ್ಞನನುಭವ ತಿಳಿದು', 'ಅಂತರಂಗದಲ್ಲಿ ಅಂತರಾತ್ಮಕ ನೀನು, ಸಂತತ ಪೊಳೆವುತ್ತ ನಿಂತು ಸೊಬಗಿನಿಂದ', 'ಒಳಗೊಂದು ಮೂರುತಿ ನೆಲೆಯಾಗಿ ಇರಲಾಗಿ', 'ಸದಾ ಎನ್ನ ಹೃದಯದಲಿ ವಾಸ ಮಾಡೋ ಶ್ರೀಹರಿ' ಮೊದಲಾಗಿ ವಿಜಯದಾಸರ ಮಾತುಗಳೂ 'ಧ್ಯಾನವನೆ ಮಾಡು ಬಿಂಬಮೂರುತಿಯ। ಆನಂದದಲಿ ಕುಳಿತು ಅಂತರಂಗದಲಿ' ಮತ್ತು 'ಧ್ಯಾನವನು ಮಾಡು ಮನುಜಾ। ದೇಹಾಂತರ್ಗತ ಹರಿಯ।' ಎಂಬ ಗೋಪಾಲದಾಸರ ರಚನೆಗಳೂ ಬಿಂಬೋಪಾಸನೆಯ ಕ್ರಮವನ್ನು ಸ್ಪಷ್ಟಪಡಿಸುತ್ತವೆ.

ಭಾಗವತದಲ್ಲಿ ಬಂದಿರುವ ಬಿಂಬಪೂಜೆಯ ಕ್ರಮವನ್ನು ಮಧ್ವಾಚಾರ್ಯರ ತಂತ್ರಸಾರವೂ, ವಿಷ್ಣುಸಂಹಿತೆ, ಪ್ರಕಾಶಸಂಹಿತೆ, ಯೋಗದೀಪಿಕಾ ಮೊದಲಾದ ಗ್ರಂಥಗಳೂ ವಿವರಿಸುವುದನ್ನು ಹರಿದಾಸರು ಮೆಚ್ಚಿಕೊಂಡು, ಸಾಕ್ಷಾತ್ಕಾರಕ್ಕೆ ಇದುವೆ ಸಾಧನ ಎಂಬುದನ್ನು ಮನಗಂಡು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು, ಬಿಂಬಾಪರೋಕ್ಷವನ್ನು ಅನುಭವಿಸಿದರು. ಅವರ ರಚನೆಗಳ ಹಿನ್ನೆಲೆಯಲ್ಲಿರುವುದು ಈ ಅನುಭವವೇ. ಇದನ್ನು ನಾವು ಗುರುತಿಸದಿದ್ದರೆ ದಾಸಸಾಹಿತ್ಯದ ಅಥವಾ ದಾಸಸಂಸ್ಕೃತಿಯ ಸ್ವಾರಸ್ಯವನ್ನು ಕಂಡುಕೊಳ್ಳುವುದು ಕಷ್ಟ. ಬಿಂಬಾನುಭವದ ನೆಲೆಯಲ್ಲಿಯೇ ಪುರಂದರದಾಸರು 'ಸಂಸಾರವೆಂಬಂಥ ಭಾಗ್ಯವಿರಲಿ', 'ಈಸಬೇಕು, ಇದ್ದು ಜೈಸಬೇಕು', 'ಬಂದದ್ದೆಲ್ಲಾ ಬರಲಿ', 'ಅಂಜಿಕಿನ್ಯಾತಕಯ್ಯ', 'ಆದದ್ದೆಲ್ಲಾ ಒಳಿತೇ ಆಯಿತು' ಎಂಬ ಉತ್ಸಾಹವನ್ನು , ಧೈರ್ಯವನ್ನು ತಳೆದದ್ದು. 'ತಲ್ಲಣಿಸದಿರು ಕಂಡ್ಯ ತಾಳು ಮನವೆ', ಎಂದು ಸಂತೈಸಿದ ಕನಕದಾಸರು 'ಎಲ್ಲರನು ಸಲಹುವನು, ಇದಕೆ ಸಂಶಯವಿಲ್ಲ' ಎಂದು ವಿವರಿಸಿದರು.

ಹೀಗೆ ದಾಸಸಾಹಿತ್ಯದ ಸಾಮಗ್ರಿ 'ಅನುಭವದಡುಗೆಯೆ' ಎಂಬುದನ್ನು ಅರಿತುಕೊಳ್ಳಬೇಕು. ಭಾಗವತದ ಈ ಒಲವು ಎಲ್ಲ ಹರಿದಾಸರಲ್ಲೂ ಕಂಡುಬರುತ್ತದೆ. ಹರಿದಾಸಕೇಂದ್ರವು ಹಂಪಿಯಿಂದ ರಾಯಚೂರಿಗೆ ಬದಲಾದಾಗ ಗೋಪಾಲದಾಸರು ಈ ಭಾಗವತ ಸಂದೇಶವನ್ನು ಎತ್ತಿಕೊಂಡರು. ಅಲ್ಲಿ ಈಚೆಗೆ ಇದ್ದು ಹೆಸರಾದ ಕೊಪ್ಪರ ನರಹರಿದಾಸರು (೧೮೯೬-೧೯೭೯) ಕೂಡ ಭಾಗವತ ಧರ್ಮವನ್ನೇ ಮುಖ್ಯವಾಗಿ ಹಿಡಿದಿದ್ದರು. ಈ ನಡುವೆ ಭಾಗವತಪಂಥ ಜನರಲ್ಲಿ ಹರಡಿಕೊಂಡಿತು. ಭಾಗವತ ಧರ್ಮವು ಬರಿಯ ಸಿದ್ಧಾಂತವನ್ನು ಅವಲಂಬಿಸುವುದಿಲ್ಲ; ವ್ಯವಹಾರದಲ್ಲಿ, ದಿನನಿತ್ಯದ ಬದುಕಿನಲ್ಲಿ ಅಧ್ಯಾತ್ಮ ಪ್ರವೃತ್ತಿಯ ಅಗತ್ಯವನ್ನೂ ಸ್ವಾರಸ್ಯವನ್ನೂ ಸಾರ್ಥಕ್ಯವನ್ನೂ ತಿಳಿಯಪಡಿಸಲೆಂದೇ ಈ ಪಂಥವು ಬೆಳಕಿಗೆ ಬಂದುದು. ಅಧ್ಯಾತ್ಮದ ಅನುಭವವನ್ನೇ ಭಾಗವತ ಎತ್ತಿ ಹಿಡಿದದ್ದು; ಹರಿದಾಸರಾದರೂ ಇದಕ್ಕೇ ಒಲಿದವರು.

ಮನುಷ್ಯರೆಲ್ಲರಿಗೆ ಅಧ್ಯಾತ್ಮದ ಅನುಭವವು ಸಾಧ್ಯವೆಂಬ ಕಾರಣದಿಂದಲೇ ಪುರಂದರದಾಸರು 'ಮಾನವ ಜನ್ಮ ದೊಡ್ಡದು, ಇದ ಹಾನಿ ಮಾಡಲಿಬೇಡಿ, ಹುಚ್ಚಪ್ಪಗಳಿರಾ !' ಎಂಬ ಪ್ರೀತಿಯ

ಕರೆಯನ್ನು ಎಲ್ಲರಿಗೆ ನೀಡಿದರು. ಅಧ್ಯಾತ್ಮನಿಷ್ಠೆಯಿಂದ ಆತ್ಮೋದ್ಧಾರ; ಆತ್ಮೋದ್ಧಾರದಿಂದ ಲೋಕೋದ್ಧಾರ. ಇದಕ್ಕೆಲ್ಲ ಕಾರಣವಾಗುವುದು ಮನುಷ್ಯನ ದೇಹವು 'ಸಾಧನಶರೀರ'ವಾಗಿ ಮಾರ್ಪಟ್ಟಾಗ. ಇದು ಹರಿದಾಸ ಸಂಸ್ಕೃತಿಯ ಸಾರಸರ್ವಸ್ವ. ಮಾನವನಲ್ಲಿ ದೈವ ಅಂತರ್ಯಾಮಿಯಾಗಿ ಬಿಂಬರೂಪದಿಂದ ಇದ್ದುಕೊಂಡು, ತನ್ನ ಅರಿವನ್ನು ಅವನ ಬುದ್ಧಿಯಲ್ಲಿ ಮೂಡಿಸಿ, ಅವನ ಉದ್ಧಾರಕ್ಕೆ ಕಾರಣವಾಗುವುದೆಂಬ ಸಂದೇಶ ಹರಿದಾಸರದ್ದು. ವ್ಯಾಸತೀರ್ಥರ 'ಇದು ಬಲು ಸುಖಕಾಣೆ, ಕೇಳಿದಕೆಣೆಗಾಣೆ' ಎಂಬ ಕೃತಿಯಲ್ಲಿ ದಾಸರ ಮನೋಧರ್ಮವನ್ನು ಸಂಗ್ರಹಿಸಿ ಹೇಳಿದ್ದಾರೆ-

'ಚಿಂತೆಯೆಲ್ಲವ ಕಳೆದು ಮನದಿ ನಿ
ಶ್ಚಿಂತೆಯಾಗಿ ನಲಿದು ಅಂತರಂಗದಿ ಲಕ್ಷ್ಮೀ
ಕಾಂತನ ತುತಿಸುತ ಸಂತೋಷಶರಧಿಯಳೋಲಾಡುವುದು'

ಎಲ್ಲ ಕಾಲಕ್ಕೂ ಎಲ್ಲ ಜನರಿಗೂ ಪ್ರಸಕ್ತವಾಗುವ ಸಂದೇಶ ಇದು.

ಹರಿದಾಸರು ಕರ್ನಾಟಕದವರು; ಕನ್ನಡ ನುಡಿಯಲ್ಲಿ ಬಲು ಒಲುಮೆಯನ್ನು ಬೆಳೆಸಿಕೊಂಡವರು; ಕನ್ನಡ ನಾಡಿನ ಉದ್ದಗಲವೂ ಎಡೆಬಿಡದೆ ಅಡ್ಡಾಡಿದವರು. ಇವರ ಪರಂಪರೆಯಿಂದ ಕರ್ನಾಟಕ ಸಂಸ್ಕೃತಿಗೆ ಸಂದ ಉಪಕಾರವನ್ನು ನೆನೆಸಿಕೊಳ್ಳುವ ಸಲುವಾಗಿ ಕೊಂಚ ಮಟ್ಟಿಗೆ ಪುನರಾವರ್ತನೆ ಇದ್ದರೂ, ಸಂಗ್ರಹವಾಗಿ ಮರು ನಿರೂಪಣೆಯ ಅಗತ್ಯವಿದೆ.

ಕರ್ನಾಟಕ ಸಂಸ್ಕೃತಿಗೆ ತುಂಬ ಪ್ರಾಚೀನವಾದ ಪ್ರತಿಷ್ಠೆ ಇದ್ದಿತೆನ್ನುವುದು ನಿರ್ವಿವಾದ. ಭಾರತೀಯ ಸಂಸ್ಕೃತಿ ಆಕಾರಪಡೆದ ತರುಣದಲ್ಲೇ ದಕ್ಷಿಣಾಪಥದಲ್ಲಿ ಕರ್ಣಾಟಕವೆಂಬ ವಿಶಿಷ್ಟ ಸಂಸ್ಕೃತಿ ಮೈದಳೆಯಿತು. ಭೌಗೋಳಿಕ ಪ್ರದೇಶವಾಚಕವಲ್ಲದ ಕರ್ಣಾಟಕ ಶಬ್ದವು ಈ ವಿಶಿಷ್ಟ ಸಂಸ್ಕೃತಿಯ ಸೂಚಕವೇ. ಬೌದ್ಧ, ಜೈನರ ಪ್ರಭಾವವನ್ನು ಒಳಗೊಂಡು ಈ ಕಡೆ ಶ್ರೌತಸ್ಮಾರ್ತ- ಭಾಗವತ- ವೈಷ್ಣವ ಭಕ್ತಿಪಂಥ ನಮ್ಮ ನಾಡಿನಲ್ಲಿ ಬೇರೆಲ್ಲೂ ಇಲ್ಲಿನಂತೆ ಬೆಳೆಯಲಿಲ್ಲ. ಇಂದು ಮಹಾರಾಷ್ಟ್ರದ ಪುಣ್ಯ ಕ್ಷೇತ್ರವಾದ ಪಂಢರಪುರವು ಮೊದಲಿಗೆ ಪಂಡರಿಗೆಯೆಂದು ಪ್ರಸಿದ್ಧವಾಗಿದ್ದಿತು: ಪಾಂಡುರಂಗವಿಠ್ಠಲ ಇಂದು "ಮಹಾರಾಷ್ಟ್ರಚೇ ಕುಲದೈವತ"; ಮೊದಲು ಮಹಾನುಭಾವ ಪಂಥದವರ, ಹರಿದಾಸರ ದೇವರು. ವಿಠ್ಠಲನ ಭಕ್ತಿಪರಂಪರೆಯಲ್ಲಿ ಬಂದವರೇ ಕನ್ನಡ ಸಾಹಿತ್ಯವನ್ನು ಮೊದಲು ರೂಢಿಸಿದರು. ಒಂಬತ್ತನೆಯ ಶತಮಾನದ ಸುಮಾರಿಗೇ ಕನ್ನಡ ಸಾಹಿತ್ಯ ಬಲಿಯತೊಡಗಿದ್ದಿತು; ಕನ್ನಡ ಶಬ್ದವನ್ನು ಕವಿರಾಜ ಮಾರ್ಗಕಾರ ದೇಶವಾಚಕವಾಗಿಯೇ ಪ್ರಯೋಗಿಸಿದ್ದಾನಷ್ಟೆ. ಈ ದೇಶದಲ್ಲಿ ಈ ಭಾಷೆ ವಿಶಿಷ್ಟವಾಗಿದ್ದಿತು ಎಂದು ಅರ್ಥ.

ಸಂಸ್ಕೃತ ಸಂಸ್ಕೃತಿಯು ದಕ್ಷಿಣಾಪಥವನ್ನು ಹೊಕ್ಕು ವಶಪಡಿಸಿಕೊಂಡುದೂ ತುಂಬ ಹಿಂದೆಯೇ. ಆದರೆ ಸಂಸ್ಕೃತ ಭಕ್ತಿಪಂಥ ಕನ್ನಡಭಕ್ತಿಪಂಥವನ್ನು ಹಾರಿಸಿಬಿಡಲಿಲ್ಲ. ಮಧ್ವಾಚಾರ್ಯರೇ ಸಂಸ್ಕೃತ ವಿದ್ವಾಂಸರಾದರೂ ಕನ್ನಡದಲ್ಲಿ ಹಾಡುಗಳನ್ನು ಮಾಡಿದರೆಂದು ಪ್ರತೀತಿ. ಅವರ ಶಿಷ್ಯರಾದ ನರಹರಿತೀರ್ಥರು ದಾಸಪರಂಪರೆಗೆ ಆದ್ಯರೆಂದೂ ಪ್ರತೀತಿ. ಇದು ಹೇಗೂ ಇರಲಿ, ಈ ಪರಂಪರೆಯಲ್ಲಿ ಪ್ರಮುಖರೆನಿಸಿದ ಪುರಂದರದಾಸರ ದೀಕ್ಷಾಗುರುಗಳಾದ ವ್ಯಾಸತೀರ್ಥರು ಶುದ್ಧ ಸಂಸ್ಕೃತ ವಿದ್ವಾಂಸರು,

ಶಾಸ್ತ್ರಗ್ರಂಥಗಳನ್ನು ಸಂಸ್ಕೃತದಲ್ಲಿಯೇ ಬರೆದರು; ಆದರೆ ಅವರು ವ್ಯಾಸಕೂಟದಂತೆ ದಾಸಕೂಟವನ್ನೂ ಬೆಳೆಸಿದರು; ಕನ್ನಡದ ಮಾತನ್ನು ದೇವತಾರ್ಚನೆಯಲ್ಲೂ ಬಳಸಬಹುದೆಂದು ಹೇಳಿದರು. ಕನ್ನಡ ಸಾಹಿತ್ಯದಲ್ಲಿ ಭಕ್ತಿಪ್ರಧಾನವಾದ, ಸಂಗೀತ-ನೃತ್ಯ ಪ್ರಮುಖವಾದ ಗೀತಗಳನ್ನೂ ಕೀರ್ತನೆಗಳನ್ನೂ ಕಟ್ಟುವ ಪದ್ಧತಿಗೆ ಇವರು ಪ್ರವರ್ತಕರಲ್ಲದಿದ್ದರೂ ಪೋಷಕರಾದರು.

ವ್ಯಾಸತೀರ್ಥರು ಹೃದಯತುಂಬಿ "ದಾಸರೆಂದರೆ ಪುರಂದರದಾಸರಯ್ಯಾ" ಎಂದು ಹಾಡಿದರು; ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಪುರಂದರದಾಸರ ಹೆಗ್ಗಳಿಕೆಯನ್ನು ಇತರರಿಗೆ ಮನವರಿಕೆ ಮಾಡಿಕೊಟ್ಟರು. ವಿಜಯನಗರಸಾಮ್ರಾಜ್ಯ ತನ್ನ ಉಚ್ಛ್ರಾಯ ದೆಶೆಯಲ್ಲಿದ್ದಾಗ ಈ ದಾಸರು ಭಗವದ್ಭಕ್ತಿಯ ಹೊನಲನ್ನು ಹರಿಸಿ, ಐಹಿಕ ಸುಖಸಂತೋಷಗಳಿಗೆ ಮೈಮರೆಯದೆ ಪಾರಮಾರ್ಥಿಕ ಶಾಂತಿಯನ್ನು ಪಡೆದುಕೊಳ್ಳುವ ಸಾಧನಗಳನ್ನು ವಿವರಿಸಿದರು. ಗಾನಲೋಲನಾದ ಭಗವಂತನನ್ನು ನೇರವಾಗಿ ಮೆಚ್ಚಿಸಲು ಗೀತಪದ್ಧತಿ ಉತ್ತಮವಾದುದೆಂದು ಅದನ್ನು ಹಿಡಿದು, ಭಕ್ತಿಯ ಬೆಡಗನ್ನು ಅದರಲ್ಲಿ ತುಂಬಿದರು. ದಾಸಸಾಹಿತ್ಯದ ಏಕೈಕರಸ ಭಕ್ತಿ ಎಂದರೆ ತಪ್ಪಾಗದು. "ಅನ್ಯಾ ವಾಚೋ ವಿಮುಂಚಥ" ಎಂದು ಉಪನಿಷತ್ತು ಹೇಳಿದ ಛಲದಿಂದಲೇ ಇವರೂ ಭಕ್ತಿಯಿಂದ ಭಿನ್ನವಾದ ಎಲ್ಲ ದಾರಿಯನ್ನೂ ತೊರೆದರು. "ಸಾಧನೆಗಳಲ್ಲೆಲ್ಲ ಬಲುಘನ"ವಾದ ಭಕ್ತಿಯಿದ್ದರೆ ಹರಿ 'ಸುಲಭ'ನೇ.

ಪುರಂದರದಾಸರು ಪಂಡಿತರು; ಪ್ರಸ್ಥಾನಗಳ ಪರಿಚಯ ಅವರಿಗೆ ಮೂಲದಲ್ಲಿಯೇ ಇದ್ದಿತು. ವೈದಿಕರ ವಾಕ್ಯಾರ್ಥಗಳಲ್ಲಿ ಪಾಲುಗೊಳ್ಳುವ ಸಾಮರ್ಥ್ಯವಿದ್ದಿತು. ಆದರೆ ನಿಃಸಾರನಿಷ್ಠೆ , ಶಾಸ್ತ್ರದೃಷ್ಟಿ, ಮಡಿವಂತಿಕೆಗಳು ಆ ಕಾಲಕ್ಕೆ ಅಸಹ್ಯವೆನಿಸುವಷ್ಟು ಹರಡಿದ್ದುವು. ಇದರಿಂದ ಸಾಮಾನ್ಯ ಜನರಿಗೆ ಕ್ಲೇಶವೇ ಫಲವೆಂಬುದನ್ನು ಪುರಂದರದಾಸರು ಅರಿತು "ಮಡಿಮಡಿಯೆಂದು ಮೂರ್ಮಾರು ಹಾರುವ ಬಿಕನಾಸಿ"ಯನ್ನು ಖಂಡಿಸಿದರು. ಕನ್ನಡ ಸಂಸ್ಕೃತಿಯಲ್ಲಿ ಶಾಸ್ತ್ರ ಪಾಂಡಿತ್ಯದ ಭಾರ ಬಿಗಿದಂದು, ಈ ಒತ್ತಡವನ್ನು ನೀಗಿಸಿದ ಪುಣ್ಯ ಪುರಂದರದಾಸರದ್ದು.

"ಪದುಮನಾಭನಲಿ ಲೇಶ ಭಕುತಿಯಿಲ್ಲದ ಉದರ ವೈರಾಗ್ಯ"ವನ್ನು ಅವರು ನಿರ್ದಾಕ್ಷಿಣ್ಯವಾಗಿ ಜರಿದರು. ಸತ್ಯವಿಲ್ಲದ ಆಚಾರ, ಬರಡಾದ ಶಾಸ್ತ್ರಜ್ಞಾನ, ವಿವೇಕವಿಲ್ಲದ ಮಡಿ ಇದನ್ನು ಜನರ ಬಾಳುವೆಯಿಂದ ಹೊರದೂಡಿಸುವ ಸಾಹಸವನ್ನು ಮಾಡಿದವರಲ್ಲಿ ಪುರಂದರದಾಸರು ಮೊದಲಿಗರು.

> ತನುವ ನೀರೊಳಗದ್ದಿ ಫಲವೇನು
> ಮನದಲ್ಲಿ ದೃಢವಿಲ್ಲದ ಮನುಜರು?

ಜನಜೀವನ ಪ್ರತಿಕ್ರಿಯೆ ಪುರಂದರದಾಸರ ಸಾಹಿತ್ಯದಲ್ಲಿ ಸ್ಪಷ್ಟವಾಗಿದೆ. ಶೀಲಶುದ್ಧಿಯಿಲ್ಲದ ಗೊಡ್ಡು ಪಂಡಿತರಾದವರನ್ನು ದಾಸರು ಪರಿಹಾಸ್ಯ ಮಾಡುವುದನ್ನು ನೋಡಿ-

> ಗೂಟುನಾಮವ ಹೊಡೆದು ಗುಂಡುತಂಬಿಗೆ ಹಿಡಿದು
> ಗೋಟಂಚು ಧೋತರ ಮಡಿಯನುಟ್ಟು
> ದಾಟು ಕಾಲಿಡುತ ನಾ ಧರೆಯೊಳಗೆ ಬರಲೆನ್ನ
> ಬೂಟಕತನ ನೋಡಿ ಭ್ರಮಿಸದಿರಿ ಜನರೇ!

ಸಂಸ್ಕೃತದಿಂದಲೇ ಮುಕ್ತಿ, ಶಾಸ್ತ್ರ ಪಾಂಡಿತ್ಯವಿಲ್ಲದವರು ಪಾಮರರು, ಪಾಪಿಗಳು ಎನ್ನುವ ಮನೋಧರ್ಮ ಪ್ರಚಲಿತವಾಗಿದ್ದಾಗ ದಾಸರು ಕನ್ನಡದಲ್ಲಿಯೇ ವೇದಾಂತದ ಗಹನತತ್ವಗಳನ್ನು ಹೇಳಿದರು. ಮೊದಮೊದಲು ಪಂಡಿತರು ಇದನ್ನು ಅಲ್ಲಗಳೆದರೂ ವ್ಯಾಸತೀರ್ಥರೇ ಇವರ ಕೃತಿಗಳನ್ನು "ಪುರಂದರೋಪನಿಷ"ತ್ತೆಂದು ಕರೆದಮೇಲೆ ಎದುರುಮಾತಿರಲಿಲ್ಲ. "ನಾಲ್ಕು ಲಕ್ಷ ಇಪ್ಪತ್ತೈದು ಸಾವಿರ ಕೃತಿಯ" ಶ್ರುತಿ ಸ್ಮೃತಿ ಸಮ್ಮತದಿಂದ ಪುರಂದರದಾಸರು ಮಾಡಿ, ಕನ್ನಡದಲ್ಲಿಯೇ ಜನಸಾಮಾನ್ಯರು ಮುಕ್ತಿಗೆ ಪೂರ್ವರಂಗವಾದ ಜ್ಞಾನವನ್ನು ಪಡೆಯಲು ದಾರಿ ಮಾಡಿಕೊಟ್ಟರು. ಉಪನಿಷತ್ತಿನ ಮರ್ಮಗಳನ್ನು ತಿಳಿಮಾತಿನಲ್ಲಿ ಮೂಡಿಸಿದರು.

ನಿದರ್ಶನಕ್ಕೆ ನೋಡಿ-
ತನುವ ಖಂಡಿಸಿ ಒಮ್ಮೆ ಮಾಣೋ ನಿನ್ನ
ಮನವ ದಂಡಿಸಿ ಪರಮಾತ್ಮನ್ನ ಕಾಣೋ
ಕೊನೆಗೆ ನಿನ್ನೊಳಗೆ ನೀ ಜಾಣೋ ಮುಕ್ತಿ
ನಿನಗೆ ದೂರಿಲ್ಲವು ಒಂದೇ ಗೇಣೋ

ಮೋಹನರಾಗದ ಇನ್ನೊಂದು ಕೀರ್ತನೆ-

ಜ್ಞಾನ ಒಂದೇ ಸಾಕು ಮುಕ್ತಿಗೆ। ಇನ್ನೇನು ಬೇಕು ಹುಚ್ಚುಮರುಳೇ॥

ಎಂದು ಔಪನಿಷದಿಕ ಜ್ಞಾನದ ಅಧಿಕ್ಯವನ್ನು ಸಾರುತ್ತದೆ. ಪೂರ್ವಿರಾಗದ ಇನ್ನೊಂದು ಕೀರ್ತನೆಯೂ ಇದೇ ಧಾಟಿಯನ್ನು ಹಿಡಿದು "ಸ್ನಾನವ ಮಾಡಿರೋ ಜ್ಞಾನತೀರ್ಥದಲಿ", "ನಾನು ನೀನೆಂಬಹಂಕಾರವ ಬಿಟ್ಟು" ಎಂದು ಆರಂಭವಾಗುತ್ತದೆ. ಪುರಂದರದಾಸರು ಕೇವಲ ಜ್ಞಾನಪಂಥವನ್ನೇ ಹಿಡಿಯದೆ ಧ್ಯಾನಮಾರ್ಗವನ್ನೂ ಸೇರಿಸಿ ಬೋಧಿಸಿದರು. ಅವರ ಕೀರ್ತನೆಗಳಲ್ಲಿ ಯೋಗದ ಪ್ರಕ್ರಿಯೆಗಳನ್ನು ವಿಶೇಷವಾಗಿ ಬಳಸಿಕೊಂಡಿದ್ದಾರೆ-

ಮನವ ಶೋಧಿಸಬೇಕು ನಿಚ್ಚಾ, ದಿನ
ದಿನದಿ ಮಾಡುವ ಪಾಪಪುಣ್ಯದ ವೆಚ್ಚಾ।

ಭಕ್ತಿಯಿದ್ದರೂ ಧ್ಯಾನವಿಲ್ಲದೆ ಅದು ಸಾರ್ಥಕವಾಗಲಾರದು. ಕಾಪಿರಾಗದ ಒಂದು ಕೀರ್ತನೆಯಲ್ಲಿ "ಆಧಾರ ಮೊದಲಾದ ಆರು ಚಕ್ರ"ಗಳ ಶೋಧನೆ, "ಕುಂಡಲಿ ತುದಿ"ಯೊಳಿರುವ "ಭಾನುಮಂಡಲ ನಾರಾಯಣನೆಂಬುವನ" ಪ್ರಸ್ತಾಪ ಬರುತ್ತದೆ-

ಕಣ್ಣಿನೊಳಗೆ ನೋಡೋ ಹರಿಯ, ಒಳ
ಗಣ್ಣಿನಿಂದಲಿ ನೋಡೋ ಮೂಜಗದ ದೊರೆಯ॥

ಹೀಗೆ ಉಪನಿಷತ್ತಿನಲ್ಲಿರುವ ಭಾವನೆಗಳನ್ನು ಸರಳ ಶೈಲಿಯಲ್ಲಿ ಸರ್ವಜನಗ್ರಾಹ್ಯವಾಗು

ವಂತೆ ಕೀರ್ತನೆಗಳಲ್ಲಿ ತುಂಬಿಸಿ ತಮ್ಮ ಕೃತಿಗಳು "ಪುರಂದರೋಪನಿಷತ್ತು" ಎಂಬ ಕೀರ್ತಿಯನ್ನು ಸಾರ್ಥಕಪಡಿಸಿಕೊಂಡಿದ್ದಾರೆ.

ಅವರ ಕೀರ್ತನೆಗಳಲ್ಲಿ ಬಾರದೆ ಇದ್ದ ವಿಚಾರವೇ ಇರದು. ಧರ್ಮ, ನೀತಿ, ವೇದಾಂತ, ರಾಜಕಾರಣ, ಅರ್ಥನೀತಿ, ಸಾಮಾನ್ಯನೀತಿ, ವಿನೋದ ಎಲ್ಲವೂ ಇವೆ. ಮುಖ್ಯವಾಗಿ ಜೀವನ ಗಂಗೆಯ ಬೃಹದ್ದರ್ಶನವನ್ನು ಅವರು ತಮ್ಮ ಸಾಹಿತ್ಯದಲ್ಲಿ ಮಾಡಿಸಿದ್ದಾರೆ.

ಮಾನವ ಜನ್ಮ ದೊಡ್ಡದು, ಅದ ಹಾನಿಮಾಡಲಿಬೇಡಿ
ಹುಚ್ಚಪ್ಪಗಳಿರಾ

ಎಂಬುದು ಅವರ ಪ್ರಮುಖ ನಿಲುವು. ಮನುಷ್ಯ ಜೀವನದ ಸೌಂದರ್ಯವನ್ನು, ಸೌಲಭ್ಯವನ್ನು, ಸಾರ್ಥಕತೆಯನ್ನು ಅವರು ಅರ್ಥಮಾಡಿಕೊಂಡಿದ್ದರು. ನಿತ್ಯಜೀವನದ ಕ್ಲೇಶ ಅವರ ಕಣ್ಣಿಗೆ ಕಾಣದಿರಲಿಲ್ಲ. "ಎಂತಾದರೂ ಚಿಂತೆ ಬಿಡದು, ನಿಶ್ಚಿಂತರಾದವರೊಬ್ಬರನು ನಾ ಕಾಣೆ". "ಯಾರಿಗೆ ಯಾರುಂಟು ಎರವಿನ ಸಂಸಾರ! ನೀರಮೇಲಣ ಗುಳ್ಳೆ ನಿಜವಲ್ಲ ಹರಿಯೆ" "ನೂಕಲಾರೆನು ಈ ಸಂಸಾರ ತೊರೆಯ" ಮುಂತಾದ ಕೀರ್ತನೆಗಳಲ್ಲಿ ಭವದ ಬೇಗೆಯಲ್ಲಿ ಬೆಂದ ಚೇತನ ಕಾಣುತ್ತದೆ. ಆದರೆ ಜೀವನದಲ್ಲಿ ಅದ್ಭುತ ದರ್ಶನವೊಂದು ಒದಗಿ ಈ ಉದ್ವೇಗ ಆರಿತು. "ಬದುಕಿದೆನು ಬದುಕಿದೆನು ಭವ ಹಿಂಗಿತು" ಎಂದೂ "ಸಂಸಾರವೆಂಬಂಥ ಸೌಭಾಗ್ಯವಿರಲಿ" ಎಂದೂ ಅವರು ಹೇಳಿದಾಗ ಈ ಅದ್ಭುತದರ್ಶನದ ಪ್ರಭಾವ ಸ್ಪಷ್ಟವಾಗುತ್ತದೆ. ವ್ಯಾಸತೀರ್ಥರ ಸಹವಾಸವೇ, ಅವರ ಸನ್ನಿಧಾನದ ದೀಕ್ಷೆಯೇ, ಈ ಅದ್ಭುತದರ್ಶನವೆಂದು ಪ್ರತೀತಿ. ಅವರ ಕೀರ್ತನೆಗಳಲ್ಲಿಯೇ "ವ್ಯಾಸರಾಯರ ಚರಣಕಮಲದರುಶನವೆನಗೆ। ಏಸುಜನ್ಮದ ಸುಕೃತಫಲದಿ ದೊರಕಿತೋ" ಎನ್ನುವ ಪ್ರಸ್ತಾಪವಿದೆ.

ಅಂತೂ ಈ ಪರಾವೃತ್ತಿಯಾದನಂತರ ಅವರ ಮಾನವೀಯತೆಯ ಮನೋಧರ್ಮ ಹೆಚ್ಚಿತು. ಕೆಲವು ಕೀರ್ತನೆಗಳಲ್ಲೇನೋ ಮಾಧ್ವ ಸಂಪ್ರದಾಯದ ಛಲ ಒಂದಿಷ್ಟು ಕಾಣಬರುತ್ತದೆ. ಇವು ಯಾವ ವಯಸ್ಸಿನ ಕೃತಿಗಳೋ ಹೇಳಬರುವುದಿಲ್ಲ. ಆದರೆ ಹಲವಾರು ಪರಿಣತ ಕೃತಿಗಳಲ್ಲಿ ಜಾತ್ಯತೀತವಾದ ಮಾನವೀಯ ದೃಷ್ಟಿ ಸ್ಪಷ್ಟವಾಗಿದೆ- "ಕುಲಕುಲಕುಲವೆಂಬರು. ಕುಲವ್ಯಾವುದಯ್ಯ?", "ಹೊಲೆಯ ಹೊರಗಿಹನೆ, ಒಳಗಿಲ್ಲವೆ?", "ಆವ ಕುಲವಾದರೇನು? ಆವನಾದರೇನು?", "ನಾ ಡೊಂಕಾದರೆ ನಿನ್ನ ನಾಮ ಡೊಂಕೆ?" ಮುಂತಾದ ಕೀರ್ತನೆಗಳಲ್ಲಿ ಅವರ ಹೃದಯವೈಶಾಲ್ಯ, ಔದಾರ್ಯ, ಸರ್ವಸಮತಾದೃಷ್ಟಿ ನಿರ್ವಿವಾದವಾಗಿವೆ. ಅಲ್ಲಿಂದ ಮುಂದೆ ಅವರು ಧರ್ಮದ, ಆಚಾರದ ಆಟಾಟೋಪವನ್ನು ಖಂಡಿಸಿ ಉಂಛವೃತ್ತಿಯನ್ನೇ ಹಿಡಿದು ಮನೆಮನೆಗೆ ಹೋಗಿ ಶೀಲಶುದ್ಧಿಯ, ಸಮಾಜದೃಷ್ಟಿಯ, ಧರ್ಮಪ್ರವೃತ್ತಿಯ ಸಂದೇಶವನ್ನು ಹರಡಿದರು. ಮಠಾಧಿಪತಿಗಳೂ ಪಂಡಿತರೂ ಮಾಡಲಾಗದ ಸಮಾಜಸೇವೆ ಇವರಿಂದ ಆಯಿತು. ಹೀಗೆಂದೇ ಅವರನ್ನು ಜನ ಆದರಿಸಿದರು. ನಿಂದಕರೂ ಇದ್ದರು; ಆದರೆ ದಾಸರಿಗೆ ಅವರಿಂದ ಬಾಧೆ ಆಗಲಿಲ್ಲ. ಅವರು ವಿನೋದವಾಗಿಯೇ-

ನಿಂದಕರಿರಬೇಕು, ಕೇರಿಯೊಳಗೆ
ಹಂದಿಯಿದ್ದರೆ ಹ್ಯಾಂಗೆ ಶುದ್ಧಿಯೊ ಹಾಂಗೆ....

ದುರುಳಜನಂಗಳು ಚಿರಕಾಲ ಇರುವಂತೆ...
ಕರವ ಮುಗಿದು ವರವ ಬೇಡುವೆನು-

ಎಂದು ಹಾಡಿದರು.

ಪಾಮರ ಗ್ರಾಹ್ಯವಾಗಲು ಗದ್ಯಕ್ಕಿಂತ ಪದ್ಯವೇ ಹೆಚ್ಚು ಫಲಕಾರಿಯೆಂದು ಅವರು ಹಾಡುಗಳನ್ನು ಹೆಣೆದರು. ಹೆಂಗಸರೂ, ಮಕ್ಕಳೂ, ಉಪಾದಾನದ ದಾಸರೂ ಹಾಡಿಕೊಳ್ಳುವಷ್ಟು ಸುಲಭವಾದ ಶೈಲಿ ಅವರ ಹಾಡುಗಳದ್ದು. ಹಳಗನ್ನಡದ ಬಳಕೆ ಆಗಲೇ ಕಡಮೆಯಾಗಿ ಹೊಸಗನ್ನಡ ಬಳಕೆಗೆ ಬಂದ್ದಿತು. ಪುರಂದರದಾಸರ ಕೃತಿಗಳಿಂದ ಹೊಸಗನ್ನಡ ಪದ್ಯಶೈಲಿ ಖಚಿತವಾಯಿತು. ಜಾನಪದ ಗೀತಗಳ ಮಟ್ಟವನ್ನು ವಿಶೇಷವಾಗಿ ಅವರು ಬಳಸಿಕೊಂಡಿದ್ದಾರೆ. ವೃತ್ತನಾಮ, ತ್ರಿಪದಿ, ಚೌಪದಿ, ಷಟ್ಪದಿ, ತತ್ತ್ವಸುವ್ವಾಲಿ, ಸಾಂಗತ್ಯ, ಕಂದ, ಸೀಸಪದ್ಯ ಮುಂತಾದ ಕಾವ್ಯ ಪ್ರಭೇದಗಳಲ್ಲಿ ಅವರು ಪ್ರಯೋಗ ನಡೆಸಿದ್ದಾರೆ. ಪ್ರಾಸ, ಆದ್ಯಕ್ಷರ, ದ್ವಿತೀಯಾಕ್ಷರ, ಅಂತ್ಯಾಕ್ಷರ ಪ್ರಾಸಗಳನ್ನೂ ಒದಗಿಸಿ ಕಾವ್ಯ ಬರೆದಿದ್ದಾರೆ. ಸರಳವಾದ ಮಾತು, ಮಧುರವಾದ ಪದಪುಂಜ, ಲಯಬದ್ಧವಾದ ಪಂಕ್ತಿಗಳು ಇವು ಪುರಂದರದಾಸರ ಸಾಹಿತ್ಯದ ವೈಶಿಷ್ಟ್ಯ.

ಪುರಾಣ ಪ್ರಕ್ರಿಯೆಗಳು ಜನರ ಮನಸ್ಸಿಗೆ ಹಿತವೆಂದು ಪುರಾಣದ ಕಥೆಗಳನ್ನೂ ಭಾಗವತದ ಸಂದರ್ಭಗಳನ್ನೂ ಅವರು ಬಳಸಿಕೊಂಡರು. ಹಲವು ತಾತ್ತ್ವಿಕ ನಿರೂಪಣೆಗಳಿಗೆ ಪುರಾಣದ ಸಮರ್ಥನೆಯನ್ನು ಕಾಣಿಸಿದ್ದಾರೆ. ❐

ಅಧ್ಯಾಯ ಒಂಬತ್ತು

ಹರಿದಾಸ ಪರಂಪರೆ

೧

ಕನ್ನಡನಾಡಿನಲ್ಲಿ ಆರುನೂರು ವರ್ಷಗಳ ಹಿಂದೆ ಸಣ್ಣದೊಂದು ತೊರೆಯಾಗಿ ಹರಿಯ ತೊಡಗಿದ ಹರಿದಾಸಪಂಥ ಮುಂದೆ ಮಹಾನದಿಯಾಯಿತು; ಅದರಿಂದ ಇಲ್ಲಿನ ನೆಲವೆಲ್ಲ ಫಲವತ್ತಾಯಿತು. ಕಾಲಕ್ರಮದಲ್ಲಿ ನದಿಯು ಸೀಳು ಸೀಳಾಗಿ ಒಡೆದು ನಾಡಿನ ಸಂಸ್ಕೃತಿ ಸಾಗರದಲ್ಲಿ ಸೇರಿಕೊಂಡಿತು. ನಾಲ್ಕುನೂರು ವರ್ಷಗಳ ಹಿಂದೆ, ಪುರಂದರ ದಾಸರ ಕಾಲದಲ್ಲಿ ಇದು ಪ್ರವಾಹವಾಗಿಯೇ ಹರಿದಿತ್ತು; ಹದಿನೈದು ಹದಿನಾರನೆಯ ಶತಮಾನಗಳಲ್ಲಿ ಅದರ ಓಟವೂ ವಿಸ್ತಾರವೂ ಹಿಗ್ಗಿದವು. ಅನಂತರ ನದಿಯ ರಭಸವು ಕಡಮೆಯಾದರೂ ಬರಗಾಲದಲ್ಲಿಯೂ ಬತ್ತದೆ, ನೆಲವನ್ನು ಬಗೆದರೆ ಹೊರಬರುವ ಝರಿಯಂತೆ, ಅಲ್ಲಲ್ಲಿ ಆಗಾಗ ಅಷ್ಟಷ್ಟು ಉಳಿದೇ ಬಂದಿತು. ನಮ್ಮ ಕಾಲಕ್ಕೂ ಅದು ಪೂರಾ ಮರೆಯಾಗಿಲ್ಲ. ಮರೆಯಾದೀತೆಂಬ ಹೆದರಿಕೆಯೇನೋ ಇದೆ.

ಹರಿದಾಸರು ಕನ್ನಡ ಹಾಡುಗಳನ್ನು ಹಾಡಿಕೊಂಡು, ಕೆಲವೊಮ್ಮೆ ಭಾವಪರವಶರಾಗಿ ಕುಣಿಯುತ್ತ, ಉಪಾದಾನಕ್ಕೆಂದು ಕೇರಿ ಕೇರಿಗಳಲ್ಲಿ, ಮನೆಮನೆಗೆ ಬರುವುದು ಹಿಂದಿನಿಂದಲೂ ಬಂದ ಪದ್ಧತಿ. ಕಳೆದ ತಲೆಮಾರಿನವರೆಗೂ ಎಲ್ಲ ಊರುಗಳಲ್ಲಿ ಹರಿದಾಸರನ್ನು ಕಾಣಬಹುದಾಗಿದ್ದಿತು. ನಮ್ಮ ಜನ ಇವರನ್ನು ಭಿಕ್ಷುಕರಂತೆ, ಭಿಕಾರಿಗಳಂತೆ ಪರಿಗಣಿಸಲಿಲ್ಲ; ಇವರು ಮನೆಗೆ ಬಂದರೆ ಆದರಿಸಿ ಒಳಗೊಯ್ದು ಇವರಿಂದ ಹಾಡು ಹೇಳಿಸಿ, ಕೇಳಿ, ಕೈಲಾದುದನ್ನು ಕೊಟ್ಟು ನಮಸ್ಕಾರ ಮಾಡಿ ಕಳುಹಿಸುತ್ತಿದ್ದರು. ಸಂಪ್ರದಾಯವಂತರ ಮನೆಗಳಲ್ಲಂತೂ ಹರಿದಾಸರನ್ನು ವಾರವಾರವೂ ಬರಮಾಡಿಕೊಳ್ಳುವರು, ಹೊಸ ಹೊಸ ದೇವರನಾಮಗಳನ್ನು ಹಾಡಿಸುವರು, ಅನುಕೂಲಕ್ಕೆ ತಕ್ಕಂತೆ ಉದಾರವಾಗಿಯೇ ಉಪಚರಿಸುವರು. ಈಚೆಗೆ ಹರಿದಾಸರು ಅಷ್ಟಾಗಿ ಕಾಣಿಸಿ ಕೊಳ್ಳುವುದಿಲ್ಲವೆನ್ನಿ.

ಹರಿದಾಸರನ್ನು ನೋಡಿದೊಡನೆ ಗುರುತಿಸುವುದು ಸಾಧ್ಯ. ಅವರ ಉಡುಗೆ ಸಂಪ್ರದಾಯದಿಂದ ಒಂದು ಬಗೆಯದು, ತಲೆಗೆ ಸುತ್ತಿದ ಶಾಟಿ, ಬಹುಶಃ ಗುರುಗಳು ಕೊಟ್ಟ ಶೇಷವಸ್ತ್ರ; ಕಚ್ಚೆಪಂಚೆ, ಕಾಲಿಗೆ ಗೆಜ್ಜೆ, ಕೊರಳಲ್ಲಿ ತುಲಸೀಮಣಿಯಮಾಲೆ; ಗೋಪೀಚಂದನದ ಮುದ್ರೆ-ನಾಮಗಳು. ಒಂದು ಕೈಯಲ್ಲಿ ಸಣ್ಣದೊಂದು ಬಡಿಗೆ ಅಥವಾ ತಂಬೂರಿ, ಇನ್ನೊಂದರಲ್ಲಿ ಚಿಟಿಕಿ, ಕಂಕುಳಲ್ಲಿ ಇಳಿಬಿದ್ದ

ಜೋಳಿಗೆ ಅಥವಾ ಗೋಪಾಳಬುಟ್ಟಿ. ಹಾಡುವುದು ಕನ್ನಡದ ದೇವರನಾಮಗಳನ್ನೇ; ಹೆಚ್ಚಾಗಿ ಪುರಂದರದಾಸರವು, ತಪ್ಪಿದರೆ ವಿಜಯದಾಸರವು. ಅವರ ಜೋಳಿಗೆಗೆ ಅಥವಾ ಗೋಪಾಳ ಬುಟ್ಟಿಗೆ ಹಾಕಬೇಕಾದುದು ಅಕ್ಕಿಯನ್ನಷ್ಟೆ. ಅನುಕೂಲಸ್ಥರು ಅವರನ್ನು ಒಳಗೆ ಕರೆದೊಯ್ದು, ವೀಳಯದೆಲೆ, ತೆಂಗಿನಕಾಯಿ, ಬಾಳೆಹಣ್ಣು, ದಕ್ಷಿಣೆಗಳನ್ನೂ ಕೊಡುವರು; ಕೊಟ್ಟಿದ್ದನ್ನೆಲ್ಲ 'ಕೃಷ್ಣಾರ್ಪಣ' ಎಂದು ಸ್ವೀಕರಿಸುವರು ಅವರು.

ಹರಿದಾಸರ ದೀಕ್ಷೆಯೆಂದರೆ ಗುರುವು ನೀಡುವ ಈ ಉಪದೇಶವೇ. ವಿಜಯದಾಸರ ಕಾಂಬೋದಿ ರಾಗದ ಕೃತಿಯೊಂದು ಇದನ್ನು ತಿಳಿಯಹೇಳುತ್ತದೆ-

'ಸಾಲಮಾಡಲಿಬೇಡ ಸಾಲದೆನ್ನಲಿಬೇಡ
ನಾಳಿಗೆ ಹ್ಯಾಂಗೆಂಬೊ ಚಿಂತೆ ಬೇಡ.
ಕೂಳಜನರೊಡಗೂಡಿ ಕಂಗೆಡಲುಬೇಡ
ಬಾಳುವರ ಸಂಗಡ ಬಾಳೆಲೊ ನೀನು।
ಲೋಕವಾರ್ತೆಯ ನಿನ್ನ ಕಿವಿ ಕೇಳಲಿಬೇಡ
ಶ್ರೀಕಾಂತನನೇಕ ಕೀರ್ತಿಯ ಕೇಳದಿರಬೇಡ
ಭೂಕಾಂತರನನುಸರಿಸಿ ಬೆಸಗೊಳ್ಳಲುಬೇಡ।

ಈ ಹರಿದಾಸರದು ಉಂಛವೃತ್ತಿ, ಎಂದರೆ- ಮನೆಮನೆಗೆ ಹೋಗಿ ದೇವರನಾಮಗಳನ್ನು ಹಾಡಿ, ಅವರಿವರು ತಮ್ಮ ಇಷ್ಟದಿಂದ ಕೊಟ್ಟ ಅಷ್ಟಿಷ್ಟನ್ನೇ ತಂದು ಮನೆಯಲ್ಲಿ ಅಡುಗೆ ಮಾಡಿ ದೇವರಿಗೆ ಎಡೆಯಿಟ್ಟು ತಾವೂ ಮನೆಯವರೂ ಉಣ್ಣುವರು. ಅವರಿಗೆ ಬೇರೆ ಯಾವ ವೃತ್ತಿಯಾಗಲಿ ಇರದು; ಇರಬಾರದು. ಇದ್ದುದನ್ನೆಲ್ಲ ಬಡಬಗ್ಗರಿಗೆ 'ಕೃಷ್ಣಾರ್ಪಣ'ವೆಂದು ಹಂಚಿದ ನಂತರವೇ ಹರಿದಾಸರಾಗಿ ಹೊರಡುವುದು; ಬಡತನವನ್ನು ವರಿಸಿಯೇ ಅವರು ನಿಲ್ಲುವುದು. ಮುಂದೆ ಲೌಕಿಕ ಪ್ರಯೋಜನಕ್ಕಾಗಿ ಯಾವ ಉಪಾಧಿಯನ್ನೂ ಅವರು ಹಿಡಿಯುವ ಹಾಗಿಲ್ಲ. ಹೀಗೆಂದ ಮಾತ್ರಕ್ಕೆ ಅವರು ಸಂನ್ಯಾಸಿಗಳೇನಲ್ಲ. ಹರಿದಾಸರಲ್ಲಿ ಹಿಂದೆ ಕೆಲವು ಸಂನ್ಯಾಸಿಗಳೂ ಇದ್ದರು; ನರಹರಿತೀರ್ಥರು, ಶ್ರೀಪಾದರಾಜರು, ವ್ಯಾಸರಾಯರು, ವಾದಿರಾಜರು, ರಾಘವೇಂದ್ರಸ್ವಾಮಿಗಳಿದ್ದ ಹಾಗೆ. ಆದರೆ ಬಹುಮಟ್ಟಿಗೆ ಹರಿದಾಸರು ಸಂಸಾರಿಗಳೇ, ಗೃಹಸ್ಥರೇ.

ಹರಿದಾಸರು ಕಾಣಿಸಿಕೊಳ್ಳುವ ಮೊದಲು ನಮ್ಮ ಸಮಾಜದಲ್ಲಿ ಇಂಥವರಿಗೆ ಸ್ಥಾನವಿದ್ದಿತು. ಹಾಡುತ್ತ, ಕುಣಿಯುತ್ತ, ಉಪಾದಾನದಿಂದ ಬದುಕುವವರು ನಮ್ಮ ದೇಶದಲ್ಲಿ ಹಿಂದಿನ ಕಾಲದಿಂದಲೂ ಇದ್ದರು. ದೇವರ ಹಿರಿಮೆಯನ್ನೂ, ಭಕ್ತಿಯ ಅಗತ್ಯವನ್ನೂ, ಮಹಾಪುರುಷರ ಪವಾಡಗಳನ್ನೂ ಕತೆಗಳಲ್ಲಿ ಕವಿತೆಗಳಲ್ಲಿ ಮೂಡಿಸಿ, ಅವನ್ನು ಜನರೆದುರು ಇಂಪಾಗಿ ಸಂಗೀತದಲ್ಲಿ ನಿರೂಪಿಸುವವರು ವೇದಯುಗದಲ್ಲಿಯೂ ಇದ್ದಿರಬೇಕು. ಊರೂರು, ಕೇರಿಕೇರಿಗಳಲ್ಲಿ ತಿರುಗಾಡುತ್ತ, ತಂಬೂರಿ ಮೀಟಿಕೊಂಡು ಹಾಡುತ್ತ ಹಾಡುಗಬ್ಬಗಳನ್ನು ಜನರಿಗೆ ಪರಿಚಯ ಮಾಡಿಕೊಡುವವರು ನಾಡಿನ ಎಲ್ಲ ಕಡೆಯೂ ಇದ್ದರು. ಇವರಿಗೆ ಸಾಹಿತ್ಯ ಜ್ಞಾನ, ಸಂಗೀತದಲ್ಲಿ ಪರಿಶ್ರಮ, ಮಾತಿನ ಮೋಡಿ, ಭಾವುಕತೆ ಎಲ್ಲವೂ ಇದ್ದರೆ ಸೊಗಯಿಸುತ್ತಿದ್ದಿತು. ಇಂಥವರನ್ನು ಹಿಂದಿನವರು ಕುಶೀಲವರೆಂದು

ಕರೆದರು. ರಾಮಾಯಣನನ್ನು ದೇಶದಲ್ಲೆಲ್ಲ ಇಷ್ಟೊಂದು ವ್ಯಾಪಕವಾಗಿ ಹರಡಿದವರು ಇವರೇ; ಪುರಾಣದ ಕತೆಗಳೂ ಜಾನಪದ ವೃತ್ತಗಳೂ ಎಲ್ಲ ಹಳ್ಳಿಗಳಲ್ಲಿಯೂ ಪರಡಿದುದು ಇಂಥವರಿಂದಲೇ, ಒಂದೆಡೆ ಸಿದ್ಧವಾದ ಸಂಸ್ಕೃತಿಯ ಪಾಕವನ್ನು ದೂರದೂರ ಕೊಂಡೊಯ್ದು ಜನಸಾಮಾನ್ಯರಿಗೆ ಉಣಬಡಿಸುವುದು ಇವರ ಕೆಲಸವಾಗಿದ್ದಿತು.

ಭಾಗವತರು, ಪುರಾಣಿಕರು, ಗಮಕಿಗಳು, ಕೀರ್ತನಕಾರರು ಇದೇ ಕೆಲಸವನ್ನು ನಗರಗಳಲ್ಲಿ ನಡೆಸುತ್ತಿದ್ದರು. ಅವರವರ ಪಾಂಡಿತ್ಯ, ಪ್ರವಚನ ಕೌಶಲ, ಪ್ರೌಢಿಮೆ, ಪುಣ್ಯಗಳಿಗೆ ತಕ್ಕಂತೆ ಜನಪ್ರೀತಿಯೂ ಆದರಣೆಯೂ ದೊರಕುತ್ತಿದ್ದವು; ಅವರ ಬದುಕೂ ನೆಮ್ಮದಿಯಾಗಿರುತ್ತಿದ್ದಿತು. ಮನೆಮಾಡಿಕೊಂಡು, ಅಷ್ಟಿಷ್ಟು ಅನುಕೂಲವನ್ನೂ ಪಡೆದುಕೊಂಡು ನೆಲೆಸಲು ಸಾಧ್ಯವಿರುತ್ತಿದ್ದಿತು. ಸ್ಥೂಲವಾಗಿ ಹರಿದಾಸರು ಇದೇ ಗೋತ್ರಕ್ಕೆ ಸೇರಿದವರಾದರೂ, ಅವರ ಜೀವನಕ್ರಮದಲ್ಲಿ ಮೇಲೆ ಹೇಳಿದವರಲ್ಲಿದ್ದಂತೆ ಆರ್ಥಿಕವ್ಯವಸ್ಥೆಗೆ ಅಷ್ಟು ಪ್ರಾಮುಖ್ಯವಿರುತ್ತಿರಲಿಲ್ಲ. ಅವರು ಸಾಮಾಜಿಕ ನೆಲೆಗೂ ಅಷ್ಟೊಂದು ಗಮನ ಕೊಡುತ್ತಿರಲಿಲ್ಲ. ಅವರ ಬದುಕಿನ ರೀತಿ ಬೇರೆಯ ಬಗೆಯದು; ಬಾಳಿನ ಧೋರಣೆ ಬೇರೆ. ಯಾವುದೊಂದು ನಿರ್ದಿಷ್ಟ ವ್ಯವಸ್ಥೆಗೂ ಅವರು ಸಿಲುಕಿಕೊಳ್ಳುತ್ತಿರಲಿಲ್ಲ. ಇಂಥದೇ ಮನೆಗೆ, ಇಷ್ಟೇ ಮನೆಗಳಿಗೆ, ಇದೇ ವೇಳೆಯಲ್ಲಿ ಹೀಗೆಯೇ ಹೋಗಬೇಕೆಂಬ ನಿಯಮ ಅವರಿಗೇನಿಲ್ಲ; ತಮಗೆ ಇಷ್ಟಬಂದ ಕೇರಿಯಲ್ಲಿ, ಸರಿಯೆಂದು ತೋರಿದ ಮನೆಗಳಿಗೆ ಹೋಗಿ, ಮನಸ್ಸಿಗೆ ಬಂದ ದೇವರನಾಮಗಳನ್ನು ಹಾಡಿ, ಅವರು ಕೊಟ್ಟುದನ್ನು ಕೊಟ್ಟಷ್ಟನ್ನು ಸಂತೋಷದಿಂದ ಸ್ವೀಕರಿಸಿ ಬರುತ್ತಿದ್ದರು. ಯಾರೂ ಅವರನ್ನು ಯಾವ ವಿಧದಲ್ಲಿಯೂ ನಿರ್ಬಂಧಪಡಿಸುವ ಹಾಗಿಲ್ಲ. ಹರಿದಾಸ್ಯ ವೃತ್ತಿಯ ಮುಖ್ಯ ಲಕ್ಷಣವೆಂದರೆ ಅದರ ಸ್ವಾತಂತ್ರ್ಯ; ಯಾರ, ಯಾವುದರ ಹಂಗೂ ಅವರಿಗಿಲ್ಲದಿರುವುದು. 'ನೀನ್ಯಾಕೋ, ನಿನ್ನ ಹಂಗ್ಯಾಕೋ' ಎಂದು ದೇವರನ್ನೇ ಕೇಳುವ ಜನ ಅವರು!

ಅವರಲ್ಲಿ ವ್ಯವಸ್ಥೆಯೊಂದು ಇಲ್ಲದೆ ಇರಲಿಲ್ಲ. ಇದು ದಾಸಕೂಟದ ವ್ಯವಸ್ಥೆ. ಹರಿದಾಸರೆಲ್ಲ ಒಂದೆ ಕುಟುಂಬ; ಅವರು ಎಲ್ಲೇ ಇರಲಿ ಒಂದು ಕುಟುಂಬಕ್ಕೆ ಸೇರಿದವರು. 'ಹರಿದಾಸರೆನ್ನ ಬಾಂಧವರು' ಎಂದು ಪುರಂದರದಾಸರು ಹಾಡಿದರು. ಅಂಕಿತವಿಲ್ಲದೆ, ದೀಕ್ಷೆಯಿಲ್ಲದೆ ಯಾರೂ ಹರಿದಾಸರಾಗಲಾರರು; ದಾಸಕೂಟಕ್ಕೆ ಸೇರದವರು ಅಂಕಿತವನ್ನು ದೀಕ್ಷೆಯನ್ನು ಕೊಡುವಹಾಗಿಲ್ಲ. ಭಾಗವತರಿಗೆ, ಪುರಾಣಿಕರಿಗೆ, ಗಮಕಿಗಳಿಗೆ ಇಂಥ ಕಟ್ಟುಪಾಡೇನು ಇಲ್ಲ. ದಾಸಕೂಟ ಕಾಲ್ಪನಿಕವಾದ, ಭಾವಪ್ರಧಾನವಾದ ಒಂದು ವ್ಯವಸ್ಥೆಯಲ್ಲಿ ನಿಂತಿರುವುದು ಸ್ವಾರಸ್ಯ. ಆದರೆ ದಾಸಕೂಟದ ವ್ಯವಸ್ಥೆ ವಿಚಿತ್ರವಾದುದು; ಅದಕ್ಕೆ ಒಂದೆಡೆ ನೆಲೆಯೆಂಬುದಿಲ್ಲ, ಅದನ್ನು ನಿರ್ವಹಿಸುವರೆಂಬ ಅಧಿಕಾರಿಗಳು ಇರುವುದಿಲ್ಲ. ಅದಕ್ಕೆ ಎಲ್ಲಿಯೂ ಯಾವ ಬಗೆಯದೂ ಮೂರ್ತಸ್ವರೂಪವಿಲ್ಲ. ಎಲ್ಲೆಲ್ಲಿಯೋ ಇರುವ, ಎಲ್ಲ ಕಾಲದಲ್ಲಿಯೂ ಇದ್ದ ಹರಿದಾಸರ ಸಮುದಾಯ, ಸಮವಾಯ ಸಮಷ್ಟಿ. ದಾಸಕೂಟ ಹರಿದಾಸರ ಮನಸಿನಲ್ಲಿರುತ್ತದೆ ಅಷ್ಟೆ; ಅದಕ್ಕೆ ಹೊರಗಿನ ಆಕಾರವಿಲ್ಲ. ದಾಸಕೂಟವೆನ್ನುವ ಭಾವನೆಯು ಎಲ್ಲ ಹರಿದಾಸರ ಮನಸ್ಸಿನಲ್ಲಿಯೂ ಇದ್ದು, ತಾವು ಅದಕ್ಕೆ ಚೇತನದಿಂದಲೂ, ಸಂಕಲ್ಪದಿಂದಲೂ, ಸಂಸ್ಕಾರದಿಂದಲೂ ಸೇರಿದವರೆನ್ನುವ ನಿಷ್ಠೆಯಿರುತ್ತದೆ.

ದಾಸಕೂಟಕ್ಕಿರುವ ನಿಯಮಗಳೂ ಸಾಧಾರಣವಾದುವು, ಸಾರ್ವಜನೀನವಾದುದು; ಮೂಲಭೂತವಾದ ಮಾನವಧರ್ಮಕ್ಕೆ ಸಂಬಂಧಿಸಿದುವು. ಹರಿಯೇ ಪರನೆಂಬ ನಂಬಿಕೆ, ಮನುಷ್ಯನು ಅವನಿಗೆ ಅಧೀನ ಎನ್ನುವ ಅರಿವು. ಸಂಸಾರವು ಸತ್ಯ ಎಂಬ ಪರಿವೆ, ವೇದ-ಶಾಸ್ತ್ರ-ಪುರಾಣೇತಿಹಾಸಗಳಲ್ಲಿ ನಂಬಿಕೆ, ಸಾಲ ಮಾಡದಿರುವುದು, ಸಾಲದೆನದಿರುವುದು, ನಾಳೆಗೆಂದು ಇಡದಿರುವುದು, ಹರಿದಿನ-ವ್ರತಾಚರಣೆ ಬಿಡದಿರುವುದು, ದೈವನಿಂದೆ ಕೇಳಿದರೆ ಆತ್ಮಶುದ್ಧಿ ಮಾಡಿಕೊಳ್ಳುವುದು, ಹರಿಸೇವೆಗೇ ಜೀವನವನ್ನು ಮೀಸಲಾಗಿಡುವುದು, ಅನ್ನಪಾನಕ್ಕೆ ಅವಸರ ಬೀಳದಿರುವುದು, ಇಂದ್ರಿಯಗಳನ್ನೆಲ್ಲ ನಿಗ್ರಹಿಸುವುದು, ಭಾವಶುದ್ಧಿಯಲಿ ನಿತ್ಯ ತಿರುಗುವುದು, ಕಣ್ಣಿದ್ದೂ ಕುರುಡನೆಂದೆನಿಸುವುದು ಇವೆಲ್ಲ ಹರಿದಾಸ್ಯದ ನಿಯಮಾವಳಿಯಲ್ಲಿ ಸೇರುತ್ತವೆ. ದಾಸರು ಪ್ರಾಪಂಚಿಕವಾದ ಯಾವ ಉದ್ಯೋಗವನ್ನೂ ಹಿಡಿಯುವುದಿಲ್ಲ; ಸಾಮಾನ್ಯ ವ್ಯವಹಾರಗಳಲ್ಲಿ ಪಾಲುಗೊಳ್ಳುವುದಿಲ್ಲ. ಗಳಿಸಿ ಕೂಡಿಡುವ ಗೀಳು ಅವರಿಗೆ ಸಲ್ಲದು. ಮುಂದಿನ ವಿಚಾರದಲ್ಲಿ ಅವರು ಆತಂಕಪಡುವುದಿಲ್ಲ. ಕೊಡುವ ಕರ್ತೃ ಬೇರೆ ಇರಲಾಗಿ ನಾನೇಕೆ ಬಡವ? ನನಗೆಲ್ಲಿಯ ಚಿಂತೆ? ಅಂಜಿಕೆ ಇನ್ನು ಏತಕ್ಕೆ ? ಬಂದುದೆಲ್ಲ ಬರಲಿ, ಗೋವಿಂದನ ದಯವೊಂದಿರಲಿ - ಇದು ದಾಸರ ನಿಲುವು. ಈ ನಿಲುವಿಗೆ ಅನುಕೂಲವಾಗತಕ್ಕ ನಿಯಮಗಳನ್ನು ಅವರು ಪಾಲಿಸುತ್ತಾರಷ್ಟೆ.

ಈ ನಿಯಮಗಳನ್ನೂ, ಅದಕ್ಕೆ ಮೂಲಭೂತವಾದ ಮನೋಧರ್ಮವನ್ನೂ, ಮನಸಾರೆ ಒಪ್ಪಿ, ಮನವೊಪ್ಪುವಂತೆ ನಡೆಸಿದರೆ ಆಯಿತು. ನಡವಳಿಕೆಯ ಪರಿಶೀಲನೆಯಾಗಲಿ ಪರಾಮರ್ಶೆಯಾಗಲಿ ಅವರವರಿಗೆ ಬಿಟ್ಟುದು. ದಾಸಕೂಟವೆಂದು ವಿಚಾರಣೆ ನಡೆಸುವ ವ್ಯವಸ್ಥೆ ಏನೂ ಇರದು. ಕೂಟಕ್ಕೆ ಸೇರಿಸಿಕೊಳ್ಳುವುದಾಗಲಿ, ಕೂಟದಿಂದ ಹೊರಗೆ ಹಾಕುವುದಾಗಲಿ ನಡೆಯುವುದಿಲ್ಲ. ಕೂಟಕ್ಕೆ ಸದಸ್ಯತ್ವವೆನ್ನುವ ಬಾಹ್ಯ ಲಾಂಛನವಾಗಲಿ, ಶುಲ್ಕವಾಗಲಿ ಇರದು. ದಾಸಕೂಟವು ಯಾವ ಮಠಕ್ಕಾಗಲಿ, ಮತಕ್ಕಾಗಲಿ ಸೇರಿದ ಸಂಸ್ಥೆಯಲ್ಲ.

ದಾಸಕೂಟಕ್ಕೆ ಮುಖ್ಯವಾದುದು ಪರಂಪರೆ. ಈ ಪರಂಪರೆ ಶ್ರೀಪಾದರಾಜರಿಂದ ಪ್ರವರ್ತಿತವಾಯಿತೆಂದು ನಂಬಿಕೆಯಿದೆ. ಅವರ ಶಿಷ್ಯರಾದ ಪುರಂದರದಾಸರ ಕಾಲದಲ್ಲಿಯೂ, ಅವರ 'ಶಿಷ್ಯ'ರಾದ ವಿಜಯದಾಸರ ಕಾಲದಲ್ಲಿಯೂ ದಾಸಕೂಟವು ವ್ಯಾಪಕವಾಯಿತೆಂದೂ ಪ್ರತೀತಿ. ಹಾಗೆಂದೇ ದಾಸಕೂಟದವರು ಈ ಶ್ಲೋಕವನ್ನು ಮೂಲಮಂತ್ರದಂತೆ ಬಳಸುತ್ತಾರೆ-

ನಮಃ ಶ್ರೀಪಾದಾರಾಜಾಯ ನಮಸ್ತೇ ವ್ಯಾಸಯೋಗಿನೇ।
ನಮಃ ಪುರಂದರಾರ್ಯಾಯ ವಿಜಯಾರ್ಯಾಯ ತೇ ನಮಃ॥

ಈ ನಾಲ್ವರಲ್ಲಿ ಶ್ರೀಪಾದರಾಜರೂ ವ್ಯಾಸರಾಯರೂ ಪುರಂದರದಾಸರೂ ಹೆಚ್ಚು ಕಡಮೆ ವಿಜಯನಗರ ಸಾಮ್ರಾಜ್ಯಕ್ಕೆ ಸೇರಿದವರು, ವಿಜಯದಾಸರು ಸುಮಾರು ಒಂದು ನೂರು ವರ್ಷಗಳನಂತರ ಬಂದವರು; ಅವರಿಗೆ ಪುರಂದರದಾಸರು ಕನಸಿನಲ್ಲಿ ಕಾಣಿಸಿಕೊಂಡು ಅಂಕಿತವನ್ನು ಕೊಟ್ಟವರಂತೆ. ಅವರ ಸ್ಥಳ ಈಗಿನ ಹೈದರಾಬಾದು ಪ್ರಾಂತ್ಯದ ರಾಯಚೂರು ಪ್ರದೇಶ. ಒಂದು ದೃಷ್ಟಿಯಲ್ಲಿ ವಿಜಯನಗರದ ಹಂಪಿಯಿಂದ ದಾಸಕೂಟದ ಕೇಂದ್ರವು ಇಲ್ಲಿಗೆ ಬದಲುಗೊಂಡಿತು ಎನ್ನಬಹುದು. ಪುರಂದರದಾಸರ ಕಾಲದನಂತರ ಮರೆಯಾಗಿಬಿಟ್ಟ ದಾಸಕೂಟವನ್ನು ಮತ್ತೆ

ಉಸಿರುಕೊಟ್ಟು ಬದುಕಿಸಿದವರು ವಿಜಯದಾಸರು. ಇವರಿಗೆ ಹಲವಾರು ಶಿಷ್ಯರಾದರು, ಒಬ್ಬೊಬ್ಬ ಶಿಷ್ಯನಿಗೂ ಪ್ರಶಿಷ್ಯರಾದರು. ವಿಜಯದಾಸರ ನಂತರ ಗೋಪಾಲವಿಠಲ, ವೆಂಕಟವಿಠಲ, ವ್ಯಾಸ ವಿಠಲ, ಮೋಹನವಿಠಲ ಮೊದಲಾದ ಅಂಕಿತಗಳನ್ನು ಪಡೆದುಕೊಂಡವರು ತಂತಮ್ಮ ಪರಂಪರೆ ಗಳನ್ನು ಬೆಳೆಸಿದರು. ಈ ಪರಂಪರೆಗಳಲ್ಲಿ ಕೆಲವು ಇಂದಿನವರೆಗೂ ಉಳಿದುಕೊಂಡು ಬಂದಿವೆ. ಚಿಪ್ಪಗಿರಿ, ಗದ್ವಾಲ, ಮಾನ್ವಿ, ಸುರಪುರ, ಖೇಡ, ಸಂತೆಬೆನ್ನೂರು, ಹರಪನಹಳ್ಳಿ, ಲಿಂಗಸುಗೂರು, ದೊಡ್ಡಬಳ್ಳಾಪುರ, ರಾಣಿಬೆನ್ನೂರು, ದೇವರಾಯನ ದುರ್ಗ, ಕಂಪ್ಲಿ, ಚಿಕ್ಕೋಡಿ ಈ ಸ್ಥಳಗಳು ಪ್ರಧಾನವಾಗಿ ಹರಿದಾಸರ ಕಾರ್ಯಕ್ಷೇತ್ರಗಳಾದುವು.

ಈ ಪರಂಪರೆಗಳಲ್ಲಿ ಬಂದ ಹರಿದಾಸರು ತಮ್ಮ ಪ್ರಾಚೀನರನ್ನು ಸ್ಮರಿಸಿಕೊಳ್ಳುವ ಸಂಪ್ರದಾಯವಿದೆ. ಈ ಪರಂಪರೆಯೇ ದಾಸಕೂಟದ ಮೂರ್ತರೂಪ ಎಂದರೆ ತಪ್ಪಾಗದು.

ಎಲ್ಲ ಪರಂಪರೆಗಳಿಗೂ ಆದ್ಯರು ವಿಜಯದಾಸರೇ (೧೬೮೭-೧೭೫೫). ಅವರಿಗೆ ಪ್ರಾಚೀನರೆಂದರೆ ಪುರಂದರದಾಸರು (೧೪೮೪-೧೫೬೪). ಅವರ ಹಿಂದಿನವರು ವ್ಯಾಸತೀರ್ಥರು (೧೪೪೭-೧೫೩೯), ಅವರು ಗುರುಗಳು ಶ್ರೀಪಾದರಾಜರು (ನಿರ್ಯಾಣ ೧೪೮೬), ದಾಸಕೂಟದ ಎಲ್ಲರಿಗೂ ಈ ನಾಲ್ವರು ಹಿರಿಯರೇ, ಪ್ರಾಚೀನರೇ, ಆದ್ಯರೇ. ಹೀಗೆಂದೇ ಅವರ ಸ್ತೋತ್ರ ಪ್ರಸಕ್ತವಾಗಿದೆ.

ದಾಸಕೂಟದ ಸ್ವಾರಸ್ಯವೆಂದರೆ ಅವರು ಸುಮಾರು ಐದುನೂರು ವರ್ಷಗಳಲ್ಲಿ ಸಿದ್ಧ ಪಡಿಸಿರುವ ವಿಪುಲವಾದ, ವಿಶಿಷ್ಟವಾದ ಸಾಹಿತ್ಯ. ಪುರಂದರದಾಸರೊಬ್ಬರೇ ನಾಲ್ಕುಲಕ್ಷ ಎಪ್ಪತ್ತೈದುಸಾವಿರ ಕೃತಿಗಳನ್ನು ರಚಿಸಿದರೆಂದು ಪ್ರತೀತಿ; ಅವರಿಂದ ಅಂಕಿತವನ್ನು ಪಡೆದುಕೊಂಡ ವಿಜಯದಾಸರು ಇಪ್ಪತ್ತೈದುಸಾವಿರ ಕೃತಿಗಳನ್ನು ರಚಿಸಿ ಐದುಲಕ್ಷವನ್ನು ಪೂರ್ಣ ಮಾಡಿದರಂತೆ! ಜಗನ್ನಾಥದಾಸರು ನೂರಾರು ಪದಗಳನ್ನಲ್ಲದೆ 'ಹರಿಕಥಾಮೃತಸಾರ'ವೆನ್ನುವ ದೊಡ್ಡ ಗ್ರಂಥವನ್ನೂ ರಚಿಸಿದರು. ಗೋಪಾಲದಾಸರು ಮೊದಲಾದವರು ಕೂಡ ಅಧಿಕ ಸಂಖ್ಯೆಯಲ್ಲಿ ಪದಗಳನ್ನು ರಚಿಸಿದ್ದಾರೆ. ಹೀಗಾಗಿ ಹರಿದಾಸಸಾಹಿತ್ಯವೆನ್ನುವುದು ಕನ್ನಡವಾಙ್ಮಯದ ವಿಶಿಷ್ಟವಾದ ಒಂದು ಪ್ರಕಾರವಾಗಿ ಪರಿಣಮಿಸಿದೆ. ಅದರ ಸಮಗ್ರವಾದ ಅಧ್ಯಯನ ಇನ್ನೂ ನಡೆಯಬೇಕಾಗಿದೆ; ಎಲ್ಲ ದಾಸರ ಕೃತಿಗಳ ಸಂಗ್ರಹದ ಕೆಲಸ ಕೂಡ ಸರಿಯಾಗಿ ನಡೆದಿಲ್ಲ.

ದಾಸರ ರಚನೆಗಳೆಲ್ಲ ಕನ್ನಡನುಡಿಯಲ್ಲಿವೆ; ಕವಿತೆಗಳ ಧಾಟಿಯಲ್ಲಿವೆ. ಅವುಗಳಿಗೆ ರಾಗ, ತಾಳಗಳನ್ನು ಅಳವಡಿಸಿರುವುದೂ ಉಂಟು. ಕಲಿಯುಗದಲ್ಲಿ ದೇವರು ಕೀರ್ತನೆಗೆ ಒಲಿಯುವನು ಎನ್ನುವ ನಂಬಿಕೆ ಇದಕ್ಕೆ ಕಾರಣ. ಶ್ರೀಪಾದರಾಯರು-

> ಧ್ಯಾನವು ಕೃತಯುಗದಲ್ಲಿ ಯಜನ
> ಯಜ್ಞವು ತ್ರೇತಾಯುಗದಲ್ಲಿ
> ದಾನವಾಂತಕನ ದೇವತಾರ್ಚನೆಯು
> ದ್ವಾಪರಯುಗದಲ್ಲಿ ಕಲಿಯುಗದಿ ಗಾನದಿ
> ಕೇಶವನೆಂದರೆ ಕೈಗೂಡುವನು ರಂಗವಿಠಲ!

ಎಂದು ಹೇಳಿ ಕೀರ್ತನ ಪದ್ಧತಿಗೆ ಕಾರಣರಾದರು. ಭಗವತ್ಪ್ರೀತಿಗಾಗಿ ಸಂಗೀತವನ್ನು ಕಾವ್ಯವನ್ನು ಹರಿದಾಸರು ಹಿಡಿದರು. ಕರ್ಣಾಟಕ ಸಂಗೀತಪದ್ಧತಿಯ ಮೊದಲ ಹಂತಗಳಲ್ಲಿ ಹರಿದಾಸರು ನೆರವಾದುದೂ ಸ್ವಾರಸ್ಯವಾದ ವಿವರವೇ; ಅದರ ಪ್ರಸ್ತಾಪ ಬೇರೆಡೆ ಬಂದಿದೆ.

ಹರಿದಾಸರು ಕನ್ನಡವನ್ನು ಹಿಡಿದುದು ಇಲ್ಲಿ ಮುಖ್ಯವಾದುದು. ಭಾಗವತರೂ, ಪುರಾಣಿಕರೂ ಮೂಲ ಸಂಸ್ಕೃತವನ್ನೇ ಹೇಳಿ, ಕನ್ನಡದಲ್ಲಿ ಅರ್ಥವನ್ನು ವಿವರಿಸುತ್ತಿದ್ದರು; ಪಂಡಿತರಂತೂ ಸಂಸ್ಕೃತದಲ್ಲಿಯೇ ವಾಕ್ಯಾರ್ಥಗಳನ್ನೂ ವ್ಯಾಖ್ಯಾನಗಳನ್ನೂ ನಡೆಸುತ್ತಿದ್ದರು. ಕನ್ನಡವು ಮಡಿಗೆ ಬಾರದು ಎನ್ನುವ ಹಟ ಅವರಲ್ಲಿ. ಹರದಾಸರಲ್ಲಿ ಅದ್ಯರು ಸಂಸ್ಕೃತ ಪಂಡಿತರೇ ಆಗಿದ್ದರೂ ಜನಗಳಿಗೆ ತಿಳಿಯಹೇಳುವ ಕೆಲಸಕ್ಕೆ ಕನ್ನಡವನ್ನು ಧಾರಾಳವಾಗಿ ಬಳಸಿದರು. ದಾಸಕೂಟದ ಪ್ರವರ್ತಕರೆನಿಸಿದ ಶ್ರೀಪಾದರಾಜರೇ ಕನ್ನಡದಲ್ಲಿ ಉಗಾಭೋಗಗಳನ್ನೂ, ವೃತ್ತನಾಮಗಳನ್ನೂ ರಚಿಸಿದರು; ಪೂಜೆಯ ಕಾಲದಲ್ಲಿ ಅವನ್ನು ಹಾಡುವ ಪದ್ಧತಿಯನ್ನೂ ಹಾಕಿಕೊಟ್ಟರು ! ಅವರ 'ಭ್ರಮರ' 'ವೇಣು' ಮತು 'ಗೋಪೀ' ಗೀತಗಳು ತಿಳಿಗನ್ನಡದ ಕವಿತೆಗಳು. ವ್ಯಾಸತೀರ್ಥರು ಆ ಕಾಲಕ್ಕೆ ಮಹಾಪಂಡಿತರೆಂದು ಪ್ರಸಿದ್ಧರಾಗಿದ್ದರೂ, 'ತರ್ಕ ತಾಂಡವ' 'ನ್ಯಾಯಾಮೃತ'ಗಳಂಥ ಕ್ಲಿಷ್ಟ ಶಾಸ್ತ್ರ ಗ್ರಂಥಗಳನ್ನು ರಚಿಸಿದವರೆಂದು ವಿಖ್ಯಾತರಾಗಿದ್ದರೂ, ಕನ್ನಡದಲ್ಲಿ ಗೀತೆಗಳನ್ನು ಬರೆದರು. ಮಠಾಧಿಪತಿಗಳೂ, ಸಂಪ್ರದಾಯನಿಷ್ಠರೂ, ಶಾಸ್ತ್ರಪಾರಂಗತರೂ ಆದ ಇವರಿಬ್ಬರು ವಿಜಯನಗರದ ಅರಸರಿಂದಲೂ ಮಹಾಜನರಿಂದಲೂ ಸನ್ಮಾನಿತರಾಗಿದ್ದವರು; ಉಜ್ವಲವಾದ ವ್ಯಕ್ತಿತ್ವ ಅವರಿಬ್ಬರದು. ವೇದಾಂತ ವಾಕ್ಯಾರ್ಥಗಳಲ್ಲಿ ಅವರ ಬಾಯಿಕಟ್ಟುವವರು ಇಡೀ ದೇಶದಲ್ಲಿಯೇ ಇರಲಿಲ್ಲ. ಇಂಥವರು ಕನ್ನಡಭಾಷೆಯಲ್ಲಿ ಬರೆಯತೊಡಗಿದುದು ಅವರ ಕಾಲದ ಒಂದು ಕ್ರಾಂತಿಯೇ ಆಗಿಹೋಯಿತು!

ಕನ್ನಡದ ಪುಣ್ಯ, ಈ ಹಿರಿಯರ ಆದರ್ಶ ಸಫಲವಾಯಿತು; ಕನ್ನಡದಲ್ಲಿ ಹರಿದಾಸ ಸಾಹಿತ್ಯದ ಬೆಳೆ ಯಥೇಚ್ಛವಾಗಿ ಬಂದಿತು. ಪುರಂದರದಾಸರ ಕೈಯಿಂದ ಕನ್ನಡದ ಜಾಯಮಾನ ಪ್ರೌಢವಾಯಿತು; ಮುಂದೆ ಸಾರೋದ್ಧಾರವಾಗಿ ಬೆಳೆಯಿತು. ವೇದಾಂತದ ಪ್ರಮೇಯಗಳು, ಶಾಸ್ತ್ರಗ್ರಂಥಗಳ ಸಾರ, ಆಚಾರ್ಯರ ಬೋಧೆ ಇವೆಲ್ಲ ತಿಳಿಗನ್ನಡದಲ್ಲಿ ಸಾಮಾನ್ಯ ಮನುಷ್ಯರಿಗೆ ಎಟುಕುವಂತೆ ಮಾಡಿದವರು ಹರಿದಾಸರು. ಮೇಲುಮಟ್ಟದ ಸಂಸ್ಕೃತಿ ಕೆಳಗಿನ ಮಟ್ಟಗಳಲ್ಲಿಯೂ ಹರಿಯುವಂತೆ ಮಾಡಲು ಅವರು ಶ್ರಮಿಸಿದರು. ಇದಕ್ಕೆ ವಿರೋಧವಿರಲಿಲ್ಲವೆಂದಲ್ಲ. ಹಳೆಯ ಪದ್ಧತಿಯ ಪಂಡಿತರು ತತ್ತ್ವಜಿಜ್ಞಾಸೆಗೆ, ಶಾಸ್ತ್ರಪ್ರವಚನಕ್ಕೆ, ಭಗವದಾರಾಧನೆಗೆ ಸಂಸ್ಕೃತವೇ ಸರಿ; ಕನ್ನಡ ಕೆಲಸಕ್ಕೆ ಬಾರದು ಎಂದು ವಾದಮಾಡಿದರು. ಭಕ್ತಿಗಿಂತ ಜ್ಞಾನ ಮುಖ್ಯ; ಜ್ಞಾನವು ಶಾಸ್ತ್ರಗಳ ಆಲೋಡನೆಯಿಂದಲೇ ಬರತಕ್ಕುದು. ಇದನ್ನು ಸಂಸ್ಕೃತದ ನೆರವಿನಿಂದಲೇ ಸಾಧಿಸಿಕೊಳ್ಳಬೇಕು ಎನ್ನುವ ಹಟ ಅವರದ್ದು. ಅವರಿಗೆ ಶಾಸ್ತ್ರಪಾಂಡಿತ್ಯ, ಸಂಸ್ಕೃತ ಜ್ಞಾನ, ಆಚಾರ ನಿಷ್ಠೆ ಇವು ಅನಿವಾರ್ಯವೆನಿಸಿದುವು.

ಮಠದಲ್ಲಿ ವಿದ್ವಾಂಸರಾಗಿದ್ದವರು ತಮ್ಮ ಪ್ರತಿಷ್ಠೆಯನ್ನು ಕಾಪಿಟ್ಟುಕೊಳ್ಳಲು ಈ ನಿಲುವಿನ ಮೇಲೆ ನಿಂತು ಹೋರಾಡಿದರು. ಮಠಾಧಿಪತಿಗಳು ಇವರನ್ನು ಎದುರು ಹಾಕಿಕೊಳ್ಳುವ ಹಾಗೆ ಇರಲಿಲ್ಲ; ಇವರ ಪ್ರಾಬಲ್ಯ ಎಲ್ಲ ಮಠಗಳಲ್ಲಿಯೂ ಇದ್ದಿತು, ಇವರನ್ನು ಜನ 'ವ್ಯಾಸಕೂಟ'ದವರೆಂದು ನಿರ್ದೇಶಿಸಿದರು. ಶಾಸ್ತ್ರಗ್ರಂಥಗಳ ರಚನೆ, ವ್ಯಾಖ್ಯಾನ, ಪಾಠ ಇವೇ ಇವರ ಮುಖ್ಯ ಹವ್ಯಾಸಗಳು.

ಶಾಸ್ತ್ರಗಳನ್ನು ಓದದೆ, ಓದಿದರೂ ತಲೆಯ ಮೇಲೇರಿಸಿಕೊಳ್ಳದೆ, ದೂರದಿಂದಲೇ ಕೈಮುಗಿದು, ಭಕ್ತಿಯ ನೆಲೆಯಲ್ಲಿ ಕನ್ನಡದಲ್ಲಿಯೇ ತಮ್ಮ ಮುಕ್ತಿಯನ್ನು ಸಾಧಿಸಿಕೊಳ್ಳಲು ಹಾಡುಗಳನ್ನು ಕಟ್ಟಿ, ಹಾಡಿ, ಅವುಗಳ ಗತಿಗೆ ಕುಣಿದು ಜನಗಳಲ್ಲಿ ಭಕ್ತಿಮಾರ್ಗವನ್ನು ಪ್ರಚಾರ ಮಾಡುತ್ತಿದ್ದವರು ದಾಸಕೂಟದವರು. ವ್ಯಾಸಕೂಟಕ್ಕೂ ದಾಸಕೂಟಕ್ಕೂ ಭೇದವೂ ವಿರೋಧವೂ ಯಾವ ಕಾಲದಲ್ಲಿ ಸ್ಪಷ್ಟವಾಗಿ ಮೈದುಂಬಿ ಬಂದುವೋ ಹೇಳುವುದು ಕಷ್ಟ. ಕನ್ನಡದಲ್ಲಿ ಹರಿದಾಸ ಸಾಹಿತ್ಯಕ್ಕೆ ಪ್ರವರ್ತಕರೆನಿಸಿದ ಶ್ರೀಪಾದರಾಜರ ಕಾಲದಲ್ಲಿಯೇ ವ್ಯಾಸಕೂಟದವರೂ ದಾಸಕೂಟದವರೂ ಬೇರೆ ಬೇರೆ ದಾರಿಗಳನ್ನು ಹಿಡಿಯಲಾರಂಭಿಸಿದರೆಂದು ತೋರುತ್ತದೆ. ವ್ಯಾಸತೀರ್ಥರ ಕಾಲದಲ್ಲಂತೂ ಇವು ಬೇರೆಯಾದುದು ಸ್ಪಷ್ಟವಾಗಿದ್ದಿತು; ಅವರ ಶಿಷ್ಯರಾದ ಪುರಂದರದಾಸರೇ ದಾಸಕೂಟದ ಅಧ್ವರ್ಯುಗಳಾದರು. ಆದರೆ ಶ್ರೀಪಾದರಾಜರೂ, ವ್ಯಾಸತೀರ್ಥರೂ ಮಠಾಧಿಪತಿಗಳಾಗಿದ್ದು ವ್ಯಾಸ-ದಾಸಕೂಟಗಳೆರಡಕ್ಕೂ ಪೋಷಕರಾಗಿದ್ದರು.

ಮುಂದೆ ಹೀಗೆಯೇ ಸೋದೆಮಠದ ವಾದಿರಾಜರೂ, ಮಂತ್ರಾಲಯ ರಾಘವೇಂದ್ರ ಸ್ವಾಮಿಗಳೂ ಎರಡೂ ಕೂಟಗಳನ್ನು ಬೆಳೆಸಿಕೊಂಡು ಬಂದರು. ಆದರೆ ಬಹುಮಟ್ಟಿಗೆ ದಾಸಕೂಟವು ಮಠಗಳಿಂದ ದೂರ ಸರಿಯಿತೆನ್ನಬಹುದು. ಕರ್ಮಠರಾದ, ವಾದನಿಷ್ಣಾತರಾದ ಪಂಡಿತರು ದಾಸರನ್ನು ಹತ್ತಿರ ಇರಗೊಡಲಿಲ್ಲ. ಕಾಲಕ್ರಮದಲ್ಲಿ ದಾಸಕೂಟ ಬಲಹೀನವಾಗಿ ಉಳಿದುಕೊಂಡದ್ದು ಈ ವಿರೋಧದ ಪರಿಣಾಮವಾಗಿಯೇ ಇದ್ದೀತು. ದಾಸಕೂಟವು ಮಾಧ್ವಮತದ ವ್ಯಾಪ್ತಿಯಲ್ಲಿಯೇ ಬೆಳೆಯಬೇಕಾಗಿ ಬಂದುದೂ, ಮಾಧ್ವಮಠಗಳು ಪ್ರಬಲವಾದುದೂ ಕಾರಣಗಳಿರಬಹುದು. ಕೆಲವು ಮಠಗಳೇನೋ ಹರಿದಾಸಪಂಥವನ್ನು ಪೋಷಿಸಿಕೊಂಡು ಬಂದುವೆಂದು ಹೇಳಬೇಕು; ಆದರೆ ಇವು ನಿಯಮದ ಅಪವಾದಗಳಂತೆ.

ವ್ಯಾಸಕೂಟಕ್ಕೂ ದಾಸಕೂಟಕ್ಕೂ ನಡುವೆ ಇದ್ದ ವ್ಯತ್ಯಾಸವನ್ನೂ, ಅದರ ಸ್ವಾರಸ್ಯವನ್ನೂ ಜನರಂತೂ ಗಮನಿಸಿದರು: ಅವರ ಒಲವು ದಾಸಕೂಟದ ಕಡೆಗಿದ್ದಿತೆಂದು ಬೇರೆ ಹೇಳಬೇಕಾಗಿಲ್ಲ. ಎರಡರ ಮೂಲಪ್ರಮೇಯಗಳು ಒಂದೇ ಆದರೂ, ಎರಡರ ಹಿಂದಿದ್ದ ತಾತ್ವಿಕ ನೆಲೆ ಒಂದೇ ಆಗಿದ್ದರೂ, ಅವು ಹಿಡಿದ ದಾರಿಗಳು ಬೇರೆಯೆಂಬುದು ಜನರಿಗೆ ಅರಿವಾದುದು ಆಶ್ಚರ್ಯವೇನಲ್ಲ: ಭಕ್ತಿಯಿಂದಲೇ ಮುಕ್ತಿ, ಬೇರೆ ದಾರಿಯಿಲ್ಲ ಎನ್ನುವುದು ಹರಿದಾಸರ ಬೋಧೆಯ ತಿರುಳೆಂಬುದು ಜನರಿಗೆ ತಟ್ಟನೆ ಮನದಟ್ಟಾಯಿತು. ಈ ನಿಲುವು ಅವರಿಗೆ ಹಿಡಿಸಿಯೂ ಹಿಡಿಸಿತು. ದಾಸರು ಬಳಸಿದ ಭಾಷೆಯೂ ಜನರಿಗೆ ತಿಳಿಯುವಂಥದೇ. ಜಗನ್ನಾಥದಾಸರು ತಮ್ಮ ಹರಿಕಥಾಮೃತ ಸಾರದಲ್ಲಿ-

> ಸಂಸ್ಕೃತವಿದಲ್ಲೆಂದು ಕುಹಕಿ ತಿ-
> ರಸ್ಕರಿಸಲೇನಹುದು, ಭಕ್ತಿ ಪು -
> ರಸ್ಕರದಿ ಕೇಳ್ವರಿಗೆ ಒಲಿವನು ಪುಷ್ಕರಾಕ್ಷ ಸದಾ।
> ಕೃತಿಪತಿಕಥಾನ್ವಿತವೆನಿಪ ಪ್ರಾ-
> ಕೃತವೇ ತಾ ಸಂಸ್ಕೃತವೆನಿಸಿ ಸ-
> ದ್ಗತಿಯನೀವುದು ಭಕ್ತಿ ಪೂರ್ವಕ ಕೇಳಿ ಪೇಳ್ವರಿಗೆ॥

ಎಂದು ಹೇಳಿರುವುದು ಬರಿಯ ಸಮಾಧಾನವಲ್ಲ; ಪ್ರಚೋದನೆಯೇ ಎನ್ನಬಹುದು. ವ್ಯಾಸಕೂಟದ ಹಟಮಾರಿಗಳಿಗೆ ಇದು ಉತ್ತರದಂತಿದೆ. ಜನಸಾಮಾನ್ಯರು ಮೆಚ್ಚಿಕೊಂಡರು : ದಾಸರನ್ನೂ ಅವರ ಹಾಡುಗಳನ್ನೂ ಅದರದಿಂದ ಬರಮಾಡಿಕೊಂಡರು.

೨

ಹರಿದಾಸಪಂಥವು ಮಧ್ವಾಚಾರ್ಯರಿಂದಲೇ ಆರಂಭವಾಯಿತೆಂದು ದಾಸಕೂಟದವರಲ್ಲಿ ನಂಬಿಕೆಯಿದೆ. ದ್ವೈತಮತಪ್ರವರ್ತಕರಾದ ಮಧ್ವಾಚಾರ್ಯರು ಹನ್ನೆರಡನೆಯ ಶತಮಾನದ ಕಡೆಯ ಭಾಗದಲ್ಲಿದ್ದವರು ; ದಕ್ಷಿಣಕನ್ನಡ ಜಿಲ್ಲೆಯಲ್ಲಿ ಹುಟ್ಟಿ ಇಡೀ ದೇಶವನ್ನೆಲ್ಲ ಸುತ್ತಾಡಿ, ಪ್ರಸ್ಥಾನತ್ರಯಕ್ಕೆ ಭಾಷ್ಯ ಬರೆದು ದ್ವೈತವಾದವನ್ನು ಸಮರ್ಥಿಸಿದವರು. ಇವರ ರಚನೆಗಳೆಲ್ಲ ಸಂಸ್ಕೃತದಲ್ಲಿಯೇ ಇವೆ. ಶಾಸ್ತ್ರಸಾಹಿತ್ಯವೇ ಹೆಚ್ಚು; ಆದರೆ ಅವರ ದ್ವಾದಶಸ್ತೋತ್ರ ಮಾತ್ರ ಗೇಯಗುಣಪ್ರಧಾನವಾದುದು; ಅದನ್ನು ಕೀರ್ತನಪದ್ಧತಿಗೂ ನೃತ್ಯಕ್ಕೂ ಅಳವಡಿಸಿಕೊಂಡಿದ್ದಾರೆ. ಇಷ್ಟು ಮಾತ್ರದಿಂದಲೇ ಅವರು ಹರಿದಾಸಸಾಹಿತ್ಯದ ಮೊದಲಿಗರೆನ್ನುವುದು ತಪ್ಪಾದೀತು. ಅವರು ಕನ್ನಡದಲ್ಲಿ ದೇವರನಾಮಗಳನ್ನು ರಚಿಸಿದರೆಂದು ಯಾವ ಪ್ರತೀತಿಯೂ ಇಲ್ಲ; ಅವರದೆನ್ನುವ ದೇವರನಾಮಗಳು ಯಾವುವೂ ಉಪಲಬ್ಧವಿಲ್ಲ.

ದಾಸಕೂಟದ ಮೇಲೆ ಅವರ ತಾತ್ವಿಕ ನಿಲುವಿನ ಪ್ರಭಾವವಿದ್ದಿತೆನ್ನುವುದೇನೋ ನಿರ್ವಿವಾದ. ದೇವರು ಈಶ, ಮನುಷ್ಯ ದಾಸ; ಜಗತ್ತು ದಿಟ, ಸಂಸಾರ ಬರಿಯ ಭ್ರಮೆಯಲ್ಲ; ಜೀವರಲ್ಲಿ ಭೇದವಿದೆ, ತಾರತಮ್ಯವಿದೆ; ನೈಜವಾದ ಸುಖಾನುಭವವೇ ಮುಕ್ತಿ ; ಮುಕ್ತಿಗೆ ಭಕ್ತಿಯೇ ಸಾಧನ. ಈ ಮಾಧ್ವಪ್ರಮೇಯಗಳನ್ನೆಲ್ಲ ದಾಸಸಾಹಿತ್ಯ ಒಪ್ಪಿಕೊಂಡು ವಿವರಿಸಿತು, ವಿಸ್ತರಿಸಿತು, ನಿತ್ಯಜೀವನಕ್ಕೆ ಅನ್ವಯಿಸಿತು. ಆಚಾರ್ಯರ ನಿಲುವಿಗೂ ಭಾಗವಂತಪಂಥವೇ ಹಿನ್ನೆಲೆ. ಹರಿದಾಸ ಸಾಹಿತ್ಯಕ್ಕೂ ಅದೇ ಹಿನ್ನೆಲೆ. ಅದ್ವೈತಾವಲಂಬಿಗಳಾದವರಲ್ಲಿ ಕೂಡ ಭಾಗವತ ಪಂಥದವರಿದ್ದರು. ಬೇಲೂರು ಕೇಶವದಾಸರು ಅಚಲಾನಂದದಾಸರೆನ್ನುವ ಸ್ಮಾರ್ತಭಾಗವತ ಹರಿದಾಸರನ್ನು ಉಲ್ಲೇಖಿಸಿದ್ದಾರೆ. ಅವರ ಎಣಿಕೆಯ ಪ್ರಕಾರ ಇವರು ಒಂಭತ್ತನೆಯ ಶತಮಾನದವರು. ಈ ವಿಚಾರವಾಗಿ ಭಿನ್ನಾಭಿಪ್ರಾಯಗಳಿವೆ, ನಿಜ. ಆದರೆ ಭಾಗವತ ಮನೋಧರ್ಮದಿಂದಲೇ ಹರಿದಾಸಪಂಥ ಹುಟ್ಟಿಕೊಂಡಿತೆನ್ನುವುದಂತೂ ದಿಟ. ಮಾಧ್ವ ವೇದಾಂತದ ಮುಖ್ಯಪ್ರಮೇಯಗಳು ಈ ಮನೋಧರ್ಮಕ್ಕೆ ಅನುವಾಗಿ, ಪೂರಕವಾಗಿ, ಪೋಷಕವಾಗಿ ಇದ್ದುದರಿಂದ ಅವನ್ನು ಒಳಗೊಳ್ಳಲಾಯಿತು.

ಹರಿದಾಸಪಂಥದವರಲ್ಲಿ ಬರುಬರುತ್ತ ಆಗಾಗ, ಅಲ್ಲಲ್ಲಿ ಮಾಧ್ವಮತದ ದೀಕ್ಷೆ ಪ್ರಬಲವಾಗಿ ಕಾಣುವುದುಂಟು: ಬಹುಮಟ್ಟಿಗೆ ಈಚಿನ ಹರಿದಾಸರು ಮಾಧ್ವ ಸಂಪ್ರದಾಯಕ್ಕೆ ಸೇರಿದವರೇ. ಒಮ್ಮೊಮ್ಮೆ ಸಂಪ್ರದಾಯದ ವಿಶ್ವಾಸ ಮೇಲೆ ಕಾಣಬರುವುದೂ ಇದೆ; ಪುರಂದರದಾಸರ ಪದಗಳಲ್ಲಿಯೇ ಈ ಅಭಿಮಾನವನ್ನು ಕಾಣಬಹುದು. ಇಂಥ ನಿಷ್ಠೆ, ಅಭಿಮಾನ ಪ್ರಾಸಂಗಿಕ ವೆನ್ನುವುದನ್ನು ಮರೆಯಬಾರದು. ಹರಿದಾಸಸಾಹಿತ್ಯದ ನಿಲುವು ವ್ಯಾಪಕವಾದುದು. ಸಾರ್ವಜನೀನ ವಾದುದು. ಸರ್ವಸಮ್ಮತವಾದುದು. ಅದನ್ನು ಮಾಧ್ವಮತದಲ್ಲಿ ಮಾತ್ರ ಸಂಕೋಚ ಮಾಡಿಬಿಟ್ಟರೆ ತಪ್ಪಾದೀತು. ಹರಿದಾಸರ ದೃಷ್ಟಿಯು ಮತಗಳನ್ನು ಮೀರಿ ನಿಲ್ಲುವಂಥದು, ಎಲ್ಲ ಮತಗಳಿಗೆ ಸರಿದೋರುವಂಥದು. ಮಾನವೀಯತೆಯನ್ನು ಹಿಡಿಯುವಂಥದು.

ಮೇಲೆ ಈಗಾಗಲೆ ಹೇಳಿದಂತೆ ಕನ್ನಡನಾಡಿನಲ್ಲಿ ಹರಿದಾಸಪಂಥ ಮೈದಳೆಯುವ ಕಾಲಕ್ಕೆ ದಕ್ಷಿಣದೇಶದಲ್ಲಿ ಭಕ್ತಿಮಾರ್ಗವನ್ನು ಆಳ್ವಾರರೂ, ನಾಯನ್ಮಾರರೂ, ವಿಶಿಷ್ಟಾದ್ವೈತಮತದ ಆಚಾರ್ಯತ್ರಯರೂ, ಬಸವಾದಿಶರಣರೂ ಜನರಿಗೆ ಬೋಧಿಸಿದ್ದರು. ಭಕ್ತಿಯು ಸರಳವಾದ ಮಾರ್ಗ, ಸುಲಭವಾದ ಉಪಾಯ ಎನ್ನುವುದು ಜನರಿಗೆ ಸ್ಪಷ್ಟವಾಗಿದ್ದಿತು. ಮಹಾರಾಷ್ಟ್ರದಲ್ಲಿ ಮಹಾನುಭಾವ ಪಂಥವು ಆಗಲೇ ಪ್ರಬಲವಾಗಿದ್ದಿತು. ಪಂಢರಪುರದ ಪ್ರದೇಶದಲ್ಲಿ ವಿಠ್ಠಲಭಕ್ತಿ ಬೇರುಬಿಟ್ಟಿದ್ದಿತು; ಪಂಢರಪುರದ ಪಾಂಡುರಂಗ ವಿಠ್ಠಲನಿಗೂ ಹರಿದಾಸರಿಗೂ ತೀರದ ನೆಂಟು ಮೊದಲಿನಿಂದಲೂ ಬಂದಿದೆ.

ಈ ಎಲ್ಲ ಪ್ರಭಾವವೂ ಕನ್ನಡನಾಡಿಗೆ ಹರಿದುಬಂದುದು ಆಶ್ಚರ್ಯವೇನಲ್ಲ. ಹರಿಕೀರ್ತನಕ್ಕೆ ಸಂಸ್ಕೃತವನ್ನು ಬಿಟ್ಟು ಮರಾಠಿಯನ್ನೂ, ತಮಿಳನ್ನೂ ಬಳಸಿಕೊಂಡ ಆದರ್ಶವೂ ಇದರೊಂದಿಗೆ ಬಂದಿತು. ಹರಿದಾಸರು ಭಕ್ತಿಮಾರ್ಗದ ಉಪಾಸನೆಯನ್ನೂ ಪ್ರಚಾರನ್ನೂ ಕೈಗೊಂಡು ಕನ್ನಡದಲ್ಲಿ ಭಕ್ತಿಪ್ರಧಾನವಾದ ಸಾಹಿತ್ಯವನ್ನು ಸೃಷ್ಟಿಮಾಡಲುಪಕ್ರಮಿಸಿದುದು ಆಕಸ್ಮಿಕವೇನಲ್ಲ. ಮಾಧ್ವವೇದಾಂತದ ಅಧ್ವರ್ಯುಗಳೆನಿಸಿದ್ದ ಪ್ರಾಚೀನ ಆಚಾರ್ಯರು ಇವರಿಗೆ ಈ ಕೆಲಸದಲ್ಲಿ ನೆರವಾದುದೂ ಮಾರ್ಗದರ್ಶನ ಮಾಡಿದುದೂ ಅನಿರೀಕ್ಷಿತವೆನ್ನಬಹುದು. ಶಾಸ್ತ್ರಮರ್ಯಾದೆಯನ್ನು ಎತ್ತಿ ಹಿಡಿಯುವ ಮಠಾಧಿಪತಿಗಳೇ ಹರಿದಾಸರಂತೆ ವ್ಯವಹರಿಸಿದುದು ಕೆಲವರಿಗೆ ಸೋಜಿಗವೆನಿಸೀತು. ಆದರೆ ಕನ್ನಡ ನಾಡಿನ ಪುಣ್ಯದಿಂದ ಇದು ನಡೆಯಿತು.

ಹರಿದಾಸಪೀಳಿಗೆಯಲ್ಲಿ ಮೊದಲನೆಯ ಮೂರು ಮಂದಿಯೂ ಮಠಾಧಿಪತಿಗಳಾಗಿದ್ದ ಯತಿಗಳೇ; ಶಾಸ್ತ್ರ ವೈದುಷ್ಯದಲ್ಲಿ ಅಸಮರಾಗಿದ್ದು ಸಂಸ್ಕೃತ ಗ್ರಂಥಗಳನ್ನು ರಚಿಸಿದ್ದವರೇ. ಅಂಥವರು ಕನ್ನಡದಲ್ಲಿ ಹಾಡುವ ಪದ್ಧತಿಯನ್ನು ಕೈಹಿಡಿದು ನಡೆಸಿದರು. ಮೊದಲನೆಯವರು ಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯರಾಗಿದ್ದ ನರಹರಿ ತೀರ್ಥರು. ಇವರು ಈಗಿನ ತೆಲುಗುದೇಶದ ಗಂಜಾಂ ಪ್ರಾಂತದಲ್ಲಿರುವ ಶ್ರೀಕಾಕುಳಮ್ಮಿನವರು; ದೊಡ್ಡ ವಿದ್ವಾಂಸರು. ಮಧ್ವಾಚಾರ್ಯರ ಪ್ರಭಾವಕ್ಕೆ ಒಳಗಾಗಿ ಅವರ ಶಿಷ್ಯರಾಗಿ ಸಂನ್ಯಾಸಿಗಳಾದನಂತರವೂ ಕಳಿಂಗದೇಶದ ಆಡಳಿತವನ್ನು ೧೨೬೪ ರಿಂದ ೧೨೯೩ರವರೆಗೆ ನಡೆಸಿದರು, ಆಚಾರ್ಯರ ಪರಂಪರೆಯಲ್ಲಿ ಜಗದ್ಗುರು ಪೀಠವನ್ನೇರಿ ೧೩೩೩ರಲ್ಲಿ ತೀರಿಕೊಂಡರು. ಇವರ ಬೃಂದಾವನ ಹಂಪಿಯ ಚಕ್ರತೀರ್ಥದಲ್ಲಿದೆ. ಆ ಕಾಲಕ್ಕೆ ವೇದಾಂತಶಾಸ್ತ್ರದಲ್ಲಿ ಇಷ್ಟು ಪ್ರಸಿದ್ಧರಾದವರು ಬೇರೊಬ್ಬರಿರಲಿಲ್ಲ. ಇಂಥವರು ಕನ್ನಡವಲ್ಲಿ ದೇವರ ನಾಮಗಳನ್ನು ಮಾಡಿದರೆಂದರೆ ಆಶ್ಚರ್ಯವಲ್ಲವೇ? ಎಷ್ಟು ಕೃತಿಗಳನ್ನು ಮಾಡಿದ್ದರೋ ತಿಳಿದುಬಂದಿಲ್ಲ; ಒಂದೆರಡಂತೂ ಉಳಿದುಬಂದಿವೆ. 'ಎಂತುಮರುಳಾದೆ' ಎನ್ನುವ ಆನಂದಭೈರವಿರಾಗದ್ದೊಂದು. 'ಹರಿಯೆ ಇದು ಸರಿಯೆ?' ಎಂದು ಮೊದಲಾಗುವ ಶ್ರೀರಾಗದ್ದಿನ್ನೊಂದು. ಇವೆರಡೂ ಅವರವು. 'ನರಹರಿ' ಎನ್ನುವುದು ಅವರ ಅಂಕಿತ.

ನರಹರಿತೀರ್ಥರಿಂದ ಕನ್ನಡದಲ್ಲಿ ಹರಿದಾಸ ಸಾಹಿತ್ಯ ಆರಂಭವಾಯಿತೆನ್ನಬಹುದಾದರೂ ಅವರು ದಾಸಕೂಟವನ್ನು ವ್ಯವಸ್ಥೆ ಮಾಡಿ ಪಂಥಪ್ರವರ್ತಕರಾದರೆನ್ನುವುದು ಸಂದಿಗ್ಧ.

ಶ್ರೀಪಾದರಾಜರು ೧೪೫೦ರ ಸುಮಾರಿಗಿದ್ದವರು. ನರಹರಿತೀರ್ಥರ ಪರಂಪರೆಯಲ್ಲಿಯೇ

ಬಂದ ಸಂನ್ಯಾಸಿಗಳು. ಮಠಾಧಿಪತಿಗಳು. ಚನ್ನಪಟ್ಟಣ ತಾಲ್ಲೂಕಿನ ಅಬ್ಬೂರು ಬಳಿ ಹಳ್ಳಿಯವರೆಂದೂ, ತಮಿಳುನಾಡಿನ ಶ್ರೀರಂಗವದವರೆಂದೂ ಬೇರೆ ಬೇರೆ ಪ್ರತೀತಿಗಳಿವೆ. ಸ್ವರ್ಣವರ್ಣ ತೀರ್ಥರೆನ್ನುವರು ಇವರ ದೀಕ್ಷಾಗುರುಗಳು. ವಿಬುಧೇಂದ್ರ ತೀರ್ಥರೆನ್ನುವವರು ವಿದ್ಯಾಗುರುಗಳು. ಇವರ ಆಶ್ರಮನಾಮ ಲಕ್ಷ್ಮೀನಾರಾಯಣ ಮುನಿಗಳೆಂದು. ಶ್ರೀಪಾದರಿಗೆಲ್ಲ ರಾಜರಂತೆ ತೇಜಸ್ಸಿನಲ್ಲಿಯೂ ಪಾಂಡಿತ್ಯದಲ್ಲಿಯೂ ತಪಸ್ಸಿನಲ್ಲಿಯೂ ಕಂಗೊಳಿಸುತ್ತಿದ್ದುದರಿಂದ ಇವರನ್ನು ಆ ಕಾಲದಲ್ಲಿದ್ದ ಉತ್ತರಾದಿಮಠದ ರಘುನಾಥತೀರ್ಥರು 'ಶ್ರೀಪಾದರಾಜ'ರೆಂದು ಕರೆದರಂತೆ; ಆ ಹೆಸರೇ ಉಳಿಯಿತು.

ಇವರು ದೇಶವನ್ನೆಲ್ಲ ಸಂಚರಿಸಿ ಪೆನುಗೊಂಡೆಯ ಸಾಳುವ ನರಸಿಂಹರಾಜನಿಗೆ ಗುರುಗಳಾಗಿ, ಕೋಲಾರಜಿಲ್ಲೆಯ ಮುಳುಬಾಗಿಲಲ್ಲಿ ತಮ್ಮ ಮಠವನ್ನು ಕಟ್ಟಿಕೊಂಡರು; ಅಲ್ಲಿಯೇ ನರಸಿಂಹತೀರ್ಥವೆಂಬ ಕೊಳದ ದಡದಮೇಲೆ ಅವರ ವೃಂದಾವನವಿದೆ. ಈಗಲೂ ಅವರ ಮಠದ ಪರಂಪರೆ ನಡೆದು ಬಂದಿದೆ. 'ನ್ಯಾಯಸುಧಾ' ಗ್ರಂಥಕ್ಕೆ ಅರ್ಥಸಂಗ್ರಹರೂಪವಾಗಿ ಅವರು 'ವಾಗ್ವಜ್ರ'ವೆಂಬ ಮಹಾಗ್ರಂಥವನ್ನು ಸಂಸ್ಕೃತದಲ್ಲಿ ಬರೆದಿದ್ದಾರೆ. ದ್ವೈತವೇದಾಂತ ವಾಙ್ಮಯದಲ್ಲಿ ಇದೊಂದು ಮೈಲಿಗಲ್ಲು. ಹೀಗೆ ವಿದ್ವತ್ಪ್ರಪಂಚದಲ್ಲಿ ಸನ್ಮಾನ್ಯರೂ, ರಾಜಪೂಜಿತರೂ, ತಪಸ್ವಿಗಳೂ ಆಗಿದ್ದ ಶ್ರೀಪಾದರಾಜರು ತಿಳಿಗನ್ನಡದಲ್ಲಿಯೂ ದೇವರನಾಮಗಳನ್ನು ರಚಿಸಿದ್ದಾರೆ. ಅವರ ಕನ್ನಡ ಕೃತಿಗಳಲ್ಲಿ 'ಭ್ರಮರಗೀತ', 'ವೇಣುಗೀತ', 'ಗೋಪಿಗೀತಗಳು'ಗಳು ಪ್ರಸಿದ್ಧವಾಗಿವೆ. ಭಾಗವತದ ಸಪ್ತಮಸ್ಕಂಧದಲ್ಲಿ ಬರುವ ನೃಸಿಂಹಸ್ತವವೆಂಬ ೫೬ ಶ್ಲೋಕಗಳನ್ನು ಸೊಗಸಾದ ಶೈಲಿಯಲ್ಲಿ 'ಲಕ್ಷ್ಮೀನೃಸಿಂಹಪ್ರಾದುರ್ಭಾವದಂಡಕ' ವೆಂದು ಕನ್ನಡಿಸಿದ್ದಾರೆ. ಅಚ್ಚುಕಟ್ಟಾದ, ರಸವತ್ತಾದ ಸ್ವತಂತ್ರ ಕಾವ್ಯದಂತಿದೆ ಇದು. ಅವರ ಐವತ್ತು ದೇವರ ನಾಮಗಳು ಸುಬೋಧ ರಾಮರಾಯರ 'ಹರಿದಾಸ ಕೀರ್ತನ ತರಂಗಿಣಿ'ಯಲ್ಲಿ ಅಚ್ಚಾಗಿವೆ.

ಶ್ರೀಪಾದರಾಜರ ಕೃತಿಗಳಲ್ಲಿ 'ರಂಗವಿಠಲ' ಎನ್ನುವ ಅಂಕಿತ ಕಾಣಸಿಗುತ್ತದೆ; ತಾವು ಶ್ರೀರಂಗದಿಂದ ಬಂದವರೆಂದು ಇದರ ಹಿನ್ನೆಲೆಯೋ ಏನೋ. ಇವರ ಕೃತಿಗಳಲ್ಲಿ ಪದ, ಉಗಾಭೋಗ, ಸೂಳಾದಿ, ವೃತ್ತನಾಮ, ಗೀತೆ, ದಂಡಕ ಈ ಪ್ರಕಾರಗಳಿವೆ. ರಗಳೆಯಂತೆ ಎಂಟು-ಹತ್ತು ನುಡಿಗಳಿದ್ದು ಒಂದೊಂದು ನುಡಿಯೂ ಒಂದೊಂದು ತಾಳದಲ್ಲಿದ್ದು, ಕೊನೆಗೆ 'ಜೊತೆ'ಯೊಂದು ಇರುವುದು ಇವರ ಸುಳಾದಿಗಳಲ್ಲಿ ಕಾಣಬಹುದು. ಪದಕ್ಕೆ ಪಲ್ಲವಿ, ಒಮ್ಮೊಮ್ಮೆ ಅನುಪಲ್ಲವಿ, ಐದಾರು ನುಡಿ (ಚರಣ)ಗಳು ಇರುತ್ತವೆ; ಕಡೆಯ ನುಡಿಯಲ್ಲಿ ಮಾತ್ರ ಅಂಕಿತವಿರುತ್ತದೆ, ಸುಳಾದಿಯ ಒಂದೊಂದು ನುಡಿಯ ಕಡೆಯಲ್ಲೂ ಅಂಕಿತ ಕಾಣಬರುತ್ತದೆ. ಐದಾರು ಸಾಲುಗಳಲ್ಲಿ ಸರಳವಾದ ಕಾವ್ಯಪದ್ಧತಿಯಿಂದ ಒಂದೇ ಭಾವವನ್ನು ನೇರವಾಗಿ ನಿರೂಪಿಸುವ ಉಗಾಭೋಗಗಳೂ ಮನೋಹರವಾಗಿವೆ. ವೃತ್ತನಾಮ ಅಥವಾ ವೃತ್ತಪ್ರಬಂಧದಲ್ಲಿ ಒಂದು ಪಲ್ಲವಿ, ನಂತರ ವೃತ್ತ (ಶ್ಲೋಕ), ಅನಂತರ ನುಡಿ ಹೀಗೆ ವ್ಯವಸ್ಥೆಯಿರುತ್ತದೆ.

ಈ ಪ್ರಕಾರಗಳನ್ನು ಶ್ರೀಪಾದರಾಜರೇ ಪ್ರವರ್ತನೆ ಮಾಡಿದರೆಂದು ಪ್ರತೀತಿಯಿದೆ. ಸೂಳಾದಿ, ವೃತ್ತನಾಮಗಳಂತೂ ನಿರ್ವಿವಾದವಾಗಿ ಅವರು ಮೊಟ್ಟಮೊದಲಿಗೆ ತೋರಿಸಿಕೊಟ್ಟ ಗೇಯಕಾವ್ಯ

ಪ್ರಕಾರಗಳೇ. ಪದ ಮತ್ತು ಉಗಾಭೋಗಗಳು ಹಿಂದಿನಿಂದ ಬಂದ ಪ್ರಕಾರಗಳಿರಬಹುದು; ಅವನ್ನು ಪ್ರಚಾರಕ್ಕೆ ತಂದವರೇನೋ ಶ್ರೀಪಾದರಾಜರು. ಶಾಸ್ತ್ರೀಯ ಸಂಗೀತವನ್ನು ಹರಿದಾಸ ಸಾಹಿತ್ಯಕ್ಕೆ ಅಳವಡಿಸಿದವರು ಅವರೇ. ಅವರ ರಚನೆಗಳಿಂದ ಅವರಿಗಿದ್ದ ಅಗಾಧವಾದ ಸಂಗೀತಜ್ಞಾನ ಸ್ಪಷ್ಟವಾಗುತ್ತದೆ. ತಮ್ಮ ಕೃತಿಗಳನ್ನು ಪೂಜಾಕಾಲದಲ್ಲಿ ಹಾಡಿ, ಹರಿದಾಸರಿಂದ ಹಾಡಿಸಿ ಕೀರ್ತನಪದ್ಧತಿಯನ್ನು ಬೆಳೆಸಿದರು. ಈ ಕೆಲಸಕ್ಕೆಂದು ಮಠದಲ್ಲಿ ಹಲವಾರು ಹರಿದಾಸರಿಗೆ ಆಶ್ರಯಕೊಟ್ಟರು. ಈ ಎಲ್ಲ ಕಾರಣಗಳಿಂದ ಶ್ರೀಪಾದರಾಜರನ್ನು ಹರಿದಾಸಪಂಥದ ಪ್ರವರ್ತಕರೆಂದೂ ಹರಿದಾಸ ಸಾಹಿತ್ಯದ ಆದ್ಯರೆಂದೂ ವ್ಯವಹರಿಸುವುದು ಸರಿಯೇ.

ಇವರ ಮಾರ್ಗದರ್ಶನದಲ್ಲಿಯೇ ಅಡಿಯಿಟ್ಟು. ಇವರ ಗೇಯ-ರಚನಾ ಪ್ರಕಾರಗಳಲ್ಲಿಯೇ ತಾವೂ ಕೃತಿಗಳನ್ನು ರಚಿಸಿ, ಪದ್ಧತಿಯನ್ನು ಬಲಗೊಳಿಸಿ ಪಂಥವನ್ನು ಬೆಳೆಸಿದ ಇನ್ನೊಬ್ಬ ಮಠಾಧೀಶರು ವ್ಯಾಸತೀರ್ಥರು. ಇವರನ್ನು ವ್ಯಾಸರಾಯರೆಂದು ಕರೆಯುವ ವಾಡಿಕೆಯಿದೆ. ಇವರು ಶ್ರೀ ಪಾದರಾಜನ ಶಿಷ್ಯರೇ. ಚನ್ನಪಟ್ಟಣದ ಹತ್ತಿರ ಇರುವ ಬನ್ನೂರು ಇವರೂರು. ಇವರಿಗೆ ಆಶ್ರಮವಾದಾಗ ಏಳೇ ವರ್ಷಗಳು. ಅಬ್ಬೂರು ಬ್ರಹ್ಮಣ್ಯತೀರ್ಥರು ಇವರ ದೀಕ್ಷಾಗುರುಗಳು. ಮುಂದೆ ಶ್ರೀಪಾದರಾಜರಲ್ಲಿ ಶಾಸ್ತ್ರಾಧ್ಯಯನವನ್ನು ಮುಂದುರಿಸಿ ಪಂಡಿತೋತ್ತಮರಾದರು. ವಿಜಯನಗರದ ರಾಜಮನೆತನಕ್ಕೂ ಶ್ರೀಪಾದರಾಜರಿಗೂ ಇದ್ದ ಸಂಬಂಧ ವ್ಯಾಸರಾಜರ ಕಾಲದಲ್ಲಿ ಹೆಚ್ಚಿತು. ವಿಜಯನಗರದ ಅರಸರಲ್ಲಿ ಅಗ್ರಗಣ್ಯನಾದ ಕೃಷ್ಣದೇವರಾಯ ಮಹಾರಾಯನಿಗೆ ಇವರು ಗುರುಗಳು. ಮಾರ್ಗದರ್ಶಿಗಳು. ೧೫೨೬ರಲ್ಲಿ ಅವನಿಗೆ 'ಕುಹೂಯೋಗ' ಒದಗಿದಾಗ ಇವರೇ ಸಿಂಹಾಸನವನ್ನೇರಿ ಅವನ ಆತಂಕವನ್ನು ಪರಿಹರಿಸಿದರೆಂದು ಪ್ರತೀತಿಯಿದೆ. ಚಂದ್ರಗಿರಿಯ ರಾಜನ ಅಪೇಕ್ಷೆಯಂತೆ ಇವರು ತಿರುಪತಿಯ ವೆಂಕಟೇಶ್ವರನ ಗುಡಿಯಲ್ಲಿ ಹನ್ನೆರಡುವರ್ಷಗಳ ಕಾಲ ಅರ್ಚನೆ ನಡೆಸಿದರಂತೆ. ವ್ಯಾಸತೀರ್ಥರ ಕಾಲ ೧೪೪೭ ರಿಂದ ೧೫೩೯ರವರೆಗೆಂದು ತಿಳಿದುಬಂದಿದೆ. ತೊಂಬತ್ತೆರಡು ವರ್ಷಗಳ ತುಂಬು ಜೀವನವನ್ನು ನಡೆಸಿ ಆನೆಗೊಂದಿಯ ತುಂಗಭದ್ರೆಯ ನಡುಗೆಡ್ಡೆಯಲ್ಲಿ ತೀರಿಕೊಂಡರು.

ಇವರು ಸಂಸ್ಕೃತದಲ್ಲಿ ಉದ್ದಾಮಪಂಡಿತರು. ಶಾಸ್ತ್ರಭಾಗದಲ್ಲಿ ಆದಿಶೇಷನೇ. ಇವರ 'ತರ್ಕತಾಂಡವ', 'ನ್ಯಾಯಾಮೃತ' ಮತ್ತು 'ತಾತ್ಪರ್ಯಚಂದ್ರಿಕಾ' ಎನ್ನುವ ಮೂರು ಮಹಾಗ್ರಂಥಗಳನ್ನು 'ವ್ಯಾಸತ್ರಯ' ಎಂದೇ ವ್ಯವಹರಿಸುತ್ತಾರೆ. ಇಷ್ಟು ಪ್ರೌಢವಿದ್ವಾಂಸರೂ, ರಾಜಗುರುಗಳೂ, ಮಠಾಧಿಪತಿಗಳೂ, ಉಜ್ವಲವ್ಯಕ್ತಿತ್ವವುಳ್ಳವರೂ ಆದ ವ್ಯಾಸತೀರ್ಥರು ಇಡೀ ದೇಶದಲ್ಲಿ ಆ ಕಾಲಕ್ಕೆ ಸುಪ್ರಸಿದ್ಧರಾಗಿದ್ದುದು ಆಶ್ಚರ್ಯವೇನಲ್ಲ. ಆದರೆ ಅವರು ತಮ್ಮ ವಿದ್ಯಾಗುರುಗಳಾದ ಶ್ರೀ ಪಾದರಾಜರು ಕೈಗೊಂಡ ಹರಿದಾಸ್ಯಪದ್ಧತಿಯನ್ನು ತಾವೂ ಮುಂದುವರೆಸಿದುದು ಹೆಚ್ಚು. ವಾದ, ವಾಕ್ಯಾರ್ಥ, ಸಿದ್ಧಾಂತವಿನಿಶ್ಚಯ, ಸಂಚಾರ, ಶಾಸ್ತ್ರರಚನೆ, ರಾಜ್ಯಭಾರ ಎಲ್ಲವನ್ನೂ ಮಾಡುತ್ತ ದಾಸಕೂಟವನ್ನೂ ಬೆಳೆಸಿದರೆನ್ನುವುದು ಸ್ವಾರಸ್ಯವಾದ ವಿವರ. ಶ್ರೀಪಾದರಾಜರಂತೆ ಇವರೂ ವ್ಯಾಸಕೂಟ, ದಾಸಕೂಟಗಳೆರಡಕ್ಕೂ ಸಂರಕ್ಷಕರಾಗಿದ್ದರು. ಇವರ ಶಿಷ್ಯ ಮಂಡಲಿಯಲ್ಲಿ ಪುರಂದರದಾಸರು, ಕನಕದಾಸರು, ವೈಕುಂಠದಾಸರು, ಸೋದೆಮಠದ ವಾದಿರಾಜತೀರ್ಥರು,

ವಿಜಯೀಂದ್ರ ತೀರ್ಥರು ಮೊದಲಾದವರಿದ್ದರೆಂದಮೇಲೆ ವ್ಯಾಸತೀರ್ಥರ ಹಿರಿಮೆಯನ್ನು ಕುರಿತು ಇನ್ನೇನು ಹೇಳಬೇಕು?

ಪಂಡಿತರಿಗೆ ಹರಿದಾಸರ ಮೇಲೆ ಆಗ್ರಹವಿದ್ದಾಗ ಹರಿದಾಸರ ಪಕ್ಷವನ್ನು ಹಿಡಿದು ಅವರನ್ನು ಪ್ರೋತ್ಸಾಹಿಸಿದ ಕೀರ್ತಿ ವ್ಯಾಸತೀರ್ಥರಿಗೆ ಸಲ್ಲುತ್ತದೆ. ಅವರ ನೆರವಿಲ್ಲದಿದ್ದರೆ ಪುರಂದರದಾಸರೂ ಕನಕದಾಸರೂ ಉಳಿಯುತ್ತಿದ್ದರೊ ಇಲ್ಲವೋ! ಅವರ ಬಗ್ಗೆ ವಿರೋಧ ಅಷ್ಟು ಪ್ರಬಲವಾಗಿದ್ದಿತು ಆಗ. ವ್ಯಾಸತೀರ್ಥರು ತಮ್ಮ ಸನ್ನಿಧಿಯಲ್ಲಿಯೇ ದಾಸಕೂಟವನ್ನು ಬೆಳೆಸಿದರು; ತಾವೇ ಅದರಲ್ಲಿ ಪಾಲುಗೊಂಡರು. ಶ್ರೀಪಾದರಾಜರು ಮೊದಲು ಮಾಡಿದ ಹರಿದಾಸ ವಾಙ್ಮಯ ಪ್ರಕಾರಗಳಲ್ಲಿ ತಾವೂ ಸಾವಿರಾರು ಸುಂದರವಾದ, ಪ್ರಗಲ್ಭವಾದ, ರಸಭರಿತವಾದ, ಮನೋಜ್ಞವಾದ ಕೃತಿಗಳನ್ನು ಕನ್ನಡದಲ್ಲಿಯೇ ರಚಿಸಿದರು. ಇವರ ಹಲವಾರು ಸುಳಾದಿಗಳೂ, ಪದಗಳೂ, ವೃತ್ತನಾಮಗಳೂ ಉಗಾಭೋಗಗಳೂ ಉಳಿದು ಬಂದಿವೆ; ಇವುಗಳಲ್ಲಿ 'ಸಿರಿಕೃಷ್ಣ' ಎನ್ನುವ ಅಂಕಿತ ಕಾಣಬರುತ್ತದೆ. ಉಪಲಬ್ಧವಾದ ಪದಗಳ ಸಂಗ್ರಹ 'ಹರಿದಾಸ ಕೀರ್ತನತರಂಗಿಣಿ'ಯಲ್ಲಿ ಪ್ರಕಟವಾಗಿದೆ.

ಗಹನವಾದ ತತ್ತ್ವಗಳನ್ನೂ ಜಟಿಲವಾದ ಶಾಸ್ತ್ರ ಪ್ರಮೇಯಗಳನ್ನೂ ಸರಳವಾಗಿ ತಿಳಿಗನ್ನಡದಲ್ಲಿ ಹೇಳುವ ಜಾಣತನ ವ್ಯಾಸತೀರ್ಥರ ಕೃತಿಗಳಲ್ಲಿ ಎದ್ದು ಕಾಣುತ್ತದೆ. ಇದಕ್ಕಾಗಿಯೇ ಈ ಕೆಲಸವನ್ನು ಕೈಗೊಂಡರೆನ್ನಬಹುದು. ಭಗವದ್ಗೀತೆಯನ್ನು ಹೆಂಗಸರು ಮಕ್ಕಳು ತಿಳಿಯದವರು ಓದಿ ತಿಳಿದುಕೊಳ್ಳಲೆಂದು ವೃತ್ತನಾಮಪದ್ಧತಿಯಲ್ಲಿ ಬರೆದಿಟ್ಟಿದ್ದಾರೆ. ಕನ್ನಡವು ತತ್ತ್ವ ನಿರೂಪಣೆಗೆ ಹೇಗೆ ಒಗ್ಗುವುದೆಂಬುದು ಇಲ್ಲಿ ಸ್ಪಷ್ಟವಾಗಿದೆ.

೩

ದಾಸಕೂಟವನ್ನು ಎತ್ತಿ ಹಿಡಿದ. ಕಟ್ಟಿ ನಿಲ್ಲಿಸಿದ ವ್ಯಾಸತೀರ್ಥರ ಶಿಷ್ಯರಲ್ಲಿ ಪ್ರಮುಖರಾದವರು, ಅವರ ಅಂತರಂಗವರ್ಗಕ್ಕೆ ಸೇರಿದವರು ಪುರಂದರದಾಸರು.

ತಮ್ಮ ಕೃತಿರಚನೆಗಳಿಂದಲೂ ವ್ಯಕ್ತಿತ್ವದ ಸ್ವಾರಸ್ಯದಿಂದಲೂ ಹರಿದಾಸ ಪ್ರಪಂಚದಲ್ಲಿ ಮಾತ್ರವಲ್ಲ, ಇಡೀ ಕನ್ನಡ ವಾಙ್ಮಯದಲ್ಲಿ ವಿಶಿಷ್ಟವಾದ ಸ್ಥಾನವೊಂದನ್ನು ಗಳಿಸಿಕೊಂಡಿದ್ದಾರೆ ಅವರು. ದಕ್ಷಿಣಾದಿ ಸಂಗೀತವು ಪರಿಪಕ್ವದೆಶೆಯನ್ನು ಮುಟ್ಟಲು ಕಾರಣರಾದರೆಂದು ಅವರನ್ನು 'ಕರ್ನಾಟಕ ಸಂಗೀತ ಪಿತಾಮಹ'ರೆಂದು ಪರಿಗಣಿಸುವ ವಾಡಿಕೆಯಿದೆ. ಅವರು ರಚಿಸಿದ ತಾಳಾಲಂಕಾರಗಳು, ಗೀತಗಳು ಸಂಗೀತಾಭ್ಯಾಸಿಗಳಿಗೆಲ್ಲ ಆರಂಭಪಾಠಗಳೇ ಆಗಿವೆ. ಅವರು ಕನ್ನಡ ಸಾಹಿತ್ಯಕ್ಕೂ ದಕ್ಷಿಣಾದಿ ಸಂಗೀತಕ್ಕೂ ಒದಗಿಸಿದ ನೆರವಿನ ವಿಚಾರವಾಗಿ ಹಲವಾರು ವಿದ್ವಾಂಸರು ಪ್ರಬಂಧಗಳನ್ನು ಸಿದ್ಧಪಡಿಸಿದ್ದಾರೆ.

ಅವರ ಕಾಲ ೧೪೮೪ ರಿಂದ ೧೫೬೪ರವರೆಗೆಂದು ತಿಳಿದುಬರುತ್ತದೆ. ಪುಣೆಯ ಬಳಿ ಪುರಂದರಗಡದಲ್ಲಿ ಹುಟ್ಟಿ ಶ್ರೀಮಂತರಾಗಿದ್ದುಕೊಂಡು ಸಂಸಾರ ನಡೆಸುತ್ತಿದ್ದ ಅವರಿಗೆ ವಿರಕ್ತಿ ಬಂದು ಎಲ್ಲವನ್ನು ದಾನಮಾಡಿ ಹೆಂಡತಿ ಮಕ್ಕಳೊಂದಿಗೆ ಹಂಪಿಗೆ ಬಂದು ಅಲ್ಲಿದ್ದ ವ್ಯಾಸತೀರ್ಥರ ಬಳಿ ನಿಂತರು. ಅವರಿಂದ ಹರಿದಾಸದೀಕ್ಷೆಯನ್ನು ಪಡೆದು ಅವರಿರುವವರೆಗೂ ಅವರ ಬಳಿಯೇ ಇದ್ದುಕೊಂಡು, ಅನಂತರ ದೇಶದಲ್ಲೆಲ್ಲ ಸಂಚರಿಸಿ ಮತ್ತೆ ಹಂಪಿಗೆ ಬಂದು ಅಲ್ಲಿ ಕಾಲವಾದರು.

(ಅವರ ಸಮಕಾಲೀನರಲ್ಲಿ ಕನಕದಾಸರು, ವೈಕುಂಠದಾಸರು, ಗದುಗಿನ ನಾರಣಪ್ಪ, ಗೋವಿಂದ ಒಡೆಯರು, ವಾದಿರಾಜಸ್ವಾಮಿಗಳು, ತಾಳ್ಳಪಾಕ ಅಣ್ಣಮಾಚಾರ್ಯರು, ರಘುನಾಥ ಯತಿಗಳು, ಇವರು ಪ್ರಸಿದ್ಧರು, ಪುರಂದರದಾಸರೊಂದಿಗೆ ಸಂಪರ್ಕವಿದ್ದವರು.)

ಈಗಾಗಲೇ ತಿಳಿಸಿರುವಂತೆ ಪುರಂದರದಾಸರು ಒಟ್ಟು ನಾಲ್ಕು ಲಕ್ಷ ಇ(ಎ)ಪ್ಪತ್ತೈದು ಸಾವಿರ ಕೃತಿಗಳನ್ನು ರಚಿಸಿದ್ದಾರೆಂದು ಬಲವಾದ ಪ್ರತೀತಿಯಿದೆ. ಉಳಿದಿರುವುದು ಮಾತ್ರ ಒಂದು ಸಾವಿರದಷ್ಟೆ. ಇವುಗಳಲ್ಲಿ ಪದಗಳೂ, ಗೀತಗಳೂ, ಉಗಾಭೋಗಗಳೂ, ಸುಳಾದಿಗಳೂ ಸೇರಿವೆ. ಅವರ ಅಂಕಿತ 'ಪುರಂದರ ವಿಠ್ಠಲ' ಎಂದು. ಅವರ ನಾಲ್ವರು ಮಕ್ಕಳೂ ಹರಿದಾಸರಾಗಿ ದೇವರನಾಮಗಳನ್ನು ರಚಿಸಿದರು; 'ವರದಪುರಂದರ ವಿಠಲ', 'ಗುರುಪುರಂದರ ವಿಠಲ', 'ಅಭಿನವಪುರಂದರ ವಿಠಲ' ಮತ್ತು 'ಮಧ್ವಪತಿ ವಿಠಲ' ಎಂಬುವು ಅವರ ಅಂಕಿತಗಳು. ಮಕ್ಕಳೊಡಗೂಡಿ ಪುರಂದರದಾಸರು ಊರೂರು, ಕೇರಿ ಕೇರಿ ತಿರುಗಾಡುತ್ತ, ತಂಬೂರಿ ಹಿಡಿದು ದೇವರ ನಾಮಗಳನ್ನು ಹಾಡುತ್ತ, ಊಂಛವೃತ್ತಿಯಿಂದ ಜೀವಿಸುತ್ತಿದ್ದರು. ಕೀರ್ತನಪದ್ಧತಿ, ಭಜನಪದ್ಧತಿ ಇವರಿಂದಲೇ ಪರಿಷ್ಕೃತವಾದುವು. ಹರಿದಾಸರ ಮನೋಧರ್ಮವನ್ನೂ, ವೃತ್ತಿಯನ್ನೂ, ಸ್ವರೂಪ-ಸ್ವಭಾವಗಳನ್ನೂ ಪುರಂದರದಾಸರೇ ಸ್ಪಷ್ಟಪಡಿಸಿದವರು. ದಾಸಕೂಟವನ್ನು ನೆರೆಯಿಸಿದವರು ಅವರ ಗುರುಗಳಾದ ವ್ಯಾಸತೀರ್ಥರೇ ಆದರೂ, ದಾಸಕೂಟದ ಕೀರ್ತಿಗೂ ಜನಪ್ರೀತಿಗೂ ಕಾರಣರಾದವರು ಪುರಂದರದಾಸರು.

ಉದಾರವಾದ, ಮಾನವನ ಉದ್ಧಾರಕ್ಕೆ ಅಗತ್ಯವಾದ ತತ್ವಗಳನ್ನು ಸರಳ ಸುಂದರವಾದ, ಪ್ರಬೋಧಕವಾದ ಮಾತುಗಳಲ್ಲಿ ಮೂಡಿಸುವ ಅವರ ಜಾಣ್ಮೆ ಅನ್ಯಾದೃಶವಾದುದು. ಹರಿದಾಸಸಾಹಿತ್ಯದ ಸೊಬಗನ್ನು ಸಾಮಾನ್ಯ ಜನರು ಸವಿದು ಸಂತೋಷಪಟ್ಟುದು ಮಾತ್ರವಲ್ಲ; ತಮ್ಮ ಬಾಳನ್ನು ತಿದ್ದಿಕೊಂಡರು, ಆದರ್ಶವನ್ನು ಕಂಡುಕೊಂಡರು, ಅಧ್ಯಾತ್ಮದಲ್ಲಿ ರುಚಿಯನ್ನು ಕಂಡರು. ವ್ಯಕ್ತಿಗಳಲ್ಲಿಯೂ ಸಮಾಜದಲ್ಲಿಯೂ ಇದ್ದ, ಇರುವ, ಇರಬಹುದಾದ ಅಂಕುಡೊಂಕುಗಳನ್ನು ಕಾಣುವ ಕಣ್ಣು ಅವರಿಗಿದ್ದಿತು; ಅವನ್ನು ತಿದ್ದುವ ಸಾಹಸವೂ ಇದ್ದಿತು. ತಪ್ಪಿದವರ ಮನಸ್ಸನ್ನು ಚುಚ್ಚದೆ ಮನಮುಟ್ಟುವಂತೆ ಹೇಳುವ ಜಾಣತನವೂ ಅವರಿಗಿದ್ದಿತು. ಇವೆಲ್ಲ ಲೋಕಾನುಭವದಿಂದ, ಲೋಕಾನುಕಂಪದಿಂದ ಎದ್ದ ಪ್ರವೃತ್ತಿಗಳೇ. 'ಮಾನವ ಜನ್ಮ ದೊಡ್ಡದು. ಇದ ಹಾನಿಮಾಡಿ ಕೊಳ್ಳಬಾರದು' ಎಂದು ಅವರ ನಂಬಿಕೆ. 'ಸಂಸಾರವೆಂಬಂಥ ಭಾಗ್ಯವಿರಲಿ, ಕಂಸಾರಿನೆನೆವೆಂಬ ಸೌಭಾಗ್ಯವಿರಲಿ'; ಏಕೆಂದರೆ 'ಹರಿಚಿತ್ತ ಸತ್ಯ, ನರಚಿತ್ತಕ್ಕೆ ಬಂದದ್ದು ಲವಲೇಶ ನಡೆಯದು', 'ಎಲ್ಲಿರುವ ರಂಗನೆಂಬ ಸಂಶಯಬೇಡ, ನೆನೆದವರ ಮನದಲ್ಲೆ ಇಹನು'. 'ಕಣ್ಣಿನೊಳಗೆ ನೋಡೊ ಹರಿಯ. ಒಳಗಣ್ಣಿನಿಂದಲಿ ನೋಡೊ ಮೂಜಗದ ಧೊರೆಯ', 'ಗಾಳಿಬಂದ ಕೈಯಲ್ಲಿ ತೂರಿಕೊಳ್ಳಿರೊ, ನಾಳೆಯೆನ್ನಬೇಡಿ, ಇದೇ ವೇಳೆ ಬನ್ನಿರೋ'. 'ಈಸಬೇಕು, ಇದ್ದು ಜೈಸಬೇಕು', ಇಂಥ ಉಪದೇಶಗಳು ಸಾವಿರಾರು ಒದಗುತ್ತವೆ ಪುರಂದರದಾಸರದ ಕೃತಿಗಳಲ್ಲಿ.

ಇವೆಲ್ಲದರ ತಾತ್ಪರ್ಯವೇನೆಂದರೆ ಮನುಷ್ಯನಾಗಿರುವುದು ದೇವರನ್ನು ಕಂಡುಕೊಳ್ಳಲು, ಕೂಡಿಕೊಳ್ಳಲು. ಸಂಸಾರವನ್ನು ಸುಳ್ಳೆಂದಾಗಲಿ, ಹೇಸಿಗೆಯೆಂದಾಗಲಿ ಬಗೆಯಬಾರದು. ಬದುಕು

ನೀರ ಮೇಲಣ ಗುಳ್ಳೆಯಂತಿದ್ದರೂ ಆ ಬದುಕಿನಿಂದಲೇ ನಮ್ಮ ಮುಕ್ತಿಯನ್ನು ಸಾಧಿಸಿಕೊಳ್ಳಬೇಕು. ಮುಕ್ತಿ ಸುಲಭವೇ. ಆದರೆ ಅದರ ಉಪಾಯ ತಿಳಿದಿರಬೇಕು. ದೈವವೇ ಎಲ್ಲವನ್ನೂ ನಡೆಸುವುದೆಂದು ಕೈಕಟ್ಟಿ ಕೂಡುವುದು ಸರಿಯಲ್ಲ: ನಮ್ಮ ಪುರುಷಕಾರವಿಲ್ಲದೆ ದೈವ ಏನನ್ನೂ ಮಾಡದು - "ನನಗೂ ಆಣೆ ರಂಗ, ನಿನಗೂ ಆಣೆ' ಆದರೆ ಮನುಷ್ಯ ತನ್ನ ಪ್ರಯತ್ನಗಳನ್ನು ನಡೆಸುವಾಗ ವಿನಮ್ರನಾಗಿ ನಡೆದುಕೊಳ್ಳಬೇಕು. ತಾನು ದಾಸ, ದೇವರು ಈಶ, ಎನ್ನುವ ಕಲ್ಪನೆ ದೃಢವಾಗಿರಬೇಕು. ಮಡಿವಂತಿಗೆಯ ಸೋಗು, ದೃಢವಿಲ್ಲದ ಮನಸ್ಸಿನಿಂದ ಮಾಡುವ ಉದರ ವೈರಾಗ್ಯ, ಶೀಲವಿಲ್ಲದ ಶಾಸ್ತ್ರಪಾಂಡಿತ್ಯ ಇವೆಲ್ಲ ಡಂಭಾಚಾರ; ಹರಿಯು ಇವನ್ನು ಮೆಚ್ಚುವುದಿಲ್ಲ. ಶೀಲಶುದ್ಧಿ ಯಿದ್ದವರಿಗೆ ಜಾತಿ, ಕುಲ, ವಿದ್ಯೆ ಇವು ಗಣನೆಗೆ ಬಾರವು. ಸಮಾಜದಲ್ಲಿ ವೈಯಕ್ತಿಕ ಜೀವನ ಪರಿಶುದ್ಧವಾಗಿರದೆ ಧಾರ್ಮಿಕ ಸಂಪತ್ತು ಹೆಚ್ಚಲಾರದು. ಹೀಗೆ ಸರಿಯಾದ, ನೇರವಾದ, ನಯವಾದ ದಾರಿ ಹಿಡಿದವರಿಗೆ 'ಏತರವ ಭಯ', 'ಅಂಜಿಕಿನ್ಯಾತಕಯ್ಯ?'. ಧರ್ಮವೇ ಜಯವೆಂಬುದು ದಿವ್ಯಮಂತ್ರವಲ್ಲವೆ?

ಪ್ರಾಪಂಚಿಕವಾದ ಕಷ್ಟಸುಖಗಳಿಗೆ ಮನುಷ್ಯ ಕುಗ್ಗಬಾರದು, ಹಿಗ್ಗಬಾರದು; ಬಂದದ್ದೆಲ್ಲ ಬರಲಿ, ಗೋವಿಂದನ ದಯೆಯೊಂದಿರಲಿ ಎನ್ನುವ ಧೈರ್ಯವಿರಬೇಕು. 'ಅಂಜುವರಿಗೆ ದೈವ ಬೊಮ್ಮರಕ್ಕಸದಂತೆ, ಅಂಜೆ ನಾ ನಿನಗಿನ್ನು ಪುರಂದರವಿಠಲ'. ಈ ನೆಲೆಯಲ್ಲಿ ದಾಸರು ವ್ಯಕ್ತಿಗೊಂದು ಆದರ್ಶಜೀವನದ ಕಲ್ಪನೆಯನ್ನು ಒದಗಿಸಿಕೊಟ್ಟರು. ಜೀವದ ಸದ್ಗತಿಗೂ ಸಮಾಜದ ಶುದ್ಧಿಗೂ ಸಂಬಂಧವಿದೆಯೆಂದು ಅವರ ವಾದ : ಅಂತರಂಗ, ಬಹಿರಂಗ ಎರಡೂ ಶುದ್ಧವಾಗಿರಬೇಕಲ್ಲವೆ? ಧರ್ಮದ ಹೆಸರಿನಲ್ಲಿ ಅನ್ಯಾಯ ನಡೆಯುವುದು ದಾಸರ ಕಾಲದಲ್ಲಿಯೂ ಇದ್ದಿತು; ಹೊಲೆತನ ಹೊರಗಿಲ್ಲ. ಒಳಗಿದೆ ಎನ್ನುವುದನ್ನು ಅವರು ಗಮನಿಸಿದ್ದರು. ಧರ್ಮವೆನ್ನುವುದು ಆಚಾರವನ್ನು ಮೀರಿ ನಿಲ್ಲುತ್ತದೆ ಎನ್ನುವ ದೃಷ್ಟಿಯನ್ನು ಅವರ ಹಲವಾರು ಪದಗಳಲ್ಲಿ ಕಾಣುತ್ತೇವೆ. 'ಆವ ಕುಲವಾದರೇನು, ಆವನಾದರೇನು, ಆತ್ಮ ಭಾವವರಿತಮೇಲೆ? ಕುಲವಿಲ್ಲ ಜ್ಞಾನಿಗಳಿಗೆ' ಎಂದರು. ಎಲ್ಲರೂ ಮಾಡಲೇ ಬೇಕಾದುದನ್ನು ಸರಳವಾಗಿ ಹೇಳಿದರು - 'ಮನವ ಶೋಧಿಸಬೇಕು ನಿಚ್ಚ, ದಿನ ದಿನ ಮಾಡುವ ಪಾಪಪುಣ್ಯದ ವೆಚ್ಚ.'

ಹೀಗೆ ಪುರಂದರದಾಸರು ಹಾಕಿಕೊಟ್ಟ ದಾರಿ ದಿಟವಾಗಿ ಹೆದ್ದಾರಿಯೇ; ಎಲ್ಲ ಕಾಲಗಳ ಎಲ್ಲ ಜನರಿಗೂ ಅನುಕೂಲವಾದ, ಅಗತ್ಯವಾದ ದಾರಿ. ಹರಿದಾಸರಿಗೆ ಅವರು ಆದರ್ಶರಾದರು, ಹರಿದಾಸ್ಯ ಮನೋವೃತ್ತಿ ಅವರಿಂದ ಸ್ಪಷ್ಟವಾಯಿತು. ಈ ಕಾರಣದಿಂದಲೇ ದಾಸಕೂಟದವರು ಅವರನ್ನು ದಾಸಶ್ರೇಷ್ಠರೆಂದೂ ದಯಾನಿಧಿಗಳೆಂದೂ, ಪುರಂದರಗುರುಗಳೆಂದೂ ಸ್ಮರಿಸಿಕೊಳ್ಳುತ್ತಾರೆ.

ವ್ಯಾಸತೀರ್ಥರ ಇನ್ನೊಬ್ಬ ಶಿಷ್ಯರೂ, ಪುರಂದರದಾಸರ ಗೆಳೆಯರೂ ಆಗಿದ್ದ ಕನಕದಾಸರು ಪುರಂದರದಾಸರಂತೆಯೇ ಉಜ್ವಲವಾದ ವ್ಯಕ್ತಿತ್ವವುಳ್ಳವರು, ಪ್ರತಿಭಾವಂತರು, ಯೋಗಿಗಳು. ದಾಸಕೂಟದಲ್ಲಿ ಇವರ ಸ್ಥಾನವೂ ಪ್ರಶಸ್ತವಾಗಿದ್ದಿತು; ವ್ಯಾಸತೀರ್ಥರೇ ಇವರನ್ನು ಮನಸಾರೆ ಮೆಚ್ಚಿಕೊಂಡು ಇವರಿಗೆ ಅಗ್ರಮರ್ಯಾದೆ ಮಾಡುತ್ತಿದ್ದರು. ಪುರಂದರದಾಸರೂ, ವೈಕುಂಠದಾಸರೂ ಇವರನ್ನು ಅಪರೋಕ್ಷಜ್ಞಾನಿಗಳೆಂದು ಬಗೆದಿದ್ದರು. ಕುರುಬರ ಕುಲದವರೆಂಬ ಕಾರಣದಿಂದ ಇವರನ್ನು ಆದರಿಸದೆ ಇದ್ದವರ ಮೂಗು ಮುರಿದು ವ್ಯಾಸತೀರ್ಥರು ಇವರ ಹಿರಿಮೆಯನ್ನು

ಕೊಂಡಾಡಿದ ಉಲ್ಲೇಖವಿದೆ; ಮಠದಲ್ಲಿ ದೇವರ ಪೂಜೆಯಾದನಂತರ ಮೊದಲ ತೀರ್ಥವನ್ನು ಕನಕದಾಸರಿಗೆ ಕೊಡುತ್ತಿದ್ದರಂತೆ ವ್ಯಾಸತೀರ್ಥರು.

ಧಾರವಾಡ ಜಿಲ್ಲೆಯ ಬಂಕಾಪುರ ತಾಲ್ಲೂಕಿನ ಬಾಡದವರಾದ ಕನಕದಾಸರು ೧೫೦೮ರಿಂದ ೧೬೦೭ರವರೆಗೆ ಇದ್ದವರು. ಶ್ರೀಮಂತರಾಗಿ, ಊರಿನ ದಂಣಾಯಕರಾಗಿ, ಸಮರ ಶೂರರಾಗಿ ಇದ್ದವರು ಇದ್ದಕ್ಕಿದ್ದಂತೆ ವಿರಕ್ತಿಯನ್ನು ತಳೆದು ವ್ಯಾಸತೀರ್ಥರ ಬಳಿ ಶಿಷ್ಯರಾಗಿ ಸೇರಿ ಹರಿದಾಸರಾದವರು. ಅದೇ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಕಾಗಿನೆಲೆ ಎಂಬಲ್ಲಿ ಅವರು ದೇವಾಲಯವೊಂದನ್ನು ಕಟ್ಟಿಸಿ ತಮ್ಮ ಹುಟ್ಟೂರಾದ ಬಾಡದಲ್ಲಿದ್ದ ಆದಿಕೇಶವಮೂರ್ತಿಯನ್ನು ಪ್ರತಿಷ್ಠೆ ಮಾಡಿಸಿದರು. ಹೀಗಾಗಿ ಕನಕದಾಸರ ಅಂಕಿತವು 'ಕಾಗಿನೆಲೆಯಾದಿಕೇಶವ' ಅಥವಾ 'ಬಾಡದಾದಿ ಕೇಶವ' ಎಂದಾಯಿತು. ವ್ಯಾಸತೀರ್ಥರ ಬಳಿ ಅವರು ಬರುವುದಕ್ಕೆ ಮೊದಲು ಅವರಿಗೆ ಶ್ರೀ ವೈಷ್ಣವಪಂಥದ ತಾತಾಚಾರ್ಯರೆಂಬುವರಿಂದ ಧರ್ಮದೀಕ್ಷೆಯಾಗಿದ್ದಿತು; ಆದರಿಂದಲೇ ಅವರು ತಿರುಪತಿಯ ಶ್ರೀನಿವಾಸನಿಗೆ ನಡೆದುಕೊಳ್ಳುತ್ತಿದ್ದುದು. ವ್ಯಾಸತೀರ್ಥರ ಬಳಿ ಬಂದ ನಂತರವೇ ಹರಿದಾಸರಾದುದು. ಪದಗಳನ್ನು ರಚಿಸಿರಲಾರಂಭಿಸಿದುದು. ಬೇಲೂರಿಗೆ ಹೋಗಿ ಅಲ್ಲಿ ವೈಕುಂಠದಾಸರ ಬಳಿಯೂ ಕೆಲಕಾಲ ಇದ್ದಂತೆ ತಿಳಿದುಬರುತ್ತದೆ; ಉಡುಪಿಯ ವಾದಿರಾಜಸ್ವಾಮಿಗಳು ಕನಕದಾಸರನ್ನು ಗೆಳೆಯರಂತೆ ಕಂಡರೂ ಅವರು ಮಾತ್ರ ತಮ್ಮನ್ನು 'ತ್ರಿವಿಕ್ರಮದಾಸಸ್ಯದಾಸ'ನೆಂದು ಕರೆದುಕೊಂಡು ವಾದಿರಾಜರ ಶಿಷ್ಯರೆಂದೇ ಹೇಳಿಕೊಂಡಿದ್ದಾರೆ. ಕನಕದಾಸರಿಗೂ ಉಡುಪಿಗೂ ಬೆಳೆದುಬಂದ ಸಂಬಂಧ ಕೃಷ್ಣನ ಗುಡಿಯಲ್ಲಿ ಇಂದಿಗೂ ಪ್ರಸಿದ್ಧವಾಗಿರುವ 'ಕನಕನ ಕಿಂಡಿ'ಯಿಂದ ಉಳಿದು ಬಂದಿದೆ; ಇದು ವಾದಿರಾಜರ ಕಾಲದಲ್ಲಿಯೇ ನಡೆದ ಪ್ರಸಂಗ.

ಕನಕದಾಸರು ಬಿಡಿಪದಗಳನ್ನಲ್ಲದೆ ಕೆಲವಾರು ಗ್ರಂಥಗಳನ್ನು ಕೂಡ ರಚಿಸಿದ್ದಾರೆ. ಇವುಗಳಲ್ಲಿ ಮುಖ್ಯವಾದುದು, ಜನಪ್ರಿಯವಾದುದು ಭಾಮಿನೀಷಟ್ಪದಿಯಲ್ಲಿರುವ 'ಹರಿಭಕ್ತಿಸಾರ'. ಇದರ ಪದ್ಯಗಳು ಕನ್ನಡನಾಡಿನಲ್ಲೆಲ್ಲ ಹರಡಿವೆ. 'ಮೋಹನತರಂಗಿಣಿ', 'ರಾಮಧಾನ್ಯಚರಿತೆ', 'ನಳಚರಿತ್ರೆ', ಮತ್ತು 'ನರಸಿಂಹಸ್ತವ'; ಮೊದಲನೆಯದೂ ಕಡೆಯದೂ ಸಾಂಗತ್ಯ ಶೈಲಿಯಲ್ಲಿವೆ, ಉಳಿದುವು ಭಾಮಿನೀಷಟ್ಪದಿಯಲ್ಲಿವೆ. ಜನಪದಭಾಷೆಯ ಪ್ರಯೋಗಗಳನ್ನೇ ಅಳವಡಿಸಿಕೊಂಡು ಕಾವ್ಯ ಗಾಂಭೀರ್ಯಕ್ಕೆ ಕುಂದು ಬರದಂತೆ ಉದಾತ್ತ ಭಾವನೆಗಳನ್ನು ಹೊರ ಹೊಮ್ಮಿಸುವುದು ಕನಕದಾಸರ ವೈಶಿಷ್ಟ್ಯ. ಅವರು ಒದಗಿಸಿರುವ ಶಬ್ದ ಚಿತ್ರಗಳಂತೂ ಮೋಹಕವಾಗಿವೆ. ಅವರ ೧೭೫ ಪದಗಳು ಬಳಕೆಯಲ್ಲಿವೆ.

ಅವರ ಪದಗಳಲ್ಲಿ ಕಾಣಬರುವುದು ಅವರ ವಿಫುಲವಾದ ಲೋಕಾನುಭವ, ದೃಢವಾದ ಭಗವದ್ಭಕ್ತಿ, ಅದರಿಂದ ಒದಗಿದ ಆನಂದ. 'ನೆಚ್ಚದಿರು ಸಂಸಾರ', 'ಎಲ್ಲಾರು ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ', ಎಂದು ಹೇಳಿ 'ಧರೆಯ ಭೋಗವನ್ನು ನೋಡಿ, ಹರಿಯ ಮರೆತು ಕೆಡಲಿ ಬೇಡ' ಎಂದು ಕಿವಿಮಾತನ್ನೂ ಹೇಳಿದರು. ಜೀವನದಲ್ಲಿ ಕಷ್ಟ-ನಿಷ್ಠುರಗಳನ್ನು ಅನುಭವಿಸಿದ್ದ ಅವರಿಗೆ 'ತಲ್ಲಣಿಸದಿರು ಕಂಡ್ಯ ತಾಳು ಮನವೇ, ಎಲ್ಲರನು ಸಲಹುವನು ಇದಕೆ ಸಂಶಯ ಬೇಡ' ಎನಿಸಿತು. 'ತನು ನಿನ್ನದು, ಜೀವ ನಿನ್ನದು, ಸ್ವಾಮಿ, ಅನುದಿನದಲ್ಲಿ ಬಾಹೊ ಸುಖ ದುಃಖ ನಿನ್ನದಯ್ಯ' ಎಂದು ದೇವರಲ್ಲಿ ಭಾರನ್ಯಾಸವನ್ನು ಮಾಡಿಬಿಟ್ಟರು. 'ಬದುಕಿದೆನು

ಬದುಕಿದೆನು ಭವವೆನಗೆ ಹಿಂಗಿತು, ಪದುಮನಾಭನ ಪಾದದೊಲುಮೆ ಎನಗಾಯ್ತು' ಎಂದು ಸಂತೋಷದಿಂದ ಕುಣಿದಾಡಿದರು; 'ತಂದೆ ಶ್ರೀ ಕಾಗಿನೆಲೆಯಾದಿ ಕೇಶವರಾಯ ಬಂದೆನ್ನ ಹೃದಯಲಿ ನೆಲೆಯಾಗಿ ನಿಂತಮೇಲೆ ಜನ್ಮಸಾಫಲ್ಯವಾಗದೆ ಮತ್ತೇನು?

ಹೀಗೆ ಕನ್ನಡನಾಡಿನಲ್ಲಿ ಕನಕದಾಸರ ಬದುಕಿನಿಂದಲೂ ಬರಹಗಳಿಂದಲೂ ಭಕ್ತಿ ಮಾರ್ಗವು ಜನಪ್ರೀತಿಯನ್ನು ಗಳಿಸಿಕೊಂಡು ಹರಡಿತು; ಅವರ ಸಂಪರ್ಕದಿಂದ ದಾಸಕೂಟವು ಉಜ್ವಲವಾಯಿತು. ಪುರಂದರದಾಸರು, ಕನಕದಾಸರಿಬ್ಬರೂ ವ್ಯಾಸತೀರ್ಥರು ಕೈಗೊಂಡ ಕೆಲಸವನ್ನು ಅವರ ಎಡಬಲಭುಜಗಳಂತೆ ನಿಂತು ನಡೆಸಿದರು; ದೇಶದ ಸಂಸ್ಕೃತಿ ಅರಳಲು ಇವರಿಬ್ಬರು ಒದಗಿಸಿದ ನೆರವು ಎಂದಿಗೂ ಮರೆಯಲಾಗದಂಥದು.

ಕನಕದಾಸರೊಡನೆ ಕೂಡಿಕೊಂಡು ಹರಿದಾಸ್ಯದ ಕಳೆಯನ್ನು ಮತ್ತಷ್ಟು ಹೆಚ್ಚಿಸಿದ ಇನ್ನೊಬ್ಬ ದಾಸರೆಂದರೆ ವೈಕುಂಠದಾಸರು. ಅವರು ಬೇಲೂರಿನವರು. ಬಾಳಿನ ಬಹುಭಾಗವನ್ನು ಬೇಲೂರಿನಲ್ಲಿಯೇ ಕಳೆದವರು. ಅವರು ವ್ಯಾಸತೀರ್ಥರ ಬಳಿ ಶಿಷ್ಯವೃತ್ತಿಯನ್ನು ಮಾಡಿದರೋ ಇಲ್ಲವೋ ಖಚಿತವಾಗಿ ತಿಳಿದುಬರುವುದಿಲ್ಲ; ಆದರೆ ಪುರುಂದರದಾಸರಿಗೂ ಅವರಿಗೂ ಗೆಳೆತನವಿದ್ದ ಉಲ್ಲೇಖಗಳಿವೆ. ಕನಕದಾಸರಂತೂ ವೈಕುಂಠದಾಸರ ಹಿರಿಮೆಯನ್ನು ಒಂದು ಪದದಲ್ಲಿ ಉಳಿಸಿಯೇ ಇಟ್ಟಿದ್ದಾರೆ. ಈ ದಾಸರು ಶ್ರೀ ವೈಷ್ಣವ ಸಂಪ್ರದಾಯದವರು; ಅವರು ರಚಿಸಿರುವ ಕೀರ್ತನೆಗಳಲ್ಲಿ 'ವೈಕುಂಠಕೇಶವ' ಎನ್ನುವ ಮುದ್ರಿಕೆಯಿದೆ. ಕನಕದಾಸರೂ ಶ್ರೀವೈಷ್ಣವ ದೀಕ್ಷೆಯನ್ನು ತಳೆದವರು, ಕೇಶವನೇ ಅವರ ಇಷ್ಟದೈವ; ಇವು ವೈಕುಂಠದಾಸರಿಗೂ ಅವರಿಗೂ ಒದಗಿದ ಹೆಚ್ಚಿನ ಮೈತ್ರಿಗೆ ಕಾರಣಗಳಾಗಿರಬಹುದು. ಅಂತೂ ವೈಕುಂಠದಾಸರ ಕೀರ್ತನೆಗಳಲ್ಲಿ ಪ್ರಪತ್ತಿದರ್ಮ ಎದ್ದು ಕಾಣುತ್ತದೆ. ಅವರ ಕೀರ್ತನೆಗಳನ್ನೆಲ್ಲ ಕಲೆ ಹಾಕಿ ಪ್ರಕಟಿಸುವ ಕೆಲಸವಿನ್ನೂ ನಡೆದಿಲ್ಲ.

ಇದೇ ಯುಗದಲ್ಲಿ ಹರಿದಾಸಸಾಹಿತ್ಯವನ್ನು ಬೆಳೆಸಿ, ಹರಿದಾಸ ಪಂಥವನ್ನು ಬಲಗೊಳಿಸಿದವರಲ್ಲಿ ಸೋದೆಯ ವಾದಿರಾಜಸ್ವಾಮಿಗಳು ಪ್ರಮುಖರು, ಪ್ರಭಾವಶಾಲಿಗಳು. ಅವರ ಕಾಲ ೧೪೮೬-೧೬೦೦. ಮಂಗಳೂರು ಪ್ರಾಂತದ ಕುಂಭಾಶಿಯ ಹತ್ತಿರ ಇರುವ ಹೂವಿನಕೆರೆ ಗ್ರಾಮದವರಾದ ಇವರು ಉಡುಪಿಯ ಅಷ್ಟಮಠಗಳಲ್ಲಿ ಒಂದಾದ ಸೋದೆಮಠದ ವಾಗೀಶತೀರ್ಥ ರಿಂದ ಸಂನ್ಯಾಸದೀಕ್ಷೆಯನ್ನು ಪಡೆದು, ಹಂಪಿಗೆ ಬಂದು ವ್ಯಾಸತೀರ್ಥರಲ್ಲಿ ವೇದಾಂತ ವಿದ್ಯಾಭ್ಯಾಸ ಮಾಡಿದರು, ಅಲ್ಲಿ ಅವರಿಗೆ ಪುರಂದರದಾಸರು, ಕನಕದಾಸರು, ವಿಜಯೀಂದ್ರ ತೀರ್ಥರು, ನಾರಾಯಣಯತಿಗಳು, ಗೋವಿಂದ ಒಡೆಯರು ಮೊದಲಾದ ಮಹಾತ್ಮರ ಪರಿಚಯವೂ ಗೆಳೆತನವೂ ಆದುವು. ವ್ಯಾಸತೀರ್ಥರಿಂದ ಶಾಸ್ತ್ರಪಾಂಡಿತ್ಯವನ್ನು ಪಡೆದುಕೊಂಡಂತೆಯೇ ಅವರಿಂದ ಹರಿದಾಸ ದೀಕ್ಷೆಯನ್ನೂ ಪಡೆದುಕೊಂಡರು. ಓದನ್ನು ಮುಗಿಸಿ ಉಡುಪಿಗೆ ಹಿಂದಿರುಗಿದ ಮೇಲೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ವ್ಯಾಸಕೂಟ, ದಾಸಕೂಟಗಳೆರಡಕ್ಕೂ ಪ್ರೇರಕರೂ, ಪೋಷಕರೂ ಆಗಿ ನಿಂತವರು ವಾದಿರಾಜರು. ಉಡುಪಿಯ ಧಾರ್ಮಿಕಕ್ಷೇತ್ರದಲ್ಲಿ ಮಧ್ವಾಚಾರ್ಯರನಂತರ ಅಷ್ಟು ತೇಜಸ್ವಿಗಳೂ ಪ್ರಭಾವಶಾಲಿಗಳೂ ಆಗಿದ್ದವರೆಂದರೆ ಇವರೇ; ಈಗ ಉಡುಪಿಮಠಗಳಿಗೂ ಕೃಷ್ಣನ ಗುಡಿಗೂ ಸಂಬಂಧಿಸಿದಂತೆ ಇರುವ ಪರ್ಯಾಯ ಮೊದಲಾದ ವ್ಯವಸ್ಥೆಗಳನ್ನೆಲ್ಲ ಮಾಡಿದವರು ವಾದಿರಾಜರೇ;

ಸುಪ್ರಸಿದ್ಧ ಕ್ಷೇತ್ರವಾದ ಧರ್ಮಸ್ಥಳದ ಮಂಜುನಾಥ ಪ್ರತಿಷ್ಠೆ ನಡೆದುದು ಅವರಿಂದಲೇ. ಅವರು ನೂರಿಪ್ಪತ್ತು ವರ್ಷಗಳ ಕಾಲ ಬದುಕಿದ್ದು ತಮ್ಮ ಬಾಳ ಬೆಳಕಿನಿಂದ ಕಡಲತೀರವನ್ನೆಲ್ಲ ಬೆಳಗಿದರು.

ವಾದಿರಾಜರು ಕನ್ನಡದಲ್ಲಿಯೂ ಹಲವಾರು ಸೊಗಸಾದ ಪ್ರಬಂಧಗಳನ್ನು ರಚಿಸಿದ್ದಾರೆ. ಮಹಾಭಾರತ ತಾತ್ಪರ್ಯ ನಿರ್ಣಯವು ಇವರಿಂದ ಕನ್ನಡದಲ್ಲಿ ಇಳಿದು ಬಂದಿದೆ. 'ವೈಕುಂಠವರ್ಣನೆ' ಯೆನ್ನುವುದು ನಾಲ್ಕು ಸಂಧಿಗಳಿಂದ ಕೂಡಿದ ಮಧುರ ಪದ್ಯಗ್ರಂಥ : 'ತತ್ತ್ವಸಾರದ ಸೊಬಗು ಧರೆಯೊಳು ವಿಸ್ತರಿಸಬೇಕೆಂದು' 'ಶ್ರುತಿ ಪುರಾಣಗಳ ಮೊತ್ತವನು ನೆರೆ ಮಥಿಸಿ' ಮಾಡಿರುವ ಪ್ರಬಂಧವಿದು; ಒಟ್ಟು ಇದರಲ್ಲಿ ೬೮೮ ಪದಗಳಿವೆ. 'ಲಕ್ಷ್ಮೀಶೋಭಾನೆ'ಯೆನ್ನುವುದು ೧೧೩ ಪದಗಳ ಪ್ರಬಂಧ: ಪಂತುವರಾಳಿರಾಗದಲ್ಲಿದ್ದು ಗಾಯನಕ್ಕೆ ಒಪ್ಪುವಂತಿದೆ. ಹೀಗೆಯೇ ಭಾಮಿನೀ ಷಟ್ಪದಿಯಲ್ಲಿರುವ 'ಸ್ವಪ್ನಪದ' (೪೫ ನುಡಿಗಳು), ನಲವತ್ತು ಭಾವನಾಪೂರ್ಣವಾದ ಪದಗಳ 'ಗುಂಡಕ್ರಿಯ', ಇವಲ್ಲದೆ ನೂರಾರು ಬಿಡಿಪದಗಳನ್ನು ವಾದಿರಾಜರು ರಚಿಸಿದ್ದಾರೆ. ಇವರು ಹಯಗ್ರೀವೋಪಾಸಕರಾಗಿದ್ದು ತಮ್ಮ ಕನ್ನಡ ಕೃತಿಗಳಲ್ಲಿ 'ಹಯವದನ' ಎನ್ನುವ ಅಂಕಿತವನ್ನು ಕಾಣಿಸಿದ್ದಾರೆ.

ಸಂಸ್ಕೃತದಲ್ಲಿಯೂ ಕನ್ನಡದಲ್ಲಿಯೂ ಇವರ ಭಾಷೆ ಗಂಭೀರವಾದುದು, ಬಲವಾದುದು, ಕವಿಸಹಜವಾದುದು; ಮಾತಿನ ಮೋಡಿ ಮರೆಯುವಂತಿಲ್ಲ. ರೂಪಕಗಳು ಮನಸ್ಸಿನಲ್ಲಿ ನಿಲ್ಲುತ್ತವೆ. ಪದಗಳಲ್ಲಿ ಕಾಣಬರುವ ಭಕ್ತಿಭಾವವಂತೂ ಬೆರಗುಮಾಡುವಂಥದು. ಅವರ 'ವೇಂಕಟೇಶನ ದರ್ಶನ ಸೂಳಾದಿ' ಇದಕ್ಕೆ ನಿದರ್ಶನ. ವಿರಕ್ತರಾದರೂ ಅವರಿಗೆ ಲೋಕದ ಅನುಭವವಿಲ್ಲದಿಲ್ಲ. 'ಡಿಲ್ಲಿಯ ರಾಯನ ಕಂಡು ಪುಲ್ಲಿಗೆಯ ಬೇಡುವರೆ?', 'ಹಣವೇ ನಿನ್ನಯ ಗುಣವೆನಿತು ಬಣ್ಣಿಪೆನಯ್ಯ? ಹಣವಿಲ್ಲದವನೊಬ್ಬ ಹೆಣಕಿಂತ ಕಡೆಯೈಯ!', 'ಆರಿಗೆ ಆರೋ, ನಿನ್ನ ಉಳಿದು ಪೊರೆವರ ಕಾಣೆ', 'ಪಾಥೇಯವ ಕಟ್ಟಿರೋ ವೈಕುಂಠಕ್ಕೆ, ಪಯಣ ಸಮ್ಮತವಾದರೆ' ಮೊದಲಾದ ಮಾತುಗಳಲ್ಲಿ ಕಾಣಬರುವ ಜಾಣತನ ವಾದಿರಾಜರಿಗೆ ವಿಶಿಷ್ಟವಾದುದು. ಭಾಷೆ, ಭಾವ ಎರಡರ ಮಧುರ ಸಂಬಂಧ ಇವರ ಕೃತಿಗಳಲ್ಲಿ ಎದ್ದು ನಿಲ್ಲುತ್ತದೆ. ಉಡುಪಿಯ ಕೆ ಮಠಗಳಲ್ಲಿಯೂ ಮನೆಗಳಲ್ಲಿಯೂ ಇಂದಿಗೂ ಹಾಡಿಕೊಂಡು ಕುಣಿಯುವ 'ಲಕ್ಷುಮಿ ನಾರಾಯಣ' ಎನ್ನುವ ಇಪ್ಪತ್ತುನಾಲ್ಕು ನುಡಿಗಳ ಪದವು ಅವರ ಮನೋಹರವಾದ, ಮಂಜುಳವಾದ, ಲಯಬದ್ಧವಾದ ಕೃತಿ.

ವಾದಿರಾಜರು ಕನಕದಾಸರನ್ನೂ ವೈಕುಂಠದಾಸರನ್ನೂ ಮೆಚ್ಚಿಕೊಂಡಿದ್ದರು. ಬೇಲೂರಿಗೆ ಹೋಗಿ ಅಲ್ಲಿ ವೈಕುಂಠದಾಸರೊಡನೆ ಕೆಲಕಾಲವಿದ್ದರು; ಕನಕದಾಸರನ್ನು ಉಡುಪಿಗೆ ಕರೆಯಿಸಿ ಕೊಂಡಿದ್ದರು. ಹರಿದಾಸಪಂಥವು ಪ್ರಬಲವಾಗುವುದಕ್ಕೆ ಕಾರಣರಾದವರಲ್ಲಿ ಅಗ್ರಗಣ್ಯರು ವಾದಿರಾಜಸ್ವಾಮಿಗಳು.

೪

ಹರಿದಾಸಪಂಥದಲ್ಲಿ ಮೊದಲ ಹಂತ ವ್ಯಾಸರಾಯರ ಕಾಲದಲ್ಲಿ ಸ್ಪಷ್ಟವಾಯಿತು. ಶ್ರೀಪಾದರಾಜರೂ ಅವರ ಶಿಷ್ಯ ವ್ಯಾಸರಾಯರೂ ಮೊದಲ ದಾಸಕೂಟವನ್ನು ಹಂಪಿಯಲ್ಲಿ ನೆರೆಯಿಸಿದರು. ವಿಜಯಗರ ಸಾಮ್ರಾಜ್ಯದ ಸ್ವರ್ಣಯುಗದಲ್ಲಿಯೇ ಹರಿದಾಸಪಂಥವೂ ವಿಶಿಷ್ಟವಾಗಿ

ಚಿಗುರತೊಡಗಿತು. ಪುರಂದರದಾಸರ, ಕನಕದಾಸರ ಕಾರ್ಯಕ್ಷೇತ್ರ ಇಡೀ ಕನ್ನಡನಾಡನ್ನು ಒಳಗೊಂಡು ಹಂಪಿಯಲ್ಲಿ ಹುಟ್ಟಿದ ಹರಿದಾಸ ಪದ್ಧತಿ ನಾಲ್ಕೂ ಕಡೆ ಹರಡತೊಡಗಿತು. ವಾದಿರಾಜಸ್ವಾಮಿಗಳು ಅದೇ ಕಾಲದಲ್ಲಿ ದಕ್ಷಿಣಕನ್ನಡ ಜಿಲ್ಲೆಯಲ್ಲೆಲ್ಲ ಇದನ್ನು ಬೆಳೆಸಿದರು; ಬೇಲೂರಿನ ಸುತ್ತ ಮುತ್ತ ವೈಕುಂಠದಾಸರ ಪ್ರಭಾವ ಹರಡಿತು. ಕ್ರಿಸ್ತಾಬ್ದ ೧೬೦೦ರ ಸುಮಾರಿಗೆ ಹರಿದಾಸರ ವಾಣಿ ಕನ್ನಡ ದೇಶದಲ್ಲೆಲ್ಲ ಅನುರಣಿಸಿತು.

ಅನಂತರ ಕಾರಣಾಂತರಗಳಿಂದ ಹರಿದಾಸಪರಂಪರೆ ಅಷ್ಟಾಗಿ ಸ್ಪಷ್ಟವಾಗಿ ಮುಂದುವರಿಯಲಿಲ್ಲ. ಪುರಂದರದಾಸರ ಶಿಷ್ಯರೂ, ವೈಕುಂಠದಾಸರ ಶಿಷ್ಯರೂ, ವಾದಿರಾಜರ ಶಿಷ್ಯರೂ ಏನು ಕಾರಣದಿಂದಲೋ ಹೊರಗೆ ಬರಲಿಲ್ಲ; ಹೆಸರು ಪಡೆಯಲಿಲ್ಲ; ಪದಗಳನ್ನು ರಚಿಸಿದಂತೆ ಕಾಣಲಿಲ್ಲ. ಇವರೆಲ್ಲರ ಪರಂಪರೆಗಳಲ್ಲಿ ವಿಚ್ಛಿತ್ತಿ ಬಂದಂತೆ ತೋರುತ್ತದೆ. ವಿಜಯನಗರ ಸಾಮ್ರಾಜ್ಯವು ತಾಳಿಕೋಟೆ ಯುದ್ಧದಲ್ಲಿ ೧೫೬೫ರಲ್ಲಿ ಮಣ್ಣುಗೂಡಿದನಂತರ ಹಿಂದೂ ಧರ್ಮಕ್ಕೂ ಒಂದು ಆತಂಕ ಪರಿಸ್ಥಿತಿ ಒದಗಿಬಂದಿರಬಹುದು. ನಿತ್ಯಜೀವನದಲ್ಲಿ ನೆಮ್ಮದಿ ಮರೆಯಾಗಿ ಹರಿದಾಸರ ಸಂಚಾರವೂ ಸಾಹಿತ್ಯ ಕೃಷಿಯೂ ನಿಂತುಹೋಗಿರಬಹುದು. ಅಂತೂ ಮುಂದೆ ಹಿಂದೂಧರ್ಮಕ್ಕೆ ಆಸರೆ ದೊರೆತುದು ತಂಜಾವೂರು ಸಂಸ್ಥಾನದಲ್ಲಿ, ನಾಯಕರ ಆಳ್ವಿಕೆಯಲ್ಲಿ. ಈ ನಾಯಕರಲ್ಲಿ ರಘುನಾಥ ನಾಯಕನ ಆಳ್ವಿಕೆ (೧೬೦೦-೧೬೩೪) ಸಮರ್ಥವಾಗಿದ್ದಿತು. ಇವರ ಕಾಲದಲ್ಲಿ ತಂಜಾವೂರು ಸಾಹಿತ್ಯ, ಸಂಗೀತ, ಧರ್ಮ, ಕಲೆಗಳಿಗೆಲ್ಲ ನೆಲೆಯಾಯಿತು.

ಈ ಕಾಲದಲ್ಲಿ ಈ ಪ್ರದೇಶದಲ್ಲಿಯೇ ಧಾರ್ಮಿಕ ಪುನರುಜ್ಜೀವನವಾಗುತ್ತಿರುವಾಗ ನೆರೆಯ ಕುಂಭಕೋಣದಲ್ಲಿ ರಾಘವೇಂದ್ರಸ್ವಾಮಿಗಳು ಕಾಣಿಸಿಕೊಂಡರು. ಇವರು ತಂಜಾವೂರು ರಾಜ್ಯದ ಮಂತ್ರಿ ಗೋವಿಂದದೀಕ್ಷಿತರ ಮಗ ಯಜ್ಞನಾರಾಯಣ ದೀಕ್ಷಿತರ ಕಾಲದಲ್ಲಿದ್ದವರು. ಇವರು ವಿಜಯೀಂದ್ರ ತೀರ್ಥರ ಪ್ರಶಿಷ್ಯರೂ, ಸುಧೀಂದ್ರ ತೀರ್ಥರ ಶಿಷ್ಯರೂ ಆಗಿದ್ದು ಮಠಾಧಿಪತಿಗಳಾಗಿ ತಪಸ್ವಿಗಳೆಂದೂ ಮಹಾಪಂಡಿತರೆಂದೂ ವಿಖ್ಯಾತರಾದರು. ಅವರು ರಚಿಸಿರುವ 'ಪರಿಮಳ', 'ಭಾಟ್ಟಸಂಗ್ರಹ', 'ಗೀತಾವಿವೃತಿ', 'ಖಂಡಾರ್ಥಗಳು' ಅವರ ವಿದ್ವತ್ತಿಗೂ ವಾದ ವೈಖರಿಗೂ ಸಾಕ್ಷಿಗಳಾಗಿ ನಿಂತಿವೆ. ಇವರು ಸಂಚಾರಕ್ರಮದಲ್ಲಿ ಉತ್ತರ ಕರ್ನಾಟಕಕ್ಕೆ ಬಂದು, ಆದವಾನಿಯ ಸುಬಾದಾರನಾಗಿದ್ದ ಅಸದುಲ್ಲಾಖಾನ್ (೧೬೬೨-೧೬೮೭) ನಂಥ ಮುಸಲ್ಮಾನ ಅರಸರಿಂದಲೂ ಸತ್ಕೃತರಾಗಿ ಅವರಿಂದ ಜಹಗೀರುಗಳನ್ನು ಪಡೆದು ಮಂಚಾಲೆಯಲ್ಲಿ ನೆಲೆನಿಂತರು. ಆದವಾನಿಗೆ ಸೇರಿದ್ದ, ತುಂಗಭದ್ರಾತೀರದಲ್ಲಿದ್ದ ಮಂಚಾಲೆಯಲ್ಲಿಯೇ ಮಠವನ್ನು ಕಟ್ಟಿಕೊಂಡು, ತಪಶ್ಚರ್ಯೆ ಮಾಡುತ್ತ, ಅಲ್ಲಿಯೇ ಸಶರೀರರಾಗಿ ವೃಂದಾವನಪ್ರವೇಶ ಮಾಡಿದರು. ಅವರ ಶಾಪಾನುಗ್ರಹಶಕ್ತಿಯಿಂದಾಗಿ ಈ ಪ್ರದೇಶವು ಮಂತ್ರಾಲಯವೆನಿಸಿತು. ಇವರ ಪ್ರಭಾವವು ಉತ್ತರಕರ್ನಾಟಕ ಜಿಲ್ಲೆಯಲ್ಲೆಲ್ಲ ಹರಡತೊಡಗಿತು.

ಪಂಡಿತರೂ ಯೋಗಿಗಳೂ ಮಠಧೀಶರೂ ಮಾಂತ್ರಿಕರೂ, ಗುರುರಾಜರೂ ಆಗಿದ್ದ ರಾಘವೇಂದ್ರಸ್ವಾಮಿಗಳು ಕನ್ನಡದಲ್ಲಿ ದೇವರನಾಮಗಳನ್ನು ರಚಿಸತೊಡಗಿದುದು ಸ್ವಾರಸ್ಯವಾದ ವಿವರ. ಎಷ್ಟು ಪದಗಳನ್ನು ರಚಿಸಿದರೊ ತಿಳಿಯದು; ಒಂದಂತೂ ಇಂದಿಗೂ ಉಳಿದು ಬಂದಿದೆ.

'ಇಂದು ಎನಗೆ ಗೋವಿಂದ' ಎಂದು ಆರಂಭವಾಗುವ ಭೈರವಿರಾಗದ ಈ ಪದದಲ್ಲಿ 'ಧೀರವೇಣು ಗೋಪಾಲ' ಎನ್ನುವ ಮುದ್ರಿಕೆಯಿದೆ. ವ್ಯಾಸತೀರ್ಥರಂತೆಯೇ ಇವರೂ ವ್ಯಾಸಕೂಟ- ದಾಸಕೂಟ ಗಳೆರಡನ್ನೂ ಉಜ್ಜೀವನಗೊಳಿಸಿದರು; ಹರಿದಾಸ ಸಾಹಿತ್ಯದಲ್ಲಿ ವಿಚ್ಛಿತ್ತಿ ಬಂದಿದ್ದುದನ್ನು ಇವರು ಪರಿಹರಿಸಿದರು. ಇವರ ಪ್ರಬಾವ ಮಂತ್ರಾಲಯದ ಸುತ್ತಮುತ್ತ ಹರಡುವಾಗ, ಹರಿದಾಸರಿಗೆ ಸ್ಫೂರ್ತಿಯೂ ಇದರೊಂದಿಗೆ ಅಲ್ಲೆಲ್ಲ ಹರಿಯಿತು. ಮೊದಲು ಹರಿದಾಸಪಂಥದ ಕೇಂದ್ರವು ಹಂಪಿಯಲ್ಲಿದ್ದುದು ಈಗ ಮಂತ್ರಾಲಯದ ನೆರೆಯಲ್ಲಿ ಮಳಖೇಡ, ಮಾನ್ವಿ, ಕಾಖಂಡಿಕಿ, ಲಿಂಗಸುಗೂರು ಮೊದಲಾದ ಊರುಗಳಲ್ಲಿ ನಿಂತಿತು. ಅಲ್ಲೆಲ್ಲ ಹರಿದಾಸರು ಹುಟ್ಟಿಕೊಳ್ಳತೊಡಗಿದರು. ಇದು ಹರಿದಾಸಪಂಥದ ಎರಡನೆಯ ಹಂತ. ಎರಡೂ ಹಂತಗಳಿಗೆ ಸ್ವರ್ಣಸೇತುವೆಯಂತೆ ಇದ್ದವರು ರಾಘವೇಂದ್ರ ಸ್ವಾಮಿಗಳು. ಮೊದಲನೆಯ ಹಂತದ ಹರಿದಾಸರೆಲ್ಲ ವ್ಯಾಸತೀರ್ಥರನ್ನು ಕೊಂಡಾಡಿದಂತೆ, ಎರಡನೆಯವರು ರಾಘವೇಂದ್ರಸ್ವಾಮಿಗಳನ್ನು ಕೊಂಡಾಡುತ್ತಾರೆ. ವಿಜಯದಾಸರ ನಂತರ ಬಂದ ಪರಂಪರೆಯಲ್ಲಿ ಈ ಸ್ವಾಮಿಗಳ ಮೇಲೆ ಮಾಡಿರುವ ಪದಗಳೇ ಹೆಚ್ಚಿವೆ. ವಿಜಯದಾಸರೂ ಅವರ ಸಮಕಾಲೀನರಾದ ಪ್ರಸನ್ನವೆಂಕಟದಾಸರೂ ರಾಘವೇಂದ್ರಸ್ವಾಮಿಗಳ ಭಕ್ತರೇ ಆದ್ದುದು ಗಮನಾರ್ಹವಾದ ವಿವರ.

ಆದರೆ ರಾಘವೇಂದ್ರಸ್ವಾಮಿಗಳ ದಾಸ ಪರಂಪರೆ ಉಳಿದು ಬರಲಿಲ್ಲ; ಹಳೆಯ ಹರಿದಾಸ ಪರಂಪರೆಗೆ ತಾವು ನೇರವಾಗಿ ಸೇರದಿದ್ದರೂ ಅದನ್ನು ಮತ್ತೆ ಮುಂದುವರೆಸಲು ಅಗತ್ಯವಾದ ಸ್ಫೂರ್ತಿಯನ್ನು ಒದಗಿಸಿದರು. ಪುರಂದರದಾಸರ ಕಾಲದಲ್ಲಿ ಪ್ರೌಢವಾಗಿ ಪಕ್ವವಾದ ಪರಂಪರೆ ನೂರಮೂವತ್ತು ವರ್ಷಗಳಷ್ಟು ಕಾಲ ಮರೆಯಾಗಿದ್ದು, ಮತ್ತೆ ವಿಜಯದಾಸರ ಕಾಲದಲ್ಲಿ ತಲೆಯೆತ್ತಿಕೊಂಡಿತು. ವಿಜಯದಾಸರಿಗೆ ಪುರಂದರದಾಸರೇ ಪರೋಕ್ಷವಾಗಿ ದೀಕ್ಷಾಗುರುಗಳು; ದಾಸಪಂಥದ ಎರಡನೆಯ ಹಂತ ಇಲ್ಲಿ ಆರಂಭವಾಗುತ್ತದೆ.

ವಿಜಯದಾಸರು ರಾಯಚೂರು ಜಿಲ್ಲೆಯ ಚೀಕಲಪರಿವಿಯವರು; ಈ ಹಳ್ಳಿ ಮಾನ್ವಿಯ ಬಳಿಯಿದೆ. ತುಂಗಭದ್ರೆ ಅಲ್ಲಿ ಹರಿದು, ಶ್ರೀಪಾದರಾಜರಿಂದಲೇ ಪ್ರತಿಷ್ಠೆಗೊಂಡ ಅಶ್ವತ್ಥ ನರಸಿಂಹನಿಂದ ಕ್ಷೇತ್ರವೆನಿಸಿದ್ದಿತು. ಇಲ್ಲಿ ೧೬೮೭ರಲ್ಲಿ ಹುಟ್ಟಿದ ದಾಸಪ್ಪ ವ್ಯಾಸಕಾಶಿಗೆ ಹೋಗಿದ್ದಾಗ ಅಲ್ಲಿ ಸ್ವಪ್ನದಲ್ಲಿ ಪುರಂದರದಾಸರು 'ವಿಜಯ' ಎಂಬ ಅಂಕಿತವನ್ನು ಆತನ ನಾಲಗೆಯ ಮೇಲೆ ಬರೆದು 'ಹರಿದಾಸನಾಗೆ'ಂದು ಹರಸಿದರಂತೆ. ಇದು ಅವರ ಬದುಕಿನಲ್ಲಿ ಮಾರ್ಪಾಡನ್ನು ತಂದು, ಅವರಿಗೆ ಶಾಸ್ತ್ರಜ್ಞಾನವನ್ನೂ ಕವಿತಾಶಕ್ತಿಯನ್ನೂ ದೃಢಭಕ್ತಿಯನ್ನೂ ಒದಗಿಸಿತು. ಮುಂದೆ ಅವರು ವಿಜಯದಾಸರೆಂದು ಪ್ರಸಿದ್ಧರಾಗಿ, ದೇಶದಲ್ಲೆಲ್ಲ ಅಲೆದಾಡಿ ಇಪ್ಪತ್ತೈದು ಸಾವಿರ ದೇವರನಾಮಗಳನ್ನು ರಚಿಸಿ, ಶಿಷ್ಯ ಕೋಟಿಯನ್ನು ಸಂಪಾದಿಸಿ, ದಾಸಕೂಟವನ್ನು ಮತ್ತೆ ಕಟ್ಟಿದರು. ಮೂರು ಬಾರಿ ಕಾಶಿಗೆ ಕಾಲುನಡಿಗೆಯಲ್ಲಿಯೇ ಹೋಗಿ ಅಲ್ಲಿಂದ ಗಂಗೆಯನ್ನು ತಮ್ಮ ಹೆಗಲಮೇಲೇ ಹೊತ್ತು ತಂದು, ಬಳ್ಳಾರಿಜಿಲ್ಲೆಯ ಆಲೂರು ತಾಲ್ಲೂಕಿಗೆ ಸೇರಿದ ಚಿಪ್ಪಗೇರಿಯೆಂಬ ಹಳ್ಳಿಯಲ್ಲಿ ಹೊಂಡವೊಂದರಲ್ಲಿ ಹಾಕಿ ಅದನು ತೀರ್ಥವನ್ನಾಗಿಸಿದರು; ತಮ್ಮ ಕಡೆಗಾಲವನ್ನು ಅಲ್ಲಿಯೇ ಕಳೆದು, ೧೭೫೫ರಲ್ಲಿ ತೀರಿಕೊಂಡರು.

ಮೊದಲಲ್ಲಿ ಕಡುಬಡತನವನ್ನು ಅನುಭವಿಸಿದರಾದರೂ, ಹರಿದಾಸದೀಕ್ಷೆಯನ್ನು ಪಡೆದನಂತರ ಅಪಾರವಾದ ಸಂಪತ್ತನ್ನು ಪಡೆದರು. ನಾಡಿನಲ್ಲೆಲ್ಲ ಮಾನ್ಯತೆ ಗಳಿಸಿದರು. ಆದರೆ ಸಂಪತ್ತನ್ನೆಲ್ಲ ದಾನಮಾಡಿ ದಿಟವಾಗಿ ಹರಿದಾಸಮನೋಧರ್ಮದಿಂದಲೇ 'ನಾಳೆಗಿಡದ' ಭಗವದ್ಭಕ್ತಿಯೊಂದೇ ಧನವಾಗಿ ಸಮಾಧಾನದಿಂದ ದೇಹವನ್ನಿಟ್ಟರು. ಕುಟುಂಬದ ಕಷ್ಟಗಳು, ಹರಿದಾಸ್ಯದ ಸುಖ, ದೇಶಸಂಚಾರದಿಂದ ಬಂದ ವ್ಯುತ್ಪತ್ತಿ, ಆಳವಾದ ಚಿಂತನೆ ಇವುಗಳಿಂದ ಅವರ ವ್ಯಕ್ತಿತ್ವ ಮೆರುಗುಕೊಟ್ಟ ಬಂಗಾರದಂತೆ ಆಗಿ, ಅವರ ಸಾಹಿತ್ಯ ಪ್ರಗಲ್ಭವಾಗಿದೆ. ಅವರ ಪದಗಳೂ, ಸುಳಾದಿಗಳೂ ಪುರಂದರದಾಸರ ಕೃತಿಗಳಂತೆ ಉನ್ನತಮಟ್ಟದಲ್ಲಿವೆ. ಇವರ ಕಾಲದಲ್ಲಿ ಹರಿದಾಸಸಾಹಿತ್ಯ ಮತ್ತೆ ಜನಪ್ರಿಯವಾಯಿತು, ಸಾರ್ಥಕವಾಯಿತು, ಪುಷ್ಟವಾಯಿತು. ವಿಜಯದಾಸರಿಗೆ ಮೊದಲಲ್ಲಿ ಶಾಸ್ತ್ರಪಾಂಡಿತ್ಯವೇನಿರಲಿಲ್ಲ; ಅವರು ಪಡೆದುಕೊಂಡ ಜ್ಞಾನ ಗ್ರಂಥಗಳಿಂದ ಬಂದುದಲ್ಲ, ಅನುಭವದಿಂದ ಬಂದುದು. ಭಕ್ತಿಯಿಂದ ಚೇತನ ಶುದ್ಧವಾಗಿ, ಈ ಸತ್ತ್ವಶುದ್ಧಿಯಿಂದ ಜ್ಞಾನ ತಾನಾಗಿ ಒದಗಿಬಂದಿತು. ಹೀಗಾದುದರಿಂದ ಇವರ ಮಾತಿನಲ್ಲಿ ಅಪೂರ್ವವಾದ ಒಂದು ತೇಜಸ್ಸಿದೆ, ಸ್ವಾರಸ್ಯವಾದ ಸರಳತೆಯಿದೆ. ಜನ ಅವರನ್ನು ಮೆಚ್ಚಿಕೊಂಡುದು ಇದಕ್ಕಾಗಿ.

ಪುರಂದರದಾಸರ ಜೀವನಚರಿತ್ರೆಯನ್ನು ನಮಗೆ ಮೊಟ್ಟಮೊದಲಬಾರಿಗೆ ಒದಗಿಸಿದವರು ವಿಜಯದಾಸರೇ; ಪುರಂದರದಾಸರ ಪದಗಳನ್ನೂ ಸುಳಾದಿಗಳನ್ನೂ ವಿಶೇಷವಾಗಿ ಹಾಡುವ ಪದ್ಧತಿಯೂ ಅವರಿಂದಲೇ ಆರಂಭವಾಯಿತು. ಪುರಂದರದಾಸರ ಕೊಡುಗೆ ನಮಗೆ ಇಂದು ಲಭ್ಯವಾಗಿರುವುದು ವಿಜಯದಾಸರಿಂದಲೇ. ನೂರಾರು ವರ್ಷಗಳ ಅಂತರವಿದ್ದರೂ ಗುರು-ಶಿಷ್ಯ ಸಂಬಂಧ ಸಾರ್ಥಕವಾಯಿತು; ಗುರುಗಳು ಬೆಳೆಸಿದ ಗಿಡವನ್ನು ಶಿಷ್ಯ ನೀರೆರೆದು ಕಾಪಾಡಿ ಮರವಾಗಿಸಿದರು. ದಾಸಕೂಟ ಉಳಿಯಿತು, ಬೆಳೆಯಿತು.

ಸಾಂಪ್ರದಾಯಿಕವಾದ ಶಿಕ್ಷಣವಿಲ್ಲದಿದ್ದರೂ ವಿಜಯದಾಸರು ವೇದಾಂತದ ಪ್ರಮೇಯಗಳನ್ನೆಲ್ಲ ತಮ್ಮ ಪದಗಳಲ್ಲಿ ಬಳಸಿಕೊಂಡಿರುವುದೂ, ಗಹನವಾದ ತತ್ತ್ವ ವಿಚಾರಗಳನ್ನು ಸುಬೋಧವಾಗುವಂತೆ ತಿಳಿಯಪಡಿಸಿರುವುದೂ ಸ್ವಾರಸ್ಯವಾಗಿದೆ. ದೇವರು ಬಿಂಬವಾದರೆ, ಅವನ ಪ್ರತಿಬಿಂಬವು ಜೀವನ ಸ್ವರೂಪ. ದೇಹವೆನ್ನುವ ಕನ್ನಡಿಯಲ್ಲಿ ಬೀಳುವಾಗ ಬೇಕಾಗುವ ಬೆಳಕು ದೇವರ ಮಾಯೆ ಯನಿಸಿಕೊಳ್ಳುತ್ತದೆ. 'ತರಣಿ' (ಎಂದರೆ ಸೂರ್ಯ) ಉದ್ಭವವಾಗೆ ಆತನ ಪ್ರಕಾಶ ಮರದ ಮೇಲೆ ಬೀಳಲದರ ನೆರಳು ಕಪ್ಪು ತೆರನಾಗಿ ತೋರಲು, ಅಲ್ಲಿದ್ದ ದೋಷ ಭಾಸ್ಕರನಿಂದ ಬಂದದ್ದೇ, ಮರದ ತಪ್ಪೇ; ತರಣಿ ಪ್ರಕಾಶ ಮರದ ಮೇಲೆ ಬಿದ್ದಂತೆ ನಿರುತ ಎನ್ನ ಮೇಲೆ ಬಿದ್ದಿಹುದೋ ಪರಿಪೂರ್ಣಮಾರುತಿ ವಿಜಯವಿಠ್ಠಲ ಕರುಣಾಶರಧಿ ನಿನ್ನ ಮಾಯಕ್ಕು ನಿನಗೂ ಭೇದವಿಲ್ಲ' ಎಂದು ಅಭಯಸುಳಾದಿಯಲ್ಲಿ ಬರುತ್ತದೆ. ಹೀಗೆ ವಿಜಯದಾಸರು ದಾರ್ಶನಿಕತತ್ವಗಳನ್ನು ಸರಳವಾಗಿ ಹೇಳುವ ರೀತಿಯನ್ನು ಪುರಂದರದಾಸರಿಂದ ಪರಿಗ್ರಹಿಸಿ ಬೆಳೆಸಿದರು.

ತಮ್ಮ ಬಾಳಿನ ಮೊದಲ ಭಾಗವೆಲ್ಲ ಬಡತನದಲ್ಲಿ, ಅವಮಾನದಲ್ಲಿ ಕಳೆದರಾಗಿ ಬದುಕಿನ ಬಗ್ಗೆ ಜುಗುಪ್ಸೆ ಅವರ ಪದಗಳಲ್ಲಿ ಕಾಣಬರುವುದು ಸಹಜವೇ 'ಶರೀರವು ಗಾಳಿಗೊಡ್ಡಿದ ದೀಪ'; 'ಜನಿಸಲಾರೆನು ಜಗದೊಳಗೆ ಹರಿಯ' ಕನಸಿನೊಳು ನೆನೆಯೆ ಕಂಪನವಾಗುತಿದೆ ಮನಕೆ' ; 'ಬಿಂದು

ಮಾತ್ರವೋ ಸುಖವು, ದುಃಖ ಪರ್ವತದಷ್ಟು.' ಆದರೆ 'ಹರಿ ಮಾಡಿದ ಮರ್ಯಾದೆ ಅನುಭವಿಸಲೇಬೇಕು.' ಆದುದರಿಂದ 'ದೈವವೆ ಕುಣಿಸಿದರೆ ಕುಣಿವೆ, ನಗಿಸಿದರೆ ನಗುವೆ, ಮಣಿಸಿದರೆ ಮಣಿವೆ. ಅಳಿಸಿದರೆ ಅಳುವೆ, ಉಣಿಸಿದರೆ ಉಣುವೆ, ಉಡಿಸಿದರೆ ಉಡುವೆ' (ದೀಕ್ಷಾಸುಳಾದಿ) ಎನ್ನುವ ಮನೋವೃತ್ತಿಯನ್ನು ಬೆಳಸಿಕೊಂಡರು. 'ನಿರ್ವಾಣದಾಯಕ ವಿಜಯವಿಠ್ಠಲರೇಯ ನಿರ್ವಾಹ ಕರ್ತನು. ನಮಗಾವ ಭಯವಿಲ್ಲ' (ಭಕ್ತಿಸುಳಾದಿ) ಎಂದು ಧೈರ್ಯತಂದುಕೊಂಡರು.

ಮನಸ್ಸನ್ನು ನಿಲ್ಲಿಸದೆ ಜ್ಞಾನವಿಲ್ಲ, ಜ್ಞಾನವಿಲ್ಲದೆ ಮೋಕ್ಷವಿಲ್ಲ. ಆದರೆ ಮನಸ್ಸನ್ನು ನಿಲ್ಲಿಸುವುದು ಎಷ್ಟು ಕಷ್ಟವೆಂಬುದು ಎಲ್ಲರಿಗೂ ತಿಳಿದಿದೆ. ಮುರುದೋಡಿಬರುವ ರಣರಂಗ ನಿಲ್ಲಿಸಬಹುದು, ಹರಿಯುತಿಹ ನದಿಗಳಾ ತಿರುಗಿಸಬಹುದು, ಹರಿದೋಡುವ ಮನಸ್ಸು ನಿಲಿಸಲಾರಳವಲ್ಲ.' ಮನಸ್ಸಿನಲ್ಲಿರುವ ಕೊಳೆಗಳನ್ನು ತೊಳೆದರೆ ಅದನ್ನು ನಿಲ್ಲಿಸುವುದು ಸುಲಭ; ಹೀಗೆ ಮಾಡಲು ವೈರಾಗ್ಯ, ಸಾಧುಸಂಗ ಮೊದಲಾದುವು ನೆರವಾಗುತ್ತವೆ. 'ಎಲೆ ಮನವೆ, ನಿತ್ಯಮಲವ ತೊಳೆಯದೆಲೆ ಹಲವು ಕರ್ಮಗಳ ಒಲಿದು ಮಾಡಿದರೇನು?', ಮನಸ್ಸನ್ನು ದೃಢಭಕ್ತಿಯಲ್ಲಿ ನಿಲ್ಲಿಸಿ ಬಿಂಬೋಪಾಸನೆ ಮಾಡುತ್ತ ಹರಿದಾಸರು ಅಂತರಂಗದಲ್ಲಿಯೇ ಹರಿಯನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾರೆ; ಮುಕ್ತಿ ಒಡಲಲ್ಲೇ ಇದೆ, 'ವೈಕುಂಠವೆಂಬುದು ಅಲ್ಲೆ, ಬರಿದೆ ಲೌಕಿಕ ತೊರೆದರೆ ಇಪ್ಪೋದೆ ಇಲ್ಲೆ.'

ವಿಜಯದಾಸರ ಕಾಲದಲ್ಲಿಯೇ ಇದ್ದ ಇನ್ನೊಬ್ಬ ಪ್ರಸಿದ್ಧ ಹರಿದಾಸರು ಪ್ರಸನ್ನವೆಂಕಟದಾಸರು. ವಿಜಯದಾಸರಿಗೆ ಮೂರು ವರ್ಷ ಮೊದಲೇ, ಎಂದರೆ ೧೭೫೨ರಲ್ಲಿ, ಇವರು ತೀರಿಕೊಂಡಂತೆ ತಿಳಿದುಬರುತ್ತದೆ; ಆಗ ಅವರಿಗೆ ಎಪ್ಪತ್ತೆರಡು ವರ್ಷಗಳಾಗಿದ್ದುವಂತೆ. ವಿಜಯದಾಸರು ೧೭೫೫ರಲ್ಲಿ ತೀರಿಕೊಳ್ಳುವಾಗ ಅವರಿಗೆ ಅರವತ್ತೆಂಟು ವರ್ಷಗಳಷ್ಟೆ. ಪ್ರಸನ್ನವೆಂಕಟದಾಸರು ಬಿಜಾಪುರ ಜಿಲ್ಲೆಯ ಬಾಗಲಕೋಟೆಯ ಬಳಿಯಿರುವ ಕಾಖಂಡಿಕಿ ಎನ್ನುವ ಹಳ್ಳಿಯವರು. ಎಳೆಯ ವಯಸ್ಸಿನಲ್ಲಿಯೇ ತಂದೆ-ತಾಯಿಯರು ತೀರಿಕೊಳ್ಳಲು. ಇವರು ಬವಣೆಬಟ್ಟು ಬೇಸರದಿಂದ ತಿರುಪತಿಗೆ ಹೋಗಿದ್ದಾಗ ಅಲ್ಲಿ ನೆರೆದಿದ್ದ ಹರಿದಾಸರನ್ನು ಕಂಡು ತಾನೂ ಹರಿದಾಸನಾಗಬೇಕೆಂದು ನಿಶ್ಚಯಿಸಿದರು. ಸ್ವಾಮಿಪುಷ್ಕರಿಣಿಯಲ್ಲಿ ಸ್ನಾನ ಮಾಡಿ ಪ್ರಾಯೋಪವೇಶವ್ರತನವನ್ನು ಹಿಡಿದು ವೇಂಕಟೇಶನ ಮುಂದೆ 'ಪ್ರಾಣಾಚಾರಿಯಾಗಿ ಬಿದ್ದ ಇವರಿಗೆ ವೇಂಕಟೇಶನೇ ಹರಿದಾಸದೀಕ್ಷೆಯನ್ನು ಕೊಟ್ಟನೆಂದು ಪ್ರತೀತಿಯಿದೆ. ಅಲ್ಲಿಯವರೆಗೆ ಶುದ್ಧಶುಂಠರಾಗಿದ್ದವರಿಗೆ ಇದ್ದಕ್ಕಿದ್ದಂತೆ ದಿವ್ಯಜ್ಞಾನವೂ, ಶಾಸ್ತ್ರ ಪರಿಚಯವೂ, ಕವಿತಾಸಾಮರ್ಥ್ಯವೂ ಒದಗಿದುವು.

ಇವರಿಗೂ ವಿಜಯದಾಸರಿಗಿದ್ದಂತೆ ಪುರಂದರದಾಸರ ವಿಚಾರವಾಗಿ ತುಂಬು ಭಕ್ತಿಯಿದ್ದಿತು: 'ತಂದೆ ಪುರಂದರದಾಸರ ನಮಿಸುವೆ' ಎಂದು ಅವರನ್ನೇ ಆದರ್ಶವಾಗಿಟ್ಟುಕೊಂಡಿದ್ದರು. 'ವಿಠ್ಠಲನ್ನ ಪ್ರೀತಿಪಡಿಸಲು' ಪುರಂದರದಾಸರು ರಚಿಸಿದ್ದ 'ಗೀತತಾಯ ಸುಳಾದ್ಯುಗಾಭೋಗ ಪದ್ಯಪದ'ಗಳನ್ನೆಲ್ಲ ಮನನಮಾಡಿ, ಸ್ಫೂರ್ತಿ ಪಡೆದು, ತಾವೂ ಕೃತಿರಚನೆಗೆ ಕೈಯಿಟ್ಟರು. ಪದಗಳನ್ನೂ, ಉಗಾಭೋಗಗಳನ್ನು, ಸುಳಾದಿಗಳನ್ನು, ಮಂಗಳಗಳನ್ನೂ ರಚಿಸಿದ್ದಾರೆ; ಜಾನಪದ ಧಾಟಿಯನ್ನು ಹಿಡಿದು ಸುವ್ವಾಲಿಗಳನ್ನು ಬರೆದಿದ್ದಾರೆ. ಇವರ ಮುದ್ರೆ 'ಪ್ರಸನ್ನ ವೆಂಕಟ' ಎಂದು. ಅವರದೆಂದು ಸುಮಾರು ಇನ್ನೂರು ಪದಗಳು ಧಾರವಾಡ - ಬಿಜಾಪುರ ಪ್ರಾಂತಗಳಲ್ಲಿ ಬಳಕೆಯಲ್ಲಿವೆ. ಇವುಗಳಲ್ಲಿ

ವಾತ್ಸಲ್ಯ, ಆರ್ತ, ವ್ಯಾಕುಲ, ಸಖ್ಯ, ಶಾಂತ, ದಾಸ್ಯಭಾವಗಳ ಸೊಗಸಾದ ನಿರೂಪಣೆಯಿದೆ. ಬಳಸುವ ಮಾತು ಸರಳವಾಗಿದ್ದು ನೇರವಾಗಿ ಮನಮುಟ್ಟುತ್ತದೆ. ದಿನಬಳಕೆಯ ಮಾತನ್ನೇ ಬಳಸಿರುವುದು ಅವರ ಪದಗಳ ಸ್ವಾರಸ್ಯ.

ಪದಗಳಲ್ಲದೆ ಇವರು ಕೆಲವು ಪ್ರಬಂಧಗಳನ್ನೂ ರಚಿಸಿದ್ದಾರೆ. ಭಾಮಿನೀ ಷಟ್ಪದಿಯಲ್ಲಿ ೭೧ ನುಡಿಗಳ 'ಸಮಸ್ತನಾಮ ಮಣಿಗಣಷಟ್‌ಚರಣ ಪದ್ಯಮಾಲೆ' ಸ್ವಾರಸ್ಯವಾದ ಪ್ರಬಂಧ. ದೇವತಾಸ್ತೋತ್ರದ ವ್ಯಾಜದಲ್ಲಿ ವರ್ಣಮಾಲೆ, ಮಹಾಭೂತಗಳು, ಶಬ್ದ, ರಾಶಿಗಳು, ನಕ್ಷತ್ರಗಳು, ದಶಾವತಾರ ಮೊದಲಾದ ವಿವರಗಳು ಬರುತ್ತವೆ ಇಲ್ಲಿ. ತೊಂಬತ್ತೊಂಬತ್ತು ನುಡಿಗಳ 'ನಾರದ ಕೊರವಂಜಿ' ಗಾಯನಕ್ಕೆ ಒಪ್ಪುವ, ಅಧ್ಯಾತ್ಮಪರವಾದ ಕೊರವಂಜಿಯ ವರ್ಣನೆ; ಕೊರವಂಜಿಯ ರೂಪವನ್ನು ಧರಿಸಿದ ನಾರದರು ರುಕ್ಮಿಣಿಯಲ್ಲಿ ಕೃಷ್ಣನ ಬಗ್ಗೆ ಆಸಕ್ತಿಯನ್ನು ಹುಟ್ಟಿಸಿದುದು ಈ ಪ್ರಬಂಧದ ವಸ್ತು. ನಾರಾಯಣನನ್ನು ನಾದದಿಂದ ವಶಪಡಿಸಿಕೊಳ್ಳಲು ನಲವತ್ತು ನುಡಿಗಳಲ್ಲಿ 'ನಾರಾಯಣ ಪಂಜರ'ವನ್ನು ಬರೆದರು. ಇಪ್ಪತೊಂಬತ್ತು ನುಡಿಗಳ 'ಕೃಷ್ಣ ಪಾರಿಜಾತ' (ಅಥವಾ 'ಸತ್ಯಭಾಮಾವಿಲಾಸ') ವೂ ಅವರ ರಚನೆಯೇ. ಅವರ ಕೃತಿಗಳಲ್ಲಿ ಪ್ರಸಿದ್ಧವಾದುದೆಂದರೆ 'ಕನ್ನಡಭಾಗವತ'; ದಶಮಸ್ಕಂಧ ಪೂರ್ವಾರ್ಧದಲ್ಲಿನ ನಲವತ್ತು ಮೂರು ಅಧ್ಯಾಯಗಳಲ್ಲಿ ಬರುವ ಕೃಷ್ಣ ಲೀಲೆ ಇಲ್ಲಿನ ಮುಖ್ಯವಸ್ತು. ಕನ್ನಡಿಸುವಾಗ ಸ್ವತಂತ್ರವಾಗಿ ವರ್ತಿಸಿದ್ದಾರೆ. ಕಾಲಕ್ಕೆ ಅನುಗುಣವಾಗಿ, ತಮ್ಮ ಉದ್ದೇಶಕ್ಕೆ ಉಚಿತವಾಗಿ, ವಸ್ತುವನ್ನೂ ವರ್ಣನೆಗಳನ್ನೂ ಮಾರ್ಪಡಿಸಿ ಕೊಂಡಿದ್ದಾರೆ. ಅನಗತ್ಯವೆನಿಸಿದ ವಿವರಗಳನ್ನು ಬಿಟ್ಟು, ಬೇಕಾದುವುಗಳನ್ನೂ ತಮ್ಮ ಕಾಲದ ಜನರಿಗೆ ಹಿಡಿಸುವಂತೆ ಮೂಡಿಸಿರುವುದು ಅವರ ಜಾಣತನ.

ಇವರ ಕೃತಿಗಳನ್ನು ಧಾರವಾಡದ ಮಿಂಚಿನಬಳ್ಳಿಯ ಕಾರ್ಯಾಲಯದವರು ಅಚ್ಚು ಮಾಡಿದ್ದಾರೆ. ಸಂಸಾರದಲ್ಲಿ ವಿರಕ್ತಿಯ ಅಗತ್ಯ ಇವರ ಪದಗಳಲ್ಲಿ ಎದ್ದು ಕಾಣುವ ವಿವರ. 'ನೆಚ್ಚಿಕೆಯಿಲ್ಲದ ದೇಹ ನಂಬಲಿ ಬೇಡಿರೋ', 'ಕಾಡದಿರೆನ್ನ ಕಿಡಿಗೇಡಿ ಮನವೇ'; 'ಇರಬರಲಿಲ್ಲ ಬಂದರೂ ಇರಲಿಲ್ಲ ಈ ಶರೀರ'; 'ಈ ದೇಹ ಮನವೆ ಖಾಳಿ ದೀಪಾ', ಇದನ್ನೇ ನಂಬಿದರೆ 'ಹೀಗಾದರೆ ದೂರಾ ಪರಗತಿ', 'ಚಂಚಲಿಸದೆ ನೀನು ಚತುರನಾಗು, ವಂಚಿಸದೆ ಸಕಲನೊಪ್ಪಿಸು ಹರಿಗೆ ಮನವೆ; 'ಮರೆಯದಿರು ಮನವೆ ಮಾಧವನಾ, ನಮ್ಮ ದುರಿತ ದಾರಿದ್ರವನು ಹರಿಸಿ ಹೊರುವವನಾ'; 'ಮುಂದೋರುವನು ಮುರಾರಿ'. ಸರಳಮನಸ್ಸಿನ ದಾಸರಿಗೆ ಯೋಗಮಾರ್ಗವೂ ಸರಳವೇ. 'ಯೋಗವೆಂದರದಾವುದು ಮಾನಿಸಾಗೆ, ನಾಗಶಯನನ ನಾಮವ ಕೂಗುವದೆ ಮಹಾಯೋಗ!' ಹೀಗಾದರೆ 'ಅಂಜಿಕ್ಯಾಕೆನಗಂಜಿಕಿ?... ಅಶನವಸನವನ್ನು ಕುಳಿತಲ್ಲೆ ನಡಿಸುವ, ನಿಶಿದಿನ ನೀಚರಾಧೀನ ಮಾಡದೆ, ಹಸನಾಗಿ ತನ್ನಂಘ್ರಿನೆಳಲೊಳು ಬಚ್ಚಿಟ್ಟು, ಕುಶಲದಿ ಸಾಕುವ ದೊರೆಯ ನಂಬಿದ ಬಳಿಕ.'

ಪ್ರಸನ್ನ ವೆಂಕಟದಾಸರೂ ಪುರಂದರದಾಸರಂತೆ ಸಾಮಾಜಿಕಶುದ್ಧಿಗೆ, ವ್ಯಕ್ತಿಯ ಚಾರಿತ್ರ್ಯಕ್ಕೆ ತುಂಬ ಬೆಲೆ ಕೊಟ್ಟರು. ತಾವು ಕಂಡ ಬೂಟಕತವನ್ನು ಅಷ್ಟೇ ಕಟುವಾಗಿ ಖಂಡಿಸಿದರು. 'ದಶಜಪ ಮಾಡಲಾಗದವಗೆ ಮುಸುಕಿನ ಜಂಭವ್ಯಾಕೆ?' 'ಕಂಡ ನಾರಿಯರ ಬಯಸುವ ಲಂಡಗೆ

ಪುರಾಣವ್ಯಾಕೆ?'; 'ಕದ್ದು ಹೊಟ್ಟೆ ಹೊರೆವಗೆ, ನಿಷಿದ್ಧ ಶೀಲಕೃತ್ಯಾತಕ?' ಹೊಲೆಯರು ಯಾರು? 'ಹೊಲೆಯ ಹೊಲತಿ ಇವರವರಲ್ಲ, ಹೊಲಗೇರಿಯೊಳು ಹೊಲೆದು ಹೊಲ್ಲತಿಲ್ಲ, ಹುಸಿ ನುಡಿಯುವವನೆ ಹೊಲೆಯ, ಹೊಲಸು ತಿಂಬುವನೆ ಹೊಲೆಯ! ಸಾಮಾನ್ಯ ಜನರ ರೀತಿನೀತಿಗಳೇ ಸದಾಚಾರವೆಂದು ಭ್ರಮಿಸಬಾರದೆಂದು ದಾಸರು ಹೇಳಿದರು: 'ಸುಡು ನಂಬಲಿಬಾರದು ಸಂತೆಯವರಾ' ವಿಚಾರಮಾಡಿ ಸರಿಯಾದುದನ್ನರಿಯಬೇಕು. 'ಬುದ್ಧಿ, ಧೃತಿಯೆಂಬ ನಾರೇರು ಶ್ರೀಮುದ್ದು ಕೃಷ್ಣನ ಒಲಿಸಿಕೊಂಡಾರು.'

ಪ್ರಸನ್ನ ವೆಂಕಟದಾಸರ ಪರಂಪರೆ ಬೆಳೆದುಬಂದಂತೆ ಕಾಣುವುದಿಲ್ಲ. ಆದರೆ ವಿಜಯದಾಸರ ಶಿಷ್ಯಕೋಟಿ ವಿಪುಲವಾಗಿದ್ದು ಅದರಲ್ಲಿ ಪ್ರತಿಭಾವಂತರೂ ಇದ್ದುದರಿಂದ ಅವರ ಪರಂಪರೆ ಬೆಳೆಯಿತು. ವಿಜಯದಾಸರ ಶಿಷ್ಯರಲ್ಲಿ ಹನ್ನೆರಡು ಮಂದಿಯಾದರೂ ಪ್ರಖ್ಯಾತರಾದವರಿದ್ದರು: ಇವರೆಲ್ಲರೂ ಹರಿದಾಸರಾಗಿ ದೇವರನಾಮಗಳನ್ನು ತಂತಮ್ಮ ಮುದ್ರಿಕೆಗಳಲ್ಲಿ ರಚಿಸಿದ್ದಾರೆ. ಮೋಹನ ವಿಠಲ, ಗುರುವಿಜಯ ವಿಠಲ, ಹಯವದನವಿಠಲ, ಮುದ್ದುವಿಠಲ, ರಾಮಚಂದ್ರವಿಠಲ, ವೇಣುಗೋಪಾಲವಿಠಲ, ಗುರುಮಧ್ವೇಶವಿಠಲ, ವಾಸುದೇವ ವಿಠಲ ಎನ್ನುವ ಮುದ್ರಿಕೆಗಳಲ್ಲಿ ಬರೆದಿರುವ ದೇವರನಾಮಗಳು ವಿಜಯದಾಸರ ಶಿಷ್ಯರವೇ. ಇವರಲ್ಲಿ ಐವರು ತಂತಮ್ಮ ಪರಂಪರೆಗಳನ್ನು ಬೆಳೆಸಿ ವಿಜಯದಾಸರ ಹೆಸರನ್ನು ಉಳಿಸಿದ್ದಾರೆ :'ಗೋಪಾಲವಿಠಲ' ಮುದ್ರಿಕೆಯ ಭಾಗಣ್ಣ, 'ವೇಣುಗೋಪಾಲ' ಮುದ್ರಿಕೆಯ ತಿಮ್ಮಣ್ಣ, 'ಮೋಹನ ವಿಠಲ' ಮುದ್ರಿಕೆಯ ಮೋಹನದಾಸರು, 'ವ್ಯಾಸವಿಠಲ' ಮುದ್ರಿಕೆಯ ಕಲ್ಲೂರು ಸುಬ್ಬಣ್ಣ ಮತ್ತು 'ವಾಸುದೇವವಿಠಲ' ಮುದ್ರಿಕೆಯ ಐಜಿ ವೆಂಕಟರಾಮಾಚಾರ್ಯ. ಈ ಐವರಲ್ಲಿ ಮುಖ್ಯರಾದವರು ಮೂವರು - ಭಾಗಣ್ಣ (ಗೋಪಾಲದಾಸರು). ಮೋಹನದಾಸರು, ಮತ್ತು ತಿಮ್ಮಣ್ಣ (ವೇಣುಗೋಪಾಲದಾಸರು). ಇವರನ್ನು 'ಭಕ್ತಿಯಲಿ ಭಾಗಣ್ಣ, ಶಕ್ತಿಯಲಿ ತಿಮ್ಮಣ್ಣ, ಯುಕ್ತಿಯಲಿ ಮೋಹಣ್ಣ,' ಎಂದು ಬಣ್ಣಿಸುವ ಮಾತು ದಾಸಕೂಟದವರಲ್ಲಿದೆ.

ಭಾಗಣ್ಣ ಅಥವಾ ಗೋಪಾಲದಾಸರು (೧೭೨೧-೧೭೬೨) ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನಲ್ಲಿರುವ ಮೊಸರುಕಲ್ಲು ಎನ್ನುವ ಹಳ್ಳಿಯವರು. ತಂದೆ ತೀರಿಕೊಂಡಾಗ ಎಳೆಯ ವಯಸ್ಸಿನಲ್ಲಿದ್ದ ಇವರು ತಾಯಿಯೊಡನೆ ಕಡು ಬಡತನದಲ್ಲಿ ಬಾಳುತ್ತ ಗಾಯತ್ರೀಮಂತ್ರದ ಪುರಶ್ಚರಣದಿಂದ ಕವಿತಾಶಕ್ತಿಯನ್ನೂ ಅಪಾರ ಸಂಪತ್ತನ್ನೂ ಪಡೆದವರೆಂದು ಐತಿಹ್ಯವಿದೆ. ಗದ್ವಾಲದ ಅರಸನು ಇವರನ್ನು ಸನ್ಮಾನಿಸಿದ್ದನಂತೆ. ಉತ್ತನೂರಿನಲ್ಲಿ ತನ್ನ ಕುಲದೇವತೆಯಾದ ವೇಂಕಟೇಶನ ಗುಡಿಯಲ್ಲಿ ನರ್ತನ ಸೇವೆ ನಡೆಸುತ್ತ 'ವೆಂಕಟಕೃಷ್ಣ' ಎನ್ನುವ ಅಂಕಿತದಿಂದ ಕವಿತೆಗಳನ್ನು ಮಾಡುತ್ತಿದ್ದರಂತೆ. ದೈವವಶದಿಂದ ಇವರಿಗೆ ವಿಜಯದಾಸರ ಸಂಪರ್ಕವುಂಟಾಗಿ ಅವರಿಂದ ಹರಿದಾಸದೀಕ್ಷೆಯನ್ನು ಪಡೆದರು. ಭಕ್ತಿಮಾರ್ಗವನ್ನು ದೃಢವಾಗಿ ಹಿಡಿದು, ಹರಿಯ ಅನನ್ಯ ಚಿಂತನೆಯಿಂದ ನೂರಾರು ಪದಗಳನ್ನೂ, ಸುಳಾದಿಗಳನ್ನೂ ಭಾವಪೂರ್ಣವಾಗಿ ರಚಿಸಿದ್ದಾರೆ; ಇವುಗಳಲ್ಲಿ 'ಗೋಪಾಲವಿಠಲ' ಎನ್ನುವ ಮುದ್ರಿಕೆ ಕಾಣಬರುತ್ತದೆ. 'ವೆಂಕಟಕೃಷ್ಣ' ಅಂಕಿತವಿರುವ ಮೊದಲ ಕವಿತೆಗಳೂ ಕೆಲವು ಉಪಲಬ್ಧವಿವೆಯೆಂದು ಹೇಳುತ್ತಾರೆ.

ಹರಿದಾಸಸಾಹಿತ್ಯದಲ್ಲಿ ಗೋಪಾಲದಾಸರ ಕೃತಿಗಳಿಗೆ ವಿಶಿಷ್ಟವಾದ ಸ್ಥಾನವಿದೆ. ಅವರ ಕನ್ನಡ ಶೈಲಿ ಪ್ರೌಢವಾದುದು, ಅಚ್ಚುಕಟ್ಟಾದುದು. ರಸವತ್ತಾದುದು. ಬಳಸುವ ಭಾಷೆಯಲ್ಲಿ ಎಷ್ಟು ಲಾಲಿತ್ಯವೋ ಸೂಚಿಸುವ ಭಾವಗಳಲ್ಲಿ ಅಷ್ಟೇ ಗಾಂಭೀರ್ಯ. ಲಯಕ್ಕೆ ನಯವಾಗಿ ನಿಲ್ಲುವ ಪದ್ಯಧಾಟಿ ಆವರದ್ದು ; ಅವರ ಪದಗಳಲ್ಲಿಯೂ ಸುಳಾದಿಗಳಲ್ಲಿಯೂ ಸ್ವಾರಸ್ಯವಾದ ಪ್ರಯೋಗಗಳು ನಡೆದಿವೆ. ಉಗಾಭೋಗಗಳೂ ಹಾಗೆಯೇ ಹೊಸ ಛಂದಸ್ಸನ್ನು ಪಡೆದುಬಂದಿವೆ. 'ರಕ್ಷಿಸೊ ವೆಂಕಟಗಿರಿರಾಜ' ಎಂದು ಮೊದಲಾಗುವ ವೃತ್ತನಾಮದಲ್ಲಿ ಕಾಣುವ ಪದಬಂಧ ಮನೋಹರವಾದುದು.

ದೇವರೇ ಸ್ವತಂತ್ರನಾದರೂ ಜೀವನಿಗೂ ಒಂದು ಬಗೆಯ ಕರ್ತೃತ್ವ ಸ್ವಾತಂತ್ರ್ಯವಿದೆ. 'ಸರಿಬಂದ ವ್ಯಾಪಾರ ತಾವೆ ಮಾಡಿ ಎನ್ನ ಬರಿಯ ಲೆಕ್ಕಕೆ ಮಾತ್ರ ಗುರಿಯ ಮಾಡಿ'ರುವನು ದೇವರು. 'ಇಲ್ಲದ ಚಿಂತೆಗಳ ಚಿಂತಿಸಿ ಮನ ಅಲ್ಲ ತಿಂದಿಲಿಯಂದದಿ' ತಲ್ಲಣಿಸುತ್ತಿರುವಾಗ ಜೀವನು 'ನಿನ್ನ ಚಿತ್ತ ಎನ್ನ ಭಾಗ್ಯ ಇನ್ನು ಬೇರೆನಗಿಲ್ಲ.... ಎನ್ನದೆಂಬಹಂಕಾರವನ್ನು ಬಿಡಿಸೋ ಸ್ವಾಮಿ, ನೀನು ಕುಣಿಸಿದಂತೆ ನಾನು ಕುಣಿವೆನಯ್ಯಾ' ಎನ್ನುವ ನೆಲೆಯಲ್ಲಿ ನಿಲ್ಲುವನು; ನಾನೇ ಕರ್ತನೆಂಬುದು ವಿಪರೀತ ಜ್ಞಾನ; ದೇವರು 'ಸರ್ವಕಾರಕ' ರಕ್ಷಕ. ಸ್ವಾತಂತ್ರ್ಯ ಭ್ರಮೆಯು ಜೀವನಿಂದ ದೂರಾಗಬೇಕಾದರೆ ವಿರಕ್ತಿ, ಅಷ್ಟಾಂಗಯೋಗ, ಹಂಸೋಪಾಸನೆ, ವಿಷಯಸುಖಗಳಲ್ಲಿ ಹೇಯ ಬುದ್ಧಿ, ಸಾಧುಸಂಗ ಮೊದಲಾದುವನ್ನು ದಾಸರು ಸೂಚಿಸಿದ್ದಾರೆ. ದೇವರ ಸ್ವಾತಂತ್ರ್ಯವನ್ನು ಅನುಭವದಲ್ಲಿ ತಂದುಕೊಳ್ಳಬೇಕು. 'ತಿಳಿವೆಂಬುವ ನೀನೇ, ತಿಳಿದುತಿಳಿಸುವ ನೀನೇ, ತಿಳಿದ ವಸ್ತುವು ನೀನೇ ತೀರ್ಥಪದನೆ; ತಿಳಿದುದಕೆ ಫಲ ನೀನೇ, ತಿಳಿಯಗೊಡದವ ನೀನೇ, ತಿಳಿವ ಸ್ವತಂತ್ರ ನಿನ್ನದು, ತಿಳಿಸೋ ಸರ್ವೇಶ'. ಆದರೆ ಈ ಸ್ವಾತಂತ್ರ್ಯಭ್ರಮೆಗೆ ಕಾರಣವೇನು ಎಂದು ದಾಸರು ಪ್ರಶ್ನಿಸಿ 'ನಾನೇ ಭ್ರಮಿಸಿದೆನೋ, ವಿಷಯದಿ ಮಮತೆ ನೀನೆ ಸೃಜಿಸಿದೆಯೊ?' ಎಂದು ಮಾರ್ಮಿಕವಾಗಿ ನುಡಿದಿದ್ದಾರೆ.

ವಿಷಯಗಳೂ ಸಾಧನಕ್ಕೆಂದೇ ಸಿದ್ಧವಾದುವು. 'ಇಂದ್ರಿಯಂಗಳನಿತ್ತೆ ಅದಕೆ ವಿಷಯಂಗಳನಿತ್ತೆ, ಒಂದರ ಸಾಧನಗಳೊಂದಕ್ಕಾಗಿವೆ ಅಯ್ಯ.' ಇರುವುದನ್ನೆಲ್ಲ ದೇವರ ಕಡೆ ತಿರುಗಿಸಿ, ಹರಿ ದೈವ, ಗುರು ಮುಖ್ಯ, ಪರ ಉಪಕಾರ, ಪ್ರತಿಕ್ಷಣ ಪರರು ತನ್ನವರು ಸಮ-ಹೀಗೆನ್ನುವ ಭಾವನೆಯಿಂದ ಹರಿಕರುಣವನ್ನು ಸಂಪಾದಿಸಿ ಮುಕ್ತಿಯೋಗ್ಯರಾಗಬೇಕು.

ವಿಜಯದಾಸರಂತೆ ಗೋಪಾಲದಾಸರಿಗೂ ಹಲವಾರು ಪ್ರತಿಭಾವಂತ ಶಿಷ್ಯರಿದ್ದುದರಿಂದ ಅವರ ಪೀಳಿಗೆ ಬೆಳೆಯಿತು. ಅವರ ಶಿಷ್ಯರಲ್ಲಿ ಜಗನ್ನಾಥದಾಸರು ಪ್ರಮುಖರು. ಅವರಲ್ಲದೆ, ಗೋಪಾಲದಾಸರ ತಮ್ಮಂದಿರು ಮೂವರೂ ಅವರಿಂದ ಅಂಕಿತಗಳನ್ನು ಪಡೆದು ಹರಿದಾಸರಾದರು. ಗೋಪಾಲದಾಸರ ಒಡನಾಡಿಯೂ ವಿಜಯದಾಸರ ಶಿಷ್ಯರೂ ಆಗಿದ್ದ ಐಜಿ ವೆಂಕಟ ರಾಮಾಚಾರ್ಯರೆಂಬ ಪಂಡಿತರೂ ಜ್ಞಾನಿಗಳೂ ರಾಘವೇಂದ್ರ ಸ್ವಾಮಿಗಳ ಮಠದ ಭುವನೇಂದ್ರ ತೀರ್ಥರಲ್ಲಿ ಬಿಡಿ ಸಂನ್ಯಾಸವನ್ನು ಪಡೆದು 'ವ್ಯಾಸತತ್ತ್ವಜ್ಞ'ರಾಗಿ ಗೋಪಾಲದಾಸರಲ್ಲಿಯೇ ಹರಿದಾಸರಾಗಿ ನಿಂತರು. 'ವಾಸುದೇವವಿಠಲ' ಎನ್ನುವ ಅಂಕಿತದಿಂದ ಇವರು ಪದಗಳನ್ನು ರಚಿಸಿದ್ದಾರೆ.

ವಿಜಯದಾಸರ ಇನ್ನೊಬ್ಬ ಶಿಷ್ಯರಾದ ವೇಣುಗೋಪಾಲದಾಸರ ಮೊದಲ ಹೆಸರು ತಿಮ್ಮಣ್ಣ. ೧೭೬೮ರ ಸುಮಾರಿನಲ್ಲಿ ಇವರು ಆದವಾನಿಯ ಸುಬಾದಾರ ಬಸಾಲತ್‌ಜಂಗನ ಬಳಿ ಪ್ರಧಾನಿಯಾಗಿದ್ದರು. ಅಧಿಕಾರದಲ್ಲಿದ್ದಾಗಲೇ ವಿಜಯದಾಸರಿಂದ ಹರಿದಾಸದೀಕ್ಷೆಯನ್ನು ಪಡೆದು 'ವೇಣುಗೋಪಾಲವಿಠಲ' ಎಂಬ ಮುದ್ರಿಕೆಯಲ್ಲಿ ಪದಗಳನ್ನು ರಚಿಸಲಾರಂಭಿಸಿದರು. ಹರಿದಾಸರಾದವರು ಅಧಿಕಾರವನ್ನು ಮಾಡಬಾರದೆನ್ನುವ ನಿಯಮವಿದ್ದರೂ ವಿಜಯದಾಸರು ಇವರಿಗೆ ಅಧಿಕಾರದಲ್ಲಿಯೇ ಇರುವಂತೆ ಅಪ್ಪಣೆ ಮಾಡಿದುದು ಸ್ವಾರಸ್ಯವಾದ ವಿವರ. ವೇಣು ಗೋಪಾಲದಾಸರಿಗೇನೊ ವಿರಕ್ತಿಯುಂಟಾಗಿ ಬಿಡುವ ಹಂಬಲದಲ್ಲಿಯೇ ಇದ್ದರು, ಇವರಿಗೆ ಬ್ಯಾಗವಟ್ಟಿ ನರಸಿಂಹಾಚಾರ್ಯರೆನ್ನುವ ಶಿಷ್ಯರಿದ್ದು ಅವರೂ 'ನರಸಿಂಹ ವಿಠಲ' ಎನ್ನುವ ಮುದ್ರಿಕೆಯಲ್ಲಿ ದೇವರ ನಾಮಗಳನ್ನು ಮಾಡಿದರು.

ಆನೆಗೊಂದಿಯ ಚಿನಿವಾರನೊಬ್ಬನ ಮಗನು ಅನಾಥನಾಗಿದ್ದಾಗ ವಿಜಯದಾಸರು ಅವನನ್ನು ಕಾಪಾಡಿ, ಅವನಿಗೆ ಮಂತ್ರೋಪದೇಶ ಮಾಡಿ, ಅವನನ್ನು ತಮ್ಮ ಸಾಕುಮಗನಾಗಿ ಇರಿಸಿಕೊಂಡು ಅವನಿಗೆ ಹರಿದಾಸದೀಕ್ಷೆ ಕೊಟ್ಟರು. ಇವರೇ ಮೋಹನದಾಸರು; 'ಮೋಹನವಿಠಲ' ಎನ್ನುವ ಅಂಕಿತದಿಂದ ನಾದನಾಮಕ್ರಿಯೆಯಲ್ಲಿ 'ಕೋಲುಹಾಡು' ಎಂದು ೨೧೭ ನುಡಿಗಳ ಪದ್ಯಮಾಲೆ ಯೊಂದನ್ನು ರಚಿಸಿದರು. ಇದಲ್ಲದೆ ಅವರ ಹತ್ತಾರು ದೇವರನಾಮಗಳೂ ಒಂದೆರಡು ಸುಳಾದಿಗಳೂ ವಿಜಯದಾಸರನ್ನು ಸ್ತೋತ್ರಮಾಡಿರುವ ಪದಗಳೂ ಬಳಕೆಯಲ್ಲಿವೆ.

ಈ ನಡುಯುಗದಲ್ಲಿ ವಿಜಯದಾಸರ ಪ್ರಭಾವವನ್ನು ತಳೆದು ಹರಿದಾಸ್ಯವನ್ನು ಹಿಡಿದು ಪ್ರಸಿದ್ಧರಾದವರಲ್ಲಿ ಹೆಳವನಕಟ್ಟೆ ಗಿರಿಯಮ್ಮನೂ ಸೇರುತ್ತಾರೆ. ಧಾರವಾಡದ ರಾಣೇಬೆನ್ನೂರು ಇವರ ಜನ್ಮಸ್ಥಳ; ಮದುವೆಯಾಗಿ ತಿಪ್ಪರಸ ಕುಲಕರಣಿಯೊಂದಿಗೆ ಹೆಳವನಕಟ್ಟೆ (ಮಳೆಬೆನ್ನೂರು) ಯಲ್ಲಿದ್ದಾಗ ವಿಜಯದಾಸರ ಶಿಷ್ಯ ಗೋಪಾಲದಾಸರನ್ನು ಕಂಡು ಅವರಿಂದ ಪ್ರಭಾವಿತರಾಗಿ ಹರಿದಾಸ್ಯವನ್ನು ಹಿಡಿದರು. ಸಾಮಾನ್ಯ ಗೃಹಿಣಿಯಂತೆ ಇರುತ್ತಿದ್ದರೂ ದಿವ್ಯೋನ್ಮಾದವನ್ನು ಆಗಾಗ ಅನುಭವಿಸುತ್ತ 'ಹೆಳವನಕಟ್ಟೆ ರಂಗ' ಎನ್ನುವ ಮುದ್ರಿಕೆಯಲ್ಲಿ ದೇವರ ನಾಮಗಳನ್ನು ರಚಿಸಿದರು.* ಸಮಾಜದಲ್ಲಿ ಈಕೆಯ ಬಗ್ಗೆ ಕುಹಕನುಡಿಯೂ ವಿರೋಧವೂ ಬಲವಾದಾಗ ರಾಘವೇಂದ್ರಸ್ವಾಮಿಗಳ ಮಠದ ಸುಮತೀಂದ್ರ ತೀರ್ಥರು ಈಕೆಯ ಹಿರಿಮೆಯನ್ನು ಜನರಿಗೆ ತಿಳಿಯಹೇಳಿದರು. ಗಿರಿಯಮ್ಮನು ಅನೇಕ ಭಕ್ತರಿಂದೊಡಗೂಡಿ, ಅವರಿಗೆ ಭಕ್ತಿಯ ರಸವನ್ನು ಮನದಟ್ಟು ಮಾಡಿಕೊಟ್ಟು, ಭಕ್ತರು ಕೊಟ್ಟ ಅಪಾರ ಧನವನ್ನು ಸದ್ವಿನಿಯೋಗಮಾಡಿ, ವಿರಕ್ತರಾಗಿ ಬಾಳನ್ನು ಕಳೆದರು. ಹೊನ್ನಾಳಿಯ ಹತ್ತಿರ ತುಂಗಭದ್ರಾತೀರದ ಕಮ್ಮಾರಗಟ್ಟೆ ಎನ್ನುವ ಹಳ್ಳಿಯಲ್ಲಿ ಇವರು ತೀರಿಕೊಂಡರೆಂದು ಹೇಳುತ್ತಾರೆ. ಅಲ್ಲಿ ಆಕೆ ಕಟ್ಟಿಸಿದ ಹನುಮಂತನ ಗುಡಿಯೊಂದಿದೆ. ಅಲ್ಲಿ ರಥೋತ್ಸವವಾಗುವ ಶ್ರಾವಣಶುದ್ಧಪಂಚಮಿಯೇ ಆಕೆಯು ತೀರಿಕೊಂಡ ದಿನವೆಂದು ಪ್ರತೀತಿ. ಆಕೆಗೆ ಹರಕೆ ಹೊತ್ತು ನಡೆದುಕೊಳ್ಳುವವರು ಇಂದಿಗೂ ಇದ್ದಾರೆ.

ಹರಿದಾಸ ಪರಂಪರೆಯ ನಡುಯುಗ ವಿಜಯದಾಸರಿಂದ ಆರಂಭವಾಗುತ್ತದೆ; ಅವರೂ,

ಪ್ರಸನ್ನವೆಂಕಟದಾಸರೂ, ವಿಜಯದಾಸರ ಶಿಷ್ಯ ಗೋಪಾಲದಾಸರೂ, ಹೆಳವನಕಟ್ಟೆ ಗಿರಿಯಮ್ಮನವರೂ ಈ ಯುಗದ ಪ್ರಮುಖ ಹರಿದಾಸರು. ನಡುಯುಗ ಆರಂಭವಾಗಲು ದಾರಿ ಮಾಡಿಕೊಟ್ಟ ಮಹಾನುಭಾವರು ಮಂತ್ರಾಲಯದ ರಾಘವೇಂದ್ರಸ್ವಾಮಿಗಳು. ಇವರ ಪ್ರಭಾವ ನಡುಯುಗದಲ್ಲಿಯೂ ನಡೆದು ಬಂದಿತು.

೫

ವಿಜಯದಾಸರು ಮತ್ತು ಗೋಪಾಲದಾಸರು ಇದ್ದು, ಒಟ್ಟಿಗೆ ಕೆಲಸಮಾಡಿದ ಕಾಲವನ್ನು ಹರಿದಾಸಸಾಹಿತ್ಯದ ವಿಸ್ತಾರಕಾಲ ಎಂದು ಹೇಳಬಹುದು. ಪ್ರಾಚೀನ ದಾಸರಾದ ಶ್ರೀಪಾದರಾಜರು, ವ್ಯಾಸರಾಯರು, ಪುರಂದರದಾಸರು, ಕನಕದಾಸರು ಇವರ ಕೃತಿಗಳನ್ನೆಲ್ಲ ಹಾಡಿ ಬಳಕೆಗೆ ತಂದವರು ಇವರಿಬ್ಬರೇ; ಹರಿದಾಸಪಂಥಕ್ಕೂ ಹರಿದಾಸಸಾಹಿತ್ಯಕ್ಕೂ ಹೊಸಜೀವ ಬಂದುದು ಇವರ ಕಾಲದಲ್ಲಿಯೇ. ಇವರಿಬ್ಬರು ಸಿದ್ಧಪಡಿಸಿದ ಸಾಹಿತ್ಯವೂ ವಿಫುಲವಾದುದು. ಗೋಪಾಲದಾಸರಿಗೆ ಹಲವಾರು ಶಿಷ್ಯರಿದ್ದರೆಂದು ಹೇಳಿತಷ್ಟೆ. ಇವರಲ್ಲಿ ಪ್ರಮುಖರಾದವರು ಮುಂದಿನ ತಲೆಮಾರಿನ ದಾಸಕೂಟಕ್ಕೆ ಆಚಾರ್ಯಪುರುಷರಂತಿದ್ದವರು ಜಗನ್ನಾಥದಾಸರು. ಗೋಪಾಲದಾಸರ ತಮ್ಮಂದಿರು ಮೂವರು ಗೋಪಾಲದಾಸರಿಂದಲೇ ಹರಿದಾಸದೀಕ್ಷೆಯನ್ನು ಪಡೆದು 'ಗುರುಗೋಪಾಲ ವಿಠಲ', 'ವರದಗೋಪಾಲವಿಠಲ', 'ತಂದೆ ಗೋಪಾಲ ವಿಠಲ' ಎನ್ನುವ ಅಂಕಿತಗಳಿಂದ ದೇವರ ನಾಮಗಳನ್ನು ರಚಿಸಿದರು. ಈ ಮೂವರ ಪೀಳಿಗೆ ಉಳಿದು ಬರಲಿಲ್ಲ. ಗೋಪಾಲದಾಸರ ಇನ್ನೊಬ್ಬ ಶಿಷ್ಯ ಗದ್ವಾಲದ ಸುಬ್ಬಣ್ಣದಾಸ (ಕೇಶವವಿಠಲ)ರ ಪೀಳಿಗೆ ಸುರಪುರದ ಆನಂದದಾಸರ ಮೂಲಕ ಮುಂದುವರಿಯಿತು. ಆದರೆ ಗೋಪಾಲದಾಸರ ಹೆಸರನ್ನೂ ಪರಂಪರೆಯನ್ನೂ ಉಳಿಸಿದವರು, ಬೆಳೆಸಿದವರು ಜಗನ್ನಾಥದಾಸರೇ.

ಇವರು ಇತರ ದಾಸರಂತಲ್ಲದೆ ಮಹಾಪಂಡಿತರು. ಸಂಸ್ಕೃತವೈದುಷ್ಯದಲ್ಲಿ ಸಿದ್ಧಿಯನ್ನು ಪಡೆದವರು; ಶಾಸ್ತ್ರಭಾಗದಲ್ಲಿ ಎತ್ತಿದ ಕೈ ಅವರದು. ಇವರ ತಂದೆ ಬ್ಯಾಗವಟ್ಟಿ ನರಸಿಂಹಾಚಾರ್ಯರು ವೇಣುಗೋಪಾಲದಾಸರಲ್ಲಿ ಹರಿದಾಸದೀಕ್ಷೆಯನ್ನು ಪಡೆದು ವಿಜಯದಾಸರ ಪರಂಪರೆಗೇ ಸೇರಿದ್ದರು; ಮಗ ಶ್ರೀನಿವಾಸಾಚಾರ್ಯರೂ (ಇದು ಜಗನ್ನಾಥದಾಸರ ಹೆಸರು) ಅದೇ ಪರಂಪರೆಯಲ್ಲಿ ಗೋಪಾಲದಾಸರಿಂದ ಹರಿದಾಸದೀಕ್ಷೆಯನ್ನು ಪಡೆದರು. ಬ್ಯಾಗವಟ್ಟಿ ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿಗೆ ಸೇರಿದ ಹಳ್ಳಿ. ಆ ಕಾಲಕ್ಕೆ ರಾಯಚೂರು ಹರಿದಾಸ ಪಂಥದ ಕೇಂದ್ರವಾಗಿದ್ದಿತು. ಜಗನ್ನಾಥದಾಸರು ಇಲ್ಲಿ ೧೭೨೮ರಲ್ಲಿ ಹುಟ್ಟಿ ೧೮೦೯ರಲ್ಲಿ ತೀರಿಕೊಂಡರು. ಹುಡುಗರಾಗಿದ್ದಾಗಲೇ ರಾಘವೇಂದ್ರ ಸ್ವಾಮಿ ಮಠದ ವರದೇಂದ್ರ ತೀರ್ಥರಲ್ಲಿ ಶಿಷ್ಯವೃತ್ತಿ ಮಾಡಿ ನಾಲ್ಕು ಶಾಸ್ತ್ರಗಳಲ್ಲಿಯೂ ಪಾರಂಗತರಾದರು, ವಾದ ವಾಕ್ಯಾರ್ಥಗಳಲ್ಲಿಯೂ ನಿಸ್ಸೀಮರೆನಿಸಿದರು.

ಮೊದಮೊದಲು ಇವರಿಗೆ ಹರಿದಾಸಪಂಥದ ವಿಚಾರವಾಗಿ ತುಂಬ ಅಸಡ್ಡೆ ಇದ್ದಿತು; ಕನ್ನಡದ ಪದಗಳನ್ನು ಹೀಯಾಳಿಸುತ್ತಿದ್ದರು. ಶಾಸ್ತ್ರಮರ್ಯಾದೆಯೂ ಸಂಸ್ಕೃತಾಭಿಮಾನವೂ ಬಲವಾಗಿದ್ದುದು ಇದಕ್ಕೆ ಕಾರಣ. ವಿಜಯದಾಸರನ್ನೆ ಉದಾಸೀನರಾಗಿ ಕಂಡರಂತೆ; ಮಾನ್ವಿಗೆ ಅವರು ಬಂದಾಗ

ಅವಮಾನವನ್ನೂ ಮಾಡಿದರಂತೆ. ಈ ಅಪಚಾರಕ್ಕೆ ನೊಂದು ವಿಜಯದಾಸರ ಶಿಷ್ಯರಾದ ಗೋಪಾಲದಾಸರು ಉಪವಾಸ ಕೈಗೊಂಡರಂತೆ. ಆಗ ಇದ್ದಕ್ಕಿದ್ದಂತೆ ಜಗನ್ನಾಥದಾಸರಿಗೆ ಅಸಹ್ಯವಾದ ಉದರವ್ಯಾಧಿ ತಲೆದೋರಿ ಯಾರಿಂದಲೂ ಅದರ ಪರಿಹಾರ ದೊರೆಯದೆ ಕಡೆಗೆ ಗೋಪಾಲ ದಾಸರಲ್ಲಿ ಬಂದು ಕ್ಷಮೆಬೇಡಿದರೆಂದೂ ಅನಂತರ ಅವರ ಆರೋಗ್ಯ ಸುಧಾರಿಸಿತೆಂದೂ ಪ್ರತೀತಿಯಿದೆ. ಇದಾದ ಮೇಲೆ ಅವರು ಗೋಪಾಲದಾಸರಿಂದಲೇ ಹರಿದಾಸದೀಕ್ಷೆಯನ್ನು ಪಡೆದು 'ಜಗನ್ನಾಥವಿಠಲ' ಎನ್ನುವ ಅಂಕಿತದಿಂದ ನೂರಾರು ಪದ್ಯಗಳನ್ನೂ ಸುಳಾದಿಗಳನ್ನೂ ೬೦೦ ನುಡಿಗಳ ತತ್ತ್ವಸುವ್ವಾಲಿಯನ್ನೂ ರಚಿಸಿದರು.

ಇವರ ಕೃತಿಗಳಲ್ಲಿ ಸುಪ್ರಸಿದ್ಧವಾಗಿರುವುದು 'ಹರಿಕಥಾಮೃತಸಾರ'. ದಾಸ ಸಾಹಿತ್ಯದಲ್ಲಿ ಇಷ್ಟು ಪ್ರೌಢವಾದ, ಸಮಗ್ರವಾದ, ವಿದ್ವತ್ಪೂರ್ಣವಾದ, ಪ್ರಮೇಯ ಪರಿ ಪುಷ್ಟವಾದ ಗ್ರಂಥ ಇನ್ನೊಂದಿಲ್ಲ. ವಿವರಣೆಯಿಲ್ಲದೆ ಇದು ಅರ್ಥವಾಗುವುದು ಕಷ್ಟವೆಂದು ಇದಕ್ಕೆ ಹಲವಾರು ವ್ಯಾಖ್ಯಾನಗಳೂ ಟಿಪ್ಪಣಿಗಳೂ ಮೈದಳೆದುವು. ಕಮಲಾಪತಿದಾಸರು, ಸಂಕರ್ಷಣ ಒಡೆಯರು, ಪದ್ಮನಾಭದಾಸರು ಇವರ ವಾಖ್ಯಾನಗಳು ಪ್ರಸಿದ್ಧವಾಗಿವೆ. ಕಡೆಯ ಲೇಖಕರ 'ಭಾವಪ್ರಕಾಶಿಕೆ' ದಾಸಕೂಟದವರಲ್ಲಿ ತುಂಬಾ ಬಳಕೆಯಲ್ಲಿದೆ. ಜಗನ್ನಾಥದಾಸರ 'ಹರಿಕಥಾಮೃತಸಾರ'ವು ಮೂವತ್ತೆರಡು ಸಂಧಿಗಳಲ್ಲಿ ರಚಿಸಿದ ೯೮೮ ಷಟ್ಪದಿಗಳಿಂದ ಕೂಡಿದ ಪದ್ಯ ಗ್ರಂಥ. ಇದಕ್ಕೆ ಶ್ರೀದವಿಠಲದಾಸರು (ಕರ್ಜಗಿ ದಾಸಪ್ಪ) ಇನ್ನೊಂದು ಸಂಧಿಯನ್ನು ಸೇರಿಸಿ ಅದರ ೨೪ ಷಟ್ಪದಿಗಳನ್ನು ಫಲಶ್ರುತಿಯೆಂದು ಕರೆದರು. ಈ ದಾಸರು ಜಗನ್ನಾಥದಾಸರ ಶಿಷ್ಯರೇ; ಇವರ ಪೀಳಿಗೆಯಲ್ಲಿ ಭೀಮೇಶವಿಠಲದಾಸರೆಂಬ ಇನ್ನೊಬ್ಬ ಹರಿದಾಸರು ಬಂದರು.

ಈ 'ಹರಿಕಥಾಮೃತಸಾರ'ವು ದಿಟವಾಗಿಯೂ 'ನವರಸಭರಿತ ಗುಣಗಂಭೀರ ರತ್ನಾಕರ ರುಚಿರ ಶೃಂಗಾರ - ಸಾಲಂಕಾರ ವಿಸ್ತಾರ'ವಾಗಿಯೇ ಇದೆ. ಹರಿದಾಸ ಸಾಹಿತ್ಯದಲ್ಲಿ ಇದು ಶಾಸ್ತ್ರ ಪ್ರಬಂಧ ; ಮಾಧ್ವಸಿದ್ಧಾಂತದ ಎಲ್ಲ ಪ್ರಮೇಯಗಳನ್ನು ಪ್ರೌಢವಾದ ಕನ್ನಡದಲ್ಲಿ ಇಲ್ಲಿ ಖಚಿತವಾಗಿ ನಿರೂಪಿಸಿದ್ದಾರೆ. ಸೃಷ್ಟಿ, ಸ್ಥಿತಿ, ಪರಮಾತ್ಮನ ಗುಣಗಳು, ಜೀವನ ಲಕ್ಷಣ, ಸ್ವಾತಂತ್ರ್ಯ ವಿಚಾರ, ಅಪರೋಕ್ಷಜ್ಞಾನ, ಮಹಾಪೂಜೆ ಮೊದಲಾದ ವಿವರಗಳೆಲ್ಲ ಇಲ್ಲಿ ಸ್ವಾರಸ್ಯವಾಗಿ ಪರಿಶೀಲನೆಗೆ ಬರುತ್ತವೆ.

ಜಗನ್ನಾಥದಾಸರು ಗುರುಗಳಾದ ಗೋಪಾಲದಾಸರ ಮೇಲೂ, ರಾಘವೇಂದ್ರ ಸ್ವಾಮಿಗಳ ಮೇಲೂ, ಮಾಧ್ವ ಪ್ರಮೇಯಗಳನ್ನು ಒಳಗೊಂಡ ಪದಗಳನ್ನು ರಚಿಸಿದ್ದಾರೆ. 'ಭಯಪರಿಹಾರ ಸುಳಾದಿ', 'ತಂತ್ರಸಾರ ಸುಳಾದಿ' ಮೊದಲಾದುವೂ, ಉಗಾಭೋಗಗಳೂ ದಾಸಕೂಟದಲ್ಲಿ ಇಂದಿಗೂ ಜನಪ್ರಿಯವಾಗಿವೆ. ಇವರು 'ರಂಗನೊಲಿದ' ಭಾಗವಂತರೆಂದೂ ಅಪರೋಕ್ಷಜ್ಞಾನಿ ಗಳೆಂದೂ ಪ್ರಸಿದ್ಧರಾಗಿದ್ದರು. ಇವರು ಮೈಸೂರು ರಾಜ್ಯಕ್ಕೂ ಬಂದಿದ್ದು, ದಿವಾನ ಪೂರ್ಣಯ್ಯ ನವರಿಂದ ಸತತರಾಗಿದ್ದರು. ಮಾನ್ವಿಯಲ್ಲಿ ತೀರಿಕೊಂಡರು; ಅವರ ವಂಶೀಕರು ಇಂದಿಗೂ ಇದ್ದಾರೆ.

ಭಕ್ತಿಯಲ್ಲಿಯೂ, ವಿರಕ್ತಿಯಲ್ಲಿಯೂ, ಪ್ರತಿಭೆಯಲ್ಲಿಯೂ, ಪ್ರಭಾವದಲ್ಲಿಯೂ, ಜಗನ್ನಾಥದಾಸರಂಥ ಹರಿದಾಸರು ಮತ್ತೆ ಕಾಣಿಸಿಕೊಳ್ಳಲಿಲ್ಲ. ಹರಿದಾಸ ಪರಂಪರೆಯಲ್ಲಿ ಕಡೆಯ

ದೊಡ್ಡ ಹೆಸರೆಂದರೆ ಅವರದೇ. ಆದರೆ ಅವರಿಗೆ ಎಂಟು-ಹತ್ತು ಮಂದಿ ಶಿಷ್ಯರಿದ್ದು ಇವರೆಲ್ಲರೂ ದಾಸಸಾಹಿತ್ಯವನ್ನು ವಿಸ್ತರಿಸಿದರು; ಇಬ್ಬರು ಮೂವರ ಪೀಳಿಗೆಗಳೂ ಮುಂದರಿದವು. ಲಿಂಗಸುಗೂರು ಯೋಗೀಂದ್ರ (ಪ್ರಾಣೇಶ ವಿಠಲ) ಎಂಬ ಶಿಷ್ಯರು ೧೮೨೨ರ ಸುಮಾರಿಗಿದ್ದು ಸೊಗಸಾದ ಪದಗಳನ್ನೂ ಹತ್ತಾರು ಕಾವ್ಯಗಳನ್ನೂ ಬರೆದಿದ್ದಾರೆ. ಕರ್ಜಗಿ ದಾಸಪ್ಪ (ಶ್ರೀದವಿಠಲ) ನ ವಿಚಾರ ಆಗಲೇ ಬಂದಿದೆ. 'ಶ್ರೀರವಿಠಲ', 'ಲಕ್ಷ್ಮೀಶವಿಠಲ', 'ಸುಂದರವಿಠಲ', 'ಗುರುಶ್ರೀಶವಿಠಲ'. 'ಸುಖನಿಧಿ ವಿಠಲ', 'ವರದೇಂದ್ರ ವಿಠಲ', ಮೊದಲಾದ ಮುದ್ರಿಕೆಯ ಪದಗಳೆಲ್ಲ ಜಗನ್ನಾಥದಾಸರ ಪರಂಪರೆಗೆ ಸೇರಿದ ದಾಸರವೇ. ಕದರಮಂಡಿಗೆ, ಇಭರಾಮಪುರ ಹೊನ್ನಾಳಿ, ಮೊದಲಕಲ್ಲು, ಬಳ್ಳಾರಿ ಮುಂತಾದ ಸ್ಥಳಗಳು ಹರಿದಾಸರ ಕೇಂದ್ರಗಳಾದುದು ಅವರ ಕಾಲದಲ್ಲಿಯೇ.

ಗೋಪಾಲದಾಸರ ಶಿಷ್ಯರಲ್ಲಿ ಒಬ್ಬರಾದ ಗದ್ವಾಲದ ಸುಬ್ಬಣ್ಣದಾಸರು (ಕೇಶವವಿಠಲ) ತಮ್ಮ ಶಿಷ್ಯರಾದ ಸುರಪುರದ ಆನಂದದಾಸರಿಂದ ಪ್ರಸಿದ್ಧರಾದರಷ್ಟೆ. ಆನಂದದಾಸರು ವಿಜಯದಾಸರ ಊರಾದ ಚೀಕಲಪರಿಯವರೇವೇ; ಗುಲ್ಬರ್ಗಾ ಜಿಲ್ಲೆಯ ಸುರಪುರ ಸಂಸ್ಥಾನಕ್ಕೆ ಬಂದು ಅಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿದರು. ಅಲ್ಲಿಯೇ ಅವರಿಗೆ ಸಂಗೀತಶಿಕ್ಷಣವೂ ದೊರೆಯಿತು; ಸುರಪುರದ ಅರಸನ ಆಸ್ಥಾನದಲ್ಲಿ ವಿದ್ವಾಂಸರಾದರು. ಪ್ರಾಪಂಚಿಕ ಅಭ್ಯುದಯದಲ್ಲಿಯೇ ನಿರತರಾಗಿದ್ದ ಅವರ ಅಂತರಂಗದ ಕಣ್ಣನ್ನು ತೆರೆಯಿಸಿದವರು ಗದ್ವಾಲದ ಸುಬ್ಬಣ್ಣದಾಸರು; ಶ್ರೀಶವಿಠಲ' ಎನ್ನುವಂಕಿತದ ಹುಂಡೇಕಾರದಾಸರು ಎನ್ನುವ ಅಭಿಪ್ರಾಯವೂ ಬಂದಿದೆ (ಈ ದಾಸರು ಜಗನ್ನಾಥದಾಸರ ಶಿಷ್ಯರು). ಯಾರಾಗಲಿ ಅಂತೂ ಸುರಪುರದ ಆನಂದ ದಾಸರು ಕೀರ್ತನಪದ್ಧತಿಯನ್ನು ಕೈಗೊಂಡವರಾದರೂ ಲೌಕಿಕವನ್ನು ಬಿಡಲಿಲ್ಲ.

ಹರಿದಾಸರಾದ ನಂತರವೂ ಗಾಯನ, ರುದ್ರವೀಣಾವಾದನಗಳಲ್ಲಿ ಪ್ರಖ್ಯಾತಿಯನ್ನು ಪಡೆದು ಗದ್ವಾಲ, ವನಪರ್ತಿ ಮೊದಲಾದ ರಾಜಾಸ್ಥಾನಗಳಲ್ಲಿ ಸನ್ಮಾನಿತರಾದವರು. ಮೈಸೂರಿಗೂ ಬಂದಿದ್ದು ಸದಾಶಿವರಾಯರೆದುರು ಹಾಡಿ, ವೀಣೆಯನ್ನು ನುಡಿಸಿ 'ಭಲೆ' ಎನಿಸಿಕೊಂಡರಂತೆ; ಸದಾಶಿವರಾಯರು ವೀಣೆ ಶೇಷಣ್ಣನವರ ಗುರುಗಳು, ದೊಡ್ಡ ವಾಗ್ಗೇಯಕಾರರು. ಮುಮ್ಮಡಿಕೃಷ್ಣ ರಾಜಒಡೆಯರು ಅವರಿಗೆ ತುಂಬ ಸನ್ಮಾನಮಾಡಿ ಕಳುಹಿಸಿದರಂತೆ. ಲೌಕಿಕ ಮರ್ಯಾದೆಗಳಿಂದ ಬೇಸತ್ತು ಮಂತ್ರಾಲಯದಲ್ಲಿ ಕೆಲಕಾಲ ನಿಂತು ರಾಘವಂದ್ರ ಸ್ವಾಮಿಗಳ ಸೇವೆ ಮಾಡಿದರು. ಅಲ್ಲಿ ಇಭರಾಮಪುರದ ಕೃಷ್ಣಾಚಾರ್ಯರೆಂಬ ಜ್ಞಾನಿಗಳ ಸಹವಾಸ ದೊರೆತು ಅಪರೋಕ್ಷ ಜ್ಞಾನಿಗಳಾದರೆಂದು ಐತಿಹ್ಯವಿದೆ. ಅನಂತರ ರಾಜಸಭೆಗಳಿಗೆ ಹೋಗುವುದನ್ನು ಬಿಟ್ಟು ಹರಿದಾಸವೃತ್ತಿಯನ್ನೇ ಹಿಡಿದು ಕೀರ್ತನೆಗಳನ್ನು ಮಾಡಲಾರಂಭಿಸಿದರು. ಸುರಪುರದ ಗೋಪಾಲಕೃಷ್ಣ ಗುಡಿಯಲ್ಲಿಯೇ ಕೀರ್ತನೆ ಮಾಡುತ್ತ ಪ್ರಾಣಬಿಟ್ಟರೆಂದು ಹೇಳುತ್ತಾರೆ.

ಇವರ ಪದಗಳು ಸರಳವಾದ ಕನ್ನಡ ಮಾತುಗಳಿಂದ ಕೂಡಿದ್ದು ದಿನಬಳಕೆಯ ಭಾವನೆಗಳಲ್ಲಿಯೇ ಅಧ್ಯಾತ್ಮದ ಆಳವನ್ನು ಮುಟ್ಟಿಸುವಂಥವು. ಇವರು 'ಕೀರ್ತನಗೀತೆ'ಯನ್ನು ಬರೆದಿದ್ದಾರೆಂದು ಬೇಲೂರು ಕೇಶವದಾಸರು ತಿಳಿಸುತ್ತಾರೆ. ಅದರ ಮೊದಲ ಪದವನ್ನು ಉದ್ಧರಿಸಿಯೂ ಇದ್ದಾರೆ. ಇದಲ್ಲದೆ ಅವರ ಹಲವಾರು ದೇವರ ನಾಮಗಳೂ ಪ್ರಚಲಿತವಾಗಿವೆ. ಇವರ ಪರಂಪರೆಯಲ್ಲಿ ಸುರಪುರದ

ಭೀಮದಾಸರು (ಶ್ರೀಶಕೇಶವ ವಿಠಲ), ಸಂತೆಬೆನ್ನೂರು ರಾಮಾಚಾರ್ಯರು (ಕಮಲಾಪತಿ ವಿಠಲ) ಎಂಬಿಬ್ಬರು ಹರಿದಾಸರು ಬಂದು, ಎರಡನೆಯವರ ಪೀಳಿಗೆ ಸ್ವಲ್ಪ ಕಾಲ ನಡೆಯಿತು. ಅವರ ಶಿಷ್ಯರಲ್ಲಿ ಗರ್ಗೇಶ್ವರಿ ಕೇಶವರಾಯರು (ಮಧ್ವೇಶವಿಠಲ) ಪ್ರಮುಖರು. ಇಲ್ಲಿಗೆ ೧೮೨೦ ಸುಮಾರು ಮುಟ್ಟುತ್ತದೆ.

ಗೋಪಾಲದಾಸರ ಪೀಳಿಗೆಯನ್ನು ಜಗನ್ನಾಥದಾಸರ ಮೂಲಕ ಪ್ರಾಣೇಶ ವಿಠಲದಾಸರ ಪೀಳಿಗೆಯಲ್ಲಿ ಕರ್ಜಗಿ ಏರಿ ನಾರಾಯಣಾಚಾರ್ಯರು (ಸುಖನಿಧಿ ವಿಠಲ, ೧೯೧೨ರ ಸುಮಾರು) ಅವರಿಂದ ಅಂಕಿತ ಪಡೆದ ಕಲಮದಾನಿ ನಾರಾಯಣ ರಾಯರು (ಸಿರಿವಿಠಲ) ನಮ್ಮ ಕಾಲದವರೆಗೆ ಉಳಿಸಿಕೊಂಡು ಬಂದಿದ್ದಾರೆ. ವಿಜಯದಾಸರ ಪೀಳಿಗೆಯನ್ನೇ ವೆಂಕಟವಿಠಲದಾಸರ ಮೂಲಕ ಬೇಲೂರು ಕೇಶವದಾಸರು (ಮರಣ ೧೯೪೫)) ಉಳಿಸಿದರು. ವಿಜಯದಾಸರ ಮತ್ತೊಬ್ಬ ಶಿಷ್ಯರಾದ ಮೋಹನದಾಸರು ತಮ್ಮ ಪರಂಪರೆಯನ್ನು ನಾಲ್ವರು ಶಿಷ್ಯರಲ್ಲಿ ಇರಿಸಿದರು; ಅವರಲ್ಲಿ ಚಿಕ್ಕೇನ ಹಳ್ಳಿ ತಿಮ್ಮಣ್ಣ ದಾಸರೆಂಬುವರು (ರಘುಪತಿವಿಠಲ) ಈ ಪರಂಪರೆಯನ್ನು ಬೆಳೆಸಿದರು. ಇವರ ಪರಂಪರೆಯಲ್ಲಿ ಬಂದ ದೊಡ್ಡಬಳ್ಳಾಪುರದ ಮುದ್ದುಮೋಹನ ವಿಠಲದಾಸರು ಮೋಹನದಾಸರ ಪೀಳಿಗೆಯನ್ನು ಮುಂದುವರಿಸಿ, ದೇವರಾಯನ ದುರ್ಗದ ಸುಬ್ಬರಾಯದಾಸ (ತಂದೆ ಮುದ್ದು ಮೋಹನವಿಠಲ)ರ ಮೂಲಕ ಇಂದಿನವರೆಗೆ ಉಳಿಸಿದ್ದಾರೆ. ದೇವರಾಯನದುರ್ಗದ ದಾಸರಿಗೆ ಚಿತ್ರದುರ್ಗದ ಶ್ರೀನಿವಾಸರಾಯರು (ಉರಗಾದ್ರಿವಾಸವಿಠಲ) ರೆನ್ನುವ ಶಿಷ್ಯರಿದ್ದು ಇವರಿಗೆ ಅರವತ್ತೆರಡು ಮಂದಿ ಶಿಷ್ಯರಾದರು. ಇವರ ಪೀಳಿಗೆಗಳು ನಮ್ಮ ಕಾಲದವರೆಗೆ ಬಂದಿವೆ. ದೇವ ರಾಯನದುರ್ಗದ ದಾಸರಿಗೆ ಒಂದು ಸಾವಿರ ಮಂದಿ ಶಿಷ್ಯರಿದ್ದರೆಂದು ಹೇಳುತ್ತಾರೆ. ಇವರಲ್ಲಿ ಎಂ.ಆರ್. ಗೋವಿಂದರಾವ್ (ಗುರುಗೋವಿಂದ ವಿಠಲ) ಎನ್ನುವವರು ಪ್ರಮುಖರು. ಹರಿದಾಸರಾಗಿ ಹಲವಾರು ದೇವರನಾಮಗಳನ್ನು ರಚಿಸಿ ಗ್ರಂಥಕರ್ತರೂ ಆಗಿದ್ದಾರೆ. ಹೀಗೆಯೇ ರಾಣೇಬೆನ್ನೂರು ಹಯವದನಾಚಾರ್ಯ (ಮಧ್ವಾಂತರ್ಗತವಿಠಲ), ಆರ್.ರಾಮಚಂದ್ರರಾಯರು (ತಂದೆ ವೆಂಕಟೇಶ ವಿಠಲ) ಮೊದಲಾದವರು ನಮ್ಮ ಕಾಲದ ಹರಿದಾಸರೇ.

ಹರಿದಾಸಪಂಥದ ಶಕ್ತಿಯೂ ಆ ಸಾಹಿತ್ಯದ ಸಂಪತ್ತೂ ಕಡಮೆಯಾಗುತ್ತಾ ಬಂದಿದೆ ಯೆನ್ನುವುದರಲ್ಲಿ ಸಂಶಯವಿಲ್ಲ. ವಿಸ್ತಾರದಲ್ಲಿಯೂ ಸಾರ್ಥಕ್ಯದಲ್ಲಿಯೂ ಹರಿದಾಸಸಾಹಿತ್ಯ ಗೋಪಾಲದಾಸರ ಕಾಲದಿಂದ ಇಳಿಮುಖವೇ. ಕಳೆದ ತಲೆಮಾರಿನಲ್ಲಿ ಅವರು ಗಳಿಸಿದ್ದ ಜನಪ್ರೀತಿಯೂ ಈಗ ಬಹುಮಟ್ಟಿಗೆ ಮರೆಯಾಗಿದೆ; ಈಗಿನ ಹರಿದಾಸಸಾಹಿತ್ಯದಲ್ಲಿ ಪ್ರತಿಭೆಯಾಗಲಿ ಸ್ವಾರಸ್ಯವಾಗಲಿ ಕಂಡು ಬರದೆ, ಪದಗಳು ನೀರಸವಾಗಿವೆ. 'ಹೇಳಿದ್ದೆ ಹೇಳೋ ಕಿಸಿಬಾಯಿದಾಸ' ಎನ್ನುವ ಗಾದೆ ಇಂಥ ದಾಸರನ್ನು ನೋಡಿಯೇ ಮಾಡಿದುದೊ ಎನಿಸುತ್ತದೆ. ಲೋಕಾನುಭವವಿದ್ದರೆ ಆಧ್ಯಾತ್ಮಿಕ ದೃಷ್ಟಿಯಿಲ್ಲ; ಆಧ್ಯಾತ್ಮಿಕ ದೃಷ್ಟಿಯಿದ್ದರೆ ಲೋಕಾನುಭವವಿಲ್ಲ; ಎರಡೂ ಇದ್ದರೆ ಲೋಕಸಂಗ್ರಹದ ತವಕವಿಲ್ಲ-ಹೀಗಾಗಿ ಈಚಿನ ಹರಿದಾಸ ಸಾಹಿತ್ಯ ದುರ್ಬಲವಾಗಿದೆ, ನಿರರ್ಥಕವಾಗಿದೆ. ಜನರನ್ನು ಆಕರ್ಷಿಸುವ ಸಾಮಗ್ರಿಯಾಗಲಿ, ಸತ್ತ್ವವಾಗಲಿ ಇಲ್ಲಿ ಕಾಣಬರುವುದಿಲ್ಲ. ಯುಗಧರ್ಮವೇ ಇಂಥ ಸಾಹಿತ್ಯಕ್ಕೆ ಪ್ರತಿಕೂಲವೊ ಏನೊ! ಆದರೆ ಒಂದು ಕಾಲದಲ್ಲಿ ನಮ್ಮ

ನಾಡಿನ ಹಿರಿಯರು ಬೆಳೆಸಿದ ಹರಿದಾಸ ಪಂಥ, ಅದರಿಂದ ಹೊರಹೊಮ್ಮಿದ ಅಪೂರ್ವ ಸಾಹಿತ್ಯ, ಎರಡೂ ನಾಡಿಗೆ ಬಲವನ್ನೂ ಕಳೆಯನ್ನೂ ಒದಗಿಸಿದುವು ಎನ್ನುವುದು ಹೆಮ್ಮೆಯನ್ನೂ ಸಮಾಧಾನವನ್ನೂ ತರುವ ನೆನಪು.

೬

ಬೆಂಗಳೂರಿನ ಸುಬೋಧ ಕುಸುಮಾಂಜಲಿ ಗ್ರಂಥಮಾಲೆಯ ಸುಬೋಧ ರಾಮರಾಯರು ಅತ್ಯಂತ ಪ್ರಯಾಸದಿಂದ ಹರಿದಾಸರ ಕೃತಿಗಳನ್ನೆಲ್ಲ ಸಂಪಾದಿಸಿ, ಸಂಗ್ರಹಿಸಿ 'ಹರಿದಾಸಕೀರ್ತನ ತರಂಗಿಣಿ' ಎನ್ನುವ ಮಾಲೆಯಲ್ಲಿ ಪ್ರಕಟಿಸಿದರು. ಇದು ಐವತ್ತು-ಐವತ್ತೈದು ವರ್ಷಗಳ ಹಿಂದೆಯೇ ಆರಂಭವಾದ ಉದ್ಯಮ. ಉಡುಪಿಯ ಪಾವಂಜೆ ಗುರುರಾಯರು ಕೂಡ ಇಂಥದೇ ಪ್ರಯತ್ನವನ್ನು ನಡೆಸಿದರು. ಇದೇ ನಮಗಿರುವ ಮೂಲಸಂಪತ್ತು. ಮುಂದೆ ಲಿಂಗಸುಗೂರಿನ ಗೋರಾಬಾಳ ಹನುಮಂತರಾಯರು ಈ ಸಂಪತ್ತನ್ನು ಹಿಗ್ಗಿಸಿದರು. ದಾಸಸಾಹಿತ್ಯದ ಬಗ್ಗೆ ಮೊಟ್ಟಮೊದಲಿಗೆ ಸಂಶೋಧನಾತ್ಮಕವಾದ, ಸಮಗ್ರವಾದ ಅಧ್ಯಯನವನ್ನು ನಡೆಸಿದವರು ಧಾರವಾಡದ ರಾಘವೇಂದ್ರಾಚಾರ್ಯ ಪಂಚಮುಖಿಯವರು; ಅವರ 'ಕರ್ನಾಟಕ ಹರಿದಾಸಸಾಹಿತ್ಯ' (ಕನ್ನಡ ಸಾಹಿತ್ಯ ಪರಿಷತ್ತು, ೧೯೫೨) ಈ ಅಧ್ಯಯನ ಫಲ. ಇದಕ್ಕೆ ದೊದಲೇ ಇಂಗ್ಲಿಷಿನಲ್ಲಿ ಎ.ಪಿ. ಕರಮಕರರೂ ನಾರಾಯಣರಾವ್ ಕಲಮದಾನಿಯವರೂ ಕೂಡಿ Mystic Teachings of Haridasas of Karnataka ಎನ್ನುವ ಪುಸ್ತಕವನ್ನು ಪ್ರಕಟಿಸಿದ್ದರು (ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ ೧೯೩೯). ಅದಕ್ಕೂ ಮೊದಲು ಬೇಲೂರು ಕೇಶವದಾಸರು ಎರಡು ಭಾಗಗಳಲಿ 'ಕರ್ನಾಟಕ ಭಕ್ತವಿಜಯ'ವನ್ನು ರಚಿಸಿ ಅದರಲ್ಲಿ ಪ್ರಮುಖ ಹರಿದಾಸರ ಜೀವನ ಕಥೆಗಳನ್ನೂ ಕೃತಿವಿಮರ್ಶೆಯನ್ನೂ ಕೊಟ್ಟಿದ್ದರು. ಪ್ರಮುಖರು (೧೯೩೨). ಇದು ಸ್ವಾರಸ್ಯವಾದ ನಿರೂಪಣೆಯಾದರೂ ಇತಿಹಾಸ ಪ್ರಜ್ಞೆ ಅಷ್ಟಕಷ್ಟೇ ಎನಿಸುತ್ತದೆ. ಆದರೆ ಮುಂದಿನ ಅಧ್ಯಯನಕ್ಕೆ ಬೇಕಾದ ಸಾಮಗ್ರಿಯನ್ನು ಈ ಪ್ರಕಟಣೆ ಸಿದ್ಧಮಾಡಿತು. ೧೯೬೫ರಲ್ಲಿ ನಂಜನಗೂಡಿನ ಪರಿಮಳ ಪ್ರಕಾಶನಮಂದಿರದ ಎಚ್. ಕೆ. ವೇದವ್ಯಾಸಾಚಾರ್ಯರು 'ಕರ್ನಾಟಕ ಹರಿದಾಸರು' ಎನ್ನುವ ವಿಮರ್ಶಾತ್ಮಕವಾದ ಅಧ್ಯಯನವನ್ನು ಅಚ್ಚುಮಾಡಿಸಿದರು.

ಇಷ್ಟು ಹರಿದಾಸಸಾಹಿತ್ಯದ ಸಮಗ್ರ ಪರಿಶೀಲನೆಯಾದರೆ ಕಟ್ಟಿ ಶೇಷಾಚಾರ್ಯರು ಬರೆದ 'ಕವಿಕನಕದಾಸರು' (ಬೆಳಗಾವಿ, ೧೯೩೮), ಅನಂತರಾವ್ ಪಾಟೀಲರು ಸಿದ್ಧಪಡಿಸಿದ 'ಪ್ರಸನ್ನ ವೆಂಕಟದಾಸರು ಮತ್ತು ಅವರ ಕೃತಿಗಳು' (ಧಾರವಾಡದ ಮಿಂಚಿನ ಬಳ್ಳಿ ಕಾರ್ಯಾಲಯ, ೧೯೫೬) ಕೆ. ಎಂ. ಕೃಷ್ಣರಾಯರ 'ಜಗನ್ನಾಥದಾಸರು' (ಮೈಸೂರಿನ ಉಷಾಸಾಹಿತ್ಯ ಮಾಲೆ ೧೯೫೬), ಎಸ್.ಕೆ. ರಾಮಚಂದ್ರರಾಯರ 'ಪುರಂದರದಾಸರು' (ಬೆಂಗಳೂರು ಪುರಂದರದಾಸರ ಚತುರ್ಥ ಶತಮಾನೋತ್ಸವ ಸಮಿತಿ, ೧೯೦೪) ಮೊದಲಾದುವು ಆಯಾ ಹರಿದಾಸರನ್ನು ಕುರಿತು ನಡೆಸಿದ ಅಧ್ಯಯನಗಳು. ಮುಳಬಾಗಲು ಸತ್ಯ ನಿಧಿತೀರ್ಥರು ಶ್ರೀಪಾದರಾಜರನ್ನು ಕುರಿತು ಸಣ್ಣದೊಂದು ಪುಸ್ತಕವೊಂದನ್ನು ಬರೆದಿದ್ದಾರೆ (೧೯೬೫); ಶ್ರೀನಿವಾಸ ಹರಿದಾಸಾನುದಾಸರು ಹೀಗೆಯೇ

ವ್ಯಾಸರಾಯರ ಚರಿತ್ರೆಯನ್ನು ರಚಿಸಿ ಅವರ ದಾಸಸಾಹಿತ್ಯದ ವಿಚಾರವಾಗಿ ಬರೆದಿದ್ದಾರೆ (೧೯೫೦). ಹರಿದಾಸರತ್ನ ಗೋಪಾಲದಾಸರು 'ಹರಿದಾಸಭಾರತೀ' ಎನ್ನುವ ಮಾಸಪತ್ರಿಕೆಯನ್ನು ಬೆಂಗಳೂರಿನಿಂದ ನಡೆಸುತ್ತಿದ್ದು ಅದರಲ್ಲಿ ದಾಸಸಾಹಿತ್ಯವನ್ನು ಪ್ರಕಟಿಸಿದರು (೧೯೫೦ ರಿಂದ). 'ಹರಿದಾಸಗೋಕುಲ ಗ್ರಂಥಮಾಲೆ'ಯು ಮೈಸೂರಿನಿಂದ ಹರಿಕಥಾಮೃತ ಸಾರವೇ ಮೊದಲಾದ ಗ್ರಂಥಗಳನ್ನು ಹೊರತಂದಿತು.

ಹರಿದಾಸಸಾಹಿತ್ಯಕ್ಕೂ ಸಂಗೀತಕ್ಕೂ ಇರುವ ಸಂಬಂಧವನ್ನು ಕುರಿತು ಹಲಗೂರು ಕೃಷ್ಣಾಚಾರ್ಯರು ('ಕರ್ಣಾಟಕ ಸಂಗೀತವೂ ದಾಸಕೂಟವೂ') ಮೊಟ್ಟಮೊದಲು ಅಧ್ಯಯನ ನಡೆಸಿದರು. ಅನಂತರ ಮದ್ರಾಸಿನ ಟಿ.ವಿ. ಸುಬ್ಬರಾಯರೂ ಮತ್ತಿತರರೂ ಇದನ್ನು ಮುಂದರಿಸಿದರು. ದಾಸರ ಕೃತಿಗಳಿಗೆ ಸ್ವರಪ್ರಸಾರ ಹಾಕುವ ಕೆಲಸವನ್ನು ವೈಣಿಕವಿದ್ವಾನ್ ಎಲ್. ರಾಜಾರಾಯರು ಕೈಗೊಂಡರು; ಕನ್ನಡ ಸಾಹಿತ್ಯ ಪರಿಷತ್ತು ಇವರ ಸಂಕಲನವನ್ನು ಪ್ರಕಟಿಸಿತು. ಇದೇ ಕೆಲಸವನ್ನು ಆಸ್ಥಾನ ವಿದ್ವಾನ್ ಎನ್. ಚನ್ನಕೇಶವಯ್ಯನವರು ತಮ್ಮ ಮೂರು ತರಂಗಗಳ 'ಕೀರ್ತನ ಸುಧಾಸಾಗರ'ದಲ್ಲಿ ನಡೆಸಿದರು. (೧೯೬೭); ಇದರಲ್ಲಿ ನರಹರಿತೀರ್ಥರು, ಶ್ರೀಪಾದರಾಯರು, ವ್ಯಾಸತೀರ್ಥರು, ವಾದಿರಾಜರು, ವೈಕುಂಠದಾಸರು, ಕನಕದಾಸರು ಮೊದಲಾದ ದಾಸರ ಕೆಲವು ಕೃತಿಗಳನ್ನು (ಒಟ್ಟು ೫೪) ಆಯ್ದು ಅವಕ್ಕೆ ಪ್ರಾಚೀನ ಪದ್ಧತಿಯಂತೆ ಸ್ವರಪ್ರಸಾರ ಹಾಕಿದ್ದಾರೆ. ದಾಸಸಾಹಿತ್ಯದ ಸಂಗೀತ ಸಂಯೋಜನೆಗೆ ಇದು ಮೈಲಿಗಲ್ಲಾಗುವ ಪ್ರಯತ್ನ.

❐

ಅಧ್ಯಾಯ ಹತ್ತು

ದಾಸರ ಕೀರ್ತನ ಪ್ರಕಾರಗಳು

೧

ಪುರಂದರದಾಸರು ಬದುಕಿ ಬಾಳಿದ ಕನ್ನಡನಾಡಿನಲ್ಲಿ ವೈದಿಕ ಸಂಪ್ರದಾಯಕ್ಕೆ ಸೇರಿದ ಧಾರ್ಮಿಕ ಸಾಹಿತ್ಯ ಬಹುಮಟ್ಟಿಗೆ ಸಂಸ್ಕೃತದಲ್ಲೇ ಇದ್ದಿತು. ಆ ವೇಳೆಗೆ ಕನ್ನಡ ಸಾಹಿತ್ಯವೇನೋ ಬೆಳೆದು ಬಹುದೂರ ಸಾಗಿ ಬಂದಿದ್ದಿತು. ಪಂಪ, ರನ್ನ, ಪೊನ್ನ, ನಾಗವರ್ಮ, ನಾಗಚಂದ್ರ, ಚಾವುಂಡರಾಯ, ಬಸವೇಶ್ವರ, ಹರಿಹರ, ರಾಘವಾಂಕ, ನೇಮಿಚಂದ್ರ, ಜನ್ನ, ಕುಮುದೇಂದು ಮೊದಲಾದ ಮಹಾಕವಿಗಳು ಕನ್ನಡದ ಭಂಡಾರವನ್ನು ತುಂಬಿದ್ದರು. ಆದರೆ ಬಸವೇಶ್ವರರನ್ನು ಬಿಟ್ಟರೆ ಉಳಿದವರ ಕೃತಿಗಳೆಲ್ಲ ಸಾಮಾನ್ಯ ಜನರ ಹಿಡಿತಕ್ಕೆ ಸಿಗುವಂತಿರಲಿಲ್ಲ; ಜನರು ತಮ್ಮ ಧಾರ್ಮಿಕ ಕಲ್ಪನೆಗಳನ್ನೂ ಆಚಾರಗಳನ್ನೂ, ರೀತಿನೀತಿಗಳನ್ನೂ ಈ ಕಾವ್ಯಗಳಿಂದ ರೂಪಿಸಿಕೊಳ್ಳುವುದು ಸಾಧ್ಯವಿರಲಿಲ್ಲ. ಬಸವೇಶ್ವರ, ಅಲ್ಲಮಪ್ರಭು, ಚೆನ್ನಬಸವ, ಅಕ್ಕ ಮಹಾದೇವಿ ಇವರ ವಚನಗಳೇನೋ ಬೇಗ, ಮತ್ತು ಬಹುವಾಗಿ, ಜನಪ್ರೀತಿಯನ್ನು ಗಳಿಸಿಕೊಂಡುವು. ಆದರೆ ಅವುಗಳ ಪ್ರಭಾವ ವೈದಿಕ ಸಂಪ್ರದಾಯದೊಳಗೆ ನುಸುಳಿಕೊಂಡು ಬರಲಿಲ್ಲ. ಈ ಸಂಪ್ರದಾಯಗಳ ಜನರು ಧರ್ಮದ ವಿವರಣೆಗೆ, ನಿರೂಪಣೆಗೆ ಉಪದೇಶಕ್ಕೆ ಸಂಸ್ಕೃತ ಗ್ರಂಥಗಳನ್ನೇ ಅವಲಂಬಿಸುತ್ತಿದ್ದರು.

ಆದರೆ ನೆರೆಯ ತಮಿಳುನಾಡಿನಲ್ಲಿ ಆಳ್ವಾರರ ದಿವ್ಯಪ್ರಬಂಧಗಳೆಂದು ಹೆಸರಾದ ತಮಿಳು ಪಾಶುರಗಳು ಈ ಕೊರತೆಯನ್ನು ತುಂಬಿದ್ದುವು. ಅಲ್ಲಿ ಅವು ವೈದಿಕ ಸಂಪ್ರದಾಯದ ನಿಷ್ಠಾವಂತರಿಗೆ ಕೂಡ ಸಂಸ್ಕೃತ ಗ್ರಂಥಗಳಷ್ಟೇ ಮಾನ್ಯವಾಗಿದ್ದುವು. ಸ್ವಯಂ ರಾಮಾನುಜಾಚಾರ್ಯರೇ ಅವನ್ನು ಗೌರವದಿಂದ ಕಂಡು, ಜನರ ನಡುವೆ ಅವುಗಳ ಪ್ರಚಾರವಾಗಬೇಕೆಂದು ಆಶಿಸಿದ್ದರು. ಅವರ ನೇರವಾದ ಶಿಷ್ಯರು ಅವಕ್ಕೆ ವೈದಿಕ ಪದ್ಧತಿಯ ಪ್ರಮಾಣ ಗ್ರಂಥಗಳಿಗಿದ್ದ ಮೇಲ್ಮೆಯನ್ನೇ ಒದಗಿಸಿದರು; ತಮಿಳು ಪ್ರಬಂಧಗಳನ್ನು ದ್ರಮಿಡೋಪನಿಷತ್ತೆಂದು ಕಾಣಿಸಿದರು. ಪುರಂದರದಾಸರ ಪರಮ ಗುರುಗಳಾದ ಶ್ರೀಪಾದರಾಜರು ತಮಿಳುನಾಡಿನ ಶ್ರೀರಂಗದಲ್ಲಿದ್ದವರು. ಶ್ರೀರಂಗವು ರಾಮಾನುಜ ಸಂಪ್ರದಾಯದ ವೈಷ್ಣವರಿಗೆ ಭೂವೈಕುಂಠ; ಆಳ್ವಾರರ ಪಾಶುರಗಳ ಸಂಕಲನ ನಡೆದದ್ದು ಅಲ್ಲಿಯೇ, ಪ್ರಚಾರ ನಡೆದದ್ದು ಇಲ್ಲಿಂದಲೇ. ಶ್ರೀರಂಗ ದೇವಾಲಯದಲ್ಲಿ ಮೊದಲನೆಯ ಕುಲೋತ್ತುಂಗ ಚೋಳನ ಕಾಲದಲ್ಲಿ ಕ್ರಿಸ್ತಾಬ್ದ ೧೧೧೭ರಷ್ಟು ಹಿಂದೆಯೇ ತಮಿಳು ಪ್ರಬಂಧ

ಗಳನ್ನು ವೇದ ಮಂತ್ರಗಳಿಗೆ ಪರಿಸಮಾನವಾಗಿ ಹಾಡುವ ವಾಡಿಕೆ ಬಂದಿತು; ಸೌರ ಪಂಚಾಂಗದ ಮಾರ್ಗಳಿ ಮಾಸದ ಶುಕ್ಲ ಏಕಾದಶಿಯಿಂದ ಮೊದಲುಮಾಡಿ ಹತ್ತು ದಿನಗಳವರೆಗೆ ತಮಿಳು ಪಾಶುರಗಳನ್ನು ಗುಡಿಯಲ್ಲಿ ಅರೈಯಾರೆಂಬ ಗಾಯಕರು ಅಧ್ಯಯನ ಮಾಡುವುದು ಪದ್ಧತಿ.

ಈ ಪದ್ಧತಿಯು ಕಾಲಕ್ರಮದಲ್ಲಿ ತಪ್ಪಿಹೋಗಿದ್ದಿತೆಂದೂ, ರಾಮಾನುಜ ಸಂಪ್ರದಾಯದಲ್ಲಿ ಸುಪ್ರಸಿದ್ಧ ಸಂತರಾದ ವೇದಾಂತ ದೇಶಿಕರು ೧೩೬೦ರ ಸುಮಾರಿಗೆ ಮತ್ತೆ ಇದನ್ನು ಶ್ರೀರಂಗದಲ್ಲಿ ಬಳಕೆಗೆ ತಂದರೆಂದೂ ಉಲ್ಲೇಖವಿದೆ. ಶ್ರೀಪಾದರಾಜರು ತಮ್ಮ ಆಶ್ರಮಗುರುಗಳಾದ ಸ್ವರ್ಣವರ್ಣತೀರ್ಥರೊಂದಿಗೆ (ಮಧ್ವಾಚಾರ್ಯರ ನೇರವಾದ ಶಿಷ್ಯರಾದ ಪದ್ಮನಾಭ ತೀರ್ಥರಿಂದ ಏಳನೆಯವರು, ಶ್ರೀರಂಗದಲ್ಲೇ ಅವರ ಮಠವಿದ್ದಿತು) ಶ್ರೀರಂಗದಲ್ಲೇ ಇದ್ದವರು. ಆ ವೇಳೆಗಾಗಲೇ ತಮಿಳು ಪ್ರಬಂಧಗಳ ಮೇಲೆ ರಾಮಾನುಜರ ಶಿಷ್ಯರಾದ ತಿರುಕ್ಕುರುಕೈಪ್ಪಿರಾನ್ ಪಿಳ್ಳೈ ಮತ್ತು ನಂಜೀಯರ್ (ವೇದಾಂತಿ ಜೀಯರ್), ಪೆರಿಯ ಆಚ್ಚನ್ ಪಿಳ್ಳೈ, ವಡಕ್ಕು ತಿರುವೀಧಿಪಿಳ್ಳೈ ಮೊದಲಾದವರು ವ್ಯಾಖ್ಯಾನಗಳನ್ನು ರಚಿಸಿ (೧೨೨೦ ರಿಂದ ೧೩೬೦ರ ವರೆಗೆ) ಪ್ರಬಂಧಗಳ ಪ್ರಚಾರಕ್ಕೆ ನೆರವಾಗಿದ್ದರು. ಶ್ರೀಪಾದರಾಜರ ಕಾಲದಲ್ಲೇ ಶ್ರೀರಂಗದಲ್ಲೇ ಇದ್ದ ತಿರುಮಲೈ ಆಳ್ವಾನ್ (ತಿರುವಾಯ್ಮೊಳಿ ಪಿಳ್ಳೈ, ಪಿಳ್ಳೈ ಲೋಕಾಚಾರ್ಯರ ಮಗ) ಎಂಬುವರು ಪೆರಿಯು ಆಳ್ವಾರರ ತಿರುಮೊಳಿಯ ಮೇಲೆ ವ್ಯಾಖ್ಯಾನವೊಂದನ್ನು ರಚಿಸಿದರು.

ಹೀಗಿರುವಾಗ ಶ್ರೀಪಾದರಾಜರು ತಮಿಳು ಪ್ರಬಂಧಗಳ ಸ್ವಾರಸ್ಯವನ್ನು ಸವಿಯದಿರುವುದು ಸಾಧ್ಯವಿಲ್ಲ. ಅವರ ರಚನೆಗಳಲ್ಲಿ ಪ್ರಬಂಧಗಳ ಪ್ರಭಾವವನ್ನು ಸುಲಭವಾಗಿ ಗುರುತಿಸಬಹುದು. ಮತ್ತು ಶ್ರೀಪಾದರಾಜರ ಕಾಲದಲ್ಲೇ ಶ್ರೀರಂಗದಲ್ಲಿ ಮತ್ತೊಂದು ಪದ್ಧತಿ ಮೊದಲಾಯಿತು. ಇದು 'ಇಯಲ್' ಮತ್ತು 'ಇಶೈ' ಎಂಬ ಪ್ರಕಾರಗಳಲ್ಲಿರುವ ಭೇದವನ್ನು ಕುರಿತದ್ದು. ತಮಿಳಿನಲ್ಲಿ 'ಇಯಲ್' ಎಂದರೆ ಸಾಹಿತ್ಯ ಪ್ರಧಾನವಾದ, ವೈದಿಕವಾಙ್ಮಯದ ಪ್ರಭಾವವನ್ನೊಳಗೊಂಡ, ಪಾಠಕ್ರಮ; ವೇದಮಂತ್ರಗಳನ್ನು ಹೇಳುವಂತೆ, ಉಚ್ಚಾರಣೆಯ ಕಡೆ ಗಮನವಿರಿಸಿ, ತಮ್ಮ ಕಲ್ಪನೆಗೆ ಅವಕಾಶವಿಲ್ಲದಂತೆ ತಮಿಳು ಪದಗಳನ್ನು ಪಠಿಸುವುದು. ಇದು 'ಇಯಲ್ ಸೇವೈ' ಎನಿಸಿಕೊಳ್ಳುತ್ತದೆ. ದೇವರ ಉತ್ಸವ ಗುಡಿಯಿಂದ ಬಿಜಯಮಾಡುವಾಗ ಹಲವರು ಪಾಠಕರು ಸಾಲಾಗಿ ನಿಂತು ಈ ಪದ್ಧತಿಯನ್ನು ಹಿಡಿದು ಪಾಠ ಮಾಡುತ್ತ ಉತ್ಸವದ ಜೊತೆ ನಡೆದುಹೋಗುವರು. ನಿರ್ದಿಷ್ಟವಾದ ಪಾಠಕ್ರಮವಿರುವುದರಿಂದ ಗೋಷ್ಠಿಯಲ್ಲಿ ಈ ಸೇವೆ ಸಲ್ಲಿಸುವರು. ಇನ್ನೊಂದು ಪ್ರಕಾರವಾದ 'ಇಶೈ' ಸಂಗೀತಪ್ರಧಾನವಾದುದು. ತಮಿಳು ಪ್ರಬಂಧಗಳನ್ನು ರಾಗತಾಳಗಳಲ್ಲಿ ಹಾಡುವರು; ಸಂಗೀತ ವಾದ್ಯಗಳೊಂದಿಗೆ ಸೇರಿಸುವರು. ಇಲ್ಲಿ ರಾಗವಿಸ್ತಾರ, ಕಲ್ಪನೆಗಳಿಗೆ ಅವಕಾಶವುಂಟು; ಕೆಲವೊಮ್ಮೆ ಹಾಡುವವರು ಅಭಿನಯವನ್ನೂ ಬಳಸುವರು. ಶ್ರೀಪಾದರಾಜರು ಶ್ರೀರಂಗದಲ್ಲಿ ಈ ಪದ್ಧತಿಯ ಉಗಮವನ್ನು ಕಣ್ಣಾರೆ ಕಂಡಿದ್ದಿರ ಬೇಕು. ಅವರ 'ಲಕ್ಷ್ಮೀನೃಸಿಂಹಪ್ರಾದುರ್ಭಾವ ದಂಡಕ'ವೆನ್ನುವ ರಚನೆ ಪಾಠ ಪ್ರಧಾನವಾದ 'ಇಯಲ್' ಪ್ರಕಾರಕ್ಕೆ ಹೊಂದಿಕೊಳ್ಳುವುದನ್ನು ಗಮನಿಸಬೇಕು. ಉಳಿದ ಪದಗಳು, ಸುಳಾದಿಗಳು ಗೇಯ ರೂಪವಾದ 'ಇಶೈ' ಪ್ರಕಾರಕ್ಕೆ ಸೇರುವುವು.

ಶ್ರೀರಂಗದಲ್ಲಿ ಒದಗಿದ ಪ್ರಭಾವವನ್ನು ಸ್ಮರಿಸಿಯೇ ಶ್ರೀಪಾದರಾಜರು ತಮ್ಮ ಮುದ್ರಿಕೆಯನ್ನು

'ಶ್ರೀರಂಗವಿಠಲ'ನೆಂದು ಗ್ರಹಿಸಿದರೆಂದು ತೋರುತ್ತದೆ. ಇದಕ್ಕೆ ನಿದರ್ಶನವಾಗಿ ಶ್ರೀರಂಗನಾಥನ ವರ್ಣನೆಯಾದ 'ಶ್ರೀರಂಗವಿಠಲನ ಶ್ರೀ ಮುಕುಟಕೆ ಶರಣು' ಎಂಬ ಕೃತಿಯನ್ನು ನೋಡಬಹುದು. ಸ್ವರ್ಣವರ್ಣತೀರ್ಥರು ಕಾಲವಾದ ಮೇಲೆ ಶ್ರೀಪಾದರಾಜರು ಕೆಲವು ವರ್ಷಗಳು ಶ್ರೀರಂಗದಲ್ಲೇ ಇದ್ದು, ಅನಂತರ ಮುಳುಬಾಗಿಲಿಗೆ ಬಂದು ಅಲ್ಲಿ ತಮ್ಮ ಮಠವನ್ನು ಏರ್ಪಡಿಸಿಕೊಂಡರಷ್ಟೆ. ಆಗ ಆಳ್ವಾರರ ಪಾಶುರಗಳಂತೆ ಕನ್ನಡದಲ್ಲೂ ಪದಗಳಿದ್ದರೆ ಈ ಕಡೆ ಭಕ್ತಿಯ ಪ್ರಚಾರ ಸುಲಭವಾಗಿ ಆದೀತೆಂದು ಬಗೆದು ದಾಸಸಾಹಿತ್ಯವನ್ನು ಮೊದಲು ಮಾಡಿದರೋ ಏನೋ. ಅವರಿಗೆ ಪೂರ್ವದಲ್ಲಿ ಹರಿದಾಸರಿದ್ದರೋ, ದಾಸಪಂಥವಿದ್ದಿತೋ ಹೇಳುವುದು ಕಷ್ಟ. ನರಹರಿತೀರ್ಥರ ಹೆಸರನ್ನೇನೋ ಹೇಳುತ್ತಾರೆ. ಆದರೆ ಅದರ ರಚನೆಗಳು ಅಲ್ಪ, ಮತ್ತು ಬಿಡಿಯಾದುವು. ಶ್ರೀಪಾದರಾಜರು ಕೀರ್ತನಪದ್ಧತಿಯಲ್ಲೇ ವಿಪುಲವಾಗಿ ರಚನೆಗಳನ್ನು ಮಾಡಿದರು; ಸುಳಾದಿ, ಉಗಾಭೋಗ, ವೃತ್ತನಾಮ, ದಂಡಕ ಮೊದಲಾದ ಹಲವು ಪ್ರಕಾರಗಳನ್ನು ಕೀರ್ತನ ಪದ್ಧತಿಗೆ ಅಳವಡಿಸಿಕೊಂಡರು. ತಮಿಳು ಪಾಶುರಗಳಿಗಿಂತ ಹೆಚ್ಚಿನ ವೈವಿಧ್ಯವನ್ನು ದಾಸಸಾಹಿತ್ಯದಲ್ಲಿ ಕಾಣುತ್ತೇವೆ. ಇದು ಶ್ರೀಪಾದರಾಜರ ಪ್ರಯತ್ನದ ಫಲವೇ; ಮುಂದೆ ವ್ಯಾಸರಾಯಸ್ವಾಮಿಗಳೂ ಪುರಂದರದಾಸರೂ ಇದನ್ನು ರೂಢಿಸಿದರು.

ಶ್ರೀಪಾದರಾಜರು ಶಿವಶರಣರ ವಚನಗಳಿಂದ ಪ್ರಭಾವಿತರಾಗಿದ್ದರೋ ಇಲ್ಲವೋ ನಿಶ್ಚಯವಿಲ್ಲ. ವಚನಗಳಂತೂ ಬಳಕೆಯಲ್ಲಿದ್ದುದು ದಿಟ; ಉಗಾಭೋಗಗಳು ವಚನಗಳಂತೆ ಮೈದಳೆದದ್ದೂ ದಿಟ. ಇದರ ವಿಮರ್ಶೆ ಮುಂದೆ ಬರುತ್ತದೆ. ಆದರೆ ಚಂದ್ರಗಿರಿಯಲ್ಲಿ ಶ್ರೀಪಾದರಾಜರು ಇದ್ದಾಗ (ಸಾಳುವ ನರಸಿಂಹನ ಕರೆಯನ್ನು ಮನ್ನಿಸಿ ಅಲ್ಲಿ ಕೆಲವು ವರ್ಷಗಳನ್ನು ಕಳೆದ ಉಲ್ಲೇಖವಿದೆ), ತೆಲುಗು ವಾಙ್ಮಯದ ಪರಿಚಯವನ್ನು ಪಡೆದಿರುವುದು ಸಾಧ್ಯ. ಪೋತನ ಕವಿಯ ಆಂಧ್ರ ಮಹಾಭಾಗವತ ಆಗಲೇ ಪ್ರಸಿದ್ಧವಾಗಿದ್ದಿತು. ಕನ್ನಡನಾಡಿನಲ್ಲಿ ಹರಿದಾಸರು ಭಾಗವತವನ್ನು ಹೆಚ್ಚಾಗಿ ಅವಲಂಬಿಸುವಂತೆ ಮಾಡಿದವರು ಶ್ರೀಪಾದರಾಜರೇ ಎಂಬುದನ್ನು ನೆನಪಿಗೆ ತಂದುಕೊಳ್ಳಬೇಕು. ಆದರೆ ಆಂಧ್ರ ಭಾಗವತದ ನೇರವಾದ ಪ್ರಭಾವ ಶ್ರೀಪಾದರಾಜರ ರಚನೆಗಳಲ್ಲಿ ಕಾಣುವುದಿಲ್ಲ.

ಕಾಕತೀಯ ರಾಜನಾದ ಇಮ್ಮಡಿ ಪ್ರತಾಪರುದ್ರನ ಕಾಲದಲ್ಲಿ (೧೨೯೫-೧೩೨೬) ತೆಲುಗು ವಚನ ಸಂಗೀತ ಪದ್ಧತಿಯ ಪ್ರವರ್ತಕನಾದ ಕೃಷ್ಣಮಾಚಾರ್ಯನೆಂಬ ಕವಿಯ ಕೃತಿಗಳು ಶ್ರೀಪಾದರಾಜರ ಕಾಲದಲ್ಲಿ ಪ್ರಚಾರದಲ್ಲಿದ್ದುವು. ಈತನು ಒಂದು ಲಕ್ಷಕ್ಕಿಂತ ಹೆಚ್ಚು ವಚನಗಳನ್ನು ರಚಿಸಿದ್ದನಂತೆ. ಬಹುಮಟ್ಟಿಗೆ ಸಿಂಹಾಚಲದ ವರಾಹ ನರಸಿಂಹನನ್ನು ಕುರಿತು ವಚನಗಳು. ಈತನ ವಚನಗಳನ್ನು ಹಲವಾರು ರಾಗಗಳಲ್ಲಿ ಹಾಡುತ್ತಿದ್ದರು. ಅಹೋಬಲ ಮತ್ತು ಸಿಂಹಾಚಲದ ಗುಡಿಗಳಲ್ಲಿ ಸಂಕೀರ್ತನಕಾರರು ಇವನ್ನು ಹಾಡುತ್ತಿದ್ದುದನ್ನು ಶ್ರೀಪಾದರಾಜರು ಕೇಳಿರಬಹುದು. ಭಕ್ತಿಯ ಭಾವವನ್ನು ಹೊರಸೂಸುವ ಈ ರಚನೆಗಳನ್ನು ತಾಳ್ಳಪಾಕ ಅಣ್ಣಮಾಚಾರ್ಯರೂ ಪ್ರಶಂಸಿಸಿದ್ದಾರೆ. ಇದೇ ಕವಿಯ 'ಶಠಕೋಪವಿನ್ನಪಮು' ಎಂಬ ಗೇಯ ರಚನೆಯೂ ಪ್ರಸಿದ್ಧವಾಗಿದ್ದಿತು.

ತಾಳ್ಳಪಾಕ ಅಣ್ಣಮಾಚಾರ್ಯರು (೧೪೦೮-೧೫೦೩) ಶ್ರೀಪಾದರಾಜರ ಸಮಕಾಲಿಕರು. ಚಂದ್ರಗಿರಿಯಲ್ಲಿರುತ್ತಿದ್ದ ಶ್ರೀಪಾದರಾಜರು ಅಲ್ಲಿಂದ ಮೂರುನಾಲ್ಕು ಮೈಲು ದೂರವಿರುವ

ತಿರುಪತಿಬೆಟ್ಟದ ಮೇಲಿರುವ ಅಣ್ಣಮಾಚಾರ್ಯರನ್ನು ಸಂಧಿಸದಿರುವುದು ಸಾಧ್ಯವಿಲ್ಲ. ಶ್ರೀಪಾದರಾಜರ ರಚನೆಗಳಿಂದ ಅಣ್ಣಮಾಚಾರ್ಯರು ಸ್ಫೂರ್ತಿ ಪಡೆದರೆಂಬ ಉಲ್ಲೇಖ ತೆಲುಗು ಸಾಹಿತ್ಯ ಚರಿತ್ರೆಯಲ್ಲೇ ಬರುತ್ತದೆ. ಅಣ್ಣಮಾಚಾರ್ಯರು ಶೃಂಗಾರ ಸಂಕೀರ್ತನ, ಭಕ್ತಿಗೀತ, ವೈರಾಗ್ಯ ಪದ್ಧತಿಗಳೂ ಶ್ರೀಪಾದರಾಜರ ರಚನೆಗಳೂ ಹೊಂದಾಣಿಕೆಗೆ ದೊರಕುತ್ತವೆ. ಪರಸ್ಪರ ಪ್ರಭಾವದ ವಿಚಾರವಾಗಿ ಏನನ್ನೂ ನಿರ್ದಿಷ್ಟವಾಗಿ ಹೇಳುವುದು ಸಾಧ್ಯವಿಲ್ಲವಾದರೂ ಅವರಿಬ್ಬರ ಸಂಬಂಧವಿದ್ದುದು ತಿಳಿದುಬರುತ್ತದೆ. ಶ್ರೀಪಾದರಾಜರ ಪ್ರಶಿಷ್ಯರಾದ ಪುರಂದರದಾಸರೂ ಅಣ್ಣಮಾಚಾರ್ಯರನ್ನು ಬೆಟ್ಟದ ಮೇಲೆ ಕಂಡಿದ್ದ ವಿಚಾರ ಆಗಲೇ ಪ್ರಸ್ತಾಪಕ್ಕೆ ಬಂದಿದೆ.

ಅಣ್ಣಮಾಚಾರ್ಯರು ಬೆಟ್ಟದ ಮೇಲಿನ ಗುಡಿಯಲ್ಲಿ ಸಂಕೀರ್ತನ ಸೇವೆ ನಡೆಸುವಾಗ ಹರಿದಾಸ ವೇಷವನ್ನು ಧರಿಸುತ್ತಿದ್ದರೆಂಬುದು, ಗುಡಿಯಲ್ಲಿ ಒಳ ಪ್ರಾಕಾರದಲ್ಲೇ ಇರುವ ಸಂಕೀರ್ತನ ಭಂಡಾರದ ಹೊರಗೆ ಇರುವ ಅವರ ಶಿಲ್ಪ ಪ್ರತಿಕೃತಿಯಿಂದ ತಿಳಿದುಬರುತ್ತದೆ. ಗೀತನರ್ತನಕ್ಕೆ ಅನುಕೂಲವಾಗುವಂತೆ ಕೈಯಲ್ಲಿ ದಂಡಿಗೆ (ಸಣ್ಣ ತಂಬೂರಿ), ಕಾಲದಲ್ಲಿ ಗೆಜ್ಜೆಗಳನ್ನು ಗುರುತಿಸಬಹುದು; ತಲೆಯ ಮೇಲೆ ಆ ಕಾಲದ ಟೊಪ್ಪಿಗೆಯಿದೆ. ಶ್ರೀರಂಗದ ಗುಡಿಯಲ್ಲಿ ತಮಿಳು ಪ್ರಬಂಧಗಳನ್ನು ಹಾಡುವವರು ತಲೆಗೆ ದೇವರ ಶೇಷವಸ್ತ್ರವನ್ನು ರುಮಾಲಿನಂತೆ ಸುತ್ತಿಕೊಳ್ಳುತ್ತಿದ್ದರು; ಕೈಯಲ್ಲಿ ತಂಬೂರಿ, ಕಾಲಲ್ಲಿ ಗೆಜ್ಜೆ; ತಾಳಕ್ಕೆ ಚಿಟಿಗೆ. ಕನ್ನಡನಾಡಿನ ಹರಿದಾಸರು ಈ ಪದ್ಧತಿಯನ್ನೇ ಹಿಡಿದವರು. ಈ ಪದ್ಧತಿಗೆ ಮೂಲವೆಲ್ಲಿಯದೋ ತಿಳಿದುಬರುವುದಿಲ್ಲ. ಅಂತೂ ಶ್ರೀಪಾದರಾಜರ ಕಾಲದಿಂದ ಹರಿದಾಸರ ವೇಷ ಇದೇ ಆಗಿ ಉಳಿದು ಬಂದಿದೆ. ತ್ಯಾಗರಾಜರು ಉಂಛ ವೃತ್ತಿಗೆ ಹೋಗುವಾಗಲೂ ಇದೇ ವೇಷವನ್ನು ಧರಿಸುತ್ತಿದ್ದರು.

ಅದು ಹಾಗಿರಲಿ. ಶ್ರೀಪಾದರಾಜರು ಹರಿದಾಸ ಪದ್ಧತಿಯನ್ನು ಕನ್ನಡನಾಡಿನಲ್ಲಿ ಬೇರೂರಿಸುವ ಸಂದರ್ಭದಲ್ಲಿ ಜಾನಪದ ಗೇಯಪ್ರಕಾರಗಳಲ್ಲಿ ಹಲವನ್ನು ಬಳಸಿ ಕೊಂಡುದಕ್ಕೆ ನಿದರ್ಶನಗಳಿವೆ. ಇದೇ ಕೆಲಸವನ್ನು ಅಣ್ಣಮಾಚಾರ್ಯರೂ ಮಾಡಿದರು; ಅವರಿಗಿಂತ ಮುಂಚೆ ಕೃಷ್ಣಮಾಚಾರ್ಯರೂ ಮಾಡಿದ್ದರು. ಮುಂದೆ ಶ್ರೀಪಾದರಾಜರ ಪ್ರಭಾವದಿಂದ ವ್ಯಾಸರಾಯ ಸ್ವಾಮಿಗಳೂ ಪುರಂದರದಾಸರೂ ವಿಶೇಷವಾಗಿ ಮಾಡಿದರು. ಮಂಗಳದ ಹಾಡುಗಳು, ಉದಯರಾಗ, ಲಾಲಿ, ಜೋಗುಳ, ಎಚ್ಚರಿಕೆ, ಶೋಭನ, ಸುವ್ವಿ, ಧವಳ, ನಿವಾಳಿಸುವ ಪದಗಳು ಮೊದಲಾಗಿ ಹಲವು ಗೇಯ ಪ್ರಕಾರಗಳನ್ನು ಜಾನಪದ ನೆಲೆಯಿಂದ ಎತ್ತಿಕೊಂಡು ಅವಕ್ಕೆ ಮಾರ್ಗೀ ಸಂಗೀತದ ಕಳೆಯನ್ನು ಅಳವಡಿಸಿದರು. ವಿಜಯನಗರ ಸಂಸ್ಕೃತಿಯ ಮುಖ್ಯ ಪ್ರವೃತ್ತಿಯೇ ದೇಶಿಯನ್ನು ಮಾರ್ಗಿಯನ್ನಾಗಿ ಪರಿವರ್ತಿಸುವುದೆಂದು ಹಿಂದೆಯೇ ಹೇಳಿದೆನಷ್ಟೆ. ಈ ಸಂಸ್ಕೃತಿಯಿಂದಲೇ ಹೊರಹೊಮ್ಮಿದ ಹರಿದಾಸರು ಮಾಡಿದ ಕೆಲಸವನ್ನು ಈ ಚೌಕಟ್ಟಿನಲ್ಲಿ ಗುರುತಿಸಬೇಕು.

ಲಾಲಿ, ಜೋಗುಳ, ಸುವ್ವಿ, ಉಯ್ಯಾಲೆ ಹಾಡುಗಳು, ಮಂಗಳದ ಹಾಡುಗಳು ಮೊದಲಾದವು ತೆಲುಗು ಕನ್ನಡ ಸಾಹಿತ್ಯಗಳೆರಡರಲ್ಲೂ ವಿಶೇಷವಾಗಿ ಸೇರಿಬಂದುದು ಆ ಕಾಲದಲ್ಲೇ. ಅದಕ್ಕೆ ಅನುಗುಣವಾದ ಸಂಗೀತ ಸಂಯೋಜನೆಯೂ ಸಿದ್ಧವಾಯಿತು. ಮಗುವನ್ನು ಮಲಗಿಸಲು 'ರೀಸಾ' ಎಂಬ ಸ್ವರಕ್ರಮವನ್ನನುಸರಿಸಿ 'ಲಾಲಿ' ಹಾಡುಗಳು ಹೆಚ್ಚಾಗಿ ಶ್ರಮಪ್ರಧಾನವಾದ ಆನಂದಭೈರವಿ,

ನವರೋಜು, ಶ್ರೀರಂಗಗಳಲ್ಲಿಯೂ, ಮಲಗಿದ್ದ ಮಗುವನ್ನು ಎಬ್ಬಿಸಲು ಉತ್ಸಾಹಭರಿತವಾದ ಭೂಪಾಳಿ, ಬೌಳಿ ಮೊದಲಾದ ರಾಗಗಳಲ್ಲಿಯೂ ರಚನೆಗೊಂಡುದು ಸಹಜವೇ. ಹರಿದಾಸರು ಸ್ವೀಕರಿಸಿದ ಜಾನಪದ ಪದ್ಧತಿಯ ಗೇಯಪ್ರಕಾರಗಳು ಬಹುಮಟ್ಟಿಗೆ ಲಯನಪ್ರಧಾನವಾದುವು. ರಚನೆಗಳು ತ್ರಿಶ, ಚತುರಶ್ರ, ಖಂಡಗತಿಗಳಲ್ಲಿ ನಡೆಯುವಾಗ ಸಂಕೀರ್ತನೆಗೆ ಅನುಕೂಲವಾಗುತ್ತವೆ. ಈ ಗುಣವನ್ನು ಹರಿದಾಸರು ಜಾಣ್ಮೆಯಿಂದ ಬಳಸಿಕೊಂಡರು. ಕೃಷ್ಣಮಾಚಾರ್ಯರ ವಚನಗಳು ಲಯಪ್ರಧಾನವಾಗಿದ್ದವು; ಅವು ರಚನೆಯಲ್ಲಿ ಛಂದೋಬದ್ಧವಾಗಿ, ತಾಳಬದ್ಧವಾಗಿರುತ್ತಿದ್ದುವು. ಇವರೂ ಅಣ್ಣಮಾಚಾರ್ಯರೂ ತಮ್ಮ ರಚನೆಗಳನ್ನು ಜಾನಪದ ಸಂದರ್ಭದಿಂದ ಎತ್ತಿಕೊಂಡ ಕೊಂಡಮಲಹರಿ, ಯರಕುಲ ಕಾಂಬೋದಿ, ದೇಶಾಳ, ಪಾಡಿ, ಭೌಳಿ, ಮುಖಾರಿ ಪಂತು, ಸಾಳಂಗ, ಗೀತನಟ್ಟ, ಅಚಾಲಿ, ಅಮರಸಿಂಧು ಮೊದಲಾದ ರಾಗಗಳಲ್ಲೇ ಸಿದ್ಧಪಡಿಸಿದರೆಂಬುದನ್ನೂ ಗಮನಿಸಬೇಕು. ಈ ರಾಗಗಳು ಬಹುಮಟ್ಟಿಗೆ ಹರಿದಾಸರ ರಚನೆಗಳಲ್ಲೂ ತೋರಿಕೊಳ್ಳುತ್ತವೆ. ಹೀಗೆ ದಾಸಕೂಟದ ಕಲ್ಪನೆಗೆ ಕಾರಣರೆನ್ನಬಹುದಾದ ಶ್ರೀಪಾದರಾಜರು ದೇಶ ಭಾಷೆಯಾದ ಕನ್ನಡದಲ್ಲಿ ತಾವೇ ರಚನೆಗಳನ್ನು ಮಾಡಿದುದಲ್ಲದೆ ಹರಿದಾಸರ ವ್ಯವಹಾರದಲ್ಲಿ ಕನ್ನಡ ಕೃತಿಗಳಿಗೇ ಹೆಚ್ಚಿನ ಬೆಲೆಯನ್ನು ಒದಗಿಸಿಕೊಟ್ಟರು. ಅಷ್ಟು ಮಾತ್ರವಲ್ಲದೆ, ಜನಸಾಮಾನ್ಯರ ಅಭಿರುಚಿಗಳನ್ನೂ ಅಗತ್ಯವನ್ನೂ ಗಮನಿಸಿ ಜಾನಪದ ನೆಲೆಯಿಂದ ಗೇಯಪ್ರಕಾರಗಳನ್ನೂ ಗಾನಪ್ರಕ್ರಿಯೆಗಳನ್ನೂ ತಮ್ಮ ರಚನೆಗಳಲ್ಲಿ ಅಳವಡಿಸಿಕೊಂಡರು. ಇದೊಂದು ಕ್ರಾಂತಿಯೇ ಎನ್ನಬಹುದು. ಕನ್ನಡನಾಡಿನ ಆಧ್ಯಾತ್ಮಿಕರಂಗದಲ್ಲಿ ವೈದಿಕ ನಿಷ್ಠೆಯ ಹಂದರದಲ್ಲಿ ಈ ಪ್ರಯೋಗವನ್ನು ನಡೆಸಿದವರು ಶ್ರೀಪಾದರಾಜರೇ. ಇವರ ಪ್ರಭಾವಕ್ಕೆ ಒಳಗಾದ ವ್ಯಾಸರಾಯಸ್ವಾಮಿಗಳು ಇವರ ಪ್ರಯೋಗವನ್ನು ಇನ್ನಷ್ಟು ರೂಢಿಸಿದರು. ವ್ಯಾಸರಾಯಸ್ವಾಮಿಗಳಿಂದ ಸ್ಫೂರ್ತಿಯನ್ನು ಪಡೆದುಕೊಂಡ ಪುರಂದರದಾಸರು ಈ ಪ್ರಯೋಗಕ್ಕೆ ವಿಶಿಷ್ಟವಾದ ಸಾಫಲ್ಯವನ್ನು ತಂದುಕೊಟ್ಟರು. ಪುರಂದರದಾಸರು ಶಾಸ್ತ್ರೀಯ ಸಂಗೀತದಲ್ಲೂ ನುರಿತದವರಾಗಿದ್ದುದರಿಂದ ಅವರಿಗೆ ರಾಗ ತಾಳ ಪ್ರಕಾರಗಳಲ್ಲಿ ದೇಶಿಯನ್ನು ಮಾರ್ಗಿಯಾಗಿ ಮಾರ್ಪಡಿಸುವುದು ಸುಲಭವಾಯಿತು. ಆಗತಾನೆ ಚಿಗುರೊಡೆದು ಕಾಣಿಸಿಕೊಳ್ಳುತ್ತಿದ್ದ ಹೊಸಗನ್ನಡ ಶೈಲಿಗೆ ಇದು ಪೂರಕವಾಯಿತು. ಪುರಂದರದಾಸರು ವೃತ್ತನಾಮ, ತ್ರಿಪದಿ, ಚೌಪದಿ, ಷಟ್ಪದಿ, ತತ್ತ್ವಸುವ್ವಾಲಿ, ಸಾಂಗತ್ಯ. ಕಂದ, ಸೀಸಪದ್ಯ. ಗದ್ಯ ಮೊದಲಾದ ಕಾವ್ಯ ಪ್ರಭೇದಗಳಲ್ಲೂ ಪ್ರಯೋಗ ನಡೆಸಿದರು; ಭಾವಗೀತೆಗಳನ್ನೂ ರಚಿಸಿದರು. ಇವಕ್ಕೆಲ್ಲ ಸಂಗೀತದ ಉಡುಗೆಯನ್ನು ತೊಡಿಸಿ ಸಾಹಿತ್ಯ- ಸಂಗೀತಗಳೆರಡರಲ್ಲೂ ಹೊಸ ದಾರಿಯನ್ನು ತೋರಿಸಿದರು.

ಹೀಗೆ ಹರಿದಾಸರು ನಡೆಸಿದ ಕ್ರಾಂತಿಯ ಸ್ವಭಾವಕ್ಕೆ ಅನುಗುಣವಾಗಿ, ಪುರಂದರದಾಸರು ಜನಸಾಮಾನ್ಯರನ್ನೇ ಗಮನದಲ್ಲಿರಿಸಿಕೊಂಡು, ತಮ್ಮ ಪದಗಳನ್ನು ರಚಿಸಿದರು, ತಮ್ಮ ಸಾಮಾಜಿಕ ಕೈಂಕರ್ಯವನ್ನು ಕೈಗೊಂಡರು. ಆದುದರಿಂದಲೇ ಅವರ ರಚನೆಗಳಲ್ಲಿ ಕ್ಲಿಷ್ಟವೆಂಬ ಪದಗಳಾಗಲಿ, ಸುದೀರ್ಘವಾದ ಸಮಾಸಗಳಾಗಲಿ ತೀರ ವಿರಳ, ಸರಳವಾದ ಮಾತು, ಸ್ವಭಾವೋಕ್ತಿ, ಮಧುರವಾದ ಪದಪುಂಜ, ಲಯಬದ್ಧವಾದ ಪಂಕ್ತಿಗಳು. ಅಲ್ಲಲ್ಲಿ ಉಚಿತವಾದಷ್ಟು ಪ್ರಾಸಗಳು (ಆದ್ಯಕ್ಷರ ಪ್ರಾಸ, ದ್ವಿತೀಯಾಕ್ಷರ ಪ್ರಾಸ, ಅಂತ್ಯಾಕ್ಷರ ಪ್ರಾಸ). ನೆನಪಿಗೆ ನೆರವಾಗುವಷ್ಟೇ ಸಾಲುಗಳು ಇವು ಅವರ ರಚನೆಗಳಲ್ಲಿ ಎದ್ದು ಕಾಣುತ್ತವೆ. ಸಾಮಾನ್ಯವಾಗಿ ಅವರ ಪದಗಳಿಗೆ ವಿವರಣೆಯ ಅಗತ್ಯವೇ

ಇರದು. ಆದರೆ ಅವರ ಕಾಲವಾಗಿ ಐನ್ನೂರ ವರ್ಷಗಳಷ್ಟು ಕಳೆದಿರುವುದರಿಂದ, ಅವರು ಬಳಸಿರುವ ಹಲವು ಮಾತುಗಳು ಇಂದು ಬಳಕೆಯಿಂದ ಜಾರಿವೆ; ಅವರು ಮಾತುಗಳನ್ನು ಬಳಸಿರುವ ರೀತಿ ಇಂದು ವಿಚಿತ್ರವಾಗಿ ತೋರುತ್ತದೆ. ಮತ್ತು ಆ ಕಾಲಕ್ಕೆ ಜನಸಾಮಾನ್ಯರೆಲ್ಲರಿಗೆ ತಿಳಿದಿದ್ದ ಪುರಾಣ ಸಂದರ್ಭಗಳು, ಕಥಾಪ್ರಸಂಗಗಳು ಇಂದಿನವರಿಗೆ ಬಹುಮಟ್ಟಿಗೆ ತಿಳಿದಿರುವುದಿಲ್ಲ. ಇದರಿಂದ ಪ್ರಸ್ತುತ ಸಂಪುಟಗಳಲ್ಲಿ ಪದಗಳಿಗೆ ವಿವರಣೆಗಳನ್ನು ಕೊಡಬೇಕಾದ ಅಗತ್ಯ ಕಾಣಿಸಿಕೊಂಡಿತು, ಅಷ್ಟೆ. ಪುರಂದರದಾಸರ ಕಾಲದಲ್ಲಾಗಲಿ. ಅನಂತರ ಇನ್ನೂರು ಮುನ್ನೂರು ವರ್ಷಗಳವರೆಗಾಗಲಿ, ಅವರ ಪದಗಳಿಗೆ ವಿವರಣೆಯ ಅಗತ್ಯವೇ ಇರದು. ಆದರೆ ಅವರು ಕಾಲವಾಗಿ ಐನೂರು ವರ್ಷಗಳಷ್ಟು ಕಳೆದಿರುವುದರಿಂದ, ಅವರು ಮಾತುಗಳನ್ನು ಬಳಸಿರುವ ರೀತಿ ಇಂದು ವಿಚಿತ್ರವಾಗಿ ತೋರುತ್ತದೆ. ಮತ್ತು ಆ ಕಾಲಕ್ಕೆ ಜನಸಾಮಾನ್ಯರೆಲ್ಲರಿಗೆ ತಿಳಿದಿದ್ದ ಪುರಾಣ ಸಂದರ್ಭಗಳು, ಕಥಾಪ್ರಸಂಗಗಳು ಇಂದಿನವರಿಗೆ ಬಹುಮಟ್ಟಿಗೆ ತಿಳಿದಿರುವುದಿಲ್ಲ. ಇದರಿಂದ ನನ್ನ 'ಪುರಂದರಸಾಹಿತ್ಯ ದರ್ಶನ'ದ ಸಂಪುಟಗಳಲ್ಲಿ ಪದಗಳಿಗೆ ವಿವರಣೆಗಳನ್ನು ಕೊಡಬೇಕಾದ ಅಗತ್ಯ ಕಾಣಿಸಿಕೊಂಡಿತು, ಅಷ್ಟೆ. ಪುರಂದರದಾಸರ ಕಾಲದಲ್ಲಾಗಲಿ, ಅನಂತರ ಇನ್ನೂರು ಮುನ್ನೂರು ವರ್ಷಗಳವರೆಗಾಗಲಿ, ಅವರ ಪದಗಳಿಗೆ ವಿವರಣೆಯ ಅಗತ್ಯವಿರಲಿಲ್ಲ.

ಪುರಂದರದಾಸರು ಪಂಡಿತರಾಗಿದ್ದರೆನ್ನುವುದರಲ್ಲಿ ಸಂಶಯವಿಲ್ಲ. ಶಾಸ್ತ್ರ ಪರಿಶ್ರಮದಲ್ಲಿ ಪ್ರಗಲ್ಭರು: ಕಾವ್ಯ ಪ್ರಯೋಗದಲ್ಲೂ ಅವರು ಪರಿಣತಮತಿಗಳು; ಮತ್ತೆ ಶಾಸ್ತ್ರೀಯ ಸಂಗೀತ ತಜ್ಞರು. ಆದರೆ ಇವು ಯಾವುವನ್ನೂ ಮೇಲೇರಿಸಿಕೊಂಡು ಹೋಗಲಿಲ್ಲ. ಸಾಮಾನ್ಯ ಜನರಂತೆಯೇ ಬದುಕಿ ಬಾಳಿ, ಜನ ಸಾಮಾನ್ಯರಿಗೆ ನೇರವಾಗಿ ತಿಳಿಯುವಂಥ ಶೈಲಿಯನ್ನೇ ಬಳಸಿ, ಅಧ್ಯಾತ್ಮದಲ್ಲಿ ಎಲ್ಲರಿಗೂ ಒಲುವನ್ನು ಒದಗಿಸುವುದೇ ತಮ್ಮ ಬಾಳ ಉದ್ದೇಶವೆಂದು ಭಾವಿಸಿದವರು. ಪಂಡಿತರು ಅವರ ರಚನೆಗಳಲ್ಲಿ ವೇದಾಂತ ಶಾಸ್ತ್ರದ ಪ್ರಮೇಯಗಳನ್ನೆಲ್ಲ ಗುರುತಿಸುವುದು ಸಾಧ್ಯ; ಆದರೆ ನಿರೂಪಣೆಯಲ್ಲಿರುವ ಸರಳತೆ ಯಾರ ಮನಸ್ಸನ್ನೂ ಸೂರೆಗೊಂಡೀತು. ಪಾಂಡಿತ್ಯದ ಕ್ಲೇಶ ಕಾಣಿಸುವುದಿಲ್ಲ. ಕನ್ನಡವನ್ನೇ ಬಳಸಿದರು. ಆದರೆ ಪಂಡಿತರ ಕನ್ನಡವನ್ನಲ್ಲ, ಜನರು ದಿನನಿತ್ಯ ಬಳಸುವ ಆಡುಮಾತನ್ನೇ ಎತ್ತಿಕೊಂಡರು.

ಪುರಂದರದಾಸರ ರಚನೆಗಳು ಶಾಸ್ತ್ರನಿಷ್ಠವೆಂಬ ನಾಗರಿಕ ಸಾಹಿತ್ಯ ಪ್ರಕಾರಕ್ಕೂ ಸೇರಬಲ್ಲುವು, ಜಾನಪದ ಸಾಹಿತ್ಯಕ್ಕೂ ಸೇರಬಲ್ಲವು. ಗದ್ಯಕ್ಕಿಂತಲೂ ಪದ್ಯ ಪ್ರಭಾವಶಾಲಿಯಾದುದೆಂಬುದನ್ನು ಮನಗಂಡು ಹಾಡುಗಳನ್ನೇ ಹೆಣೆದರು; ಭಕ್ತಿಗೆ ಸಂಗೀತ ನೆರವಾದೀತೆಂದು ಬಗೆದು ಹಾಡುಗಳಿಗೆ ಶಾಸ್ತ್ರೀಯ ಸಂಗೀತದ ಪರಿಮಳವನ್ನೂ ಸೇರಿಸಿದರು. ಆದರೆ ಶಾಸ್ತ್ರೀಯ ಸಂಗೀತದ ಮೇಲಾಟವಿರದಂತೆ ಎಚ್ಚರವಹಿಸಿದರು. ಅವರ ಕೃತಿಗಳಲ್ಲಿ ಕೆಲವು ಮಾತ್ರ ಶುದ್ಧಸಂಗೀತದ ಪ್ರಕಾರಕ್ಕೆ ಸೇರುತ್ತವೆ; ಮತ್ತೆ ಕೆಲವು ನಾಟ್ಯಪದ್ಧತಿಗೆ ಸಾಮಗ್ರಿಯಾಗುತ್ತವೆ. ಉಳಿದಂತೆ, ಸಾಹಿತ್ಯದ ಸೊಗಸನ್ನು ಎತ್ತಿ ಕಾಣಿಸುವಷ್ಟೇ ಸಂಗೀತದ ಬಳಕೆ. ಸಂಗೀತದಲ್ಲಿ ಅನಭಿಜ್ಞರಾದವರೂ ಈ ಹಾಡುಗಳ ಧಾಟಿಯನ್ನು ಬೇಗನೆ ಹಿಡಿಯಬಹುದು. ಮನೆಗಳಲ್ಲಿ ಹೆಂಗಸರು ಹಬ್ಬಹರಿದಿನಗಳಲ್ಲಿ, ಹಸೆ ಪೂಜೆ ಸಂಸ್ಕಾರ ವಿಧಿಗಳಲ್ಲಿ ಪಾಲ್ಗೊಳ್ಳುವಾಗ, ಗಂಡಸರು ಪೂಜೆಗೆ ಸಿದ್ಧಮಾಡಿಕೊಳ್ಳುವಾಗ, ದಾಸರು ಯಾವ ಪೂರ್ವ

ಸಿದ್ಧತೆಯೂ ಇಲ್ಲದೆ, ಬೀದಿಗಳಲ್ಲಿ ಉಪಾದಾನಕ್ಕೆ ಹೋಗುತ್ತಿರುವಾಗ ಇವರ ಹಾಡುಗಳನ್ನು ಹಾಡಿಕೊಳ್ಳುವಷ್ಟು ಸುಲಭವಾಗಿ, ಸುಬೋಧವಾಗಿ ಇರುತ್ತವೆ. ಮತ್ತು ಒಮ್ಮೆ ಕೇಳಿದರೆ ಮರೆಯದಿರುವಂಥ ಮಾತುಗಳು, ಒಕ್ಕಣೆ; ಎಲ್ಲರಿಗೂ ಪ್ರಸಕ್ತವಾದ ವಿಚಾರವೇ; ಪಂಡಿತರಿಗಾಗಲಿ ಪಾಮರರಿಗಾಗಿ ಮನಮುಟ್ಟುವಂಥ ಬೋಧೆ; ತಿಳಿಯಾದ ಮಾತು, ಆಳವಾದ ಭಾವ. ಹೀಗಿರುವುದರಿಂದಲೇ ಪುರಂದರದಾಸರು ಜನಜೀವನದ ಮೇಲೆ ಪ್ರಭಾವವನ್ನು ಬೀರುವುದು ಸಾಧ್ಯವಾಯಿತು. ಶ್ರೀಪಾದರಾಜರಿಗಾಗಲಿ, ವ್ಯಾಸರಾಯಸ್ವಾಮಿಗಳಿಗಾಗಲಿ, ಪುರಂದರದಾಸರಾದ ಮೇಲೆ ಬಂದ ಹರಿದಾಸರಿಗಾಗಲೀ ಈ ಸೌಲಭ್ಯವಿರಲಿಲ್ಲ.

ಜನರ ನಡುವೆ ಓಡಿಯಾಡುವ ಹರಿದಾಸರ ಆಚಾರ, ವಿಚಾರ, ಧೋರಣೆ, ಒಕ್ಕಣೆ ಎಲ್ಲಕ್ಕೂ ಜನಪ್ರಿಯವಾದ ಪುರಾಣಗಳೇ ಆಧಾರವಾದುದು ಸಹಜವೇ. ಈ ಮೊದಲೇ ಪ್ರಾಸಂಗಿಕವಾಗಿ ಪುರಾಣಗಳ ಸಂಕ್ಷಿಪ್ತ ಸಮಾಲೋಚನೆಯೂ ಬಂದಿದೆ. ಇಲ್ಲಿ ಅದೇ ವಿಚಾರವನ್ನು ಇನ್ನಷ್ಟು ಹರವಿನ ವಿವೇಚನೆಗೆ ಎತ್ತಿಕೊಳ್ಳಬೇಕಾದ ಅಗತ್ಯವಿದೆ. ಎಲ್ಲರೂ ಬಲ್ಲಂತೆ ಕೃಷ್ಣಲೀಲೆಯನ್ನು ಕುರಿತು ಪುರಂದರದಾಸರು ರಚಿಸಿರುವ ಪದಗಳು ಅನೇಕ ಇವೆ. ಕೃಷ್ಣಲೀಲೆಗೆ ಪುರಾಣಗಳೇ ಆಕರ (ವಿಷ್ಣುಪುರಾಣ, ಭಾಗವತ ಪುರಾಣಗಳು) ಆದುದರಿಂದ ಪುರಾಣದ ಹಿನ್ನೆಲೆಯನ್ನು ಅರಿತುಕೊಳ್ಳ ಬೇಕಾಗುತ್ತದೆ. ಮತ್ತು ಅವರ ಸುಳಾದಿಗಳಿಗೂ, ಹಲವು ಉಗಾಭೋಗಗಳಿಗೂ, ಉದಯರಾಗಗಳಿಗೂ ಪುರಾಣಗಳೇ ಸಾಮಗ್ರಿಯನ್ನು ಒದಗಿಸಿವೆ. ಸುಳಾದಿ ಮತ್ತಿತರ ಗೇಯ ಪ್ರಕಾರಗಳು ಸಂಕೀರ್ತನ ಪದ್ಧತಿಗೆ ಸೇರಿದುವು; ಹರಿದಾಸರಿಗೆ ಪ್ರಿಯವಾದ ಸಂಕೀರ್ತನ ಪದ್ಧತಿಗೂ ಪುರಾಣಗಳೇ ಸ್ಫೂರ್ತಿಯನ್ನೂ ಸಾಮಗ್ರಿಯನ್ನೂ ಶೈಲಿಯನ್ನೂ ಒದಗಿಸಿದುವು.

೨

ನಮ್ಮ ಜನಜೀವನದಲ್ಲಿ ಪುರಾಣಗಳ ಪ್ರಭಾವ ಹೆಚ್ಚಿನದೇ. ಸುಮಾರು ಒಂದು ಸಾವಿರ ವರ್ಷಗಳಿಂದ ಹಿಂದೂ ಧರ್ಮದ ಸ್ವರೂಪ ಪೌರಾಣಿಕ ಚೌಕಟ್ಟಿನಲ್ಲಿ ಸಿದ್ಧವಾದುದು. ನಮ್ಮ ದಿನನಿತ್ಯದ ಪೂಜೆ ಪುನಸ್ಕಾರಗಳು. ಗುಡಿಗುಂಡಾರಗಳು, ಹಬ್ಬ ಹರಿದಿನಗಳು, ವಿಧಿ ನಿಷೇಧಗಳು, ಯಾತ್ರೆ ತೀರ್ಥಗಳು, ವ್ರತಕಲ್ಪಗಳು, ನಂಬಿಕೆಗಳು, ಕಲ್ಪನೆಗಳು ಇವೆಲ್ಲವೂ ಪುರಾಣಗಳಿಂದ ಮೂಡಿಬಂದುವೇ. ಇವಕ್ಕೆಲ್ಲ ವೈದಿಕ ಸಾಹಿತ್ಯದಲ್ಲಿ ಸಮರ್ಥನೆಯನ್ನು ಕಾಣಿಸುವುದು ಕಷ್ಟ. ದಾನದ ಮಹಿಮೆ, ತೀರ್ಥ ಯಾತ್ರೆಯ ಫಲ, ಕ್ಷೇತ್ರಗಳ ಮಾಹಾತ್ಮ್ಯ, ವರ್ಣಾಶ್ರಮ ಧರ್ಮಗಳ ಅಗತ್ಯ, ಭಕ್ತಿಯ ಬಗೆ ಇವೆಲ್ಲ ಪುರಾಣಗಳಲ್ಲಿ ಬರುವ ವಿವರಗಳೇ. ಪುರಂದರದಾಸರೂ, ಅವರ ಗುರುಗಳಾದ ವ್ಯಾಸರಾಯಸ್ವಾಮಿಗಳೂ, ಅವರ ಗುರುಗಳಾದ ಶ್ರೀಪಾದರಾಜರೂ ತಮ್ಮ ಸಾಹಿತ್ಯಕ್ಕೆ ಸಾಮಗ್ರಿಯನ್ನು ಪುರಾಣಗಳಿಂದಲೇ ಆಯ್ದುಕೊಂಡರು. ನಾಡಿನ ಇಂತರ ಸಂತರೂ (ಚೈತನ್ಯ, ರಾಮಾನಂದ, ವಲ್ಲಭ, ನಾಮದೇವ, ಜ್ಞಾನೇಶ್ವರ, ಸೂರದಾಸ, ಮೀರಬಾಯಿ ಮತ್ತಿತರರು) ಹೀಗೆಯೇ ಪುರಾಣಗಳಿಂದ ಪ್ರಭಾವಿತದಾರವರೇ.

ಪುರಾಣಗಳ ಪ್ರಾಚೀನತೆ ಎಷ್ಟೆಂದು ಹೇಳುವುದು ಕಷ್ಟ. ಆದರೆ ವೇದ, ಉಪನಿಷತ್ತು,

ಬ್ರಹ್ಮಸೂತ್ರ ಇವುಗಳನ್ನೆಲ್ಲ ಬದಿಗಿರಿಸಿ ಪುರಾಣವೇ ಜನರಿಗೆ ಮುಖ್ಯವಾದುದು ಒಂದು ಸಾವಿರ ವರ್ಷಗಳಿಂದೀಚೆಗೇ: ಸುಮಾರು ಆರೇಳು ನೂರು ವರ್ಷಗಳಿಂದ ಅದರ ಪ್ರಭಾವ ಹೆಚ್ಚುತ್ತ ಬಂದಿತೆಂದು ತೋರುತ್ತದೆ. ವೈದಿಕ ಧರ್ಮದ ಯಜ್ಞಯಾಗಾದಿಗಳು ಸಾಮಾನ್ಯ ಜನರಿಗೆ ಕಷ್ಟಸಾಧ್ಯವಾಗಿ, ಉಪನಿಷತ್ತಿನ ಧ್ಯಾನ ದುಸ್ತರವಾಗಿ, ಬ್ರಹ್ಮಸೂತ್ರಗಳ ಜಿಜ್ಞಾಸೆ ಅಸಾಧ್ಯವಾಗಿ ಕಾಣಿಸಿಕೊಂಡಾಗ ಸುಲಭವಾದ ದಾರಿಯನ್ನು ಪುರಾಣಗಳು ತೋರಿಸಿದುವು. ಯಜ್ಞಯಾಗಾದಿಗಳು ಯಾವ ಫಲವನ್ನು ನೀಡುವುವೋ ಅದೇ ಫಲವನ್ನು, ಅದಕ್ಕಿಂತ ಹೆಚ್ಚಿನ ಫಲವನ್ನು, ಪಡೆದು ಕೊಳ್ಳುವ ಸುಲಭ ಮಾರ್ಗವನ್ನು ಪುರಾಣಗಳು ಸೂಚಿಸಿದುವು. 'ಅಲ್ಪೇನೈವ ಪ್ರಯಾಸೇನ ಧರ್ಮಾ ಸಿದ್ಧ್ಯಂತಿ ವೈ ಕಲೌ' ಎಂದು ವಿಷ್ಣುಪುರಾಣ, ಮತ್ಸ್ಯಪುರಾಣಗಳಲ್ಲಿ ಮಾತಿದೆ. ಕಲಿಯುಗದಲ್ಲಿ ಬಹುಶ್ರಮವಿಲ್ಲದೆ ಸಿದ್ಧಿ ದೊರೆಯುವುದೆಂದು ತಾತ್ಪರ್ಯ. ಈ ಭರವಸೆ ಪುರಾಣಗಳ ಜನಪ್ರೀತಿಗೆ ಕಾರಣವಾಯಿತು. ನಾಮಸ್ಮರಣೆ, ಸಂಕೀರ್ತನೆ, ಭಜನೆ ಇಷ್ಟೇ ಇಹಪರಗಳೆರಡರಲ್ಲೂ ಸುಖಕ್ಕೆ ಕಾರಣವಾಗಬಹುದೆಂದು ಪುರಾಣಗಳು ಹೇಳಿದುವು. ಕಡೆಗೆ ಪುರಾಣ ಕಥೆಗಳನ್ನು ಕೇಳುವುದೇ ಸಾಕು ಸಿದ್ಧಿಗಳಿಗೆ, ಎಂದೂ ಪ್ರತೀತಿ ಬೆಳೆಯಿತು! 'ಹರಿಕಥಾ ಶ್ರವಣ ಮಾಡೋ ನಿರಂತರ' ಎನ್ನುವುದು ನಮ್ಮ ಹರಿದಾಸರ ಬೋಧೆ ಮಾತ್ರವಲ್ಲ; ನಾಡಿನ ಎಲ್ಲ ಸಂತರೂ ಇದನ್ನು ಎತ್ತಿ ಹಿಡಿದರು.

ಸುಮಾರು ಸಾವಿರ ವರ್ಷಗಳಿಂದೀಚೆಗೆ ಪುರಾಣವೆಂಬುದು ಸ್ಪಷ್ಟವಾದ, ನಿರ್ದಿಷ್ಟವಾದ ಒಂದು ಧಾರ್ಮಿಕ ಸಾಹಿತ್ಯ ಪ್ರಕಾರವಾಗಿದೆ. ಆದರೆ ಅದಕ್ಕೆ ಮೊದಲು ಪುರಾಣ ಎಂದರೆ ಏನಾಗಿದ್ದಿತು, ಅದರ ಪ್ರಾಮಾಣ್ಯ ಎಷ್ಟರಮಟ್ಟಿಗಿದ್ದಿತು ಹೇಳುವುದು ಕಷ್ಟ. ಪುರಾಣವೆಂಬ ಕಲ್ಪನೆಯೇನೋ ಶತಪಥ ಬ್ರಾಹ್ಮಣದಷ್ಟು ಹಳೆಯದು. ರಾಜಸೂಯಯಾಗದಲ್ಲಿ ಪಾರಿಪ್ಲವವೆಂಬ ಅಂಗವಿಧಿಯಿದೆ. ಅದರ ಒಂಬತ್ತನೆಯ ದಿನದಂದು ಹೋತೃವಾದವನು ಯಾವುದಾದರೊಂದು ಪುರಾಣ ಪ್ರಸಂಗವನ್ನು ಪಠಿಸಬೇಕೆಂಬ ವಿಧಿ ಶತಪಥ ಬ್ರಾಹ್ಮಣದಲ್ಲಿ (೧೩,೪,೩) ಕಂಡು ಬರುತ್ತದೆ. ಹೀಗೆ ಹೇಳುವಾಗ 'ಇತಿಹಾಸ ಪುರಾಣ'ವೆಂದು ಜೋಡಿಸಿ ಹೇಳಿರುವುದು ಸ್ವಾರಸ್ಯವಾಗಿದೆ. ತೈತ್ತಿರೀಯ ಅರಣ್ಯಕವು (೨,೧೦) ಪುರಾಣದೊಂದಿಗೆ ಬ್ರಾಹ್ಮಣ, ಇತಿಹಾಸ, ಕಲ್ಪ, ಗಾಥಾ, ನಾರಾಶಂಸಿಗಳನ್ನೂ ಜೋಡಿಸುತ್ತದೆ. ನಾರಾಶಂಸಿಯೆಂದರೆ ಖ್ಯಾತಿವೆತ್ತ ಮನುಷ್ಯರನ್ನು ಕುರಿತು ಮಾಡಿದ ಪ್ರಶಂಸೆ. ಇದು ಋಗ್ವೇದದಲ್ಲೇ ಕಂಡುಬರುವ ಭಾಗ, ಮುಂದೆ ಬೆಳೆಯಿತೆಂದು ತೋರುತ್ತದೆ. ಗಾಥೆ(ಗಾಹೆ)ಯೆಂದರೆ ಯಾವುದಾದರೊಂದು ಪ್ರಸಂಗವನ್ನು ಕುರಿತು, ಯಾರೊಬ್ಬರ ಸಾಹಸವನ್ನು ಕುರಿತು ಮಾಡಿದ ಹಾಡುಗಬ್ಬ; ಸಾಮಾನ್ಯವಾಗಿ ವೀರಗಾಥೆಗಳು, ಕಲ್ಪವೆಂಬ ಸಾಹಿತ್ಯ ಪ್ರಕಾರದಲ್ಲಿ ಮನುಷ್ಯರೂ ದೇವತೆಗಳೂ ಸೇರಿದಾಗ ಜರುಗುವ ಅದ್ಭುತ ಪ್ರಸಂಗಗಳು ಮುಖ್ಯ ವಿಷಯ. ಇತಿಹಾಸವೆಂದರೆ ತೀರ ಹಿಂದೆ ನಡೆದ ಒಂದು ಪ್ರಮುಖವಾದ ಪ್ರಸಂಗ, ಅದರ ಹಿನ್ನೆಲೆ, ಅದರಲ್ಲಿ ಪಾಲ್ಗೊಂಡವರು, ಅದರಿಂದ ಒದಗಿದ ಪ್ರಯೋಜನ ಇವನ್ನು ಕುರಿತು ವಿವರವಾಗಿ ಹೇಳುವುದು. ಮಹಾಭಾರತ ಒಂದು ಇತಿಹಾಸವೇ.

ಇನ್ನು ಪುರಾಣವೆಂದರೇನು? ಪುರಾಣವೆಂಬ ಮಾತಿಗೆ ಹಳೆಯ ಕಾಲದ ವಿಚಾರಗಳನ್ನು ಹೇಳುವುದು ('ಪುರಾ ಅನಕ್ತಿ') ಅಥವಾ ಹಳೆಯ ಕಾಲದಲ್ಲಿ ಸಿದ್ಧವಾದುದು. ಹಿಂದೆ ಒದಗಿ

ಬಂದುದು ('ಪುರಾ ಭವಂ') ಎಂಬ ಅರ್ಥವೇ ಹಳೆಯದು. 'ಹಳೆಯದಾದರೂ ಹೊಸದು' ('ಪುರಾಪಿ ನವಂ') ಎನ್ನುವ ಒಕ್ಕಣೆ ಹೊಸದೇ! ಮತ್ತು ಪ್ರಾಚೀನ ಉಲ್ಲೇಖಗಳಲ್ಲಿ 'ಪುರಾಣಂ' ಎಂದು ಏಕವಚನ ಒಕ್ಕಣೆ ಹೊಸದೇ! ಮತ್ತು ಪ್ರಾಚಿನ ಉಲ್ಲೇಖಗಳಲ್ಲಿ 'ಪುರಾಣಂ' ಎಂದು ಏಕವಚನ ಪ್ರಯೋಗವೇ ಇರುವುದರಿಂದ, ಮೊದಲಿಗೆ ಪುರಾಣವೆಂಬ ಒಂದೇ ಸಾಹಿತ್ಯಭಾಗ ಇದ್ದಿತೆಂದು ಹೇಳಬಹುದು. 'ಪುರಾಣಂ ಏಕಮೇವಾಸೀತ್ ಸರ್ವಕಲ್ಪೇಷು' ಎಂಬ ವಾಕ್ಯವೂ ಇದೆ. ಮನುಸ್ಮೃತಿಯಲ್ಲಿಯೂ ಕುಮಾರಿಲಭಟ್ಟರ ತಂತ್ರವಾರ್ತಿಕದಲ್ಲಿಯೂ ಇದೇ ಗ್ರಹಿಕೆಯಿದೆ. ಮನುಸ್ಮೃತಿಯ ಒಂದು ಮಾತು-

> 'ಪುರಾಣಂ ಮಾನವೋ ಧರ್ಮಃ ಸಾಂಗೋ ವೇದಾಶ್ಚಿಕಿತ್ಸಿತಂ।
> ಆಜ್ಞಾಸಿದ್ಧಾನಿ ಚತ್ವಾರಿನ ಹಂತವ್ಯಾನಿ ಹೇತುಭಿಃ॥'

ಎನ್ನುವುದು. ಪುರಾಣ, ಮನುಧರ್ಮಶಾಸ್ತ್ರ, ವೇದ, ವೈದ್ಯ ಈ ನಾಲ್ಕು ಸ್ವತಃ ಪ್ರಮಾಣಭೂತವಾದುವು; ಅವುಗಳನ್ನು ನಮ್ಮ ಯುಕ್ತಿಯಿಂದ ಪರೀಕ್ಷಿಸಲು ತೊಡಗಬಾರದು ಎಂದು ಮಾತಿನ ತಾತ್ಪರ್ಯ. ಈ ನಾಲ್ಕಕ್ಕೆ ಸಮನಾದ ಪ್ರಾಮಾಣ್ಯವಿದೆ ಎಂದು ಕುಮಾರಿಲಭಟ್ಟರ ಒಕ್ಕಣೆ (' ಇತಿ ಹಿ ತುಲ್ಯವತ್ ಪ್ರಾಮಾಣ್ಯಸ್ಮರಣಂ') 'ಅದು ಹೇಗಾದರಿರಲಿ, 'ಪುರಾಣಂ' ಎಂದು ಏಕವಚನದಲ್ಲಿ ಹೇಳಿರುವುದನ್ನು ಗಮನಿಸಬೇಕು. ಮನುಸ್ಮೃತಿಗೆ ವ್ಯಾಖ್ಯಾನವನ್ನು ಬರೆದ ಮೇಧಾತಿಥಿಯೂ ಹಲವು ವೇಳೆ 'ಪುರಾಣ'ದಿಂದ ಮಾತುಗಳನ್ನು ಉದ್ಧರಿಸುತ್ತಾನೆ; ಹಾಗೆ ಮಾಡುವಾಗಲೆಲ್ಲ 'ಯಥಾ ಪುರಾಣೇ ಉಕ್ತಂ' ಎಂದಷ್ಟೇ ಹೇಳಿ ಯಾವ ಪುರಾಣವೆಂದು ನಿರ್ದಿಷ್ಟವಾಗಿ ಸೂಚಿಸುವುದಿಲ್ಲ.

ಆದರೆ ಮುಂದೆ ಪುರಾಣಗಳಲ್ಲಿ ವಿಭಜನೆ ತೋರಿಕೊಂಡಿತು. 'ಮಿತಾಕ್ಷರ' ಎಂಬ ಸುಪ್ರಸಿದ್ಧ ಧರ್ಮಶಾಸ್ತ್ರಗ್ರಂಥ ಸಿದ್ಧವಾದ ಕಾಲಕ್ಕೆ ಆರು ಪುರಾಣಗಳಿದ್ದುವು. ಅಪರಾರ್ಕನ ಕಾಲಕ್ಕೆ ಇಪ್ಪತ್ತು ಪುರಾಣಗಳಾದುವು; ಸ್ಮೃತಿಚಂದ್ರಿಕೆಯು ಇಪ್ಪತ್ತೆರಡು ಪುರಾಣಗಳನ್ನು ಉಲ್ಲೇಖಿಸಿದೆ. ಮಧ್ಯಯುಗೀನ ಧರ್ಮಶಾಸ್ತ್ರ ನಿಬಂಧಗಳಲ್ಲಿ ಒಟ್ಟು ನಲವತ್ತು ಬೇರೆ ಬೇರೆ ಪುರಾಣಗಳ ಪ್ರಸ್ತಾಪವನ್ನು ಗುರುತಿಸಬಹುದು. ಪುರಾಣಗಳಲ್ಲಿ ಮಹಾಪುರಾಣ, ಉಪಪುರಾಣಗಳೆಂಬ ಭೇದವೂ ಬಳಕೆಗೆ ಬಂದಿದೆ. ಹದಿನೆಂಟು ಮಹಾಪುರಾಣಗಳನ್ನೂ ಹದಿನೆಂಟು ಉಪಪುರಾಣಗಳನ್ನೂ ಎಣಿಸುವುದು ವಾಡಿಕೆ. ಮತ್ಸ್ಯಪುರಾಣ, ಭಾಗವತ ಪುರಾಣ ಮೊದಲಾದ ಪುರಾಣಗಳಲ್ಲೇ ಈ ಎಣಿಕೆಯಿದೆ ಆದರೆ ಹದಿನೆಂಟು ಪುರಾಣಗಳು ಯಾವುವು ಎಂಬ ವಿಚಾರವಾಗಿ ಒಮ್ಮತವಿಲ್ಲ. ಅವುಗಳ ಗಾತ್ರವೂ ಅಷ್ಟೇ ಅನಿಶ್ಚಿತ. ಮತ್ಸ್ಯಪುರಾಣವು ಹದಿನೆಂಟು ಪುರಾಣಗಳನ್ನು ಹೆಸರಿಸಿ ಅವುಗಳೆಲ್ಲದರ ಪರಿಮಿತಿ ನಾಲ್ಕು ಲಕ್ಷ ಶ್ಲೋಕಗಳೆಂದು ಹೇಳುತ್ತದೆ. ಆದರೆ ವಿಷ್ಣುಪುರಾಣದ ಪರಿಮಿತಿಯನ್ನು ಇಪ್ಪತ್ನಾಲ್ಕು ಸಾವಿರ, ಇಪ್ಪತ್ತು ಸಾವಿರ, ಹತ್ತು ಸಾವಿರ, ಎಂಟು ಸಾವಿರ ಶ್ಲೋಕಗಳೆಂದು ಬಗೆಬಗೆಯಾಗಿ ಹೇಳುವುದಿದೆ. ಆದರೆ ಈ ಪುರಾಣಕ್ಕೆ ವ್ಯಾಖ್ಯಾನ ಮಾಡಿರುವವನು ಆರು ಸಾವಿರಶ್ಲೋಕಗಳನ್ನು ಮಾತ್ರ ಗ್ರಹಿಸಿದ್ದಾನೆ! ಹೀಗೆಯೇ ಇತರ ಪುರಾಣಗಳ ಪರಿಮಿತಿಯೂ ಸಂದಿಗ್ಧವಾದುದು. ಪುರಾಣಗಳು ಕಾಲಕಾಲಕ್ಕೆ ಹಿಗ್ಗುತ್ತ ಬಂದುವೆಂದು ತೋರುತ್ತದೆ.

ವಿಷ್ಣುಪುರಾಣವು (ಪದ್ಮೋತ್ತರಖಂಡ, ೪೩) ಹದಿನೆಂಟು ಪುರಾಣಗಳನ್ನು ಮೂರು ವರ್ಗಗಳಾಗಿ ವಿಂಗಡಿಸಿ ವಿಷ್ಣು, ನಾರದೀಯ, ಭಾಗವತ, ಗರುಡ, ಪದ್ಮ, ವರಾಹ ಈ ಪುರಾಣಗಳು ಸಾತ್ವಿಕವೆಂದೂ; ಬ್ರಹ್ಮಾಂಡ, ಬ್ರಹ್ಮವೈವರ್ತ, ಮಾರ್ಕಂಡೇಯ, ಭವಿಷ್ಯ, ವಾಮನ, ಬ್ರಾಹ್ಮ ಇವು ರಾಜಸ ಪುರಾಣಗಳೆಂದೂ; ಮತ್ಸ್ಯ, ಕೂರ್ಮ, ಲೈಂಗ, ಶೈವ, ಸ್ಕಾಂದ, ಆಗ್ನೇಯ ಈ ಪುರಾಣಗಳು ತಾಮಸವೆಂದೂ ಎಣಿಸುತ್ತದೆ. ಸಾತ್ವಿಕ ಪುರಾಣಗಳ ಫಲ ಮೋಕ್ಷವೆಂದೂ, ರಾಜಸ ಪುರಾಣಗಳ ಫಲ ಸ್ವರ್ಗವೆಂದೂ, ತಾಮಸ ಪುರಾಣಗಳು ನಿರಯಪ್ರಾಪ್ತಿಗೆ ಕಾರಣಗಳೆಂದೂ ಅಲ್ಲಿಯೇ ಹೇಳಿದೆ. ವಾದಿರಾಜರು ಆರು ಪುರಾಣಗಳು ವಿಷ್ಣುವಿನದೆಂದೂ, ಇನ್ನಾರು ಶಿವನದೆಂದೂ, ಮತ್ತಾರು ಬ್ರಹ್ಮನದೆಂದೂ ಹೇಳಿದ್ದಾರೆ. ವಿಷ್ಣು ಸಾತ್ವಿಕ ದೇವತೆ, ಬ್ರಹ್ಮ ರಾಜಸ ದೇವತೆ, ಶಿವನು ತಾಮ್ಮಸ ದೇವತೆ ಎಂದು ಬಗೆಯುವುದನ್ನು ನೆನಪಿಗೆ ತಂದುಕೊಂಡರೆ ಮೇಲಿನ ವಿಭಾಗ ಸಮಂಜಸವಾಗುತ್ತದೆ. ಆದರೆ ಕಡೆಯ ವರ್ಗದ ಪುರಾಣಗಳು ನರಕಕ್ಕೆ ದಾರಿಯಾಗುವುವೆಂದು ಹೇಗೆ ಸಮರ್ಥಿಸಿಕೊಳ್ಳುವರೋ ತಿಳಿಯದು. ತಾಮಸವರ್ಗವು ದೈತ್ಯರಿಗೆ ಮೋಹಕವಾಗಿ, ಅವರನ್ನು ನರಕಕ್ಕೆ ಒಯ್ಯುವುದಕ್ಕೆ ಸಿದ್ಧವಾದುದೆಂದು ಸಮಾಧಾನ ಹೇಳಿದರೂ ಪುರಾಣಗಳ ಪ್ರಯೋಜನ ಮನುಷ್ಯರಿಗೇ ಆಗಿರುವುದರಿಂದ ಈ ವಾದದಲ್ಲಿ ಬಲ ಕಡಮೆ. ಜೀವತ್ರೈವಿಧವನ್ನು ಅನುಸರಿಸಿ, ಸಾತ್ವಿಕ ಜೀವರಿಗೆ ಮುಕ್ತಿಪ್ರದವಾದುವು ಸಾತ್ವಿಕ ಪುರಾಣಗಳು, ರಾಜಸ ಜೀವರಿಗೆ ಮಿಶ್ರಫಲವನ್ನೊದಗಿಸಲು ರಾಜಸ ಪುರಾಣಗಳು, ತಾಮಸ ಜೀವರಿಗೆ ತಮಸ್ಸನ್ನು ಒದಗಿಸಲು ತಾಮಸ ಪುರಾಣಗಳು ಎಂದು ಹರಿದಾಸರು ಹೇಳುವುದೇನೋ ಉಂಟು. ಆದರೆ ಎಲ್ಲ ಪುರಾಣಗಳೂ ವೇದಾರ್ಥದ ಉಪಬೃಂಹಣಕ್ಕಾಗಿ ವೇದವ್ಯಾಸರಿಂದಲೇ ರಚಿತವಾದುವು ಎಂದ ಮೇಲೆ, ಎಲ್ಲ ಪುರಾಣಗಳಲ್ಲೂ 'ಸರ್ವಾರ್ಥಸಂಚಯ'ವಿದೆ ಎಂದಮೇಲೆ ಜೀವಸ್ವರೂಪ, ಯೋಗ್ಯತೆಗಳನ್ನನುಸರಿಸಿ ಪುರಾಣಗಳು ಸಿದ್ಧವಾದುವೆಂದು ಸಾಧಿಸುವುದು ಕಷ್ಟವಾಗುತ್ತದೆ. ಮೇಲಾಗಿ ಮಧ್ವಾಚಾರ್ಯರು ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ಪ್ರಮಾಣಗಳನ್ನು ಪಟ್ಟಿಮಾಡುತ್ತಾ 'ಅಶೇಷ ಪುರಾಣೇಭ್ಯಃ' ಎಂದು ಎಲ್ಲ ಪುರಾಣಗಳನ್ನು ಸೇರಿಸಿಯೇ ಹೇಳಿದ್ದಾರೆ.

ಶಿವರಹಸ್ಯ (ಸಂಭವಕಾಂಡ)ವಲ್ಲಿ ದೇವತೆಗಳಿಗನುಗುಣವಾಗಿ ಪುರಾಣಗಳನ್ನು ಹೊಂದಿಸಿರುವುದನ್ನು ಕಾಣಬಹುದು. ಹತ್ತು (ಶಿವಪುರಾಣ, ಭವಿಷ್ಯಪುರಾಣ, ಮಾರ್ಕಂಡೇಯ ಪುರಾಣ, ಲಿಂಗಪುರಾಣ, ವರಾಹಪುರಾಣ, ಸ್ಕಂದಪುರಾಣ, ಮತ್ಸ್ಯಪುರಾಣ, ಕೂರ್ಮಪುರಾಣ, ವಾಮನಪುರಾಣ ಮತ್ತು ಬ್ರಹ್ಮಾಂಡಪುರಾಣ) ಶಿವದೇವತಾಕವಾದುವೆಂದೂ, ನಾಲ್ಕು (ವಿಷ್ಣುಪುರಾಣ, ಭಾಗವತಪುರಾಣ, ನಾರದೀಯಪುರಾಣ, ಗರುಡಪುರಾಣ) ವಿಷ್ಣುಪರವಾದುವೆಂದೂ, ಎರಡು (ಬ್ರಹ್ಮಪುರಾಣ, ಪದ್ಮಪುರಾಣ) ಬ್ರಹ್ಮಪರವಾದುವೆಂದೂ, ಒಂದು (ಅಗ್ನಿಪುರಾಣ) ಅಗ್ನಿದೇವತಾಕವಾದುದೆಂದೂ, ಒಂದು (ಬ್ರಹ್ಮವೈವರ್ತಪುರಾಣ) ಪಿತೃದೇವತಾಕವಾದುದೆಂದೂ ಇಲ್ಲಿ ಬರುವ ಒಕ್ಕಣೆ. ಆದರೆ ಹೀಗೆ ಸ್ಪಷ್ಟವಾಗಿ ಯಾವ ಪುರಾಣದಲ್ಲೂ ದೇವತಾ ಪಕ್ಷಪಾತ ಕಾಣಬರುವುದಿಲ್ಲ. ಬಹುಮಟ್ಟಿಗೆ ಪುರಾಣಗಳಲ್ಲಿ ಎಲ್ಲ ದೇವತೆಗಳ ಹಿರಿಮೆಯೂ ಪ್ರಸ್ತಾಪಕ್ಕೆ ಬರುತ್ತದೆ. ಕೆಲವೇನೋ (ವಿಷ್ಣುಪುರಾಣ, ಭಾಗವತಪುರಾಣಗಳಂತೆ) ವೈಷ್ಣವ ಪುರಾಣಗಳೆಂದೇ ಸಿದ್ಧವಾಗಿವೆಯೆನ್ನಿ.

ಪುರಾಣಗಳ ಪ್ರಯೋಜನವನ್ನು ಕುರಿತು ಹಳೆಯ ಅಭಿಪ್ರಾಯ, ಅವು ನಾಲ್ಕು ವೇದಗಳ ತಾತ್ಪರ್ಯವನ್ನು ಜನಸಾಮಾನ್ಯರಿಗೆ ಮನದಟ್ಟುಮಾಡಿಕೊಡುವುದೆಂಬುದು. 'ಇತಿಹಾಸ ಪುರಾಣಭ್ಯಾಂ ವೇದಂ ಸಮುಪಬೃಂಹಯೇತ್' ಎಂಬ ಮಾತನ್ನು ಎಲ್ಲ ಶಾಸ್ತ್ರಕಾರರೂ ಮತ್ತೆ ಮತ್ತೆ ಉದ್ಧರಿಸಿದ್ದಾರೆ. ಎಂದ ಮೇಲೆ ವೇದಗಳು, ವೇದಾಂಗಗಳು, ಮತ್ತು ಅವನ್ನು ಅವಲಂಬಿಸಿ ಸಿದ್ಧವಾದ ಶಾಸ್ತ್ರಗಳು ಇವು ಮುಖ್ಯ. ಅವುಗಳ ಉಪಬೃಂಹಣರೂಪವಾದ ಪುರಾಣಗಳು ಗೌಣ ಎಂದಾಯಿತು. ಮುಖ್ಯವಾದ ಶಾಸ್ತ್ರಭಾಗಕ್ಕೆ ಅಧಿಕಾರವಿಲ್ಲದವರಿಗೆ ಗೌಣವಾದ ಸಾಹಿತ್ಯ ಭಾಗ ಅಷ್ಟೆ. ಪುರಾಣಗಳಿಗೆ ಸ್ವತಂತ್ರವಾದ ಬೆಲೆಯಿರದು. ಅಪರಾರ್ಕವೆಂಬ ಸ್ಮೃತಿಕಾರನು ಇದನ್ನು ಸ್ಪಷ್ಟಪಡಿಸಿ ವೇದಗಳಿಂದ ಸಿದ್ಧವಾದ ಧರ್ಮ ಹೆಚ್ಚಿನದು; ಪುರಾಣಾದಿಗಳಿಂದ ಸಿದ್ಧವಾದ ಧರ್ಮ ಕೆಳಮಟ್ಟದ್ದು ಎಂದು ಹೇಳಿದ್ದಾನೆ-

'ಅತಃ ಸ ಪರಮೋ ಧರ್ಮೋ ಯೋ ವೇದಾದಧಿಗಮ್ಯತೇ।
ಅವರಃ ಸ ತು ವಿಜ್ಞೇಯೋ ಯಃ ಪುರಾಣದಿಷು ಸ್ಥಿತಃ॥'

ಆದರೆ ಈ ಪರಿಸ್ಥಿತಿ ಹತ್ತನೇ ಶತಮಾನದಿಂದ ಮುಂದೆ ಮಾರ್ಪಟ್ಟಂತೆ ತೋರುತ್ತದೆ. ಯಜ್ಞವಲ್ಕ್ಯಸ್ಮೃತಿಯಲ್ಲಿ (೧,೧೫) ಹದಿನಾಲ್ಕು ವಿದ್ಯೆಗಳನ್ನು ಎಣಿಕೆ ಮಾಡುವಾಗ ತಾರತಮ್ಯ ಕ್ರಮವನ್ನನುಸರಿಸಿ ಪುರಾಣ, ನ್ಯಾಯ, ಮೀಮಾಂಸೆ, ಧರ್ಮಶಾಸ್ತ್ರ, ಆರು ವೇದಾಂಗಗಳು, ನಾಲ್ಕು ವೇದಗಳನ್ನು ಪಟ್ಟಿಮಾಡಿದ್ದಾರೆ; ಪುರಾಣವನ್ನೇ ಮೊದಲು ಹೇಳಿ ಉಳಿದೆಲ್ಲ ವಿದ್ಯೆಗಳಿಗಿಂತ ಅದು ಮಿಗಿಲಾದುದು ಎಂದು ಕಾಣಿಸಿದ್ದಾರೆ; ಎಂದರೆ ವೇದಗಳಿಗಿಂತಲೂ ಪುರಾಣ ಹೆಚ್ಚು ಮಾನ್ಯವಾಯಿತು! ಮಧ್ವಾಚಾರ್ಯರೂ ಭಾರತತಾತ್ಪರ್ಯನಿರ್ಣಯದಲ್ಲಿ

'ಇತ್ಯಶೇಷ ಪುರಾಣೇಭ್ಯ ಪಾಂಚರಾತ್ರೇಭ್ಯ ಏವ ಚ।
ಭಾರತಾಚ್ಚೈವ ವೇದೇಭ್ಯೋ ರಾಮಾಯಣಾದಪಿ॥'

ಎಂದು ಪ್ರಮಾಣಗಳಲ್ಲಿ ಪುರಾಣಗಳನ್ನೇ ಮೊದಲು ಎಣಿಸಿದ್ದಾರೆ ಈ ಪಟ್ಟಿಯಲ್ಲಿ ಪ್ರಾಮಾಣ್ಯ ತಾರತಮ್ಯವನ್ನೇನೋ ಸೂಚಿಸಿಲ್ಲವೆನ್ನಿ. ಆದರೂ ಪುರಾಣಕ್ಕೆ ಅವರು ಹೆಚ್ಚಿನ ಒತ್ತನ್ನು ಕೊಟ್ಟುದಿದೆ. 'ಕೃತ್ಯಕಲ್ಪತರು' ಮೊದಲಾದ ಸ್ಮೃತಿಗ್ರಂಥಗಳಲ್ಲಿ ಪುರಾಣವೇ ಎಲ್ಲ ಧರ್ಮಶಾಸ್ತ್ರ ಗ್ರಂಥಗಳಿಗೂ ಆಧಾರವೆಂದು ಬಗೆಯಲಾಗಿದೆ.

ಹೀಗೆ ಮಧ್ಯಯುಗದಲ್ಲಿ ಪುರಾಣಗಳು ಮುಖ್ಯವಾದುವು. ಈ ಪ್ರಾಮುಖ್ಯತೆಗೆ ಭಾಗವತಪುರಾಣವು ಗಳಿಸಿಕೊಂಡ ಜನಪ್ರೀತಿಯೂ ಕಾರಣವಾಯಿತೆಂದು ಹೇಳಬಹುದು. ಆರೇಳು ನೂರು ವರ್ಷಗಳಿಂದ ನಮ್ಮ ದೇಶದ ಸಂತರೆಲ್ಲ ಭಾಗವತ ಪುರಾಣವನ್ನು ಹೆಚ್ಚು ಹೆಚ್ಚಾಗಿ ಅವಲಂಬಿಸುತ್ತ ಬಂದಿದ್ದಾರೆ. ಮುಖ್ಯವಾಗಿ ಭಾಗವತವು ಕೃಷ್ಣನನ್ನು ಕುರಿತ ಗ್ರಂಥವಾದುದರಿಂದ ಕೃಷ್ಣಪೂಜೆ ಪ್ರಚಲಿತವಾಗಿರುವ ಕಡೆಗಳಲ್ಲಿ ಭಾಗವತದ ಕೈ ಮೇಲಾಯಿತು. ಕರ್ನಾಟಕ, ಕೇರಳ, ಆಂಧ್ರಪ್ರದೇಶಗಳಲ್ಲೂ ಸೌರಾಷ್ಟ್ರ, ಬಂಗಾಳ, ಉತ್ತರ ಪ್ರದೇಶಗಳಲ್ಲಿಯೂ ಭಾಗವತಕ್ಕೆ ವಿಶೇಷವಾದ ಅದರ ಒದಗಿಬಂದಿತು. ಆದರೆ ಭಾಗವತವೇನು ಪ್ರಾಚೀನ ಪುರಾಣಗಳಲ್ಲೊಂದಲ್ಲ.

ಅದರ ಕಾಲ ಈಚೀಚೆಗೇ. ಶಂಕರಾಚಾರ್ಯರಿಗೆ ಭಾಗವತದ ಪರಿಚಯವಿರಲಿಲ್ಲ; ರಾಮಾನುಜಾಚಾರ್ಯರೂ ಭಾಗವತವನ್ನು ಸ್ಪಷ್ಟವಾಗಿ ಉಲ್ಲೇಖಿಸಿಲ್ಲ. ಆಚಾರ್ಯರಲ್ಲಿ ಮಧ್ವಾಚಾರ್ಯರೇ ಮೊಟ್ಟಮೊದಲಿಗೆ ಭಾಗವತನ್ನು ಆದರದಿಂದ ಕಂಡು ಅದರ ತಾತ್ಪರ್ಯ ನಿರ್ಣಯವೊಂದನ್ನು ಬರೆದರು. ಭಾಗವತಕ್ಕೆ ಬಳಕೆಯಲ್ಲಿರುವ ವ್ಯಾಖ್ಯಾನಗಳಲ್ಲಿ ಮಧ್ವಾಚಾರ್ಯರ ಪರಂಪರೆಗೆ ಸೇರಿದ ವಿಜಯಧ್ವಜತೀರ್ಥರ ವ್ಯಾಖ್ಯಾನವೇ ಮುಖ್ಯವಾದುದು. ಹರಿದಾಸರು ಇದನ್ನು ಹೆಚ್ಚಾಗಿ ಅವಲಂಬಿಸಿರುವುದು ಸಹಜವೇ. ಮುಂದೆ ವಲ್ಲಭಾಚಾರ್ಯರು ಭಾಗವತವು ಉಪನಿಷತ್ತು, ಭಗವದ್ಗೀತೆ, ಬ್ರಹ್ಮಸೂತ್ರಗಳಷ್ಟೇ ಪ್ರಮಾಣಭೂತವಾದುದೆಂದು ಸಿದ್ಧಪಡಿಸಿದರು. ಭಾಗವತವು ಬಹುಮಟ್ಟಿಗೆ ವಿಷ್ಣುಪುರಾಣವನ್ನವಲಂಬಿಸಿ ಸಿದ್ಧವಾದ ಪುರಾಣ.

ಪುರಾಣವನ್ನು ಪಂಚಲಕ್ಷಣಿಯೆಂದು ಬಣ್ಣಿಸುತ್ತಾರೆ. ಸರ್ಗ (ಸೃಷ್ಟಿ), ಪ್ರತಿಸರ್ಗ, ವಂಶ, ವಂಶಾನುಚರಿತ, ಮನ್ವಂತರ ಇವೇ ಐದು ಲಕ್ಷಣಗಳು. ಬ್ರಹ್ಮ ವೈವರ್ತಪುರಾಣವು ಪುರಾಣವನ್ನು 'ಪಂಚಲಕ್ಷಣಾನ್ವಿತಶಾಸ್ತ್ರ'ವೆಂದು ಕರೆಯುತ್ತದೆ. ಮಹಾಪುರಾಣಗಳಿಗೆ ದಶಲಕ್ಷಣಗಳನ್ನೂ ಹೇಳುತ್ತಾರೆ. ಮೇಲೆ ಹೇಳಿದ ಐದು ಲಕ್ಷಣಗಳ ಜೊತೆಗೆ ವೃತ್ತಿ, ರಕ್ಷಾ, ಸಂಸ್ಥಾ, ಹೇತು, ಅಪಾಶ್ರಯ ಎಂದು ಇನ್ನೈದು ಲಕ್ಷಣಗಳನ್ನು ಸೇರಿಸುತ್ತಾರೆ. ಇವುಗಳ ವಿವರಣೆ ಇಲ್ಲಿ ಅನಗತ್ಯ. ಆದರೆ ನಾವು ಪುರಾಣದಲ್ಲಿ ಸಾಮಾನ್ಯವಾಗಿ ಕಾಣುವ ವಿವರಗಳು ಆಚಾರ, ಆಹ್ನಿಕ ಆಶೌಚ, ಆಶ್ರಮ, ಧರ್ಮ, ಶುದ್ಧಿ, ಪ್ರಾಯಶ್ಚಿತ್ತ, ಕರ್ಮವಿಪಾಕ, ನೀತಿ, ಪಾತಕ, ನರಕ, ಸಂಸ್ಕಾರ, ಭಕ್ಷ್ಯಾಭಕ್ಷ್ಯವಿವೇಕ, ಶಾಂತಿ, ತೀರ್ಥ, ದಾನ ಮೊದಲಾದವು. ಮುಖ್ಯವಾಗಿ ಪುರಾಣಗಳ ಪ್ರಯೋಜನವನ್ನು ಧರ್ಮಾಧರ್ಮ ಪರಿಜ್ಞಾನ, ಸದಾಚಾರಪ್ರವರ್ತನ, ಮೋಕ್ಷ, ಮತ್ತು ಭಾಗವಂತನಲ್ಲಿ ಭಕ್ತಿ ('ಪರಮಾ ಗತಿಃ ತದ್ಭಕ್ತಿಃ ಭಗವತಿ ಪ್ರಭೌ'). ಭಕ್ತಿ ಪಂಥಕ್ಕೆ ಪುರಾಣವೇ ಮೂಲಾಧಾರವಾದುದು ಸಹಜವೇ. ಮಧ್ಯಯುಗದಲ್ಲಿ ಜ್ಞಾನಮಾರ್ಗ, ಕರ್ಮಮಾರ್ಗಗಳಿಗಿಂತ ಹೆಚ್ಚಾಗಿ ಭಕ್ತಿಮಾರ್ಗ ಹರಡಿಕೊಂಡು ಪುರಾಣಗಳ ಹೆಗ್ಗಳಿಕೆಗೆ ಕಾರಣವಾಯಿತು.

ಪುರಾಣಗಳು 'ಸರ್ವಲೋಕೋಪಕಾರಕ', ಎಂದರೆ ಲೋಕದ ಎಲ್ಲ ಜನರಿಗೂ ನೆರವಾಗು ವಂಥದು. 'ಎಲ್ಲ ಜನರೆ'ಂದರೆ ಜಾತಿಮತಗಳ, ಅಧಿಕಾರದ, ಸ್ತ್ರೀಪುರುಷ ವಿಭಾಗದ ಭೇದವಿಲ್ಲದಂತೆ. ಇದು ಮುಖ್ಯವಾದ ವಿಚಾರ. ಉಳಿದೆಲ್ಲ ವಿದ್ಯೆಗಳಿಗಿಂತ ಪುರಾಣ ಹೆಚ್ಚು ಜನಪ್ರಿಯವಾದುದು ಈ ಕಾರಣದಿಂದಲೇ. ಹೀಗೆ ಜನ ಸಾಮಾನ್ಯರಿಗೆ ಉಪಯುಕ್ತವಾಗುವಂತೆ ಸಿದ್ಧವಾದ ಪುರಾಣ 'ನಾನಾ ಕಲ್ಪಸಮುದ್ರ' 'ನಾನಾಕಥಾಸಮಾಯುಕ್ತ' ವಾಯಿತು. ಲೋಕವನ್ನು ದುಃಖದಿಂದ ಕಡೆಗಾಣಿಸಲೆಂದೇ ನಾರಾಯಣನು ವ್ಯಾಸರೂಪದಲ್ಲಿ ಬಂದು ಪುರಾಣಗಳನ್ನು ರಚಿಸಿದನೆಂದು ಪದ್ಮಪುರಾಣ ಹೇಳುತ್ತದೆ

'ನಿಸ್ತಾರಾಯ ತು ಲೋಕನಾಂ ಸ್ವಯಂ ನಾರಾಯಣಃ ಪ್ರಭುಃ।
ವ್ಯಾಸರೂಪೇಣ ಕೃತವಾನ್ ಪುರಾಣಾನಿ ಮಹೀತಲೇ॥'

ಹೀಗೆ ರಚನೆ ಮಾಡುವಾಗ ಅನೇಕ ಕಥೆಗಳನ್ನೂ ಪ್ರಸಂಗಗಳನ್ನೂ ಹಾಡುಗಬ್ಬಗಳನ್ನೂ ಜನಪ್ರತೀತಿಗಳನ್ನೂ ಬಳಸಿಕೊಂಡನೆಂದು ಅಲ್ಲೇ ಒಕ್ಕಣೆಯಿದೆ ('ಆಖ್ಯಾನೈರುಪಾಖ್ಯಾನೈಃ ಗಾಥಾಭಿಃ ಕಲ್ಪಶುದ್ಧಿಭಿಃ....ಪುರಾಣಸಂಹಿತಾಂ ಚಕ್ರೇ'). ಇವೆಲ್ಲ ಜನಪ್ರೀತಿಯ ಮೂಲಸ್ತಂಭಗಳು.

ಬಹುಜನರ ಹಿತಕ್ಕೆ, ಬಹುಜನರ ಸುಖಕ್ಕೆ ಸಿದ್ಧವಾದುದು ಪುರಾಣಸಂಸ್ಕೃತಿ. ವೈದಿಕಸಂಸ್ಕೃತಿ ಖಿಲವಾಗುತ್ತ ಬಂದಾಗ ಪುರಾಣಸಂಸ್ಕೃತಿ ತಲೆಯೆತ್ತಿಕೊಂಡಿತು. ಹರಿದಾಸರ ಪಂಥ ಈ ಪುರಾಣ ಸಂಸ್ಕೃತಿಯ ಫಲವೇ.

೩

ಹರಿದಾಸರ ಪುರಾಣಸಂಸ್ಕೃತಿಯ ಧೋರಣೆಯಲ್ಲಿ ಎದ್ದು ಕಾಣುವ ವಿವರಗಳು ಹರಿಸರ್ವೋತ್ತಮತ್ವ, ಉಳಿದೆಲ್ಲ ದೇವತೆಗಳೂ ತರತಮ ಭಾವದಲ್ಲಿ ಅವನಿಗೆ ಅಧೀನರೆಂಬ ಕಲ್ಪನೆ, ಭಕ್ತಿಯೇ ಭಗವಂತನ ಸಾಕ್ಷಾತ್ಕಾರಕ್ಕೆ ಹೆದ್ದಾರಿಯೆಂಬ ತತ್ತ್ವ, ನಾಮಸ್ಮರಣೆಯ ಹಿರಿಮೆ, ಸಂಕೀರ್ತನ ಪದ್ಧತಿಯ ಸಾಫಲ್ಯ. ಇವೆಲ್ಲವನ್ನೂ ಒಳಗೊಂಡು, ಭಕ್ತಭಾಗವತರ ಹೆಗ್ಗಳಿಕೆಯನ್ನು ಸೂಚಿಸುವಂಥ ಕಥೆಗಳು ಹರಿದಾಸರಿಗೆ ಸ್ಫೂರ್ತಿಯ ಸೆಲೆಗಳು. ಗಜೇಂದ್ರ ಮೋಕ್ಷ, ದ್ರೌಪದೀಮಾನ ಸಂರಕ್ಷಣೆ, ಅಜಾಮಿಳೋದ್ಧಾರ, ಪ್ರಹ್ಲಾದಸಂರಕ್ಷಣೆ, ಧ್ರುವಚರಿತ್ರೆ, ಅಂಬರೀಷ ಪ್ರಸಂಗ, ರುಕ್ಮಾಂಗದ ಪ್ರಕರಣ ಮೊದಲಾದುವು ಎಲ್ಲ ಹರಿದಾಸರ ರಚನೆಗಳಲ್ಲೂ ಕಾಣಸಿಕೊಳ್ಳುತ್ತವೆ. ಹರಿದಾಸರು ಭಾಗವತಪುರಾಣವನ್ನೇ ಹೆಚ್ಚಾಗಿ ಅವಲಂಬಿಸುವುದರಿಂದ ವಿಷ್ಣುವಿನ ದಶಾವತಾರಗಳ ಮೇಲೆ ಆದರ ಹೆಚ್ಚು; ಅದರಲ್ಲೂ ಕೃಷ್ಣಾವತಾರವೆಂದರೆ ಎಣೆಯಿಲ್ಲದ ಆದರ. ಕೃಷ್ಣಭಕ್ತಿಯ ಚೌಕಟ್ಟಿನಲ್ಲೇ ಹರಿದಾಸಪಂಥ ಬೆಳೆಯಿತು ಎಂದರೆ ತಪ್ಪಾಗದು.

ಆದುದರಿಂದ ಹರಿದಾಸರ ರಚನೆಗಳಲ್ಲಿ ಕೃಷ್ಣಲೀಲೆಯ ವರ್ಣನೆ ಮುಖ್ಯವಾಗಿ ಬರುವ ವಿವರ. ಕೃಷ್ಣನ ಅದ್ಭುತ ರಮಣೀಯ ಕಥೆಗಳಿಗೆ ಭಾಗವತಪುರಾಣ, ವಿಷ್ಣುಪುರಾಣ, ಹರಿವಂಶ ಇವೇ ಆಕರ. ಇಲ್ಲಿ ಕಾಣಸಿಗದ ರಾಧೆಯ ಪ್ರಸಂಗ ಬ್ರಹ್ಮವೈವರ್ತ ಪುರಾಣದಲ್ಲಿ ಬರುತ್ತದೆ. ಇದರ ಪ್ರಭಾವ ಹರಿದಾಸಸಾಹಿತ್ಯದ ಮೇಲೆ ಕಡಮೆಯೇ; ಗೋಪಿಕಾಸ್ತ್ರೀಯರ ಒಡನಾಟ ವಿದ್ದರೂ ರಾಸಮಂಡಲದ ಕಲ್ಪನೆ ಹರಿದಾಸರಿಗಿರಲಿಲ್ಲ. ರಾಧೆಯು ಕೃಷ್ಣಚೈತನ್ಯರ ಗೌಡೀಯ ವೈಷ್ಣವಸಂಪ್ರದಾಯದಲ್ಲಿ ಪ್ರಮುಖಪಾತ್ರವನ್ನು ವಹಿಸಿದ್ದಾಳೆ. ಹರಿದಾಸರಿಗೆ ಪ್ರಿಯವಾದುದು ಬಹುಮಟ್ಟಿಗೆ ಕೃಷ್ಣನ ಬಾಲಲೀಲೆಗಳೇ. ಪುರಂದರದಾಸರು ಕೃಷ್ಣಲೀಲೆಗಳನ್ನು ಕುರಿತು ರಚಿಸಿರುವ ಪದಗಳಿಗೆಲ್ಲ ಭಾಗವತ ಪುರಾಣವೇ ಆಧಾರ; ಮತ್ತು ತಮ್ಮ ಗುರುಗಳಾದ ವ್ಯಾಸತೀರ್ಥರ, ಅವರ ಗುರುಗಳಾದ ಶ್ರೀಪಾದರಾಜರ ರಚನೆಗಳೇ ಸ್ಫೂರ್ತಿ. ಪುರಂದರದಾಸರ ಈ ಪ್ರಕಾರದ ಕೃತಿಗಳು, ಅವರ ಗುರುಗಳ, ಪರಮ ಗುರುಗಳ ರಚನೆಗೆ ಸಾಮಗ್ರಿ, ಭಾವ, ಕಲ್ಪನೆಗಳನ್ನು ಒಳಗೊಂಡಿವೆ.

ಭಾಗವತವು ಶುಕಮಹರ್ಷಿಯು ಪರೀಕ್ಷಿದ್ರಾಜನಿಗೆ ಏಳು ದಿನಗಳ ಕಾಲ ಹೇಳಿದ ಹನ್ನೆರಡು ಸ್ಕಂದಗಳ, ಹದಿನೆಂಟು ಸಾವಿರ ಶ್ಲೋಕಗಳ ಪುರಾಣ. ಇದರಲ್ಲಿ ಕೃಷ್ಣ ಭಕ್ತಿಯೇ ಮೋಕ್ಷಕ್ಕೆ ಸುಲಭವಾದ ಉಪಾಯವೆಂಬ ತತ್ತ್ವ ಹಾಸುಹೊಕ್ಕಾಗಿ ಬಂದಿದೆ. ಈ ಕಾರಣದಿಂದ ಇದನ್ನು ಸಾತ್ವತ ಸಂಹಿತೆಯೆಂದೂ ಪಾರಮಹಂಸ್ಯ ಸಂಹಿತೆಯೆಂದೂ ಕರೆಯುವುದಿದೆ. ಇದನ್ನು 'ಸಕಲಶ್ರುತಿಸಾರ' ವೆಂದೂ 'ತಾಪತ್ರಯೋನ್ಮೂಲನ'ವೆಂದೂ, 'ನಿಗಮಕಲ್ಪತರು ಫಲ'ವೆಂದೂ ಭಾವುಕರು ಬಣ್ಣಿಸುತ್ತಾರೆ.

ಕಾವೇರಿ ತೀರದಲ್ಲಿ ವಾಸಮಾಡುವ ಜನರಲ್ಲೇ ಭಕ್ತಿಯು ಪ್ರಬಲವಾಗಿರುವುದೆಂಬ ಮಾತು ಈ ಪುರಾಣದ ಹನ್ನೊಂದನೆಯ ಸ್ಕಂದದಲ್ಲಿ ಬಂದಿದೆ. ಇದು ಸಿದ್ಧವಾದದ್ದು ಈ ಪ್ರದೇಶದಲ್ಲೇ ಎಂಬ ಅನುಮಾನಕ್ಕೆ ಇದು ಎಡೆಗೊಡುತ್ತದೆ. ಈ ಪುರಾಣದ ದಶಮಸ್ಕಂದ ಕೃಷ್ಣನ ಚರಿತ್ರೆಯಿರುವುದರಿಂದ ಜನರ ಆದರವನ್ನು ಸೂರೆಗೊಂಡಿದೆ. ಜನಪ್ರಿಯ ಭಾಗಗಳಾದ ಗೋಪಿಕಾ ಗೀತೆ, ಭ್ರಮರಗೀತೆ, ಉದ್ಧವಗೀತೆಗಳು ಇಲ್ಲಿಯೇ ಕಾಣಸಿಗುತ್ತವೆ. ಕೃಷ್ಣನ ಬಾಲಲೀಲೆ, ವ್ರಜದಲ್ಲಿ ಬೃಂದಾವನದಲ್ಲಿ ಮಧುರೆಯಲ್ಲಿ ದ್ವಾರಕೆಯಲ್ಲಿ ಕೃಷ್ಣನ ಚರಿತ್ರೆ ಇವು ಮುಖ್ಯವಾಗಿ ಬರುವ ವಿಚಾರಗಳು. ಹನ್ನೊಂದನೆಯ ಸ್ಕಂಧದಲ್ಲಿ ಭಾಗವತ ಧರ್ಮದ ವಿಸ್ತಾರವಾದ ನಿರೂಪಣೆಯಿದ್ದು ಭಕ್ತಿಯೋಗವೇ ಸರ್ವಜನ ಸಾಧಾರಣವಾದುದೆಂದೂ, ಸುಲಭವೆಂದೂ, ಶ್ರೇಷ್ಠವಾದುದೆಂದೂ ಹೇಳಿದೆ. ಜಾತಿ ಮತ ಭೇದವಿಲ್ಲದೆ ಕೃಷ್ಣನು ಎಲ್ಲರಿಗೂ ಆಶ್ರಯಣೀಯನೆಂಬುದನ್ನು ಉಲ್ಲೇಖಿಸಿ ಶರಣಾಗತಿಯನ್ನು ಕೃಷ್ಣನೇ ಬೋಧಿಸಿದಂತೆ ತಿಳಿಸಿದೆ-

> 'ಮಾಮೇಕಮೇವ ಶರಣಮಾತ್ಮಾನಂ ಸರ್ವದೇಹಿನಾಂ।
> ಯಾಹಿ ಸರ್ವಾತ್ಮಭಾವೇನ ಮಯಾ ಸ್ಯಾದಕುತೋಭಯಂ॥'

ಹರಿದಾಸರು ಈ ಪುರಾಣವನ್ನು ಆಸರೆಯಾಗಿ ಆರಿಸಿಕೊಂಡಾಗ ತಮ್ಮ ರಚನೆಗಳಿಗೆ ಸಾಮಗ್ರಿಯನ್ನು ಪಡೆದುಕೊಂಡುದಷ್ಟೇ ಅಲ್ಲ, ಅಲ್ಲಿ ಬರುವ ಉದಾರವಾದ ಮನೋಧರ್ಮವನ್ನೂ ಅಳವಡಿಸಿಕೊಂಡರು. ಜಾತಿ ಮತಗಳ ಕಟ್ಟುಪಾಡಿನಿಂದ ಕೊಸರಿಕೊಂಡು ಹೊರಬಂದು ಭಕ್ತರೆಲ್ಲರೂ ತಮ್ಮ ಬಾಂಧವರೇ ಎಂಬ ಧೋರಣೆಯನ್ನು ಹರಿದಾಸರು ಹಿಡಿಯುವುದು ಸಾಧ್ಯವಾದದ್ದು ಈ ಪುರಾಣವನ್ನು ಅವಲಂಬಿಸಿದ್ದರಿಂದಲೇ.

ಪುರಂದರದಾಸರ ರಚನೆಗಳಲ್ಲಿ ಕೃಷ್ಣಲೀಲೆಯನ್ನು ಕುರಿತ ಪದಗಳು ಅನೇಕ ಇವೆ. ಬಹುಮಟ್ಟಿಗೆ ಕೃಷ್ಣನ ಬಾಲಲೀಲೆಯೇ ಅವರ ಗಮನವನ್ನು ಸೆಳೆದಿರುವುದು. ಕೃಷ್ಣನ ಸಾಕುತಾಯಿಯಾದ ಯಶೋದೆ ತನ್ನ ಪ್ರಾಣಪ್ರಿಯನಾದ ಕೃಷ್ಣನನ್ನು ಮುದ್ದುಮಾಡುವ ಬಗೆ, ಕೃಷ್ಣನು ಸಣ್ಣವನಾಗಿ ಮಾಡಿದ ಸಾಹಸ ಕೃತ್ಯಗಳು, ಶಿಶುಸಹಜವಾದ ಆಟಪಾಟಗಳು, ಮುಗ್ಧಭಾವದಿಂದ ಬಂದ ಗೋಪಿಯರನ್ನು ಅವನು ತುಂಟತನದಿಂದ ಕಾಡಿದ ರೀತಿ, ಅವರು ಯಶೋದೆಯ ಬಳಿ ಬಂದು ದೂರುವುದು, ಯಶೋದೆ ತನ್ನ ಕಣ್ಮಣಿಯಾದ ಕೃಷ್ಣನನ್ನು ಮನಸ್ಸಿಲ್ಲದ ಮನಸ್ಸಿನಿಂದ ಗದರಿಸುವುದು ಇವೆಲ್ಲ ಅವರ ಪದಗಳಲ್ಲಿ ಸ್ವಾರಸ್ಯವಾಗಿ ಮೂಡಿಬಂದಿವೆ. ಪುರಂದರದಾಸರ ಭಾವುಕತೆ, ಕವಿತಾ ಸಾಮರ್ಥ್ಯ, ಉಕ್ತಿ ವೈಚಿತ್ರ್ಯಗಳನ್ನು ಇಲ್ಲಿ ನೋಡಬಹುದು. ಆದರೆ ಜಾನಪದ ಶೈಲಿಯನ್ನೇ ಹಿಡಿದು ಅವರು ಪದರಚನೆ ಮಾಡಿರುವುದರಿಂದ ಆಡುಮಾತನ್ನೇ ಬಳಸಿಕೊಂಡಿದ್ದಾರೆ. ಮತ್ತು ಮಕ್ಕಳ ಮಾತನ್ನೇ ಅನುಸರಿಸಿ 'ಬೂಚಿ ಬಂದಿದೆ', 'ಪಾಚಿಕೊಳ್ಳೊ', 'ಗುಮ್ಮನ ಕರೆಯದಿರೆ', 'ಅಮ್ಮಿಯ ಬೇಡೆನು ಮಮ್ಮು ತಿನ್ನುವೆನು', 'ಪೋಪು ಹೋಗೋಣ', ಮೊದಲಾದ ಪ್ರಯೋಗ ಗಳನ್ನು ಸೊಗಸಾಗಿ ಮಾಡಿದ್ದಾರೆ. ತಾಯಿಗೆ ಮಗುವಿನ ಬಗ್ಗೆ ಇರುವ ಅತಿಶಯವಾದ ಪ್ರೀತಿಯಿಂದ ಒದಗುವ ಆತಂಕವನ್ನು "ಪೋಗದಿರೆಲೊ ರಂಗ", "ಮನೆಯೊಳಗಾಡೊ" ಮೊದಲಾದ ಪದಗಳಲ್ಲಿ ಕಾಣಬಹುದು. "ಆಡಿಸಿದಳೆಶೋದೆ" ಎಂಬ ಪದ ಪ್ರಖ್ಯಾತವಾಗಿದೆಯಷ್ಟೆ; ಅದರಲ್ಲಿ ಸೂಸುವ ವಾತ್ಸಲ್ಯ ಎಣೆಯಿಲ್ಲದ್ದು.

ಕೃಷ್ಣಪರವಾಗಿರುವ ಪದಗಳಲ್ಲಿ ವಿಶೇಷವಾದ ಮೋಹಕತೆಯಿದೆ. ಅವುಗಳಲ್ಲಿ ಗ್ರಾಂಥಿಕವೆನ್ನ ಬಹುದಾದ ಛಂದಸ್ಸಿನ ಬಿಗಿ ಕಾಣುವುದಿಲ್ಲ. ಅವೆಲ್ಲ ಭಾವಗೀತ ರೂಪದಲ್ಲಿದ್ದು ಬಹುಮಟ್ಟಿಗೆ ಲಲಿತ, ಮಂದಾನಿಲ, ಉತ್ಸಾಹಲಯಗಳನ್ನೇ ಬಳಸಿಕೊಂಡಿವೆ. ಗೇಯ ಪ್ರಧಾನವಾಗಿದ್ದು ತಂಬೂರಿಯ ಝುಂಕಾರಕ್ಕೆ ಹೊಂದಿಕೊಂಡು, ತಾಳಲಯಕ್ಕೆ ಸರಿಯಾಗಿ, ಸರಳವಾದ ಮಾತುಗಳ ಓಟಕ್ಕೆ ಅಡ್ಡಿಬರದೆ, ಪ್ರಾಸಗಳಲ್ಲಿ ತೊಡಕಿರದೆ ಸಾಗಿಬರುವುದು ಈ ರಚನೆಗಳ ವೈಶಿಷ್ಟ್ಯ. ಪ್ರಾಸದ ವಿಚಾರವಾಗಿ ಹೇಳಬೇಕಾದುದಿಷ್ಟು. ಪುರಂದರದಾಸರ ರಚನೆಗಳಲ್ಲಿ ಪ್ರಾಸವೆಂಬ ಪ್ರಕಾರವನ್ನು ಬಹುವಾಗಿ ಬಳಸಿಕೊಂಡಿರುವುದು ಕಾಣುತ್ತದೆ. ಪ್ರಾಸವು ಕಾವ್ಯಧರ್ಮವೆಂಬ ಕಾರಣದಿಂದ ಹಲವು ಕವಿತೆಗಳಲ್ಲಿ ಪ್ರಯತ್ನಪೂರ್ವಕವಾಗಿ ಪ್ರಾಸವನ್ನು ತುರುಕುವುದುಂಟು. ಆದರೆ ಪುರಂದರದಾಸರ ರಚನೆಗಳಲ್ಲಿ ಪ್ರಾಸವು ಲೀಲಾಜಾಲವಾಗಿ ಬಂದೊದಗುತ್ತದೆ; ಅದಕ್ಕಾಗಿ ಅವರು ಶ್ರಮಿಸಿಲ್ಲವೆಂಬುದು ತಟ್ಟನೆ ಸ್ಪಷ್ಟವಾಗುತ್ತದೆ. ಭಾಷೆಯ ಮೇಲಿರುವ ಅವರ ಪ್ರಭುತ್ವ ಎದ್ದು ಕಾಣುತ್ತದೆ.

ಮೇಲಾಗಿ, ಊರೂರು ಕೇರಿ ಕೇರಿ ತಿರುಗಾಡಿ, ಜನರೊಡನೆ ಬೆರೆತು ಅವರ ಕಷ್ಟಸುಖಗಳಲ್ಲಿ ಪಾಲ್ಗೊಂಡು, ಅವರೆಲ್ಲರೊಂದಿಗೆ ಸರಿಸಮರಾಗಿ ಇದ್ದರಾಗಿ ಅವರು ಹಲವು ಸ್ತರಗಳ ಜನರ ಭಾಷೆ, ಹಲವು ವೃತ್ತಿಗಳ ಪರಿಭಾಷೆಗಳನ್ನು ಚೆನ್ನಾಗಿ ಅರಿತಿದ್ದರು. ಈ ಲೋಕಾನುಭವದ ಮೂಸೆಯಿಂದ ಹೊರಬಂದ ಕವಿತೆಗಳಲ್ಲಿ ಜನಸಾಮಾನ್ಯರ ನುಡಿ ತಾನೇ ತಾನಾಗಿ ಮೆರೆಯುವುದು ಸಹಜವೇ. ಈ ಗುಣವನ್ನು ನಾವು ಕನಕದಾಸರೊಬ್ಬರನ್ನು ಬಿಟ್ಟರೆ ಉಳಿದ ಹರಿದಾಸರಲ್ಲಿ ಅಷ್ಟಾಗಿ ಕಾಣಲಾರೆವು. ಕನಕದಾಸರು ಜಾತಿಯಲ್ಲೂ, ವೃತ್ತಿಯಲ್ಲೂ ಕುರುಬರೇ ಆಗಿದ್ದುದರಿಂದ ಹಳ್ಳಿಯ ಭಾಷೆ ಅವರಿಗೆ ಸಹಜವಾಗಿಯೇ ಒದಗಿಬಂದಿದೆ. ಪುರಂದರದಾಸರು ನಾಗರಿಕರು; ಪೂರ್ವ ಜೀವನದಲ್ಲೂ ನಗರದಲ್ಲೇ ಇದ್ದವರು, ಹರಿದಾಸರಾದ ಮೇಲೂ ಬಹುಮಟ್ಟಿಗೆ ವಿಜಯನಗರದ ರಾಜಧಾನಿಯಲ್ಲೇ ಇದ್ದವರು. ಅವರ ಶಿಷ್ಯವೃತ್ತಿ ಪ್ರಖ್ಯಾತ ಸಂಸ್ಕೃತ ಪಂಡಿತರಾಗಿ ವರಿಷ್ಠರೆನಿಸಿಕೊಂಡ ವರ್ಗದ ಮಾನ್ಯ ಮತವೊಂದರ ಸ್ವಾಮಿಗಳಲ್ಲಿ (ವ್ಯಾಸರಾಯ ಸ್ವಾಮಿಗಳಲ್ಲಿ); ಅವರ ಸಂಪರ್ಕ ಪಂಡಿತರೊಂದಿಗೇ ಬಹುಮಟ್ಟಿಗೆ ಇದ್ದಿರಬೇಕು. ಅವರು ಮಾಡಿದ್ದು ಮಾಧ್ವ ಸಿದ್ಧಾಂತ ಗ್ರಂಥಗಳನ್ನು. ಅವರಿಗೆ ಸಂಸ್ಕೃತ ಭಾಷೆಯ ಮೇಲೂ ಒಡೆತನವಿದ್ದಿತೆನ್ನಲು ಅದೇ ಭಾಷೆಯಲ್ಲಿ ಅವರು ರಚಿಸಿರುವ ಕೆಲವು ಕೃತಿಗಳಿಂದಲೂ, ಕನ್ನಡ ಪದಗಳಲ್ಲಿ ಅವರು ಮೂಡಿಸಿರುವ ಹಲವಾರು ಪ್ರಗಲ್ಭ ಪ್ರಯೋಗ ಗಳಿಂದಲೂ ಸ್ಪಷ್ಟವಾಗುತ್ತದೆ. ಇಷ್ಟಾದರೂ ಅವರು ಯಥೇಚ್ಛವಾಗಿ ಮತ್ತು ಸಹಜವಾಗಿ ಬಳಸಿರುವ ದೇಸಿ ಪದಗಳು, ಗ್ರಾಮ್ಯ ಒಕ್ಕಣೆಗಳು, ಮತ್ತು ಜನಾಂಗಗಳ ಆಡುಮಾತುಗಳು, ಗಾದೆಗಳು ಇವುಗಳನ್ನು ನೋಡಿದಾಗ ಸೋಜಿಗವೆನಿಸುತ್ತದೆ.

ಪುರಂದರದಾಸರ ಕೃತಿಗಳಲ್ಲಿ ಮೆಚ್ಚಬೇಕಾದ ಗುಣ ಇದು. ಪಂಡಿತರಾದರೂ ಪಾಂಡಿತ್ಯದ ಹೊರೆಯನ್ನು ತಮ್ಮ ಪದಗಳಲ್ಲಿ ಇಳಿಸಿಲ್ಲ. ಶಾಸ್ತ್ರ ಬಲ್ಲವರಾದರೂ ಶಾಸ್ತ್ರದ ಪ್ರಕ್ರಿಯೆಗಳನ್ನು ತಮ್ಮ ರಚನೆಗಳಲ್ಲಿ ತುರುಕಿಲ್ಲ. ಶಿಷ್ಟರೆನಿಸಿಕೊಂಡ ವರ್ಗಕ್ಕೆ ಸೇರಿದವರಾದರೂ ಅದರಲ್ಲಿ ಹೆಮ್ಮೆಯನ್ನು ತಳೆದಿಲ್ಲ. ತಮಗೆ ಪ್ರತಿಭೆಯಿದ್ದುದನ್ನು ತಮ್ಮ ಗುರುಗಳೇ ಹಾಡಿ ಹೊಗಳಿದರಾದರೂ, ಅದರ ಅರಿವನ್ನು ಮೆರೆದಿಲ್ಲ. ಅವರ ರಚನೆಗಳಿಂದ ಅವರು ಎಲ್ಲಿಯವರು, ಅವರ ಆರ್ಥಿಕಸ್ಥಿತಿ ಯಾವ

ಮಟ್ಟವಿದ್ದು, ಸಾಮಾಜಿಕ ನೆಲೆ ಏನಾಗಿದ್ದಿತು, ಪಾಂಡಿತ್ಯದ ಹರವು ಏನು, ಕೌಟುಂಬಿಕ ಸುಖ ಎಷ್ಟರಮಟ್ಟಿಗಿತ್ತು, ಶಿಷ್ಯ ಸಂಪತ್ತು ಎಷ್ಟಿತ್ತು, ಜನಪ್ರೀತಿ ಎಂತಿದ್ದಿತು ಇವು ಯಾವುವನ್ನೂ ಊಹಿಸಲಾರೆವು. ತಮ್ಮ ವ್ಯಕ್ತಿತ್ವವನ್ನು ಹರಿದಾಸ್ಯದಲ್ಲಿ ಮುಳುಗಿಸಿದ್ದುದು ಮಾತ್ರ ಎದ್ದು ಕಾಣುತ್ತದೆ. ಸುಮಾರು ಒಂದು ಸಾವಿರ ಕೃತಿಗಳನ್ನು ರಚಿಸಿ ತಮ್ಮ ಸ್ವಂತ ವಿಚಾರವನ್ನು ಇಷ್ಟೂ ಪ್ರಕಟಪಡಿಸಿಲ್ಲ ವೆಂದರೆ ಆಶ್ಚರ್ಯವೇ, ಸಾಹಸವೇ.

'ಜಯವದೆ ಜಯವದೆ ಈ ಮನೆತನಕೆ' ಎಂಬ ಅವರ ಶಕುನದ ಹಾಡನ್ನು ನೋಡಿ. ಆಕರ ತಿಳಿಯದಿದ್ದರೆ, ಅದನ್ನು ಹಕ್ಕಿ ಶಕುನ ಹೇಳುವ ಜನಾಂಗಕ್ಕೆ ಸೇರಿದವನೇ ಒಬ್ಬ ರಚಿಸಿದನೆಂದು ಧಾರಾಳವಾಗಿ ಹೇಳಿಯೇವು! 'ಊರ ದೇವರ ಮಾಡಿ' ಎನ್ನುವ ಅವರ ಹಾಡನ್ನು ನೋಡಿದಾಗ ಹಳ್ಳಿಯವನೇ ಬರೆದ ಹಾಡೆಂದು ಶಪಥ ಮಾಡಿ ಹೇಳಿಯೇವು! 'ಜಂಗಮರು ನಾವು' ಎಂಬ ಅವರ ಹಾಡನ್ನು ವೀರಶೈವನಲ್ಲದವನು ರಚಿಸುವುದು ಸಾಧ್ಯವೇ ಇಲ್ಲವೆಂದು ಭಾವಿಸಬಹುದು! 'ಕಟ್ಟಬೇಕು ಕಾಟದೆಮ್ಮ' ಎನ್ನುವ ಪದವನ್ನು ಓದಿದಾಗ, ಬರೆದವರು ಗೊಲ್ಲರಲ್ಲವೆಂದು ಯಾರು ಭಾವಿಸಿಯಾರು? 'ತಾರಕ್ಕ ಬಿಂದಿಗೆ', 'ದೂರು ಮಾಡುವರೇನೆ', 'ಕಂದನ ಕಂಡಿರೇನೆ', 'ಹಾಲು ಮಾರಲು ಬಂದೆನಮ್ಮ' ಮೊದಲಾದ ಪದಗಳು ಹೆಂಗಳೆಯರೇ ಹೇಳಿದಂತೆ ಇರುವುವಷ್ಟೆ; ಅವನ್ನು ಓದಿದಾಗ ಹೆಣ್ಣು ಹೇಳಿದಂತೇ ತೋರುವುದು. 'ಗುಮ್ಮನ ಕರೆಯದಿರೆ' ಮೊದಲಾದ ಕವಿತೆಗಳು ಮಕ್ಕಳ ಭಾಷೆಯಲ್ಲಿರುವುದು ಮಾತ್ರವಲ್ಲ. ಮಗನೇ ಹೇಳುತ್ತಿರುವಂತೆ ಭಾಸವಾಗುತ್ತದೆ. ಇದು ಪುರಂದರದಾಸರ ರಚನೆಗಳ ಸ್ವಾರಸ್ಯ.

ಭಕ್ತಿಯ ಭಾವುಕತೆ, ಆರ್ತನ ಆಳಲು, ಅಪರೋಕ್ಷ ಜ್ಞಾನದ ಅನುಭಾವ, ನೀತಿಯ ಉನ್ನತಿ, ಶೀಲದ ಆಗ್ರಹ ಇವು ಇವರ ಪದಗಳಲ್ಲಿ ಕಾಣುವಂತೆಯೇ ಶೃಂಗಾರದ ಸೊಗಸು, ಅನ್ಯೋಕ್ತಿಯ ಸ್ವಾರಸ್ಯ, ಹಾಸ್ಯ, ಕುಚೋದ್ಯಗಳೂ ಇವೆ. ಸಂದರ್ಭೋಚಿತವಾಗಿ ವರ್ಣನೆ, ನಿರೂಪಣೆ, ಶಬ್ದಸಂಪತ್ತು, ಭಾವಬಂಧ. ಯಾವುದೇ ಸಂದರ್ಭವಾದರೂ ಸ್ವಭಾವೋಕ್ತಿಯೇ; ಮಾತಿನಲ್ಲಾಗಲಿ ಶೈಲಿಯಲ್ಲಾಗಲಿ ಕೃತಕತೆ ಕಾಣುವುದಿಲ್ಲ. ಒಡಲು ಕದಡಿದ್ದಾಗ ಮೂಡಿಕೊಳ್ಳುವ ದುಗುಡವಾಗಲಿ, ಮನಸ್ಸಿನಲ್ಲಿ ಗೆಲುವಿದ್ದಾಗ ಹರಿಯುವ ಹರ್ಷದ ಹೊನಲಾಗಲಿ, ಅದನ್ನು ಹೊರಸೂಸುವ ಮಾತಿಗೇನು ಅವರಲ್ಲಿ ಕೊರತೆಯಿಲ್ಲ. ನಡತೆಗೆಟ್ಟ ಗಂಡಸಾಗಲಿ ಹೆಂಗಸಾಗಲಿ ಇವರ ಗಮನಕ್ಕೆ ಬಂದರೆ ಕಟುವಾದ ಟೀಕೆ ಕಟ್ಟಿಟ್ಟದ್ದೇ: ಕಡೆಗೆ, ಬಯ್ಗಳ ಸುರಿಮಳೆಯೂ ತಪ್ಪುವುದಿಲ್ಲ! ಇವರ ಕಣ್ಣು ತಪ್ಪಿಸಿ ಜಾರಿಕೊಳ್ಳುವ ನಡತೆಯೇ ಸಮಾಜದಲ್ಲಿರದು. ಅವರ ನೋಟ ಎಲ್ಲವನ್ನೂ ಒಳಗೊಳ್ಳುವಂಥದು, ಅವರ ಮಾತು ಯಾವ ಸನ್ನಿವೇಶಕ್ಕೂ ಸಿದ್ಧವಾದುದೇ.

ನಮಗೆ ಈವರೆಗೆ ದೊರಕಿರುವ ಪುರಂದರಸಾಹಿತ್ಯದಲ್ಲಿ ಬಿಡಿಪದಗಳೇ ಹೆಚ್ಚು. ಅವುಗಳಲ್ಲಿ ಹರಿಭಕ್ತಿ, ಅಧ್ಯಾತ್ಮ, ಕ್ಷೇತ್ರದೇವತೆಗಳು, ಯೋಗಸಾಧನೆ, ಶೃಂಗಾರ, ನೀತಿಬೋಧೆ, ತತ್ತ್ವ, ಸಮಾಜ ಶುದ್ಧಿ, ಸದಾಚಾರ ಮೊದಲಾದ ವಿಚಾರಗಳೆಲ್ಲ ಬರುತ್ತವೆ. ಒಂದೊಂದು ಪದದಲ್ಲೂ ವಿಭಿನ್ನವಾದ ವಿಚಾರಗಳು ಬೆರೆತಿರುವುದರಿಂದ ಪದಗಳ ವರ್ಗೀಕರಣ ಸುಲಭವಲ್ಲ. ಸಂದರ್ಭೋಚಿತವಾಗಿ ಪದಗಳು ಮೂಡಿ ಬಂದಿರುವುದರಿಂದ ಸಮಯ ಸ್ಫೂರ್ತಿಗೆ ಒತ್ತು ಹೆಚ್ಚು: ಬಹುಮಟ್ಟಿಗೆ ಇವೆಲ್ಲ

ಆಶುಕವಿತೆಗಳೆಂದೇ ತೋರುತ್ತದೆ. ಆದುದರಿಂದ ಪದಬಂಧದಲ್ಲಿ, ಪ್ರಾಸಯೋಜನೆಯಲ್ಲಿ, ಪಂಕ್ತಿ ವಿಂಗಡಣೆಯಲ್ಲಿ ತೊಡಕು ಆಗಾಗ ಕಾಣಿಸಿಕೊಳ್ಳುವುದು ಸಹಜ. ಕೆಲವೊಮ್ಮೆ ತೀರಗ್ರಾಮ್ಯವೆನಿಸುವ ಅಸಭ್ಯವೆನಿಸುವ ಪದಗಳ ಪ್ರಯೋಗವೂ ಕಾಣಸಿಗುತ್ತದೆ. ಹಲವು ವೇಳೆ ಕೇವಲ ಹುಡುಗಾಟಿಕೆಯ ಮಾತುಗಳು, ಕುಚೋದ್ಯದ ಒಕ್ಕಣೆಗಳನ್ನು ಕಾಣಬಹುದು. ಪದರಚನೆಯಲ್ಲಿ ಮಾತ್ರೆಗಿಂತ ಲಯಕ್ಕೆ ಹೆಚ್ಚಿನ ಗಮನ; ಲಯದಲ್ಲೂ ಅಂಶಲಯಕ್ಕಿಂತ ತಾಳಲಯಕ್ಕೆ ಹೆಚ್ಚಿನ ಗಮನ.

ಬಿಡಿ ಪದಗಳಲ್ಲಿ ಸಾಮಾನ್ಯವಾಗಿ ಪಲ್ಲವಿಯೊಂದಿದ್ದು, ಅದರ ತಾತ್ಪರ್ಯವನ್ನು ಮುಂದಿನ ಕೆಲವು ನುಡಿಗಳು (ಚರಣಗಳು) ವಿಸ್ತರಿಸಿ ಹೇಳುತ್ತವೆ. ಪಲ್ಲವಿಗೆ ಹೊಂದಿಕೊಳ್ಳುವ ಅನುಪಲ್ಲವಿಯನ್ನೂ ಕಾಣುತ್ತೇವೆ; ಆದರೆ ಪಲ್ಲವಿಯ ಮಾತುಗಳನ್ನು ನೋಡಿದರೆ ಅನುಪಲ್ಲವಿ ಮೊದಲಿಗೆ ಪ್ರತ್ಯೇಕವಾಗಿ ಇರಲಿಲ್ಲವೆಂದು ತೋರುತ್ತದೆ. ನುಡಿಗಳು ಸಂಖ್ಯೆಯಲ್ಲಿ ನಿಗದಿಯೇನಿಲ್ಲ. ಸಾಧಾರಣವಾಗಿ ಮೂರರಿಂದ ಐದಾರು ನುಡಿಗಳಿರುವುದು ವಾಡಿಕೆ. ಕೆಲವು ಪದಗಳಲ್ಲಿ ಇಪ್ಪತ್ತಕ್ಕಿಂತ ಹೆಚ್ಚು ನುಡಿಗಳಿರುವುದೂ ಉಂಟು; ಆದರೆ ವಿರಳ. ಪದಗಳಿಗೆ ರಾಗ, ತಾಳಗಳ ನಿರ್ದೇಶನ ಮಾಡುವುದಿದೆ. ಆದರೆ ಇದು ಪುರಂದರದಾಸರ ಕಾಲದಲ್ಲೇ ಸಿದ್ಧವಾಗಿ ನಮ್ಮವರೆಗೆ ಬಂದಿದೆಯೆಂದು ಹೇಳಲು ಬರುವುದಿಲ್ಲ. ಪುರಂದರದಾಸರ ಪದಗಳನ್ನು ಯಾರಾದರೂ ಅವರ ಕಾಲದಲ್ಲೇ ಬರೆದಿಟ್ಟರೋ, ಸ್ವರಪ್ರಸ್ತಾರವನ್ನು ಅಳವಡಿಸಿದ್ದರೋ ಎನ್ನುವುದೂ ತಿಳಿದುಬಂದಿಲ್ಲ. ದಾಸಕೂಟದಲ್ಲಿ ಬಾಯ ಪರಂಪರೆಯಿಂದ ಬಂದುವೆಂಬುದೇ ದಿಟವಿದ್ದೀತು. ಪುರಂದರದಾಸರ ಕಾಲಕ್ಕೂ ಅವರ ಪದಗಳನ್ನು ಪ್ರಚಾರಕ್ಕೆ ತಂದ ವಿಜಯದಾಸರ ಕಾಲಕ್ಕೂ ನೂರಾರು ವರ್ಷಗಳ ಅಂತರ ಇದ್ದಿತಾಗಿ ಗಾಯನ ಪ್ರಕಾರಕ್ಕೆ ನಿರ್ದೇಶನ ಮಾರ್ಪಟ್ಟಿರುವುದು ಸಾಧ್ಯ. ಮೇಲಾಗಿ ನಮಗೆ ಉಪಲಬ್ಧ .

ಪುರಂದರದಾಸರ ಪದಗಳ ಕೈಬರಹದ ಪ್ರತಿಗಳು ಈಚಿನವು; ಸುಮಾರು ನೂರೈವತ್ತು ವರ್ಷಗಳಿಗಿಂತ ಹೆಚ್ಚು ಹಿಂದಕ್ಕೆ ಸಲ್ಲಲಾರವು. ಈಗ ಕಾಣಸಿಗುವ ರಾಗ-ತಾಳಗಳ ನಿರ್ದೇಶನ ಎಷ್ಟರಮಟ್ಟಿಗೆ ಬಾಯಪರಂಪರೆಯನ್ನು ಪ್ರತಿನಿಧಿಸುತ್ತದೆ ಎನ್ನುವುದು ಸಂದಿಗ್ಧವಾದ ವಿಚಾರವೇ. ಈ ವಿಚಾರವನ್ನು ಮತ್ತೆ ಎತ್ತಿ ಕೊಳ್ಳುತ್ತೇನೆ.

ಬಿಡಿ ಪದಗಳನ್ನು ಬಿಟ್ಟರೆ ಕೆಲವು ಪ್ರಕರಣ ಪ್ರಬಂಧಗಳೂ ಪುರಂದರದಾಸರ ಹೆಸರಿನಿಂದ ಪ್ರಸಿದ್ಧವಾಗಿವೆ. ದ್ರೌಪದೀವಸ್ತ್ರಾಪಹರಣ ಮತ್ತು ಗಜೇಂದ್ರ ಮೋಕ್ಷ ಎಂಬೆರಡು ಉದಯರಾಗ ಪದ್ಧತಿಯಲ್ಲಿರುವ ಪ್ರಕರಣಗಳು. ದ್ರೌಪದೀವಸ್ತ್ರಾಪಹರಣ ಹದಿನೈದು ನುಡಿಗಳ ಹಾಡು. ಆದರೆ ಇದನ್ನು ಕನಕದಾಸರದ್ದೆಂದೂ ಹೇಳುವುದಿದೆ. ಕೆಲವು ಪ್ರತಿಗಳ ಕಡೆಯ ನುಡಿಯಲ್ಲಿ 'ಮಂಗಳಂ ಶ್ರೀಯರಸ ಪುರಂದರವಿಠಲಗೆ ಮಂಗಳಂ ಜಯಮಂಗಳಂ' ಎಂದೂ, ಮತ್ತೆ ಕೆಲವು ಪ್ರತಿಗಳಲ್ಲಿ 'ಮಂಗಳಂ ಸಿರಿ ಕಾಗಿನೆಲೆಯಾದಿ ಕೇಶವಗೆ ಮಂಗಳಂ ಗಿರಿವಾಸಗೆ' ಎಂದೂ ಇರುವುದು ಈ ಗೊಂದಲಕ್ಕೆ ಕಾರಣವಾಗಿದೆ. ಮಹಾಭಾರತ ಪ್ರಸಂಗವೊಂದರಲ್ಲಿ ದುಃಶಾಸನನಿಂದ ಅವಮಾನಕ್ಕೆ ಪಕ್ಕಾದ ದ್ರೌಪದಿಯ ಮಾನವನ್ನು ಕೃಷ್ಣನು ಕಾಪಿಟ್ಟ ಸಂದರ್ಭ ಇಲ್ಲಿನ ವಸ್ತು. ಪ್ರಸಂಗದ ನಿರೂಪಣೆ ಸ್ವಾರಸ್ಯವಾಗಿ ಬಂದಿದೆ. ಭಾಗವತ ಪುರಾಣದಲ್ಲಿ ಬರುವ ಗಜೇಂದ್ರ ಮೋಕ್ಷದ ಕಥೆ ಎರಡನೆಯ ಪ್ರಕರಣದ ವಸ್ತು. ಇದರಲ್ಲಿ ಹನ್ನೊಂದು ನುಡಿಗಳಿವೆ. ಪಾಂಡ್ಯ ದೇಶದ ಅರಸನಾದ

ಇಂದ್ರದ್ಯುಮ್ನನು ಹರಿಭಕ್ತನಾಗಿದ್ದು, ಅಗಸ್ತ್ಯಋಷಿಯ ಶಾಪದಿಂದ ಆನೆಯಾದದ್ದೂ, ಹೂಹೂ ಎಂಬ ಗಂಧರ್ವನೂ ದೇವಲ ಮುನಿಯ ಶಾಪದಿಂದ ಮೊಸಳೆಯಾದದ್ದೂ ಆನೆಯ ಕಾಲನ್ನು ಹಿಡಿದು ಹಿಂಸಿಸಿದಾಗ, ಆನೆಯು ಆದಿಮೂಲನಿಗೆ ಮೊರೆಯಿಡಲು ಆನೆ ಮೊಸಳೆಗಳೆರಡೂ ಶಾಪದಿಂದ ಮುಕ್ತಿಗೊಂಡದ್ದೂ ಈ ಪ್ರಕರಣದಲ್ಲಿ ಬರುತ್ತದೆ.

ದಂಡಕ ಪದ್ಧತಿಯಲ್ಲಿ " ಅನಂತಕೋಟಿ ಬ್ರಹ್ಮಾಂಡನಾಯಕ" ಎಂದು ಮೊದಲಾಗುವ ಗದ್ಯವೊಂದು ಅವರ ರಚನೆಯೇ. ಇದರಲ್ಲಿ ಒಂದು ನೂರು ಎಂಬತ್ತೊಂದು ದಿವ್ಯನಾಮಗಳಿದ್ದು ನಾಮಾವಳಿ ಪ್ರಕಾರಕ್ಕೆ ಸೇರಿದ ರಚನೆ. ಇದರಲ್ಲಿ ಬರುವ ದೇವರ ನಾಮಗಳು ಶಾಸ್ತ್ರಗ್ರಂಥಗಳಿಂದಲೂ, ಭಾಗವತಾದಿ ಪುರಾಣಗಳಿಂದಲೂ, ಭಕ್ತರ ಚರಿತ್ರೆಗಳಿಂದಲೂ ಆಯ್ದುಕೊಂಡವು. ಇದೇ ಗೋತ್ರಕ್ಕೆ ಸೇರಿದ 'ಕೇಶವನಾಮ' ಎಂಬ ಮತ್ತೊಂದು ರಚನೆಯಲ್ಲಿ ಕೇಶವಾದಿಚತುರ್ವಿಂಶತಿನಾಮಗಳ ಉಲ್ಲೇಖವಿದ್ದು ಒಂದೊಂದು ನಾಮಕ್ಕೂ ಒಂದೊಂದು ನುಡಿಯ ವಿವರಣೆಯಿದೆ. ಇದರಲ್ಲಿ ಮಧ್ಯಮಾವತಿ ರಾಗ, ಅಟ್ಟತಾಳವೆಂಬ ನಿರ್ದೇಶನವೂ ಇದೆ. ದಾಸರ ಇಂಥ ರಚನೆಗಳು ಮೊದಲಿಗೆ ಹೆಚ್ಚು ಬಳಕೆಯಲ್ಲಿದ್ದುದರಿಂದ ದಾಸರ ಪದಗಳಿಗೆ 'ದೇವರ ನಾಮ'ಗಳೆಂಬ ಹೆಸರು ವಾಡಿಕೆಯಲ್ಲಿದ್ದಿತೆಂದು ತೋರುತ್ತದೆ. ಆದರೆ ಈ ಬಗೆಯ ಕೃತಿಗಳು ಪುರಂದರದಾಸರ ಹೆಸರಿನಲ್ಲಿ ಈಗ ಉಳಿದಿರುವುವು ಕಡಮೆ. 'ದೇವರನಾಮ'ಎಂಬ ಹೆಸರೇನೋ ಉಳಿದು ಬಂದಿದೆ!

ಹರಿದಾಸರ ಸುಳಾದಿಗಳು, ಉಗಾಭೋಗಗಳನ್ನು ಬಿಟ್ಟರೆ ಇತರ ರಚನೆಗಳಿಗೆ ಪದಗಳೆಂಬ ನಿರ್ದೇಶನವೇ ಸಮರ್ಪಕವಾದುದೆಂದು ತೋರುತ್ತದೆ; ಮೊದಲಿಗಿದ್ದ ಹೆಸರೂ ಇದೇ. ಅವೆಲ್ಲವೂ 'ದೇವರನಾಮ'ಗಳೇನೂ ಅಲ್ಲ. ಅವನ್ನು 'ಪದ್ಯ' ಗಳೆಂದೂ ಹೇಳಲಾಗದು. ಪದ್ಯದಲ್ಲಿ ಛಂದಸ್ಸು ('ಛಂದೋಬದ್ಧಪದಂ ಪದ್ಯಂ'), ವೃತ್ತ ಅಥವಾ ಜಾತಿಗನುಗುಣವಾಗಿ ಸಾಲುಗಳ ನಿಯಮ ('ಪದ್ಯಂ ಚತುಷ್ಪದೋ ತಚ್ಚ ವೃತ್ತಂ ಜಾತಿರಿತಿ ದ್ವಿಧಾ') ಮುಖ್ಯವಾಗುತ್ತವೆ. ದಾಸರ ರಚನೆಗಳಲ್ಲಿ ಇದನ್ನು ಎಲ್ಲೆಡೆಗಳಲ್ಲೂ ಕಾಣುವುದಾಗದು. ಇನ್ನು 'ಹಾಡು'ಗಳೆನ್ನುವುದೂ ಹಳೆಯ ಹೆಸರೇ; ಆದರೆ ಎಲ್ಲವೂ ಹಾಡಿಕೆಗೆ ಬರುವಂಥವಲ್ಲ. ಕೀರ್ತನೆಗಳೆಂದರೂ ಸರಿಯಾಗುವುದಿಲ್ಲ; ಎಲ್ಲವೂ ಕೀರ್ತನ ಪದ್ಧತಿಗೆ ಹೊಂದುವುದಿಲ್ಲ. ಪದವೆನ್ನುವುದು ಏಕಾರ್ಥಬೋಧಕವಾದ ಅನ್ವಿತವರ್ಣಗಳುಳ್ಳ ರಚನೆ. ಇದರಲ್ಲಿ ವಸ್ತುನಿರ್ದೇಶನವಾಗಲಿ ವೃತ್ತ ನಿರ್ದೇಶನವಾಗಲಿ, ಛಂದೋಬಂಧವಾಗಲಿ ಇರಬೇಕಾದುದಿಲ್ಲ. ಮಾತುಗಳಲ್ಲಿ ಹೊಂದಾಣಿಕೆ ಇದ್ದರೆ ಸಾಕು; ಇಡೀ ಮಾತುಗಳ ಸಮುದಾಯಕ್ಕೆ ಒಟ್ಟಾರೆ ಒಂದು ತಾತ್ಪರ್ಯವಿದ್ದರೆ ಆಯಿತು. ಈ ಲಕ್ಷಣ ದಾಸರ ರಚನೆಗಳಿಗೆ ಒಪ್ಪುತ್ತದೆ. ಸುಳಾದಿಗಳು ಪ್ರಾಚೀನ ಪ್ರಬಂಧಗಳ ಪ್ರಕಾರಕ್ಕೆ ಸೇರಿದ ರಚನೆ; ಉಗಾಭೋಗವೂ ಪದಕ್ಕಿಂತ ಬೇರೆಯೇ. ಇರಲಿ ವಿಚಾರ ಮುಂದೆ ಬರುತ್ತದೆ.

'ಭಗವದ್ಗೀತಾಸಾರ'ವೆಂಬ ಪುರಂದರದಾಸರ ಕೃತಿಯೂ ಬಂದಿದೆ. ಇದಕ್ಕೆ 'ಹೃದಯಕಮಲವಿ ವರಮಾನ ಪೂಜೆ' ಎನ್ನುವ ಹೆಸರೂ ಇದೆ. ಇದು ಬಿಂಬೋಪಾಸನೆಗೆ ಸಂಬಂಧಿಸಿದ ರಚನೆ. ಭಗವದ್ಗೀತೆಯಲ್ಲಿ ಬರುವ ವಿವರಗಳೇನು ಇಲ್ಲಿ ಕಾಣಸಿಗುವುದಿಲ್ಲ; 'ಭಗವದ್ಗೀತಾಸಾರ'ವೆಂಬ ಹೆಸರು ಹೇಗೆ ಬಂದಿತೋ ತಿಳಿಯುವುದಿಲ್ಲ. ಆದರೆ ಇಲ್ಲಿ ಬರುವ ಯೋಗವನ್ನು ಕೃಷ್ಣನು ಅರ್ಜುನನಿಗೆ

ಹೇಳಿದನೆಂಬ ಮಾತು ಬರುತ್ತದೆ. ಇದರಲ್ಲಿ ೧೭ ಸಂಸ್ಕೃತ ಶ್ಲೋಕಗಳಿದ್ದು ಸಂಗ್ರಹಾರ್ಥವನ್ನು ಹೇಳುವ ಕನ್ನಡ ಪದಗಳು ಇವೆ. ಕೆಲವು ಸಂಸ್ಕೃತ ಶ್ಲೋಕಗಳನ್ನೇನೋ ಪುರಾಣಗಳಿಂದ ಎತ್ತಿಕೊಂಡಿರುವುದನ್ನು ಅಲ್ಲಿಯೇ ಕಾಣಿಸಿದ್ದಾರೆ. ಇತರ ಶ್ಲೋಕಗಳ ಆಕರ ತಿಳಿಯುವುದಿಲ್ಲ; ಪುರಂದರದಾಸರದ್ದೇ ರಚನೆಗಳೋ ಎಂಬುದೂ ಸ್ಪಷ್ಟವಾಗುವುದಿಲ್ಲ. ಈ ರಚನೆ ಸಂಪೂರ್ಣವಾಗಿ ತಾಂತ್ರಿಕ ಪ್ರಕ್ರಿಯೆಗಳನ್ನೂ ಆಚಾರ್ಯರ 'ತಂತ್ರಸಾರಸಂಗ್ರಹ'ದ ಒಕ್ಕಣೆಯನ್ನೂ ಅನುಸರಿಸಿದೆ. ಇದೊಂದು ವಿಶಿಷ್ಟ ಜಾತಿಯ ರಚನೆ.

ಹಿಂದೆ ಜಾಜರಹಾಡು ಎಂಬೊಂದು ಪ್ರಕಾರವಿದ್ದಂತೆ ಉಲ್ಲೇಖವಿದೆ. ಸೋಮೇಶ್ವರನ ಅಭಿಲಷಿತಾರ್ಥ ಚಿಂತಾಮಣಿಯು (ಮಾನಸೋಲ್ಲಾಸ) ಇದನ್ನು ಚರ್ಚರೀ ಎಂದು ಕರೆದಿದೆ; ಪಾಣಿನಿಯ 'ಅಷ್ಟಾಧ್ಯಾಯಿ'ಯಲ್ಲಿ 'ಚರ್ಚರೀಕ' ಎಂದು ಉಲ್ಲೇಖ ಗೊಂಡಿರುವುದು ಇದೇ ಇದ್ದೀತು. ಆಂಧ್ರ ದೇಶದಲ್ಲಿ ಇದು ಬಳಕೆಯಲ್ಲಿದ್ದಿತು. ಈ ಬಗೆಯ ರಚನೆಗಳಲ್ಲಿ ಮೊದಲು ಸಂಸ್ಕೃತ ಶ್ಲೋಕ, ಅನಂತರ ಪ್ರಾಕೃತಗಾಹೆ, ಅನಂತರ ತೆಲುಗು ಪದ್ಯ ಮತ್ತೆ ಸಂಸ್ಕೃತ ಶ್ಲೋಕ ಹೀಗೆ ವರಸೆಯಾಗಿ ಬರುವುದು ವಿಶೇಷ. ಪುರಂದರದಾಸರ ಈ ಕೃತಿಯಲ್ಲಿ ಪಾಕೃತಗಾಹೆಯ ಭಾಗವಿಲ್ಲ. ಸಂಸ್ಕೃತ ಶ್ಲೋಕ. ಕನ್ನಡದ ಪದ್ಯ ಮತ್ತೆ ಸಂಸ್ಕೃತ ಶ್ಲೋಕ, ಕನ್ನಡ ಪದ್ಯ ಹೀಗೆ ಬರುತ್ತವೆ. ಕನ್ನಡ ಪದ್ಯಗಳಿಗೆ ರಾಗ, ತಾಳಗಳನ್ನು ಸೂಚಿಸಿದ್ದಾರೆ. ಪುರಂದರ ಸಾಹಿತ್ಯದಲ್ಲಿ ಇದೊಂದೇ ಕೃತಿ ಈ ಬಗೆಯದು.

೪

ಹರಿದಾಸರ ರಚನೆಗಳಲ್ಲಿ ಸುಳಾದಿಗಳು, ಉಗಾಭೋಗಗಳು ಪ್ರಸಿದ್ಧವಾಗಿವೆ. ಕನ್ನಡದಲ್ಲಲ್ಲದೆ ಬೇರೆ ಭಾಷೆಗಳಲ್ಲಿ ಈ ಬಗೆಯ ರಚನೆಗಳಿಲ್ಲ; ತೆಲುಗಿನಲ್ಲಿದ್ದುವೆಂದು ಹೇಳುತ್ತಾರೆ. ಕನ್ನಡದಲ್ಲೂ ಹರಿದಾಸ ಸಾಹಿತ್ಯಕ್ಕೇ ಮೀಸಲಾದುವು ಈ ರಚನೆಗಳು; ಇತರ ವಾಙ್ಮಯಪ್ರಕಾರಗಳಲ್ಲಿ ಕಾಣಸಿಗುವುದಿಲ್ಲ. ಶ್ರೀಪಾದರಾಜರೇ ಇವೆರಡು ಪ್ರಕಾರಗಳಿಗೂ ಪ್ರವರ್ತಕರೆಂಬ ಪ್ರತೀತಿಯಿದೆ; ವ್ಯಾಸರಾಯಸ್ವಾಮಿಗಳೂ ಸುಳಾದಿಗಳನ್ನೂ ಉಗಾಭೋಗಗಳನ್ನೂ ರಚಿಸಿದ್ದರು. ಆದರೆ ಇವೆರಡು ಪ್ರಕಾರಗಳಿಗೂ ವಿಶೇಷವಾದ ಗಮನವನ್ನು ಹರಿಸಿದವರು ಪುರಂದರದಾಸರು. ತಾವು ಹದಿನಾಲ್ಕು ಸಾವಿರ ಸುಳಾದಿಗಳನ್ನು ರಚಿಸಿದುದನ್ನು ಹೇಳಿಕೊಂಡಿದ್ದಾರೆ. ಅವರು ಎಪ್ಪತ್ತೈದು ಸಾವಿರ "ಅಹನ್ನೇಕ ಏಕಾದಶೀ....ಉಗಾಭೋಗಾದಿ" ಕೃತಿಗಳನ್ನು ರಚಿಸಿದ್ದಾರೆಂದು ವಿಜಯದಾಸರು ಹೇಳಿದ್ದಾರೆ. ಉಗಾಭೋಗವೆಂಬ ಮಾತು ಪುರಂದರದಾಸರ ಈ ಕೃತಿಗಳಲ್ಲೆಲ್ಲೂ ಕಾಣಸಿಗುವುದಿಲ್ಲ. ಅದು ಮೊಟ್ಟಮೊದಲು ನಮ್ಮ ಕಣ್ಣಿಗೆ ಬೀಳುವುದು ವಿಜಯದಾಸರ ಕಾಲದಲ್ಲೇ. ಆದರೆ ಆ ಬಗೆಯ ರಚನೆ ಬಹು ಹಿಂದಿನಿಂದ ಇದ್ದಿತೆನ್ನುವುದೇನೋ ದಿಟ.

ಸುಳಾದಿ ಮತ್ತು ಉಗಾಭೋಗಗಳೆಂಬ ರಚನೆಗಳನ್ನು ಕುರಿತು ನಾಲ್ಕು ಮಾತುಗಳನ್ನು ಹೇಳಬೇಕು. ಇವೆರಡು ಮಾತುಗಳನ್ನು ಕುರಿತು ಹಲವಾರು ವಿವರಣೆಗಳಿವೆ. ಆದರೆ ಅವುಗಳಲ್ಲಿ ಹುರುಳು ಕಡಮೆ. ಅನಭಿಜ್ಞರಾದವರ ವಿವರಣೆಗಳನ್ನು ಬಿಟ್ಟರೆ, ಗಟ್ಟಿಯಾಗಿ ಉಳಿಯುವುವು ಎರಡು ವಿಮರ್ಶೆಗಳು; ಕಿನ್ನರಿ ವಿದ್ವಾಂಸರಾಗಿದ್ದ ಹುಲಗೂರು ಕೃಷ್ಣಾಚಾರ್ಯರದ್ದೊಂದು ('ಕರ್ನಾಟಕ

ಸಂಗೀತವೂ ದಾಸ ಸಾಹಿತ್ಯವೂ', ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ, ೧೯೫೧). ಮಹಾಮಹೋಪಾಧ್ಯಾಯ ರಾ. ಸತ್ಯನಾರಾಯಣ ಅವರದ್ದಿನ್ನೊಂದು (ಧಾರವಾಡದ 'ಶ್ರೀ ಪುರಂದರದಾಸರ ಸಾಹಿತ್ಯ 'ಭಾಗ ೪' ಕೃಷ್ಣಲೀಲಾ' ೧೯೬೫. ಅವತರಣಿಯಾಗಿ ಬರೆದಿರುವ ಇಂಗ್ಲೀಷ್ ಪ್ರಬಂಧ). ಸತ್ಯನಾರಾಯಣ ಅವರು ಆಳವಾಗಿ ಅಭ್ಯಾಸಮಾಡಿ ಹಲವಾರು ಸ್ವಾರಸ್ಯವಾದ ವಿಚಾರಗಳನ್ನು ಹೊರಗೆಡಹಿದ್ದಾರೆ; ಹುಲಗೂರು ಕೃಷ್ಣಾಚಾರ್ಯರ ಹಲವು ವಿವರಣೆಗಳನ್ನು ನಿರಾಕರಿಸಿದ್ದಾರೆ. ಆದರೆ ಸುಳಾದಿ, ಉಗಾಭೋಗಗಳನ್ನು ಕುರಿತಂತೆ ಕಡೆಯ ಮಾತೆಂಬುದು ಮೂಡಿಬಂದಿಲ್ಲ. ಅವುಗಳ ಉಗಮ, ಸ್ವರೂಪ, ಪ್ರಯೋಜನಗಳು ಇನ್ನೂ ಸಂದಿಗ್ಧವಾಗಿಯೇ ಉಳಿದಿವೆ.

ಮೊದಲಲ್ಲಿ, ಆ ಮಾತುಗಳ ದಿಟವಾದ ಅರ್ಥವೇನು ಎಂದುದೇ ಸ್ಪಷ್ಟವಾಗಿಲ್ಲ.

'ಸುಳಾದಿ'ಯನ್ನು 'ಸೂಡಾದಿ'ಯೆಂಬ ಮಾತಿನಿಂದ ಬಂದುದೆಂದು ಭಾವಿಸಿ, ಸೂಡಾದಿ ಯೆಂದರೆ ಸೂಡಾದಿ ಸಪ್ತತಾಳಗಳನ್ನು ಸೂಚಿಸುವುದೆಂದು ಹೇಳುವುದು ವಾಡಿಕೆ. 'ಸೂಡ' ಎನ್ನುವುದು ಗೀತ ಸಮೂಹ ವಿಶೇಷವಾಚಿಯಾದ ದೇಶೀಶಬ್ದವೆಂದು ಚತುರ ಕಲ್ಲಿನಾಥ (ಶಾರ್ಙ್ಗ ದೇವನ 'ಸಂಗೀತ ರತ್ನಾಕರ'ಕ್ಕೆ ವ್ಯಾಖ್ಯಾನ ಬರೆದವನು) ಮತ್ತು ವೇಂಕಟಮಖಿ ('ಚತುರ್ದಂಡಿ ಪ್ರಕಾಶಿಕೆ'ಯನ್ನು ಬರೆದವನು) ಹೇಳಿದ್ದಾರೆ. ಇದು ಕನ್ನಡದ್ದೇ ಮಾತಿದ್ದೀತೆಂಬ ಊಹೆಯೂ ಇದೆ. ಗಾಯನಕ್ಕೆಂದು ಸಿದ್ಧಪಡಿಸುತ್ತಿದ್ದ ಪ್ರಬಂಧಗಳಲ್ಲಿ ಸೂಡ, ಆಲಿಕ್ರಮ, ವಿಪ್ರಕೀರ್ಣಗಳೆಂದು ಮೂರು ಬಗೆಗಳಿದ್ದು, ಸೂಡ ಪ್ರಬಂಧಗಳಲ್ಲಿ ಶುದ್ಧ (ಏಳೆ ಮೊದಲಾದವು), ಛಾಯಾಲಗ (ಧ್ರುವವೇ ಮೊದಲಾದುವು) ಎಂಬ ಎರಡು ರೀತಿಗಳಿದ್ದುದು ಸಂಗೀತ ಶಾಸ್ತ್ರ ಗ್ರಂಥಗಳಿಂದ ತಿಳಿದುಬರುತ್ತದೆ. ಎರಡನೆಯ ರೀತಿಯಾದ ಛಾಯಾಲಗವೇ ಮುಂದೆ 'ಸಾಲಗಸೂಡ'ವೆಂದು ಹೆಸರಾಯಿತು. 'ಸಾಲಗ ಸೂಡ'ವೇ ಸುಳಾದಿಯ ಮೊದಲ ರೂಪ ವೆಂದು ಹೇಳುತ್ತಾರೆ. ಶುದ್ಧ ಸೂಡದಲ್ಲಿ ಶಾಸ್ತ್ರೋಕ್ತವಾಗಿ ಮಾರ್ಗೀಪದ್ಧತಿಯೂ, ಸಾಲಗ ಸೂಡದಲ್ಲಿ ಜನಪ್ರಿಯವಾದ ದೇಶೀ ಪದ್ಧತಿಯೂ ಮುಖ್ಯವಾದ ವಿವರಗಳು.

ಸುಳಾದಿಗಳು ಬೇರೆ ಯಾವ ಭಾಷೆಯಲ್ಲೂ ಇಲ್ಲದೆ, ಕನ್ನಡದಲ್ಲಿ ಮಾತ್ರ ಇವೆ. ಅದೂ ಹರಿದಾಸರ ಸಾಹಿತ್ಯದಲ್ಲಷ್ಟೆ. ಪುರಂದರದಾಸರೂ ಅವರ ಗುರುಗಳಾದ ವ್ಯಾಸರಾಯಸ್ವಾಮಿಗಳೂ, ಅವರ ಗುರುಗಳಾದ ಶ್ರೀಪಾದರಾಜರೂ ಸುಳಾದಿಗಳನ್ನು ರಚಿಸಿದವರು; ಪುರಂದರದಾಸರೇ ಸುಳಾದಿಗಳನ್ನು ಹೆಚ್ಚು ಸಂಖ್ಯೆಯಲ್ಲಿ ರಚಿಸಿದವರು. ಬಹುಕಾಲದವರೆಗೆ ಇವರ ಸುಳಾದಿಗಳೇ ಬಳಕೆಯಲ್ಲಿದ್ದುವು. ಕ್ರಿ. ೧೭೩೦ರಲ್ಲಿ ಸಂಗೀತ ಸಾರಾಮೃತವನ್ನು ಬರೆದ ತುಳುಜಾಜಿಯೂ ಸುಳಾದಿಗಳನ್ನು ಹೇಳುವಾಗ ಪುರಂದರದಾಸರ ಸುಳಾದಿಗಳನ್ನೇ ನಿದರ್ಶನವಾಗಿ ಎತ್ತಿಕೊಂಡಿದ್ದಾನೆ. ಪುರಂದರದಾಸರು 'ಸುಳಾದಿ'ಯೆಂಬ ಹೆಸರನ್ನೂ ಹೇಳಿದ್ದಾರೆ; ಶ್ರೀಪಾದರಾಜರಾಗಲಿ ವ್ಯಾಸರಾಯ ಸ್ವಾಮಿಗಳಾಗಲಿ ಹೇಳಲಿಲ್ಲ. ಹರಿದಾಸ ವಾಙ್ಮಯವಲ್ಲದೆ, ಕನ್ನಡ ಸಾಹಿತ್ಯದಲ್ಲಿ ನಾವು ಸೂಡಾದಿ (ಸುಳಾದಿ)ಯೆಂಬ ಹೆಸರನ್ನು ಮೊಟ್ಟಮೊದಲು ಕಾಣುವುದು ಪದ್ಮಣಾಂಕನೆಂಬ ಕವಿಯ ಪದ್ಮರಾಜ ಪುರಾಣ'ದಲ್ಲಿ (ಕ್ರಿಸ್ತಾಬ್ದ ೧೪೦೦ರ ಸುಮಾರು "ಸುಪ್ರಬಂಧಮುಲು ಮಾರ್ಗ ಬದ್ಧಂ....ಸೂಡಾದಿ

ಸದ್ರಮಣೀಯಂ"). ಇಲ್ಲಿ 'ಮಾರ್ಗಬದ್ಧ'ಕ್ಕಿಂತ ಬೇರೆಯಾಗಿ 'ಸೂಡಾದಿ'ಯನ್ನು ಎಣಿಸಿರುವುದನ್ನು ಗಮನಿಸಬೇಕು. ಸೂಡವೆಂದರೆ ದೇಶಿಯೆಂದು ಆಗಲೇ ಹೇಳಿದೆವಷ್ಟೆ. ಇದು ಪ್ರಧಾನವಾಗಿ ತಾಳಗಳಿಗೆ ಸಂಬಂಧಿಸಿದ ಮಾತೆಂಬುದು ಕ್ರಿಸ್ತಾಬ್ದ ೧೧೮೦ರ ಸುಮಾರಿಗೆ 'ಚಂದ್ರಪ್ರಭಪುರಾಣ'ವನ್ನು ಬರೆದ ಅಗ್ಗಳ ಕವಿಯ ಉಲ್ಲೇಖದಿಂದ ತಿಳಿಯುತ್ತದೆ. ಅವನು ಏಕ, ಧ್ರುವ, ತ್ರಿವುಡ (ತ್ರಿಪುಟ), ಮಟ್ಟೆಯ (ಮಂಠಕ), ಝಂಪೆ, ಅಟ್ಟ (ಅಂಡ), ರೂಪಕ ಎಂಬ ಏಳುತಾಳುಗಳನ್ನು ಹೆಸರಿಸಿ ಅವನ್ನು 'ಸೂತ್ರ' ತಾಳಗಳೆಂದು ಕರೆದು, ಶಾಸ್ತ್ರೋಕ್ತವಾದ ನೂರೆಂಟು ಮಾರ್ಗೀ ತಾಳಗಳನ್ನು 'ನ್ಯಾಸ' ತಾಳಗಳೆಂದು ಕರೆದಿದ್ದಾನೆ. 'ನ್ಯಾಸ'ವೆಂದರೆ ಗ್ರಂಥದಲ್ಲಿರುವುದು ('ಯಥಾ ನ್ಯಾಸಂ'); 'ಸೂತ್ರ'ವೆಂದರೆ ದಾರದಂತೆ ಹರಡಿಕೊಂಡಿರುವುದು. 'ಸೂತ್ರ'ವೆನ್ನುವುದೇ ದೇಶೀಯ ಭಾಷೆಯಲ್ಲಿ 'ಸೂಡ'ವೆಂದಾಯಿತೋ ಏನೋ ಎನ್ನುವ ಶಂಕೆ ಮೂಡುವುದು ಸಹಜ.

ಆದರೆ 'ಸಾಲಗ ಸೂಡ' ಎಂದು ಸಂಸ್ಕೃತ ಗ್ರಂಥಗಳಲ್ಲಿ ಕಂಡುಬರುವ ಮಾತನ್ನು ಕನ್ನಡದ ಕವಿಗಳು 'ಸಾಲಗ ಸೂಳ'ವೆಂದು ಕರೆದಿರುವುದಿದೆ. ಕ್ರಿಸ್ತಾಬ್ದ ೧೪೩೦ರಲ್ಲಿ ಚಂದ್ರಶೇಖರನು "ಸಾಳಗ ಸೂಳಮಂ ಪಾಡುವಲ್ಲಿ" ('ಪಂಪಾಸ್ಥಾನವರ್ಣನ') ಎಂದು ಪ್ರಸ್ತಾಪಿಸಿದ್ದಾನೆ. ಆದುದರಿಂದ 'ಸೂಳ್' ಎನ್ನುವ ಕನ್ನಡ ಪದ್ಯವೇ (ದೊಡ್ಡದಾಗಿ ಶಬ್ದಮಾಡು ಎಂಬರ್ಥದಲ್ಲಿ) 'ಸೂಡ' ಎಂಬುದಕ್ಕೆ ಮೂಲವೆಂದು ತೋರುತ್ತದೆ. ಸೂಡವೆಂಬ ಮಾತು ಸಂಸ್ಕೃತದಲ್ಲಿ ಬಂದಿದ್ದರೂ ಅದರ ಅರ್ಥವಾಗಲಿ ನಿಷ್ಪತ್ತಿಯಾಗಲಿ ಸ್ಪಷ್ಟವಾಗಿಲ್ಲ. 'ಸೂಳ'ವೇ 'ಸೂಡ'ವಾಗಿ ಸೂತ್ರವಾಗಿರುವುದು ಸಾಧ್ಯ. ಇದು ಹೇಗಾದರಿರಲಿ, ಇದು ಹಾಡಿಕೆಯ ಪ್ರಕಾರವಷ್ಟೇ ವಿನಾ ತಾಳದ ಸೂಚನೆಯಲ್ಲ. ಸೂಡವೆನ್ನುವುದು ಒಂದು ಪ್ರಬಂಧ ವಿಶೇಷ. ಮಾರ್ಗೀ ಪದ್ಧತಿಯನ್ನನುಸರಿಸಿ ಗ್ರಾಮ. ಮೂರ್ಛನೆಗಳ ಚೌಕಟ್ಟಿನಲ್ಲಿ ರಾಗವನ್ನು ಬಳಸಿಕೊಂಡ ಪ್ರಬಂಧ 'ಶುದ್ಧಸೂಡ'; ದೇಶ್ಯ ರಾಗಗಳನ್ನು ಬಳಸಿಕೊಂಡ ಪ್ರಬಂಧ 'ಸಾಲಗ ಸೂಡ' (ಛಾಯಾಲಗಸೂಡ). ಎರಡನೆಯ ಬಗೆಯ ಪ್ರಬಂಧಕ್ಕೇ ವ್ಯವಹಾರದಲ್ಲಿ 'ಸೂಡ'ವೆಂಬ ಹೆಸರು ಬಳಕೆಗೆ ಬಂದಂತೆ ತೋರುತ್ತದೆ. ಮೊದಲನೆಯ ಬಗೆಯ ಪ್ರಬಂಧವು ಬಳಕೆಯಿಂದ ಜಾರಿಹೋದಂತೆಯೂ ತೋರುತ್ತದೆ. ಸೂಡವೆನಿಸಿಕೊಂಡ ಈ ಬಗೆಯ ಪ್ರಬಂಧವನ್ನು ಹಿಡಿದು ಅದಕ್ಕೆ ಹಲವು ತಾಳಗಳನ್ನು ಅಳವಡಿಸಿದರೆ 'ಸೂಡಾದಿ'ಯಾಯಿತು; ಆ ತಾಳಗಳಿಗೆ 'ಸೂಡಾದಿ ತಾಳ'ಗಳೆಂದು ಹೆಸರಾಯಿತು. ಇಲ್ಲಿ 'ಆದಿ'ಯೆಂಬ ಮಾತಿಗೆ "ಮೊದಲಾಗಿ" ಎಂದು ಅರ್ಥವಲ್ಲ; "ಅವಲಂಬಿಸಿ" "ಮೊದಲಲ್ಲಿ ಹಿಡಿದು" ಎಂದರ್ಥ. ಸೂಡವನ್ನು ಅವಲಂಬಿಸಿದ ತಾಳಗಳು ಸೂಡಾದಿ ತಾಳಗಳು; ಸೂಡವೆಂಬುದೇ ತಾಳದ ಹೆಸರಲ್ಲ.

ಶಾಸ್ತ್ರಗ್ರಂಥಗಳು ಹೇಳುವ ನೂರೆಂಟು ತಾಳಗಳಲ್ಲಿ ಕನ್ನಡ ನಾಡಿನ ಹರಿದಾಸರು ತಮ್ಮ "ಸೂಳ ಪ್ರಬಂಧ" ರಚನೆಯಲ್ಲಿ ಏಳು ತಾಳಗಳನ್ನು ಮಾತ್ರ ಆರಿಸಿಕೊಂಡರು. ಪುಂಡರೀಕವಿಟ್ಠಲನ 'ನರ್ತನ ನಿರ್ಣಯ'ದಲ್ಲಿ 'ಸಪ್ತಸೂಡಾದಿರಿತ್ಯುಕ್ತಃ ಲಕ್ಷ್ಯ ಲಕ್ಷಣಕೋವಿದೈಃ'; ಎನ್ನುವ ಮಾತಿದೆ. ಗ್ರಂಥಕಾರನು ಏಳು 'ಸೂಡಾದಿ'ಗಳನ್ನು ಇಲ್ಲಿ ಉಲ್ಲೇಖಿಸಿದ್ದಾನೆ. 'ಸೂಡಾದಿ'ಯೆಂದರೆ ದಿಟವಾಗಿ ತಾಳವೆಂಬ ಅರ್ಥವಿಲ್ಲದಿದ್ದರೂ, ಇಲ್ಲಿ 'ಸೂಡಾದಿ'ಯೆನ್ನುವಾಗ 'ಸೂಡಾದಿ' ತಾಳಗಳನ್ನೇ ಹೇಳಿದನೆಂಬುದು ಮುಂದೆ ಬರುವ ಧ್ರುವಕ, ಮಂಠಕ, ರೂಪಕ, ಝಂಪಕ, ತ್ರಿವಿಡ, ಅಂಡ, ಏಕ ಎಂಬ ಏಳು ತಾಳಗಳ ಹೆಸರಿನಿಂದ ಸ್ಪಷ್ಟವಾಗುತ್ತದೆ. ಸೂಡವೆಂದರೆ ರಾಗ, ಅದರಲ್ಲಿ

ಹಾಡುವಾಗ ಏಳು ತಾಳಗಳನ್ನೂ ಬಳಸಿದರೆ ಅದು 'ಸೂಡಾದಿ' ಅಥವಾ 'ಸೂಡಾದಿ'ತಾಳಗಳು. ಸೋಮನಾರ್ಯನ 'ಸ್ವರರಾಗ ಸುಧಾರಸ'ದಲ್ಲಿ ಬರುವ ಈ ಒಕ್ಕಣೆ ಏಳು ತಾಳಗಳ ಎಣಿಕೆಯನ್ನು ಸಮರ್ಥಿಸುತ್ತದೆ: "ಧ್ರುವಾದಿ ಸಪ್ತತಾಳೈಶ್ಚ ಸ್ವರರಾಗೈಃ ಪ್ರಗಾಯಂತೇ ಸುಳಾದಿರತಿ ಕಥ್ಯತೇ". ಈ ವೇಳೆಗಾಗಲೇ (ಕ್ರಿಸ್ತಾಬ್ದ ೧೫೫೦ರ ಸುಮಾರು) 'ಸುಳಾದಿ'ಯೆಂಬ ಹೆಸರೇ ಪ್ರಚಲಿತವಾಗಿದ್ದಿತು. ಇಲ್ಲಿ ಸುಡಾದಿಯಲ್ಲಿ 'ಸ್ವರರಾಗ'ದ ಭಾಗವೂ 'ಸಪ್ತತಾಳ'ಗಳ ಭಾಗವೂ ಇದ್ದಂತೆ ಸೂಚನೆಯಿದೆ. ಇದಕ್ಕೆ ಒಂದು ನೂರು ವರ್ಷಗಳ ಮುಂಚೆಯೇ ಚತುರ ಕಲ್ಲಿನಾಥನು 'ಪದತಾಳ ಬಂಧತ್ವಾತ್ ದ್ವ್ಯಂಗಃ' ಎಂದು ಹೇಳಿ ಪದವೂ (ಎಂದರೆ ರಾಗವನ್ನು ಹೊಂದಿಸಿದ ಸಾಹಿತ್ಯ) ತಾಳವೂ ಸೇರಿರುವುದರಿಂದ ಎರಡು ನಿರ್ದಿಷ್ಟ ಭಾಗಗಳಿದ್ದುದನ್ನು ಹೇಳಿದ್ದನು.

ಸಾಹಿತ್ಯದಲ್ಲಿ ಏಕಾರ್ಥವಾಗಲಿ ಏಕಸೂತ್ರವಾಗಲಿ ಇದ್ದು, ಎಲ್ಲವನ್ನೂ ಒಂದೇ ರಾಗದಲ್ಲಿ (ಯಾವುದಾದರೊಂದು ದೇಶೀ ರಾಗದಲ್ಲಿ) ಅಳವಡಿಸಿ, ಸಾಹಿತ್ಯದ ಬೇರೆ ಬೇರೆ ಖಂಡಗಳನ್ನು (ನುಡಿಗಳನ್ನು) ಬೇರೆಬೇರೆ ತಾಳಗಳಲ್ಲಿ (ಏಳು ದೇಶೀ ತಾಳಗಳಲ್ಲಿ ಯಾವುದಾದರೊಂದರಲ್ಲಿ) ಹೆಣೆದರೆ ಅದು ಸುಳಾದಿಯ ಸ್ವರೂಪ. ಇದಕ್ಕೆ ಶಾಸ್ತ್ರದ ಆಧಾರವೇನಿದ್ದಿತೋ ಸ್ಪಷ್ಟವಾಗುವುದಿಲ್ಲ; ಆದರೆ ಪ್ರಯೋಗದಲ್ಲಂತೂ ಇದು ಸಿದ್ಧವಾಯಿತು. ಶಾಸ್ತ್ರದ ವಿಧಿಗೂ ಪ್ರಯೋಗದ ಬಗೆಗೂ ಹೊಂದಾಣಿಕೆಯಿಲ್ಲದಿರುವುದನ್ನೂ ಗಮನಿಸಬಹುದು. 'ಸಂಗೀತಸಾರಾಮೃತ'ವನ್ನು ಬರೆದ ತುಳಜಾಜಿಯ ಉಲ್ಲೇಖ ಆಗಲೇ ಬಂದಿತಷ್ಟೆ. ಇವನು ಪುರಂದರದಾಸರು ಕಾಲವಾಗಿ ಒಂದನೂರು ಐವತ್ತು ವರ್ಷಗಳು ಕಳೆದ ಮೇಲೆ ಕಾಣಿಸಿಕೊಂಡವನು. ಆದರೆ ಪುರಂದರದಾಸರ ಸುಳಾದಿಗಳು ಪ್ರಸಿದ್ಧವಾಗಿ, ಇನ್ನೂ ಬಳಕೆಯಲ್ಲಿದ್ದುವು. ಈ ಸುಳಾದಿಗಳಲ್ಲಿ ಶಾಸ್ತ್ರೋಕ್ತವಾದ ಲಕ್ಷಣಗಳು ಕಾಣಿಸದೆ ಇದ್ದುದನ್ನು ತುಳಜಾಜಿ ಗಮನಿಸಿದ್ದನು. ಈ ಲೋಪದೋಷಕ್ಕೆ ಸಮಾಧಾನವನ್ನು ಹೇಳಲು ಯತ್ನಿಸಿದನಾದರೂ ಅವನ ವಿವರಣೆ ಅಷ್ಟೇನು ಸಮರ್ಪಕವಾಗಲಿಲ್ಲ-

ಶ್ರೀ ಪುರಂದರದಾಸಾದ್ಯೈರಭಿಯುಕ್ತೈಃ ಪುರಾತನ್ಯೈಃ।
ಪ್ರಯುಕ್ತೇಷು ಪ್ರಸಿದ್ದೇಷು ಲಕ್ಷ್ಯೇಷು ವಿವಿಧೇಷ್ವಪಿ॥
ಧ್ರುವಾದಿಷು ತ್ವದುಕ್ತಾನಿ ಲಕ್ಷಣಾನಿ ಮಹಾಮತೇ
ನ ದೃಶ್ಯಂತೇ ತತ್ ಕಥಂ ಲಕ್ಷ್ಯ ಲಕ್ಷಣ ಸಂಗತಿಃ॥

ಸಮಸ್ಯೆ ಅವನನ್ನು ಕಾಡಿತು. ಪುರಂದರದಾಸರ ಕೃತಿಗಳು (ಮುಖ್ಯವಾಗಿ) ಲಕ್ಷ್ಯಸಂಗೀತ; ಪ್ರಯೋಗಪರವಾದುವು. ಶಾಸ್ತ್ರಗ್ರಂಥಗಳಲ್ಲಿ ಬರುವುದು ಲಕ್ಷಣ ಸಂಗೀತ. ಪುರಂದರದಾಸರು ಸುಳಾದಿಗಳನ್ನು ರಚಿಸಿರುವ ರೀತಿ ಶಾಸ್ತ್ರದಲ್ಲಿ ಹೇಳಿರುವ ಲಕ್ಷಣಕ್ಕಿಂತ ಬೇರೆಯಾಗಿದೆಯೆಂಬುದೇ ತುಳಜಾಜಿಯ ಸಮಸ್ಯೆ. ಅವನು ಈ ಸಮಸ್ಯೆಗೆ ಸಮಾಧಾನವನ್ನು ನೀಡುತ್ತ "ಅಸ್ಯೋದಾಹರಣಂ ಪುರಂದರದಾಸಾನಾಂ ಸೂಳಾದಿಃ ದೇವಗಾಂಧಾರರಾಗೇ ರಾಸತಾಳೇ" ಎಂದು 'ಹಸುಗಳ ಕರೆವ ಧ್ವನಿ' ಎಂಬ ಸುಳಾದಿಯನ್ನು ವಿಮರ್ಶೆಗೆ ಎತ್ತಿಕೊಂಡಿದ್ದಾನೆ. ಅವನು ನೀಡಿರುವ ಸಮಾಧಾನ ನಮಗಿಲ್ಲಿ ಪ್ರಸಕ್ತವಲ್ಲ. ಸುಳಾದಿಯ ರಚನೆ ಶಾಸ್ತ್ರಸಂಗೀತದ ವಿಧಿಯನ್ನು ಅನುಸರಿಸದೆ ಇದ್ದುದು ಮುಖ್ಯ; ಅಥವಾ ಅನುಸರಿಸುವುದಿಲ್ಲವೆಂದು ಕೆಲವರು ತಜ್ಞರು ಆ ಕಾಲದಲ್ಲಿ ಬಗೆದಿದ್ದರೆನ್ನುವುದಷ್ಟೇ ಸಾಕು.

ಇದರಿಂದ ಎರಡು ವಿಚಾರಗಳು ಹೊರಡುತ್ತವೆ. ಪುರಂದರದಾಸರು ಸುಳಾದಿಗಳ ರಚನೆಯಲ್ಲಿ ಹೊಸದೊಂದು ಹಾದಿಯನ್ನು ತುಳಿದರೆನ್ನುವುದು; ಸುಳಾದಿಯ ರಚನೆಯೇ ಶಾಸ್ತ್ರದ ಕಟ್ಟುಪಾಡಿನಿಂದ ಹೊರಗಿದ್ದಿತೆನ್ನುವುದು. ಸುಳಾದಿಯ ಪ್ರಬಂಧದ ಭಾಷೆ ಪ್ರಾಕೃತ (ಕನ್ನಡ); ಅದಕ್ಕೆ ಬಳಸುವ ರಾಗ ದೇಶೀ ಪದ್ಧತಿಯದು; ತಾಳಗಳೂ ಮಾರ್ಗೀ ಪದ್ಧತಿಗೆ ಸೇರಿದುವಲ್ಲ. ಶ್ರೀಪಾದರಾಜರೂ, ವ್ಯಾಸರಾಯಸ್ವಾಮಿಗಳೂ, ಪುರಂದರದಾಸರೂ ಆ ಕಾಲದ ಶಾಸ್ತ್ರೀಯ ಸಂಗೀತವನ್ನು ಚೆನ್ನಾಗಿ ಬಲ್ಲವರು; ಶಾಸ್ತ್ರಗ್ರಂಥಗಳ ಆಳವಾದ ಪರಿಚಯವನ್ನು ಹೊಂದಿದ್ದವರು. ಇದು ಅವರ ರಚನೆಗಳಿಂದಲೇ ಸ್ಪಷ್ಟವಾಗುತ್ತದೆ. ಶಾಸ್ತ್ರ ವಿಧಿಗಳನ್ನು ಅನುಸರಿಸಿ ಪದಗಳನ್ನೂ ದಂಡಕವೇ ಮೊದಲಾದ ಪ್ರಬಂಧಗಳನ್ನೂ ರಚಿಸಿದರು. ಶಾಸ್ತ್ರವಿಧಿಗಳನ್ನು ಒತ್ತಟ್ಟಿಗಿರಿಸಿ ಸುಳಾದಿಗಳನ್ನು ರಚಿಸಿದರು. ಶ್ರೀಪಾದರಾಜರು ಧೈರ್ಯದಿಂದ ಈ ಹೊಸ ಹಾದಿಯನ್ನು ಹಾಕಿಕೊಟ್ಟರೆಂದೇ ಈ ಹಾದಿಯನ್ನು "ಗಟ್ಟಿಯಾಗಿ ಹಾಡುವ ಹಾದಿ" (ಸೂಳ್ ಹಾದಿ) ಎಂದರೆ ಅಷ್ಟಾಗಿ ತಪ್ಪೆನಿಸದು. ದಾಸಕೂಟದವರು ಸುಳಾದಿಯೆನ್ನುವ ಮಾತಿಗೆ 'ಸುಳುಹಾದಿ', 'ಸುಲಭವಾದ ಹಾದಿ'ಯೆಂದು ಅರ್ಥಮಾಡುವುದಿದೆ; ಆದರೆ ಸುಳಾದಿಯ ರಚನೆಯೂ ಸುಲಭವಲ್ಲ, ವಿನಿಕೆಯೂ ಸುಲಭವಲ್ಲ, ಎಂದು ಅವರಿಗೂ ತಿಳಿದಿದೆ! ಹರಿದಾಸರ ಹೊಸ ರಚನಾಪದ್ಧತಿಯೆನ್ನುವುದು ಹೊಂದಿಕೊಳ್ಳುತ್ತದೆ.

ಶ್ರೀಪಾದರಾಜರ ಸುಳಾದಿಯೊಂದು 'ನಿನ್ನಧೀನ ಶರೀರಕರಣ ಚೇಷ್ಟೆಗಳೆಲ್ಲ' ಎಂದು ಆರಂಭವಾಗಿ ಆರು ನುಡಿಗಳಲ್ಲಿ ಮುಗಿಯುತ್ತದೆ; ಕಡೆಯ ನುಡಿಯೇನೋ ಜೊತೆ. ಉಳಿದ ಐದು ನುಡಿಗಳು ಬೇರೆ ಬೇರೆ ತಾಳಗಳಲ್ಲಿರುವುದು ಮಾತ್ರವಲ್ಲ ಬೇರೆ ಬೇರೆ ರಾಗಗಳಲ್ಲೂ ಇವೆ. ಮೊದಲ ನುಡಿಯೂ ಜೊತೆಯೂ ಸಾಳಂಗ ರಾಗದಲ್ಲಿವೆ. ಇದು ರಾಗತಾಳಮಾಲಿಕೆಯಾಯಿತು. ಇಂಥ ಕೃತಿಗಳನ್ನು ತಾಳ್ಳಪಾಕ ಅಣ್ಣಮಾಚಾರ್ಯರೂ ರಚಿಸಿದ್ದಾರೆಂದು ಹೇಳುತ್ತಾರೆ. ನನ್ನ ಗುರುಗಳೂ, ಈ ವಿಚಾರವಾಗಿ ತುಂಬ ಪರಿಶ್ರಮ ಇದ್ದವರೂ ಆದ ರಾಳ್ಲಪಲ್ಲಿ ಅನಂತಕೃಷ್ಣ ಶರ್ಮರು ಹೀಗೆ ಹೇಳುತ್ತಿದ್ದರು. ನಿದರ್ಶನಗಳು ನನ್ನ ಗಮನಕ್ಕೆ ಬಂದಿಲ್ಲವಾಗಿ ಏನೂ ಹೇಳಲಾರೆ. ಆದರೆ ಶ್ರೀಪಾದರಾಜರು ತಾವೇ ಈ ಪದ್ಧತಿಯನ್ನು ಕೈಬಿಟ್ಟು ಸುಳಾದಿಯು 'ಏಕರಾಗನಿವೇಶಿತ'ವಾಗಿರಬೇಕೆಂದು ದಾರಿತೋರಿಸಿದಂತೆ ಕಾಣುತ್ತದೆ. ಅವರ ಉಳಿದ ಎರಡು ಸುಳಾದಿಗಳೂ ('ಈ ವನದೆಡೆಗಳು' ಎಂಬ ಹತ್ತು ನುಡಿಗಳ ಸುಳಾದಿ, ಮತ್ತು 'ಅನಂತಕಾಲದಲ್ಲಿ' ಎಂಬ ಒಂಬತ್ತು ನುಡಿಗಳ ಸುಳಾದಿ) ಏಕರಾಗ ನಿವೇಶಿತವಾಗಿಯೇ ಇವೆ (ಮೊದಲನೆಯದು ಭೈರವಿಯಲ್ಲಿ, ಎರಡನೆಯದು ನಟ್ಟದಲ್ಲಿ). ಎರಡರಲ್ಲೂ ಎಂಟು ತಾಳಗಳನ್ನು ಬಳಸಿದ್ದಾರೆ; ಧ್ರುವ, ಮಟ್ಟ, ತ್ರಿವಿಡೆ, ರೂಪಕ ಎಂಬ ಕ್ರಮವನ್ನೂ ಅನುಸರಿಸಿದ್ದಾರೆ. ಕಡೆಗೆ ತಾಳವಿಲ್ಲದೆ 'ಜೊತೆ'ಯೂ ಕಾಣಸಿಗುತ್ತದೆ. ಮೊದಲನೆಯ ಸುಳಾದಿಯಲ್ಲಿ ಏಕತಾಳವನ್ನು ಎರಡು ಬಾರಿ ಬಳಸಿದ್ದಾರೆ. ಪುರಂದರದಾಸರು ಏಳು ತಾಳಗಳ ಬಳಕೆಯನ್ನು ಹೆಚ್ಚಾಗಿ ತಂದರೆಂದು ಹೇಳಬಹುದು. ಶ್ರೀಪಾದರಾಜರ ಪ್ರಯೋಗದಿಂದ, ಪುರಂದರದಾಸರ ವ್ಯವಸಾಯದಿಂದ ಸುಳಾದಿಯ ಸ್ವರೂಪ (ಧ್ರುವಾದಿ ಸಾಲಗಸೂಡ) ಸಿದ್ಧವಾಯಿತೆಂದು ಹೇಳಬಹುದು.

ಎಟ್ಟಿಯಾಪುರದ ಸುಬ್ಬರಾಮದೀಕ್ಷಿತರು ತಮ್ಮ 'ಸಂಗೀತ ಸಂಪ್ರದಾಯ ಪ್ರದರ್ಶಿನಿ'ಯಲ್ಲಿ (೧೯೦೪) ಪುರಂದರದಾಸರ ಮೂರು ಸುಳಾದಿಗಳನ್ನೂ ಸ್ವರಸಹಿತ ಕೊಟ್ಟಿರುವುದಲ್ಲದೆ

ಸುಳಾದಿಯೆಂಬ ಮಾತಿಗೆ ಲಕ್ಷಣವನ್ನೂ ಹೇಳಿದ್ದಾರೆ. ಸುಳಾದಿ ಎನ್ನುವುದು ಅಲಂಕಾರಕ್ಕೆ ಹೆಸರಾದ ಏಳು ತಾಳಗಳಲ್ಲಿ ಮಾಡಿದ ಕೃತಿಯೆಂದು ಅವರ ಒಕ್ಕಣೆ. ಸೂಡಾದಿಸಪ್ತತಾಳಗಳ ಉಲ್ಲೇಖ ಬಹು ಹಿಂದಿನಿಂದ ಬಂದಿದೆ. ಹನ್ನೆರಡನೆಯ ಶತಮಾನದಿಂದಲೇ ಕನ್ನಡವಲ್ಲಿ ಏಳು ಸೂಳಾದಿ ತಾಳಗಳ ಎಣಿಕೆಯಿದೆ; ಏಕ, ದ್ರೂವ (ಧ್ರುವ), ತ್ರಿವಿಡೆ (ತಿವಡೆ, ತ್ರಿಪುಡೆ, ತ್ರಿಪುಟ), ಮುಟ್ಟೆಯ (ಮಟ್ಟ, ಮಠ್ಠೆ, ಮಂಠ, ಮಂಠಕ), ಝುಂಪೆ, ಆಟ(ಅಟ್ಟ, ಅಂಡ), ರೂಪಕ. ಈ ಏಳಕ್ಕೆ ಝೋಂಪಾಟವನ್ನು ಸೇರಿಸಿ ಎಂಟೆಂದೂ, ರಗಣಮಠ್ಯವನ್ನು ಸೇರಿಸಿ ಒಂಬತ್ತೆಂದೂ ಎಣಿಕೆಗಳಿವೆ. ಅಗ್ಗಳ ಕವಿಯು (ಕ್ರಿಸ್ತಾಬ್ದ ೧೧೮೯) ಏಕ, ಧ್ರುವ, ತ್ರಿಪುಡೆ, ಮಟ್ಠೆಯ, ಆಟ, ರೂಪಕ "ಮೊದಲಾದ ಸೂಡತಾಳಂಗಳೆ"ಂದು ಉಲ್ಲೇಖಿಸುತ್ತಾನೆ; ಸಂಖ್ಯೆಯನ್ನು ನಿರ್ದೇಶಿಸುವುದಿಲ್ಲ.

ಆದರೆ ಹರಿದಾಸರು ಸುಳಾದಿಗಳನ್ನು ರಚನೆಮಾಡಿ ಬಳಕೆಗೆ ತಂದಾಗ ಏಳು ತಾಳಗಳನ್ನು ಎತ್ತಿಕೊಂಡರು. ಅವರು ಸುಳಾದಿಗಳನ್ನು ತಾಳಮಾಲಿಕೆಗಳೆಂದೇ ಕಾಣಿಸಿದರು. ಒಂದು ರಾಗವನ್ನೇ ಮೊದಲಿಂದ ಕಡೆಯವರೆಗೆ ಹಿಡಿದು ('ಏಕರಾಗ ನಿವೇಶಿತಃ' ಎಂಬ ಲಕ್ಷಣವಿರುವುದನ್ನು ನೆನಪಿಗೆ ತಂದುಕೊಳ್ಳಬಹುದು), ಮೊದಲಿನ ನುಡಿಯನ್ನು ಧ್ರುವತಾಳದಲ್ಲಿಯೂ, ಎರಡನೆಯದನ್ನು (ರಗಣ) ಮಠ್ಯದಲ್ಲಿಯೂ ಹಾಡಿ, ಮುಂದೆ ಐದು ಅಥವಾ ಆರು ಇತರ ದೇಶಿತಾಳಗಳಲ್ಲಿ (ಮೇಲೆ ಹೆಸರಿಸಿದವು) ಇತರ ನುಡಿಗಳನ್ನು ಅಳವಡಿಸುವ ವಾಡಿಕೆ ಹಳೆಯದು. ಈ ನುಡಿಗಳಲ್ಲಿ ಇಷ್ಟೇ ಸಾಲುಗಳಿರಬೇಕೆಂಬ ನಿಯಮವೇನು ಇರದು. ಎಲ್ಲ ಏಳು (ಅಥವಾ ಎಂಟು) ತಾಳಗಳನ್ನೂ ಬಳಸಲೇಬೇಕೆಂಬ ವಿಧಿಯೇನಿರದು. ಆದರೆ ಧ್ರುವ ಮತ್ತು ಮಠ್ಯ (ಮಟ್ಟ) ತಾಳಗಳಿಲ್ಲದೆ ಸುಳಾದಿಯೇ ಇಲ್ಲ; ರೂಪಕವು ಬಹುಮಟ್ಟಿಗೆ ಅನಿವಾರ್ಯವೇ. ಸುಳಾದಿಗಳಲ್ಲಿ ಐದು ನುಡಿಗಳಿಗೆ ಕಡಮೆಯಿರುವುದಿಲ್ಲ; ಎಂಟಕ್ಕೆ ಹೆಚ್ಚು ಇರುವುದಿಲ್ಲ. ತಾಳದಿಂದಲೇ ನುಡಿಗಳು ನಿರ್ದೇಶಗೊಳ್ಳುತ್ತವೆ.

ಹೀಗೆ ತಾಳನಿರ್ದಿಷ್ಟ ನುಡಿಗಳು ಮುಗಿದ ಮೇಲೆ ಕೊನೆಯಲ್ಲಿ ಜೊತೆ (ಯತಿ, ಜತೆ, ಜತಿ) ಎಂಬ ಎರಡೇ ಸಾಲುಗಳ ತುಣುಕು ಇರುವುದು ವಾಡಿಕೆ. ಈ ಭಾಗದಲ್ಲಿ ಎರಡು ಸಾಲುಗಳೆಂಬ ನಿಯಮವಿದ್ದು, ನಡುವೆ ವಿರಾಮ ಇರುವುದರಿಂದ ಇದನ್ನು 'ಜೊತೆ'ಯೆಂದು ಕರೆಯುವುದೇ ಸರಿಯಾದುದು; 'ಯುತ' ಅಥವಾ 'ಯುಕ್ತ' ಎಂಬ ಸಂಸ್ಕೃತ ಪದದ ತದ್ಭವವಾಗಿ ಜೊತೆ, ಮತ್ತು ಈ ಬಗೆಯ ರಚನೆಗಳನ್ನು ಹಾಡುವಾಗ ವಾದ್ಯದ ವಿನಿಕೆಗೆಂದೇ ಗೊತ್ತಾದ ಗೀತಭಾಗವನ್ನು ಕಡೆಯಲ್ಲಿ ಅಳವಡಿಸುತ್ತಿದ್ದರು; ಇದಕ್ಕೆ ಜಕ್ಕವೆಂದು ಹೆಸರಿದ್ದಿತು. ವಾದ್ಯದ ಜೊತೆಗೆ ಈ ಭಾಗವನ್ನು ಹಾಡುತ್ತಿದ್ದರಾಗಿ ಇದು ಜೊತೆಯೆಂದೇ ಹೆಸರಾಯಿತು. ಸುಳಾದಿಯ ಈ ಭಾಗಕ್ಕೆ ಮೂರ್ಛನೆಯೆಂಬ ಹೆಸರೂ ಇದೆ. ಹಲವರು ಗಾಯಕರಿದ್ದರೆ ಎಲ್ಲರೂ ಜೊತೆಯಾಗಿ ಈ ಭಾಗವನ್ನು ಹಾಡುವರು. ಸುಳಾದಿಯ ಪ್ರಕರಣಾರ್ಥವನ್ನು ಸಂಗ್ರಹವಾಗಿ ನಿರೂಪಿಸುವ ಭಾಗ, ಪದದಲ್ಲಿ ಪಲ್ಲವಿಯಿದ್ದಂತೆ. ಇದಕ್ಕೆ ತಾಳದ ಕಟ್ಟುಪಾಡಿಲ್ಲ.

ಸುಳಾದಿಗಳ ರಚನೆಯಲ್ಲಿ ಪುರಂದರದಾಸರದ್ದೇ ಸಿದ್ಧಹಸ್ತ. ಅದರ ಪದ ಭಾಗದಲ್ಲಿ (ಎಂದರೆ ಸಾಹಿತ್ಯಭಾಗದಲ್ಲಿ) ಶ್ರುತಿಯ ತಾತ್ಪರ್ಯವನ್ನೋ ಭಗವನ್ಮಹಿಮೆಯನ್ನೋ ಕ್ಷೇತ್ರವೈಶಿಷ್ಟ್ಯವನ್ನೋ ಐದಾರು ನುಡಿಗಳಲ್ಲಿ ಸಂಗ್ರಹವಾಗಿ ಸ್ವಾರಸ್ಯವಾಗಿ ನಿರೂಪಿಸುವ ಜಾಣ್ಮೆ ಅವರ ವೈಶಿಷ್ಟ್ಯ.

ಸುಳಾದಿಗಳ ಬಳಕೆ ದಾಸಕೂಟದಲ್ಲಿ ಹೆಚ್ಚಲು ಅವರೇ ಕಾರಣ. ಅವರ ಕಾಲದ ನಂತರ ವಿಜಯದಾಸರೂ ಬೇಕಾದಷ್ಟು ಸುಳಾದಿಗಳನ್ನು ರಚಿಸಿದರು. ಆದರೆ ಬರುಬರುತ್ತ ಸುಳಾದಿಗಳನ್ನು ಹಾಡುವ ಪದ್ಧತಿ ಮರೆಯಾಗುತ್ತ ಬಂದಿತು. ಪದಗಳಿಗಿಂತ ಸುಳಾದಿಯು ಕ್ಲಿಷ್ಟವಾದ ಗೇಯಪ್ರಕಾರವಾದುದರಿಂದಲೂ, ಸುಳಾದಿಯಲ್ಲಿ ವಾದ್ಯದ ನೆರವು ಅಗತ್ಯವಾದುದರಿಂದಲೂ ಮುಂದಿನ ಕಾಲದ ಹರಿದಾಸರಿಗೆ ಅದು ಅಷ್ಟಾಗಿ ಕೈಗೂಡಲಿಲ್ಲ. ಈಚೆಗೆ ಅದರ ವಿನಿಕೆ ತಪ್ಪಿಯೇ ಹೋಗಿದೆ. ಸುಳಾದಿಯಲ್ಲಿ ಸಾಹಿತ್ಯ ಸುದೀರ್ಘ, ಸ್ವರ ಸಂಚಾರಗಳು ವಿಸ್ತೃತ, ತಾಳಗಳ ಹಿಡಿತ ಕ್ಲಿಷ್ಟ. ಈ ಕಾಲಕ್ಕೆ ಅದು ಸೊಗಸುವುದೂ ಕಡಮೆಯೇ ಇದ್ದೀತು.

ಎಟ್ಟಿಯಾಪುರದ ಸುಬ್ಬರಾಮದೀಕ್ಷಿತರು ತಮ್ಮ 'ಸಂಗೀತ ಸಂಪ್ರದಾಯ ಪ್ರದರ್ಶಿನಿ'ಯಲ್ಲಿ ಸ್ವರಸಂಯೋಜನೆ ಮಾಡಿ ಕೊಟ್ಟಿರುವ ಪುರಂದರದಾಸರ ಸುಳಾದಿಗಳಿಂದ ಈ ಶತಮಾನದ ಆದಿಭಾಗದಲ್ಲಿ ಸುಳಾದಿಗಳನ್ನು ಹೇಗೆ ಹಾಡುತ್ತಿದ್ದರೆಂಬುದನ್ನು ತಕ್ಕಮಟ್ಟಿಗೆ ಊಹಿಸಿಕೊಳ್ಳಬಹುದು. ಅಲ್ಲಿ ಕೊಟ್ಟಿರುವ ಸುಪ್ರಸಿದ್ಧವಾದ 'ಹಸುಗಳ ಕರೆವ ಧ್ವನಿ' ಇಂಬ ದೇವಗಾಂಧಾರರಾಗದ ಸುಳಾದಿಯನ್ನು ಮೈಸೂರಿನ ಮಹಾಮಹೋಪಾಧ್ಯಯ ರಾ. ಸತ್ಯನಾರಾಯಣ ಅವರು ಪಾಠಶುದ್ಧಿಯೊಂದಿಗೆ ಸಂಗೀತ ಸಂಸ್ಕರಣವನ್ನೂ ಮಾಡಿದ್ದಾರೆ. ಬೇಲೂರು ಕೇಶವದಾಸರು ತಮ್ಮ 'ಹರಿದಾಸ ಸಾಹಿತ್ಯ'ದಲ್ಲಿ ಪುರಂದರದಾಸರ ಬ್ರಹ್ಮಾನಂದ ಸುಳಾದಿಯನ್ನು ('ಆ ಪಾದ ಆನಂದ ನಖ') ದಾಸಕೂಟದಲ್ಲಿ ವಾಡಿಕೆಯಲ್ಲಿರುವಂತೆ ಸ್ವರಸಹಿತ ಕೊಟ್ಟಿದ್ದಾರೆ.

ಇನ್ನು ಉಗಾಭೋಗವನ್ನು ಕುರಿತು ನಾಲ್ಕು ಮಾತು. ಉಗಾಭೋಗವೆಂಬ ಹೆಸರನ್ನು ಪುರಂದರದಾಸರು ಬಳಸಿಲ್ಲ; ಅವರ ಕಾಲವಾಗಿ ನೂರಾರು ವರ್ಷಗಳು ಕಳೆದ ಮೇಲೆ ವಿಜಯದಾಸರ ಪದವೊಂದರಲ್ಲೇ ಪುರಂದರದಾಸರು ಸಾವಿರಾರು 'ಉಗಾಭೋಗ'ಗಳನ್ನು ರಚಿಸಿದ್ದರೆಂದು ತಿಳಿದುಬರುವುದು. ಉಗಾಭೋಗವೆಂಬ ಹೆಸರು ನಮಗೆ ಮೊಟ್ಟಮೊದಲು ಕಾಣುವುದು ಇಲ್ಲಿಯೇ.

'ನಿಷ್ಠ ಅಹನ್ನೀಕ ಏಕಾದಶೀ ಜನ್ಮ
ಅಷ್ಟಮಿಯೊನಿರ್ಣಯ ಗಂಡಕಿ ಶಿಲೆಗಳ
ನಿಷ್ಠ ಶೋಧಕ ಉಗಾಭೋಗಾದಿ
ಕಷ್ಟಹರ ಬಲ್ಲರೆ ಕಥೆ ಪೀಯೂಷ
ವಷ್ಟು ಎಪ್ಪತ್ತೈದು ಸಾವಿರ ಮಿಳಿತವು'

ವಿಜಯದಾಸರ ಈ ಸುಳಾದಿಯಲ್ಲಿ 'ಸುಳಾದಿಗಳು ಅರವತ್ತುನಾಲ್ಕುಸಾವಿರ' ಎಂದು ಸುಳಾದಿಗಳನ್ನೇ ಪ್ರತ್ಯೇಕವಾಗಿ ಎಣಿಕೆಮಾಡಿರುವುದನ್ನೂ, ಉಳಿದ ಹಲವು ಪ್ರಕಾರದ ರಚನೆಗಳೊಂದಿಗೆ ಉಗಾಭೋಗಗಳನ್ನು ಸೇರಿಸಿರುವುದನ್ನೂ ಗಮನಿಸಬೇಕು. ಸುಳಾದಿಗೆ ಹೋಲಿಸಿದರೆ ಉಗಾಭೋಗವು ತೀರ ಸಣ್ಣ ಪ್ರಮಾಣದ ರಚನೆಯೆಂಬ ಕಾರಣವಿದ್ದೀತು; ಉಗಾಭೋಗವು ಸುಳಾದಿಯಷ್ಟು ಪ್ರಮುಖವಾದ ಪ್ರಕಾರವಲ್ಲವೆಂಬುದೂ ಕಾರಣವಿದ್ದೀತು. ಉಗಾಭೋಗದ ಹೆಸರನ್ನು ವಿಜಯದಾಸರಿಗೆ ಹಿಂದೆ ನಾವು ಕಾಣಲಾರೆವು ದಿಟ, ಆದರೆ ಈ ಗೋತ್ರಕ್ಕೆ ಸೇರಿದ ರಚನೆಗಳು ತುಂಬ ಪ್ರಾಚೀನವಾದುವು. ದಾಸಕೂಟದಲ್ಲಿ ಶ್ರೀಪಾದರಾಜರೂ ವ್ಯಾಸರಾಯಸ್ವಾಮಿಗಳೂ

ಉಗಾಭೋಗಗಳನ್ನೂ ರಚಿಸಿದ್ದರು; ಆದರೆ ಅವರ ಉಗಾಭೋಗಗಳೂ ಪುರಂದರದಾಸರ ಉಗಾಭೋಗಗಳಷ್ಟು ಪ್ರಸಿದ್ಧವಾಗಲಿಲ್ಲ. 'ಸಂಗೀತಸಾರಾಮೃತ'ವನ್ನು ಬರೆದ ತುಳಜಾಜಿಯು ಸುಳಾದಿಗಳನ್ನು ಉಲ್ಲೇಖಿಸಿದ್ದರೂ ಉಗಾಭೋಗಗಳನ್ನು ಪ್ರಸ್ತಾಪಿಸಿಲ್ಲ. ಎಟ್ಟಿಯಾಪುರದ ಸುಬ್ಬರಾಮದೀಕ್ಷಿತರೂ ತಮ್ಮ ಸಂಗೀತಸಂಪ್ರದಾಯ ಪ್ರದರ್ಶಿನಿ'ಯಲ್ಲಿ ಉಗಾಭೋಗಗಳನ್ನು ಉದಹರಿಸಿಲ್ಲ; ಸುಳಾದಿಗಳನ್ನು ಕೊಟ್ಟಿದ್ದಾರೆ.

ಉಗಾಭೋಗವೆಂಬ ಮಾತಿಗೆ ಅರ್ಥವೂ ಸ್ಪಷ್ಟವಾಗಿಲ್ಲ. ಉದ್ಗ್ರಾಹ, ಮೇಳಾಪಕ, ಧ್ರುವ, ಆಭೋಗ ಎಂಬ ನಾಲ್ಕು ಅಂಗಗಳಿರುವ ರಚನೆಯೆಂದೂ ಮೊದಲ ಉದ್ಗ್ರಾಹ, ಕಡೆಯ ಆಭೋಗ ಎರಡೂ ಕೂಡಿ ಉದ್ಗ್ರಾಹಾಭೋಗವೆಂಬ ನಿರ್ದೇಶನ ಬಂದಿತೆಂದೂ, ಅದೇ ಉಗಾಭೋಗ ವಾಯಿತೆಂದೂ ಒಂದು ವಿವರಣೆಯಿದೆ. ಉದ್ಗ್ರಾಹವೆಂದರೆ ರಾಗವನ್ನು ಎತ್ತಿಕೊಳ್ಳುವುದು. ಮೇಳಾಪಕವೆಂದರೆ ಮೇಳದಲ್ಲಿ ಅದರ ನಿಲುಗಡೆ, ಧ್ರುವವೆಂದರೆ ರಾಗವನ್ನು ಹೆಮ್ಮೈಸುವುದು, ಆಭೋಗವೆಂದರೆ ರಾಗ ಶುದ್ಧವಾದ ಮತ್ತು ಸುಖವಾದ ಸಂಚಾರ; ಇವು ಕೂಡಿರುವ ರಚನೆಯೆಂದು ತಾತ್ಪರ್ಯ. ಈ ವಿವರಣೆಯನ್ನು ಮೊದಲು ನಾನು ಸ್ವೀಕರಿಸಿದ್ದುಂಟು. ಆದರೆ ಈಚೆಗೆ ವಿಚಾರಮಾಡಲಾಗಿ ಇದರಲ್ಲಿ ಹುರುಳಿಲ್ಲವೆಂದು ಸ್ಪಷ್ಟವಾಯಿತು. ಉಗಾಭೋಗದ ರಚನೆಯಲ್ಲಾಗಲಿ, ಅದನ್ನು ಹಾಡುವ ಬಗೆಯಲ್ಲಾಗಲೀ ಈ ಅಂಗಗಳನ್ನು ನಿಖರವಾಗಿ ಕಾಣುವುದಾಗದು; ಮತ್ತೆ ಈ ಅಂಗಗಳಿರುವ ಎಷ್ಟೋ ಪ್ರಬಂಧಗಳಿದ್ದು ಅವಕ್ಕೆ ಉದ್ಗ್ರಾಹಾಭೋಗವೆಂಬ ಹೆಸರಿಲ್ಲ. ಶಾರ್ಙ್ಗ ದೇವನೇ ಉಗಾಭೋಗ ರಚನೆಗಳನ್ನು ಹೇಳಿದ್ದಾನೆಂಬುದೂ ನನಗೆ ಸ್ಪಷ್ಟವಾಗಿಲ್ಲ. ಶಾಸ್ತ್ರ ವಿಧಿಗಳನ್ನು ಅನುಸರಿಸದೆ ಅದು ಸುಳಾದಿಯಂತೆ ಹರಿದಾಸರ ಹೊಸ ಪ್ರಯೋಗವೇ ಎಂದು ಕಾಣುತ್ತದೆ. ಆದರೆ ಇದಕ್ಕೆ ಸ್ಫೂರ್ತಿಯಾಗಿ ಮಾರ್ಗದರ್ಶಕವಾಗಿ ಮರಾಠೀ ಅಭಂಗಗಳೂ ಓವಿಗಳೂ, ಸಂಸ್ಕೃತದ ಆರ್ಯೆಗಳೂ ದಂಡಿಗಳೂ ಇದ್ದುವು. ಶಿವಶರಣರ ವಚನಗಳಿಂದಲೂ ಕೊಂಚಮಟ್ಟಿಗೆ ಪ್ರಭಾವಿತವಾಗಿದ್ದಿರಬಹುದು.

ಆಭೋಗವೆಂಬ ಪ್ರಕಾರ ಸಂಗೀತ ಕ್ಷೇತ್ರದಲ್ಲಿದೆ. 'ಸಂಗೀತದಾಮೋದರ'ವು ಕವಿಯ ಹೆಸರು ಬಂದಿರುವ ಸಂಗೀತಭಾಗಕ್ಕೆ ಆಭೋಗವೆಂದು ಹೆಸರು ಎನ್ನುತ್ತದೆ ('ಯತ್ರೈವ ಕವಿನಾಮ ಸ್ಯಾತ್ ಸ ಆಭೋಗ ಇತೀರಿತಃ'). ಆಭೋಗವೆಂಬ ಮಾತಿಗೆ ಹಾವಿನ ಹೆಡೆಯು ಹರಡಿಕೊಳ್ಳುವುದು ಎಂದು ಮೂಲಾರ್ಥ; ಅದನ್ನು ಕವಿತೆ, ಭಣಿತ ಎಂಬರ್ಥದಲ್ಲಿ ಬಳಸುತ್ತಾರೆ. 'ಪೂರೈಸುವುದು' (ಪರಿಪೂರ್ಣತೆ) ಎಂಬರ್ಥವನ್ನು ಅಮರಕೋಶಕಾರನು ಕೊಟ್ಟಿದ್ದಾನೆ. ಕವಿಯ ಆಶಯವು ಪ್ರಕಟವಾಗುವ ರೀತಿಯೆಂದು ತಾತ್ಪರ್ಯ. ಇನ್ನು 'ಉಗು' ಎಂಬ ಕನ್ನಡ ಮಾತಿಗೆ ಸಮಯಸ್ಫೂರ್ತಿಯಿಂದ ಹೇಳಿದ್ದು ಎಂಬರ್ಥವಿದೆ (ಒಗು, ಉಕ್ಕು, ಉದಿತ). ಸಮಯಸ್ಫೂರ್ತಿಯಿಂದ ಹೊರಬಂದ ಕವಿತೆ 'ಉಗು ಆಭೋಗ'ವೆಂದಾಗಿದ್ದೀತೆ? ಅಥವಾ ಉಕ್ತ ಎಂಬ ವೈದಿಕ ಮಾತಿಗೆ ಶಾಶ್ವತ ಮೌಲ್ಯವಿರುವ ಮಾತುಗಳನ್ನೊಳಗೊಂಡ ಏಕಕ್ಷಾರ ಛಂದವೆಂಬ ಅರ್ಥವಿದೆ;. ಛಂದಸ್ಸಲ್ಲದ ಛಂದಸ್ಸು ('ಅತಿಸಂಕ್ಷಿಪ್ತ ಚಿರಂತನೋಕ್ತಿಭಿಃ'). ವೈದಿಕ ಉಕ್ಥವು ಉಕ್ತಿಯೂ ಹೌದು, ಗೇಯಪ್ರಕಾರವೂ ಹೌದು; ಆದರಿಂದಲೇ 'ವಚನವೆಂಬ ಮಾತೂ ಸಿದ್ಧವಾಯಿತು. ಶಿವಶರಣರ ವಚನಗಳು ಉಕ್ತಿಗಳು; ಗೇಯಪ್ರಕಾರಗಳಲ್ಲ. ಉಗಾಭೋಗಗಳು ಸ್ವರೂಪದಲ್ಲಿ ವಚನಗಳಂತೆ ತೋರಿದರೂ ಅವು

ಮುಖ್ಯವಾಗಿ ಗೇಯಪ್ರಕಾರಗಳು. ಉಕ್ತಿಯನ್ನು ಪೂರೈಸಲು, ಛಂದಸ್ಸಿನ ಕಟ್ಟುಪಾಡಿಲ್ಲದೆ ರಾಗವಿನ್ನಿರಿಸಿ ಮಾಡಿದ ಸಣ್ಣ ಕವಿತೆ ಉಗಾಭೋಗದ ಲಕ್ಷಣ. ಇಷ್ಟೆಲ್ಲ ಹೇಳಿದರೂ, ಉಗಾಭೋಗವೆಂಬ ಮಾತು ಹೇಗೆ ಮೈದಳೆಯಿತೋ ನಿರ್ಣಯಿಸುವುದು ಸಾಧ್ಯವಾಗಿಲ್ಲ: ಬರಿಯ ಊಹೆಗಷ್ಟೆ.

ಈಗ ಉಳಿದುಬಂದಿರುವ ಉಗಾಭೋಗಗಳ ಕಾಲ ಶ್ರೀಪಾದರಾಜರಿಗಿಂತ ಹಿಂದೆ ಹೋಗುವುದಿಲ್ಲ. ಶ್ರೀಪಾದರಾಜರು ಸುಳಾದಿಗಳಂತೆ ಕೆಲವೇ ಉಗಾಭೋಗಗಳನ್ನು ರಚಿಸಿದ್ದಾರೆ; ವ್ಯಾಸರಾಯಸ್ವಾಮಿಗಳ ಉಗಾಭೋಗಗಳೂ ಬಹುಸಂಖ್ಯೆಯಲ್ಲಿಲ್ಲ. ಪುರಂದರದಾಸರದ್ದೇ ವಿಶೇಷವಾಗಿ ದೊರೆಯುವುವು. ಉಗಾಭೋಗಗಳು ಸಾಹಿತ್ಯದೃಷ್ಟಿಯಿಂದ ಸಣ್ಣ ರಚನೆಗಳು, ಎರಡೇ ಸಾಲುಗಳಿರುವುವೂ ಇವೆ, ಇಪ್ಪತ್ತುಸಾಲುಗಳಿರುವುವೂ ಇವೆ; ಬಹುಮಟ್ಟಿಗೆ ಐದಾರು ಸಾಲುಗಳಷ್ಟೆ. ಇದರಲ್ಲಿ ರಾಗವಿರುತ್ತದೆ. ತಾಳನಿರ್ಬಂಧವಿರುವುದಿಲ್ಲ. ಪ್ರಾಸವೂ ಇರಲೇಬೇಕೆಂದಿಲ್ಲ: ಯತಿಯು ಸಹಜವಾಗಿ ಸ್ವಾಭಾವಿಕವಾಗಿರುವುದನ್ನು ಗಮನಿಸಬಹುದು. ಇನ್ನು ಪ್ರಸ್ತಾಪಕ್ಕೆ ಬರುವ ವಿಚಾರ ಸರಳವಾಗಿರುವುದು; ಅಧ್ಯಾತ್ಮವಾಗಬಹುದು, ಅನುಭವವಾಗಬಹುದು, ತತ್ತ್ವವಾಗಬಹುದು, ಲೋಕನೀತಿಯಾಗಬಹುದು, ಬರಿಯ ಸ್ತೋತ್ರವಾಗಬಹುದು. ಆದರೆ ವಿಚಾರದಲ್ಲಿ ಏಕತಾನತೆ ಇರಬೇಕು. ಇವೆಲ್ಲ ಏಕಾಂಡವಾದ ರಚನೆಗಳು; ಪದಗಳಲ್ಲಿರುವಂತೆ ಪಲ್ಲವಿ, ಅನುಪಲ್ಲವಿಗಳಾಗಲಿ ನುಡಿಗಳಾಗಲಿ ಇರುವುದಿಲ್ಲ; ಸುಳಾದಿಗಳಲ್ಲಿರುವಂತೆ ಖಂಡಗಳಾಗಲಿ ಜೊತೆಯಾಗಲಿ ಇರುವುದಿಲ್ಲ. ಇದಕ್ಕೆ ಬಳಸುವ ರಾಗವೂ ಸರಳವಾಗಿ ಜನಪ್ರಿಯವಾಗಿರುತ್ತದೆ.

ಉಗಾಭೋಗದ ರಚನೆ ಶಿವಶರಣರ ವಚನಗಳ ರಚನೆಯನ್ನು ಬಹುಮಟ್ಟಿಗೆ ಹೋಲುತ್ತದೆ. ನೇರವಾದ ಮಾತು, ಸರಳವಾದ ನಿರೂಪಣೆ, ಪದಜೋಡಣೆಗಳ ಸೊಗಸು, ವಸ್ತುವಿನ ಔನ್ನತ್ಯ, ಗದ್ಯಶೈಲಿ, ಅನಿಬದ್ಧ ಪ್ರಬಂಧ. ಇವುಗಳಲ್ಲಿ ಎರಡೂ ಪ್ರಕಾರಗಳೂ ಸಮವೇ. ಆದರೆ ಉಗಾಭೋಗ ಪ್ರಮುಖವಾಗಿ ಗೇಯಪ್ರಕಾರ; ಅದು ದಿಟವಾಗಿ ಕವಿತೆಯೇ. ಕೆಲವೊಮ್ಮೆ ಸ್ಪಷ್ಟವಾದ ಛಂದಸ್ಸಿರುವುದೂ ಉಂಟು. ದಾಸಕೂಟದಲ್ಲಿ ಯಾವುದಾದರೂ ಪದವನ್ನು ವಿನಿಕೆಗೆ ಎತ್ತಿಕೊಳ್ಳುವ ಮೊದಲು ಒಂದು ಉಗಾಭೋಗವನ್ನು ಹಾಡುವ ವಾಡಿಕೆಯಿದೆ. ಉಗಾಭೋಗವನ್ನು 'ಅನಿಬದ್ಧ ಸಾಕ್ಷರ ರಾಗಾಲಪ್ತಿ'ಯೆಂದು ಕೆಲವರು ನಿರ್ದೇಶಿಸಿರುವುದರಲ್ಲಿ ಔಚಿತ್ಯವಿದೆ. ರಾಗಭಾವವು ತಾಳದ ಗೊಂದಲವಿಲ್ಲದೆ ಪ್ರಕಟವಾಗಲು ಉಗಾಭೋಗದ ಸಾಹಿತ್ಯ ನೆರವಾಗುತ್ತದೆ. ಸುಳಾದಿಯು ಲಯತಾಳ ಪ್ರಧಾನವಾದರೆ, ಉಗಾಭೋಗ ಸ್ವರಪ್ರಧಾನ. ಇದನ್ನು ವಿಲಂಬಕಾಲದಲ್ಲೇ ಹಾಡುವುದು ಹೆಚ್ಚು. ತಾಳದ ನಿರ್ದೇಶನವಿರದಿದ್ದರೂ, ಹಾಡುವವರು ತಮಗೆ ತೋರಿದಂತೆ ಮಾರ್ಗೀ ಅಥವಾ ದೇಶೀತಾಳಗಳನ್ನು ಬಳಸಿಕೊಳ್ಳಲು ಅಡ್ಡಿಯೇನಿಲ್ಲ. ಕೇವಲ ಸರ್ವಲಘು ಹಿತವಾಗಿರುತ್ತದೆ.

ಪುರಂದರದಾಸರನ್ನು 'ಕರ್ನಾಟಕ ಸಂಗೀತದ ಪಿತಾಮಹ' ಎಂದು ಕರೆಯುವುದು ವಾಡಿಕೆ. ಇದನ್ನು ಸಮರ್ಥಿಸುವ ವಿವರಗಳು ಯಾವುವೆಂದು ಇಲ್ಲಿ ಪರಿಶೀಲಿಸಬೇಕಾದ ಅಗತ್ಯವಿದೆ. ಈಗಿನ ಕರ್ನಾಟಕ ಸಂಗೀತ ಸಂಪ್ರದಾಯದಲ್ಲಿ ಪ್ರಸಿದ್ಧರಾದ ತ್ರಿಮೂರ್ತಿಗಳ (ತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರು, ಶ್ಯಾಮಶಾಸ್ತ್ರಿಗಳು) ಜೊತೆಗೆ ಅವರೂ ಒಬ್ಬರು, ಅವರಿಗಿಂತ ಪ್ರಾಚೀನರು ಎಂಬುದಷ್ಟೇ ಕಾರಣವಲ್ಲ. ತ್ಯಾಗರಾಜರೇನೋ ಪುರಂದರದಾಸರನ್ನು ಗೌರವದಿಂದ ಉಲ್ಲೇಖಿಸಿದ್ದಾರೆ; ಆದರೆ

ಉಳಿದ ಇಬ್ಬರು ಅವರನ್ನು ಎಲ್ಲಿಯೂ ಉಲ್ಲೇಖಿಸುವುದಿಲ್ಲ; ತ್ಯಾಗರಾಜರೂ ಪುರಂದರದಾಸರನ್ನು ಉಲ್ಲೇಖಿಸಿರುವುದು ಸಂತರೆಂದು ಅಷ್ಟೆ; ಸಂಗೀತಶಾಸ್ತ್ರಕ್ಕೆ ಅವರ ಕೊಡುಗೆಯನ್ನು ಎಲ್ಲಿಯೂ ಪ್ರಸ್ತಾಪಿಸಿಲ್ಲ. ಈ ವಿಚಾರದ ಮೇಲೆ ಬೆಳಕು ಕಾಣಲು ನಾವು ಬೇರೆಡೆ ಕಣ್ಣಾಡಿಸಬೇಕು.

ಶಾಸ್ತ್ರೀಯ ಸಂಗೀತದಲ್ಲಿ ಶಾಸ್ತ್ರಭಾಗ (ಲಕ್ಷಣ ಸಂಗೀತ) ಮತ್ತು ಪ್ರಯೋಗ ಭಾಗ (ಲಕ್ಷ್ಯ ಸಂಗೀತ)ಎಂಬೆರಡು ವಿಭಾಗಗಳಿರುವುದು ದಿಟ; ಪ್ರಾಚೀನ ಕಾಲದಿಂದಲೂ ಇದು ಇರುವುದೇ. ಆದರೆ ಶಾಸ್ತ್ರಭಾಗ ಪಂಡಿತಪ್ರಿಯವಾದುದು; ಆಲೋಚನಾಮೃತವಾದುದು. ಪ್ರಯೋಗಭಾಗ ಪಾಮರಂಜಕವಾದುದು. ಆಪಾತಮಧುರ ಎಂದು ಬೇರ್ಪಡಿಸುವುದು ಸಲ್ಲದು. ಶಾಸ್ತ್ರೀಯ ಸಂಗೀತದಿಂದ ಪಂಡಿತ ರಂಜನೆಯೂ ಆಗಬೇಕು, ಪಾಮರ ಪ್ರೀತಿಯೂ ಆಗಬೇಕು. ಸಂಗೀತ ಪ್ರಮುಖವಾಗಿ ಕಲೆಯಾದುದರಿಂದ ಸುಖಾನುಭವವೇ ಒರೆಗಲ್ಲು. ಆದರೆ ಶಾಸ್ತ್ರೀಯವೆಂಬ ವಿಶೇಷಣವಿರುವಾಗ ಹೃದಯಸಂಸ್ಕಾರವು ಅಗತ್ಯವಾಗಿ ಆಗಬೇಕು; ಸುಖದೊಂದಿಗೆ ಹಿತವೂ ಉದ್ದೇಶವಾಗುತ್ತದೆ. ಆದರೆ ಸುಖದ ಭಾಗ ಸಂಗೀತ, ಹಿತದ ಭಾಗ ಸಾಹಿತ್ಯ ಎಂದು ಬೇರೆಬೇರೆಯಾಗಿ ಕಾಣಿಸಲಾರೆವು. ಸುಖ-ಹಿತಗಳೆರಡೂ ಒಟ್ಟಿಗೆ ಆಗಬೇಕಾಗಿರುವುದು ಶಾಸ್ತ್ರೀಯ ಸಂಗೀತದ ಚೌಕಟ್ಟು. ನಾನ್ನೂರು-ಐನೂರು ವರ್ಷಗಳ ಹಿಂದೆ ನಮ್ಮ ದೇಶದ ಸಂಗೀತದಲ್ಲಿ ಯಾವ ಶಾಸ್ತ್ರ ಪರಂಪರೆಗಳಿದ್ದವೋ, ಪ್ರಯೋಗದಲ್ಲಿ ಅವುಗಳ ಅನ್ವಯ ಎಷ್ಟರಮಟ್ಟಿಗೆ ಆಗಿದ್ದಿತೋ ಹೇಳುವುದು ಕಷ್ಟ. ಆದರೆ ಆ ಕಾಲದ ಗ್ರಂಥಗಳನ್ನು ನೋಡಿದರೆ ಶಾಸ್ತ್ರದ ಕಟ್ಟು ಪಾಡು ತೀರ ಬಿಗಿಯಾಗಿದ್ದಂತೆ ತೋರುತ್ತದೆ. ಅಲ್ಲಿ ಕಾಣುವ ಪ್ರಬಂಧಗಳು, ರಾಗಗಳು, ತಾಳಗಳು ಸಂಖ್ಯೆಯಲ್ಲೂ ಬಹುಳವಾದವು, ಸ್ವರೂಪದಲ್ಲೂ ಜಟಿಲವಾದುವು. ಪ್ರಯೋಗಕ್ಕೆ ಅಷ್ಟಾಗಿ ಅನುಕೂಲವಾಗಿದ್ದಂತೆ ತೋರುವುದಿಲ್ಲ.

ವಿಜಯನಗರದಲ್ಲಿ ದಕ್ಷಿಣದೇಶದ ಸಂಸ್ಕೃತಿ ಪ್ರೌಢವಾಗಿ, ವ್ಯಾಪಕವಾದ ಒಂದು ನೆಲೆಯಲ್ಲಿ ಮೂಡಿಕೊಂಡಿತೆಂದು ಮೊದಲೇ ಹೇಳಿದೆನಷ್ಟೆ. ಆಗಲೇ ಶಾಸ್ತ್ರಕ್ಕೂ ಅದರ ಅನ್ವಯಕ್ಕೂ ಅಂತರ ಕಡಮೆಯಾದುದು . ಈ ಮಾತು ಸಂಗೀತಕ್ಕೂ ಅನ್ವಯಿಸುತ್ತದೆ. ಸಾಮ್ರಾಜ್ಯ ಮೈದಳೆಯುವಾಗಲೇ ವಿದ್ಯಾರಣ್ಯರು (೧೩೨೦-೧೩೮೦) 'ಸಂಗೀತಸಾರ'ವೆಂಬ ಶಾಸ್ತ್ರಗ್ರಂಥವನ್ನು ಬರೆದು "ಪ್ರಚುರ ಪ್ರಯೋಗ"ವಿರುವ ರಾಗಗಳನ್ನು ನಿರ್ದೇಶಿಸಿದರೆಂದು ಗೋವಿಂದ ದೀಕ್ಷಿತರ 'ಸಂಗೀತಸುಧೆ' ಯಿಂದ ತಿಳಿದುಬರುತ್ತದೆ. ಗೋವಿಂದ ದೀಕ್ಷಿತರು ವೇಂಕಟಮಖಿಯ ತಂದೆ. ವೇಂಕಟಮಖಿಯ ಕಾಲ ೧೬೬೦ ಸುಮಾರು. ಆ ವೇಳೆಗಾಗಲೆ ದಕ್ಷಿಣಾದಿ ಸಂಗೀತದ ದಾರಿ ಸ್ಪಷ್ಟವಾಗಿದ್ದಿತು.

ವಿದ್ಯಾರಣ್ಯರನ್ನು ಗೋವಿಂದದೀಕ್ಷಿತರು ಉಲ್ಲೇಖಿಸುವಾಗ 'ಕರ್ನಾಟಕ ಸಿಂಹಾಸನ ಭಾಗ್ಯ'ವೆಂದು ಬಣ್ಣಿಸಿದ್ದಾರೆ. ವಿದ್ಯಾರಣ್ಯರು ಶಾಸ್ತ್ರಜ್ಞರಾದರೂ ಪ್ರಯೋಗವನ್ನು ಕೈಬಿಡಲಿಲ್ಲ; ಪ್ರಯೋಗಕ್ಕೆ ಅನುಕೂಲವಾಗುವಂತೆ ಶಾಸ್ತ್ರವಿರಬೇಕೆಂದು ಬಗೆದವರು ಅವರು. ಲಕ್ಷ್ಯ-ಲಕ್ಷಣ ಸಂಗೀತಗಳ ಸಮನ್ವಯವನ್ನು ಸಾಧಿಸಲು ಯತ್ನಿಸಿದರು. ಅವರಿಂದ ಮೊದಲಾದ ಈ ಸಂಗೀತ ಸಂಪ್ರದಾಯವು ವಿಜಯನಗರದಲ್ಲೇ ಬೆಳೆದು, ಬಲಿತು, 'ಕನ್ನಡ ರಾಜ್ಯ ರಮಾರಮಣ'ನಾದ ಕೃಷ್ಣ ದೇವರಾಯ ಮಹಾರಾಯನ ಕಾಲದಲ್ಲಿ ಮೈದುಂಬಿ ನಿಂತಿತು. ಈ ಸಂಪ್ರದಾಯ ಆಗ ಪ್ರೌಢವಾಗಲು ನೆರವಾದವರು

ಅವನ ಗುರುಗಳಾದ ವ್ಯಾಸರಾಯ ಸ್ವಾಮಿಗಳು, ಅವರ ಶಿಷ್ಯರಾದ ಪುರಂದರದಾಸರು. ವಿಜಯನಗರ ಸಾಮ್ರಾಜ್ಯ ಕರ್ನಾಟಕ ರಾಜ್ಯವಾದುದರಿಂದ ಇದು ಕರ್ನಾಟಕ ಸಂಗೀತ ಸಂಪ್ರದಾಯವೆನಿಸಿಕೊಂಡಿತು.

ಕರ್ನಾಟಕವೆನ್ನುವ ಮಾತು ಪ್ರದೇಶವನ್ನೂ ಸೂಚಿಸುತ್ತದೆ. ಅದಕ್ಕಿಂತ ಹೆಚ್ಚಾಗಿ ಪ್ರಾದೇಶಿಕ ಸಂಸ್ಕೃತಿಯನ್ನೂ ಸೂಚಿಸುತ್ತದೆ. ವಿಜಯನಗರ ಸಾಮ್ರಾಜ್ಯ ಮರೆಯಾದಾಗ ತಂಜಾವೂರು ಈ ಸಂಗೀತದ ತೌರೂರೆಂದು ಮೆರೆಯಿತಷ್ಟೆ. ಅಲ್ಲಿ ಲಕ್ಷಣಗ್ರಂಥಗಳಿಗೆ ಸಂಸ್ಕೃತವನ್ನು ಬಳಸಿದರೂ, ಲಕ್ಷ್ಯ ಸಾಮಗ್ರಿಯೆಲ್ಲ ತೆಲುಗು, ತಮಿಳು, ಮರಾಠಿ ಭಾಷೆಗಳಲ್ಲಿ; ಕನ್ನಡದಲ್ಲಲ್ಲ. ಕರ್ನಾಟಕ ಸಂಗೀತದಲ್ಲಿ ಕನ್ನಡದ ಪಾತ್ರವೇ ಹೀಗೆ ಇರಲಿಲ್ಲವೆಂದರೆ ಯಾರಿಗಾದರೂ ಸೋಜಿಗವಾದೀತು. ಆದರೆ ಈ ಸಂಗೀತ ಸಂಪ್ರದಾಯ ಬಲಿಯುವಾಗ, ಬೆಳೆಯುವಾಗ ಅದಕ್ಕೆ ಊರುಗೋಲಾಗಿದ್ದುದು ಕನ್ನಡವೇ, ವ್ಯಾಸರಾಯಸ್ವಾಮಿಗಳ ಮತ್ತು ಪುರಂದರದಾಸರ ಕನ್ನಡ ರಚನೆಗಳೇ. ದೇಶಭಾಷೆಯಲ್ಲಿ ಲಕ್ಷ್ಯಸಂಗೀತವನ್ನು ಕಲ್ಪನೆ ಅವರದ್ದೇ.

ತಂಜಾವೂರಿನ ದೊರೆ ತುಳಜಾಜಿ (೧೭೨೮-೧೭೩೬) ಪುರಂದರದಾಸರನ್ನು ಕುರಿತು ಮಾಡಿರುವ ಪ್ರಸ್ತಾಪ ಆಗಲೇ ಪರಿಶೀಲನಗೆ ಬಂದಿತು. ತನ್ನ 'ಸಂಗೀತ ಸಾರಾಮೃತ'ದಲ್ಲಿ ಅವನು ವ್ಯಾಸರಾಯಸ್ವಾಮಿಗಳನ್ನು ತನ್ನ ಪೂರ್ವಾಚಾರ್ಯರೆಂದು ಸ್ಮರಿಸಿ "ಪ್ರಸಿದ್ಧ ಸಂಗೀತವಿದ್ಯಾ ಸಂಪ್ರದಾಯ ಪ್ರವರ್ತಕ'ರೆಂದು ಹೇಳಿದ್ದಾನೆ-

'ಪ್ರಸಿದ್ಧ ಸಂಗೀತ ವಿದ್ಯಾಸಂಪ್ರದಾಯ ಪ್ರವರ್ತಕಃ।
ವ್ಯಾಸಪ್ಪಾಚಾರ್ಯ ಏವಾಸ್ಮತ್ ಪೂರ್ವಾಚಾರ್ಯೇತಿ ವಿಶ್ರುತಾಃ॥'

ಇಲ್ಲಿ 'ಸಂಗೀತ ವಿದ್ಯಾ ಸಂಪ್ರದಾಯ'ವೆಂದರೇನು? ವಿದ್ಯೆಯೆನ್ನುವ ಮಾತಿನಲ್ಲಿ ಶಾಸ್ತ್ರ. ಪ್ರಯೋಗಗಳೆರಡೂ ಸೇರುತ್ತವೆ; ಲಕ್ಷ್ಯಲಕ್ಷಣಗಳೆರಡೂ ಕೂಡಿಕೊಳ್ಳುತ್ತವೆ. ಇದೊಂದು ಸಂಪ್ರದಾಯವನ್ನು ವ್ಯಾಸರಾಯಸ್ವಾಮಿಗಳು (ಸ್ವಾಮಿಗಳೇ, 'ಏವ') ಆರಂಭಿಸಿದರೆಂದು ಅರಸನ ಒಕ್ಕಣೆ. ವ್ಯಾಸರಾಯಸ್ವಾಮಿಗಳ ಕಾಲವಾಗಿ ಸುಮಾರು ಒಂದು ನೂರು ಎಪ್ಪತ್ತು ವರ್ಷಗಳನಂತರ ತೋರಿಕೊಂಡವನು ಈ ಅರಸ. ಈ ಅವಧಿಯಲ್ಲಿ ಸಂಗೀತ ವಿದ್ಯಾ ಸಂಪ್ರದಾಯ ಬೆಳೆದಿದ್ದಿತು, ಹರಡಿಕೊಂಡಿದ್ದಿತು. ಜನಪ್ರಿಯವಾಗಿದ್ದಿತು.

ವ್ಯಾಸರಾಯಸ್ವಾಮಿಗಳು ಸಂಗೀತಶಾಸ್ತ್ರವನ್ನು ಕುರಿತಂತೆ ಗ್ರಂಥವನ್ನೇನು ಬರೆದಂತೆ ಉಲ್ಲೇಖವಿಲ್ಲ. ಆದರೆ ಶಾಸ್ತ್ರವನ್ನವಲಂಬಿಸಿ ಜನಪ್ರಿಯವಾಗುವಂಥ ಪದಗಳನ್ನೂ, ಸುಳಾದಿಗಳನ್ನೂ, ಉಗಾಭೋಗಗಳನ್ನೂ ಕನ್ನಡದಲ್ಲಿ ರಚಿಸಿದರು. ಅವರ 'ಪದ'ಗಳೇ ಮುಂದೆ 'ಕೃತಿ'ಗಳಿಗೆ ದಾರಿ ಮಾಡಿಕೊಟ್ಟುವು. 'ಕೃತಿ' ಎಂಬ ಮಾತನ್ನು ಅವರ ರಚನೆಗಳಲ್ಲಿ ಕಾಣದಿದ್ದರೂ, ಅವರ ಶಿಷ್ಯರಾದ ಪುರಂದರದಾಸರ ಎರಡು ಪದಗಳಲ್ಲಿ ಕಾಣುತ್ತೇವೆ ('ಸತತ ಗಣನಾಥ' ಎನ್ನುವ ಪದದಲ್ಲಿ "ಇವರಲಿ ನಿಂತು ಕೃತಿಯ ನಡೆಸುವನು' ಮತ್ತು 'ವಾಸುದೇವನ ನಾಮಾವಳಿಯ ಕ್ಲುಪ್ತಿಯಲಿ' ಎನ್ನುವ ಪದದಲ್ಲಿ "ಇಂತು ನಾಲ್ಕುಲಕ್ಷ ಎಪ್ಪತ್ತೈದುಸಾವಿರ ಕೃತಿಯ"). ಹಿಂದೆ ಶಾಸ್ತ್ರ ಗ್ರಂಥಗಳಲ್ಲಿ ಉದ್ಗ್ರಹ, ಮೇಳಾಪಕ, ಧ್ರುವ, ಆಭೋಗ ಎಂಬ ನಾಲ್ಕು ಧಾತುಗಳಿದ್ದುದನ್ನು ಈಗ ಪದ ಅಥವಾ 'ಕೃತಿ'ಯಲ್ಲಿ

ಕ್ರಮವಾಗಿ ಪಲ್ಲವಿ, ಅನು ಪಲ್ಲವಿ, ಚರಣ ಮತ್ತು ಮುದ್ರಾಚರಣ ಎಂದು ಕಾಣಿಸತೊಡಗಿದವರು ವ್ಯಾಸರಾಯ ಸ್ವಾಮಿಗಳೇ. ಮತ್ತು ಸ್ವಾಮಿಗಳ ರಚನೆಗಳನ್ನು ನೋಡಿದರೆ ಬಹುಮಟ್ಟಿಗೆ ಅವರು ದೇಶ್ಯರಾಗಗಳನ್ನು ಬಳಸಿದ್ದಾರೆ. ರಾಗದ ನಿರ್ವಹಣೆಯಲ್ಲಿ ಸರಳವಾದ ದಾರಿಯನ್ನು ಹಿಡಿದಿದ್ದಾರೆ. ಯತಿ-ಪ್ರಾಸ ಮತ್ತು ಧಾತು-ಮಾತುಗಳ ಮೇಳನದ ಕಡೆ ಗಮನಕೊಟ್ಟಿದ್ದಾರೆ ಎನ್ನುವುದು ತಿಳಿಯುತ್ತದೆ. ಸಾಹಿತ್ಯ ಸಂಗೀತಗಳಿಗೆ ಸಮ ಪ್ರಾಧಾನ್ಯವನ್ನು ಕೊಟ್ಟವರಲ್ಲಿ ಅವರೇ ಮೊದಲಿಗರು. ಶೃಂಗಾರ-ಅಧ್ಯಾತ್ಮ, ರಂಜನೆ-ಹಿತ, ಗೀತ-ನರ್ತನ ಈ ಜೋಡಿಗಳನ್ನು ಕೂಡಿಸಿದ್ದು ಅವರ ವೈಶಿಷ್ಟ್ಯ.

ಹೀಗೆ 'ಕರ್ನಾಟಕ ಸಂಗೀತ ಪಿತಾಮಹ' ಎನ್ನುವ ಬಿರುದು ದಿಟವಾಗಿ ವ್ಯಾಸರಾಯಸ್ವಾಮಿಗಳಿಗೇ ಸಲ್ಲಬೇಕು. ಇವರನ್ನು "ಸಂಗೀತ ವಿದ್ಯಾ ಸಂಪ್ರದಾಯ ಪ್ರವರ್ತಕ"ರೆಂದು ಕರೆದ ತುಳಜಾಜಿ ಪುರಂದರದಾಸರನ್ನು "ಅಭಿಯುಕ್ತ"ರೆಂದೂ "ಪುರಾತನ"ರೆಂದೂ ಕರೆದು, "ಸಾಲಗಸೂಡಸ್ಥಗೀತಾನಾಂ ಲಕ್ಷ್ಯ ಕೀರ್ತನಂ" ಎಂದು ಅವರ ಕೊಡುಗೆಯನ್ನು ನಿರ್ದೇಶಿಸಿದ್ದಾನೆ. ಪುರಂದರದಾಸರು ಈ ಸಂಗೀತ ಸಂಪ್ರದಾಯದ ಪ್ರವರ್ತಕರಲ್ಲದಿದ್ದರೂ, ಪ್ರವರ್ತಕರ ಪ್ರಿಯಶಿಷ್ಯರಾಗಿದ್ದವರು, ಪ್ರವರ್ತನೆಯಲ್ಲಿ ಪಾಲ್ಗೊಂಡವರು. ತುಳಜಾಜಿಯೇ ಮಾಡಿರುವ ಪ್ರಸ್ತಾಪ, ಪುರಂದರದಾಸರ ಕೃತಿಗಳಲ್ಲಿ 'ಲಕ್ಷ್ಯಲಕ್ಷಣಸಂಗತಿ' ಇಲ್ಲದಿರುವುದು, ಪುರಂದರದಾಸರ ಕೊಡುಗೆಯನ್ನು ಸ್ಪಷ್ಟಪಡಿಸುತ್ತದೆ. ಈ ಮೊದಲೇ ಹೇಳಿದಂತೆ, ಶಾಸ್ತ್ರದ ಚೌಕಟ್ಟನ್ನು ಮೀರಿ ಪ್ರಯೋಗವನ್ನು ಎತ್ತಿ ಹಿಡಿದರೆಂಬುದು. ಆದರೆ ಪುರಂದರದಾಸರ ರಚನೆಗಳ ಜನಪ್ರೀತಿ ತುಳಜಾಜಿಯ ಕಾಲದಲ್ಲೂ ಪ್ರಸಿದ್ಧವಾಗಿದ್ದಿತು; ಎಂದ ಮೇಲೆ ಶಾಸ್ತ್ರ ನಿಷ್ಠರು ಅವನ್ನು ಗರ್ವದಿಂದ, ಅಸಡ್ಡೆಯಿಂದ ಕಾಣುವುದು ಹೇಗೆ? ತಮ್ಮ ಶಾಸ್ತ್ರದ ಚೌಕಟ್ಟನ್ನೇ ಅವರು ಮಾರ್ಪಡಿಸಿಕೊಳ್ಳಬೇಕಾಯಿತು.

ಪುರಂದರದಾಸರ ಸಾಹಿತ್ಯವನ್ನು ನೋಡಿದರೆ ಅವರಿಗೆ ಜಾನಪದ ಪ್ರಕಾರಗಳ ಮೇಲಿದ್ದ ಒಲವು ಎದ್ದು ಕಾಣುತ್ತದೆ. ಸಂಗೀತಕ್ಕೆ ಇಂಥ ಸಾಮಗ್ರಿಗಳೇ ಹೆಚ್ಚು ಸಮರ್ಪಕವೆಂದು ಬಗೆದು ಗೀತ, ಠಾಯಿ, ಸುಳಾದಿ, ಉಗಾಭೋಗ ಮೊದಲಾದ ರಚನೆಗಳನ್ನು ಮಾಡಿದರು. 'ಸಂಗೀತ ರತ್ನಾಕರ'ವೇ ಮೊದಲಾದ ಶಾಸ್ತ್ರದ ಗ್ರಂಥಗಳಲ್ಲಿ ಪಟ್ಟಿ ಮಾಡಿರುವ ಏಳೆಯೇ ಮೊದಲಾದ ಎಪ್ಪತ್ತೈದು ಬಗೆಯ ಪ್ರಬಂಧಗಳು ಹೇಳ ಹೆಸರಿಲ್ಲದೆ ಮರೆಯಾದುವು. ಪ್ರಯೋಗಕ್ಕೆ ಬರಲಾರದ, ರಂಜಕವಾಗದ ಪ್ರಬಂಧಗಳನ್ನು ಶಾಸ್ತ್ರನಿಷ್ಠರು ಬಣ್ಣಿಸಿದರೆ ಪ್ರಯೋಜನವೇನು? "ಹೋಗದೂರಿನ ದಾರಿ ಕೇಳಿ ಮಾಡುವುದೇನು?", "ತನಗಿಲ್ಲದಾ ವಸ್ತು ಎಲ್ಲಿದ್ದರೇನು?" ಎಂದು ಪುರಂದರ ದಾಸರ ಆಗ್ರಹ. ಸಂಸ್ಕೃತ ಛಂದೋಬಂಧಗಳಿಂದ ತುಂಬಿ ತುಳುಕುವ, ಬಿಗಿಯಾದ ಪ್ರಬಂಧಗಳು ದೇಶಭಾಷೆಯ ಜಾಯಮಾನಕ್ಕೆ ಒಗ್ಗಲಾರವು ಎಂಬುದನ್ನು ಮೊಟ್ಟ ಮೊದಲು ಕಂಡುಕೊಂಡವರು ವ್ಯಾಸರಾಯಸ್ವಾಮಿಗಳು: ಅಥವಾ ಅವರ ಗುರುಗಳಾದ ಶ್ರೀಪಾದರಾಜರು. ಇಂಥ ಪ್ರಬಂಧಗಳ ಅಗತ್ಯ ಗಾಯಕರಿಗೆ ಒದಗದಂತೆ ದೇಶ ಭಾಷೆಯಲ್ಲೇ ಸರಳವಾದ ಗೀತಗಳನ್ನೂ ಪದಗಳನ್ನೂ ಬಹು ಸಂಖ್ಯೆಯಲ್ಲಿ, ವಿಷಯ ವೈವಿಧ್ಯದಿಂದ, ಭಾವದ ಬಂಧುರತೆಯಿಂದ ರಚಿಸಿದವರು ಪುರಂದರದಾಸರು.

ಕೃತಿ ರಚನೆಯಲ್ಲಿ ಪುರಂದರದಾಸರು ಮುಂದಿನವರಿಗೆ ಮಾರ್ಗದರ್ಶಿಯಾದರು. ತಾಳ್ಳಪಾಕ ಕವಿಗಳ ಶೃಂಗಾರ ಮತ್ತು ಅಧ್ಯಾತ್ಮ ಸಂಕೀರ್ತನೆಗಳು, ಕ್ಷೇತ್ರಯ್ಯನ ಭಾವಾಭಿನಯ ಪದಗಳು, ಸಭಾಪತಯ್ಯನ ಪದಗಳು, ಗಿರಿರಾಜ ಕವಿಯ ಯಕ್ಷಗಾನ ಪ್ರಬಂಧಗಳು, ಪೆದ್ದದಾಸರಿಯ

ವರಾಹನರಸಿಂಹ ಪದಗಳು, ಸೋಮುಕವಿಯ ಪದಗಳು, ವಾಸುದೇವ ಕವಿಯ ತಮಿಳು ಭಾವಪದಗಳು, ಪಂಚನದ ರಾಮಭಾರತಿಯ ಆಶಿರಿಯ ವಿರುತ್ತಗಳು, ಪಟ್ಟಾಭಿರಾಮಯ್ಯನ ಶೃಂಗಾರಪದಗಳು, ಚೌಕಂ ವೀರಭದ್ರಯ್ಯನ ರಾಗಮಾಲಿಕೆ ತಿಲ್ಲಾನ ಕೀರ್ತನೆಗಳು ಇವೆಲ್ಲ ಸಂಗೀತ ತ್ರಿಮೂರ್ತಿಗಳ ಕಾಲಕ್ಕೆ ಮುಂಚಿನ ಲಕ್ಷ್ಯಸಂಗೀತ ಪ್ರಕಾರಗಳು. ಇವುಗಳಲ್ಲಿ ವ್ಯಾಸರಾಯಸ್ವಾಮಿಗಳ ಮತ್ತು ಪುರಂದರದಾಸರ ರಚನೆಗಳ ಪ್ರಭಾವವನ್ನು ಗುರುತಿಸಬಹುದು.

ಪುರಂದರದಾಸರು ಕರ್ನಾಟಕ ಸಂಗೀತವು ಜನಪ್ರಿಯವಾಗಲು ಕಾರಣರಾದರೆಂದರೆ ತಪ್ಪಲ್ಲ. ಸಂಗೀತವಿನಿಕೆಗೆ, ಸಂಕೀರ್ತನಕ್ಕೆ, ಭಜನೆಗೆ ತಕ್ಕ ಸಾಹಿತ್ಯವನ್ನು ಸಿದ್ಧಪಡಿಸಿದುದಷ್ಟೇ ಅಲ್ಲದೆ, ಶಾಸ್ತ್ರೀಯ ಸಂಗೀತಕ್ಕೆ ಹೊಸದೊಂದು ದಾರಿಯನ್ನು ತೋರಿಕೊಟ್ಟರು. ಈ ದಾರಿಯಲ್ಲಿ ಕಟ್ಟುಪಾಡು ಅಷ್ಟಿಷ್ಟು ಸಡಿಲವಾಗಿ ರಂಜಕ, ಹಿತಗಳೆಂಬ ಗುಣಗಳು ಎದ್ದುನಿಂತವು

ಹರಿದಾಸರ ರಚನೆಗಳಲ್ಲಿ ಸಾಹಿತ್ಯವು ಮುಖ್ಯವಾದ ಭಾಗವೆಂಬುದನ್ನು ಮರೆಯಬಾರದು. ಪುರಂದರದಾಸರ ರಚನೆಗಳಲ್ಲೇನೋ ಸಂಗೀತವೂ ತಕ್ಕಮಟ್ಟಿಗೆ ಪ್ರಧಾನವೇ ಆಗುತ್ತದೆ. ಅವರ ಸಂಗೀತ ಪ್ರಧಾನವಾದ ಪದಗಳೆಲ್ಲವೂ ದೊರೆತಿಲ್ಲದಿರುವುದು ನಮ್ಮ ದುರ್ದೈವ. ದಾಸಕೂಟದವರಿಗೆ ಶಾಸ್ತ್ರೀಯ ಸಂಗೀತದ ಪರಿಶ್ರಮ ಅಷ್ಟಾಗಿ ಇರದಾಗಿ, ಇವನ್ನು ಅವರು ಉಳಿಸಿಕೊಳ್ಳಲಿಲ್ಲ . ಅವರ ಸುಳಾದಿಗಳೇನೋ ಗೀತ ಪ್ರಧಾನವಾದ ರಚನೆಗಳೇ. ಅದನ್ನು ಮೊದಲೇ ವಿಸ್ತಾರವಾಗಿ ಚರ್ಚಿಸಿದ್ದೇನೆ. ಸುಳಾದಿಯೆಂಬ ಪ್ರಕಾರವು ವ್ಯಾಸರಾಯಸ್ವಾಮಿಗಳ ಕಲ್ಪನೆಯೇ ಇದ್ದಿರಬೇಕೆಂದೂ, ಪುರಂದರದಾಸರು ಅದಕ್ಕೆ ಮೂರ್ತರೂಪವನ್ನು ದೊರಕಿಸಿದರೆಂದೂ ಸೂಚಿಸಿದ್ದೇನೆ. ಸುಳಾದಿಗಳಿಂದ ಖಂಡಗಳನ್ನು ಎತ್ತಿಕೊಂಡು, ತಾಳದ ಬಿಗಿಯನ್ನು ಸಡಿಲಿಸಿ ಉಗಾಭೋಗಗಳೆಂದು ಮುಂದಿನವರು ಬಳಸಿರುವುದು ಸಾಧ್ಯ. ವೇಂಕಟಮಖಿಯ ಕಾಲಕ್ಕೆ ರೂಢಿಯಲ್ಲಿ ಸುಳಾದಿಗಳೇ ಗೀತೆಗಳೆಂಬ ಕಲ್ಪನೆಯೂ ಇದ್ದಿತು ('ರೂಢ್ಯಾ ಸಾಲಗಸೂಡಾಖ್ಯಗೀತಾಭೇದೈಕವಾಚಕಃ'). ಪುರಂದರದಾಸರು ಅಭ್ಯಾಸಗಾನಕ್ಕೆಂದು ರಚಿಸಿದ ನಾಲ್ಕು ಗೀತಗಳು ('ಲಂಬೋದರ', 'ಕುಂದಗೌರ', 'ಕೆರೆಯ ನೀರನು' ಮತ್ತು 'ಪದುಮನಾಭ') ಒಂದೇ ರಾಗದಲ್ಲಿದ್ದು (ಮಲಹರಿ), ಬೇರೆ ಬೇರೆ ತಾಳಗಳಲ್ಲಿ (ಮೊದಲೆರಡು ರೂಪಕ, ಇನ್ನೆರಡು ತ್ರಿವಿಡೆ) ಇರುವುದನ್ನು ಗಮನಿಸಬೇಕು. ಮೊದಲಿಗೆ ಒಂದೇ ಸುಳಾದಿಯ ಬೇರೆ ಬೇರೆ ನುಡಿಗಳಾಗಿದ್ದುವೋ ಎಂಬ ಸಂಶಯ ಬರುತ್ತದೆ.

ಸುಳಾದಿಯು ಬರುಬರುತ್ತ ಬಳಕೆಯಿಂದ ಜಾರಿದಾಗ, ಸ್ವಾರಸ್ಯವಾದ ನುಡಿಗಳು ಮಟ್ಟಿಗೆ ಸ್ವತಂತ್ರವಾಗಿ ಬಳಕೆಯಲ್ಲೂ ಉಳಿದುಕೊಂಡುವು. ರಾಗಾಲಪ್ತಿಯ ಗುಣವನ್ನು ಮಾತ್ರ ಇರಿಸಿಕೊಂಡು ತಾಳದ ಕಟ್ಟುಪಾಡು ಕಳಚಿಹೋಗಿ ಉಗಾಭೋಗಗಳೆನಿಸಿದಾಗ ದಾಸಕೂಟದಲ್ಲಿ ಜನಪ್ರಿಯವಾದವು. ಸುಳಾದಿಗಳನ್ನು ಪ್ರೌಢಗಾಯಕರೇ ನಿರ್ವಹಿಸಬಲ್ಲರು; ಆದರೆ ಉಗಾಭೋಗಗಳನ್ನು ಯಾವ ಹರಿದಾಸರಾದರೂ ಸ್ವಲ್ಪ ಸಂಗೀತಜ್ಞಾನವಿದ್ದರೆ ಹಾಡಬಹುದು. ಶ್ರೀವೈಷ್ಣವ ಸಂಪ್ರದಾಯದ ತಮಿಳು ಪ್ರಬಂಧಗಳನ್ನು ಹಾಡುವ ಮೊದಲು ತನಿಯನ್‌ಗಳನ್ನು ಹಾಡುವ ಪದ್ಧತಿಯಿರುವಂತೆ ಹರಿದಾಸರಲ್ಲೂ ಪದವನ್ನು ಹಾಡುವ ಮೊದಲು ಒಂದು ಉಗಾಭೋಗವನ್ನು ಹಾಡುವ ವಾಡಿಕೆಯಿದ್ದಿತು. ದಾಸರ ಪದಗಳಲ್ಲಿ ರಾಗ, ತಾಳಗಳ ನಿರ್ದೇಶನವಿದ್ದರೂ, ಅವನ್ನು ವಿಸ್ತಾರವಾಗಿ ಕಲಾಪ್ರಕಾರವಾಗಿ ಸಭೆಯಲ್ಲಿ ಹಾಡಬೇಕೆಂಬ ಹಟ ಸಲ್ಲದು, ಸಂಕೀರ್ತನ ಪದ್ಧತಿಯಲ್ಲಿ ಹರಿದಾಸರು ಹಾಡಲೆಂದೇ ಅವು ಸಿದ್ಧವಾದುದು.

ಆದರೆ ಈ ಹಾಡುಗಳಲ್ಲಿ ಅವರಿಗೆ ಸಂಗೀತ ಕಲೆಯಲ್ಲಿದ್ದ ಪ್ರೇಮ, ಪ್ರೌಢಿಮೆ, ಪರಿಶ್ರಮ, ಪ್ರಯೋಗಶೀಲತೆಗಳು ಕಾಣುತ್ತವೆ. ಅವರ ದೃಷ್ಟಿಯಲ್ಲಿ ಭಗವಂತ ಗಾನಲೋಲ; ತುಂಬುರು ನಾರದರ ಗಾನವನ್ನು ಕೇಳುವ ಹರಿ ಮೆಚ್ಚಬೇಕಾದರೆ ನಮ್ಮ ಭಕ್ತಿಯೂ ರಾಗಬದ್ಧವಾಗಬೇಕಾದುದು ಸಹಜವೇ. ಸಾಹಿತ್ಯಭಾಗದ ರಸ ಪೋಷಣೆಗಾಗಿ ಆಯ್ದುಕೊಂಡಿರುವ ರಾಗ, ರಾಗಪೋಷಣೆಗಾಗಿ ಬಳಸಿರುವ ಪದಪುಂಜ, ಇವನ್ನು ಒಪ್ಪಮಾಡಲು ಇರಿಸಿದಾಗ ತಾಳಬಂಧ ಇವು ಸ್ವಾರಸ್ಯವಾಗಿವೆ. ಹಲವೆಡೆ ಸಂಗೀತವಾದ್ಯಗಳನ್ನು ಹೆಸರಿಸಿದ್ದಾರೆ; ಹಲವಾರು ರಾಗಗಳನ್ನು ಹೇಳಿದ್ದಾರೆ; ನಾಟ್ಯಕ್ರಿಯೆ, ತಾಳಾಂಗಗಳನ್ನು ತಿಳಿಸಿದ್ದಾರೆ. ಆದರೆ ಭಗವದ್ಭಕ್ತಿಯ ಚೌಕಟ್ಟಿನಲ್ಲಿ ಸಂಗೀತ ಮೂಡಿಬಂದರೇ ಅದರ ಸಾರ್ಥಕ್ಯ. ಸಂಗೀತದ ಪರಿಕರಗಳನ್ನು ತಿಳಿಸುವ ಒಂದು ಕೃತಿಯಲ್ಲಿ (ಮುಖಾರಿ ರಾಗ) ಅವರು ಕಾಣಿಸಿರುವ ಅಗತ್ಯಗಳ ಪಟ್ಟಿಯನ್ನು ನೋಡಿ

> 'ತಾಳಬೇಕು; ತಕ್ಕ ಮೇಳಬೇಕು; ಗಾನವನ್ನು ಕೇಳಬೇಕೆಂಬುವರಿಗೆ
> ಶಾಂತವೇಳೆ ಬೇಕು; ಯತಿಪ್ರಾಸವಿರಬೇಕು; ಗತಿಗೆ ನಿಲ್ಲಿಸಬೇಕು;
> ತಿಳಿದು ಪೇಳಲಿಬೇಕು; ಕಳವಳ ಬಿಡಬೇಕು; ಕಳೆಗಳ ಶುದ್ಧಿಮುಖ
> ವಿರಬೇಕು; ಅರಿತವರಿರಬೇಕು; ಹರುಷ ಹೆಚ್ಚಲಿಬೇಕು'

ಈ ಅಗತ್ಯಗಳಿಗೆ ಕಿರೀಟ ತೊಡಿಸಿದಂತೆ ಭಕ್ತಿಯಿರಬೇಕು. ಇಲ್ಲವಾದರೆ ಅದು ಬರಿಯ ಡಂಭಕದ ಕೂಗಾಟ. 'ತಾಳಮೇಳಗಳಿದ್ದು ಪ್ರೇಮವಿಲ್ಲದ ಗಾನ'ವನ್ನು ಹರಿ ಮೆಚ್ಚನು. ಅವರ ಪಾಲಿಗೆ ಸಂಗೀತ ಒಂದು ಸಾಧನೆ; ಅದರ ದಾರಿ ಭಗವತ್ಪ್ರೀತಿ. ಅದಕ್ಕಾಗಿಯೇ ಅವರ ರಚನೆಗಳೆಲ್ಲ 'ಸಂಕೀರ್ತನ' ರೂಪವನ್ನು ತಳೆದುವು. ಸಂಗೀತದ ಪ್ರಯೋಜನ ಸತ್ತ್ವಶುದ್ಧಿ. ಗಾಯನದಿಂದ ಮನೋಧರ್ಮ ಮಧುರವಾಗಿ ಬಾಳಿನ ಹೊಳೆ ಭಗವಂತನೆಡೆಗೆ ಹರಿದರೆ ಆಗ ಸಂಗೀತ ಕೃತಕೃತ್ಯವಾಗುತ್ತದೆ. ಭಕ್ತಿಗೆ ಸಂಗೀತ ನೆರವಾಗಬೇಕು. ಭಗವದಾರಾಧನೆಗೆ ನಾದೋಪಾಸನೆ ಅನುವಾಗಿರಬೇಕೆಂಬುದು ನಮ್ಮಲ್ಲಿ ಹಿಂದಿನಿಂದ ಬಂದ ಕಲ್ಪನೆ. ಹಾಗೆಯೇ ಭಕ್ತಿಯ ಪ್ರತೀಕವಾದ ನಾರದರನ್ನು ನಾವು ಗಾಯಕರೆಂದು ಗ್ರಹಿಸಿದ್ದೇವೆ. ಭಾವುಕಜನ ಪುರಂದರದಾಸರನ್ನು ನಾರದರ ಅವತಾರವೆಂದು ಬಗೆದದ್ದೂ ಇದೇ ಹಿನ್ನೆಲೆಯಲ್ಲಿ.

ಪುರಂದರದಾಸರ ಕಾಲದಲ್ಲೂ ಗ್ರಂಥಸ್ಥವಾಗಿ ನೂರಾರು ರಾಗಗಳಿದ್ದುವು. ಪ್ರಾಚೀನರು ಪಟ್ಟಿಮಾಡಿರುವ ಈ ರಾಗಗಳಲ್ಲಿ 'ಪ್ರಚುರ ಪ್ರಯೋಗ'ದ ಒರೆಗಲ್ಲಿಗೆ ತಿಕ್ಕಿ ವಿದ್ಯಾರಣ್ಯರು ಐವತ್ತು ರಾಗಗಳನ್ನು ನಿರ್ದೇಶಿಸಿದರೆಂದು ಗೋವಿಂದ ದೀಕ್ಷಿತರು ತಮ್ಮ 'ಸಂಗೀತಸುಧೆ'ಯಲ್ಲಿ ಕಾಣಿಸಿದ್ದಾರೆ. ಪುರಂದರದಾಸರು ಇನ್ನೂ ಮುಂದರಿದು ಅವುಗಳಲ್ಲಿ ಮೂವತ್ತೆರಡು ರಾಗಗಳನ್ನು ಮಾತ್ರ ಅವರು ಭಕ್ತಿಯ ಭಾವವನ್ನು ಹೊರಸೂಸಲು ನೆರವಾಗುವುವೆಂದು ಗ್ರಹಿಸಿದರು. 'ಬತ್ತೀಸ' (ದ್ವಾತ್ರಿಂಶತ್, ಮೂವತ್ತೆರಡು) ರಾಗಗಳೆಂದು ಅವರು ಕೆಲವು ಪದಗಳಲ್ಲಿ ಉಲ್ಲೇಖಿಸಿದ್ದಾರೆ. ಮೂವತ್ತೆರಡು ಎಂಬ ಸಂಖ್ಯೆಗೆ ನಮ್ಮ ಸಂಸ್ಕೃತಿಯಲ್ಲಿ ವಿಶೇಷವಾದ ಬೆಲೆಯಿದೆ. ಮೂವತ್ತೆರಡು ಅಕ್ಷರಗಳ ಸಮೂಹವೇ ಗ್ರಂಥವೆನಿಸಿಕೊಂಡಿತು. ಮಹಾಪುರುಷ ಲಕ್ಷಣಗಳನ್ನೂ ಮೂವತ್ತೆರಡೆಂದು ಎಣಿಸುತ್ತಾರೆ. ಭಾಗವತ ಪಂಥದ ಪ್ರಕ್ರಿಯೆಯಲ್ಲಿ ಕೃಷ್ಣನಿಗೆ ಈ ಮೂವತ್ತೆರಡು ಮಹಾಪುರುಷ ಲಕ್ಷಣಗಳಿದ್ದುದರಿಂದಲೇ ಗೋಪಜನರೂ ಗೋಪಿಯರೂ ಅವನು ಅವತಾರ ವಿಶೇಷವೆಂಬುದನ್ನು

ಅರಿತುಕೊಂಡರು. ಅವರ ಪ್ರೀತಿಯು(ರಾಗವು) ಅವನ ಮೂವತ್ತೆರಡು ಶಾರೀರ ಲಕ್ಷಣಗಳಲ್ಲಿ ಹರಡಿಕೊಂಡಿತೆಂದು ಭಾಗವತದಲ್ಲಿ ಒಕ್ಕಣೆಯಿದೆ ('ರಾಗಃ ಸಪ್ತನು ಹಂತ ಷಟ್ಸ್ವಪಿ....ದ್ವಾತ್ರಿಂಶದ್ವರ ಲಕ್ಷಣಃ ಕಥಮಸೌ ಗೋಪೇಷು ಸಂಭಾವ್ಯತೇ', ಶ್ರೀ ಹರಿಭಕ್ತಿ ರಸಾಮೃತಸಿಂಧು). ಮೂವತ್ತೆರಡು ರಾಗಗಳ ಎಣಿಕೆಗೆ ಇದು ಹಿನ್ನೆಲೆ.

ಸೀಖ ಜನಾಂಗದ ಪವಿತ್ರ ಗ್ರಂಥವಾದ 'ಗ್ರಂಥ ಸಾಹೇಬ' ಎನ್ನವುದು ಹಲವಾರು ಸಂತರ ಕವಿತೆಗಳ ಸಂಕಲನ. ಈ ಸಂಕಲನವನ್ನು ಸಿದ್ಧಪಡಿಸಿದ ಸಂತರು ಗುರು ಅರ್ಜುನದೇವರೆಂಬುವರು. (೧೫೬೧-೧೬೦೬); ಪುರಂದರದಾಸರ ಸಮಕಾಲಿಕರೇ ಎನ್ನಬಹುದು. ಅವರು ಸಂಪಾದಿಸಿರುವ ಈ ಸಂಕಲನದಲ್ಲಿ ಕವಿತೆಗಳನ್ನು ವರ್ಗೀಕರಣ ಮಾಡುವಾಗ ಆಯಾ ಸಂತರ ಹೆಸರುಗಳನ್ನು ಹಿಡಿಯದೆ ಕವಿತೆಗಳ ರಾಗಗಳನ್ನು ಹಿಡಿದಿರುವುದನ್ನು ಗಮನಿಸಬೇಕು. ಅವರು ಈ ಕೆಲಸಕ್ಕೆ ಆಯ್ದುಕೊಂಡಿರುವ ರಾಗಗಳ ಸಂಖ್ಯೆ ಮೂವತ್ತೊಂದು ಎನ್ನುವುದು ಸ್ವಾರಸ್ಯವಾದ ವಿವರ. ಆ ಕಾಲದಲ್ಲಿ ದೇಶದಲ್ಲೆಲ್ಲ ಮೂವತ್ತೊಂದು ಅಥವಾ ಮೂವತ್ತೆರಡು ರಾಗಗಳು ಪವಿತ್ರವಾದುವೆಂಬ ಕಲ್ಪನೆಯಿದ್ದಿತೆಂದು ತೋರುತ್ತದೆ. 'ಗ್ರಂಥ ಸಾಹೇಬ'ದಲ್ಲಿ ಹರಿದಾಸ ಪಂಥದ ಭಕ್ತಿಯನ್ನೇ ಗ್ರಹಿಸಲಾಗಿದೆ ಎನ್ನುವುದನ್ನೂ ಗಮನಿಸಬೇಕು.

'ತುತ್ತೂರು ತೂರೆಂದು' ಎಂದು ಮೊದಲಾಗುವ ಪದ, 'ನಳಿನಜಾಂಡ ತಲೆಯ ತೂಗಿ' ಎಂದು ಆರಂಭವಾಗುವ ಇನ್ನೊಂದು ಪದ, 'ಅಂಗನೆಯರೆಲ್ಲ ನೆರೆದು' ಎಂದು ಆರಂಭವಾಗುವ ಮತ್ತೊಂದು ಪದ ಈ ಮೂರರಲ್ಲಿ ತಮಗೆ ಪ್ರಿಯವಾದ ರಾಗಗಳನ್ನು ಹೆಸರಿಸಿದ್ದಾರೆ. ಮೊದಲನೆಯದರಲ್ಲಿ ಗೌಳ, ನಟ, ಆಹಿರಿ, ಗೂರ್ಜರಿ, ಮಾಳವ, ಸಾರಂಗ, ಫಲಮಂಜರಿ, ಗೌಳಿ, ದೇಶಾಕ್ಷಿಗಳನ್ನೂ; ಎರಡನೆಯದರಲ್ಲಿ ಮಾರವಿ, ದೇಶಿ, ಗುರ್ಜರಿ, ಭೈರವಿ, ಗೌಳಿ, ನಟ್ಟ, ಸಾವೇರಿ, ಆಹಿರಿ, ಪೂರ್ವಿ, ಕಾಂಬೋದಿ, ಪಾಡಿ, ದೇಶಾಕ್ಷಿ, ಶಂಕರಾಭರಣ, ಮಾಳವ, ವರಾಳಿ, ಕಲ್ಯಾಣಿ, ತೋಡಿ, ಮುಖಾರಿ, ಯರಳಿ (?), ವಸಂತ, ಬೌಳಿ, ಧನ್ಯಾಸಿ, ಸೌರಾಷ್ಟ್ರ, ಗುಂಡಕ್ರಿಯ, ರಾಮಕ್ರಿಯೆ, ಮೇಘ, ಕುರಂಜಿ ರಾಗಗಳನ್ನೂ; ಮೂರನೆಯದರಲ್ಲಿ ಪಾಳಿ, ಮಲಹರಿ, ಭೈರವಿ, ಸಾರಂಗ, ದೇಶಿ, ಗುಂಡಕ್ರಿಯ, ಗುರ್ಜರಿ, ಕಲ್ಯಾಣಿ ರಾಗಗಳನ್ನೂ ಹೇಳಿದ್ದಾರೆ. ಸಾಂಪ್ರದಾಯಿಕವಾದ ಮೂವತ್ತೆರಡು ರಾಗಗಳಲ್ಲಿ ಇಲ್ಲಿ ಸೇರದೆ ಬಿಟ್ಟಿರುವುವು ಶ್ರೀರಂಗ ಮತ್ತು ಆರಭಿ ಎರಡು. ಇವುಗಳೆಲ್ಲ ಬಹುಮಟ್ಟಿಗೆ ದೇಶ್ಯರಾಗಗಳೆಂಬುದನ್ನು ಗಮನಿಸಬೇಕು. ಜನರ ನಡುವೆ ಬಳಕೆಯಲ್ಲಿದ್ದ ರಾಗಗಳನ್ನೇ ಅವರು ಎತ್ತಿಹಿಡಿದರು. ಈ ರಾಗಗಳಿಗೆ ಅನಿಬದ್ಧವಾದ ರೂಪವನ್ನು ಲಕ್ಷ್ಯಪ್ರಕಾರದಲ್ಲಿ ಕಾಣಿಸಲು ದಾಸರು ಉಗಾಭೋಗಗಳನ್ನು ರಚಿಸಿದರೆಂದೂ, ಈ ರಾಗಗಳ ನಿಬದ್ಧರೂಪವನ್ನು ಪದಗಳಲ್ಲಿ ಕಾಣಿಸಿದರೆಂದೂ ಹೇಳಬಹುದು.

ಹಾಗೆಯೇ, ಸಾಧ್ಯವಿದ್ದ ಹಲವಾರು ತಾಳಗಳಲ್ಲಿ ರಂಜಕವಾದ, ರಾಗಭಾವದ ಪ್ರದರ್ಶನಕ್ಕೆ ಉಪಯುಕ್ತವಾದ ಏಳು ತಾಳಗಳನ್ನು ಮಾತ್ರ ಅವರು ಬಳಕೆಗೆ ತಂದು, ಸುಳಾದಿಗಳಲ್ಲಿ ಅವುಗಳ ಸ್ವಾರಸ್ಯವನ್ನು ಮನಗಾಣಿಸಿದರು. ಅವರಿಗೆ ಪ್ರಿಯವಾದುದು ಝಂಪೆ ತಾಳವೆಂದು ತೋರುತ್ತದೆ. ಆರಭಿ ರಾಗದ 'ಆಡಿದನೋ ರಂಗ' ಎಂಬ ಪದದಲ್ಲಿ ಇದರ ಸ್ಪಷ್ಟ ಉಲ್ಲೇಖವಿದೆ. ರಾಗ-ತಾಳಗಳು ಪುರಂದರದಾಸರ ಪದಗಳಲ್ಲಿ ಒದಗಿಬಂದಿದ್ದರೂ, ಸಾಹಿತ್ಯವೇ ಪ್ರಧಾನವಾದುದರಿಂದ ಇವುಗಳ ಮೇಲಾಟ ಅಷ್ಟಾಗಿ ಇಲ್ಲ. ಮೇಲಾಗಿ, ಹರಿದಾಸರ ವ್ಯವಹಾರಕ್ಕೆ ಅಗತ್ಯವೆನಿಸಿದ ಪದಗಳೇ

ಬಹುಮಟ್ಟಿಗೆ ಇರುವುದರಿಂದ ಅವರಿಗೆ ಅನುಕೂಲವಾಗುವಷ್ಟು ಮಾತ್ರ ರಾಗ-ತಾಳಗಳ ಪ್ರಸಕ್ತಿ. ಹಲವು ಪದಗಳು ಸಂಗೀತವನ್ನೇ ಗಮನದಲ್ಲಿರಿಸಿಕೊಂಡು ರಚಿಸಿದುವು; ಇವುಗಳಲ್ಲಿ ರಾಗ-ತಾಳಗಳ ಪ್ರೌಢಿಮೆಯನ್ನು ಗುರುತಿಸಬಹುದು. ಮತ್ತೆ ಕೆಲವು ಪದಗಳು ಸಾಂಪ್ರದಾಯಿಕ ನೃತ್ಯಪದ್ಧತಿಯನ್ನು ಅನುಸರಿಸಿ ನೃತ್ಯಕ್ಕೆ ಒದಗುವಂತೆ ಇವೆ. 'ಆಡಿದನೋ ರಂಗ', ಕುಣಿದಾಡೋ ಕೃಷ್ಣ', 'ಹರಿ ಕುಣಿದ', 'ಕೃಷ್ಣಮೂರ್ತಿ ಕಣ್ಣಮುಂದೆ ನಿಂತಿದ್ದಂತಿದೆ', 'ಬಣ್ಣಿಸಿ ಗೋಪಿ ಹರಿಸಿದಳು', 'ಎಲ್ಲ್ಯಾಡಿ ಓಡಿ ಬಂದೆ ರಂಗಯ್ಯ', 'ಕೃಷ್ಣ ನೀ ಬೇಗನೆ ಬಾರೋ', 'ಕರುಣಾಕರ ನೀನೆಂಬುವುದೇಕೋ', 'ಬಣ್ಣಿಸಿ ಗೋಪಿ ಹರಸಿದಳು', 'ಎಂದಪ್ಪಿಕೊಂಬೆ ರಂಗಯ್ಯನ', 'ಪೋಗದಿರಲೋ ರಂಗ ಬಾಗಿಲಿನಿಂದಾಚೆಗೆ', 'ಕರುಣಾಕರ ನೀನೆಂಬುವುದ್ಯಾಕೋ' ಇವೆಲ್ಲ ನಿದರ್ಶನಗಳು.

ಹೀಗೆ ಪುರಂದರದಾಸರ ಪದಗಳಲ್ಲಿ ಸಂಗೀತ, ನೃತ್ಯಗಳಿಗೆ ಸಂಬಂಧಪಟ್ಟಷ್ಟು ಮಾತ್ರ ಭಾಗವನ್ನು ಲಕ್ಷ್ಯಗಾನವೆಂದು ನಾವು ಎಣಿಸಬೇಕು. ಉಳಿದ ಪದಗಳಿಗೆ ಸಾಹಿತ್ಯದ ಮೌಲ್ಯವೇ ಹೆಚ್ಚಾದದ್ದು. ಪುರಂದರದಾಸರು ಲಕ್ಷಣ ಭಾಗದಲ್ಲಿ ಕರ್ನಾಟಕ ಸಂಗೀತಕ್ಕೆ ಸಲ್ಲಿಸಿದ ಸೇವೆಯನ್ನು ಕುರಿತು ಇಲ್ಲಿ ಪ್ರಸ್ತಾಪಮಾಡುವ ಅವಕಾಶವಿಲ್ಲ; ಅದನ್ನು ಬೇರೆಡೆ ಮಾಡಿದ್ದೇನೆ. ಆದರೆ ಪುರಂದರದಾಸರ ಕಾಲದಲ್ಲಿ ಲಕ್ಷ್ಯ-ಲಕ್ಷ್ಮಣ ಭಾಗಗಳಲ್ಲಿ ಹೊಂದಾಣಿಕೆ ಅಗತ್ಯವಾಗಿದ್ದಿತು; ಇದನ್ನು ಅವರು ಪೂರಾಯಿಸಿದರು ಎಂದಷ್ಟು ಹೇಳಬೇಕು. ಹೀಗೆ ಪುರಂದರದಾಸರು ಲಕ್ಷ್ಯ ಲಕ್ಷಣ ಸಂಗತಿಯ ಕಡೆ ಗಮನ ಹರಿಸಿದುದು ವ್ಯಾಸರಾಯಸ್ವಾಮಿಗಳ ಸ್ಪೂರ್ತಿಯಿಂದಲೇ ಎಂಬುದನ್ನೂ ಕಾಣಿಸಬೇಕು. ಸ್ಫೂರ್ತಿಯೇನು, ಅವರ ಮಾರ್ಗದರ್ಶನದಲ್ಲೇ ಇದ್ದರೂ ಇದ್ದೀತು ಎಂಬುದನ್ನು ಮೊದಲೇ ಹೇಳಿದ್ದೇನೆ.

ವ್ಯಾಸರಾಯಸ್ವಾಮಿಗಳಾಗಲಿ, ಪುರಂದರದಾಸರಾಗಲಿ ಶಾಸ್ತ್ರೀಯ ಸಂಗೀತ, ಪ್ರಕಾರಗಳಲ್ಲಿ ವೈದುಷ್ಯವನ್ನು ಪಡೆದುಕೊಂಡಿದ್ದರಾದರೂ ಸ್ವಭಾವದಿಂದ ಕವಿಗಳು ತಾವು ಕೈಗೊಂಡ ಉದ್ಯಮದಿಂದ ಹರಿಭಕ್ತಿ ಪ್ರಚಾರಕರು. ಇದೇ ಅವರ ಬಾಳುವೆಯ ಮುಖ್ಯರಸ; ಅವರ ಸಾರಸ್ವತ ವ್ಯವಸಾಯದ ಮುಖ್ಯ ಉದ್ದೇಶ. ಮಧ್ವಾಚಾರ್ಯರು ಯತಿಗಳಿಗೆ 'ಹರಿಸರ್ವೋತ್ತಮತ್ವವನ್ನು ಎಡೆಬಿಡದೆ ಜನರಲ್ಲಿ ಹರಡಿರಿ' ('ವಿಷ್ಣೋಃ ಸರ್ವೋತ್ತಮತ್ವಂ ಸರ್ವದಾ ಪ್ರತಿಪಾದಯ') ಎಂಬ ಆದೇಶವನ್ನು ನೀಡಿದ್ದರು. ಭಗವತ್ಪ್ರಸಾದದ ಪ್ರಾಪ್ತಿಗೆ ಭಕ್ತಿಯೇ ಮುಖ್ಯ ಸಾಧನೆ, ಅದಕ್ಕೆ ವಿರಕ್ತಿ ನೆರವಾಗುತ್ತದೆ ಎಂದೂ ಅವರ ನಿಲುವಿದ್ದಿತು. ವ್ಯಾಸರಾಯಸ್ವಾಮಿಗಳು ಯತಿಗಳಾಗಿ ತಮ್ಮ ಪರಂಪರೆಯ ಪೂರ್ವಾಚಾರ್ಯರ ಆದೇಶವನ್ನು, ತಮ್ಮ ಸ್ವಭಾವಕ್ಕೆ ಅನುಗುಣವಾಗಿ ಪಾಲಿಸಿದರು. ಇದೇ ಕೆಲಸವನ್ನು ಆಶ್ರಮಸಂನ್ಯಾಸಿಗಳಿಗಿಂತ ಹೆಚ್ಚು ಪ್ರಭಾವಶಾಲಿಯಾಗಿ ಗೃಹಸ್ಥ ಸಂನ್ಯಾಸಿಗಳು ನಡೆಸಿಯಾರೆಂದು ಭಾವಿಸಿ ಹರಿದಾಸಪಂಥವನ್ನು ಪ್ರೋತ್ಸಾಹಿಸಿದರು. ಹರಿದಾಸರು ದಿಟವಾಗಿ ವಿರಕ್ತ ಸಂಸಾರಿಗಳು, ಗೃಹಸ್ಥ ಸಂನ್ಯಾಸಿಗಳು; ಲೋಕವ್ಯವಹಾರದಲ್ಲಿ ಇದ್ದೂ ಇರದವರು. ಈ ಪಂಥಕ್ಕೆ ಎಲ್ಲ ಕಾಲಕ್ಕೂ ಪ್ರತಿನಿಧಿಯಾಗಿ ಇರುವವರು ಪುರಂದರದಾಸರು. ಅವರನಂತರ ಯಾವ ಹರಿದಾಸರೂ ಆ ಮಟ್ಟವನ್ನು ಮುಟ್ಟಲಿಲ್ಲ. ಹಾಗೆಂದೇ ಅವರು ಭೂಮಿಯ ಮೇಲೆ ಕಾಣಿಸಿಕೊಂಡು ಐನೂರು ವರ್ಷಗಳು ಕಳೆದರೂ ಇಂದಿಗೂ ಅವರನ್ನು ಕುರಿತು ಹೀಗೆ ಹೇಳುವುದು ಉಳಿದಿದೆ-

'ಪುರಂದರಗುರುಂ ವಂದೇ ದಾಸಶ್ರೇಷ್ಠಂ ದಯಾನಿಧಿಂ' ❐

ಅಧ್ಯಾಯ ಹನ್ನೊಂದು

ದಾಸರ ಸಾಮಾಜಿಕ ನಿಲುವು

ಪುರಂದರದಾಸರು ಹರಿದಾಸರು, ಭಗವದ್ಭಕ್ತಿಯೇ ಅವರ ಮುಖ್ಯಪ್ರವೃತ್ತಿ. ಆದರೆ ಅವರು ಸಂಸಾರವನ್ನು ತೊರೆದ ಸಂನ್ಯಾಸಿಯಲ್ಲ. ಮಾನವಜನ್ಮ ದೊಡ್ಡದೆಂದೂ ಸಂಸಾರವೆಂಬುದು ಭಾಗ್ಯವೆಂದೂ ಹಾಡಿ ಹೊಗಳಿದವರು. ಬದುಕಿನುದ್ದಕ್ಕೂ ಹೆಂಡತಿ ಮಕ್ಕಳೊಂದಿಗೆ, ನೆರೆಹೊರೆಯವರೊಂದಿಗೆ ಊರಮಂದಿಯ ನಡುವೆ ಬಾಳಿದವರು. ಸಾಮಾನ್ಯರಲ್ಲಿ ಸಾಮಾನ್ಯರಾಗಿ ಭಕ್ತರಲ್ಲಿ ಭಕ್ತರಾಗಿ, ಭಾವುಕರಲ್ಲಿ ಭಾವುಕರಾಗಿ ಇದ್ದವರು. ಭಗವದುನ್ಮಾದದಲ್ಲಿ ಮೈಮರೆತು ಹುಚ್ಚರಂತೆ, ಪಿಶಾಚದಂತೆ, ಮಕ್ಕಳಂತೆ ಇದ್ದವರಲ್ಲ. ನೆರೆಹೊರೆಯವರ ಪರಿಯನ್ನೆಲ್ಲ ಅರಿತುಕೊಂಡವರು, ಊರವರ ವ್ಯವಹಾರವನ್ನೆಲ್ಲ ಬಲ್ಲವರು, ಆಳರಸರ ಓರೆಕೋರೆಗಳನ್ನೆಲ್ಲ ತಿಳಿದವರು. ಪ್ರಪಂಚವನ್ನು ಮಾಯೆಯೆಂದು ಜರಿದು, ಸಂಸಾರವನ್ನು ಅಸಾರವೆಂದು ಹೊರದೂಡಿ, ಅಡವಿಯನ್ನು ಸೇರುವ ಹೇಡಿ ವೈರಾಗ್ಯವೂ ಅವರದ್ದಲ್ಲ. 'ಈಸಬೇಕು, ಇದ್ದು ಜಯಿಸಬೇಕು' ಎಂದು ಹೇಳುವ ಗಟ್ಟಿಗುಂಡಿಗೆ ಅವರದ್ದು, 'ಇರಬೇಕು, ಇರದಿರಬೇಕು' ಎಂದು ಕಿವಿಮಾತು ಹೇಳುವ ಜಾಣತನವೂ ಅವರದ್ದು.

ಪುರಂದರದಾಸರ ಪೂರ್ವಜೀವನ ಏನೋ, ಮೊದಲಿಗೆ ಯಾವ ಉದ್ಯೋಗವನ್ನು ಹಿಡಿದಿದ್ದರೋ, ಆಗ ಅವರ ಆರ್ಥಿನೆಲೆಯೇನೋ, ಸಾಮಾಜಿಕ ಸ್ಥಾನಮಾನ ಏನೋ ತಿಳಿದು ಬಂದಿಲ್ಲ. ಕತೆಗಳನ್ನು ನಂಬುವುದಾದರೆ ಚಿನಿವಾರಿಕೆವೃತ್ತಿ, ಶ್ರೀಮಂತರು, ಸಮಾಜದಲ್ಲಿ ಪ್ರಭಾವಶಾಲಿಗಳು. ಕತೆಗಳೇನು ಇತಿಹಾಸದ ಪರ್ಯಾಯಗಳಲ್ಲ! ಹರಿದಾಸರಾದ ಮೇಲೆ ಊಂಛವೃತ್ತಿಯನ್ನು (ಮಧುಕರ ವೃತ್ತಿ, ಯಾಯವಾರ) ಹಿಡಿದರೆನ್ನುವುದೇನೋ ಸ್ಪಷ್ಟವಾಗುತ್ತದೆ; ಅವರ ಪದಗಳೂ ಇದನ್ನು ಹೇಳುತ್ತವೆ. ಹರಿದಾಸರ ಬದುಕಿನ ಬಗೆಯೂ ಇದನ್ನು ಸಮರ್ಥಿಸುತ್ತದೆ. ವಿರಕ್ತರಾದರೂ ಸಂನ್ಯಾಸಿಯಾಗಲಿಲ್ಲ; ಅಪರೋಕ್ಷಜ್ಞಾನಿಯಾದರೂ ಹೆಂಡತಿ ಮಕ್ಕಳನ್ನು ಕೈಬಿಡಲಿಲ್ಲ; ವ್ಯಾಸರಾಯ ಸ್ವಾಮಿಗಳ ಶಿಷ್ಯರಾದರೂ ಮಠವನ್ನು ಸೇರಲಿಲ್ಲ; ಅರಸನ ಅದರವನ್ನು ಪಡೆದು ಕೊಂಡರೂ ಅರಮನೆಯ ಊಳಿಗಕ್ಕೆ ಬಾಯಿಬಿಡಲಿಲ್ಲ. ಹರಿದಾಸರಾದಮೇಲೂ ಗೃಹಸ್ಥರಾಗಿಯೇ ಉಳಿದರು. ಉದ್ಯೋಗವನ್ನು ಬಿಟ್ಟು ಊಂಛವೃತ್ತಿಯನ್ನು ಹಿಡಿದರು, ಹಣದ ಹಂಬಲವನ್ನು ಬಿಟ್ಟು ಹರಿದಾಸರಾದರು. ಲೌಕಿಕ ಪ್ರಸಕ್ತಿಯ ಕೆಸರನ್ನು ಬಿಟ್ಟು ಪರಮಾರ್ಥದ ಬಂಡೆಯನ್ನೇರಿದರು. ಆದರೆ ತಾವಿದ್ದ ಪರಿಸರದಿಂದ ದೂರವಾಗಲಿಲ್ಲ, ಸಮಾಜದ ಕಟ್ಟುಪಾಡಿನಿಂದ ಕಳಚಿಕೊಳ್ಳಲಿಲ್ಲ.

ಸಂನ್ಯಾಸಿಯಾಗಿದ್ದರೆ ಸಮಾಜದಲ್ಲಿನ ಸ್ಥಾನ-ಮಾನ ಬೇರೆಯಾಗುತ್ತಿತ್ತು; ಉಳಿದವರಿಗಿಂತ ಮೇಲಿನ ನೆಲೆ ಎಂದೆನಿಕೊಂಡು ಪಾದಪೂಜೆ, ಭಿಕ್ಷೆ, ಸನ್ಮಾನ, ಪುರಸ್ಕಾರಗಳನ್ನು ಪಡೆಯುತ್ತಿದ್ದರು; ಗೃಹಸ್ಥರಿಂದ ಬಗೆಬಗೆಯ ಸೇವೆಯೂ ನಡೆಯುತ್ತಿತ್ತು. ಆದರೆ ಪುರಂದರದಾಸರು ಗೃಹಸ್ಥರಾಗಿಯೇ ಉಳಿದುದರಿಂದ ಈ ಅನುಕೂಲಗಳು ಒದಗಿರಲು ಸಾಧ್ಯವಿಲ್ಲ. ಎಲ್ಲರಂತೆ ಅವರೂ ಹೊಟ್ಟೆ ಹೊರೆದುಕೊಂಡು, ಹೆಂಡತಿ ಮಕ್ಕಳನ್ನು ಸಾಕಿ, ಎಲ್ಲರಂತೆಯೇ ಇದ್ದುಕೊಂಡರಾಗಿ ವಿಶೇಷವಾದ ಯಾವ ಸೌಲಭ್ಯವನ್ನೂ ಪಡೆದುಕೊಂಡಿರಲಾರರು. ಬಾಳುವೆಯ ಕಡೆಗಾಲದಲ್ಲಿ ಇವರ ಹಿರಿಮೆಯನ್ನು ಗಮನಿಸಿ ಕೆಲವರು ಶಿಷ್ಯರು ಅವರ ಸುತ್ತ ನೆರೆದಿದ್ದರೆ ನೆರೆದಿರಬಹುದು; ಜನರು ಸಂತರೆಂದು ಇವರನ್ನು ಗೌರವದಿಂದ ಕಂಡಿರಬಹುದು. ಇದೂ ನೆಚ್ಚಿಗೆಯಿಲ್ಲ. ಅವರ ಪದಗಳಲ್ಲಿ ಕಂಡುಬರುವ ಧೋರಣೆಯನ್ನು ಗಮನಿಸಿದರೆ ಯಾರ ಹಂಗಿಗೂ ಒಳಗಾಗುವ ವ್ಯಕ್ತಿಯಂತೆ ತೋರುವುದಿಲ್ಲ; ಒಂಟಿ ಸಲಗನಂತೆ ಇದ್ದು ಮರೆಯಾದವರಂತೆ ಕಾಣುತ್ತಾರೆ.

ಹರಿದಾಸರಾಗಿ ಅವರು ಕೈಗೊಂಡದ್ದು ಊಂಛವೃತ್ತಿಯನ್ನು ಎಂದು ಹೇಳಿದೆನಷ್ಟೆ. ಆದರೆ ಊಂಛವೃತ್ತಿ (ಮಧುಕರವೃತ್ತಿ) ಸಂನ್ಯಾಸಿಗಳಿಗೆ, ಅವಧೂತರಿಗೆ, ಕರ್ಮನಿಷ್ಠರಾದ ಯಾಯಾವರರಿಗೆ ಹೇಳಿದ್ದು. ಪುರಂದರದಾಸರು ಈ ಯಾವ ಗುಂಪಿಗೂ ಸೇರಿದವರಲ್ಲ. ಪೂರ್ವದ ಹರಿದಾಸರು ಈ ವೃತ್ತಿಯನ್ನು ಹಿಡಿದಿದ್ದರೋ ಎನ್ನುವುದು ಸ್ಪಷ್ಟವಾಗಿಲ್ಲ. ಪುರಂದರದಾಸರ ಗುರುಗಳಾದ ವ್ಯಾಸರಾಯ ಸ್ವಾಮಿಗಳು ಸಂನ್ಯಾಸಿಯಾದರೂ ಈ ವೃತ್ತಿಯನ್ನು ಅವಲಂಬಿಸಿರಲಿಲ್ಲ; ಅವರು ಮಠಾಧಿಪತಿಗಳು, ರಾಜಗುರುಗಳು. ಭಿಕ್ಷೆಯೆತ್ತುವುದು ಆಶ್ರಮಧರ್ಮವಾದರೂ (ಸಂನ್ಯಾಸಿಗೆ ಭಿಕ್ಷುವೆಂದೇ ಹೆಸರು) ಸ್ವಾಮಿಗಳು ಉಣ್ಣುವ ಊಟವನ್ನು 'ಭಿಕ್ಷೆ'ಯೆಂದು ವ್ಯವಹಾರದಲ್ಲಿ ಕರೆದರೂ, ಅವರೇನು ಮನೆಮನೆಗೆ ಅಲೆದು ಭಿಕ್ಷೆ ಬೇಡುವವರಲ್ಲ. ತೀರ ಬಡವರಾದವರು, ಬೇರೆ ಗತಿಯಿಲ್ಲದವರು, ದೇವರ ಹೆಸರನ್ನು ಹೇಳಿ ತಿರುಪೆಯನ್ನು ಎತ್ತುವರು; ಇವರೇ ಗೋಪಾಳದವರು; ಇವರದ್ದು ಊಂಛವೃತ್ತಿ. ಈ ವೃತ್ತಿಗೆ ಒಂದು ಹೀನಾಯ ಮೊದಲಿಂದ ಇದ್ದದ್ದೇ. ಪುರಂದರದಾಸರ ಕಾಲದಲ್ಲೂ ಇದ್ದಿರಬೇಕು. ಹೀಗಿದ್ದರೂ ಪುರಂದರದಾಸರು ಧೈರ್ಯಮಾಡಿ ಗೋಪಾಳಬುಟ್ಟಿ ಹಿಡಿದರಲ್ಲವೆ?

ವ್ಯಾಸರಾಯ ಸ್ವಾಮಿಗಳು ಹರಿದಾಸಕೂಟವನ್ನು ತೊಡಗಿಸಿದಾಗ ಇದೊಂದು ಕಟ್ಟುಪಾಡನ್ನೂ ಮಾಡಿದರೆಂದು ತೋರುತ್ತದೆ. ಲೌಕಿಕ ಜನರಾದರೆ ಲಾಭದಾಯಕವಾದ ಯಾವುದಾದರೊಂದು ಉದ್ಯೋಗವನ್ನು ಹಿಡಿಯುತ್ತಾರೆ; ಪಂಡಿತರಾದರೆ ಮಠದಿಂದ ಮರ್ಯಾದೆ, ಅರಸರ ಆಸರೆ ದೊರೆಯುವ ಸಂಭವವುಂಟು; ಅವಧೂತರಾದರೆ ಅಡವಿಯಲ್ಲೇ ಇರುವವರು. ಆದರೆ ಹರಿಸೇವೆಗೆಂದು ಬದುಕನ್ನೇ ಮುಡಿಪಿಟ್ಟವರಿಗೆ ದಾರಿಯೇನು? ಜನರಿಗೆ ಇವರ ನೆರವು ಒದಗುವುದೆಂಬುದನ್ನು ವ್ಯಾಸರಾಯಸ್ವಾಮಿಗಳು ಮನಗಂಡು, ಜನರ ನಡುವೆ ಅಧ್ಯಾತ್ಮದ ಅಗತ್ಯ, ನೀತಿಯ ನೆಲೆ, ಧರ್ಮದ ಸ್ವಾರಸ್ಯಗಳನ್ನು ಹರಡುವ ಹರಿದಾಸರನ್ನು ಜನರೇ ನೋಡಿಕೊಳ್ಳಬೇಕಾದುದು ಅವರ ಕರ್ತವ್ಯವೆಂದು ಊಂಛವೃತ್ತಿಯನ್ನು ಹರಿದಾಸರಿಗೆ ವಿಧಿಸಿದರೆಂದು ಕಾಣುತ್ತದೆ. ಹರಿದಾಸರು ನರಸೇವೆ ಮಾಡಬಾರದೆಂದು ನಿಯಮ. ಊರಿನ ಅರಸನೂ ನರನೇ, ಮಠದ ಸ್ವಾಮಿಯೂ ನರನೇ, ಉದಾರಿಯಾದ ಧನಿಕನೂ ನರನೇ. ಹರಿದಾಸರು ಇವರಲ್ಲಿ ಯಾರನ್ನೂ ಆಶ್ರಯಿಸಬಾರದು.

ವ್ಯಾಸಕೂಟ-ದಾಸಕೂಟಗಳ ನಡುವೆ ಇರುವ ವ್ಯತ್ಯಾಸಗಳಲ್ಲಿ ಇದೂ ಒಂದು. ವ್ಯಾಸಕೂಟದ ಪಂಡಿತರು ಮಠಕ್ಕೆ ಅಂಟಿಕೊಂಡವರು. ಶ್ರೀಮಂತರ ಆದರವನ್ನು ಬಯಸುವವರು, ಅರಸನ ಓಲಗದಲ್ಲಿ ಕೈಮುಗಿದು ನಿಲ್ಲಬಲ್ಲವರು. ಅವರದ್ದು ಪರಾಧೀನವೃತ್ತಿ; ಹರಿಯೇ ಸರ್ವೋತ್ತಮನೆಂದು ಪಾಠಪ್ರವಚನಗಳಲ್ಲಿ ಹೇಳಿದರೂ, ಬದುಕಿನಲ್ಲಿ ಹುಲುಮಾನವರನ್ನೇ ನೆರೆನಂಬಿ ಹೊಟ್ಟೆಹೊರೆದು ಕೊಳ್ಳುವರು. ಹರಿದಾಸರಾದರೆ ಹಾಗಲ್ಲ. ಹರಿಯನ್ನು ಬಿಟ್ಟು ಬೇರೆ ಯಾರ ಹಂಗಿಗೂ ಒಳಗಾಗುವವರಲ್ಲ. 'ಬಂದದ್ದೆಲ್ಲಾ ಬರಲಿ, ಗೋವಿಂದನ ದಯವೊಂದಿರಲಿ' ಎನ್ನುವವರು; 'ಎಷ್ಟಾದರೂ ತಾ ಮುನ್ನ ಕೊಟ್ಟಷ್ಟೆ', 'ತಾ ಪಡೆದು ಬಂದುದದಕುಪಾಯವಿಲ್ಲ' ಎನ್ನುವರು; 'ನೀ ಇಟ್ಹಾಂಗೆ ಇರುವೆನೋ ಹರಿಯೆ' ಎನ್ನುವವರು; 'ಹರಿ ಇರಲಾಗಿ ನನಗೇತರ ಚಿಂತೆ?' ಎನ್ನುವರು. ಹೀಗಾಗಿ ಅರಸರ ಆಸ್ಥಾನಗಳಲ್ಲಾಗಲಿ, ಮಠದ ಕಾರುಬಾರಿನಲ್ಲಾಗಲಿ ಹರಿದಾಸರು ಕಾಣಿಸಿಕೊಳ್ಳುವುದಿಲ್ಲ. ವಿಜಯದಾಸರ ಕಾಲವಾದ ಮೇಲೆ ಹರಿದಾಸರಿಗೂ ಮಾಧ್ವ ಮಠಗಳಿಗೂ ಹಲವು ವೇಳೆ ವಿರಸ ಒದಗಿದುದೂ ಉಂಟು. ವಿಜಯದಾಸರಿಗೇ ಉತ್ತರಾದಿಮಠದಿಂದ ಬಹಿಷ್ಕಾರಪತ್ರ ಬಂದಿದ್ದತಂತೆ! ಮುಂದೆ ಹರಿದಾಸರ ಚರಿತ್ರೆಗಳಲ್ಲಿ ಇಂಥ ಪ್ರಸಂಗಗಳು ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತವೆ. ಹರಿದಾಸರ ಮನೋವೃತ್ತಿಗೆ ಸಿದ್ಧಾಂತದ ಸಮರ್ಥನೆಯನ್ನೊದಗಿಸಿದ ಪ್ರಖ್ಯಾತ ಸಂನ್ಯಾಸಿ ಪಂಡಿತರು ವಿಷ್ಣು ತೀರ್ಥರಿಗೂ (೧೭೫೦-೧೮೦೬, ತೀರ ವಿರಕ್ತರಾಗಿ ಅಡವಿ ಆಚಾರ್ಯರೆಂದು ಹೆಸರಾಗಿದ್ದವರು; ಸಂಸ್ಕೃತದಲ್ಲಿ ಶಾಸ್ತ್ರಪ್ರಕರಣ ಗ್ರಂಥಗಳನ್ನೂ ಬರೆದ ಹಿರಿಯರು) ಬಹಿಷ್ಕಾರದ ಬೇಗೆ ತಪ್ಪಲಿಲ್ಲ!

ಪುರಂದರದಾಸರು ಹರಿದಾಸರಾಗಿ ಊಂಛವೃತ್ತಿಯನ್ನು ಕೈಗೊಳ್ಳುವಂತೆ ಮಾಡಿದ ವ್ಯಾಸರಾಯಸ್ವಾಮಿಗಳ ಉದ್ದೇಶವಾದರೂ ಏನಾಗಿದ್ದಿತು? ಇವರ ಗುರುಗಳಾದ ಶ್ರೀಪಾದರಾಜರೂ ಈ ವಿಚಾರವಾಗಿ ಒಂದು ನಿಲುವನ್ನು ತಳೆದಿದ್ದವರೇ. ಅವರ ರಚನೆಗಳಲ್ಲಿ ಮನುಷ್ಯ ಮಾತ್ರದವರಿಂದ ಇರಲಿ, ಕಡೆಗೆ ದೇವರಿಂದಲೂ, ತಮಗೆ ಯಾವ ಲೌಕಿಕ ಪ್ರಯೋಜನವೂ ಬೇಡವೆಂದು ಧೈರ್ಯದಿಂದ ಅಡಿಗಡಿಗೆ, ಹೇಳಿರುವುದಿದೆ-

'ಗ್ರಾಸವಾಸಗಳಿಗೆ ಇಲ್ಲವೆಂದು ನಿನ್ನ
ಬೇಸರಿಸಿ ಬೇಡಬಂದುದಿಲ್ಲ'

'ಸತಿಸುತರುಗಳ ಸಹಿತವಾಗಿ ನಾ
ಹಿತದಿಂದ ಇರಬೇಕೆಂಬೊದಿಲ್ಲ'

'ಸಾಲವಾಯಿತೆಂದು ಸಂಬಳ ಎನಗೆ
ಸಾಲದೆಂದು ಬೇಡಬಂದುದಿಲ್ಲ'

'ಒಡವೆಗಲಿಲ್ಲ ಒಡ್ಯಾಣಗಳಿಲ್ಲೆಂದು
ಬಡವನೆಂದು ಬೇಡಬಂದುದಿಲ್ಲ'

'ಆಗಬೇಕು ರಾಜ್ಯಭೋಗಗಳೆನಗೆಂದು
ಈಗ ನಾನು ಬೇಡಬಂದುದಿಲ್ಲ'

ಎಂದು ದೇವರಿಗೇ ಎಚ್ಚರಿಕೆ ಕೊಟ್ಟಿದ್ದಾರೆ! 'ನಾ ನಿನಗೇನು ಬೇಡುವುದಿಲ್ಲ ಎನ್ನ, ಹೃದಯಕಮಲದೊಳು ನೆಲಸಿರು ಹರಿಯೆ' ಎಂದಷ್ಟೇ ಅವರ ಬಯಕೆ. ಮುಂದೆ ಪುರಂದರದಾಸರೂ ಇದನ್ನೇ 'ನಾ ನಿನ್ನೊಳನ್ಯ ಬೇಡುವುದಿಲ್ಲ ಎನ್ನ ಹೃದಯಕಮಲದೊಳು ನಿಂದಿರು ಹರಿಯೆ' ಎಂದು ಹಾಡಿದರು; ದೇವರಿಗೇ 'ನೀನ್ಯಾಕೋ ನಿನ್ನ ಹಂಗ್ಯಾಕೋ' ಎಂದು ಹೇಳಿದರು. ಇದು ಭಕ್ತಿ-ವಿರಕ್ತಿಗಳು ಕೂಡಿಕೊಂಡಿರುವ ಭಾವ; ಮಾಹಾತ್ಮ್ಯ ಜ್ಞಾನ-ದೃಢ ಸ್ನೇಹಗಳು ಸೇರಿರುವ ಭಾವ. ಶ್ರೀಪಾದ ರಾಜರೂ ವ್ಯಾಸರಾಯ ಸ್ವಾಮಿಗಳೂ ಈ ಭಾವವನ್ನು ಬೇರೂರಿಸಲೆಂದೇ ದಾಸಕೂಟವನ್ನು ಕಲ್ಪಿಸಿದರು; ಪುರಂದರದಾಸರನ್ನು ಈ ಭಾವದ ಪುತ್ಥಳಿಯಾಗಿ ಮುಂದೆ ಬಿಟ್ಟರು.

ಪುರಂದರದಾಸರ (ಎಲ್ಲ ಹರಿದಾಸರ) ಕೆಲಸ ಜನಸಾಮಾನ್ಯರ ನಡುವೆ. ಬೇರೆ ಬೇರೆ ವೃತ್ತಿಗಳ, ಪ್ರವೃತ್ತಿಗಳ ಜನರೊಂದಿಗೆ ಬೆರೆತು, ಊರೂರು ತಿರುಗಿ, ಜನರಲ್ಲಿ ಒಂದಾಗಿ, ಅವರವರ ಹವ್ಯಾಸಗಳಲ್ಲಿ ತೊಡಗಿರುತ್ತಲೇ ಅವರಿಗೆ ಭಕ್ತಿಯ ಸ್ವಾರಸವನ್ನು ಮನಗಾಣಿಸುವುದು ದಾಸರ ಕೆಲಸ. ಹೀಗಾಗಿ ಅವರು ಸಮಾಜದಿಂದ ದೂರಾಗುವ, ಅಥವಾ ಜನಸಾಮಾನ್ಯರ ದಾರಿಯನ್ನು ಜರಿಯುವ ಸಂಭವವಿಲ್ಲ. ಜನರ ನಿತ್ಯಜೀವನದಲ್ಲಿ ಕಷ್ಟ ಕಾರ್ಪಣ್ಯಗಳು ಬಂದಾಗ, ಬದುಕಿನ ಸ್ಥಿತಿಗತಿಗಳನ್ನು ಕುರಿತು ಸಂಶಯವೊದಗಿದಾಗ, ಭಕ್ತಿಯ ಊರುಗೋಲನ್ನು ಪಡೆದುಕೊಂಡು ಜನರು ನೆಮ್ಮದಿಯಿಂದಿರಲಿ, ಬಾಳುವೆಗೊಂದು ಪ್ರಯೋಜನವನ್ನು ಪಡೆದುಕೊಳ್ಳಲಿ ಎಂದೇ ದಾಸಕೂಟ ಏರ್ಪಟ್ಟದ್ದು. ಆದುದರಿಂದ ದಾಸರ ಕೆಲಸ ಊರೂರು ತಿರುಗುವುದು, ಕೇರಿಕೇರಿಗಳಲ್ಲಿ ಅಲೆದಾಡುವುದು, ಮನೆಮನೆಗಳ ಮುಂದೆ ನಿಂತು ದೇವರ ಹಿರಿಮೆಯನ್ನು ಹಾಡುವುದು, ದಾರಿ ತಪ್ಪಿದ ಜನರನ್ನು ಎಚ್ಚರಿಸುವುದು, ತಿದ್ದುವುದು, ದಾರಿ ಕಾಣದವರಿಗೆ ದಾರಿ ತೋರಿಸುವುದು, ದಾರಿಯನ್ನು ಕಂಡುಕೊಂಡವರನ್ನು ಹುರಿದುಂಬಿಸುವುದು; ಇತರರಿಗೆ ಆದರ್ಶವಾಗಿ ಸರಳ ಜೀವನ ನಡೆಸುತ್ತ, ವಿರಕ್ತಿಯೂ ಪ್ರವೃತ್ತಿಯೂ ಕಲೆತಿರುವಂತೆ ಬಾಳುವುದು.

ಈ ಕೆಲಸಕ್ಕೆ ಊರವರು, ನೆರೆಹೊರೆಯವರು ನೀಡುವ ಪ್ರತಿಫಲ ದಾಸರಿಗೆ ಅಂದಂದಿನ ಕೂಳು. ಇದರಲ್ಲಿ ವ್ಯಾಪಾರಮನೋಧರ್ಮವೇನು ಇರದು. ದಾಸರು 'ನಾಳೆಗಿಡೆನು, ಸಾಲದೆನೆನು' ಎಂದು ಆಗಲೇ ಪ್ರತಿಜ್ಞೆ ಮಾಡಿರುತ್ತಾರಾಗಿ, ತಮ್ಮ ದಿನನಿತ್ಯದ ಅಗತ್ಯಕ್ಕಿಂತ ಹೆಚ್ಚು ಕೂಳನ್ನು ಗಳಿಸಲು ಒಪ್ಪುವುದಿಲ್ಲ. ಮೇಲಾಗಿ ಅವರು ಸಿದ್ಧವಾದ ಅನ್ನವನ್ನು ಸ್ವೀಕರಿಸುವುದಿಲ್ಲ. ಅವರಿವರ ಮನೆಗೆ ಔತಣಕ್ಕೆಂದು ಹೋಗುವುದಿಲ್ಲ. ಅವರು ಮನೆಗಳಿಂದ ಉಪಾದಾನರೂಪವಾಗಿ ಪಡೆದುಕೊಳ್ಳುವುದು ಬಹುಮಟ್ಟಿಗೆ ಅಕ್ಕಿಯನ್ನು; ಆಗಾಗ ಇತರ ಕಾಳುಬೇಳೆಗಳನ್ನು, ಸಂಬಾರ ದಿನಸಿಗಳನ್ನು. ಅವನ್ನು ತಮ್ಮ ಮನೆಗೊಯ್ದು, ಅಡುಗೆ ಮಾಡಿ ಮನೆಯವರೊಂದಿಗೆ ಊಟಮಾಡುವರು; ಶಿಷ್ಯರಿದ್ದರೆ ಅವರು, ಇತರ ಭಾಗವತರು ದೊರೆತರೆ ಅವರೂ, ಸೇರುವರು. ದಿನದ ಅಡುಗೆಗೆ ಅಗತ್ಯವಾದದ್ದಕ್ಕಿಂತ ಹೆಚ್ಚು ಅಕ್ಕಿಬೇಳೆ ದೊರೆತರೆ ಅದರಿಂದ ಬದುಕಿನ ಇತರ ಅಗತ್ಯಗಳನ್ನು ಪೂರೈಸುವರು. ಇದು ಊಂಛವೃತ್ತಿಯ ನಿಯಮ. ಮನೆಮನೆಯಿಂದ ತಿರುಪೆಯೆತ್ತುವುದು ಆಹಾರಸಾಮಾಗ್ರಿಗಳಷ್ಟನ್ನೇ. ಹಣ, ಉಡುಗೆ ಮತ್ತಿತ್ತರ ಕಾಣಿಕೆಗಳನ್ನು ಮುಟ್ಟಬಾರದು. ಒಟ್ಟಿನಲ್ಲಿ

'ಒಬ್ಬರ ಹಂಗಿರದೆ' ಸರಳವಾದ ಸಾರ್ಥಕವಾದ ಬಾಳನ್ನು ಕಳೆಯುವುದು, ತಾವಾಗಿ ಬಡತನವನ್ನು ಆರಿಸಿಕೊಂಡು ದೈನ್ಯವಿಲ್ಲದೆ ಬದುಕುವುದು ಉದ್ದೇಶ.

೨

ಈ ತೆರನಾದ ಉದಾತ್ತ ಉದ್ದೇಶದಿಂದ ಕೂಡಿದವರೇ ದಿಟವಾಗಿ ಹರಿದಾಸರು. ವ್ಯಾಸರಾಯಸ್ವಾಮಿಗಳು ಪುರಂದರದಾಸರನ್ನು ಹೊಗಳಿ ರಚಿಸಿರುವ ಕೃತಿಯಲ್ಲಿ ಗ್ರಾಸಕ್ಕಿಲ್ಲದೆ ಪೋಗಿ ಪರರ ಮನೆಗಳ ಪೊಕ್ಕು, ಬೇಸರಿಲ್ಲದ ಕಾಡಿ ಬೇಡಿ ಬಳಲಿಸುತ ಕಾಸು ಗಳಿಸುವವನು, ಡಂಭಕದಿಂದೆ ತುಳಸಿಮಾಲೆ ಧರಿಸಿ ಹರಿಸ್ಮರಣೆ ಮಾಡಿ ಜನರ ಮುಂದೆ ಸಂಭ್ರಮದಿ ತಾನುಂಬ ಊಟ ಬಯಸುವವನು ಹರಿದಾಸನಲ್ಲವೆಂದು ಸ್ಪಷ್ಟಮಾಡಿಸಿದ್ದಾರೆ. ಹರಿದಾಸ ಜೀವನಕ್ಕೆ ಆಧ್ಯಾತ್ಮಿಕ ಪ್ರೌಢಿಮೆ ಹಿನ್ನೆಲೆಯಲ್ಲಿರಬೇಕು; ಭಕ್ತಿ-ವಿರಕ್ತಿಗಳು ದೃಢವಾಗಿರಬೇಕು; ಇದೊಂದು ಸಾಧನೆಯೆಂಬ ಅರಿವಿರಬೇಕು. ಲೋಕೋಪಕಾರಕ್ಕಾಗಿ ಹರಿದಾಸ್ಯ ಎನ್ನುವ ನಿಶ್ಚಯವಿರಬೇಕಾದುದು ಮುಖ್ಯ; ಅದಕ್ಕೆ ಮೊದಲು ತನ್ನ ಸ್ವರೂಪೋದ್ಧಾರವಾಗಿರಬೇಕು, ಅದನ್ನು ಒದಗಿಸುವುದೇ ಹರಿದಾಸದೀಕ್ಷೆಯ ಸ್ವಾರಸ್ಯ.

ಪುರಂದರದಾಸರರಿಗೆ (ದಿಟವಾದ ಎಲ್ಲ ಹರಿದಾಸರಿಗೆ) ಲೌಕಿಕ ಪ್ರಸಕ್ತಿಯಾಗಲಿ, ಪ್ರಾಪಂಚಿಕ ಆಶೆ ಆಕಾಂಕ್ಷೆಗಳಾಗಲಿ ಇಲ್ಲದಿರುವುದರಿಂದ ಊಂಛವೃತ್ತಿಯನ್ನು ಹಿಡಿದರೂ ಅವರಿಗೆ ಹೀನಾಯವೇನಿಲ್ಲ. 'ನನಗೆ ಇಂದಿನ ಕೂಳು ನೀಡಿ ನೀ ಧನ್ಯನಾದೆ' ಎನ್ನುವ ಸ್ವಾಭಿಮಾನ ಅವರದ್ದು. ಅದರೂ ಊಂಛವೃತ್ತಿಯಲ್ಲಿರುವ ದೈನ್ಯಭಾವ ಅವರ ಗಮನಕ್ಕೆ ಬಾರದಿರಲಿಲ್ಲ. 'ಕಾಯಲಾರೆನು ಕೃಷ್ಣ ಕಂಡವರ ಬಾಗಿಲನು, ನಾಯಿ ಕುನ್ನಿಗಳಂತೆ ಪರರ ಪೀಡಿಸುತ' ಎಂದು ಕೊರಗಿದುದುಂಟು. ಆದರೆ ತಾವು ಕೈಗೊಂಡಿರುವ ಕೆಲಸ ದೊಡ್ಡದು, ಗುರುಗಳಿಂದ ಏರ್ಪಟ್ಟುದು, ಎಂಬ ವಿಶ್ವಾಸ ಅವರನ್ನು ಕಾಯಿತು. 'ಹರಿದಾಸರಿಗಿನ್ನು ಸರಿಯುಂಟೆ?' ಎಂದವರು ಅವರು. 'ಇದು ಭಾಗ್ಯವಿದು ಭಾಗ್ಯವಯ್ಯ, ಪದುಮನಾಭನ ಪಾದಭಜನೆ ಸುಖವಯ್ಯ' ಎಂದು ಹಿಗ್ಗಿದರು. ಹರಿದಾಸಜೀವನದಲ್ಲೂ ತೊಡಕುಗಳು, ಜಂಜಾಟ, ನಿಂದನೆ ತಪ್ಪುವಂತಿರಲಿಲ್ಲ. ಆದರೆ ಇದರಿಂದ ದಾಸರು ಧೈರ್ಯಗೆಡಲಿಲ್ಲ. 'ಯಾಕೆ ಕಕುಲಾತಿ ಪಡುವೆ ಎಲೆ ಮರುಳೆ, ಲೋಕಮೂರನು ಆಳ್ವ ಶ್ರೀನಿವಾಸನು ನಮ್ಮ ಸಾಕಲಾರದೆ ಬಿಡುವನೇ?'; 'ನಾನೇಕೆ ಬಡವನು, ನಾನೇಕೆ ಪರದೇಶಿ, ಶ್ರೀನಿಧೇ ಹರಿ ಎನಗೆ ನೀನಿರುವತನಕ?' 'ಎನ್ನ ಕಡೆ ಹಾಯಿಸುವುದು ನಿನ್ನ ಭಾರ, ನಿನ್ನ ನೆನೆಯುತಿಹುದೆ ಎನ್ನ ವ್ಯಾಪಾರ' ಎಂದು ದುಗುಡವನ್ನು ಮೆಟ್ಟಿ ಮೇಲೆ ನಿಂತರು.

ಜನರು ತಮ್ಮನ್ನು ಜರಿದು ಮೂದಲಿಸಿ ಸಣ್ಣಮಾತನ್ನಾಡಿದಾಗ, ಅವರು 'ನಿಂದಕರಿರಬೇಕು' ಎಂದು ಕೊಂಡರು. ಅದರಿಂದ ತಮ್ಮ ಆತ್ಮವಿಶ್ವಾಸವೇನು ಕದಡಲಿಲ್ಲ, 'ಹಂದಿಯಿದ್ದರೆ ಕೇರಿ ಹ್ಯಾಂಗೆ ಶುದ್ಧಿಯೋ ಹಾಂಗೆ' ಎಂದು ಕಟುವಾದ ಉಪಮೆಯನ್ನು ಅವರತ್ತ ಬಿಸಾಡಿದರು-

'ದುಷ್ಟಜನಂಗಳು ಈ ಸೃಷ್ಟಿಯೊಳಗಿದ್ದರೆ
ಶಿಷ್ಟರಿಗೆಲ್ಲ ಕೀರ್ತಿಗಳು ಇಷ್ಟಪ್ರದ ಶ್ರೀಕೃಷ್ಣ
ಇಷ್ಟೆ ನಿನ್ನೊಳು ವರವ ಬೇಡುವೆನಯ್ಯ

ದುರುಳಜನಂಗಳು ಚಿರಕಾಲವಿರುವಂತೆ
ಕರವ ಮುಗಿದು ವರವ ಬೇಡುವೆನು'

ಎಂದು ನಗೆಯಾಡಿದರು. ತಾವು ಕೈಗೊಂಡ ಕೆಲಸದಲ್ಲಿ ಅಷ್ಟು ಅಚಲವಾದ ಶ್ರದ್ಧೆ ಅವರದ್ದು. ಈ ಶ್ರದ್ಧೆಯ ಬಳುವಳಿಯೂ ಅವರಿಗೆ ಗುರುಗಳಿಂದಲೇ ಬಂದದ್ದು. ಜೀವತ್ರೈ ವಿಧ್ಯವನ್ನು ಒಪ್ಪಿಕೊಂಡು ಅನಂತ ಜೀವರಾಶಿಗಳಲ್ಲಿ ಸ್ವರೂಪ ಯೋಗ್ಯತೆ ಅಧಿಕಾರಗಳಲ್ಲಿ ತಾರತಮ್ಯವಿರುವುದನ್ನು ಗಮನಿಸಿ, ಅನಾದಿಸಿದ್ಧವಾದ ಕರ್ಮ, ಅಜ್ಞಾನಗಳಿಂದಾಗಿ ಜೀವರ ಕರ್ಮ, ಪ್ರವೃತ್ತಿ ಭೋಗಗಳಿಗೂ ಭೇದವಿರುವುದನ್ನು ಕಂಡುಕೊಂಡ ಹರಿದಾಸರು ಎಲ್ಲರೂ ತಮ್ಮಂತೆಯೇ ಸದಾಚಾರ ಸಂಪನ್ನರಾಗಿರುವರು. ಸಜ್ಜನರು, ಸತ್ತ್ವ ಉತ್ಕರ್ಷೆಯುಳ್ಳವರು, ಪ್ರಗಲ್ಭಜೀವಿಗಳು ಎಂದು ನಿರೀಕ್ಷಿಸಲಾರರು. ವ್ಯಾಸರಾಯಸ್ವಾಮಿಗಳು ಜನರ ಪಾಡನ್ನು ಬಣ್ಣಿಸುತ್ತ ಒಬ್ಬೊಬ್ಬರನ್ನೂ

'ಮಾಯೆಯೆಂಬ ದುಷ್ಟರಾಯ
ಮಾನವೆಂಬ ಬಿನುಗು ಮಂತ್ರಿ
ಇಂದ್ರಿಯಗಳೆಂಬ ತಿರಿದೋಡುವ ಪರಿವಾರ
ಬಿಗಿದು ಕಟ್ಟಿ'

-ತಾವು ಕ್ರೋಧ ಮೊದಲಾದ ಹಗೆಗಳಿಗೆ ಕೊಟ್ಟರು ಎಂದು ವಿವರಿಸಿದರು. ಈ ಕಾರಣದಿಂದ ಜನರು ಅನೇಕ ಬಗೆಯವರು, ಹಲವು ಪರಿಯ ಕೆಲಸದಲ್ಲಿ ತೊಡಗಿರುವವರು, ಬೇರೆ ಬೇರೆ ಪ್ರವೃತ್ತಿಗಳುಳ್ಳವರು, ಹರಿದಾಸರು ಜನರನ್ನು ಕುರಿತಂತೆ ಸಹನೆಯನ್ನೂ, ಸಹಾನುಭೂತಿಯನ್ನೂ ಬೆಳೆಸಿಕೊಂಡುದು ಸಹಜವೇ. ಜನರ ನಡುವೆ ಇದ್ದುಕೊಂಡು, ಅವರೊಂದಿಗೆ ಬೆರೆತು, ಅವರಿಗೆ ಹಿತವೆನಿಸುವ ಕೆಲಸವನ್ನೇ ಕೈಗೊಂಡವರಿಗೆ ಹಟಮಾರಿತನ ಸಲ್ಲದು. ತನ್ನ ಬದುಕಿನ ನಿಷ್ಠೆಯನ್ನು ಬಿಟ್ಟುಕೊಡದೆ, ಇತರರ ವಿಚಾರವಾಗಿ ಉದಾರವಾಗಿ ಒಡಲನ್ನು ಹೊಂದಿರುವುದು ಹರಿದಾಸ ಜೀವನದ ಒಂದು ಪ್ರಕಾರವೇ. ಶ್ರೀಪಾದರಾಜರ ಒಂದು ಉಗಾಭೋಗ ಇದು-

'ಮನೆಯಿಂದ ಸಂತೋಷ ಕೆಲವರಿಗೆ ಲೋಕದಲ್ಲಿ
ಧನದಿಂದ ಸಂತೋಷ ಕೆಲವರಿಗೆ ಲೋಕದಲ್ಲಿ
ವನಿತೆಯಿಂ ಸಂತೋಷ ಕೆಲವರಿಗೆ ಲೋಕದಲ್ಲಿ
ತನಯರಿಂ ಸಂತೋಷ ಕೆಲವರಿಗೆ ಲೋಕದಲ್ಲಿ
ಇನಿತು ಸಂತೋಷ ಅವರವರಿಗಾಗಲಿ ನಿನ್ನ
ನೆನೆವೊ ಸಂತೋಷ ಎನಗಾಗಲಿ ನಮ್ಮ ರಂಗ ವಿಠಲ.'

ಹರಿದಾಸರು ಕೈಗೊಂಡ ಲೋಕೋಪಕಾರದ ಕೆಲಸ ಸಮರ್ಥವಾಗಿ ಜರುಗಲು ಅವರು ಜನರೊಂದಿಗೆ ಬೆರೆತು ಅವರ ಕಷ್ಟಸುಖಗಳನ್ನೂ ಬಯಕೆ ಬಿನ್ನಾಣಗಳನ್ನೂ ಅಡ್ಡಿ ಆತಂಕಗಳನ್ನೂ ಅರಿತುಕೊಳ್ಳುವುದು ಮುಖ್ಯವಾದ ಸಾಧನೆ. ಸಂನ್ಯಾಸಿಗಳ ವಿರಕ್ತಿಗೂ ಹರಿದಾಸರ ವಿರಕ್ತಿಗೂ ಒಂದು ಅಂತರವಿದೆ. ಸಂನ್ಯಾಸಿಗಳು ವಿರಕ್ತರಾಗಿ ಸಂಸಾರವನ್ನು ಹೇಯವೆಂದು ಬಗೆದು ಅದರಿಂದ

ದೂರವಾಗುತ್ತಾರೆ; ದೇಹ ಯಾತ್ರೆಗೆ ಅಗತ್ಯವಾದಷ್ಟು ಮಾತ್ರ ಜನರೊಂದಿಗೆ ಸಂಪರ್ಕವನ್ನಿರಿಸಿ ಕೊಂಡು, ಉಳಿದಂತೆ ಖಡ್ಗವಿಷಾಣಕಲ್ಪರಾಗಿ (ಖಡ್ಗಮೃಗದ ಕೊಂಬಿನಂತೆ ಒಂಟಿಯಾಗಿ) ಇರುತ್ತಾರೆ. ಹರಿದಾಸರು ವಿರಕ್ತರಾದರೂ ಸಂಸಾರದ ಅಸಾರತೆಯನ್ನು ಮನಗಂಡರೂ ಸಂಸಾರವನ್ನು ಬಿಟ್ಟೋಡುವಂತಿಲ್ಲ. ಏಕೆಂದರೆ ಅವರಿಗೊಂದು ಕರ್ತವ್ಯಪ್ರಜ್ಞೆಯಿದೆ. ಸಂನ್ಯಾಸಿಗೆ ಕರ್ತವ್ಯ ವೆಂಬುದೇನೂ ಇರದು. ಯಾವ ಹೊಣೆಗಾರಿಕೆಯೂ ಇರದು. ಹರಿದಾಸರಿಗಾದರೋ ಲೋಕ ಸಂಗ್ರಹ ಎನ್ನುವ ವ್ರತವಿದೆ. ಜನರನ್ನು

'ಗಾಳಿ ಬಂದ ಕೈಯಲ್ಲಿ ತೂರಿಕೊಳ್ಳಿರೋ
ನಾಳೆ ಎನ್ನಬೇಡಿ ಇದೇ ವೇಳೆ ಬನ್ನಿರೋ'

'ಮಾನವಜನ್ಮ ದೊಡ್ಡದು ಇದ
ಹಾನಿ ಮಾಡಲಿಬೇಡಿ ಹುಚ್ಚಪ್ಪಗಳಿರಾ'

ಎಂದು ಮೊದಲಾಗಿ ಎಚ್ಚರಿಸಬೇಕಾದುದು ಹರಿದಾಸರು ಕೆಲಸ. ಇದು ಸಮಾಜದ ಚೌಕಟ್ಟಿನಲ್ಲಿಲ್ಲಯೇ ಸಾಗಬೇಕಾದುದರಿಂದ ಹರಿದಾಸರ ಹೊಣೆ ಗೃಹಸ್ಥರಾಗಿಯೇ ಉಳಿಯುವುದು.

ವಿರಕ್ತರಾಗಿ ಗೃಹಸ್ಥರಾಗಿರುವುದು ಅಸಿಧಾರಾವ್ರತವೇ, ಕತ್ತಿಯ ಅಲುಗಿನ ಮೇಲೆ ನಡೆಯುವಷ್ಟು ಕಷ್ಟವೇ. ಅದಕ್ಕಾಗಿ ಹರಿದಾಸರಿಗೆ ವಿಶೇಷ ಸಾಧನೆಗಳನ್ನೂ ಹೇಳಿದ್ದಾರೆ. ಇದು ಭಾಗವತ ಧರ್ಮದಲ್ಲಿ ಮುಖ್ಯವಾಗಿ ಬರುವ ವಿಚಾರ. ಭಾಗವತ ಧರ್ಮದ ಕೈಗನ್ನಡಿಯಾದ ಭಗವದ್ಗೀತೆಯಲ್ಲಿ ಬರುವ ಕರ್ಮಯೋಗವೂ ಇದೇ ಪ್ರಕಾರಕ್ಕೆ ಸೇರಿದ್ದು. ಅಲ್ಲಿ ಸಂನ್ಯಾಸವೆಂಬ ಮಾತಿಗೆ ಆಶ್ರಮಸಂನ್ಯಾಸವೆನ್ನುವ ಅರ್ಥ ಎಲ್ಲಿಯೂ ಹೊರಡುವುದಿಲ್ಲ; ಸಂಕಲ್ಪ ಸಂನ್ಯಾಸವೇ ಸಂನ್ಯಾಸ ('ನ ಹ್ಯಸನ್ಯಸ್ತ ಸಂಕಲ್ಪೋ ಸಂನ್ಯಾಸೀ ಭವತಿ ಕಶ್ಚನ') ಮತ್ತು ಅಲ್ಲಿ ಲೋಕಸಂಗ್ರಹ (ಎಂದರೆ ಜನರಿಗೆ ನೆರವಾಗಿ ಅವರನ್ನು ಮೇಲೆತ್ತುವುದು) ಅವಶ್ಯವಾದ ಕರ್ತವ್ಯವೆಂದು ಕಾಣಿಸಲಾಗಿದೆ ('ಚಿಕೀರ್ಷುರ್ಲೋಕಸಂಗ್ರಹಂ', 'ಲೋಕಸಂಗ್ರಹಮೇವಾಪಿ ಸಂಪಶ್ಯನ್' ಇತ್ಯಾದಿ'), ಆದುದರಿಂದ ಹರಿದಾಸ ಪಂಥಕ್ಕೆ ಮಾರ್ಗದರ್ಶಕ ವಾದುದು ಭಾಗವತಧರ್ಮ.

ಭಾಗವತಧರ್ಮವೆಂದರೆ ಭಾಗವತಪುರಾಣದಲ್ಲಿ ಹೇಳಿರುವ ಧರ್ಮವೆಂದು ಬಗೆಯಬಾರದು. ಭಾಗವತಪುರಾಣ ಮೈದಳೆಯುವ ಎಷ್ಟೋ ಕಾಲಕ್ಕೆ ಮೊದಲೇ ಭಾಗವತಧರ್ಮ ನಮ್ಮ ದೇಶದಲ್ಲಿ ಬಳಕೆಯಲ್ಲಿದ್ದಿತು. ದಿಟವಾಗಿ ಭಾಗವತ ಪುರಾಣಕ್ಕೂ ಭಾಗವತ ಧರ್ಮಕ್ಕೂ ನಂಟು ಇರದು. ಭಾಗವತಧರ್ಮದ ಒಕ್ಕಣೆ ಮಹಾಭಾರತದ ಮೋಕ್ಷಧರ್ಮಪರ್ವದ ೩೩೪ನೆಯ ಅಧ್ಯಾಯದಿಂದ ಮೊದಲಾಗುವ ನಾರಾಯಣೀಯವೆಂಬ ಪರಿಚ್ಛೇದದಲ್ಲಿ ಬರುತ್ತದೆ. ಪಾಂಚರಾತ್ರಶಾಸ್ತ್ರವೂ ಭಾಗವತ ಧರ್ಮವನ್ನು ಅನುಸರಿಸಿದೆ. ಶಂಕರಾಚಾರ್ಯರೂ ಭಾಗವತಧರ್ಮದ ಮೂಲ ಪ್ರಮೇಯಗಳನ್ನು ಒಪ್ಪಿಕೊಂಡಿದ್ದಾರೆ (ಬ್ರಹ್ಮಸೂತ್ರಭಾಷ್ಯ ೨,೨,೪೨). ಈ ಧರ್ಮದ ಮೂಲ ಪ್ರಮೇಯವೆಂದರೆ ಭಗವಚ್ಛಬ್ಧವಾಚ್ಯನಾದ ವಾಸುದೇವನಿಗೆ ಸಂಕರ್ಷಣ, ಪ್ರದ್ಯುಮ್ನ ಮತ್ತು ಅನಿರುದ್ಧ ರೂಪಗಳಿದ್ದು ನಾಲ್ವರೂ ಕೂಡಿ ಚತುರ್ವ್ಯೂಹಗಳೆಂದು ಜಗತ್ತಿನ ಎಲ್ಲ ಕೆಲಸಗಳನ್ನೂ

ಮಾಡಿಸುವರೆಂಬುದು. ಈ ಧರ್ಮದ ಪ್ರಕಾರ ಚತುರ್ಮುಖಬ್ರಹ್ಮನಿಂದ ಹಿಡಿದು ಹುಲ್ಲುಕಡ್ಡಿಯ ವರೆಗೆ ಜಗತ್ತೆಲ್ಲವೂ ಭಗವಂತನ ವ್ಯೂಹವೇ. ಆದುದರಿಂದ ಜಗತ್ತನ್ನು ಸುಳ್ಳಿಂದಾಗಲಿ ಜೊಳ್ಳಿಂದಾಗಲಿ ಯಾರೂ ತೊರೆಯುವಹಾಗಿಲ್ಲ. ಎಲ್ಲವೂ (ತಾನು, ತನ್ನದು, ಒಳಗಿನ ವಿವರಗಳು, ಹೊರಗಿನ ಪದಾರ್ಥಗಳು ಎಲ್ಲವೂ) ಭಗವಂತನಿಗೇ ಸೇರಿದ್ದು ಎಂದು ('ಯತ್ತದ್ ಭಾಗವತಂ ಸರ್ವಂ ಇತಿ') ಭಾವಿಸುವುದೇ ಈ ಧರ್ಮದ ತಾತ್ಪರ್ಯ (ಮೋಕ್ಷಧರ್ಮ, ೩೩೫).

ಭಾಗವತಧರ್ಮವನ್ನು ಏಕಾಂತ ಧರ್ಮವೆಂದೂ ಕರೆಯುತ್ತಾರೆ. ಏಕೆಂದರೆ ಇಲ್ಲಿ ಏಕಾಂತ ಭಕ್ತಿಯ ಹೆಗ್ಗಳಿಕೆಯನ್ನು ಹೇಳಿದೆ (ಭಗವದ್ಗೀತೆಯಲ್ಲಿ 'ಏಕಭಕ್ತಿರ್ವಿಶಿಷ್ಯತೇ' ೭, ೧೭ ಎಂಬ ಮಾತನ್ನು ಗಮನಿಸಿ). ಏಕಾಂತ ಧರ್ಮವು ಪ್ರವೃತ್ತಿ ಪರವಾದುದು; ನಿವೃತ್ತಿ ಪರವಾದುದಲ್ಲ. 'ಪ್ರವೃತ್ತಿ ಲಕ್ಷಣಂ ಧರ್ಮಂ ಋಷಿರ್ನಾರಾಯಣೋಽಬ್ರವೀತ್' ಎಂಬ ಸ್ಪಷ್ಟವಾದ ಮಾತು ಮಹಾಭಾರತದ ಮೋಕ್ಷಧರ್ಮಪರ್ವದಲ್ಲೇ (೨೧೭, ೨) ಬರುತ್ತದೆ. ಪ್ರವೃತ್ತಿ ಲಕ್ಷಣವೆಂದರೆ ಸಂಸಾರದಲ್ಲೇ ತೊಡಗಿದ್ದು ಗೃಹಸ್ಥನೋ ಬ್ರಹ್ಮಚಾರಿಯೋ ವಾನಪ್ರಸ್ಥನೋ ಆಗಿದ್ದು ಉಂಛ ವೃತ್ತಿಯನ್ನು ಹಿಡಿದು ಸಾಧನೆಯನ್ನು ಮುಂದುವರಿಸುವುದು. ಈ ನಿರ್ದೇಶನವು ಭಾರತದ ನಾರಾಯಣೀಯ ಪರಿಚ್ಛೇದದಲ್ಲೇ ಬಂದಿದೆ (೩೩೪, ೧). ಪರಮಪುರುಷಾರ್ಥ ಸಾಧನೆಗೆ ಸಂನ್ಯಾಸಾಶ್ರಮವೇ ಯುಕ್ತವಾದುದೆಂಬ ನಿಲುವು ಈ ಧರ್ಮದ್ದಲ್ಲ. ಭಗವಂತನು 'ಸರ್ವಾಶ್ರಮಾಭಿಗಮನ'. ಏಕಾಂತ ಭಕ್ತರು ಯಾವ ಆಶ್ರಮದಲ್ಲಿದ್ದು ಯಾವ ಕರ್ಮವನ್ನೇ ಮಾಡಿದರೂ ಅದು ಭಗವಂತನಿಗೆ ಶಿರೋಧಾರ್ಯವೇ (ಅಲ್ಲೇ ೩೪೩, ೬೪). ಮತ್ತು ಜಾತಿ, ಮತ, ಕುಲ ವಂಶಗಳ ಎಣಿಕೆಯಿಲ್ಲ. ಯಾರಾದರೂ ಅಧಿಕಾರವನ್ನು ಪಡೆದುಕೊಂಡು ಸಾಧನೆಯನ್ನು ಕೈಗೊಳ್ಳಬಹುದು ಪುರಂದರದಾಸರು-

'ಆವ ಕುಲದವನಾದರೇನು
ಆವನಾದರೇನು ಆತ್ಮ
ಭಾವವರಿತ ಮೇಲೆ ಪ

ಹಸಿ ಕಬ್ಬು ಡೊಂಕಿರಲು ಅದರ
ರಸ ಡೊಂಕೇನೋ ವಿಷಯಾಸೆಗಳ ಬಿಟ್ಟು
ಹಸನಾದ ಗುರುಭಕ್ತಿ ಮಾಡೊ ೧
ನಾನಾ ವರ್ಣದ ಆಕಳು ಅದು
ನಾನಾ ವರ್ಣದ ಕ್ಷೀರವೇನೋ
ಹೀನ ಕರ್ಮಗಳನು ಬಿಟ್ಟು ಹಿಗ್ಗಿ
ಜ್ಞಾನ ಒಲಿಸಿರೋ ೨

ಕುಲದ ಮೇಲೆ ಹೋಗಬೇಡ ಮನುಜ
ಕುಲವಿಲ್ಲ ಜ್ಞಾನಿಗಳ ವರಪುರಂದರ ವಿ
ಠಲನ ಪಾದವ ಸೇರಿ ಮುಕ್ತನಾಗೋ ೩

ಎಂದು ಹೇಳಿದಾಗ ಭಾಗವತದರ್ಮದ ನಿಷ್ಠೆಯನ್ನೇ ಹಿಡಿದರು.

ಹರಿದಾಸರ ಸಾಧನ ವಿಚಾರವಾಗಿ, ವರ್ಣಾಶ್ರಮ ಧರ್ಮಗಳ ಪಾಲನೆಗಿಂತ ಹೆಚ್ಚಾಗಿ ಭಾಗವತಧರ್ಮದ ಸಾಧನಾ ಚತುಷ್ಟಯದ ಬಳಕೆಯಿದೆ. ಭಾಗವತ ಪಂಥದಲ್ಲಿ ಭಗವದನುಸಂಧಾನಕ್ಕೆ ಅಭಿಗಮನ (ಮುಂಜಾನೆ ಎದ್ದೊಡನೆ ಮಾಡಬೇಕಾದ ಹರಿಸ್ಮರಣೆ, ಇತ್ಯಾದಿ), ಉಪಾದಾನ (ಪೂರ್ವಾಹ್ನದಲ್ಲಿ ಪೂಜಾದ್ರವ್ಯಗಳ ಸಂಪಾದನೆ ಮತ್ತು ಸಿದ್ಧತೆ), ಇಜ್ಯಾ (ಮಧ್ಯಾಹ್ನದಲ್ಲಿ ಪೂಜೆ), ಸ್ವಾಧ್ಯಾಯ (ಅಪರಾಹ್ನದಲ್ಲಿ, ಸಚ್ಛಾಸ್ತ್ರಪಠನ, ಚಿಂತನ, ಜಪ ಇತ್ಯಾದಿ) ಮತ್ತು ಯೋಗ (ರಾತ್ರಿ ಧ್ಯಾನ,) ಎಂಬ ಪಂಚಕರ್ಮಗಳನ್ನು ಸಾಧನೆಯೆಂದು ಹೇಳಿ ಪಂಚ ಕಾಲಗಳಿಗೆ ಹೊಂದಿಸಿದ್ದಾರೆ. ಹರಿದಾಸರು ಈ ವಿವರಗಳನ್ನೆಲ್ಲ ತಮ್ಮ ದಿನನಿತ್ಯದ ಬದುಕಿನಲ್ಲಿ ಅಳವಡಿಸಿಕೊಂಡಿದ್ದಾರೆ.

ಆದರೆ ಕೆಲವೊಂದು ಮಾರ್ಪಾಟುಗಳನ್ನು ಮಾಡಿಕೊಂಡಿದ್ದಾರೆನ್ನಿ. ಉಪಾದಾನವೆಂಬ ಕರ್ಮಾಂಗದಲ್ಲಿ ಉಂಛವೃತ್ತಿಯನ್ನು ಸೇರಿಸಿಕೊಳ್ಳುತ್ತಾರೆ; ತಮ್ಮ ಊಟವೂ ಭಗವದಾರಾಧನೆಯೆಂಬ ಪೂಜೆಯ ಪ್ರಕಾರವೇ ಎಂಬ ಭಾವನೆ ('ಸಕಲವೂ ಹರಿಸೇವೆಯೆನ್ನಿ'). ದಿಟವಾಗಿ ಉಪಾದನವೆಂಬ ಮಾತಿಗೆ ಪೂಜೆಗೆಂದು ಹೂವು, ಹಣ್ಣು, ಧೂಪ, ನೀರು ಮೊದಲಾದ ಸಾಮಗ್ರಿಗಳನ್ನು ಹೊಂದಿಸಿಕೊಳ್ಳುವುದು ಎಂದರ್ಥ. ಆದರೆ ಹರಿದಾಸರು ಇದನ್ನು ಅಭಿಗಮನದಲ್ಲೇ ಸೇರಿಸಿಕೊಂಡು, ಉಪಾದಾನವೆಂದರೆ ತಮ್ಮ ಅಡುಗೆಗೆ ಬೇಕಾದ ಸಾಮಗ್ರಿಯನ್ನು ಹೊಂದಿಸಿಕೊಳ್ಳುವುದು ಎಂಬರ್ಥವನ್ನು ಹೇಳುತ್ತಾರೆ. ತಾವು ಮಾಡುವ ಊಟ ತಮ್ಮೊಳಗಿರುವ ಬಿಂಬರೂಪೀ ಪರಮಾತ್ಮನಿಗೆ ಮಾಡುವ ಆರೋಗಣೆಯೇ ತಾನೆ? ಇದೇ ಕಾಲದಲ್ಲಿ ಭಗವನ್ನಾಮಸಂಕೀರ್ತನವನ್ನೂ ನಡೆಸುತ್ತಾರೆ. ಬೀದಿಗಳಲ್ಲಿ ನಡೆಯುತ್ತ, ತಂಬೂರಿ ತಾಳಗಳನ್ನು ಹಿಡಿದು, ಪದಗಳನ್ನು ಹಾಡಿ ಜನರನ್ನು ಸನ್ಮಾರ್ಗಕ್ಕೆ ತಿರುಗಿಸಲೆತ್ನಿಸುವ ವೇಳೆ ಇದೇ.

ಮಧ್ಯಾಹ್ನದ 'ಇಜ್ಯಾ' ಎಂಬ ಕರ್ಮ ವಿಭಾಗದಲ್ಲಿ ಪೂಜೆ ಸೇರುವುದಷ್ಟೆ. ಭಾಗವತ ಧರ್ಮದಲ್ಲಿ ಪೂಜೆ ವೇದೋಕ್ತವೇ ಆಗಿರಬೇಕೆಂಬ ನಿಯಮವಿಲ್ಲ; ಪೂಜೆಯಲ್ಲಿ ವೈದಿಕ, ತಾಂತ್ರಿಕ, ಮಿಶ್ರ ಎಂದು ಮೂರು ಬಗೆಗಳನ್ನು ಹೇಳಿ ಯಾವುದಾದರೂ ಆದೀತೆಂದು ಕಲ್ಪನೆಯಿದೆ. ಸಾಮಾನ್ಯವಾಗಿ ಹರಿದಾಸರು ನಡೆಸುವ ಪೂಜೆ ಮಿಶ್ರವೆಂಬ ಪ್ರಕಾರಕ್ಕೆ ಸೇರಿದ್ದು; ವೈದಿಕ ಮಂತ್ರಗಳು, ತಾಂತ್ರಿಕ ಪ್ರಕ್ರಿಯೆಗಳು. ಅಪರಾಹ್ನದ 'ಸ್ವಾಧ್ಯಾಯ'ದಲ್ಲಿ ಪುರಾಣಶ್ರವಣ, ಭಕ್ತರ ಚರಿತ್ರೆಗಳ ಪಠನ, ಸತ್ಸಂಗ, ಹರಿಕಥೆ ಮೊದಲಾದವು ಸೇರುತ್ತವೆ; ಹರಿದಾಸರು ಕವಿಗಳೂ ಆಗಿದ್ದರೆ ಕೃತಿ ರಚನೆ ಈ ವೇಳೆ ನಡೆಯಬೇಕು. ಪುರಂದರದಾಸರಾದರೆ ಆಶುಕವಿಗಳು; ಅವರ ಉಂಛವೃತ್ತಿಯ ಸಮಯದಲ್ಲೇ ಕೃತಿರಚನೆಯು ಸಾಗುತ್ತಿದ್ದಿತು. ಮುಂದೆ ತ್ಯಾಗರಾಜಸ್ವಾಮಿಗಳೂ ಹೀಗೆಯೇ ಮಾಡುತ್ತಿದ್ದರು. ರಾತ್ರಿಯ 'ಯೋಗ' ಬಿಂಬೋಪಾಸನೆಗೆ, ಮಾನಸಪೂಜೆಗೆ ಪ್ರಶಸ್ತವಾದ ಅವಕಾಶ.

ಹೀಗೆ ಹರಿದಾಸರ ನಿತ್ಯಜೀವನದಲ್ಲಿ ಸಮಾಜವನ್ನು ಕುರಿತಂತೆ ಕರ್ತವ್ಯ ನಿರ್ವಹಣೆ ಸಾಗುತ್ತಿದ್ದಿತು. ಸತ್ಸಂಗಕ್ಕೆ ಹೆಚ್ಚಿನ ಆದರವಿದ್ದುದರಿಂದ 'ಸ್ವಾಧ್ಯಾಯ'ದ ವೇಳೆಯಲ್ಲಿ ಹರಿದಾಸರ ಸುತ್ತ ಊರವರು, ಆಸಕ್ತರು, ಭಕ್ತರು, ಶಿಷ್ಯರು ನೆರೆದು ಗೋಷ್ಠಿಯಲ್ಲಿ ಭಜನೆ, ಪುರಾಣ ಪ್ರವಚನ, ನಾಮಸಂಕೀರ್ತನ ಮೊದಲಾದವು ನಡೆಯುತ್ತಿದ್ದುವು. ಈ ಪದ್ಧತಿ ಈಗ್ಗೆ ಸುಮಾರು ಐವತ್ತು ಅರವತ್ತು ವರ್ಷಗಳವರೆಗೂ ಅಲ್ಲಲ್ಲಿ ಉಳಿದಿದ್ದಿತು. ಈಗ ಸಂಪೂರ್ಣವಾಗಿ

ಮರೆಯಾಗಿದೆಯೆನ್ನಿ. ಭಾಗವತಧರ್ಮದ, ಹರಿದಾಸಪಂಥದ ಹಿನ್ನೆಲೆಯನ್ನು ಕುರಿತು ಸ್ವಲ್ಪ ಪರಿಶೀಲಿಸಬೇಕಾದುದಿದೆ. ವ್ಯಾಸಕೂಟದವರು ಹರಿದಾಸರನ್ನು ಹೀನಾಯವಾಗಿ ಕಂಡಂತೆಯೇ ವೇದಾಂತಿಗಳು ಭಾಗವತರನ್ನು ಕೀಳಾಗಿ ಕಂಡುದುಂಟು. ಇದಕ್ಕೆ ಕಾರಣವೇನೆಂದು ತಿಳಿಯಲು ಸಮಾಜದ ಪೂರ್ವಗ್ರಹಣಗಳನ್ನು ಗಮನಿಸಬೇಕು.

ಭಾಗವತರು ಮತ್ತು ಹರಿದಾಸರು ಸಭ್ಯರೆನಿಸಿಕೊಂಡ ಸಮಾಜ ವಿಭಾಗಕ್ಕೆ ಹೊರಗಾದವರು. ವೈದಿಕ ಮೇಲ್ಮೆಯನ್ನು ಮೇಲೇರಿಸಿಕೊಂಡ ಜನರನ್ನು ಎದುರಿಸಿದವರು. ಭಾಗವತರ ವಿಚಾರವಿರಲಿ; ಇಲ್ಲಿ ನಮಗೆ ಪ್ರಸಕ್ತವಾದುದು ಹರಿದಾಸರ ವಿಚಾರ. ನಮ್ಮ ಗಮನಕ್ಕೆ ಬಂದಿರುವ ಹರಿದಾಸರು ಬಹುಮಟ್ಟಿಗೆ ಬ್ರಾಹ್ಮಣರು, ವೈದಿಕ ಸಂಸ್ಕೃತಿಯ ಮಡಿಲಲ್ಲಿ ಬೆಳೆದವರು; ಮಾಧ್ವಸಂಪ್ರದಾಯಕ್ಕೆ ಸೇರಿದವರು; ವೈದಿಕವೆನ್ನಬಹುದಾದ ಆಚಾರ- ವಿಚಾರಗಳನ್ನು ಸ್ಥೂಲವಾಗಿಯಾದರೂ ಒಪ್ಪಿಕೊಂಡವರು. ಎಂದ ಮೇಲೆ ವೈದಿಕನಿಷ್ಠೆಯುಳ್ಳ ವ್ಯಾಸಕೂಟದ ಪಂಡಿತರು ಇವರನ್ನು ಕೀಳಾಗಿ ಕಂಡುದೇಕೆ ? ಸಮಾಜದಲ್ಲಿ ಹರಿದಾಸರ ಸ್ಥಾನ ಎಂದಿಗೂ ಸಂದಿಗ್ಧವಾದುದೆ. ಅಷ್ಟಾಗಿ ಮಾನ್ಯತೆಯನ್ನು ಎಂದಾದರೂ ಅವರು ಪಡೆದಿದ್ದರೋ ಎನ್ನುವುದು ಸಂಶಯವೇ. ಈ ವಿಪರ್ಯಾಸಕ್ಕೆ ಕಾರಣವೇನು?

ಹರಿಯ ದಾಸರೆಂದು ತಮ್ಮನ್ನು ಭಾವಿಸಿಕೊಂಡು ಹರಿಯ ಸೇವೆ, ನಾಮ ಸಂಕೀರ್ತನೆ, ಕ್ಷೇತ್ರಾಟನಗಳಲ್ಲೇ ಬಾಳನ್ನು ಕಳೆಯುವ ಜನರು ಪುರಂದರದಾಸರ, ವ್ಯಾಸರಾಯಸ್ವಾಮಿಗಳ, ಶ್ರೀಪಾದರಾಜರ ಕಾಲಕ್ಕೆ ಎಷ್ಟೋ ಹಿಂದಿನಿಂದ ಇದ್ದರು. ದ್ರವಿಡದೇಶದಲ್ಲಿ ಅಳ್ವಾರುಗಳು ಈ ಗುಂಪಿಗೆ ಸೇರಿದವರೇ; ಕ್ರಿಸ್ತಾಬ್ದ ಆರು ಏಳನೆಯ ಶತಮಾನಗಳಿಂದ ಇಂಥವರು ದಕ್ಷಿಣದೇಶದಲ್ಲೆಲ್ಲ ಇದ್ದರು. ಇವರು ಹಲವಾರು ಜಾತಿಗಳಿಗೆ ಸೇರಿದವರು, ಬೇರೆ ಬೇರೆ ಕುಲಗಳವರು, ನಾನಾ ಸಂಪ್ರದಾಯದವರು. ಕೆಲವರು ಬ್ರಾಹ್ಮಣರಿದ್ದರೂ ಇತರರ ಸಂಖ್ಯೆ ದೊಡ್ಡದು. ಇತರರಲ್ಲೂ ಸಮಾಜಿಕವಾಗಿ ತೀರ ಕೀಳೆಂದು ಬಗೆಯಲ್ಪಟ್ಟ ಜನಾಂಗಗಳವರೇ ಹೆಚ್ಚು ಮಂದಿ. ನರಸೇವೆ ಮಾಡುವುದು ಸಮಾಜದ ಕಟ್ಟುಪಾಡಾಗಿರುವಾಗ ಇವರು ನರಸೇವೆಯನ್ನು ನಿರಾಕರಿಸಿ ಹರಿಸೇವೆಯನ್ನು ಕೈಗೊಂಡದ್ದು ಸಾಹಸವೇ, ಕ್ರಾಂತಿಯ ಮನೋಧರ್ಮವೇ. ಹೀಗೆ ದಾಸರೆಂಬ ಜನಾಂಗಗಳು ತಮಿಳುನಾಡು, ಆಂಧ್ರಪ್ರದೇಶ, ಕರ್ನಾಟಕಗಳಲ್ಲಿ ಮೊದಲಿಂದ ಇದ್ದವು. ಈಗಲೂ ಇವೆ. ತೆಲುಗು ದೇಶದಲ್ಲಿ ಬುಕ್ಕದಾಸರಿ, ಪಾಗದಾಸರಿ, ಬುಟ್ಟದಾಸರಿ, ದಂಡೆದಾಸರಿ, ಚಿನ್ನದಾಸರಿ, ಮಾಲದಾಸರಿ, ಭಾಗವತ ದಾಸರಿಗಳೆಂಬ ವಿಭಾಗಗಳೂ ಇದ್ದುವು. ಕರ್ನಾಟಕದಲ್ಲಿ ಬಣಜಿಗ, ಕುರುಬ, ಪೊಕ್ಕಲಿಗ, ಸಾಲೆ, ತಿಗುಳ, ಗೊಲ್ಲ, ಬೇಡ, ಬೆಸ್ತ, ವಡ್ಡ, ಹೊಲೆಯ, ಮಾದಿಗರ ಜಾತಿಗಳಿಗೆ ಸೇರಿದ ದಾಸರುಗಳಿದ್ದಾರೆ. ಇವರಲ್ಲಿ ಸಮಗಾರ ದಾಸರು, ನಾಮಧಾರಿ ದಾಸರು, ಶನಿವಾರ ದಾಸರು, ಯಲ್ಲಂ ದಾಸರು, ದೊಂಬಿ ದಾಸರು, ಬಿಂದಿಗೆ ದಾಸರು, ಆಟ ದಾಸರು, ಕತ್ತರಿ ದಾಸರು, ದೇಶಭಾಗ ದಾಸರು, ಧರ್ಮ ದಾಸರುಗಳೆಂಬ ವಿಭಾಗಗಳೂ ಇವೆ.

ಇವರೆಲ್ಲ ವೈಷ್ಣವರು; ದಿಟವಾಗಿ ಹರಿ-ದಾಸರೇ. ಗುರುಗಳಿಂದ ದೀಕ್ಷೆಯನ್ನು ಪಡೆದು ಚಕ್ರಾಂಕನವನ್ನು ತಳೆದು, ಅಷ್ಟಾಕ್ಷರಿ ಮಂತ್ರವನ್ನು ಜಪಿಸುತ್ತಾರೆ; ತುಳಸೀ ಮಣಿಯ ಮಾಲೆಯನ್ನು

119

ತೊಡುತ್ತಾರೆ, ಹಣೆಯ ಮೇಲೆ ಊರ್ಧ್ವಪುಂಡ್ರವನ್ನು ಧರಿಸುತ್ತಾರೆ; ತಿರುಪತಿಯ ವೆಂಕಟೇಶ್ವರನೇ ಬಹುಮಟ್ಟಿಗೆ ಇವರ ದೈವ. ಉಳಿದಂತೆ ನರಸಿಂಹ ಮತ್ತು ಹನುಮಂತ ಇವರ ಪೂಜೆಯೂ ವಿಶೇಷವಾಗಿ ನಡೆಯುತ್ತದೆ. ಇವರ ಕಸುಬು ದೇವರ ಹೆಸರನ್ನು ಹೇಳಿಕೊಂಡು ಊರೂರು, ಕೇರಿ ಕೇರಿ ತಿರುಗುತ್ತ ತಿರುಪೆ ಎತ್ತುವುದು. ಗರುಡಗಂಭವನ್ನು (ಗರುಡಗಂಭವೆಂದು ಹೆಸರಾದರೂ ಇದು ದೀಪದ ಕಂಬವೇ) ಕೈಯಲ್ಲಿ ಹಿಡಿದು ನಡೆಯುತ್ತ, ಎಲ್ಲಾದರೊಂದು ಕಡೆ ನೆಲದ ಮೇಲಿರಿಸಿ ಶಂಖವನ್ನೂದಿ, ಜಾಗಟೆಯನ್ನು ಬಡಿದು, ತಂಬೂರಿಯನ್ನು (ಕಿನ್ನರಿಯನ್ನು) ಮೀಟಿ, ಸಂಕೀರ್ತನವನ್ನು ಮಾಡುವರು; ಗೋವಿಂದ ನಾಮೋಚ್ಚಾರಣೆಯನ್ನು ಮಾಡುವರು. ನೆರೆದ ಜನರು ಕಾಣಿಕೆಯನ್ನು ಇಟ್ಟುಹೋಗುವರು. ಇದು ಉಂಛವೃತ್ತಿಯ ಜಾನಪದ ನೆಲೆ. ಕೆಲವೊಮ್ಮೆ ಕಾವಡಿಯನ್ನು ಹೊತ್ತು. ಅದರಲ್ಲಿ ವಿಷ್ಣುವಿಗ್ರಹ, ಶಾಲಿಗ್ರಾಮ, ಶಂಖ, ತಿರುಮಣ್ಣು (ಶ್ರೀಚೂರ್ಣ) ಮೊದಲಾದುವುಗಳನ್ನಿರಿಸಿ ಕೊಂಡು, ಜನರೆದುದು ಅವನ್ನು ತೋರಿಸಿ ದೇವರ ನಾಮಗಳನ್ನು ಹಾಡುವರು, ತಿರುಮಣ್ಣನ್ನು ಪ್ರಸಾದವಾಗಿ ಕೊಡುವರು. ಜನರಿಂದ ಬಂದ ಕಾಣಿಕೆಯನ್ನು ಸ್ವೀಕರಿಸಿ ಮುಂದೆ ಹೋಗುವರು.

ಇವರಲ್ಲಿ ಆಟದ ದಾಸರು ಅಥವಾ ಭಾಗವತದಾಸರೆಂಬ ಗುಂಪಿನವರು ಗಂಡಸರು ಸ್ತ್ರೀವೇಷವನ್ನು ತೊಟ್ಟು ಕಾಲಿಗೆ ಗೆಜ್ಜೆ ಕಟ್ಟಿಕೊಂಡು. ತಾಳ ಮೃದಂಗದ ಗತಿಗೆ ನಾಟ್ಯವಾಡುವರು; ಭಾಗವತ ಪುರಾಣದ ಪ್ರಸಂಗಗಳನ್ನು ಎತ್ತಿಕೊಂಡು ನಾಟಕವನ್ನಾಡುವುದೂ ಉಂಟು. ಕೆಲವರು ಕೋಲೆಬಸವನನ್ನು ಮುಂದೆಮಾಡಿಕೊಂಡು ಹೋಗುತ್ತ ಅದರಿಂದ ಆಟವಾಡಿಸುವರು. ದಂಡೆದಾಸರೆಂಬ ಗುಂಪಿನವರಿಗೆ ಕಾಂಚೀಪುರದ ಅರಸರು ದಂಡೆ, ತಾಳ, ತಂಬೂರಿಗಳನ್ನು ಸನ್ಮಾನವಾಗಿ ನೀಡಿದರೆಂದು ಅವರಲ್ಲಿ ಪ್ರತೀತಿಯಿದೆ. ಅಂದಿನಿಂದ ಅವರು ದಂಡಿಗೆಯ ದಾಸರು ಅಥವಾ ದಂಡೆದಾಸರೆನಿಸಿಕೊಂಡರಂತೆ. ಇವರು ವಿಶೇಷವಾಗಿ ಹಾಡುವರು; ಹಾಡುವಾಗ ಏಕನಾದದಂಥ ಸರಳವಾದ ತಂಬೂರಿಯನ್ನು ಮೀಟುವರು. ರಾಮಾಯಣವನ್ನು ಕವಿಯಾದ ವಾಲ್ಮೀಕಿಯಿಂದ ಕಲಿತು ಹಾಡಿದ ಕುಶೀಲವರು ಈ ಗುಂಪಿಗೆ ಸೇರಿದ ಗಾಯಕರೇ. 'ಕುಶೀಲವೌ' ಎಂಬವ ಮಾತಿಗೆ 'ಗಾಯಕೌ' ಎಂದೇ ನಿಘಂಟಿನ ಅರ್ಥ; ರಾಮನ ಮಕ್ಕಳಾದ ಲವ-ಕುಶ ಎಂಬುದು ಕಾಲಾಂತರದಲ್ಲಿ ಒದಗಿದ ಒಕ್ಕಣೆ.

ಪುರಂದರದಾಸರ ಕಾಲದಲ್ಲೇ ಕೃಷ್ಣದೇವರಾಯನು ರಚಿಸಿದ 'ಆಮುಕ್ತ ಮಾಲ್ಯದ' ಎಂಬ ತೆಲುಗು ಗ್ರಂಥದಲ್ಲಿ ವೈಷ್ಣವದಾಸರನ್ನು ಕುರಿತು ಉಲ್ಲೇಖವಿದೆ. ಕೃಷ್ಣದೇವರಾಯನು ವೈಷ್ಣವನೇ; ವಿಜಯನಗರದ ಅರಸರೆಲ್ಲ ವೈಷ್ಣವ ಶ್ರದ್ಧಾಳುಗಳೇ ಎನ್ನಿ. ಅವನು ಬರೆದ 'ಸಕಲಕಥಾಸಾರಸಂಗ್ರಹ'ವು ವೈಷ್ಣವ ಪುರಾಣಗಳಲ್ಲಿ ಬರುವ ಕಥೆಗಳ, ವಿಷ್ಣುಭಕ್ತರ ಪ್ರಸಂಗಗಳ ಸಂಕಲನವೆಂದು ಉಲ್ಲೇಖವಿದೆ; ಈ ಗ್ರಂಥವನೋ ಉಪಲಬ್ಧವಾಗಿಲ್ಲ. ಅವನ ಕೃತಿಗಳಲ್ಲಿ ಉಳಿದುಬಂದಿರುವ 'ಜಾಂಬವತೀ ಕಲ್ಯಾಣ ಎಂಬ 'ಸಂಸ್ಕೃತ ನಾಟಕ' ಮತ್ತು 'ಆಮುಕ್ತಮಾಲ್ಯದ'ವೆಂಬ ತೆಲುಗು ಕಾವ್ಯಗ್ರಂಥ ಎರಡೂ ವಿಷ್ಣುವಿನ ಮಾಹಾತ್ಮ್ಯೆಯನ್ನು ಹೇಳುವಂಥದೇ. 'ಆಮುಕ್ತ ಮಾಲ್ಯದ'ಕ್ಕೆ 'ವಿಷ್ಣುಚಿತ್ತೀಯ'ವೆಂದೂ ಹೆಸರಿದೆ. ಹನ್ನೆರಡು ಮಂದಿ ಆಳ್ವಾರರಲ್ಲಿ ಪ್ರಸಿದ್ಧರಾದ ಪೆರಿಯಾಳ್ವಾರರನ್ನು (ವಿಷ್ಣುಚಿತ್ತರನ್ನು) ಕುರಿತು ಈ ಕೃತಿಯಲ್ಲಿ ವಿಷ್ಣುವೇ ಪೆರಿಯಾಳ್ವಾರರಿಗೆ ಹೇಳಿದ "ಮಾಲದಾಸರಿ ಕಥೆ'ಯೆಂಬ ಸೊಗಸಾದ ಭಾಗವಿದೆ. 'ಮಾಲದಾಸರಿ' ಎನ್ನುವುದು ಮೇಲೆ ಹೇಳಿದ ದಾಸವರ್ಗಗಳಲ್ಲಿ ಒಂದು ಹೀನಕುಲವೆಂದೂ

‘ಹೇಳಬಾರದ’ ಕುಲವೆಂದೂ ಮಾತುಗಳಿವೆ. ಆದರೆ ಇಲ್ಲಿನ ಮಾಲದಾಸ ಮಹಾವಿಷ್ಣುಭಕ್ತ; ಕುರಂಗುಡಿಯ ಅರ್ಚಾಮೂರ್ತಿ ಅವನ ಇಷ್ಟದೈವ. ಅವನ ಹೆಗ್ಗಳಿಕೆಯಿಂದ ಬ್ರಹ್ಮರಾಕ್ಷಸನಿಗೂ ಮುಕ್ತಿ ದೊರೆಯಿತು! ಅವನು ಮುಂಜಾನೆ ಎದ್ದು ಗುಡಿಗೆ ಹೋಗಿ ಮಂಗಳಕೈಶಿಕರಾಗದಲ್ಲಿ ಹಾಡುತ್ತ, ಕುಣಿಯುತ್ತ ದೇವರನ್ನು ಸೇವೆಮಾಡುತ್ತಿದ್ದ ಚಿತ್ರಣ ಈ ಕಾವ್ಯದಲ್ಲಿ ದೊರೆಯುತ್ತದೆ.

ಈಗ “ಗೀತನರ್ತನದಿಂದ ಕೃಷ್ಣನ್ನ ಪೂಜಿಸುವ ಪೂತಾತ್ಮ ಪುರಂದರದಾಸರ” (ವ್ಯಾಸರಾಯ ಸ್ವಾಮಿಗಳು ಮಾಡಿದ ವರ್ಣನೆ) ಹಿನ್ನೆಲೆಯನ್ನು ಗುರುತಿಸಬಹುದಲ್ಲವೆ? ವ್ಯಾಸರಾಯ ಸ್ವಾಮಿಗಳು ಎತ್ತಿ ನಿಲ್ಲಿಸಿದ ಹರಿದಾಸರ ಕೂಟದಲ್ಲಿ ಬ್ರಾಹ್ಮಣರೂ ಇದ್ದರು, ಬ್ರಾಹ್ಮಣರಲ್ಲದವರೂ ಇದ್ದರು. ಹೆಸರಾದವರಲ್ಲಿ ಪುರಂದರದಾಸರು ಬ್ರಾಹ್ಮಣರು, ಕನಕದಾಸರು ಕುರುಬರು, ವೈಕುಂಠ ದಾಸರು ಸಾತಾನಿಗಳು. ಉಳಿದವರು ಇಂದು ನಮ್ಮ ನೆನಪಿನಲ್ಲಿ ಉಳಿದುಬಂದಿಲ್ಲ. ಕೃಷ್ಣದೇವ ರಾಯನ ಗಮನವನ್ನೂ ಗೌರವವನ್ನೂ ಸೆಳೆದುಕೊಂಡ ಮಾಲದಾಸರಿಯ ಕಥೆ, ಅವನ ಗುರುಗಳಾದ ವ್ಯಾಸರಾಯಸ್ವಾಮಿಗಳಿಗೂ ತಿಳಿದಿದ್ದಿರಬೇಕು. ವ್ಯಾಸರಾಯಸ್ವಾಮಿಗಳು ಈ ಜಾನಪದ ‘ದಾಸ’ರ ಆದರ್ಶವನ್ನೇ ಹಿಡಿದು, ಅವರ ಸ್ಫೂರ್ತಿಯಿಂದಲೇ ದಾಸಕೂಟವನ್ನು ಕಟ್ಟಿದರೆಂದರೆ ತಪ್ಪಾಗದು. ಪುರಂದರದಾಸರಿಗೆ ಮೊದಲೇ ಕನಕದಾಸರು ವ್ಯಾಸರಾಯಸ್ವಾಮಿಗಳನ್ನು ಕೂಡಿಕೊಂಡಿದ್ದರು. ಪುರಂದರದಾಸರು ಕನಕದಾಸರನ್ನು ಉಲ್ಲೇಖಿಸಿದ್ದಾರೆ; ಕನಕದಾಸರ ಕೃತಿಗಳಲ್ಲಿ ಪುರಂದರದಾಸರ ಹೆಸರು ಕಾಣಸಿಗುವುದಿಲ್ಲ. ದಾಸಕೂಟದ ರೀತಿನೀತಿಗಳನ್ನು ವ್ಯಾಸರಾಯಸ್ವಾಮಿಗಳು ನಿರ್ಧರಿಸಿದ್ದು ಕನಕದಾಸರ ನೆರವಿನಿಂದಲೇ ಇದ್ದೀತು. ಏಕೆಂದರೆ ಕನಕದಾಸರು ಜಾನಪದ ನೆಲೆಯ ದಾಸರ ಗುಂಪಿನಿಂದಲೇ ಬಂದವರು.

ವ್ಯಾಸರಾಯಸ್ವಾಮಿಗಳು ದಾಸಕೂಟವನ್ನು ಏರ್ಪಡಿಸಿದಾಗ ‘ದೇಸಿ’ಯಾಗಿದ್ದ ಒಂದು ವಿವರವನ್ನು ‘ಮಾರ್ಗಿ’ಯಾಗಿ ಮಾರ್ಪಡಿಸಿದರು; ಜಾನಪದವಾದ ಒಂದು ಪ್ರವೃತ್ತಿಯನ್ನು ಸಭ್ಯತೆಯ ಚೌಕಟ್ಟಿನಲ್ಲಿ ಅಳವಡಿಸಿದರು. ಗ್ರಾಮಾಂತರಗಳಲ್ಲಿ ಓಡಿಯಾಡುತ್ತಿದ್ದ ದಾಸರ ಮೊದಲಾಕೃತಿಯನ್ನೇ ಅನುಸರಿಸಿ ದಾಸಕೂಟದವರಲ್ಲೂ ಊಂಛವೃತ್ತಿ (ತಿರುಪೆಗೆ ಸಂಸ್ಕೃತದ ಹೆಸರು; ಪುರಂದರದಾಸರು ತಮ್ಮ ವೃತ್ತಿಯನ್ನು ‘ತಿರುಪ’ವೆಂದೇ ಬಣ್ಣಿಸಿಕೊಂಡಿದ್ದಾರೆ). ದಂಡಿಗೆ, ಬೆತ್ತ, ತಂಬೂರಿ, ಚಿಟಿತಾಳ, “ಕಾಲಿಗೆ ಗೆಜ್ಜೆ ಕಟ್ಟಿ ನೀಲವರ್ಣನ ಗುಣ, ಆಲಾಪಿಸುತ್ತ ಬಲು ಒಲಗ” ಮಾಡುವುದು (ಪುರಂದರದಾಸರ ವರ್ಣನೆ), ‘ಗೀತ ನರ್ತನದಿಂದ ಕೃಷ್ಣನ್ನ ಪೂಜಿಸುವುದು’ (ವ್ಯಾಸರಾಯಸ್ವಾಮಿಗಳ ಒಕ್ಕಣೆ), ಗೋಪಾಳಬುಟ್ಟಿ ಮೊದಲಾದ ವಿವರಗಳನ್ನು ವಿಧಿಸಿದ್ದರು (ದಾಸಯ್ಯನ ಗರುಡಗಂಭವನ್ನೇನೋ ಕೈಬಿಟ್ಟರೆನ್ನಿ.)

ವ್ಯಾಸರಾಯಸ್ವಾಮಿಗಳ ಒಂದು ಕೃತಿಯಲ್ಲಿ ಸಂಕೀರ್ತನ ಪದ್ಧತಿಯಲ್ಲಿದ್ದ ಹೀನಾಯದ ಉಲ್ಲೇಖವೂ ಇದೆ-

ಗೆಜ್ಜೆಯ ಕಾಲಲ್ಲಿ ಕಟ್ಟಿ
ಲಜ್ಜೆ ಬಿಟ್ಟು ಹರಿಯ ನಾಮ
ಗರ್ಜನೆ ಮಾಡುತ್ತ ಅಘ
ವರ್ಜಿತರಾಗಿಪ್ಪರ ಸಂಗ

ಇಲ್ಲಿ 'ಲಜ್ಜೆ ಬಿಟ್ಟು' ಎಂದು ಸ್ಪಷ್ಟವಾಗಿ ಹೇಳಿರುವುದನ್ನು ಗಮನಿಸಬೇಕು. ಗಂಡಸರು ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಬೀದಿಯಲ್ಲಿ ಕುಣಿದಾಡುವುದು ನಾಲ್ಕು ಮಂದಿಯ ನಡುವೆ ಲಜ್ಜೆಯ ಮಾತಲ್ಲವೆ? ಆ ಕಾಲದ, ಮುಂದಿನ ಕಾಲದ, ವೈದಿಕ ನಿಷ್ಠ ಬ್ರಾಹ್ಮಣರಿಗೆ ವ್ಯಾಸರಾಯಸ್ವಾಮಿಗಳು ಕೈಕೊಂಡ ಈ ಕೆಲಸ ಹಿಡಿಸದಿದ್ದುದು ಸಹಜವೇ.

ವ್ಯಾಸರಾಯಸ್ವಾಮಿಗಳಿಗೆ ಪ್ರಿಯವೆನಿಸಿದ 'ಹರಿದಾಸರ ಸಂಗ'ದಲ್ಲಿ ಎಲ್ಲ ಜಾತಿಯ ಜನರೂ ಇರುವುದು ಅವರಿಗೆ ಒಪ್ಪಿಗೆಯಾಗಲಿಲ್ಲ. ಅಷ್ಟೇ ಅಲ್ಲದೆ, ಯಾವ ಸಂಕೋಚವೂ ಇಲ್ಲದೆ ವ್ಯಾಸರಾಯಸ್ವಾಮಿಗಳು ಬೇರೆ ಬೇರೆ ಜಾತಿಯವರಿಗೆಲ್ಲ ಹರಿ ದೀಕ್ಷೆಯನ್ನು ಒದಗಿಸಿದರು; ಹರಿದಾಸರ ಕೂಟದಲ್ಲಿ ಕುಲಕ್ಕೆ, ಜಾತಿಗೆ ಬೆಲೆಯಿಲ್ಲವೆಂದು ಪ್ರಕಟವಾಗಿ ಹೇಳಿದರು. ಈ ಧೈರ್ಯದಿಂದಲೇ ಪುರಂದರದಾಸರು "ಯಾವ ಕುಲದವನಾದರೇನು, ಆವನಾದರೇನು, ಆತ್ಮಭಾವವರಿತ ಮೇಲೆ" ಎಂದು ಹಾಡಿದರು; "ಹೊಲೆಯ ಹೊರಗಿಹನೆ ಊರೊಳಗಿಲ್ಲವೆ?" ಎಂದು ಮಡಿವಂತರನ್ನು ಕೇಳಿದರು; "ಜಂಗಮರು ನಾವು ಜಗದೊಳಗೆ" ಎಂದು ಬಣ್ಣಿಸಿಕೊಂಡರು. ವ್ಯಾಸರಾಯಸ್ವಾಮಿಗಳನ್ನು ಅನುಸರಿಸಿ ಅವರ ಶಿಷ್ಯರಾದ ವಾದಿರಾಜಸ್ವಾಮಿಗಳು ಉಡುಪಿಯ ಕಡೆ ಧೈರ್ಯದಿಂದ ಹಲವು ಜಾತಿಗಳವರಿಗೆ ಹರಿದೀಕ್ಷೆಯನ್ನು ಕೊಟ್ಟರು. ಇವೆಲ್ಲ ವ್ಯಾಸಕೂಟದ ಕರ್ಮಠ ಪಂಡಿತರನ್ನು ಕೆರಳಿಸಿದುವೆಂದರೆ ಆಶ್ಚರ್ಯವೇನಿಲ್ಲ.

ವ್ಯಾಸರಾಯಸ್ವಾಮಿಗಳ ದಾಸಕೂಟ ದಿಟವಾಗಿ ಒಂದು ಕ್ರಾಂತಿಯೇ, ಒಂದು ಆಂದೋಳನವೇ. ಪುರಂದರದಾಸ, ಕನಕದಾಸ, ವಾದಿರಾಜರಂಥ ಪ್ರತಿಭಾವಂತರು, ಪ್ರಭಾವಶಾಲಿಗಳು ಮುಂದೆ ದಾಸಕೂಟದಲ್ಲಿ ಕಾಣಿಸಿಕೊಳ್ಳಲಿಲ್ಲವಾದ ಕಾರಣ ಈ ಕ್ರಾಂತಿಯ ಪ್ರಭಾವ ಬೇರೂರಲಿಲ್ಲ; ಹರಡಲಿಲ್ಲ. ವೈದಿಕನಿಷ್ಠೆಯಿದ್ದ ಮೇಲು ಜಾತಿಗಳ ಜನರ ಕೈ ಬಲಗೊಂಡಿದ್ದರಿಂದ ದಾಸಕೂಟ ಗೌರವದಿಂದ ಉಳಿಯುವುದೂ ಕಷ್ಟವೆನಿಸಿತು. ಮಾಧ್ವ ಮಠಗಳು ತಮ್ಮ ಪಂಗಡಕ್ಕೆ ಸೇರಿದ ಹರಿದಾಸರನ್ನು ಹಂಗಿಸಿ, ಭಂಗಿಸಿ ಮೂಲೆಗೊತ್ತಿದುವು. ವ್ಯಾಸರಾಯಸ್ವಾಮಿಗಳಿಗಿದ್ದ ಧೈರ್ಯ, ಔದಾರ್ಯ, ಉದಾತ್ತವಾದ ಮಾನವೀಯತೆ, ಲೋಕೋತ್ತರವಾದ ದೃಷ್ಟಿ ಮುಂದೆ ಯಾವ ಮಠಾಧಿಪತಿಗಳಿಗೂ ಬರಲಿಲ್ಲ. ಸಣ್ಣ ಜನರು ದೊಡ್ಡ ಪೀಠಗಳಲ್ಲಿ ಕುಳಿತು ಹಟಹಿಡಿದು, ಬಲಗೊಂಡು, ಜಾಲಿಯ ಮರದಂತೆ ದುರ್ಜನರನ್ನು ಸುತ್ತ ಸೇರಿಸಿಕೊಂಡು, ನೇರವಾಗಿ ನಡೆಯುವವರನ್ನು ಕಾಡತೊಡಗಿದಾಗ ದಾಸಕೂಟ ಕಳೆಗುಂದಿತು. ಮಠಗಳ ಮತ್ತು ಮಡಿವಂತರ ಹಿಡಿತ ಬಿಗಿಯಾಗಿ ದಾಸರಿಗೆ ಉಳಿಗಾಲವಿಲ್ಲದಾಗ, ದಾಸರೂ ಅಂಜಿ ಮಠದ ಧೋರಣೆಯನ್ನೇ ಹಿಡಿದರು. ಬರುಬರುತ್ತ ದಾಸಕೂಟದಲ್ಲಿ ಕೇವಲ ಮಾಧ್ವಪ್ರಕ್ರಿಯೆಗಳ ತೂರಾಟ, ಮಡಿವಂತಿಕೆಯ ಹಾರಾಟ ಇಷ್ಟೇ ಉಳಿದುಕೊಂಡದ್ದರಿಂದ ಸಮಾಜದಲ್ಲಿ ಅದಕ್ಕೆ ಒದಗಬಹುದಾಗಿದ್ದ ಸ್ಥಾನ ತಪ್ಪಿತು.

ವ್ಯಾಸರಾಯಸ್ವಾಮಿಗಳಿಗೆ ಸ್ಫೂರ್ತಿಯ ಸೆಲೆಯಾಗಿದ್ದ ಶ್ರೀಪಾದರಾಜರು ರಚಿಸಿರುವ ಕೃತಿ ದಾಸಕೂಟದ ಮುಖ್ಯಪ್ರವೃತ್ತಿಯನ್ನು ಹೇಳುವುದಲ್ಲದೆ ಅದಕ್ಕೆ ವಿರುದ್ಧವಾದ ಧೋರಣೆಯನ್ನೂ ಬಣ್ಣಿಸುತ್ತದೆ. ಇವೆರಡರ ಸೆಣಸಾಟದಲ್ಲಿ ಕಡೆಗೆ ದಾಸಕೂಟದ ಮುಖ್ಯಪ್ರವೃತ್ತಿಯೇ ಸೋತಿತು;

ಮಡಿವಂತಿಕೆಯ ಬೂಟಕತನ ಗೆದ್ದಿತು. ಶ್ರೀಪಾದರಾಜರ ಕನಸು, ವ್ಯಾಸರಾಯಸ್ವಾಮಿಗಳ ಸಾಹಸ, ಪುರಂದರದಾಸರ ಶ್ರಮ ಎಲ್ಲವೂ ನಿಷ್ಫಲವಾದುವು. ಇದೊಂದು ದುರ್ದೈವ.

ನಾರಾಯಣಿ ತಾಳ ಆದಿ
ಸುಮ್ಮನೆ ವೈಷ್ಣವನೆಂಬಿರಿ ಪರ
ಬೊಮ್ಮ ಸುಜ್ಞಾನವರಿಯದ ಮನುಜ ಪ

ಮುಖವ ತೊಳೆದು ನಾಮವನಿಟ್ಟೆನಲ್ಲದೆ
ಸುಖತೀರ್ಥ ಶಾಸ್ತ್ರವನೋದಿದೆನೆ?
ಸುಖಕೆ ಶೃಂಗಾರಕ್ಕೆ ಮಾಲೆ ಹಾಕಿದೆನಲ್ಲದೆ
ಭಕುತಿ ರಸದಲ್ಲಿ ಮುಳುಗಿದೆನೇನಯ್ಯ? ೧

ಊರು ಮಾತುಗಳಾಡಿ ದಣಿದೆನಲ್ಲದೆ
ನಾರಾಯಣ ಕೃಷ್ಣ ಶರಣೆಂದೆನೆ?
ನಾರಿಯ ನುಡಿಕೇಳಿ ಮರುಳಾದೆನಲ್ಲದೆ
ಗುರುಹಿರಿಯರ ಮಾತ ಮನ್ನಿಸಿದೆನೇನಯ್ಯ? ೨

ಜಗತು ಸತ್ಯವೆಂದು ಪಂಚಭೇದವ ತಿಳಿದು
ಮಿಗೆ ರಾಗದ್ವೇಷಂಗಳನು ವರ್ಜಿಸಿ
ಭಗವಂತನು ಲೀಲೆ ಶ್ರವಣ ಕಥೆಗಳಿಂದ
ನಿಗಮಗೋಚರನೆಂದು ತಿಳಿದೆನೇನಯ್ಯ? ೩

ಗಂಗೆಯಲಿ ಮೈಮಣ್ಣ ತೊಳೆದೆನಲ್ಲದೆ ಭವ
ಹಿಂಗುವ ಸ್ನಾನ ಮಾಡಿದೆನೆ?
ರಂಗವಿಠಲನ ನಿಜವಾದ ದಾಸರ
ಸಂಗ ಸುಖವೆಂದು ತಿಳಿದೆನಯ್ಯ? ೪

ಪುರಂದರದಾಸರು ಬಾಳಿದ ಕಾಲದಲ್ಲಿ ಅವರನ್ನೊಳಗೊಂಡ ಸಮಾಜದ ಸ್ವರೂಪ ಹೇಗಿದ್ದಿತೆಂದು ಸಾಧ್ಯವಾದಷ್ಟು ಮಟ್ಟಿಗೆ ವಿಚಾರ ಮಾಡಬೇಕು. ಪುರಂದರದಾಸರ ಬದುಕು ವಿಜಯನಗರ ಸಾಮ್ರಾಜ್ಯದ ಪರ್ವಕಾಲಕ್ಕೆ ಸರಿಯಾಯಿತೆಂದು ಮೊದಲೇ ಹೇಳಿದೆನಷ್ಟೆ. ಪುರಂದರದಾಸರು ಹುಟ್ಟಿದ್ದು ೧೪೮೪ ಎಂದು ಬಗೆದರೆ ಅವರ ಬಾಲ್ಯ ಸಾಳುವ ನರಸಿಂಹ ವಿಜಯನಗರದ ಸಿಂಹಾಸನದಲ್ಲಿ ಕುಳಿತಿದ್ದ ಕಾಲ. ಸಾಳುವ ನರಸಿಂಹ ಪಟ್ಟಕ್ಕೆ ಬಂದುದು ೧೪೮೫ರಲ್ಲೇ. ಅವನು ಮುಂದೆ ಐದು ವರ್ಷಗಳನಂತರ ತೀರಿಕೊಳ್ಳುವ ವೇಳೆಗೆ ಹೆಚ್ಚೂ ಕಡಮೆ ದಕ್ಷಿಣದೇಶವನ್ನೆಲ್ಲ ಒಂದು ಛತ್ರದಡಿಯಲ್ಲಿ ಕೂಡಿಸಿದ್ದ. ಅವನು ವಶಪಡಿಸಿಕೊಂಡ ಊರುಗಳು ಈಗಿನ ತಮಿಳುನಾಡು (ಶ್ರೀರಂಗ, ಚೆಂಜಿ, ಆಮೂರು, ಕೊಂಗುಧಾರಾಪುರ, ಕುಂದಾಣೆ ಮುಂತಾದುವು), ಆಂಧ್ರಪ್ರದೇಶ (ನೆಲ್ಲೂರು, ಉದಯಾದ್ರಿ, ಪೆನುಗೊಂಡೆ, ಗಂಡಿ ಕೋಟ

ಮುಂತಾದವು), ಕರ್ನಾಟಕ (ನಾಗಮಂಗಲ, ಬೆಂಗಳೂರು, ಉಮ್ಮತ್ತೂರು, ಶ್ರೀರಂಗಪಟ್ಟಣ ಮೊದಲಾದುವು) ಈ ಪ್ರಾಂತ್ಯಗಳಲ್ಲಿ ಮುಖ್ಯವಾಗಿದ್ದವು. ಎಂದರೆ ದಕ್ಷಿಣದೇಶದ ಸಂಸ್ಕೃತಿಯ ಪ್ರಾಂತೀಯ ಪ್ರಕಾರಗಳು ಒಂದು ಆಡಳಿತದ ಪಡಿಯಚ್ಚಿನಲ್ಲಿ ಕೂಡಿಕೊಂಡುವು. ಈ ಪ್ರಕಾರಗಳಲ್ಲಿ ಸಮಾನಧರ್ಮಗಳು ಮೊದಲಿಂದಲೂ ಇದ್ದುವು; ಭಾಷೆ, ಧರ್ಮ, ಆಚಾರ, ವ್ಯವಹಾರ ಮೊದಲಾದ ವಿವರಗಳು ಪ್ರಾಂತೀಯ ಗಡಿಗಳನ್ನು ದಾಟಿ ಹರಡಿಕೊಂಡಿದ್ದುವು. ಆದರೆ ಒಂದೇ ಆಡಳಿತದ ಚೌಕಟ್ಟು ಕಾಣಿಸಿಕೊಂಡುದು ಮುಖ್ಯವಾದ ಘಟ್ಟ. ಜನಜೀವನದಲ್ಲಿ ಒದಗುವ ಕೋಲಾಹಲ ಬಹುಮಟ್ಟಿಗೆ ಆಡಳಿತದ ಪ್ರಭಾವದಿಂದಲೇ ಒದಗುವುದು.

ಸಾಳುವ ನರಸಿಂಹ ಸಾಮಾನ್ಯ ಮಾಂಡಲಿಕನಾಗಿದ್ದವನು ತನ್ನ ಪ್ರತಿಭೆಯಿಂದ, ಸಾಹಸದಿಂದ ಸಾಮ್ರಾಜ್ಯದ ಚಕ್ರವರ್ತಿಯಾದವನು; ಮುಂದೆ ಕೃಷ್ಣದೇವರಾಯನ ಕಾಲದಲ್ಲಿ ಮೈದುಂಬಿ ಮೂಡಿಬಂದ ಸುವರ್ಣಯುಗಕ್ಕೆ ನಾಂದಿಯನ್ನು ಹಾಡಿದವನು. ಹಿಂದೂಧರ್ಮದ ಸಂರಕ್ಷಣೆ ಅವನು ಕೈಗೊಂಡ ವ್ರತ. ಹಿಂದೂ ಸಮಾಜ ದುರವಸ್ಥೆಯಲ್ಲಿದ್ದುದು ಅವನಿಗೆ ಮನವರಿಕೆಯಾಗಿದ್ದಿತು. ಮಹಮ್ಮದೀಯರ ದಾಳಿಯಿಂದ ಸಮಾಜ ಕಂಗೆಟ್ಟಿದ್ದುದನ್ನು ಕಣ್ಣಾರೆ ಕಂಡು, ಸಮಾಜದ ಪುನರುಜ್ಜೀವನಕ್ಕೆ ರಾಜಕಾರಣದ ಬಲ ನೆರವಾಗಬೇಕೆಂಬ ಸಂಕಲ್ಪದಿಂದಲೇ ನರ್ಮದಾ ನದಿಯಿಂದ ಸಿಂಹಳದವರೆಗೆ ನಾಡಿನಲ್ಲೆಲ್ಲ ವರಾಹಧ್ವಜ (ವಿಜಯನಗರದ ಲಾಂಛನ) ಮೆರೆಯುವಂತೆ ಮಾಡಿದ. ಆದರೆ ಅವನ ಕಡೆಗಾಲದಲ್ಲಿ ನೆಮ್ಮದಿಯನ್ನು ಕಾಣದೆ ಕೊರಗಿ ಪ್ರಾಣ ಬಿಡಬೇಕಾಯಿತು. ಅವನ ಮರಣಶಾಸನದಲ್ಲಿ ಕೊಂಡವೀಡು, ಉದಯಗಿರಿ, ರಾಯಚೂರು ಈ ಮೂರು ದುರ್ಗಗಳು ವಶವಾಗದೆ ಸಾಮ್ರಾಜ್ಯ ಸುಭದ್ರವಾಗಿರದೆಂದೂ, ಮಹಮ್ಮದೀಯ ದಾಳಿಗೆ ಅಡ್ಡಿಯಿರದೆಂದೂ ಸೂಚಿಸಿ, ತನ್ನ ನಂತರ ದೊರೆಗಳಾಗುವವರು ಈ ದುರ್ಗಗಳನ್ನು ವಶಪಡಿಸಿಕೊಳ್ಳಬೇಕೆಂಬ ಕಳಕಳಿಯನ್ನು ಕಾಣುತ್ತೇವೆ. ಕೊಂಡವೀಡು ಮತ್ತು ಉದಯಗಿರಿ ದುರ್ಗಗಳನ್ನು ಕಳಿಂಗದ ಪುರುಷೋತ್ತಮ ಗಜಪತಿರಾಜನು ವಶಪಡಿಸಿಕೊಂಡಿದ್ದ; ರಾಯಚೂರು ದುರ್ಗ ಬಹಮನೀ ಸುಲ್ತಾನರ ವಶದಲ್ಲಿದ್ದಿತು.

ಬೇರೆಬೇರೆ ಭಾಷೆಗಳಲ್ಲಿ, ಜಾತಿ ಮತಗಳಲ್ಲಿ, ದೇಶಾಚಾರ ಕುಲಾಚಾರಗಳಲ್ಲಿ ಹರಿದು ಹಂಚಿಹೋಗಿದ್ದ ಹಿಂದುಸಮಾಜವು ಅಭ್ಯುದಯವನ್ನು ಕಾಣಬೇಕಾದರೆ ಅವೆಲ್ಲವನ್ನೂ ಒಳಗೊಂಡ ಒಂದು ಆಡಳಿತವೇ ಉಪಾಯವೆಂದು ಕಂಡುಕೊಂಡವನು ಸಾಳುವ ನರಸಿಂಹ. ತನ್ನ ಬದುಕಿನುದ್ದಕ್ಕೂ ಇದಕ್ಕಾಗಿಯೆ ಶ್ರಮಿಸಿದ. ಆದರೆ ಅವನು ತೀರಿಕೊಂಡಮೇಲೆ ಅವನ ರಾಯಸಾಮಂತರಾಗಿದ್ದ ಶ್ರೀರಂಗಪಟ್ಟಣದ ಹೊಯ್ಸಳೇಂದ್ರ, ಉಮ್ಮತ್ತೂರು ನಾಯಕ, ಚೋಳದೇಶದ ಅರಸು, ಪಾಂಡ್ಯ ನಾಯಕ, ಮಧುರಾವಲ್ಲಭ ಮಾನಭೂಷಣ ಇವರು ಸ್ವತಂತ್ರರಾಗಲು ಯತ್ನಿಸಿದರು; ವಿಜಯನಗರ ಸಾಮ್ರಾಜ್ಯದ ಬಲವನ್ನು ಮುರಿಯಲು ಸಿದ್ಧರಾದರು. ಕಳಿಂಗ ದೇಶದ ಪ್ರತಾಪರುದ್ರ ಗಜಪತಿಯೂ ವಿಜಯನಗರ ಸಾಮ್ರಾಜ್ಯವನ್ನು ದಕ್ಕಿಸಿಕೊಳ್ಳಲು ಹೊಂಚುಹಾಕುತ್ತಿದ್ದ. ಬಹಮನೀ ಸುಲ್ತಾನನ ಸರದಾರನಾಗಿದ್ದ ಯುಸುಫ್ ಅದಿಲ್ ಖಾನ್ ಬಿಜಾಪುರ ಸಂಸ್ಥಾನದಲ್ಲಿ ಸ್ವತಂತ್ರಸುಲ್ತಾನನಾಗಿ ವಿಜಯನಗರದ ಬಲವನ್ನು ಮುರಿಯಲು ಹವಣಿಸಿದ್ದ. ಈ ಪರಿಸ್ಥಿತಿಯಲ್ಲಿ ದಕ್ಷಿಣದೇಶದ ವಿಜಯನಗರದ ಸಮಾಜ ಗೊಂದಲಕ್ಕೀಡಾದುದು ಸಹಜವೇ.

ಸಾಳುವ ನರಸಿಂಹನ ಕಾಲವಾದಮೇಲೆ ಅವನ ಮರಣಶಾಸನದಂತೆ ಅವನ ಸರ್ವ ಸೇನಾಪತಿಯಾಗಿದ್ದ ತುಳುವ ನರಸನಾಯಕ (ಕೃಷ್ಣದೇವರಾಯನ ತಂದೆ) ರಾಜ್ಯದ ವ್ಯವಹಾರವನ್ನು ತನ್ನ ವಶಕ್ಕೆ ತೆಗೆದುಕೊಂಡ; ಹೆಸರಿಗೆ ಸಾಳುವ ನರಸಿಂಹನ ಮಕ್ಕಳು ರಾಜರಾಗಿದ್ದರು. ಸಮರ್ಥನಾದ ಇವನು ಆಡಳಿತದ ಒಕ್ಕೂಟವನ್ನು ಹಾಗೂ ಹೀಗೂ ಉಳಿಸಿಕೊಂಡು ಬಂದ. ಇವನು ೧೫೦೩ರಲ್ಲಿ ತೀರಿಕೊಂಡ ನಂತರ ಪಟ್ಟಕ್ಕೆ ಬಂದ ಇಮ್ಮಡಿ ನರಸಿಂಹ ಮತ್ತು ವೀರನರಸಿಂಹರಾಯ ಇವರ ಕಾಲದಲ್ಲಿ ಪರಿಸ್ಥಿತಿ ಹದಗೆಟ್ಟಿತು. ಉಮ್ಮತ್ತೂರು, ಶ್ರೀರಂಗಪಟ್ಟಣದ ದೊರೆಗಳು ವಿಜಯನಗರ ಸಾಮ್ರಾಜ್ಯಕ್ಕೆ ತಾವೇ ವಾರಸುದಾರರೆಂದು ಹೇಳಿಕೊಳ್ಳತೊಡಗಿದರು. ಆದೋನಿಯ ದುರ್ಗಾಧೀಶ ಕಾಚಪ್ಪ ಒಡೆಯನು ಬಿಜಾಪುರದ ಯುಸೂಫ್ ಅದಿಲ್ ಖಾನನೊಂದಿಗೆ ಸ್ನೇಹ ಬೆಳೆಸಿ ವಿಜಯನಗರವನ್ನು ನಿರ್ನಾಮ ಮಾಡುವ ಹುಂಚಿಕೆಯಲ್ಲಿದ್ದನು. ಅಧಿಕಾರಲಾಲಸೆಯಿರುವಲ್ಲಿ ಸಮಾಜದ ಹಿತಚಿಂತನೆಗೆ ಅವಕಾಶವಿಲ್ಲ. ಈ ಒಡೆಯನ ಚಿತಾವಣೆಯಿಂದ ಅಲ್ಲಿ ಖಾನನು ವಿಜಯನಗರವನ್ನು ದಾಳಿಮಾಡಲು ಸೇನೆಯನ್ನು ತಂದುದೂ ಉಂಟು. ವೀರಸಿಂಹನು ಅರವೀಟಿ ರಾಮರಾಜನ ನಾಯಕತ್ವದಲ್ಲಿ ಕಳುಹಿಸಿದ ಸೇನೆ ಖಾನನ ಸೇನೆಯನ್ನು ಹೊಡೆದೋಡಿಸಿತೆನ್ನಿ. ಆದರೆ ಉಮ್ಮತ್ತೂರು, ಶ್ರೀರಂಗಪಟ್ಟಣದ ದೊರೆಗಳನ್ನು ದಾರಿಗೆ ತರಲು ಹೋದ ವೀರನರಸಿಂಹನ ಸೇನೆ ಅವರಿಂದ ಸೋತು ಹಿಂದಿರುಗಿತು.

ಸಮಾಜದಲ್ಲಿ ಎಷ್ಟು ಅನಿಶ್ಚಿತಪರಿಸ್ಥಿತಿ ಇದ್ದಿತೆನ್ನುವುದನ್ನು ಊಹಿಸಿಕೊಳ್ಳಬಹುದು. ವೀರನರಸಿಂಹನ ಆಳ್ವಿಕೆ ನಡೆಯುತ್ತಿರುವಾಗ ಪುರಂದರದಾಸರು ಇಪ್ಪತ್ತು ಮೂರು ಇಪ್ಪತ್ತುನಾಲ್ಕು ವರ್ಷಗಳ ತರುಣ; ಇನ್ನೂ ಪುರಂದರದಾಸರಾಗಿರಲಿಲ್ಲ. ಹರಿದಾಸದೀಕ್ಷೆ ಇನ್ನೂ ತುಂಬ ದೂರದಲ್ಲಿದ್ದಿತೇನೋ; ಸಾಧನೆಯ ದಾರಿಯನ್ನು ಇನ್ನೂ ಕಂಡುಕೊಂಡಿರಲಿಲ್ಲ. ಜನಜೀವನದಲ್ಲಿ ಇದ್ದ ಆತಂಕ ಅವರನ್ನು ಕಾಡದೆ ಬಿಟ್ಟಿರಲಾರದು. ಮುಂದೆ ಅವರು ತಳೆದ ಸಾಮಾಜಿಕ ನಿಲುವು ಈ ಪರಿಸ್ಥಿತಿಯ ಪ್ರಭಾವವನ್ನು ಅಳವಡಿಸಿಕೊಳ್ಳದಿರುವುದು ಸಾಧ್ಯವಿಲ್ಲ. ಪುರಂದರದಾಸರು ನಡುವಯಸ್ಸಿನಲ್ಲಿರುವಾಗ ಪರಿಸ್ಥಿತಿ ಮತ್ತೆ ಉತ್ತಮಗೊಂಡಿತೆನ್ನಿ. ಕೃಷ್ಣದೇವರಾಯನು ೧೫೦೯ರಲ್ಲಿ ಪಟ್ಟಕ್ಕೆ ಬಂದು ೧೫೩೦ರಲ್ಲಿ ತೀರಿಕೊಳ್ಳುವವರೆಗೂ ಸುವರ್ಣಯುಗವೇ. ಸಾಮ್ರಾಜ್ಯ ಸುಭದ್ರವಾದುದು ಮಾತ್ರವಲ್ಲ, ಪ್ರಬಲವಾಯಿತು. ಕೃಷ್ಣದೇವರಾಯನನ್ನು ಸೆಣಸಬಲ್ಲ ರಾಜ ದಕ್ಷಿಣ ದೇಶದಲ್ಲೆಲ್ಲ ಒಬ್ಬನಿರಲಿಲ್ಲ; ಮತ್ತೆ ಅವನು ಧರ್ಮಶ್ರದ್ಧೆಯುಳ್ಳವನು, ಕಲಾಭಿಮಾನಿ, ರಸಿಕ, ಪಂಡಿತಪೋಷಕ, ಸ್ವತಃ ಕವಿ. ಸಮಾಜದಲ್ಲಿ ಸಂಸತಿಯ ಪಾತ್ರ ವಿಶಿಷ್ಟವಾಯಿತು. ಧರ್ಮ ಶ್ರದ್ಧಾಳುವಾದರೂ ಉದಾರಿ. ಬಹಮನೀ ಸುಲ್ತಾನನಾದ ಮಹಮದ್ ಶಾ ಆಸ್ಥಾನದ ಒಳಸಂಚಿನಿಂದ ಬೀದರಿನಲ್ಲಿ ಸೆರೆಯಲ್ಲಿದ್ದ; ಕೃಷ್ಣದೇವರಾಯನು ಬೀದರನ್ನು ಮುತ್ತಿ, ಮಹಮದ್‌ಶಾನನ್ನು ಸೆರೆಯಿಂದ ಬಿಡಿಸಿ ಅವನಿಗೆ ಮತ್ತೆ ಪಟ್ಟಗಟ್ಟಿ 'ಯವನರಾಜ್ಯಸ್ಥಾಪನಾಚಾರ್ಯ'ನೆಂಬ ಬಿರುದನ್ನು ಪಡೆದುಕೊಂಡ. ಹಿಂದೂ ಸಮಾಜ ಎಲ್ಲ ವಿಧದಲ್ಲೂ ಗರಿಕೆದರಿಕೊಂಡು ಮೆರೆದ ಕಾಲ ಅದು.

ಕೃಷ್ಣದೇವರಾಯನು ತೀರಿಕೊಳ್ಳುವ ಸಮಯದಲ್ಲಿ ಪುರಂದರದಾಸರಿಗೆ ನಲವತ್ತೈದು ವರ್ಷ ಪ್ರಾಯ. ಆ ವೇಳೆಗಾಗಲೇ ಅವರು ಹರಿದಾಸರಾಗಿದ್ದರು. ವ್ಯಾಸರಾಯಸ್ವಾಮಿಗಳು ಅರಸನಿಂದ ಸನ್ಮಾನಿತರಾಗಿ ರಾಜಧಾನಿಯಲ್ಲೇ (ಹಂಪಿಯಲ್ಲೇ) ಇರುತ್ತಿದ್ದರು. ಅರಸನ ದೀಕ್ಷೆ ಶ್ರೀವೈಷ್ಣವ

ಸಂಪ್ರದಾಯದ ತಾತಾಚಾರ್ಯರಲ್ಲಿ; ಅರಸನ ವೈಯಕ್ತಿಕ ನಿಷ್ಠೆ ಶ್ರೀವೈಷ್ಣವಧರ್ಮದಲ್ಲೇ. ತನ್ನ 'ಆಮುಕ್ತ ಮಾಲ್ಯದ' ಕೃತಿಯ ವಸ್ತು ಈ ಸಂಪ್ರದಾಯದ ಹಿರಿಯರಾದ ಪೆರಿಯಾಳ್ವಾರರು; ಗ್ರಂಥಾರಂಭದಲ್ಲಿ ಶ್ರೀವೈಷ್ಣವ ಸಂಪ್ರದಾಯದಂತೆಯೇ ಅನಂತ, ಗರುಡ, ವಿಷ್ವಕ್ಸೇನರ ಸ್ತುತಿ, ಹನ್ನೆರಡು ಮಂದಿ ಆಳ್ವಾರರ ಸ್ತುತಿಗಳು ಬರುತ್ತವೆ. ದೊರೆ ಇತರ ಸಂಪ್ರದಾಯಗಳ ಹಿರಿಯರನ್ನೂ ಗೌರವದಿಂದ ಕಾಣುತ್ತಿದ್ದ. ನಿದರ್ಶನಕ್ಕೆ ಮಾಧ್ವಸಂಪ್ರದಾಯದ ವ್ಯಾಸರಾಯಸ್ವಾಮಿಗಳ ಮೇಲೆ ಅವನಿಗೆ ಎಲ್ಲಿಲ್ಲದ ಭಕ್ತಿ. ಅವರನ್ನು ಮೆಚ್ಚಿಕೊಂಡು ಕೊಂಡಾಡಿರುವ ಶಾಸನಗಳೇ ಇವೆ. ಹಾಗೆಯೇ ಶೈವ ಸಂಪ್ರದಾಯಕ್ಕೂ ಅವನು ನಡೆದುಕೊಂಡದ್ದುಂಟು. ಅರಸನ ಪ್ರವೃತ್ತಿ ಹೀಗಿದ್ದಿತೆಂದರೆ ಅದರ ಪ್ರಭಾವ ಜನರ ಮೇಲೆ ಆಗದಿರುವುದು ಸಾಧ್ಯವಿಲ್ಲ. ಜನರಲ್ಲೂ ಧರ್ಮವನ್ನೂ ಕುರಿತಂತೆ ಉದಾರವಾದ ಮನೋವೃತ್ತಿ ಬೆಳೆಯತೊಡಗಿತು.

ಪುರಂದರದಾಸರೇ ಇದಕ್ಕೆ ಸಾಕ್ಷಿ. ಅವರು ತಮ್ಮ ಸ್ವಂತನಿಷ್ಠೆಯಲ್ಲಿ ಮಾಧ್ವರಾದರೂ ಶಿವದರುಶನ ತಮಗಾಯಿತು ಎಂದು ಹಿಗ್ಗಿದರು, ಜಂಗಮರು ತಾವೆಂದು, ವೀರಭದ್ರಪ್ರಿಯಭಕ್ತರು ತಾವೆಂದು ಬಣ್ಣಿಸಿಕೊಂಡರು; ಸದ್ಗುರುವು ತನ್ನನ್ನು ಫಕೀರನನ್ನಾಗಿ ಮಾಡಿದುದನ್ನು ನೆನೆಸಿಕೊಂಡರು; ತುರುಕರು ಕರೆದರೆ ಉಣಬಹುದೆಂದು ಮಾರ್ಮಿಕವಾಗಿ ಸೂಚಿಸಿದರು; ಧ್ರುವಗೊಲಿದು ಪದವಿತ್ತವನನ್ನು, ಕರಿಮೊರೆ ಕೇಳಿದ ಶ್ರೀಶನನ್ನು, ಹುಸ್ಸೇನ್ ಎಂದು ಕರೆದು 'ಅರಿತು ಬಂದೆನಲ್ಲಿ, ಪುರಂದರ ವಿಠಲನಲ್ಲದಿಲ್ಲಲ್ಲಾ' ಎಂದು ಹೇಳಿದರು; 'ಅಲ್ಲಾ ಖುದಾ ಎಂದು ಆತ್ಮದಲಿ ತಿಳಿಯದೆ ಮುಲ್ಲ ಶಾಸ್ತ್ರದ ನೆಲೆಯ ತಾನರಿಯದೆ' ಎಂದು ಮರುಗಿದರು; 'ಅರಿಯದೆ ಬಂದೆವು ಕಿಮ್ಸನ್, ಪರಿಹರಿಸಯ್ಯ ಬಮ್ಸನ್, ಪರಿಯಿಂದಲೆ ಹರಿ ಹರಿ ಎಂದರೆ ದುರಿತದ ಭಯ ಒಂದಿಲ್ಲವಲ್ಲಾ' ಎಂದು ಮುಂತಾಗಿ ಹಾಡಿದರು. ಈ ಬಗೆಯ ಕೃತಿಗಳು ವಿನೋದಕ್ಕಾಗಿ ಮಾಡಿದವಲ್ಲ. ದೇವರು ಒಬ್ಬನೇ, ಹೆಸರು ಯಾವುದಾದರಿರಲಿ, ಅವನ ಭಕ್ತರೆಲ್ಲ ಮಾನವಜನ್ಮವೆತ್ತಿದವರೇ ಎಂಬ ನಂಬಿಕೆ ಅವರ ಒಡಲ ಆಳದಲ್ಲಿ ಬೇರೂರಿದ್ದುದು ಈ ಕೃತಿಗಳನ್ನು ಹೊರಹೊಮ್ಮಿಸಿತು. ಈ ದೃಷ್ಟಿಯನ್ನು ಪುರಂದರ ದಾಸರಿಗೆ ಪೂರ್ವದಲ್ಲಾಗಲಿ ಅವರನಂತರ ಬಂದ ಹರಿದಾಸರಲ್ಲಾಗಲಿ ಕಾಣಲಾರೆವು.

ಕೃಷ್ಣದೇವರಾಯನು ತೀರಿಕೊಂಡಮೇಲೆ ಸಮಾಜದ ನೆಮ್ಮದಿ ಮತ್ತೆ ಬಿರುಗಾಳಿಗೊಡ್ಡಿದ ದೀವಿಗೆಯಂತಾಯಿತು. 'ನೆಚ್ಚದಿರಿ ಈ ಭಾಗ್ಯ ಸ್ಥಿರವಲ್ಲ' ಎಂದು ದಾಸರು ಜನರನ್ನು ಎಚ್ಚರಿಸಿದರು. ತೀರಿಕೊಳ್ಳುವ ಮುಂಚೆ ಕೃಷ್ಣದೇವರಾಯನು ಪ್ರಧಾನಿ ಚೆಲ್ಲಪ್ಪನನ್ನು ಚಂದ್ರಗಿರಿಗೆ ಕಳುಹಿಸಿ ಅಲ್ಲಿಂದ ಅಚ್ಯುತದೇವರಾಯನನ್ನು ಕರೆತರಿಸಿ ಅವನಿಗೆ ಪಟ್ಟಕಟ್ಟುವ ಅಪೇಕ್ಷೆಯನ್ನು ವ್ಯಕ್ತಪಡಿಸಿದನು; ಮರಣೋನ್ಮುಖನಾದ ಅರಸನು ಸರ್ವಾಧಿಕಾರವನ್ನು ತನಗೇ ವಹಿಸುವನೆಂದು ಬಗೆದಿದ್ದ ಅವನ ಅಳಿಯ ಅರವೀಡು (ಅರವೇಟಿ) ರಾಮರಾಜನು ಎದುರುಬಿದ್ದನು. ಕಡೆಗೆ ಅಚ್ಯುತದೇವರಾಯನಿಗೇ ಪಟ್ಟವಾದರೂ ರಾಮರಾಜನ ಕಿರುಕುಳ ತಪ್ಪಲಿಲ್ಲ. ಅಚ್ಯುತದೇವರಾಯನು ಆಳಿದ ಹನ್ನೆರಡು ವರ್ಷಗಳೂ (೧೫೩೦-೧೫೪೨) ತೊಂದರೆಯ ಕಾಲವೇ; ಅಲ್ಲಲ್ಲಿ ದಂಗೆಗಳು, ಆಗಾಗ ದಾಳಿಗಳು, ಮತ್ತೆ ಮತ್ತೆ ಯುದ್ಧದ ಪ್ರಸಕ್ತಿ; ಅರಮನೆಯಲ್ಲಿ ಅಂತಃಕಲಹ, ಆಡಳಿತದಲ್ಲಿ ಅವ್ಯವಸ್ಥೆ. ಹೀಗಾಗಿ ಜನರಿಗೆ ಸುಖಜೀವನವೆಂಬುದು ಕನಸಾಯಿತು. ಈ ಸಮಾರಂಭದಲ್ಲಿ ತಮ್ಮ ಕರ್ತವ್ಯವಿದೆಯೆಂದು ಭಾವಿಸಿ ಪುರಂದರದಾಸರು ವ್ಯಕ್ತಿಜೀವನದಲ್ಲಿ ಆಧ್ಯಾತ್ಮದಿಂದ ನೆಮ್ಮದಿಯನ್ನು ಪಡೆದುಕೊಳ್ಳುವ

ಬಗೆಯನ್ನು ಜನರಿಗೆ ತಿಳಿಯಪಡಿಸಿದರು. ಅವರ ಹಲವಾರು ರಚನೆಗಳಲ್ಲಿ ಅಂದಿನ ಸಮಾಜದ ದುಗುಡವನ್ನು ಕಾಣಬಹುದು. ಪುರಂದರದಾಸರು ಐವತ್ತಾರು-ಐವತ್ತೇಳು ವರ್ಷದವರಿದ್ದಾಗ ನಾಡಿನಲ್ಲಿ ಮತ್ತೊಂದು ಆತಂಕಪರಿಸ್ಥಿತಿಯೊದಗಿತು. ಅಚ್ಯುತರಾಯನು ೧೫೪೨ರಲ್ಲಿ ತೀರಿಕೊಳ್ಳುವಾಗ ಅವನ ಮಗ ವೆಂಕಟಪತಿದೇವರಾಯನು ಇನ್ನೂ ಸಣ್ಣ ಹುಡುಗ. ಅವನ ಸೋದರಮಾವ ಸಲಕ ಚಿನ್ನ ತಿರುಮಲರಾಜ ಅವನ ಪರವಾಗಿ ಆಡಳಿತವನ್ನು ವಹಿಸಿಕೊಂಡ. ಇವನು ದುರುಳ, ದ್ರೋಹಿ; ಅಧಿಕಾರದ ಆಸೆ ಹೆಚ್ಚಾಗಿ ಹುಡುಗ ರಾಜನನ್ನೂ ತೀರಿಸಿ ತಾನೇ ಪಟ್ಟವೇರುವ ಸನ್ನಾಹ ಮಾಡತೊಡಗಿದ. ಇದರ ಸುಳಿವನ್ನು ತಿಳಿದ ವೆಂಕಟಪತಿದೇವರಾಯನ ತಾಯಿ ವರದಾದೇವಿ ಸಲಕ ಚಿನ್ನ ತಿರುಮಲರಾಜನ ಬಲವನ್ನು ಮುರಿಯಲು ಬಿಜಾಪುರ ಸುಲ್ತಾನ ಇಬ್ರಾಹಿಂ ಅದಿಲ್ ಶಾಹುವಿನ ನೆರವನ್ನು ಕೋರಿದಳು. ಈ ಮುಸಲ್ಮಾನ ದೊರೆಯು ವಿಜಯನಗರಕ್ಕೆ ದಂಡೆತ್ತಿಬಂದನು. ಜನರಲ್ಲಿ ಮತ್ತೆ ಹಾಹಾಕಾರ, ಜೀವನದಲ್ಲಿ ಗೊಂದಲ, ಆಡಳಿತದಲ್ಲಿ ಆತಂಕ, ಚಿನ್ನ ತಿರುಮಲರಾಜನು ಈ ಪರಿಸ್ಥಿತಿಯಲ್ಲಿ ರಾಜ್ಯಸೂತ್ರಗಳನ್ನು ತಾನೇ ನೇರವಾಗಿ ವಹಿಸಿಕೊಂಡು ಬಿಜಾಪುರ ಸುಲ್ತಾನನನ್ನು ಎದುರಿಸಿ ಹೊಡೆದೋಡಿಸಿದ. ಆದರೆ ಅಲ್ಲಿಂದ ಮುಂದೆ ಈ ಸಲಕ ರಾಜನ ದೌರ್ಜನ್ಯಕಾಂಡ ಮೊದಲಾಯಿತು. ಜನರನ್ನು ಬಗೆಬಗೆಯಾಗಿ ಕಾಡತೊಡಗಿದ. ರಾಜ ವೆಂಕಟಪತಿದೇವನನ್ನು ಕೊಲ್ಲಿಸಿದ; ಅವನ ಪರವಾಗಿ ಇದ್ದವರೆಂದು ತಾನು ತಿಳಿದವರನ್ನೆಲ್ಲ ದೇಶದಿಂದ ಓಡಿಸಿದ.

ಪುರಂದರದಾಸರು "ಸತ್ಯವಂತರಿಗಿದು ಕಾಲವಲ್ಲ, ದುಷ್ಟ ಜನರಿಗೆ ಸುಭಿಕ್ಷಕಾಲ" ಎಂದು ಕೊರಗಿದ್ದು, "ಒತ್ತಿಹಿಡಿದ ಕಂಬ ವ್ಯರ್ಥವಾಯಿತು, ಬಾವಿ ತೋಡಲು ಬೇತಾಳ ಹೊರಟಿತು, ಆರ್ಥಿಯ ಸಂಸಾರ ಅಡವಿಪಾಲಾಯಿತು" ಎಂದು ಮುಂತಾಗಿ ದಾಸರು ಪರಿತಪಿಸಿದ್ದು. ಇದೇ ಕಾಲದಲ್ಲಿದ್ದೀತು. ಬಿಜಾಪುರ ಸುಲ್ತಾನನು ರಾಜಧಾನಿಯ ಮೇಲೆ ದಾಳಿಮಾಡಿದಾಗ ಸಲಕರಾಜನಿಗೆ ಸರ್ವಾಧಿಕಾರವನ್ನು ಕೊಟ್ಟವರು ಜನರೇ. ಅವನು ಬಲಿಷ್ಠನಾಗಿ ಪ್ರಜೆಗಳ ಹಿತವನ್ನು ಸಾಧಿಸಿಯಾನೆಂದು ಜನ ಭರವಸೆಯನ್ನು ತಾಳಿದ್ದರು. ಆದರೆ "ಭಾವಿಸಿದ್ದೆಲ್ಲ ಭೂಮಿಪಾಲಾಯಿತು, ಸರಸ ಸಂಸಾರದ ಸವಿ ಹಾರಿಹೋಯಿತು", "ಆರೇನು ಮಾಡುವರು? ಆರಿಂದಲೇನಹುದು?", "ಪ್ರಾಚೀನ ಕರ್ಮವು ಬಿಡಲರಿಯದು, ಯೋಚನೆಯ ಮಾಡಿ ನೀ ಬಳಲಬೇಡ", "ಯಾರಿಗೆ ಯಾರುಂಟು ಎರವಿನ ಸಂಸಾರ", "ಕಲಿಯುಗದ ಮಹಿಮೆಯು ಕಂಡುಬಂತೀಗ", "ಧರ್ಮಕ್ಕೆ ಕೈಬಾರದೀ ಕಾಲ" ಎಂಬ ನಿರಾಶಭಾವನೆಯೂ ಜನರಲ್ಲಿ ಮೂಡಿತು. "ಆರೇನು ಮಾಡುವರು ಅವನಿಯೊಳಗೆ? ಪೂರ್ವಜನ್ಮದ ಕರ್ಮ ಹಣೆಯಲ್ಲಿ ಬರೆದುದಕೆ?" ಎಂದು ಮೊದಲಾಗುವ ಪದದಲ್ಲಿ ಜನರ ಬವಣೆಯ ವರ್ಣನೆಯಿದೆ. ಒಂದು ವರ್ಷ (೧೫೪೨) ಅಲ್ಲಿನ ಜನರ ಕಷ್ಟ ಹೇಳತೀರದು.

ಕಡೆಗೆ ಜನರು ಬೇಸತ್ತು ಅಳಿಯ ರಾಮರಾಜನನ್ನು (ಕೃಷ್ಣದೇವರಾಯನ ಅಳಿಯನಾಗಿ ಅವನ ಹೆಸರೇ ಅಳಿಯ ರಾಮರಾಜನೆಂದಾಯಿತು) ಪ್ರೋತ್ಸಾಹಿಸಿ, ಅವನು ಸಲಕ ಚಿನ್ನತಿರುಮಲ ರಾಯನನ್ನು ಎದುರಿಸಿ, ಅವನೊಂದಿಗೆ ಕಾದಾಡಿ ಕೊಲ್ಲುವಂತೆ ಮಾಡಿದರು. ಮರುವರ್ಷ ಅಳಿಯ ರಾಮರಾಜನು ಸದಾಶಿವರಾಯ ಮಹಾರಾಯನನ್ನು ಸಿಂಹಾಸನದ ಮೇಲೆ ಕೂರಿಸಿ ತಾನು ಅವನ ಪರವಾಗಿ ಆಡಳಿತವನ್ನು ಕೈಗೊಂಡು ಸರ್ವಾಧಿಕಾರಿಯಾದ. ರಾಮರಾಜನು ಸಮರಶೂರನಾದರೂ

ಸುಸಂಸ್ಕೃತ, ವಿದ್ವತ್‌ಪಕ್ಷಪಾತಿ, ಕಲಾಪ್ರೇಮಿ, ಶ್ರದ್ಧಾಳು. ಅವನ ಆಡಳಿತದಲ್ಲಿ ಜನರು ಮತ್ತೆ ನೆಮ್ಮದಿಯಿಂದ ಉಸಿರು ಬಿಡುವಂತಾಯಿತು. ಆಗಲೂ ದಾಸರು ತಮ್ಮ ಕರ್ತವ್ಯವನ್ನು ಮನಗಂಡು "ಯಾರು ಒಲಿದರೇನು, ನಮಗಿನ್ನಾರು ಮುನಿದರೇನು?", "ಅಂದಿಗಲ್ಲದೆ ಮನದ ಪರಿತಾಪವಡಗದೊ", "ಅವನಾವನು ಕಾಯ್ವ ಅವನಿಯೊಳಗೆ, ಜೀವರಿಗೆ ಧಾತ ಶ್ರೀಹರಿಯಲ್ಲವೆ?", "ಏನು ಮಾಡಿದರೇನು ಭಯ ಹಿಂಗದು, ದಾನವಾಂತಕ ನಿನ್ನ ದಯವಾಗೋತನಕ", "ಯಾರಿದ್ದರೇನಯ್ಯ ನೀನಲ್ಲದೆನಗಿಲ್ಲ", "ಕೊಡುವ ಕರ್ತು ಬೇರ ಇರಲು, ಬಿಡು ಬಿಡು ಚಿಂತೆಯನು", "ಬಲವು ಬಲವೇ ನಿನ್ನ ಬಲವಲ್ಲದೆ ಮಿಕ್ಕ ಬಲಗಳುಂಟೆ?", "ಅಂಜಿಕಿನ್ಯಾತಕಯ್ಯ ಸಜ್ಜನರಿಗೆ, ಸಂಜೀವರಾಯರ ಸ್ಮರಣೆ ಮಾಡಿದ ಮೇಲೆ?", "ಯಾಕೆ ಕುಕಲಾತಿ ಪಡುಬೆ ಎಲೆ ಮರುಳೆ, ಲೋಕ ಮೂರನು ಆಳ್ವ ಶ್ರೀನಿವಾಸನು ನಮ್ಮ ಸಾಕಲಾರದೆ ಬಿಡುವನೆ?", " ಬಂದದ್ದೆಲ್ಲ ಬರಲಿ ಗೋವಿಂದನ ದಯವೊಂದಿರಲಿ", "ಕಾವ ದೇವ ನೀನಲ್ಲದೆ ಜಗಕೆ ಇನ್ನಾವ ದೇವರುಳ್ಳರೈ?", "ನೆಚ್ಚದಿರೀ ಭಾಗ್ಯ ಯಾರಿಗೂ ಸ್ಥಿರವಲ್ಲ, ನಿಶ್ಚಯವೆಚ್ಚರಿಕೆ!" ಎಂದು ಜನರನ್ನು ಎಚ್ಚರಿಸುತ್ತ ಬಂದರು.

ಇಂಥ ಪದಗಳಲ್ಲಿ ದಾಸರ ದೃಷ್ಟಿ ಆಧ್ಯಾತ್ಮಿಕವಾದುದೆಂದು ಹೇಳಿದರೂ ಜನರ ಒಲವುಗಳನ್ನು ತಿದ್ದುವುದು ಅದರ ಉದ್ದೇಶ. ಜನರು ಸಮಾಜದಲ್ಲಿರುತ್ತ ಆಡಳಿತದ ಕಡೆ ಕಣ್ಣುಹರಿಸಿ, ತಮ್ಮ ಬದುಕಿನ ಸುಖದುಃಖಗಳಿಗೆ, ಕಷ್ಟನಿಷ್ಠುರಗಳಿಗೆ, ಭಾಗ್ಯ ಬಡತನಗಳಿಗೆ ಆಡಳಿತವೇ ಹೊಣೆಯೆಂದು ಬಗೆಯುವುದು ಸಹಜ. ಅಧಿಕಾರದಲ್ಲಿರುವವರು ಒಲಿದರೆ ತಮ್ಮ ಬಾಳು ಹಸನಾದೀತು ಎಂದು ಬಗೆಯುವರು; ಸಂಪತ್ತು ಕೈಗೂಡಿದರೆ ಸುಖ ಸಿದ್ಧವಾಯಿತೆಂದು ಬಗೆಯುವರು; ಪ್ರಾಪಂಚಿಕ ಅಭ್ಯುದಯವನ್ನು ಸಾಧಿಸಿಕೊಳ್ಳಲು ನೀತಿಯನ್ನು ಬಿಡಬೇಕಾಗಿ ಬಂದರೂ ಸರಿಯೇ ಎಂದು ಸಮಾಧಾನ ತಂದುಕೊಳ್ಳುವರು; ಅರಸನ ದಯೆಯಾದರೆ ತಮ್ಮ ಕಾರ್ಪಣ್ಯ ಹರಿಯಿತು ಎಂದು ಬಾಯಿಬಿಡುವರು. ಈ ಮನೋವೃತ್ತಿಗಳಿಂದ ನೆಮ್ಮದಿಯು ಬರಲಾರದೆಂದು ದಾಸರ ಬೋಧೆ.

ಇಂಥ ಆಸೆಗಳನ್ನಿರಿಸಿಕೊಂಡ ಜನ ಬರಿದೆ ಬವಣೆಪಡುವುದನ್ನು ಅವರು ಕಂಡಿದ್ದರು; 'ದುಗ್ಗಾಣಿ ಎಂಬುದು ದುರ್ಜನಸಂಗ'ವೆಂಬುದನ್ನು ಅವರು ಎಲ್ಲೆಲ್ಲೂ ಕಾಣುತ್ತಿದ್ದರು. "ಈ ಸಿರಿಯನ್ನು ಕಂಡು ಹಿಗ್ಗುತ್ತಿದ್ದವರೇ" ಅವರ ಸುತ್ತ ಇದ್ದವರು. ಇಂಥವರ ಗಮನವನ್ನು ಅಧ್ಯಾತ್ಮದ ಕಡೆ ತಿರುಗಿಸಿ, ಅವರ ಆಚಾರವನ್ನು ನೀತಿಯಲ್ಲಿ ನಿಲ್ಲಿಸಿ, ವ್ಯಕ್ತಿಜೀವನದಲ್ಲಿ ಶುದ್ಧಿ, ಸ್ಥೈರ್ಯ, ಧೈರ್ಯಗಳನ್ನು ಮೂಡಿಸಬೇಕೆಂದೇ ಅವರು ದಾಸರಾಗಿ ಊರೂರು ತಿರುಗಾಡಿದರು. ಜನರು ತಮ್ಮ ಬದುಕನ್ನು ಓರಣವಾಗಿ ಮಾಡಿಕೊಂಡಲ್ಲದೆ, ತಮ್ಮ ನಿಷ್ಠೆಯನ್ನು ದೈವದಲ್ಲಿ ಸಲ್ಲಿಸದೆ, ನೆಮ್ಮದಿಯನ್ನು ಕಾಣಲಾರರು. ದೈವದ ಬಲವೆಂಬುದು ಯಾವ ಕಾಲದಲ್ಲೂ, ಯಾವ ದೇಶದಲ್ಲೂ ಯಾರಿಗಾದರೂ ಅಗತ್ಯವಾದುದು. "ಎನ್ನ ಕಡೆ ಹಾಯಿಸುವುದು ನಿನ್ನ ಭಾರ" ಎಂದು "ದೈವವನ್ನು ಶರಣೆಂದು ಮನಗಾಣುವ ತನಕ" "ಅನುಗಾಲವು ಚಿಂತೆ ಈ ಜೀವಕ್ಕೆ". ಅದನ್ನು ಬಿಟ್ಟು ನೆಮ್ಮದಿಯ ನೆಲೆಯನ್ನು "ಹತ್ತೆಂಟು ಜಾಗಗಳಲಿ ಹಂಬಲಿಸುವ ಮೂರ್ಖ". ಜನಜೀವನದಲ್ಲಿ ಆಧ್ಯಾತ್ಮಿಕ ದೃಷ್ಟಿ ಒದಗದೆ ಸಮಾಜದ ಅಭ್ಯುದಯ ಸಾಧ್ಯವಿಲ್ಲ. ಅದು ಸಾಧ್ಯವೆಂದು ಬಗೆದೇ "ಮೂರ್ಖರಾದರು ಜನರು ಲೋಕದೊಳಗೆ". ಆಧ್ಯಾತ್ಮಿಕ ಪ್ರಸಕ್ತಿಯಿರುವ ಜನ "ಧರ್ಮವೇ ಜಯವೆಂದು ದಿವ್ಯಮಂತ್ರ"ವನ್ನು

ಹಿಡಿಯುತ್ತಾರೆ. "ಹೆಮ್ಮೆಯಾಡು"ವುದಿಲ್ಲ, "ಅನ್ಯರನು ಘಾಸಿಪಡಿಸು"ವುದಿಲ್ಲ. ಧರ್ಮವೆಂಬುದು ವ್ಯಕ್ತಿಯನ್ನೂ ಸಮಾಜವನ್ನೂ ಒಟ್ಟಿಗೆ ಎತ್ತಿ ನಿಲ್ಲಿಸುವ ಸಾಧನೆಯೆಂದೇ ದಾಸರ ವಿಶ್ವಾಸ. ಅದಕ್ಕಾಗಿಯೇ ಅವರು "ಧರ್ಮದ ಹಾದಿಯ ಹಳಿಯಬೇಡೆಚ್ಚರಿಕೆ!" ಎಂದರು. ವ್ಯಕ್ತಿಗೆ ಯಾವುದು ವಿಹಿತವೋ ಸಮಾಜಕ್ಕೂ ಅದೇ ವಿಹಿತ. ವ್ಯಕ್ತಿಗೊಂದು ನೀತಿಸಂಹಿತೆ, ಸಮಾಜಕ್ಕೆ ಬೇರೆಯದೊಂದು ನೀತಿಸಂಹಿತೆ ಎಂಬುದನ್ನು ದಾಸರು ಒಪ್ಪರು. ವ್ಯಕ್ತಿಗಾಗಲಿ ಸಮಾಜಕ್ಕಾಗಲಿ ಸಾಧನ-ಸಾಧ್ಯಗಳಲ್ಲಿ ಹೊಂದಾಣಿಕೆಯಿರಬೇಕು

'ಎರವಿನ ಸಿರಿಗೆ ಬಿಮ್ಮನೆ ಬೆರೆತರೆ
ನೀರ ಕಡೆದರುಂಟೆ ಬೆಣ್ಣೆ?
ಉರಗನ ಹೆಡೆಯ ನೆಳಲ ಸೇರಿದ ಕಪ್ಪೆ
ಸ್ಥಿರಕಾಲ ಬಾಳ್ವುದೆ ಜೀವವೇ?'

ಬದುಕಿನಲ್ಲಿ ಆಧ್ಯಾತ್ಮಿಕತೆಯೆನ್ನುವುದು ಪಾಥೇಯ; ಬುತ್ತಿ, "ತತ್ತ್ವವೆಂಬ ಬುತ್ತಿ". ಆ ಬುತ್ತಿಯನ್ನು ಕಟ್ಟಿದರೆ "ಎತ್ತಲಾದರೂ ಉಣ್ಣಬಹುದು"; ಧರ್ಮವೆಂಬ ಮಡಕೆಯಲ್ಲಿ, ನಿರ್ಮಲಮನವೆಂಬ ಗಂಗೆ ತುಂಬಿ, ಸುಮ್ಮಾನದುರಿಯ ಹಚ್ಚಿ ಆ ಬುತ್ತಿಯನ್ನು ಸಿದ್ಧಪಡಿಸಬೇಕಂತೆ; ಅರಿವೆಂಬ ಅರಿವೆ ಹಾಸಿ, ಹರಿಗೆ ಅರ್ಪಣೆಮಾಡಿ ನಿತ್ಯ ಉಂಡು ತೃಪ್ತಿಪಡಬೇಕಂತೆ.

ಇದಕ್ಕಾಗಿ ದಾಸರು ಧರ್ಮಜೀವನದ ಅಗತ್ಯವನ್ನು ಒತ್ತಿ ಹೇಳಿದರು. ಅವರ ರಚನೆಗಳಲ್ಲಿ ಬಹುಪಾಲು "ಮಾನವಜನ್ಮ ದೊಡ್ಡದು, ಅದ ಹಾನಿಮಾಡಲಿಬೇಡಿ" ಎಂಬ ಮಾತಿನ ವ್ಯಾಖ್ಯಾನರೂಪವಾದದ್ದೇ. ಭಗವತ್‌ಸ್ವರೂಪ, ಸಾಧನೆಗಳನ್ನು ಕುರಿತ ಪದಗಳಿಗಿಂತ ಹೆಚ್ಚಾಗಿ ವ್ಯಕ್ತಿಜೀವನದಲ್ಲಿರಬೇಕಾದ ಧರ್ಮನಿಷ್ಠೆಯನ್ನು ಕುರಿತ ಪದಗಳಿವೆ.

ವಿಷಯದ ವಿಚಾರ ಬಿಡು
ವಿಹಿತಕರ್ಮವ ಮಾಡು
ವೈರಾಗ್ಯ ಭಾಗ್ಯವ ಬೇಡು

ಎಂಬುದು ಅವರು ಹೇಳಿಕೊಟ್ಟ ದಿವ್ಯಮಂತ್ರ. ಇದರಿಂದ ಇಹದಲ್ಲಿ ನೆಮ್ಮದಿಯುಂಟು, ಪರದಲ್ಲಿ ಸುಖವುಂಟು. ಮುಕ್ತಿಯನ್ನು ಬಯಸುವವರೂ ಇಲ್ಲಿನ ನೀತಿ ಸಂಹಿತೆಯನ್ನು ಕೈಬಿಡುವಹಾಗಿಲ್ಲ. ದಾಸರು ರಚಿಸಿರುವ 'ಸುಮ್ಮನೆ ಬರುವುದೆ ಮುಕ್ತಿ?' ಎಂಬ ಪದದಲ್ಲಿರುವ ಒಕ್ಕಣೆಯನ್ನು ನೋಡಿ

'ಮನದಲ್ಲಿ ಧೃಡವಿರಬೇಕು'
'ಜನರ ಸಂಸರ್ಗವ ನೀಗಲುಬೇಕು'
'ಕಾಮಕ್ರೋಧವ ಬಿಡಬೇಕು'
'ಕಾಮಿನಿಯರ ಹಂಬಲ ಬಿಡಬೇಕು'
'ಹೇಮದಾಸೆಯ ಸುಡಬೇಕು'

'ಸಂದಣಿಗಳ ಸೇರದಿರಬೇಕು'
'ನಿಂದಿಸಿದರೆ ಹಿಗ್ಗಬೇಕು'
'ಕೋಪಬಂದಾಗ ಸೈರಣೆ ಬಿಡದಿರಬೇಕು'
'ಹರಿಯೇ ಗುರುವೆನ್ನಬೇಕು'
'ವ್ಯಾಪಾರವನು ಬಿಡಬೇಕು'
'ಪಾಪರಹಿತನಾಗಲಿಬೇಕು'
'ಜ್ಞಾನದೀಪದ ಬೆಳಕಿನಲಿ ಓಡ್ಯಾಡಬೇಕು'

ಇವೆಲ್ಲ ಮುಕ್ತಿಗೂ ಬೇಕು; ಇಲ್ಲಿನ ಸಂಸಾರದಲ್ಲಿ ಸುಖವಾಗಿರಲೂ ಬೇಕಾದುವೇ. ಇಹ-ಪರಗಳೆರಡನ್ನೂ ಒಟ್ಟಿಗೆ ಸಾಧಿಸಿಕೊಳ್ಳುವುದು ಜಾಣತನವೆಂದು ದಾಸರ ಕಿವಿ ಮಾತು. ಒಂದನ್ನು ಬಯಸಿ ಮತ್ತೊಂದನ್ನು ಹಾಳು ಮಾಡಿಕೊಳ್ಳುವವನು ಮೂರ್ಖ. ಈ ಮಾತು ಯೋಗಿಗೂ ಸರಿಯೇ ಭೋಗಿಗೂ ಸರಿಯೇ; ಅರಸನಿಗೂ ಸರಿಯೇ ಊಳಿಗದವನಿಗೂ ಸರಿಯೇ; ಪಂಡಿತನಿಗೂ ಸರಿಯೇ, ಪಾಮರನಿಗೂ ಸರಿಯೇ; ಗಂಡಸಿಗೂ ಸರಿಯೇ ಹೆಂಗಸಿಗೂ ಸರಿಯೇ. ಇಹಪರಗಳ ಹೊಂದಾಣಿಕೆಯಲ್ಲಿ ಕುಲ, ಮತ, ಸಂಪತ್ತು, ಅಧಿಕಾರ ಮೊದಲಾದುವುಗಳ ಎಣಿಕೆಯಿರದು.

ಪುರಂದರದಾಸರ ಕಡೆಗಾಲದಲ್ಲಿ ವಿಜಯನಗರದ ರಾಜನಾಗಿದ್ದವನು ಸದಾಶಿವ ರಾಯಮಹಾರಾಯ. ಹೆಸರಿಗೆ ಮಾತ್ರ ರಾಜ; ಸರ್ವಾಧಿಕಾರವೂ ಅಳಿಯ ರಾಮರಾಜನದೇ. ರಾಮರಾಜನ ಪ್ರಭಾವ ಪ್ರಬಲವಾದಂದು ಅರವೀಡು ವಂಶದವರ ಮೇಲಾಟ ತಲೆದೋರಿತು. ಈ ಸಂದರ್ಭದಲ್ಲಿ ಕುಲಗಳ ನಡುವೆ ಕಲಹ, ಜಾತಿಗಳ ನಡುವೆ ಜಗಳ, ವರ್ಗಗಳ ನಡುವೆ ವಿರಸ ಹೆಚ್ಚಾದುದನ್ನು ಇತಿಹಾಸಕಾರರು ಗಮನಿಸಿದ್ದಾರೆ. ಇದರಿಂದ ಸಾಮ್ರಾಜ್ಯದ ಸಾಮರ್ಥ್ಯ ದುರ್ಬಲವಾಯಿತು; ನೆರೆ ರಾಜ್ಯಗಳಾದ ಬಿಜಾಪುರ, ಅಹಮದ್‌ನಗರ, ಗೋಲ್ಕೊಂಡ, ಬೀದರುಗಳು ಬಲಗೊಂಡುವು. ಕಡೆಗೆ ರಕ್ಕಸತಂಗಡಿ ಯುದ್ಧದಲ್ಲಿ ವಿಜಯನಗರದ ಸೇನೆ ಸೋತು, ಸಾಮ್ರಾಜ್ಯ ಮರೆಯಾಗಬೇಕಾಯಿತು. ವಿಜಯನಗರದ ಚಕ್ರವರ್ತಿಗಳೆನಿಸಿಕೊಂಡವರು ತಲೆತಪ್ಪಿಸಿಕೊಂಡು ಪೆನುಗೊಂಡೆಯಲ್ಲಿ, ಕಳೆಗುಂದಿ ಅಳಿದುಳಿದ ವಜ್ರಸಿಂಹಾಸನವನ್ನು ಏರಿ ಕಾಲ ತಳ್ಳಬೇಕಾಯಿತು. ದೇಶ ಅರಾಜಕವಾಯಿತು. ವಿಜಯನಗರದ ರಾಜಧಾನಿಯಾದ ಹಂಪಿಯನ್ನು ಶತ್ರುಗಳು ಆರು ತಿಂಗಳುಗಳ ಕಾಲ ಲೂಟಿ ಮಾಡಿ ಅದರ ವೈಭವವನ್ನು ಮಣ್ಣುಗೂಡಿಸಿದರು.

ರಕ್ಕಸತಂಗಡಿ ಕದನವಾದ ವರ್ಷವೇ ಪುರಂದರದಾಸರು ತೀರಿಕೊಂಡರೆಂಬ ಉಲ್ಲೇಖವಿದೆ. ಕದನದ ಕಾವನ್ನು ಕಂಡಿದ್ದರೋ, ಅದಕ್ಕೆ ಮೊದಲೇ ಮರೆಯಾಗಿದ್ದರೋ ತಿಳಿದುಬರುವುದಿಲ್ಲ. ಕದನದ ವರ್ಷ ೧೫೬೫. ಆದರೂ ಅದಕ್ಕೆ ಸಿದ್ಧತೆಗಳು ಕೆಲವು ವರ್ಷಗಳಿಂದ ನಡೆಯುತ್ತಲೇ ಇದ್ದುವು. ಮುಂಬರುವ ಕಾರ್ಮೋಡದ ನೆರಳು ಮೊದಲೇ ಕಾಣಿಸಿಕೊಳ್ಳದಿರದೆ? ಇಪ್ಪತ್ತೆರಡು ವರ್ಷಗಳಿಗೆ ಮುಂಚೆ ಸದಾಶಿವರಾಯನು ಪಟ್ಟಕ್ಕೆ ಬಂದುದೂ ಸಾಮ್ರಾಜ್ಯದ ಆತಂಕಸ್ಥಿತಿಯಲ್ಲೇ; ಈ ಆತಂಕ ಸ್ಥಿತಿ ಸಂಪೂರ್ಣವಾಗಿ ಮರೆಯಾಗಲೇ ಇಲ್ಲ. ಯಾವ ಹೊತ್ತಿನಲ್ಲಿ ಏನು ದಾಳಿಯೋ ಎಂಬ ಭೀತಿ ಜನರನ್ನು ಹಗಲಿರುಳೂ ಕಾಡುತ್ತಿದ್ದಿತು. ಬರುಬರುತ್ತ ಈ ಭೀತಿಗೆ ಆಧಾರಗಳು

ದೃಢವಾದುವು; ಹಲವಾರು ಮಂದಿ ಹಂಪಿಯನ್ನು ಬಿಟ್ಟು ಸುತ್ತಮುತ್ತಲ ಹಳ್ಳಿಗಳಿಗೆ ಹೋದರು. ಪ್ರಾಪಂಚಿಕವಾದ ಸಂಪತ್ತು ಹೆಚ್ಚುತ್ತಿದ್ದುದು ದಿಟ; ಆದರೆ ಸಂಪತ್ತಿನಿಂದ ಸುಖ ಬರುವುದೆಂಬ ನೆಚ್ಚಿಗೆಯಿರಲಿಲ್ಲ.

ವ್ಯಾಪಾರಗಾರರು ಮಾತ್ರ ಬಿರುಸಿನಿಂದ ತಮ್ಮ ಕೆಲಸವನ್ನು ಸಾಗಿಸುತ್ತಿದ್ದರು. ಪರ್ಶಿಯ, ಅರೇಬಿಯ, ಪೋರ್ಚುಗಲ್, ಮತ್ತಿತರ ದೇಶಗಳಿಂದ ಜನ ಹಂಪಿಗೆ ಬರುವರು; ಮುಖ್ಯವಾಗಿ ಕುದುರೆ ವ್ಯಾಪಾರ, ಸೇನೆಗೆ ಅಗತ್ಯವಾದ ಸಾಮಗ್ರಿಗಳ ಸರಬರಾಜು ಇವೇ ಈ ಪರದೇಶದವರ ವಹಿವಾಟು. ಇವರೊಂದಿಗೆ ನಮ್ಮವರು ವ್ಯವಹಾರದಲ್ಲಿ ತೊಡಗಿ ಹಣವನ್ನು ಗಳಿಸುವ ಯೋಚನೆಯಲ್ಲಿದ್ದರು. ಅಧಿಕಾರಿಗಳಿಗಾಗಲಿ, ವ್ಯಾಪಾರಗಾರರಿಗಾಗಲಿ, ಇತರ ಉದ್ಯಮ ಗಳವರಿಗಾಗಲಿ ರಾಜಕಾರಣದ ಪ್ರಜ್ಞೆ ಏನೇನೂ ಇರಲಿಲ್ಲ; ಇನ್ನು ಉಳಿದ ಜನಸಾಮಾನ್ಯರ ಪಾಡೇನು? ಅರಸರ ಸ್ವತ್ತೆಂಬಂತೆ ರಾಜ್ಯದ ಆಡಳಿತ.

ಕೃಷ್ಣದೇವರಾಯನ ಕಾಲದಲ್ಲಿ ಮಾರ್ಗದರ್ಶನ ಮಾಡಲು ವ್ಯಾಸರಾಯಸ್ವಾಮಿಗಳಿದ್ದರು, ಅಷ್ಟದಿಗ್ಗಜರೆಂಬ ಕವಿಗಳಿದ್ದರು, ಪ್ರತಿಭಾವಂತರಾದ, ಸ್ವತಂತ್ರ ಚಿಂತನೆಗೆ ಸಮರ್ಥರಾದ ಸಚಿವರಿದ್ದರು. ಅಚ್ಯುತ ದೇವರಾಯನ ಕಾಲಕ್ಕೇ ಇವರೆಲ್ಲ ಬಹುಮಟ್ಟಿಗೆ ಮರೆಯಾದರು; ಮುಂದೆ ಸದಾಶಿವರಾಯನ ಕಾಲದಲ್ಲಂತೂ ಇಂಥವರು ಇರಲೇ ಇಲ್ಲ. ಅಳಿಯ ರಾಮರಾಜನ ಚಿತ್ತ, ವಿಜಯನಗರದ ಭಾಗ್ಯ! ಅವನು ಪೋರ್ಚುಗೀಸರೊಂದಿಗೆ ಸ್ನೇಹ ಬೆಳೆಸಿ ಅವರಿಗೆ ಆದರ ತೋರುವುದಕ್ಕೆ ಹಾತೊರೆಯುತ್ತಿದ್ದ; ತನ್ನ ಉಳಿವಿಗಾಗಿ ಪ್ರಭಾವ ಶಾಲಿಗಳಾದ ಮುಸಲ್ಮಾನ ಮನೆತನಗಳೊಂದಿಗೆ ಸ್ನೇಹ ಬೆಳೆಸಿ ಅವರನ್ನು ಬಲಗೊಳಿಸುತ್ತಿದ್ದ. ಅವನಿಗೂ ಸ್ವತಂತ್ರವಾದ, ಸ್ಥಿರವಾದ, ಲೋಕಹಿತೈಷಿಯಾದ ರಾಜಕಾರಣಪ್ರಜ್ಞೆ ಇರಲಿಲ್ಲ. ಸಂದರ್ಭದ ಒತ್ತಡದಂತೆ ಜನರನ್ನು ಹತ್ತಿರ ಸೇರಿಸುವುದು, ದೂರ ಸರಿಸುವುದು, ಸೇನೆಯ ಅಧಿಕಾರಿಗಳು ಮತ್ತು ದುರ್ಗಾಧ್ಯಕ್ಷರು ಇವರ ಮಾತೇ ನಡೆಯುವುದು. ದೇಶದ ಹಿತವನ್ನು ಬಯಸುವ ಅಧಿಕಾರಿಗಳು ಹಿಂದೆ ಬಿದ್ದರು.

ರಾಜಕೀಯ ಪರಿಸ್ಥಿತಿ ಹೀಗಿರುವಾಗ ಅದರ ಪ್ರಭಾವ ಜನಜೀವನದ ಮೇಲೆ ಬೀಳದಿರುವುದು ಹೇಗೆ? ಕುಲ, ಜಾತಿ, ವೃತ್ತಿ, ಆರ್ಥಿಕನೆಲೆ ಮೊದಲಾದ ವಿವರಗಳನ್ನು ಹಿಡಿದು ಹಗರಣಗಳು ಹೆಚ್ಚಿದುವು. ಕನಕದಾಸರಿದ್ದ ಕಾಲದಲ್ಲೇ, ಎಂದರೆ ಪುರಂದರದಾಸರಿಗೆ ಮೊದಲೇ, ಕುಲ ಕುಲವೆಂದು ಬಡಿದಾಡುವ ಜನರಿದ್ದರು. ಶ್ರೀಪಾದರಾಜರ ಕೃತಿಗಳಲ್ಲೂ ವ್ಯಾಸರಾಯಸ್ವಾಮಿಗಳ ಕೃತಿಗಳಲ್ಲೂ ಇದರ ಧ್ವನಿಯನ್ನು ಗುರುತಿಸಬಹುದು; ಸದಾಶಿವರಾಯನ ಆಳ್ವಿಕೆಯಲ್ಲಿ ಇದು ಹೆಚ್ಚಿತೆಂದು ತೋರುತ್ತದೆ. ಹಣವಂತರ ಹಮ್ಮು ಯಾವ ಕಾಲದಲ್ಲೂ ಇದ್ದದ್ದೇ. ಆದರೆ ಇದು ಸರಿಯಲ್ಲವೆಂದು ಜನರಿಗೆ ತಿಳಿಯಹೇಳಲು ಮೊದಲು ವ್ಯಾಸರಾಯಸ್ವಾಮಿಗಳಂಥವರಿದ್ದರು; ಈಗ ಹಾಗೆ ಅಧಿಕಾರ ವಾಣಿಯಿಂದ ಹೇಳಬಲ್ಲವರು ಇರಲಿಲ್ಲ. ಹಣವನ್ನು ಸಂಪಾದಿಸುವ ಗೀಳು ಜನಸಾಮಾನ್ಯರಿಗೆ ಇರುವುದು ಸಹಜವೇ. ಇದರಲ್ಲಿರುವ ಅನೀತಿಯನ್ನು ಧೈರ್ಯವಾಗಿ ತೋರಿಸುವ ಸಾಹಸ ಯಾರಿಗೆ? "ಲೋಭ ಎಂಬುವುದೆ ಎಂದೆಂದು ದಾರಿದ್ರ್ಯ" ಎಂದು ಹೇಳಿದ ವ್ಯಾಸರಾಯಸ್ವಾಮಿಗಳೂ ಇರಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ಪುರಂದರದಾಸರು ಏಕಾಕಿಯಾಗಿ ಧರ್ಮಪ್ರಚಾರಮಾಡುತ್ತ ಸಮಾಜದ

ಈ ಎಲ್ಲ ಕೊಳೆಗಳ ಕಡೆಗೆ ಕಣ್ಣಾಡಿಸಿದರು. ಅವನ್ನು ಜನರೆದುರು ಎತ್ತಿ ತೋರಿಸಿ, ಸರಿಯಾದ ದಾರಿಯನ್ನು ಸೂಚಿಸಲು ಯತ್ನಿಸಿದರು.

ಅವರು ಎಂದೂ ಅರಸನ ಓಲಗದಲ್ಲಿ ನೆರೆದವರಲ್ಲ; ಅಧಿಕಾರಿಗಳೆದುರು ಕೈಕಟ್ಟಿ ನಿಂತವರಲ್ಲ; ಹಣವಂತರ ಆದರಕ್ಕೆ ಬಾಯಿಬಿಟ್ಟವರಲ್ಲ; ಮಠಗಳ ಅನುಗ್ರಹಕ್ಕೆ ಅಂಗಲಾಚಿದವರಲ್ಲ. ಅವರ ಪದಗಳನ್ನು ನೋಡಿದರೆ ಅವರಿಗಿದ್ದ ಧೈರ್ಯದ ಅರಿವಾಗುತ್ತದೆ. ಅವರ ಸುತ್ತ ಅಂಥ ಧೈರ್ಯಶಾಲಿಗಳಾದ ಹಲವರು ಸೇರಿದ್ದಿರಬೇಕು. ಅವರ ಪರಿವಾರವನ್ನು ವಿಜಯದಾಸರು ಹೀಗೆ ಬಣ್ಣಿಸಿದ್ದಾರೆ

> ಮದವೇರಿದ ಕರಿವಿಂಡಿನಂತೆ ದುರುಳ
> ರೆದೆಯ ಮೆಟ್ಟಿ ದುಸ್ಸಂಗವನು ಜ
> ರಿದು ಹರಿಸರ್ವೋತ್ತಮನೆಂದು ಕೂಗುತಲಿ ಹ
> ರಿದಾಡಿ ಓಡ್ಯಾಡಿ ಬೀದಿ ಬೀದಿಯೊಳಗೆ
> ತಿರುಗುತಲಿಪ್ಪರು ಕರಿಗಳಂದದಲಿ

ಮೇಲೆ ವಿವರಿಸಿದ ಪರಿಸ್ಥಿತಿಯಲ್ಲಿ ಜಾಣ್ಮೆಯಿರದಿದ್ದರೆ, ಧೈರ್ಯವಿರದಿದ್ದರೆ ಪುರಂದರ ದಾಸರಿಗೆ ಉಳಿಗಾಲವಿರುತ್ತಿರಲಿಲ್ಲ; ದಾಸಕೂಟವೆಂಬ ಸೊಲ್ಲೇ ಕೇಳಿಬರುತ್ತಿರಲಿಲ್ಲ. ಆಗಿನ ಗೊಂದಲದ ವಾತಾವರಣದಲ್ಲಿ, ಕಷ್ಟದ ವೇಳೆಯಲ್ಲಿ ದಾಸರು ದಿಟ್ಟತನದಿಂದ ತಾವು ನಿಂತುದಲ್ಲದೆ ಎಂದಿಗೂ ಬರುವ ಇಂಥದೇ ಪರಿಸ್ಥಿತಿಯಲ್ಲಿ ಸಾಮಾನ್ಯ ಜನ ನಿಲ್ಲಬೇಕಾದುದು ಹೇಗೆಂಬುದನ್ನು ತಿಳಿಯಹೇಳಿದರು. ಅವರು ಅಂದು ತಳೆದ ನಿಲುವು, ತೋರಿಸಿದ ದಾರಿ ನಮಗೆ ಇಂದಿಗೂ ಸರಿಯಾದುದೇ. "ಎಲ್ಲಾರು ಮಾಡುವುದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ" ಎಂಬುದು ಅವರಿಗೆ ತಿಳಿಯದಿರಲಿಲ್ಲ; ದಿಟವಾಗಿ ಅದು ಅವರ ಒಕ್ಕಣೆಯೇ! ಆದರೆ ಹೀಗೆ ಮಾಡುವಾಗ ಅಧ್ಯಾತ್ಮವನ್ನು ಸೇರಿಸಿಕೊಳ್ಳಿ, ನೀತಿಯನ್ನು ಬಿಡಬೇಡಿ, ಧರ್ಮದ ಮೇಲೆ ಕಣ್ಣಿರಲಿ ಎಂದು ದಾಸರ ಆಗ್ರಹ.

ಉಪದೇಶಮಾಡುವಾಗ ವ್ಯವಹಾರವನ್ನು, ವಸ್ತುಸ್ಥಿತಿಯನ್ನು ಅವರೊಂದಿಗೂ ಮರೆಯಲಿಲ್ಲ. ಬಯಲುಮಂಟಪದ ಗಾಳಿಗೋಪುರವನ್ನೇರಿ ಕುಳಿತು, ದಿನನಿತ್ಯದ ಬದುಕಿಗೆ ಹೊಂದಿಸಿಕೊಳ್ಳಲಾಗದ ಕಗ್ಗವನ್ನು ಹೇಳಿ ಮುಂದೆಹೋಗುವ ಹವ್ಯಾಸ ಅವರದ್ದಲ್ಲ. ಅವರು ತಾವೇ ಸಂಸಾರದಲ್ಲಿ ಬಾಳಿದವರು, ಬಾಳುತ್ತಿದ್ದವರು. ಜನರ ಸ್ವಭಾವವನ್ನು ಕಂಡುಕೊಂಡವರು. ಬಾಳುತ್ತಲೇ ಬಾಳಿನಲ್ಲಿ ಬೆಳಕನ್ನು ಪಡೆದುಕೊಂಡವರು. ಅವರು ಮಾಡಿದ ಉಪದೇಶ ಪ್ರಯೋಗಕ್ಕೆ ಬರುವಂಥವೇ. ಬರಿದೆ ದೊಡ್ಡ ದೊಡ್ಡ ಮಾತುಗಳಿಂದ ಪ್ರವಚನಮಾಡಿ ಹೊಟ್ಟೆಹೊರೆದುಕೊಳ್ಳುವ ಗೊಡ್ಡು ಪಂಡಿತರನ್ನೂ ಬೂಟಾಟಿಕೆಯ ಮಡಿವಂತರನ್ನೂ ಪರಿಹಾಸ್ಯ ಮಾಡಿದರು. ಶೀಲದಲ್ಲಿ ಸಂವರವಿಲ್ಲದೆ, ನಡತೆಯಲ್ಲಿ ಶುದ್ಧಿಯಿಲ್ಲದೆ, ಆಡಂಬರದಿಂದ ಕುಲ, ಶಾಸ್ತ್ರ, ಜ್ಞಾನ, ಮೇಲ್ಮೆಯ ಸೋಗು ಹಾಕಿ ಜನರನ್ನು ವಂಚಿಸುವುದು ಶಿಷ್ಟಾಚಾರವಲ್ಲ. ಲೋಕವ್ಯವಹಾರದಲ್ಲಿ ಬೂಟಕತನ ಬಹುಕಾಲ ಊರ್ಜಿತವಾಗಲಾರದು; ಸತ್ತ್ವವಿಲ್ಲದ ಯಾವ ವಸ್ತು ತಾನೆ ಉಳಿಯಬಲ್ಲುದು? ಅನುಷ್ಠಾನಕ್ಕೆ ಬಾರದ ಪಾಂಡಿತ್ಯಕ್ಕೆ ಬೆಲೆಯೇನು? ಪುರಂದರದಾಸರು ನೇರವಾಗಿ ಕೇಳಿದರು.

'ಹೋಗದೂರಿನ ದಾರಿ ಕೇಳಿ ಮಾಡುವುದೇನು?'
'ತನಗಲ್ಲದಾ ವಸ್ತು ಎಲ್ಲಿದ್ದರೇನು?'
ಇಂಥವರ "ಬೂಟಕತನವ ನೋಡಿ ಭ್ರಮಿಸದಿರಿ" ಎಂದು ಜನರನ್ನು ಎಚ್ಚರಿಸಿದರು.
ಅದೂ ಧೈರ್ಯದ ಮಾತೇ. ಆದರೆ ಅವರಿಗೆ 'ಅಂಜಿಕೆ ಇನ್ಯಾತಕಯ್ಯಾ'.

ಕುಲ ಕುಲವೆಂದು ಜನ ಬಡಿದಾಡುತ್ತಿದ್ದ ಕಾಲದಲ್ಲಿ ದಾಸರು ಧೈರ್ಯವಾಗಿ ಕುಲವಾಗಲಿ ವಿದ್ಯೆಯಾಗಲಿ ಯಾವೊಬ್ಬನ ಹಿರಿಮೆಗೂ ಕಾರಣವಾಗದೆಂದು ಹೇಳಿದುದನ್ನು ನೆನಪಿಗೆ ತಂದುಕೊಳ್ಳಬೇಕು. ಹೊಲೆಯರೆಂದು ಒಂದು ಪಂಗಡವನ್ನು ದೂರವಿರಿಸಿ ಕೀಳಾಗಿ ಕಾಣುತ್ತಿದ್ದ ಮೇಲೆಂಬ ಜಾತಿಯವರಿಗೆ ದಾಸರು ಮತ್ತೆ ಮತ್ತೆ ಹೊಲೆಯನೆಂಬುದು ಜಾತಿಸೂಚಕವಾದ ನಿಕೃಷ್ಟಶಬ್ದವಲ್ಲ, ಭ್ರಷ್ಟಾಚಾರವನ್ನು ಹೇಳುವ ಪದ ಎಂದು ಬಿಡಿಸಿ ಹೇಳಿದರು. ಈ ವಿಚಾರ ಮೊದಲೇ ಇನ್ನೊಂದು ಸಂದರ್ಭದಲ್ಲಿ ಬಂದಿದೆ. ಕುಲಕುಲವೆಂದು ಬಡಿದಾಡುವುದು ಇನ್ನೂ ತಪ್ಪಲಿಲ್ಲವಾಗಿ, ಇದನ್ನು ಮತ್ತೆ ಹೇಳಿದರೆ ತಪ್ಪಿಲ್ಲ. 'ಹೊಲೆಯ ಹೊರಗಿಹನೆ ಊರೊಳಗಿಲ್ಲವೆ, ಬಲ್ಲವರು ಪೇಳಿ ಹರಿಭಕ್ತರಾದವರು' ಎಂದು ಆರಂಭವಾಗುವ ದಾಸರ ಪದವೊಂದಿದೆ. ಅದರಲ್ಲಿ ಹೊಲೆತನದ ಲಕ್ಷಣಗಳನ್ನು ಪಟ್ಟಿಮಾಡಿದ್ದಾರೆ

'ಹೇಳಿದ ಶಾಸ್ತ್ರವನು ತಿಳಿಯದವ'
'ಆಳಾಗಿ ಅರಸಿಗೆ ಮಣಿಯದಾತ'
'ಇದ್ದು ದಾನಧರ್ಮವ ಮಾಡದಿದ್ದವ'
'ಆಶೆಯಿಂದಲಿ ಬಹಳ ದೋಷ ಮಾಡುವವ'
'ಹುಸಿಯಾಡುವವ'
'ಉಂಡಮನೆಗೆರಡ ಯೋಚಿಸುವಾತ'
'ಗಂಡಹೆಂಡಿರೊಳು ಭೇದವಿಕ್ಕುವವ'
'ಅರಿತು ಆಚಾರವನು ಮಾಡದಿದ್ದವ'
'ಗುರು ಹಿರಿಯರನು ಕಂಡು ಎರಗದಾತ'

ಇವರೆಲ್ಲ ಹೊಲೆಯರೆಂದು ದಾಸರ ಎಣಿಕೆ. ಹಾಗೆಯೇ ಬ್ರಾಹ್ಮಣನು ಯಾರೆಂಬುದನ್ನೂ ಸ್ಪಷ್ಟಪಡಿಸುತ್ತಾರೆ- "ಬ್ರಾಹ್ಮಣನೆಂದರೆ ಬ್ರಹ್ಮವ ತಿಳಿದವನು ಅವನೀಗ ಬ್ರಾಹ್ಮಣನೋ". ಈ ಕೃತಿಯಲ್ಲಿ ಕಾಣಸಿರುವ ಲಕ್ಷಣಗಳನ್ನು ಗಮನಿಸಿದರೆ, ಅಧ್ಯಾತ್ಮ ಯೋಗದಲ್ಲಿ ತೊಡಗಿರುವವನೇ ಬ್ರಾಹ್ಮಣ; ಪ್ರಾಪಂಚಿಕ ಪ್ರಸಕ್ತಿಗಳನ್ನು ತಳೆದಿರುವವನನ್ನು ಬ್ರಾಹ್ಮಣನೆನ್ನಲಾಗದು. ಎಂದಮೇಲೆ, ಯಾರಾದರೂ ಅಧ್ಯಾತ್ಮಕ್ಕೆ ಒಲಿದು ಬ್ರಾಹ್ಮಣರಾಗಬಹುದು, ಯಾರಾದರೂ ಅದನ್ನು ದೂರವಿರಿಸಿ ಹೊಲೆಯರಾಗಬಹುದು. ಜೀವತ್ರೈವಿಧ್ಯವನ್ನು ಸಿದ್ಧಾಂತದಲ್ಲಿ ಒಪ್ಪಿರುವ ದಾಸರು ಸಾತ್ವಿಕ ಜೀವರನ್ನು ಬ್ರಾಹ್ಮಣರೆಂದಾರು, ತಾಮಸಜೀವರನ್ನು ಹೊಲೆಯರೆಂದಾರು; ಉಳಿದವರೆಲ್ಲ ರಾಜಸವರ್ಗದಲ್ಲಿ ಸೇರುತ್ತಾರೆ. ಜೀವದ ಸ್ವರೂಪ ಯೋಗ್ಯತೆಗಳಿಗೂ ಕುಲ, ಜಾತಿಗಳಿಗೂ ಸಂಬಂಧವಿರದು. ಮುಂದೆ ದಾಸಕೂಟದಲ್ಲಿ ಹೀಗೆ ಹೇಳುವ ಧೈರ್ಯ ಯಾರಿಗೂ ಬರಲಿಲ್ಲ. ಪುರಂದರದಾಸರ ಹಿರಿಮೆಯಷ್ಟೆ ಅದು. ಅವರ ಈ ಉಗಾಭೋಗದಲ್ಲಿರುವ ಅವರ ಧೈರ್ಯವನ್ನು ನೋಡಿ

'ಹೊಲೆಯ ಬಂದನೆಂದು ಒಳಗೆ ದೇವರ ಮಾಡಿ
ಗಣಗಣ ಗಂಟೆ ಬಾರಿಸುವರಯ್ಯ
ತನುವಿನ ಕೋಪವು ಹೊಲೆಯಲ್ಲವೆ?
ಪರಧನ ಪರಸತಿ ಹೊಲೆಯಿಲ್ಲವೆ?
ಹೊರಗಿದ್ದ ಹೊಲೆಯನ ಒಳಗೆ ಬಚ್ಚಿಟ್ಟರೆ
ಇದಕೇನು ಮದ್ದೋ ಪುರಂದರವಿಠಲ?'

ಪುರಂದರದಾಸರು ಬದುಕಿ ಬಾಳಿದ ಕಾಲ ನಮ್ಮ ಇತಿಹಾಸದಲ್ಲಿ ಒಂದು ಪರ್ವಕಾಲವೆನ್ನಬಹುದು. ನಾಡಿನ ಧಾರ್ಮಿಕನಿಲುವು, ಸಾಮಾಜಿಕ ವ್ಯವಸ್ಥೆ, ಜನಜೀವನದ ರೀತಿನೀತಿ ಇವು ಒಂದು ಘಟ್ಟದಿಂದ ಇನ್ನೊಂದು ಘಟ್ಟಕ್ಕೆ ಮುಟ್ಟಿದ ಕಾಲ. ನಾಡಿನಲ್ಲಿ ಪರ್ಶಿಯನ್, ಮುಸ್ಲಿಂ ಸಂಸ್ಕೃತಿಗಳು ಬಂದೊದಗಿದ್ದುವು; ಕ್ರೈಸ್ತಶ್ರದ್ಧಾಳುಗಳು, ಪ್ರಚಾರಕರು ನಾಡಿನಲ್ಲಾಗಲೆ ಬಂದಿಳಿದಿದ್ದರು. ಪರ್ಶಿಯದಿಂದ ಬಂದ ಕ್ರೈಸ್ತರು (ನೆಸ್ಟೋರಿಯನ್ನರು) ಇದ್ದರು. ಉತ್ತರಭಾರತದಲ್ಲಿ ಮುಗಲ್ ಸಾಮ್ರಾಜ್ಯ ಸುಭದ್ರವಾಗಿ ಮೈದಳೆದಿದ್ದಿತು. ಜನರಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ, ಪಾರ್ಸಿ ಪಂಗಡಗಳು ಕಾಣಿಸಿಕೊಳ್ಳತೊಡಗಿದ್ದುವು. ಆರ್ಥಿಕವಾಗಿ ನಾಡು ಹೊರನಾಡುಗಳೊಂದಿಗೆ ಸಂಪರ್ಕವನ್ನು ಬೆಳೆಸಿಕೊಂಡಿದ್ದಿತು. ಧಾರ್ಮಿಕವಾಗಿ ನಾಡಿನಲ್ಲೇ ವಾದ-ವಿವಾದಗಳು, ಮತಪರಿವರ್ತನೆಗಳು, ಖಂಡನ-ಮಂಡನಗಳು ಹರಡಿಕೊಳ್ಳುತ್ತಿದ್ದುವು. ಗ್ರಾಮಸಂಸ್ಕೃತಿಯು ನಗರ ಸಂಸ್ಕೃತಿಗೆ ಎಡೆಮಾಡಿಕೊಡುತ್ತಿದ್ದಿತು. ವ್ಯಾಪಾರ, ವಾಣಿಜ್ಯ, ಉದ್ಯಮಗಳು ಹೆಚ್ಚುತ್ತಿದ್ದುವು. ವರ್ಣಾಶ್ರಮ ಧರ್ಮದ ಕಟ್ಟುಪಾಡು ಸಡಿಲವಾಗುತ್ತಿದ್ದಿತು. ಜನಜೀವನದಲ್ಲಿ ಸುಖಸಾಧನೆಗಳು ಹೆಚ್ಚುತ್ತಿದ್ದುವು. ಆದರೂ ಜನರ ಮನಸ್ಸಿನಲ್ಲಿ ಆತಂಕದ ಹೊಗೆಯಾಡುತ್ತಲೇ ಇದ್ದಿತು. ಅಲ್ಲಲ್ಲಿ ಪಾಳಯಪಟ್ಟುಗಳು, ಸಣ್ಣಪುಟ್ಟ ರಾಜ್ಯಗಳು, ಆಡಳಿತದಲ್ಲಿ ಅಧಿಕಾರಿಗಳಿಂದ ಜನರ ಸುಲಿಗೆ, ಕ್ಷೇತ್ರಗಳಲ್ಲಿ ಪುರೋಹಿತಪಂಡರಿಂದ ಸುಲಿಗೆ, ನಗರಗಳಲ್ಲಿ ಕಾಮುಕ ಜನರಿಂದ ಪೀಡೆ, ಗ್ರಾಮಾಂತರ ಪ್ರದೇಶಗಳಲ್ಲಿ ತೆರಿಗೆಯ ಭೀತಿ, ಪ್ರಯಾಣದಲ್ಲಿ ದರೋಡೆಕಾರರ ಹಾವಳಿ. ಸಮಾಜದ ವ್ಯವಸ್ಥೆ ಸಮರ್ಪಕವಾಗಿರಲಿಲ್ಲ; ಸಮಾಜವು ಹೆಚ್ಚುಹೆಚ್ಚು ಸಂಕೀರ್ಣವಾಗುತ್ತಿದ್ದುದು ಮುಖ್ಯ ಕಾರಣ.

ಇಂಥ ಪರ್ವಕಾಲದಲ್ಲಿ ನಾಡಿನ ಹಲವೆಡೆ ಹಿರಿಯ ಚೇತನಗಳು ಕಾಣಿಸಿಕೊಂಡುದು ಯುಗಧರ್ಮದ ಪರಿಣಾಮವಾಗಿಯೇ. ಕರ್ನಾಟಕದಲ್ಲಿ ಶ್ರೀಪಾದರಾಜರು, ವ್ಯಾಸರಾಯಸ್ವಾಮಿಗಳು, ಪುರಂದರದಾಸರು, ಕನಕದಾಸರು, ವಾದಿರಾಜರು ಬದುಕಿ ಬಾಳಿದ ಸಮಯದಲ್ಲೇ ಉತ್ತರಭಾರತದಲ್ಲಿ ರಾಮಾನಂದರು (೧೪೦೦-೧೪೭೦), ಕಬೀರದಾಸರು (೧೪೪೦-೧೫೧೮), ರಾಜಾಸ್ಥಾನದಲ್ಲಿ ಮೀರಬಾಯಿ (ಜನನ ೧೪೭೦), ಪಂಜಾಬಿನಲ್ಲಿ ಗುರುನಾನಕದೇವರು (೧೪೬೯-೧೫೩೯), ಬಂಗಾಳದಲ್ಲಿ ಕೃಷ್ಣಚೈತನ್ಯರು (೧೪೮೫-೧೫೩೩), ಮಹಾರಾಷ್ಟ್ರದಲ್ಲಿ ನಾಮದೇವ-ಸಿಂಪಿಗಳು (೧೪೦೦ರ ಸುಮಾರು), ಗುರು ಅಮರದಾಸರು (೧೫೭೪ರ ಸುಮಾರು), ಬ್ರಜ ಭೂಮಿಯಲ್ಲಿ ಸೂರದಾಸರು (೧೫೯೬ರ ಸುಮಾರು), ಕಾಶಿಯ ಕಡೆ ತುಳಸೀದಾಸರು (೧೫೩೨-೧೬೨೩) ಮೊದಲಾದ ಸಂತರು ಕಾಣಿಸಿಕೊಂಡರು. ಧರ್ಮಶ್ರದ್ಧಾಳುವೂ ಮೇಧಾವಿಯೂ ಅನುಭಾವಿಯೂ ಆದ ಮುಗಲ್ ಸಾಮ್ರಾಟ್ ಅಕ್ಬರ್ ಸರ್ವಧರ್ಮ ಸಮನ್ವಯಕ್ಕೆ ಮಾಡಿದ ಪ್ರಯತ್ನ ಪ್ರಕಟವಾದುದು

೧೫೭೫ರಲ್ಲಿ; ಅವನ ಹೊಸ 'ತಾಹಿದ್-ಇ-ಇಲಾಹಿ' ಎಂಬ ಧರ್ಮವು ಪ್ರವೃತ್ತವಾದುದು ೧೫೮೨ರಲ್ಲಿ.

ಪ್ರಸ್ತುತ ಧರ್ಮಕ್ಕೆ ಸಾಮಾಜಿಕ ಸ್ಥಿತಿಗತಿಗಳನ್ನನುಸರಿಸಿ ಹೊಸ ತಿರುವು ಅಗತ್ಯವೆಂಬ ಕಲ್ಪನೆ ಆ ಯುಗಧರ್ಮದಲ್ಲಿದ್ದಿತು. ಆಗ ಕಾಣಿಸಿಕೊಂಡ ಸಂತರೆಲ್ಲರೂ ಈ ಅಗತ್ಯವನ್ನೂ ಅರಿತುಕೊಂಡವರೇ. ಇವರಲ್ಲಿ ಬಹುಮಂದಿ ವೈಷ್ಣವರು; ಸುಲಭ ಪೂಜೆಯ ಸ್ವಾರಸ್ಯವನ್ನು, ಭಕ್ತಿಯ ವೆಗ್ಗಳವನ್ನು ಜನರಿಗೆ ತಿಳಿಸುವುದರಲ್ಲಿ ಬಾಳನ್ನು ಕಳೆದವರು. ರಾಮಾನಂದರು ರಾಮಾನುಜಾಚಾರ್ಯರ ಪ್ರಶಿಷ್ಯರ ಶಿಷ್ಯರೆಂದು ಹೇಳುತ್ತಾರೆ; ಕಾರಣಾಂತರದಿಂದ ಅವರು ಕಾಶಿಗೆ ಹೋಗಿ ಅಲ್ಲಿ ಪಂಚಗಂಗಾಕ್ಷೇತ್ರದಲ್ಲಿ ವೈಷ್ಣವಧರ್ಮದ ಪ್ರಚಾರ ಮಾಡುತ್ತ ನಿಂತರು. ಇವರು ರಾಮಭಕ್ತರು. ಇವರ ಶಿಷ್ಯರಲ್ಲಿ ಪ್ರಸಿದ್ಧರಾದವರು ಕಾಶಿಯವರೇ ಆದ ಕಬೀರದಾಸರು. ಹಿಂದುಗಳು ಹಿಂದುವೆಂದೂ ಮುಸಲ್ಮಾನರು ಮುಸಲ್ಮಾನನೆಂದೂ ಆದರಿಸಿದ ಕಬೀರದಾಸರೂ ರಾಮಭಕ್ತರೇ; ರಾಮನಾಮದ ಹಿರಿಮೆಯನ್ನು ಹಾಡಿ ಹೊಗಳಿದರು. ಹಠಯೋಗದ ಪ್ರಕಾರಗಳನ್ನೂ ಬಲ್ಲವರಾಗಿದ್ದು, ಅನುಭವೈಕವೇದ್ಯವಾದ ಭಾವಭಕ್ತಿಯನ್ನು ಬೋಧಿಸಿದರು. ಪುರಂದರದಾಸರಿಗಿಂತ ನಲವತ್ತೈದು ವರ್ಷ ಹಿರಿಯರಾದ ಇವರು ಸಂತರೂ ಹೌದು, ಕವಿಯೂ ಹೌದು. ಇವರ ದೋಹಗಳು ಹಿಂದಿ ಮಾತನಾಡುವ ಪ್ರಾಂತದಲ್ಲಿ ತುಂಬ ಜನಪ್ರಿಯವಾದವು. ಇಂದಿಗೂ ಅವು ಬಳಕೆಯಲ್ಲಿವೆ.

ಕಬೀರರ ವೈಷ್ಣವ ಸಂಪ್ರದಾಯದಿಂದ ಪ್ರಭಾವಿತರಾದ ಇನ್ನೊಬ್ಬ ಸಂತರೆಂದರೆ ಗುರುನಾನಕದೇವರು. ಪಂಜಾಬಿನಲ್ಲಿ ರಾವಿನದಿಯ ದಂಡೆಯ ಮೇಲೆ ತಳವಂಡಿ ಗ್ರಾಮದಲ್ಲಿ ಹುಟ್ಟಿದ ಇವರು ಏಕೇಶ್ವರ ಉಪಾಸನೆಯನ್ನು ಬೋಧಿಸಿ ಜನಜಾಗ್ರತಿಯನ್ನು ಮಾಡಿದರು. ಅವರ ರಚನೆಗಳು ಸ್ತೋತ್ರರೂಪದಲ್ಲಿವೆ. ಶ್ರೀರಾಗದಲ್ಲಿಯೇ ಹೆಚ್ಚಿನ ಕೀರ್ತನೆಗಳನ್ನು ರಚಿಸಿ, ಸಂಗೀತಕ್ಕೂ ಸಂಕೀರ್ತನಕ್ಕೂ ಸಂಬಂಧವನ್ನು ಒದಗಿಸಿದರು. ಇವರು ಶೀಖ (ಶೈಕ್ಷ್ಯ, ಎಂದರೆ ಶಿಷ್ಯ ಎಂಬ ಮಾತಿನ ಅಪಭ್ರಂಶರೂಪ) ಪಂಥದ ಪ್ರವರ್ತಕರೆಂದು, ಆದಿಗುರುವೆಂದು ಪ್ರಸಿದ್ಧರಾಗಿದ್ದಾರೆ. ಮುಗಲ್ ಚಕ್ರವರ್ತಿ ಬಾಬರನ ಸಮಕಾಲಿಕರು. ಪುರಂದರದಾಸರಿಗಿಂತ ಹದಿನಾರು ವರ್ಷ ಹಿರಿಯರು. ಪುರಂದರದಾಸರು ಕಾಲವಾಗಿ ಹದಿನಾರು ವರ್ಷಗಳ ಮೇಲೆ ಹುಟ್ಟಿದ ಗುರು ಅರ್ಜುನ ದೇವರು ಶೀಖ ಸಂಪ್ರದಾಯದ ಆಧಾರವಾದ 'ಗ್ರಂಥಸಾಹೇಬ'ವನ್ನು ಸಿದ್ಧಪಡಿಸಿದರು. ಇದು ಸಂತವಾಣಿಯ ಸಂಕಲನ; ಇದರಲ್ಲಿ ಹಲವಾರು ಸಂತರ, ಬೇರೆ ಬೇರೆ ಸಂಪ್ರದಾಯಗಳ, ದೋಹಗಳು ಸೇರಿರುವುದು ಯುಗಧರ್ಮವನ್ನು ಸೂಚಿಸುತ್ತದೆ.

ಪುರಂದರದಾಸರಿಗೆ ಆರು ವರ್ಷಗಳಷ್ಟು ಹಿರಿಯರು ವಲ್ಲಭಾಚಾರ್ಯರು. ಕೃಷ್ಣಾ, ಗೋದಾವರಿ ನದಿಗಳ ನಡುವೆ ಕಾಕರವಾಡ ಎಂಬ ಗ್ರಾಮದಲ್ಲಿ ಹುಟ್ಟಿ, ಕಾಶಿಯಲ್ಲಿ ವಿದ್ಯಾಭ್ಯಾಸಮಾಡಿ, ವ್ರಜಭೂಮಿಯಲ್ಲಿ ವೈಷ್ಣವಧರ್ಮ ಪ್ರಚಾರಮಾಡಿದರು. ಕೃಷ್ಣದೇವರಾಯನು ವಿಜಯನಗರದ ವಜ್ರಸಿಂಹಾಸನವನ್ನು ಏರಿದ ಸಮಯದಲ್ಲಿ ಇಲ್ಲಿಗೆ ಬಂದಿದ್ದರೆಂದೂ, ರಾಯನು ಇವರಿಗೆ ಕನಕಾಭಿಷೇಕ ಮಾಡಿದ್ದನೆಂದೂ ಉಲ್ಲೇಖವಿದೆ. ಇವರು ೧೫೩೦ರ ಸುಮಾರಿನಲ್ಲಿ ತೀರಿಕೊಳ್ಳುವ ಮೊದಲು ಬ್ರಹ್ಮಸೂತ್ರಗಳ ಮೇಲೆ, ಭಗವದ್ಗೀತೆಯ ಮೇಲೆ, ಶುದ್ಧಾದ್ವೈತ ಸಂಪ್ರದಾಯದ ಭಾಷ್ಯಗಳನ್ನು

ರಚಿಸಿ, ಗೋವರ್ಧನದಲ್ಲಿ ಶ್ರೀನಾಥಮಂದಿರವನ್ನು ವ್ಯವಸ್ಥೆ ಮಾಡಿದರು (೧೫೨೦ರಲ್ಲಿ). ಇವರು ಭಾಗವತ ಪುರಾಣವನ್ನು ಮೆಚ್ಚಿಕೊಂಡಿದ್ದವರು. ಉಪನಿಷತ್ತುಗಳು, ಭಗವದ್ಗೀತೆ ಮತ್ತು ಬ್ರಹ್ಮಸೂತ್ರಗಳೆಂಬ ಪ್ರಸ್ತಾನತ್ರಯದೊಂದಿಗೆ ಭಾಗವತವನ್ನೂ ಪ್ರಮಾಣಗ್ರಂಥವೆಂದು ಸ್ವೀಕರಿಸಿದರು. ಹರಿದಾಸರಿಗೆ ಭಾಗವತವೇ ಪರಮ ಪ್ರಮಾಣವೆಂಬುದನ್ನು ಈ ಸಂದರ್ಭದಲ್ಲಿ ನೆನಪಿಗೆ ತಂದುಕೊಳ್ಳಬೇಕು.

ಭಾಗವತವನ್ನೇ ಅವಲಂಬಿಸಿ ವೈಷ್ಣವ ಧರ್ಮವನ್ನು ಪ್ರಚಾರಮಾಡಿದ ಇನ್ನೊಬ್ಬ ಹಿರಿಯರು ಕೃಷ್ಣ ಚೈತನ್ಯ ಮಹಾಪ್ರಭು (ಗೌರಾಂಗದೇವ). ಪುರಂದರದಾಸರು ಹುಟ್ಟಿದ ವರ್ಷದಲ್ಲೇ ಹುಟ್ಟಿದ ಕೃಷ್ಣಚೈತನ್ಯರು ಪುರಿ ಜಗನ್ನಾಥನ ಭಕ್ತರು. ವಂಗದೇಶದ ಅನುಭಾವಿ ಸಂತರು; ಗೌಡೀಯ ಸಂಪ್ರದಾಯದ ಪ್ರವರ್ತಕರು. ಅವರು ದಕ್ಷಿಣದೇಶಕ್ಕೆ ಬಂದಿದ್ದು ವ್ಯಾಸರಾಯಸ್ವಾಮಿಗಳನ್ನು ಕಂಡು ಅವರಿಂದ ದೀಕ್ಷೆ ಪಡೆದುಕೊಂಡರೆಂದು, ಉಡುಪಿಗೆ ಹೋಗಿ ವಾದಿರಾಜಸ್ವಾಮಿಗಳನ್ನೂ ಕಂಡಿದ್ದರೆಂದೂ ಉಲ್ಲೇಖವಿದೆ. ಗೌಡೀಯ ಸಂಪ್ರದಾಯದಲ್ಲಿ ಮಾಧ್ವ ಪ್ರಭಾವವಿರುವುದು ದಿಟ; ಅವರ ಆಚಾರ್ಯ ಪರಂಪರೆಯಲ್ಲಿ ಮಧ್ವಾಚಾರ್ಯರು ಸೇರಿದ್ದಾರೆ. ಕೃಷ್ಣ ಚೈತನ್ಯರು ರಾಧಾಕೃಷ್ಣರ ಪ್ರೇಮವನ್ನು ಆದರ್ಶವಾಗಿ ಹಿಡಿದು ವೈಷ್ಣವ ಭಕ್ತಿ ಪಂಥದ ಪ್ರಚಾರ ಮಾಡಿದರು. ಭಾಗವತದಲ್ಲಿಲ್ಲದ ರಾಧೆ ಕೃಷ್ಣನೊಂದಿಗೆ ಸೇರಿಕೊಂಡದ್ದು ಈ ಪಂಥದ ಪ್ರಭಾವದಿಂದಲೇ. ರಾಧೆಯ ಉಲ್ಲೇಖ ಬ್ರಹ್ಮವೈವರ್ತ ಪುರಾಣದಲ್ಲಿ ಕಾಣಸಿಕೊಳ್ಳುತ್ತದೆ; ಭಾರತ, ಭಾಗವತಗಳಲ್ಲಿಲ್ಲ. ಪುರಂದರದಾಸರು ತೀರಿಕೊಳ್ಳುವುದಕ್ಕೆ ಮೂವತ್ತು ವರ್ಷಗಳಷ್ಟು ಮೊದಲೇ ಕೃಷ್ಣಚೈತನ್ಯರು ತೀರಿಕೊಂಡರು.

ಮೇವಾಡದ ರಾಣನ ಸೊಸೆ ಮೀರಾಬಾಯಿ ಹುಟ್ಟಿದ್ದು ೧೫೭೦ರಲ್ಲಿ; ಪುರಂದರದಾಸರು ಹುಟ್ಟುವುದಕ್ಕೆ ಹದಿನೈದು ವರ್ಷಗಳ ಮುಂಚೆ. ಈಕೆಯೂ ವೈಷ್ಣವ ಪಂಥವನ್ನು ಹರಡಿದ ಹಿರಿಯಳು. ಈಕೆಯ ಭಕ್ತಿಗೀತೆಗಳು ಪ್ರಸಿದ್ಧವಾಗಿವೆ. ಈಕೆಯನ್ನು ಕಂಡು ಗೌರವಿಸಿದವರಲ್ಲಿ ಮುಗಲ್ ಚಕ್ರವರ್ತಿ ಅಕ್ಬರನೂ ಒಬ್ಬ. ಪುರಂದರದಾಸರು ಮುದುಕರಾಗಿರುವಾಗ ಉತ್ತರದೇಶದಲ್ಲಿ ಕಾಣಿಸಿಕೊಂಡ ಸಂತರಲ್ಲಿ ತುಳಸೀದಾಸರು ಮುಖ್ಯರು. ಅವರ 'ರಾಮಚರಿತಮಾನಸ' ಮೊದಲಾದ ಕಾವ್ಯಗಳು ಹಿಂದೀ ಸಾಹಿತ್ಯದ ಜನಪ್ರಿಯವಾದ ಅನರ್ಘ್ಯ ರತ್ನಗಳಾಗಿವೆ. ಕೃಷ್ಣಚೈತನ್ಯ ಮತ್ತು ವಲ್ಲಭಾಚಾರ್ಯರು ಕೃಷ್ಣಭಕ್ತರಾಗಿದ್ದರಂತೆ ತುಳಸಿದಾಸರು ರಾಮಭಕ್ತರು. ರಾಮನೇ ಅವರ ಪಾಲಿಗೆ ಪರಬ್ರಹ್ಮ. ಪುರಂದರದಾಸರು ಕಾಲವಾದ ಮೇಲೆ ಇವರು ಬಹುಕಾಲ ಬದುಕಿದ್ದರು; ಉತ್ತರ ಭಾರತದಲ್ಲಿ ಭಕ್ತಿಯ ಪ್ರಚಾರವನ್ನು ಕೈಗೊಂಡರು. ಪುರಂದರದಾಸರು ಬದುಕಿರುವಾಗ ಇವರ ಸಾಧನೆಯಿನ್ನೂ ಮುಗಿದಿರಲಿಲ್ಲ. ಪುರಂದರದಾಸರು ಕಾಲವಾದ ತರುಣದಲ್ಲೇ ಹುಟ್ಟಿ ನಾಡನ್ನು ಬೆಳಗಿದವರು ಸೂರದಾಸರು. ಇವರು ಅರವತ್ತು ಸಾವಿರ ದೋಹಗಳನ್ನು ಬ್ರಜಭಾಷೆಯಲ್ಲಿ ರಚಿಸಿದರಂತೆ; ಇಂದಿಗೂ ಅವರ ಕವಿತೆಗಳು ಜನಪ್ರಿಯವಾಗಿದೆ. ಭಾಗವತ ಪುರಾಣವನ್ನು ಬ್ರಜಬಾಷೆಗೆ ಅನುವಾದ ಮಾಡಿ ಕೃಷ್ಣಭಕ್ತಿಯನ್ನು ಆ ಕಡೆ ಬೇರೂರಿಸಿದರು.

ಪುರಂದರದಾಸರ ಕಾಲಕ್ಕೆ ಸ್ವಲ್ಪ ಮುಂಚೆ ಮಹಾರಾಷ್ಟ್ರದಲ್ಲಿ ಜ್ಞಾನೇಶ್ವರ (ಮರಣ ೧೨೯೬) ಮತ್ತು ನಾಮದೇವ-ಸಿಂಪಿ ವಿಠ್ಠಲ ಭಕ್ತಿಯನ್ನು ಬೇರೂರಿಸಿದ್ದರು. ನಾಮದೇವ-ಸಿಂಪಿಗಳ ಕಾಲದ

ಬಗ್ಗೆ ವಿವಾದವಿದೆ. ಕೆಲವರು ಅವರ ಜೀವನದ ಅವಧಿಯನ್ನು ೧೨೭೦ರಿಂದ ೧೩೫೦ರವರೆಗೆ ಎಂದೂ, ಮತ್ತೆ ಕೆಲವರು ಅವರ ಜನ್ಮವೇ ೧೩೫೦ರ ಸುಮಾರಿಗೆ ಆಯಿತೆಂದೂ ಹೇಳುತ್ತಾರೆ. ಇದು ಏನಾದರಿರಲಿ, ಪುರಂದರದಾಸರಿಗೆ ಆರ್ತಭಕ್ತಿ, ನಾಮಸ್ಮರಣೆಗಳ ಸ್ಫೂರ್ತಿ ಒದಗಿದುದು ನಾಮದೇವ ಸಿಂಪಿಗಳಿಂದಲೇ ಎನ್ನುವ ವಾದದಲ್ಲೇನೋ ತಿರುಳಿದೆ. ನಾಮದೇವರ ಅಭಂಗಗಳಲ್ಲಿ ಕಾಣುವ ಅನೇಕ ಭಾವನೆಗಳು ಪುರಂದರದಾಸರ ಪದಗಳಲ್ಲಿ ಕಾಣಸಿಗುತ್ತವೆ.

ಹೀಗೆ ಆ ಯುಗಧರ್ಮ ನಾಡಿನಲ್ಲಿ ಮೇಲುಗೈಯಾಗಿರುವಾಗ ಭಕ್ತಿಯ ದಾರಿ ಸ್ಪಷ್ಟ ವಾಯಿತು. ಶಾಸ್ತ್ರಪಾಂಡಿತ್ಯ, ಶುಷ್ಕತರ್ಕ, ಕರ್ಮಕಾಂಡಗಳು ಹಿಂದೆ ಸರಿದುವು; ಜ್ಞಾನಮಾರ್ಗ, ಕರ್ಮಮಾರ್ಗಗಳೆರಡನ್ನೂ ಮೀರಿ ಭಕ್ತಿಮಾರ್ಗ ನಿಂತಿತು, ಬೆಳೆಯಿತು. ಈ ಮಾರ್ಗದಲ್ಲಿ ಬಹುಜನರು ಸುಲಭವಾಗಿ ಕೈಗೊಳ್ಳಬಹುದಾದ ಸಂವಿಧಾನಗಳನ್ನು ಸಂತರು ಎತ್ತಿ ಹೇಳಿದರು. ಈ ಸಂವಿಧಾನಗಳಲ್ಲಿ ಮುಖ್ಯವಾದುದು ನಾಮಸ್ಮರಣೆ. ರಾಮಾನಂದ, ಕಬೀರ, ನಾನಕ, ಚೈತನ್ಯ, ನಾಮದೇವ, ಮೀರಾಬಾಯಿ, ಸೂರದಾಸ ಎಲ್ಲರೂ, ನಮ್ಮ ಶ್ರೀಪಾದರಾಜರು, ವ್ಯಾಸರಾಯಸ್ವಾಮಿಗಳು, ಪುರಂದರ ದಾಸರಂತೆ ನಾಮಸ್ಮರಣೆಯ ಹಿರಿಮೆಯನ್ನು ಹಾಡಿ ಹೊಗಳಿದರು; ನಾಮಸ್ಮರಣೆಯಿಂದ ಭಕ್ತಿ ಪರಿಪಕ್ವವಾಗುವ ಬಗೆಯನ್ನು ವಿವರಿಸಿದರು. ನಾಮಸ್ಮರಣೆಗೆ ಆಧ್ಯಾತ್ಮಿಕ ತಾತ್ಪರ್ಯ ವಿರುವಂತೆಯೇ ಸಾಮಾಜಿಕ ತಾತ್ಪರ್ಯವೂ ಇದೆ. ಜ್ಞಾನಮಾರ್ಗ, ಕರ್ಮಮಾರ್ಗಗಳಲ್ಲಿ ವರ್ಣಾಶ್ರಮದ ಕಟ್ಟುಪಾಡುಂಟು, ಅಧಿಕಾರದ ವಿವೇಚನೆಯುಂಟು, ಪೂರ್ವಸಿದ್ಧತೆಯ ಅಗತ್ಯವುಂಟು. ಜನಸಾಮಾನ್ಯರೆಲ್ಲರಿಗೆ ದಕ್ಕುವಂಥದಲ್ಲ. ಆದರೆ ಯುಗಧರ್ಮ ಜನಸಾಮಾನ್ಯರ, ಬಹುಜನರ, ಸ್ತ್ರೀಪುರುಷರೆಲ್ಲರ ಅಭ್ಯುದಯವನ್ನು ಸಾಧಿಸುವ ಬಗೆಯನ್ನು ಕುರಿತದ್ದು. ಬೇರೆಬೇರೆ ಹಿನ್ನೆಲೆಗಳ, ಕುಲಧರ್ಮಗಳ, ಅಧಿಕಾರವೈವಿಧ್ಯಗಳ ಜನರೆಲ್ಲರಿಗೂ ಹಿತವಾಗಿ, ಅನುಕೂಲವಾಗಿ, ಸುಲಭವಾಗಿ ಪುರುಷಾರ್ಥಸಾಧನೆಯಾಗಲು ನಾಮಸ್ಮರಣೆ, ಹರಿಕೀರ್ತನೆ, ಭಜನೆ ಇವು ಸಾಧನೆಗಳೆಂದು ಆ ಕಾಲದ ಎಲ್ಲ ಸಂತರು ಒತ್ತಿ ಹೇಳಿದರು.

ಮತ್ತು ಆಧ್ಯಾತ್ಮಿಕತೆಯು ಸಾಮಾನ್ಯ ಜೀವನದಲ್ಲೇ ಮೂಡಿಬರುವುದು ಸಾಧ್ಯವೆಂದೂ, ಹಾಗೆ ಮೂಡಿಬರಬೇಕಾದುದೇ ಸಹಜವೆಂದೂ ಈ ಎಲ್ಲ ಸಂತರೂ ಕಾಣಿಸಿದರು. ಬಹುಮಟ್ಟಿಗೆ ಅವರೆಲ್ಲ ಗೃಹಸ್ಥರಾಗಿದ್ದವರೇ, ತಂತಮ್ಮ ಪ್ರಾಪಂಚಿಕ ಪರಿಸರಗಳಲ್ಲಿದ್ದವರೇ. ಸಾಮಾನ್ಯ ಜನರ ನಡುವೆ ಬಾಳನ್ನು ಕಳೆದವರೇ, ಜನರ ಪ್ರೀತಿಯನ್ನು ಪಡೆದುಕೊಂಡವರೇ, ಮೇಲಾಗಿ ಅವರೆಲ್ಲ ಕವಿಗಳು, ಕಾವ್ಯದ ಹೊನಲಲ್ಲಿ ಅಧ್ಯಾತ್ಮದ ಸೊಗಸನ್ನು ಸೇರಿಸಿದವರು. ಅವರ ರಚನೆಗಳು ಕೂಡ ಜನಪ್ರಿಯವಾಗುವಂತೆ ಸರಳ ಶೈಲಿಯನ್ನು ಹಿಡಿದವು; ಛಂದೋಬದ್ಧವಾಗಿ ಪ್ರೌಢಸಾಹಿತ್ಯದ ಪ್ರಕಾರಕ್ಕೆ ಸೇರುವುವಲ್ಲ. ಮೇಲಾಗಿ ಪ್ರಯತ್ನಪೂರ್ವಕವಾದ ರಚನೆಗಳೂ ಅಲ್ಲ; ಬಹುಮಟ್ಟಿಗೆ ಸಂದರ್ಭಾನುಸಾರವಾಗಿ ಸ್ಫೂರ್ತಿಯ ಸೆಲೆಯಿಂದ ಹೊರಹೊಮ್ಮಿದ ಆಶುಕವಿತೆಗಳೇ. ಸಮಾಜವನ್ನು ತಿದ್ದಲೆಂದೇ ಹೊರಟವರು ಈ ಎಲ್ಲ ಸಂತರು; ಸಮಾಜ ಸುಧಾರಣೆ ಅವರಿಗೆ ಮುಕ್ತಿಗಿಂತ ಹೆಚ್ಚು ಅಗತ್ಯವಾಗಿದ್ದ ವಿಚಾರ.

❒

ಅಧ್ಯಾಯ ಹನ್ನೆರಡು

ಬಿಂಬೋಪಾಸನೆ

ಹರಿದಾಸ ಸಂಸ್ಕೃತಿಯಲ್ಲಿ ಬಿಂಬೋಪಾಸನೆಯೆಂಬ ಸಾಧನಮಾರ್ಗಕ್ಕೆ ಹೆಚ್ಚಿನ ಒತ್ತು ಇರುವುದು ಈಗಾಗಲೇ ಪ್ರಸ್ತಾಪಕ್ಕೆ ಬಂದಿದೆ. ಈಗ ಇನ್ನೂ ಕೆಲವು ವಿವರಗಳನ್ನು ತಿಳಿಸಬೇಕಾಗಿದೆ. ವ್ಯಾಸಕೂಟವೆಂಬ ಮಡಿ ಕಲ್ಪನೆಯ ಧೋರಣೆಗಿಂತ ತೀರ ಬೇರೆಯಾದುದು ಬಿಂಬೋಪಾಸನೆ ಎಂಬುದಾಗಲಿ, ದಾಸಕೂಟವೆಂಬ ಹರಿದಾಸ ಸಂಪ್ರದಾಯಕ್ಕೆ ಇದೇ ಮೂಲಭೂತವಾದುದು ಎಂಬುದಾಗಲಿ ಉತ್ಸುಕರ ಅರಿವಿಗೆ ಅಷ್ಟಾಗಿ ಬಂದಿಲ್ಲ. ಪಂಡಿತರ ಮಡಿವಂತಿಕೆಯನ್ನು ಹಳಿದು ಅಧ್ಯಾತ್ಮದ ರುಚಿಯನ್ನು ಎಲ್ಲ ಜನರಲ್ಲಿ ಕುದುರಿಸಲು ಹವಣಿಸಿದವರು ಹರಿದಾಸರು. ಇದೊಂದು ಸಣ್ಣ ಕ್ರಾಂತಿಯೇ ಆಯಿತು. ಪಟ್ಟಭದ್ರರ ಖಂಡನೆ, ಬಹಿಷ್ಕಾರ, ಆಗ್ರಹಗಳಿಗೆ ಹರಿದಾಸರು ಮಣಿಯದೆ ತಮ್ಮ ಹರಿದಾಸ್ಯ ನಿಷ್ಠೆಯನ್ನು ಪಟ್ಟಾಗಿ ಹಿಡಿದರು. ಕಾಲಕ್ರಮದಲ್ಲಿ ಇದು ಕಳೆಗುಂದಿತೆಂಬುದೇನೋ ದಿಟ. ಆದರೂ ಉಳಿದುಕೊಂಡುಬಂದಿತೆಂಬುದು ಮುಖ್ಯ.

ಮಾಧ್ವಸಂಪ್ರದಾಯದ ಪಂಡಿತರೂ ತಮ್ಮನ್ನು ಹರಿಯ ದಾಸರೆಂದೇ ಗುರುತಿಸಿಕೊಂಡರು. ಆದರೆ ವಿಷ್ಣುತೀರ್ಥರು ತಮ್ಮ ಭಾಗವತ ಸಾರೋದ್ಧಾರದಲ್ಲಿ ಹೇಳುವಂತೆ ದಾಸ್ಯ ಎರಡು ಬಗೆಯದು, ಒಂದು ಬಹಿರಂಗ, ಇನ್ನೊಂದು ಅಂತರಂಗ. ಎರಡನೆಯದು ಬಿಂಬೋಪಾಸನೆಯನ್ನೇ ಹಿಡಿದದ್ದು. ಮೊದಲನೆಯದು (ಎಂದರೆ ಪಂಡಿತರದ್ದು) 'ಬಿಂಬಾತಿರಿಕ್ತ'ವಾದುದು. ವ್ಯಾಸಕೂಟ-ದಾಸಕೂಟಗಳ ನಡುವೆ ಪ್ರಧಾನವಾದ ಅಂತರವಿರುವುದು ಇಲ್ಲಿಯೇ. ವ್ಯಾಸಕೂಟದವರು ಒಲಿದದ್ದು ಸಿದ್ಧಾಂತಕ್ಕೆ, ಹರಿದಾಸರು ಒಲಿದದ್ದು ಸಾಧನೆಗೆ.

ಇನ್ನು ಬಿಂಬೋಪಾಸನೆಯ ನೆಲೆ-ಹಿನ್ನೆಲೆಗಳನ್ನು ಕುರಿತಂತೆ ಸ್ವಲ್ಪ ವಿವರಣೆಯ ಅಗತ್ಯವಿದೆ. ಮೊದಲು ಉಪಾಸನೆಯೆಂಬ ಭಾಗವನ್ನು ಗಮನಿಸುವ. ಉಪಾಸನೆಯೆಂಬ ಮಾತಿಗೆ ಮನನದಿಂದ ನಾವು ಕಂಡುಕೊಂಡ ನಿಶ್ಚಿತತತ್ತ್ವದ ಹತ್ತಿರ ಕೂಡುವುದು ಎಂಬರ್ಥವಿದೆ. ಮಾಧ್ವವೇದಾಂತದ ಪ್ರಮೇಯ ಭಾಗದಲ್ಲಿ ಈ ನಿಶ್ಚಿತತತ್ತ್ವವು ವಿಷ್ಣು, ಇಲ್ಲಿ ವಿಷ್ಣುವೆಂದರೆ ಪುರಾಣ ಪ್ರಸಿದ್ಧಿಯ, ಬಳಕೆಯ ರೂಪದ ದೇವರಲ್ಲ; ಬ್ರಹ್ಮಮೀಮಾಂಸೆಯಲ್ಲಿ ಜಿಜ್ಞಾಸ್ಯವಾಗಿ ಬರುವ ಬ್ರಹ್ಮ. ವಿಷ್ಣು ಎಂದಾಗ 'ವಿಷಲ್ೃ ವ್ಯಾಪನೇ' ಎಂಬ ಧಾತ್ವರ್ಥದಿಂದ ಸರ್ವತ್ರ, ಸರ್ವದಾ ವ್ಯಾಪಿಸಿರುವುದು ಎಂಬರ್ಥ ಹೊರಡುತ್ತದೆ; 'ಬೃಂಹಣ' ಎಂಬ ಧಾತ್ವರ್ಥದಿಂದ (ಬೃಹೀ) ಬ್ರಹ್ಮ ಎಂಬ ಮಾತಿಗೂ

ಇದೇ ಅರ್ಥ. ಮಧ್ವಾಚಾರ್ಯರು ಗುಣಪೂರ್ಣ ಎಂಬ ವಿವರಣೆಯನ್ನು ನೀಡಿದಾಗಲೂ ಇದೇ ತಾತ್ಪರ್ಯ.

ಮಧ್ವಾಚಾರ್ಯರು ಉಪಾಸನೆಯಲ್ಲಿ ಎರಡು ಬಗೆಗಳು ಎಂದು ತಿಳಿಯ ಹೇಳಿದರು-

'ಸೋಪಾಸಾ ದ್ವಿವಿಧಾ ಶಾಸ್ತ್ರಾಭ್ಯಾಸಸ್ವರೂಪಣೀ।
ಧ್ಯಾನರೂಪಾ ಪರಾ ಚೈವ ತದಂಗಂ ಧಾರಣಾದಿಕಂ॥'

ಮೊದಲನೆಯದು ಶ್ರವಣ-ಮನನರೂಪವಾದುದು, ಶಾಸ್ತ್ರಾವಮರ್ಶನ, ಶಾಸ್ತ್ರಾಭ್ಯಾಸ. ಸಾಮಾನ್ಯವಾಗಿ ಪಂಡಿತರು ಹಿಡಿಯುವ ದಾರಿ. ಎರಡನೆಯದು ಧ್ಯಾನ ('ಧ್ಯಾನಂ ಹರೇಃ'). ಇದಕ್ಕೆ ಯಮ, ನಿಯಮ, ಆಸನ, ಪ್ರಾಣಾಯಾಮ ಇವು ನಾಲ್ಕು ಅಂಗಗಳು. ಈ ಎರಡರಲ್ಲಿ ಮೊದಲನೆಯದೇ ಎರಡನೆಯದಕ್ಕಿಂತ ಹತ್ತು ಪಟ್ಟು ಮಿಗಿಲಾದುದೆಂದು ಒಂದು ಅಭಿಪ್ರಾಯ ('ಧ್ಯಾನಾತ್ ಶಾಸ್ತ್ರಾವಮರ್ಶನಮೇವ ದಶಗುಣಮುತ್ತಮಂ'). ಏಕೆಂದರೆ, ಧ್ಯಾನ ಮಾಡುವಾಗ ಭಗವಂತನ ಅನೇಕ ಗುಣಗಳು ತೋರಿಕೊಳ್ಳುವುದಿಲ್ಲ. ಶಾಸ್ತ್ರಾವವಮರ್ಶನದಲ್ಲಾದರೆ ಎಲ್ಲ ಗುಣಗಳೂ ಮನದಟ್ಟಾಗುತ್ತವೆ. ಇದು ವ್ಯಾಸಕೂಟದ ನಿಲುವಿನ ಸಮರ್ಥನೆ. ಶಾಸ್ತ್ರಾಭ್ಯಾಸ, ಶಾಸ್ತ್ರಾವಮರ್ಶನ, ಶಾಸ್ತ್ರಾಲೋಡನ, ಶಾಸ್ತ್ರಪ್ರವಚನ, ಶಾಸ್ತ್ರವ್ಯಾಖ್ಯಾನ ಇವುಗಳಿಂದಲೇ ಸಾಧನೆ ನಡೆಸುವ ಪಂಡಿತರ ದಾರಿಯಿದು.

ಎರಡನೆಯದು ಹರಿದಾಸರು ಹಿಡಿದ ದಾರಿ. ಅವರದ್ದು ಧ್ಯಾನಕ್ಕೇ ಒಲಿದ ನಿಲುವು. ಶಾಸ್ತ್ರಾವಮರ್ಶನದಲ್ಲಿ ಬರುವ ಖಂಡನೆ-ಮಂಡನೆ, ವಾದ-ವಿವಾದ, ವಿಚಾರ-ವಿಮರ್ಶೆಗಳಿಗೆ ಅವರು ಮನಸ್ಸು ಕೊಡಲಿಲ್ಲ.

ಆದರೆ ವಿಷ್ಣುಸ್ಮರಣೆಯಿಲ್ಲದ ಶಾಸ್ತ್ರಾಧ್ಯಯನವನ್ನು ನಿಯಮದಲ್ಲಿ ಸೇರಿಸಿದರು; ವಿಷ್ಣುಸ್ಮರಣೆ ಇದ್ದರೆ ಮಾತ್ರ ಅದು ಉಪಾಸನೆಯಾಗುತ್ತದೆ. ಪ್ರಾಣಾಯಾಮದಂತೆ. ವಿಷ್ಣುಸ್ಮರಣೆಯಿಲ್ಲದ ಪ್ರಾಣಾಯಾಮ ಬರಿಯ ಶ್ವಾಸೋಚ್ಛ್ವಾಸದ ನಿರೋಧ; ವಿಷ್ಣುಸ್ಮರಣೆಯಿದ್ದರೆ ('ಕುಂಭಕೇ ವಿಷ್ಣುಮೂರ್ತಿಂ ಧ್ಯಾಯೇತ್') ಪ್ರಾಣಾಯಾಮವೂ ಧ್ಯಾನವೇ ಆಗುತ್ತದೆ-

'ಪ್ರಾಣಾಯಾಮಃ ಸ್ಮೃತಿಂ ವಿಷ್ಣೋರ್ವಿನಾ ನಿಯಮ ಉಚ್ಯತೇ।
ಪ್ರಾಣಾಯಾಮೇಪಿ ವಿಷ್ಣೋಃ ಸ್ಮರಣಂ ಧ್ಯಾನಮೇವ ತತ್॥'

ಹಾಗೆಯೇ ಶಾಸ್ತ್ರಾಧ್ಯಯನಮಾಡುವಾಗ ವಿಷ್ಣುಸ್ಮರಣೆ ಕೂಡಿಕೊಂಡರೆ ಅದು ನಿದಿಧ್ಯಾಸನ ವಾಗುತ್ತದೆ (ಎಂದರೆ ಧ್ಯಾನ)-

'ಅಧೀತಿಃ ಸ್ಮೃತಿಯುಕ್ತಾ ತು ನಿದಿಧ್ಯಾಸನಮೇವ ತತ್।'

ಇಲ್ಲಿ ಸ್ಮೃತಿಯೆಂದರೆ ಸಾಧಕರು ತನ್ನ ಹೃದಯಾಕಾಶದಲ್ಲಿ ಬಿಂಬಮೂರ್ತಿಯನ್ನು ಧ್ಯಾನ ಪೂರ್ವಕವಾಗಿ ನೆನೆಯುವುದು.

ಶಾಸ್ತ್ರಾಧ್ಯಯನವು ಉಳಿದ ಸಾಧನೆಗಿಂತ ಕೋಟಿಪಟ್ಟು ಮಿಗಿಲಾದ ಸ್ವಾಧ್ಯಾಯವೆನಿಸಿಕೊಳ್ಳುತ್ತದೆ. ಸ್ವಾಧ್ಯಾಯಕ್ಕಿಂತ ಲೆಕ್ಕವಿರದಷ್ಟು ಪಟ್ಟು ಮಿಗಿಲಾದುದು ಪೂಜೆ. ಅದಕ್ಕೂ ಮೂರುಪಟ್ಟು ಮಿಗಿಲಾದುದು ಧ್ಯಾನ-

'ಸ್ವಾಧ್ಯಾಯೋಽತಃ ಕೋಟಿಗುಣಸ್ತತೋಽನಂತಗುಣಾ ಹರೇಃ ।
ಪೂಜಾ ಅತಸ್ತ್ರಿಗುಣಂ ಧ್ಯಾನಮಿತಿ ಧರ್ಮಕ್ರಮಃ ಸ್ಮೃತಃ ॥'

ಇದು ಧರ್ಮಸಾಧನೆಯಲ್ಲಿ ತಾರತಮ್ಯವನ್ನು ಹೇಳಿರುವ ಕ್ರಮ. ಇದರಲ್ಲಿ ಪೂಜೆ ವ್ಯಾಸಕೂಟದವರಿಗೂ ದಾಸಕೂಟದವರಿಗೂ ಸಮನಾಗಿಯೇ ಪ್ರಸಕ್ತವಾಗುತ್ತದೆ. ಆದರೆ ಪೂಜೆ ಎನ್ನುವಾಗ ಸ್ಥೂಲ, ಸೂಕ್ಷ್ಮ ಎಂದು ವಿಭಾಗ ಮಾಡುವುದಿದೆ. ಪ್ರತಿಮೆ, ಪ್ರತೀಕ, ಶಾಲಗ್ರಾಮ, ಮಂಡಲ, ಪಟಗಳನ್ನಿರಿಸಿಕೊಂಡು, ಬಾಹ್ಯಾಂಗದ ಪರಿಕರಗಳಿಂದ ಉಪಚಾರಗಳನ್ನು ಸಮರ್ಪಿಸಿ ಮಾಡುವುದು ಸ್ಥೂಲಪೂಜೆ. ಸೂಕ್ಷ್ಮಪೂಜೆಯಾದರೋ ಮಾನಸವಾದುದು. ಎಲ್ಲ ಪ್ರಾಣಿಗಳಲ್ಲೂ ಅಂತರ್ಯಾಮಿಯಾಗಿರುವ ಪರಮಾತ್ಮನನ್ನು ಸಾಧಕನು ತನ್ನ ಹೃದಯದಲ್ಲೇ ಬಿಂಬರೂಪಿಯಾಗಿ ಭಾವಿಸಿಕೊಂಡು, ಮನಸ್ಸಿನಲ್ಲೇ ಎಲ್ಲ ಉಪಚಾರಗಳನ್ನೂ ಸಮರ್ಪಿಸುವುದು. ಎಂದರೆ ಯಾವುದೇ ಬಗೆಯ ಪೂಜೆಯಾಗಲಿ, ಧ್ಯಾನದಲ್ಲಿ ಪರ್ಯವಸಾನ ಹೊಂದಬೇಕು. ಇದರಲ್ಲಿ ಭಕ್ತಿ (ಎಂದರೆ ಭಗವನ್ಮಾಹಾತ್ಮ್ಯಜ್ಞಾನಪೂರ್ವಕವಾದ ಪರಮಸ್ನೇಹ, ದೃಢವಾಗಿರುವುದು) ಪ್ರಮುಖವಾದ ವಿವರ. ಮಧ್ವಾಚಾರ್ಯರು ಶಾಸ್ತ್ರಾವಮರ್ಶನವನ್ನು ಎಡೆಬಿಡದೆ ಮಾಡುತ್ತಿದ್ದರೆ 'ಪರಮ ಸ್ನೇಹ ಸಂಯುಕ್ತವಾದ ಯಥಾರ್ಥಜ್ಞಾನ' ಪೂರ್ವಕವಾದ ಸ್ನೇಹರೂಪ ಭಕ್ತಿಯು ಒದಗಿ ಬರುವುದೆಂದು ಹೇಳಿದರು. ಮೋಕ್ಷಕ್ಕೆ ಭಕ್ತಿಯೇ ಮುಖ್ಯಸಾಧನೆಯೆಂಬುದನ್ನೂ ಅವರು ಮನಗಾಣಿಸಿದರು.

ಭಕ್ತಿಯ ಹಿರಿಮೆಯನ್ನು ಮನಸಾರೆ ಮೆಚ್ಚಿಕೊಂಡವರು ಹರಿದಾಸರು. ಭಕ್ತಿಯ ಕಾವಿನಲ್ಲಿ ಧ್ಯಾನದ ಪರಿಪಾಕವನ್ನು ಮೈಗೂಡಿಸಿಕೊಂಡದ್ದು ಬಿಂಬೋಪಾಸನೆಯೆಂಬ ವಿಧಾನ. ಬಿಂಬೋಪಾಸನೆಯ ಸಿದ್ಧಾಂತವೇನೋ ಈ ಮೊದಲೇ ಹೇಳಿರುವಂತೆ ಭಾಗವತ ಸಂಪ್ರದಾಯದಲ್ಲಿ ಬಂದದ್ದೇ. ಅದರ ಪ್ರೇರಣೆಯಿಂದ ಮಧ್ವಾಚಾರ್ಯರು ತಮ್ಮ ತಂತ್ರಸಾರ ಸಂಗ್ರಹದಲ್ಲಿ ಇದನ್ನು ಎತ್ತಿ ಹಿಡಿದರು. ಅವರ ಪ್ರಶಿಷ್ಯ ನಾರಾಯಣ ಪಂಡಿತಾಚಾರ್ಯರ 'ಯೋಗ ದೀಪಿಕೆ'ಯಲ್ಲಿ ಇದರ ವಿವರಣೆಯೂ ಇದೆ. ಹರಿದಾಸ ಪರಂಪರೆಯ ಆದ್ಯರಲ್ಲಿ ಒಬ್ಬರಾದ ವ್ಯಾಸತೀರ್ಥರು ಪಂಡಿತರೂ ಹೌದು, ವ್ಯಾಸಕೂಟಕ್ಕೂ ಅವರು ಆದ್ಯರೇ. ಪ್ರೌಢಶಾಸ್ತ್ರ ಗ್ರಂಥಗಳಲ್ಲದೆ ಅವರು 'ಧ್ಯಾನ ಪ್ರಕರಣ'ವೆಂಬ ಸಣ್ಣದೊಂದು ಗ್ರಂಥವನ್ನೂ ರಚಿಸಿದ್ದಾರೆ. ಮುಂದಿನ ಹರಿದಾಸರು ಈ ಸಂಸತಗ್ರಂಥವನ್ನು ಕನ್ನಡದಲ್ಲೂ ಅನುವಾದ ಮಾಡಿ ಬಳಸಿಕೊಂಡರು. ಇದರಲ್ಲಿ ಬಿಂಬೋಪಾನೆಯ ಸ್ವಾರಸ್ಯ ಅಚ್ಚೊತ್ತಿದಂತಿದೆ.

ಇದರ ಸ್ಫೂರ್ತಿಯಿಂದಲೇ ಮುಂದೆ ವ್ಯಾಸಕೂಟ-ದಾಸಕೂಟಗಳೆರಡರಲ್ಲೂ ಮಾನ್ಯರಾದ ಐಜಿ ವೆಂಕಟರಾಮಾಚಾರ್ಯರು ('ವ್ಯಾಸತತ್ತ್ವಜ್ಞ'ರೆಂಬ ಹೆಸರಿನಿಂದ ಸಂನ್ಯಾಸಿಗಳಾದವರು, ಗೋಪಾಲದಾಸರಿಂದ 'ವಾಸುದೇವವಿಠಲ'ನೆಂಬ ಅಂಕಿತವನ್ನು ಪಡೆದುಕೊಂಡು ಕೀರ್ತನೆಗಳನ್ನು ರಚಿಸಿದವರು) 'ಮಾನಸಸ್ಮೃತಿ'ಯೆಂಬ ಸಂಸತಗ್ರಂಥವನ್ನು ಬರೆದು ಅದರಲ್ಲಿ ಬಿಂಬೋಪಾಸನೆಯ

ಕ್ರಮವನ್ನು ವಿವರಿಸಿದರು. ಅವರ ಶಿಷ್ಯರೂ, ವ್ಯಾಸಕೂಟ-ದಾಸಕೂಟಗಳೆರಡರಲ್ಲೂ ಪ್ರಸಿದ್ಧರಾದವರೂ ಆಗಿದ್ದ ವಿಷ್ಣುತೀರ್ಥರು (ಅಡವಿ ಆಚಾರ್ಯರು) ತಮ್ಮೆಲ್ಲ ಗ್ರಂಥಗಳಲ್ಲೂ ಬಿಂಬೋಪಾಸನೆಯನ್ನೆ ಗಟ್ಟಿಯಾಗಿ ಹಿಡಿದರು.

ಹರಿದಾಸ ಪರಂಪರೆಯಲ್ಲಿ ಪುರಂದರದಾಸರೂ ಬಿಂಬೋಪಾಸನೆಯ ಮಹತಿಯನ್ನು ಸೂಚಿಸಿದರು. ಅದನ್ನು ಸ್ಪಷ್ಟವಾಗಿ, ವಿಸ್ತಾರವಾಗಿ ಪ್ರತಿಪಾದಿಸಿದವರು ವಿಜಯದಾಸರು, ಅವರ ಶಿಷ್ಯರಾದ ಗೋಪಾಲದಾಸರು, ಅವರ ಶಿಷ್ಯರಾದ ಜಗನ್ನಾಥದಾಸರು. ಜಗನ್ನಾಥದಾಸರ ಹರಿಕಥಾಮೃತಸಾರವು (೨೪ನೆಯ ಸಂಧಿ, ಬಿಂಬಪ್ರತಿಬಿಂಬಸಂಧಿ) ಬಿಂಬೋಪಾಸನೆಯ ಕೈಪಿಡಿಯೆಂದರೂ ಸರಿಯೇ.

ಬಿಂಬೋಪಾಸನೆಯನ್ನು ವಿವರಿಸುವ ಸಂಸ್ಕೃತಗ್ರಂಥಗಳೂ ಹಲವು ಇವೆ. ನಡುಯುಗದ ಕೃತಿಗಳಾದ ಇವು ಯಾರಿಂದ ರಚಿತವಾದುವೋ ತಿಳಿದುಬರುವುದಿಲ್ಲ. ಮಾಧ್ವಸಿದ್ಧಾಂತದ ಪ್ರಮೇಯಗಳೊಂದಿಗೆ ಯೋಗಶಾಸ್ತ್ರದ ವಿವರಗಳೂ ತಾಂತ್ರಿಕ ಪ್ರಕಾರಗಳೂ ಈ ಗ್ರಂಥಗಳಲ್ಲಿ ಧಾರಾಳವಾಗಿ ಸೇರಿಕೊಂಡಿವೆ. ಪ್ರಕಾಶಸಂಹಿತಾ, ತಾತ್ಪರ್ಯಸಂಗ್ರಹ, ಶಾಂಡಿಲ್ಯತತ್ತ್ವ, ಸತ್ತತ್ತ್ವರತ್ನಮಾಲಾ, ವಿಷ್ಣುರಹಸ್ಯ, ಸಾರಸಂಗ್ರಹ, ತತ್ತ್ವಸಾರ, ವಿಷ್ಣುತತ್ತ್ವ ಇವು ಹರಿದಾಸರ ಗುಂಪಿನಲ್ಲಿ ಬಳಕೆಯಲ್ಲಿವೆ. ಜಗನ್ನಾಥದಾಸರ ಹರಿಕಥಾಮೃತಸಾರಕ್ಕಿರುವ ಹಲವು ವ್ಯಾಖ್ಯಾನಗಳು ಈ ಗ್ರಂಥಗಳನ್ನವಲಂಬಿಸಿವೆ. ಆದರೆ ಈ ಗ್ರಂಥಗಳನ್ನು ವ್ಯಾಸಕೂಟದ ಪಂಡಿತರು ಗಮನಿಸುವುದೇ ಇಲ್ಲ; ಅವರಿಗೆ ಈ ಯಾವ ಗ್ರಂಥವೂ ಮಾನ್ಯವಲ್ಲ. ಇವು ಹರಿದಾಸರದ್ದೇ ವಿಶೇಷವಾದ ಸ್ವತ್ತು. ಬಿಂಬೋಪಾಸನೆಯನ್ನು ಎತ್ತಿಹಿಡಿಯುವ ಹರಿದಾಸರು ಈ ಗ್ರಂಥಗಳನ್ನೇ ಹಿಡಿದಿರುವುದು ಸೋಜಿಗವೇನಲ್ಲ.

ಬಿಂಬೋಪಾಸನೆಯನ್ನು ಕುರಿತು ಬರೆಯುವುದು ಕಷ್ಟದ ಕೆಲಸವೇ. ಮುಖ್ಯವಾಗಿ ಇದು ಉಪಾಸನಾಭಾಗ; ಅನುಭವಕ್ಕಿರುವ ಆದ್ಯತೆ ವಿವರಣೆಗಿಲ್ಲ. ಮೇಲಾಗಿ ಅದರ ಸಿದ್ಧಾಂತವನ್ನು ನಿರೂಪಿಸುವಾಗ ವೇದಾಂತ ಪ್ರಮೇಯಗಳು ಮಾತ್ರವಲ್ಲದೆ ಯೋಗ ಶಾಸ್ತ್ರದ ವಿವರಗಳು, ತಂತ್ರದ ಪರಿಕರಗಳು, ಕುಂಡಲಿನೀವಿದ್ಯೆಯ ಸ್ವಾರಸ್ಯ, ಚಕ್ರಾಬ್ಜಮಂಡಲವೇ ಮೊದಲಾದ ಕಲ್ಪನೆಗಳು ಇವೆಲ್ಲ ಸೇರಿಕೊಳ್ಳುತ್ತವೆ. ಚಕ್ರಾಬ್ಜಮಂಡಲವೇ ಆಯಿತು, ವಿಜಯದಾಸರ ಕಂಕಣಾಕಾರಸುಳಾದಿಯಲ್ಲಿ ಬಂದ ವಿವರಗಳನ್ನು ಗೋಪಾಲದಾಸರು ಚಿತ್ರವಾಗಿ ರಚಿಸಿದ್ದಾರೆ. ಮಧ್ವಾಚಾರ್ಯರ ತಂತ್ರಸಾರ ಸಂಗ್ರಹದಲ್ಲಿಯೇ ಇದರ ಸ್ಪಷ್ಟ ಉಲ್ಲೇಖವಿದ್ದರೂ, ನಾರಾಯಣ ಪಂಡಿತಾಚಾರ್ಯರ ಯೋಗದೀಪಿಕೆಯಲ್ಲೂ ಇದರ ಪ್ರಸ್ತಾಪವಿದ್ದರೂ, ವ್ಯಾಸಕೂಟದ ಪಂಡಿತರಿಗೆ ಇದರ ಪರಿಚಯವೇ ಇರದು.

> 'ಪದ್ಮಂ ವೃತ್ತತ್ರಯಂ ಚಕ್ರಂ ರಾಶಯೋ ವೀಥಿಕಾಸ್ತಥಾ।
> ಶೋಭೋಪಶೋಭಿತಾಶ್ಚೈವ ಚಕ್ರಾಬ್ಜಸ್ಯ ತು ಲಕ್ಷಣಂ॥'

ಇದು ಮಧ್ವಾಚಾರ್ಯರ ಉಲ್ಲೇಖ. ಇದಕ್ಕಿರುವುದು ತಾಂತ್ರಿಕ ಹಿನ್ನೆಲೆಯೇ. ಇದನ್ನು ಆದರಿಸಿದವರು ಹರಿದಾಸರೇ ಎನ್ನುವುದು ಗಮನಿಸಬೇಕು.

ಬಿಂಬೋಪಾಸನೆಯ ವಿವರಗಳು ಹೀಗೆ ಹಲವು ಆಕರಗಳಿಂದ ಸಿದ್ಧವಾದುವು. ಶಾಸ್ತ್ರ ವಿಮರ್ಶನೆಯ ಹಿಡಿತಕ್ಕೆ ಸಿಗುವಂಥವಲ್ಲ; ಯೋಗಸಾಧನೆಯ ಅನುಭವದಲ್ಲಿಯೇ ಪ್ರತೀತವಾಗುವುವು. ಆದುದರಿಂದ ಇದು ಸಾಧಕರಿಗೆ ಮಾತ್ರ ರುಚಿಸುವ ವಿಚಾರ. ಇತರರು ಇದನ್ನು ಅಸಡ್ಡೆಯಿಂದ ಕಂಡಿದ್ದರೆ, ಕಂಡರೆ ಆಶ್ಚರ್ಯವೇನಲ್ಲ.

ಮತ್ತೆ, ಹರಿದಾಸರ ಬಿಂಬೋಪಾಸನೆಯಲ್ಲಿ ಸಾಮಾನ್ಯವಾಗಿ ಮಾಧ್ವಸಂಪ್ರದಾಯಕ್ಕೆ ವಿಲಕ್ಷಣವೆನಿಸುವ ಕೆಲವು ವಿಚಾರಗಳೂ ಸೇರಿಕೊಳ್ಳುತ್ತವೆ. ನಿದರ್ಶನಕ್ಕೆ ಭಾಗವತದ ಏಳನೆಯ ಸ್ಕಂದದಲ್ಲಿ ಬರುವ ಮೂರು ಬಗೆಯ ಅದ್ವೈತದ ಪ್ರಸಕ್ತಿ. ಲೋಕದಲ್ಲಿ ಇರುವ ಕಾರ್ಯಕಾರಣ ಸಂಬಂಧದಲ್ಲಿ ಮಹದಾದಿ ಕಾರ್ಯಗಳು ಪ್ರಕೃತಿ (ಗುಣತ್ರಯ) ಮುಂತಾದ ಕಾರಣ ಇವುಗಳಲ್ಲಿರುವ ಭಗವದ್ರೂಪಗಳ ಐಕ್ಯಚಿಂತನೆಯು ಭಾವಾದ್ವೈತವೆನಿಸಿಕೊಳ್ಳುತ್ತದೆ. ಕಾರ್ಯವು ಬಟ್ಟೆಯಂತೆ, ಕಾರಣವು ನೂಲಿನಂತೆ; ಎರಡರ ನಡುವೆ ಭೇದವಿರದು. ಎರಡನೆಯದು ದ್ರವ್ಯಾದ್ವೈತ. ತಾನು, ತನ್ನ ಮಡದಿ-ಮಕ್ಕಳು, ಬಯಕೆಗಳು ಮತ್ತು ಅವನ್ನು ಪೂರಯಿಸಿಕೊಳ್ಳುವ ಬಗೆಗಳು ಇವುಗಳಲ್ಲಿರುವ ಭಗವದ್ರೂಪಗಳಲ್ಲಿ ಐಕ್ಯತೆಯನ್ನು ಚಿಂತಿಸುವುದು; ಇವೆಲ್ಲವೂ ಭಗವದಧೀನ ಎಂದು ಬಗೆಯುವುದು. ಜಡ ಪ್ರಕೃತಿಗೆ ಸಂಬಂಧಿಸಿದ್ದು ದ್ರವ್ಯವೆನಿಸಿಕೊಳ್ಳುತ್ತದೆ. ಮೂರನೆಯದು ಕ್ರಿಯಾದ್ವೈತ. ತನ್ನ ಎಲ್ಲ ವ್ಯವಹಾರಗಳನ್ನು, ಮಾತು, ಮೈ, ಮನಸ್ಸುಗಳಿಂದ ಮಾಡುವ ಕೆಲಸಗಳಲ್ಲಿ ಭಗವದರ್ಪಣ ದೃಷ್ಟಿಯಿಂದ ಐಕ್ಯಚಿಂತನೆ ಮಾಡುವುದು ಇದು-

‘ಕಾರ್ಯಕಾರಣವಸ್ತ್ವೈಕ್ಯ ದರ್ಶನಂ ಪಟತಂತುವತ್।
ಅವಸ್ತುತ್ವಾದ್ವಿಕಲ್ಪಸ್ಯ ಭಾವಾದ್ವೈತಂ ತದುಚ್ಯತೇ॥

ಆತ್ಮಜಾಯಾಸುತಾದೀನಾಮನ್ಯೇಷಾಂ ಸರ್ವದೇಹಿನಾಂ।
ಯಚ್ಚಾರ್ಥಕಾಮಯೋರೈಕ್ಯಂ ದ್ರವ್ಯಾದ್ವೈತಂ ತದುಚ್ಯತೇ॥

ಯದ್ ಬ್ರಹ್ಮಣೀ ಪರೇ ಸಾಕ್ಷಾತ್ಸರ್ವಕರ್ಮಸಮರ್ಪಣಂ।
ಮನೋವಾಕ್ತನೂಭಿಃ ಪಾರ್ಥ ಕ್ರಿಯಾದ್ವೈತಂ ತದುಚ್ಯತೇ॥’

ಪರಮಾತ್ಮನ ಉಪಾಸನೆಯಲ್ಲಿ ದೇಹಗತವಾದ ಭಗವದ್ರೂಪಗಳಿಗೂ ಪದಾರ್ಥಗತವಾದ ಭಗವದ್ರೂಪಗಳಿಗೂ ಐಕ್ಯಚಿಂತನೆ ಮಾಡುವುದು, ಭಗವದ್ರೂಪಗಳ ಅನುಸಂಧಾನಮಾಡುವುದು ಇಲ್ಲಿ ಮುಖ್ಯವಾದ ವಿಚಾರ. ಎಲ್ಲದರಲ್ಲೂ ಖಂಡ (ಬಿಂದುಗಳಂತೆ, ಅಧಿಷ್ಠಾನಭೇದದಿಂದ ಖಂಡರೂಪದ ವ್ಯಾಪ್ತಿ), ಅಖಂಡ (ಸಮುದ್ರದ ನೀರಿನಂತೆ ವ್ಯಾಪ್ತಿ) ಚಿಂತನೆ ಮಾಡುವಾಗ ಅಪರಿಚ್ಛಿನ್ನವ್ಯಾಪ್ತಿಯ ಪ್ರಸಕ್ತಿ ಬರುತ್ತದೆ. ಖಂಡರೂಪದ ಒಂದೊಂದು ಪ್ರತಿಬಿಂಬದಲ್ಲೂ ಪ್ರತ್ಯೇಕವಾದ ಬಿಂಬ; ಅಖಂಡವಾದ ಸರ್ವವ್ಯಾಪಕವಾದ ಬಿಂಬ, ಇವು ಎರಡರ ನಡುವೆ ಐಕ್ಯಚಿಂತನೆ. ಪ್ರತಿಮೆಯಲ್ಲಿ ಅಂತರ್ಗತನಾದ ದೇವರಿಗೂ, ಪೂಜಾಸಾಮಗ್ರಿಯಲ್ಲಿರುವ ದೇವತಾರೂಪಗಳಿಗೂ ಐಕ್ಯಚಿಂತನೆಯ ಅನುಸಂಧಾನವೇ ಇಲ್ಲಿ ಅದ್ವೈತವೆನಿಸಿಕೊಂಡಿದೆ. ಪರಮಾತ್ಮನ ರೂಪ, ಗುಣ ಕ್ರಿಯೆಗಳಲ್ಲಿ ಭೇದವಿರದಷ್ಟೆ?

ಹಾಗೆಯೇ, ವಿಷ್ಣುರಹಸ್ಯದಲ್ಲಿ ಬರುವ ದೀಕ್ಷೆಯ ವಿಚಾರ ಬಿಂಬೋಪಾಸಕರಾದ ಹರಿದಾಸರಿಗೆ ಮುಖ್ಯವಾಗುತ್ತದೆ; ವ್ಯಾಸಕೂಟದವರಲ್ಲಿ ಇದರ ಪ್ರಸಕ್ತಿಯಿರದು. ದೀಕ್ಷೆಯಲ್ಲಿ ಒಳಗು, ಹೊರಗು ಎಂದೆರಡು ಬಗೆಗಳು. ಹೊರಗಣ ದೀಕ್ಷೆಯು ಮಂದಮತಿಗಳಿಗೆ, ಅವರ ದೇಹಕ್ಕೆ ಒದಗುವ ನಾಮ, ಲಾಂಛನ, ತಪ್ತಮುದ್ರಾಂಕನ ಮುಂತಾದ ಸಂಸ್ಕಾರಗಳು. ಒಳಗಣ ದೀಕ್ಷೆಯಿಂದರೆ ಭಗವಂತನಿಗೇ ಸೇರಿದವನು ತಾನು, ಭಗವಂತನೊಬ್ಬನೇ ತನ್ನನ್ನು ಕಾಪಿಡುವವನು, ಅವನೇ ತನ್ನ ಒಡೆಯ, ಎಲ್ಲರಿಗಿಂತ ಎಲ್ಲಕ್ಕಿಂತ ಮಿಗಿಲಾದವನು, ಎಂಬ ನಿಶ್ಚಿತವಾದ ನಂಬಿಕೆ. ದೇಹವು ವೈಷ್ಣವರಥ ಎಂಬ ಭಾವನೆಯನ್ನು ಮನವರಿಕೆ ಮಾಡಿಕೊಡುವುದು ಆಂತರಿಕದೀಕ್ಷೆ-

‘ದೀಕ್ಷಾ ಹಿ ದ್ವಿವಿಧಾ ಪ್ರೋಕ್ತಾ ಬಾಹ್ಯಾಭ್ಯಂತರಭೇದತಃ।
ಜ್ಞಾನಿನಾಂ ಉಭಯೋ ತತ್ರ ಬಾಹ್ಯೈವಾಜ್ಞಾನಿನಾಂ ಭವೇತ್॥

ಅಯಂ ಸರ್ವೇಷ್ಟದಾತಾ ಮೇ ಸರ್ವಾರಿಷ್ಟನಿವಾರಕಃ।
ಸರ್ವೋತ್ತಮಶ್ಚೋಽಯಮೇವೈಕಸ್ತದೀಯೋಽಹಂ ಸ ಮೇ ಪತಿಃ॥

ಇತಿ ಜ್ಞಾನಂ ನಿಶ್ಚಿತಂ ಯತ್ ಸಾ ದೀಕ್ಷಾಭ್ಯಂತರಾ ಮತಾ।
ನಾಮ ಚಿಹ್ನಾದಿನಾ ದೇಹೇ ವಹ್ನಿನಾ ವಾ ಮೃದಂಕನಂ।
ಸಾ ಬಾಹ್ಯಾ ಪ್ರೋಚ್ಯತೇ ದೀಕ್ಷಾ ಹ್ಯಜ್ಞಾನಾಂ ಜ್ಞಾನಿನಾಮಪಿ॥’

ದೀಕ್ಷೆಯೆನ್ನುವುದು ಹೇಳಿ ಕೇಳಿ ತಾಂತ್ರಿಕಕ್ರಿಯೆ. ವ್ಯಾಸಕೂಟದ ವೈದಿಕ ಪಂಡಿತರಿಗೆ ದೀಕ್ಷೆಯ ಸೊಲ್ಲಿಲ್ಲ; ಶಾಸ್ತ್ರಾವಮರ್ಶನಕ್ಕೆ ದೀಕ್ಷೆಯ ಅಗತ್ಯವಿರದು. ಆದರೆ ಹರಿದಾಸರಿಗೆ ದೀಕ್ಷೆ ಮುಖ್ಯವಾದುದು. ದೀಕ್ಷೆ, ಅಂಕಿತ ಇಲ್ಲದೆ ದೇಹಶುದ್ಧಿಯೇ ಇಲ್ಲ, ದಾಸಕೂಟಕ್ಕೆ ಪ್ರವೇಶವು ದೀಕ್ಷೆಯ ಮೂಲಕವೇ. ದಂಡಿಗೆ-ಬೆತ್ತ ಹಿಡಿಯುವುದು, ಗೋಪಾಳಬುಟ್ಟಿಯನ್ನು ಮೆರೆಸುವುದು, ಕುಣಿದು ಪಾಡಲು ಕಾಲಿಗೆ ಗೆಜ್ಜೆ ತೊಡುವುದು, ಅಂಕಿತದಿಂದ ಹಾಡನ್ನು ಕಟ್ಟುವುದು ಇವೆಲ್ಲ ದೀಕ್ಷೆಯಾದಮೇಲೇ. ಗೋಪಾಲದಾಸರು ‘ಅಂದು ನಿನ್ನವನು, ಇಂದು ನಿನ್ನವನೇ’ ಎಂದು ಹೇಳಿದಾಗ ದೀಕ್ಷೆಯಿಂದಾಗುವ ಪರಿವರ್ತನೆಯ ಸೂಚನೆಯಿದೆ.

ಬಿಂಬೋಪಾಸನೆಯ ಮೂಲ ನಮಗೆ ಕಾಣಸಿಗುವುದು ಭಾಗವತರಲ್ಲೇ. ಅಲ್ಲಿನ ಪರತತ್ತ್ವ ವಿಷ್ಣು. ಮೇಲೆ ಹೇಳಿದ್ದನ್ನು ಮತ್ತೆ ನೆನಪಿಗೆ ತಂದುಕೊಳ್ಳಬೇಕು. ‘ವಿಷಲೃ ವ್ಯಾಪನೇ’ ಎಂಬ ಧಾತ್ವರ್ಥದಿಂದ ಎಲ್ಲೆಲ್ಲಿಯೂ, ಎಲ್ಲದರಲ್ಲೂ, ಯಾವಾಗಲೂ, ಎಡೆಬಿಡದೆ ಪೂರ್ಣವಾಗಿ ಪೂರ್ಣನಾಗಿ ವ್ಯಾಪಿಸಿಕೊಂಡಿರುವವನು. ಇಲ್ಲಿ ವಿಷ್ಣು ಎಂದರೆ ಪೌರಾಣಿಕ ಪ್ರಸಕ್ತಿಯ, ಮತಪ್ರಕ್ರಿಯೆಯ ಮೂರ್ತಿಕಲ್ಪನೆ ಸಲ್ಲುವುದಿಲ್ಲ. ವೇದಾಂತದ ಬ್ರಹ್ಮ (‘ಬೃಹೀ ವೃದ್ಧೌ’ ಎಂಬ ಧಾತ್ವರ್ಥದಿಂದ ಗುಣಪೂರ್ಣ) ಎಂಬುದಕ್ಕೆ ಇದು ಸಮನಾರ್ಥಕವಾದ ಪದ. ಋಗ್ವೇದದ ‘ಪುರುಷ’ ನೆಂದರೂ ಇದೇ. ‘ಪುರು’ ಎಂದರೆ ಎಂದರೆ ಪೂರ್ಣಾನಂದ; ಅದನ್ನು ಒದಗಿಸುವವನು (‘ಷನೋತಿ, ದದಾತಿ’). ಪರಮಾತ್ಮ, ಭಗವಾನ್, ‘ಏಕಂ ಸತ್’, ನಾರಾಯಣ ಎಂಬೆಲ್ಲ ಮಾತುಗಳಿಗೂ ಇದೇ ಅರ್ಥ.

ಈ ಪರತತ್ತ್ವಕ್ಕೆ ಮೂರು ರೂಪಗಳೆಂದು ಭಾಗವತದ ಒಕ್ಕಣೆ. ಸೃಷ್ಟಿಯ ಆರಂಭಕಾರಣವಾಗಿರುವ ಮಹತ್ತತ್ತ್ವದಲ್ಲಿ ಪ್ರೇರಕ, ಕಾರಕವಾಗಿರುವ ರೂಪವೊಂದು; ಬ್ರಹ್ಮಾಂಡಖರ್ಪರದಲ್ಲಿ ಪ್ರವೇಶಿಸಿರುವುದು ಇನ್ನೊಂದು ರೂಪ.; ಎಲ್ಲ ಪ್ರಾಣಿಗಳೊಳಗೆ ನೆಲೆಸಿರುವುದು ಮೂರನೆಯ ರೂಪ, ಇದೇ ಬಿಂಬವೆನಿಸಿಕೊಳ್ಳುತ್ತದೆ-

'ವಿಷ್ಣೋಸ್ತ್ರೀಣಿ ರೂಪಾಣಿ ಪುರುಷಸ್ಯ ಮಹಾತ್ಮನಃ।
ಪ್ರಥಮಂ ಮಹತಃ ಸ್ರಷ್ಟೃ ದ್ವಿತೀಯಂ ತ್ವಂಡಸಂಸ್ಥಿತಂ।
ತೃತೀಯಂ ಸರ್ವಭೂತಸ್ಥಂ ತಾನಿ ಜ್ಞಾತ್ವಾ ವಿಮುಚ್ಯತೇ॥'

ಈ ಮೂರು ರೂಪಗಳ ಎಣಿಕೆಯ ಸ್ವಾರಸ್ಯವೇನೆಂದರೆ, ವಿಷ್ಣುವು ಚರಾಚರಪ್ರಪಂಚದ ಒಳಗೆ, ಹೊರಗೆ ತನ್ನ ಚಿದಾನಂದ ಶರೀರದಿಂದ ವ್ಯಾಪಿಸಿಕೊಂಡಿದ್ದಾನೆ ಎನ್ನುವುದು. ಎಲ್ಲ ವಸ್ತುಗಳಲ್ಲಿ ಆಯಾ ಆಕಾರಗಳಿಂದಲೇ ಅಡಗಿರುತ್ತಾನೆ; ನೀರು ಮಡಕೆಯಲ್ಲಿದ್ದಾಗ ಮಡಕೆಯ ಆಕಾರವನ್ನೇ ತಳೆದಂತೆ. ಇದನ್ನು ತಿಳಿವಳಿಕೆಯಿಲ್ಲದವರು ಅರಿಯಲಾರರು. ಇದಕ್ಕೆ ಭಗವಂತನ ಮಾಯೆಯೇ ಕಾರಣ. ಜೀವಿಯು ದೇಹವೇ ತಾನು, ವಸ್ತುಗಳು ತನ್ನವು ಎಂದು ಭ್ರಮಿಸುವನು; ಬೇಡದಿದ್ದರೂ ಬೇಗುದಿಗಳಲ್ಲಿ ಬೇಯುವನು. ವಿಷ್ಣುರಹಸ್ಯದಲ್ಲಿರುವ ಮಾತು ಇದು-

'ಘಟಾಕಾರಂ ಭವತ್ಯೇವ ಘಟಸ್ಥಂ ಸಲಿಲಂ ಯಥಾ।
ತತ್ತದಾಕಾರವದ್ವಿಷ್ಣುಃ ತತ್ತದ್ವಸ್ತುಸ್ಥಿತಸ್ತಥಾ॥

ತನ್ಮೂಢಾ ನ ಜಾನಂತಿ ಮಾಯಾಮುಷಿತಚಕ್ಷುಷಃ।
ದೇಹೋऽಹಂಭಾವಿನೋऽನ್ಯತ್ರ ಮಮತಾಬುದ್ಧ್ಯಾ ಸದಾ।
ಅನಿಚ್ಛಂತೋಽಪಿ ಭುಂಜಂತಿ ದುಃಖಾನಿ ವಿವಿಧಾನ್ಯಪಿ॥'

ಎಲ್ಲ ಪ್ರಾಣಿಗಳಲ್ಲೂ ಅಂತರ್ಗತನಾಗಿ ನಿಯಾಮಕನಾಗಿ ಇರುವ ಪರಮಾತ್ಮನು ಬಿಂಬರೂಪಿ. ದೇಹ ಬಿಂಬವಾದರೆ ದೇಹದ ನೆರಳು ಪ್ರತಿಬಿಂಬ; ಭಗವಂತ ಬಿಂಬವಾದರೆ ಜೀವ ಪ್ರತಿಬಿಂಬ. ಜೀವ ಬಿಂಬವಾದರೆ ದೇಹ ಪ್ರತಿಬಿಂಬ. ಬಿಂಬರೂಪಿಯು ಎಲ್ಲ ಪ್ರಾಣಿಗಳಲ್ಲೂ ಸಮಾನವಾಗಿಯೇ ಇರುತ್ತಾನೆ. ಆದರೆ ಅವರವರ ದೇಹ, ಇಂದ್ರಿಯ, ಮನಸ್ಸು ಬೇರೆಬೇರೆಯಾಗಿರುವಾಗ ಬೇರೆ ಬೇರೆ ಆಕಾರಗಳಲ್ಲಿಯೆ ತೋರಿಕೊಳ್ಳುತ್ತಾನೆ. ಮಡಕೆಯೊಳಗಿನ ನೀರಿಗೊಂದು ಆಕಾರ ತೋರಿಕೊಂಡರೆ, ಮಡಕೆಯ ಆಕಾರವೇ ಅದರ ಕಾರಣ, ನೀರಿಗೇ ಆ ಆಕಾರವಿರದಷ್ಟೆ. ಹೀಗೆ ಅಣುರೂಪದಿಂದ ಸರ್ವಜೀವಾಂತರ್ಗತ; ಬಿಂಬರೂಪದಿಂದ ನಿಯಾಮಕ. ವಿಜಯದಾಸರ ವಿವರಣೆ ಹೀಗಿದೆ-

'ತಳಗಿಯೊಳಗೆ ಉದಕ ತುಂಬಿರಲು
ಅದರೊಳಗೆ ಸೂರ್ಯನ ಬಿಂಬವಿರಲು
ಆ ಬಿಂಬದ ಪ್ರಕಾಶ ಮತ್ತೊಂದರಲಿ
ಪ್ರತಿಬಿಂಬ ತೋರಿದಂತೆ।'

ಬಿಂಬವು ಪ್ರೇರಕವೂ ಹೌದು, ನಿಯಾಮಕವು ಹೌದು. ಎಲ್ಲ ವಸ್ತುಗಳಲ್ಲಿ ಆಯಾ ಆಕಾರಗಳಿಂದ ಇದ್ದುಕೊಂಡು ಎಲ್ಲ ಕಾರ್ಯಗಳನ್ನು ನಿರ್ವಹಿಸುವುದು ಬಿಂಬ. ಬಿಂಬವು ಸ್ವತಂತ್ರ, ಪ್ರತಿಬಿಂಬವು ಪರತಂತ್ರ. ಬಿಂಬ ಆಡಿದರೆ, ಅದು ಆಡಿದಂತೆ ಪ್ರತಿಬಿಂಬವೂ ಆಡುತ್ತದೆ, ದೇಹ ಆಡಿದಂತೆ ಅದರ ನೆರಳು ಆಡಿದ ಹಾಗೆ. 'ನೋಡಿ ನೋಡಿಸುತ, ನಡೆದು ನಡೆಸುತ, ನುಡಿದು ನುಡಿಸುತ' ಎಂದು ಗೋಪಾಲದಾಸರು ಹೇಳುತ್ತಾರೆ. ಇದನ್ನು ಬಿಂಬಕ್ರಿಯೆ ಎನ್ನುತ್ತಾರೆ. 'ನಾಹಂ ಕರ್ತಾ ಹರಿಃ ಕರ್ತಾ' ಎನ್ನು ಮಾತಿಗೆ ಇದೇ ಅರ್ಥ. ಹರಿದಾಸರು ಇದನ್ನು ಚೆನ್ನಾಗಿ ಅರಿತು, 'ಸ್ವತಂತ್ರ ನೀನು, ಅಸ್ವತಂತ್ರತರ ನಾನು' (ಗೋಪಾಲದಾಸರು) ಎಂಬ ಭಾವನೆಯಿಂದಲೇ ಬದುಕನ್ನು ನಡೆಸುವರು. ಗೋಪಾಲದಾಸರ ಪದವೊಂದು (ಮುಖಾರಿರಾಗದ್ದು)

'ಬಂದೆ ಬಂದೆ ಸ್ವಾಮಿಯೆ ಬಂದೆ ।।ಪ।।

ನಡೆದು ನಡೆಸುತ ನುಡಿದು ನುಡಿಸುತ
ಅಡಿಗಡಿಗೆ ಕಾಪಿಡುತ
ಒಡನೆ ಆಡುತ ಬಿಡದೆ ಕ್ಷಣವನು
ಸಡಗರದಿ ಕರೆತರಲು ನಾನಿಲ್ಲಿಗೆ । (ಬಂದೆ) ।।

ಒಂದು ರೂಪದಿ ನಿಂದು ಎನ್ನಲಿ
ಚಂದದಿಂ ಕರೆತಂದೆ ಇಲ್ಲಿಗೆ
ಒಂದರಿಯೆ ನಿನ್ನ ವಂದಿಸುವ ಬಗೆ
ಬಂದೊದಗೋ ನೀನೆನ್ನ ವದನಕೆ। (ಬಂದೆ)।।

ಏನು ಕೊಡಲಿಲ್ಲ ಏನು ಬೇಡಲಿಲ್ಲ
ಏನು ಪಡೆಯಲೋ ಕರುಣೆಯೆ
ನೀನೆನಗಿತ್ತ ಸ್ವಾತಂತ್ರ್ಯದ ಫಲ
ನಿನಗರ್ಪಿಸಬೇಕೆನುತ ಇಲ್ಲಿ। (ಬಂದೆ)।।

ನಮ್ಮ ಬದುಕು ಸಾಧ್ಯವಾಗಿರುವುದು ಶರೀರದೊಳಗೆ ಜೀವ ಇರುವುದರಿಂದ. ಪ್ರತಿಬಿಂಬವಾದ ದೇಹದೊಳಗೆ ಬಿಂಬನಾದ ಜೀವ ವ್ಯಾಪಿಸಿಕೊಂಡಿರುವಂತೆ, ಪರಮಾತ್ಮನು ಬಿಂಬನಾಗಿ ತನ್ನ ಪ್ರತಿಬಿಂಬವಾದ ಜೀವನೊಳಗೆ ವ್ಯಾಪಿಸಿಕೊಂಡಿದ್ದಾನೆ. ಜೀವನು ಅಣುಸ್ವರೂಪದವನು. ದೀಪದ ಬೆಳಕು ಕೋಣೆಯನ್ನೆಲ್ಲ ವ್ಯಾಪಿಸಿಕೊಂಡಿರುವಂತೆ, ಶರೀರದಲ್ಲೆಲ್ಲ ಜೀವನು ವ್ಯಾಪಿಸಿಕೊಂಡಿದ್ದಾನೆ. ಒಂದು ದೀಪದ ಬೆಳಕು ಮತ್ತೊಂದು ದೀಪದ ಬೆಳಕಿನಲ್ಲಿ ಬೆರೆತುಕೊಂಡಿರುವಂತೆ ಜೀವನಲ್ಲಿ ವಾಯುದೇವ (ಮುಖ್ಯಪ್ರಾಣ) ವ್ಯಾಪಿಸಿಕೊಂಡಿದ್ದಾನೆ. ಜೀವನು ಶರೀರದಲ್ಲಿ ವ್ಯಾಪಿಸಿಕೊಂಡಿರುವಾಗ ಅದರಲ್ಲಿ ವಾಯುದೇವನ ವ್ಯಾಪ್ತಿ. ಅವನು ಜೀವಾಂತರ್ಗತ. ಆದರೆ ಜೀವನದಾದ ಅಣುಸ್ವರೂಪದೊಳಗೆ ಇರುವವನು ಪರಮಾತ್ಮನೊಬ್ಬನೇ. ಇವನನ್ನೆ ಬಿಂಬರೂಪವೆನ್ನುವರು.

ನೀರಿನ ಹರವಿನಲ್ಲಿ ಸೂರ್ಯನ ಪ್ರತಿಬಿಂಬ ತೋರಿಕೊಳ್ಳುವಂತೆ, ಜೀವನಲ್ಲಿ ಪರಮಾತ್ಮ. ಪರಮಾತ್ಮ ಬಿಂಬನಾದರೆ ಜೀವನು ಪ್ರತಿಬಿಂಬ.

ಜೀವ, ಇಂದ್ರಿಯಗಳು ದಿಗ್ದೇವತೆ, ಆಹಂಕಾರಿಕ ಪ್ರಾಣ, ಸೂರ್ಯ, ವರುಣ ಮೊದಲಾದ ಇಪ್ಪತ್ತು ನಾಲ್ಕು ತತ್ತ್ವಾಭಿಮಾನಿಗಳು ಇವೆಲ್ಲದರ ಅತರ್ಗತವಾಗಿ, ಇವುಗಳಲ್ಲಿ ಪ್ರವೇಶಮಾಡಿ, ಇವುಗಳಲ್ಲಿ ಇದ್ದುಕೊಂಡು ಇವನ್ನೆಲ್ಲ ಪ್ರೇರಿಸುವವನು, ಇವುಗಳಿಂದ ಎಲ್ಲ ಕೆಲಸಗಳನ್ನೂ ಮಾಡಿಸುವವನು ಬಿಂಬರೂಪಿಯಾದ ಪರಮಾತ್ಮ. ಶರೀರಕ್ಕೊಂದು ಆಕಾರವಿರುವಂತೆಯೆ, ಜೀವನಿಗೂ ಆಕಾರವಿದೆ, ಜೀವಸ್ವರೂಪ ಆಕಾರ ಇದು. ಈ ಸ್ವರೂಪದ ಆಕಾರವನ್ನೇ ಬಿಂಬನಾದ ಪರಮಾತ್ಮನು ತಳೆದಿರುವನು. ಜೀವನ ಸ್ವರೂಪದೇಹದ ತಲೆಯೇ ಅವನ ಬಿಂಬರೂಪದ ತಲೆ, ಹೀಗೆ ಜೀವನ ಎಲ್ಲ ಅಂಗಗಳಲ್ಲೂ ಪರಮಾತ್ಮನ ವ್ಯಾಪ್ತಿ. ಜೀವನ ಸ್ವರೂಪ ದೇಹದ ನಟ್ಟನಡುವೆ ಇರುವ ಪರಮಾತ್ಮನ ರೂಪವನ್ನು ನಾರಾಯಣನೆಂದು ಕರೆದಿದ್ದಾರೆ. 'ಅರ' ಎಂದರೆ ದೋಷ, ಅದಿಲ್ಲದವನು 'ನಾರ', ಸಂಸಾರದ ಕೊಳೆಗಳನ್ನು ಕಿತ್ತೊಗೆದ ಮುಕ್ತ. ಅವನಿಗೆ ದಾರಿಯಾದವನು, ಗತಿಯಾದವನು (ಅಯನ) ನಾರಾಯಣ; ವೇದಾಂತಿಗಳು ಹೇಳುವ ಗುಣಪೂರ್ಣನಾದ ಬ್ರಹ್ಮ.

ದೇಪದಲ್ಲಿ ಪರಮಾತ್ಮ ಇರುವುದಾದರೂ ದೇಹದೊಂದಿಗೆ ಎಷ್ಟು ಮಾತ್ರದ ಸಂಬಂಧವನ್ನೂ ಹೊಂದಿರದವನು. ಲೋಹಗತ ಅಗ್ನಿಯಂತೆ ಎಂಬ ಉಪಮೆಯಿದೆ. ದೇಹಿಯಾದ ಜೀವ (ಶಾರೀರಕ) ಕಬ್ಬಿಣದ ತುಂಡು. ಅದು ಕಾದಿರುವಾಗ ಅದರಲ್ಲಿರುವ ಕಾವು (ಅಗ್ನಿ) ಜೀವಾಂತರ್ಗತನಾದ ಪರಮಾತ್ಮ. ಜೀವವನ್ನು ಬೀಜ ಎಂದುಕೊಂಡರೆ ಪರಮಾತ್ಮ ಬೀಜಕ್ಕೆ ಆಸರೆಯಾದ ನೀರು. ದೇಹವನ್ನು ರಥವೆಂದು ಉಪನಿಷತ್ತೇ ಹೇಳಿದೆಯಷ್ಟೆ? ಪ್ರಕಾಶಸಂಹಿತೆಯಲ್ಲಿ-

'ಇದು ಶರೀರಂ ವಿಷ್ಣುರಥಮಿತ್ಯನುಚಿಂತಯೇತ್'

ಎಂಬ ಒಕ್ಕಣೆ ಬಂದಿದೆ. ಈ ರಥದ ಒಡೆಯ ಬಿಂಬರೂಪಿಯಾದ ಪರಮಾತ್ಮ. ಕನಕದಾಸರು 'ತನು ನಿನ್ನದು' ಎಂದರಲ್ಲವೆ? ರಥವನ್ನು ನಡೆಸುವ ಸಾರಥಿ ವಾಯುದೇವ (ಮುಖ್ಯಪ್ರಾಣ); ರಥಕ್ಕೆ ಹೊಂದಿಸಿರುವ ಹತ್ತು ಕುದುರೆಗಳು ಹತ್ತು ಇಂದ್ರಿಯಗಳು.

ಶರೀರವನ್ನು ಬಿಂಬನ ನಗರವೆಂದೂ ಹೇಳುವುದಿದೆ. ಪುರುಷ ಎನ್ನುವ ಮಾತಿಗೆ 'ಪುರಿ ಶೇತೇ' (ತನ್ನ ನಗರದಲ್ಲಿ ನಿರಾತಂಕವಾಗಿ ನಿರ್ಲಿಪ್ತನಾಗಿ ಒಂದರ ಗೊಡವೆಯಿರದೆ ಪವಡಿಸಿರುವವನು) ಎಂಬರ್ಥವೂ ಇದೆ. ಇಲ್ಲಿ ಬಿಂಬಮೂರ್ತಿ ಪುರುಷ; ದೇಹಾಂತರ್ಗತ, ಜೀವಾಂತರ್ಗತ; ತತ್ತ್ವಗಳ ಪ್ರೇರಕ, ನಿಯಾಮಕ. ಈ ನಗರಕ್ಕೆ ಕಾವಲು ಮುಖ್ಯಪ್ರಾಣ; ಪಂಚಪ್ರಾಣರೂಪದಿಂದ (ಪ್ರಾಣ ಅಪಾನ, ವ್ಯಾನ, ಉದಾನ, ಸಮಾನ) ಇವನ ಕೆಲಸ ನಡೆಯುತ್ತದೆ. ನಗರದ ಬಾಗಲುಗಳು ಪೂರ್ವಕ್ಕೆ ಕಣ್ಣುಗಳೆರಡು (ಸೂರ್ಯಚಂದ್ರ), ಮೂಗಿನ ಹೊಳ್ಳೆಗಳೆರಡು (ನಾಸತ್ಯ-ದಸ್ರ), ಬಾಯಿ (ಅಗ್ನಿ), ಉತ್ತರ ದಕ್ಷಿಣ ಪಾರ್ಶ್ವಗಳಲ್ಲಿ ಕಿವಿಗಳೆರಡು (ದಿಗ್ದೇವತೆಗಳು), ಪಶ್ಚಿಮಕ್ಕೆ ಗುದ (ಮಿತ್ರ) ಮತ್ತು ಉಪಸ್ಥ (ಸ್ವಾಯಂಭುವ-ಮನು) ಇವೆರಡು, ಮೇಲ್ಭಾಗದ ಬಾಗಲು ಬ್ರಹ್ಮರಂಧ್ರ (ಬ್ರಹ್ಮ) ಹೀಗೆ ಎಂಟುದ್ವಾರಗಳು. ಚರ್ಮವೇ ಮೊದಲಾಗಿ ಏಳು ಧಾತುಗಳು ನಗರದ ಸಪ್ತಪ್ರಾಕಾರಗಳು.

ನಗರದ ರಾಜಮಾರ್ಗ ಸುಷುಮ್ನಾನಾಡಿ; ಗುದದಿಂದ ಬ್ರಹ್ಮರಂಧ್ರದವರೆಗೆ ಸಾಗುವ ಬೀದಿ ಇದು. ನಗರದಲ್ಲಿ ಎಪ್ಪತ್ತೆರಡು ಸಾವಿರ ನಾಡಿಗಳೇ ಬೀದಿಗಳು, ಉಪವೀಥಿಗಳು.

ಈ ಎಪ್ಪತ್ತೆರಡು ಸಾವಿರ ನಾಡಿಗಳಲ್ಲಿ ವಾಯುದೇವನು (ಮುಖ್ಯಪ್ರಾಣ) ಅಷ್ಟೇ ಸಂಖ್ಯೆಯ ರೂಪಗಳಿಂದ, ಮತ್ತು ಅವನ ಅಂತರ್ಯಾಮಿಯಾಗಿ ಪರಮಾತ್ಮನೂ ಅಷ್ಟೇ ರೂಪಗಳಿಂದ ಇರುವರು. ಎಪ್ಪತ್ತೆರಡು ಸಾವಿರ ನಾಡಿಗಳ ಎಣಿಕೆ ಹೀಗೆ. ಶರೀರದ ಎಡ-ಬಲ ಭಾಗಗಳಲ್ಲಿ ಒಂದೊಂದರಲ್ಲೂ ಮೂವತ್ತಾರು ಸಾವಿರ ನಾಡಿಗಳು-

ಸೊಂಟದಿಂದ ಕಾಲುಗಳವರೆಗೆ	೧೨,೦೦೦
ನಡುದೇಹ (ಕತ್ತಿನಿಂದ ಸೊಂಟದವರೆಗೆ)	೧೪,೦೦೦
ತೋಳುಗಳಲ್ಲಿ (ಕೈಗಳವರೆಗೆ)	೪,೦೦೦
ತಲೆಯೊಳಗೆ	೬,೦೦೦
ಒಟ್ಟು	೩೬,೦೦೦

ಒಂದು ಹುಲ್ಲುಕಡ್ಡಿಯಿಂದ ಹಿಡಿದು ಚತುರ್ಮುಖಬ್ರಹ್ಮನವರೆಗೆ ಎಲ್ಲ ಜೀವರಿಗೂ ಆಧಾರಭೂತವಾದುದು ಇದು. ಪ್ರತಿಯೊಂದು ನಾಡಿಯಲ್ಲೂ ಇಪ್ಪತ್ತುನಾಲ್ಕು ತತ್ತ್ವಗಳು, ತತ್ತ್ವಾಭಿಮಾನಿದೇವತೆಗಳು, ಅವರಿಗೆ ಒಬ್ಬೊಬ್ಬರಿಗೂ ಬಿಂಬರೂಪದಲ್ಲಿ ಪರಮಾತ್ಮ ಇದ್ದುಕೊಂಡು, ತಾನು ಜ್ಞಾನಾನಂದ ಸ್ವರೂಪನಾದರೂ ಆಯಾ ನಾಡಿಗಳ ಕೆಲಸ ನಡೆಸುತ್ತ 'ಕರ್ತ'ನೆನಿಸಿಕೊಳ್ಳುವನು.

ಜೀವಾಂತರ್ಗತನಾದ, ಬಿಂಬರೂಪಿಯಾದ ಪರಮಾತ್ಮನು ಎಲ್ಲ ಪ್ರಾಣಿಗಳಲ್ಲೂ ಸ್ಥೂಲದೇಹದೊಳಗಿರುವ ಹೃದಯಾಕಾಶದಲ್ಲಿ, ಮತ್ತು ಜೀವಸ್ವರೂಪ ದೇಹದೊಳಗಿರುವ ಸೂಕ್ಷ್ಮ ಹೃದಯಾಕಾಶದಲ್ಲಿ ಅಂಗುಷ್ಠಪರಿಮಿತಿಯಲ್ಲಿರುವನು. ಮೊದಲನೆಯದರಲ್ಲಿ ಸ್ಥೂಲಾಂಗುಷ್ಠಪರಿಮಿತಿ, ಎರಡನೆಯದರಲ್ಲಿ ಜೀವಾಂಗುಷ್ಠಪರಿಮಿತಿ, (ಹೆಬ್ಬೆರಳು ಒಳಗೈ ನಡುವಣ ಕೀಲು, ಅದರ ಮೇಲ್ಭಾಗದ ಅಳತೆ). ಸ್ಥೂಲದೇಹದ ಹೃದಯದಲ್ಲಿ ಎಂಟುದಳಗಳಿರುವ ಕಮಲ. ಈ ಕಮಲದ ಕರ್ಣಿಕಾಮೂಲದಲ್ಲಿರುವ ಬಿಂಬಮೂರ್ತಿಯ ರೂಪ ಮೂಲೇಶ. ಇವನ ಕಾಲಡಿಯಲ್ಲಿ ವಾಯುದೇವ (ಸೂತ್ರನಾಮಕ); ಇವನ ಕಾಲಡಿಯಲ್ಲಿ (ಪಾದಮೂಲದಲ್ಲಿ) ಜೀವನಿದ್ದಾನೆ. ವಾಯುದೇವನು ಜೀವನೊಂದಿಗೆ ಹೃದಯಕಮಲದ ದಳಗಳಲ್ಲಿ ಸಂಚರಿಸುವಾಗ ಎಚ್ಚರ. ದಳಗಳನ್ನು ಬಿಟ್ಟು, ನಡುವಣ ಕರ್ಣಿಕೆಯ ಒಳಹೊಕ್ಕು, ಕರ್ಣಿಕೆಗೆ ಸುತ್ತಿಕೊಂಡಿರುವ ಕೇಸರಗಳಲ್ಲಿ (ಕಂಜಲ್ಕಗಳಲ್ಲಿ) ಸಂಚರಿಸಿದರೆ ಕನಸು; ಕಮಲದ ಕರ್ಣಿಕೆಯ ಮಧುಯುಕ್ತವಾದ ಅಂಚಿನಲ್ಲಿ ಸಂಚರಿಸಿದರೆ ಆಗ ತನಿನಿದ್ರೆ (ಸುಷುಪ್ತಿ).

ಹೃದಯಕಮಲದ ಕರ್ಣಿಕಾಮೂಲದಲ್ಲಿರುವ ಬಿಂಬರೂಪ ಮೂಲೇಶನೆನಿಸಿದರೆ, ಮಧ್ಯಗತವಾದುದು ಅಗ್ರೇಶ; ಅಗ್ರೇಶನ ಮೇಲ್ಭಾಗದಲ್ಲಿ ಪ್ರಾದೇಶ. ಇವು ಬಿಂಬನ ಮೂರು ರೂಪಗಳು. ಇವುಗಳಲ್ಲಿ ಹೃತ್ಕಮಲಮಧ್ಯನಿವಾಸಿಯಾದ ಅಗ್ರೇಶನೇ ಮುಖ್ಯ ಬಿಂಬ. ಜೀವ ಸ್ವರೂಪದ ಅಂಗುಷ್ಠ ಮಾತ್ರ ಪರಿಮಿತಿ (ಎಂದರೆ ಹೆಬ್ಬೆರಳ ಆದ್ಯಂತ ಪರಿಮಿತಿ)ಯಿರುವ ಈ ರೂಪವು ಸರ್ವಕಾಲದಲ್ಲೂ ಜೀವಾಂತರ್ಗತವಾಗಿದ್ದುಕೊಂಡು, ವಿಯೋಗವಿಲ್ಲದೆ ಜೀವದ

ಆಕಾರದಲ್ಲೇ ಇರುವುದು. ಇದನ್ನೇ ಪ್ರಾಜ್ಞ, ಆತ್ಮ ಎಂದು ಕರೆಯುವರು. ಇವನದ್ದು ಜ್ಞಾನಾನಂದಸ್ವರೂಪ. ಸಾಧಕರಿಗೆ ತನ್ನ ಸ್ವರೂಪವನ್ನು ನೇರವಾಗಿ ತೋರಿಸಿಕೊಡುವನು. ಇದಕ್ಕೆ ಬಿಂಬಾಪರೋಕ್ಷವೆಂದು ಹೆಸರು.

ಇದಕ್ಕೆ ಮೊದಲಲ್ಲಿ ಸಾಧಕರಿಗೆ ಜೀವದ್ದೇ ಸ್ವರೂಪಾನಂದವನ್ನು ನೀಡಿ, ಸ್ಥೂಲ ದೇಹದಲ್ಲೇ ಪ್ರಾದೇಶರೂಪದ ಅಪರೋಕ್ಷಾನುಭೂತಿಯಾಗುತ್ತದೆ. ಇದು ಜೀವದ ಪ್ರಾದೇಶ ಪರಿಮಿತಿಯ (ಎಂದರೆ ಹೆಬ್ಬೆರಳು-ತೋರುಬೆರಳುಗಳನ್ನು ದೂರ ಅಗಲಿಸಿದಾಗ ಒದಗುವ ಅಳತೆ) ಮೂರ್ತಿ. ಅಗ್ರೇಶರೂಪವನ್ನು ಆತ್ಮನೆಂದು ನಿರ್ದೇಶಿಸಿದರೆ ಪ್ರಾದೇಶರೂಪವು ಅಂತರಾತ್ಮನೆನಿಸುತ್ತದೆ. ಈ ಮೂರು ರೂಪಗಳು ಸಾಧಕರಿಗೆ ತಮ್ಮ ಧ್ಯಾನದಲ್ಲಿ ಮಾತ್ರ ಪ್ರಸಕ್ತವಾಗುವುವು.

ಇನ್ನು ಬಿಂಬೋಪಾಸನೆಯೆಂದರೆ ಪ್ರಮುಖವಾಗಿ ಧ್ಯಾನಮಾರ್ಗ ಎಂಬುದನ್ನು ವಿವರಿಸಬೇಕು. ಪೂಜೆಗಿಂತ ಧ್ಯಾನ ಹೆಚ್ಚಿನದು ಎಂದು ಮೊದಲೇ ಹೇಳಿದೆವು. ಆದರೆ ಹರಿದಾಸರ ಪೂಜೆಯೂ ಧ್ಯಾನಕ್ರಮವನ್ನು ಒಳಗೊಳ್ಳುತ್ತದೆ. ಪೂಜೆಗೆ ಪ್ರತಿಮೆಯ ಅಗತ್ಯವಿದೆ. ಪ್ರತಿಮೆಯಲ್ಲಿ ಜಡ, ಚೇತನ, ಎಂದೆರಡು ಬಗೆಗಳು. ಜಡ ಪ್ರತಿಮೆಗಳು ಪಂಚಲೋಹದಲ್ಲಿ ಮನುಷ್ಯನು ಮಾಡಿಟ್ಟುಕೊಂಡ ಮನುಷ್ಯಾಕಾರದ ಪುತ್ಥಳಿಗಳು. ಇವುಗಳಲ್ಲಿ ನಾವು ಪೂಜೆಯಿಂದ, ಭಾವನೆಯಿಂದ ದೇವತ್ವವನ್ನು ಮೂಡಿಸಬೇಕಾಗುತ್ತದೆ. ಆದ್ದರಿಂದ ಇವನ್ನು 'ಆಹಿತ' ಎನ್ನುತ್ತಾರೆ. ಪೂಜಿಸುವಾಗ (೧) ಇದು ಕಣ್ಣಿಗೆ ಕಾಣುವ ಬಿಂಬ, (೨) ಜಗತ್ತಿನ ಶಿಲ್ಪಿಯಾದ ವಿಶ್ವಕರ್ಮನೇ ನಿರ್ಮಿಸಿದ್ದು, (೩) ಅದರಲ್ಲಿ ಮುಖ್ಯ ಪ್ರಾಣ ಆಯಾ ದೇವತಾರೂಪದಿಂದ ಅಂತರ್ಗತನಾಗಿದ್ದಾನೆ, (೪) ಅದನ್ನು ವಾಯುದೇವನು (ಮುಖ್ಯಪ್ರಾಣ) ಆವರಿಸಿದ್ದಾನೆ, (೫) ಅದರಲ್ಲಿ ಲಕ್ಷ್ಮೀನಾರಾಯಣರು ಅಂತರ್ಯಾಮಿಯಾಗಿ ಬಿಂಬರೂಪದಿಂದ ಇದ್ದಾರೆ ಎಂದು ಐದು ಬಗೆಯಾಗಿ ಮನದಟ್ಟುಮಾಡಿಕೊಳ್ಳಬೇಕು. ಇದನ್ನು ಗೋಳಕಪಂಚಕಚಿಂತನೆ ಎನ್ನುತ್ತಾರೆ.

ಪ್ರತಿಮೆಯನ್ನು ಗೊಂಬೆಯೆಂದು ಭಾವಿಸದೆ, ಅಥವಾ ಅದೇ ಪರಮಾತ್ಮನೆಂದು ಬಗೆಯದೆ, ಪರಮಾತ್ಮನ ಅಧಿಷ್ಠಾನದ್ಯೋತಕವಾದ ಸಾಧನೆಯೆಂದು ಕಂಡುಕೊಳ್ಳಬೇಕು. ಇದೇ ಗೋಳಕಚಿಂತನೆ. ಸಾಲಗ್ರಾಮದಲ್ಲಿ ವಿಷ್ಣುಸನ್ನಿಧಿ ಸಾಕ್ಷಾತ್ತಾಗಿ ಇರುವುದರಿಂದ ಅಲ್ಲಿ ಗೋಳಕಚಿಂತನೆಯ ಅಗತ್ಯವಿರದು. ಇನ್ನು ಮನುಷ್ಯನಿರ್ಮಿತವಲ್ಲದ, ಸ್ವಯಂವ್ಯಕ್ತ ಅಥವಾ ದೇವಪ್ರತಿಷ್ಠಿತ ಪ್ರಸಿದ್ಧ ಪ್ರತಿಮೆಯಾದರೆ ಅದರಲ್ಲಿ ಗೋಳಕತ್ರಯ ಚಿಂತನೆ ಮಾಡತಕ್ಕದ್ದು, (೧) ಕಣ್ಣಿಗೆ ಕಾಣುವ ರೂಪದ ಪ್ರತಿಮೆ, (೨) ಅದರಲ್ಲಿ ಮುಖ್ಯಪ್ರಾಣನ ಸನ್ನಿಧಿ, ಮತ್ತು (೩) ಲಕ್ಷ್ಮೀ ಆವರಕಾತ್ಮಕವಾದ ಪ್ರತಿಮೆ. ಕಣ್ಣಿಗೆ ಕಾಣುವ ಜಡಪ್ರತಿಮೆಯಾದರೂ ಅದರಲ್ಲಿ ಪರಮಾತ್ಮನ ಚಿದಾನಂದ ಶರೀರವಿದೆ ಎಂದು ಭಾವಿಸುವುದು ಗೋಳಕ ಚಿಂತನೆ.

ಜಡಪ್ರತಿಮೆಗಳನ್ನು ಪೂಜೆಮಾಡುವುದು ನೀರು, ಹೂವು, ಹಣ್ಣು, ಗಂಧ, ದೀಪ , ಧೂಪ ಮೊದಲಾಗಿ ಜಡದ್ರವ್ಯಗಳಿಂದಲೇ ತಾನೆ? ಹರಿದಾಸರು ಮಾಡುವ ಪೂಜೆಯಲ್ಲಿ ಜಡಪ್ರತಿಮೆಯಲ್ಲಿ ಗೋಳಕ ಚಿಂತನಮಾಡಿದಂತೆಯೆ ಪೂಜೆಗೆ ಬಳಸುವ ಜಡದ್ರವ್ಯಗಳಲ್ಲೂ ಪರಮಾತ್ಮನ ಸ್ವಾಖ್ಯರೂಪಗಳನ್ನು ಅನುಸಂಧಾನಮಾಡಿ, ಪ್ರತಿಮಾಂತರ್ಗತ ರೂಪ ಮತ್ತು ದ್ರವ್ಯಾಂತರ್ಗತರೂಪ

ಎರಡರ ನಡುವೆ ಐಕ್ಯದ ಚಿಂತನೆಯನ್ನು ಮಾಡುವರು. ಪೂಜೆಗೊಳ್ಳುವ ಪರಮಾತ್ಮನಿಗೆ ನಾಲ್ಕು ತೆರನಾದ ವಿಭೂತಿಗಳೆಂದು ಎಣಿಕೆ. ಮೊದಲನೆಯದು ನಿತ್ಯವಿಭೂತಿ (ನಿತ್ಯಮುಕ್ತರು, ರಮಾದೇವಿ ಇವರಲ್ಲಿ), ಎರಡನೆಯದು ನೈಜವಿಭೂತಿ (ಜೀವಾಂತರ್ಗತವಾದ ಬಿಂಬ), ಮೂರನೆಯಯದು ಆಹಿತ ವಿಭೂತಿ (ಮೇಲೆ ವಿವರಿಸಿದ ಪ್ರತಿಮೆಗಳು), ಕಡೆಯದು ಸಹಜವಿಭೂತಿ (ಸಾಲಗ್ರಾಮ, ಅಗ್ನಿ ಇವುಗಳಲ್ಲಿರುವುದು). ಮಾನವಸಾಧಕರಿಗೆ ನೈಜವಿಭೂತಿ ದಕ್ಕುತ್ತದೆ. ಜೀವಾಂತರ್ಗವಾದ ಬಿಂಬಮೂರ್ತಿಯ ಉಪಾಸನೆ ಸಾಧ್ಯವೂ ಹೌದು, ಸುಲಭವೂ ಹೌದು. ಇದಕ್ಕೆ ಆಹಿತ ವಿಭೂತಿ-ಸಹಜವಿಭೂತಿಗಳೆರಡೂ ನೆರವಾಗುತ್ತವೆ.

ಶ್ರವಣ-ಮನನಗಳಿಂದ ಸಾಧಕನು ತಾನು ಏನನ್ನು ಮಾಡಬೇಕು, ಏನನ್ನು ಬಿಡಬೇಕು ಎಂಬುದನ್ನು ನಿಶ್ಚಯಿಸಿಕೊಂಡ ಮೇಲೆ (ಹೇಯಾಹೇಯ ಚಿಂತನೆ), ನಿದಿಧ್ಯಾಸನ ಮುಂದಿನ ಹೆಜ್ಜೆ. ಸಾಧಕನ ಹೃದಯಾಕಾಶದಲ್ಲಿ (ಇದನ್ನು ಮನೋಗೋಳಕವೆಂದೂ ವ್ಯವಹರಿಸುತ್ತಾರೆ) ಆಹಿತಮೂರ್ತಿಯನ್ನು (ಎಂದರೆ ಸುಲಕ್ಷಣವಾದ ಪ್ರತಿಮೆಯನ್ನು) ಉಪಾಸ್ಯವಸ್ತುವಾಗಿ ನಿಲ್ಲಿಸಿಕೊಂಡು ಅದರಲ್ಲಿ ತನ್ನ ಜೀವಾಂತರ್ಗತ ಬಿಂಬವನ್ನು ಆವಾಹನೆ ಮಾಡಿಕೊಳ್ಳುವುದು ಇಲ್ಲಿನ ಕ್ರಮ. ಹಾಗೆ ಪ್ರತಿಮೆಯಲ್ಲಿ ಸಾಧಕನು ತನ್ನ ಬಿಂಬವನ್ನು ಕಂಡುಕೊಳ್ಳುವುದು ಭಾವನೆ ತನ್ನ ಬಿಂಬದಲ್ಲೇ ಪರಮಾತ್ಮನ ಎಲ್ಲ ರೂಪಗಳೂ ಅಡಗಿವೆ; ಎದುರಿಗೆ ಕಾಣುವ ಉಪಾಸ್ಯ ಪ್ರತಿಮೆಯ ರೂಪವೂ ಇದೇ ಎಂಬುದನ್ನು ಮನಗಂಡು, ಮನಸ್ಸಿನ ಸಂಕಲ್ಪದಿಂದ ಪ್ರತಿಮೆಯನ್ನು ತನ್ನ ಬಿಂಬವೇ ಎಂದು ತಿಳಿದು ಪೂಜಿಸತೊಡಗಿದರೆ, ಈ ಬಾಹ್ಯ ಪೂಜೆಯ ಅಭ್ಯಾಸ-ಸಂಸ್ಕಾರಗಳ ಬಲದಿಂದ ಪ್ರತಿಮೆಯು ಹೃದಯಾಕಾಶದಲ್ಲಿ ನಿಲ್ಲುತ್ತದೆ. ಆಗ ಮಾನಸದ್ರವ್ಯಗಳಿಂದಲೇ ಪೂಜೆಮಾಡುವುದು ಸಾಧ್ಯವಾಗುತ್ತದೆ. ಈ ಮಾನಸ ಪೂಜಾ ಸಾಧನೆಗಳಲ್ಲೂ ಭಗವಂತನೇ, ಎಂದರೆ ಬಿಂಬವೇ, ಅಂತರ್ಯಾಮಿ; ಪೂಜಕನಾದ ಜೀವನಲ್ಲೂ ಅದೇ ಅಂತರ್ಯಾಮಿ; ಪೂಜ್ಯವಾದ ಪ್ರತಿಮೆಯಲ್ಲೂ ಅದೇ ಅಂತರ್ಯಾಮಿ. ಪೂಜಕ, ಪೂಜ್ಯ, ಪೂಜನ ಸಾಮಗ್ರಿ ಎಲ್ಲವೂ ಭಗವದ್ರೂಪಗಳೇ ಎಂಬುದನ್ನು ಅನುಸಂಧಾನ ಮಾಡುವುದು ಇಲ್ಲಿ ಮುಖ್ಯವಾದ ಭಾವನೆ. ಪೂಜಕನಾದ ತಾನು ಜೀವನಾಗಿ ಭಗವಂತನ ಪ್ರತಿಬಿಂಬ. ಭಗವಂತನಾದರೆ ಸ್ವತಂತ್ರ, ಸ್ವಾಧೀನ ಕರ್ತೃಕ; ತನಗಿರುವುದು ಅಸ್ವತಂತ್ರ, ಅಧೀನಕರ್ತೃತ್ವ. ಬಿಂಬ ಆಡಿಸಿದಂತೆ ಪ್ರತಿಬಿಂಬ ಆಡುವುದು. ಬಿಂಬವೇ ಮಾಡುವವನು, ಮಾಡಿಸುವವನು ಎಂಬುದನ್ನು ಯಾವ ಗಳಿಗೆಯಲ್ಲೂ ಮರೆಯದೆ, ಬಿಂಬರೂಪಿಯಾದ ಉಪಾಸ್ಯಪ್ರತಿಮೆಯನ್ನು ಮನಸ್ಸಿನಲ್ಲಿ ನೆನೆಯುತ್ತ ಇರುವಾಗ ತನ್ನೆಲ್ಲ ಕೆಲಸಗಳನ್ನೂ ಬಿಂಬಮೂರ್ತಿಗೇ ಸಮರ್ಪಣ ಮಾಡಬೇಕೆಂಬ ಬುದ್ಧಿ ಬರುತ್ತದೆ. ಶಾಂಡಿಲ್ಯತತ್ತ್ವದಲ್ಲಿ ಬರುವ ಮಾತು-

'ವಿನಾ ಯದರ್ಪಣಂ ಸಮ್ಯಕ್‌ಫಲಂ ನಾಪ್ನೋತ್ಯಸಂಶಯಃ।
ದೇಹಿನಾ ಯಾಃ ಪ್ರವರ್ತಂತೇ ಪ್ರಾತರಾರಭ್ಯ ಸತ್‌ಕ್ರಿಯಾಃ।
ತಾಶ್ಚ ವಿಷ್ಣ್ವರ್ಪಣಂ ಕುರ್ವನ್ ಕರ್ಮಪಾಶಾದ್ವಿಮುಚ್ಯತೇ॥'

ಹೀಗೆ ಎಚ್ಚರಕಾಲದಲ್ಲಿ ತಾನು ಮಾಡುವ ಎಲ್ಲ ಕೆಲಸಗಳೂ ಬಿಂಬಮೂರ್ತಿಯ ಕೆಲಸಗಳೇ ಎಂದು ಸಮರ್ಪಣೆ ಮಾಡಿದರೆ ಕರ್ಮದ ಕಟ್ಟು ಕಳಚಿಬೀಳುತ್ತದೆ. ಕೆಲಸಗಳಲ್ಲೂ ಅಂತರ್ಗತನಾಗಿ

ಪರಮಾತ್ಮನೇ ಇದ್ದಾನೆ; ಕೆಲಸ ನಡೆಯುವ ಶರೀರ, ಮನಸ್ಸು, ಇಂದ್ರಿಯ ಮೊದಲಾದ ಅಧಿಷ್ಠಾನಗಳಲ್ಲೂ, ಇವಕ್ಕೆಲ್ಲ ಮೂಲನಾದ ಜೀವನಲ್ಲೂ, ಅಂತರ್ಗತನಾಗಿ ಅವನೇ ಇದ್ದಾನೆ ಎಂಬ ಐಕ್ಯಚಿಂತನೆಯೇ ಸಮರ್ಪಣೆಯೆನಿಸಿಕೊಳ್ಳುತ್ತದೆ. ಇಲ್ಲಿ ತಾನು ಮಾಡುವೆನೆಂಬ ಅಭಿಮಾನವಾಗಲಿ, ಪ್ರಯೋಜನಾಪೇಕ್ಷೆಯ ಸಂಗವಾಗಲಿ ಇರಲಾರದು. ಜೀವ ಏನನ್ನು ಮಾಡುವುದಕ್ಕೂ ಬಿಡುವುದಕ್ಕೂ ಸ್ವತಂತ್ರನಲ್ಲ, ಇಂದ್ರಿಯ ವ್ಯಾಪಾರಕ್ಕಾಗಲಿ ಸ್ವತಂತ್ರನಲ್ಲ. ಇಂದ್ರಿಯಗಳೊಳಗೆ ನಿಯಮಕನಾಗಿ ಅವನಿದ್ದು, ಜೀವದಲ್ಲೂ ನಿಯಾಮಕನಾಗಿದ್ದುಕೊಂಡು ಇಂದ್ರಿಯಗಳ ಮೂಲಕ ಕೆಲಸಗಳನ್ನು ಮಾಡುವಂತೆ ಜೀವನನ್ನು ನಿಯಮನ ಮಾಡುತ್ತಾನೆ. ಈ ಬಗೆಯ ಚಿಂತನೆ ಧ್ಯಾನವೆನಿಸಿಕೊಳ್ಳುತ್ತದೆ.

ಪ್ರತಿಮಾ ಪೂಜೆ ಮಾಡುವಾಗ ಅದರಲ್ಲಿ ತನ್ನ ದೇಹಾಂತರ್ಗತ ಬಿಂಬವನ್ನು (ಎಂದರೆ ಜೀವಾಕಾರದಲ್ಲಿರುವ ಅಗ್ರೇಶನನ್ನು) ಆವಾಹಿಸಿಕೊಂಡು, ಬಿಂಬನಿಗೆ ಪ್ರತಿಮೆಯಲ್ಲಿ ಕಾಣಿಸುವ ರೂಪವೇ ಇದೆಂದು ಅನುಸಂಧಾನ ಮಾಡಬೇಕು. ಬಾಹ್ಯ ಪ್ರತಿಮೆಯನ್ನು ಹೀಗೆ ಪೂಜಿಸುತ್ತ ಬಂದರೆ, ಅದೇ ಪ್ರತಿಮೆಯು ಹೃದಯಾಕಾಶದ ಅಷ್ಟದಳ ಕಮಲದಲ್ಲಿ ಪ್ರತಿಷ್ಠಿತವಾಗುತ್ತದೆ. ಆಗ ಮಾನಸಪೂಜೆಯೇ ಪ್ರಸಕ್ತವಾಗುವುದು. ಪುರಂದರದಾಸರು 'ಕಣ್ಣಿನೊಳಗೆ ನೋಡೊ ಹರಿಯ, ಒಳಗಣ್ಣಿನಿಂದಲಿ ನೋಡೊ ಮೂಜಗದ ಧೊರೆಯ' ಎಂದು ಹೇಳಿದುದು ಈ ಸಂದರ್ಭ ದಲ್ಲಿಯೇ. ಈ ಮಾನಸ ಮೂರ್ತಿಯು ಸಾಧಕನಿಗೆ ಎತ್ತ ನೋಡಿದರತ್ತ ತೋರಿಕೊಳ್ಳುತ್ತದೆ. ಎಲ್ಲದರಲ್ಲೂ ಅಂತರ್ಗತವಾಗಿರುವ ಭಗವದ್ರೂಪಗಳು ಈ ಬಿಂಬದಲ್ಲೇ ಅಡಗಿವೆ ಎಂದು ಭಾವನೆಯನ್ನು ಗಟ್ಟಿಮಾಡಿಕೊಳ್ಳುವುದು ಐಕ್ಯಚಿಂತನೆ. ಹಾಗೆ ಮಾಡಿಕೊಂಡಾಗ ಬಿಂಬರೂಪಿ ಪರಮಾತ್ಮನ ರೂಪ, ಗುಣ, ಕ್ರಿಯೆಗಳಲ್ಲಿ ಯಾವ ಭೇದವೂ ಕಾಣದಾಗುತ್ತದೆ. ಸರ್ವಗತವಾದ ಭಗವದ್ರೂಪ, ತನ್ನ ಅಂತರ್ಗತವಾದ ಬಿಂಬರೂಪ ಇವುಗಳಲ್ಲಾಗಲಿ ಭೇದವಿರದು ಎಂಬುದೂ ಮನವರಿಕೆಯಾಗುತ್ತದೆ.

ಈ ಬಗೆಯ ಭಾವನೆ ಬೇರೂರಲು ಮೊದಲ ಹಂತದಲ್ಲಿ ಪ್ರತಿಮಾಪೂಜೆ ನೆರವಾಗುತ್ತದೆ. ಜಡವಾದ ಪ್ರತಿಮೆಯನ್ನು ಎದುರಿಗೆ ಇರಿಸಿಕೊಂಡು, ಕಣ್ಣಾರೆ ಮನಸಾರೆ ಅದನ್ನು ದಿಟ್ಟಿಸಿ ನೋಡುತ್ತ, ಅದರ ಒಂದೊಂದು ಅಂಗವನ್ನೂ ಆದರದಿಂದ ಗಮನಿಸುತ್ತ ಇರುವಾಗ, ಪ್ರತಿಮೆಯಲ್ಲಿ ಅಂತರ್ಗತನಾಗಿ ಪರಮಾತ್ಮನಿದ್ದಾನೆ ಎಂದು ಚಿಂತನೆ ಮಾಡುವುದೇ ಪೂಜೆ. ತನ್ನ ಜೀವದೊಳಗಣ ಬಿಂಬವೇ ಈ ಪ್ರತಿಮೆಯಲ್ಲಿ ನಿಂತಿದೆ, ಪ್ರತಿಮೆಯ ಆಕಾರವನ್ನೇ ಕಳೆದಿದೆ ಎಂದು ಭಾವನೆ ಮಾಡಿಕೊಂಡು, ಅನಂತರ ಈ ಪ್ರತಿಮೆಯ ಆಕಾರವನ್ನೇ ತನ್ನ ಹೃದಯಾಕಾಶದಲ್ಲಿ ಬರಮಾಡಿಕೊಳ್ಳುವುದು ಸಾಧ್ಯವಾಗುತ್ತದೆ. ಆಗ ಹೊರಗಣ ಜಡಪ್ರತಿಮೆಯೇ ತನ್ನ ಬಿಂಬಮೂರ್ತಿ ಎನ್ನುವ ಭಾವನೆ ಬೇರೂರುತ್ತದೆ. ಇದು ಅಭ್ಯಾಸದಿಂದ ಸಂಸ್ಕಾರದಿಂದ ಸಿದ್ಧವಾಗುವುದರಿಂದ ಇದನ್ನು ವಾಸನಾ ಪರೋಕ್ಷವೆಂದು ಕರೆಯುವುದಿದೆ.

ಪ್ರತಿಮಾಂತರ್ಗತನಾದ ಬಿಂಬಮೂರ್ತಿಯು ಪ್ರತಿಮೆಯ ಆಕಾರವನ್ನು ತಳೆದಿದ್ದರೂ ಸ್ವರೂಪದಲ್ಲಿ ಜ್ಞಾನಾನಂದನೇ (ಚಿದಾನಂದ) ಎಂಬುದು ಮನವರಿಕೆಯಾಗುತ್ತದೆ. ಇದಾದಮೇಲೆ

ಸ್ಥೂಲದೇಹಾಂತರ್ಗತನಾದ ಜೀವನ ಆಕಾರದಲ್ಲೇ ಇರುವ ಅಗ್ರೇಶನೆಂಬ ಬಿಂಬರೂಪವನ್ನು ನೇರವಾಗಿ ಕಾಣುವುದು ಅಗ್ರೇಶಬಿಂಬಾಪರೋಕ್ಷ. ಕ್ರಮವಾಗಿ ಮುಂದೆ ಜೀವಾಂತರ್ಗತನಾದ ಪರಮಾತ್ಮನ ಅಪರೋಕ್ಷವಾಗುತ್ತದೆ. ಇದೇ ಮೋಕ್ಷ; ಎಂದರೆ ಸ್ವರೂಪಸುಖದ ಆವಿರ್ಭಾವ, ಪರಮಾನಂದ ಪ್ರಾಪ್ತಿ. ಇಲ್ಲಿ ನಿರಂತರವಾದ ಬಿಂಬಸ್ಮರಣೆ. ಬಿಂಬಾಪರೋಕ್ಷಕ್ಕಿಂತ ಬೇರೆಯಾದ ಮೋಕ್ಷ ಮತ್ತೊಂದಿರದು. ವಿಷ್ಣುತೀರ್ಥರು ತಮ್ಮ ಅಧ್ಯಾತ್ಮಾಮೃತರಸರಂಜನಿಯಲ್ಲಿ ಇದನ್ನೇ ಹೇಳಿದ್ದಾರೆ-

'ಬಿಂಬಪೂಜನಮಂತರಾ ನ ಚ ಮುಕ್ತಿರಸ್ತಿ ಹಿ ಕಸ್ಯಚಿ
ತ್ಸರ್ವಮನ್ಯದನುಷ್ಠಿತಂ ನನು ಚಿತ್ತಶೋಧನಪೂರ್ವಕಂ।
ಸಾಧನಂ ಭವತೀಹ ಪೂಜನ ಏವ ಸಂತತಮಾದರಾ
ನ್ಮೋದತೀರ್ಥನಿಬಂಧ ಏವ ಹಿ ಮಾನಮತ್ರ ಮಯೋದಿತೇ॥

ಮಧ್ವಾಚಾರ್ಯರ ರಚನೆಗಳನ್ನೇ ಪ್ರಮಾಣವಾಗಿ ಗ್ರಹಿಸಿ ಬಿಂಬೋಪಾಸನೆಗಿಂತ ಬೇರೆಯಾದ ಯಾವುದೇ ಸಾಧನದಿಂದ ಎಂದಿಗೂ ಯಾರಿಗೂ ಮುಕ್ತಿಯೆಂಬುದಿರದು ಎಂದು ಸ್ಪಷ್ಟಪಡಿಸಿದ್ದಾರೆ. ಇತರ ಸಾಧನೆಗಳೆಲ್ಲ ಚಿತ್ತಶುದ್ಧಿಯನ್ನು ಪಡೆದುಕೊಂಡು ಈ ಬಿಂಬೋಪಾಸನೆಗೆ ನೆರವಾಗುವುವು ಅಷ್ಟೆ.

ವಿಜಯದಾಸರ ಮಾತು-

'ಬಿಂಬಮೂರುತಿಯಪರೋಕ್ಷವಾಗದೆ
ಗತಿಯೆಂಬುದು ಸಲ್ಲ-
ಬಿಂಬನೆಂಬ ಪ್ರಾಜ್ಞನನುಭವ ತಿಳಿದು'.

ಆದ್ದರಿಂದ, ನಮ್ಮ ದೇಹವು ಸಾಧನಶರೀರ. ಅದರಲ್ಲಿಯೇ ಅದರಿಂದಲೇ ಪರಮಾತ್ಮನ ಮಾಹಾತ್ಮ್ಯಜ್ಞಾನವನ್ನು ಗಳಿಸಿ ಭಕ್ತಿಯಿಂದ ಅವನ ಪ್ರಸಾದವನ್ನು ಸಿದ್ಧಿಸಿಕೊಳ್ಳಬೇಕೆಂದು ಹರಿದಾಸರ ಕರೆ. ಪುರಂದರದಾಸರು 'ಮಾನವಜನ್ಮ ದೊಡ್ಡದು, ಅದ ಹಾನಿ ಮಾಡಲಿ ಬೇಡಿ ಹುಚ್ಚಪ್ಪಗಳಿರಾ!' ಎಂದದ್ದು ಇದೇ ಅರ್ಥದಲ್ಲೇ. ಗೋಪಾಲದಾಸರು-

'ಸಪ್ತಾವರಣ ದೇಹ ಸತತಸಾಧನಗೇಹ
ಆಪ್ತನು ಅನಂತಗುಣರೂಪಾತ್ಮಕ ಹರಿ
ತಪ್ತಕಾಂಚನದಂತೆ ಒಳಗೆ ಸುಳಿವ ನಿ
ರ್ಲಿಪ್ತನು ಸಮಸ್ತದೋಷರಾಶಿಗಳಿಂದ।'

ಎಂದು ವಿವರಿಸಿದರು. ವಿಜಯದಾಸರು 'ಅಧ್ಯಾತ್ಮ ತಿಳಿವುದು ಭೌತಿಕದೇಹದೊಳು' ಎಂದು ಸ್ಪಷ್ಟಪಡಿಸಿದರು. ಅಧ್ಯಾತ್ಮ ತಿಳಿಯುವುದು ಧ್ಯಾನದಿಂದ.

ಹರಿದಾಸರು ಧ್ಯಾನಕ್ಕೇ ಒಲಿದದ್ದು ಈ ಕಾರಣದಿಂದ.

ವಿಜಯದಾಸರು ಹೇಳಿದಂತೆ 'ಧ್ಯಾನವೇ ಗತಿಗೆ ಪ್ರಧಾನ'-

'ಧ್ಯಾನವನು ಕೈಕೊಳ್ಳಲು
ಜ್ಞಾನ ಪುಟ್ಟುವುದು
ಹೀನಕರ್ಮವೆಂಬ ದುರಿತಕಾನನಕೆ ಕೃಶಾನು
ಧ್ಯಾನವಿನಾ ಗತಿಗೆ ಸಾಧನವಿನ್ನು
ಕಾಣೆನಯ್ಯ!'

ಅವರ ಪ್ರಕಾರ ಧ್ಯಾನದೊಳಗೇ ಜ್ಞಾನವುಂಟು. ಮತ್ತೆ ಸ್ನಾನ, ಮೌನ, ದಾನ, ಮಾನ, ಜಗತ್ತು, ದೇವರು, ಸರ್ವವೂ, ಧ್ಯಾನದೊಳಗೇ ಅಡಕವಾಗುವುವು. ಧ್ಯಾನದ ಪರಿಯನ್ನು ಅವರು ಚೆನ್ನಾಗಿ ವಿವರಿಸಿದರು-

೧) 'ತನಗಿಷ್ಟವಾದ ಪ್ರತಿಮೆಯನು ಸಲ
ಕ್ಷಣವುಳ್ಳದೊಂದು ಕ್ಷಿಪ್ರಮತಿಯಲ್ಲಿ
ದಣಿ ದಣಿ ನೋಡುತ್ತ ಮುಂಭಾಗದಲಿಯಿಟ್ಟು
ಮಣಿಮಯಮಕುಟ ಕಾಂಚನ
ತೊಡುಗೆಯ ತೊಡಿಸಿ
ಗುಣಗಣಪರಿಪೂರ್ಣಸಾಕಾರನೆಂದು
ಇನಿತು ಚಿಂತಿಸಿ ಪ್ರತೀಕದೊಳಗೆ ಇದೆ
ನೆನೆದು
ಹೃದ್ಗತವಾದ ಮೂರ್ತಿಯ ಮಧ್ಯದಲಿ
ಅನಿಲದೇವನ ಸ್ಮರಿಸಿ
ಇದರಂತೆ ಯೋಚನೆ ಮಾಡು
ಒಳಗೆ ಚಿನ್ಮಯ ಕಾಯನ
ನಿನಗೆ ನೀನೆ ತಿಳಿ
ದ್ವಯ ಬಿಂಬವ ತರುವಾಯ'

೨) 'ಎದುರಲಿ ಮೂರ್ತಿಯನಿಟ್ಟು ಪೂಜಿಸಿ ತನ್ನ
ಸದಮಲ ದೃಷ್ಟಿಯಲಿ ನೋಡಿ ನೋಡಿ
ಪದಮೂಲ ಪಿಡಿದು ಕಿರೀಟ ಪರಿಯಂತ
ಇದೆ ಇದೇ ಪರಿಯಲಿ ನಿರೀಕ್ಷಿಸುತ್ತ

೩) ಸುಧೆಯನ್ನು ಕುಡಿದಂತೆ ಇದ್ದ ಮೂರ್ತಿಯ
ಬಾಹಿರದ ಧ್ಯಾನ ಚೆನ್ನಾಗಿ ನಿಲ್ಲಲಾಗಿ
ಒದಗಿ ವಾಸನಾಮಯ ಜಡದಿಂದ ನಿರ್ಮಾಣ
ಹೃದಯದೊಳಗೆ ಬೇಗ ಮಾಡಿಕೊಂಡು

ಅದನೆ ಪೂಜಿಸಬೇಕು ಮರಳಿ ಮರಳಿ
ಚಿತ್ತದಲಿ

ನಿಂದಲ್ಲಿ, ಕುಳಿತರೆ, ಮಲಗಿದರೆ,
ಇದೆ ಇದೆ ಅಭ್ಯಾಸಮಾಡಲು ಬಲು
ಜನ್ಮದಲಿದ್ದ ವಾಸನಾಮಯ ಮೂರುತಿ
ಪದೇಪದಿಗೆ ಸಾಂಗೋಪಾಂಗದಿಂದಲೆ ಪೊಳೆವ
ಎದುರಲಿ ಇಟ್ಟಿದ್ದ ದ್ರವ್ಯದಂತೆ.

೪) 'ನಿರುತ ವಾಸನಾಮೂರ್ತಿ ಪೂಜಿಸಲು
ಕಾಲಪರಿಪಕ್ವ ಬರಲಾಗಿ
ಹರಿಕರುಣದಿಂದ ಗುರು ಕೃಪೆ ಮಾಡುವ
ಈತನೆ ತೋರುವ ಪ್ರಾಜ್ಞಾಕ್ಷಿ ಪೆಸರುಳ್ಳ
ಆತ್ಮಬಿಂಬನಾಮಕನೆಂದು'

೫) 'ಜೀವಾಂತರ್ಗತವಾದ ಮೂರುತಿ ತಾನಾಗಿ
ಆವಾಗ ಪೊಳೆಯಲು ಸಂಚಿತಾಗಾಮಿ ಕರ್ಮ
ಬೇವೋದು ಅನುಭವಿಪ ಪ್ರಾರಬ್ಧಕರ್ಮಗಳೆಲ್ಲ
ನೋವು ಸುಖವಾದರು ಉಂಡು ತೀರಿಸಬೇಕು.'

೬) 'ಚಿಂತನೆಮಾಡು ಮನವೆ ಚಿನ್ಮಯದೇವನ್ನ ಏ
ಕಾಂತದಲಿಯಿದ್ದು ಎಲ್ಲ ಕಾಲ
ಸಂತರ ಒಡಗೂಡಿ ಸಾರಿಸಾರಿಗೆ ನಿನ್ನ
ಅಂತರಂಗದಲಿ ಆಲೋಚಿಸಿ
ನಿಂತಲ್ಲಿ ಕುಳಿತಲ್ಲಿ ನಾನಾ ವ್ಯಾಪಾರದಲಿ
ಚಿಂತಿಸು ಶ್ರೀಹರಿಯ ಅನಂತರೂಪ
ಎಂತೆಂತು ನೋಡಿದರಂತಂತೆ
ತೋರುತಲಿಪ್ಪ!'

'ನಿನ್ನ ಬಿಂಬನ ಸ್ಮರಿಸಿ ಇದೆ ಇದೆ ಅನಂತ
ಚಿನ್ಮಯ ರೂಪಗಳು ಸಿದ್ಧವೆಂದು
ಭಿನ್ನ ಜೀವರೊಳು ಇದ್ದ ಮೂರ್ತಿಗಳಲ್ಲಿ
ಚೆನ್ನಾಗಿ ನಿನ್ನ ಬಿಂಬನ ಅಂಶವ
ಮುನ್ನೀಗ ಪೊಗಿಸಿ ಏಕೀಭೂತವ ನೆನೆದು
ಸನ್ನುತಿಸಿ ತಿರುಗಿ ಭಿನ್ನರ ಮಧ್ಯದಲಿ
ಮನ್ನಣೆಗೊಳುತಿಪ್ಪ ಅಗ್ರೇಶರೊಳಗೆ ಸಂ

ಪೂರ್ಣವಾಗಿದ್ದ ಅಂಶಗಳ ತೆಗೆದು ನಿನ್ನ
ಬಿಂಬನ ಕೂಡ ಕೂಡಿಸಿಕೊಂಡು, ಸಂ
ಪನ್ನ ಭಕುತಿಯಿಂದ ಪೂಜೆ ಮಾಡೋ।'

ವಿಜಯದಾಸರದ್ದೇ ಸುಳಾದಿಯೊಂದು, ಸಾರಂಗರಾಗದ್ದು, ಧ್ಯಾನಮಾರ್ಗವನ್ನು ಐದು ತಾಳ ಚರಣಗಳಲ್ಲಿ ತಿಳಿಯಹೇಳುತ್ತದೆ-

ಸಾರಂಗ **ಧ್ರುವ**

ಪ್ರಣವಪೂರ್ವಕದಿಂದ ಆಸನವಿಟ್ಟು ಮೂರರೊಳೊಂ।
ದನೆ ತಿಳಿದು ವಾಯುಧಾರಣೆ ಮಾಡು ವಿವೇಕನಾಗಿ
ಬಿನುಗು ಇಂದ್ರಿಯಗಳು ಮನದಲ್ಲಿ ಕೂಡಿಟ್ಟು
ಅನುನಯದಿಂದ ಸಾಧನಕೆ ಮಾರ್ಗವ ಬಯಸೋ
ಘನೀಭೂತ ಭಕುತಿಯನು ಸಂಪಾದಿಸಿ ನಿತ್ಯ
ತನುವೆ ನಿರ್ಮಲನಾಗಿ ಜನರಹಿತ ಸ್ಥಳದಲ್ಲಿ
ಅನುದಿನ ದುಷ್ಟಯೋಚನೆಗಳ ತೊರೆದು
ಚಿನುಮಯನಾಗಿಪ್ಪ ವಿಜಯವಿಠ್ಠಲನ್ನ
ಮನದಣಿಯ ನಿರೀಕ್ಷಿಸುವಾಲೋಚನೆಯ ಮಾಡು ಬಿಡದೆ ॥೧॥

ಮಟ್ಟ **(ಮಠ್ಯ)**

ಹಿರಿಯ ನಾಡಿಯಿಂದ ಮರುತನ ಮೆಲ್ಲನೆ
ಶಿರಸ ಪರಿಯಂತರ ತರಲುಪಾಯವನ್ನು
ಅರಿದು ಎರಡು ಎಂಟು ಪರಿಮಿತಮಾದ ಮಾ
ತುರ ತನಕ ರೇಚಕ ಆ ತರುವಾಯದಲಿ ಮೂವ
ತ್ತೆರಡು ಮಾತುರತನಕ ವರಪೂರಕ ತಿಳಿದು
ಅರವತ್ತುನಾಲಕು ಮೆರೆವ ಮಾತ್ರಕದನಿತು
ಇರುತಿಪ್ಪ ಕುಂಭಕ ಎರಡು ಅದರರ್ಧ
ಪರಿಯಾಯನ ನೋಡಿ ಪರಿಯಲಿ ಸಾಧಿಸುತ್ತ
ನಿರುತ ಬಿಡದಲೆ ವರ ಸಮಾಧಿಯಲ್ಲಿ
ಕರಣಶುದ್ಧನಾಗೀ ಪರಿ ಚಿಂತಿಸಬೇಕು
ಪರಮ ಮೂರ್ತಿ ಧ್ಯಾನ, ವಿಜಯವಿಠ್ಠಲ ಹರಿಯ
ಕುರುಹನೀಕ್ಷಿಸಿ ಪತಿಕರಿಸಿ ಸಜ್ಜನಸಂಗ

ತ್ರಿವಿಡೆ

ಇದಕಿಂತ ಮೊದಲಿಗೆ ತುರೀಯನಾಮಕನ ಶ್ರೀ
ಪದದಲ್ಲಿ ವನಧಿಯ ಸತಿಯನ್ನು ನೆನೆದು

ಒದಗಿ ಹನ್ನೊಂದನೆ ದ್ವಾರದಲ್ಲಿ ಇಳಿಸಿ
ಹೃದಯದಾಕಾಶಕ್ಕೆ ಕೊಂಡೊಯ್ದು
ಮುದದಿಂದ ಮಂಗಳ ಸ್ನಾನವನ್ನೆ ಗೈದು
ಉದರದೊಳಗಿದ್ದ ಕಾಮಾದಿಗಳ ಕಳೆದು
ಗುದಭಾಗ ಪಿಡಿದು ಶಿರದ ಮೂಲಪರಿಯಂತ
ತುದಿಮೊದಲು ಒಂದೇ ಸಮಾನವಾಗಿಪ್ಪ
ಸದಮಲ ಪ್ರಧಾನ ನಾಡಿಯ ಮಧ್ಯದಲಿ
ಪದುಮರಾಗಮಯವಾದ ಎಂಟು ದಳದಿ
ಅಧೋಮೊಗವಾಗಿ ಇರುತಿಪ್ಪ ಪದುಮವನೆತ್ತಿ
ಉದಯಭಾಸ್ಕರನೆಂಬೊ ಜ್ಞಾನದಿಂದ
ಚತುರಮನಸಿನಿಂದ ವಿಕಸಿತ ಮಾಡೋದು
ಇದೆ ಬಿಂಬಮೂರುತಿ ಇಪ್ಪ ಸ್ಥಾನ
ಸದಾಚಾರಿಯಾಗಿ ಶ್ರೀ ವಿಜಯವಿಠ್ಠಲನ್ನ
ಅದ್ಭುತ ಅಣುರೂಪ ಧ್ಯಾನ ಪಡೆಯಬೇಕು

ಅಟ್ಟ

ಅರೆಗಣ್ಣುಮಾಡಿ ಪಲ್ಲುಗಳ ಕೂಡಿಸದೆಲೆ
ಕೊರಳು ಬಾಗದೆ ಕದಲದಂತೆ ಕುಳಿತು
ಕರಗಳು ತೊಡೆಯ ಮೇಲಿಟ್ಟು ತೀವ್ರದಿಂದ
ಬೆರಳುಗಳ ಸ್ವಲ್ಪ ಮಾತ್ರ ತಗ್ಗಿಸಿ
ನಿರುಪದ್ರವವಾಗಿದ್ದ ಭೂಮಿಯನು ಸೇರಿ
ಸರಸದಲ್ಲಿ ತನ್ನ ಮೂರ್ತಿ ಎದುರಿಲಿಟ್ಟು
ಮರಳೆ ನಾಸಿಕ ಕೊನೆಯಲ್ಲಿ ದೃಷ್ಟಿಯಿಟ್ಟು
ಪರಬೊಮ್ಮನಾದ ಶ್ರೀ ವಿಜಯವಿಠಲನ್ನ
ಚರಣ ಮೊದಲು ಮಾಡಿ ಸ್ಮರಿಸು ನಿನ್ನೊಳಗೆ

ಆದಿ

ಮಧ್ಯಮಧ್ಯದಲ್ಲಿ ಮನ ಎದ್ದು ಪೋಗಲಾಗಿ
ಅಧೈರ್ಯವಿಲ್ಲದೆಯಿದ್ದು ವಿನಯದಿಂದಲಿ
ತಿದ್ದಿ ಮನ ಮೆಲ್ಲನೆ ಪೊದ್ದಿಸಿಕೊಂಡು ದುರಾಶೆಯ
ಗೆದ್ದು ಸ್ವಧರ್ಮ ಬಿಡದೆ ಸಿದ್ಧನಾಗೋ ಧ್ಯಾನದಲಿ
ಶುದ್ಧ ಮೂರುತಿ ನಮ್ಮ ವಿಜಯವಿಠಲರೇಯ ಪೊಳೆದು
ಉದ್ಧರಿಸುವ ತನ್ನ ಚಿದ್ಘನ ರೂಪವ ತೋರಿಕೊಳುತ
ಬಹಿರಶೂನ್ಯನಾಗಿ ಚಲಿಸು ಅಂತರದಲ್ಲಿ
ಮಹದೈವ ವಿಜಯವಿಠ್ಠಲನ್ನ ಪಾದವೆ ಕಾಣು

ವಿಜಯದಾಸರ ಶಿಷ್ಯರಾದ ಗೋಪಾಲದಾಸರು ಬಿಂಬೋಪಾಸನೆಯ ರಹಸ್ಯವನ್ನು ಅನುಭವದಿಂದಲೇ ಬಲ್ಲವರು. ಕಾಂಬೋದಿರಾಗದ ಝುಂಪೆತಾಳದ ಈ ರಚನೆಯನ್ನು ನೋಡಿ

ಧ್ಯಾನವನೆ ಮಾಡು ಬಿಂಬಮೂರುತಿಯ ||ಪ||

ಆನಂದದಲಿ ಕುಳಿತು ಅಂತರಂಗದಲಿ ||ಅಪ||

ಸದಾಚಾರನಾಗಿ ದ್ವಾದಶಗುರುಗಳಿಗೆರಗಿ
ಮೊದಲಿಂದ ಮೂಲಮಂತ್ರವನು ಜಪಿಸಿ
ಸದಮಲ ಭಕುತಿಯಲಿ ದೇಹಸ್ಥನ ತಿಳಿದು
ಪದುಮಾಸನ ಹಾಕಿ ಪರಮ ವಿಶ್ವಾಸದಲಿ ||೧||

ಅಂಗವನು ಚಲಿಸದೇ ಚಂದಾಗಿ ದೃಢದಿಂದ
ಕಂಗಳನು ಮುಚ್ಚಿ ಇಂದ್ರಿಯಂಗಳ ತಡೆದು
ಮಂಗಳಶೋಭಿತದಿ ಅಖಂಡಧ್ಯಾನವನು ಅಂತ
ರಂಗದಿ ನಿಲಿಸಿ ಎಲ್ಲವನು ಕಾಣೋ ||೨||

ಭಗವದ್ರೂಪಗಳೆಲ್ಲ ಒಂದು ಸಾರಿ ಸ್ಮರಿಸಿ
ಮಗುಳೆ ಪರಮ ಗುರುವಿನ ಮೂರ್ತಿಯನು
ತೆಗೆದು ಆಹ್ವಾನವನೆ ಮಾಡಿ ಅಲ್ಲಿಂದಲೇ
ಸ್ವಗುರು ಬಿಂಬಮೂರುತಿಯಲಿ ಐಕ್ಯವನೆ ಮಾಡೊ ||೩||

ತಿರುಗಿ ಮೆಲ್ಲಗೆ ಮೂರು ವೇಗದಿಂದಲಿ ನಿನ್ನ ನಿನ್ನ
ವರ ಮೂರುತಿಯಲಿ ಚಿಂತನೆಯ ಮಾಡೇ
ಭರದಿಂದ ಎಲ್ಲವನು ತಂದು ಹೃದಯದಲ್ಲಿ
ಸ್ಥಿರವಾಗಿ ಇಪ್ಪ ಮೂರುತಿಯೊಡನೆ ಕೂಡಿಕೊ ||೪||

ಆತನೇ ಬಿಂಬಮೂರುತಿಯೆಂದು ತಿಳಿದುಕೋ
ಆ ತರುವಾಯ ನಾಡಿಗಳ ಗ್ರಹಿಸಿ
ಆ ತೈಜಸನ ತಂದು ವಿಶ್ವಮೂರುತಿಯಲ್ಲಿ
ಪ್ರೀತಿಯುಳ್ಳವನಾಗಿ ಪತಿಕರಿಸು ಮರುಳೆ ||೫||

ಜ್ಞಾನಪ್ರಕಾಶದಲ್ಲಿ ನಿನ್ನ ಹೃದಯಸ್ಥಾನ
ಚೆನ್ನಾಗಿ ಅಷ್ಟದಳಕಮಲಮಧ್ಯ
ಶ್ರೀನಿವಾಸನ ಮೂರ್ತಿ ನಿಲ್ಲಿಸಿ ಬಾಹ್ಯದಲಿ
ಏನೇನು ಪೂಜೆಗಳೊ ಅದನೆ ತಿಳಿದು ಮಾಡೊ ||೬||

ಗುಣ ನಾಲ್ಕರಿಂದ ಉಪಾಸನೆಯನು ಮಾಡು
ಕ್ಷಣ ಕ್ಷಣಕೆ ಹರಿರೂಪ ನೀ ನೋಡುತ
ಅಣುರೇಣು ಚೇತನಕೆ ತಾನೆ ನಿಯಾಮಕ
ಫಣಿಶಾಯಿ ಅಲ್ಲದೇ ಮತ್ತೊಬ್ಬರಿಲ್ಲೆಂದು ॥೭॥

ಮಮತೆಯನು ತೊರೆದು ಮೇಲೊಂದಪೇಕ್ಷಿಸದೆ
ಸಮವಿಷಮವ ತಿಳಿದು ಒಂದೇ ಭಕುತಿಯಲಿ
ಸಮಾಧಿಗೊಳಗಾಗಿ ದಿವ್ಯದೃಷ್ಟಿಯಲಿ
ವಿಕ್ರಮದಿಂದ ಭರಿತ ಭಾವವನು ಕಾಣೋ ॥೮॥

ಈ ಪರಿ ಧೇನಿಸಲು ದೇವ ಕರುಣವ ಮಾಳ್ವ
ಪಾಪಸಂಚಿತವು ಆಗಾಮಿ ನಾಶ
ಅಪರೋಕ್ಷಿತನಾಗಿ ನಿನ್ನ ಯೋಗ್ಯತೆ ಇದ್ದಷ್ಟು
ಗೋಪಾಲ ವಿಠ್ಠಲನೊಲಿವನಾಗ ॥೯॥

ಬಿಂಬಾಪರೋಕ್ಷವೇ ಮೋಕ್ಷ ಎಂದು ಹೇಳಿದೆವು. ಆದರೆ ಇಲ್ಲೊಂದು ವಿವರಣೆಯ ಅಗತ್ಯವಿದೆ. ಅವಸ್ಥಾಚತುಷ್ಟಯಲ್ಲಿ ಜೀವನ್ಮುಕ್ತ, ಮತ್ತು ಮುಕ್ತ ಎಂದು ಬೇರೆಬೇರೆಯಾಗಿ ಹೇಳಿದ್ದಾರೆ. ಬಿಂಬಾಪರೋಕ್ಷವೆನ್ನುವುದು ಜೀವನ್ಮುಕ್ತ ಅವಸ್ಥೆಗೆ ಅನ್ವಯಿಸುತ್ತದೆ. ಹರಿಕಥಾಮೃತಸಾರದ ೩೦ನೆಯ ಸಂಧಿಯಲ್ಲಿ ಇದರ ಒಕ್ಕಣೆಯಿದೆ. ಅವಸ್ಥಾಚತುಷ್ಟಯವೆಂದರೆ ಎಲ್ಲ ಜೀವರ ಪಾಲಿಗೆ ಬಂದಿರುವ ಎಚ್ಚರ (ಜಾಗ್ರತ್), ಕನಸು (ಸ್ವಪ್ನ), ತನಿನಿದ್ರೆ (ಸುಷುಪ್ತಿ) ಮತ್ತು ಅವುಗಳನ್ನು ಮೀರಿದ್ದು (ತುರ್ಯ). ಈ ನಾಲ್ಕು ಅವಸ್ಥೆಗಳಿರುವ ಜೀವರನ್ನು ಕುರಿತ ವರ್ಣನೆ ಹರಿದಾಸರ ಪದಗಳಲ್ಲಿ ಬಂದಿದೆ. ಇದರಂತೆ-

೧) ಅಸೃಜ್ಯರಾಶಿಯಲ್ಲಿರುವ ಜೀವರು ನಿದ್ರೆಯ ನಿಷ್ಕ್ರಿಯೆಯ ಸ್ಥಿತಿಯಲ್ಲಿರುತ್ತಾರೆ. 'ಅಸೃಜ್ಯ' ಎಂದರೆ ಇನ್ನೂ ಸೃಷ್ಟಿಗೆ (ಎಂದರೆ ಸಂಸಾರದ ವ್ಯವಹಾರಕ್ಕೆ) ಬಾರದಿರುವ ಜೀವರುಗಳು. ಇವರಿಗೆ ಲಿಂಗದೇಹದ ಸಂಪರ್ಕ ಇನ್ನೂ ಒದಗಿಬಂದಿರುವುದಿಲ್ಲ. ಇದನ್ನೆ ಸುಷುಪ್ತಿಯೆನ್ನುವರು. ಇಲ್ಲಿ ಬಿಂಬನು ಪ್ರಾಜ್ಞನಾಮಕ. ಪ್ರಾಜ್ಞ ಎಂದರೆ ಪ್ರ+ಅಜ್ಞ, ಏನನ್ನೂ ಅರಿಯದವನು. ಜೀವರಾಶಿಗಳಲ್ಲೆಲ್ಲ ಪರಮಾತ್ಮನ ವ್ಯಾಪ್ತಿಯಿದ್ದರೂ ಅವನು ಅವ್ಯಕ್ತನಾಗಿಯೇ ಇರುತ್ತಾನೆ. ಈ ರಾಶಿಯಲ್ಲಿ ಜೀವನಿಂದ ಯಾವ ಕೆಲಸವನ್ನೂ ಮಾಡಿಸುವುದಿಲ್ಲ. ಇಲ್ಲಿ ಬಿಂಬನಿರುವುದು ಹೃದಯಾಕಾಶದ ತಮೋಗುಣದಲ್ಲಿ.

೨) ಸೃಷ್ಟಿಗೆ ಬಂದ ಮೇಲೆ ಭವಸಂಸಕ್ತಿಯು ಜೀವನಿಗೆ ಒದಗಿಬರುತ್ತದೆ. ಸಂಸಾರದಲ್ಲಿ ಕರ್ಮದಿಂದ ಬಂಧಿತನಾಗಿ ಸುಖದುಃಖಗಳನ್ನು ಅನುಭವಿಸುತ್ತಾನೆ. ಸೃಷ್ಟಿಯೆಂದರೇ ಗುಣವೈಷಮ್ಯ; ಸತ್ತ್ವ, ರಜಸ್, ತಮಸ್ ಎಂಬ ಮೂರು ಗುಣಗಳು ಉತ್ಕರ್ಷ, ಅಪಕರ್ಷಗಳನ್ನು ತಳೆಯುವುದೇ ಸಂಸಾರ, ಭವ. ಇಲ್ಲಿ ತ್ರಿಗುಣ ರೂಪವಾದ, ಅನಾದಿಯಾದ, ಸೂಕ್ಷ್ಮವಾದ, ಆವರಕವಾದ ಪ್ರಾಕೃತ ಲಿಂಗದೇಹದ ಸಂಪರ್ಕ ಮೊದಲಾಗಿರುತ್ತದೆ.

ಲಿಂಗದೇಹದ ಸಂಬಂಧವು ಜೀವರಿಗೆ ಅಸೃಜ್ಯಾವಸ್ಥೆಯಲ್ಲಿಯೂ ಇರುವುದಾದರೂ ಸೃಷ್ಟಿಯಲ್ಲಿ ಜೀವನಿಗೆ ಕಾರ್ಮಣ ನಂಟನ್ನು ಉಂಟುಮಾಡಿಸಿ ವ್ಯಕ್ತವಾಗುತ್ತದೆ. ಇದರಿಂದಲೇ ಶರೀರಿಯಾದ ಜೀವನಿಗೆ ಅಹಂಕಾರ ಮಮಕಾರಗಳು ಎದ್ದುಕೊಳ್ಳುತ್ತವೆ. ಸಂಸಾರವೆಂಬ ಪ್ರವಾಹದಲ್ಲಿ ಜೀವವು ಸಿಕ್ಕಿಬೀಳುವುದು ಹೀಗೆ. ದೇಹಾಭಿಮಾನ, ವಿಷಯಭೋಗಾಸಕ್ತಿಗಳು ಸಂಸಾರಕ್ಕೆ ಕಾರಣ. ಪರಮಾತ್ಮನು ಲಿಂಗದೇಹವನ್ನು ಜೀವನಿಗೆ ಕೂಡಿಸುವುದನ್ನು 'ಲಿಂಗೋಪದಾನ'ವೆಂದು ಕರೆಯುವರು. ಅಪ್ರಾಕೃತನಾದ ಜೀವ ಪ್ರಾಕೃತವಾದ ಲಿಂಗದೇಹವನ್ನು ಪಡೆದುಕೊಳ್ಳುವುದೇ ಸಂಸಾರಿಯಾದ ಜೀವದ ಅಭಿವ್ಯಕ್ತಿ. ಲಿಂಗವೆಂದರೆ ಪ್ರಕೃತಿಯೇ. ಇದರ ಸಂಪರ್ಕವೊದಗಿ ಮೊಡನೆಯೇ ಜೀವನಿಗೆ ದಾರೇಷಣ, ಪುತ್ರೇಷಣ, ವಿತ್ತೇಷಣಗಳೆಂಬ ಮೂರು ಈಷಣೆಗಳು ಒದಗಿಬರುತ್ತವೆ. ಸಂಸಾರಕ್ಕೆ ಇದು ಬುನಾದಿ. ಅಸೃಜ್ಯಜೀವರಾಶಿಯಿಂದ ಸೃಷ್ಟಿಗೆ ಬಂದಾಗಿನಿಂದ ಜೀವನ್ಮುಕ್ತಾವಸ್ಥೆಯವರೆಗೆ ಇದರ ಅವಧಿ. ಇದನ್ನು ಭವಸಂಸಕ್ತಿ, ಭವದೆಶೆ ಎಂದೂ ಕರೆಯುತ್ತಾರೆ. ಜೀವಸ್ವರೂಪಕ್ಕೆ ಇದು ಸ್ವಪ್ನದ ಅವಸ್ಥೆ. ಇಲ್ಲಿನ ಜೀವರು ಅಜ್ಞರು. ಇಲ್ಲಿನ ಬಿಂಬರೂಪ ತೈಜಸವೆನಿಸಿಕೊಳ್ಳುತ್ತದೆ. ಇದರ ಸ್ಥಾನ ಕಂಠಗತವಾದ ರಜೋಗುಣ.

೩) ಸಾಧನೆಯಿಂದ ಭಗವತ್ ಪ್ರಸಾದ ರೂಪವಾದ ಬಿಂಬಾಪರೋಕ್ಷವನ್ನು ಪಡೆದು ಕೊಂಡವರು ಜೀವನ್ಮುಕ್ತರು. ಬದುಕಿರುವಾಗಲೇ ಮೋಕ್ಷದ ಅನುಭವವನ್ನು ಒದಗಿಸಿಕೊಂಡವರು. ಬದುಕಿರುವಾಗಲೇ, ಎಂದರೆ ಇನ್ನೂ ಲಿಂಗದೇಹದ ನಾಶವಾಗದೆ ಇರುವಾಗಲೇ, ಇವರಿಗೆ ಪರಮಾತ್ಮಜ್ಞಾನ ಖಚಿತವಾಗಿ ಒದಗಿಬರುತ್ತದೆ. ಇವರು ಮುಕ್ತರೆಂದರೆ ಮತ್ತೆ ಇವರಿಗೆ ಭವಸಂಸಕ್ತಿಯ ದುಃಖವಿರದು; ಇವರು ಸಂಸಾರಕ್ಕೆ ಮರಳುವುದಿಲ್ಲ. ಆದರೆ ಅಪರೋಕ್ಷಜ್ಞಾನದಿಂದಾಗಿ ಇವರ ಜೀವಕ್ಕೆ ಅಂಟಿಕೊಂಡಿರುವ ಸಂಚಿತ (ಹಿಂದಿನದು) ಮತ್ತು ಆಗಾಮಿ (ಮುಂದೆ ಬರುವಂಥದು) ಎರಡೂ ಕರ್ಮಗಳು ಕಳಚಿಬೀಳುತ್ತವೆ. ಪ್ರಾರಬ್ಧಕರ್ಮವೊಂದು ಮಾತ್ರ ಉಳಿದುಕೊಂಡಿರುತ್ತದೆ. ಆದರೆ ಪರಮಾತ್ಮನ ಅನುಗ್ರಹದಿಂದ ಇದೂ ದುರ್ಬಲವಾಗಬಹುದು. ಇಲ್ಲಿನ ಅವಸ್ಥೆ ಜೀವಸ್ವರೂಪಕ್ಕೆ ಎಚ್ಚರದ್ದು (ಜಾಗ್ರತ್). ಇಲ್ಲಿ ಅಪರೋಕ್ಷಿ ಜೀವನಿಗೇ ಬಿಂಬರೂಪವು ವಿಶ್ವ ಎನಿಸಿಕೊಳ್ಳುತ್ತದೆ. ಜ್ಞಾನದಿಂದ ಎಚ್ಚರ; ಅಜ್ಞಾನದಿಂದ ನಿದ್ರೆ. ವಿಶ್ವವೆಂಬ ಬಿಂಬರೂಪವು ನೇತ್ರಗತವಾದ ಸತ್ವಗುಣದಲ್ಲಿರುತ್ತದೆ.

೪) ಇವು ಮೂರು ಜೀವನಿಗೆ ಸಾಮಾನ್ಯವಾದ ಅವಸ್ಥೆಗಳು. ಅಜ್ಞಾನವಿರುವಾಗಲೂ, ಅಪರೋಕ್ಷ ಜ್ಞಾನವಾದರೂ, ಲಿಂಗದೇಹದ ಸಂಪರ್ಕ ಇದ್ದೇ ಇರುತ್ತದೆ. ಆದರೆ ಲಿಂಗದೇಹದ ಭಂಗವಾದ ಮೇಲೆ ಮುಕ್ತಾವಸ್ಥೆ. ಇದು ತುರ್ಯ (ಮೂರನ್ನು ಮೀರಿದ ನಾಲ್ಕನೆಯದು) ಎನಿಸಿಕೊಳ್ಳುತ್ತದೆ. ಇದೇ ದಿಟವಾದ ಅರ್ಥದಲ್ಲಿ ಮೋಕ್ಷ; ಲಿಂಗದೇಹದಿಂದ, ಕರ್ಮಬಂಧನದಿಂದ, ಶರೀರಾಭಿಮಾನದಿಂದ ಬಿಡುಗಡೆ. ಇಲ್ಲಿ ಜೀವದ ಸ್ವರೂಪಸುಖ ತೋರಿಕೊಳ್ಳುತ್ತದೆ. ಹೀಗೆ ಸ್ವರೂಪಾನಂದ ಭೋಗಕ್ಕೆ ಬಿಂಬರೂಪವಾದುದು ತುರ್ಯನಾಮಕ ವಾಸುದೇವ. ಇವನ ಸ್ಥಾನ ಶಿರೋಗತ ದ್ವಾದಶದಳಕಮಲದ ಮಧ್ಯದಲ್ಲಿ. ಇವನು ಸರ್ವಸಾಕ್ಷಿ. ನಿತ್ಯನೂ ಅನಾದಿಯೂ ಆದ ಜೀವನಿಗೆ ಇದು ಶಾಶ್ವತಸ್ಥಿತಿ; ಹಿಂದಿನ ಮೂರು ಅವಸ್ಥೆಗಳಂತೆ ಅವಧಿಯಿಂದ ಕೂಡಿದ್ದಲ್ಲ.

ಹರಿಕಥಾಮೃತವನ್ನು ಬರೆದು ಪ್ರಸಿದ್ಧರಾದ ಜಗನ್ನಾಥದಾಸರ ತತ್ವಸುವ್ವಾಲಿಯಲ್ಲಿ ಬಿಂಬೋಪಾಸನೆಯ ಹಿನ್ನೆಲೆಯಲ್ಲಿರುವ ಎಲ್ಲ ವಿವರಗಳೂ ಸಾರೋದ್ಧಾರವಾಗಿ ಬಂದಿವೆ. ಅದನ್ನು ಈ ಕೆಳಗೆ ಕೊಡಲಾಗಿದೆ.

ತತ್ವ ಸುವ್ವಾಲಿ

ಶ್ರೀನಿವಾಸನ ಪೋಲ್ವ ದೀನವತ್ಸಲರುಂಟೆ
ದಾನಿಗಳುಂಟೆ ಜಗದೊಳು। ಜಗದೊಳು ಇಹರೆಂಬ
ಜ್ಞಾನಿಗಳುಂಟೆ ಅನುಗಾಲ ॥೧॥

ಏನು ಕರುಣಾನಿಧಿಯೊ ಶ್ರೀನಿತಂಬಿನಿರಮಣ
ತಾ ನಮ್ಮನಗಲಿ ಸೈರಿಸ। ಸೈರಿಸದ ಕರುಣೆಯ
ನಾನೆಂತು ತುತಿಸಿ ಹಿಗ್ಗಲಿ ॥೨॥

ಶ್ರೀನಾಥ ನಿನ್ನವರ ನಾನಾಪರಾಧಗಳ
ನೀನೆಣಿಸದವರ ಸಲಹಿದಿ। ಸಲಹಿದಿ ಸರ್ವಜ್ಞ
ಏನೆಂಬೆ ನಿನ್ನ ಕರುಣಕ್ಕೆ ॥೩॥

ಅಚ್ಯುತನೆ ನಿನ್ನಂಥ ಹುಚ್ಚು ದೊರೆಗಳ ಕಾಣೆ
ಕಚ್ಚಿ ಬೈದೊದ್ದ ಭಕುತರ। ಭಕುತರಪರಾಧಗಳ
ತುಚ್ಛಗೈದವರ ಸಲಹಿದಿ ॥೪॥

ತಂದೆ ತಾಯಿಯು ಭ್ರಾತೃ ಬಂಧು ಸಖ ಗುರು ಪುತ್ರ
ಎಂದೆಂದು ನೀನೆ ಗತಿಗೋತ್ರ। ಗತಿಗೋತ್ರ ಇಹಪರದಿ।
ಇಂದಿರಾರಾಧ್ಯ ಸಲಹೆಮ್ಮ ॥೫॥

ಎನ್ನ ಪೋಲುವ ಭಕ್ತರನ್ನಂತ ನಿನಗಿಹರು
ನಿನ್ನಂಥ ಸ್ವಾಮಿ ಎನಗಿಲ್ಲ। ಎನಗಿಲ್ಲವದರಿಂದ
ಬಿನ್ನೈಪೆನಿನ್ನು ಸಲಹೆಂದು ॥೬॥

ಇಂದಿರಾಪತಿ ನೀನು ಮಂದಭಾಗ್ಯನು ನಾನು।
ವಂದ್ಯನೋ ನೀನು ಸುರರಿಂದ। ಸುರರಿಂದ ನರರಿಂದ
ನಿಂದ್ಯನೋ ನಾನು ಜಗದೊಳು ॥೭॥

ಶರಣು ಶರಣರ ದೇವ ಶರಣು ಸುರವರಮಾನ್ಯ।
ಶರಣು ಶಶಿಕೋಟಿಲಾವಣ್ಯ। ಲಾವಣ್ಯ ಮೂರುತಿಯೆ।
ಶರಣೆಂಬೆ ಸ್ವಾಮಿ ಕರುಣಿಸೋ ॥೮॥

ಎನ್ನೊಳಿಪ್ಪ ಮಹಾತ್ಮ ಅನ್ಯರೊಳು ನೀನಿದ್ದು
ಅನ್ಯೋನ್ಯವಾಗಿ ಮಮತೆಯ। ಮಮತೆಯ ಕಲ್ಪಿಸಿ।
ನಿನ್ನೊಳಗೆ ನೀನೇ ರಮಿಸುವಿ ॥೯॥

ಪತಿತ ನಾನಾದರೂ ಪತಿತಪಾವನ ನೀನು
ರತಿನಾಥಜನಕ ನಗಪಾಣಿ। ನಗಪಾಣಿ ನೀನಿರಲು
ಇತರ ಚಿಂತ್ಯಾಕೊ ಎನಗಿನ್ನು ॥೧೦॥

ನಡೆ ನುಡಿಗಳಪರಾಧ ಒಡೆಯ ನೀನೆಣಿಸಿದರೆ
ಬಡವ ನಾನೆಂತು ಬದುಕಲೋ। ಬದುಕಲೋ ಕರುಣಾಳು।
ಕಡೆ ಬೀಳವದೆಂತೋ ಭವದಿಂದ ॥೧೧॥

ಏಸೇಸು ಜನ್ಮದಲಿ ದಾಸ ನಾ ನಿನಗಯ್ಯ
ಈಶ ನೀನೆಂಬೊ ನುಡಿ ಸಿದ್ಧ। ನುಡಿಸಿದ್ಧವಾಗಿರಲು
ದಾಸೀನ ಮಾಡಲುಚಿತಲ್ಲ ॥೧೨॥

ಆವ ಯೋನಿಯೊಳಿರಿಸು ಆವ ಲೋಕದೊಳಿರಿಸು
ಆವಾಗ ನಿನ್ನ ನೆನೆವಂತೆ। ನೆನೆವಂತೆ ಕರುಣಿಸೋ
ದೇವಕೀ ಕಂದ ದಯದಿಂದ ॥೧೩॥

ಶಿಷ್ಟನೆಂದೆನಿಸೆನ್ನ ಭ್ರಷ್ಟನೆಂದೆನಿಸು ಸ-
ರ್ವೇಷ್ಟ ಮೂರುತಿಯೆ ಜನರಿಂದ। ಜನರಿಂದ ನುಡಿಸಿದ್ದು।
ಇಷ್ಟವೇ ಕಾಣೊ ಎನಗಿನ್ನು ॥೧೪॥

ಶರಣಪಾಲಕನೆಂಬ ಬಿರುದಿದ್ದ ಮೇಲಿನ್ನು
ಪೊರೆಯದಿರಲೆನ್ನ ನಗರೇನೊ। ನಗರೇನೊ ಮೂಲ್ಲೋಕ
ದರಸ ನೀನಾಗಿ ಇರುತಿದು ॥೧೫॥

ಶ್ರೀಯರಸನೆ ನಿನ್ನ ಮಾಯಕ್ಕೆ ಎಣೆಗಾಣೆ
ಹೇಯವಿಷಯಗಳ ಜನರಿಗೆ। ಜನರಿಗುಣಿಸಿ ಉಪಾ
ದೇಯವೆಂತೆಂದು ಸುಖಿಸುವಿ ॥೧೬॥

ಸರ್ವಸ್ವತಂತ್ರ ನೀನೋರ್ವನಲ್ಲದೆ ಮ-।
ತ್ತೋರ್ವನಿನ್ನುಂಟೇ ಜಗದೊಳು। ಜಗದೊಳಗಜಾದಿಗಳು।
ದರ್ವಿಯಂದದಲಿ ಚರಿಸೋರು ॥೧೭॥

ಏನು ಕೊಟ್ಟರು ಕೊಡೊ ಶ್ರೀನಿವಾಸನೆ ನಿನ್ನ-
ಧೀನದವನಯ್ಯ ಎಂದೆಂದು। ಎಂದೆಂದು ಸುಖದುಃಖ-
ಮಾನಾದಿಗಳಿಗೆ ಪ್ರಭು ನೀನು ॥೧೮॥

ಮುನ್ನಾವ ಜನ್ಮದ ಪುಣ್ಯ ತಾ ಫಲಿಸಿತೋ
ನಿನ್ನಂಥ ಸ್ವಾಮಿ ಎನಗಾದೆ। ಎನಗಾದೆಯದರಿಂದ
ಧನ್ಯರೋ ನಮ್ಮ ಹಿರಿಯರು ॥೧೯॥

ಮನದಲ್ಲಿ ಹರಿಯ ಚಿಂತನೆ ಉಳ್ಳ ನರನಿಗೆ
ಮನೆಯಾದರೇನು ವನವೇನು। ವನವೇನು ಸತತ
ದುರ್ಜನರ ಸಂಗದೊಳು ಇರಲೇನು ॥೨೦॥

ಬಿಂಬ ನೀನೆನಗೆ ಪ್ರತಿಬಿಂಬ ನಾ ನಿನಗೆ ಕ್ಷೀ
ರಾಂಬುಧಿಶಾಯಿ ನರಸಿಂಹ। ನರಸಿಂಹ ನೀನಿರಲು
ಹಂಬಲಿಪುದ್ಯಾಕೆ ಜಗದೊಳು ॥೨೧॥

ಏನು ಮಾಡುವ ಕರ್ಮ ನೀನೆ ಮಾಡಿಪೆ ಎಂಬ
ಜ್ಞಾನವೇ ಎನಗೆ ಜಿತವಾಗಿ। ಜಿತವಾಗಿ ಇರಲಿ ಮ-
ತ್ತೇನು ನಾನೊಲ್ಲೆ ನಿನ್ನಾಣೆ ॥೨೨॥

ಅಪರಾಧಿ ನಾನೆಂಬುದುಪಚಾರ ಮಾತ್ರ ನಿನ-
ಗಪರಾಧವೆಂಬೋದಿಳೆಯೊಳು। ಇಳೆಯೊಳು ಇನ್ನುಂಟೆ
ಅಪರಾಧಿ ಎಂಬೋದಪರಾಧ ॥೨೩॥

ಎಲ್ಲಿ ಈಶತ್ವ ಮತ್ತೆಲ್ಲಿಹುದು ಕರ್ತೃತ್ವ
ಹುಲು ಮನುಜರಿಗೆ ಕರ್ತೃತ್ವ। ಕರ್ತೃತ್ವವೆಂಬುದು
ಎಲ್ಲಿಹುದು ಬರಿದೆ ಅಪವಾದ ॥೨೪॥

ಹಗಲು ಇರಳು ಸ್ಮರಣೆಯೊದಗುತಿರೆ ಜಿಹ್ವೆಯೊಳು।
ಬಗೆಯಲಿನ್ನುಂಟೆ ಸಾಧನಗಳು। ಸಾಧನಗಳೇತಕ್ಕೆ
ಜಗದೊಳಗೆ ಇನ್ನು ಅವರಿಗೆ ॥೨೫॥

ನಿನ್ನ ವಿಸ್ಮೃತಿ ಕೊಡುವ ಪುಣ್ಯಕರ್ಮಗಳೊಲ್ಲೆ
ನಿನ್ನನೇ ನೆನೆವ ಮಹಪಾಪ। ಮಹಪಾಪ ಕರ್ಮಗಳು
ಜನ್ಮಜನ್ಮದಲಿ ಇರಲಯ್ಯ ॥೨೬॥

ಗುಣಕಾಲಕರ್ಮಗಳ ಮನೆ ಮಾಡಿ ಜೀವರಿಗೆ
ಉಣಿಸುವಿ ನೀನೆ ಸುಖದುಃಖ। ಸುಖದುಃಖ ಮಿಶ್ರಫಲ
ಉಣದೆ ಸರ್ವತ್ರ ಬೆಳಗುವಿ ॥೨೭॥

ನಿನಗಸಮ್ಮತವಾದ ಅನಿಮಿಷೇಶನ ಲೋಕ
ಎನಗತ್ತದಯ್ಯ ಯದುನಾಥ। ಯದುನಾಥ ನೀನಿತ್ತ
ಘನನರಕವೆನಗೆ ಪುರುಷಾರ್ಥ ॥೨೮॥

ನೀನಿಲ್ಲದಾ ಸ್ಥಾನ ಅನಿಮಿಷೇಶನ ಲೋಕ
ಎನಗತ್ತದಯ್ಯ ಯದುನಾಥ। ಯದುನಾಥ ನೀನಿತ್ತ
ಘನನರಕವೆನಗೆ ಪುರುಷಾರ್ಥ ॥೨೯॥

ದ್ರುಹಿಣಪಿತ ನಿನ್ನವರ ಸಹವಾಸ ನಿನ್ನನು-
ಗ್ರಹವೆಂದು ತಿಳಿವೆ ಅನುಗಾಲ। ಅನುಗಾಲ ಸುಖವೀವ
ಮಹಾರಾದಿಲೋಕ ನಾನೊಲ್ಲೆ ॥೩೦॥

(ದ್ರುಹಿಣಪಿತ - ಬ್ರಹ್ಮನ ತಂದೆ)

ಎನಗೆ ದಾತನು ನೀನು ನಿನಗೆ ದೂತನು ನಾನು
ಇನಿತಿದ್ದ ಬಳಿಕ ಅಧಮರ। ಅಧಮಮಾನವರನ್ನು
ಅನುಸರಿಸಲ್ಯಾಕೋ ನಾನಿನ್ನು ॥೩೧॥

ಪೂಜ್ಯಪೂಜಕ ನೀನು ಪೂಜೋಪಕರಣಸ್ಥ
ಮೂಜಗತ್ಪತಿಯೆ ನೀನಾಗಿ। ನೀನಾಗಿ ಭಕುತರಿಗೆ
ನೈಜಸುಖವ್ಯಕ್ತಿ ಕೊಡತಿರ್ಪೆ ॥೩೨॥

ಏನು ಬಗೆಯಾದರೂ ನೀ ಸಲಹ ಬೇಕೆನ್ನ
ವಾಸವವಂದ್ಯ ವರದೇಶ। ವರದೇಶ ನಿನ್ನವರ
ದಾಸ ನಾನೆಂದು ದಯದಿಂದ ॥೩೩॥

ಜ್ಞಾನಗಮ್ಯನೆ ಕೇಳು ನೀನರಿಯದಪರಾಧ
ನಾನೊಮ್ಮೆ ಮಾಡೆ ನಳಿನಾಕ್ಷ। ನಳಿನಾಕ್ಷ ಕಾಯೊ ಕೊ-
ಲ್ಲೆನನ್ನ ಮಾಡೊ ಶರಣನ್ನ ॥೩೪॥

ವಿಧಿ ನಿಷೇಧಗಳೆಂಬುದಧಮಾಧಿಕಾರಿಗ-
ಲ್ಲದೆ ನಿನ್ನ ನಾಮ ಸರ್ವತ್ರ । ಸರ್ವತ್ರ ಚಿಂತಿಪ
ಬುಧರಿಗಿನ್ನುಂಟೆ ಜಗದೊಳು ॥೩೫॥

ಜಲದೊಳಗೆ ಮಿಂದು ನಿರ್ಮಲರಾದೆವೆಂದು ತ-
ಮ್ಮೊಳು ತಾವೆ ಹಿಗ್ಗಿ ಸುಖಿಸೋರು। ಸುಖಿಸೋರು ಪರಮ ಮಂ-
ಗಳಮೂರ್ತಿ ನಿನ್ನ ನೆನೆಯದೆ ॥೩೬॥

ಜಡಭೂತಜಲ ಜನರ ಮಡಿಮಾಡಲಾಪದೆ
ಜಡಧಿಮಂದಿರನ ಶುಭನಾಮ। ಶುಭನಾಮ ಮೈಲಿಗೆಯ
ಬಿಡಿಸಿ ಮಂಗಳವ ಕೊಡದೇನೊ ॥೩೭॥

ಓಡಿ ಹೋಗುವ ಮಡಿಯ ಮಾಡಿ ದಣಿಯಲು ಬೇಡ
ನೋಡು ಸರ್ವತ್ರ ಹರಿರೂಪ। ಹರಿರೂಪ ನೋಡಿ ಕೊಂ-
ಡಾಡಿ ಸುಖಿಯಾಗೊ ಮನವುಬ್ಬಿ ॥೩೮॥

ಮೀನುಮೊಸಳೆಗಳ ತಪ್ಪೇನೊ ಜಲದೊಳಿಗಿಹವು
ಸ್ನಾನ ಫಲವ್ಯಾಕೆ ಬರಲಿಲ್ಲ। ಬರಲಿಲ್ಲ ಜಲಚರ-
ಪ್ರಾಣಿಗಿನ್ನಜ್ಞರಿಗೆ ಕೊರತೇನೋ ॥೩೯॥

ಮನವೆ ಆಲೋಚಿಸಿಕೊ ನಿನಗಿದ್ದ ಚಿಂತೆ ನ-
ಮ್ಮನಿರುದ್ಧಗಿಲ್ಲೆ ಅನುಗಾಲ। ಅನುಗಾಲ ಸಲಹುವ
ಬಿನುಗು ಮಾನವರ ಬಿಡು ಕಂಡ್ಯ ॥೪೦॥

ಭಂಡಮನವೆ ಕೇಳು ಕಂಡ ಕಂಡವರಿಗೆ
ಅಂಡಲೆದರೇನು ಪುರುಷಾರ್ಥ। ಪುರುಷಾರ್ಥ ಸ್ವಾಮಿ ಪದ-
ಪುಂಡರೀಕವನೆ ನೆರೆನಂಬು ॥೪೧॥

ಅಶವಶನಗಳೀವ ವಸುದೇವ ಸುತನಿರಲು
ಹುಸಿಯಾಗಿ ಬದುಕೊ ನರರಿಗೆ। ನರರಿಗಾಲ್ಪರಿದರೆ
ಹಸಿವೆಯಡಗುವುದೆ ಎಲೆ ಜೀವ ॥೪೨॥

ಹಿಂದೆ ಜನ್ಮಾಂತರದಿ ತಂದು ಕೊಟ್ಟವರಾರು
ಇಂದು ಮುಂದೀವ ಪ್ರಭುವಾರು। ಪ್ರಭುವಾರು ಎಲೆ ಮನವೆ
ಮಂದಮತಿಯಾಗಿ ಕೆಡಬೇಡ ॥೪೩॥

ಅನ್ನವಿಲ್ಲೆಂದು ನೀನನ್ಯರಿಗೆ ಹಲುಬದಿರು।
ಅನ್ನಮಯನಾದ ಅನಿರುದ್ಧ। ಅನಿರುದ್ಧ ಜಗಕೆ ದಿ-
ವ್ಯಾನ್ನ ತಾ ಕೊಟ್ಟು ಸಲಹುವ ॥೪೪॥

ಏಸೇಸು ಜನ್ಮದಲಿ ಬೇಸರಾಗದೆ ಜೀವ-
ರಾಸಿಗಳಿಗನ್ನ ಕೊಡುತಿರ್ಪ ನಮ್ಮನು ಉ-
ದಾಸೀನ ಮಾಡಿ ಬಿಡುವೋನೆ ॥೪೫॥

ಅನ್ನದಾನ್ನಾದ ಸಪ್ತಾನ್ನ ಕಲ್ಪಕನಾಗಿ
ಅನ್ನಮಯರೂಪಿ ಅನಿರುದ್ಧ। ಅನಿರುದ್ಧ ಜಗಕೆ ದಿ-
ವ್ಯಾನ್ನಗಳ ಕೊಟ್ಟು ಸಲಹುವ ॥೪೬॥

ಪ್ರಾಣಪಂಚಕರೂಪ ಪ್ರಾಣಾಂತರಾತ್ಮಕನು
ಪ್ರಾಣಿಗಳೊಳಗಿದ್ದು ಪ್ರತಿದಿನ। ಪ್ರತಿದಿನವು ಪ್ರದ್ಯುಮ್ನ
ಪ್ರಾಣಮಯನೆಂದು ಕರೆಸುವ ॥೪೭॥

ಎಂತೆಂತು ನೀ ನಡೆಸಿದಂತೆ ನಾ ನಡೆವೆನೋ
ಎಂತು ನೀ ನುಡಿಸೆ ನುಡಿವೆನು। ನುಡಿವೆನಲ್ಲದೆ ರಮಾ-
ಕಾಂತ ಎನ್ನಲ್ಲಿ ತಪ್ಪೇನೊ ॥೪೮॥

ನಿಲ್ಲಲು ನಿಲ್ಲುವೆನು ಮಲಗಿದರೆ ಮಲಗುವೆನು
ತಿಳಿದು ತಿಳಿಸಿದರೆ ತಿಳಿವೆನು। ತಿಳಿವೆನೊ ದೇಹದ।
ನೆಳಲಂತೆ ಇಪ್ಪೆನೊ ಅನುಗಾಲ ॥೪೯॥

ಸರ್ವಜ್ಞ ಸರ್ವೇಶ ಸರ್ವಾಂತರಾತ್ಮಕನೆ
ಶರ್ವಾದಿ ವಂದ್ಯ ಶಿವರೂಪಿ। ಶಿವರೂಪಿ ಸಜ್ಜನರ
ಸರ್ವಕಾಲದಲಿ ಸಲಹಯ್ಯ ॥೫೦॥

ಉಂಡುಉಟ್ಟದ್ದೆಲ್ಲಖಂಡನಮುಖವೆನ್ನಿ
ಕಂಡದ್ದು ಹರಿಯ ಪ್ರತಿಮೆನ್ನಿ । ಪ್ರತಿಮೆನ್ನಿ ಮೂರ್ಜಗಕೆ
ಪಾಂಡವಪ್ರಿಯನೆ ದೊರೆ ಎನ್ನಿ ॥೫೧॥

(ಅಖಂಡ - ವ್ಯಾಪ್ತ)

ಮನವಚನಕಾಯದಿಂದನುಭವಿಪ ವಿಷಯಗಳ
ನಿನಗರ್ಪಿಸುವೆನೊ ನಿಖಿಲೇಶ। ನಿಖಿಲೇಶ ನಿನ್ನ ಪಾ-
ವನಮೂರ್ತಿ ತೋರಿ ಸುಖವೀಯೊ ॥೫೨॥

ನಿಖಿಳಾಗಮೈಕವೇದ್ಯ ಅಕಳಂಕ ಸುಚರಿತ್ರ
ವಿಖನಸಾರಾಧ್ಯ ಸುಖರೂಪಿ। ಸುಖರೂಪಿ ನಿನ್ನಂಥ
ಸಖನಿರಲು ದುರಿತ ಬರಲುಂಟೆ ॥೫೩॥

ಭೋಜ್ಯವಸ್ತುಗಳಲ್ಲಿ ಭೋಜ್ಯನಾಮಕನಾಗಿ
ತಜ್ಜನ್ಯರಸವ ಜನರಿಗೆ। ಜನರಿಗೆ ಉಂಡುಣಿಸಿ
ನಿರ್ಜರೋತ್ತಂಸ ಸುಖವೀವ ॥೫೪॥

ಭೂಮಂಡಲವೆ ಪೀಠ ವ್ಯೋಮಮಂಡಲ ಛತ್ರ
ಸೋಮಸೂರ್ಯರೆ ಮಹದೀಪ । ಮಹದೀಪ ನಕ್ಷತ್ರ-
ಸ್ತೋಮಗಳೆ ನಿನಗೆ ಉಪದೀಪ ॥೫೫॥

ಮಳೆಯೆ ಮಜ್ಜನವು ದಿಗ್ವಲಯಂಗಳೇ ವಸನ
ಬೆಳೆವ ಬೆಳಸುಗಳೆ ನೈವೇದ್ಯ। ನೈವೇದ್ಯ ಜನರ ಕಂ-
ಗಳ ಕಾಂತಿ ನಿನಗೆ ಆರಾರ್ತಿ ॥೫೬॥

ತರುಗಳೇ ಚಾಮರಗಳಾಗಿರ್ಪವು ನಿನಗೆ
ಶರಧಿ ಗರ್ಜನೆಯೆ ಮಹವಾದ್ಯ। ಮಹವಾದ್ಯ ಜೀವರ-
ಸ್ವರಗಳೇ ನಿನಗೆ ಸಂಗೀತ ॥೫೭॥

ಪಾತಾಳ ಪಾದುಕೆ ವಿಧಾತೃಲೋಕವೆ ಮುಕುಟ
ಶ್ವೇತದ್ವೀಪವೆ ನಿನಗೆ ಒಡ್ಯಾಣ। ಒಡ್ಯಾಣ ವೈಕುಂಠ
ಆಪತ್ರವೇ ನಿನಗೀವೆ ॥೫೮॥

ನಡೆವುದೇ ಹರಿಯಾತ್ರೆ ನುಡಿವುದೇ ಹರಿನಾಮ
ಕುಡಿವ ನೀರುಗಳೆ ಅಭಿಷೇಕ। ಅಭಿಷೇಕ ದಿನದಿನದಿ
ಬಡಲಿಗುಂಬನ್ನ ನೈವೇದ್ಯ ॥೫೯॥

ವೇದಶಾಸ್ತ್ರಗಳು ನಿನಗಾದರುಪಚಾರವು
ಹಾದಿ ನಡೆವುದೇ ನರ್ತನ। ನರ್ತನವು ಸಜ್ಜನರ
ವಾದಸಂವಾದಗಳು ಉಯ್ಯಾಲೆ ॥೬೦॥

ನಕ್ಷತ್ರಮಂಡಲವು ಲಕ್ಷದೀಪವು ನಿನಗೆ
ಋಕ್ಷೇಶತರಣಿ ಆಕಾಶ। ಆಕಾಶದೀಪಗಳು
ವೃಕ್ಷವಲ್ಲಿ ಜವೆ ಫಲಪುಷ್ಪ ॥೬೧॥

(ಋಕ್ಷೇಶ - ಚಂದ್ರ)

ಕುಂಡವೇ ಗೋಳಕವು ಕೆಂಡವೇ ಕರಣಗಳು
ಉಂಡುಡುವ ವಿಷಯ ಅವದಾನ। ಅವದಾನ ಕೈಕೊಂಡು
ಪುಂಡರೀಕಾಕ್ಷ ದಯವಾಗೋ ॥೬೨॥

(ಅವದಾನ-ಉತ್ತಮಕಾರ್ಯ)

ಗೋಳಕಗಳೆಲ್ಲ ನಿನಗಾಲಯವು ಕರಣಗಳ
ಸಾಲುಗಳೆ ದೀಪ ತದ್ಭೋಗ್ಯ। ತದ್ಭೋಗ್ಯ ವಿಷಯಗಳ
ಮೇಲನವೆ ನಿನಗೆ ಮಹಪೂಜೆ ॥೬೩॥

ತತ್ತತ್ಪದಾರ್ಥದಲಿ ತತ್ತದಾಕಾರನಾಗಿ
ಎತ್ತ ನೋಡದಿರು ಇರುತಿರ್ಪ। ಇರುತಿರ್ಪ ಹರಿಗೆ ನಾ
ಭೃತ್ಯನೆಂಬುವುದೆ ಬಲುಧರ್ಮ ||೬೪||

ಸದಸದ್ವಿಲಕ್ಷಣನೆ ಆಧಿಭೂತ-ಆಧ್ಯಾತ್ಮ-
ಅಧಿದೈವದರಸ ರಸರೂಪಿ। ರಸರೂಪನಾಗಿ ಸ-
ನ್ಮುದ ತುಷ್ಟಿ ಪುಷ್ಟಿ ಕೊಡುತಿರ್ಪೆ ||೬೫||

ಅಧಿಭೂತ-ಪಂಚಭೂತಗಳನ್ನು ಕುರಿತದ್ದು
ಅಧ್ಯಾತ್ಮ-ಮನಸ್ಸನ್ನು ಕುರಿತದ್ದು
ಅಧಿದೈವ- ಇಂದ್ರಿಯಗಳನ್ನು ಕುರಿತದ್ದು ||೬೬||

(ಇಂದ್ರಿಯಾಭಿಮಾನಿಗಳನ್ನು)

ಮನದೊಳಗೆ ನೀನಿದ್ದು ಮನವೆಂದೆನಿಸಿಕೊಂಡು
ಮನದ ವೃತ್ತಿಗಳನ್ನು ಸೃಜಿಸುವಿ। ಸೃಜಿಸುವಿ ಸಂಕರುಷಣನೆ
ನಿನ್ನ ಕರುಣಕ್ಕೆ ಎಣೆಗಾಣೆ ||೬೭||

ಅಧಿಭೂತ-ಆಧ್ಯಾತ್ಮ-ಅಧಿದೈವತಾಪ ಕಳೆ-
ವುದು ನಿನ್ನ ದಿವ್ಯ ತ್ರಯನಾಮ। ತ್ರಯನಾಮ ಸರ್ವದಾ
ಒದಗಲೋ ಬಂದು ವದನಕ್ಕೆ ||೬೮||

ನಾನಾಪದಾರ್ಥದಲಿ ನಾನಾಪ್ರಕಾರದಲಿ
ನೀನಿದ್ದು ಜಗವ ನಡೆಸುವಿ। ನಡೆಸುವಿ ಹರಿ ನೀನೆ
ನಾನೆಂಬ ನರಗೆ ಗತಿಯುಂಟೆ ||೬೯||

ಸೇವ್ಯಸೇವಕರಲ್ಲಿ ಸೇವ್ಯಸೇವಕನಾಗಿ
ಅವ್ಯಕ್ತನಾಗಿ ನೆಲೆಸಿರ್ಪೆ। ನೆಲೆಸಿರ್ಪೆ ಸರ್ವದಾ
ಸೇವ್ಯ ನಾ ನಿನಗೆ ಸರಿಗಾಣೆ ||೭೦||

ಮರುಳು ಮನವೇ ಕೇಳು ಮರೆವರೇ ಹರಿನಾಮ
ಕರುಣಾಬ್ಧಿ ಕೃಷ್ಣ ಅನುಗಾಲ। ಅನುಗಾಲ ಸಲಹುವನು
ಬರಿದೆ ಚಿಂತ್ಯಾಕೊ ನಿನಗಿನ್ನು ||೭೧||

ತಂದೆ ಮಕ್ಕಳನು ಪೊರೆವಂದದಲಿ ಶ್ರೀಕಾಂತ
ಎಂದೆಂದು ತನ್ನ ಭಕುತರ। ಭಕುತರ ಸಲಹುವ
ಸಂದೇಹವ್ಯಾಕೊ ನಿನಿಗಿನ್ನು ||೭೨||

ಅಂಬುಜಭವಾಂಡದೊಳು ಒಂಭತ್ತು ವಿಧವಿಪ್ಪ।
ಅಂಬುಜಾಂಬಕನ ವಿಭೂತಿ। ವಿಭೂತಿರೂಪವನು
ಕಾಂಬುವನೆ ಯೋಗಿ ಜಗದೊಳಗೆ ॥೭೩॥

(ಒಂಭತ್ತು ವಿಧವಪ್ಪ-ಒಂಭತ್ತು ಬಗೆಯ ರೂಪಗಳು)

೧. ನೀತ (ದಶಾವತಾರ ರೂಪಗಳು)
೨. ಸಾಧಾರಣ (ಎಲ್ಲ ಜೀವಜಡದಲ್ಲಿರುವ ರೂಪ)
೩. ವಿಶೇಷ (ದೇವತೆಗಳಲ್ಲಿ, ಮುಕ್ತ ಜೀವರಲ್ಲಿರುವ ರೂಪ)
೪. ಸಜಾತಿ (ಅಶ್ವತ್ಥಾದಿಗಳಲ್ಲಿ ವೈಶಿಷ್ಟವನ್ನು ಒದಗಿಸುವ ರೂಪ)
೫. ನೈಜ (ಶಾಲಗ್ರಾಮಗಳಲ್ಲಿರುವ ರೂಪ)
೬. ವಿಜಾತಿ (ಬೇರೆ ಬೇರೆ ವಸ್ತುಗಳಲ್ಲಿ ಭೇದಕ್ಕೆ ಕಾರಣವಾಗುವ ರೂಪ)
೭. ಸಹಜ (ದೇವತೆಗಳಲ್ಲಿ ಆವೇಶರೂಪ)
೮. ಖಂಡ (ಒಂದು ವಸ್ತುವಿನ ಅವಯವಗಳಲ್ಲಿರುವ ರೂಪಗಳು)
೯. ಅಖಂಡ (ಸರ್ವವ್ಯಾಪಕರೂಪ)

ಕತೃಕರ್ಮಗಳಲ್ಲಿ ಕಾರಣ ಕ್ರಿಯೆಗಳಲಿ
ನಿತ್ಯ ನೀನಿದ್ದು ನಡೆಸುವಿ। ನಡೆಸುವಿ ಜೀವರ
ಕೃತಕೃತ್ಯರನು ಮಾಡಿ ಸಲಹುವಿ ॥೭೪॥

ನಿತ್ಯಬದ್ಧನು ನಾನು ನಿತ್ಯಮುಕ್ತನು ನೀನು
ಭೃತ್ಯನು ನಾನು ಪ್ರಭು ನೀನು। ಪ್ರಭು ನೀನು ಮೂಲೋಕ-
ವ್ಯಾಪ್ತನು ನೀನು ಅಣು ನಾನು ॥೭೫॥

ಹೃಷಿಕ ನಿಯಾಮಕನೆ ವಿಷಯದೊಳು ನೀನಿಂತು
ಪ್ರಸುಖಾತ್ಮಕನಾಗಿ ರಮಿಸುವಿ। ರಮಿಸಿ ಜೀವರನು ಮೋ-
ಹಿಸಿ ತಿಳಿಯಗೊಡದೆ ಇರುತಿರ್ಪೆ ॥೭೬॥

(ಹೃಷಿಕ-ಇಂದ್ರಿಯಗಳು)

ಶ್ರೀಪ್ರಾಣನಾಯಕನೆ ನೀ ಪ್ರಾಣಿಗಳ ಮೇಲೆ
ಸುಪ್ರೀತನಾಗಿ ಸಲಹೆಂದು। ಸಲಹೆಂದು ಸರ್ವದಾ
ನಾ ಪ್ರಾರ್ಥಿಸುವೆನೋ ಪರಮಾತ್ಮ ॥೭೭॥

ಅನಘ ರೋಗಘ್ನ ಎಂದಿನಿತು ಮಂಗಳನಾಮ
ನೆನೆಯೆ ದುರಿತಗಳು ಬರಲುಂಟೆ। ಬರಲುಂಟೆ ಲೋಕದ
ಜನರ ಧನ್ವಂತ್ರಿ ಕಾಪಾಡೊ ॥೭೮॥

ನಿನ್ನ ಕೊಂಡಾಡಿದಂತನ್ಯರನು ಕೊಂಡಾಡೆ
ನಿನ್ನನೇ ನೋಡಬಯಸುವೆ। ಬಯಸುವೆ ಬೇಸರದೆ
ಎನ್ನ ಕುಲದೈವ ಸುಖವೀಯೋ ॥೭೯॥

ನೀರು ತೃಣವೀಯೆ ಗೋ ಕ್ಷೀರವನು ಕರೆದಂತೆ
ಸೂರಿಗಳು ಮಾಳ್ಪ ಅಪರಾಧ। ಅಪರಾಧ ಸ್ವೀಕರಿಸಿ
ಸಾರೂಪ್ಯವೀವೆ ಸರ್ವಜ್ಞ ॥೮೦॥

ನಿನ್ನ ಸಂಕಲ್ಪಕ್ಕೆ ಅನ್ಯಾಥಾವಾಗಿಪ್ಪ
ಪುಣ್ಯಕರ್ಮಗಳ ನಾನೊಲ್ಲೆ। ನಾನೊಲ್ಲೆ ಶ್ರೀಹರಿಯೆ।
ಮನ್ನಿಸೈ ನಿನ್ನ ಮನದಂತೆ ॥೮೧॥

ನಿನ್ನ ತುತಿಪುದಕ್ಕಿಂತ ಪುಣ್ಯ ಬೇರೇನಯ್ಯ
ನಿನ್ನಂಘ್ರಿ ಭಜನೆ ಸುಖಕಿಂತ। ಸುಖಕಿಂತ ಪುರುಷಾರ್ಥ
ಇನ್ನುಂಟೆ ಸ್ವಾಮಿ ಜಗದೊಳು ॥೮೨॥

ದೇಶಕಾಲಾದಿಗಳಿಗೀಶ ನೀನೆಂದರಿದು-
ಪಾಸನೆಯ ಗೈವ ಭಜಕರು। ಭಜಕರೆಲ್ಲಿದ್ದರೂ
ದೋಷವೆಲ್ಲಿಹುದೋ ಅವರಿಗೆ ॥೮೩॥

ಅನಿರುದ್ಧ ಪ್ರದ್ಯುಮ್ನ ಅನಲಧರಣೀಧರನೆ
ಅನುವಿಷ್ಟನಾಗಿ ಪ್ರಕೃತಿಯ । ಪ್ರಕೃತಿಯ ನಿರ್ಮಿಸಿದ
ಘನಮಹಿಮ ಎನಗೆ ದಯವಾಗೊ ॥೮೪॥

ವಾಸುದೇವಾನಂತ ವಾಸವಾನುಜ ವರ-
ವಾಸುಕೀಶಯನ ವನಮಾಲಿ। ವನಮಾಲಿ ವೀತಭಯ
ವಾಸವಾಗೆನ್ನ ಮನದಲ್ಲಿ ॥೮೫॥

ನಾರಾಯಣಾಚ್ಯುತ ಮುರಾರಿ ಮುನಿಗಣಸೇವ್ಯ
ನಾರದಪ್ರಿಯ ನರಸಿಂಹ। ನರಸಿಂಹ ನಿನ್ನವರಿ-
ಗಾರೋಗ್ಯಭಾಗ್ಯ ಕರುಣಿಸೋ ॥೮೬॥

ಮೃತ್ಯುಂಜಯಾರಾಧ್ಯ ಮೃತ್ಯುಮೃತ್ಯುವೆ ಮೃಕಂ-
ಡಾತ್ಮಜಪ್ರಿಯ ಕವಿಗೇಯ। ಕವಿಗೇಯ ಭಕ್ತರಪ-
ಮೃತ್ಯು ಪರಿಹರಿಸಿ ಸಲಹಯ್ಯ ॥೮೭॥

ಇಂದಿರಾರಮಣ ಗೋವಿಂದ ಕೇಶವ ಭಕ್ತ-
ಬಂಧು ನೀನೆಂದೂ ಮೊರೆಹೊಕ್ಕೆ। ಮೊರೆಹೊಕ್ಕೆ ಕಾರುಣ್ಯ-
ಸಿಂಧು ನೀನೆನಗೆ ದಯವಾಗೊ ॥೮೮॥

ನೋಕನೀಯನೆ ನಿನ್ನ ಶ್ರೀಕಮಲಜಾದಿಗಳು
ಏಕದೇಶವನ್ನು ಅರಿಯರೋ। ಅರಿಯದಾ ಮಹಿಮೆಗಳುಳ್ಳ
ಈ ಕುಮತಿಜನರು ತಿಳಿವೋರೆ ॥೮೯॥

(ನೋಕನೀಯ-ಪರಿಪೂರ್ಣ, ವೃದ್ಧಿಹ್ರಾಸರಹಿತ)

ವಾಸುದೇವನ ಬಿಟ್ಟು ಲೇಸು ಹಾರೈಸಿಕೊಂ-
ಡೇಸು ದೈವಗಳ ಭಜಿಸಲು। ಭಜಿಸಲು ಬರಿದೆ ಆ-
ಯಾಸವಲ್ಲದೆ ಸುಖವಿಲ್ಲ ॥೯೦॥

ನಾ ನಿನ್ನ ಮರೆತರೂ ನೀನೆನ್ನ ಮರೆಯದಲೆ
ಸಾನುರಾಗದಲಿ ಸಲಹುವಿ। ಸಲಹುವಿ ಸರ್ವಜ್ಞ
ಏನೆಂಬೆ ನಿನ್ನ ಕರುಣಕ್ಕೆ ॥೯೧॥

ಜೀವನಾಮಕನಾಗಿ ಜೀವರೊಳು ನೀನಿಂತು
ಜೀವಕರ್ತೃ ಕರ್ಮ ನೀ ಮಾಡಿ ನೀ ಮಾಡಿ ಮಾಡಿಸಿ
ಜೀವರಿಗೆ ಕೊಡುವೆ ಸುಖದುಃಖ ॥೯೨॥

ಸತ್ಯಸಂಕಲ್ಪ ತ್ವಚ್ಚಿತ್ತಾನುಸಾರ ಮ-
ಚ್ಚಿತ್ತ ವರ್ತಿಸಲಿ ಸರ್ವತ್ರ। ಸರ್ವತ್ರ ಸರ್ವದಾ
ಭಕ್ತಿ ಇರಲೆನಗೆ ಅನುಗಾಲ ॥೯೩॥

ನರಕ ಸ್ವರ್ಗಗಳೆರಡು ಇರುತಿಹವು ಇಲ್ಲೆ ವಿ-
ಸ್ಮರಣೆಯೇ ನರಕ ಸ್ಮೃತಿ ಸ್ವರ್ಗ। ಸ್ಮೃತಿ ಸ್ವರ್ಗವಿರೆ ಬಾಹ್ಯ-
ನರಕ ಭಯಕಂಜೆ ಎಂದೆಂದು ॥೯೪॥

ಪ್ರಾಣಭಯ ಬಂದಾಗ ಕಾಣದಲೆ ಹಲುಬಿದರು
ಪ್ರಾಣಮಯನಾದ ಪ್ರದ್ಯುಮ್ನ। ಪ್ರದ್ಯುಮ್ನ ಮೂಜಗ-
ತ್ತ್ರಾಣನಾಗಿನ್ನು ಸಲಹುವ ॥೯೫॥

ವಾಮನ ತ್ರಿವಿಕ್ರಮ ನಿರಾಮಯ ನಿರಾಧಾರ
ರಾಮ ರಾಜೀವದಳ ನೇತ್ರ। ದಳನೇತ್ರ ಮಮ ಕುಲ-
ಸ್ವಾಮಿ ನೀನೆಮಗೆ ದಯದಾಗೊ ॥೯೬॥

ಶೋಕವಿನಾಶನ ವಿಗತಶೋಕ ನೀನೆಂದರಿತು
ನಾ ಕರವ ಮುಗಿವೆ ಕರುಣಾಳು। ಕರುಣಾಳು ಭಕುತರ
ಶೋಕಗಳ ಕಳೆದು ಸುಖವೀಯೊ ॥೯೭॥

ಆನಂದನಂದ ವಿಜ್ಞಾನಮಯ ವಿವಿಧ ಸ-
ನ್ಮಾನದ ಪ್ರವರ ಸಮವರ್ತಿ। ಸಮವರ್ತಿ ಸುಮನಸ-
ತ್ರಾಣ ನೀನೆಮಗೆ ದಯವಾಗೊ ॥೯೮॥

ನೀನಿಪ್ಪಲೋಕ ನಿರ್ವಾಣವೆಂದಾಗಮ ಪು-
ರಾಣ ಪೇಳುವುವು ಅನುದಿನ। ಅನುದಿನದಿ ನರಕವಿ-
ದ್ದೇನು ಮಾಡುವುದೋ ಎಮಗಿನ್ನು ॥೯೯॥

(ನಿರ್ವಾಣ - ಮೋಕ್ಷ)

ಕೃಪಣವತ್ಸಲನೆ ಎನ್ನಪರಾಧಗಳ ನೋಡಿ
ಕುಪಿತನಾಗುವುದೆ ಕಮಲಾಕ್ಷ। ಕಮಲಾಕ್ಷ ನೀನೆನಗೆ
ಉಪಕಾರಿ ಎಂದು ಸ್ಮರಿಸುವೆ ॥೧೦೦॥

ಸತ್ಯಸಂಕಲ್ಪ ಜಗದತ್ಯಂತಭಿನ್ನ ಸ-
ರ್ವೋತ್ತಮನೆ ಸುಖಪೂರ್ಣ ಸುಖಪೂರ್ಣ ನೀ ಎನ್ನ
ಚಿತ್ತದಿಂದಗಲದಿರು ಕಂಡ್ಯ ॥೧೦೧॥

ಜ್ಞಾನಕರ್ಮೇಂದ್ರಿಯಗಳಾನಂದಮಯಗಧಿ-
ಷ್ಠಾನವೆಂದರಿದು ಪ್ರತಿದಿನ। ಪ್ರತಿದಿನ ಉಂಬನ್ನ-
ಪಾನಾದಿ ವಿಷಯ ಹರಿಗೆನ್ನಿ ॥೧೦೨॥

ಎನಗೆ ನಿನ್ನಲಿ ಭಕುತಿ ಇನಿತಿಲ್ಲದಿದ್ದರೂ
ಅನಿಮಿತ್ತಬಂಧು ಸಲಹುವಿ। ಸಲಹುವಿ ಸರ್ವದಾ
ಎಣೆಗಾಣೆ ನಿನ್ನ ಕರುಣಕ್ಕೆ ॥೧೦೩॥

ಮಾನಧನವನಿತೆಸಂತಾನಗಳ ಬಯಸುತ್ತ
ಸ್ನಾನಜಪಹೋಮಉಪಾವಾಸ। ಉಪವಾಸಾ ವ್ರತನೇಮ
ಏನು ಮಾಡಿದರು ಹರಿ ಮೆಚ್ಚ ॥೧೦೪॥

ಶ್ರೀವರನೆ ನೀ ತತ್ವದೇವತೆಗಳೊಳಗಿದ್ದು
ಯಾವತ್ತು ಕರ್ಮ ನೀ ಮಾಡಿ। ನೀ ಮಾಡಿಸುತ್ತ
ಜೀವರಿಗೆ ಈವೆ ಸುಖದುಃಖ ॥೧೦೫॥

ವೈಷಮ್ಯ ಮೊದಲಾದ ದೋಷರಹಿತನೆ ನಿರಭಿ-
ಲಾಷೆಯಲಿ ನಿನ್ನ ಸರ್ವತ್ರ। ಸರ್ವತ್ರ ಚಿಂತಿಪರ
ತೋಷಿಸುವೆ ಒಲಿದು ಸುಖವಿತ್ತು ॥೧೦೬॥

ಭೂರಮಣ ನಿತ್ಯ ಸಂಸಾರಿಗಳಲಿದ್ದು ಧನ-
ದಾರಾದಿಗಳಲಿ ಮಮತೆಯ। ಮಮತೆಯ ಕೊಟ್ಟು ಸಂ-
ಚಾರ ಮಾಡಿಸುವೆ ಭವದೊಳು ॥೧೦೭॥

ಕ್ರೂರಕರ್ಮವ ದುರ್ಗೆರಮಣನೆ ದೈತ್ಯರೊಳು
ತೋರಿಕೊಳ್ಳದಲೆ ನೀ ಮಾಡಿ। ನೀ ಮಾಡಿ ಮಾಡಿಸುತ
ಘೋರದುಃಖಗಳನುಣಿಸುವಿ ॥೧೦೮॥

ಹರಿಯೆ ನೀನೊಳಗಿದ್ದು ಪರದಾರಧನಗಳಲಿ
ಎರಗಿಸುವೆ ಮನವ ಮರುಗಿಸಿ! ಮರುಗಿಸಿ ಮೋಹಿಸುವೆ
ಕರುಣಿ ನಿನಗಿದುಉಚಿತವೆ ॥೧೦೯॥

ಎಲ್ಲಿ ಹರಿರೂಪ ಮತ್ತಲ್ಲಿ ಗುಣಕ್ರಿಯೆಗಳು
ಅಲ್ಲೆ ಗುಣರೂಪಕ್ರಿಯೆಗಳು। ಕ್ರಿಯೆಗಳು ಗುಣರೂಪ
ಬಲ್ಲವನೆ ಜ್ಞಾನಿ ಜಗದೊಳು ॥೧೧೦॥

ನಿನ್ನಧೀನನು ನಾನು ನಿನ್ನ ದಾಸರ ದಾಸ
ಎನ್ನದೇನಯ್ಯ ಅಪರಾಧ। ಅಪರಾಧಗಳ ನೋಡಿ
ಬನ್ನ ಬಡಿಸೋದು ಉಚಿತವೆ ॥೧೧೧॥

ಒಳಹೊರಗೆ ನೀನಿದ್ದು ತಿಳಿಯಗೊಡದಲೆ ಜಗದಿ
ಹಲವು ಕರ್ಮಗಳ ನೀ ಮಾಡಿ ನೀ ಮಾಡಿ ಮಾಡಿಸುತ
ಫಲಗಳನ್ನೀವೆ ಜನರಿಗೆ ॥೧೧೨॥

ದೇವಗಂಗೆಯ ತಡಿಯ ಭಾವಿತೋಡುವನಂತೆ
ದೇವೇಶ ನೀನಿರಲು ತಿರಿದುಂಬ। ತಿರಿದುಂಬ ರಕ್ಕಸರ
ದೇವರೆಂತೆಂದು ಕೆಡುವರು ॥೧೧೩॥

(ತಡಿಯ-ದಡದಲ್ಲಿ)

ನಿರ್ದೋಷ ಗುಣಪೂರ್ಣ ಸ್ವರ್ಧುನೀಜನಕ ಗೋ-
ವರ್ಧನೋದ್ಧಾರ ಗಂಭೀರ। ಗಂಭೀರ ಖಳರಕುಲ-
ಮರ್ದನನೆ ನೀನೆನಗೆ ದಯವಾಗೊ ॥೧೧೪॥

(ಸ್ವರ್ಧುನಿ-ಗಂಗೆ)

ನಾರಾಯಣಾನಿರುದ್ಧ ಈರೈದು ಕರಣದಿ ವಿ-
ಹಾರಗೊಳುತಿರ್ಪ ಪ್ರದ್ಯುಮ್ನ। ಪ್ರದ್ಯುಮ್ನ ಸಂಕರ್ಷಣನೆ ನೀ
ವಿರಾಜಿಸುವಿ ಜಗದೊಳಗೆ ॥೧೧೫॥

(ಐರೈದು-ಹತ್ತು)

ವಾಸುದೇವನೆ ಜೀವರಾಶಿಯೊಳಗಿದ್ದು ಅವ-
ಕಾಶ ಕೊಡುತಿರ್ಪೆ ವಿಷಯಕ್ಕೆ। ವಿಷಯಗಳನುಂಡು ಸಂ-
ತೋಷ ಪಡಿಸುವಿ ಭಕುತರ ॥೧೧೬॥

ಅಣುವಿಗಣುತರನಾಗಿ ಘನಕೆ ಘನತರನಾಗಿ
ಅಣುಮಹತ್ತುಗಳ ದೆಶೆಯಿಂದ। ದೆಶೆಯಿಂದ ನೀ ವಿಲ-
ಕ್ಷಣನೆನಿಸಿಕೊಂಬೆ ಶ್ರುತಿಯೊಳು ॥೧೧೭॥

ವಿಹಿತಕರ್ಮಗಳಿಂದ ಅಹಿಕ ಪಾರತ್ರಿಕಗ-
ಳಹವು ಜೀವರಿಗೆ ಸರ್ವತ್ರ। ಸರ್ವತ್ರ ಸಜ್ಜನರ
ಸಹವಾಸವೆಂತು ದೊರೆವುದೋ ॥೧೧೮॥

ಎನ್ನಪ್ಪ ಎನ್ನಮ್ಮ ಎನ್ನಯ್ಯ ಎನ್ನಣ್ಣಾ
ಎನ್ನರಸ ಎನ್ನ ಕುಲದೈವ। ಕುಲದೈವ ಇಹಪರದಿ
ಎನ್ನ ಬಿಟ್ಟಗಲದೇ ಇರು ಕಂಡ್ಯ ॥೧೧೯॥

ಎನ್ನ ಬಂಧುಗಳೆಲ್ಲ ನಿನ್ನ ದಾಸರು ಸ್ವಾಮಿ
ಮನ್ನಿಸು ಕಂಡ್ಯ ಮಹರಾಯ। ಮಹರಾಯ ನೀ ಮರೆದ
ರಿನ್ನಾರು ಸಾಕಲರಿಯರು ॥೧೨೦॥

ಸರ್ವಾಂತರಾತ್ಮಕನೆ ದುರ್ವಿಷಯ ತೈಲದೊಳು
ದರ್ವಿಯಂದದಲಿ ಚರಿಸುವ। ಚರಿಸುವ ಮನದಲ್ಲಿ
ಸರ್ವಕಾಲದಲಿ ನೆಲೆಗೊಳ್ಳೋ ॥೧೨೧॥

(ದರ್ವಿ-ಸೌಟು)

ಏನು ಬೇಡಲಿ ನಿನ್ನಧೀನವೀ ಜಗವು ಸ್ವಾ-
ಧೀನ ವಸ್ತುಗಳ ನಾ ಕಾಣೆ। ನಾ ಕಾಣೆ ಭಕ್ತಿ ವಿ-
ಜ್ಞಾನ ವೈರಾಗ್ಯವನೆ ಕರುಣಿಸೋ ॥೧೨೨॥

ಆಶೆಯೊಂದುಂಟು ಸರ್ವೇಶ ವಿಜ್ಞಾಪಿಸುವೆ
ವಿಶ್ವಂಭರ ಭಾಗ್ಯ ಸತಿಮೋಹ। ಸತಿಮೋಹ ತಪ್ಪಿಸಿ
ನೀ ಸಲಹ ಬೇಕೋ ದಯದಿಂದ ॥೧೨೩॥

ಏನು ಬೇಡುವುದಿಲ್ಲ ಮಾನಾದಿ ಸಂಪತ್ತು
ನಾನೊಲ್ಲೆ ಸ್ವಪ್ನದಲ್ಲಿ ತವ ನಾಮ। ತವ ನಾಮ ಕ್ಷಣ ಕ್ಷಣಕೆ
ತಾನೊದಗಲೆನ್ನ ವದನಕ್ಕೆ ॥೧೨೪॥

ಸಿರಿ ನಿನ್ನ ಚರಣದ ಕಿರುಬೆರಳ ನಖದ ಗುಣ
ಅರಸಿ ನೋಡುತಲಿ ಅನುಗಾಲ। ಅನುಗಾಲ ಕಾಣದಿರೆ
ಬೆರಗು ಬೀಳುವಳೊ ಮರುಳಾಗಿ ॥೧೨೫॥

ಕರ್ಮಜ್ಞ ಕರ್ಮೇಶ ಕರ್ಮಪ್ರವರ್ತಕನೆ।
ಕರ್ಮಫಲದಾತ ಕರ್ಮಸ್ಥ। ಕರ್ಮಸ್ಥ ಎನ್ನ ದು-
ಷ್ಕರ್ಮ ಕಳೆದು ನೀ ಸಲಹಯ್ಯ ॥೧೨೬॥

ಸ್ವಾನಂದಪರಿಪೂರ್ಣ ನಾನಾ ವಿಷಯಗಳಲಿ
ನೀನಿಂದು ಮಮತೆಯ ಕಲ್ಪಿಸಿ। ಕಲ್ಪಿಸಿ ಹೀನನೆಂ-
ದೆನ್ನನೇತಕ್ಕೆ ದಣಿಸುವಿ ॥೧೨೭॥

ವಿಜಿತಾತ್ಮ ನೀ ಭೂಭುಜರೊಳಿದ್ದು ಅನವರತ
ಯಜಮಾನನೆಂದು ಕರೆಸುವಿ। ಕರೆಸಿ ಶಿಕ್ಷಕನಾಗಿ
ಪ್ರಜರ ಸಂತೈಪೆ ಅನುಗಾಲ ॥೧೨೮॥

ಎಲ್ಲರಂದದಿ ಲಕ್ಷ್ಮೀನಲ್ಲನೆಂದೆನಬೇಡ
ಬಲ್ಲಿದನು ಕಂಡ್ಯ ಭಗವಂತ। ಭಗವಂತನ ಮಹಿಮೆ
ಬಲ್ಲವರು ಇಲ್ಲ ಜಗದೊಳು ॥೧೨೯॥

ಗೋವಿಂದನೇ ಬಂದು ಆವಾವ ಕಾಲದಲಿ
ಕಾವನು ಎಂಬ ನುಡಿ ಸಿದ್ಧ। ನುಡಿ ಸಿದ್ಧವಾಗಿರಲು
ಆವ ಭಯಕಂಜೆ ಎಂದೆಂದು ॥೧೩೦॥

ಕರಿವರದನೇ ನಿನ್ನ ಕರುಣವಿಲ್ಲದೆ ಭವ-
ಶರಧಿಯನು ದಾಟುವ ತೆರನ್ಹ್ಯಾಂಗೆ। ತೆರನ್ಹಾಂಗೆ ಲೋಕದ-
ವರಿಂದಲಿ ಎಮಗೆ ಸುಖವಿಲ್ಲ ॥೧೩೧॥

ಅಪರಾಧಿ ನಾನಲ್ಲ ಅಪರಾಧವೆನಗಿಲ್ಲ
ಸ್ವಪರಗತನಾಗಿ ನೀ ಮಾಡಿ। ನೀ ಮಾಡಿ ಮಾಡಿಸಿ
ಅಪರಿಚಿತನಂತೆ ಇರುತಿರ್ಪೆ ॥೧೩೨॥

ಶರಣು ದೇವರ ದೇವ ಶರಣರಿಗೆ ಸುಖವೀವ
ಶರಧಿಜೆಯ ರಮಣ ಕರುಣಿಸೋ। ಕರುಣಿಸಿ ಸಲಹೊ ನಾ
ಮೊರೆಹೊಕ್ಕೆ ನಿನ್ನ ಚರಣಕ್ಕೆ ॥೧೩೩॥

(ಶರಧಿಜೆ-ಲಕ್ಷ್ಮಿ)

ದೋಷದೂರನೆ ಕೇಳು ದ್ವೇಷಿ ನಿನಗಾನಲ್ಲ
ಈಷಣತ್ರಯದಿ ಮಮತೆಯ। ಮಮತೆಯ ಕೊಟ್ಟು ಪ್ರ-
ದ್ವೇಷ ಗೊಳಿಸುವುದು ಉಚಿತವಲ್ಲ ॥೧೩೪॥

(ಈಷಣವೆಂದರೆ ಬಯಕೆ, ಮೋಹ.
ಈಷಣತ್ರಯ-ದಾರೇಷಣ, ಪುತ್ರೇಷಣ, ವಿತ್ತೇಷಣ)

ಪನ್ನಗಾಚಲವಾಸ ನಿನ್ನುಳಿದು ಸಂತೈಪ-
ರಿನ್ನೆಲ್ಲಿ ಕಾಣೆ ನಿನ್ನಾಣೆ। ನಿನ್ನಾಣೆ ಸುಗುಣ ಸಂ-
ಪನ್ನ ಸಜ್ಜನರ ಸಲಹೆಂಬೆ ॥೧೩೫॥

ಭೂರಮಣ ಸರ್ವಪ್ರಕಾರದಲಿ ಒಲಿದೆಮ್ಮ
ದೂರದಲಿ ಬಪ್ಪ ದುರಿತೌಘ। ದುರಿತೌಘ ಸಂಹರಿಸಿ
ಕಾರುಣಿಕ ನೀನೆ ಸಂತೈಸೊ ॥೧೩೬॥

ಅನಾಥಬಂಧುವೆ ಜಗನ್ನಾಥವಿಠಲ ಪ್ರ-
ಪನ್ನಪರಿಪಾಲ ಮಾಲೋಲ। ಮಾಲೋಲ ಅರಿಪಾಂಚ-
ಜನ್ಯಧೃತಪಾಣಿ ಸಲಹೆಮ್ಮ ॥೧೩೭॥